ಭಗವಾನ್ ಶ್ರೀವೇದವ್ಯಾಸ ಪ್ರಣೀತ

# ಮಹಾಭಾರತ

ಭಾಗ-೧೧

## ಉದ್ಯೋಗಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯನಿರ್ಣಯ ಹಾಗೂ

ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷ್ಮಾಲಂಕಾರದೊಂದಿಗೆ

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

# ಮಹಾಭಾರತ

## ಭಾಗ-೧೧

# ಉದ್ಯೋಗಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜಗುರುಸಾರ್ವಭೌಮರ

ಲಕ್ಷಾಲಂಕಾರದೊಂದಿಗೆ)

ಅನುಗ್ರಹ :

**ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು**

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ಪಿ. ಎಸ್. ಶೇಷಗಿರಿ ಆಚಾರ್ಯ, ಮೈಸೂರು.

ಪ್ರಕಾಶಕರು :

**ತತ್ತ್ವಸಂಶೋಧನಸಂಸತ್ (ರಿ.)**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

**ಮಹಾಭಾರತ ಉದ್ಯೋಗಪರ್ವ**-ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಈ ಕೃತಿಯು ತೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣಗೊಂಡಿತು.

## ಉದ್ಯೋಗಪರ್ವ

© ತತ್ತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-81807-67-5

**ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ**

| | | |
|---|---|---|
| **ಪುಟಗಳು** | - | XX + 592 = 612 |
| **ಮುದ್ರಿತ ಪ್ರತಿಗಳು** | - | 1000 |
| **ಬೆಲೆ** | - | **ರೂ. 425/-** |
| **ಅನುವಾದಕರು** | - | ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು. |
| **ಪ್ರಕಾಶಕರು** | - | ತತ್ತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ. |
| **ಸಂಸ್ಕೃತ ಶ್ಲೋಕ ಲಿಪ್ಯಂತರ** | - | ಶ್ರೀ ಸುಬ್ಬಣ್ಣ ಬೆಂಗಳೂರು |
| **ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ** | - | ಎಂ. ಶರತ್ ಚಂದ್ರ, ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಮೈಸೂರು. ಮೊ : 7899779255 |
| **ಮುದ್ರಕರು** | - | ವಾಗರ್ಥ, ಬೆಂಗಳೂರು |
| **ಗ್ರಂಥಪ್ರಾಪ್ತಿ** | - | ಪಲಿಮಾರು ಮಠ, ಉಡುಪಿ. |

ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್



ಶ್ರೀಮದ್ವಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನ್ಮುನೀನ್ನುಮಃ

ಜಗದ್ಗುರು ಶ್ರೀಮನ್ಮಧ್ವಾಚಾರ್ಯಮೂಲಮಹಾಸಂಸ್ಥಾನಮ್

**ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು**

ಶ್ರೀ ಹೃಷೀಕೇಶತೀರ್ಥ ಸಂಸ್ಥಾನಮ್, ಶ್ರೀಪಲಿಮಾರು ಮಠ, ಉಡುಪಿ.

---

# ಅನುಗ್ರಹ ಸಂದೇಶ

ಉದ್ಯೋಗಪರ್ವ ಎಂದಾಕ್ಷಣ ನೆನಪಿಗೆ ಬರುವ ಪ್ರಸಂಗ ಶ್ರೀಕೃಷ್ಣನ ರಾಯಭಾರ. ಪಾಂಡವರ ಸಮಗ್ರ ಹಿತಚಿಂತಕನಾದ ಶ್ರೀಕೃಷ್ಣನು ರಾಯಭಾರಕ್ಕೆ ಹೊರಡುವ ಮುನ್ನ ನಡೆಯುವ ಪ್ರಸಂಗಗಳು ಅತ್ಯಂತ ರೋಚಕ. ಆರಂಭದಲ್ಲಿ ಕೃಷ್ಣನು ಧರ್ಮರಾಜನ ಮಂತ್ರಾಲೋಚನ ಸಭೆಯಲ್ಲಿ ಹೀಗೆ ಹೇಳುತ್ತಾನೆ. 'ಧರ್ಮರಾಜ! ನಾನೇ ರಾಯಭಾರಕ್ಕಾಗಿ ಹೋಗುವೆ. ಎಲ್ಲ ಋಷಿಮುನಿಗಳು ಸೇರಿದ ಪ್ರಜ್ಞಾವಂತ ರಾಜರು ಸೇರಿದ ಸಭೆಯಲ್ಲಿ ದುರ್ಯೋಧನನಿಗೆ ಯೋಗ್ಯವಾದ ಹಿತನುಡಿಗಳನ್ನು ತಿಳಿಸುತ್ತೇನೆ. ಅದಕ್ಕೆ ದುರ್ಯೋಧನನು ಒಪ್ಪದಿದ್ದಲ್ಲಿ ಎಲ್ಲರ ದೃಷ್ಟಿಯಿಂದಲೂ ಧರ್ಮವಿರೋಧಿಯಾದ ದುರ್ಯೋಧನನು ವಧ್ಯನೆನಿಸಿಕೊಳ್ಳುತ್ತಾನೆ. ಆಗ ಪಾಂಡವರ ಪಕ್ಷಪಾತಿಯಾಗಿ ಕೃಷ್ಣ ವರ್ತಿಸಿದ ಎಂಬ ಲೋಕಾಪವಾದವು ಪರಿಹಾರವಾಗುತ್ತದೆ. ಆ ದೃಷ್ಟಿಯಿಂದ ನಾನೇ ರಾಯಭಾರಕ್ಕೆ ತೆರಳುತ್ತೇನೆ' ಎನ್ನುತ್ತಾನೆ ಶ್ರೀಕೃಷ್ಣ. ಈ ಪ್ರಸಂಗದಲ್ಲಿ ಭೀಮಸೇನನು ನುಡಿಯುತ್ತಾನೆ– 'ಶ್ರೀಕೃಷ್ಣ ನನ್ನ ನಿಮಿತ್ತವಾಗಿ ಕುಲನಾಶವಾಗುವುದು ಬೇಡ. ನಾವೆಲ್ಲರೂ ಧೃತರಾಷ್ಟ್ರನ ಕುಲವನ್ನು ರಕ್ಷಿಸುವ ದೃಷ್ಟಿಯಿಂದ ತಗ್ಗಿ ನಡೆಯಲು ತಯಾರಾಗಿದ್ದೇವೆ. ಆದ್ದರಿಂದ ಸಂಧಾನದ ಪ್ರಯತ್ನವನ್ನೇ ಮಾಡು, ಸಂಧಿಯ ಪ್ರಯತ್ನ ಬೇಡ' ಎನ್ನುತ್ತಾನೆ. ಈ ಸಮಯದಲ್ಲಿ ಭೀಮನ ಪರಾಕ್ರಮವನ್ನು ಸಮಾಜಕ್ಕೆ ಪ್ರಕಟಪಡಿಸುವ ದೃಷ್ಟಿಯಿಂದ ಕೃಷ್ಣನು ಲೋಕದ ದೃಷ್ಟಿಯಿಂದ ಭೀಮನನ್ನು ಕೆಣಕುತ್ತಾನೆ.ಇಲ್ಲಿಯ ತನಕ ನಡೆದ ಅಸಹ್ಯ ಕಹಿಘಟನೆಗಳನ್ನು ಮರೆತು ನಿರ್ವೀರ್ಯವಾದ ವಾದವನ್ನು ಮಂಡಿಸುತ್ತಿರುವಿ. ಅಸಹಾಯಕನಂತೆ, ಅಸಮರ್ಥನಂತೆ ಮಾತನಾಡುತ್ತಿರುವಿ ಎಂದು ಛೇಡಿಸುತ್ತಾನೆ. ಇದರಿಂದ ಲೋಕದ ದೃಷ್ಟಿಯಿಂದಲೇ ಕ್ರುದ್ಧನಾದ ಭೀಮಸೇನನು ತನ್ನ ಪರಾಕ್ರಮ ಏನು, ತನ್ನ ಧೈರ್ಯ ಏನು ಎನ್ನುವುದನ್ನು ಕೃಷ್ಣನ ಮುಂದೆ ಭಯಂಕರವಾಗಿ ಪ್ರಕಟಿಸುತ್ತಾನೆ.

ಭೀಮಸೇನನ ಉತ್ಸಾಹ, ಪರಾಕ್ರಮ, ಅಪಾರಗುಣಗಳನ್ನು ಕಂಡು ಶ್ರೀಕೃಷ್ಣನು ಅಧರ್ಮಗಾಮಿಗಳಾದ ಕೌರವರು ವಧಾರ್ಹರೇ ಆಗುತ್ತಾರೆ ಎಂದು ಅಲ್ಲೇ

ನಿಶ್ಚಯಿಸಿಕೊಳ್ಳುತ್ತಾನೆ. ಭೀಮಸೇನನಿಗೆ ಕೃಷ್ಣ ಹೇಳುವ ಮಾತು ಭೀಮನ ವ್ಯಕ್ತಿತ್ವಕ್ಕೆ ಮೇರು ಪ್ರಶಸ್ತಿಯನ್ನು ನೀಡಿದಂತಿದೆ.

'ಯತ್ಕಿಂಚಾತ್ಮನಿ ಕಲ್ಯಾಣಂ ಸಂಭಾವಯಸಿ ಪಾಂಡವ ।
ಸಹಸ್ರಗುಣಮಪ್ಯೇತತ್ ತ್ವಯಿ ಸಂಭಾವಯಾಮ್ಯಹಮ್ ॥'

ಭೀಮ ನಿನ್ನಲ್ಲಿನೀನು ಎಷ್ಟು ಕಲ್ಯಾಣ ಗುಣಗಳನ್ನು ಇದೆ ಎಂದು ತಿಳಿದಿದ್ದೀಯೋ, ಇದಕ್ಕಿಂತ ಸಾವಿರಪಟ್ಟು ಕಲ್ಯಾಣಗುಣಗಳು ನಿನ್ನಲ್ಲಿ ಇವೆ ಎಂದು ನಾನು ಭಾವಿಸುತ್ತೇನೆ ಎನ್ನುತ್ತಾನೆ. ಭೀಮನನ್ನು ಹುಂಬ, ಅವಿವೇಕಿ, ಯುದ್ಧಚಪಲ ಎನ್ನುವ ಬುದ್ಧಿಜೀವಿ ವಿಮರ್ಶಕರಿಗೆ 'ಭೀಮನ ಸಂಯಮ-ನೀತಿ ಪರಾಕ್ರಮಗಳ ವ್ಯಕ್ತಿತ್ವ ಮತ್ತು ಶ್ರೀಕೃಷ್ಣನಿಂದಲೇ ಸಂದಾಯವಾದ ಸದ್ಗುಣಗಳ ಪ್ರಶಂಸೆಯ ಪ್ರಶಸ್ತಿ' ಸರಿಯಾದ ಉತ್ತರವನ್ನು ನೀಡಿದೆ. ಈ ಪ್ರಸಂಗದಲ್ಲಿ ಭೀಮನ ಪ್ರಾಮಾಣಿಕ ನೀತಿಯುಕ್ತವಾದ ಶೌರ್ಯದ ಮಾತುಗಳನ್ನು ಕೇಳಿ ಸಹದೇವ, ಸಾತ್ಯಕಿ ಮುಂತಾದ ಪರಾಕ್ರಮಿಗಳು ಕೃಷ್ಣನ ಬಳಿ ಯುದ್ಧವನ್ನೇ ಏರ್ಪಡಿಸು, ಕಳ್ಳರನ್ನು ಕೊಲ್ಲುವುದು ಕ್ಷತ್ರಿಯರ ಹಿರಿಯ ಧರ್ಮ. ಆದ್ದರಿಂದ ಕೌರವರೊಂದಿಗೆ ಸಂಧಿ ಬೇಡವೇ ಬೇಡ ಎನ್ನುತ್ತಾರೆ. ಈ ಅಭಿಪ್ರಾಯವನ್ನು ದ್ರೌಪದಿಯೂ ಸಮ್ಮತಿಸುತ್ತಾಳೆ. ಶ್ರೀಕೃಷ್ಣನು ನೇರ ಹಸ್ತಿನಾವತಿಗೆ ಬಂದು ಯಾರ ಆತಿಥ್ಯವನ್ನೂ ಹಸ್ತಿನಾವತಿಯಲ್ಲಿ ಸ್ವೀಕರಿಸದೇ ವಿದುರನ ಆತಿಥ್ಯವನ್ನು ಪ್ರೀತಿಯನ್ನು ಸ್ವೀಕರಿಸಿದ ಎನ್ನುವುದು ಶ್ರೀಕೃಷ್ಣನ ಪ್ರಾಮಾಣಿಕವಾದ ರಾಜಕಾರಣದಲ್ಲಿರುವ ನೀತಿಯನ್ನು, ಕರ್ತವ್ಯವನ್ನು ತೋರಿಸುತ್ತದೆ.

ಮರುದಿನ ನಡೆದ ಸಂಧಾನದ ಸಭೆಯಲ್ಲಿ ದುರ್ಯೋಧನ ಕೃಷ್ಣನನ್ನೇ ಬಂಧಿಸಲು ಉದ್ಯುಕ್ತನಾದುದು ಭೀಷ್ಮರೇ ಮೊದಲಾದ ಜ್ಞಾನಿಗಳನ್ನು ಮೂರ್ಛೆಗೊಳಿಸುತ್ತದೆ. ದುರ್ಯೋಧನನ ವಿಪರೀತವಾದ ದುರ್ವರ್ತನೆಗೆ ಸಮಗ್ರ ಸಭೆಯೇ ಅಸಹ್ಯ ಪಡುವಂತಾಗುತ್ತದೆ. ಸಜ್ಜನಿಕೆ ಮತ್ತು ದುರ್ನೀತಿಗಳ ತುಲನಾತ್ಮಕ ಅಧ್ಯಯನವು ಶ್ರೀಕೃಷ್ಣನ ನೇತೃತ್ವದಲ್ಲಿ ನಡೆಯುತ್ತದೆ. ಸಮಗ್ರ ಮುಂದಿನ ಪಾಂಡವ ಕೌರವರ ಕರ್ತವ್ಯಗಳಿಗೆ ನಾಂದಿಯಾಗುವ ಪರ್ವ ಉದ್ಯೋಗ ಪರ್ವ. ವೇದವ್ಯಾಸದೇವರು ಸಹಸ್ರಾರು ಶ್ಲೋಕಗಳಲ್ಲಿ ಇಂದು ನಾವ್ಯಾರೂ ಕಾಣದ ನೀತಿ, ಸದ್ಗುಣಗಳನ್ನು ಸ್ಫುಟವಾಗಿ ಚಿತ್ರಿಸಿದ್ದಾರೆ. ಇಂತಹ ಸಾರವತ್ತಾದ ನೀತಿಗಳನ್ನು ಬೇರೆಲ್ಲೂ ನಾವು ನೋಡಲು ಸಾಧ್ಯವಿಲ್ಲ. ಆದ್ದರಿಂದಲೇ 'ವಿರಾಟೋऽದ್ಯೋಗಸಾರವಾನ್' ಎಂಬ ಮಾತು ಜಗಜ್ಜನಿತವಾಗಿದೆ.

ಇಂತಹ ಸುಂದರವಾದ ಉದ್ಯೋಗಪರ್ವದ ಮೂಲಾನುವಾದವು ಭಾವಿಸಮೀರ ಶ್ರೀ ವಾದಿರಾಜರ ಲಕ್ಷಾಲಂಕಾರ ವ್ಯಾಖ್ಯಾನಕ್ಕೆ ಅನುಗುಣವಾಗಿ ಶ್ರೀ ಮಧ್ವರ ತಾತ್ಪರ್ಯನಿರ್ಣಯದ ಹಿನ್ನೆಲೆಯಲ್ಲಿ ಮೂರು ಸಂಪುಟಗಳಲ್ಲಿ ಪೂರ್ಣಗೊಂಡಿರುತ್ತದೆ. ಈ ಅನುವಾದವನ್ನೂ, ಮೂಲಶೋಧನೆಯನ್ನು ನಡೆಸಿಕೊಟ್ಟಿರುವ ವಿದ್ವಾಂಸರಾದ ಪಿ.ಎಸ್. ಶೇಷಗಿರಿ ಆಚಾರ್ಯರನ್ನು ವಿಶೇಷವಾಗಿ ನಾವು ಅಭಿನಂದಿಸಿ ಇವರಿಗೆ ಇತ್ಯೋಷ್ಯತಿಶಯವಾದ ಆಯುರಾರೋಗ್ಯಭಾಗ್ಯಗಳನ್ನು ಶ್ರೀಕೃಷ್ಣನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ. ಇದರಂತೆ ಸಮಗ್ರ ಮಹಾಭಾರತದ ಪ್ರಕಾಶನದ ಜವಾಬ್ದಾರಿಯನ್ನು ಹೊತ್ತಿರುವ ವಿದ್ವಾಂಸರಾದ ಬೆ.ನಾ.ವಿಜಯೀಂದ್ರಾಚಾರ್ಯರಿಗೂ ವಿಶೇಷವಾಗಿ ಶ್ರೀಹರಿವಾಯುಗುರುಗಳ ಅನುಗ್ರಹವನ್ನು ಬಯಸುತ್ತೇವೆ. ಇದರಲ್ಲಿ ಸಹಕರಿಸಿದ ಎಲ್ಲರಿಗೂ ಭಗವಂತನು ಸನ್ಮಂಗಳವನ್ನು ಉಂಟುಮಾಡಲಿ.

ನಾರಾಯಣ ಸ್ಮರಣೆಗಳು

**ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರು**

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

# ಪ್ರಕಾಶಕರ ನುಡಿ

ಮಹಾಭಾರತ ಎನ್ನುವುದು ನಮ್ಮ ಭಾರತೀಯರ ಆಂತರಿಕ ಆಸ್ತಿ. ನಮ್ಮ ಭಾರತೀಯರ ಜೀವನದ ಮೌಲ್ಯಗಳನ್ನು ಜಗತ್ತಿಗೆ ಎತ್ತಿ ತೋರಿಸಿದ ಅದ್ಭುತ ಗ್ರಂಥ. ಇದನ್ನೇ **'ಭಾರತಂ ಸರ್ವಶಾಸ್ತ್ರೇಷು ವರಂ'** ಎಂದು ಹೊಗಳಿದ್ದು ಉಂಟು. ನಮ್ಮ ಜೀವನದ ಎಲ್ಲ ಮಜಲುಗಳಲ್ಲಿ ನಮಗೆ ದಾರಿದೀಪ ಇದು. ಅಷ್ಟೇ ಅಲ್ಲ, 64 ವಿದ್ಯೆಗಳಿಗೆ ಏಕೈಕ ಮುಖಚಿತ್ರ ಈ ಭಾರತ. ಅಲ್ಲಿ ಶ್ರೀಕೃಷ್ಣನಿಂದ ಆರಂಭಿಸಿ ಪಾಂಡವರು-ಕೌರವರು ಸೇರಿ ಕೊನೆಯ ಯುದ್ಧದ ಪದಾಳಿನವರೆಗೆ ಎಲ್ಲರ ಪ್ರತಿಯೊಂದು ಹೆಜ್ಜೆಯೂ ಒಂದೊಂದು ನಮ್ಮ ಜೀವನದ ನೀತಿಪಾಠ. ಉಳಿದೆಲ್ಲ ಗ್ರಂಥಗಳಿಗೆ ಒಂದೊಂದು ವೇದಗಳಿಗೆ ಮೂರು ಅರ್ಥಗಳಾದರೆ ಈ ಭಾರತದ ಒಂದೊಂದು ಶಬ್ದಕ್ಕೆ ಕನಿಷ್ಟ ಹತ್ತು ಅರ್ಥಗಳು ಇವೆ ಎಂದು ನಮ್ಮ ಹಿರಿಯರು ತಿಳಿಸಿದ್ದು ಇದೆ. **'ಭಾರತಂ ದಶಾರ್ಥಂ ವಿತ್ತ' 'ದಶಾರ್ಥಂ ಸರ್ವಭಾರತೇ'** ಎಂದು ಅದರ ಅರ್ಥಗಾಂಭೀರ್ಯದ ಬಗ್ಗೆ ಉಲ್ಲೇಖಗಳು ಇವೆ. ಆದ್ದರಿಂದ ಭಾರತೀಯರ ಜೀವನಾಡಿ ಮಹಾಭಾರತ. ಮಹಾಭಾರತದಲ್ಲಿ ರಾಜಧರ್ಮಗಳ ಬಗ್ಗೆ ವಿಸ್ತಾರವಾದ ಅನೇಕ ಸಂದೇಶಗಳು ಇವೆ. ಮತ್ತೆ ಅಧ್ಯಾತ್ಮ-ಆಧಿಭೌತಿಕ-ಆಧಿದೈವಿಕ ಚಿಂತನೆಗಳು ವಿಪುಲವಾಗಿ ಸಿಗುತ್ತವೆ. ಎಲ್ಲದಕ್ಕೂ ಸಂವಾದ ರೂಪದಲ್ಲಿ ಅನೇಕ ಕಥೆಗಳು - ನೈಜ ಘಟನೆಗಳು ಉಲ್ಲಿಖಿತಗಳಾಗಿವೆ. ಆದ್ದರಿಂದಲೇ ಸರ್ವಮಾನ್ಯವಾದ ಗ್ರಂಥ ಶ್ರೀಮಹಾಭಾರತ.

ಮಹಾಭಾರತದ ಬಗ್ಗೆ ಇದಮಿತ್ಥಂ ಎಂದು ಕರಾರುವಕ್ಕಾಗಿ ಶ್ರೀಮದಾನಂದತೀರ್ಥರು ತಿಳಿಸಿದ್ದಾರೆ. ಎರಡು ಪರ್ವಗಳನ್ನು ಮಾತ್ರ ಮಹಾಭಾರತದ ಸಾರ ಎಂದು ವರ್ಣಿಸಿದ್ದಾರೆ. **'ವಿರಾಟೋದ್ಯೋಗಸಾರವಾನ್'**. ಅವೇ ವಿರಾಟಪರ್ವ-

ಉದ್ಯೋಗಪರ್ವಗಳು. ಅವುಗಳಲ್ಲಿ ಈಗ ಉದ್ಯೋಗಪರ್ವದಲ್ಲಿ ಇದ್ದೇವೆ. ಅಲ್ಲಿ ಅನೇಕ ಅದ್ಭುತವಾದ ಉಪದೇಶಗಳು ವ್ಯಾಸರಮುಖದಿಂದ ಮೂಡಿಬಂದಿವೆ. ವಿದುರನೀತಿ, ಸನತ್ಸುಜಾತೀಯ ಇತ್ಯಾದಿಗಳು. ವಿದುರ ತನ್ನ ಅಣ್ಣನಾದ ಧೃತರಾಷ್ಟ್ರನಿಗೆ ಬುದ್ಧಿಗೆ ಹೇಳುವಾಗ ಕೊಟ್ಟ ಸಂದೇಶಗಳು ಸಾರ್ವಕಾಲಿಕ. ಈಗಿನ ದಿನಗಳಲ್ಲಿಯೂ ಅವುಗಳು ತುಂಬ ಪ್ರಸ್ತುತಗಳು. ವಿದುರ ಹೇಳುವ ನೀತಿಗಳಲ್ಲಿ ಒಂದನ್ನು ನೋಡೋಣ. ಒಂದು ಒಗಟಿನ ರೂಪದ ಶ್ಲೋಕವನ್ನು ವಿದುರ ತಿಳಿಸಿದ್ದಾನೆ. ಎಲ್ಲರ ಜೀವನಕ್ಕೆ ನಿತ್ಯ ಬೇಕಾದ ನೀತಿ ಇದು. **'ಏಕಯಾ ದ್ವೇ ವಿನಿಶ್ಚಿತ್ಯ ತ್ರೀನ್ ಚತುರ್ಭಿಃ ವಶೇ ಕುರು । ಪಂಚ ಜಿತ್ವಾ ವಿದಿತ್ವಾ ಷಟ್ ಸಪ್ತ ಹಿತ್ವಾ ಸುಖೀ ಭವ ॥'** ಒಂದು ಜೀವ ಮನುಷ್ಯನಾಗಿ ಹುಟ್ಟಿದ ಮೇಲೆ ಜೀವನದ ಸಾರ್ಥಕತೆಗೆ ಮಾಡಲೇಬೇಕಾದ ಕಾರ್ಯಗಳ ಚಿತ್ರಣ ಇದು. ಒಂದು ಬುದ್ಧಿಯಿಂದ ಒಳ್ಳೆಯದು-ಕೆಟ್ಟದು ಎಂಬ ಎರಡರ ತಿಳುವಳಿಕೆಯನ್ನು ಪಡೆಯಬೇಕು. ಸಾಮ-ದಾನ-ಭೇದ-ದಂಡಗಳೆಂಬ ಉಪಾಯಗಳಿಂದ ಬೇಕಾದವರು - ದ್ವೇಷಿಗಳು - ಉದಾಸೀನರನ್ನು ನಮ್ಮ ವಶಕ್ಕೆ ತೆಗೆದುಕೊಳ್ಳಬೇಕು. ಐದು ಜ್ಞಾನೇಂದ್ರಿಯಗಳನ್ನು ಗೆಲ್ಲಬೇಕು. ರಾಜನಿಗೆ ಸಂಬಂಧಪಟ್ಟ ಸಂಧಿ-ವಿಗ್ರಹ-ಯಾನ-ಆಸನ-ದ್ವೈಧೀಭಾವ-ಸಮಾಶ್ರಯಣಗಳೆಂಬ ಆರು ಗುಣಗಳನ್ನು ತಿಳಿದುಕೊಳ್ಳಬೇಕು. ನಮ್ಮ ಜೀವನಕ್ಕೆ ಹಾನಿಯನ್ನುಂಟುಮಾಡುವ ಪಾನ-ಸ್ತ್ರೀ-ಬೇಟೆ-ವಾಕ್ಪಾರುಷ್ಯ-ದಂಡಪಾರುಷ್ಯ-ಅರ್ಥದೂಷಣ-ಪಗಡೆಯಾಟಗಳನ್ನು ಸರ್ವದಾ ತ್ಯಾಗ ಮಾಡಬೇಕು. ಈ ರೀತಿ ಯಾರು ಜೀವನ ನಡೆಸುತ್ತಾನೋ ಅವನು ನಿಜವಾಗಿಯೂ ಸುಖಿ ಅಂದರೆ ನೆಮ್ಮದಿ ಉಳ್ಳವನಾಗುತ್ತಾನೆ. ಅಣ್ಣ ನೀನು ಇನ್ನೇಲಾದರೂ ಹೀಗೆ ಜೀವನ ನಡೆಸಿ ಉನ್ನತಿಗೆ ಬೇಕಾದ ಸಾಧನೆಯನ್ನು ಮಾಡು. ತನ್ಮೂಲಕ ಜೀವನವನ್ನು ಸಾರ್ಥಕ ಪಡೆಸಿಕೋ ಎಂದು ವಿದುರ ಧೃತರಾಷ್ಟ್ರನ ಮೂಲಕ ನಮಗೆಲ್ಲ ಅದ್ಭುತವಾದ ಸಂದೇಶವನ್ನು ನೀಡಿದ್ದಾನೆ. ನಾವು ಅದರ ಹಾಗೆ ನಡೆದು ಉದ್ಧೃತರಾಗೋಣ. ಇದು ಮಹಾಭಾರತದ ಉದ್ಯೋಗಪರ್ವದ ಅರ್ಥಗಾಂಭೀರ್ಯ.

ಹೀಗೆ ತುಂಬ ಅರ್ಥಗರ್ಭಿತವಾದ ಚಿಂತನೆಗಳನ್ನು ಒಳಗೊಂಡಿದ್ದು ಈ ಉದ್ಯೋಗಪರ್ವ. ಇದನ್ನು ಎಲ್ಲಾ ಆಸ್ತಿಕ ಜಿಜ್ಞಾಸುಗಳು ಹಾಗೂ ಸಮಸ್ತ ಭಾರತೀಯರು ಸ್ವೀಕರಿಸಿ ಉದ್ಧೃತರಾಗಬೇಕೆಂಬುದು ನಮ್ಮ ಗುರುಗಳಹಾಗೂ ನಮ್ಮ ಸಂಸ್ಥೆಯ ಸದುದ್ದೇಶ.

ಪ್ರಾತಃಸ್ಮರಣೀಯರಾದ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರ ಪರಮಾನುಗ್ರಹದಿಂದ ಶ್ರೀಮನ್ಮಹಾಭಾರತದ ಶುದ್ಧಪಾಠದ ಮುದ್ರಣವೆಂಬ ಮಹತ್ಕಾರ್ಯವನ್ನು ಕೈಗೆತ್ತಿಕೊಂಡು, ಅದಕ್ಕೆ ಸಂಬಂಧಪಟ್ಟ ವಿದ್ವಾಂಸರನ್ನು ಒಟ್ಟುಗೂಡಿಸಿ, ಪ್ರಾಚೀನ ಹಸ್ತಪ್ರತಿಗಳ ಸಂಶೋಧನೆಯನ್ನು ಮಾಡಿಸಿ, ಆಧ್ಯಾತ್ಮಿಕ ಹಾಗೂ ಸಾಮಾಜಿಕ ಸಮಾಜಕ್ಕೆ ದೊಡ್ಡ ಕೊಡುಗೆಯನ್ನು ನೀಡುತ್ತಿದ್ದಾರೆ ನಮ್ಮ ಗುರುಗಳಾದ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು. ಆ ನಿಟ್ಟಿನಲ್ಲಿ ಈಗ ಉದ್ಯೋಗಪರ್ವದ ಭಾಗವನ್ನು ಅರ್ಥಸಹಿತ ಮೂರು ಸಂಪುಟಗಳಲ್ಲಿ ಲೋಕಾರ್ಪಣೆ ಮಾಡುತ್ತಿದ್ದೇವೆ. ಪ್ರಾತಃಸ್ಮರಣೀಯರಾದ ಪರಮಪೂಜ್ಯ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರ ಮಹತ್ಸಂಕಲ್ಪವಾದ ಶ್ರೀಮಹಾಭಾರತ ಮುದ್ರಣವು ಅವರೇ ಹುಟ್ಟುಹಾಕಿದ ತತ್ವಸಂಶೋಧನ ಸಂಸತ್ತಿನಿಂದ ಆಗಬೇಕೆಂದು ಶ್ರೀಪಾದರು ಸಂಕಲ್ಪಿಸಿದ್ದಾರೆ. ಅದು ಕೂಡ ಶ್ರೀಪಾದರ ದ್ವಿತೀಯ ಶ್ರೀಕೃಷ್ಣಪೂಜಾ ಪರ್ಯಾಯದ ಪುರಪ್ರವೇಶದ ಶುಭಾವಸರದಲ್ಲಿ ಬಿಡುಗಡೆಗೊಳ್ಳುತ್ತಿರುವುದು ಯೋಗವೇ ಸರಿ. ಈ ನಮ್ಮ ಸಂಸ್ಥೆಯ ಎಲ್ಲಾ ವಿಷಯಗಳಲ್ಲಿ ತಮ್ಮ ಸಂಪೂರ್ಣ ಅನುಗ್ರಹವನ್ನು ಧಾರೆಯೆರೆದ ನಮ್ಮ ಸಂಸ್ಥೆಯ ಕುಲಪತಿಗಳಾದ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರಿಗೆ ಹೃತ್ಪೂರ್ವಕ ಅನಂತ ನಮೋವಾಕ್ಯಗಳನ್ನು ಸಮರ್ಪಿಸುತ್ತಿದ್ದೇನೆ.

ಈ ಅದ್ಭುತವಾದ ಶ್ರೀಮಹಾಭಾರತ ಶುದ್ಧಪಾಠದ ಮುದ್ರಣಕಾರ್ಯಕ್ಕೆ ಪೂರ್ಣವಾಗಿ ಆರ್ಥಿಕ ನೆರವನ್ನು ನೀಡಿರುವುದು ನಮ್ಮ ಘನವೆತ್ತ ಕರ್ನಾಟಕ ಸರ್ಕಾರ. ಹಿಂದಿನ ಕಾಲದಲ್ಲಿ ರಾಜಾಶ್ರಯ ಇತ್ತು. ಈಗಲೂ ಇಂತಹ ಚಾರಿತ್ರಾತ್ಮಕ ಕಾರ್ಯದಲ್ಲಿ ನಮಗೆ ಸರ್ಕಾರದ ಆಶ್ರಯ ದೊರಕಿದೆ. ಸರ್ಕಾರದ ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಎಲ್ಲಾ ಪದಾಧಿಕಾರಿಗಳಿಗೆ ನಮ್ಮ ಸಂಸ್ಥೆಯ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

ಈ ಕೃತಿಯ ಸಂಪಾದನಾ ಕಾರ್ಯದಲ್ಲಿ ಸಂಪೂರ್ಣವಾಗಿ ಮುತುವರ್ಜಿ ವಹಿಸಿ ಗ್ರಂಥ ಸಂಶೋಧನೆ-ಸಂಪಾದನೆ-ಅರ್ಥ ವಿವರಣೆ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡ ನಮ್ಮ ನಾಡಿನ ಪ್ರಸಿದ್ಧ ವಿದ್ವಾಂಸರಾದ ವಿದ್ವಾನ್ ಶ್ರೀ ಪಿ.ಎಸ್. ಶೇಷಗಿರಿ ಆಚಾರ್ಯರಿಗೆ ನಮನಗಳ ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ.

ಶ್ರೀಮಹಾಭಾರತ ಶುದ್ಧಪಾಠದ ಸಮಗ್ರ ಕಾರ್ಯನಿರ್ವಾಹಕರಾದ ಡಾ|| ಬೆ.ನಾ. ವಿಜಯೀಂದ್ರಾಚಾರ್ಯರಿಗೆ ಮತ್ತು ಇದಕ್ಕಾಗಿ ಶ್ರಮವಹಿಸಿದ ಎಲ್ಲಾ ವಿದ್ಯನ್ಮಣಿಗಳಿಗೆ ಸಂಸ್ಥೆಯ ಪರವಾಗಿ ಧನ್ಯವಾದಗಳು.

ಶ್ರೀಮಹಾಭಾರತದ ಮುದ್ರಣಕ್ಕೆ ಸಂಬಂಧಿಸಿದ ಹಣಕಾಸು ವ್ಯವಸ್ಥೆಯನ್ನು ನಿರ್ವಹಿಸುತ್ತಿರುವ ಶ್ರೀಯುತ ರಘುಪತಿ ತಂತ್ರಿ ಇವರಿಗೂ ಸಂಸ್ಥೆಯ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು. ಮೂಲ ಸಂಸ್ಕೃತ ಶ್ಲೋಕಗಳನ್ನು ದೋಷರಹಿತವಾಗಿ ಕನ್ನಡಕ್ಕೆ ಲಿಪ್ಯಂತರವನ್ನು ಮಾಡಿಕೊಟ್ಟ ಶ್ರೀಯುತ ಸುಬ್ಬಣ್ಣ, ಬೆಂಗಳೂರು ಇವರಿಗೂ ಹಾಗೂ ದೋಷರಹಿತವಾಗಿ, ಸುಂದರವಾಗಿ ಅಕ್ಷರಜೋಡನೆಯನ್ನು ಮಾಡಿದ ಶ್ರೀಯುತ ಶರತ್‌ಚಂದ್ರ ಎಂ., ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಅವರಿಗೂ ಸಂಸ್ಥೆಯ ಪರವಾಗಿ ಧನ್ಯವಾದಗಳು.

ಆಸ್ತಿಕ ಸಮಾಜಕ್ಕೆ ನಮ್ಮ ಸಂಸ್ಥೆಯ ಹಾಗೂ ವಿದ್ವನ್ಮಂಡಲಿಯ ಅನನ್ಯವಾದ ಉಪಾಯನ ಈ ಗ್ರಂಥ. ಇದನ್ನು ಸ್ವೀಕರಿಸಿ ಅಧ್ಯಯನ ಮಾಡಿ ಆಂತರಿಕ ಸಂಪತ್ತನ್ನು ಸಭ್ಯ ಸಮಾಜ ಬೆಳೆಸಿಕೊಳ್ಳಲಿ, ತನ್ಮೂಲಕ ವಿದ್ವಾಂಸರ ಈ ಶ್ರಮ ಸಾರ್ಥಕವಾಗಲಿ ಎಂದು ಅಪೇಕ್ಷಿಸುತ್ತಿದ್ದೇನೆ.

**ಪ್ರಕಾಶಕರು**

**ಡಾ. ವಂಶೀಕೃಷ್ಣಾಚಾರ್ಯ ಪುರೋಹಿತ್**

ನಿರ್ದೇಶಕರು, ತತ್ವಸಂಶೋಧನಸಂಸತ್,

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

# ಉದ್ಯೋಗಪರ್ವವನ್ನು ಕುರಿತು

ಉದ್ಯೋಗಪರ್ವವು ಮಹಾಭಾರತದ ಐದನೆಯ ಪರ್ವ. ಪಾಂಡವರ ವನವಾಸ ಮತ್ತು ಅಜ್ಞಾತವಾಸಗಳು ಕಳೆದ ಮೇಲೆ ಪಾಂಡವರು ಮತ್ತು ಕೌರವರು ಇಬ್ಬರೂ ಮಾಡುವ ಯುದ್ಧಸನ್ನಾಹವು ಈ ಪರ್ವದಲ್ಲಿ ಪ್ರಧಾನವಾಗಿ ನಿರೂಪಿಸಲ್ಪಡುವ ವಿಷಯ. ನಮ್ಮ ಶೋಧನೆಗೆ ದೊರೆತಂತೆ ಇದರಲ್ಲಿ ನೂರ ತೊಂಬತ್ತೆಂಟು ಅಧ್ಯಾಯಗಳಿವೆ.

ಇದರಲ್ಲಿ **ಸೇನೋದ್ಯೋಗಪರ್ವ, ಸಂಜಯಯಾನಪರ್ವ, ಪ್ರಜಾಗರಪರ್ವ, ಸನತ್ಸುಜಾತಪರ್ವ, ವ್ಯಾಸಾಭಿಗಮನಪರ್ವ, ಭಗವದ್ಯಾನಪರ್ವ, ವಿವಾದಪರ್ವ, ಸೈನ್ಯನಿರ್ಯಾಣಪರ್ವ, ಭೀಷ್ಮಾಭಿಷೇಚನಪರ್ವ, ಊಲೂಕದೂತಾಗಮನಪರ್ವ, ರಥಾತಿರಥಸಂಖ್ಯಾನಪರ್ವ, ಅಂಬೋಪಾಖ್ಯಾನ ಪರ್ವ** ಎಂಬ ಅವಾಂತರ ಪರ್ವಗಳಿವೆ.

ಆಚಾರ್ಯರು ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಉದ್ಧರಿಸಿರುವ ಅನೇಕ ಶ್ಲೋಕಗಳು ಕೆಲವು ಸಲ ಸ್ವಲ್ಪ ವ್ಯತ್ಯಾಸದೊಂದಿಗೆ ಇಲ್ಲಿ ಕಂಡುಬರುತ್ತದೆ.

**ಈಶನ್ನಪಿ ಮಹಾಯೋಗೀ ಸರ್ವಸ್ಯ ಜಗತೋ ಹರಿಃ ।**
**ಕರ್ಮಾಣಿ ಕುರುತೇ ಕೀನಾಶ ಇವ ದುರ್ಬಲಃ ॥ (೬೬-೨೪)**

**ಕೃಷಿರ್ಭೂವಾಚಕಃ ಶಬ್ದೋ ಣೇತಿ ನಿರ್ವೃತಿ ವಾಚಕಃ ।**
**ತಯೋರೈಕ್ಯಂ ಪರಂ ಬ್ರಹ್ಮ ಕೃಷ್ಣ ಇತ್ಯಭಿಧೀಯತೇ ॥ (೬೮-೫)**

**ಯತ್ ಕಿಂಚಾತ್ಮನಿ ಕಲ್ಯಾಣಂ ಸಂಭಾವಯಸಿ ಪಾಂಡವ ।**
**ಸಹಸ್ರಗುಣಮಪ್ಯೇತತ್ ತ್ವಯಿ ಸಂಭಾವಯಾಮ್ಯಹಮ್ ॥ (೭೬-೩೩)**

**ಯಾದೃಶೇ ಚ ಕುಲೇ ಜಾತಃ ಸರ್ವರಾಜಾಭಿಪೂಜಿತೇ ।**
**ಯಾದೃಶಾನಿ ಚ ಕರ್ಮಾಣಿ ಭೀಮ ತ್ವಮಸಿ ತಾದೃಶಃ ॥ (೭೬-೩೪)**

**ಅಸ್ಮಿನ್ ಯುದ್ಧೇ ಭೀಮಸೇನ ತ್ವಯಿ ಭಾರಃ ಸಮಾಹಿತಃ ।**
**ಧೂರರ್ಜುನೇನ ವೋಢವ್ಯಾ ವೋಢವ್ಯ ಇತರೋ ಜನಃ ॥ (೭೬-೧೮)**

ಇವೇ ಮೊದಲಾದವು ಕೆಲವು ಉದಾಹರಣೆಗಳು.

ಸನತ್ಸುಜಾತ ಪರ್ವದಲ್ಲಿ ಸನತ್ಸುಜಾತರು ಧೃತರಾಷ್ಟ್ರನಿಗೆ ಮಾಡುವ ಉಪದೇಶವಿದೆ. ಬಹಳ ಗೂಢವಾದ ಅರ್ಥವುಳ್ಳ ಈ ಶ್ಲೋಕಗಳಿಗೆ ಶ್ರೀವಾದಿರಾಜರು ಲಕ್ಷಾಲಂಕಾರದಲ್ಲಿ ಪ್ರಾಯಶಃ ಎಲ್ಲಾ ಶ್ಲೋಕಗಳೂ ಸಂಕ್ಷೇಪವಾಗಿ ವ್ಯಾಖ್ಯಾನ ಮಾಡಿದ್ದಾರೆ. ಸನತ್ಸುಜಾತ ಪರ್ವವೊಂದಕ್ಕೇ ಶ್ರೀವಾದಿರಾಜರು ಮಾಡಿರುವ ಸ್ವತಂತ್ರವಾದ ವ್ಯಾಖ್ಯಾನವು ಇನ್ನೊಂದಿದೆ. ಅದು ಬಹಳ ವಿಸ್ತಾರವಾಗಿದೆ. ಶ್ಲೋಕಗಳಿಗೆ ಅನುವಾದ ಮಾಡುವಾಗ ನಾವು ಹೆಚ್ಚಾಗಿ ಈ ಎರಡನೆಯ ವ್ಯಾಖ್ಯಾನವನ್ನು ಅನುಸರಿಸಿದ್ದೇವೆ. ಒಂದು ವಿಶೇಷವೆಂದರೆ ಶ್ರೀವಾದಿರಾಜರು ಲಕ್ಷಾಲಂಕಾರದಲ್ಲಿ ಹಿಡಿದಿರುವ ಪಾಠಕ್ಕೂ ಮತ್ತು ಸ್ವತಂತ್ರ ವ್ಯಾಖ್ಯಾನದಲ್ಲಿ ಹಿಡಿದಿರುವ ಪಾಠಕ್ಕೂ ಸಾಕಷ್ಟು ವ್ಯತ್ಯಾಸಗಳಿವೆ. ಬೇರೆ ಬೇರೆ ಕಾಲಘಟ್ಟದಲ್ಲಿ ಮೊದಲು ದೊರೆಯದಿರುವ ಮೂಲ ಪ್ರತಿಗಳು ಅವರಿಗೆ ಅನಂತರ ದೊರೆತಿರಬಹುದಾದದ್ದು ಈ ವ್ಯತ್ಯಾಸಕ್ಕೆ ಕಾರಣವಿರಬಹುದು. ಅಲ್ಲದೆ ಶ್ರೀನಿವಾಸಾಚಾರ್ಯರೆಂಬುವರು ಬರೆದಿರುವ ಇನ್ನೊಂದು ವ್ಯಾಖ್ಯಾನವೂ ಸನತ್ಸುಜಾತ ಪರ್ವಕ್ಕೆ ಇದೆ. ಇವರು ಪ್ರಾಯಶಃ ಭಾರತ ಶ್ರೀನಿವಾಸಾಚಾರ್ಯರೇ ಆಗಿರಬೇಕೆಂದು ತೋರುತ್ತದೆ. ಇದರಲ್ಲಿಯೂ ಸಹ ಪಾಠ ವ್ಯತ್ಯಾಸಗಳೂ ಮತ್ತು ಶ್ಲೋಕ ಸಂಖ್ಯೆಯಲ್ಲಿಯೇ ವ್ಯತ್ಯಾಸಗಳೂ ಕಂಡುಬರುತ್ತವೆ. ಈ ಎರಡು ವ್ಯಾಖ್ಯಾನಗಳನ್ನೂ ಸಂಸ್ಕೃತದ ಆವೃತ್ತಿಯಲ್ಲಿ ಹಾಕಿದ್ದೇವೆ. ಕನ್ನಡದಲ್ಲಿ ಅನುವಾದ ಮಾಡುವಾಗ ಈ ಎರಡನ್ನೂ ಅನುಸರಿಸಲಾಗಿದೆ.

ಈಚೆಗೆ ಶ್ರೀ ಎಸ್.ಆರ್. ರಘೂತ್ತಮಾಚಾಯರು ಪ್ರಕಟಿಸಿರುವ ಇನ್ನೊಂದು ವ್ಯಾಖ್ಯಾನವೂ ಸನತ್ಸುಜಾತ ಪರ್ವಕ್ಕೆ ಇದೆ. ಇದರಲ್ಲಿ ಅವರು ಈ ಗ್ರಂಥವು ಶೇಷ ತಾತ್ಪರ್ಯಚಂದ್ರಿಕಾಕಾರರೆಂದು ಪ್ರಸಿದ್ಧರಾದ ವ್ಯಾಸರಾಯಮಠದ ಶ್ರೀ ರಘುನಾಥತೀರ್ಥರು ರಚಿಸಿರುವುದೆಂದು ಮುದ್ರಿಸಿದ್ದಾರೆ. ಆದರೆ ವಿಮರ್ಶೆ ಮಾಡಿದಾಗ ಇದು ಭಾರತ ಶ್ರೀನಿವಾಸಾಚಾರ್ಯರದ್ದೆಂದೇ ತಿಳಿದುಬರುತ್ತದೆ. ಅಲ್ಲದೆ ವ್ಯಾಸರಾಯ ಮಠದಲ್ಲಿಯೂ ಕೂಡ ಶ್ರೀರಘುನಾಥತೀರ್ಥರು ರಚಿಸಿರುವ ಗ್ರಂಥಗಳನ್ನು ಹೇಳುವ ಸಂದರ್ಭದಲ್ಲಿ ಈ ಗ್ರಂಥವನ್ನು ಉಲ್ಲೇಖಿಸುವ ಸಂಪ್ರದಾಯವೂ ಇಲ್ಲ. ಆದ್ದರಿಂದಲೂ ಇದು ಅವರದಲ್ಲವೆಂದು ತಿಳಿದುಬರುತ್ತದೆ.

ನಾವು ಸಂಶೋಧನೆಗೆ ಉಪಯೋಗಿಸಿರುವ ತಾಳೆಗರಿಯ ಗ್ರಂಥಗಳು ಸಾಕಷ್ಟು ಪ್ರಾಚೀನವಾದುದರಿಂದ ಬಹಳ ಜೀರ್ಣವೂ ಅಲ್ಲಲ್ಲಿ ತ್ರುಟಿತವೂ ಆಗಿವೆ. ಅವುಗಳನ್ನು ಆಧರಿಸಿ ಶೋಧನೆ ಮಾಡುವಾಗ ತಪ್ಪುಗಳು ಬಂದಿರಬಹುದಾದುದು ಸಹಜ. ಜೊತೆಗೆ ನಮ್ಮ ಅಜ್ಞಾನ ಅಲಜ್ಞಾನಗಳೂ ಈ ದೋಷಗಳಿಗೆ ಕಾರಣವಾಗಿರಬಹುದು. ವಿದ್ವಾಂಸರು

ಮತ್ತು ಆಧ್ಯೇತೃಗಳು ಹೀಗೆ ನಮ್ಮಿಂದ ಆಗಿರಬಹುದಾದ ತಪ್ಪುಗಳನ್ನು ಕ್ಷಮಿಸಿ ಅವುಗಳನ್ನು ನಮಗೆ ಸೂಚಿಸಿ ಅನುಗ್ರಹಿಸಬೇಕೆಂದು ಪ್ರಾಂಜಲವಾಗಿ ಕೇಳಿಕೊಳ್ಳುತ್ತೇನೆ.

ಅನೇಕ ಪೀಠಾಧಿಪತಿಗಳು ನಮ್ಮ ಕೋಶಗಳಲ್ಲಿದ್ದ ತಾಳೆಗರಿಯ ಗ್ರಂಥಗಳನ್ನು ಕೊಟ್ಟು ದಯೆಯನ್ನು ತೋರಿಸಿ ಮಹೋಪಕಾರವನ್ನು ಮಾಡಿದ್ದಾರೆ. ಅವರೆಲ್ಲರ ಪಾದಕಮಲಗಳಿಗೆ ನನ್ನ ಸಾಷ್ಟಾಂಗ ಪ್ರಣಾಮಗಳು.

ಇತಿ ಶ್ರೀಪಾದ ಚರಣದಾಸ

**ಶೇಷಗಿರಿ ಆಚಾರ್ಯ**

★ ★ ★ ★ ★

# ವಿಷಯಾನುಕ್ರಮಣಿಕೆ

# ಮಹಾಭಾರತ - ಭಾಗ-೧೧

# ಉದ್ಯೋಗಪರ್ವ


ಪುಟ ಸಂ.

1. ವಿರಾಟನ ಸಭೆಗೆ ಕೃಷ್ಣ-ಬಲರಾಮಾದಿಗಳ ಪ್ರವೇಶ. ಕೌರವರ ಬಳಿಗೆ ಒಬ್ಬ ಸಮರ್ಥನಾದ ದೂತನನ್ನು ಕಳುಹಿಸುವಂತೆ ಕೃಷ್ಣನ ಸೂಚನೆ 1

2. ಕೃಷ್ಣನ ಅಭಿಪ್ರಾಯವನ್ನು ಅನುಮೋದಿಸಿ ಬಲರಾಮನಿಂದ ತನ್ನ ದುರ್ಯೋಧನಪಕ್ಷಪಾತದ ಆವಿಷ್ಕಾರ 10

3. ಸಾತ್ಯಕಿಯಿಂದ ಬಲರಾಮನ ಮಾತುಗಳನ್ನು ನಿಂದಿಸಿ ದುರ್ಯೋಧನ ನಿಗ್ರಹದ ನಿರ್ಧಾರಣ 14

4. ದ್ರುಪದನಿಂದ ಧೃತರಾಷ್ಟ್ರನ ಬಳಿಗೆ ತನ್ನ ಪುರೋಹಿತನನ್ನು ಕಳುಹಿಸಲು ನಿರ್ಧಾರ 19

5. ದ್ರುಪದನ ವಾಕ್ಯವನ್ನು ಅನುಮೋದಿಸಿ ಕೃಷ್ಣನ ದ್ವಾರಕಾಗಮನ ಮತ್ತು ಎರಡೂ ಪಕ್ಷಗಳ ರಾಜರ ಆಗಮನ 25

6. ದ್ರುಪದನಿಂದ ಅನುಶಿಷ್ಟನಾಗಿ ದ್ರುಪದ ಪುರೋಹಿತನ ಹಸ್ತಿನಪುರ ಗಮನ 32

7. ದ್ವಾರಕೆಗೆ ಹೋಗಿ ಅರ್ಜುನ ಮತ್ತು ದುರ್ಯೋಧನರಿಂದ ಕೃಷ್ಣನ ಸಹಾಯಯಾಚನೆ 38

8. ಶಲ್ಯನನ್ನು ವಂಚಿಸಿ ದುರ್ಯೋಧನನಿಂದ ಅವನ ಸಹಾಯ ಪ್ರಾಪ್ತಿ. ಶಲ್ಯ-ಯುಧಿಷ್ಠಿರ ಸಮಾಗಮ 48

9. ಶಲ್ಯನಿಂದ ಯುಧಿಷ್ಠಿರನನ್ನು ಕುರಿತು, ಶಕ್ರನು ವಿಶ್ವರೂಪನ ವಧೆಯನ್ನು ಮಾಡಿ, ಸಂಕಟಪ್ರಾಪ್ತಿಯ ಮತ್ತು ವೃತ್ರೋತ್ಪತ್ತಿಯ ಕಥನ 61

10. ವಿಷ್ಣುವಿನ ಅನುಗ್ರಹದಿಂದ ಇಂದ್ರನಿಂದ ವೃತ್ರವಧೆ. ಇಂದ್ರನ ಕಣ್ಮರೆ ಮತ್ತು ಜಗತ್ತಿನ ಕ್ಷೋಭೆ 77

ಮತ್ತು ಆಧ್ಯೇತೃಗಳು ಹೀಗೆ ನಮ್ಮಿಂದ ಆಗಿರಬಹುದಾದ ತಪ್ಪುಗಳನ್ನು ಕ್ಷಮಿಸಿ ಅವುಗಳನ್ನು ನಮಗೆ ಸೂಚಿಸಿ ಅನುಗ್ರಹಿಸಬೇಕೆಂದು ಪ್ರಾಂಜಲವಾಗಿ ಕೇಳಿಕೊಳ್ಳುತ್ತೇನೆ.

ಅನೇಕ ಪೀಠಾಧಿಪತಿಗಳು ನಮ್ಮ ಕೋಶಗಳಲ್ಲಿದ್ದ ತಾಳೆಗರಿಯ ಗ್ರಂಥಗಳನ್ನು ಕೊಟ್ಟು ದಯೆಯನ್ನು ತೋರಿಸಿ ಮಹೋಪಕಾರವನ್ನು ಮಾಡಿದ್ದಾರೆ. ಅವರೆಲ್ಲರ ಪಾದಕಮಲಗಳಿಗೆ ನನ್ನ ಸಾಷ್ಟಾಂಗ ಪ್ರಣಾಮಗಳು.

ಇತಿ ಶ್ರೀಪಾದ ಚರಣದಾಸ

**ಶೇಷಗಿರಿ ಆಚಾರ್ಯ**

★ ★ ★ ★ ★

# ವಿಷಯಾನುಕ್ರಮಣಿಕೆ

# ಮಹಾಭಾರತ - ಭಾಗ-೧೧

# ಉದ್ಯೋಗಪರ್ವ


ಪುಟ ಸಂ.

1. ವಿರಾಟನ ಸಭೆಗೆ ಕೃಷ್ಣ-ಬಲರಾಮಾದಿಗಳ ಪ್ರವೇಶ. ಕೌರವರ ಬಳಿಗೆ ಒಬ್ಬ ಸಮರ್ಥನಾದ ದೂತನನ್ನು ಕಳುಹಿಸುವಂತೆ ಕೃಷ್ಣನ ಸೂಚನೆ 1

2. ಕೃಷ್ಣನ ಅಭಿಪ್ರಾಯವನ್ನು ಅನುಮೋದಿಸಿ ಬಲರಾಮನಿಂದ ತನ್ನ ದುರ್ಯೋಧನಪಕ್ಷಪಾತದ ಆವಿಷ್ಕಾರ 10

3. ಸಾತ್ಯಕಿಯಿಂದ ಬಲರಾಮನ ಮಾತುಗಳನ್ನು ನಿಂದಿಸಿ ದುರ್ಯೋಧನ ನಿಗ್ರಹದ ನಿರ್ಧಾರಣ 14

4. ದ್ರುಪದನಿಂದ ಧೃತರಾಷ್ಟ್ರನ ಬಳಿಗೆ ತನ್ನ ಪುರೋಹಿತನನ್ನು ಕಳುಹಿಸಲು ನಿರ್ಧಾರ 19

5. ದ್ರುಪದನ ವಾಕ್ಯವನ್ನು ಅನುಮೋದಿಸಿ ಕೃಷ್ಣನ ದ್ವಾರಕಾಗಮನ ಮತ್ತು ಎರಡೂ ಪಕ್ಷಗಳ ರಾಜರ ಆಗಮನ 25

6. ದ್ರುಪದನಿಂದ ಅನುಶಿಷ್ಟನಾಗಿ ದ್ರುಪದ ಪುರೋಹಿತನ ಹಸ್ತಿನಪುರ ಗಮನ 32

7. ದ್ವಾರಕೆಗೆ ಹೋಗಿ ಅರ್ಜುನ ಮತ್ತು ದುರ್ಯೋಧನರಿಂದ ಕೃಷ್ಣನ ಸಹಾಯಯಾಚನೆ 38

8. ಶಲ್ಯನನ್ನು ವಂಚಿಸಿ ದುರ್ಯೋಧನನಿಂದ ಅವನ ಸಹಾಯ ಪ್ರಾಪ್ತಿ. ಶಲ್ಯ-ಯುಧಿಷ್ಠಿರ ಸಮಾಗಮ 48

9. ಶಲ್ಯನಿಂದ ಯುಧಿಷ್ಠಿರನನ್ನು ಕುರಿತು, ಶಕ್ರನು ವಿಶ್ವರೂಪನ ವಧೆಯನ್ನು ಮಾಡಿ, ಸಂಕಟಪ್ರಾಪ್ತಿಯ ಮತ್ತು ವೃತ್ರೋತ್ಪತ್ತಿಯ ಕಥನ 61

10. ವಿಷ್ಣುವಿನ ಅನುಗ್ರಹದಿಂದ ಇಂದ್ರನಿಂದ ವೃತ್ರವಧೆ. ಇಂದ್ರನ ಕಣ್ಮರೆ ಮತ್ತು ಜಗತ್ತಿನ ಕ್ಷೋಭೆ 77

11. ಇಂದ್ರರಾಜ್ಯದಲ್ಲಿ ನಹುಷನಿಗೆ ಅಭಿಷೇಕ. ಅವನ ದುರ್ಬುದ್ಧಿ ಮತ್ತು ಬೃಹಸ್ಪತಿಯಿಂದ ಶಚಿಗೆ ಅಭಯದಾನ 88

12. ಬೃಹಸ್ಪತಿಗಳ ಸೂಚನೆಯಂತೆ ಕಾಲಾವಕಾಶವನ್ನು ಕೇಳಲು ಶಚಿಯಿಂದ ನಹುಷನ ಸಮೀಪಕ್ಕೆ ಗಮನ 94

13. ನಹುಷನ ಜೊತೆಯಲ್ಲಿ ಶಚಿಯ ಒಪ್ಪಂದ. ಇಂದ್ರನ ಅಶ್ವಮೇಧಯಾಗ. ಪುನಃ ಅದರ್ಶನ ಮತ್ತು ಶಚಿಯಿಂದ ದುರ್ಗಾಪೂಜೆ 102

14. ದುರ್ಗಾದೇವಿಯ ಜೊತೆಯಲ್ಲಿ ಹೋಗಿ ಶಚಿಯಿಂದ ಕಮಲದ ನಾಳದಲ್ಲಿದ್ದ ಇಂದ್ರನ ದರ್ಶನ ಮತ್ತು ಸ್ತೋತ್ರ 107

15. ನಹುಷನಿಂದ ತನ್ನ ಪಲ್ಲಕ್ಕಿಯನ್ನು ಹೊರಲು ಸಪ್ತರ್ಷಿಗಳ ನಿಯೋಜನೆ. ಇಂದ್ರನನ್ನು ಹುಡುಕಿ ಕಾಣದೆ ಅಗ್ನಿಯ ಪ್ರತಿನಿವೃತ್ತಿ 111

16. ಅಗ್ನಿಯಿಂದ ಬೃಹಸ್ಪತಿಗೆ ಶಕ್ರನ ದರ್ಶನ. ಬೃಹಸ್ಪತಿಯಿಂದ ಇಂದ್ರಸ್ತುತಿ. ಅಲ್ಲಿ ಇಂದ್ರನಿಂದ ದೇವತೆಗಳಿಗೆ ಅವರವರ ಆಧಿಪತ್ಯದಲ್ಲಿ ಅಭಿಷೇಕ 119

17. ಅಗಸ್ತ್ಯಶಾಪದಿಂದ ಸ್ವರ್ಗದಿಂದ ನಹುಷನ ಪತನ 129

18. ಇಂದ್ರನ ಸ್ವರ್ಗಪ್ರಾಪ್ತಿ ಮತ್ತು ಶಲ್ಯನಿಂದ ದುರ್ಯೋಧನಪಕ್ಷಗಮನ 134

19. ಪಾಂಡವರ ಮತ್ತು ಕೌರವರ ಸೇನಾಸಮವಾಯ 140

20. ಹಸ್ತಿನಪುರಕ್ಕೆ ಹೋಗಿ ದ್ರುಪದನ ಪುರೋಹಿತನಿಂದ ದ್ರುಪದಸಂದೇಶಕಥನ 147

21. ಪುರೋಹಿತರ ಮಾತಿಗೆ ಭೀಷ್ಮರ ಅನುಮೋದನೆ, ಕರ್ಣನ ಆಕ್ಷೇಪ ಮತ್ತು ಧೃತರಾಷ್ಟ್ರನ ಉತ್ತರ 152

22. ಧೃತರಾಷ್ಟ್ರನಿಂದ ಪಾಂಡವರ ಬಳಿಗೆ ದೂತನಾಗಿ ಸಂಜಯನ ಪ್ರೇಷಣ 157

23. ಉಪಪ್ಲಾವ್ಯಕ್ಕೆ ಹೋಗಿ ಸಂಜಯನಿಂದ ಪಾಂಡವರ ಕುಶಲಪ್ರಶ್ನೆ ಮತ್ತು ಯುಧಿಷ್ಠಿರನಿಂದ ಧೃತರಾಷ್ಟ್ರಾದಿಗಳ ಕುಶಲಪ್ರಶ್ನೆ 170

24. ಸಂಜಯನಿಂದ ಯುಧಿಷ್ಠಿರನ ಪ್ರಶ್ನೆಗಳಿಗೆ ಉತ್ತರದಾನ ಮತ್ತು ಭೀಷ್ಮ-ಧೃತರಾಷ್ಟ್ರಾದಿಗಳ ಅಭಿಪ್ರಾಯಕಥನ 179

25. ಯುಧಿಷ್ಠಿರನಿಂದ ತಮ್ಮ ಪ್ರಾಬಲ್ಯಕಥನಪೂರ್ವಕವಾಗಿ ಇಂದ್ರಪ್ರಸ್ಥದಲ್ಲಿ ರಾಜ್ಯದಾನವನ್ನು ಮಾಡಿದರೆ ಶಾಂತಿಯ ಕಥನ 188

26. ರಾಜ್ಯವನ್ನು ಕೊಡದಿದ್ದರೂ ಶಾಂತಿಯನ್ನು ವಹಿಸುವಂತೆ ಸಂಜಯನಿಂದ ಯುಧಿಷ್ಠಿರನಿಗೆ ಪ್ರೇರಣೆ 197

27. ಕೃಷ್ಣನ ಶಾಸನವನ್ನು ಮೀರುವುದಿಲ್ಲವೆಂಬ ಯುಧಿಷ್ಠಿರನ ಪ್ರತಿವಚನ 206

28. ದುರ್ಯೋಧನನು ಇಷ್ಟು ಅಪರಾಧವನ್ನು ಮಾಡಿದ್ದರೂ ಸಂಧಿಯು ಶ್ರೇಷ್ಠವೆಂದು ಕೃಷ್ಣನ ವಚನ 212

29. ಉಪಪ್ಲಾವ್ಯದಿಂದ ಹೊರಟ ಸಂಜಯನಿಗೆ ಯುಧಿಷ್ಠಿರನ ಸಂದೇಶ 231

30. ಸಂಜಯನಿಗೆ ಯುಧಿಷ್ಠಿರನ ಸಂದೇಶ. ಐದುಗ್ರಾಮಗಳನ್ನಾದರೂ ಕೊಡುವಂತೆ ಒತ್ತಾಯ 249

31. ಸಂಜಯನಿಗೆ ಅರ್ಜುನನ ಸಂದೇಶ ಮತ್ತು ಸಂಜಯನ ಪ್ರತಿನಿವೃತ್ತಿ 254

32. ವಿದುರನೀತಿ 268

33. ವಿದುರನೀತಿ. ಯುಧಿಷ್ಠಿರನಿಗೆ ರಾಜ್ಯವನ್ನು ಕೊಡುವಂತೆ ನಿರ್ಬಂಧ 299

34. ವಿದುರನಿಂದ ಧೃತರಾಷ್ಟ್ರನಿಗೆ ಸುಧನ್ವವಿರೋಚನಸಂವಾದಕಥನ 318

35. ವಿದುರನೀತಿ ಮತ್ತು ಧೃತರಾಷ್ಟ್ರನಿಗೆ ಪಾಂಡವರಲ್ಲಿ ಪುತ್ರದೃಷ್ಟಿವಿಧಾನ 330

36. ವಿದುರನಿಂದ ಧೃತರಾಷ್ಟ್ರನಿಗೆ ಆತ್ರೇಯೋಕ್ತನೀತಿಕಥನ 340

37. ವಿದುರ ನೀತಿ. ಪಾಂಡವರಿಗೆ ರಾಜ್ಯ ಕೊಡುವಂತೆ ನಿರ್ಬಂಧ 360

38. ವಿದುರನೀತಿ 376

39. ವಿದುರನೀತಿ. ಜ್ಞಾತಿಸಂಗ್ರಹದಲ್ಲಿ ಇರುವ ಗುಣನಿರೂಪಣ 387

40. ವಿದುರನೀತಿ. ವರ್ಣಾಶ್ರಮ ಧರ್ಮಕಥನ. ಪಾಂಡವರಿಗೆ ರಾಜ್ಯವನ್ನು ಕೊಡಲು ಒತ್ತಾಯ 405

41. ತಾನು ಶೂದ್ರನಾದುದರಿಂದ ವಿದುರನ ಉಪದೇಶ ಸಂಕ್ಷೇಪ ಮತ್ತು ಸನತ್ಕುಮಾರರ ಆಗಮನ 414

42. ಸನತ್ಸುಜಾತೀಯ ಪರ್ವ 418

43. ಸನತ್ಸುಜಾತೀಯ ಪರ್ವ 447

44. ಧೃತರಾಷ್ಟ್ರನಿಂದ ಸನತ್ಕುಮಾರರನ್ನು ಕುರಿತು ಸಂನ್ಯಾಸ ಸ್ವರೂಪ.
ತಪಸ್ಸಿನ ಋದ್ಧಿ, ಅತಿವೃದ್ಧಿಬೇಧಗಳು, ತಪಸ್ಸಿನ ಕಲ್ಮಷಗಳು.
ಆ ಕಲ್ಮಷಗಳ ಪರಿಹಾರ. ಬ್ರಹ್ಮಜ್ಞಾನ ಮತ್ತು ಬ್ರಹ್ಮಜ್ಞಾನಿಯ
ಲಕ್ಷಣ ವಿಷಯದಲ್ಲಿ ಪ್ರಶ್ನೆ. ಸನತ್ಕುಮಾರರಿಂದ ಅವುಗಳ ಪರಿಹಾರ 477

45. ಸನತ್ಸುಜಾತರಿಂದ ಧೃತರಾಷ್ಟ್ರನನ್ನು ಕುರಿತು ತತ್ತ್ವೋಪದೇಶ 543

46. ಸನತ್ಸುಜಾತರಿಂದ ಧೃತರಾಷ್ಟ್ರನನ್ನು ಕುರಿತು ತತ್ತ್ವೋಪದೇಶ 559

47. ಸನತ್ಸುಜಾತರಿಂದ ಧೃತರಾಷ್ಟ್ರನನ್ನು ಕುರಿತು ತತ್ತ್ವೋಪದೇಶ 568

★ ★ ★ ★ ★

# ಮಹಾಭಾರತ

## ಉದ್ಯೋಗಪರ್ವ

## ೧. ಸೇನೋದ್ಯೋಗಪರ್ವ

### ಒಂದನೆಯ ಅಧ್ಯಾಯ

ವಿರಾಟನ ಸಭೆಗೆ ಕೃಷ್ಣ-ಬಲರಾಮಾದಿಗಳ ಪ್ರವೇಶ. ಕೌರವರ ಬಳಿಗೆ ಒಬ್ಬ ಸಮರ್ಥನಾದ ದೂತನನ್ನು ಕಳುಹಿಸುವಂತೆ ಕೃಷ್ಣನ ಸೂಚನೆ.

**ವೈಶಂಪಾಯನಃ**

ಕೃತ್ವಾ ವಿವಾಹಂ ತು ಕುರುಪ್ರವೀರಾಃ
ತದಾಽಭಿಮನ್ಯೋರ್ಮುದಿತಾಃ ಸಪಕ್ಷಾಃ ।
ವಿಶ್ರಮ್ಯ ಚತ್ವಾರ್ಯುಷಸಃ ಪ್ರತೀತಾಃ
ಸಭಾಂ ವಿರಾಟಸ್ಯ ತತೋಽಭಿಜಗ್ಮುಃ ॥೧॥

ಸಭಾ ತು ಸಾ ಮಾತ್ಸ್ಯಪತೇಃ ಸಮೃದ್ಧಾ
ಮಣಿಪ್ರವೇಕೋತ್ತಮರತ್ನಚಿತ್ರಾ ।

ನ್ಯಸ್ತಾಸನಾ ಮಾಲ್ಯವತೀ ಸುಗಂಧಾ
ತಾಮಭ್ಯಯುಸ್ತೇ ನರರಾಜವರ್ಯಾಃ ॥೨॥

ವೈಶಂಪಾಯನ– ಕುರುಪ್ರವೀರರು ಆಗ ಅಭಿಮನ್ಯುವಿನ ವಿವಾಹವನ್ನು ಮಾಡಿ ತಮ್ಮ ಪಕ್ಷದ ಜನರೊಡನೆ ನಾಲ್ಕುದಿನಗಳ ಕಾಲ ವಿಶ್ರಾಂತಿಯನ್ನು ಪಡೆದು ಸಂತೋಷದಿಂದ ವಿರಾಟನ ಸಭೆಗೆ ಹೊರಟರು. ಮತ್ಸ್ಯರಾಜನಾದ ವಿರಾಟನ ಆ ಸಭೆಯು ಶ್ರೇಷ್ಠವಾದ ಮಣಿಗಳಿಂದಲೂ, ಉತ್ತಮವಾದ ರತ್ನಗಳಿಂದಲೂ ಕೂಡಿ ಸುಗಂಧಗಳಿಂದ ಮತ್ತು ಮಾಲೆಗಳಿಂದ ಕೂಡಿದ್ದಿತು. ಅಲ್ಲಿ ಆಸನಗಳನ್ನು ಹಾಕಿದ್ದರು. ನರರಾಜರಲ್ಲಿ ಶ್ರೇಷ್ಠರಾದ ಅವರು ಆ ಸಭೆಯನ್ನು ಪ್ರವೇಶಿಸಿದರು.

ಅಥಾಸನಾನ್ಯಾವಿಶತಾಂ ಪುರಸ್ತಾದ್
ಉಭೌ ವಿರಾಟದ್ರುಪದೌ ನರೇಂದ್ರೌ ।
ವೃದ್ಧಶ್ಚ ಮಾನ್ಯಃ ಪೃಥಿವೀಪತೀನಾಂ
ಪಿತಾಮಹೋ ರಾಮಜನಾರ್ದನೌ ಚ ॥೩॥

ಅನಂತರ ನರೇಂದ್ರರಾದ ವಿರಾಟ-ದ್ರುಪದರಿಬ್ಬರು ಮುಂದಿನ ಆಸನಗಳಲ್ಲಿ ಕುಳಿತರು. ವೃದ್ಧರೂ, ಮಾನ್ಯರೂ, ರಾಜರ ಪಿತಾಮಹರೂ ಆದ ಭೀಷ್ಮರು, ಕೃಷ್ಣ-ಬಲರಾಮರು ಆಸನಗಳಲ್ಲಿ ಕುಳಿತರು.

ಪಾಂಚಾಲರಾಜಸ್ಯ ಸಮೀಪತಸ್ತು
ಶಿನಿಪ್ರವೀರಃ ಸಹರೌಹಿಣೇಯಃ ।
ಮತ್ಸ್ಯಸ್ಯ ರಾಜ್ಞಸ್ತು ಸುಸನ್ನಿಕೃಷ್ಟೌ
ಜನಾರ್ದನಶ್ಚೈವ ಯುಧಿಷ್ಠಿರಶ್ಚ ॥೪॥

ಪಾಂಚಾಲರಾಜನಾದ ದ್ರುಪದನ ಸಮೀಪದಲ್ಲಿ ಬಲರಾಮ ಸಹಿತನಾದ ಶಿನಿಪ್ರವೀರನಾದ ಸಾತ್ಯಕಿಯು ಕುಳಿತನು. ಮತ್ಸ್ಯರಾಜನಾದ ವಿರಾಟನ ಸಮೀಪದಲ್ಲಿ ಕೃಷ್ಣಮತ್ತು ಯುಧಿಷ್ಠಿರರು ಕುಳಿತರು.

ಸುತಾಶ್ಚ ಸರ್ವೇ ದ್ರುಪದಸ್ಯ ರಾಜ್ಞೋ
ಭೀಮಾರ್ಜುನೌ ಮಾದ್ರವತೀಸುತೌ ಚ ।

ಪ್ರದ್ಯುಮ್ನಸಾಂಬೌ ಚ ಯುಧಿಪ್ರವೀರೌ
ವಿರಾಟಪುತ್ರಶ್ಚ ಸಹಾಭಿಮನ್ಯುಃ ॥೫॥

ಸರ್ವೇ ಚ ಶೂರಾಃ ಪಿತೃಭಿಃ ಸಮಾನಾಃ
ವೀರ್ಯೇಣ ರೂಪೇಣ ತಥಾ ಬಲೇನ ।
ಉಪಾವಿಶನ್ ದ್ರೌಪದೇಯಾಃ ಕುಮಾರಾಃ
ಸುರತ್ನಚಿತ್ರೇಷು ವರಾಸನೇಷು ॥೬॥

ದ್ರುಪದರಾಜನ ಎಲ್ಲಾ ಮಕ್ಕಳೂ, ಭೀಮಾರ್ಜುನರೂ, ಮಾದ್ರಿಯ ಪುತ್ರರಾದ ನಕುಲ-ಸಹದೇವರೂ, ಯುದ್ಧದಲ್ಲಿ ಬಹಳ ವೀರರಾದ ಪ್ರದ್ಯುಮ್ನ-ಸಾಂಬರೂ, ವಿರಾಟಪುತ್ರನಾದ ಉತ್ತರ, ಅಭಿಮನ್ಯು ಮತ್ತು ಪಿತೃಗಳಿಗೆ ಸಮಾನವಾದ ರೂಪ ಮತ್ತು ಪರಾಕ್ರಮವುಳ್ಳ ದ್ರೌಪದಿಯ ಕುಮಾರರೂ ಎಲ್ಲಾ ಶೂರರೂ ಒಳ್ಳೆಯ ರತ್ನಚಿತ್ರವಾದ ಶ್ರೇಷ್ಠವಾದ ಆಸನಗಳಲ್ಲಿ ಕುಳಿತರು.

ತತ್ರೋಪವಿಷ್ಟೇಷು ವರಾಸನೇಷು
ವಿಭ್ರಾಜಮಾನಾಂಬರಭೂಷಣೇಷು ।
ರರಾಜ ಸಾ ರಾಜವತೀ ಸಮೃದ್ಧಾ
ಗ್ರಹೈರಿವ ದ್ಯೌರ್ವಿಮಲೈರುಪೇತಾ ॥೭॥

ಶೋಭಿಸುವ ವಸ್ತ್ರಭೂಷಣಗಳುಳ್ಳ ರಾಜರು ಅಲ್ಲಿ ಆ ವರಾಸನಗಳಲ್ಲಿ ಕುಳಿತುಕೊಳ್ಳುತ್ತಿರಲು ಆ ಸಭೆಯು ರಾಜರಿಂದ ಕೂಡಿ ಸ್ವಚ್ಛವಾದ ಗ್ರಹಗಳಿಂದ ಕೂಡಿದ ಆಕಾಶದಂತೆ ಕಂಗೊಳಿಸಿತು.

ತತಃ ಕಥಾಸ್ತೇ ಸಮವಾಯಯುಕ್ತಾಃ
ಕೃತ್ವಾ ವಿಚಿತ್ರಾಃ ಪುರುಷಪ್ರವೀರಾಃ ।
ತಸ್ಥುರ್ಮುಹೂರ್ತಂ ಪರಿಚಿಂತಯಂತಃ
ಕೃಷ್ಣಂ ನೃಪಾಸ್ತೇ ಸಮುದೀಕ್ಷಮಾಣಾಃ ॥೮॥

ಅನಂತರ ಆ ಪುರುಷಪ್ರವೀರರು ಒಟ್ಟಿಗೆ ಸೇರಿ ವಿಚಿತ್ರವಾದ ಕಥೆಗಳನ್ನು ಮಾತನಾಡುತ್ತಾ ಒಂದು ಮುಹೂರ್ತದವರೆಗೆ ಕೃಷ್ಣನನ್ನು ಚಿಂತಿಸುತ್ತಾ ಅವನ ನಿರೀಕ್ಷೆಯಲ್ಲಿ ಕುಳಿತರು.

ಕಥಾಂತಮಾಸಾದ್ಯ ಜನಾರ್ದನೇನ
ಸಂಘಟ್ಟಿತಾಃ ಪಾಂಡವಕಾರ್ಯಹೇತೋಃ ।
ತೇ ರಾಜಸಿಂಹಾಃ ಸಹಿತಾ ಹ್ಯಶೃಣ್ವನ್
ವಾಕ್ಯಂ ಮಹಾರ್ಥಂ ಚ ಮಹೋದಯಂ ಚ ॥೯॥

ತಮ್ಮ ಕಥೆಯನ್ನು ಮುಗಿಸಿ ಪಾಂಡವರ ಕಾರ್ಯದ ಸಲುವಾಗಿ ಕೃಷ್ಣನ ಜೊತೆಯಲ್ಲಿ ಒಂದುಗೂಡಿದ ಆ ರಾಜಸಿಂಹರು ಮಹಾರ್ಥವುಳ್ಳ, ಮಹಾ ಅಭ್ಯುದಯಕ್ಕೆ ಕಾರಣವಾದ ಕೃಷ್ಣನ ವಾಕ್ಯವನ್ನು ಎಲ್ಲರೂ ಒಟ್ಟಿಗೆ ಆಲಿಸಿದರು.

ಕೃಷ್ಣಃ

ಸರ್ವೈರ್ಭವದ್ಭಿರ್ವಿದಿತಂ ಯಥಾऽಯಂ
ಯುಧಿಷ್ಠಿರಃ ಸೌಬಲೇನಾಕ್ಷವತ್ಯಾಮ್ ।
ಜಿತೋ ನಿಕೃತ್ಯಾऽಪಹೃತಂ ಚ ರಾಜ್ಯಂ
ಪುನಃ ಪ್ರವಾಸೇ ಸಮಯಃ ಕೃತಶ್ಚ ॥೧೦॥

ಕೃಷ್ಣ– ಯುಧಿಷ್ಠಿರನು ಶಕುನಿಯಿಂದ ಹೇಗೆ ಅಕ್ಷಕ್ರೀಡೆಯಲ್ಲಿ ಜಿತನಾದನು, ಅವನ ರಾಜ್ಯವು ಹೇಗೆ ಮೋಸದಿಂದ ಅಪಹರಿಸಲ್ಪಟ್ಟಿತು ಮತ್ತು ವನವಾಸದ ವಿಷಯದಲ್ಲಿ ಯಾವ ಪ್ರತಿಜ್ಞೆ ಮಾಡಲ್ಪಟ್ಟಿತು ಎಂಬ ವಿಷಯವು ನಿಮಗೆಲ್ಲರಿಗೂ ತಿಳಿದಿದೆ.

ಶಕ್ತೈರ್ವಿಜೇತುಂ ತರಸಾ ಮಹೀಂ ಚ
ಸತ್ಯಪ್ರತಿಜ್ಞೈಃ ಸತ್ಯರತೈರ್ಯಥಾವತ್ ।
ಪಾಂಡೋಃ ಸುತೈಸ್ತದ್ ವ್ರತಮುಗ್ರರೂಪಂ
ವರ್ಷಾಣಿ ಷಟ್ ಸಪ್ತ ಚ ಚೀರ್ಣಮಗ್ರ್ಯೈಃ ॥೧೧॥

ತಮ್ಮ ಬಲದಿಂದ ಭೂಮಿಯನ್ನು ಗೆಲ್ಲಲು ಸಮರ್ಥರಾದರೂ ಸಹ ಸತ್ಯಪ್ರತಿಜ್ಞರೂ, ಸತ್ಯರತರೂ ಆದ ಶ್ರೇಷ್ಠರಾದ ಪಾಂಡುಪುತ್ರರು ಹದಿಮೂರು ವರ್ಷಗಳ ಕಾಲ ಉಗ್ರವಾದ ಆ ವ್ರತವನ್ನು ಮಾಡಿದರು.

ತ್ರಯೋದಶಂ ದುಶ್ಚರಮೇವ ವರ್ಷಮ್
ಅಜ್ಞಾಯಮಾನೈರ್ಭವತಾಂ ಸಮೀಪೇ ।

ಕ್ಲೇಶಾನಸಹ್ಯಾಂಶ್ಚ ತಿತಿಕ್ಷಮಾಣೈಃ
ಯಥೋಷಿತಂ ತದ್ ವಿದಿತಂ ಚ ಸರ್ವಮ್ ॥೧೨॥

ಹದಿಮೂರನೆಯ ವರ್ಷದಲ್ಲಿ ನಿಮ್ಮ ಸಮೀಪದಲ್ಲಿಯೇ ಯಾರಿಂದಲೂ ತಿಳಿಯಲ್ಪಡದೇ ಅಸಹ್ಯವಾದ ಕ್ಲೇಶಗಳನ್ನು ಅನುಭವಿಸುತ್ತಾ, ದುಶ್ಚರವಾದ ಅಜ್ಞಾತವಾಸವನ್ನು ಹೇಗೆ ಮಾಡಿದರೆಂಬುದೂ ನಿಮಗೆಲ್ಲಾ ತಿಳಿದಿದೆ.

ಏವಂ ಗತೇ ಧರ್ಮಸುತಸ್ಯ ರಾಜ್ಞೋ
ಸುಯೋಧನಸ್ಯಾಪಿ ಹಿತಂ ಚ ಯತ್ ಸ್ಯಾತ್ ।
ತಚ್ಚಿಂತಯಧ್ವಂ ಕುರುಪಾಂಡವಾನಾಂ
ಧರ್ಮ್ಯಂ ಚ ಯುಕ್ತಂ ಚ ಯಶಸ್ಕರಂ ಚ ॥೧೩॥

ಪರಿಸ್ಥಿತಿಯು ಹೀಗಿರುವಾಗ ಧರ್ಮರಾಜನಿಗೂ ಮತ್ತು ಸುಯೋಧನನಿಗೂ ಮತ್ತು ಎಲ್ಲಾ ಕುರು-ಪಾಂಡವರಿಗೂ ಯಾವುದು ಹಿತವೋ, ಧರ್ಮಕ್ಕೆ ಅನುಗುಣವೋ, ಯೋಗ್ಯವೋ ಮತ್ತು ಕೀರ್ತಿಯನ್ನು ತರುವುದೋ ಅದನ್ನು ಕುರಿತು ಚಿಂತಿಸಿ.

ಅಧರ್ಮಯುಕ್ತಂ ನ ಚ ಕಾಮಯೇತ
ರಾಜ್ಯಂ ಸುರಾಣಾಮಪಿ ಧರ್ಮರಾಜಃ ।
ಧರ್ಮಾರ್ಥಯುಕ್ತಂ ಚ ಮಹೀಪತಿತ್ವಂ
ಗ್ರಾಮೇಽಪಿ ಕಸ್ಮಿಂಶ್ಚಿದಯಂ ಬುಭೂಷೇತ್ ॥೧೪॥

ಧರ್ಮರಾಜನು ಅಧರ್ಮದಿಂದ ಕೂಡಿದ ದೇವರಾಜ್ಯವನ್ನೂ ಬಯಸಲಾರನು. ಧರ್ಮಾರ್ಥ ಸಹಿತವಾದ ರಾಜತ್ವವು ದೊರೆಯುವುದಾದರೆ ಯಾವುದೋ ಒಂದು ಗ್ರಾಮದಲ್ಲಿಯೂ ಕೂಡ ಅವನು ಶೋಭಿಸಿಯಾನು!

ಪಿತ್ರ್ಯಂ ಹಿ ರಾಜ್ಯಂ ವಿದಿತಂ ನೃಪಾಣಾಂ
ಯಥಾಽಪಕೃಷ್ಟಂ ಧೃತರಾಷ್ಟ್ರಪುತ್ರೈಃ ।
ಮಿಥ್ಯೋಪಚಾರೇಣ ತಥಾಪ್ಯನೇನ
ಕೃಚ್ಛ್ರಂ ಮಹತ್ ಪಾಪ್ತಮಸಹ್ಯರೂಪಮ್ ॥೧೫॥

ಅವನ ಪಿತೃರಾಜ್ಯವು ಧೃತರಾಷ್ಟ್ರಪುತ್ರರಿಂದ ಮೋಸದ ನಡವಳಿಕೆಯಿಂದ ಹೇಗೆ ಅಪಹೃತವಾಯಿತೆಂಬುದು ಎಲ್ಲ ರಾಜರಿಗೂ ತಿಳಿದಿದೆ. ಆದರೂ ಅವನು ಸಹಿಸಲು ಅಸಾಧ್ಯವಾದ ದೊಡ್ಡ ಕಷ್ಟವನ್ನು ಹೊಂದಿದನು.

ನ ಚಾಪಿ ಪಾರ್ಥೋ ವಿಜಿತೋ
ರಣೇ ತೈಃ ಸ್ವತೇಜಸಾ ವೈ ಧೃತರಾಷ್ಟ್ರಪುತ್ರೈಃ ।
ತಥಾऽಪಿ ರಾಜಾ ಸಹಿತಃ ಸುಹೃದ್ಭಿಃ
ಅಭೀಪ್ಸತೇऽನಾಮಯಮೇವ ತೇಷಾಮ್ ॥೧೬॥

ರಾಜನಾದ ಯುಧಿಷ್ಠಿರನನ್ನು ಧೃತರಾಷ್ಟ್ರಪುತ್ರರು ಯುದ್ಧದಲ್ಲಿ ತಮ್ಮ ಪರಾಕ್ರಮದಿಂದೇನೂ ಜಯಿಸಲಿಲ್ಲ. ಆದರೂ ಸುಹೃದರಿಂದ (ಮಿತ್ರರಿಂದ) ಕೂಡಿದ ಯುಧಿಷ್ಠಿರ ರಾಜನು ಅವರಿಗೆ ಕ್ಷೇಮವನ್ನೇ ಬಯಸುತ್ತಾನೆ.

ಯತ್ತು ಸ್ವಯಂ ಪಾಂಡುಸುತೈರ್ವಿಜಿತ್ಯ
ಸಮಾಹೃತಂ ಭೂಮಿಷು ತಾನ್ ಪ್ರಮಥ್ಯ ।
ತತ್ ಪ್ರಾರ್ಥಯಂತೇ ಪುರುಷಪ್ರವೀರಾಃ
ಕುಂತೀಸುತಾ ಮಾದ್ರವತೀಸುತೌ ಚ ॥೧೭॥

ಪಾಂಡುಪುತ್ರರು ತಾವು ಭೂಪತಿಗಳಾದ ರಾಜರನ್ನು ಮರ್ದಿಸಿ ಅವರಿಂದ ಯಾವ ಭೂಮಿಯನ್ನು ತಾವೇ ಪಡೆದರೋ ಪುರುಷಪ್ರವೀರರಾದ ಕುಂತಿಯ ಮತ್ತು ಮಾದ್ರಿಯ ಪುತ್ರರು ಅದನ್ನು ಪ್ರಾರ್ಥಿಸುತ್ತಾರೆ.

ಬಲಾಭಿಗುಪ್ತೈರವಿಷಹ್ಯಪೀಡೈಃ
ಸಂಪ್ರಸ್ಥಿತಾ ಹಂತುಮಮಿತ್ರಸಂಘೈಃ ।
ರಾಜ್ಯಂ ಜಿಹೀರ್ಷದ್ಭಿರಸದ್ಭಿರುಗ್ರೈಃ
ಸರ್ವಂ ಚ ತದ್ವೋ ವಿದಿತಂ ಯಥಾವತ್ ॥೧೮॥

ಬಲದಿಂದ ರಕ್ಷಿತರಾದ, ಸಹಿಸಲು ಅಸಾಧ್ಯವಾದ ಪೀಡೆಯನ್ನು ಕೊಡುವ ಶತ್ರು ಸಮೂಹಗಳು ಕಾಡಿನಲ್ಲಿ ಅವರನ್ನು ಕೊಲ್ಲಲು ಹೊರಟವು. ರಾಜ್ಯವನ್ನು ಅಪಹರಿಸುವ ಇಚ್ಛೆಯುಳ್ಳ ಉಗ್ರರೂ, ಅಸಜ್ಜನರೂ ಆದ ಅವರಿಂದ ಮಾಡಲ್ಪಟ್ಟದ್ದೆಲ್ಲವೂ ನಿಮಗೆ ಸ್ಪಷ್ಟವಾಗಿ ತಿಳಿದಿದೆ.

ತೇಷಾಂ ಚ ಲೋಭಂ ಪ್ರಸಮೀಕ್ಷ್ಯ ವೃದ್ಧಂ
ಧರ್ಮಾತ್ಮತಾಂ ಚಾಪಿ ಯುಧಿಷ್ಠಿರಸ್ಯ ।
ಸಂಬಂಧಿತಾಂ ಚಾಪಿ ಸಮೀಕ್ಷ್ಯ ತೇಷಾಂ
ಮತಿಂ ಕುರುಧ್ವಂ ಸಹಿತಾಃ ಪೃಥಕ್ ಚ ॥೧೯॥

ಅವರ ಲೋಭವು ಅಭಿವೃದ್ಧಿಯಾದುದನ್ನೂ ಮತ್ತು ಯುಧಿಷ್ಠಿರನ ಧರ್ಮಸ್ವಭಾವವನ್ನೂ ಮತ್ತು ನಮ್ಮ ಮತ್ತು ಅವರ ಪರಸ್ಪರ ಸಂಬಂಧವನ್ನೂ ಗಮನಿಸಿ ಎಲ್ಲರೂ ಒಟ್ಟಾಗಿ ಮತ್ತು ಬೇರೆ ಬೇರೆಯಾಗಿ ಒಂದು ನಿರ್ಧಾರವನ್ನು ಮಾಡಿ.

ಇಮೇ ಚ ಸತ್ಯೇ ನಿರತಾಃ ಸದೈವ
ತಂ ಪಾಲಯಿತ್ವಾ ಸಮಯಂ ಯಥಾವತ್ ।
ಅತೋಽನ್ಯಥಾ ತೈರುಪಚರ್ಯಮಾಣಾ
ಹನ್ಯುಃ ಸಮೇತಾನ್ ಧೃತರಾಷ್ಟ್ರಪುತ್ರಾನ್ ॥೨೦॥

ತಾವು ಮಾಡಿದ ಪ್ರತಿಜ್ಞೆಯನ್ನು ಸರಿಯಾಗಿ ಪಾಲಿಸಿ ಈ ಪಾಂಡವರು ಯಾವಾಗಲೂ ಸತ್ಯದಲ್ಲಿ ನಿರತರಾಗಿದ್ದಾರೆ. ದುರ್ಯೋಧನಾದಿಗಳು ಅವರ ವಿಷಯದಲ್ಲಿ ಬೇರೆ ರೀತಿಯಲ್ಲಿ ನಡೆದುಕೊಂಡರೆ ಪಾಂಡವರು ಧೃತರಾಷ್ಟ್ರ ಪುತ್ರರೆಲ್ಲರನ್ನೂ ಒಟ್ಟಿಗೇ ಕೊಂದಾರು.

ತೈರ್ವಿಪ್ರಕಾರಂ ಚ ನಿಶಮ್ಯ ರಾಜ್ಯೇ
ಸುಹೃಜ್ಜನಾಸ್ತಾನ್ ಪರಿವಾರಯೇಯುಃ ।
ಯುದ್ಧೇನ ಬಾಧೇಯುರಿಮಾಂಸ್ತಥೈವಂ
ತೈರ್ವಧ್ಯಮಾನಾ ಯುಧಿ ತಾಂಶ್ಚ ಹನ್ಯುಃ ॥೨೧॥

ಅವರು ಮಾಡಿದ ಅಪಕಾರಗಳನ್ನು ನೋಡಿ ರಾಜ್ಯದಲ್ಲಿರುವ ಸುಹೃಜ್ಜನರು ಅವರನ್ನು ಪಾಂಡವರ ವಿರೋಧವನ್ನು ಮಾಡುವುದು ಬೇಡ ಎಂದು ನಿವಾರಣೆ ಮಾಡಿಯಾರು. ಇವರನ್ನು ಅವರು ಯುದ್ಧದಿಂದ ಪೀಡಿಸಬಹುದು ಮತ್ತು ಅವರಿಂದ ಪೀಡೆಗೆ ಒಳಗಾದ ಪಾಂಡವರು ಯುದ್ಧದಲ್ಲಿ ಅವರನ್ನು ಕೊಂದಾರು.

ತಥಾऽಪಿ ನೇಮೇऽಲ್ಪಬಲಾಃ ಸಮರ್ಥಾಃ
ತೇಷಾಂ ಜಯಾಯೇತಿ ಮತಿರ್ಭವೇದ್ ವಃ ।
ಸಮೇತ್ಯ ಸರ್ವೇ ಸಹಿತಾಃ ಸುಹೃದ್ಭಿಃ
ತೇಷಾಂ ವಿನಾಶಾಯ ಯತೇಯುರೇವ ॥೨೨॥

ಆದರೂ ಅಲ್ಪಬಲವುಳ್ಳ ಪಾಂಡವರು ಆ ಕೌರವರನ್ನು ಜಯಿಸಲು ಸಮರ್ಥರಲ್ಲ ಎಂದು ನಿಮಗೆ ತೋರಬಹುದು. ಆದರೆ ಎಲ್ಲಾ ಸುಹೃಜ್ಜನರಿಂದ ಸಹಿತರಾದ ಪಾಂಡವರು ಕೌರವರ ವಿನಾಶಕ್ಕೆ ಪ್ರಯತ್ನವನ್ನು ಪಟ್ಟೇ ಪಡುತ್ತಾರೆ.

ದುರ್ಯೋಧನಸ್ಯಾಪಿ ಮತಂ ಯಥಾವ-
ನ್ನ ಜ್ಞಾಯತೇ ಕಿಂ ನು ಕರಿಷ್ಯತೀತಿ ।
ಅಜ್ಞಾಯಮಾನೇ ಚ ಮತೇ ಪರಸ್ಯ
ಕಿಂ ಸ್ಯಾತ್ ಸಮಾರಭ್ಯತಮಂ ಮತಂ ವಃ ॥೨೩॥

ದುರ್ಯೋಧನನಾದರೂ ಏನು ಮಾಡುವನು ಎಂದು ಅವನ ಅಭಿಪ್ರಾಯವು ಸ್ಪಷ್ಟವಾಗಿ ತಿಳಿದಿಲ್ಲ. ಶತ್ರುವಾಗಿರುವ ಅವನ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಯದಿರುವಾಗ ನಾವು ಏನು ಮಾಡುವುದು ಯೋಗ್ಯವೆಂದು ನಿಮಗೆ ತೋರುತ್ತದೆ?

ತಸ್ಮಾದಿತೋ ಗಚ್ಛತು ಧರ್ಮಶೀಲಃ
ಶುಚಿಃ ಕುಲೀನಃ ಪುರುಷೋऽಪ್ರಮತ್ತಃ ।
ದೂತಃ ಸಮರ್ಥಃ ಪ್ರಶಮಾಯ ತೇಷಾಂ
ರಾಜ್ಯಾರ್ಧದಾನಾಯ ಯುಧಿಷ್ಠಿರಸ್ಯ ॥೨೪॥

ಆದ್ದರಿಂದ ಇಲ್ಲಿಂದ ಧರ್ಮಶೀಲನೂ, ಶುಚಿಯೂ, ಸತ್ಕುಲಪ್ರಸೂತನೂ, ಪ್ರಮಾದ ರಹಿತನೂ, ಸಮರ್ಥನೂ ಆದ ಒಬ್ಬ ದೂತನು ಅವರನ್ನು ಸಮಾಧಾನ ಮಾಡಿ ಯುಧಿಷ್ಠಿರನಿಗೆ ಅರ್ಧರಾಜ್ಯವನ್ನು ಕೊಡುವಂತೆ ಹೇಳಲು ಇಲ್ಲಿಂದ ಅಲ್ಲಿಗೆ ಹೋಗಲಿ.

ವೈಶಂಪಾಯನಃ

ನಿಶಮ್ಯ ವಾಕ್ಯಂ ತು ಜನಾರ್ದನಸ್ಯ
ಧರ್ಮಾರ್ಥಯುಕ್ತಂ ಮಧುರಂ ಸಮಂ ಚ ।

**ಸಮಾದದೇ ವಾಕ್ಯಮಥಾಗ್ರಜೋಽಸ್ಯ**
**ಸಂಪೂಜ್ಯ ವಾಕ್ಯಂ ತದತೀವ ರಾಮಃ ॥೨೫॥**

ವೈಶಂಪಾಯನ– ಕೃಷ್ಣನ ಧರ್ಮಾರ್ಥಯುಕ್ತವಾದ ಮಧುರವಾದ ಮತ್ತು ನಿಷ್ಪಕ್ಷಪಾತವಾದ ಮಾತುಗಳನ್ನು ಕೇಳಿ, ಅವನ ಅಣ್ಣನಾದ ಬಲರಾಮನು ಆ ಮಾತುಗಳನ್ನು ಬಹಳವಾಗಿ ಗೌರವಿಸಿ ತಾನು ಮಾತನಾಡಲು ಆರಂಭಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಪ್ರಥಮೋಽಧ್ಯಾಯಃ ॥

॥ ಸೇನೋದ್ಯೋಗಪರ್ವಣಿ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಮೊದಲನೆಯ ಅಧ್ಯಾಯ ಮುಗಿಯಿತು.

★ ★ ★ ★ ★

## ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ

**ದುರ್ಯೋಧನೋ ಯಯೌ ರಾಮಂ ಸ ಭಯಾತ್ ಕೇಶವಸ್ಯ ತಮ್ ।**
**ನ ಸಾಹಾಯ್ಯಂ ಕರೋಮೀತಿ ಪ್ರಾಹ ತತ್ಸ್ನೇಹವಾನಪಿ ॥೨೩॥**

ಬಳಿಕ ಅರ್ಜುನ ಸಮೇತನಾಗಿ ಕೃಷ್ಣ ಪಾಂಡವರ ಬಳಿಗೆ ನಡೆದ. ದುರ್ಯೋಧನ ಬಲರಾಮನ ಬಳಿಗೆ ಹೋದ. ಬಲರಾಮ ದುರ್ಯೋಧನನಲ್ಲಿ ಸ್ನೇಹ ಉಳ್ಳವನೇ ಆದರೂ ಕೃಷ್ಣನ ಭಯದಿಂದ 'ನಾನು ಸಹಾಯ ಮಾಡುವುದಿಲ್ಲ' ಎಂದ.

**ಉಪಪ್ಲಾವ್ಯೇ ಸಭಾಯಾಂ ಹಿ ತತ್ತಕ್ಷೀಯಂ ವಚೋ ಬ್ರುವನ್ ।**
**ನಿರಾಕೃತಃ ಸಾತ್ಯಕಿನಾ ಸಮಕ್ಷಂ ಕೇಶವಸ್ಯ ಚ ॥೨೪॥**

ಉಪಪ್ಲಾವ್ಯದಲ್ಲಿ ನಡೆದ ಮಂತ್ರಾಲೋಚನ ಸಭೆಯಲ್ಲಿ ಬಲರಾಮ ದುರ್ಯೋಧನನ ಪರವಾಗಿ ವಾದಿಸಿದಾಗ ಅವನ ವಾದವನ್ನು ಕೃಷ್ಣನ ಸಮ್ಮುಖದಲ್ಲಿಯೇ ಸಾತ್ಯಕಿ ನಿರಾಕರಿಸಿದ.

★ ★ ★ ★ ★

## ಎರಡನೆಯ ಅಧ್ಯಾಯ

ಕೃಷ್ಣನ ಅಭಿಪ್ರಾಯವನ್ನು ಅನುಮೋದಿಸಿ ಬಲರಾಮನಿಂದ ತನ್ನ ದುರ್ಯೋಧನಪಕ್ಷಪಾತದ ಆವಿಷ್ಕಾರ.

**ಬಲರಾಮಃ**

**ಶ್ರುತಂ ಭವದ್ಭಿರ್ಗದಪೂರ್ವಜಸ್ಯ**
**ವಾಕ್ಯಂ ಯಥಾ ಧರ್ಮವದರ್ಥವಚ್ಚ ।**
**ಅಜಾತಶತ್ರೋಶ್ಚ ಹಿತಂ ಚ ಯುಕ್ತಂ**
**ದುರ್ಯೋಧನಸ್ಯಾಪಿ ತಥೈವ ರಾಜ್ಞಃ** ॥೧॥

ಬಲರಾಮ– ಗದಾಗ್ರಜನಾದ ಕೃಷ್ಣನು ಯುಧಿಷ್ಠಿರನಿಗೂ ಮತ್ತು ರಾಜನಾದ ದುರ್ಯೋಧನನಿಗೂ ಹಿತವೂ ಮತ್ತು ಉಚಿತವೂ ಆದ ಧರ್ಮಾರ್ಥಯುಕ್ತವಾದ ಯಾವ ಮಾತುಗಳನ್ನು ಆಡಿದನೋ ಅದನ್ನು ನೀವು ಕೇಳಿದ್ದೀರಿ.

**ಅರ್ಧಂ ಹಿ ರಾಜ್ಯಸ್ಯ ವಿಸೃಜ್ಯ ವೀರಾಃ**
**ಕುಂತೀಸುತಾಸ್ತಸ್ಯ ಕೃತೇ ಯತಂತೇ ।**
**ಪ್ರದಾಯ ಚಾರ್ಧಂ ಧೃತರಾಷ್ಟ್ರಪುತ್ರಃ**
**ಸುಖೀ ಸಹಾಸ್ಮಾಭಿರತೀವ ಮೋದೇತ್** ॥೨॥

ಕುಂತೀ ಪುತ್ರರಾದ ವೀರರು ಅರ್ಧರಾಜ್ಯವನ್ನು ದುರ್ಯೋಧನನಿಗೆ ಬಿಟ್ಟುಕೊಟ್ಟು ಉಳಿದ ಅರ್ಧರಾಜ್ಯವನ್ನು ಪಡೆಯಲು ಪ್ರಯತ್ನಪಡುತ್ತಾರೆ. ಧೃತರಾಷ್ಟ್ರಪುತ್ರನಾದ ದುರ್ಯೋಧನನೂ ಸಹ ಅವರಿಗೆ ಅರ್ಧರಾಜ್ಯವನ್ನು ಕೊಟ್ಟು ನಮ್ಮ ಜೊತೆಯಲ್ಲಿ ಸುಖ-ಸಂತೋಷದಿಂದ ಇರಬಹುದು.

**ಲಬ್ಧ್ವಾ ಹಿ ರಾಜ್ಯಂ ಪುರುಷಪ್ರವೀರಾಃ**
**ಸಮ್ಯಕ್ ಪ್ರವೃತ್ತೇಷು ಪರೇಷು ಚೈವ ।**
**ಧ್ರುವಂ ಪ್ರಶಾಂತಾಃ ಸುಖಮಾವಸೇಯುಃ**
**ತೇಷಾಂ ಪ್ರಶಾಂತಿಶ್ಚ ಹಿತಂ ಪ್ರಜಾನಾಮ್** ॥೩॥

ದುರ್ಯೋಧನಾದಿಗಳು ಸರಿಯಾಗಿ ನಡೆದುಕೊಂಡರೆ ಪುರುಷಶ್ರೇಷ್ಠರಾದ ಪಾಂಡವರು ತಮ್ಮ ರಾಜ್ಯವನ್ನು ಪಡೆದು ಖಂಡಿತವಾಗಿ ಶಾಂತಿ-ಸುಖಗಳಿಂದ ವಾಸಮಾಡಿಯಾರು. ಅವರ ಶಾಂತಿಯು ಪ್ರಜೆಗಳಿಗೆ ಹಿತವಾದುದು.

ದುರ್ಯೋಧನಸ್ಯಾಪಿ ಮತಂ ಚ ವೇತ್ತುಂ
ವಕ್ತುಂ ಚ ವಾಕ್ಯಾನಿ ಯುಧಿಷ್ಠಿರಸ್ಯ ।
ಪ್ರಿಯಂ ಮಮ ಸ್ಯಾದ್ಯದಿ ತತ್ರ ಕಶ್ಚಿತ್
ವ್ರಜೇಚ್ಛಮಾರ್ಥಂ ಕುರುಪಾಂಡವಾನಾಮ್ ॥೪॥

ದುರ್ಯೋಧನನ ಅಭಿಪ್ರಾಯವನ್ನು ತಿಳಿಯಲು ಮತ್ತು ಅವನಿಗೆ ಯುಧಿಷ್ಠಿರನ ಅಭಿಪ್ರಾಯವನ್ನು ಹೇಳಲು (ಹೇಳಿ) ಕುರು-ಪಾಂಡವರಿಗೆ ಸಂಧಿಯನ್ನು ಉಂಟು ಮಾಡಲು ಅಲ್ಲಿಗೆ ಯಾರಾದರೂ ಹೋಗುವುದಾದರೆ ಅದು ನನಗೆ ಬಹಳ ಪ್ರಿಯವಾಗುತ್ತದೆ.

ಸಭೀಷ್ಮಮಾಮಂತ್ರ್ಯ ಕುರುಪ್ರವೀರಂ
ವೈಚಿತ್ರ್ಯವೀರ್ಯಂ ಚ ಮಹಾನುಭಾವಮ್ ।
ದ್ರೋಣಂ ಸಪುತ್ರಂ ವಿದುರಂ ಕೃಪಂ ಚ
ಗಾಂಧಾರರಾಜಂ ಚ ಸಸೂತಪುತ್ರಮ್ ॥೫॥

ಸರ್ವೇ ಚ ಯೇಽನ್ಯೇ ಧೃತರಾಷ್ಟ್ರಪುತ್ರಾ
ಬಲಪ್ರಧಾನಾ ನಿಗಮಪ್ರಧಾನಾಃ ।
ಸ್ಥಿತಾಶ್ಚ ಧರ್ಮೇಷು ಯಥಾ ಸ್ವಕೇಷು
ಲೋಕಪ್ರವೀರಾಃ ಶ್ರುತಶೀಲವೃದ್ಧಾಃ ॥೬॥

ಅಲ್ಲಿಗೆ ದೂತನಾಗಿ ಹೋಗುವ ಪುರುಷನು ಕುರುಶ್ರೇಷ್ಠನಾದ ಭೀಷ್ಮನ, ಮಹಾನುಭಾವನಾದ ಧೃತರಾಷ್ಟ್ರನ, ಅಶ್ವತ್ಥಾಮ ಸಹಿತನಾದ ದ್ರೋಣನ, ವಿದುರನ, ಕೃಪನ ಮತ್ತು ಕರ್ಣಸಹಿತನಾದ ಶಕುನಿಯ ಅನುಮತಿಯನ್ನು ಪಡೆದು ಮತ್ತು ಅಲ್ಲಿ ಸನ್ನಿಹಿತರಾದ ಬಲಪ್ರಧಾನರೂ, ಜ್ಞಾನಪ್ರಧಾನರೂ ಆದ ಧೃತರಾಷ್ಟ್ರ ಪುತ್ರರ ಮತ್ತು ತಮ್ಮ ತಮ್ಮ ಧರ್ಮಗಳಲ್ಲಿ ನಿರತರಾದ ಆಚಾರ, ವಿದ್ಯೆಗಳಿಂದ ಕೂಡಿ ವೃದ್ಧರಾದ ಲೋಕವೀರರಾದ ಉಳಿದವರ ಅನುಮತಿಯನ್ನೂ ಪಡೆಯಬೇಕು.

ಏತೇಷು ಸರ್ವೇಷು ಸಮಾಗತೇಷು
ಪೌರೇಷು ವೃದ್ಧೇಷು ಚ ಸಂಗತೇಷು ।
ಬ್ರವೀತು ವಾಕ್ಯಂ ಪ್ರಣಿಪಾತಯುಕ್ತಂ
ಕುಂತೀಸುತಸ್ಯಾರ್ಥಕರಂ ಯಥಾ ಸ್ಯಾತ್ ॥೭॥

ಇವರೆಲ್ಲರೂ ಮತ್ತು ವೃದ್ಧರಾದ ಪೌರಜನರೂ ಸಭೆಯಲ್ಲಿ ಸಮಾಗಮವನ್ನು ಹೊಂದಿರುವಾಗ ದೂತನು ನಮಸ್ಕಾರ ಪೂರ್ವಕವಾಗಿ ಕುಂತೀಸುತನು ಆಡಿದ ಇಬ್ಬರಿಗೂ ಕ್ಷೇಮವನ್ನುಂಟುಮಾಡುವ ಮಾತುಗಳನ್ನು ಆಡಲಿ.

ಸರ್ವಾಸ್ವವಸ್ಥಾಸು ಚ ತೇನ ಕೋಪಾದ್
ಗ್ರಸ್ತಾ ಹಿ ಪಾರ್ಥಾ ಬಲಮಾಶ್ರಿತೇನ ।
ಪ್ರಿಯಾಭ್ಯುಪೇತಸ್ಯ ಯುಧಿಷ್ಠಿರಸ್ಯ
ದ್ಯೂತೇ ಪ್ರಮತ್ತಸ್ಯ ಹೃತಂ ಚ ರಾಜ್ಯಮ್ ॥೮॥

ಬಲಿಷ್ಠನಾದ ಅವನಿಂದ ವಂಚಿತರಾದ ಪಾಂಡವರು ಸದಾಕಾಲದಲ್ಲಿಯೂ ಅವನ ಮೇಲೆ ಕೋಪದಿಂದ ಕೂಡಿದವರಾಗಿದ್ದಾರೆ. ತನ್ನ ಪ್ರಿಯವಾದ ಬಂಧುಗಳು ಮತ್ತು ಸಂಪತ್ತಿನಿಂದ ಕೂಡಿದ ಯುಧಿಷ್ಠಿರನು ಪ್ರಮಾದದಿಂದ ದ್ಯೂತದಲ್ಲಿ ತನ್ನ ರಾಜ್ಯವನ್ನು ಕಳೆದುಕೊಂಡನು.

ನಿವಾರ್ಯಮಾಣಶ್ಚ ಕುರುಪ್ರವೀರೈಃ
ಸರ್ವೈಃ ಸುಹೃದ್ಭಿರ್ಹ್ಯಯಮಪ್ಯತಜ್ಞಃ ।
ಗಾಂಧಾರರಾಜಸ್ಯ ಸುತಂ ಮತಾಕ್ಷಂ
ಸಮಾಹ್ವಯದ್ ದೇವಿತುಮಾಜಮೀಢಃ ॥೯॥

ವಿಶ್ವಾಸಪಾತ್ರರಾದ ಕುರುಶ್ರೇಷ್ಠರೆಲ್ಲರೂ ನಿಷೇಧ ಮಾಡುತ್ತಿದ್ದರೂ ಅಕ್ಷಹೃದಯವನ್ನು ತಿಳಿಯದ ಆಜಮೀಢನಾದ ಯುಧಿಷ್ಠಿರನು ಗಾಂಧಾರರಾಜನ ಮಗನಾದ ಅಕ್ಷಕ್ರೀಡಾ ಪರಿಣತನಾದ ಶಕುನಿಯನ್ನು ಆಹ್ವಾನ ಮಾಡಿದನು.

ದುರೋದರಾಸ್ತತ್ರ ಸಹಸ್ರಶೋಽನ್ಯೇ
ಯುಧಿಷ್ಠಿರೋ ಯಾನ್ ವಿಷಹೇತ ಜೇತುಮ್ ।

ಉತ್ಸೃಜ್ಯ ತಾನ್ ಸೌಬಲಮೇವ ಚಾಯಂ
ಸಮಾಹ್ವಯತ್ ತೇನ ಜಿತೋಽಕ್ಷವತ್ಯಾಮ್ ॥೧೦॥

ಅಲ್ಲಿ ಅಕ್ಷಕ್ರೀಡೆಯನ್ನು ಆಡುವ ಇನ್ನೂ ಸಹಸ್ರಾರು ಮಂದಿ ಇದ್ದರು. ಅವರನ್ನು ಯುಧಿಷ್ಠಿರನು ಗೆಲ್ಲಬಹುದಾಗಿದ್ದಿತು. ಆದರೂ ಅವನು ಅವರೆಲ್ಲರನ್ನೂ ಬಿಟ್ಟು ಶಕುನಿಯನ್ನೇ ಆಹ್ವಾನಿಸಿ ದ್ಯೂತದಲ್ಲಿ ಸೋತನು.

ಸ ದೀವ್ಯಮಾನಃ ಪ್ರತಿದೀವ್ಯತೈನಮ್
ಅಕ್ಷೇಷು ನಿತ್ಯಂ ತು ಪರಾಙ್ಮುಖೇಷು ।
ಸಂರಜ್ಯಮಾನೋ ವಿಜಿತಃ ಪ್ರಸಹ್ಯ
ತತ್ರಾಪರಾಧಃ ಶಕುನೇರ್ನ ಕಶ್ಚಿತ್ ॥೧೧॥

ಹೀಗೆ ದ್ಯೂತವನ್ನು ಆಡಲು ಹೊರಟ ಧರ್ಮರಾಜನು ದಾಳಗಳು ತನಗೆ ಯಾವಾಗಲೂ ವಿಮುಖವಾಗಿ ಬೀಳುತ್ತಿದ್ದರೂ ಶಕುನಿಯ ಎದುರಿನಲ್ಲಿ ದ್ಯೂತವನ್ನಾಡಿ ಮತ್ತೆ ಮತ್ತೆ ಆಸಕ್ತಿಯನ್ನು ಹೊಂದಿದವನಾಗಿ ಬಲಾತ್ಕಾರದಿಂದ ಸೋತು ಎಲ್ಲವನ್ನೂ ಕಳೆದುಕೊಂಡನು. ಅದರಲ್ಲಿ ಶಕುನಿಯ ಅಪರಾಧವು ಯಾವುದೂ ಇಲ್ಲ.

ತಸ್ಮಾತ್ ಪ್ರಣಮ್ಯೈವ ವಚೋ ಬ್ರವೀತು
ವೈಚಿತ್ರ್ಯವೀರ್ಯಂ ಬಹುಸಾಮಯುಕ್ತಮ್ ।
ತಥಾ ಹಿ ಶಕ್ಯೋ ಧೃತರಾಷ್ಟ್ರಪುತ್ರಃ
ಸಾರ್ಥೇ ನಿಯೋಕ್ತುಂ ಪುರುಷೇಣ ತೇನ ॥೧೨॥

ಆದ್ದರಿಂದ ವಿಚಿತ್ರವೀರ್ಯನ ಪುತ್ರನಾದ ಧೃತರಾಷ್ಟ್ರನಿಗೆ ನಮಸ್ಕಾರವನ್ನು ಮಾಡಿಯೇ ಬಹಳ ಸಮಾಧಾನದಿಂದ ಕೂಡಿದ ಮಾತುಗಳನ್ನು ಆಡಬೇಕು. ಹಾಗೆ ಮಾಡಿದರೆ ಮಾತ್ರ ಆ ದೂತನು ಧೃತರಾಷ್ಟ್ರಪುತ್ರನು ಸರಿಯಾದ ಮಾರ್ಗದಲ್ಲಿ ಹೋಗುವಂತೆ ಮಾಡಲು ಶಕ್ತನಾದಾನು.

ವೈಶಂಪಾಯನಃ

ಏವಂ ಬ್ರುವತ್ಯೇವ ಯದುಪ್ರವೀರೇ
ಶಿನಿಪ್ರವೀರಃ ಸಹಸೋತ್ಪಪಾತ ।

**ತಸ್ಯಾಪಿ ವಾಕ್ಯಂ ಪರಿನಿಂದ್ಯ ತತ್ರ**
**ಸಮಾದದೇ ವಾಕ್ಯಮಿದಂ ಸಮನ್ಯುಃ** ॥೧೩॥

**ವೈಶಂಪಾಯನ–** ಯದುಪ್ರವೀರನಾದ ಬಲರಾಮನು ಹೀಗೆ ಮಾತನಾಡುತ್ತಿರಲು ಶಿನಿಪ್ರವೀರನಾದ ಸಾತ್ಯಕಿಯು ತಕ್ಷಣ ಎದ್ದನು. ಅಲ್ಲಿ ಕೋಪದಿಂದ ಕೂಡಿದ ಅವನು ಬಲರಾಮನ ಮಾತುಗಳನ್ನು ನಿಂದಿಸಿ ಈ ಮಾತುಗಳನ್ನು ಆಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ದ್ವಿತೀಯೋಽಧ್ಯಾಯಃ ॥

॥ ಸೇನೋದ್ಯೋಗಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಎರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

## ಮೂರನೆಯ ಅಧ್ಯಾಯ

ಸಾತ್ಯಕಿಯಿಂದ ಬಲರಾಮನ ಮಾತುಗಳನ್ನು ನಿಂದಿಸಿ
ದುರ್ಯೋಧನ ನಿಗ್ರಹದ ನಿರ್ಧಾರ.

**ಸಾತ್ಯಕಿಃ**

**ಯಾದೃಶಃ ಪುರುಷಸ್ಯಾತ್ಮಾ ತಾದೃಶಂ ಸಂಪ್ರಭಾಷತೇ ।**
**ಯಥಾರೂಪೋಽಂತರಾತ್ಮಾ ತೇ ತಥಾರೂಪಂ ಪ್ರಭಾಷಸೇ** ॥೧॥

**ಸಾತ್ಯಕಿ–** ಮನುಷ್ಯನ ಸ್ವಭಾವವು ಹೇಗಿರುತ್ತದೆಯೋ ಹಾಗೆ ಮಾತನಾಡುತ್ತಾನೆ. ನಿನ್ನ ಅಂತಃಕರಣವು ಹೇಗಿದೆಯೋ ಹಾಗೆಯೇ ನೀನು ಮಾತನಾಡುತ್ತಿದ್ದೀಯೆ.

**ಸಂತಿ ವೈ ಪುರುಷಾಃ ಶೂರಾಃ ಸಂತಿ ಕಾಪುರುಷಾಸ್ತಥಾ ।**
**ಉಭಾವೇತೌ ದೃಢೌ ಪಕ್ಷೌ ದೃಶ್ಯೇತೇ ಪುರುಷಾನ್ ಪ್ರತಿ** ॥೨॥

ಪ್ರಪಂಚದಲ್ಲಿ ಶೂರಪುರುಷರೂ ಇದ್ದಾರೆ. ದುಷ್ಟಪುರುಷರೂ ಇದ್ದಾರೆ. ಪುರುಷರಲ್ಲಿ ಈ ಎರಡು ವಿಭಾಗಗಳು ಸ್ಪಷ್ಟವಾಗಿ ಕಾಣುತ್ತವೆ.

ಏಕಸ್ಮಿನ್ನೇವ ಜಾಯೇತೇ ಕುಲೇ ಕ್ಲೀಬಮಹಾರಥೌ ।
ಫಲಾಫಲವತೀ ಶಾಖೇ ಯಥೈಕಸ್ಮಿನ್ ವನಸ್ಪತೌ ॥೩॥

ಒಂದೇ ಕುಲದಲ್ಲಿ ಶೂರರೂ ಮತ್ತು ಹೇಡಿಗಳೂ ಹುಟ್ಟುತ್ತಾರೆ. ಒಂದೇ ವೃಕ್ಷದ ಎರಡು ಕೊಂಬೆಗಳಲ್ಲಿ ಒಂದರಲ್ಲಿ ಫಲವುಂಟಾಗುತ್ತದೆ. ಇನ್ನೊಂದರಲ್ಲಿ ಉಂಟಾಗುವುದಿಲ್ಲ.

ನಾಭ್ಯಸೂಯಾಮಿ ತೇ ವಾಕ್ಯಂ ತೇಷು ವೈ ದಾರುಣಧ್ವಜ ।
ಯೇ ಚ ಶೃಣ್ವಂತಿ ತೇ ವಾಕ್ಯಂ ತಾನಸೂಯಾಮಿ ಮಾಧವ ॥೪॥

ಕ್ರೂರವಾದ ತಾಳವೃಕ್ಷವನ್ನು ಧ್ವಜವಾಗಿ ಹೊಂದಿರುವ ಮಧುಕುಲೋತ್ಪನ್ನನಾದ ಎಲೈ ಬಲರಾಮನೇ, ನಾನು ನಿನ್ನ ಮೇಲೆ ಕೋಪಗೊಳ್ಳುವುದಿಲ್ಲ. ಆದರೆ ನಿನ್ನ ಮಾತುಗಳನ್ನು ಕೇಳುತ್ತಿರುವವರ ಮೇಲೆ ಕೋಪಗೊಳ್ಳುತ್ತೇನೆ.

ಕಥಂ ಹಿ ಧರ್ಮರಾಜಸ್ಯ ದೋಷಮಲ್ಪಮಪಿ ಬ್ರುವನ್ ।
ಲಭೇತ ಪರಿಷನ್ಮಧ್ಯೇ ವ್ಯಾಹರ್ತುಮಕುತೋಭಯಃ ॥೫॥

ಧರ್ಮರಾಜನ ವಿಷಯದಲ್ಲಿ ಸ್ವಲ್ಪದೋಷವನ್ನು ಹೇಳುವ ಮನುಷ್ಯನಾದರೂ ಸಭೆಯಲ್ಲಿ ನಿಶ್ಶಂಕೆಯಿಂದ ಮಾತನಾಡಲು ಹೇಗೆ ಅವಕಾಶವನ್ನು ಪಡೆದಾನು?

ಸಮಾಹೂಯ ಮಹಾತ್ಮಾನಂ ಜಿತವಾನಕ್ಷಕೋವಿದಃ ।
ಅನಕ್ಷಜ್ಞಂ ಯಥಾಶ್ರದ್ಧಂ ತೇಷು ಧರ್ಮಜಯಃ ಕುತಃ ॥೬॥

ಅಕ್ಷಕ್ರೀಡೆಯನ್ನು ತಿಳಿಯದ ಮಹಾತ್ಮನಾದ ಯುಧಿಷ್ಠಿರನನ್ನು ಅಕ್ಷಕೋವಿದನಾದ ಶಕುನಿಯು ಆಹ್ವಾನಿಸಿ ತನ್ನ ಶ್ರದ್ಧೆಗೆ ಅನುಗುಣವಾಗಿ ಜಯಿಸಿದನು. ಅವರಲ್ಲಿ ಧರ್ಮದಿಂದ ಜಯವು ಇರಲು ಹೇಗೆ ಸಾಧ್ಯ ?

ಯದಿ ಕುಂತೀಸುತಂ ಗೇಹೇ ಕ್ರೀಡಂತಂ ಭ್ರಾತೃಭಿಃ ಸಹ ।
ಅಭಿಗಮ್ಯ ಜಯೇಯುಸ್ತೇ ತತ್ ತೇಷಾಂ ಧರ್ಮತೋ ಭವೇತ್ ॥೭॥

ಒಂದುಪಕ್ಷ ಯುಧಿಷ್ಠಿರನು ತನ್ನ ಮನೆಯಲ್ಲಿ ತಮ್ಮಂದಿರ ಜೊತೆಯಲ್ಲಿ ಆಟವಾಡುತ್ತಿದ್ದಾಗ ಬಂದು ಅವನನ್ನು ಗೆದ್ದಿದ್ದರೆ ಆಗ ಕೌರವರಿಗೆ ಅದು ಧರ್ಮಜಯವಾಗುತ್ತಿದ್ದಿತು.

ಸಮಾಹೂಯ ತು ಕೌಂತೇಯಂ ಕ್ಷತ್ರಧರ್ಮರತಂ ಸದಾ ।
ನಿಕೃತ್ಯಾ ಜಿತವಂತಸ್ತೇ ಕಿನ್ನು ತೇಷಾಂ ಕೃತಂ ಶುಭಮ್ ॥೮॥

ಸದಾ ಕ್ಷತ್ರಿಯಧರ್ಮದಲ್ಲಿ ನಿಷ್ಠನಾದ ಕುಂತಿಯ ಪುತ್ರನಾದ ಯುಧಿಷ್ಠಿರನನ್ನು ಕರೆದು ಮೋಸದಿಂದ ಅವರು ಗೆದ್ದರು. ಅವರು ಯಾವ ಶುಭವನ್ನು ಮಾಡಿದ್ದಾರೆ?

ಕಥಂ ಪ್ರಣಿಪತೇಚ್ಚಾಯಮಿಹ ಕೃತ್ವಾ ಪಣಂ ಪರಮ್ ।
ವನವಾಸಾದ್ ವಿಮುಕ್ತಃ ಸನ್ ಪ್ರಾಪ್ತಃ ಪೈತಾಮಹಂ ಪದಮ್ ॥೯॥

ಅಂತಹ ದೊಡ್ಡ ಪ್ರತಿಜ್ಞೆಯನ್ನು ಮಾಡಿ ವನವಾಸವನ್ನು ಮುಗಿಸಿ ಪಿತಾಮಹರ ರಾಜ್ಯವನ್ನು ಪಡೆಯಲು ಅಧಿಕಾರವನ್ನು ಹೊಂದಿದ ಈ ಯುಧಿಷ್ಠಿರನು ಅವರಿಗೆ ಹೇಗೆ ತಲೆಬಾಗಿಯಾನು?

ಯದ್ಯಯಂ ಪರವಿತ್ತಾನಿ ಕಾಮಯೇತ ಯುಧಿಷ್ಠಿರಃ ।
ಏವಮಪ್ಯಯಮತ್ಯಂತಂ ಪರಾನ್ ಪ್ರಣಿಪತೇನ್ನ ಹಿ ॥೧೦॥

ಒಂದುಪಕ್ಷ ಈ ಯುಧಿಷ್ಠಿರನು ಪರಧನವನ್ನು ಬಯಸಿದರೂ ಅವನು ಎಂದೂ ಶತ್ರುಗಳಿಗೆ ನಮಸ್ಕಾರವನ್ನು ಮಾಡಲಾರ.

ಕಥಂ ನು ಧರ್ಮಯುಕ್ತಾಸ್ತೇ ನ ಚ ರಾಷ್ಟ್ರಂ ಜಿಹೀರ್ಷವಃ ।
ನಿವೃತ್ತವನವಾಸಾಂಸ್ತಾನ್ ಯ ಆಹುರ್ವಿಜಿತಾ ಇತಿ ॥೧೧॥

ಪಾಂಡವರು ವನವಾಸವನ್ನು ಮುಗಿಸಿದರೂ ಇನ್ನೂ ಮುಗಿಸಿಲ್ಲ ಎಂದು ಹೇಳುವ ಅವರು ಹೇಗೆ ಧರ್ಮಯುಕ್ತರಾಗುತ್ತಾರೆ? ಹೇಗೆ ರಾಷ್ಟ್ರವನ್ನು ಅಪಹರಿಸುವವರಾಗುವುದಿಲ್ಲ?

ಅನುನೀತಾ ಹಿ ಭೀಷ್ಮೇಣ ದ್ರೋಣೇನ ವಿದುರೇಣ ಚ ।
ನ ವ್ಯವಸ್ಯಂತಿ ಪಾಂಡೂನಾಂ ಪ್ರದಾತುಂ ಪೈತೃಕಂ ವಸು ॥೧೨॥

ಭೀಷ್ಮರೂ, ದ್ರೋಣರೂ ಮತ್ತು ವಿದುರರೂ ಒಳ್ಳೆಯ ಮಾತುಗಳನ್ನು ಆಡಿದರೂ ಪಾಂಡುಪುತ್ರರಿಗೆ ಅವರ ಪಿತ್ರಾರ್ಜಿತವಾದ ಸಂಪತ್ತನ್ನು ಕೊಡಲು ಅವರು ಬಯಸುತ್ತಿಲ್ಲ.

ಅಹಂ ತು ತಾನ್ ಶಿತೈರ್ಬಾಣೈರನುನೀಯ ರಣೇ ಬಲಾತ್ ।
ಪಾದಯೋಃ ಪಾತಯಿಷ್ಯಾಮಿ ಕೌಂತೇಯಸ್ಯ ಮಹಾತ್ಮನಃ ॥೧೩॥

ನಾನಾದರೂ ನಿಶಿತವಾದ ಬಾಣಗಳಿಂದ, ನನ್ನ ಬಲದಿಂದ ಯುದ್ಧದಲ್ಲಿ ಅವರನ್ನು ಬಗ್ಗಿಸಿ ಮಹಾತ್ಮನಾದ ಯುಧಿಷ್ಠಿರನ ಪಾದಗಳ ಮೇಲೆ ಬೀಳುವಂತೆ ಮಾಡುವೆನು.

ಅಥ ತೇ ನ ವ್ಯವಸ್ಯಂತಿ ಪ್ರಣಿಪಾತಾಯ ಧೀಮತಃ ।
ಗಮಿಷ್ಯಂತಿ ಸಹಾಮಾತ್ಯಾ ಯಮಸ್ಯ ಸದನಂ ಪ್ರತಿ ॥೧೪॥

ಒಂದುಪಕ್ಷ ಅವರು ಮೇಧಾವಿಯಾದ ಅವನ ಪಾದಗಳಿಗೆ ನಮಸ್ಕರಿಸಲು ಬಯಸದಿದ್ದರೆ ತಮ್ಮ ಮಂತ್ರಿಗಳ ಜೊತೆಯಲ್ಲಿ ಅವರು ಯಮಪಟ್ಟಣಕ್ಕೆ ಹೋಗುವರು.

ನ ಹಿ ತೇ ಯುಯುಧಾನಸ್ಯ ಸಂರಬ್ಧಸ್ಯ ಯುಯುತ್ಸತಃ ।
ವೇಗಂ ಸಮರ್ಥಾಃ ಸಂಸೋಢುಂ ವಜ್ರಸ್ಯೇವ ಮಹೀಧರಾಃ ॥೧೫॥

ಪರ್ವತಗಳು ವಜ್ರಾಯುಧದ ವೇಗವನ್ನು ತಡೆಯಲು ಹೇಗೆ ಸಾಧ್ಯವಿಲ್ಲವೋ ಅದರಂತೆ ಕೋಪದಿಂದ ಯುದ್ಧವನ್ನು ಮಾಡುವ ಯುಯುಧಾನನಾದ ನನ್ನ ವೇಗವನ್ನು ತಡೆಯಲು ಅವರಿಗೆ ಸಾಧ್ಯವಿಲ್ಲ.

ಕೋ ಹಿ ಗಾಂಡೀವಧನ್ವಾನಂ ಕೋ ಹಿ ಚಕ್ರಾಯುಧಂ ಯುಧಿ ।
ಮಾಂ ಚಾಪಿ ವಿಷಹೇತ್ ಕೋ ನು ಕಶ್ಚ ಭೀಮಂ ದುರಾಸದಮ್ ॥

ಗಾಂಡೀವಧನ್ವನಾದ ಅರ್ಜುನನ್ನಾಗಲೀ, ಚಕ್ರಾಯುಧನಾದ ಕೃಷ್ಣನನ್ನಾಗಲೀ ಯುದ್ಧದಲ್ಲಿ ಯಾರು ತಡೆದಾರು? ನನ್ನನ್ನಾಗಲೀ ಅಥವಾ ಸಮೀಪಕ್ಕೆ ಹೋಗಲೂ ಸಾಧ್ಯವಿಲ್ಲದ ಭೀಮನನ್ನಾಗಲೀ ಯಾರು ತಡೆದಾರು?

ಯಮೌ ಚ ದೃಢಧನ್ವಾನೌ ಯಮಕಲ್ಪೌ ಮಹಾದ್ಯುತೀ ।
ಕೋ ಜಿಜೀವಿಷುರಾಸೀದೇದ್ ಧೃಷ್ಟದ್ಯುಮ್ನಂ ಚ ಪಾರ್ಷತಮ್ ॥೧೭॥

ಮಹಾಕಾಂತಿಯುಕ್ತರಾದ ಯಮನಂತಿರುವ ದೃಢಧನುಸ್ಸನ್ನು ಹೊಂದಿದ ನಕುಲ ಸಹದೇವರನ್ನಾಗಲೀ ಅಥವಾ ದ್ರುಪದನ ಮಗನಾದ ಧೃಷ್ಟದ್ಯುಮ್ನನನ್ನಾಗಲೀ ಬದುಕಲು ಇಚ್ಛಿಸುವ ಯಾವನು ತಾನೇ ಯುದ್ಧದಲ್ಲಿ ಸಮೀಪಿಸಿಯಾನು?

ಪಂಚೇಮಾನ್ ಪಾಂಡವೇಯಾಂಶ್ಚ ದ್ರೌಪದ್ಯಾಃ ಕೀರ್ತಿವರ್ಧನಾನ್ ।
ಸಮಪ್ರಾಣಾನ್ ಪಾಂಡವೈರ್ಯೇ ಸಮಧೈರ್ಯಾನ್ ಮದೋತ್ಕಟಾನ್॥

ಸೌಭದ್ರಂ ಚ ಮಹೇಷ್ವಾಸಮಮರೈರಪಿ ದುಃಸಹಮ್ ।
ಗದಪ್ರದ್ಯುಮ್ನಸಾಂಬಾಂಶ್ಚ ಕಾಲವಜ್ರಾನಲೋಪಮಾನ್ ॥೧೯॥

ದ್ರೌಪದಿಯ ಕೀರ್ತಿವರ್ಧನರಾದ ಮದೋತ್ಕಟರಾದ ತಂದೆಗಳಾದ ಪಾಂಡವರಿಗೆ ಸಮಾನವಾದ ಪ್ರಾಣಬಲವನ್ನು ಮತ್ತು ಧೈರ್ಯವನ್ನು ಹೊಂದಿದ ಮದೋತ್ಕಟರಾದ ಈ ಐವರು ಉಪಪಾಂಡವರನ್ನಾಗಲೀ, ದೇವತೆಗಳೂ ತಡೆಯಲು ಸಾಧ್ಯವಿಲ್ಲದ ಮಹಾಧನುಷ್ಕನಾದ ಸುಭದ್ರೆಯ ಪುತ್ರನಾದ ಅಭಿಮನ್ಯುವನ್ನಾಗಲೀ ಮೃತ್ಯುವಿನಂತೆ, ವಜ್ರಾಯುಧದಂತೆ ಅಗ್ನಿಯಂತೆ ಇರುವ ಗದ, ಪ್ರದ್ಯುಮ್ನ, ಸಾಂಬನನ್ನಾಗಲೀ ಯುದ್ಧದಲ್ಲಿ ಯಾರು ಎದುರಿಸಿಯಾರು?

ತೇ ವಯಂ ಧೃತರಾಷ್ಟ್ರಸ್ಯ ಪುತ್ರಾನ್ ಶಕುನಿನಾ ಸಹ ।
ಕರ್ಣೇನ ಚ ನಿಹತ್ಯಾಜಾವಭಿಷೇಕ್ಷ್ಯಾಮ ಪಾಂಡವಮ್ ॥೨೦॥

ಅಂತಹ ನಾವು ಧೃತರಾಷ್ಟ್ರ ಪುತ್ರರನ್ನು, ಕರ್ಣ ಮತ್ತು ಶಕುನಿಗಳ ಜೊತೆಯಲ್ಲಿ ಯುದ್ಧದಲ್ಲಿ ಸಂಹಾರ ಮಾಡಿ ಪಾಂಡುಪುತ್ರನಾದ ಧರ್ಮರಾಜನಿಗೆ ಪಟ್ಟಾಭಿಷೇಕವನ್ನು ಮಾಡೋಣ.

ನಾಧರ್ಮೋ ವಿದ್ಯತೇ ಕಶ್ಚಿತ್ ಶತ್ರೂನ್ ಹತ್ವಾऽऽತತಾಯಿನಃ ।
ಅಧರ್ಮಮಯಶಸ್ಯಂ ಚ ಶಾತ್ರವಾಣಾಂ ಪ್ರಯಾಚನಮ್ ॥೨೧॥

ವೋಸಗಾರರಾದ ಶತ್ರುಗಳನ್ನು ಕೊಂದರೆ ಯಾವ ಅಧರ್ಮವೂ ಉಂಟಾಗುವುದಿಲ್ಲ. ಆದರೆ ಶತ್ರುಗಳನ್ನು ಬೇಡುವುದು ಮಾತ್ರ ಅಧರ್ಮ ಮತ್ತು ಅಕೀರ್ತಿಕರವಾದುದು.

ಹೃದ್ಗತಸ್ತ ಸ್ಯ ಯಃ ಕಾಮಸ್ತಂ ಕುರುಧ್ವಮತಂದ್ರಿತಾಃ ।
ಧಾರ್ತರಾಷ್ಟ್ರೋ ಹ್ಯಯುದ್ಧೇನ ನ ರಾಜ್ಯಂ ದಾತುಮಿಚ್ಛತಿ ॥೨೨॥

ಎಲೈ ರಾಜರೇ, ಈ ಯುಧಿಷ್ಠಿರನ ಮನಸ್ಸಿನಲ್ಲಿ ಏನಿದೆಯೋ ಅದನ್ನು ಶೀಘ್ರವಾಗಿ ನೆರವೇರಿಸಿ. ದುರ್ಯೋಧನನು ಯುದ್ಧವಿಲ್ಲದೇ ರಾಜ್ಯವನ್ನು ಕೊಡಲು ಎಂದೂ ಬಯಸುವುದಿಲ್ಲ.

**ಅದ್ಯ ಪಾಂಡುಸುತೋ ರಾಜ್ಯಂ ಲಭತಾಂ ವಾ ಯುಧಿಷ್ಠಿರಃ ।**
**ನಿಹತಾ ವಾ ರಣೇ ಮರ್ತ್ವಾ ಸ್ವಪ್ಸ್ಯಾಮೋ ವಸುಧಾತಳೇ ॥೨೩॥**

ಈ ದಿನ ಪಾಂಡುಪುತ್ರನಾದ ಯುಧಿಷ್ಠಿರನು ರಾಜ್ಯವನ್ನು ಪಡೆಯಲಿ ಅಥವಾ ನಾವು ಶತ್ರುಗಳನ್ನು ಮರ್ದಿಸಿ ಯುದ್ಧದಲ್ಲಿ ಮೃತರಾಗಿ ಭೂತಳದಲ್ಲಿ ಮಲಗೋಣ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ತೃತೀಯೋಽಧ್ಯಾಯಃ ॥

॥ ಸೇನೋದ್ಯೋಗಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

## ನಾಲ್ಕನೆಯ ಅಧ್ಯಾಯ

ದ್ರುಪದನಿಂದ ಧೃತರಾಷ್ಟ್ರನ ಬಳಿಗೆ ತನ್ನ ಪುರೋಹಿತನನ್ನು ಕಳುಹಿಸಲು ನಿರ್ಧಾರ

### ದ್ರುಪದಃ

**ಏವಮೇತನ್ಮಹಾಬಾಹೋ ಭವಿಷ್ಯತಿ ನ ಸಂಶಯಃ ।**
**ನ ಹಿ ದುರ್ಯೋಧನೋ ರಾಜ್ಯಂ ಮಧುರೇಣ ಪ್ರದಾಸ್ಯತಿ ॥೧॥**

ದ್ರುಪದ– ಮಹಾಬಾಹುವೇ, ಇದು ಹೀಗೆಯೇ ಆಗುವುದು. ಇದರಲ್ಲಿ ಸಂಶಯವಿಲ್ಲ. ದುರ್ಯೋಧನನು ಮೃದುವಾದ ಮಾತುಗಳಿಂದ ರಾಜ್ಯವನ್ನು ಕೊಡುವುದಿಲ್ಲ.

**ಅನುವರ್ತ್ಸ್ಯಂತಿ ತಂ ಚಾಪಿ ಧೃತರಾಷ್ಟ್ರಃ ಸುತಪ್ರಿಯಃ ।**
**ಭೀಷ್ಮದ್ರೋಣೌ ಚ ಕಾರ್ಪಣ್ಯಾನ್ಮೌಖ್ಯಾದ್ ರಾಧೇಯಸೌಬಲೌ ॥೨॥**

ಸುತಪ್ರಿಯನಾದ ಧೃತರಾಷ್ಟ್ರನೂ, ದಾಕ್ಷಿಣ್ಯಕ್ಕೆ ಒಳಗಾದ ಭೀಷ್ಮ-ದ್ರೋಣರೂ ಮತ್ತು ಮೂರ್ಖರಾದ ಕರ್ಣ-ಶಕುನಿಗಳೂ ಸಹ ಅವನನ್ನು ಅನುಸರಿಸುವರು.

**ಸಂಕರ್ಷಣಸ್ಯ ವಾಕ್ಯಂ ತು ಮಮ ಜ್ಞಾನೇ ನ ಯುಜ್ಯತೇ ।**
**ಏತದ್ಧಿ ಪುರುಷೇಣಾಗ್ರೇ ಕಾರ್ಯಂ ಸುನಯಮಿಚ್ಛತಾ ॥೩॥**

ಬಲರಾಮನ ಮಾತುಗಳು ನನ್ನ ಬುದ್ಧಿಗೆ ಸರಿ ಎಂದು ತೋರುವುದಿಲ್ಲ. ಒಳ್ಳೆಯ ನ್ಯಾಯವನ್ನು, ಒಳ್ಳೆಯ ನೀತಿಯನ್ನು ಅನುಸರಿಸುವವನು ಮೊದಲು ಈ ಕಾರ್ಯವನ್ನು (ಮುಂದೆ ಹೇಳುವ ಕಾರ್ಯವನ್ನು) ಮಾಡಬೇಕು.

**ನ ತು ವಾಚ್ಯೋ ಮೃದುವಚೋ ಧಾರ್ತರಾಷ್ಟ್ರಃ ಕಥಂಚನ ।**
**ನ ಹಿ ಮಾರ್ದವಸಾಧ್ಯೋಽಸೌ ಪಾಪಬುದ್ಧಿರ್ಮತೋ ಮಮ ॥೪॥**

ದುರ್ಯೋಧನನನ್ನು ಕುರಿತು ಮೃದುವಾಗಿ ಮಾತನಾಡಬಾರದು. ಪಾಪಬುದ್ಧಿಯುಳ್ಳ ಅವನು ಎಂದೂ ಮೃದುವಾದ ಮಾತುಗಳಿಗೆ ಬಗ್ಗುವುದಿಲ್ಲ ಎಂದು ನನ್ನ ಅಭಿಪ್ರಾಯ.

**ಗರ್ದಭೇ ಮಾರ್ದವಂ ಕುರ್ಯಾದ್ ಗೋಷು ತೈಕ್ಷ್ಣ್ಯಂ ಸಮಾಚರೇತ್।**
**ಮೃದು ದುರ್ಯೋಧನೇ ವಾಕ್ಯಂ ಯೋ ಬ್ರೂಯಾತ್ ಪಾಪಚೇತಸಿ ॥**

ಯಾವನು ಪಾಪಬುದ್ಧಿಯುಳ್ಳ ದುರ್ಯೋಧನನ ಜೊತೆಯಲ್ಲಿ ಮೃದುವಾಗಿ ಮಾತನಾಡುವನೋ ಅವನು ಕತ್ತೆಯನ್ನು ಮೃದುವಾಗಿ ನಡೆಸಿಕೊಂಡು ಗೋವನ್ನು ಉಗ್ರವಾಗಿ ನಡೆಸಿಕೊಳ್ಳುವನು.

**ಮೃದುಂ ವೈ ಮನ್ಯತೇ ಪಾಪೋ ಭಾಷಮಾಣಮಶಕ್ತಿಕಮ್ ।**
**ಜಿತಮರ್ಥಂ ವಿಜಾನೀಯಾದ್ ದುರ್ಬುದ್ಧಿರ್ಮಾರ್ದವೇ ಸತಿ ॥೬॥**

ಮೃದುವಾಗಿ ಮಾತನಾಡುವವನನ್ನು ಪಾಪಬುದ್ಧಿಯುಳ್ಳ ಅವನು ಅಶಕ್ತನೆಂದು ತಿಳಿಯುತ್ತಾನೆ. ದುರ್ಬುದ್ಧಿಯುಳ್ಳ ಅವನು ಮೃದುವಾಗಿ ಮಾತನಾಡಿದರೆ ತಾನು ಪಡೆದ ಅರ್ಥವು ತನ್ನ ಬಳಿಯಲ್ಲಿ ಸ್ಥಿರವಾಗಿ ಜಿತವಾಗಿದೆ ಎಂದು ಭಾವಿಸುತ್ತಾನೆ.

ಏತಚ್ಚೈವಂ ಕರಿಷ್ಯಾಮೋ ಯತ್ನಶ್ಚ ಕ್ರಿಯತಾಮಿಹ ।
ಪ್ರಸ್ಥಾಪಯಾಮ ಮಿತ್ರೇಭ್ಯೋ ಬಲಾನ್ಯುದ್ಯೋಜಯಂತು ನಃ ॥೭॥

ಆದ್ದರಿಂದ ಹೀಗೆ ಮಾಡೋಣ. ಈ ವಿಷಯದಲ್ಲಿ ಎಲ್ಲರೂ ಪ್ರಯತ್ನವನ್ನು ಮಾಡಿ. ನಮ್ಮ ಮಿತ್ರರಿಗೆ ದೂತರನ್ನು ಕಳುಹಿಸೋಣ ಮತ್ತು ನಮ್ಮ ಸೈನ್ಯಗಳನ್ನು ಸಜ್ಜುಗೊಳಿಸುವಂತೆ ಮಾಡೋಣ.

ಶಲ್ಯಸ್ಯ ಧೃಷ್ಟಕೇತೋಶ್ಚ ದ್ಯುಮತ್ಸೇನಸ್ಯ ಚಾಭಿಭೋ ।
ಕೈಕಯಾನಾಂ ಚ ಸರ್ವೇಷಾಂ ದೂತಾ ಗಚ್ಛಂತು ಶೀಘ್ರಗಾಃ ॥೮॥

ಶಲ್ಯ, ಧೃಷ್ಟಕೇತು, ದ್ಯುಮತ್ಸೇನ ಎಲ್ಲಾ ಕೈಕಯ ರಾಜರು ಇವರ ಬಳಿಗೆ ಎಲೈ ಜಯಶೀಲನಾದವನೇ, ಶೀಘ್ರಗಾಮಿಗಳಾದ ದೂತರನ್ನು ಕಳುಹಿಸೋಣ.

ಸೋಽಪಿ ದುರ್ಯೋಧನೋ ನೂನಂ ಪ್ರೇಷಯಿಷ್ಯಂತಿ ಸರ್ವಶಃ ।
ಪೂರ್ವಾಭಿಪನ್ನಾಃ ಸಂತಶ್ಚ ಭಜಂತೇ ಪೂರ್ವಚೋದಕಮ್ ॥೯॥

ಆ ದುರ್ಯೋಧನನೂ ಕೂಡ ಎಲ್ಲ ಕಡೆಗಳಲ್ಲಿಯೂ ದೂತರನ್ನು ಕಳುಹಿಸುವನು. ನಾವು ನಮ್ಮ ದೂತರ ಮೂಲಕ ಮೊದಲೇ ಆ ರಾಜರನ್ನು ಸಮೀಪಿಸಿದರೆ ಸಜ್ಜನರಾದ ಮೊದಲು ಬಂದು ಅವರು ನಮಗೇ ಸಹಾಯವನ್ನು ಮಾಡುತ್ತಾರೆ.

ತತ್ ತ್ವರಧ್ವಂ ನರೇಂದ್ರಾಣಾಂ ಪೂರ್ವಮೇವ ಪ್ರಚೋದನೇ ।
ಮಹದ್ಧಿ ಕಾರ್ಯಂ ವೋಢವ್ಯಮಿತಿ ಮೇ ವರ್ತತೇ ಮತಿಃ ॥೧೦॥

ಆದ್ದರಿಂದ ರಾಜರ ಬಳಿಗೆ ದೂತರನ್ನು ಕಳುಹಿಸುವ ವಿಷಯದಲ್ಲಿ ಎಲ್ಲರೂ ತ್ವರೆ ಮಾಡಿ. ದೊಡ್ಡ ಕಾರ್ಯಭಾರವನ್ನು ಹೊರಬೇಕಾಗಿದೆ ಎಂದು ನನಗೆ ತೋರುತ್ತಿದೆ.

ಶಲ್ಯಸ್ಯ ಪ್ರೇಷ್ಯತಾಂ ಶೀಘ್ರಂ ಯೇ ಚ ತಸ್ಯಾನುಗಾ ನೃಪಾಃ ।
ಭಗದತ್ತಾಯ ರಾಜ್ಞೇ ಚ ಪೂರ್ವಸಾಗರವಾಸಿನೇ ॥೧೧॥

ಶೀಘ್ರವಾಗಿ ಶಲ್ಯನಿಗೂ ಅವನ ವಶವರ್ತಿಗಳಾದ ರಾಜರಿಗೂ ಮತ್ತು ಪೂರ್ವಸಾಗರನಿವಾಸಿಯಾದ ಭಗದತ್ತರಾಜನ ಬಳಿಗೂ ಸಹ ದೂತರನ್ನು ಕಳುಹಿಸಿ.

ಅಮಿತೌಜಸೇ ತಥೋಗ್ರಾಯ ಹಾರ್ದಿಕ್ಯಾಯಾಹುಕಾಯ ಚ ।
ದೀರ್ಘಪ್ರಜ್ಞಾಯ ಶೂರಾಯ ರೋಚಮಾನಾಯ ವಾ ವಿಭೋ ॥೧೨॥

ಅಮಿತೌಜಸ್, ಉಗ್ರಸೇನ, ಕೃತವರ್ಮ, ಆಹುಕ, ದೀರ್ಘಪ್ರಜ್ಞ, ರೋಚಮಾನ ಇವರ ಬಳಿಗೂ ಎಲ್ಲೆ ವಿಭುವೇ, ದೂತರನ್ನು ಕಳುಹಿಸು.

ಆನೀಯತಾಂ ಬೃಹಂತಶ್ಚ ಸೇನಾಬಿಂದುಶ್ಚ ವೀರ್ಯವಾನ್ ।
ಸೇನಜಿತ್ ಪ್ರತಿವಿಂಧ್ಯಶ್ಚ ಚಿತ್ರವರ್ಮಾ ಮಹಾರಥಃ ॥೧೩॥

ಬೃಹಂತ, ಪರಾಕ್ರಮಶಾಲಿಯಾದ ಸೇನಾಬಿಂದು, ಸೇನಜಿತ್, ಪ್ರತಿವಿಂಧ್ಯ, ಮಹಾರಥನಾದ ಚಿತ್ರವರ್ಮ ಇವರನ್ನೂ ನಮ್ಮ ಕಡೆಗೆ ಕರೆದುಕೊಂಡು ಬನ್ನಿ.

ಬಾಹ್ಲೀಕೋ ಮುಂಜಕೇಶಶ್ಚ ಚೈದ್ಯಾಧಿಪತಿರೇವ ಚ ।
ಸುಪಾರ್ಶ್ವಶ್ಚ ಸುಬಾಹುಶ್ಚ ಪೌರವಶ್ಚ ಮಹಾರಥಃ ॥೧೪॥

ಬಾಹ್ಲೀಕ, ಮುಂಜಕೇಶ, ಚೈದ್ಯಾಧಿಪತಿ (ಶಿಶುಪಾಲನ ಮಗ), ಸುಪಾರ್ಶ್ವ, ಸುಬಾಹು, ಮಹಾರಥನಾದ ಪೌರವ;

ಶಕಾನಾಂ ಪಲ್ಲವಾನಾಂ ಚ ದರದಾನಾಂ ಚ ಯೇ ನೃಪಾಃ ।
ಸುರಾರಿಶ್ಚ ನದಿ[illegible]ಶ್ಚ ಕರ್ಣವೇಷ್ಟಶ್ಚ ಪಾರ್ಥಿವಃ ॥೧೫॥

ಶಕರ, ಪಲ್ಲವರ ಮತ್ತು ದರದರ ರಾಜರು, ಸುರಾರಿ, ನದೀಜ ಮತ್ತು ಕರ್ಣವೇಷ್ಟ;

ಸಮರ್ಥಶ್ಚ ಸುವೀರಶ್ಚ ಮಾರ್ಜರಃ ಕಪಿಶಸ್ತಥಾ ।
ಮಹಾವೀರ್ಯಃ ಸುಕದ್ರುಶ್ಚ ನಿಶ್ಚಕ್ರಶ್ಚ ತಥಾ ಕ್ರಥಃ ॥೧೬॥

ಸಮರ್ಥ, ಸುವೀರ, ಮಾರ್ಜರ ಮತ್ತು ಕಪಿಶ, ಮಹಾಪರಾಕ್ರಮಿಯಾದ ಸುಕದ್ರು, ನಿಶ್ಚಕ್ರ ಮತ್ತು ಕ್ರಥ;

ನೀಲಶ್ಚ ವೀರಧರ್ಮಾ ಚ ಭೂಮಿಪಾಲಶ್ಚ ವೀರ್ಯವಾನ್ ।
ದುರ್ಜಯೋ ದಂತವಕ್ರಶ್ಚ ರುಗ್ಮೀ ಚ ಜನಮೇಜಯಃ ॥೧೭॥

ನೀಲ, ವೀರಧರ್ಮ ಮತ್ತು ಪರಾಕ್ರಮಶಾಲಿಯಾದ ಭೂಮಿಪಾಲ, ದುರ್ಜಯ, ದಂತವಕ್ರ, ರುಗ್ಮೀ ಮತ್ತು ಜನಮೇಜಯ;

**ಆಷಾಢೋ ವಾಯುವೇಗಶ್ಚ ಪೂರ್ವಪಾಲೀ ಚ ಪಾರ್ಥಿವಃ ।**
**ಭೂರಿತೇಜಾ ದೇವಕಶ್ಚ ಏಕಲವ್ಯಃ ಸಹಾತ್ಮಜೈಃ ॥೧೮॥**

ಆಷಾಢ, ವಾಯುವೇಗ, ಪೂರ್ವಪಾಲಿ, ಭೂರಿತೇಜ, ದೇವಕ ಮತ್ತು ತನ್ನ ಪುತ್ರರಿಂದ ಕೂಡಿದ ಏಕಲವ್ಯ.

**ಕಾರೂಶಕಾಶ್ಚ ರಾಜಾನಃ ಕ್ಷೇಮಧೂರ್ತಿಶ್ಚ ವೀರ್ಯವಾನ್ ।**
**ಕಾಂಭೋಜಾ ಋಷೀಕಾ ಯೇ ಚ ಪಶ್ಚಿಮಾನೂಪಕಾಶ್ಚ ಯೇ ॥೧೯॥**

ಕಾರೂಶದೇಶದ ರಾಜರು, ಪರಾಕ್ರಮಶಾಲಿಯಾದ ಕ್ಷೇಮಧೂರ್ತಿ, ಕಾಂಭೋಜ ದೇಶದ ರಾಜರು, ಋಷೀಕ ದೇಶದ ರಾಜರು ಮತ್ತು ಪಶ್ಚಿಮ ಸಮುದ್ರ ತೀರದ ರಾಜರು.

**ಜಯತ್ಸೇನಶ್ಚ ಕಾಶ್ಯಶ್ಚ ತಥಾ ಪಾಂಚನದಾ ನೃಪಾಃ ।**
**ಕ್ರಾಥಪುತ್ರಶ್ಚ ದುರ್ಧರ್ಷಃ ಪಾರ್ವತೀಯಾಶ್ಚ ಯೇ ನೃಪಾಃ ॥೨೦॥**

ಜಯತ್ಸೇನ, ಕಾಶಿರಾಜ ಮತ್ತು ಪಂಚನದಗಳ ರಾಜರು, ಕ್ರಥಪುತ್ರನಾದ ದುರ್ಧರ್ಷ ಮತ್ತು ಪರ್ವತದೇಶದ ರಾಜರು.

**ಜಾನಕಿಶ್ಚ ಸುಶರ್ಮಾ ಚ ಮಣಿಮಾನ್ ಪೂತಿಮತ್ಸ್ಯಕಃ ।**
**ಪಾಂಸುರಾಷ್ಟ್ರಾಧಿಪಶ್ಚೈವ ಧೃಷ್ಟಕೇತುಶ್ಚ ವೀರ್ಯವಾನ್ ॥೨೧॥**

ಜಾನಕಿ, ಸುಶರ್ಮ, ಮಣಿಮಾನ್, ಪೂತಿಮತ್ಸ್ಯಕ, ಪಾಂಸುರಾಷ್ಟ್ರಾಧಿಪತಿ, ಪರಾಕ್ರಮಶಾಲಿಯಾದ ಧೃಷ್ಟಕೇತು (ಧೃತಕೇತು);

**ಔಢ್ರಕಃ ಕುಂಡಧಾರಶ್ಚ ಬೃಹತ್ಸೇನಶ್ಚ ವೀರ್ಯವಾನ್ ।**
**ಅಪರಾಜಿತೋ ನಿಷಾದಶ್ಚ ಶ್ರೇಣಿಮಾನ್ ವಸುಮಾನಪಿ ॥೨೨॥**

ಔಢ್ರಕ, ಕುಂಡಧಾರ, ಪರಾಕ್ರಮಶಾಲಿಯಾದ ಬೃಹತ್ಸೇನ, ಅಪರಾಜಿತ, ನಿಷಾದ, ಶ್ರೇಣಿಮಾನ್ ಮತ್ತು ವಸುಮಾನ್;

ಬೃಹದ್ಬಲೋ ಬೃಹತ್ತೇಜಾ ಬಾಹುಃ ಪರಪುರಂಜಯಃ ।
ಸಮುದ್ರಸೇನೋ ರಾಜಾ ಚ ಸಹ ಪುತ್ರೇಣ ವೀರ್ಯವಾನ್ ॥೨೩॥

ಬೃಹದ್ಬಲ, ಬೃಹತ್ತೇಜ ಮತ್ತು ಶತ್ರುಜಯಶಾಲಿಯಾದ ಬಾಹು ಮತ್ತು ಪರಾಕ್ರಮಶಾಲಿಯಾದ ತನ್ನ ಪುತ್ರರಿಂದ ಕೂಡಿದ ಸಮುದ್ರಸೇನ.

ಉದ್ಭವಃ ಕ್ಷೇಮಕಶ್ಚೈವ ವಾಟಧಾನಶ್ಚ ವೀರ್ಯವಾನ್ ।
ಶ್ರುತಾಯುಶ್ಚ ದೃಢಾಯುಶ್ಚ ಸಾಲ್ವಪುತ್ರಶ್ಚ ವೀರ್ಯವಾನ್ ॥೨೪॥

ಉದ್ಭವ, ಕ್ಷೇಮಕ, ಪರಾಕ್ರಮಶಾಲಿಯಾದ ವಾಟಧಾನ, ಶ್ರುತಾಯು, ದೃಢಾಯು ಮತ್ತು ಪರಾಕ್ರಮಶಾಲಿಯಾದ ಸಾಲ್ವಪುತ್ರರು.

ಕುಮಾರಶ್ಚ ಕಳಿಂಗಾನಾಮೀಶ್ವರೋ ಯುದ್ಧದುರ್ಮದಃ ।
ಸಮರ್ಥಶ್ಚ ಪರಾನ್ ಜೇತುಂ ಕಾಂಕ್ಷೋ ವೀರ್ಯಬಲೋತ್ಕಟಃ ॥೨೫॥

ಕಳಿಂಗದೇಶದ ರಾಜನಾದ ಯುದ್ಧದುರ್ಮದನಾದ ಕುಮಾರ, ಶತ್ರುಗಳನ್ನು ಜಯಿಸಲು ಸಮರ್ಥನಾದ ವೀರ್ಯ, ಬಲಗಳಿಂದ ಉತ್ಕಟನಾದ ಕಾಂಕ್ಷರಾಜ;

ಮಹಾವೀರ್ಯಃ ಸುಕದ್ರುಶ್ಚ ನೀಚಕಸ್ತುಮುಲಸ್ತಥಾ ।
ನೀಲಶ್ಚ ವೀರಧನ್ವಾ ಚ ಭೂಮಿಪಾಲಶ್ಚ ವೀರ್ಯವಾನ್ ॥೨೬॥

ಮಹಾವೀರ್ಯ, ಸುಕದ್ರು, ನೀಚಕ ಮತ್ತು ತುಮುಲ, ನೀಲ, ವೀರಧನ್ವ ಮತ್ತು ಪರಾಕ್ರಮಶಾಲಿಯಾದ ಭೂಮಿಪಾಲ.

ಏತೇಷಾಂ ಪ್ರೇಷ್ಯತಾಂ ಶೀಘ್ರಮೇತದ್ಧಿ ಮಮ ರೋಚತೇ ।
ಅಯಂ ಚ ಬ್ರಾಹ್ಮಣೋ ವಿದ್ವಾನ್ ಮಮ ರಾಜನ್ ಪುರೋಹಿತಃ ॥

ಪ್ರೇಷ್ಯತಾಂ ಧೃತರಾಷ್ಟ್ರಾಯ ವಾಕ್ಯಮಸ್ಮೈ ಪ್ರಯುಜ್ಯತಾಮ್ ।
ಯಥಾ ದುರ್ಯೋಧನೋ ವಾಚ್ಯೋ ಯಥಾ ಶಾಂತನವೋ ನೃಪಃ ॥

ಧೃತರಾಷ್ಟ್ರೋ ಯಥಾ ವಾಚ್ಯೋ ದ್ರೋಣಶ್ಚ ರಥಿನಾಂ ವರಃ ॥೨೯॥

ಈ ಎಲ್ಲ ರಾಜರು ಬಳಿಗೂ ಶೀಘ್ರವಾಗಿ ದೂತರನ್ನು ಕಳುಹಿಸಬೇಕೆಂದು ನನಗೆ ತೋರುತ್ತದೆ. ಎಲೈ ರಾಜನೇ, ವಿದ್ವಾಂಸನೂ ಮತ್ತು ಬ್ರಾಹ್ಮಣನೂ ಆದ ಈ ನನ್ನ

ಪುರೋಹಿತನು ಧೃತರಾಷ್ಟ್ರನ ಬಳಿಗೆ ಕಳುಹಿಸಲ್ಪಡಲಿ. ಧೃತರಾಷ್ಟ್ರನಿಗೆ ಹೇಳಬೇಕಾದ ಮಾತುಗಳನ್ನು ಅವನಿಗೆ ತಿಳಿಸೋಣ. ಹಾಗೆಯೇ ದುರ್ಯೋಧನನ ಜೊತೆಯಲ್ಲಿ ಹೇಗೆ ಮಾತನಾಡಬೇಕು, ಭೀಷ್ಮರ ಜೊತೆಯಲ್ಲಿ, ಧೃತರಾಷ್ಟ್ರನ ಜೊತೆಯಲ್ಲಿ, ರಥಿಶ್ರೇಷ್ಠರಾದ ದ್ರೋಣರ ಜೊತೆಯಲ್ಲಿ ಹೇಗೆ ಮಾತನಾಡಬೇಕು ಎಂಬುದನ್ನೂ ಅವನಿಗೆ ತಿಳಿಸೋಣ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಚತುರ್ಥೋಽಧ್ಯಾಯಃ ॥

॥ ಸೇನೋದ್ಯೋಗಪರ್ವಣಿ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

## ಐದನೆಯ ಅಧ್ಯಾಯ

ದ್ರುಪದನ ವಾಕ್ಯವನ್ನು ಅನುಮೋದಿಸಿ ಕೃಷ್ಣನ ದ್ವಾರಕಾಗಮನ
ಮತ್ತು ಎರಡೂ ಪಕ್ಷಗಳ ರಾಜರ ಆಗಮನ.

**ವೈಶಂಪಾಯನಃ**

**ದ್ರುಪದೇನೈವಮುಕ್ತೇ ತು ವಾಕ್ಯೇ ವಾಕ್ಯವಿದಾಂ ವರಃ ।**
**ವಸುದೇವಸುತಸ್ತತ್ರ ವೃಷ್ಣಿಸಿಂಹೋಽಬ್ರವೀದಿದಮ್ ॥೧॥**

ವೈಶಂಪಾಯನ– ದ್ರುಪದನು ಹೀಗೆ ಮಾತನಾಡಿದ ಮೇಲೆ ಮಾತನಾಡುವವರಲ್ಲಿ ಶ್ರೇಷ್ಠನಾದ ವೃಷ್ಣಿಸಿಂಹನಾದ ವಸುದೇವ ಸುತನಾದ ಕೃಷ್ಣನು ಹೀಗೆ ಮಾತನಾಡಿದನು.

**ವಾಸುದೇವಃ**

**ಉಪಪನ್ನಮಿದಂ ವಾಕ್ಯಂ ಸೋಮಕಾನಾಂ ಧುರಂಧರೇ ।**
**ಅರ್ಥಸಿದ್ಧಿಕರಂ ರಾಜ್ಞಃ ಪಾಂಡವಸ್ಯಾಮಿತೌಜಸಃ ॥೨॥**

ವಾಸುದೇವ– ಅಮಿತಪರಾಕ್ರಮಿಯಾದ ಯುಧಿಷ್ಠಿರನ ಅರ್ಥಸಿದ್ಧಿಕರವಾದ ಸೋಮಕರ ಅಗ್ರಗಣ್ಯನಾದ ದ್ರುಪದನು ಹೇಳಿದ ಮಾತುಗಳು ಯುಕ್ತವಾಗಿವೆ.

ಏತಚ್ಚ ಪೂರ್ವಂ ಕಾರ್ಯಂ ನಃ ಸುನೀತಿಮಭಿಕಾಂಕ್ಷತಾಮ್ ।
ಅನ್ಯಥಾ ಹ್ಯಾಚರನ್ ಕರ್ಮ ಪುರುಷಃ ಸ್ಯಾತ್ ಸುಬಾಲಿಶಃ ॥೩॥

ಒಳ್ಳೆಯ ರಾಜನೀತಿಯನ್ನು ಅಪೇಕ್ಷಿಸುವ ನಾವು ಮೊದಲು ಈ ಕಾರ್ಯವನ್ನು ಮಾಡಬೇಕು. ಇಂತಹ ಸಂದರ್ಭದಲ್ಲಿ ಬೇರೆ ರೀತಿಯಲ್ಲಿ ನಡೆದುಕೊಳ್ಳುವ ಪುರುಷನು ಬಾಲಿಶನೆನಿಸುವನು.

ಕಿಂತು ಸಂಬಂಧಕಂ ತುಲ್ಯಮಸ್ಮಾಕಂ ಕುರುಪಾಂಡುಷು ।
ಯಥೇಷ್ಟಂ ವರ್ತಮಾನೇಷು ಪಾಂಡವೇಷು ಚ ತೇಷು ಚ ॥೪॥

ಆದರೆ ತಮ್ಮ ತಮ್ಮ ಇಚ್ಛೆಯಂತೆ ನಡೆದುಕೊಂಡು ಹೋಗುತ್ತಿರುವ ಪಾಂಡವರಲ್ಲಿ ಮತ್ತು ಕೌರವರಲ್ಲಿ ನಮ್ಮ ಸಂಬಂಧವು ಸಮಾನವಾಗಿದೆ.

ತೇ ವಿವಾಹಾರ್ಥಮಾನೀತಾ ವಯಂ ಸರ್ವೇ ಯಥಾ ಭವಾನ್ ।
ಕೃತೇ ವಿವಾಹೇ ಮುದಿತಾ ಗಮಿಷ್ಯಾಮೋ ಗೃಹಾನ್ ಪ್ರತಿ ॥೫॥

ದ್ರುಪದನೇ, ನಿನ್ನಂತೆ ನಾವೂ ಸಹ ಅಭಿಮನ್ಯುವಿನ ವಿವಾಹಕ್ಕೋಸ್ಕರವಾಗಿ ಆಮಂತ್ರಿತರಾಗಿ ಬಂದವರು. ವಿವಾಹವು ಮುಗಿಯುತ್ತಿರಲು ಎಲ್ಲರೂ ಸಂತೋಷದಿಂದ ನಮ್ಮ ನಮ್ಮ ಮನೆಗಳಿಗೆ ಹಿಂದಿರುಗೋಣ.

ಭವಾನ್ ವೃದ್ಧತರೋ ರಾಜ್ಞಾಂ ವಯಸಾ ಚ ಶ್ರುತೇನ ಚ ।
ಶಿಷ್ಯವತ್ ತೇ ವಯಂ ಸರ್ವೇ ಭವಾಮೇಹ ನ ಸಂಶಯಃ ॥೬॥

ನೀನು ವಯಸ್ಸಿನಿಂದಲೂ ಮತ್ತು ಜ್ಞಾನದಿಂದಲೂ ರಾಜರಲ್ಲಿ ವೃದ್ಧನಾದವನು. ನಾವೆಲ್ಲರೂ ನಿನ್ನ ಶಿಷ್ಯರಂತೆ ಇರುವೆವು. ಈ ವಿಷಯದಲ್ಲಿ ಸಂಶಯವಿಲ್ಲ.

ಭವಂತಂ ಧೃತರಾಷ್ಟ್ರಶ್ಚ ಸತತಂ ಬಹುಮನ್ಯತೇ ।
ಆಚಾರ್ಯಯೋಃ ಸಖಾ ಚಾಸಿ ದ್ರೋಣಸ್ಯ ಚ ಕೃಪಸ್ಯ ಚ ॥೭॥

ನೀನು ಆಚಾರ್ಯರಾದ ದ್ರೋಣರ ಮತ್ತು ಕೃಪರ ಸ್ನೇಹಿತನಾಗಿದ್ದೀಯೆ ಎಂಬ ಕಾರಣದಿಂದ ಧೃತರಾಷ್ಟ್ರನು ಯಾವಾಗಲೂ ನಿನ್ನನ್ನು ಗೌರವಿಸುತ್ತಾನೆ.

ಸ ಭವಾನ್ ಪ್ರೇಷಯತ್ವದ್ಯ ಪಾಂಡವಾರ್ಥಕರಂ ವಚಃ ।
ಸರ್ವೇಷಾಂ ನಿಶ್ಚಿತಂ ತನ್ನಃ ಪ್ರೇಷಯಿಷ್ಯತಿ ಯದ್ ಭವಾನ್ ॥೮॥

ಅಂತಹ ನೀನು ಪಾಂಡವರಿಗೆ ಅರ್ಥಸಿದ್ಧಿಕರವಾದ ಸಂದೇಶವನ್ನು ಈ ದಿನ ಎಲ್ಲ ಕಡೆ ಕಳುಹಿಸು. ನೀನು ಯಾವ ಸಂದೇಶವನ್ನು ಕಳುಹಿಸುವೆಯೋ ಅದು ನಮ್ಮೆಲ್ಲರಿಗೂ ಸಮ್ಮತವಾಗಿರುತ್ತದೆ.

ಯದಿ ತಾವಚ್ಛಮಂ ಕುರ್ಯಾನ್ನ್ಯಾಯೇನ ಕುರುಪುಂಗವಃ ।
ನ ಭವೇತ್ ಕುರುಪಾಂಡೂನಾಂ ಸೌಭ್ರಾತ್ರೇಣ ಮಹಾನ್ ಕ್ಷಯಃ ॥೯॥

ಕುರುಶ್ರೇಷ್ಠನಾದ ದುರ್ಯೋಧನನು ಒಳ್ಳೆಯ ನೀತಿಯನ್ನು ಅನುಸರಿಸಿ ಸಂಧಿಯನ್ನು ಮಾಡಿಕೊಳ್ಳುವುದಾದರೆ ಆಗ ಸೌಭ್ರಾತ್ರದ ಕಾರಣದಿಂದಾಗಿ ಕುರುಪಾಂಡವರ ದೊಡ್ಡ ವಿನಾಶವು ಉಂಟಾಗುವುದಿಲ್ಲ.

ಅಥ ದರ್ಪಾನ್ವಿತೋ ಮೋಹಾನ್ನ ಕುರ್ಯಾದ್ ಧೃತರಾಷ್ಟ್ರಜಃ ।
ಅನ್ಯೇಷಾಂ ಪ್ರೇಷಯಿತ್ವಾ ಚ ಪಶ್ಚಾದಸ್ಮಾನ್ ಸಮಾಹ್ವಯೇತ್ ॥೧೦॥

ಇನ್ನು ದುರ್ಯೋಧನನು ದರ್ಪದಿಂದ ಕೂಡಿದವನಾಗಿ ರಾಜ್ಯಮೋಹದಿಂದ ನಮ್ಮ ಮಾತನ್ನು ನಡೆಸಿಕೊಡದಿದ್ದರೆ ನೀನು ಮೊದಲು ಬೇರೆ ರಾಜರ ಬಳಿಗೆ ದೂತರನ್ನು ಕಳುಹಿಸಿ ಅನಂತರ ನಮ್ಮ ಬಳಿಗೆ ಕಳುಹಿಸು (ದುರ್ಯೋಧನನು ಬೇರೆ ರಾಜರ ಬಳಿಗೆ ತನ್ನ ದೂತರನ್ನು ಕಳುಹಿಸಿ ಅನಂತರ ನಮ್ಮನ್ನು ಯುದ್ಧಕ್ಕೆ ಆಹ್ವಾನ ಮಾಡಿಯಾನು).

ತತೋ ದುರ್ಯೋಧನೋ ಮಂದಃ ಸಹಾಮಾತ್ಯಃ ಸಬಾಂಧವಃ ।
ನಿಷ್ಕಾಮಾಪತ್ಸ್ಯತೇ ಮೂಢಃ ಕ್ರುದ್ಧೇ ಗಾಂಡೀವಧನ್ವನಿ ॥೧೧॥

ಹಾಗಾದರೆ ಗಾಂಡೀವಧನ್ವನಾದ ಅರ್ಜುನನು ವೃದ್ಧನಾಗುತ್ತಿರಲು ಮೂಢನೂ ಮತ್ತು ಮಂದನೂ ಆದ ದುರ್ಯೋಧನನು ತನ್ನ ಬಾಂಧವರ ಮತ್ತು ಅಮಾತ್ಯರ ಜೊತೆಯಲ್ಲಿ ವಿನಾಶವನ್ನು ಹೊಂದುವನು.

ವೈಶಂಪಾಯನಃ

ತತಃ ಸತ್ಕೃತ್ಯ ವಾರ್ಷ್ಣೇಯಂ ವಿರಾಟಃ ಪೃಥಿವೀಪತಿಃ ।
ಗೃಹಾನ್ ಪ್ರಸ್ಥಾಪಯಾಮಾಸ ಸಗಣಂ ಸಹಬಾಂಧವಮ್ ॥೧೨॥

ವೈಶಂಪಾಯನ– ಅನಂತರ ಪೃಥಿವೀಪತಿಯಾದ ವಿರಾಟನು ಕೃಷ್ಣನಿಗೆ ವಿವಾಹಕ್ಕೆ ಬಂದುದಕ್ಕಾಗಿ ಸತ್ಕಾರ ಮಾಡಿ ಅವನ ಪರಿವಾರ ಮತ್ತು ಬಂಧುಗಳ ಜೊತೆಯಲ್ಲಿ ಅವನನ್ನು ಹಿಂದಕ್ಕೆ ಕಳುಹಿಸಿದನು.

ದ್ವಾರಕಾಂ ತು ಗತೇ ಕೃಷ್ಣೇ ಯುಧಿಷ್ಠಿರಪುರೋಗಮಾಃ ।
ಚಕ್ರುಃ ಸಾಂಗ್ರಾಮಿಕಂ ಕರ್ಮ ವಿರಾಟಶ್ಚ ಮಹೀಪತಿಃ ॥೧೩॥

ಕೃಷ್ಣನು ದ್ವಾರಕೆಗೆ ಹೊರಟುಹೋಗುತ್ತಿರಲು ಯುಧಿಷ್ಠಿರ ಮೊದಲಾದವರು ಮತ್ತು ವಿರಾಟರಾಜನೂ ಸಹ ಯುದ್ಧಕ್ಕೆ ಉಪಯುಕ್ತವಾದ ಕಾರ್ಯಗಳನ್ನು ಆರಂಭಿಸಿದರು.

ತತಃ ಸಂಪ್ರೇಷಯಾಮಾಸ ವಿರಾಟಃ ಸಹ ಬಾಂಧವೈಃ ।
ಸರ್ವೇಷಾಂ ಭೂಮಿಪಾಲಾನಾಂ ದ್ರುಪದಶ್ಚ ಮಹೀಪತಿಃ ॥೧೪॥

ಅನಂತರ ವಿರಾಟರಾಜನು ಮತ್ತು ದ್ರುಪದರಾಜನು ತಮ್ಮ ಬಂಧುಗಳ ಜೊತೆಯಲ್ಲಿ ಎಲ್ಲ ರಾಜರಿಗೂ ತಮ್ಮ ದೂತರನ್ನು ಕಳುಹಿಸಿದರು.

ವಚನಾತ್ ಕುರುಸಿಂಹಸ್ಯ ಮತ್ಸ್ಯಪಾಂಚಾಲಯೋಸ್ತಥಾ ।
ಸಮಾಜಗ್ಮುರ್ಮಹೀಪಾಲಾಃ ಸಂಪ್ರಹೃಷ್ಟಾ ಮಹಾಬಲಾಃ ॥೧೫॥

ಕುರುಸಿಂಹನಾದ ಯುಧಿಷ್ಠಿರನ ಮಾತಿನಂತೆ ಹಾಗೆಯೇ ಮತ್ಸ್ಯ-ಪಾಂಚಾಲ ದೇಶದ ಅಧಿಪತಿಯಾದ ವಿರಾಟ ಮತ್ತು ದ್ರುಪದರ ಮಾತಿನಂತೆ ರಾಜರು ಸಂತೋಷಗೊಂಡು ಮಹಾಸೈನ್ಯಗಳ ಸಮೇತರಾಗಿ ಆಗಮಿಸಿದರು.

ತಚ್ಛ್ರುತ್ವಾ ಪಾಂಡುಪುತ್ರಾಣಾಂ ಸಮಾಗಚ್ಛನ್ಮಹಾಬಲಮ್ ।
ಧೃತರಾಷ್ಟ್ರಸುತಶ್ಚಾಪಿ ಸಮಾನಿನ್ಯೇ ಮಹೀಪತೀನ್ ॥೧೬॥

ಪಾಂಡುಪುತ್ರರ ಬಳಿಗೆ ದೊಡ್ಡ ಸೈನ್ಯಗಳು ಬರುತ್ತಿವೆ ಎಂಬುದನ್ನು ತಿಳಿದ ದುರ್ಯೋಧನನೂ ರಾಜರನ್ನು ತನ್ನ ಬಳಿಗೆ ಕರೆತಂದನು.

ಸಮಾಕುಲಾ ಮಹೀ ರಾಜನ್ ಕುರುಪಾಂಡವಕಾರಣಾತ್ ।
ತದಾ ಸಮಭವತ್ ಕೃತ್ಸ್ನಾ ಸಂಪ್ರಯಾಣೇ ಮಹೀಕ್ಷಿತಾಮ್ ॥೧೭॥

ಸಂಕುಲಾ ಚ ತದಾ ಭೂಮಿಃ ಚತುರಂಗಬಲಾನ್ವಿತಾ ॥೧೮॥

ಎಲೈ ಜನಮೇಜಯ ರಾಜನೇ, ಕುರುಪಾಂಡವರ ನಿಮಿತ್ತದಿಂದಾಗಿ ಎಲ್ಲ ರಾಜರೂ ತಮ್ಮ ಸೈನ್ಯದ ಜೊತೆಯಲ್ಲಿ ಹೊರಡುತ್ತಿರಲು ಭೂಮಿಯು ಆ ಸೈನ್ಯಗಳಿಂದ ತುಂಬಿತು. ಆಗ ಭೂಮಿಯು ಚತುರಂಗಯುಕ್ತವಾದ ಸೈನ್ಯದಿಂದ ನಿಬಿಡವಾಯಿತು.

**ಬಲಾನಿ ತೇಷಾಂ ಭೀಮಾನಿ ಆಗಚ್ಛಂತಿ ತತಸ್ತತಃ ।**
**ಚಾಲಯಂತೀವ ಗಾಂ ದೇವೀಂ ಸಪರ್ವತವನಾಮಿಮಾಮ್ ॥೧೯॥**

ಆ ರಾಜರ ಸೈನ್ಯಗಳು ಬೇರೆ ಬೇರೆ ದೇಶಗಳಿಂದ ಬರುತ್ತಿರಲು ಪರ್ವತ, ವನ ಸಹಿತವಾದ ಈ ಭೂಮಿಯು ನಡುಗುವಂತೆ ತೋರಿತು.

**ತತಃ ಪ್ರಜ್ಞಾವಯೋವೃದ್ಧಂ ಪಾಂಚಾಲ್ಯಃ ಸ್ವಪುರೋಹಿತಮ್ ।**
**ಕುರುಭ್ಯಃ ಪ್ರೇಷಯಾಮಾಸ ಯುಧಿಷ್ಠಿರಮತೇ ಸ್ಥಿತಃ ॥೨೦॥**

ಅನಂತರ ಪಾಂಚಾಲಾಧಿಪತಿಯಾದ ದ್ರುಪದನು ಯುಧಿಷ್ಠಿರನ ಅಭಿಪ್ರಾಯವನ್ನು ತಿಳಿದವನಾಗಿ ಜ್ಞಾನವೃದ್ಧನೂ ಮತ್ತು ವಯೋವೃದ್ಧನೂ ಆದ ತನ್ನ ಪುರೋಹಿತನನ್ನು ಕುರುಗಳ ಬಳಿಗೆ ಸಂಧಾನಕ್ಕಾಗಿ ಕಳುಹಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಪಂಚಮೋಽಧ್ಯಾಯಃ ॥

॥ ಸೇನೋದ್ಯೋಗಪರ್ವಣಿ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಐದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

## ಮಹಾಭಾರತತಾತ್ಪರ್ಯನಿರ್ಣಯಃ - ಅಧ್ಯಾಯ ೨೪

**ತತಃ ಸಮ್ಮಂತ್ರ್ಯಾನುಮತೇ ಕೃಷ್ಣಸ್ಯ ಸ್ವಪುರೋಹಿತಮ್ ।**
**ದ್ರುಪದಃ ಪ್ರೇಷಯಾಮಾಸ ಧೃತರಾಷ್ಟ್ರಾಯ ಶಾಂತಯೇ ॥೧॥**

ಬಳಿಕ ದ್ರುಪದರಾಜ ಚೆನ್ನಾಗಿ ಮಂತ್ರಾಲೋಚನೆ ಮಾಡಿ ಕೃಷ್ಣನ ಅನುಮತಿಯಿಂದ ತನ್ನ ಪುರೋಹಿತನನ್ನು ಧೃತರಾಷ್ಟ್ರನ ಬಳಿಗೆ ಸಂಧಿಗಾಗಿ ಕಳಿಸಿದ.

ಸ ಗತ್ವಾ ಧೃತರಾಷ್ಟ್ರಂ ತಂ ಭೀಷ್ಮದ್ರೋಣಾದಿಭಿರ್ಯುತಮ್ ।
ಉವಾಚ ನ ವಿರೋಧಸ್ತ ಉತ್ಪಾದ್ಯೋ ಧರ್ಮಸೂನುನಾ ॥೨॥

ದ್ರುಪದನ ಪುರೋಹಿತ ಹಸ್ತಿನಾವತಿಗೆ ಹೋಗಿ ಭೀಷ್ಮ-ದ್ರೋಣಾದಿ ಸಮೇತ ಕುಳಿತಿದ್ದ ಧೃತರಾಷ್ಟ್ರನಿಗೆ ಹೇಳಿದ, 'ಧರ್ಮರಾಜನೊಂದಿಗೆ ವಿರೋಧ ಮಾಡಬೇಡ.

ಯಸ್ಯ ಭೀಮಾರ್ಜುನೌ ಯೋಧೌ ನೇತಾ ಯಸ್ಯ ಜನಾರ್ದನಃ ।
ಶ್ರುತಾಸ್ತೇ ಭೀಮನಿಹತಾ ಜರಾಸಂಧಾದಯೋऽಖಿಲಾಃ ॥೩॥

ಧರ್ಮರಾಜನಿಗೆ ಭೀಮಾರ್ಜುನರು ಯೋಧರು. ಶ್ರೀಕೃಷ್ಣ ಮಾರ್ಗದರ್ಶಕ. ಜರಾಸಂಧಾದಿ ರಾಜರು ಎಲ್ಲರೂ ಭೀಮನಿಂದ ಹತರಾಗಿರುವುದನ್ನು ನೀನೇ ಕೇಳಿರುವಿ.

ಯಥಾ ಚ ರುದ್ರವಚನಾದವಧ್ಯಾ ರಾಕ್ಷಸಾಧಿಪಾಃ ॥೪॥

ತೀರ್ಥವಿಘ್ನಕರಾಃ ಸರ್ವತೀರ್ಥಾನ್ಯಾಚ್ಛಾದ್ಯ ಸಂಸ್ಥಿತಾಃ
ತಿಸ್ರಃ ಕೋಟ್ಯೋ ಮಹಾವೀರ್ಯಾ ಭೀಮಸೇನ ನಿಸೂದಿತಾಃ ॥೫॥
ಭ್ರಾತೄಣಾಂ ಬ್ರಾಹ್ಮಣಾನಾಂ ಚ ಲೋಕಾನಾಂ ಚ ಹಿತೈಷಿಣಾ ।
ತತೋ ಹಿ ಸರ್ವತೀರ್ಥಾನಿ ಗಮ್ಯಾನ್ಯಾಸನ್ ನೃಣಾಂ ಕ್ಷಿತೌ ॥೬॥

ರುದ್ರವರದಿಂದ ಅವಧ್ಯರೆನಿಸಿದ, ಮಹಾಬಲಿಷ್ಠರಾದ ಮೂರುಕೋಟಿ ಮಹಾರಾಕ್ಷಸರು ಎಲ್ಲ ತೀರ್ಥಕ್ಷೇತ್ರಗಳಲ್ಲಿ ವಿಘ್ನ ಉಂಟುಮಾಡುತ್ತ ಸುತ್ತಮುತ್ತ ಆವರಿಸಿದ್ದರು. ಸೋದರರಿಗೂ ಬ್ರಾಹ್ಮಣರಿಗೂ ಲೋಕದ ಜನರಿಗೂ ಹಿತವನ್ನು ಬಯಸಿ ಭೀಮನೇ ಅವರೆಲ್ಲರನ್ನೂ ಸಂಹರಿಸಿದ. ಅದರಿಂದ ಈಗ ಭೂಮಿಯಲ್ಲಿ ಎಲ್ಲ ತೀರ್ಥಕ್ಷೇತ್ರಗಳೂ ಮನುಷ್ಯರಿಗೆ ಹೋಗಿಬರಲು ಶಕ್ಯವಾಗಿವೆ.

ಯಥಾ ಜಟಾಸುರಃ ಪಾಪಃ ಶರ್ವಾಣೀವರಸಂಶ್ರಯಾತ್।
ಅವಧ್ಯೋ ವಿಪ್ರರೂಪೇಣ ವಂಚಯನ್ನೇವ ಪಾಂಡವಾನ್ ॥೭॥

ಪಾಪಿಯಾದ ಜಟಾಸುರ ಪಾರ್ವತಿಯ ವರಬಲದಿಂದ ಅವಧ್ಯನಾಗಿದ್ದು ಬ್ರಾಹ್ಮಣರೂಪದಿಂದ ಪಾಂಡವರನ್ನು ವಂಚಿಸುತ್ತಲೆ ಇದ್ದ.

ಜ್ಞಾತ್ವಾऽಪಿ ಭೀಮಸೇನೇನ ವಿಪ್ರರೂಪಸ್ಯ ನೋ ವಧಃ ।
ಯೋಗ್ಯ ಇತ್ಯಹತೋ ಭೀಮೇ ಮೃಗಯಾರ್ಥಂ ಗತೇ ಕ್ವಚಿತ್ ॥೮॥

ಯಮೌ ಯುಧಿಷ್ಠಿರಂ ಕೃಷ್ಣಾಂ ಚಾऽದಾಯೈವ ಪರಾದ್ರವತ್ ।
ದೃಷ್ಟ್ವಾ ಭೀಮಸೇನೇನ ತಾಂಸ್ಯಕ್ತ್ವಾ ಸಂಸಕ್ತಸ್ತೇನ ಸಂಗರೇ ॥೯॥

ಭೀಮ ಇದನ್ನು ತಿಳಿದೂ ಕೂಡ 'ಬ್ರಾಹ್ಮಣ ವೇಷ ಧರಿಸಿದ್ದಾನೆ, ಕೊಲ್ಲುವುದು ಸರಿಯಲ್ಲ' ಎಂದು ಕೊಲ್ಲದೆ ಬಿಟ್ಟಿದ್ದ. ಒಂದು ದಿನ ಭೀಮ ಬೇಟೆಗೆ ಹೋಗಿದ್ದಾಗ ಜಟಾಸುರ ನಕುಲ, ಸಹದೇವರನ್ನೂ ಧರ್ಮರಾಜನನ್ನೂ ದ್ರೌಪದಿಯನ್ನೂ ಎತ್ತಿಕೊಂಡು ಓಡಿದ. ಭೀಮ ತನ್ನನ್ನು ಕಂಡಾಗ ಅವರನ್ನು ಬಿಟ್ಟು ಭೀಮನೊಡನೆ ಯುದ್ಧಕ್ಕೆ ನಿಂತ.

ನಿಪಾತ್ಯ ಭೂಮೌ ಪಾದೇನ ಸಂಚೂರ್ಣಿತಶಿರಸ್ತಮಃ ।
ಜಗಾಮ ಕಿಮು ತೇ ಪುತ್ರಾಃ ಶಕ್ಯಾ ಹಂತುಮಿತಿ ಸ್ಮ ಹ ।
ನಿವಾತಕವಚಾಶ್ಚೈವ ಹತಾಃ ಪಾರ್ಥೇನ ತೇ ಶ್ರುತಾಃ ॥೧೦॥

ಭೀಮ ಜಟಾಸುರನನ್ನು ನೆಲದಲ್ಲಿ ಕೆಡವಿ ತಲೆಯನ್ನು ಕಾಲಿಂದ ಪುಡಿಗೈದ. ಆತ ಅಂಧತಮಸ್ಸಿಗೆ ನಡೆದ. ಇಂಥ ಭೀಮನಿಗೆ ನಿನ್ನ ಮಕ್ಕಳನ್ನು ಕೊಲ್ಲುವುದು ಶಕ್ಯವೆಂದು ಬೇರೇನು ಹೇಳಬೇಕು? ನಿವಾತಕವಚರೂ ಅರ್ಜುನನಿಂದ ಹತರಾದುದನ್ನು ನೀನು ಕೇಳಿರುವಿ.

ಜಾನಾಸಿ ಚ ಹರೇರ್ವೀರ್ಯಂ ಯಸ್ಯೇದಮಖಿಲಂ ವಶೇ ।
ಸಬ್ರಹ್ಮರುದ್ರಶಕ್ರಾದ್ಯಂ ಚೇತನಾಚೇತನಾತ್ಮಕಮ್ ॥೧೧॥

ಶ್ರೀಕೃಷ್ಣನ ಶಕ್ತಿಯನ್ನೂ ನೀನು ಬಲ್ಲೆ. ಬ್ರಹ್ಮರುದ್ರ ಇಂದ್ರಾದಿ ಚೇತನಾ ಚೇತನಾತ್ಮಕ ಸಮಸ್ತ ಪ್ರಪಂಚ ಅವನ ವಶದಲ್ಲಿದೆ.

ತಸ್ಮಾದೇತೈಃ ಪಾಲಿತಸ್ಯ ಧರ್ಮಜಸ್ಯ ಸ್ವಕಂ ವಸು ।
ದೀಯತಾಮಿತಿ ತೇನೋಕ್ತೋ ಧೃತರಾಷ್ಟ್ರೋ ನ ಚಾಕರೋತ್ ॥೧೨॥

ಆದರಿಂದ ಭೀಮ, ಅರ್ಜುನ, ಕೃಷ್ಣರಿಂದ ರಕ್ಷಿತನಾಗಿರುವ ಧರ್ಮರಾಜನಿಗೆ ಅವನ ಸಂಪತ್ತನ್ನು ಕೊಟ್ಟುಬಿಡು. ಹೀಗೆ ದ್ರುಪದನ ಪುರೋಹಿತ ಹೇಳಿದರೂ ಧೃತರಾಷ್ಟ್ರ ಅದರಂತೆ ಮಾಡಲಿಲ್ಲ.

★ ★ ★ ★ ★

ಸ ಗತ್ವಾ ಧೃತರಾಷ್ಟ್ರಂ ತಂ ಭೀಷ್ಮದ್ರೋಣಾದಿಭಿರ್ಯುತಮ್ ।
ಉವಾಚ ನ ವಿರೋಧಸ್ತ ಉತ್ಪಾದ್ಯೋ ಧರ್ಮಸೂನುನಾ ॥೨॥

ದ್ರುಪದನ ಪುರೋಹಿತ ಹಸ್ತಿನಾವತಿಗೆ ಹೋಗಿ ಭೀಷ್ಮ-ದ್ರೋಣಾದಿ ಸಮೇತ ಕುಳಿತಿದ್ದ ಧೃತರಾಷ್ಟ್ರನಿಗೆ ಹೇಳಿದ, 'ಧರ್ಮರಾಜನೊಂದಿಗೆ ವಿರೋಧ ಮಾಡಬೇಡ.

ಯಸ್ಯ ಭೀಮಾರ್ಜುನೌ ಯೋಧೌ ನೇತಾ ಯಸ್ಯ ಜನಾರ್ದನಃ ।
ಶ್ರುತಾಸ್ತೇ ಭೀಮನಿಹತಾ ಜರಾಸಂಧಾದಯೋಽಖಿಲಾಃ ॥೩॥

ಧರ್ಮರಾಜನಿಗೆ ಭೀಮಾರ್ಜುನರು ಯೋಧರು. ಶ್ರೀಕೃಷ್ಣ ಮಾರ್ಗದರ್ಶಕ. ಜರಾಸಂಧಾದಿ ರಾಜರು ಎಲ್ಲರೂ ಭೀಮನಿಂದ ಹತರಾಗಿರುವುದನ್ನು ನೀನೇ ಕೇಳಿರುವಿ.

ಯಥಾ ಚ ರುದ್ರವಚನಾದವಧ್ಯಾ ರಾಕ್ಷಸಾಧಿಪಾಃ ॥೪॥

ತೀರ್ಥವಿಘ್ನಕರಾಃ ಸರ್ವತೀರ್ಥಾನ್ಯಾಚ್ಛಾದ್ಯ ಸಂಸ್ಥಿತಾಃ
ತಿಸ್ರಃ ಕೋಟ್ಯೋ ಮಹಾವೀರ್ಯಾ ಭೀಮಸೇನ ನಿಸೂದಿತಾಃ ॥೫॥
ಭ್ರಾತೄಣಾಂ ಬ್ರಾಹ್ಮಣಾನಾಂ ಚ ಲೋಕಾನಾಂ ಚ ಹಿತೈಷಿಣಾ ।
ತತೋ ಹಿ ಸರ್ವತೀರ್ಥಾನಿ ಗಮ್ಯಾನ್ಯಾಸನ್ ನೃಣಾಂ ಕ್ಷಿತೌ ॥೬॥

ರುದ್ರವರದಿಂದ ಅವಧ್ಯರೆನಿಸಿದ, ಮಹಾಬಲಿಷ್ಠರಾದ ಮೂರುಕೋಟಿ ಮಹಾರಾಕ್ಷಸರು ಎಲ್ಲ ತೀರ್ಥಕ್ಷೇತ್ರಗಳಲ್ಲಿ ವಿಘ್ನ ಉಂಟುಮಾಡುತ್ತ ಸುತ್ತಮುತ್ತ ಆವರಿಸಿದ್ದರು. ಸೋದರರಿಗೂ ಬ್ರಾಹ್ಮಣರಿಗೂ ಲೋಕದ ಜನರಿಗೂ ಹಿತವನ್ನು ಬಯಸಿ ಭೀಮನೇ ಅವರೆಲ್ಲರನ್ನೂ ಸಂಹರಿಸಿದ. ಅದರಿಂದ ಈಗ ಭೂಮಿಯಲ್ಲಿ ಎಲ್ಲ ತೀರ್ಥಕ್ಷೇತ್ರಗಳೂ ಮನುಷ್ಯರಿಗೆ ಹೋಗಿಬರಲು ಶಕ್ಯವಾಗಿವೆ.

ಯಥಾ ಜಟಾಸುರಃ ಪಾಪಃ ಶರ್ವಾಣೀವರಸಂಶ್ರಯಾತ್।
ಅವಧ್ಯೋ ವಿಪ್ರರೂಪೇಣ ವಂಚಯನ್ನೇವ ಪಾಂಡವಾನ್ ॥೭॥

ಪಾಪಿಯಾದ ಜಟಾಸುರ ಪಾರ್ವತಿಯ ವರಬಲದಿಂದ ಅವಧ್ಯನಾಗಿದ್ದು ಬ್ರಾಹ್ಮಣರೂಪದಿಂದ ಪಾಂಡವರನ್ನು ವಂಚಿಸುತ್ತಲೆ ಇದ್ದ.

ಜ್ಞಾತ್ವಾಽಪಿ ಭೀಮಸೇನೇನ ವಿಪ್ರರೂಪಸ್ಯ ನೋ ವಧಃ ।
ಯೋಗ್ಯ ಇತ್ಯಹತೋ ಭೀಮೇ ಮೃಗಯಾರ್ಥಂ ಗತೇ ಕ್ವಚಿತ್ ॥೮॥

ಯಮೌ ಯುಧಿಷ್ಠಿರಂ ಕೃಷ್ಣಾಂ ಚಾऽದಾಯೈವ ಪರಾದ್ರವತ್ ।
ದೃಷ್ಟ್ವೋ ಭೀಮಸೇನೇನ ತಾಂಸ್ಯಕ್ತ್ವಾ ಸಂಸಕ್ತಸ್ತೇನ ಸಂಗರೇ ॥೯॥

ಭೀಮ ಇದನ್ನು ತಿಳಿದೂ ಕೂಡ 'ಬ್ರಾಹ್ಮಣ ವೇಷ ಧರಿಸಿದ್ದಾನೆ, ಕೊಲ್ಲುವುದು ಸರಿಯಲ್ಲ' ಎಂದು ಕೊಲ್ಲದೆ ಬಿಟ್ಟಿದ್ದ. ಒಂದು ದಿನ ಭೀಮ ಬೇಟೆಗೆ ಹೋಗಿದ್ದಾಗ ಜಟಾಸುರ ನಕುಲ, ಸಹದೇವರನ್ನೂ ಧರ್ಮರಾಜನನ್ನೂ ದ್ರೌಪದಿಯನ್ನೂ ಎತ್ತಿಕೊಂಡು ಓಡಿದ. ಭೀಮ ತನ್ನನ್ನು ಕಂಡಾಗ ಅವರನ್ನು ಬಿಟ್ಟು ಭೀಮನೊಡನೆ ಯುದ್ಧಕ್ಕೆ ನಿಂತ.

ನಿಪಾತ್ಯ ಭೂಮೌ ಪಾದೇನ ಸಂಚೂರ್ಣಿತಶಿರಸ್ತಮಃ ।
ಜಗಾಮ ಕಿಮು ತೇ ಪುತ್ರಾಃ ಶಕ್ಯಾ ಹಂತುಮಿತಿ ಸ್ಮ ಹ ।
ನಿವಾತಕವಚಾಶ್ಚೈವ ಹತಾಃ ಪಾರ್ಥೇನ ತೇ ಶ್ರುತಾಃ ॥೧೦॥

ಭೀಮ ಜಟಾಸುರನನ್ನು ನೆಲದಲ್ಲಿ ಕೆಡವಿ ತಲೆಯನ್ನು ಕಾಲಿಂದ ಪುಡಿಗೈದ. ಆತ ಅಂಧತಮಸ್ಸಿಗೆ ನಡೆದ. ಇಂಥ ಭೀಮನಿಗೆ ನಿನ್ನ ಮಕ್ಕಳನ್ನು ಕೊಲ್ಲುವುದು ಶಕ್ಯವೆಂದು ಬೇರೇನು ಹೇಳಬೇಕು? ನಿವಾತಕವಚರೂ ಅರ್ಜುನನಿಂದ ಹತರಾದುದನ್ನು ನೀನು ಕೇಳಿರುವಿ.

ಜಾನಾಸಿ ಚ ಹರೇರ್ವೀರ್ಯಂ ಯಸ್ಯೇದಮಖಿಲಂ ವಶೇ ।
ಸಬ್ರಹ್ಮರುದ್ರಶಕ್ರಾದ್ಯಂ ಚೇತನಾಚೇತನಾತ್ಮಕಮ್ ॥೧೧॥

ಶ್ರೀಕೃಷ್ಣನ ಶಕ್ತಿಯನ್ನೂ ನೀನು ಬಲ್ಲೆ. ಬ್ರಹ್ಮರುದ್ರ ಇಂದ್ರಾದಿ ಚೇತನಾ ಚೇತನಾತ್ಮಕ ಸಮಸ್ತ ಪ್ರಪಂಚ ಅವನ ವಶದಲ್ಲಿದೆ.

ತಸ್ಮಾದೇತೈಃ ಪಾಲಿತಸ್ಯ ಧರ್ಮಜಸ್ಯ ಸ್ವಕಂ ವಸು ।
ದೀಯತಾಮಿತಿ ತೇನೋಕ್ತೋ ಧೃತರಾಷ್ಟ್ರೋ ನ ಚಾಕರೋತ್ ॥೧೨॥

ಅದರಿಂದ ಭೀಮ, ಅರ್ಜುನ, ಕೃಷ್ಣರಿಂದ ರಕ್ಷಿತನಾಗಿರುವ ಧರ್ಮರಾಜನಿಗೆ ಅವನ ಸಂಪತ್ತನ್ನು ಕೊಟ್ಟುಬಿಡು. ಹೀಗೆ ದ್ರುಪದನ ಪುರೋಹಿತ ಹೇಳಿದರೂ ಧೃತರಾಷ್ಟ್ರ ಅದರಂತೆ ಮಾಡಲಿಲ್ಲ.

★ ★ ★ ★ ★

# ಆರನೆಯ ಅಧ್ಯಾಯ

ದ್ರುಪದನಿಂದ ಅನುಶಿಷ್ಟನಾಗಿ ದ್ರುಪದ ಪುರೋಹಿತನ ಹಸ್ತಿನಪುರ ಗಮನ.

**ದ್ರುಪದಃ**

**ಭೂತಾನಾಂ ಪ್ರಾಣಿನಃ ಶ್ರೇಷ್ಠಾಃ ಪ್ರಾಣಿನಾಂ ಬುದ್ಧಿಜೀವಿನಃ ।**
**ಬುದ್ಧಿಮತ್ಸು ನರಾಃ ಶ್ರೇಷ್ಠಾಃ ನರಾಣಾಂ ತು ದ್ವಿಜಾತಯಃ ॥೧॥**

ದ್ರುಪದ– ಸೃಷ್ಟರಾದ ಜೀವರಲ್ಲಿ ಪ್ರಾಣಿಗಳು ಶ್ರೇಷ್ಠರು. ಪ್ರಾಣಿಗಳಲ್ಲಿ ಬುದ್ಧಿಯುಳ್ಳ ಪ್ರಾಣಿಗಳು ಶ್ರೇಷ್ಠವಾದವು. ಬುದ್ಧಿಯುಳ್ಳ ಪ್ರಾಣಿಗಳಲ್ಲಿ ಮನುಷ್ಯರು ಶ್ರೇಷ್ಠರಾದವರು. ಮನುಷ್ಯರಲ್ಲಿ ದ್ವಿಜಾತಿಗಳು ಶ್ರೇಷ್ಠರಾದವರು.

**ದ್ವಿಜೇಷು ವೈದ್ಯಾಃ ಶ್ರೇಯಾಂಸೋ ವೈದ್ಯೇಷು ಕೃತಬುದ್ಧಯಃ ।**
**ಕೃತಬುದ್ಧಿಸ್ತು ಕರ್ತಾರಃ ಕರ್ತೃಷು ಬ್ರಹ್ಮವೇದಿನಃ ॥೨॥**

ದ್ವಿಜಾತಿಗಳಲ್ಲಿ ವೇದವಿದ್ಯೆಯನ್ನು ಬಲ್ಲವರು ಶ್ರೇಷ್ಠರು. ವೇದವಿದ್ಯಾವಂತರಲ್ಲಿ ಸುಶಿಕ್ಷಿತ ಬುದ್ಧಿಯುಳ್ಳವರು ಶ್ರೇಷ್ಠರು. ಸುಶಿಕ್ಷಿತ ಬುದ್ಧಿಯುಳ್ಳವರಲ್ಲಿ ಅದನ್ನು ಕಾರ್ಯಗತ ಮಾಡುವವರು ಶ್ರೇಷ್ಠರು. ಕಾರ್ಯಗತ ಮಾಡುವವರಲ್ಲಿ ಭಗವಂತನ ಜ್ಞಾನವನ್ನು ಪಡೆದವರು ಶ್ರೇಷ್ಠರು.

**ಸ ಭವಾನ್ ಕೃತಬುದ್ಧೀನಾಂ ಪ್ರಧಾನ ಇತಿ ಮೇ ಮತಿಃ ॥೩॥**

**ಕುಲೇನ ಚ ವಿಶಿಷ್ಟೋಽಸಿ ವಯಸಾ ಚ ಶ್ರುತೇನ ಚ ।**
**ಪ್ರಜ್ಞಯಾ ಸದೃಶಶ್ಚಾಸಿ ಶುಕ್ರೇಣಾಂಗಿರಸೇನ ಚ ॥೪॥**

ನೀವಾದರೋ ಕೃತಬುದ್ಧಿಗಳಲ್ಲಿ ಪ್ರಧಾನರಾದವರು ಎಂದು ನನ್ನ ಅಭಿಪ್ರಾಯ. ನೀವು ಕುಲದಿಂದಲೂ, ವಯಸ್ಸಿನಿಂದಲೂ ಮತ್ತು ವಿದ್ಯೆಯಿಂದಲೂ ಬಹಳ ಶ್ರೇಷ್ಠರಾಗಿದ್ದೀರಿ. ನಿಮ್ಮ ಪ್ರಜ್ಞೆಯಲ್ಲಿ ನೀವು ಶುಕ್ರಾಚಾರ್ಯರಿಗೂ ಮತ್ತು ಬೃಹಸ್ಪತ್ಯಾಚಾರ್ಯರಿಗೂ ಸದೃಶರಾಗಿದ್ದೀರಿ.

**ವಿದಿತಂ ಚಾಪಿ ತೇ ಸರ್ವಂ ಯಥಾವೃತ್ತಃ ಸ ಕೌರವಃ ।**
**ಪಾಂಡವಶ್ಚ ಯಥಾವೃತ್ತಃ ಕುಂತೀಪುತ್ರೋ ಯುಧಿಷ್ಠಿರಃ ॥೫॥**

ನಿಮಗೆ ಕೌರವನ ಸ್ವಭಾವವು ಎಂತಹುದು ಎಂದೂ, ಕುಂತೀಪುತ್ರನಾದ ಪಾಂಡವನಾದ ಯುಧಿಷ್ಠಿರನ ಸ್ವಭಾವವು ಎಂತಹದು ಎಂದೂ ತಿಳಿದಿದೆ.

**ಧೃತರಾಷ್ಟ್ರಸ್ಯ ವಿದಿತೇ ವಂಚಿತಾಃ ಪಾಂಡವಾಃ ಪರೈಃ ।**
**ವಿದುರೇಣಾನುನೀತೋಽಪಿ ಪುತ್ರಮೇವಾನುವರ್ತತೇ ॥೬॥**

ಧೃತರಾಷ್ಟ್ರನಿಗೆ ಗೊತ್ತಿರುವಂತೆಯೇ ಪಾಂಡವರು ದುರ್ಯೋಧನಾದಿಗಳಿಂದ ವಂಚಿಸಲ್ಪಟ್ಟರು. ವಿದುರನು ಬುದ್ಧಿಯ ಮಾತುಗಳನ್ನು ಹೇಳಿದರೂ ಧೃತರಾಷ್ಟ್ರನು ಪುತ್ರನನ್ನೇ ಅನುಸರಿಸುತ್ತಾನೆ.

**ಶಕುನಿರ್ಬುದ್ಧಿಪೂರ್ವಂ ಹಿ ಕುಂತೀಪುತ್ರಂ ಸಮಾಹ್ವಯತ್ ।**
**ಅನಕ್ಷಜ್ಞಂ ಮತಾಕ್ಷಃ ಸನ್ ಕ್ಷತ್ರವೃತ್ತೇ ಸ್ಥಿತಂ ಶುಚಿಮ್ ॥೭॥**

ಅಕ್ಷವಿದ್ಯೆಯನ್ನು ತಿಳಿದವನೂ, ಕ್ಷತ್ರಿಯಧರ್ಮದಲ್ಲಿ ನಿರತನಾದವನೂ ಮತ್ತು ಶುಚಿಯೂ ಆದ ಕುಂತೀಪುತ್ರನಾದ ಯುಧಿಷ್ಠಿರನನ್ನು ಅಕ್ಷವಿದ್ಯೆಯನ್ನು ಬಲ್ಲ ಶಕುನಿಯು ಬುದ್ಧಿಪೂರ್ವಕವಾಗಿ ದ್ಯೂತಕ್ಕೆ ಆಹ್ವಾನ ಮಾಡಿದನು.

**ತೇ ತಥಾ ವಂಚಯಿತ್ವಾ ತು ಧರ್ಮರಾಜಂ ಯುಧಿಷ್ಠಿರಮ್ ।**
**ನ ಕಸ್ಯಾಂಚಿದವಸ್ಥಾಯಾಂ ರಾಜ್ಯಂ ದಾಸ್ಯಂತಿ ವೈ ಸ್ವಯಮ್ ॥೮॥**

ಅವರು ಯುಧಿಷ್ಠಿರನಿಗೆ ಆ ರೀತಿಯಲ್ಲಿ ವಂಚನೆ ಮಾಡಿ ಯಾವ ಕಾರಣದಿಂದಲೂ ಸ್ವತಃ ತಾವೇ ರಾಜ್ಯವನ್ನು ಕೊಡುವುದಿಲ್ಲ.

**ಭವಾಂಸ್ತು ಧರ್ಮಸಂಯುಕ್ತಂ ಧೃತರಾಷ್ಟ್ರಂ ಬ್ರುವನ್ ವಚಃ ।**
**ಮನಾಂಸಿ ತಸ್ಯ ಯೋಧಾನಾಂ ಧ್ರುವಮಾರ್ಜವಯಿಷ್ಯತಿ ॥೯॥**

ನೀವಾದರೂ ಧೃತರಾಷ್ಟ್ರನಿಗೆ ಧರ್ಮಯುಕ್ತವಾದ ಮಾತುಗಳನ್ನು ಆಡುತ್ತಾ ದುರ್ಯೋಧನನ ಯೋಧರ ಮನಸ್ಸನ್ನು ವಕ್ರತೆ ಇಲ್ಲದಂತೆ ಮಾಡಬೇಕು.

**ವಿದುರಶ್ಚಾಪಿ ತದ್ವಾಕ್ಯಂ ಸಾಧಯಿಷ್ಯತಿ ತಾವಕಮ್ ।**
**ಭೀಷ್ಮದ್ರೋಣಕೃಪಾದೀನಾಂ ಭೇದಂ ಸಂಜನಯಿಷ್ಯತಿ ॥೧೦॥**

ವಿದುರನೂ ಸಹ ನಿಮ್ಮ ವಾಕ್ಯವನ್ನು ಸಮರ್ಥನೆ ಮಾಡುತ್ತಾನೆ. ಮತ್ತು ಭೀಷ್ಮ-ದ್ರೋಣ-ಕೃಪಾದಿಗಳಿಗೆ ಅಭಿಪ್ರಾಯ ಭೇದವುಂಟಾಗುವಂತೆ ಮಾಡುತ್ತಾನೆ.

ಅಮಾತ್ಯೇಷು ಚ ಭಿನ್ನೇಷು ಯೋಧೇಷು ವಿಮುಖೇಷು ಚ ।
ಪುನರೈಕಾಗ್ರ್ಯಕರಣಂ ತೇಷಾಂ ಕರ್ಮ ಭವಿಷ್ಯತಿ ॥೧೧॥

ತಮ್ಮ ಮಂತ್ರಿಗಳಲ್ಲಿ ಭೇದವುಂಟಾಗಿ, ತಮ್ಮ ಯೋಧರು ಯುದ್ಧದಿಂದ ವಿಮುಖರಾಗಿರಲು ಅವರನ್ನೆಲ್ಲಾ ಒಂದುಗೂಡಿಸಿ ಸಮಾಧಾನ ಪಡಿಸುವುದು ಕೌರವರ ಕಾರ್ಯವಾಗುವುದು.

ಏತಸ್ಮಿನ್ನಂತರೇ ಪಾರ್ಥಾಃ ಸುಖಮೇಕಾಗ್ರಬುದ್ಧಯಃ ।
ಸೇನಾಕರ್ಮ ಕರಿಷ್ಯಂತಿ ದ್ರವ್ಯಾಣಾಂ ಚೈವ ಸಂಚಯಮ್ ॥೧೨॥

ಈ ಮಧ್ಯದಲ್ಲಿ ಏಕಾಗ್ರಬುದ್ಧಿಯುಳ್ಳ ಪಾಂಡವರು ಸೈನ್ಯದ ಜಮಾವಣೆ ರೂಪವಾದ ಕಾರ್ಯವನ್ನು ಮತ್ತು ದ್ರವ್ಯಸಂಪಾದನೆಯ ಕಾರ್ಯವನ್ನು ಮಾಡುವರು.

ಭಿದ್ಯಮಾನೇಷು ಚ ಸ್ನೇಷು ಲಂಬಮಾನೇ ತಥಾ ತ್ವಯಿ ।
ನ ತಥಾ ತೇ ಕರಿಷ್ಯಂತಿ ಸೇನಾಕರ್ಮ ನ ಸಂಶಯಃ ॥೧೩॥

ತಮ್ಮವರಲ್ಲಿ ಭೇದವುಂಟಾಗಿ ನೀನು ಅಲ್ಲಿಯೇ ವಾಸ ಮಾಡುತ್ತಿರಲು ಅವರು ಸೇನಾಕರ್ಮವನ್ನು ಮಾಡುವುದಿಲ್ಲ ಎಂಬ ವಿಷಯದಲ್ಲಿ ಸಂಶಯವಿಲ್ಲ.

ಏತತ್ ಪ್ರಯೋಜನಂ ಚಾತ್ರ ಪ್ರಾಪ್ಯಾನ್ಯೇನೋಪಲಭ್ಯತೇ ।
ಸಂಗತ್ಯ ಧೃತರಾಷ್ಟ್ರಶ್ಚ ಕುರ್ಯಾದ್ ಧರ್ಮ್ಯಂ ವಚಸ್ತವ ॥೧೪॥

ಸಂಧಿಕಾರ್ಯಕ್ಕೆ ದೂತನಾಗಿ ಹೋಗಿರುವುದರಿಂದ ಸೇನಾಕರ್ಮವನ್ನು ಅವರು ಮಾಡುವುದಿಲ್ಲ ಎಂಬುದೇ ನಮಗೆ ಪ್ರಯೋಜನವಾಗುತ್ತದೆ. ನಿನ್ನ ಜೊತೆಯಲ್ಲಿ ಸಮಾಗಮವನ್ನು ಹೊಂದಿ ಧೃತರಾಷ್ಟ್ರನೂ ಸಹ ನಿನ್ನ ಧರ್ಮಯುಕ್ತವಾದ ಮಾತುಗಳನ್ನು ನಡೆಸಿಕೊಡಬಹುದು.

ಸ ಭವಾನ್ ಧರ್ಮಯುಕ್ತಶ್ಚ ಸ್ಥವಿರಶ್ಚ ವಿಶೇಷವಿತ್ ।
ಕೃಪಾಲೇಷು ಪರಿಕ್ಲೇಶಾನ್ ಪಾಂಡವೀಯಾನ್ ಪ್ರಕೀರ್ತಯನ್ ॥೧೫॥

ವೃದ್ಧೇಷು ಕುಲಧರ್ಮಂ ಚ ಬ್ರುವನ್ ಪೂರ್ವೈರನುಷ್ಠಿತಮ್ ।
ವಿಭೇತ್ಸ್ಯತಿ ಮನಾಂಸ್ಯೇಷಾಮಿತಿ ಮೇ ನಾತ್ರ ಸಂಶಯಃ ॥೧೬॥

ಅಂತಹ ನೀನು ಧರ್ಮಯುಕ್ತನೂ, ವೃದ್ಧನೂ ಮತ್ತು ವಿದ್ವಾಂಸನೂ ಆಗಿದ್ದೀಯೆ. ಅಲ್ಲಿರುವ ಕೃಪಾಲುಗಳಲ್ಲಿ ಪಾಂಡವರ ವನವಾಸಾದಿಗಳ ಪರಿಕ್ಲೇಶವನ್ನು ಹೇಳುತ್ತಾ, ಹಿರಿಯರನ್ನು ಕುರಿತು ಹಿಂದಿನವರು ಮಾಡಿದ ಕುಲಧರ್ಮವನ್ನು ತಿಳಿಸುತ್ತಾ, ನೀವು ಅವರ ಮನಸ್ಸಿನಲ್ಲಿ ಪರಸ್ಪರ ವಿರೋಧವನ್ನು ಉಂಟುಮಾಡುವಿರಿ ಎಂಬ ವಿಷಯದಲ್ಲಿ ನನಗೆ ಸಂಶಯವಿಲ್ಲ.

**ನ ಚ ತೇಭ್ಯೋ ಭಯಂ ತೇಽಸ್ತಿ ಬ್ರಾಹ್ಮಣೋ ಹ್ಯಸಿ ವೇದವಿತ್ ।**
**ದೂತಕರ್ಮಣಿ ಯುಕ್ತಶ್ಚ ಸ್ಥವಿರಶ್ಚ ವಿಶೇಷತಃ ॥೧೭॥**

ನಿಮಗೆ ಅವರಿಂದ ಯಾವ ಭಯವೂ ಇಲ್ಲ. ಏಕೆಂದರೆ ನೀವು ಬ್ರಾಹ್ಮಣರಾಗಿದ್ದೀರಿ. ರಾಯಭಾರಿಯಾಗಿ ಹೋಗುತ್ತಿದ್ದೀರಿ ಮತ್ತು ವೃದ್ಧರಾಗಿದ್ದೀರಿ.

**ಸ ಭವಾನ್ ಪುಷ್ಯಯೋಗೇನ ಮುಹೂರ್ತೇನ ಜಯೇನ ಚ ।**
**ಕೌರವೇಯಾನ್ ಪ್ರಯಾತ್ವಾಶು ಕೌಂತೇಯಸ್ಯಾರ್ಥಸಿದ್ಧಯೇ ॥೧೮॥**

ಮತ್ತು ನೀವು ಸದ್ಯದಲ್ಲಿಯೇ ಚಂದ್ರನಿಗೆ ಪುಷ್ಯನಕ್ಷತ್ರದಲ್ಲಿರುವಾಗ ಜಯಪ್ರದವಾದ ಮುಹೂರ್ತದಲ್ಲಿ ಕುಂತೀಪುತ್ರನಾದ ಧರ್ಮರಾಜನ ಅರ್ಥಸಿದ್ಧಿಗಾಗಿ ಕೌರವರ ಸಮೀಪಕ್ಕೆ ಹೋಗಬೇಕು.

**ವೈಶಂಪಾಯನಃ**

**ತಥಾಽನುಶಿಷ್ಟಃ ಪ್ರಯಯೌ ದ್ರುಪದೇನ ಮಹಾತ್ಮನಾ ।**
**ಪುರೋಧಾ ವೃತ್ತಸಂಪನ್ನೋ ನಗರಂ ನಾಗಸಾಹ್ವಯಮ್ ॥೧೯॥**

**ವೈಶಂಪಾಯನ–** ಮಹಾತ್ಮನಾದ ದ್ರುಪದನಿಂದ ಹಾಗೆ ಅನುಶಿಷ್ಟಗೊಂಡ ಒಳ್ಳೆಯ ನಡತೆಯುಳ್ಳ ಪುರೋಹಿತರು ಹಸ್ತಿನಾವತಿನಗರವನ್ನು ಕುರಿತು ಪ್ರಯಾಣವನ್ನು ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಷಷ್ಠೋಽಧ್ಯಾಯಃ ॥

॥ ಸೇನೋದ್ಯೋಗಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಆರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

## ಮಹಾಭಾರತತಾತ್ಪರ್ಯನಿರ್ಣಯಃ - ಅಧ್ಯಾಯ ೨೪

ತತಃ ಸಹೈವ ಯದುಭಿಃ ಕೃಷ್ಣಂ ದ್ವಾರಾವತೀಂ ಗತಮ್ ।
ಯುದ್ಧಸಾಹಾಯ್ಯಮಿಚ್ಛಂತೌ ಧಾರ್ತರಾಷ್ಟ್ರಧನಂಜಯೌ ॥೧೩॥

ಯುಗಪದ್ ಯಯತುಸ್ತತ್ರ ವೇಗೇನಾಜಯದರ್ಜುನಮ್ ।
ದುರ್ಯೋಧನಃ ಶಿರಸ್ಥಾನ ಆಸೀನೋಽಭೂದ್ಧರೇಸ್ತದಾ ।
ದರ್ಪಾನ್ನಾಹಂ ರಾಜರಾಜ ಉಪಾಸ್ಯೇ ಪಾದಯೋರಿತಿ ॥೧೪॥

ಆದರಿಂದ ದುರ್ಯೋಧನ ಮತ್ತು ಅರ್ಜುನರಿಬ್ಬರೂ ಯುದ್ಧಕ್ಕೆ ಸಹಾಯವನ್ನು ಬಯಸಿ ಅಕಸ್ಮಾತ್ ಏಕಕಾಲದಲ್ಲಿ ಕೃಷ್ಣನ ಬಳಿ ಹೊರಟರು. ಕೃಷ್ಣ ಆಗ ಯಾದವರೊಂದಿಗೆ ದ್ವಾರಕೆಯಲ್ಲಿ ಇದ್ದ. ದುರ್ಯೋಧನ ವೇಗದಲ್ಲಿ ಅರ್ಜುನನನ್ನು ಮೀರಿಸಿದ. ನಾನು ರಾಜರಿಗೆ ರಾಜ. ಕೃಷ್ಣನ ಕಾಲುಗಳ ಬಳಿ ಕುಳಿತುಕೊಳ್ಳಲಾರೆ ಎಂದು ಅಹಂಕಾರದಿಂದ ತಲೆಯ ಬಳಿಯೆ ಕುಳಿತುಕೊಂಡ.

ತಯೋರಾಗಮನಂ ಪೂರ್ವಂ ಜ್ಞಾತ್ವೈವ ಹಿ ಹರಿಃ ಪ್ರಭುಃ ।
ಅಸುಪ್ತಃ ಸುಪ್ತವಚ್ಚಿಶ್ಯೇ ತತ್ರಾತಿಷ್ಠದ್ ಧನಂಜಯಃ ॥೧೫॥

ಪ್ರಣಮ್ಯ ಪಾದಯೋಃ ಪ್ರಹ್ವೋ ಭಕ್ತ್ಯುದ್ರೇಕಾತ್ ಕೃತಾಂಜಲಿಃ ॥೧೬॥

ಅರ್ಜುನ ದುರ್ಯೋಧನರಿಬ್ಬರ ಆಗಮನವನ್ನು ಮೊದಲಿಗೆ ತಿಳಿದೇ ಇದ್ದ ಪ್ರಭು ಶ್ರೀಕೃಷ್ಣ ನಿದ್ರೆ ಇಲ್ಲದವನಾದರೂ ನಿದ್ರಿಸುವನಂತೆ ಮಲಗಿದ್ದ. ಅರ್ಜುನ ಭಕ್ತ್ಯುದ್ರೇಕದಿಂದ ಕೃಷ್ಣನ ಪಾದಗಳಿಗೆ ನಮಿಸಿ ಬಾಗಿ ಕೈಮುಗಿದು ನಿಂತುಕೊಂಡ.

ತಮೈಕ್ಷತ್ ಪ್ರಥಮಂ ದೇವೋ ಜಾನನ್ನಪಿ ಸುಯೋಧನಮ್ ।
ಸ್ವಾಗತಂ ಫಲ್ಗುನೇತ್ಯುಕ್ತೇ ಪೂರ್ವಮಾಗಾಮಹಂ ತ್ವಿತಿ ॥೧೭॥

ಆಹ ದುರ್ಯೋಧನಸ್ತಂ ಚ ಸ್ವಾಗತೇನಾಭ್ಯಪೂಜಯತ್ ॥೧೮॥

ದುರ್ಯೋಧನ ಮೊದಲಿಗೆ ಬಂದಿದ್ದನ್ನು ತಿಳಿದೂ ಕೂಡ ಶ್ರೀಕೃಷ್ಣ ಮೊದಲಿಗೆ ಅರ್ಜುನನನ್ನು ಕಂಡು 'ಅರ್ಜುನ! ನಿನಗೆ ಸ್ವಾಗತ' ಎಂದ. ದುರ್ಯೋಧನನೆಂದ, 'ನಾನೇ ಮೊದಲಿಗೆ ಬಂದಿರುವೆ' ಶ್ರೀಕೃಷ್ಣ ಅವನಿಗೂ ಸ್ವಾಗತ ಹೇಳಿ ಸತ್ಕರಿಸಿದ.

ತಯೋರಾಗಮನೇ ಹೇತುಂ ಶ್ರುತ್ವಾ ಪ್ರಾಹ ಜನಾರ್ದನಃ ।
ಏಕಃ ಪೂರ್ವಾಗತೋಽತ್ರಾನ್ಯಃ ಪೂರ್ವದೃಷ್ಟೋ ಮಯಾ ಯತಃ॥೧೯॥

ಸಮಂ ಕರಿಷ್ಯೇ ಯುವಯೋರೇಕತ್ರಾಹಂ ನಿರಾಯುಧಃ ।
ಅನ್ಯತ್ರ ದಶಲಕ್ಷಂ ಮೇ ಪುತ್ರಾಃ ಶೂರಾಃ ಪದಾತಯಃ ॥೨೦॥

ಶ್ರೀಕೃಷ್ಣ ಅರ್ಜುನ ದುರ್ಯೋಧನರಿಬ್ಬರ ಆಗಮನದ ಉದ್ದೇಶವನ್ನೂ ಕೇಳಿ 'ಒಬ್ಬ ಮೊದಲಿಗೆ ಬಂದಿದ್ದಾನೆ. ಒಬ್ಬ ಮೊದಲಿಗೆ ಕಣ್ಣಿಗೆ ಬಿದ್ದಿದ್ದಾನೆ. ಅದರಿಂದ ನಿಮಗಿಬ್ಬರಿಗೂ ಸಮಾನವಾಗಿಯೆ ಸಹಾಯ ಮಾಡುವೆನು. ಒಂದು ಕಡೆ ನಿರಾಯುಧನಾದ ನಾನಿರುವೆ. ಇನ್ನೊಂದು ಕಡೆ ಹತ್ತು ಲಕ್ಷಮಂದಿ ಶೂರರಾದ ನನ್ನ ಮಕ್ಕಳ ಸೈನ್ಯ' ಎಂದ.

ಇತ್ಯುಕ್ತೇ ಫಲ್ಗುನಃ ಕೃಷ್ಣಂ ವವ್ರೇ ತದ್ಭಕ್ತಿಮಾನ್ ಯತಃ ।
ಅನ್ಯಸ್ತತ್ರಾಭಕ್ತಿಮತ್ವಾದ್ ವವ್ರೇ ಗೋಪಾನ್ ಪ್ರಯುಧ್ಯತಃ ॥೨೧॥

ಶ್ರೀಕೃಷ್ಣ ಹೀಗೆ ಹೇಳಿದಾಗ ಅರ್ಜುನ ಶ್ರೀಕೃಷ್ಣನನ್ನು ಸ್ವೀಕರಿಸಿದ. ಏಕೆಂದರೆ ಅವನು ಕೃಷ್ಣನಲ್ಲಿ ಭಕ್ತಿ ಉಳ್ಳವ. ದುರ್ಯೋಧನ ಅವನಲ್ಲಿ ಭಕ್ತಿರಹಿತನಾದ್ದರಿಂದ ಯೋಧರಾದ ಗೋಪಾಲಕರನ್ನೇ ಆರಿಸಿಕೊಂಡ.

ಪಾರ್ಥಾನಾಮೇವ ಸಾಹಾಯ್ಯಂ ಕರಿಷ್ಯನ್ನಪಿ ಕೇಶವಃ ।
ತಸ್ಯಾಭಕ್ತಿಂ ದರ್ಶಯಿತುಂ ಚಕ್ರೇ ಸಮವದೀಶ್ವರಃ ॥೨೨॥

ತತಃ ಪಾರ್ಥೇನ ಸಹಿತಃ ಪಾಂಡವಾನ್ ಕೇಶವೋ ಯಯೌ ॥೨೩॥

ಶ್ರೀಕೃಷ್ಣ ಪಾಂಡವರಿಗೆ ಮಾತ್ರವೆ ಸಹಾಯ ಮಾಡುವವನಾಗಿದ್ದರೂ ದುರ್ಯೋಧನನ ಅಭಕ್ತಿಯನ್ನು ಲೋಕಕ್ಕೆ ತೋರಿಸುವುದಕ್ಕಾಗಿ ಸಮಾನತೆಯ ನಟನೆಯನ್ನು ಮಾಡಿದ. ಬಳಿಕ ಅರ್ಜುನಸಮೇತನಾಗಿ ಕೃಷ್ಣ ಪಾಂಡವರ ಬಳಿಗೆ ನಡೆದ.

★ ★ ★ ★ ★

# ಏಳನೆಯ ಅಧ್ಯಾಯ

ದ್ವಾರಕೆಗೆ ಹೋಗಿ ಅರ್ಜುನ, ಮತ್ತು ದುರ್ಯೋಧನರಿಂದ
ಕೃಷ್ಣನ ಸಹಾಯಯಾಚನೆ.

**ವೈಶಂಪಾಯನಃ**

**ಪುರೋಹಿತಂ ತೇ ಪ್ರಸ್ಥಾಪ್ಯ ನಗರಂ ನಾಗಸಾಹ್ವಯಮ್ ।**
**ದೂತಾನ್ ಪ್ರಸ್ಥಾಪಯಾಮಾಸುಃ ಪಾರ್ಥಿವೇಭ್ಯಸ್ತತಸ್ತತಃ ॥೧॥**

ವೈಶಂಪಾಯನ– ವಿರಾಟ-ದ್ರುಪದಾದಿಗಳು ಹಸ್ತಿನಪುರಕ್ಕೆ ಪುರೋಹಿತನನ್ನು ಕಳುಹಿಸಿ ಬೇರೆ ರಾಜರ ಬಳಿಗೆ ತಮ್ಮ ದೂತರನ್ನು ಕಳುಹಿಸಿದರು.

**ಪ್ರಸ್ಥಾಪ್ಯ ದೂತಾನನ್ಯತ್ರ ದ್ವಾರಕಾಂ ಪುರುಷರ್ಷಭಃ ।**
**ಸ್ವಯಂ ಜಗಾಮ ಕೌರವ್ಯಃ ಕುಂತೀಪುತ್ರೋ ಧನಂಜಯಃ ॥೨॥**

ಕುರುಕುಲಪ್ರಸೂತನೂ, ಪುರುಷಶ್ರೇಷ್ಠನೂ, ಕುಂತೀಪುತ್ರನೂ ಆದ ಧನಂಜಯನು ಬೇರೆಯ ಕಡೆಗೆ ದೂತರನ್ನು ಕಳುಹಿಸಿ ದ್ವಾರಕಾಪಟ್ಟಣಕ್ಕೆ ತಾನೇ ಹೋದನು.

**ಗತೇ ದ್ವಾರಾವತೀಂ ಕೃಷ್ಣೇ ಬಲದೇವೇ ಚ ಮಾಧವೇ ।**
**ಸಹ ವೃಷ್ಣ್ಯಂಧಕೈಃ ಸರ್ವೈಭೋ೯ಜೈಶ್ಚ ಶತಶಸ್ತದಾ ॥೩॥**

**ಸರ್ವಮಾಗಮಯಾಮಾಸ ಪಾಂಡವಾನಾಂ ವಿಚೇಷ್ಟಿತಮ್ ।**
**ಧೃತರಾಷ್ಟ್ರಾತ್ಮಜೋ ರಾಜಾ ಗೂಢೈಃ ಪ್ರಣಿಹಿತೈಶ್ಚರೈಃ ॥೪॥**

ಮಧುಕುಲೋತ್ಪನ್ನರಾದ ಕೃಷ್ಣ-ಬಲರಾಮರು ನೂರಾರು ಸಂಖ್ಯೆಯಲ್ಲಿ ಬಂದಿದ್ದ ವೃಷ್ಣಿಗಳು, ಅಂಧಕರು ಮತ್ತು ಸರ್ವಭೋಜರ ಜೊತೆಯಲ್ಲಿ ದ್ವಾರಕಾ ಪಟ್ಟಣಕ್ಕೆ ಹೋಗುತ್ತಿರಲು ಧೃತರಾಷ್ಟ್ರಪುತ್ರನಾದ ದುರ್ಯೋಧನನು ತಾನು ನೇಮಿಸಿದ್ದ ಗೂಢಚಾರರ ಮುಖಾಂತರ ಪಾಂಡವರ ಎಲ್ಲಾ ಕ್ರಿಯೆಗಳನ್ನೂ ತಿಳಿದನು.

**ಸ ಶ್ರುತ್ವಾ ಮಾಧವಂ ಯಾಂತಂ ಸದಶ್ವೈರನಿಲೋಪಮೈಃ ।**
**ಬಲೇನ ನಾತಿಮಹತಾ ದ್ವಾರಕಾಮಭ್ಯಯಾತ್ ಪುರೀಮ್ ॥೫॥**

ಕೃಷ್ಣನು ವಾಯುವೇಗವುಳ್ಳ ಶ್ರೇಷ್ಠವಾದ ಕುದುರೆಗಳಿಂದ ದ್ವಾರಕಾ ಪಟ್ಟಣಕ್ಕೆ ಹಿಂದಿರುಗುತ್ತಿದ್ದಾನೆಂದು ಕೇಳಿದ ಅವನು ಅಲ್ಪಸೈನ್ಯವನ್ನು ತೆಗೆದುಕೊಂಡು ದ್ವಾರಕಾ ಪಟ್ಟಣಕ್ಕೆ ಬಂದನು.

ತಮೇವ ದಿವಸಂ ಚಾಪಿ ಕೌಂತೇಯಃ ಪಾಂಡುನಂದನಃ ।
ಆನರ್ತನಗರೀಂ ರಮ್ಯಾಂ ಜಗಾಮಾಶು ಧನಂಜಯಃ ॥೬॥

ಪಾಂಡುನಂದನನೂ, ಕುಂತೀಪುತ್ರನೂ ಆದ ಧನಂಜಯನೂ ಸಹ ಅದೇ ದಿವಸವೇ ಸುಂದರವಾದ ದ್ವಾರಕಾ ಪಟ್ಟಣಕ್ಕೆ ಶೀಘ್ರವಾಗಿ ಬಂದನು.

ತೌ ಯಾತ್ವಾ ಪುರುಷವ್ಯಾಘ್ರೌ ವಾರ್ಷ್ಣೇಯಮಭಿಜಗ್ಮತುಃ ।
ಸುಪ್ತಂ ಮಹತಿ ಪರ್ಯಂಕೇ ಪರಾರ್ಧ್ಯಾಸ್ತರಣಾಸ್ತತೇ ॥೭॥

ಪುರುಷವ್ಯಾಘ್ರರಾದ ಅವರಿಬ್ಬರೂ ಬೆಲೆಬಾಳುವ ಹಾಸುಗಳುಳ್ಳ ಸುಪ್ಪತ್ತಿಗೆಯಲ್ಲಿ ಮಲಗಿದ್ದ ವೃಷ್ಣಿಕುಲಸಂಭೂತನಾದ ಕೃಷ್ಣನನ್ನು ಸಮೀಪಿಸಿದರು.

ದುರ್ಯೋಧನಸ್ತು ಪ್ರಥಮಂ ವಾಸುದೇವಮುಪಾಶ್ರಯತ್ ।
ಉಚ್ಚೈರ್ವತಶ್ಚ ಕೃಷ್ಣಸ್ಯ ನಿಷಸಾದ ವರಾಸನೇ ॥೮॥

ದುರ್ಯೋಧನನು ಮೊದಲು ಕೃಷ್ಣನ ಸಮೀಪಕ್ಕೆ ಬಂದನು. ಅವನು ಕೃಷ್ಣನ ತಲೆಯ ಬಳಿ ಇದ್ದ ಎತ್ತರವಾದ ಆಸನದಲ್ಲಿ ಕುಳಿತನು.

ತತಃ ಕಿರೀಟೀ ತಸ್ಯಾನು ಪ್ರವಿವೇಶ ಮಹಾಮನಾಃ ।
ಪಶ್ಚಾದ್ದೇಶೇನ ಸ ಕೃಷ್ಣಸ್ಯ ಪ್ರಹ್ವೋऽತಿಷ್ಠತ್ ಕೃತಾಂಜಲಿಃ ॥೯॥

ಮಹಾಮನಸ್ಸುಳ್ಳ ಅರ್ಜುನನು ಅನಂತರ ಪ್ರವೇಶಿಸಿದನು. ಅವನು ಕೃಷ್ಣನ ಪಾದದ ಬಳಿ ಕೈಗಳನ್ನು ಮುಗಿದು ವಿನಯದಿಂದ ನಿಂತನು.

ಪ್ರತಿಬುದ್ಧಃ ಸ ವಾರ್ಷ್ಣೇಯೋ ದದರ್ಶಾಗ್ರೇ ಕಿರೀಟಿನಮ್ ।
ಪಶ್ಚಾದ್ ದುರ್ಯೋಧನಂ ಶೌರಿರಪಶ್ಯದಮಿತದ್ಯುತಿಃ ॥೧೦॥

ಎಚ್ಚರಗೊಂಡ ಕೃಷ್ಣನು ಎದುರಿಗೆ ನಿಂತಿದ್ದ ಅರ್ಜುನನನ್ನು ಮೊದಲು ನೋಡಿದನು. ಅನಂತರ ಅಪಾರದ್ಯುತಿಯುಳ್ಳ ಶೌರಿಯಾದ ಅವನು ದುರ್ಯೋಧನನನ್ನು ನೋಡಿದನು.

ಸ ತಯೋಃ ಸ್ವಾಗತಂ ಪೃಷ್ಟ್ವಾ ಯಥಾರ್ಹಂ ಪ್ರತಿಪೂಜ್ಯ ತೌ ।
ಪಪ್ರಚ್ಛ ತೌ ಮಹಾಬಾಹೂ ಕಿಂ ಕಾರ್ಯಂ ಯುವಯೋರಿತಿ ॥೧೧॥

ತತೋ ದುರ್ಯೋಧನಃ ಕೃಷ್ಣಮಿದಂ ವಚನಮಬ್ರವೀತ್ ॥೧೨॥

ಅವನು ಅವರಿಬ್ಬರಿಗೂ ಯಥೋಚಿತವಾಗಿ ಸತ್ಕಾರವನ್ನು ಮಾಡಿ ಆ ಮಹಾಬಾಹುಗಳನ್ನು ಕುಳಿತು ನಿಮಗೆ ನನ್ನಿಂದ ಏನಾಗಬೇಕಾಗಿದೆ ಎಂದು ಕೇಳಿದನು. ಆಗ ದುರ್ಯೋಧನನು ಕೃಷ್ಣನನ್ನು ಕುರಿತು ಈ ಮಾತನ್ನು ಆಡಿದನು.

ವಿಗ್ರಹೇಽಸ್ಮಿನ್ ಭವಾನ್ ಸಾಹ್ಯಂ ಮಮ ದಾತುಮಿಹಾರ್ಹಸಿ ।
ಸಮಂ ಹಿ ಭವತಃ ಸಖ್ಯಂ ಮಯಿ ಚೈವಾರ್ಜುನೇಽಪಿ ಚ ॥೧೩॥

ತಥಾ ಸಂಬಂಧಕಂ ತುಲ್ಯಮಸ್ಮಾಕಂ ತ್ವಯಿ ಮಾಧವ ॥೧೪॥

ಅಹಂ ಚಾಭಿಗತಃ ಪೂರ್ವಂ ತ್ವಾಮದ್ಯ ಮಧುಸೂದನ ।
ಪೂರ್ವಂ ಚಾಭಿಗತಾಃ ಸಂತೋ ಭಜಂತೇ ಪೂರ್ವಸಾರಿಣಃ ॥೧೫॥

ಈಗ ಮುಂದೆ ಜರುಗಲಿರುವ ಈ ಯುದ್ಧದಲ್ಲಿ ನೀನು ನನಗೆ ಸಹಾಯವನ್ನು ಮಾಡಬೇಕು. ಏಕೆಂದರೆ ನಿನಗೆ ನನ್ನಲ್ಲಿಯೂ ಮತ್ತು ಅರ್ಜುನನಲ್ಲಿಯೂ ಸಮಾನವಾದ ಸ್ನೇಹವಿದೆ ಮತ್ತು ಮಾಧವನೇ, ನಿನಗೂ ಮತ್ತು ನಮ್ಮಿಬ್ಬರಿಗೂ ಇರುವ ಕುಲದ ಸಂಬಂಧವೂ ಸಹ ಸಮಾನವಾಗಿದೆ. ಮಧುಸೂದನನೇ, ಈ ದಿನ ನಾನು ಮೊದಲು ಬಂದೆನು. ಸಜ್ಜನರು ಮೊದಲು ಬಂದವರಿಗೆ ಮೊದಲು ಸತ್ಕರಿಸುತ್ತಾರೆ.

ತ್ವಂ ಚಾಪಿ ಪುರುಷವ್ಯಾಘ್ರ ಸತ್ತಮೋಽಸಿ ಸತಾಮಪಿ ।
ಸತತಂ ಸಮ್ಮತೋ ಲೋಕೇ ಸದ್‌ವೃತ್ತಮನುಪಾಲಯ ॥೧೬॥

ಪುರುಷವ್ಯಾಘ್ರನೇ, ನೀನೂ ಸಹ ಸಜ್ಜನರಲ್ಲಿ ಬಹಳ ಶ್ರೇಷ್ಠನಾದವನು ಎಂದು ಯಾವಾಗಲೂ ಲೋಕದಲ್ಲಿ ಸಮ್ಮತನಾಗಿದ್ದೀಯೆ. ಆದ್ದರಿಂದ ಸಜ್ಜನರ ನಡತೆಯನ್ನು ಅನುಸರಿಸು.

## ವೈಶಂಪಾಯನಃ

ಧಾರ್ತರಾಷ್ಟ್ರಸ್ಯ ತದ್ವಾಕ್ಯಂ ಶ್ರುತ್ವಾऽಮರವರೋತ್ತಮಃ ।
ಪುರುಷೋತ್ತಮಸ್ತಿ ದಂ ವಾಕ್ಯಂ ದುರ್ಯೋಧನಮಭಾಷತ ॥೧೭॥

ವೈಶಂಪಾಯನ– ದೇವದೇವೋತ್ತಮನೂ, ಪುರುಷೋತ್ತಮನೂ ಆದ ಕೃಷ್ಣನು ದುರ್ಯೋಧನನ ಈ ಮಾತನ್ನು ಕೇಳಿ ಅವನನ್ನು ಕುರಿತು ಈ ಮಾತನ್ನಾಡಿದನು.

ಭವಾನಭಿಗತಃ ಪೂರ್ವಮತ್ರ ಮೇ ನಾಸ್ತಿ ಸಂಶಯಃ ।
ಮಯಾ ತು ದೃಷ್ಟಃ ಪ್ರಥಮಂ ಕುಂತೀಪುತ್ರೋ ಧನಂಜಯಃ ॥೧೮॥

ನೀನು ಮೊದಲು ಬಂದಿದ್ದೀಯೆ ಎಂಬ ವಿಷಯದಲ್ಲಿ ನನಗೆ ಸಂಶಯವಿಲ್ಲ. ಆದರೆ ನಾನು ಮೊದಲು ಕುಂತೀಪುತ್ರನಾದ ಧನಂಜಯನನ್ನು ನೋಡಿದೆನು.

ತವ ಪೂರ್ವಾಭಿಗಮನಾತ್ ಪೂರ್ವಂ ಚಾಪ್ಯಸ್ಯ ದರ್ಶನಾತ್ ।
ಸಾಹಾಯ್ಯಮುಭಯೋರೇವ ಕರಿಷ್ಯಾಮಿ ಸುಯೋಧನ ॥೧೯॥

ಸುಯೋಧನನೇ, ನೀನು ಮೊದಲು ಬಂದಿದ್ದರಿಂದ ಮತ್ತು ನಾನು ಅರ್ಜುನನನ್ನು ಮೊದಲು ನೋಡಿದುದರಿಂದ ಇಬ್ಬರಿಗೂ ಸಹಾಯವನ್ನು ಮಾಡುವೆನು.

ಪ್ರವಾರಣಂ ಚ ಬಾಲಾನಾಂ ಪೂರ್ವಂ ಕಾರ್ಯಮಿತಿ ಶ್ರುತಿಃ ।
ತಸ್ಮಾತ್ ಪ್ರವಾರಣಂ ಪೂರ್ವಮರ್ಹಃ ಪಾರ್ಥೋ ಧನಂಜಯಃ ॥೨೦॥

ಮೊದಲು ಚಿಕ್ಕವರ ಅಭೀಷ್ಟವನ್ನು ನೆರವೇರಿಸಬೇಕೆಂದು ಶ್ರುತಿ ಇದೆ. ಆದ್ದರಿಂದ ಪಾರ್ಥನಾದ ಧನಂಜಯನಿಗೆ ವರವನ್ನು ಕೇಳಲು ಮೊದಲನೆಯ ಅವಕಾಶವನ್ನು ಕೊಡಬೇಕಾಗುತ್ತದೆ.

ಮತ್ಸಂಹನನತುಲ್ಯಾನಾಂ ಗೋಪಾನಾಮರ್ಬುದಂ ಮಹತ್ ।
ನಾರಾಯಣಾ ಇತಿ ಖ್ಯಾತಾಃ ಸರ್ವೇ ಸಂಗ್ರಾಮಯೋಧಿನಃ ॥೨೧॥

ನನ್ನಂತೆ ತೇಜಸ್ಸನ್ನು ಹೊಂದಿದ್ದ ಹತ್ತುಲಕ್ಷ ಯುದ್ಧಶೂರರಾದ ಗೋಪರ ನಾರಾಯಣ ಎಂಬ ಹೆಸರಿನ ಸೈನ್ಯವು ಒಂದು ಕಡೆ.

ತೇ ವಾ ಯುಧಿ ದುರಾಧರ್ಷಾ ಭವಂತ್ಯೇಕಸ್ಯ ಸೈನಿಕಾಃ ।
ಅಯುಧ್ಯಮಾನಃ ಸಂಗ್ರಾಮೇ ನ್ಯಸ್ತಶಸ್ತ್ರೋಽಹಮೇಕತಃ ॥೨೨॥

ದುರಾಧರ್ಷರಾದ ಅವರಾದರೂ ಯುದ್ಧದಲ್ಲಿ ಒಬ್ಬನ ಸೈನಿಕರಾಗಿರುತ್ತಾರೆ. ಇನ್ನೊಂದು ಕಡೆ ಯುದ್ಧದಲ್ಲಿ ಶಸ್ತ್ರವನ್ನು ಹಿಡಿಯದೇ ಯುದ್ಧವನ್ನು ಮಾಡದಿರುವ ನಾನು.

ಆಭ್ಯಾಮನ್ಯತರಂ ಪಾರ್ಥ ಯತ್ ತೇ ಕೃತ್ಯತರಂ ಮತಮ್ ।
ತಂ ವೃಣೀತಾದ್ ಭವಾನಗ್ರೇ ಪ್ರವಾರ್ಯಸ್ತ್ವಂ ಹಿ ಧರ್ಮತಃ ॥೨೩॥

ಅರ್ಜುನನೇ, ಇವೆರಡರಲ್ಲಿ ಯಾವುದರಿಂದ ನಿನ್ನ ಕಾರ್ಯವು ನೆರವೇರುತ್ತದೆ ಎಂದು ತಿಳಿಯುತ್ತೀಯೋ ಅದನ್ನು ವರಿಸು. ಧರ್ಮದ ದೃಷ್ಟಿಯಿಂದ ಮೊದಲು ಒಲೈಸಲ್ಪಡಬೇಕಾದವನು ನೀನಷ್ಟೆ?

ಏತದ್ ವಿದಿತ್ವಾ ಕೌಂತೇಯ ವಿಚಾರ್ಯ ಚ ಪುನಃ ಪುನಃ ।
ತಾನ್ ವಾ ವರಯ ಸಾಹಾಯ್ಯೇ ಮಾಂ ಸಾಚಿವ್ಯೇಽಥವಾ ಪುನಃ ॥

ಕೌಂತೇಯನೇ, ಇದನ್ನು ತಿಳಿದು ಮತ್ತೆ ಮತ್ತೆ ವಿಚಾರ ಮಾಡಿ ನಿನ್ನ ಸಹಾಯಕ್ಕಾಗಿ ಆ ಗೋಪರನ್ನಾದರೂ ವರಿಸು ಅಥವಾ ಮಂತ್ರಿಯಾಗಿ ನನ್ನೊಬ್ಬನನ್ನೇ ವರಿಸು.

ವೈಶಂಪಾಯನಃ

ಏವಮುಕ್ತಸ್ತು ಕೃಷ್ಣೇನ ಕುಂತೀಪುತ್ರೋ ಧನಂಜಯಃ ।
ಅಯುಧ್ಯಮಾನಂ ಸಂಗ್ರಾಮೇ ವರಯಾಮಾಸ ಕೇಶವಮ್ ॥೨೫॥

ನಾರಾಯಣಮಮಿತ್ರಘ್ನಂ ಕಾಮಾಜ್ಜಾತಮಜಂ ನೃಷು ।
ದುರ್ಯೋಧನಸ್ತು ತತ್ ಸೈನ್ಯಂ ಸರ್ವಮಾವರಯತ್ ತದಾ ॥೨೬॥

ವೈಶಂಪಾಯನ– ಹೀಗೆ ಕೃಷ್ಣನಿಂದ ಹೇಳಲ್ಪಟ್ಟ ಕುಂತೀಪುತ್ರನಾದ ಧನಂಜಯನು ಯುದ್ಧದಲ್ಲಿ ಯುದ್ಧ ಮಾಡದಿರುವ, ಶತ್ರುಸಂಹಾರಕನೂ, ಜನ್ಮರಹಿತನೂ, ತನ್ನ ಇಚ್ಛೆಯಿಂದ ಮನುಷ್ಯರಲ್ಲಿ ಅವತಾರ ಮಾಡಿದವನೂ, ನಾರಾಯಣನೂ ಆದ ಕೇಶವನನ್ನು ವರಿಸಿದನು. ದುರ್ಯೋಧನನಾದರೂ ಆ ಎಲ್ಲಾ ಸೈನ್ಯವನ್ನು ವರಿಸಿದನು.

ಸಹಸ್ರಾಣಾಂ ಸಹಸ್ರಂ ತು ಯೋಧಾನಾಂ ಪ್ರಾಪ್ಯ ಭಾರತ ।
ಕೃಷ್ಣಂ ಚಾಪಹೃತಂ ಜ್ಞಾತ್ವಾ ಸಂಪ್ರಾಪ ಪರಮಾಂ ಮುದಮ್ ॥೨೭॥

ಎಲೈ ಭಾರತನೇ, ಅವನು ಒಂದುಲಕ್ಷ ಸೈನಿಕರನ್ನು ಪಡೆದು ಕೃಷ್ಣನಿಗೆ ವಂಚನೆಯನ್ನು ಮಾಡಿದ್ದೇನೆಂದು ತಿಳಿದು ಬಹಳ ಸಂತೋಷಪಟ್ಟನು.

ದುರ್ಯೋಧನಸ್ತು ತತ್ ಸೈನ್ಯಂ ಸರ್ವಮಾದಾಯ ಪಾರ್ಥಿವಃ ।
ತತೋಽಭ್ಯಯಾದ್ ಭೀಮಬಲೋ ರೌಹಿಣೇಯಂ ಮಹಾಬಲಮ್ ॥

ರಾಜನಾದ ದುರ್ಯೋಧನನಾದರೂ ಆ ಎಲ್ಲ ಸೈನ್ಯವನ್ನು ತೆಗೆದುಕೊಂಡು ಭೀಮಬಲನಾದ ಅವನು ಮಹಾಬಲನಾದ ಬಲರಾಮನ ಬಳಿಗೆ ಬಂದನು.

ಸರ್ವಂ ಚಾಗಮನೇ ಹೇತುಂ ಸ ತಸ್ಮೈ ಸನ್ನ್ಯವೇದಯತ್ ।
ಪ್ರತ್ಯುವಾಚ ತತಃ ಶೌರಿರ್ಧಾರ್ತರಾಷ್ಟ್ರಮಿದಂ ವಚಃ ॥೨೯॥

ಅವನು ಅಲ್ಲಿಗೆ ಬರಲು ಕಾರಣವನ್ನು ಬಲರಾಮನಿಗೆ ಚೆನ್ನಾಗಿ ವಿವರಿಸಿದನು. ಆಗ ಬಲರಾಮನು ದುರ್ಯೋಧನನನ್ನು ಕುರಿತು ಈ ಮಾತನ್ನಾಡಿದನು.

ಬಲದೇವಃ

ವಿದಿತಂ ತೇ ನರವ್ಯಾಘ್ರ ಸರ್ವಂ ಭವಿತುಮರ್ಹತಿ ।
ಯನ್ಮಯೋಕ್ತಂ ವಿರಾಟಸ್ಯ ಪುರಾ ವೈವಾಹಿಕೇ ತದಾ ॥೩೦॥

ಬಲದೇವ– ನರವ್ಯಾಘ್ರನೇ, ವಿರಾಟನ ಅರಮನೆಯಲ್ಲಿ ವಿವಾಹದ ಸಂದರ್ಭದಲ್ಲಿ ನಾನು ಏನು ಮಾತನಾಡಿದೆನೋ ನಿನಗೆ ತಿಳಿದ ಅದೆಲ್ಲವೂ ಹಾಗೆಯೇ ನಡೆಯುತ್ತದೆ.

ನಿಗೃಹ್ಯೋಕ್ತೋ ಹೃಷೀಕೇಶಃ ತ್ವದರ್ಥಂ ಕುರುನಂದನ ।
ತ್ವಯಾ ಸಂಬಂಧಕಂ ತುಲ್ಯಮಿತಿ ರಾಜನ್ ಪುನಃ ಪುನಃ ॥೩೧॥

ನ ಚ ತದ್ವಾಕ್ಯಮುಕ್ತಂ ವೈ ಕೇಶವಃ ಪ್ರತ್ಯಪದ್ಯತ ॥೩೨॥

ಕುರುನಂದನನೇ, ರಾಜನೇ, ನಿನಗೂ ಮತ್ತು ಅರ್ಜುನನಿಗೂ ನಮ್ಮ ಸಂಬಂಧವು ಸಮಾನವಾಗಿದೆ ಎಂದು ನಾನು ಕೃಷ್ಣನಿಗೆ ಒತ್ತಾಯ ಮಾಡಿ ಪುನಃ ಪುನಃ ಹೇಳಿದ್ದೇನೆ. ಆದರೆ ಅವನಿಗೆ ಆ ಮಾತಿನ ಅಭಿಪ್ರಾಯವು ತಿಳಿಯಲಿಲ್ಲ.

ನ ಚಾಹಮುತ್ಸಹೇ ಕೃಷ್ಣಂ ವಿನಾ ಸ್ಥಾತುಮಪಿ ಕ್ಷಣಮ್ ।
ನಾಹಂ ಸಹಾಯಃ ಪಾರ್ಥಸ್ಯ ನಾಪಿ ದುರ್ಯೋಧನಸ್ಯ ವೈ ॥೩೩॥

ಇತಿ ಮೇ ನಿಶ್ಚಿತಾ ಬುದ್ಧಿರ್ವಾಸುದೇವಮವೇಕ್ಷ್ಯ ಹ ॥೩೪॥

ನಾನು ಕೃಷ್ಣನಿಲ್ಲದೇ ಒಂದು ಕ್ಷಣವೂ ಬದುಕಲು ಬಯಸುವುದಿಲ್ಲ. ಆದ್ದರಿಂದ ನಾನು ಅರ್ಜುನನಿಗಾಗಲೀ ಅಥವಾ ದುರ್ಯೋಧನನಿಗಾಗಲೀ ಸಹಾಯ ಮಾಡುವುದಿಲ್ಲ ಎಂಬ ಈ ಬುದ್ಧಿಯು ಕೃಷ್ಣನನ್ನು ಗಮನಿಸಿ ನನಗೆ ಸ್ಥಿರವಾಗಿದೆ.

ಜಾತೋಽಸಿ ಭಾರತೇ ವಂಶೇ ಸರ್ವಪಾರ್ಥಿವಪೂಜಿತೇ ।
ಗಚ್ಛ ಯುಧ್ಯಸ್ವ ಧರ್ಮೇಣ ಕ್ಷಾತ್ರೇಣ ಪುರುಷರ್ಷಭ ॥೩೫॥

ಪುರುಷರ್ಷಭನೇ, ಎಲ್ಲ ರಾಜರಿಂದ ಪೂಜಿತವಾದ ಭರತವಂಶದಲ್ಲಿ ಹುಟ್ಟಿದ್ದೀಯೆ. ಹೋಗಿ ಧರ್ಮದಿಂದ ಯುದ್ಧವನ್ನು ಮಾಡು.

ವೈಶಂಪಾಯನಃ

ಇತ್ಯೇವಮುಕ್ತಸ್ತು ತದಾ ಪರಿಷ್ವಜ್ಯ ಹಲಾಯುಧಮ್ ।
ಕೃಷ್ಣಂ ಚಾಪಹೃತಂ ಜ್ಞಾತ್ವಾ ಯುದ್ಧಾನ್ಮೇನೇ ಜಿತಂ ಜಯಮ್ ॥೩೬॥

ವೈಶಂಪಾಯನ– ಹೀಗೆ ಹೇಳಲ್ಪಟ್ಟ ದುರ್ಯೋಧನನು ಬಲರಾಮನನ್ನು ಆಲಿಂಗಿಸಿ ಕೃಷ್ಣನು ಅಪಹೃತನಾದನೆಂದು ತಿಳಿದು ಯುದ್ಧದಲ್ಲಿ ತನಗೇ ಜಯವು ಪ್ರಾಪ್ತವಾಗಿದೆ ಎಂದು ತಿಳಿದನು.

ಸೋಽಭ್ಯಯಾತ್ ಕೃತವರ್ಮಾಣಂ ಧೃತರಾಷ್ಟ್ರಸುತೋ ನೃಪಃ ।
ಕೃತವರ್ಮಾ ದದೌ ತಸ್ಯ ಸೇನಾಮಕ್ಷೌಹಿಣೀಂ ತದಾ ॥೩೭॥

ಧೃತರಾಷ್ಟ್ರಪುತ್ರನಾದ ದುರ್ಯೋಧನನು ಆಗ ಕೃತವರ್ಮನ ಬಳಿಗೆ ಹೋದನು. ಕೃತವರ್ಮನು ಅವನಿಗೆ ತನ್ನ ಅಕ್ಷೌಹಿಣೀ ಸೈನ್ಯವನ್ನು ಕೊಟ್ಟನು.

ಸ ತೇನ ಸರ್ವಸೈನ್ಯೇನ ಭೀಮೇನ ಕುರುನಂದನಃ ।
ವೃತಃ ಪ್ರತಿಯಯೌ ಹೃಷ್ಟಃ ಸುಹೃದಃ ಸಂಪ್ರಹರ್ಷಯನ್ ॥೩೮॥

ಕುರುನಂದನನಾದ ದುರ್ಯೋಧನನು ಭಯಂಕರವಾದ ಆ ಎಲ್ಲಾ ಸೈನ್ಯವನ್ನೂ ತೆಗೆದುಕೊಂಡು ಆ ಸೈನ್ಯದಿಂದ ಪರಿವೃತನಾಗಿ ಸಂತೋಷಗೊಂಡು ಅವನ ಸುಹೃದರಿಗೆ ಸಂತೋಷವನ್ನುಂಟು ಮಾಡುತ್ತಾ ಹಿಂದಿರುಗಿದನು.

ತತಃ ಪೀತಾಂಬರಧರೋ ಜಗತ್ರಷ್ಟಾ ಜನಾರ್ದನಃ ।
ಗತೇ ದುರ್ಯೋಧನೇ ಕೃಷ್ಣಃ ಕಿರೀಟಿನಮಥಾಬ್ರವೀತ್ ॥೩೯॥

ಅಯುಧ್ಯಮಾನಃ ಕಾಂ ಬುದ್ಧಿಮಾಸ್ಥಾಯಾಹಂ ವೃತಸ್ತ್ವಯಾ ॥೪೦॥

ದುರ್ಯೋಧನನು ಹೊರಟು ಹೋದಮೇಲೆ ಪೀತಾಂಬರಧಾರಿಯೂ, ಜಗತ್ತಿನ ಸೃಷ್ಟಿಕರ್ತನೂ, ಜನಾರ್ದನನೂ ಆದ ಕೃಷ್ಣನು ಅರ್ಜುನನನ್ನು ಕುರಿತು ಯುದ್ಧ ಮಾಡದಿರುವ ನನ್ನನ್ನು ಯಾವ ಬುದ್ಧಿಯನ್ನು ಆಧರಿಸಿ ನೀನು ವರಿಸಿದೆ ಎಂದು ಕೇಳಿದನು.

ಅರ್ಜುನಃ

ಭವಾನ್ ಸಮರ್ಥಸ್ತಾನ್ ಸರ್ವಾನ್ ನಿಹಂತುಂ ನಾತ್ರ ಸಂಶಯಃ ।
ನಿಹಂತುಮಹಮಪ್ಯೇಕಃ ಸಮರ್ಥಃ ಪುರುಷರ್ಷಭ ॥೪೧॥

ಅರ್ಜುನ– ನೀನು ಅವರೆಲ್ಲರನ್ನೂ ಸಂಹರಿಸಲು ಸಮರ್ಥನಾಗಿದ್ದೀಯೆ ಎಂಬ ವಿಷಯದಲ್ಲಿ ನನಗೆ ಸಂಶಯವಿಲ್ಲ. ಪುರುಷರ್ಷಭನೇ, ನಾನೂ ಸಹ ಒಬ್ಬನೇ ಅವರನ್ನು ಸಂಹರಿಸಲು ಸಮರ್ಥನಾಗಿದ್ದೇನೆ.

ಭವಾಂಶ್ಚ ಕೀರ್ತಿಮಾನ್ ಲೋಕೇ ತದ್ಯಶಸ್ತ್ವಂ ಗಮಿಷ್ಯತಿ ।
ಯಶಸಾಂ ಚಾಹಮಪ್ಯರ್ಥೀ ತಸ್ಮಾದಸಿ ಮಯಾ ವೃತಃ ॥೪೨॥

ನಿನಗಾದರೂ ಲೋಕದಲ್ಲಿ ಯಾವಾಗಲೂ ಕೀರ್ತಿಯಿದೆ. ಆ ಯಶಸ್ಸು ಯಾವಾಗಲೂ ನಿನ್ನನ್ನೇ ಸೇರುವುದು. ನಾನೂ ಸಹ ಯಶಸ್ಸನ್ನು ಬಯಸುತ್ತೇನೆ. ಆದ್ದರಿಂದ ನಿನ್ನನ್ನು ವರಿಸಿದೆ.

ಸಾರಥ್ಯಂ ತು ತ್ವಯಾ ಕಾರ್ಯಮಿತಿ ಮೇ ಮಾನಸಂ ಸದಾ ।
ಚಿರರಾತ್ರೇಪ್ಸಿತಂ ಕಾಮಂ ತದ್ ಭವಾನ್ ಕರ್ತುಮರ್ಹತಿ ॥೪೩॥

ನೀನು ನನ್ನ ಸಾರಥಿಯಾಗಬೇಕು ಎಂದು ನನ್ನ ಮನಸ್ಸಿನಲ್ಲಿ ನಾನು ಬಹುಕಾಲದಿಂದ ಬಯಸಿದ್ದೇನೆ. ನೀನು ಆ ಇಚ್ಛೆಯನ್ನು ನಡೆಸಿಕೊಡಬೇಕು.

**ವಾಸುದೇವಃ**

**ಉಪಪನ್ನಮಿದಂ ಪಾರ್ಥ ಯತ್ ಸ್ಪರ್ಧೇಥಾ ಮಯಾ ಸಹ ।**
**ಸಾರಥ್ಯಂ ತೇ ಕರಿಷ್ಯಾಮಿ ಕಾಮಃ ಸಂಪದ್ಯತಾಂ ತವ ॥೪೪॥**

ವಾಸುದೇವ– ಅರ್ಜುನನೇ, ನನ್ನ ಜೊತೆಯಲ್ಲಿ ನೀನು ಸ್ಪರ್ಧಿಸುವುದು ನಿನಗೆ ಉಚಿತವೇ ಆಗಿದೆ. ನಿನ್ನ ಸಾರಥ್ಯವನ್ನು ಮಾಡುವೆನು. ನಿನ್ನ ಆಸೆಯು ಪೂರ್ಣವಾಗಲಿ.

**ವೈಶಂಪಾಯನಃ**

**ಏವಂ ಪ್ರಮುದಿತಃ ಪಾರ್ಥಃ ಕೃಷ್ಣೇನ ಸಹಿತಸ್ತದಾ ।**
**ವೃತೋ ದಶಾರ್ಹಪ್ರವರೈಃ ಪುನರಾಯಾದ್ ಯುಧಿಷ್ಠಿರಮ್ ॥೪೫॥**

ವೈಶಂಪಾಯನ– ಹೀಗೆ ಸಂತೋಷಗೊಂಡ ಅರ್ಜುನನು ಕೃಷ್ಣನಿಂದ ಕೂಡಿ ಕೆಲವು ದಾಶಾರ್ಹಶ್ರೇಷ್ಠರಿಂದಲೂ ಕೂಡಿಕೊಂಡು ಪುನಃ ಯುಧಿಷ್ಠಿರನ ಬಳಿಗೆ ಹಿಂದಿರುಗಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಸಪ್ತಮೋಽಧ್ಯಾಯಃ ॥

॥ ಸೇನೋದ್ಯೋಗಪರ್ವಣಿ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಏಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

## ಮಹಾಭಾರತತಾತ್ಪರ್ಯನಿರ್ಣಯಃ – ಅಧ್ಯಾಯ ೨೪

**ಶಲ್ಯಂ ಚ ಪಾಂಡವಾನೇವ ಯಾಂತಂ ಜ್ಞಾತ್ವಾ ಸುಯೋಧನಃ ।**
**ಸುಸಭಾಃ ಕಾರಯಾಮಾಸ ಸರ್ವಭೋಗಸಮನ್ವಿತಾಃ ॥೩೩॥**

**ತಾ ಯುಧಿಷ್ಠಿರಕ್ಲಪ್ತಾಃ ಸ ಮತ್ವಾ ಶಲ್ಯೋಽಬ್ರವೀದಿದಮ್ ।**
**ಯ ಏತಾಃ ಕಾರಯಾಮಾಸ ತದಭೀಷ್ಟಂ ಕರೋಮ್ಯಹಮ್ ॥೩೪॥**

ಶಲ್ಯ ಪಾಂಡವರ ಕಡೆಗೆ ಹೊರಟುದನ್ನು ತಿಳಿದು ದುರ್ಯೋಧನ ಅವನಿಗೆ ದಾರಿಯಲ್ಲಿ ಸಕಲ ಭೋಗವಸ್ತುಗಳಿಂದ ಕೂಡಿದ ಒಳ್ಳೆಯ ಸಭಾಗೃಹಗಳನ್ನು ಏರ್ಪಡಿಸಿದ. ಅವುಗಳನ್ನು ಧರ್ಮರಾಜನೇ ಏರ್ಪಡಿಸಿದ್ದನೆಂದು ಭಾವಿಸಿ ಶಲ್ಯ, 'ಇವುಗಳನ್ನು ಏರ್ಪಡಿಸಿದವನಿಗೆ ನಾನು ಅವನ ಅಭೀಷ್ಟವನ್ನು ಪೂರೈಸುವೆನು' ಎಂದು ನುಡಿದನು.

**ಲೀನಃ ಶ್ರುತ್ವಾ ಧಾರ್ತರಾಷ್ಟ್ರಃ ಸತ್ಯಂ ಕುರ್ವಿತ್ಯಭಾಷತ ।**
**ದೇಹಿ ಮೇ ಯುದ್ಧಸಾಹಾಯ್ಯಮಿತಿ ಸೋಽಪಿ ಯಶೋಽರ್ಥಯನ್ ।**
**ರಕ್ಷಾರ್ಥಮಾತ್ಮವಾಕ್ಯಸ್ಯ ತಥೇತ್ಯೇವಾಭ್ಯಭಾಷತ ॥೩೫॥**

ದುರ್ಯೋಧನ ಅಡಗಿ ಕುಳಿತು ಅದನ್ನು ಕೇಳಿ 'ನಿನ್ನ ಮಾತನ್ನು ಸತ್ಯವನ್ನಾಗಿ ಮಾಡು' ಎಂದ. 'ನನಗೆ ಯುದ್ಧದಲ್ಲಿ ಸಹಾಯ ನೀಡು' ಎಂದ. ಶಲ್ಯ ಕೀರ್ತಿಯನ್ನು ಬಯಸಿ ತನ್ನ ಮಾತನ್ನು ಉಳಿಸಿಕೊಳ್ಳುವುದಕ್ಕಾಗಿ 'ಹಾಗೇ ಆಗಲಿ' ಎಂದ.

**ಸ ಪಾಂಡವಾಂಸ್ತತೋ ಗತ್ವಾ ತೈರನುಜ್ಞಾತ ಏವ ಚ ।**
**ತೇಜೋವಧಾರ್ಥಂ ಕರ್ಣಸ್ಯ ಧನಂಜಯಕೃತೇಽರ್ಥಿತಃ ॥೩೬॥**
**ತಥೇತ್ಯುಕ್ತ್ವಾ ಯಯೌ ಧರ್ಮನಂದನಂ ಕೌರವಾನ್ ಪ್ರತಿ ॥೩೭॥**

ಬಳಿಕ ಶಲ್ಯ ಪಾಂಡವರ ಬಳಿಗೆ ಹೋಗಿ ತಾನು ಕೌರವರಿಗೆ ಸಹಾಯ ನೀಡಲು ಅವರಿಂದ ಅನುಮತಿ ಪಡೆದ. ಮತ್ತು ಅರ್ಜುನನ ಸಲುವಾಗಿ ಕರ್ಣನ ತೇಜೋವಧೆ ಮಾಡುವುದಕ್ಕೆ ಧರ್ಮರಾಜನಿಂದ ಪ್ರಾರ್ಥಿತನಾಗಿ 'ಹಾಗೇ ಆಗಲಿ' ಎಂದು ಹೇಳಿ ಕೌರವರ ಬಳಿಗೆ ಹೋದ.

★ ★ ★ ★ ★

## ಎಂಟನೆಯ ಅಧ್ಯಾಯ

ಶಲ್ಯನನ್ನು ವಂಚಿಸಿ ದುರ್ಯೋಧನನಿಂದ ಅವನ ಸಹಾಯ ಪ್ರಾಪ್ತಿ.
ಶಲ್ಯ-ಯುಧಿಷ್ಠಿರ ಸಮಾಗಮ.

**ವೈಶಂಪಾಯನಃ**

**ಶಲ್ಯಃ ಶ್ರುತ್ವಾ ತು ದೂತಾನಾಂ ಸೈನ್ಯೇನ ಮಹತಾ ವೃತಃ ।**
**ಅಭ್ಯಯಾತ್ ಪಾಂಡವಾನ್ ರಾಜನ್ ಸಹ ಪುತ್ರೈರ್ಮಹಾರಥೈಃ ॥೧॥**

**ವೈಶಂಪಾಯನ**– ಎಲೈ ರಾಜನೇ, ಶಲ್ಯನು ದೂತರ ಮುಖಾಂತರ ಎಲ್ಲ ವಿಷಯಗಳನ್ನು ತಿಳಿದು ದೊಡ್ಡ ಸೈನ್ಯವನ್ನು ತೆಗೆದುಕೊಂಡು ಮಹಾರಥರಾದ ಪುತ್ರರ ಜೊತೆಯಲ್ಲಿ ಪಾಂಡವರ ಕಡೆಗೆ ಹೊರಟನು.

**ತಸ್ಯ ಸೇನಾನಿವೇಶೋಽಭೂದ್ ಅರ್ಧ್ಯರ್ಧಮಿವ ಯೋಜನಮ್ ।**
**ತಥಾ ಹಿ ವಿಪುಲಾಂ ಸೇನಾಂ ಬಿಭರ್ತಿ ಸ ನರರ್ಷಭಃ ॥೨॥**

ಅವನ ಸೈನ್ಯವು ಬೀಡುಬಿಡಲು ಒಂದೂವರೆ ಯೋಜನವು ಬೇಕಾಗುತ್ತಿದ್ದಿತು. ಆ ನರಶ್ರೇಷ್ಠನು ಅಂತಹ ವಿಪುಲವಾದ ಸೈನ್ಯವನ್ನು ಪೋಷಿಸುತ್ತಿದ್ದನು.

**ವಿಚಿತ್ರಕವಚಾಃ ಶೂರಾ ವಿಚಿತ್ರಧ್ವಜಕಾರ್ಮುಕಾಃ ।**
**ವಿಚಿತ್ರಾಭರಣಾಃ ಸರ್ವೇ ವಿಚಿತ್ರರಥವಾಹನಾಃ ॥೩॥**

**ಸ್ವದೇಶವೇಶಾಭರಣಾ ವೀರಾಃ ಶತಸಹಸ್ರಶಃ ॥೪॥**

**ತಸ್ಯ ಸೇನಾಪ್ರಣೇತಾರೋ ಬಭೂವುಃ ಕ್ಷತ್ರಿಯರ್ಷಭಾಃ ॥೫॥**

ಅವನ ಸೈನಿಕರು ವಿಚಿತ್ರಕವಚವನ್ನು ಧರಿಸಿದವರೂ, ವಿಚಿತ್ರವಾದ ಧ್ವಜ, ಧನುಸ್ಸುಗಳನ್ನು ಉಳ್ಳವರೂ, ವಿಚಿತ್ರಾಭರಣವನ್ನು ಧರಿಸಿದವರೂ, ವಿಚಿತ್ರವಾದ ರಥ ಮತ್ತು ವಾಹನಗಳನ್ನು ಉಳ್ಳವರೂ, ತಮ್ಮ ತಮ್ಮ ದೇಶದ ವಸ್ತ್ರಾಭರಣವನ್ನು ಧರಿಸಿದವರೂ ಆಗಿ ನೂರಾರು ಸಾವಿರಾರು ಸಂಖ್ಯೆಯಲ್ಲಿ ಇದ್ದರು. ಅವರಿಗೆ ಕ್ಷತ್ರಿಯ ಶ್ರೇಷ್ಠರಾದ ಸೇನಾನಾಯಕರೂ ಇದ್ದರು.

ವ್ಯಥಯನ್ನಿವ ಭೂತಾನಿ ಕಂಪಯನ್ನಿವ ಮೇದಿನೀಮ್ ।
ಶನೈರ್ವಿಶ್ರಾಮಯನ್ ಸೇನಾಂ ಸ ಯಯೌ ಯತ್ರ ಪಾಂಡವಾಃ ॥೬॥

ಶಲ್ಯನು ಎಲ್ಲ ಪ್ರಾಣಿಗಳಿಗೂ ವ್ಯಥೆಯನ್ನುಂಟು ಮಾಡುವವನಂತೆ, ಭೂಮಿಯನ್ನು ನಡುಗಿಸುವವನಂತೆ ನಿಧಾನವಾಗಿ ಅಲ್ಲಲ್ಲಿ ಬೀಡುಬಿಡುತ್ತಾ ಸೇನೆಯನ್ನು ತೆಗೆದುಕೊಂಡು ಪಾಂಡವರ ಕಡೆಗೆ ಹೊರಟನು.

ತತೋ ದುರ್ಯೋಧನಃ ಶ್ರುತ್ವಾ ಮಹಾಸೇನಂ ಮಹಾರಥಮ್ ।
ಉಪಾಯಾಂತಮಭಿದ್ರುತ್ಯ ಸ್ವಯಮಾನರ್ಚ ಭಾರತ ॥೭॥

ಎಲೈ ಭಾರತನೇ, ಮಹಾರಥನಾದ ಅವನು ಮಹಾಸೈನ್ಯವನ್ನು ತೆಗೆದುಕೊಂಡು ಬರುತ್ತಿರುವುದನ್ನು ಕೇಳಿದ ದುರ್ಯೋಧನನು ತಾನೇ ಓಡಿಹೋಗಿ ಅವನನ್ನು ಸತ್ಕರಿಸಿದನು.

ಶಲ್ಯಸ್ಯ ಮಂತ್ರಿಭಿಃ ಸರ್ವೈರ್ದುರ್ಯೋಧನವಶಾನುಗೈಃ ।
ಅಜ್ಞಾತಂ ಚೈವ ಶಲ್ಯಸ್ಯ ಕೌರವ್ಯಃ ಕೃತವಾನ್ ಪ್ರಿಯಮ್ ॥೮॥

ಶಲ್ಯನ ಮಂತ್ರಿಗಳನ್ನು ದುರ್ಯೋಧನನು ವಶಮಾಡಿಕೊಂಡು ಶಲ್ಯನಿಗೆ ತಿಳಿಯದಂತೆ ಅವನು ಅವನಿಗೆ ಪ್ರಿಯವನ್ನು ಉಂಟುಮಾಡಿದನು.

ಕಾರಯಾಮಾಸ ಪೂಜಾರ್ಥಂ ತಸ್ಯ ದುರ್ಯೋಧನಃ ಸಭಾಃ ।
ರಮಣೀಯೇಷು ದೇಶೇಷು ರತ್ನಚಿತ್ರಾಃ ಸ್ವಲಂಕೃತಾಃ ॥೯॥

ಅವನನ್ನು ಸತ್ಕರಿಸುವ ಸಲುವಾಗಿ ದುರ್ಯೋಧನನು ಅವನ ಸೈನ್ಯವು ಬರುವ ಮಾರ್ಗದಲ್ಲಿ ರಮಣೀಯವಾದ ಪ್ರದೇಶಗಳಲ್ಲಿ ಅಲ್ಲಲ್ಲಿ ರತ್ನದಿಂದ ಅಲಂಕರಿಸಿದ ವಿಚಿತ್ರವಾದ ಅನೇಕ ಸಭಾಗ್ರಹಗಳನ್ನು ನಿರ್ಮಾಣ ಮಾಡಿಸಿದನು.

ಶಿಲ್ಪಿಭಿರ್ವಿವಿಧೈಶ್ಚೈವ ಕ್ರೀಡಾಸ್ತತ್ರ ಪ್ರಯೋಜಿತಾಃ ।
ತತ್ರ ಮಾಲ್ಯಾನಿ ಮಾಂಸಾನಿ ಭಕ್ಷ್ಯಂ ಪೇಯಂ ಚ ಸಂಸ್ಕೃತಮ್ ॥೧೦॥

ಕೂಪಾಶ್ಚ ವಿವಿಧಾಕಾರಾ ಮನೋಹರ್ಷವಿವರ್ಧನಾಃ ।
ವಾಪ್ಯಶ್ಚ ವಿವಿಧಾಕಾರಾ ಔದನಾನಿ ಗೃಹಾಣಿ ಚ ॥೧೧॥

ಅನೇಕ ವಿಧವಾದ ಶಿಲ್ಪಿಗಳಿಂದ ಅಲ್ಲಲ್ಲಿ ಕ್ರೀಡಾಸ್ಥಾನಗಳು ಮಾಡಲ್ಪಟ್ಟವು. ಅಲ್ಲಿ ಪುಷ್ಪಮಾಲೆಗಳು, ಮಾಂಸಗಳು, ಚೆನ್ನಾಗಿ ತಯಾರಿಸಿದ ಭಕ್ಷ್ಯಭೋಜ್ಯಗಳು, ಅನೇಕ ಆಕಾರದ ಬಾವಿಗಳು, ಮನಸ್ಸಿಗೆ ಸಂತೋಷವನ್ನುಂಟು ಮಾಡುವ ಅನೇಕ ವಿಧವಾದ ಸರೋವರಗಳು, ಆಹಾರದಿಂದ ಕೂಡಿದ ಗೃಹಗಳೂ ಇದ್ದವು.

ಸ ತಾಃ ಸಭಾಃ ಸಮಾಸಾದ್ಯ ಪೂಜ್ಯಮಾನೋ ಯಥಾಽಮರಃ ।
ದುರ್ಯೋಧನಸ್ಯ ಸಚಿವೈರ್ದೇಶೇ ದೇಶೇ ಯಥಾವಿಧಿ ॥೧೨॥

ಆಜಗಾಮ ಸಭಾಮನ್ಯಾಂ ದೇವಾವಸಥವರ್ಚಸಮ್ ॥೧೩॥

ಶಲ್ಯನು ದೇವತೆಯಂತೆ ಆಯಾ ಸಭೆಗಳಲ್ಲಿ ದುರ್ಯೋಧನನ ಮಂತ್ರಿಗಳಿಂದ ದೇಶದೇಶಗಳಲ್ಲಿ ವಿಧಿಪೂರ್ವಕವಾಗಿ ಸ್ವೀಕರಿಸಲ್ಪಟ್ಟು ದೇವತೆಗಳ ಬಿಡಾರದಂತಿರುವ ತೇಜೋಯುಕ್ತವಾದ ಒಂದು ಸಭೆಗೆ ಬಂದನು.

ಸ ತತ್ರ ವಿಭವೈರ್ಯುಕ್ತಃ ಕಲ್ಯಾಣೈರತಿಮಾನುಷೈಃ ।
ಮೇನೇಽಭ್ಯಧಿಕಮಾತ್ಮಾನಮವಮೇನೇ ಪುರಂದರಮ್ ॥೧೪॥

ಅಲ್ಲಿ ಅವನು ಮನುಷ್ಯರನ್ನು ಮೀರಿದ ಮಂಗಳಕರವಾದ ವಸ್ತುಗಳನ್ನು ನೋಡಿ ತನ್ನನ್ನು ಶ್ರೇಷ್ಠನೆಂದು ತಿಳಿದು ಇಂದ್ರನು ತನಗಿಂತ ಕಡಿಮೆ ಭೋಗದವನು ಎಂದು ತಿಳಿದನು.

ಪಪ್ರಚ್ಛ ಸ ತತಃ ಪ್ರೇಷ್ಯಾನ್ ಪ್ರಹೃಷ್ಟಃ ಕ್ಷತ್ರಿಯರ್ಷಭಃ ॥೧೫॥

ಯುಧಿಷ್ಠಿರಸ್ಯ ಪುರುಷಾಃ ಕೇಽತ್ರ ಚಕ್ರುಃ ಸಭಾ ಇಮಾಃ ।
ಆನೀಯಂತಾಂ ಸಭಾಕಾರಾಃ ಪ್ರದೇಯಾರ್ಹಾ ಹಿ ಮೇ ಮತಾಃ ॥೧೬॥

ಪ್ರದೇಯಮೇಭ್ಯೋ ದಾಸ್ಯಾಮಿ ಕುಂತೀಪುತ್ರಪ್ರಿಯೇಪ್ಸಯಾ ॥೧೭॥

ಕ್ಷತ್ರಿಯರ್ಷಭನಾದ ಅವನು ಸಂತೋಷಗೊಂಡು ಅಲ್ಲಿದ್ದ ಸೇವಕರನ್ನು ಕುರಿತು ಯುಧಿಷ್ಠಿರನ ಯಾವ ಪುರುಷರು ಈ ಸಭೆಗಳನ್ನು ನಿರ್ಮಿಸಿದ್ದಾರೆ? ಸಭೆಯನ್ನು ನಿರ್ಮಿಸಿದವರನ್ನು ಕರೆದುಕೊಂಡು ಬನ್ನಿ. ಅವರಿಗೆ ಉಡುಗೊರೆಗಳನ್ನು ಕೊಡಬೇಕು ಎಂದು ನನ್ನ ಅಭಿಪ್ರಾಯ. ಧರ್ಮರಾಜನಿಗೆ ಪ್ರಿಯವನ್ನು ಮಾಡುವ ದೃಷ್ಟಿಯಿಂದ ಅವರಿಗೆ ನಾನು ಉಡುಗೊರೆಗಳನ್ನು ಕೊಡುವೆನು ಎಂದು ಹೇಳಿದನು.

ವೈಶಂಪಾಯನಃ

ತತಃ ಪ್ರಹೃಷ್ಟಂ ರಾಜಾನಂ ಜ್ಞಾತ್ವಾ ತೇ ಸಚಿವಾಸ್ತದಾ ।
ದುರ್ಯೋಧನಾಯ ತತ್ ಸರ್ವಂ ಕಥಯಂತಿ ಸ್ಮ ವಿಸ್ಮಿತಾಃ ॥೧೮॥

ವೈಶಂಪಾಯನ– ಆಗ ದುರ್ಯೋಧನನ ಸಚಿವರು ಶಲ್ಯನು ಸಂತೋಷಗೊಂಡಿರುವುದನ್ನು ತಿಳಿದು ಆಶ್ಚರ್ಯಗೊಂಡು ದುರ್ಯೋಧನನಿಗೆ ಆ ವಿಷಯವೆಲ್ಲವನ್ನೂ ಹೇಳಿದರು.

ಸಂಪ್ರಹೃಷ್ಟೋ ಯದಾ ಶಲ್ಯೋ ದಿದಿತ್ಸುರಪಿ ಜೀವಿತಮ್ ।
ಗೂಢೋ ದುರ್ಯೋಧನಸ್ತತ್ರ ದರ್ಶಯಾಮಾಸ ಮಾತುಲಮ್ ॥೧೯॥

ಯಾವಾಗ ಸಂತೋಷಗೊಂಡ ಶಲ್ಯನು ತನ್ನ ಪ್ರಾಣವನ್ನು ಬೇಕಾದರೂ ಕೊಡಲು ಬಯಸಿದನೋ ಆಗ ಅಲ್ಲಿಯವರೆಗೆ ಅಡಗಿಕೊಂಡಿದ್ದ ದುರ್ಯೋಧನನು ಸೋದರ ಮಾವನಾದ ಅವನ ಕಣ್ಣೆದುರಿಗೆ ಬಂದನು.

ದೃಷ್ಟ್ವಾ ದುರ್ಯೋಧನಂ ರಾಜಾ ವಿಸ್ಮಿತಃ ಸ ನರೋತ್ತಮಮ್ ।
ಮಂತ್ರಿಣಶ್ಚಾಪಿ ಶಂಸಂತಿ ಮದ್ರರಾಜಂ ಸುವಿಸ್ಮಿತಮ್ ॥೨೦॥

ದುರ್ಯೋಧನೇನ ತೇ ರಾಜನ್ ಶುಶ್ರೂಷಿತಮಿದಂ ಪ್ರಭೋ ।
ಪ್ರಿಯಂ ಪ್ರಿಯಸ್ಯಾಸ್ಯ ತತಃ ಕರ್ತುಮರ್ಹತಿ ಭೂಮಿಪ ॥೨೧॥

ನರಶ್ರೇಷ್ಠನಾದ ದುರ್ಯೋಧನನನ್ನು ನೋಡಿದ ಶಲ್ಯರಾಜನು ಆಶ್ಚರ್ಯಗೊಂಡನು. ಆಶ್ಚರ್ಯಗೊಂಡ ಶಲ್ಯರಾಜನನ್ನುಕುರಿತು ದುರ್ಯೋಧನನ ಮಂತ್ರಿಗಳು ರಾಜನೇ, ಪ್ರಭುವೇ, ದುರ್ಯೋಧನನು ನಿನಗೆ ಈ ಕೈಂಕರ್ಯವನ್ನು ಮಾಡಿದ್ದಾನೆ. ಅವನು ಮಾಡಿದ ಈ ಪ್ರಿಯಕ್ಕೆ ಅನುಗುಣವಾಗಿ ನೀನೂ ಸಹ ಅವನಿಗೆ ಸಹಾಯವನ್ನು ಮಾಡಬೇಕು ಎಂದು ಹೇಳಿದರು.

ತಂ ದೃಷ್ಟ್ವಾ ಮದ್ರರಾಜಸ್ತು ಜ್ಞಾತ್ವಾ ಯತ್ನಂ ಚ ತಸ್ಯ ತಮ್ ।
ಪರಿಷ್ವಜ್ಯಾಬ್ರವೀತ್ ಪ್ರೀತ ಇಷ್ಟೋSರ್ಥೋ ವ್ರಿಯತಾಮಿತಿ ॥೨೨॥

ಮದ್ರರಾಜನಾದ ಶಲ್ಯನು ಆ ಸಭೆಗಳನ್ನು ನೋಡಿ ಅದರ ಹಿಂದಿರುವ ಆ ಪ್ರಯತ್ನವನ್ನು ತಿಳಿದು ಸಂತೋಷಗೊಂಡು ದುರ್ಯೋಧನನನ್ನು ಆಲಿಂಗಿಸಿ ನಿನಗೆ ಇಷ್ಟವಾದ ವರವನ್ನು ಕೇಳು ಎಂದು ಹೇಳಿದನು.

**ದುರ್ಯೋಧನಃ**

**ಸತ್ಯವಾಗ್ ಭವ ಕಲ್ಯಾಣ ವರೋ ವೈ ಮಮ ದೀಯತಾಮ್ ।**
**ಸರ್ವಸೇನಾಪ್ರಣೇತಾ ಮೇ ಭವಾನ್ ಭವಿತುಮರ್ಹತಿ ॥೨೩॥**

**ದುರ್ಯೋಧನ–** ಕಲ್ಯಾಣಮೂರ್ತಿಯೇ, ನೀನು ಸತ್ಯವಚನನಾಗು. ನನಗೆ ವರವನ್ನು ಕೊಡು. ನೀನು ನನ್ನ ಎಲ್ಲಾ ಸೈನ್ಯಕ್ಕೆ ನಾಯಕನಾಗಬೇಕೆಂಬುದೇ ನಾನು ಕೇಳುವ ವರ.

**ಯಥೈವ ಪಾಂಡವಾಸ್ತುಭ್ಯಂ ತಥೈವ ಭವತೇ ಹ್ಯಹಮ್ ।**
**ಅನುಮಾನ್ಯಂ ಚ ಪಾಲ್ಯಂ ಚ ಭಕ್ತಂ ಚ ಭಜ ಮಾಂ ವಿಭೋ ॥೨೪॥**

ನಿನಗೆ ಪಾಂಡವರು ಹೇಗೋ ನಾನೂ ಸಹ ಹಾಗೆಯೇ ಸರಿ. ಪ್ರಭುವೇ, ನಿನ್ನಿಂದ ಅನುಮೋದಿಸಲ್ಪಡಬೇಕಾದ, ರಕ್ಷಿಸಲ್ಪಡಬೇಕಾದ ಮತ್ತು ನಿನ್ನ ಭಕ್ತನಾದ ನನ್ನನ್ನು ಭಜಿಸು (ನನಗೆ ಸಹಾಯವನ್ನು ಮಾಡು).

**ವೈಶಂಪಾಯನಃ**

**ಕೃತಮಿತ್ಯಬ್ರವೀತ್ ಶಲ್ಯಃ ಕಿಮನ್ಯದ್ ವ್ರಿಯತಾಮಿತಿ ।**
**ಕೃತಮಿತ್ಯೇವ ಗಾಂಧಾರಿಃ ಪ್ರತ್ಯುವಾಚ ಪುನಃ ಪುನಃ ॥೨೫॥**

**ವೈಶಂಪಾಯನ–** ಆಗಲೇ ಮಾಡಿದ್ದಾಯಿತು. ಬೇರೆ ಬೇಕಾದ ವರವನ್ನು ಕೇಳು ಎಂದು ಶಲ್ಯನು ಹೇಳಿದನು. ದುರ್ಯೋಧನನಾದರೂ ಈ ವರವು ಸಾಕು ಎಂದು ಮತ್ತೆ ಮತ್ತೆ ಹೇಳಿದನು.

**ಶಲ್ಯಃ**

**ಗಚ್ಛ ದುರ್ಯೋಧನ ಪುರಂ ಸ್ವಕಮೇವ ನರರ್ಷಭ ।**
**ಅಹಂ ಗಮಿಷ್ಯೇ ದ್ರಷ್ಟುಂ ವೈ ಯುಧಿಷ್ಠಿರಮರಿಂದಮಮ್ ॥೨೬॥**

ಶಲ್ಯ– ದುರ್ಯೋಧನನೇ, ನರರ್ಷಭನೇ, ನೀನು ನಿನ್ನ ಪಟ್ಟಣಕ್ಕೆ ಹೋಗು. ನಾನು ಅರಿಂದಮನಾದ ಯುಧಿಷ್ಠಿರನನ್ನು ನೋಡಲು ಹೋಗುವೆನು.

ದೃಷ್ಟ್ವಾ ಯುಧಿಷ್ಠಿರಂ ರಾಜನ್ ಪುನರೇಷ್ಯೇ ನರಾಧಿಪ ।
ಅವಶ್ಯಂ ಚಾಪಿ ದ್ರಷ್ಟವ್ಯಃ ಪಾಂಡವಃ ಪುರುಷರ್ಷಭ ॥೨೭॥

ನರಾಧಿಪನೇ, ರಾಜನೇ, ನಾನು ಯುಧಿಷ್ಠಿರನನ್ನು ನೋಡಿ ಪುನಃ ಬರುವೆನು. ಪುರುಷರ್ಷಭನೇ, ಪಾಂಡುಪುತ್ರನಾದ ಯುಧಿಷ್ಠಿರನನ್ನು ನಾನು ಅವಶ್ಯವಾಗಿ ನೋಡಬೇಕು.

ದುರ್ಯೋಧನಃ

ಕ್ಷಿಪ್ರಮಾಗಮ್ಯತಾಂ ರಾಜನ್ ಪಾಂಡವಂ ವೀಕ್ಷ್ಯ ಪಾರ್ಥಿವ ।
ತ್ವದಧೀನಾಃ ಸ್ಮ ರಾಜೇಂದ್ರ ವರದಾನಂ ಸ್ಮರಸ್ವ ನಃ ॥೨೮॥

ದುರ್ಯೋಧನ– ರಾಜನೇ, ಯುಧಿಷ್ಠಿರನನ್ನು ನೋಡಿ ಬೇಗ ಹಿಂದಿರುಗು. ರಾಜೇಂದ್ರನೇ, ನಾವು ನಿನ್ನ ಅಧೀನರಾಗಿದ್ದೇವೆ. ನನಗೆ ಕೊಟ್ಟ ವರವನ್ನು ಮರೆಯಬೇಡ (ಸ್ಮರಿಸಿಕೊ).

ಶಲ್ಯಃ

ಕ್ಷಿಪ್ರಮೇಷ್ಯಾಮಿ ಭದ್ರಂ ತೇ ಗಚ್ಛ ತ್ವಂ ಸ್ವಪುರಂ ನೃಪ ।
ದೃಷ್ಟ್ವಾ ತು ಪಾಂಡವಾನ್ ರಾಜನ್ ನ ಮಿಥ್ಯಾ ಕರ್ತುಮುತ್ಸಹೇ ॥

ಶಲ್ಯ– ರಾಜನೇ, ನಿನಗೆ ಕಲ್ಯಾಣವಾಗಲಿ. ಪಾಂಡವರನ್ನು ನೋಡಿ ಬೇಗ ಹಿಂದಿರುಗುವೆನು. ನೀನು ನಿನ್ನ ಪಟ್ಟಣಕ್ಕೆ ಹೋಗು. ನಾನು ಕೊಟ್ಟ ಮಾತನ್ನು ಸುಳ್ಳು ಮಾಡಲು ಬಯಸುವುದಿಲ್ಲ.

ವೈಶಂಪಾಯನಃ

ಪರಿಷ್ವಜ್ಯ ತಥಾಽನ್ಯೋನ್ಯಂ ಶಲ್ಯದುರ್ಯೋಧನಾವುಭೌ ।
ಸ ತದಾ ಶಲ್ಯಮಾಮಂತ್ರ್ಯ ಪುನರಾಯಾತ್ ಸ್ವಕಂ ಪುರಮ್ ॥೩೦॥

ಶಲ್ಯೋ ಜಗಾಮ ಕೌಂತೇಯಾನಾಖ್ಯಾತುಂ ಕರ್ಮ ತಸ್ಯ ತತ್ ॥೩೧॥

ವೈಶಂಪಾಯನ– ಆಗ ಶಲ್ಯ-ದುರ್ಯೋಧನರಿಬ್ಬರೂ ಪರಸ್ಪರವಾಗಿ ಆಲಿಂಗಿಸಿದರು. ದುರ್ಯೋಧನನು ಶಲ್ಯನ ಅನುಮತಿಯನ್ನು ಪಡೆದು ತನ್ನ ಪಟ್ಟಣಕ್ಕೆ ಹಿಂದಿರುಗಿದನು. ಶಲ್ಯನಾದರೂ ನಡೆದ ಎಲ್ಲಾ ವಿಷಯವನ್ನು ತಿಳಿಸಲು ಪಾಂಡವರ ಕಡೆಗೆ ಹೊರಟನು.

ಉಪಪ್ಲಾವ್ಯಂ ಸ ಗತ್ವಾ ತು ಸ್ಕಂಧಾವಾರಂ ಪ್ರವಿಶ್ಯ ಚ ।
ಪಾಂಡವಾನಥ ತಾನ್ ಸರ್ವಾನ್ ಶಲ್ಯಸ್ತತ್ರ ದದರ್ಶ ಹ ॥೩೨॥

ಶಲ್ಯನು ಉಪಪ್ಲಾವ್ಯ ನಗರವನ್ನು ತಲುಪಿ, ಅಲ್ಲಿ ಸೇನಾನಿವೇಶದ ಸ್ಥಳವನ್ನು ಪ್ರವೇಶಿಸಿ, ಅಲ್ಲಿ ಆ ಪಾಂಡವರನ್ನು ನೋಡಿದನು.

ಚಿರಾತ್ತು ದೃಷ್ಟ್ವಾ ರಾಜಾನಂ ಮಾತುಲಂ ಸಮಿತಿಂಜಯಮ್ ।
ಆಸನೇಭ್ಯಃ ಸಮುತ್ಪೇತುಃ ಸರ್ವೇ ಸಹಯುಧಿಷ್ಠಿರಾಃ ॥೩೩॥

ತಥಾ ಭೀಮಾರ್ಜುನೌ ಹೃಷ್ಟೌ ಸ್ವಸ್ರೀಯೌ ಚ ಯಮಾವುಭೌ ।
ದ್ರೌಪದೀ ಚ ಸುಭದ್ರಾ ಚ ಅಭಿಮನ್ಯುಶ್ಚ ಭಾರತ ॥೩೪॥

ಸಮೇತ್ಯ ಚ ಮಹಾಬಾಹುಂ ಶಲ್ಯಂ ಪಾಂಡುಸುತಸ್ತದಾ ।

ಯುದ್ಧದಲ್ಲಿ ಯಾವಾಗಲೂ ಜಯಶೀಲನಾದ, ತಮ್ಮ ಸೋದರಮಾವನಾದ ಶಲ್ಯರಾಜನು ಬಹಳ ಸಮಯದ ನಂತರ ಬಂದುದನ್ನು ನೋಡಿ ಯುಧಿಷ್ಠಿರನ ಜೊತೆಯಲ್ಲಿ ಎಲ್ಲರೂ ತಮ್ಮ ಆಸನಗಳಿಂದ ಎದ್ದರು. ಅದರಂತೆ ಸಂತೋಷಗೊಂಡ ಭೀಮಾರ್ಜುನರೂ ಮತ್ತು ತಂಗಿಯ ಮಕ್ಕಳಾದ ನಕುಲ-ಸಹದೇವರೂ ಎದ್ದು ನಿಂತರು. ಭಾರತನೇ, ಹಾಗೆಯೇ ದ್ರೌಪದಿಯೂ, ಸುಭದ್ರೆಯೂ ಮತ್ತು ಅಭಿಮನ್ಯುವೂ ಎದ್ದರು.

ಕೃತಾಂಜಲಿರದೀನಾತ್ಮಾ ಧರ್ಮಾತ್ಮಾ ಶಲ್ಯಮಬ್ರವೀತ್ ॥೩೫॥

ಸ್ವಾಗತಂ ತೇಽಸ್ತು ವೈ ರಾಜನ್ನೇತದಾಸನಮಾಸ್ಯತಾಮ್ ॥೩೬॥

ಅದೀನವಾದ ಮನಸ್ಸುಳ್ಳವನೂ, ಧರ್ಮಿಷ್ಠನೂ ಆದ ಪಾಂಡುಸುತನಾದ ಯುಧಿಷ್ಠಿರನು ಮಹಾಬಾಹುವಾದ ಶಲ್ಯನ ಸಮೀಪಕ್ಕೆ ಬಂದು ಕೈಗಳನ್ನು ಮುಗಿದು ರಾಜನೇ, ನಿನಗೆ ಸ್ವಾಗತ. ಈ ಆಸನದಲ್ಲಿ ಕುಳಿತುಕೊ ಎಂದು ಹೇಳಿದನು.

## ವೈಶಂಪಾಯನಃ

ತತೋ ನ್ಯಷೀದಚ್ಛಲ್ಯಶ್ಚ ಕಾಂಚನೇ ಪರಮಾಸನೇ ।
ತತ್ರ ಪಾದ್ಯಮಥಾರ್ಘ್ಯಂ ಚ ನ್ಯವೇದಯತ ಪಾಂಡವಃ ॥೩೭॥

ವೈಶಂಪಾಯನ– ಅನಂತರ ಶಲ್ಯನು ಶ್ರೇಷ್ಠವಾದ ಸುವರ್ಣಮಯವಾದ ಆಸನದಲ್ಲಿ ಕುಳಿತುಕೊಂಡನು. ಯುಧಿಷ್ಠಿರನು ಅವನಿಗೆ ಪಾದ್ಯವನ್ನು ಮತ್ತು ಅರ್ಘ್ಯವನ್ನು ನೀಡಿದನು.

ನಿವೇದ್ಯ ಚಾರ್ಘ್ಯಂ ವಿಧಿವನ್ಮದ್ರರಾಜಾಯ ಭಾರತ ।
ಕುಶಲಂ ಪಾಂಡವೋಽಪೃಚ್ಛತ್ ಶಲ್ಯಂ ಸರ್ವಸುಖಾವಹಮ್ ॥೩೮॥

ಎಲೈ ಭಾರತನೇ, ಧರ್ಮರಾಜನು ವಿಧಿಪೂರ್ವಕವಾಗಿ ಶಲ್ಯನಿಗೆ ಅರ್ಘ್ಯವನ್ನು ನಿವೇದಿಸಿ ಎಲ್ಲರಿಗೂ ಸುಖವನ್ನು ಕೊಡುವ ಕುಶಲಪ್ರಶ್ನೆಯನ್ನು ಮಾಡಿದನು.

ಸ ತೈಃ ಪರಿವೃತಃ ಸರ್ವೈಃ ಪಾಂಡವೈರ್ಧರ್ಮಚಾರಿಭಿಃ ।
ಆಸನೇ ಚೋಪವಿಷ್ಟಃ ಸ ಶಲ್ಯಃ ಪಾರ್ಥಮಥಾಬ್ರವೀತ್ ॥೩೯॥

ಪ್ರೀತ್ಯಾ ಪರಮಯಾ ಯುಕ್ತಃ ಸಮಾಶ್ಲಿಷ್ಯ ಯುಧಿಷ್ಠಿರಮ್ ॥೪೦॥

ಧರ್ಮಾಚರಣಶೀಲರಾದ ಎಲ್ಲಾ ಪಾಂಡವರಿಂದ ಸುತ್ತುವರಿಯಲ್ಪಟ್ಟು ಶ್ರೇಷ್ಠವಾದ ಆಸನದಲ್ಲಿ ಕುಳಿತಿದ್ದ ಶಲ್ಯನು ಕುಂತೀಪುತ್ರನಾದ ಯುಧಿಷ್ಠಿರನನ್ನು ಆಲಿಂಗಿಸಿ ಬಹಳ ಸಂತೋಷದಿಂದ ಕೂಡಿದವನಾಗಿ ಮಾತನಾಡಿದನು.

ಕುಶಲಂ ರಾಜಶಾರ್ದೂಲ ಕಚ್ಚಿತ್ ತೇ ಕುರುನಂದನ ।
ಅರಣ್ಯವಾಸಾದ್ ದಿಷ್ಟ್ಯಾಽಸಿ ವಿಮುಕ್ತೋ ಜಯತಾಂ ವರ ॥೪೧॥

ಕುರುನಂದನನೇ, ರಾಜಶಾರ್ದೂಲನೆ, ನಿನಗೆ ಕುಶಲವಷ್ಟೆ? ಜಯಶಾಲಿಗಳಲ್ಲಿ ಶ್ರೇಷ್ಠನೇ, ದೇವರ ದಯದಿಂದ ಅರಣ್ಯವಾಸದಿಂದ ಬಿಡುಗಡೆಯನ್ನು ಹೊಂದಿದ್ದೀಯೆ.

ಸುದುಷ್ಕರಂ ಕೃತಂ ರಾಜನ್ ನಿರ್ಜನೇ ವಸತಾ ವನೇ ।
ಭ್ರಾತೃಭಿಃ ಸಹ ರಾಜೇಂದ್ರ ಕೃಷ್ಣಯಾ ಚಾನಯಾಽನಘ ॥೪೨॥

ಎಲೈ ರಾಜೇಂದ್ರನೇ, ಅನಘನೇ, ಅರಣ್ಯದಲ್ಲಿ ತಮ್ಮಂದಿರ ಮತ್ತು ಈ ದ್ರೌಪದಿಯ ಜೊತೆಯಲ್ಲಿ ವಾಸ ಮಾಡಿ ಬಹಳ ದುಷ್ಕರವಾದ ಕಾರ್ಯವನ್ನು ಮಾಡಿದ್ದೀಯೆ.

**ಅಜ್ಞಾತವಾಸಂ ಘೋರಂ ಚ ವಸತಾ ದುಷ್ಕೃತಂ ಕೃತಮ್ ॥೪೩॥**

**ದುಃಖಮೇವ ಕೃತಂ ಸೌಖ್ಯಂ ರಾಜ್ಯಭ್ರಷ್ಟಸ್ಯ ಭಾರತ ॥೪೪॥**

ಘೋರವಾದ ಅಜ್ಞಾತವಾಸವನ್ನು ಮಾಡುತ್ತಾ ದುಷ್ಕರವಾದ ಕಾರ್ಯವನ್ನು ಮಾಡಿದ್ದೀಯೆ. ಭಾರತನೇ, ಅಜ್ಞಾತವಾಸವು ದುಃಖಪ್ರದವೇ ಆದರೂ ಅದು ನಿನಗೆ ಪ್ರಾರಬ್ಧಕರ್ಮಕ್ಷಯರೂಪವಾದುದರಿಂದ ಸುಖವೇ ಆಯಿತು.

**ದುಃಖಸ್ಯೈತಸ್ಯ ಮಹತೋ ಧಾರ್ತರಾಷ್ಟ್ರಕೃತಸ್ಯ ವೈ ।**
**ಅವಾಪ್ಸ್ಯಸಿ ಫಲಂ ರಾಜನ್ ಹತ್ವಾ ಶತ್ರೂನ್ ಪರಂತಪ ॥೪೫॥**

ರಾಜನೇ, ಪರಂತಪನೇ, ಧೃತರಾಷ್ಟ್ರನ ಪುತ್ರನ ನಿಮಿತ್ತದಿಂದ ಅನುಭವಿಸಿದ ಈ ದೊಡ್ಡ ದುಃಖದ ಫಲವನ್ನು ನೀನು ಶತ್ರುಗಳನ್ನು ಸಂಹರಿಸಿ ಹೊಂದುವಿ.

**ವಿದಿತಂ ತೇ ಮಹಾರಾಜ ಲೋಕತಂತ್ರಂ ನರಾಧಿಪ ।**
**ತಸ್ಮಾಲ್ಲೋಕಕೃತಂ ಕಿಂಚಿತ್ ತವ ತಾತ ನ ವಿದ್ಯತೇ ॥೪೬॥**

**ರಾಜರ್ಷೀಣಾಂ ಪುರಾಣಾನಾಂ ಮಾರ್ಗಮನ್ವಿಚ್ಛ ಭಾರತ ॥೪೭॥**

ಮಹಾರಾಜನೇ, ನರಾಧಿಪನೇ, ನಿನಗೆ ಲೋಕದ ನಡತೆಯು ತಿಳಿದಿದೆ. ಆದ್ದರಿಂದ ಲೋಕದ ಮಾತುಗಳಿಂದ ನಿನಗೆ ಆಗಬೇಕಾದುದು ಯಾವುದೂ ಇಲ್ಲ. ಎಲೈ ಭಾರತನೇ, ಪ್ರಾಚೀನರಾದ ರಾಜರ್ಷಿಗಳ ಮಾರ್ಗವನ್ನು ಅನುಸರಿಸು.

**ದಾನೇ ಸತ್ಯೇ ತಪಸಿ ಚ ತವ ಬುದ್ಧಿರ್ಯುಧಿಷ್ಠಿರ ।**
**ಕ್ಷಮಾ ದಮಶ್ಚ ಸತ್ಯಂ ಚ ಅಹಿಂಸಾ ಚ ನೃಪೋತ್ತಮ ॥೪೮॥**

ಎಲೈ ಯುಧಿಷ್ಠಿರನೇ, ನೃಪೋತ್ತಮನೇ, ನಿನ್ನ ಬುದ್ಧಿಯು ಯಾವಾಗಲೂ ದಾನದಲ್ಲಿಯೂ, ಸತ್ಯದಲ್ಲಿಯೂ, ತಪಸ್ಸಿನಲ್ಲಿಯೂ, ಕ್ಷಮೆಯಲ್ಲಿಯೂ, ದಮದಲ್ಲಿಯೂ ಮತ್ತು ಅಹಿಂಸೆಯಲ್ಲಿಯೂ ಇದೆ.

ಉತ್ಸಾಹಃ ಸಂಯಮೋ ದಾಕ್ಷ್ಯಮಪ್ರಮಾದೋ ದ್ಯುತಿಃ ಸ್ಮೃತಿಃ ।
ಮೃದುರ್ವದಾನ್ಯೋ ಬ್ರಹ್ಮಣ್ಯೋ ದಾತಾ ಧರ್ಮಪರಾಯಣಃ ॥೪೯॥

ಧರ್ಮಾಸ್ತೇ ವಿದಿತಾ ರಾಜನ್ ಬಹವೋ ಲೋಕಸಾಕ್ಷಿಕಾಃ ॥೫೦॥

ಸರ್ವಂ ಜಗದಿದಂ ತಾತ ವ್ಯಥಿತಂ ತೇ ಪರಂತಪ ॥೫೧॥

ಉತ್ಸಾಹ, ಸಂಯಮ, ದಕ್ಷತೆ, ಪ್ರಮಾದವಿಲ್ಲದಿರುವಿಕೆ, ಕಾಂತಿ, ಸ್ಮೃತಿ, ಮಾರ್ದವ, ಔದಾರ್ಯ, ಬ್ರಾಹ್ಮಣಪ್ರಿಯತೆ, ದಾನ, ಧರ್ಮಪರಾಯಣತೆ, ಈ ನಿನ್ನ ಅನೇಕ ಧರ್ಮಗಳು ಲೋಕಸಾಕ್ಷಿಕವಾಗಿ ಎಲ್ಲರಿಗೂ ತಿಳಿದಿವೆ. ಎಲೈ ಪರಂತಪನೇ, ಈ ಎಲ್ಲ ಪ್ರಪಂಚವೂ ಸಹ ನಿನ್ನ ರಾಜ್ಯಭ್ರಂಶದ ನಿಮಿತ್ತದಿಂದ ದುಃಖಗೊಂಡಿದೆ.

ಮುದಿತಶ್ಚ ಪುನರ್ಲೋಕಃ ತ್ವಯಿ ರಾಜನ್ ಪ್ರತಿಷ್ಠಿತೇ ।
ದಿಷ್ಟ್ಯಾ ಕೃಚ್ಛ್ರಮಿದಂ ರಾಜನ್ ಪಾರಿತಂ ಭರತರ್ಷಭ ॥೫೨॥

ರಾಜನೇ, ನೀನು ಪುನಃ ನಿನ್ನ ರಾಜ್ಯದಲ್ಲಿ ಪ್ರತಿಷ್ಠಿತನಾದರೆ ಲೋಕವೆಲ್ಲವೂ ಪುನಃ ಸಂತೋಷಗೊಳ್ಳುತ್ತದೆ. ಭರತರ್ಷಭನೇ, ದೇವರ ದಯದಿಂದ ನೀನು ಈ ಕಷ್ಟಕಾಲವನ್ನು ಕಳೆದಿದ್ದೀಯೆ (ದಾಟಿದ್ದೀಯೆ).

ದಿಷ್ಟ್ಯಾ ಪಶ್ಯಾಮಿ ರಾಜೇಂದ್ರ ಧರ್ಮಾತ್ಮಾನಂ ಸಹಾನುಗಮ್ ।
ನಿಸ್ತೀರ್ಣದುಷ್ಕೃತಂ ರಾಜನ್ ತ್ವಾಂ ಧರ್ಮನಿಶ್ಚಯಂ ಪ್ರಭೋ ॥೫೩॥

ರಾಜೇಂದ್ರನೆ, ಪ್ರಭುವೇ, ದೇವರ ದಯದಿಂದ ಎಲ್ಲ ಕಷ್ಟಗಳನ್ನು ಕಳೆದು ಧರ್ಮನಿಶ್ಚಯವುಳ್ಳವನೂ, ಧರ್ಮದಲ್ಲೇ ಮನಸ್ಸುಳ್ಳವನೂ ಆದ ನಿನ್ನನ್ನು ತಮ್ಮಂದಿರ ಜೊತೆಯಲ್ಲಿ ನೋಡುತ್ತಿದ್ದೇನೆ.

ವೈಶಂಪಾಯನಃ

ತತೋಽಸ್ಯಾಕಥಯದ್ ರಾಜನ್ ದುರ್ಯೋಧನಸಮಾಗಮಮ್ ।
ತಚ್ಚ ಸುಶ್ರಾವಿತಂ ಸರ್ವಂ ವರದಾನಂ ಚ ಭಾರತ ॥೫೪॥

ವೈಶಂಪಾಯನ– ಜನಮೇಜಯರಾಜನೇ, ಭಾರತನೇ, ಅನಂತರ ಶಲ್ಯನು ದುರ್ಯೋಧನ ಸಮಾಗಮವನ್ನೂ, ಅವನಿಗೆ ಮಾಡಿದ ವರದಾನವನ್ನೂ, ಎಲ್ಲವನ್ನೂ ಹೇಳಿದನು.

## ಯುಧಿಷ್ಠಿರಃ

ಸುಕೃತಂ ತೇ ಕೃತಂ ರಾಜನ್ ಪ್ರಹೃಷ್ಟೇನಾಂತರಾತ್ಮನಾ ।
ದುರ್ಯೋಧನಸ್ಯ ಯದ್ ವೀರ ತ್ವಯಾ ವಾಚಾ ಪ್ರತಿಶ್ರುತಮ್ ॥೫೫॥

ಯುಧಿಷ್ಠಿರ– ರಾಜನೇ, ಸಂತೋಷಗೊಂಡ ಮನಸ್ಸಿನಿಂದ ನೀನು ಏನು ಮಾಡಿದೆಯೋ ಅದು ಒಳ್ಳೆಯದೇ ಆಯಿತು. ವೀರನೇ, ದುರ್ಯೋಧನನಿಗೆ ಸಹಾಯದ ವಿಷಯದಲ್ಲಿ ನೀನು ಮಾಡಿದ ವಾಗ್ದಾನವು ಸರಿಯಾಗಿಯೇ ಇದೆ.

ಏಕಂ ತ್ವಿಚ್ಛಾಮಿ ಭದ್ರಂ ತೇ ಕ್ರಿಯಮಾಣಂ ಮಹೀಪತೇ ।
ರಾಜನ್ನಕರ್ತವ್ಯಮಪಿ ಕರ್ತುಮರ್ಹಸಿ ಸತ್ತಮ ॥೫೬॥

ಮಮ ತ್ವವೇಕ್ಷ್ಯಾ ವೀರ ಶೃಣು ವಿಜ್ಞಾಪಯಾಮಿ ತೇ ।

ಮಹೀಪತಿಯೇ, ಸಜ್ಜನರಲ್ಲಿ ಶ್ರೇಷ್ಠನೇ, ನಿನಗೆ ಮಂಗಳವಾಗಲಿ. ಒಂದು ವಿಷಯವನ್ನು ಮಾತ್ರ ನೀನು ಮಾಡಬೇಕೆಂದು ನಾನು ಬಯಸುತ್ತೇನೆ. ರಾಜನೇ, ಅದು ಅಕರ್ತವ್ಯವಾದರೂ ನನ್ನ ಮೇಲಿನ ದೃಷ್ಟಿಯಿಂದ ನೀನು ಅದನ್ನು ಮಾಡಬೇಕು. ನಾನು ಅದನ್ನು ನಿವೇದಿಸುತ್ತೇನೆ. ಅದನ್ನು ಕೇಳು.

ಸ್ಪರ್ಧತೇ ಹಿ ಸದಾ ಕರ್ಣಃ ಪಾರ್ಥೇನ ರಣಮೂರ್ಧನಿ ॥೫೭॥

ಕರ್ಣಾರ್ಜುನಾಭ್ಯಾಂ ಸಂಪ್ರಾಪ್ತೇ ದ್ವೈರಥೇ ರಾಜಸತ್ತಮ ।
ವಾಸುದೇವೇನ ಸಾರಥ್ಯಂ ಕಾರ್ಯಂ ಪಾರ್ಥಸ್ಯ ಮಾತುಲ ।
ಭವಾನಿಹ ಮಹಾರಾಜ ವಾಸುದೇವಸಮೋ ಯುಧಿ ॥೫೮॥

ಕರ್ಣಸ್ಯ ಭವತಾ ಕಾರ್ಯಂ ಸಾರಥ್ಯಂ ನಾತ್ರ ಸಂಶಯಃ ।

ಕರ್ಣನು ಯುದ್ಧದಲ್ಲಿ ಯಾವಾಗಲೂ ಅರ್ಜುನನ ಜೊತೆಯಲ್ಲಿ ಸ್ಪರ್ಧಿಸುತ್ತಾನೆ. ರಾಜಶ್ರೇಷ್ಠನೇ, ಕರ್ಣಾರ್ಜುನರಿಗೆ ದ್ವಂದ್ವಯುದ್ಧವು ಪ್ರಾಪ್ತವಾದಾಗ ಕೃಷ್ಣನು ಅರ್ಜುನನ ಸಾರಥ್ಯವನ್ನು ಮಾಡುತ್ತಾನೆ. ಸೋದರಮಾವನೇ, ಮಹಾರಾಜನೇ, ನೀನು ಕರ್ಣನ ಸಾರಥ್ಯವನ್ನು ಮಾಡಬೇಕು. ಈ ವಿಷಯದಲ್ಲಿ ಸಂಶಯವಿಲ್ಲ.

ತತ್ರ ಪಾಲ್ಯೋಽರ್ಜುನೋ ರಾಜನ್ ಯದಿ ಮೇ ಪ್ರಿಯಮಿಚ್ಛಸಿ ॥೫೯॥

ತೇಜೋವಧಶ್ಚ ತೇ ಕಾರ್ಯಃ ಸೌತೇರಸ್ಮಜ್ಜಯಾವಹಃ ।
ಅಕರ್ತವ್ಯಮಪಿ ಹ್ಯೇತತ್ ಕರ್ತುಮರ್ಹಸಿ ಮಾತುಲ ॥೬೦॥

ರಾಜನೇ, ನನಗೆ ಪ್ರಿಯವನ್ನುಂಟು ಮಾಡಲು ನೀನು ಬಯಸುವುದಾದರೆ ಆಗ ಅರ್ಜುನನನ್ನು ರಕ್ಷಿಸಬೇಕು. ನಮಗೆ ಜಯವುಂಟಾಗುವಂತೆ ಕರ್ಣನ ತೇಜೋವಧೆಯನ್ನು ನೀನು ಮಾಡಬೇಕು. ಸೋದರಮಾವನೇ, ಅಕರ್ತವ್ಯವಾದರೂ ಇದನ್ನು ನೀನು ಮಾಡಿಕೊಡಬೇಕು.

ಶಲ್ಯಃ

ಶೃಣು ಪಾಂಡವ ಭದ್ರಂ ತೇ ವಧೋಪಾಯಂ ದುರಾತ್ಮನಃ ।
ಕರ್ಣಸ್ಯ ಸೂತಪುತ್ರಸ್ಯ ನಿತ್ಯಂ ಯುದ್ಧಾಭಿನಂದಿನಃ ॥೬೧॥

ಶಲ್ಯ– ಎಲೈ ಪಾಂಡವನೇ, ನಿನಗೆ ಮಂಗಳವಾಗಲಿ. ದುರಾತ್ಮನೂ, ಯಾವಾಗಲೂ ಯುದ್ಧವನ್ನು ಬಯಸುವವನೂ ಆದ ಸೂತಪುತ್ರನಾದ ಕರ್ಣನ ವಧೆಯ ಉಪಾಯವನ್ನು ಹೇಳುತ್ತೇನೆ, ಕೇಳು.

ತೇಜೋವಧನಿಮಿತ್ತಂ ಹಿ ಸೂತಪುತ್ರಸ್ಯ ಸಂಯುಗೇ ।
ಅಹ(ಹಂ) ತಸ್ಯ ಭವಿಷ್ಯಾಮಿ ಸಂಗ್ರಾಮೇ ಸಾರಥಿರ್ಧ್ರುವಮ್ ॥೬೨॥

ವಾಸುದೇವೇನ ಹಿ ಸಮಂ ನಿತ್ಯಂ ಮಾಂ ಸ ಹಿ ಮನ್ಯತೇ ॥೬೩॥

ಸೂತಪುತ್ರನಾದ ಅವನ ತೇಜೋವಧೆಯನ್ನು ಮಾಡಲು ಯುದ್ಧದಲ್ಲಿ ಖಂಡಿತವಾಗಿ ನಾನು ಅವನಿಗೆ ಸಾರಥಿಯಾಗುವೆನು. ಅವನು ಯಾವಾಗಲೂ ನನ್ನನ್ನು ಕೃಷ್ಣನಿಗೆ ಸಮಾನನಾದವನು ಎಂದು ಭಾವಿಸುತ್ತಾನಷ್ಟೆ?

ತಸ್ಯಾಹಂ ಕುರುಶಾರ್ದೂಲ ಪ್ರತೀಪಮಹಿತಂ ವಚಃ ।
ಧ್ರುವಂ ಸಂಕಥಯಿಷ್ಯಾಮಿ ಯೋದ್ಧುಕಾಮಸ್ಯ ಸಂಯುಗೇ ॥೬೪॥

ಕುರುಶಾರ್ದೂಲನೇ, ಯುದ್ಧವನ್ನು ಮಾಡಲು ಬಯಸುವ ಅವನಿಗೆ ಯುದ್ಧದ ಕಾಲದಲ್ಲಿ ಅವನಿಗೆ ವಿರುದ್ಧವಾದ ಮತ್ತು ಅಪ್ರಿಯವಾದ ಮಾತುಗಳನ್ನು ನಿಶ್ಚಯವಾಗಿ ಮಾತನಾಡುವೆನು.

## ಯುಧಿಷ್ಠಿರಃ

ಸುಕೃತಂ ತೇ ಕೃತಂ ರಾಜನ್ ಪ್ರಹೃಷ್ಟೇನಾಂತರಾತ್ಮನಾ ।
ದುರ್ಯೋಧನಸ್ಯ ಯದ್ ವೀರ ತ್ವಯಾ ವಾಚಾ ಪ್ರತಿಶ್ರುತಮ್ ॥೫೫॥

ಯುಧಿಷ್ಠಿರ– ರಾಜನೇ, ಸಂತೋಷಗೊಂಡ ಮನಸ್ಸಿನಿಂದ ನೀನು ಏನು ಮಾಡಿದೆಯೋ ಅದು ಒಳ್ಳೆಯದೇ ಆಯಿತು. ವೀರನೇ, ದುರ್ಯೋಧನನಿಗೆ ಸಹಾಯದ ವಿಷಯದಲ್ಲಿ ನೀನು ಮಾಡಿದ ವಾಗ್ದಾನವು ಸರಿಯಾಗಿಯೇ ಇದೆ.

ಏಕಂ ತ್ವಿಚ್ಛಾಮಿ ಭದ್ರಂ ತೇ ಕ್ರಿಯಮಾಣಂ ಮಹೀಪತೇ ।
ರಾಜನ್ನಕರ್ತವ್ಯಮಪಿ ಕರ್ತುಮರ್ಹಸಿ ಸತ್ತಮ ॥೫೬॥

ಮಮ ತ್ವವೇಕ್ಷ್ಯಾ ವೀರ ಶೃಣು ವಿಜ್ಞಾಪಯಾಮಿ ತೇ ।

ಮಹೀಪತಿಯೇ, ಸಜ್ಜನರಲ್ಲಿ ಶ್ರೇಷ್ಠನೇ, ನಿನಗೆ ಮಂಗಳವಾಗಲಿ. ಒಂದು ವಿಷಯವನ್ನು ಮಾತ್ರ ನೀನು ಮಾಡಬೇಕೆಂದು ನಾನು ಬಯಸುತ್ತೇನೆ. ರಾಜನೇ, ಅದು ಅಕರ್ತವ್ಯವಾದರೂ ನನ್ನ ಮೇಲಿನ ದೃಷ್ಟಿಯಿಂದ ನೀನು ಅದನ್ನು ಮಾಡಬೇಕು. ನಾನು ಅದನ್ನು ನಿವೇದಿಸುತ್ತೇನೆ. ಅದನ್ನು ಕೇಳು.

ಸ್ಪರ್ಧತೇ ಹಿ ಸದಾ ಕರ್ಣಃ ಪಾರ್ಥೇನ ರಣಮೂರ್ಧನಿ ॥೫೭॥

ಕರ್ಣಾರ್ಜುನಾಭ್ಯಾಂ ಸಂಪ್ರಾಪ್ತೇ ದ್ವೈರಥೇ ರಾಜಸತ್ತಮ ।
ವಾಸುದೇವೇನ ಸಾರಥ್ಯಂ ಕಾರ್ಯಂ ಪಾರ್ಥಸ್ಯ ಮಾತುಲ ।
ಭವಾನಿಹ ಮಹಾರಾಜ ವಾಸುದೇವಸಮೋ ಯುಧಿ ॥೫೮॥

ಕರ್ಣಸ್ಯ ಭವತಾ ಕಾರ್ಯಂ ಸಾರಥ್ಯಂ ನಾತ್ರ ಸಂಶಯಃ ।

ಕರ್ಣನು ಯುದ್ಧದಲ್ಲಿ ಯಾವಾಗಲೂ ಅರ್ಜುನನ ಜೊತೆಯಲ್ಲಿ ಸ್ಪರ್ಧಿಸುತ್ತಾನೆ. ರಾಜಶ್ರೇಷ್ಠನೇ, ಕರ್ಣಾರ್ಜುನರಿಗೆ ದ್ವಂದ್ವಯುದ್ಧವು ಪ್ರಾಪ್ತವಾದಾಗ ಕೃಷ್ಣನು ಅರ್ಜುನನ ಸಾರಥ್ಯವನ್ನು ಮಾಡುತ್ತಾನೆ. ಸೋದರಮಾವನೇ, ಮಹಾರಾಜನೇ, ನೀನು ಕರ್ಣನ ಸಾರಥ್ಯವನ್ನು ಮಾಡಬೇಕು. ಈ ವಿಷಯದಲ್ಲಿ ಸಂಶಯವಿಲ್ಲ.

ತತ್ರ ಪಾಲ್ಯೋಽರ್ಜುನೋ ರಾಜನ್ ಯದಿ ಮೇ ಪ್ರಿಯಮಿಚ್ಛಸಿ ॥೫೯॥

ತೇಜೋವಧಶ್ಚ ತೇ ಕಾರ್ಯಃ ಸೌತೇರಸ್ಮಜ್ಜಯಾವಹಃ ।
ಅಕರ್ತವ್ಯಮಪಿ ಹ್ಯೇತತ್ ಕರ್ತುಮರ್ಹಸಿ ಮಾತುಲ ॥೬೦॥

ರಾಜನೇ, ನನಗೆ ಪ್ರಿಯವನ್ನುಂಟು ಮಾಡಲು ನೀನು ಬಯಸುವುದಾದರೆ ಆಗ ಅರ್ಜುನನನ್ನು ರಕ್ಷಿಸಬೇಕು. ನಮಗೆ ಜಯವುಂಟಾಗುವಂತೆ ಕರ್ಣನ ತೇಜೋವಧೆಯನ್ನು ನೀನು ಮಾಡಬೇಕು. ಸೋದರಮಾವನೇ, ಅಕರ್ತವ್ಯವಾದರೂ ಇದನ್ನು ನೀನು ಮಾಡಿಕೊಡಬೇಕು.

**ಶಲ್ಯಃ**

ಶೃಣು ಪಾಂಡವ ಭದ್ರಂ ತೇ ವಧೋಪಾಯಂ ದುರಾತ್ಮನಃ ।
ಕರ್ಣಸ್ಯ ಸೂತಪುತ್ರಸ್ಯ ನಿತ್ಯಂ ಯುದ್ಧಾಭಿನಂದಿನಃ ॥೬೧॥

ಶಲ್ಯ– ಎಲೈ ಪಾಂಡವನೇ, ನಿನಗೆ ಮಂಗಳವಾಗಲಿ. ದುರಾತ್ಮನೂ, ಯಾವಾಗಲೂ ಯುದ್ಧವನ್ನು ಬಯಸುವವನೂ ಆದ ಸೂತಪುತ್ರನಾದ ಕರ್ಣನ ವಧೆಯ ಉಪಾಯವನ್ನು ಹೇಳುತ್ತೇನೆ, ಕೇಳು.

ತೇಜೋವಧನಿಮಿತ್ತಂ ಹಿ ಸೂತಪುತ್ರಸ್ಯ ಸಂಯುಗೇ ।
ಅಹ(ಹಂ) ತಸ್ಯ ಭವಿಷ್ಯಾಮಿ ಸಂಗ್ರಾಮೇ ಸಾರಥಿರ್ಧ್ರುವಮ್ ॥೬೨॥

ವಾಸುದೇವೇನ ಹಿ ಸಮಂ ನಿತ್ಯಂ ಮಾಂ ಸ ಹಿ ಮನ್ಯತೇ ॥೬೩॥

ಸೂತಪುತ್ರನಾದ ಅವನ ತೇಜೋವಧೆಯನ್ನು ಮಾಡಲು ಯುದ್ಧದಲ್ಲಿ ಖಂಡಿತವಾಗಿ ನಾನು ಅವನಿಗೆ ಸಾರಥಿಯಾಗುವೆನು. ಅವನು ಯಾವಾಗಲೂ ನನ್ನನ್ನು ಕೃಷ್ಣನಿಗೆ ಸಮಾನನಾದವನು ಎಂದು ಭಾವಿಸುತ್ತಾನಷ್ಟೆ?

ತಸ್ಯಾಹಂ ಕುರುಶಾರ್ದೂಲ ಪ್ರತೀಪಮಹಿತಂ ವಚಃ ।
ಧ್ರುವಂ ಸಂಕಥಯಿಷ್ಯಾಮಿ ಯೋದ್ಧುಕಾಮಸ್ಯ ಸಂಯುಗೇ ॥೬೪॥

ಕುರುಶಾರ್ದೂಲನೇ, ಯುದ್ಧವನ್ನು ಮಾಡಲು ಬಯಸುವ ಅವನಿಗೆ ಯುದ್ಧದ ಕಾಲದಲ್ಲಿ ಅವನಿಗೆ ವಿರುದ್ಧವಾದ ಮತ್ತು ಅಪ್ರಿಯವಾದ ಮಾತುಗಳನ್ನು ನಿಶ್ಚಯವಾಗಿ ಮಾತನಾಡುವೆನು.

ಅಹಂ ತಥಾ ಕರಿಷ್ಯಾಮಿ ಸಾರಥೀ ರಣಮೂರ್ಧನಿ ।
ಯಥಾ ಸ ಹತದರ್ಪಶ್ಚ ಗತತೇಜಾಶ್ಚ ಪಾಂಡವ ॥೬೫॥

ಭವಿಷ್ಯತಿ ಸುಖಂ ಹಂತುಂ ಸತ್ಯಮೇತದ್ ಬ್ರವೀಮಿ ತೇ ।
ಏವಮೇತತ್ ಕರಿಷ್ಯಾಮಿ ಯಥಾ ತಾತ ತ್ವಮಾತ್ಥ ಮಾಮ್ ॥೬೬॥

ಯಚ್ಚಾನ್ಯದಪಿ ಶಕ್ಷ್ಯಾಮಿ ತತ್ ಕರಿಷ್ಯಾಮಿ ತೇ ಹಿತಮ್ ॥೬೭॥

ಪಾಂಡವನೇ, ಅವನು ಯುದ್ಧದಲ್ಲಿ ತನ್ನ ದರ್ಪವನ್ನು ಕಳೆದುಕೊಂಡು ಸುಖವಾಗಿ ಕೊಲ್ಲಲ್ಪಡಲು ಸಾಧ್ಯವಾಗುವಂತೆ ನಾನು ಅವನ ತೇಜೋವಧೆಯನ್ನು ಮಾಡುವೆನು. ಈ ವಿಷಯವನ್ನು ನಾನು ಸತ್ಯವೆಂದು ಪ್ರತಿಜ್ಞೆ ಮಾಡಿ ಹೇಳುತ್ತಿದ್ದೇನೆ. ಪ್ರೀತಿಪಾತ್ರನೇ, ನೀನು ಹೇಳಿದಂತೆಯೇ ಈ ಕಾರ್ಯವನ್ನು ಮಾಡುವೆನು. ನಿನ್ನ ಹಿತಕ್ಕೋಸ್ಕರ ಬೇರೆ ಏನನ್ನಾದರೂ ಮಾಡಲು ಸಾಧ್ಯವಿದ್ದರೆ ಅದನ್ನೂ ಮಾಡುವೆನು.

ಯಚ್ಚ ದುಃಖಂ ತ್ವಯಾ ಪ್ರಾಪ್ತಂ ದ್ಯೂತೇ ವೈ ಕೃಷ್ಣಯಾ ಸಹ ।
ಪರುಷಾಣಿ ಚ ವಾಕ್ಯಾನಿ ಸೂತಪುತ್ರಕೃತಾನಿ ವೈ ॥೬೮॥

ಜಟಾಸುರಾತ್ ಪರಿಕ್ಲೇಶಃ ಕೀಚಕಾಚ್ಚ ಮಹಾದ್ಯುತೇ ।
ದ್ರೌಪದ್ಯಾಽಧಿಗತಂ ಸರ್ವಂ ದಮಯಂತ್ಯಾ ಯಥಾಽಶುಭಮ್ ॥೬೯॥

ಸರ್ವಂ ದುಃಖಮಿದಂ ವೀರ ಸುಖೋದರ್ಕಂ ಭವಿಷ್ಯತಿ ।
ನಾತ್ರ ಮನ್ಯುಸ್ತ್ವಯಾ ಕಾರ್ಯೋ ವಿಧಿರ್ಹಿ ಬಲವತ್ತರಃ ॥೭೦॥

ನೀನು ದ್ಯೂತದಲ್ಲಿ ಪರಾಜಿತನಾಗಿ ಯಾವ ದುಃಖವನ್ನು ಹೊಂದಿದೆಯೋ ಮತ್ತು ಸೂತಪುತ್ರನಾದ ಕರ್ಣನು ಆ ಸಂದರ್ಭದಲ್ಲಿ ಯಾವ ಕ್ರೂರವಾದ ಮಾತುಗಳನ್ನು ಆಡಿದನೋ, ಎಲೈ ಮಹಾದ್ಯುತಿಯೇ, ದಮಯಂತಿಯಂತೆ ದ್ರೌಪದಿಯು ಜಟಾಸುರನಿಂದ ಬಾಧೆ, ಕೀಚಕನಿಂದ ಬಾಧೆ ಮೊದಲಾದ ಯಾವ ಅಶುಭಗಳನ್ನು ಅನುಭವಿಸಿದಳೋ, ಎಲೈ ವೀರನೇ, ಈ ಎಲ್ಲ ದುಃಖವೂ ಸುಖಕ್ಕೆ ನಾಂದಿಯಾಗುವುದು (ಸುಖೋದಯಕ್ಕೆ ಕಾರಣವಾಗುವುದು). ಈ ವಿಷಯದಲ್ಲಿ ಸಿಟ್ಟುಮಾಡಬೇಡ. ವಿಧಿಯು ಪ್ರಬಲವಾದುದಷ್ಟೆ!

**ದುಃಖಾನಿ ಹಿ ಮಹಾತ್ಮಾನಃ ಪ್ರಾಪ್ನುವಂತಿ ಯುಧಿಷ್ಠಿರ ।**
**ದೇವೈರಪಿ ಹಿ ದುಃಖಾನಿ ಪ್ರಾಪ್ತಾನಿ ಜಗತೀಪತೇ ॥೭೧॥**

ಯುಧಿಷ್ಠಿರನೇ, ಮಹಾತ್ಮರೂ ದುಃಖಗಳನ್ನು ಹೊಂದುತ್ತಾರೆ ಎಂದು ಪ್ರಸಿದ್ಧವಾಗಿದೆ. ಜಗತೀಪತಿಯೇ, ದೇವತೆಗಳೂ ಸಹ ದುಃಖಗಳನ್ನು ಅನುಭವಿಸಿದರು.

**ಇಂದ್ರೇಣ ಶ್ರೂಯತೇ ರಾಜನ್ ಸಭಾರ್ಯೇಣ ಮಹಾತ್ಮನಾ ।**
**ಅನುಭೂತಂ ಮಹದ್ ದುಃಖಂ ದೇವರಾಜೇನ ಭಾರತ ॥೭೨॥**

ಎಲೈ ಭಾರತನೇ, ಎಲೈ ರಾಜನೇ, ಮಹಾತ್ಮನಾದ ದೇವರಾಜನಾದ ಇಂದ್ರನು ಭಾರ್ಯಾಸಹಿತನಾಗಿ ದೊಡ್ಡ ದುಃಖವನ್ನು ಅನುಭವಿಸಿದನು ಎಂದು ಕೇಳಿಬರುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಅಷ್ಟಮೋಽಧ್ಯಾಯಃ ॥

॥ ಸೇನೋದ್ಯೋಗಪರ್ವಣಿ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಎಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

## ಒಂಬತ್ತನೆಯ ಅಧ್ಯಾಯ

ಶಲ್ಯನಿಂದ ಯುಧಿಷ್ಠಿರನನ್ನು ಕುರಿತು, ಶಕ್ರನು ವಿಶ್ವರೂಪನ ವಧೆಯನ್ನು ಮಾಡಿ, ಸಂಕಟಪ್ರಾಪ್ತಿಯ ಮತ್ತು ವೃತ್ರೋತ್ಪತ್ತಿಯ ಕಥನ.

**ಯುಧಿಷ್ಠಿರಃ**

**ಕಥಮಿಂದ್ರೇಣ ರಾಜೇಂದ್ರ ಸಭಾರ್ಯೇಣ ಮಹಾತ್ಮನಾ ।**
**ದುಃಖಂ ಪ್ರಾಪ್ತಂ ಪುರಾ ಘೋರಮೇತದಿಚ್ಛಾಮಿ ವೇದಿತುಮ್ ॥೧॥**

ಯುಧಿಷ್ಠಿರ– ರಾಜೇಂದ್ರನೇ, ಭಾರ್ಯಾಸಹಿತನಾದ ಮಹಾತ್ಮನಾದ ಇಂದ್ರನು ಹಿಂದೆ ಇಂತಹ ಘೋರವಾದ ದುಃಖವನ್ನು ಹೇಗೆ ಹೊಂದಿದನು ಎಂದು ತಿಳಿಯಲು ಬಯಸುತ್ತೇನೆ.

**ಶಲ್ಯಃ**

**ಶೃಣು ರಾಜನ್ ಪುರಾವೃತ್ತಮಿತಿಹಾಸಂ ಪುರಾತನಮ್ ।**
**ಸಭಾರ್ಯೇಣ ಯಥಾ ಪ್ರಾಪ್ತಂ ದುಃಖಮಿಂದ್ರೇಣ ಭಾರತ ॥೨॥**

ಶಲ್ಯ– ರಾಜನೇ, ಭಾರತನೇ, ಭಾರ್ಯಾಸಹಿತನಾದ ಇಂದ್ರನು ಹೇಗೆ ದುಃಖವನ್ನು ಪಡೆದನು ಎಂಬ ವಿಷಯದಲ್ಲಿ ಪುರಾತನವಾದ ಒಂದು ಇತಿಹಾಸವನ್ನು ಹೇಳುತ್ತೇನೆ, ಕೇಳು.

**ತ್ವಷ್ಟಾ ಪ್ರಜಾಪತಿರ್ಆಸೀದ್ ದೇವಶ್ರೇಷ್ಠೋ ಮಹಾಯಶಾಃ ।**
**ಸ ಪುತ್ರಂ ವೈ ತ್ರಿಶಿರಸಮಿಂದ್ರದ್ರೋಹಾತ್ ಕಿಲಾಸೃಜತ್ ॥೩॥**

ಮಹಾಕೀರ್ತಿವಂತನೂ ಮತ್ತು ದೇವಶ್ರೇಷ್ಠನೂ ಆದ ತ್ವಷ್ಟ್ರ ಎಂಬ ಪ್ರಜಾಪತಿ ಇದ್ದನು. ಅವನು ಇಂದ್ರನ ದ್ರೋಹದಿಂದಾಗಿ ತ್ರಿಶಿರಸ್ ಎಂಬ ಪುತ್ರನನ್ನು ಪಡೆದನು (ತ್ರಿಶಿರಸ್‌ಗೆ ವಿಶ್ವರೂಪ ಎಂದೂ ಹೆಸರು).

**ಐಂದ್ರಂ ಸಂಪ್ರಾರ್ಥಯತ್ ಸ್ಥಾನಂ ವಿಶ್ವರೂಪೋ ಮಹಾದ್ಯುತಿಃ ॥೪॥**

**ತೈಸ್ತ್ರಿಭಿರ್ವದನೈರ್ಘೋರೈಃ ಸೂರ್ಯೇಂದುಜ್ವಲನೋಪಮೈಃ ।**
**ವೇದಾನೇಕೇನ ಸೋಽಧೀತೇ ಸುರಾಮೇಕೇನ ಚಾಪಿಬತ್ ॥೫॥**

**ಏಕೇನ ಚ ದಿಶಃ ಸರ್ವಾಃ ಪಿಬನ್ನಿವ ನಿರೀಕ್ಷತೇ ॥೬॥**

ಮಹಾತೇಜಸ್ವಿಯಾದ ವಿಶ್ವರೂಪನು ಇಂದ್ರನ ಸ್ಥಾನವನ್ನು ಬಯಸುವವನಾಗಿ ಚಂದ್ರ-ಸೂರ್ಯಾಗ್ನಿಗಳಿಗೆ ಸಮಾನವಾದ ತನ್ನ ಮೂರು ಶಿರಸ್ಸುಗಳಿಂದ ಘೋರವಾದ ತಪಸ್ಸನ್ನು ಮಾಡಿ ಒಂದು ಮುಖದಿಂದ ವೇದಾಧ್ಯಯನವನ್ನು ಮಾಡುತ್ತಿದ್ದನು. ಇನ್ನೊಂದು ಮುಖದಿಂದ ಸುರಾಪಾನವನ್ನು ಮಾಡುತ್ತಿದ್ದನು. ಮತ್ತೊಂದು ಮುಖದ ಕಣ್ಣುಗಳಿಂದ ಎಲ್ಲಾ ದಿಕ್ಕುಗಳನ್ನೂ ಪಾನ ಮಾಡುವಂತೆ ನೋಡುತ್ತಿದ್ದನು.

**ಸ ತಪಸ್ವೀ ಮೃದುರ್ದಾಂತೋ ಧರ್ಮೇ ತಪಸಿ ಚೋದ್ಯತಃ ।**
**ತಪ್ಯತೇ ಸ್ಮ ತಪಸ್ತೀವ್ರಂ ಸುದುಶ್ಚರಮರಿಂದಮ ॥೭॥**

ಎಲೈ ಅರಿಂದಮನೇ, ಅವನು ಮೃದುವೂ, ಇಂದ್ರಿಯ ನಿಗ್ರಹವುಳ್ಳವನೂ, ಧರ್ಮ ಮತ್ತು ತಪಸ್ಸುಗಳಲ್ಲಿ ನಿರತನಾದವನೂ ಮತ್ತು ತಪಸ್ವಿಯೂ ಆಗಿ ಸುದುಶ್ಚರವಾದ ತೀವ್ರವಾದ ತಪಸ್ಸನ್ನು ಆಚರಿಸಿದನು.

**ತಸ್ಯ ದೃಷ್ಟ್ವಾ ತಪೋವೀರ್ಯಂ ಸತ್ಯಂ ಚಾಮಿತತೇಜಸಃ ।**
**ವಿಷಾದಮಗಮದ್ ಶಕ್ರ ಇಂದ್ರೋಽಯಂ ಮಾ ಭವೇದಿತಿ ॥೮॥**

ಇಂದ್ರನು ಅಮಿತತೇಜಸ್ವಿಯಾದ ಅವನ ತಪಸ್ಸನ್ನೂ, ವೀರ್ಯವನ್ನೂ ಮತ್ತು ಸತ್ಯವನ್ನೂ ನೋಡಿ ಇವನು ಇಂದ್ರನಾಗಬಾರದು ಎಂದು ವಿಷಾದವನ್ನು ಹೊಂದಿದನು.

**ಕಥಂ ಸಜ್ಜೇತ ಭೋಗೇಷು ನ ಚ ತಪ್ಯೇನ್ಮಹತ್ ತಪಃ ।**
**ವಿವರ್ಧಮಾನಸ್ತ್ರಿರಾಃ ಸರ್ವಂ ಹಿ ಭುವನಂ ಗ್ರಸೇತ್ ॥೯॥**

**ಇತಿ ಸಂಚಿಂತ್ಯ ಬಹುಧಾ ಬುದ್ಧಿಮಾನ್ ಭರತರ್ಷಭ ।**
**ಆಜ್ಞಾಪಯತ್ ಸೋಽಪ್ಸರಸಃ ತ್ವಷ್ಟ್ರಪುತ್ರಪ್ರಲೋಭನೇ ॥೧೦॥**

ಇವನು ಹೇಗೆ ಭೋಗಗಳಲ್ಲಿ ಆಸಕ್ತನಾದಾನು? ಘೋರವಾದ ತಪಸ್ಸನ್ನು ಹೇಗೆ ನಿಲ್ಲಿಸಿಯಾನು? ಹೀಗೆ ಬೆಳೆಯುತ್ತಿರುವ ವಿಶ್ವರೂಪನು ಲೋಕಗಳನ್ನೇ ನುಂಗಬಹುದು ಎಂದು ಅನೇಕ ವಿಧವಾಗಿ ಚಿಂತಿಸಿ ಎಲೈ ಭರತರ್ಷಭನೇ, ಮೇಧಾವಿಯಾದ ಅವನು ತ್ವಷ್ಟ್ರಪುತ್ರನಾದ ವಿಶ್ವರೂಪನನ್ನು ಪ್ರಲೋಭಿಸಲು ಅಪ್ಸರೆಯರಿಗೆ ಪ್ರಚೋದಿಸಿದನು.

**ಯಥಾ ಸ ಸಜ್ಜೇತ್ ತ್ರಿಶಿರಾಃ ಕಾಮಭೋಗೇಷು ವೈ ಭೃಶಮ್ ।**
**ಕ್ಷಿಪ್ರಂ ಕುರುತ ಗಚ್ಛಧ್ವಂ ಪ್ರಲೋಭಯತ ಮಾ ಚಿರಮ್ ॥೧೧॥**

ಅಪ್ಸರೆಯರೇ ನೀವು ಶೀಘ್ರವಾಗಿ ಹೋಗಿ ಆ ತ್ರಿಶಿರನನ್ನು ಪ್ರಲೋಭಗೊಳಿಸಿ ಅವನು ಕಾಮ-ಭೋಗಗಳಲ್ಲಿ ಬಹಳವಾಗಿ ಆಸಕ್ತನಾಗುವಂತೆ ಮಾಡಿ.

**ಶೃಂಗಾರವೇಷಾಃ ಸುಶ್ರೋಣ್ಯೋ ಹಾರ್ಯೈರ್ಮುಕ್ತಾಮನೋಹರೈಃ ।**
**ಹಾವಭಾವಸಮಾಯುಕ್ತಾಃ ಸರ್ವಾಃ ಸೌಂದರ್ಯಶೋಭಿತಾಃ ॥೧೨॥**

**ಪ್ರಜಾಪತಿರ್ದೇವದೇವಶ್ಚಂದ್ರೋ ವೈಶ್ರವಣೋ ಯಮಃ ।**
**ವರುಣಃ ಪಾಶಹಸ್ತೋ ವಾ ಧರ್ಮ ಏವ ಭವೇತ್ ಸ್ವಯಮ್ ॥೧೩॥**

**ಪ್ರಲೋಭಯತ ಭದ್ರಂ ವಃ ಶಮಯಧ್ವಂ ಭಯಂ ಮಮ ।**

## ಶಲ್ಯಃ

ಶೃಣು ರಾಜನ್ ಪುರಾವೃತ್ತಮಿತಿಹಾಸಂ ಪುರಾತನಮ್ ।
ಸಭಾರ್ಯೇಣ ಯಥಾ ಪ್ರಾಪ್ತಂ ದುಃಖಮಿಂದ್ರೇಣ ಭಾರತ ॥೨॥

ಶಲ್ಯ– ರಾಜನೇ, ಭಾರತನೇ, ಭಾರ್ಯಾಸಹಿತನಾದ ಇಂದ್ರನು ಹೇಗೆ ದುಃಖವನ್ನು ಪಡೆದನು ಎಂಬ ವಿಷಯದಲ್ಲಿ ಪುರಾತನವಾದ ಒಂದು ಇತಿಹಾಸವನ್ನು ಹೇಳುತ್ತೇನೆ, ಕೇಳು.

ತ್ವಷ್ಟಾ ಪ್ರಜಾಪತಿರ್ಆಸೀದ್ ದೇವಶ್ರೇಷ್ಠೋ ಮಹಾಯಶಾಃ ।
ಸ ಪುತ್ರಂ ವೈ ತ್ರಿಶಿರಸಮಿಂದ್ರದ್ರೋಹಾತ್ ಕಿಲಾಸೃಜತ್ ॥೩॥

ಮಹಾಕೀರ್ತಿವಂತನೂ ಮತ್ತು ದೇವಶ್ರೇಷ್ಠನೂ ಆದ ತ್ವಷ್ಟ್ರ ಎಂಬ ಪ್ರಜಾಪತಿ ಇದ್ದನು. ಅವನು ಇಂದ್ರನ ದ್ರೋಹದಿಂದಾಗಿ ತ್ರಿಶಿರಸ್ ಎಂಬ ಪುತ್ರನನ್ನು ಪಡೆದನು (ತ್ರಿಶಿರಸ್‌ಗೆ ವಿಶ್ವರೂಪ ಎಂದೂ ಹೆಸರು).

ಐಂದ್ರಂ ಸಂಪ್ರಾರ್ಥಯತ್ ಸ್ಥಾನಂ ವಿಶ್ವರೂಪೋ ಮಹಾದ್ಯುತಿಃ ॥೪॥

ತೈಸ್ತ್ರಿಭಿರ್ವದನೈರ್ಘೋರೈಃ ಸೂರ್ಯೇಂದುಜ್ವಲನೋಪಮೈಃ ।
ವೇದಾನೇಕೇನ ಸೋಽಧೀತೇ ಸುರಾಮೇಕೇನ ಚಾಪಿಬತ್ ॥೫॥

ಏಕೇನ ಚ ದಿಶಃ ಸರ್ವಾಃ ಪಿಬನ್ನಿವ ನಿರೀಕ್ಷತೇ ॥೬॥

ಮಹಾತೇಜಸ್ವಿಯಾದ ವಿಶ್ವರೂಪನು ಇಂದ್ರನ ಸ್ಥಾನವನ್ನು ಬಯಸುವವನಾಗಿ ಚಂದ್ರ-ಸೂರ್ಯಾಗ್ನಿಗಳಿಗೆ ಸಮಾನವಾದ ತನ್ನ ಮೂರು ಶಿರಸ್ಸುಗಳಿಂದ ಘೋರವಾದ ತಪಸ್ಸನ್ನು ಮಾಡಿ ಒಂದು ಮುಖದಿಂದ ವೇದಾಧ್ಯಯನವನ್ನು ಮಾಡುತ್ತಿದ್ದನು. ಇನ್ನೊಂದು ಮುಖದಿಂದ ಸುರಾಪಾನವನ್ನು ಮಾಡುತ್ತಿದ್ದನು. ಮತ್ತೊಂದು ಮುಖದ ಕಣ್ಣುಗಳಿಂದ ಎಲ್ಲಾ ದಿಕ್ಕುಗಳನ್ನೂ ಪಾನ ಮಾಡುವಂತೆ ನೋಡುತ್ತಿದ್ದನು.

ಸ ತಪಸ್ವೀ ಮೃದುರ್ದಾಂತೋ ಧರ್ಮೇ ತಪಸಿ ಚೋದ್ಯತಃ ।
ತಪ್ಯತೇ ಸ್ಮ ತಪಸ್ತೀವ್ರಂ ಸುದುಶ್ಚರಮರಿಂದಮ ॥೭॥

ಎಲೈ ಅರಿಂದಮನೇ, ಅವನು ಮೃದುವೂ, ಇಂದ್ರಿಯ ನಿಗ್ರಹವುಳ್ಳವನೂ, ಧರ್ಮ ಮತ್ತು ತಪಸ್ಸುಗಳಲ್ಲಿ ನಿರತನಾದವನೂ ಮತ್ತು ತಪಸ್ವಿಯೂ ಆಗಿ ಸುದುಶ್ಚರವಾದ ತೀವ್ರವಾದ ತಪಸ್ಸನ್ನು ಆಚರಿಸಿದನು.

**ತಸ್ಯ ದೃಷ್ಟ್ವಾ ತಪೋವೀರ್ಯಂ ಸತ್ಯಂ ಚಾಮಿತತೇಜಸಃ ।**
**ವಿಷಾದಮಗಮದ್ ಶಕ್ರ ಇಂದ್ರೋಽಯಂ ಮಾ ಭವೇದಿತಿ ॥೮॥**

ಇಂದ್ರನು ಅಮಿತತೇಜಸ್ವಿಯಾದ ಅವನ ತಪಸ್ಸನ್ನೂ, ವೀರ್ಯವನ್ನೂ ಮತ್ತು ಸತ್ಯವನ್ನೂ ನೋಡಿ ಇವನು ಇಂದ್ರನಾಗಬಾರದು ಎಂದು ವಿಷಾದವನ್ನು ಹೊಂದಿದನು.

**ಕಥಂ ಸಜ್ಜೇತ ಭೋಗೇಷು ನ ಚ ತಪ್ಯೇನ್ಮಹತ್ ತಪಃ ।**
**ವಿವರ್ಧಮಾನಸ್ತ್ರಿರಾಃ ಸರ್ವಂ ಹಿ ಭುವನಂ ಗ್ರಸೇತ್ ॥೯॥**

**ಇತಿ ಸಂಚಿಂತ್ಯ ಬಹುಧಾ ಬುದ್ಧಿಮಾನ್ ಭರತರ್ಷಭ ।**
**ಆಜ್ಞಾಪಯತ್ ಸೋಽಪ್ಸರಸಃ ತ್ವಷ್ಟ್ರಪುತ್ರಪ್ರಲೋಭನೇ ॥೧೦॥**

ಇವನು ಹೇಗೆ ಭೋಗಗಳಲ್ಲಿ ಆಸಕ್ತನಾದಾನು? ಘೋರವಾದ ತಪಸ್ಸನ್ನು ಹೇಗೆ ನಿಲ್ಲಿಸಿಯಾನು? ಹೀಗೆ ಬೆಳೆಯುತ್ತಿರುವ ವಿಶ್ವರೂಪನು ಲೋಕಗಳನ್ನೇ ನುಂಗಬಹುದು ಎಂದು ಅನೇಕ ವಿಧವಾಗಿ ಚಿಂತಿಸಿ ಎಲೈ ಭರತರ್ಷಭನೇ, ಮೇಧಾವಿಯಾದ ಅವನು ತ್ವಷ್ಟ್ರಪುತ್ರನಾದ ವಿಶ್ವರೂಪನನ್ನು ಪ್ರಲೋಭಿಸಲು ಅಪ್ಸರೆಯರಿಗೆ ಪ್ರಚೋದಿಸಿದನು.

**ಯಥಾ ಸ ಸಜ್ಜೇತ್ ತ್ರಿಶಿರಾಃ ಕಾಮಭೋಗೇಷು ವೈ ಭೃಶಮ್ ।**
**ಕ್ಷಿಪ್ರಂ ಕುರುತ ಗಚ್ಛಧ್ವಂ ಪ್ರಲೋಭಯತ ಮಾ ಚಿರಮ್ ॥೧೧॥**

ಅಪ್ಸರೆಯರೇ ನೀವು ಶೀಘ್ರವಾಗಿ ಹೋಗಿ ಆ ತ್ರಿಶಿರನನ್ನು ಪ್ರಲೋಭಗೊಳಿಸಿ ಅವನು ಕಾಮ-ಭೋಗಗಳಲ್ಲಿ ಬಹಳವಾಗಿ ಆಸಕ್ತನಾಗುವಂತೆ ಮಾಡಿ.

**ಶೃಂಗಾರವೇಷಾಃ ಸುಶ್ರೋಣ್ಯೋ ಹಾರ್ಯೈರ್ಮುಕ್ತಾಮನೋಹರೈಃ ।**
**ಹಾವಭಾವಸಮಾಯುಕ್ತಾಃ ಸರ್ವಾಃ ಸೌಂದರ್ಯಶೋಭಿತಾಃ ॥೧೨॥**

**ಪ್ರಜಾಪತಿರ್ದೇವದೇವಶ್ಚಂದ್ರೋ ವೈಶ್ರವಣೋ ಯಮಃ ।**
**ವರುಣಃ ಪಾಶಹಸ್ತೋ ವಾ ಧರ್ಮ ಏವ ಭವೇತ್ ಸ್ವಯಮ್ ॥೧೩॥**

**ಪ್ರಲೋಭಯತ ಭದ್ರಂ ವಃ ಶಮಯಧ್ವಂ ಭಯಂ ಮಮ ।**

ಶೃಂಗಾರವೇಷವನ್ನು ಹೊಂದಿದವರಾಗಿ, ಮನೋಹರವಾದ ಮುತ್ತಿನ ಹಾರಗಳನ್ನು ಧರಿಸಿ, ಒಳ್ಳೆಯ ಮೈಕಟ್ಟನ್ನು ಉಳ್ಳವರಾಗಿ, ಸೌಂದರ್ಯಶೋಭಿತರಾಗಿ, ಹಾವಭಾವ ಯುಕ್ತರಾಗಿ ನೀವೆಲ್ಲರೂ ಹೋಗಿ. ದೇವದೇವನಾದ ಪ್ರಜಾಪತಿಯಾಗಲೀ ಅಥವಾ ಚಂದ್ರನಾಗಲೀ ಅಥವಾ ಕುಬೇರನಾಗಲೀ, ಯಮನಾಗಲೀ, ಪಾಶಹಸ್ತನಾದ ವರುಣನಾಗಲೀ ಅಥವಾ ಸ್ವಯಂ ಧರ್ಮನೇ ಆಗಲಿ, ಅವರನ್ನು ನೀವು ಪ್ರಲೋಭಗೊಳಿಸಿ ನನಗೆ ಉಂಟಾಗಿರುವ ಭಯವನ್ನು ಪರಿಹಾರ ಮಾಡಿ.

**ಅಸ್ವಸ್ಥಂ ಹ್ಯಾತ್ಮನಾऽऽತ್ಮಾನಂ ಲಕ್ಷಯಾಮಿ ವರಾಂಗನಾಃ ॥೧೪॥**

**ಭಯಂ ತನ್ಮೇ ಮಹಾಘೋರಂ ಕ್ಷಿಪ್ರಂ ನಾಶಯತಾಬಲಾಃ ॥೧೫॥**

ವರಾಂಗನೆಯರೇ, ನಾನು ಬಹಳ ಅಸ್ವಸ್ಥಗೊಂಡಿದ್ದೇನೆಂದು ಭಾವಿಸುತ್ತೇನೆ. ಅಬಲೆಯರೇ, ಈ ನನ್ನ ಮಹಾಘೋರವಾದ ಭಯವನ್ನು ಶೀಘ್ರವಾಗಿ ನಾಶಮಾಡಿ (ಎಂದು ಹೇಳಿದನು).

**ಅಪ್ಸರಸಃ**

**ತಥಾ ಯತ್ನಂ ಕರಿಷ್ಯಾಮಃ ಶಕ್ರ ತಸ್ಯ ಪ್ರಲೋಭನೇ ।**
**ಯಥಾ ನಾವಾಪ್ಸ್ಯಸಿ ಭಯಂ ತಸ್ಮಾದ್ ಬಲನಿಷೂದನ ॥೧೬॥**

**ನಿರ್ದಹನ್ನಿವ ಚಕ್ಷುರ್ಭ್ಯಾಂ ಯೋऽಸಾವಾಸ್ತೇ ತಪೋನಿಧಿಃ ।**
**ತಂ ಪ್ರಲೋಭಯಿತುಂ ದೇವ ಗಚ್ಛಾಮಃ ಸಹಿತಾ ವಯಮ್ ॥೧೭॥**

**ಯತಿಷ್ಯಾಮೋ ವಶೇ ಕರ್ತುಂ ವ್ಯಪನೇತುಂ ಚ ತೇ ಭಯಮ್ ॥೧೮॥**

**ಅಪ್ಸರೆಯರು–** ದೇವೇಂದ್ರನೇ, ವಿಶ್ವರೂಪನಿಂದ ನಿನಗೆ ಭಯವುಂಟಾಗದಂತೆ ಅವನನ್ನು ಪ್ರಲೋಭಗೊಳಿಸಲು ನಾವು ಪ್ರಯತ್ನಪಡುವೆವು. ಎಲೈ ಬಲನಿಷೂದನನೇ, ಯಾವ ತಪೋನಿಧಿಯಾದ ವಿಶ್ವರೂಪನು ತನ್ನ ಕಣ್ಣುಗಳಿಂದ ಜಗತ್ತನ್ನೇ ಸುಡುವಂತೆ ತೋರುತ್ತಿದ್ದಾನೆಯೋ ಎಲೈ ದೇವನೇ, ಅವನನ್ನು ಪ್ರಲೋಭಗೊಳಿಸಲು ನಾವೆಲ್ಲರೂ ಒಟ್ಟಿಗೆ ಹೋಗುತ್ತೇವೆ. ಅವನನ್ನು ವಶಪಡಿಸಿಕೊಂಡು ನಿನ್ನ ಭಯವನ್ನು ಪರಿಹರಿಸಲು ನಾವು ಪ್ರಯತ್ನಿಸುವೆವು.

ಶಲ್ಯಃ

ಇಂದ್ರೇಣ ತಾಸ್ತ್ವನುಜ್ಞಾತಾ ಜಗ್ಮುಸ್ತ್ರಿಶಿರಸೋಽಂತಿಕಮ್ ॥೧೯॥

ತತ್ರ ತಾ ವಿವಿಧೈರ್ಭಾವೈರ್ಲೋಭಯಂತ್ಯೋ ವರಾಂಗನಾಃ ।
ನೃತ್ತಂ ಸಂದರ್ಶಯಾಮಾಸುಃ ತಥೈವಾಂಗೇಷು ಸೌಷ್ಠವಮ್ ॥೨೦॥

ಶಲ್ಯ– ಇಂದ್ರನ ಅನುಮತಿಯನ್ನು ಪಡೆದು ಅವರು ವಿಶ್ವರೂಪನ ಬಳಿಗೆ ಹೋದರು. ಅಲ್ಲಿ ಆ ವರಾಂಗನೆಯರು ತಮ್ಮ ವಿವಿಧ ಭಾವಗಳಿಂದ ಅವನನ್ನು ಪ್ರಲೋಭಗೊಳಿಸುತ್ತಾ ನೃತ್ಯವನ್ನು ಮತ್ತು ತಮ್ಮ ದೇಹದ ಸೌಷ್ಠವವನ್ನು ತೋರಿಸಿದರು.

ನಾಭ್ಯಗಚ್ಛತ್ ಪ್ರಹರ್ಷಂ ತಾಃ ಸ ಪಶ್ಯನ್ ಸುಮಹಾತಪಾಃ ।
ಇಂದ್ರಿಯಾಣಿ ವಶೇ ಕೃತ್ವಾ ಪೂರ್ಣಸಾಗರಸನ್ನಿಭಃ ॥೨೧॥

ಆ ಮಹಾತಪಸ್ವಿಯಾದ ವಿಶ್ವರೂಪನು ಅವರನ್ನು ನೋಡಿ ಯಾವ ಸಂತೋಷವನ್ನೂ ಹೊಂದಲಿಲ್ಲ. ಇಂದ್ರಿಯಗಳನ್ನು ತನ್ನ ಅಧೀನದಲ್ಲಿ ಇಟ್ಟುಕೊಂಡು ಪೂರ್ಣವಾದ ಸಾಗರದಂತೆ ಅಕ್ಷೋಭ್ಯನಾಗಿದ್ದನು.

ತಾಸ್ತು ಯತ್ನಂ ಪರಂ ಕೃತ್ವಾ ಪುನಃ ಶಕ್ರಮುಪಾಗಮನ್ ।
ಕೃತಾಂಜಲಿಪುಟಾಃ ಸರ್ವಾ ದೇವರಾಜಮಥಾಬ್ರುವನ್ ॥೨೨॥

ನ ಸ ಶಕ್ಯಃ ಸುದುರ್ಧರ್ಷೋ ಧೈರ್ಯಾಚ್ಚಾಲಯಿತುಂ ಪ್ರಭೋ ।
ಯತ್ತೇ ಕಾರ್ಯಂ ಮಹಾಭಾಗ ಕ್ರಿಯತಾಂ ತದನಂತರಮ್ ॥೨೩॥

ಅವರು ತಮ್ಮ ಶ್ರೇಷ್ಠವಾದ ಪ್ರಯತ್ನವನ್ನು ಮಾಡಿ ಇಂದ್ರನ ಬಳಿಗೆ ಪುನಃ ಬಂದರು. ಅವರೆಲ್ಲರೂ ದೇವರಾಜನಿಗೆ ಕೈಗಳನ್ನು ಮುಗಿದು ಎಲೈ ಮಹಾನುಭಾವನೇ, ಪ್ರಭುವೇ, ಎಂದೂ ಸೋಲದ ಆ ಮಹಾತಪಸ್ವಿಯನ್ನು ಅವನ ಧೈರ್ಯದಿಂದ ಅಲುಗಾಡಿಸಲು ಸಾಧ್ಯವಿಲ್ಲ. ಮುಂದೇನು ಮಾಡಬೇಕೋ ಅದನ್ನು ನೀನು ಮಾಡು ಎಂದು ಹೇಳಿದರು.

ಸಂಪೂಜ್ಯಾಪ್ಸರಸಃ ಶಕ್ರೋ ವಿಸೃಜ್ಯ ಚ ಮಹಾಮತಿಃ ।
ಚಿಂತಯಾಮಾಸ ತಸ್ಯೈವ ವಧೋಪಾಯಂ ಮಹಾತ್ಮನಃ ॥೨೪॥

ಮಹಾಮತಿಯಾದ ಇಂದ್ರನು ಅಪ್ಸರೆಯರನ್ನು ಸತ್ಕರಿಸಿ ಬೀಳ್ಕೊಟ್ಟು ಆ ಮಹಾತ್ಮನ ವಧೋಪಾಯವನ್ನೇ ಕುರಿತು ಚಿಂತಿಸಿದನು.

**ಸ ತೂಷ್ಣೀಂ ಚಿಂತಯನ್ ವೀರೋ ದೇವರಾಜಃ ಪ್ರತಾಪವಾನ್ ।**
**ವಿನಿಶ್ಚಿತ್ಯ ಮತಿರ್ಧೀಮಾನ್ ವಧೇ ತ್ರಿಶಿರಸೋಽಭವತ್ ॥೨೫॥**

ವೀರನೂ, ಪ್ರತಾಪಶಾಲಿಯೂ, ಮೇಧಾವಿಯೂ ಆದ ಆ ದೇವರಾಜನು ಮೌನವಾಗಿ ಚಿಂತಿಸುತ್ತಾ ವಿಶ್ವರೂಪನ ವಧೆಯ ವಿಷಯದಲ್ಲಿ ಒಂದು ನಿರ್ಧಾರಕ್ಕೆ ಬಂದನು.

**ವಜ್ರಮಸ್ಯ ಕ್ಷಿಪಾಮ್ಯದ್ಯ ಸ ಕ್ಷಿಪ್ರಂ ನ ಭವಿಷ್ಯತಿ ।**
**ಶತ್ರುಃ ಪ್ರವೃದ್ಧೋ ನೋಪೇಕ್ಷ್ಯೋ ದುರ್ಬಲೋಽಪಿ ಬಲೀಯಸಾ ॥**

ಅವನ ಮೇಲೆ ವಜ್ರವನ್ನು ಪ್ರಯೋಗಿಸುತ್ತೇನೆ. ಅವನು ಬೇಗ ನಾಶವನ್ನು ಹೊಂದುವನು. ಶತ್ರುವು ದುರ್ಬಲನಾದರೂ ಅವನು ಬೆಳೆಯುತ್ತಿರುವಾಗ ಬಲಿಷ್ಠನಾದವನು, ಉದಾಸೀನ ಮಾಡಬಾರದು.

**ಶಾಸ್ತ್ರಬುದ್ಧ್ಯಾ ವಿನಿಶ್ಚಿತ್ಯ ಕೃತ್ವಾ ಬುದ್ಧಿಂ ವಧೇ ದೃಢಾಮ್ ।**
**ಅಥ ವೈಶ್ವಾನರನಿಭಂ ಘೋರರೂಪಂ ಭಯಾವಹಮ್ ॥೨೭॥**

**ಮುಮೋಚ ವಜ್ರಂ ಸಂಕ್ರುದ್ಧಃ ಶಕ್ರಸ್ತ್ರಿಶಿರಸಂ ಪ್ರತಿ ॥೨೮॥**

ಶಾಸ್ತ್ರಬುದ್ಧಿಯಿಂದ ಅವನ ವಧೆಯ ವಿಷಯದಲ್ಲಿ ಹೀಗೆ ದೃಢವಾಗಿ ನಿಶ್ಚಯಿಸಿ ಅನಂತರ ಅಗ್ನಿಯಂತೆ ಘೋರರೂಪವುಳ್ಳದ್ದೂ, ಭಯಂಕರವೂ ಆದ ವಜ್ರಾಯುಧವನ್ನು ತ್ರಿಶಿರನ ಮೇಲೆ ಅವನು ಬಹಳ ಕೋಪಗೊಂಡು ಪ್ರಯೋಗಿಸಿದನು.

**ಸ ಪಪಾತ ಹತಸ್ತೇನ ವಜ್ರೇಣ ದೃಢಮಾಹತಃ ।**
**ಪರ್ವತಸ್ಯೇವ ಶಿಖರಂ ಪ್ರಣುನ್ನಂ ಮೇದಿನೀತಳೇ ॥೨೯॥**

ವಜ್ರಾಯುಧದಿಂದ ದೃಢವಾಗಿ ಹೊಡೆಯಲ್ಪಟ್ಟ ವಿಶ್ವರೂಪನು ಭೂಮಿಯ ಮೇಲೆ ಕತ್ತರಿಸಿ ಬಿದ್ದ ಪರ್ವತ ಶಿಖರದಂತೆ ಬಿದ್ದನು.

ತಂ ತು ವಜ್ರಾಹತಂ ದೃಷ್ಟ್ವಾ ಶಯಾನಮಚಲೋಪಮಮ್ ।
ನ ಶರ್ಮ ಲೇಭೇ ದೇವೇಂದ್ರೋ ದೀಪಿತಸ್ತಸ್ಯ ತೇಜಸಾ ॥೩೦॥

ಹತೋಽಪಿ ದೀಪ್ತತೇಜಾಃ ಸ ಜೀವನ್ನಿವ ಹಿ ದೃಶ್ಯತೇ ॥೩೧॥

ಭೂಮಿಯ ಮೇಲೆ ಪರ್ವತದಂತೆ ವಜ್ರದಿಂದ ಹತನಾಗಿ ಬಿದ್ದ ಅವನನ್ನು ನೋಡಿದ ದೇವೇಂದ್ರನಿಗೆ ಅವನ ಉರಿಯುವ ತೇಜಸ್ಸಿನ ಕಾರಣದಿಂದಾಗಿ ಸಮಾಧಾನವೇ ಉಂಟಾಗಲಿಲ್ಲ. ದೀಪ್ತವಾದ ಕಾಂತಿಯುಳ್ಳ ವಿಶ್ವರೂಪನು ಹತನಾಗಿದ್ದರೂ ಬದುಕಿರುವಂತೆಯೇ ತೋರುತ್ತಿದ್ದನು.

ಶಿರಾಂಸಿ ತಸ್ಯಾಜಾಯಂತ ತ್ರೀಣ್ಯೇವ ಶಕುನಾಸ್ತ್ರಯಃ ।
ತಿತ್ತಿರಿಃ ಕಲವಿಂಕಶ್ಚ ತಥೈವ ಚ ಕಪಿಂಜಲಃ ॥೩೨॥

ಅವನ ಮೂರು ತಲೆಗಳು ತಿತ್ತಿರಿ, ಕಲವಿಂಕ ಮತ್ತು ಕಪಿಂಜಲ ಎಂಬ ಪಕ್ಷಿಗಳಾದವು.

ವಿಶ್ವರೂಪಶಿರಾಂಸ್ಯೇವ ಜಾಯಂತೇ ತಾನಿ ಭಾರತ ।
ಘಾತಿತಸ್ಯ ಶಿರಾಂಸ್ಯಾಜೌ ಜೀವಂತೀವಾದ್ಭುತಾನಿ ಚ ॥೩೩॥

ತತೋಽತಿಭೀತಗಾತ್ರಸ್ತು ಶಕ್ರ ಆಸ್ತೇ ವಿಚಾರಯನ್ ॥೩೪॥

ವಿಶ್ವರೂಪನ ಶಿರಸ್ಸುಗಳು ಪಕ್ಷಿರೂಪವನ್ನು ಧರಿಸಿ ಬರುತ್ತಿದ್ದರೂ ಆ ಶಿರಸ್ಸು ಮತ್ತೆ ಮತ್ತೆ ಬೆಳೆಯುತ್ತಿದ್ದವು. ಎಲೈ ಭಾರತನೇ, ವಿಶ್ವರೂಪನು ಹತನಾದರೂ ಅವನ ಶಿರಸ್ಸುಗಳು ಬದುಕಿರುವಂತೆ ಇರುವುದು ಅದ್ಭುತವಾಗಿ ಕಂಡುಬಂದಿತು. ಆಗ ಇಂದ್ರನು ಬಹಳ ಹೆದರಿದವನಾಗಿ ವಿಚಾರ ಮಾಡುತ್ತಾ ಕುಳಿತನು.

ಅಥಾಜಗಾಮ ಪರಶುಂ ಸ್ಕಂಧೇನಾದಾಯ ವರ್ಧಕೀ ।
ತದರಣ್ಯಂ ಮಹಾರಾಜ ಯತ್ರಾಸ್ತೇಽಸೌ ನಿಪಾತಿತಃ ॥೩೫॥

ಎಲೈ ಮಹಾರಾಜನೇ, ಆ ವೇಳೆಗೆ ದೇವತೆಗಳ ಬಡಗಿಯಾದ ವಿಶ್ವಕರ್ಮನು ತನ್ನ ಹೆಗಲಿನ ಮೇಲೆ ಕೊಡಲಿಯನ್ನು ಇಟ್ಟುಕೊಂಡು ವಿಶ್ವರೂಪನು ಬಿದ್ದಿದ್ದ ಅರಣ್ಯಸ್ಥಳಕ್ಕೆ ಬಂದನು.

ಸ ಭೀತಸ್ತತ್ರ ತಕ್ಷಾಣಂ ಘಟಮಾನಂ ಶಚೀಪತಿಃ ।
ಅಪಶ್ಯದಬ್ರವೀಚ್ಚೈನಂ ಸತ್ವರಂ ಪಾಕಶಾಸನಃ ॥೩೬॥

ಹೆದರಿದ್ದ ಪಾಕಶಾಸನನಾದ ಶಚೀಪತಿಯಾದ ಇಂದ್ರನು ಅಲ್ಲಿಗೆ ಬಂದ ವಿಶ್ವಕರ್ಮನನ್ನು ನೋಡಿ ಶೀಘ್ರವಾಗಿ ಅವನನ್ನು ಕುರಿತು ಹೀಗೆ ಹೇಳಿದನು.

ಪರಶ್ವಥೇನ ತೀಕ್ಷ್ಣೇನ ಶಿರಾಂಸ್ಯಸ್ಯ ನಿಕೃಂತ ವೈ ।
ಕ್ಷಿಪ್ರಂ ಛಿಂದಿ ಶಿರಾಂಸ್ಯಸ್ಯ ಕುರುಷ್ವ ವಚನಂ ಮಮ ॥೩೭॥

ನಿನ್ನ ಹರಿತವಾದ ಕುಠಾರದಿಂದ ಇವನ ತಲೆಗಳನ್ನು ಕತ್ತರಿಸು. ಶೀಘ್ರವಾಗಿ ಇವನ ತಲೆಗಳನ್ನು ಬೇರ್ಪಡಿಸು. ನನ್ನ ಮಾತನ್ನು ಕೇಳು.

ತಕ್ಷಾ

ಮಹಾಸ್ಕಂಧೋ ಭೃಶಂ ಹ್ಯೇಷ ಪರಶುರ್ನ ಭವಿಷ್ಯತಿ ।
ಕರ್ತುಂ ಚಾಹಂ ನ ಶಕ್ಷ್ಯಾಮಿ ಕರ್ಮ ಸದ್ಭಿರ್ವಿಗರ್ಹಿತಮ್ ॥೩೮॥

ತಕ್ಷ– ಇದು ದೊಡ್ಡ ಕೊಂಬೆಗಳಿರುವ ಮರದಂತಿದೆ. ಇದನ್ನು (ಈ ತಲೆಗಳನ್ನು) ಕಡಿದರೆ ನನ್ನ ಕೊಡಲಿಯೇ ಹಾಳಾಗಿ ಹೋಗುತ್ತದೆ. ಆದ್ದರಿಂದ ಸಜ್ಜನರಿಂದ ನಿಂದಿತವಾದ ಇಂತಹ ಕರ್ಮವನ್ನು ನಾನು ಮಾಡುವುದಿಲ್ಲ.

ಇಂದ್ರಃ

ಮಾಭೈಸ್ತ್ವಂ ಶೀಘ್ರಮೇತದ್ವೈ ಕುರುಷ್ವ ವಚನಂ ಮಮ ।
ಮತ್ಪ್ರಸಾದಾದ್ಧಿ ತೇ ಶಸ್ತ್ರಂ ವಜ್ರಕಲ್ಪಂ ಭವಿಷ್ಯತಿ ॥೩೯॥

ಇಂದ್ರ– ಹೆದರಬೇಡ ಈ ನನ್ನ ಮಾತನ್ನು ಶೀಘ್ರವಾಗಿ ಮಾಡು. ನನ್ನ ಅನುಗ್ರಹದಿಂದ ನಿನ್ನ ಶಸ್ತ್ರವು ವಜ್ರಕ್ಕೆ ಸಮಾನವಾಗುವುದು.

ತಕ್ಷಾ

ಕಂ ಭವಂತಮಹಂ ವಿದ್ಯಾಂ ಘೋರಕರ್ಮಾಣಮದ್ಯ ವೈ ।
ಏತದಿಚ್ಛಾಮ್ಯಹಂ ಜ್ಞಾತುಂ ತತ್ತ್ವೇನ ಕಥಯಸ್ವ ಮೇ ॥೪೦॥

ತಕ್ಷ– ಇಂತಹ ಘೋರಕರ್ಮದಲ್ಲಿ, ಈ ದಿನ ನನ್ನನ್ನು ಪ್ರಚೋದಿಸುತ್ತಿರುವ ನೀನು ಯಾರು ಎಂದು ನಾನು ತಿಳಿಯಬೇಕು. ಇದನ್ನು ತಿಳಿಯಲು ಬಯಸುತ್ತೇನೆ. ಸತ್ಯವಾಗಿ ನನಗೆ ಇದನ್ನು ಹೇಳು.

ಇಂದ್ರಃ

ಅಹಮಿಂದ್ರೋ ದೇವರಾಜಃ ತಕ್ಷನ್ ವಿದಿತಮಸ್ತು ತೇ ।
ಕುರುಷ್ವೈತದ್ ಯಥೋಕ್ತಂ ಮೇ ತಕ್ಷನ್ ಮಾ ತ್ವಂ ವಿಚಾರಯ ॥೪೧॥

ಮಯಾ ಹಿ ನಿಹತಃ ಶೇತೇ ತ್ರಿಶಿರಾಸ್ತ್ವಂ ಚ ವಿದ್ಧಿ ವೈ ॥೪೨॥

ಇಂದ್ರ– ಎಲೈ ವಿಶ್ವಕರ್ಮನೇ, ನಾನು ದೇವರಾಜನಾದ ಇಂದ್ರನೆಂದು ನೀನು ತಿಳಿ. ನಾನು ಹೇಳಿದಂತೆ ಮಾಡು. ಅದರಲ್ಲಿ ವಿಚಾರ ಮಾಡಬೇಡ. ತ್ರಿಶಿರನು ನನ್ನಿಂದ ಹತನಾಗಿ ಭೂಮಿಯಲ್ಲಿ ಬಿದ್ದಿದ್ದಾನೆ ಎಂದು ತಿಳಿ.

ಶಲ್ಯಃ

ಸ ಪ್ರಹ್ವಃ ಪ್ರಾಂಜಲಿರ್ಭೂತ್ವಾ ಇದಂ ವಚನಮಬ್ರವೀತ್ ॥೪೩॥

ಕ್ರೂರೇಣ ನಾಪತ್ರಪಸೇ ಕಥಂ ಶಕ್ರೇಹ ಕರ್ಮಣಾ ।
ಋಷಿಪುತ್ರಮಿಮಂ ಹತ್ವಾ ಬ್ರಹ್ಮಹತ್ಯಾಭಯಂ ನ ಕಿಮ್ ॥೪೪॥

ಶಲ್ಯ– ವಿಶ್ವಕರ್ಮನು ಕೈಗಳನ್ನು ಮುಗಿದು ವಿನಯದಿಂದ ಅವನನ್ನು ಕುರಿತು ಇಂದ್ರನೇ, ಇಂತಹ ಕ್ರೂರಕರ್ಮವನ್ನು ಮಾಡುವುದಕ್ಕೆ ನಿನಗೆ ಏಕೆ ನಾಚಿಕೆಯಾಗುವುದಿಲ್ಲ? ಋಷಿಪುತ್ರನಾದ ಇವನನ್ನು ಕೊಂದರೆ ನಿನಗೆ ಬ್ರಹ್ಮಹತ್ಯೆಯ ಭಯವಿಲ್ಲವೇ ಎಂದು ಕೇಳಿದನು.

ಇಂದ್ರಃ

ಪಶ್ಚಾದ್ಧರ್ಮಂ ಚರಿಷ್ಯಾಮಿ ಪಾವನಾರ್ಥಂ ಸುದುಶ್ಚರಮ್ ।
ಶತ್ರುರೇಷ ಮಹಾವೀರ್ಯೋ ವಜ್ರೇಣ ನಿಹತೋ ಮಯಾ ॥೪೫॥

ಇಂದ್ರ– ನನ್ನನ್ನು ಶುದ್ಧಿಮಾಡಿಕೊಳ್ಳಲು ಅನಂತರ ದುಶ್ಚರವಾದ ಧರ್ಮವನ್ನು ಆಚರಿಸುವೆನು. ಈ ಮಹಾಪರಾಕ್ರಮಿಯಾದ ವಿಶ್ವರೂಪನು ನನ್ನಿಂದ ವಜ್ರದಿಂದ ಹತನಾಗಿದ್ದಾನೆ.

ಅದ್ಯಾಪಿ ಚಾಹಮುದ್ವಿಗ್ನಃ ತಕ್ಷನ್ನಸ್ಮಾದ್ ಬಿಭೇಮಿ ವೈ ।
ಕ್ಷಿಪ್ರಂ ಛಿಂಧಿ ಶಿರಾಂಸಿ ತ್ವಂ ಕರಿಷ್ಯೇಽನುಗ್ರಹಂ ತವ ॥೪೬॥

ಎಲೈ ಬಡಗಿಯೇ, ನಾನು ಈಗಲೂ ಇವನಿಗೆ ಹೆದರುತ್ತಿದ್ದೇನೆ. ಬೇಗ ಅವನ ತಲೆಗಳನ್ನು ಕತ್ತರಿಸು. ನಾನು ನಿನಗೆ ಅನುಗ್ರಹವನ್ನು ಮಾಡುವೆನು.

ಶಿರಃ ಪಶೋಸ್ತೇ ದಾಸ್ಯಂತಿ ಭಾಗಂ ಯಜ್ಞೇಷು ಮಾನವಾಃ ।
ಏಷ ತೇಽನುಗ್ರಹಸ್ತಕ್ಷನ್ ಕ್ಷಿಪ್ರಂ ಕುರು ಮಮ ಪ್ರಿಯಮ್ ॥೪೭॥

ಮನುಷ್ಯರು ಯಜ್ಞವನ್ನು ಮಾಡುವಾಗ ಪಶುವಿನ ತಲೆಯ ಭಾಗವನ್ನು ನಿನಗೆ ಕೊಡುವರು. ಎಲೈ ತಕ್ಷನೇ, ಇದು ನಾನು ನಿನಗೆ ಮಾಡುವ ಅನುಗ್ರಹ. ಬೇಗ ನನ್ನ ಪ್ರಿಯವನ್ನು ಆಚರಿಸು.

ಶಲ್ಯಃ

ಏತತ್ ಶ್ರುತ್ವಾ ತಕ್ಷಾ ಸ ಮಹೇಂದ್ರವಚನಂ ತದಾ ।
ಶಿರಾಂಸ್ಯಥ ತ್ರಿಶಿರಸಃ ಕುಠಾರೇಣಾಚ್ಛಿನತ್ ತದಾ ॥೪೮॥

ಶಲ್ಯ– ವಿಶ್ವಕರ್ಮನು ದೇವೇಂದ್ರನ ಈ ಮಾತುಗಳನ್ನು ಕೇಳಿ ತನ್ನ ಕುಠಾರದಿಂದ ಆಗ ವಿಶ್ವರೂಪನ ತಲೆಗಳನ್ನು ಕತ್ತರಿಸಿದನು.

ನಿಕೃತ್ತೇಷು ತತಸ್ತೇಷು ನಿಷ್ಕಾಮನ್ನಂಡಜಾಸ್ತ್ವಥ ।
ಕಪಿಂಜಲಾಸ್ತಿತ್ತಿರಾಶ್ಚ ಕಲವಿಂಕಾಶ್ಚ ಸರ್ವಶಃ ॥೪೯॥

ವಿಶ್ವರೂಪನ ತಲೆಗಳನ್ನು ಕಡಿಯುತ್ತಿರಲು ಅವುಗಳಿಂದ ಅನೇಕ ಕಪಿಂಜಲಗಳು, ತಿತ್ತಿರಗಳು ಮತ್ತು ಕಲವಿಂಕಗಳು ಬಂದವು.

ಯೇನ ವೇದಾನಧೀತೇ ಸ್ಮ ಪಿಬತೇ ಸೋಮಮೇವ ಚ ।
ತಸ್ಮಾದ್ ವಕ್ತ್ರಾದ್ ವಿನಿಷ್ಪೇತುಃ ಕ್ಷಿಪ್ರಂ ತಸ್ಯ ಕಪಿಂಜಲಾಃ ॥೫೦॥

ಯಾವ ಮುಖದಿಂದ ವೇದಗಳನ್ನು ಅಧ್ಯಯನ ಮಾಡಿ ಸೋಮಪಾನವನ್ನು ಮಾಡುತ್ತಿದ್ದನೋ ಆ ಮುಖದಿಂದ ಶೀಘ್ರವಾಗಿ ಅನೇಕ ಕಪಿಂಜಲಗಳು ಹೊರಗೆ ಬಂದವು.

ಯೇನ ಸರ್ವಾ ದಿಶೋ ರಾಜನ್ ಪಿಬನ್ನಿವ ನಿರೀಕ್ಷತೇ ।
ತಸ್ಮಾದ್ ವಕ್ತ್ರಾದ್ ವಿನಿಷ್ಪೇತುಸ್ತಿತ್ತಿರಾಸ್ತಸ್ಯ ಪಾಂಡವ ॥೫೧॥

ಎಲೈ ಪಾಂಡವನೇ, ಯಾವ ಮುಖದಿಂದ ಎಲ್ಲ ದಿಕ್ಕುಗಳನ್ನು ಸುಡುವಂತೆ ನೋಡುತ್ತಿದ್ದನೋ ಅವನ ಆ ಮುಖದಿಂದ ತಿತ್ತಿರ ಪಕ್ಷಿಗಳು ಹೊರಬಂದವು.

ಯತ್ ಸುರಾಪಂ ತು ತಸ್ಯಾಸೀದ್ ವಕ್ತ್ರಂ ತ್ರಿಶಿರಸಸ್ತದಾ ।
ಕಲವಿಂಕಾಃ ಸಮುತ್ಪೇತುಃ ಶ್ಯೇನಾಶ್ಚ ಭರತರ್ಷಭ ॥೫೨॥

ಎಲೈ ಭರತರ್ಷಭನೇ, ವಿಶ್ವರೂಪನ ಯಾವ ಮುಖವು ಸುರಾಪಾನವನ್ನು ಮಾಡುತ್ತಿದ್ದಿತೋ ಆ ಮುಖದಿಂದ ಕಲವಿಂಕಗಳೂ ಮತ್ತು ಗಿಡುಗಗಳು (ಹದ್ದುಗಳು) ಹೊರಬಂದವು.

ತತಸ್ತೇಷು ನಿಕೃತ್ತೇಷು ವಿಜ್ವರೋ ಮಘವಾನಥ ।
ತಕ್ಷ್ಣೇ ತಥಾ ವರಂ ದತ್ತ್ವಾ ಪ್ರಹೃಷ್ಟಸ್ತ್ರಿದಶೇಶ್ವರಃ ॥೫೩॥
ಜಗಾಮ ತ್ರಿದಿವಂ ದೇವಃ ತಕ್ಷಾಪಿ ಸ್ವಗೃಹಾನ್ ಯಯೌ ॥೫೪॥

ಆಗ ಮೂರುತಲೆಗಳು ಕಡಿಯಲ್ಪಡುತ್ತಿರಲು ತ್ರಿದಿಶಾಧಿಪತಿಯಾದ ಇಂದ್ರನು ಸಮಾಧಾನಚಿತ್ತನಾಗಿ ವಿಶ್ವಕರ್ಮನಿಗೆ ಅಂತಹ ವರಗಳನ್ನು ನೀಡಿದನು. ದೇವೇಂದ್ರನು ಸ್ವರ್ಗಕ್ಕೆ ಹೋದನು. ವಿಶ್ವಕರ್ಮನು ತನ್ನ ಮನೆಗೆ ಹಿಂದಿರುಗಿದನು.

ತಕ್ಷಾಪಿ ಸ್ವಗೃಹಂ ಗತ್ವಾ ನೈವ ಶಂಸತಿ ಕಸ್ಯಚಿತ್ ।
ಅಥೈನಂ ನಾಭಿಜಾನಂತಿ ವರ್ಷಮೇಕಂ ತಥಾಗತಮ್ ॥೫೫॥

ತಕ್ಷನೂ ತನ್ನ ಮನೆಗೆ ಹಿಂದಿರುಗಿ ಈ ವಿಷಯವನ್ನು ಯಾರಿಗೂ ಹೇಳಲಿಲ್ಲ ಮತ್ತು ಆ ರೀತಿಯಲ್ಲಿದ್ದ ವಿಶ್ವಕರ್ಮನನ್ನು ಒಂದುವರ್ಷದವರೆಗೆ ಯಾರೂ ಗಮನಿಸಲೂ ಇಲ್ಲ.

ಅಥ ಸಂವತ್ಸರೇ ಪೂರ್ಣೇ ಭೂತಾಃ ಪಶುಪತೇಃ ಪ್ರಭೋ ।
ಸಮಾಕ್ರೋಶಂತ ಮಘವಾನ್ ನಃ ಪ್ರಭುರ್ಬ್ರಹ್ಮಹಾ ಇತಿ ॥೫೬॥

ಅನಂತರ ಒಂದು ವರ್ಷವು ಪೂರ್ಣವಾಗುತ್ತಿರಲು ರುದ್ರದೇವರ ಬಳಿಗೆ ಭೂತಗಳು ಹೋಗಿ ಪ್ರಭುವೇ, ನಮ್ಮ ಪ್ರಭುವಾದ ಇಂದ್ರನು ಬ್ರಹ್ಮಹತ್ಯಾದೋಷವನ್ನು ಹೊಂದಿದ್ದಾನೆ ಎಂದು ಕಿರುಚಿದವು.

**ತತ ಇಂದ್ರೋ ವ್ರತಂ ಘೋರಮಾಚರತ್ ಪಾಕಶಾಸನಃ ।**
**ತಪಸಾ ಚ ಸುಸಂಯುಕ್ತಃ ಸಹ ದೇವೈರ್ಮರುದ್ಗಣೈಃ ॥೫೭॥**

ಆಗ ಮರುದ್ಗಣಸಹಿತನಾದ ಪಾಕಶಾಸನನಾದ ಇಂದ್ರನು ಘೋರವಾದ ತಪಸ್ಸನ್ನು ಆಚರಿಸಿದನು.

**ಸಮುದ್ರೇಷು ಪೃಥಿವ್ಯಾಂ ಚ ವನಸ್ಪತಿಷು ಸ್ತ್ರೀಷು ಚ ।**
**ವಿಭಜ್ಯ ಬ್ರಹ್ಮಹತ್ಯಾಂ ಚ ತಾನ್ ವರೈರಪ್ಯಯೋಜಯತ್ ॥೫೮॥**

ಅವನು ತನ್ನ ಬ್ರಹ್ಮಹತ್ಯಾದೋಷವನ್ನು ಸಮುದ್ರಕ್ಕೂ, ಭೂಮಿಗೂ, ವನಸ್ಪತಿಗಳಿಗೂ ಮತ್ತು ಸ್ತ್ರೀಯರಿಗೂ ಹಂಚಿಕೊಟ್ಟು ಅವರಿಗೆ ವರಗಳನ್ನೂ ನೀಡಿದನು.

**ವರದಸ್ತು ವರಂ ದತ್ತ್ವಾ ಪೃಥಿವ್ಯೈ ಸಾಗರಾಯ ಚ ।**
**ವನಸ್ಪತಿಭ್ಯಃ ಸ್ತ್ರೀಭಿಶ್ಚ ಬ್ರಹ್ಮಹತ್ಯಾಂ ನುನೋದ ತಾಮ್ ॥೫೯॥**

ವರಪ್ರದನಾದ ಅವನು ಭೂಮಿಗೂ, ಸಮುದ್ರಕ್ಕೂ, ವನಸ್ಪತಿಗಳಿಗೂ ಮತ್ತು ಸ್ತ್ರೀಯರಿಗೂ ವರವನ್ನು ನೀಡಿ ತನ್ನ ಬ್ರಹ್ಮಹತ್ಯಾದೋಷವನ್ನು ಕಳೆದುಕೊಂಡನು.

**ತತಸ್ತು ಶುದ್ಧೋ ಭಗವಾನ್ ದೇವೈರ್ಲೋಕೈಶ್ಚ ಪೂಜಿತಃ ।**
**ಇಂದ್ರಸ್ಥಾನಮುಪಾತಿಷ್ಠತ್ ಪೂಜ್ಯಮಾನೋ ಮಹರ್ಷಿಭಿಃ ॥೬೦॥**

**ಮೇನೇ ಕೃತಾರ್ಥಮಾತ್ಮಾನಂ ಹತ್ವಾ ಶತ್ರೂನ್ ಸುರಾರಿಹಾ ॥೬೧॥**

ಅನಂತರ ಶುದ್ಧನಾದ ಪೂಜ್ಯನಾದ ಇಂದ್ರನು ದೇವತೆಗಳಿಂದಲೂ, ಮನುಷ್ಯರಿಂದಲೂ ಮತ್ತು ಮಹರ್ಷಿಗಳಿಂದಲೂ ಪೂಜಿತನಾಗಿ ತನ್ನ ಹಿಂದಿನ ಸ್ಥಾನವನ್ನು ಅಲಂಕರಿಸಿ, ಶತ್ರುಸಂಹಾರವನ್ನು ಮಾಡಿದ ಅವನು ತನ್ನನ್ನು ಕೃತಾರ್ಥನೆಂದು ಭಾವಿಸಿದನು.

ತ್ವಷ್ಟಾ ಪ್ರಜಾಪತಿಃ ಶ್ರುತ್ವಾ ಶಕ್ರೇಣಾಥ ಸುತಂ ಹತಮ್ ।
ಕ್ರೋಧಸಂರಕ್ತನಯನ ಇದಂ ವಚನಮಬ್ರವೀತ್ ॥೬೨॥

ಪ್ರಜಾಪತಿಯಾದ ತ್ವಷ್ಟ್ರವಾದರೂ ತನ್ನ ಪುತ್ರನು ಇಂದ್ರನಿಂದ ಹತನಾದುದನ್ನು ಕೇಳಿ ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ ಈ ಮಾತನ್ನಾಡಿದನು.

ತಪ್ಯಮಾನಂ ತಪೋ ನಿತ್ಯಂ ಕ್ಷಾಂತಂ ದಾಂತಂ ಜಿತೇಂದ್ರಿಯಮ್ ।
ವಿನಾऽಪರಾಧೇನ ಯತಃ ಪುತ್ರಂ ಹಿಂಸಿತವಾನ್ ಮಮ ॥೬೩॥

ತಸ್ಮಾದಿಂದ್ರವಿನಾಶಾಯ ವೃತ್ರಮುತ್ಪಾದಯಾಮ್ಯಹಮ್ ॥೬೪॥

ಲೋಕಾಃ ಪಶ್ಯಂತು ಮೇ ವೀರ್ಯಂ ತಪಸಶ್ಚ ಬಲಂ ಮಹತ್ ।
ಸ ಚ ಪಶ್ಯತು ದೇವೇಂದ್ರೋ ದುರಾತ್ಮಾ ಪಾಪಚೇತನಃ ॥೬೫॥

ಕ್ಷಮಾಶೀಲನೂ, ಜಿತೇಂದ್ರಿಯನೂ, ವಿನೀತನೂ ಆದ ನನ್ನ ಪುತ್ರನನ್ನು ಯಾವ ಅಪರಾಧವೂ ಇಲ್ಲದೇ ಇಂದ್ರನು ವಧೆ ಮಾಡಿದ್ದಾನೆ. ಆದ್ದರಿಂದ ಇಂದ್ರನ ವಿನಾಶಕ್ಕಾಗಿ ನಾನು ವೃತ್ರನೆಂಬ ಮಗನನ್ನು ಪಡೆಯುತ್ತೇನೆ. ಲೋಕವು ನನ್ನ ಪರಾಕ್ರಮವನ್ನು ಮತ್ತು ತಪಸ್ಸಿನ ದೊಡ್ಡ ಬಲವನ್ನು ನೋಡಲಿ. ದುರಾತ್ಮನೂ, ಪಾಪಚೇತನನೂ ಆದ ದೇವೇಂದ್ರನೂ ಸಹ ಅದನ್ನು ನೋಡಲಿ.

ಉಪಸ್ಪೃಶ್ಯ ತತಃ ಕ್ರುದ್ಧಃ ತಪಸ್ವೀ ಸುಮಹಾಯಶಾಃ ।
ಅಗ್ನೌ ಹುತ್ವಾ ಸಮುತ್ಪಾದ್ಯ ಘೋರಂ ವೃತ್ರಮುವಾಚ ಹ ॥೬೬॥

ಇಂದ್ರಶತ್ರೋ ವಿವರ್ಧಸ್ವ ಪ್ರಭಾವಾತ್ ತಪಸೋ ಮಮ ॥೬೭॥

ಆಗ ತಪಸ್ವಿಯೂ, ಮಹಾಕೀರ್ತಿಶಾಲಿಯೂ ಆದ ಅವನು ಶುದ್ಧನಾಗಿ ಸ್ನಾನವನ್ನು ಮಾಡಿ ಅಗ್ನಿಯಲ್ಲಿ ಕ್ರೋಧದಿಂದ ಹೋಮವನ್ನು ಮಾಡಿ ಘೋರನಾದ ವೃತ್ರನನ್ನು ಪಡೆದು ಇಂದ್ರಶತ್ರುವೇ, ನನ್ನ ತಪಸ್ಸಿನ ಪ್ರಭಾವದಿಂದ ಅಭಿವೃದ್ಧಿಯನ್ನು ಹೊಂದು ಎಂದು ಹೇಳಿದನು.

ಸೋऽವರ್ಧತ ದಿವಂ ಸ್ತಬ್ಧ್ವಾ ಸೂರ್ಯವೈಶ್ವಾನರೋಪಮಃ ।
ಕಿಂ ಕರೋಮೀತಿ ಚೋವಾಚ ಕಾಲಸೂರ್ಯ ಇವೋದಿತಃ ॥೬೮॥

ಶಕ್ರಂ ಜಹೀತಿ ಚಾಪ್ಯುಕ್ತೋ ಜಗಾಮ ತ್ರಿದಿವಂ ತತಃ ॥೬೯॥

ವೃತ್ರನು ಸೂರ್ಯಾಗ್ನಿಗಳಂತೆ ಕಾಂತಿಯುಕ್ತನಾಗಿ ಆಕಾಶವನ್ನು ಆವರಿಸಿ ಬೆಳೆದು ಪ್ರಳಯಕಾಲದಲ್ಲಿ ಉದಿಸಿದ ಸೂರ್ಯನಂತೆ (ಉಗ್ರನಾಗಿ) ಏನು ಮಾಡಲಿ ಎಂದು ಕೇಳಿದನು. ಇಂದ್ರನನ್ನು ಕೊಲ್ಲುವವನಾಗು ಎಂದು ಹೇಳಲ್ಪಟ್ಟ ಅವನು ಸ್ವರ್ಗಕ್ಕೆ ಹೋದನು.

ಗ್ರಸ್ತಾ ಲೋಕಾಶ್ಚ ವೃತ್ರೇಣ ಸರ್ವೇ ಭರತಸತ್ತಮ ।
ತ್ವಷ್ಟುಸ್ತೇಜೋವಿವೃದ್ಧೇನ ವೃತ್ರೇಣ ಸುಮಹಾತ್ಮನಾ ॥೭೦॥

ಸರ್ವಗಂಧೇಂದ್ರಿಯರಸಾ ಹೃತಾ ಭಾರತ ತೇನ ವೈ ॥೭೧॥

ಎಲೈ ಭರತಶ್ರೇಷ್ಠನೇ, ಮೂರುಲೋಕಗಳೆಲ್ಲವೂ ವೃತ್ರನಿಂದ ಆವೃತವಾದವು. ಎಲೈ ಭಾರತನೇ, ತ್ವಷ್ಟ್ರನ ತಪೋಬಲದಿಂದ ಅಭಿವೃದ್ಧನಾದ ವೃತ್ರನು ಎಲ್ಲ ಗಂಧಗಳನ್ನೂ, ರಸಗಳನ್ನೂ ಮತ್ತು ಇಂದ್ರಿಯಗಳನ್ನೂ ಅಪಹರಿಸಿದನು.

ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ಪಂಚಮಮ್ ।
ಹೃತಮೇತನ್ಮಹಾರಾಜ ವೃತ್ರೇಣ ಸುಮಹಾತ್ಮನಾ ॥೭೨॥

ಮಹಾರಾಜನೇ, ಮಹಾತ್ಮನಾದ ವೃತ್ರನು ಪೃಥಿವೀ, ವಾಯು, ಆಕಾಶ, ಜಲ ಮತ್ತು ಐದನೆಯ ಅಗ್ನಿ ಇವೆಲ್ಲವನ್ನೂ ಅಪಹರಿಸಿದನು.

ತತೋ ಯುದ್ಧಂ ಸಮಭವದ್ ವೃತ್ರವಾಸವಯೋರ್ಮಹತ್ ।
ಸಂಕ್ರುದ್ಧಯೋರ್ಮಹಾಘೋರಂ ಪ್ರಸಕ್ತಂ ಕುರುಸತ್ತಮ ॥೭೩॥

ಎಲೈ ಕುರುಶ್ರೇಷ್ಠನೇ, ಅನಂತರ ಕೋಪಗೊಂಡ ವೃತ್ರ ಮತ್ತು ಇಂದ್ರರಿಗೆ ಮಹಾಘೋರವಾದ ಯುದ್ಧವು ಜರುಗಿತು.

ತತೋ ಜಗ್ರಾಹ ದೇವೇಂದ್ರಂ ವೃತ್ರೋ ವೀರಃ ಶತಕ್ರತುಮ್ ।
ಅಪಾವೃತ್ಯಾಕ್ಷಿಪದ್ ವಕ್ತ್ರೇ ಶಕ್ರಂ ಕೋಪಸಮನ್ವಿತಃ ॥೭೪॥

ಆಗ ವೀರನಾದ ವೃತ್ರನು ಶತಕ್ರತುವಾದ ಇಂದ್ರನನ್ನು ಹಿಡಿದು ತಿರುಗಿಸಿ ಕೋಪದಿಂದ ಕೂಡಿದವನಾಗಿ ತನ್ನ ಬಾಯಲ್ಲಿ ಎಸೆದುಕೊಂಡನು.

ಗ್ರಸ್ತೇ ವೃತ್ರೇಣ ಶಕ್ರೇ ತು ಸಂಭ್ರಾಂತಾಸ್ತ್ರಿದಿವೇಶ್ವರಾಃ ।
ಅಸೃಜಂಸ್ತೇ ಮಹಾಸತ್ತ್ವಾ ಜೃಂಭಿಕಾಂ ವೃತ್ರನಾಶಿನೀಮ್ ॥೭೫॥

ಇಂದ್ರನು ವೃತ್ರನಿಂದ ನುಂಗಲ್ಪಡುತ್ತಿರಲು ಸ್ವರ್ಗಪತಿಗಳಾದ ದೇವತೆಗಳು ಸಂಭ್ರಾಂತರಾದರು. ಮಹಾಸತ್ತ್ವೋಪೇತರಾದ ಅವರು ವೃತ್ರನನ್ನು ನಾಶಮಾಡುವ ಆಕಳಿಕೆಯನ್ನು ಸೃಷ್ಟಿಮಾಡಿದರು.

ವಿಜೃಂಭಮಾಣಸ್ಯ ತತೋ ವೃತ್ರಸ್ಯಾಸ್ಯಾದಪಾವೃತಾತ್ ।
ಸ್ವಾನ್ಯಂಗಾನ್ಯಭಿಸಂಕ್ಷಿಪ್ಯ ನಿಷ್ಕ್ರಾಂತೋ ಬಲಸೂದನಃ ॥೭೬॥

ವೃತ್ರನು ಆಕಳಿಸಲು ತನ್ನ ಬಾಯಿಯನ್ನು ತೆರೆದಾಗ ಬಲಸೂದನನಾದ ಇಂದ್ರನು ತನ್ನ ಅವಯವಗಳನ್ನು ಸಂಕೋಚಮಾಡಿ ಚಿಕ್ಕರೂಪವನ್ನು ಧರಿಸಿ ಅವನ ಬಾಯಿಯಿಂದ ಹೊರಗೆ ಬಂದನು.

ತತಃ ಪ್ರಭೃತಿ ಲೋಕಸ್ಯ ಜೃಂಭಿಕಾ ಪ್ರಾಣಿಸಂಶ್ರಿತಾ ।
ಜಹೃಷುಶ್ಚ ಸುರಾಃ ಸರ್ವೇ ಶಕ್ರಂ ದೃಷ್ಟ್ವಾ ವಿನಿಃಸೃತಮ್ ॥೭೭॥

ಅಲ್ಲಿಂದೀಚೆಗೆ ಲೋಕದಲ್ಲಿ ಆಕಳಿಕೆಯು ಎಲ್ಲ ಪ್ರಾಣಿಗಳಲ್ಲಿ ಆಶ್ರಯವನ್ನು ಪಡೆದಿದೆ. ಇಂದ್ರನು ಹೊರಗೆ ಬಂದುದನ್ನು ನೋಡಿ ಎಲ್ಲಾ ದೇವತೆಗಳೂ ಸಂತೋಷಗೊಂಡರು.

ತತಃ ಪ್ರವವೃಧೇ ಯುದ್ಧಂ ವೃತ್ರವಾಸವಯೋಃ ಪುನಃ ।
ಸಂರಬ್ಧಯೋಸ್ತದಾ ಘೋರಂ ಸುಚಿರಂ ಭರತರ್ಷಭ ॥೭೮॥

ಎಲೈ ಭರತರ್ಷಭನೇ, ಅನಂತರ ಕೋಪಗೊಂಡ ವೃತ್ರ-ವಾಸವರಿಗೆ ಪುನಃ ಘೋರವಾದ ಯುದ್ಧವು ಬಹುಕಾಲದವರೆಗೆ ನಡೆಯಿತು.

ತದಾ ವ್ಯವರ್ಧತ ರಣೇ ವೃತ್ರೋ ಬಲಸಮನ್ವಿತಃ ।
ತ್ವಷ್ಟುಸ್ತೇಜೋಬಲಾವಿದ್ಧಃ ತದಾ ಶಕ್ರೋ ನ್ಯವರ್ತತ ॥೭೯॥

ಯಾವಾಗ ತ್ವಷ್ಟೃವಿನ ತೇಜೋಬಲದಿಂದ ಕೂಡಿದ ವೃತ್ರನು ಯುದ್ಧದಲ್ಲಿ ಅಭಿವೃದ್ಧಿಯನ್ನು ಪಡೆದನೋ ಆಗ ಇಂದ್ರನು ಯುದ್ಧದಿಂದ ಹಿಂದಿರುಗಿದನು.

**ನಿವೃತ್ತೇ ಚ ತದಾ ದೇವಾ ವಿಷಾದಮಗಮನ್ ಪುನಃ ।**
**ಸಮೇತ್ಯ ಸಹ ಶಕ್ರೇಣ ತ್ವಷ್ಟುಸ್ತೇಜೋವಿಮೋಹಿತಾಃ ॥೮೦॥**

**ಅಮಂತ್ರಯಂತ ತೇ ಸರ್ವೇ ಮುನಿಭಿಃ ಸಹ ಭಾರತ ।**

ಇಂದ್ರನು ಯುದ್ಧದಿಂದ ಹಿಂದಿರುಗುತ್ತಿರಲು ದೇವತೆಗಳು ವಿಷಾದವನ್ನು ಹೊಂದಿ ಪುನಃ ಇಂದ್ರನ ಜೊತೆಯಲ್ಲಿ ಸಮಾಗಮವನ್ನು ಹೊಂದಿ ತ್ವಷ್ಟೃವಿನ ಪರಾಕ್ರಮದಿಂದ ಮೋಹಿತರಾಗಿ ಎಲೈ ಭಾರತನೇ, ಋಷಿಗಳ ಜೊತೆಯಲ್ಲಿಯೂ ಸೇರಿ ಮಂತ್ರಾಲೋಚನೆಯನ್ನು ಮಾಡಿದರು.

**ಕಿಂ ಕಾರ್ಯಮಿತಿ ವೈ ರಾಜನ್ ವಿಚಿಂತ್ಯ ಭಯಮೋಹಿತಾಃ ॥೮೧॥**

**ಜಗ್ಮುಃ ಸರ್ವೇ ಮಹಾತ್ಮಾನಂ ಮನೋಭಿರ್ವಿಷ್ಣುಮವ್ಯಯಮ್ ।**
**ಉಪವಿಷ್ಟಾ ಮಂದರಾಗ್ರೇ ಸರ್ವೇ ವೃತ್ರವಧೇಪ್ಸವಃ ॥೮೨॥**

ಎಲೈ ರಾಜನೇ, ಭಯಮೋಹಿತರಾದ ಅವರು ಏನು ಮಾಡಬೇಕೆಂದು ಚಿಂತಿಸಿ ತಮ್ಮ ಮನಸ್ಸಿನಲ್ಲಿಯೇ ಶಾಶ್ವತನಾದ, ಮಹಾತ್ಮನಾದ ವಿಷ್ಣುವನ್ನು (ಭಯಪರಿಹಾರಕನೆಂದು) ನಿಶ್ಚಯಿಸಿ ಮಂದರಪರ್ವತದ ಶಿಖರದಲ್ಲಿ ವೃತ್ರನ ವಧೆಯನ್ನು ಬಯಸಿ ಎಲ್ಲರೂ ಕುಳಿತರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ನವಮೋऽಧ್ಯಾಯಃ ॥

॥ ಸೇನೋದ್ಯೋಗಪರ್ವಣಿ ನವಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಒಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

# ಹತ್ತನೆಯ ಅಧ್ಯಾಯ

ವಿಷ್ಣುವಿನ ಅನುಗ್ರಹದಿಂದ ಇಂದ್ರನಿಂದ ವೃತ್ರವಧೆ.
ಇಂದ್ರನ ಕಣ್ಮರೆ ಮತ್ತು ಜಗತ್ತಿನ ಕ್ಷೋಭೆ.

**ಶಲ್ಯಃ**

**ಆಖ್ಯಾನಮುತ್ತಮಮಿದಮಿತಿಹಾಸಂ ಪುರಾತನಮ್ ।**
**ಶೃಣು ಮೇ ಭ್ರಾತೃಭಿಃ ಸಾರ್ಧಂ ಸರ್ವಶತ್ರುಜಯಾವಹಮ್ ॥೧॥**

ಶಲ್ಯ– ಸರ್ವಶತ್ರುಗಳ ಮೇಲೆ ಜಯವನ್ನು ತಂದುಕೊಡುವ ಈ ಪುರಾತನ ಇತಿಹಾಸರೂಪವಾದ ಕಥೆಯನ್ನು ತಮ್ಮಂದಿರ ಜೊತೆಯಲ್ಲಿ ಕುಳಿತು ಕೇಳು.

**ವೃತ್ರಭೂತೇಷು ಲೋಕೇಷು ಭಯಮಿಂದ್ರಮುಪಾಗಮತ್ ॥೨॥**

**ಅಥೇಂದ್ರೋ ಹಿ ಮಹಾತೇಜಾಃ ಸಮೇತ್ಯ ಸಹ ದೈವತೈಃ ।**
**ಆಮಂತ್ರಯತ ತೇಜಸ್ವೀ ವೃತ್ರಸ್ಯ ವಧಕಾರಣಾತ್ ॥೩॥**

ಎಲ್ಲ ಲೋಕಗಳೂ ವೃತ್ರನಿಂದ ಆವರಿಸಲ್ಪಡುತ್ತಿರಲು ಇಂದ್ರನು ಭಯವನ್ನು ಹೊಂದಿದನು. ಅನಂತರ ಮಹಾತೇಜಸ್ವಿಯಾದ ಅವನು ವೃತ್ರನ ವಧೆಯನ್ನು ಉದ್ದೇಶಿಸಿ ದೇವತೆಗಳೆಲ್ಲರನ್ನೂ ಕರೆದು ಮಂತ್ರಾಲೋಚನೆಯನ್ನು ಮಾಡಿದನು.

**ಇಂದ್ರಃ**

**ಸರ್ವಂ ವ್ಯಾಪ್ತಮಿದಂ ದೇವಾ ವೃತ್ರೇಣ ಜಗದವ್ಯಯಮ್ ।**
**ನ ಹ್ಯಸ್ಯ ಸದೃಶಂ ಕಿಂಚಿತ್ ಪ್ರತಿಘಾತಸ್ಯ ಯದ್ ಭವೇತ್ ॥೪॥**

ಇಂದ್ರ– ದೇವತೆಗಳೇ, ಈ ಶಾಶ್ವತವಾದ ಜಗತ್ತೆಲ್ಲವೂ ವೃತ್ರನಿಂದ ವ್ಯಾಪ್ತವಾಗಿದೆ. ಅವನನ್ನು ಪ್ರತಿರೋಧ ಮಾಡಲು ಅವನಿಗೆ ಸದೃಶವಾದ ಯಾರೂ ಕಾಣುತ್ತಿಲ್ಲ.

**ಸಮರ್ಥೋ ಹ್ಯಭವಂ ಪೂರ್ವಮಸಮರ್ಥೋऽಸ್ಮಿ ಸಾಂಪ್ರತಮ್ ।**
**ಕಥಂ ಕುರ್ಯಾಮ ಭದ್ರಂ ವೋ ದುರ್ಧರ್ಷಃ ಸ ಹಿ ಮೇ ಮತಃ ॥೫॥**

ನಾನು ಹಿಂದೆ ಸಮರ್ಥನಾಗಿದ್ದೆ. ಆದರೆ ಈಗ ಅಸಮರ್ಥನಾಗಿದ್ದೇನೆ. ನಿಮಗೆ ಮಂಗಳವಾಗಲಿ. ಈಗ ಏನು ಮಾಡೋಣ? ಅವನನ್ನು ಸೋಲಿಸುವುದು ಅಸಾಧ್ಯ ಎಂದು ನನ್ನ ಅಭಿಪ್ರಾಯ.

ತೇಜಸ್ವೀ ಚ ಮಹಾತ್ಮಾ ಚ ಯುದ್ಧೇ ಚಾಮಿತವಿಕ್ರಮಃ ।
ಗ್ರಸೇತ್ ತ್ರಿಭುವನಂ ಸರ್ವಂ ಸದೇವಾಸುರಮಾನುಷಮ್ ॥೬॥

ತೇಜಸ್ವಿಯೂ, ಮಹಾತ್ಮನೂ ಮತ್ತು ಯುದ್ಧದಲ್ಲಿ ಅಮಿತಪರಾಕ್ರಮಿಯೂ ಆದ ಅವನು ದೇವಾಸುರಮನುಷ್ಯರಿಂದ ಸಹಿತವಾದ ಮೂರುಲೋಕವೆಲ್ಲವನ್ನೂ ನುಂಗಿಯಾನು.

ತಸ್ಮಾದ್ ವಿನಿಶ್ಚಯಮಿಮಂ ಶೃಣುಧ್ವಂ ತ್ರಿದಿವೌಕಸಃ ॥೭॥

ವಿಷ್ಣೋಃ ಕ್ಷಯಮುಪಾಗಮ್ಯ ಸಮೇತ್ಯ ಚ ಮಹಾತ್ಮನಾ ।
ತೇನ ಸಮ್ಮಂತ್ರ್ಯ ವೇತ್ಸ್ಯಾಮೋ ವಧೋಪಾಯಂ ದುರಾತ್ಮನಃ ॥೮॥

ಆದ್ದರಿಂದ ಸ್ವರ್ಗನಿವಾಸಿಗಳೇ, ನನ್ನ ಈ ನಿರ್ಧಾರವನ್ನು ಕೇಳಿ. ನಾವು ವಿಷ್ಣುವಿನ ನಿವಾಸಸ್ಥಾನಕ್ಕೆ ಹೋಗಿ, ಮಹಾತ್ಮನಾದ ಅವನ ಜೊತೆಯಲ್ಲಿ ಸಮಾಗಮವನ್ನು ಹೊಂದಿ ಸಮಾಲೋಚನೆಯನ್ನು ಮಾಡಿ, ದುರಾತ್ಮನಾದ ವೃತ್ರನ ವಧೋಪಾಯವನ್ನು ತಿಳಿಯೋಣ.

ಶಲ್ಯಃ

ಏವಮುಕ್ತಾ ಮಘವತಾ ದೇವಾಃ ಸರ್ಷಿಗಣಾಸ್ತದಾ ।
ಶರಣ್ಯಂ ಶರಣಂ ದೇವಂ ಜಗ್ಮುರ್ವಿಷ್ಣುಂ ಮಹಾಬಲಮ್ ॥೯॥

ಊಚುಶ್ಚ ಸರ್ವೇ ದೇವೇಶಂ ವಿಷ್ಣುಂ ವೃತ್ರಭಯಾರ್ದಿತಾಃ ॥೧೦॥

ಶಲ್ಯ– ಇಂದ್ರನಿಂದ ಹೀಗೆ ಹೇಳಲ್ಪಟ್ಟ ಋಷಿಗಣಗಳಿಂದ ಸಹಿತರಾದ ದೇವತೆಗಳು ಆ ಮಹಾಬಲನೂ, ಶರಣು ಹೊಂದುವುದಕ್ಕೆ ಯೋಗ್ಯನೂ, ಕ್ರೀಡಾದಿಗುಣವಿಶಿಷ್ಟನೂ ಆದ ವಿಷ್ಣುವನ್ನು ಶರಣು ಹೊಂದಿದರು. ಮತ್ತು ವೃತ್ರನ ಭಯದಿಂದ ಪೀಡಿತರಾಗಿ ಅವರೆಲ್ಲರೂ ದೇವೇಶನಾದ ವಿಷ್ಣುವನ್ನು ಕುರಿತು ಹೀಗೆ ಹೇಳಿದರು.

ತ್ರಯೋ ಲೋಕಾಸ್ತ್ವಯಾ ಕ್ರಾಂತಾಃ ತ್ರಿಭಿರ್ವಿಕ್ರಮಣೈಃ ಪುರಾ ।
ಅಮೃತಂ ಚ ಹೃತಂ ವಿಷ್ಣೋ ದೈತ್ಯಾಶ್ಚ ನಿಹತಾ ರಣೇ ॥೧೧॥

ಎಲೈ ವಿಷ್ಣುವೇ, ನೀನು ಹಿಂದೆ ಮೂರು ಹೆಜ್ಜೆಗಳಿಂದ ಮೂರುಲೋಕಗಳನ್ನು ಆಕ್ರಮಿಸಿದೆ. ದೇವತೆಗಳಿಗೆ ಅಮೃತವನ್ನು ಸಂಪಾದಿಸಿಕೊಟ್ಟೆ. ಮತ್ತು ಯುದ್ಧದಲ್ಲಿ ದೈತ್ಯರನ್ನು ಸಂಹರಿಸಿದೆ.

ಬಲಿಂ ಬದ್ಧ್ವಾ ಮಹಾದೈತ್ಯಂ ಶಕ್ರೋ ದೇವಾಧಿಪಃ ಕೃತಃ ।
ತ್ವಂ ಪ್ರಭುಃ ಸರ್ವಲೋಕಾನಾಂ ತ್ವಯಾ ಸರ್ವಮಿದಂ ತತಮ್ ॥೧೨॥

ಮಹಾದೈತ್ಯನಾದ ಬಲಿಯನ್ನು ಬಂಧಿಸಿ, ಇಂದ್ರನಿಗೆ ಸ್ವರ್ಗಾಧಿಪತ್ಯವನ್ನು ತಂದುಕೊಟ್ಟೆ. ನೀನು ಎಲ್ಲ ಲೋಕಗಳಿಗೂ ಪ್ರಭುವಾದವನು ಮತ್ತು ಎಲ್ಲ ಕಡೆಯಲ್ಲಿಯೂ ವ್ಯಾಪಿಸಿರುವವನು.

ತ್ವಂ ಹಿ ದೇವೋ ಮಹಾದೇವಃ ಸರ್ವಲೋಕನಮಸ್ಕೃತಃ ।
ಗತಿರ್ಭವಸಿ ದೇವಾನಾಂ ಸೇಂದ್ರಾಣಾಮಮರೋತ್ತಮ ॥೧೩॥

ಜಗದ್ ವ್ಯಾಪ್ತಮಿದಂ ಸರ್ವಂ ವೃತ್ರೇಣಾರಿನಿಷೂದನ ॥೧೪॥

ನೀನೇ ದೇವ, ನೀನೇ ಮಹಾದೇವ, ನೀನೇ ಸರ್ವಲೋಕನಮಸ್ಕೃತನಾದವನು. ದೇವೋತ್ತಮನೇ, ಇಂದ್ರನಿಂದ ಸಹಿತರಾದ ಎಲ್ಲ ದೇವತೆಗಳಿಗೆ ನೀನೇ ಗತಿಯಾದವನು. ಶತ್ರುಸಂಹಾರಕನೇ, ಈ ಜಗತ್ತೆಲ್ಲವೂ ವೃತ್ರನಿಂದ ಆವರಿಸಲ್ಪಟ್ಟಿದೆ.

ವಿಷ್ಣುಃ

ಅಶಕ್ಯಕರಣೀಯಂ ಮೇ ಭವತಾಂ ಹಿತಮುತ್ತಮಮ್ ।
ತಸ್ಮಾದುಪಾಯಂ ವಕ್ಷ್ಯಾಮಿ ಯಥಾಽಸೌ ನ ಭವಿಷ್ಯತಿ ॥೧೫॥

ಗಚ್ಛಧ್ವಂ ಸರ್ಷಿಗಂಧರ್ವಾ ಯತ್ರಾಸೌ ವಿಶ್ವರೂಪಧೃಕ್ ॥೧೬॥

ವಿಷ್ಣು- ಮಾಡಲು ಅಸಾಧ್ಯವಾದರೂ ಸಹ ನಿಮಗೆ ಶ್ರೇಷ್ಠವಾದ ಹಿತವನ್ನು ನಾನು ಮಾಡಲೇಬೇಕು. ಆದ್ದರಿಂದ ಈ ವೃತ್ರನು ನಾಶವನ್ನು ಹೊಂದುವಂತೆ ನಾನು ನಿಮಗೆ ಉಪಾಯವನ್ನು ಹೇಳುವೆನು. ಋಷಿ-ಗಂಧರ್ವರಿಂದ ಸಹಿತರಾಗಿ ನೀವು ವಿಶ್ವವ್ಯಾಪ್ತವಾದ ರೂಪವನ್ನು ಹೊಂದಿರುವ ವೃತ್ರನ ಬಳಿಗೆ ಹೋಗಿ.

ಸಾಮ ತಸ್ಯ ಪ್ರಯುಂಜಧ್ವಂ ತತ ಏನಂ ವಿಜೇಷ್ಯಥ ।
ಭವಿಷ್ಯತಿ ಜಯೋ ದೇವಾಃ ಶಕ್ರಸ್ಯ ಮಮ ತೇಜಸಾ ॥೧೭॥

ಅವನ ಜೊತೆಯಲ್ಲಿ ಸಾಮೋಪಾಯದಿಂದಲೇ ಮಾತನಾಡಿ. ಅದರಿಂದ ನೀವು ಅವನನ್ನು ಗೆಲ್ಲುವಿರಿ. ದೇವತೆಗಳೇ, ನಿಮಗೆ ಇಂದ್ರನ ಮತ್ತು ನನ್ನ ತೇಜಸ್ಸಿನಿಂದ ಜಯವುಂಟಾಗುವುದು.

ಅದೃಶ್ಯಶ್ಚ ಪ್ರವೇಕ್ಷ್ಯಾಮಿ ವಜ್ರಮೇವಾಯುಧೋತ್ತಮಮ್ ।
ಗಚ್ಛಧ್ವಮೃಷಿಭಿಃ ಸಾರ್ಧಂ ಗಂಧರ್ವೈಶ್ಚ ಸುರೋತ್ತಮಾಃ ॥೧೮॥

ವೃತ್ರಸ್ಯ ಸಹ ಶಕ್ರೇಣ ಸಂಧಿಂ ಕುರುತ ಮಾ ಚಿರಮ್ ॥೧೯॥

ನಾನು ಅದೃಶ್ಯನಾಗಿ ಆಯುಧಶ್ರೇಷ್ಠವಾದ ವಜ್ರದಲ್ಲಿ ಪ್ರವೇಶವನ್ನು ಮಾಡುವೆನು. ಸುರೋತ್ತಮರೇ, ನೀವು ಋಷಿಗಳ ಮತ್ತು ಗಂಧರ್ವರ ಜೊತೆಯಲ್ಲಿ ಹೊರಡಿ. ವೃತ್ರನ ಜೊತೆಯಲ್ಲಿ ಇಂದ್ರನಿಗೆ ರಾಜಿಯನ್ನು ಮಾಡಿ, ತಡಮಾಡಬೇಡಿ.

ಶಲ್ಯಃ

ಏವಮುಕ್ತೇ ತು ದೇವೇನ ಋಷಯಸ್ತ್ರಿದಶಾಸ್ತದಾ ।
ಯಯುಃ ಸಮೇತ್ಯ ವಿಭುನಾ ಶಕ್ರಂ ಕೃತ್ವಾ ಪುರಃಸರಮ್ ॥೨೦॥

ಶಲ್ಯ– ವಿಷ್ಣುವಿನಿಂದ ಹೀಗೆ ಹೇಳಲ್ಪಟ್ಟ ಋಷಿಗಳು ಮತ್ತು ದೇವತೆಗಳು ಇಂದ್ರನಿಂದ ಸಹಿತರಾಗಿ ಇಂದ್ರನನ್ನು ಮುಂದೆ ಮಾಡಿಕೊಂಡು ಹೊರಟರು.

ಸಮೀಪಮೇತ್ಯ ಚ ತದಾ ಸರ್ವ ಏವ ದಿವೌಕಸಃ ॥೨೧॥

ತಂ ತೇಜಸಾ ಪ್ರಜ್ವಲಿತಂ ಪ್ರತಪಂತಂ ದಿಶೋ ದಶ ।
ಗ್ರಸಂತಮಿವ ಲೋಕಾಂಸ್ತ್ರೀನ್ ಸೂರ್ಯಾಚಂದ್ರಮಸೌ ತಥಾ ॥೨೨॥

ದದೃಶುಸ್ತೇ ತಪೋವೃದ್ಧಂ ಶಕ್ರೇಣ ಸಹ ದೇವತಾಃ ।
ಋಷಯಶ್ಚ ತತೋಽಭ್ಯೇತ್ಯ ವೃತ್ರಮೂಚುಃ ಪ್ರಿಯಂ ವಚಃ ॥೨೩॥

ಆ ಎಲ್ಲ ದೇವತೆಗಳು ವೃತ್ರನ ಸಮೀಪಕ್ಕೆ ಹೋಗಿ ತೇಜಸ್ಸಿನಿಂದ ಬೆಳಗುತ್ತಿದ್ದಂತಹ, ಹತ್ತು ದಿಕ್ಕುಗಳನ್ನು ತಾಪಪಡಿಸುತ್ತಿದ್ದಂತಹ, ಮೂರು ಲೋಕಗಳನ್ನು ನುಂಗುವಂತೆ

ಇದ್ದಂತಹ, ಸೂರ್ಯ-ಚಂದ್ರರಂತೆ ಇದ್ದಂತಹ ತಪೋವೃದ್ಧನಾದ ವೃತ್ರನನ್ನು ನೋಡಿದರು ಮತ್ತು ಇಂದ್ರನಿಂದ ಸಹಿತರಾದ ದೇವತೆಗಳು ಮತ್ತು ಋಷಿಗಳು ಅವನ ಸಮೀಪಕ್ಕೆ ಹೋಗಿ ಅವನಿಗೆ ಪ್ರಿಯವಾದ ಮಾತನ್ನಾಡಿದರು.

**ಋಷಯಃ**

**ವ್ಯಾಪ್ತಂ ಜಗದಿದಂ ಸರ್ವಂ ತೇಜಸಾ ತವ ದುರ್ಜಯ ।**
**ನ ಚ ಶಕ್ನೋಷಿ ನಿರ್ಜೇತುಂ ವಾಸವಂ ಭೂರಿವಿಕ್ರಮಮ್ ॥೨೪॥**

**ಋಷಿಯಃ**– ಎಲೈ ದುರ್ಜಯನೇ, ನಿನ್ನ ತೇಜಸ್ಸಿನಿಂದ ಈ ಜಗತ್ತೆಲ್ಲವೂ ವ್ಯಾಪ್ತವಾಗಿದೆ. ಆದರೂ ಮಹಾಪರಾಕ್ರಮಶಾಲಿಯಾದ ಇಂದ್ರನನ್ನು ಗೆಲ್ಲಲು ನಿನಗೆ ಸಾಧ್ಯವಾಗುತ್ತಿಲ್ಲ.

**ಯುಧ್ಯತೋಶ್ಚಾಪಿ ವಾಂ ಕಾಲೋಽಪ್ಯತೀತಃ ಸುಮಹಾನಿಹ ।**
**ಪೀಡ್ಯಂತೇ ಚ ಪ್ರಜಾಃ ಸರ್ವಾಃ ಸದೇವಾಸುರಮಾನುಷಾಃ ॥೨೫॥**

ನೀವಿಬ್ಬರೂ ಯುದ್ಧವನ್ನು ಮಾಡುತ್ತಾ ಬಹಳ ಕಾಲವು ಕಳೆದುಹೋಗಿದೆ. ಈ ಯುದ್ಧದಿಂದ ಎಲ್ಲಾ ದೇವತೆಗಳು, ಅಸುರರು ಮತ್ತು ಮನುಷ್ಯರು ಮತ್ತು ಉಳಿದ ಪ್ರಜೆಗಳು ಪೀಡೆಗೆ ಒಳಗಾಗಿದ್ದಾರೆ.

**ಸಖ್ಯಂ ಭವತು ತೇ ಪುತ್ರ ಶಕ್ರೇಣ ಸಹ ನಿತ್ಯದಾ ।**
**ಅವಾಪ್ಸ್ಯತಿ ಸುಖಂ ತ್ವಂ ಚ ಶಕ್ರಲೋಕಾಂಶ್ಚ ಶಾಶ್ವತಾನ್ ॥೨೬॥**

ಪುತ್ರನೇ, ನಿನಗೆ ಇಂದ್ರನ ಜೊತೆಯಲ್ಲಿ ಯಾವಾಗಲೂ ಸ್ನೇಹವಿರಲಿ. ನೀನು ಸುಖವನ್ನು ಪಡೆಯುವಿ ಮತ್ತು ಶಾಶ್ವತವಾದ ಇಂದ್ರಲೋಕಗಳನ್ನೂ ಹೊಂದುವಿ.

**ಶಲ್ಯಃ**

**ಋಷಿವಾಕ್ಯಂ ನಿಶಮ್ಯಾಥ ವೃತ್ರಃ ಸ ತು ಮಹಾಬಲಃ ।**
**ಉವಾಚ ತಾನ್ ಋಷೀನ್ ಸರ್ವಾನ್ ಪ್ರಣಮ್ಯ ಶಿರಸಾಽಸುರಃ॥೨೭॥**

**ಶಲ್ಯ**– ಮಹಾಬಲನಾದ ವೃತ್ರನು ಋಷಿಗಳ ಮಾತನ್ನು ಕೇಳಿ ಅನಂತರ ಅಸುರನಾದ ಅವನು ಆ ಎಲ್ಲಾ ಋಷಿಗಳಿಗೂ ಶಿರಸಾ ನಮಸ್ಕರಿಸಿ ಮಾತನಾಡಿದನು.

ಸರ್ವೇ ಯೂಯಂ ಮಹಾಭಾಗಾ ಗಂಧರ್ವಾಶ್ಚೈವ ಸರ್ವಶಃ ।
ಯದ್ ಬ್ರೂಥ ತಚ್ಛ್ರುತಂ ಸರ್ವಂ ಮಮಾಪಿ ಶೃಣುತಾನಘಾಃ ॥೨೮॥

ಇಲ್ಲಿಗೆ ಬಂದಿರುವ ಋಷಿಗಳಾದ ನೀವು ಮತ್ತು ಗಂಧರ್ವರೆಲ್ಲರೂ ಮಹಾನುಭಾವರು. ನಿಮ್ಮ ಮಾತನ್ನು ನಾನು ಕೇಳಿದ್ದೇನೆ. ಎಲೈ ಅನಘರೇ, ನನ್ನ ಮಾತನ್ನೂ ಕೇಳಿ.

ಸಂಧಿಃ ಕಥಂ ವೈ ಭವಿತಾ ಮಮ ಶಕ್ರಸ್ಯ ಚೋಭಯೋಃ ।
ತೇಜಸೋ ಹಿ ದ್ವಯೋರ್ದೇವಾಃ ಸಖ್ಯಂ ವೈ ಭವಿತಾ ಕಥಮ್ ॥೨೯॥

ನನಗೂ ಮತ್ತು ಇಂದ್ರನಿಗೂ ಹೇಗೆ ಸಂಧಿ ಉಂಟಾಗುವುದು? ದೇವತೆಗಳೇ, ಎರಡು ತೇಜಸ್ಸುಗಳಿಗೆ ಪರಸ್ಪರ ಸಖ್ಯವುಂಟಾಗುವುದು ಹೇಗೆ?

**ಋಷಯಃ**

ಸಕೃತ್ ಸತಾಂ ಸಂಗತಮೀಪ್ಸಿತವ್ಯಂ
ತತಃ ಪರಂ ಭವಿತಾ ಭವ್ಯಮೇವ ।
ನಾತಿಕ್ರಮೇತ್ ಸತ್ಪುರುಷೇಣ ಸಂಗತಂ
ತಸ್ಮಾತ್ ಸತಾಂ ಸಂಗತಮೀಪ್ಸಿತವ್ಯಮ್ ॥೩೦॥

ಋಷಿಗಳು– ಒಂದು ಸಲ ಸಜ್ಜನರ ಸಂಗವನ್ನು ಬಯಸಬೇಕು. ಅನಂತರ ಎಲ್ಲವೂ ಕ್ಷೇಮವಾಗುತ್ತದೆ. ಸಜ್ಜನರ ಜೊತೆಯಲ್ಲಿ ಸಂಗವನ್ನು ಹೊಂದುವ ಅವಕಾಶವನ್ನು ಕಳೆದುಕೊಳ್ಳಬಾರದು. ಆದ್ದರಿಂದ ಸಜ್ಜನರ ಸಂಗವನ್ನು ಅಪೇಕ್ಷಿಸಬೇಕು.

ದೃಢಂ ಸತಾಂ ಸಂಗತಂ ಚಾಪಿ ನಿತ್ಯಂ
ಬ್ರೂಯಾಚ್ಚಾರ್ಥಂ ಹ್ಯರ್ಥಕೃಚ್ಛ್ರೇಷು ಧೀರಃ ।
ಮಹಾರ್ಥವತ್ ಸತ್ಪುರುಷೇಣ ಸಂಗತಂ
ತಸ್ಮಾತ್ ಸತೋ ನ ಜಿಘಾಂಸೇತ ಧೀರಃ ॥೩೧॥

ಧೀರನಾದವನು ಅರ್ಥಸಂಕಟವು ಪ್ರಾಪ್ತವಾದಾಗ ಸಜ್ಜನರ ಸಂಗವನ್ನೂ ಮತ್ತು ಅರ್ಥಪ್ರಾಪ್ತಿಯ ಉಪಾಯವನ್ನೂ ಹೇಳಬೇಕು. ಸತ್ಪುರುಷರ ಜೊತೆಯಲ್ಲಿ

ಸಮಾಗಮವು ಮಹಾಪ್ರಯೋಜನವುಳ್ಳದ್ದು. ಆದ್ದರಿಂದ ಧೀರನಾದವನು ಸಜ್ಜನರನ್ನು ಸಂಹರಿಸಲು ಬಯಸಬಾರದು.

ಇಂದ್ರಃ ಸತಾಂ ಸಮ್ಮತಶ್ಚ ನಿವಾಸಶ್ಚ ಮಹಾತ್ಮನಾಮ್ ।
ಸತ್ಯವಾದೀ ಹ್ಯದೀನಶ್ಚ ಧರ್ಮವಿತ್ ಸೂಕ್ಷ್ಮನಿಶ್ಚಯಃ ॥೩೨॥

ಇಂದ್ರನು ಸಜ್ಜನರಿಗೆ ಸಮ್ಮತನಾದವನು ಮತ್ತು ಮಹಾತ್ಮರಿಗೆ ಆಶ್ರಯನಾದವನು. ಅವನು ಸತ್ಯವಾದಿ, ಅದೀನನಾದವನು, ಧರ್ಮವನ್ನು ತಿಳಿದವನು ಮತ್ತು ಸೂಕ್ಷ್ಮಜ್ಞಾನಿ.

ತೇನ ತೇ ಸಹ ಶಕ್ರೇಣ ಸಂಧಿರ್ಭವತು ನಿತ್ಯದಾ ।
ಏವಂ ವಿಶ್ವಾಸಮಾಗಚ್ಛ ಮಾ ತೇ ಭೂದ್ ಬುದ್ಧಿರನ್ಯಥಾ ॥೩೩॥

ಅಂತಹ ಇಂದ್ರನ ಜೊತೆಯಲ್ಲಿ ನಿನಗೆ ಯಾವಾಗಲೂ ಸಂಧಿಯುಂಟಾಗಲಿ. ನಮ್ಮ ಮಾತನ್ನು ನಂಬು. ಬೇರೆ ರೀತಿಯಲ್ಲಿ ಯೋಚಿಸಬೇಡ.

ಶಲ್ಯಃ

ಮಹರ್ಷಿವಚನಂ ಶ್ರುತ್ವಾ ತಾನುವಾಚ ಮಹಾದ್ಯುತಿಃ ।
ಅವಶ್ಯಂ ಭಗವಂತೋ ಮೇ ಮಾನನೀಯಾಸ್ತಪಸ್ವಿನಃ ॥೩೪॥

ಶಲ್ಯ– ಮಹರ್ಷಿಗಳ ಮಾತನ್ನು ಕೇಳಿ ಮಹಾದ್ಯುತಿಯಾದ ವೃತ್ರನು ಪೂಜ್ಯರೂ ಮತ್ತು ತಪಸ್ವಿಗಳೂ ಆದ ನೀವು ಅವಶ್ಯವಾಗಿ ನನ್ನಿಂದ ಸತ್ಕರಿಸಲ್ಪಡಬೇಕು.

ಬ್ರವೀಮಿ ಯದಹಂ ದೇವಾಃ ತತ್ಸರ್ವಂ ಕ್ರಿಯತೇ ಯದಿ ।
ತತಃ ಸರ್ವಂ ಕರಿಷ್ಯಾಮಿ ಯದೂಚುರ್ಮಾಂ ದ್ವಿಜರ್ಷಭಾಃ ॥೩೫॥

ಎಲೈ ದೇವತೆಗಳೇ, ನಾನು ಹೇಳಿದ ಎಲ್ಲವನ್ನೂ ನೀವು ಮಾಡುವುದಾದರೆ ಋಷಿಗಳು ಹೇಳಿದಂತೆ ನಾನು ಎಲ್ಲವನ್ನೂ ಮಾಡುವೆನು ಎಂದು ಹೇಳಿದನು.

ನ ಶುಷ್ಕೇಣ ನಚಾರ್ದ್ರೇಣ ನಾಶ್ಮನಾ ನ ಚ ದಾರುಣಾ ।
ನ ಶಸ್ತ್ರೇಣ ನ ಚಾಸ್ತ್ರೇಣ ನ ದಿವಾ ನಾಪಿ ವಾ ನಿಶಿ ॥೩೬॥

ವಧ್ಯೋ ಭವೇಯಂ ವಿಪ್ರೇಂದ್ರಾಃ ಶಕ್ರಸ್ಯ ಸಹ ದೈವತೈಃ ।
ಏವಂ ಮೇ ರೋಚತೇ ಸಂಧಿಃ ಶಕ್ರಸ್ಯ ಸಹ ನಿತ್ಯದಾ ॥೩೭॥

ಶುಷ್ಕವಾದ (ಒಣಗಿದ) ವಸ್ತುವಿನಿಂದಾಗಲೀ, ಆರ್ದ್ರವಾದ (ಒದ್ದೆಯಾದ) ವಸ್ತುವಿನಿಂದಾಗಲೀ, ಕಲ್ಲಿನಿಂದಾಗಲೀ, ಮರದಿಂದಾಗಲೀ, ಶಸ್ತ್ರದಿಂದಾಗಲೀ, ಅಸ್ತ್ರದಿಂದಾಗಲೀ, ಹಗಲಾಗಲೀ, ರಾತ್ರಿಯಾಗಲೀ, ದೇವತೆಗಳಿಂದ ಕೂಡಿದ ಇಂದ್ರನಿಂದ ನಾನು ಹತನಾಗಬಾರದು. ಹಾಗಿದ್ದರೆ ಮಾತ್ರ ಇಂದ್ರನ ಜೊತೆಯಲ್ಲಿ ನಿತ್ಯವಾದ ಸಂಧಿಯು ನನಗೆ ಇಷ್ಟವಾಗುತ್ತದೆ.

**ಶಲ್ಯಃ**

**ಬಾಢಮಿತ್ಯೇವ ಋಷಯಃ ತಮೂಚುರ್ಭರತರ್ಷಭ ।**
**ಏವಂ ವೃತ್ತೇ ತು ಸಂಧಾನೇ ವೃತ್ರಃ ಪ್ರಮುದಿತೋಽಭವತ್ ॥೩೮॥**

ಶಲ್ಯ– ಎಲೈ ಭರತರ್ಷಭನೇ, ಋಷಿಗಳು ಹಾಗೆಯೇ ಆಗಲಿ ಎಂದು ಅವನಿಗೆ ಹೇಳಿದರು. ಹೀಗೆ ರಾಜಿಯು ಏರ್ಪಡುತ್ತಿರಲು ವೃತ್ರನು ಸಂತೋಷಗೊಂಡನು.

**ತತಃ ಸಂಧಿಂ ಮಿಥಃ ಕೃತ್ವಾ ಋಷಯೋ ದೀಪ್ತತೇಜಸಃ ।**
**ಶಕ್ರಸ್ಯ ಸಹ ವೃತ್ರೇಣ ಪುನರ್ಜಗ್ಮುರ್ಯಥಾಗತಮ್ ॥೩೯॥**

ದೀಪ್ತತೇಜಸ್ಸುಳ್ಳ ಋಷಿಗಳು ಇಂದ್ರ ಮತ್ತು ವೃತ್ರರಿಗೆ ಹೀಗೆ ಸಂಧಿಯನ್ನು ಉಂಟುಮಾಡಿ ಅನಂತರ ತಾವು ಬಂದಂತೆ ಹೊರಟುಹೋದರು.

**ಅಥ ದೀರ್ಘಸ್ಯ ಕಾಲಸ್ಯ ಶಕ್ರಃ ಸಂಚಿಂತ್ಯ ಭಾರತ ।**
**ಯತ್ತಃ ಸದಾಽಭವಚ್ಚಾಪಿ ಕ್ರುದ್ಧೋಽಮರ್ಷಸಮನ್ವಿತಃ ॥೪೦॥**

**ವೃತ್ರಸ್ಯ ವಧಸಂಯುಕ್ತಾನುಪಾಯಾನನ್ವಚಿಂತಯತ್ ॥೪೧॥**

ಎಲೈ ಭಾರತನೇ, ಅನಂತರ ಬಹುಕಾಲವು ಕಳೆದಮೇಲೆ ಇಂದ್ರನು ಕೋಪಾತೋಪಗಳಿಂದ ಕೂಡಿದವನಾಗಿ ಯಾವಾಗಲೂ ವೃತ್ರನ ವಧೆಯ ವಿಷಯದಲ್ಲಿ ಜಾಗರೂಕನಾಗಿ ವೃತ್ರನ ವಧೆಗೆ ಸಂಬಂಧಿಸಿದ ಉಪಾಯಗಳನ್ನು ಚಿಂತಿಸಿದನು.

**ಅಭಿಸಂಧಿರ್ಮಹೇಂದ್ರಸ್ಯ ಸಂಧಿಕರ್ಮಣಿ ಯಃ ಕೃತಃ ।**
**ಋಷಿಭಿಸ್ತ್ವರಿತಂ ಯಚ್ಚ ಮಹೇಂದ್ರಸ್ತದನುಸ್ಮರನ್ ॥೪೨॥**

**ಛಿದ್ರಾನ್ವೇಷೀ ಸಮುದ್ವಿಗ್ನಃ ಸದಾ ವಸತಿ ದೇವರಾಟ್ ॥೪೩॥**

ಸಂಧಿಯನ್ನು ಮಾಡಿದಾಗ ಮಹೇಂದ್ರನಿಗೆ ಏನು ಅಭಿಪ್ರಾಯವಿದ್ದಿತೋ ಮತ್ತು ಋಷಿಗಳು ಏನನ್ನು ಹೇಳಿದ್ದರೂ ಅವೆಲ್ಲವನ್ನೂ ಚಿಂತಿಸುತ್ತಾ ದೇವತೆಗಳ ರಾಜನಾದ ಮಹೇಂದ್ರನು ವೃತ್ರನನ್ನು ಕೊಲ್ಲಲು ಒಂದು ಅವಕಾಶವನ್ನು ಹುಡುಕುತ್ತಾ ಯಾವಾಗಲೂ ಬಹಳ ಉದ್ವಿಗ್ನನಾದನು.

**ಸ ಕದಾಚಿತ್ ಸಮುದ್ರಾಂತೇ ತಮಪಶ್ಯನ್ ಮಹಾಸುರಮ್ ।**
**ಸಂಧ್ಯಾಕಾಲ ಉಪಾವೃತ್ತೇ ಮುಹೂರ್ತೇ ರಮ್ಯದಾರುಣೇ ॥೪೪॥**

ಅನಂತರ ಒಮ್ಮೆ ಸಮುದ್ರತೀರದಲ್ಲಿ ಸಂಧ್ಯಾಕಾಲವು ಪ್ರಾಪ್ತವಾದಾಗ ಆ ರಮ್ಯದಾರುಣ ಮುಹೂರ್ತದಲ್ಲಿ ಆ ಮಹಾಸುರನನ್ನು ನೋಡಿದನು.

**ತತಃ ಸಂಚಿಂತ್ಯ ಮಘವಾನ್ ವರದಾನಂ ಮಹಾತ್ಮನಃ ॥೪೫॥**

**ಸಂಧ್ಯೇಯಂ ವರ್ತತೇ ರೌದ್ರಾ ನ ರಾತ್ರಿರ್ನ ಚ ವಾಸರಃ ।**
**ವೃತ್ರಶ್ಚಾವಶ್ಯವಧ್ಯೋಽಯಂ ಮಮ ಸರ್ವಹರೋ ರಿಪುಃ ॥೪೬॥**

ಆಗ ಇಂದ್ರನು ಮಹಾತ್ಮನಾದ ವಿಷ್ಣುವು ಕೊಟ್ಟ ವರದಾನವನ್ನು ಸ್ಮರಿಸಿ ಈಗ ಭಯಂಕರವಾದ ಸಂಧ್ಯಾಕಾಲವಾಗಿದೆ. ಇದು ರಾತ್ರಿಯೂ ಅಲ್ಲ, ಹಗಲೂ ಅಲ್ಲ. ನನ್ನ ಸರ್ವಸ್ವವನ್ನೂ ಅಪಹಾರ ಮಾಡಿದ ಶತ್ರುವಾದ ಈ ವೃತ್ರನನ್ನು ಅವಶ್ಯವಾಗಿ ಸಂಹರಿಸಬೇಕು.

**ಯದಿ ವೃತ್ರಂ ನ ಹನ್ಮ್ಯದ್ಯ ವಂಚಯಿತ್ವಾ ಮಹಾಸುರಮ್ ।**
**ಮಹಾಬಲಂ ಮಹಾಕಾಯಂ ನ ಮೇ ಶ್ರೇಯೋ ಭವಿಷ್ಯತಿ ॥೪೭॥**

ಈ ದಿನ ಮಹಾಬಲನೂ, ಮಹಾಕಾಯನೂ, ಮಹಾಸುರನೂ ಆದ ವೃತ್ರನನ್ನು ನಾನು ವಂಚಿಸಿ ಕೊಲ್ಲದಿದ್ದರೆ ನನಗೆ ಶ್ರೇಯಸ್ಸು ಉಂಟಾಗುವುದಿಲ್ಲ.

**ಏವಂ ಸಂಚಿಂತಯನ್ನೇವ ಶಕ್ರೋ ವಿಷ್ಣುಮನುಸ್ಮರನ್ ।**
**ಅಥ ಫೇನಂ ತದಾಽಪಶ್ಯತ್ ಸಮುದ್ರೇ ಪರ್ವತೋಪಮಮ್ ॥೪೮॥**

ಹೀಗೆ ವಿಷ್ಣುವನ್ನು ಸ್ಮರಣೆ ಮಾಡಿ ಚಿಂತಿಸುತ್ತಿರುವಾಗಲೇ ಇಂದ್ರನು ಸಮುದ್ರದಲ್ಲಿ ತೇಲಿಬರುತ್ತಿದ್ದ, ಪರ್ವತದಷ್ಟು ದೊಡ್ಡದಾದ ಒಂದು ನೊರೆಯ ಗಟ್ಟಿಯನ್ನು ನೋಡಿದನು.

ನಾಯಂ ಶುಷ್ಕೋ ನ ಚಾರ್ದ್ರೋಽಯಂ ನ ಚ ಶಸ್ತ್ರಮಿದಂ ತಥಾ ।
ಏನಂ ಕ್ಷಿಪಾಮಿ ವೃತ್ರಸ್ಯ ಕ್ಷಣಾದೇವ ನಶಿಷ್ಯತಿ ॥೪೯॥

ಇದು ಶುಷ್ಕವೂ ಅಲ್ಲ, ಆರ್ದ್ರವೂ ಅಲ್ಲ ಹಾಗೆ ಶಸ್ತ್ರವೂ ಅಲ್ಲ. ಇದನ್ನು ವೃತ್ರನ ಮೇಲೆ ಪ್ರಯೋಗಿಸುತ್ತೇನೆ. ಒಂದು ಕ್ಷಣದಲ್ಲಿ ಅವನು ನಾಶವನ್ನು ಹೊಂದುವನು (ಎಂದು ಆಲೋಚಿಸಿದನು).

ಜಗ್ರಾಹ ಸ ಚ ತಂ ಫೇನಮಿಂದ್ರೋ ವೃತ್ರನಿಬರ್ಹಣಮ್ ।
ನಿಗೃಹ್ಯ ಶಕ್ರೋ ಬಾಹುಭ್ಯಾಂ ಪ್ರಾಹಿಣೋದ್ ವೃತ್ರಮಸ್ತಕೇ ॥೫೦॥

ವೃತ್ರನಾಶಕವಾದ ಆ ನೊರೆಯನ್ನು ಇಂದ್ರನು ಕೈಗೆ ತೆಗೆದುಕೊಂಡು ಎರಡು ಬಾಹುಗಳಿಂದ ಗಟ್ಟಿಯಾಗಿ ಹಿಡಿದು ವೃತ್ರನ ತಲೆಯ ಮೇಲೆ ಎಸೆದನು.

ಸವಜ್ರಮಥ ಫೇನಂ ತಂ ಕ್ಷಿಪ್ರಂ ವೃತ್ರೇ ನಿಸೃಷ್ಟವಾನ್ ।
ಪ್ರವಿಶ್ಯ ಫೇನಂ ತಂ ವಿಷ್ಣುರಥ ವೃತ್ರಂ ವ್ಯನಾಶಯತ್ ॥೫೧॥

ವಜ್ರದಿಂದ ಅಭಿಮಂತ್ರಿತವಾದ ಆ ನೊರೆಯನ್ನು ಇಂದ್ರನು ವೃತ್ರನ ಮೇಲೆ ಶೀಘ್ರವಾಗಿ ಎಸೆದನು. ವಿಷ್ಣುವು ಆ ನೊರೆಯನ್ನು ಪ್ರವೇಶಿಸಿ ವೃತ್ರನನ್ನು ನಾಶಮಾಡಿದನು.

ನಿಹತೇ ತು ತತೋ ವೃತ್ರೇ ದಿಶೋ ವಿತಿಮಿರಾ ಭವನ್ ।
ಪ್ರವವೌ ಚ ಶಿವೋ ವಾಯುಃ ಪ್ರಜಾಶ್ಚ ಜಹೃಷುಸ್ತದಾ ॥೫೨॥

ವೃತ್ರನು ಹತನಾಗುತ್ತಿರಲು ಎಲ್ಲ ದಿಕ್ಕುಗಳೂ ಕತ್ತಲೆಯನ್ನು ಕಳೆದುಕೊಂಡು ಬೆಳಗಿದವು. ವಾಯುವು ಸುಖಕರವಾಗಿ ಬೀಸಿತು. ಆಗ ಪ್ರಜೆಗಳೆಲ್ಲರೂ ಸಂತೋಷಗೊಂಡರು.

ತತೋ ದೇವಾಃ ಸಗಂಧರ್ವಾ ಯಕ್ಷರಕ್ಷೋಮಹೋರಗಾಃ ।
ಋಷಯಶ್ಚ ಮಹೇಂದ್ರಂ ತಮಸ್ತುವನ್ ವಿವಿಧೈಃ ಸ್ತವೈಃ ॥೫೩॥

ಆಗ ಗಂಧರ್ವರಿಂದ ಕೂಡಿದ ದೇವತೆಗಳೂ, ಯಕ್ಷ-ರಕ್ಷ-ಸರ್ಪಗಳೂ ಮತ್ತು ಋಷಿಗಳೂ ಮಹೇಂದ್ರನನ್ನು ಅನೇಕವಿಧವಾದ ಸ್ತೋತ್ರಗಳಿಂದ ಸ್ತೋತ್ರ ಮಾಡಿದರು.

ಹತ್ವಾ ಶತ್ರುಂ ಪ್ರಹೃಷ್ಟಾತ್ಮಾ ವಾಸವಃ ಸಹ ದೈವತೈಃ ।
ವಿಷ್ಣುಂ ತ್ರಿಭುವನಶ್ರೇಷ್ಠಂ ಪೂಜಯಾಮಾಸ ಧರ್ಮವಿತ್ ॥೫೪॥

ಧರ್ಮಜ್ಞನಾದ ಇಂದ್ರನೂ ಸಹ ಶತ್ರುವನ್ನು ಕೊಂದು ಸಂತೋಷಗೊಂಡವನಾಗಿ ದೇವತೆಗಳ ಜೊತೆಯಲ್ಲಿ ತ್ರಿಭುವನ ಶ್ರೇಷ್ಠನಾದ ವಿಷ್ಣುವನ್ನು ಪೂಜಿಸಿದನು.

ತತೋ ಹತೇ ಮಹಾವೀರ್ಯೇ ವೃತ್ರೇ ದೇವಭಯಂಕರೇ ।
ಅನೃತೇನಾಭಿಭೂತೋಽಭೂತ್ ಶಕ್ರಃ ಪರಮದುರ್ಮನಾಃ ॥೫೫॥

ದೇವಭಯಂಕರನೂ ಮತ್ತು ಮಹಾಪರಾಕ್ರಮಿಯೂ ಆದ ವೃತ್ರನು ಕೊಲ್ಲಲ್ಪಡುತ್ತಿರಲು ಇಂದ್ರನು ಅನೃತದಿಂದ ಆವರಿಸಲ್ಪಟ್ಟು ಬಹಳ ದುಃಖಿತನಾದನು.

ತ್ರಿಶೀರ್ಷಯಾಽಭಿಭೂತಶ್ಚ ಸ ಪೂರ್ವಂ ಬ್ರಹ್ಮಹತ್ಯಯಾ ।
ಸೋಽಂತಮಾಶ್ರಿತ್ಯ ಲೋಕಾನಾಂ ನಷ್ಟಸಂಜ್ಞೋ ವಿಚೇತನಃ ॥೫೬॥

ನ ಪ್ರಾಜ್ಞಾಯತ ದೇವೇಂದ್ರಸ್ತ ಭಿಭೂತಃ ಸಃ ಕಲ್ಮಷೈಃ ।
ಪ್ರತಿಚ್ಛನ್ನೋಽವಸಚ್ಚಾಪ್ಸು ವೇಷ್ಟಮಾನ ಇವೋರಗಃ ॥೫೭॥

ಮೊದಲೇ ವಿಶ್ವರೂಪನ ಬ್ರಹ್ಮಹತ್ಯೆಯಿಂದ ಆವೃತನಾಗಿದ್ದ ಅವನು ಲೋಕದ ತುದಿಗೆ ಹೋಗಿ ಯಾವ ಜನರಿಗೂ ತಿಳಿಯದಂತೆ ವಿಚೇತನನಾದನು. ಈ ದೋಷದಿಂದ ಕೂಡಿದ ದೇವೇಂದ್ರನು ಯಾರಿಂದಲೂ ತಿಳಿಯಲ್ಪಡಲಿಲ್ಲ. ಅವನು ವೇಷವನ್ನು ಮರೆಸಿಕೊಂಡು ಹೊರಳುವ ಸರ್ಪದಂತೆ ಜಲದಲ್ಲಿ ವಾಸಮಾಡಿದನು.

ತತಃ ಪ್ರನಷ್ಟೇ ದೇವೇಂದ್ರೇ ಬ್ರಹ್ಮಹತ್ಯಾಭಯಾರ್ದಿತೇ ।
ಭೂಮಿಃ ಪ್ರಧ್ವಸ್ತಸಂಕಾಶಾ ನಿರ್ವೃಕ್ಷಾ ಶುಷ್ಕಕಾನನಾ ॥೫೮॥

ವಿಚ್ಛಿನ್ನಸ್ರೋತಸೋ ನದ್ಯಃ ಸರಾಂಸ್ಯನುದಕಾನಿ ಚ ।
ಸಂಕ್ಷೋಭಶ್ಚಾಪಿ ಸತ್ವಾನಾಮನಾವೃಷ್ಟಿಕೃತೋಽಭವತ್ ॥೫೯॥

ಬ್ರಹ್ಮಹತ್ಯಾಭಯದಿಂದ ಪೀಡಿತನಾದ ದೇವೇಂದ್ರನು ಅದೃಶ್ಯನಾಗುತ್ತಿರಲು , ವೃಕ್ಷಗಳನ್ನು ಕಳೆದುಕೊಂಡು ಕಾಡುಗಳು ಒಣಗಿ ಹೋಗುತ್ತಿರಲು ಭೂಮಿಯು ನಷ್ಟವಾದಂತೆ ತೋರಿತು. ನದಿಗಳ ಪ್ರವಾಹವು ವಿಚ್ಛೇದವನ್ನು ಹೊಂದಿತು.

ಸರೋವರಗಳು ಜಲರಹಿತವಾದವು. ಅನಾವೃಷ್ಟಿಯಿಂದ ಎಲ್ಲ ಪ್ರಾಣಿಗಳಿಗೂ ಕ್ಷೋಭೆಯುಂಟಾಯಿತು.

**ದೇವಾಶ್ಚಾಪಿ ಭೃಶಂ ತ್ರಸ್ತಾಃ ತಥಾ ಸರ್ವೇ ಮಹರ್ಷಯಃ ।**
**ಅರಾಜಕಂ ಜಗತ್ ಸರ್ವಮಭಿಭೂತಮುಪದ್ರವೈಃ ॥೬೦॥**

ಜಗತ್ತು ಅರಾಜಕವಾಗಿ ಎಲ್ಲ ಕಡೆಗಳಲ್ಲಿಯೂ ಉಪದ್ರವಕ್ಕೆ ಒಳಗಾದುದನ್ನು ನೋಡಿ ದೇವತೆಗಳೂ ಮತ್ತು ಎಲ್ಲಾ ಮಹರ್ಷಿಗಳೂ ಬಹಳ ಹೆದರಿದರು.

**ತತೋ ಭೀತಾಽಭವನ್ ದೇವಾಃ ಕೋ ನೋ ರಾಜಾ ಭವೇದಿತಿ ।**
**ದಿವಿ ದೇವರ್ಷಯಶ್ಚಾಪಿ ದೇವರಾಜವಿನಾಕೃತಾಃ ॥೬೧॥**

**ನ ಸ್ಮ ಕಶ್ಚನ ದೇವಾನಾಂ ರಾಜ್ಯೇ ವೈ ಕುರುತೇ ಮತಿಮ್ ॥೬೨॥**

ಆಗ ದೇವರಾಜನಾದ ಇಂದ್ರನಿಲ್ಲದೆ ಸ್ವರ್ಗಲೋಕದಲ್ಲಿ ದೇವತೆಗಳು ಮತ್ತು ದೇವರ್ಷಿಗಳು ಈಗ ನಮಗೆ ಯಾರು ರಾಜನಾಗುತ್ತಾನೆ ಎಂದು ಯೋಚಿಸಿ ಭೀತರಾದರು. ದೇವತೆಗಳ ರಾಜ್ಯದಲ್ಲಿ ಯಾರೂ ಅಧಿಪತಿಯಾಗಲು ಬಯಸಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ದಶಮೋಽಧ್ಯಾಯಃ ॥
॥ ಸೇನೋದ್ಯೋಗಪರ್ವಣಿ ದಶಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಹತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

## ಹನ್ನೊಂದನೆಯ ಅಧ್ಯಾಯ

ಇಂದ್ರರಾಜ್ಯದಲ್ಲಿ ನಹುಷನಿಗೆ ಅಭಿಷೇಕ. ಅವನ ದುರ್ಬುದ್ಧಿ ಮತ್ತು ಬೃಹಸ್ಪತಿಯಿಂದ ಶಚಿಗೆ ಅಭಯದಾನ.

**ಶಲ್ಯಃ**

**ಋಷಯೋಽಥಾಬ್ರುವನ್ ಸರ್ವೇ ದೇವಾಶ್ಚ ತ್ರಿದಿವೇಶ್ವರಾಃ ।**
**ಅಯಂ ವೈ ನಹುಷಃ ಶ್ರೀಮಾನ್ ದೇವರಾಜ್ಯೇಽಭಿಷಿಚ್ಯತಾಮ್ ॥೧॥**

**ತೇಜಸ್ವೀ ಚ ಯಶಸ್ವೀ ಚ ಧಾರ್ಮಿಕಶ್ಚೈವ ನಿತ್ಯದಾ ।**

ಶಲ್ಯ– ಅನಂತರ ಎಲ್ಲ ಋಷಿಗಳೂ ಮತ್ತು ಸರ್ವಾಧಿಪತಿಗಳಾದ ದೇವತೆಗಳೂ ಈ ಕಾಂತಿಯುಕ್ತನಾದ ನಹುಷನು ದೇವರಾಜ್ಯದಲ್ಲಿ ಅಭಿಷೇಕ ಮಾಡಲ್ಪಡಲಿ. ಅವನು ತೇಜಸ್ವಿಯೂ, ಯಶಸ್ವಿಯೂ ಮತ್ತು ಯಾವಾಗಲೂ ಧಾರ್ಮಿಕನೂ ಆಗಿದ್ದಾನೆ ಎಂದು ಹೇಳಿದರು.

**ತೇ ಗತ್ವಾ ತಬ್ಬ್ರುವನ್ ಸರ್ವೇ ರಾಜಾ ನೋ ಭವ ಪಾರ್ಥಿವ ॥೨॥**

**ಸ ತಾನುವಾಚ ನಹುಷೋ ದೇವಾನ್ ಋಷಿಗಣಾಂಸ್ತಥಾ ।**
**ಪಿತೃಭಿಃ ಸಹಿತೋ ರಾಜನ್ ಪರೀಪ್ಸನ್ ಹಿತಮಾತ್ಮನಃ ॥೩॥**

ಅವರು ಅವನನ್ನು ಸಮೀಪಿಸಿ ಎಲೈ ರಾಜನೇ, ನಮಗೆ ರಾಜನಾಗು ಎಂದು ಹೇಳಿದರು. ಎಲೈ ಜನಮೇಜಯ ರಾಜನೇ, ಆ ನಹುಷನು ತನ್ನ ಹಿತವನ್ನು ಬಯಸುತ್ತಾ ಪಿತೃಗಳಿಂದ ಸಹಿತರಾದ ದೇವತೆಗಳನ್ನು ಮತ್ತು ಋಷಿಗಳನ್ನು ಕುರಿತು ಹೀಗೆ ಮಾತನಾಡಿದನು.

**ದುರ್ಬಲೋಽಹಂ ನ ಮೇ ಶಕ್ತಿರ್ಭವತಾಂ ಪರಿಪಾಲನೇ ।**
**ಬಲವಾನ್ ಜ್ಞಾಯತಾಂ ರಾಜಾ ಬಲಂ ಶಕ್ತೇ ಹಿ ನಿತ್ಯದಾ ॥೪॥**

ನಾನು ದುರ್ಬಲನಾದವನು. ನಿಮ್ಮನ್ನು ಪಾಲಿಸಲು ನನಗೆ ಶಕ್ತಿಯಿಲ್ಲ. ಯಾವನಾದರೂ ಬಲಿಷ್ಠನಾದ ರಾಜನನ್ನು ನೋಡಿ. ಬಲಿಷ್ಠನಲ್ಲಿ ಯಾವಾಗಲೂ ನಿಮ್ಮನ್ನು ರಕ್ಷಿಸುವ ಸಾಮರ್ಥ್ಯವಿರುತ್ತದೆ.

**ತಮಬ್ರುವನ್ ಪುನಃ ಸರ್ವೇ ದೇವಾ ಋಷಿಪುರೋಗಮಾಃ ॥೫॥**

**ಅಸ್ಮಾಕಂ ತಪಸಾ ಯುಕ್ತಃ ಪಾಹಿ ರಾಜ್ಯಂ ತ್ರಿವಿಷ್ಟಪೇ ॥೬॥**

**ಪರಸ್ಪರಭಯಂ ಘೋರಮಸ್ಮಾಕಂ ಹಿ ನ ಸಂಶಯಃ ।**
**ಅಭಿಷಿಂಚಸ್ವ ರಾಜೇಂದ್ರ ಭವ ರಾಜಾ ತ್ರಿವಿಷ್ಟಪೇ ॥೭॥**

ಆಗ ದೇವತೆಗಳು ಮತ್ತು ಋಷಿಗಳು ಪುನಃ ಅವನನ್ನು ಕುರಿತು ನಮ್ಮ ತಪಸ್ಸಿನಿಂದ ಕೂಡಿದವನಾಗಿ ಸ್ವರ್ಗದಲ್ಲಿ ರಾಜ್ಯವನ್ನು ಆಳುವವನಾಗು. ನಮಗೆ ಪರಸ್ಪರವಾಗಿ ಘೋರವಾದ ಭಯವುಂಟಾಗಿದೆ. ರಾಜೇಂದ್ರನೇ, ಸ್ವರ್ಗದ ರಾಜನಾಗಿ ಅಭಿಷೇಕವನ್ನು ಹೊಂದು ಎಂದು ಹೇಳಿದರು.

ದೇವದಾನವಯಕ್ಷಾಣಾಮ್ ಋಷೀಣಾಂ ರಕ್ಷಸಾಂ ತಥಾ ।
ಪಿತೃಗಂಧರ್ವಭೂತಾನಾಂ ಚಕ್ಷುರ್ವಿಷಯವರ್ತಿನಾಮ್ ॥೮॥

ತೇಜ ಆದಾಸ್ಯಸೇ ಪಶ್ಯನ್ ಬಲವಾಂಶ್ಚ ಭವಿಷ್ಯಸಿ ।
ಧರ್ಮಂ ಪುರಸ್ಕೃತ್ಯ ಸದಾ ಸರ್ವಲೋಕಾಧಿಪೋ ಭವ ॥೯॥

ಬ್ರಹ್ಮರ್ಷೀಂಶ್ಚಾಪಿ ದೇವಾಂಶ್ಚ ಗೋಪಾಯಸ್ವ ತ್ರಿವಿಷ್ಟಪೇ ॥೧೦॥

ನೀನು ನಿನ್ನ ದೃಷ್ಟಿಗೆ ವಿಷಯರಾದ ದೇವ-ದಾನವ-ಯಕ್ಷರ ಋಷಿಗಳ ಮತ್ತು ರಾಕ್ಷಸರ ಮತ್ತು ಪಿತೃ-ಗಂಧರ್ವಭೂತಗಳ ತೇಜಸ್ಸನ್ನು ಪಡೆದುಕೊಂಡು ಬಲಿಷ್ಠನಾಗುವಿ. ಯಾವಾಗಲೂ ಧರ್ಮವನ್ನು ಮುಂದೆ ಮಾಡಿಕೊಂಡು ಎಲ್ಲ ಲೋಕಗಳಿಗೂ ಒಡೆಯನಾಗು. ಸ್ವರ್ಗದಲ್ಲಿದ್ದು ಬ್ರಹ್ಮರ್ಷಿಗಳನ್ನು ಮತ್ತು ದೇವತೆಗಳನ್ನು ರಕ್ಷಿಸುವವನಾಗು (ಎಂದು ಹೇಳಿದರು).

ಶಲ್ಯಃ

ಅಭ್ಯಷಿಚ್ಯತ ರಾಜೇಂದ್ರ ತತೋ ರಾಜಾ ತ್ರಿವಿಷ್ಟಪೇ ।
ಧರ್ಮಂ ಪುರಸ್ಕೃತ್ಯ ತದಾ ಸರ್ವಲೋಕಾಧಿಪೋಽಭವತ್ ॥೧೧॥

ಶಲ್ಯ– ಎಲೈ ರಾಜೇಂದ್ರನೇ, ಅನಂತರ ನಹುಷನು ಸ್ವರ್ಗಲೋಕದಲ್ಲಿ ಅಭಿಷಿಕ್ತನಾದನು. ಧರ್ಮವನ್ನು ಮುಂದೆ ಮಾಡಿಕೊಂಡು ಆಗ ಅವನು ಎಲ್ಲ ಲೋಕಗಳಿಗೂ ಒಡೆಯನಾದನು.

ಸುದುರ್ಲಭತರಂ ಲಬ್ಧ್ವಾ ಪ್ರಾಪ್ಯ ರಾಜ್ಯಂ ತ್ರಿವಿಷ್ಟಪೇ ।
ಧರ್ಮಾತ್ಮಾ ಸತತಂ ಭೂತ್ವಾ ಕಾಮಾತ್ಮಾ ಸಮಪದ್ಯತ ॥೧೨॥

ಅತ್ಯಂತ ದುರ್ಲಭವಾದ ಸ್ವರ್ಗರಾಜ್ಯವನ್ನು ಪಡೆದ ಅವನು ಮೊದಲು ಧರ್ಮಾತ್ಮನಾಗಿದ್ದವನು ಅನಂತರ ಕಾಮಾತ್ಮನಾದನು.

ದೇವೋದ್ಯಾನೇಷು ಸರ್ವೇಷು ನಂದನೋಪವನೇಷು ಚ ।
ಕೈಲಾಸೇ ಹಿಮವತ್ಪೃಷ್ಠೇ ಮಂದರೇ ಶ್ವೇತಪರ್ವತೇ ॥೧೩॥

ಸಹ್ಯೇ ಮಹೇಂದ್ರಮಲಯೇ ಸಮುದ್ರೇಷು ಸರಿತ್ಸು ಚ ।
ಅಪ್ಸರೋಭಿಃ ಪರಿವೃತೋ ದೇವಕನ್ಯಾಸಮಾವೃತಃ ॥೧೪॥

ಎಲ್ಲ ದೇವೋದ್ಯಾನಗಳಲ್ಲಿ, ನಂದನದ ಉಪವನಗಳಲ್ಲಿ, ಕೈಲಾಸ ಪರ್ವತ, ಹಿಮಾಲಯ ತಪ್ಪಲು, ಮಂದರಪರ್ವತ, ಶ್ವೇತಪರ್ವತ, ಸಹ್ಯಾದ್ರಿ, ಮಹೇಂದ್ರ, ಮಲಯಪರ್ವತಗಳಲ್ಲಿಯೂ, ಸಮುದ್ರಗಳಲ್ಲಿಯೂ ಮತ್ತು ಸರೋವರಗಳಲ್ಲಿಯೂ ಸಹ ದೇವಕನ್ಯೆಯರಿಂದಲೂ, ಅಪ್ಸರೆಯರಿಂದಲೂ ಪರಿವೃತನಾಗಿ (ವಿಹರಿಸಿದನು).

**ನಹುಷೋ ದೇವರಾಜೋऽಥ ಕ್ರೀಡನ್ ಬಹುವಿಧಂ ತದಾ ।**
**ಶೃಣ್ವನ್ ದಿವ್ಯಾ ಬಹುವಿಧಾಃ ಕಥಾಃ ಶ್ರುತಿಮನೋಹರಾಃ ॥೧೫॥**

**ವಾದಿತ್ರಾಣಿ ಚ ಸರ್ವಾಣಿ ಗೀತಂ ಚ ಮಧುರಸ್ವರಮ್ ॥೧೬॥**

ಆಗ ದೇವರಾಜನಾದ ನಹುಷನು ಬಹುವಿಧವಾಗಿ ವಿಹರಿಸುತ್ತಾ ಕಿವಿಗಳಿಗೆ ಮನೋಹರವಾದ ಅನೇಕವಿಧವಾದ ದಿವ್ಯವಾದ ಕಥೆಗಳನ್ನೂ, ಎಲ್ಲ ವಾದ್ಯಗಳನ್ನೂ, ಮಧುರಸ್ವರದ ಗೀತೆಗಳನ್ನೂ ಕೇಳುವವನಾಗಿ (ವಿಹರಿಸಿದನು).

**ವಿಶ್ವಾವಸುರ್ನಾರದಶ್ಚ ಗಂಧರ್ವಾಪ್ಸರಸಾಂ ಗಣಾಃ ।**
**ಋತವಃ ಷಟ್ ಚ ದೇವೇಂದ್ರಂ ಮೂರ್ತಿಮಂತ ಉಪಾಸತೇ ॥೧೭॥**

**ಮಾರುತಃ ಸುರಭಿರ್ವಾತಿ ಮನೋಜ್ಞಃ ಸುಖಶೀತಲಃ ॥೧೮॥**

ವಿಶ್ವಾವಸು, ನಾರದರು, ಗಂಧರ್ವರು, ಅಪ್ಸರೆಯರ ಸಮೂಹ ಮತ್ತು ಆರು ಋತುಗಳು ದೇಹವನ್ನು ಧರಿಸಿ ದೇವೇಂದ್ರನಾದ ಅವನನ್ನು ಉಪಾಸನೆ ಮಾಡಿದವು. ವಾಯುವು ಸುಗಂಧದಿಂದ ಕೂಡಿ ಮನೋಹರವಾಗಿ ಸುಖಶೀತಲವಾಗಿ ಬೀಸುತ್ತಿತ್ತು.

**ಏವಂ ಹಿ ಕ್ರೀಡತಸ್ತಸ್ಯ ನಹುಷಸ್ಯ ದುರಾತ್ಮನಃ ।**
**ಸಂಪ್ರಾಪ್ತಾ ದರ್ಶನಂ ದೇವೀ ಶಕ್ರಸ್ಯ ಮಹಿಷೀ ಪ್ರಿಯಾ ॥೧೯॥**

**ಸ ತಾಂ ಸಂದೃಶ್ಯ ದುಷ್ಟಾತ್ಮಾ ಪ್ರಾಹ ಸರ್ವಾನ್ ಸಭಾಸದಃ ॥೨೦॥**

ಹೀಗೆ ಅವನು ದುರಾತ್ಮನಾಗಿ ಕ್ರೀಡಿಸುತ್ತಿರಲು ಒಮ್ಮೆ ಇಂದ್ರನ ರಾಣಿಯೂ, ಪ್ರಿಯೆಯೂ ಆದ ಶಚಿದೇವಿಯು ಅವನ ದೃಷ್ಟಿಗೆ ಗೋಚರಿಸಿದಳು. ದುಷ್ಟಾತ್ಮನಾದ ಅವನು ಅವಳನ್ನು ಚೆನ್ನಾಗಿ ನೋಡಿ ಎಲ್ಲಾ ಸಭಾಸದರನ್ನೂ ಕುರಿತು ಹೀಗೆ ಹೇಳಿದನು.

ಇಂದ್ರಸ್ಯ ಮಹಿಷೀ ದೇವೀ ಕಸ್ಮಾನ್ನಾಂ ನೋಪತಿಷ್ಠತಿ ।
ಅಹಮಿಂದ್ರೋಽಸ್ಮಿ ದೇವಾನಾಂ ಲೋಕಾನಾಂ ಚ ತಥೇಶ್ವರಃ ॥೨೧॥

ಆಗಚ್ಛತು ಶಚೀ ಮಹ್ಯಂ ಕ್ಷಿಪ್ರಮದ್ಯ ನಿವೇಶನಮ್ ॥೨೨॥

ಇಂದ್ರನ ರಾಣಿಯಾದ ಶಚೀದೇವಿಯು ಏಕೆ ನನ್ನ ಬಳಿಗೆ ಬರುವುದಿಲ್ಲ? ನಾನು ದೇವತೆಗಳಿಗೆ ಇಂದ್ರನೂ, ಮೂರುಲೋಕಗಳಿಗೆ ಒಡೆಯನೂ ಆಗಿದ್ದೇನಷ್ಟೆ! ಆದ್ದರಿಂದ ಶಚಿಯು ಶೀಘ್ರವಾಗಿ ನನ್ನ ನಿವಾಸಕ್ಕೆ ಬರಲಿ.

ತಚ್ಛ್ರುತ್ವಾ ದುರ್ಮನಾ ದೇವೀ ಬೃಹಸ್ಪತಿಮುವಾಚ ಹ ॥೨೩॥

ರಕ್ಷ ಮಾಂ ನಹುಷಾದ್ ಬ್ರಹ್ಮನ್ ತ್ವಾಮಸ್ಮಿ ಶರಣಂ ಗತಾ ।

ಅದನ್ನು ಕೇಳಿ ವಿಷಾದಗೊಂಡ ಶಚಿಯು ಬೃಹಸ್ಪತಿಗಳನ್ನುದ್ದೇಶಿಸಿ ಬ್ರಾಹ್ಮಣರೇ, ನಾನು ನಿಮಗೆ ಶರಣಾಗತಳಾಗಿದ್ದೇನೆ. ನನ್ನನ್ನು ನಹುಷನಿಂದ ರಕ್ಷಿಸಿ ಎಂದು ಹೇಳಿದಳು.

ಸರ್ವಲಕ್ಷಣಸಂಪನ್ನಾಂ ಬ್ರಹ್ಮನ್ ತ್ವಂ ಮಾಂ ಪ್ರಭಾಷಸೇ ॥೨೪॥

ದೇವರಾಜಸ್ಯ ದಯಿತಾಮತ್ಯಂತಸುಖಭಾಗಿನೀಮ್ ।
ಅವೈಧವ್ಯೇನ ಯುಕ್ತಾಂ ವಾಽಪ್ಯೇಕಪತ್ನೀಂ ಪತಿವ್ರತಾಮ್ ॥೨೫॥

ಉಕ್ತವಾನಸಿ ಮಾಂ ಪೂರ್ವಂ ಋತಾಂ ತಾಂ ಕುರು ವೈ ಗಿರಮ್॥೨೬॥

ಬ್ರಾಹ್ಮಣರೇ, ನೀವು ಯಾವಾಗಲೂ ನನ್ನನ್ನು ಎಲ್ಲ ಶುಭಲಕ್ಷಣಗಳಿಂದ ಕೂಡಿದವಳು, ದೇವೇಂದ್ರನಿಗೆ ಪ್ರಿಯಳಾದವಳು, ಬಹಳ ಸುಖಕ್ಕೆ ಅರ್ಹಳಾದವಳು, ಸೌಮಾಂಗಲ್ಯಯುಕ್ತಳಾದವಳು, ಒಬ್ಬನೇ ಪತಿಯನ್ನು ಹೊಂದಿ ಪತಿವ್ರತೆಯಾದವಳು ಎಂದು ಹಿಂದೆ ಹೇಳಿದ್ದೀರಿ. ನಿಮ್ಮ ಆ ಮಾತನ್ನು ಸತ್ಯವನ್ನಾಗಿ ಮಾಡಿ.

ನೋಕ್ತಪೂರ್ವಂ ಚ ಭಗವನ್ ಮೃಷಾ ತೇ ಕಿಂಚಿದೀಶ್ವರ ।
ತಸ್ಮಾದೇತತ್ ಭವೇತ್ ಸತ್ಯಂ ತ್ವಯೋಕ್ತಂ ದ್ವಿಜಸತ್ತಮ ॥೨೭॥

ದ್ವಿಜಶ್ರೇಷ್ಠರೇ, ಸಮರ್ಥರಾದವರೇ, ಪೂಜ್ಯರೇ, ನೀವು ಹಿಂದೆ ಆಡಿದ ಮಾತು ಎಂದೂ ಸುಳ್ಳಾಗಿಲ್ಲ. ಆದ್ದರಿಂದ ನೀವು ಆಡಿದ ಈ ಮಾತೂ ಸಹ ಸತ್ಯವಾಗಲಿ.

**ಬೃಹಸ್ಪತಿರಥೋವಾಚ ಇಂದ್ರಾಣೀಂ ಭಯಮೋಹಿತಾಮ್ ॥೨೮॥**

**ಯದುಕ್ತಾಽಸಿ ಮಯಾ ದೇವಿ ತತ್ ಸತ್ಯಂ ಭವಿತಾ ಧ್ರುವಮ್ ।**
**ದ್ರಕ್ಷ್ಯಸೇ ದೇವರಾಜಾನಮಿಂದ್ರಂ ಶೀಘ್ರಮಿಹಾಗತಮ್ ॥೨೯॥**

**ನ ಭೇತವ್ಯಂ ಚ ನಹುಷಾತ್ ಸತ್ಯಮೇತದ್ ಬ್ರವೀಮಿ ತೇ ।**
**ಸಮಾಗಮಿಷ್ಯೇ ಶಕ್ರೇಣ ನ ಚಿರಾದ್ ಭವತೀಮಹಮ್ ॥೩೦॥**

ಆಗ ಭಯಗ್ರಸ್ತಳಾದ ಇಂದ್ರನ ಪತ್ನಿಯನ್ನು ಕುರಿತು ಬೃಹಸ್ಪತಿಗಳು ದೇವಿಯೇ, ನಾನು ಏನು ಹೇಳಿದ್ದೇನೋ ಅದೆಲ್ಲವೂ ಖಂಡಿತವಾಗಿ ಸತ್ಯವೇ ಆಗುವುದು. ನೀನು ಶೀಘ್ರವಾಗಿ ಇಲ್ಲಿಗೆ ಬಂದ ದೇವರಾಜನಾದ ಇಂದ್ರನನ್ನು ನೋಡುವಿ. ನಹುಷನಿಗೆ ಹೆದರಬೇಕಾದ್ದಿಲ್ಲ. ಇದನ್ನು ಸತ್ಯವಾಗಿ ಹೇಳುತ್ತಿದ್ದೇನೆ. ನಾನು ನಿನ್ನನ್ನು ಶೀಘ್ರವಾಗಿ ಇಂದ್ರನ ಜೊತೆಯಲ್ಲಿ ಒಂದುಗೂಡಿಸುವೆನು ಎಂದು ಹೇಳಿದರು.

**ಶಲ್ಯಃ**

**ಅಥ ಶುಶ್ರಾವ ನಹುಷಃ ಶಕ್ರಾಣೀಂ ಶರಣಾಗತಾಮ್ ।**
**ಬೃಹಸ್ಪತಿಂ ಚಾಂಗಿರಸಂ ಚುಕ್ರೋಧ ನಹುಷಸ್ತದಾ ॥೩೧॥**

**ಶಲ್ಯ**– ಆಗ ನಹುಷನು ಇಂದ್ರನ ಪತ್ನಿಯು ಅಂಗಿರಸರ ಪುತ್ರರಾದ ಬೃಹಸ್ಪತಿಗಳಿಗೆ ಶರಣಾಗಿತಳಾಗಿದ್ದಾಳೆಂದು ಕೇಳಿ ಕೋಪಗೊಂಡನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕಾದಶೋಽಧ್ಯಾಯಃ ॥

॥ ಸೇನೋದ್ಯೋಗಪರ್ವಣಿ ಏಕಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಹನ್ನೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

# ಹನ್ನೆರಡನೆಯ ಅಧ್ಯಾಯ

ಬೃಹಸ್ಪತಿಗಳ ಸೂಚನೆಯಂತೆ ಕಾಲಾವಕಾಶವನ್ನು ಕೇಳಲು ಶಚಿಯಿಂದ ನಹುಷನ ಸಮೀಪಕ್ಕೆ ಗಮನ.

**ಶಲ್ಯಃ**

**ಕ್ರುದ್ಧಂ ತು ನಹುಷಂ ದೃಷ್ಟ್ವಾ ದೇವಾ ಋಷಿಪುರೋಗಮಾಃ ।**
**ಅಬ್ರುವನ್ ದೇವರಾಜಾನಂ ನಹುಷಂ ಘೋರದರ್ಶನಮ್ ॥೧॥**

ಶಲ್ಯ– ನಹುಷನು ಕ್ರೋಧವಶನಾಗಿರುವುದನ್ನು ನೋಡಿ ಋಷಿಗಳನ್ನು ಮುಂದೆ ಮಾಡಿಕೊಂಡ ದೇವತೆಗಳು ಘೋರದರ್ಶನನಾದ ದೇವರಾಜನಾದ ನಹುಷನನ್ನು ಕುರಿತು ಹೀಗೆ ಹೇಳಿದರು.

**ದೇವರಾಜ ಜಹಿ ಕ್ರೋಧಂ ತ್ವಯಿ ಕ್ರುದ್ಧೇ ಜಗದ್ ವಿಭೋ ।**
**ತ್ರಸ್ತಂ ಸಾಸುರಗಂಧರ್ವಂ ಸಕಿನ್ನರಮಹೋರಗಮ್ ॥೨॥**

ದೇವರಾಜನೇ, ಈ ಕ್ರೋಧವನ್ನು ಸಂಹರಿಸು. ವಿಭುವೇ, ನೀನು ಕೋಪಗೊಂಡರೆ ಅಸುರಗಂಧರ್ವರಿಂದ ಸಹಿತವಾದ, ಕಿನ್ನರ-ಮಹೋರಗರಿಂದ ಸಹಿತವಾದ ಜಗತ್ತು ಹೆದರುತ್ತದೆ.

**ಜಹಿ ಕ್ರೋಧಮಿಮಂ ಸಾಧೋ ನ ಕುಪ್ಯಂತಿ ಭವದ್ವಿಧಾಃ ।**
**ಪರಸ್ಯ ಪತ್ನೀ ಸಾ ದೇವೀ ಪ್ರಸೀದಸ್ವ ಸುರೇಶ್ವರ ॥೩॥**

ಸಾಧುವೇ, ಈ ಕೋಪವನ್ನು ಸಂಹಾರ ಮಾಡು. ನಿನ್ನಂತಹವರು ಕೋಪಗೊಳ್ಳುವುದಿಲ್ಲ. ಶಚೀದೇವಿಯು ಪರಪತ್ನಿ. ಸುರೇಶ್ವರನೇ, ಪ್ರಸನ್ನನಾಗು.

**ನಿವರ್ತಯ ಮನಃ ಪಾಪಾತ್ ಪರದಾರಾಭಿಮರ್ಶನಾತ್ ।**
**ದೇವರಾಜೋಽಸಿ ಭದ್ರಂ ತೇ ಪ್ರಜಾ ಧರ್ಮೇಣ ಪಾಲಯ ॥೪॥**

ಪರಪತ್ನಿಯನ್ನು ಸ್ಪರ್ಶಮಾಡುವುದರಿಂದ ಉಂಟಾಗುವ ಪಾಪದಿಂದ ಮನಸ್ಸನ್ನು ಹಿಂದಕ್ಕೆ ತಿರುಗಿಸು. ನೀನು ದೇವರಾಜನಾಗಿದ್ದೀಯೆ. ನಿನಗೆ ಮಂಗಳವಾಗಲಿ. ಪ್ರಜೆಗಳನ್ನು ಧರ್ಮದಿಂದ ಪಾಲಿಸು.

ಏವಮುಕ್ತೋ ನ ಜಗ್ರಾಹ ತದ್ವಚಃ ಕಾಲಚೋದಿತಃ ।
ಅಥ ದೇವಾನುವಾಚೇದಮಿಂದ್ರಂ ಪ್ರತಿ ಸುರಾಧಿಪಃ ॥೫॥

ಹೀಗೆ ಹೇಳಲ್ಪಟ್ಟಾಗ ಕಾಲಚೋದಿತನಾದ ಅವನು ಆ ಮಾತುಗಳನ್ನು ಸ್ವೀಕರಿಸಲಿಲ್ಲ. ಆಗ ಸುರಾಧಿಪನಾದ ಅವನು ಇಂದ್ರನ ವಿಷಯದಲ್ಲಿ ದೇವತೆಗಳನ್ನು ಕುರಿತು ಹೀಗೆ ಮಾತನಾಡಿದನು.

ಅಹಲ್ಯಾ ಧರ್ಷಿತಾ ಪೂರ್ವಮ್ ಋಷಿಪತ್ನೀ ಯಶಸ್ವಿನೀ ।
ಪತ್ಯೌ ಜೀವತಿ ಸೇಂದ್ರೇಣ ಸ ಚ ಕಿಂ ನ ನಿವಾರಿತಃ ॥೬॥

ಹಿಂದೆ ಪತಿಯು ಜೀವಿಸಿರುವಾಗ ಯಶಸ್ವಿನಿಯೂ, ಋಷಿಪತ್ನಿಯೂ ಆದ ಅಹಲ್ಯೆಯು ಇಂದ್ರನಿಂದ ಧರ್ಷಣೆಗೆ ಒಳಗಾದಳು. ಆಗ ನೀವು ಇಂದ್ರನನ್ನು ಏಕೆ ತಡೆಯಲಿಲ್ಲ?

ಬಹೂನಿ ಚ ನೃಶಂಸಾನಿ ಕೃತಾನೀಂದ್ರೇಣ ವೈ ಪುರಾ ।
ವೈಧರ್ಮ್ಯಾಣ್ಯಪಥಾ ಚೈವ ಸ ವಃ ಕಸ್ಮಾನ್ನ ವಾರಿತಃ ॥೭॥

ಇಂದ್ರನು ಹಿಂದೆ ಅನೇಕ ಕ್ರೂರವಾದ, ಧರ್ಮವಿರುದ್ಧವಾದ ಕಾರ್ಯಗಳನ್ನು ಅಪಮಾರ್ಗದಿಂದ ಮಾಡಿದ್ದಾನೆ. ನೀವು ಅವನನ್ನು ಏಕೆ ತಡೆಯಲಿಲ್ಲ?

ಉಪತಿಷ್ಠತು ದೇವೀ ಮಾಮೇತದಸ್ಯಾ ಹಿತಂ ಪರಮ್ ।
ಯುಷ್ಮಾಕಂ ಚ ಸದಾ ದೇವಾಃ ಶಿವಮೇವಂ ಭವಿಷ್ಯತಿ ॥೮॥

ದೇವಿಯಾದ ಶಚಿಯು ನನ್ನ ಬಳಿಗೆ ಬರಲಿ. ಇದರಿಂದ ಅವಳಿಗೆ ಶ್ರೇಷ್ಠವಾದ ಹಿತವಾಗುತ್ತದೆ. ದೇವತೆಗಳೇ, ನಿಮಗೂ ಸಹ ಇದರಿಂದ ಮಂಗಳವುಂಟಾಗುವುದು.

ದೇವಾಃ

ಇಂದ್ರಾಣೀಮಾನಯಿಷ್ಯಾಮೋ ಸುರಾಧಿಪ ಯದೀಚ್ಛಸಿ ।
ಜಹಿ ಕ್ರೋಧಮಿಮಂ ವೀರ ಪ್ರೀತೋ ಭವ ಸುರೇಶ್ವರ ॥೯॥

ಇತ್ಯುಕ್ತ್ವಾ ತಂ ತದಾ ದೇವಾ ಋಷಿಭಿಃ ಸಹ ಭಾರತ ।
ಜಗ್ಮುರ್ಬೃಹಸ್ಪತಿಂ ವಕ್ತುಮಿಂದ್ರಾಣೀಂ ಚಾಶುಭಂ ವಚಃ ॥೧೦॥

# ಹನ್ನೆರಡನೆಯ ಅಧ್ಯಾಯ

ಬೃಹಸ್ಪತಿಗಳ ಸೂಚನೆಯಂತೆ ಕಾಲಾವಕಾಶವನ್ನು ಕೇಳಲು ಶಚಿಯಿಂದ ನಹುಷನ ಸಮೀಪಕ್ಕೆ ಗಮನ.

**ಶಲ್ಯಃ**

**ಕ್ರುದ್ಧಂ ತು ನಹುಷಂ ದೃಷ್ಟ್ವಾ ದೇವಾ ಋಷಿಪುರೋಗಮಾಃ ।**
**ಅಬ್ರುವನ್ ದೇವರಾಜಾನಂ ನಹುಷಂ ಘೋರದರ್ಶನಮ್ ॥೧॥**

ಶಲ್ಯ– ನಹುಷನು ಕ್ರೋಧವಶನಾಗಿರುವುದನ್ನು ನೋಡಿ ಋಷಿಗಳನ್ನು ಮುಂದೆ ಮಾಡಿಕೊಂಡ ದೇವತೆಗಳು ಘೋರದರ್ಶನನಾದ ದೇವರಾಜನಾದ ನಹುಷನನ್ನು ಕುರಿತು ಹೀಗೆ ಹೇಳಿದರು.

**ದೇವರಾಜ ಜಹಿ ಕ್ರೋಧಂ ತ್ವಯಿ ಕ್ರುದ್ಧೇ ಜಗದ್ ವಿಭೋ ।**
**ತ್ರಸ್ತಂ ಸಾಸುರಗಂಧರ್ವಂ ಸಕಿನ್ನರಮಹೋರಗಮ್ ॥೨॥**

ದೇವರಾಜನೇ, ಈ ಕ್ರೋಧವನ್ನು ಸಂಹರಿಸು. ವಿಭುವೇ, ನೀನು ಕೋಪಗೊಂಡರೆ ಅಸುರಗಂಧರ್ವರಿಂದ ಸಹಿತವಾದ, ಕಿನ್ನರ-ಮಹೋರಗರಿಂದ ಸಹಿತವಾದ ಜಗತ್ತು ಹೆದರುತ್ತದೆ.

**ಜಹಿ ಕ್ರೋಧಮಿಮಂ ಸಾಧೋ ನ ಕುಪ್ಯಂತಿ ಭವದ್ವಿಧಾಃ ।**
**ಪರಸ್ಯ ಪತ್ನೀ ಸಾ ದೇವೀ ಪ್ರಸೀದಸ್ವ ಸುರೇಶ್ವರ ॥೩॥**

ಸಾಧುವೇ, ಈ ಕೋಪವನ್ನು ಸಂಹಾರ ಮಾಡು. ನಿನ್ನಂತಹವರು ಕೋಪಗೊಳ್ಳುವುದಿಲ್ಲ. ಶಚೀದೇವಿಯು ಪರಪತ್ನಿ. ಸುರೇಶ್ವರನೇ, ಪ್ರಸನ್ನನಾಗು.

**ನಿವರ್ತಯ ಮನಃ ಪಾಪಾತ್ ಪರದಾರಾಭಿಮರ್ಶನಾತ್ ।**
**ದೇವರಾಜೋಽಸಿ ಭದ್ರಂ ತೇ ಪ್ರಜಾ ಧರ್ಮೇಣ ಪಾಲಯ ॥೪॥**

ಪರಪತ್ನಿಯನ್ನು ಸ್ಪರ್ಶಮಾಡುವುದರಿಂದ ಉಂಟಾಗುವ ಪಾಪದಿಂದ ಮನಸ್ಸನ್ನು ಹಿಂದಕ್ಕೆ ತಿರುಗಿಸು. ನೀನು ದೇವರಾಜನಾಗಿದ್ದೀಯೆ. ನಿನಗೆ ಮಂಗಳವಾಗಲಿ. ಪ್ರಜೆಗಳನ್ನು ಧರ್ಮದಿಂದ ಪಾಲಿಸು.

ಏವಮುಕ್ತೋ ನ ಜಗ್ರಾಹ ತದ್ವಚಃ ಕಾಲಚೋದಿತಃ ।
ಅಥ ದೇವಾನುವಾಚೇದಮಿಂದ್ರಂ ಪ್ರತಿ ಸುರಾಧಿಪಃ ॥೫॥

ಹೀಗೆ ಹೇಳಲ್ಪಟ್ಟಾಗ ಕಾಲಚೋದಿತನಾದ ಅವನು ಆ ಮಾತುಗಳನ್ನು ಸ್ವೀಕರಿಸಲಿಲ್ಲ. ಆಗ ಸುರಾಧಿಪನಾದ ಅವನು ಇಂದ್ರನ ವಿಷಯದಲ್ಲಿ ದೇವತೆಗಳನ್ನು ಕುರಿತು ಹೀಗೆ ಮಾತನಾಡಿದನು.

ಅಹಲ್ಯಾ ಧರ್ಷಿತಾ ಪೂರ್ವಮ್ ಋಷಿಪತ್ನೀ ಯಶಸ್ವಿನೀ ।
ಪತ್ಯೌ ಜೀವತಿ ಸೇಂದ್ರೇಣ ಸ ಚ ಕಿಂ ನ ನಿವಾರಿತಃ ॥೬॥

ಹಿಂದೆ ಪತಿಯು ಜೀವಿಸಿರುವಾಗ ಯಶಸ್ವಿನಿಯೂ, ಋಷಿಪತ್ನಿಯೂ ಆದ ಅಹಲ್ಯೆಯು ಇಂದ್ರನಿಂದ ಧರ್ಷಣೆಗೆ ಒಳಗಾದಳು. ಆಗ ನೀವು ಇಂದ್ರನನ್ನು ಏಕೆ ತಡೆಯಲಿಲ್ಲ?

ಬಹೂನಿ ಚ ನೃಶಂಸಾನಿ ಕೃತಾನೀಂದ್ರೇಣ ವೈ ಪುರಾ ।
ವೈಧರ್ಮ್ಯಾಣ್ಯಪಥಾ ಚೈವ ಸ ವಃ ಕಸ್ಮಾನ್ನ ವಾರಿತಃ ॥೭॥

ಇಂದ್ರನು ಹಿಂದೆ ಅನೇಕ ಕ್ರೂರವಾದ, ಧರ್ಮವಿರುದ್ಧವಾದ ಕಾರ್ಯಗಳನ್ನು ಅಪಮಾರ್ಗದಿಂದ ಮಾಡಿದ್ದಾನೆ. ನೀವು ಅವನನ್ನು ಏಕೆ ತಡೆಯಲಿಲ್ಲ?

ಉಪತಿಷ್ಠತು ದೇವೀ ಮಾಮೇತದಸ್ಯಾ ಹಿತಂ ಪರಮ್ ।
ಯುಷ್ಮಾಕಂ ಚ ಸದಾ ದೇವಾಃ ಶಿವಮೇವಂ ಭವಿಷ್ಯತಿ ॥೮॥

ದೇವಿಯಾದ ಶಚಿಯು ನನ್ನ ಬಳಿಗೆ ಬರಲಿ. ಇದರಿಂದ ಅವಳಿಗೆ ಶ್ರೇಷ್ಠವಾದ ಹಿತವಾಗುತ್ತದೆ. ದೇವತೆಗಳೇ, ನಿಮಗೂ ಸಹ ಇದರಿಂದ ಮಂಗಳವುಂಟಾಗುವುದು.

ದೇವಾಃ

ಇಂದ್ರಾಣೀಮಾನಯಿಷ್ಯಾಮೋ ಸುರಾಧಿಪ ಯದೀಚ್ಛಸಿ ।
ಜಹಿ ಕ್ರೋಧಮಿಮಂ ವೀರ ಪ್ರೀತೋ ಭವ ಸುರೇಶ್ವರ ॥೯॥

ಇತ್ಯುಕ್ತ್ವಾ ತಂ ತದಾ ದೇವಾ ಋಷಿಭಿಃ ಸಹ ಭಾರತ ।
ಜಗ್ಮುರ್ಬೃಹಸ್ಪತಿಂ ವಕ್ತುಮಿಂದ್ರಾಣೀಂ ಚಾಶುಭಂ ವಚಃ ॥೧೦॥

ದೇವತೆಗಳು– ಸುರಾಧಿಪನೇ, ನೀನು ಬಯಸಿದರೆ ಇಂದ್ರಾಣಿಯನ್ನು ಕರೆದುಕೊಂಡು ಬರುತ್ತೇವೆ. ವೀರನೇ,,ಈ ಕ್ರೋಧವನ್ನು ಸಂಹರಿಸು. ಸುರೇಶ್ವರನೇ, ಪ್ರಸನ್ನನಾಗು. ಎಲೈ ಭಾರತನೇ, ಹೀಗೆ ಹೇಳಿ ದೇವತೆಗಳು ಋಷಿಗಳ ಜೊತೆಯಲ್ಲಿ ಬೃಹಸ್ಪತಿಗೂ ಮತ್ತು ಇಂದ್ರಾಣಿಗೂ ಅಶುಭವಾದ ಮಾತುಗಳನ್ನು ಆಡಲು ಬೃಹಸ್ಪತಿಗಳ ಬಳಿಗೆ ಹೋದರು.

ದೇವಾಃ

ಜಾನೀಮಃ ಶರಣಂ ಪ್ರಾಪ್ತಾಮಿಂದ್ರಾಣೀಂ ತವ ವೇಶ್ಮನಿ ।
ದತ್ತಾಭಯಾಂ ಚ ವಿಪ್ರೇಂದ್ರ ತ್ವಯಾ ದೇವರ್ಷಿಸತ್ತಮ ॥೧೧॥

ದೇವತೆಗಳು– ವಿಪ್ರೇಂದ್ರರೇ, ದೇವರ್ಷಿಶ್ರೇಷ್ಠರೇ, ನಿಮ್ಮ ಮನೆಯಲ್ಲಿ ಶಚೀದೇವಿಯು ಆಶ್ರಯವನ್ನು ಪಡೆದಿದ್ದಾಳೆ ಮತ್ತು ನೀವು ಅವಳಿಗೆ ಅಭಯವನ್ನು ಕೊಟ್ಟಿದ್ದೀರಿ ಎಂದು ನಾವು ತಿಳಿದಿದ್ದೇವೆ.

ತೇ ತ್ವಾಂ ದೇವಾಃ ಸಗಂಧರ್ವಾ ಋಷಯಶ್ಚ ಮಹಾದ್ಯುತೇ ।
ಪ್ರಸಾದಯಂತಿ ಚೇಂದ್ರಾಣೀ ನಹುಷಾಯ ಪ್ರದೀಯತಾಮ್ ॥೧೨॥

ಅಂತಹ ಗಂಧರ್ವರಿಂದ ಕೂಡಿದ ದೇವತೆಗಳು ಮತ್ತು ಋಷಿಗಳಾದ ನಾವು ನಿಮ್ಮನ್ನು ಪ್ರಸನ್ನಗೊಳಿಸುತ್ತಿದ್ದೇವೆ. ಮಹಾತೇಜಸ್ವಿಗಳೇ, ಶಚಿಯನ್ನು ನಹುಷನಿಗಾಗಿ ಬಿಟ್ಟುಕೊಡಿ.

ಇಂದ್ರಾದ್ ವಿಶಿಷ್ಟೋ ನಹುಷೋ ದೇವರಾಜೋ ಮಹಾದ್ಯುತಿಃ ।
ವೃಣೋತ್ವಿಯಂ ವರಾರೋಹಾ ಭರ್ತೃತ್ವೇ ವರವರ್ಣಿನೀ ॥೧೩॥

ದೇವರಾಜನೂ, ಮಹಾದ್ಯುತಿಯೂ ಆದ ನಹುಷನು ಇಂದ್ರನಿಗಿಂತಲೂ ಶ್ರೇಷ್ಠನಾಗಿದ್ದಾನೆ. ಈ ಒಳ್ಳೆಯ ನಿತಂಬಿನಿಯೂ ಮತ್ತು ಸುಂದರಿಯೂ ಆದ ಶಚಿಯು ಅವನನ್ನು ಪತಿಯಾಗಿ ಸ್ವೀಕರಿಸಲಿ.

ಏವಮುಕ್ತಾ ತು ಸಾ ದೇವೀ ಬಾಷ್ಪಮುತ್ಸೃಜ್ಯ ಸಸ್ವನಮ್ ।
ಉವಾಚ ರುದತೀ ದೀನಾ ಬೃಹಸ್ಪತಿಮಿದಂ ವಚಃ ॥೧೪॥

ಹೀಗೆ ಹೇಳಲ್ಪಟ್ಟ ಶಚೀದೇವಿಯು ಕಣ್ಣೀರನ್ನು ಸುರಿಸುತ್ತಾ ಗಟ್ಟಿಯಾಗಿ ಶಬ್ದಮಾಡಿ ಅಳುತ್ತಾ ದೀನಳಾಗಿ ಬೃಹಸ್ಪತಿಗಳನ್ನು ಕುರಿತು ಈ ಮಾತನ್ನಾಡಿದಳು.

**ನಾಹಮಿಚ್ಛಾಮಿ ನಹುಷಂ ಪತಿಮನ್ವಾಸ್ಯ ತಂ ಪ್ರಭುಮ್ ।**
**ಶರಣಾಗತಾऽಸ್ಮಿ ತೇ ಬ್ರಹ್ಮನ್ ತ್ರಾಯಸ್ವ ಮಹತೋ ಭಯಾತ್ ॥೧೫॥**

ಪ್ರಭುವಾದ ದೇವೇಂದ್ರನನ್ನು ಶುಶ್ರೂಷೆ ಮಾಡಿ ನಾನು ನಹುಷನನ್ನು ಪತಿಯಾಗಿ ಬಯಸುವುದಿಲ್ಲ. ಬ್ರಾಹ್ಮಣರೇ, ನಿಮಗೆ ಶರಣಾಗತಳಾಗಿದ್ದೇನೆ. ಈ ದೊಡ್ಡ ಭಯದಿಂದ ನನ್ನನ್ನು ರಕ್ಷಿಸಿ.

**ಬೃಹಸ್ಪತಿಃ**

**ಶರಣಾಗತಾಂ ನ ತ್ಯಜೇಯಮಿಂದ್ರಾಣಿ ಮಮ ನಿಶ್ಚಯಃ ।**
**ಧರ್ಮಜ್ಞಾಂ ಸತ್ಯಶೀಲಾಂ ಚ ನ ತ್ಯಜೇಯಮನಿಂದಿತೇ ॥೧೬॥**

ಬೃಹಸ್ಪತಿ– ಇಂದ್ರಾಣಿಯೇ, ಶರಣಾಗತಳಾದವಳನ್ನು ನಾನು ಬಿಡುವುದಿಲ್ಲ. ಇದು ನನ್ನ ನಿರ್ಧಾರ. ಅನಿಂದಿತೆಯೇ, ಧರ್ಮಜ್ಞಳೂ, ಸತ್ಯಶೀಲಳೂ ಆದ ನಿನ್ನನ್ನು ನಾನು ಬಿಡುವುದಿಲ್ಲ.

**ನಾಕಾರ್ಯಂ ಕರ್ತುಮಿಚ್ಛಾಮಿ ಬ್ರಾಹ್ಮಣಃ ಸನ್ ವಿಶೇಷತಃ ।**
**ಶ್ರುತಧರ್ಮಾ ಸತ್ಯಶೀಲೋ ಜಾನನ್ ಧರ್ಮಾನುಶಾಸನಮ್ ॥೧೭॥**

ವಿಶೇಷವಾಗಿ ಬ್ರಾಹ್ಮಣನಾಗಿ ಧರ್ಮಗಳ ಜ್ಞಾನವನ್ನು ಹೊಂದಿದವನಾಗಿ, ಧರ್ಮಾನುಶಾಸನವನ್ನು ತಿಳಿದು ಸತ್ಯಶೀಲನಾದ ನಾನು ಅಕಾರ್ಯವನ್ನು ಮಾಡಲು ಬಯಸುವುದಿಲ್ಲ.

**ನಾಹಮೇತತ್ ಕರಿಷ್ಯಾಮಿ ಗಚ್ಛಧ್ವಂ ವೈ ಸುರೋತ್ತಮಾಃ ।**
**ಅಸ್ಮಿಂಶ್ಚಾರ್ಥೇ ಪುರಾ ಗೀತಂ ಬ್ರಹ್ಮಣಾ ಶ್ರೂಯತಾಮಿದಮ್ ॥೧೮॥**

ದೇವಶ್ರೇಷ್ಠರೇ, ನಾನು ನೀವು ಹೇಳಿದಂತೆ ಮಾಡುವುದಿಲ್ಲ. ನೀವು ಹೊರಟು ಹೋಗಿ. ಈ ವಿಷಯದಲ್ಲಿ ಬ್ರಹ್ಮದೇವರು ಹಿಂದೆ ಹಾಡಿದ ಈ ಗೀತೆಯನ್ನು ಕೇಳಿ.

ನ ತಸ್ಯ ಬೀಜಂ ರೋಹತಿ ರೋಹಕಾಲೇ
ನ ಚಾಸ್ಯ ವರ್ಷಂ ವರ್ಷತಿ ವರ್ಷಕಾಲೇ ।
ಭೀತಂ ಪ್ರಪನ್ನಂ ಪ್ರದದಾತಿ ಶತ್ರವೇ
ನ ಸೋಽಂತರಂ ಲಭತೇ ತ್ರಾಣಮಿಚ್ಛನ್ ॥೧೯॥

ಭೀತರಾಗಿ ಶರಣಾಗತರಾದವರನ್ನು ಯಾವನು ಶತ್ರುಗಳಿಗೆ ಒಪ್ಪಿಸುತ್ತಾನೆಯೋ ಅವನು ಭೂಮಿಯಲ್ಲಿ ಹಾಕಿದ ಬೀಜವು ಮೊಳಕೆಯು ಬರುವ ಕಾಲದಲ್ಲಿ ಮೊಳಕೆ ಒಡೆಯುವುದಿಲ್ಲ. ಮಳೆಗಾಲದಲ್ಲಿ ಅವನಿಗೆ ಮಳೆಯು ಬೀಳುವುದಿಲ್ಲ. ಅವನು ರಕ್ಷಣೆಯನ್ನು ಬಯಸಿದಾಗ ಯಾರೂ ಅವನಿಗೆ ರಕ್ಷಣೆಯನ್ನು ಕೊಡುವ ಅವಕಾಶವು ಉಂಟಾಗುವುದಿಲ್ಲ.

ಮೋಘಮನ್ನಂ ವಿಂದತಿ ಚಾಪ್ರಚೇತಾಃ
ಸ್ವರ್ಗಾಲ್ಲೋಕಾದ್ ಭ್ರಶ್ಯತಿ ಭ್ರಷ್ಟಚೇಷ್ಟಃ ।
ಭೀತಂ ಪ್ರಪನ್ನಂ ಪ್ರದದಾತಿ ಯೋ ವೈ
ನ ತಸ್ಯ ಹವ್ಯಂ ಪ್ರತಿಗೃಹ್ಣಂತಿ ದೇವಾಃ ॥೨೦॥

ಭೀತರಾಗಿ ಶರಣಾಗತರಾದವರನ್ನು ಯಾವನು ಒಪ್ಪಿಸುತ್ತಾನೋ ಅವನು ಒಳ್ಳೆಯ ಮನಸ್ಸು ಇಲ್ಲದವನಾಗಿ ಕದನ್ನವನ್ನು ಸೇವಿಸುತ್ತಾನೆ. ಶುಭಾನ್ನವು ದೊರೆಯುವುದಿಲ್ಲ. ತನ್ನ ಎಲ್ಲಾ ಚೇಷ್ಟೆಗಳನ್ನೂ ಕಳೆದುಕೊಂಡು ಸ್ವರ್ಗಲೋಕದಿಂದ ಕೆಳಗೆ ಬೀಳುತ್ತಾನೆ. ಅವನು ಕೊಡುವ ಹವಿಸ್ಸನ್ನು ದೇವತೆಗಳು ಸ್ವೀಕರಿಸುವುದಿಲ್ಲ.

ಪ್ರಮೀಯತೇ ಚಾಸ್ಯ ಪ್ರಜಾ ಹ್ಯಕಾಲೇ
ಸದಾ ವಿವಾದಂ ಪಿತರೋಽಸ್ಯ ಕುರ್ವತೇ ।
ಭೀತಂ ಪ್ರಪನ್ನಂ ಪ್ರದದಾತಿ ಶತ್ರವೇ
ಸೇಂದ್ರಾ ದೇವಾಃ ಪ್ರಹರಂತ್ಯಸ್ಯ ವಜ್ರಮ್ ॥೨೧॥

ಭೀತರಾಗಿ ಶರಣಾಗತರಾದವರನ್ನು ಯಾವನು ಶತ್ರುವಿಗೆ ಕೊಡುತ್ತಾನೆಯೋ ಅವನ ಮಕ್ಕಳು ಅಕಾಲದಲ್ಲಿ ಮೃತರಾಗುತ್ತಾರೆ. ಅವನ ಪಿತೃಗಳು ಯಾವಾಗಲೂ ಜಗಳವಾಡುತ್ತಾರೆ. ಇಂದ್ರಾದಿದೇವತೆಗಳು ಅವನ ಮೇಲೆ ವಜ್ರಾಯುಧವನ್ನು ಪ್ರಯೋಗಿಸುತ್ತಾರೆ.

ಏತದೇವಂ ವಿಜಾನನ್ ವೈ ನ ದಾಸ್ಯಾಮಿ ಶಚೀಮಿಮಾಮ್ ।
ಇಂದ್ರಾಣೀಂ ವಿಶ್ರುತಾಂ ಲೋಕೇ ಶಕ್ರಸ್ಯ ಮಹಿಷೀಂ ಪ್ರಿಯಾಮ್ ॥

ಈ ವಿಷಯವನ್ನು ಹೀಗೆ ತಿಳಿದ ನಾನು ಇಂದ್ರನ ಅರ್ಧಾಂಗಿಯೂ, ಲೋಕದಲ್ಲಿ ಪ್ರಖ್ಯಾತಳಾದವಳೂ, ಇಂದ್ರನ ಪ್ರಿಯಮಹಿಷಿಯೂ ಆದ ಈ ಶಚಿಯನ್ನು ಕೊಡುವುದಿಲ್ಲ.

ಅಸ್ಯಾ ಹಿತಂ ಭವೇದ್ಯಚ್ಚ ಮಮ ಚಾಪಿ ಹಿತಂ ಭವೇತ್ ।
ಕ್ರಿಯತಾಂ ತತ್ ಸುರಶ್ರೇಷ್ಠಾ ನ ಹಿ ದಾಸ್ಯಾಮ್ಯಹಂ ಶಚೀಮ್ ॥೨೩॥

ಎಲೈ ಸುರಶ್ರೇಷ್ಠರೇ, ಇವಳಿಗೆ ಯಾವುದು ಹಿತವಾಗುವುದೋ ಮತ್ತು ನನಗೂ ಯಾವುದರಿಂದ ಹಿತವುಂಟಾಗುವುದೋ ಅದನ್ನು ಮಾಡಿ. ನಾನು ಶಚಿಯನ್ನು ಕೊಡುವುದಿಲ್ಲ.

ಶಲ್ಯಃ

ಅಥ ದೇವಾಃ ಸಗಂಧರ್ವಾ ಗುರುಮಾಹುರಿದಂ ವಚಃ ॥೨೪॥

ಕಥಂ ಸುನೀತಂ ತು ಭವೇನ್ಮಂತ್ರಯಸ್ವ ಬೃಹಸ್ಪತೇ ॥೨೫॥

ಶಲ್ಯ– ಆಗ ದೇವತೆಗಳು ಗಂಧರ್ವರಿಂದ ಕೂಡಿ ಬೃಹಸ್ಪತಿಗಳನ್ನು ಕುರಿತು ಬೃಹಸ್ಪತಿಗಳೇ, ಏನು ಮಾಡಿದರೆ ಒಳ್ಳೆಯ ನೀತಿಯನ್ನು ಮಾಡಿದಂತಾಗುತ್ತದೆ ಎಂದು ಹೇಳಿ ಎಂದು ಮಾತನಾಡಿದರು.

ಬೃಹಸ್ಪತಿಃ

ನಹುಷಂ ಯಾಚತಾಂ ದೇವೀ ಕಿಂಚಿತ್ ಕಾಲಾಂತರಂ ಶುಭಾ ।
ಹಿತಮೇತದ್ಧಿ ವೈ ಮನ್ಯೇ ತಥಾऽಸ್ಮಾಕಂ ಭವಿಷ್ಯತಿ ॥೨೬॥

ಬೃಹಸ್ಪತಿ– ಶುಭಳಾದ ಶಚೀದೇವಿಯು ನಹುಷನ ಬಳಿ ಸ್ವಲ್ಪ ಕಾಲಾವಕಾಶವನ್ನು ಕೇಳಲಿ. ಇದು ಅವಳಿಗೂ ಹಿತವಾದುದು ಮತ್ತು ನಮಗೂ ಹಿತವಾದುದು ಎಂದು ತೋರುತ್ತದೆ.

ಬಹುವಿಘ್ನಕರಃ ಕಾಲಃ ಕಾಲಃ ಸನ್ ಘಾತಯಿಷ್ಯತಿ ।
ಗರ್ವಿತೋ ಬಲವಾಂಶ್ಚಾಪಿ ನಹುಷೋ ವರಸಂಶ್ರಯಾತ್ ॥೨೭॥

ಅನೇಕ ವಿಘ್ನಗಳನ್ನು ತಂದೊಡ್ಡುವ ಕಾಲವು ಮೃತ್ಯುವಾಗಿ ಅವನಿಗೆ ಹೊಡೆಯುತ್ತದೆ. ನಹುಷನು ವರಬಲದಿಂದ ಬಲಿಷ್ಠನೂ ಮತ್ತು ಗರ್ವಿತನೂ ಆಗಿದ್ದಾನೆ.

ಶಲ್ಯಃ

ತತಸ್ತೇನ ತಥೋಕ್ತೇ ತು ಪ್ರೀತಾ ದೇವಾಸ್ತಮಬ್ರುವನ್ ॥೨೮॥

ಬ್ರಹ್ಮನ್ ಸಾಧ್ವಿದಮುಕ್ತಂ ತೇ ಹಿತಂ ಸರ್ವದಿವೌಕಸಾಮ್ ।
ಏವಮೇತದ್ ದ್ವಿಜಶ್ರೇಷ್ಠ ದೇವೀ ಚೇಯಂ ಪ್ರಸಾದ್ಯತಾಮ್ ॥೨೯॥

ಶಲ್ಯ– ಬೃಹಸ್ಪತಿಗಳು ಹಾಗೆ ಹೇಳುತ್ತಿರಲು ದೇವತೆಗಳು ಸಂತೋಷಗೊಂಡು ಅವರನ್ನು ಕುರಿತು ಬ್ರಾಹ್ಮಣರೇ, ನೀವು ಹೇಳಿದ ಈ ವಿಷಯವು ಸಮಂಜಸವಾಗಿದೆ. ಇದು ಎಲ್ಲಾ ದೇವತೆಗಳಿಗೂ ಹಿತವಾದುದು. ಬ್ರಾಹ್ಮಣಶ್ರೇಷ್ಠರೇ, ಇದು ಹೀಗೆಯೇ ಸರಿ. ಈ ಶಚೀದೇವಿಯು ಪ್ರಸನ್ನಳಾಗುವಂತೆ ಮಾಡಿ.

ಶಲ್ಯಃ

ತತಃ ಸಮಸ್ತಾ ಇಂದ್ರಾಣೀಂ ದೇವಾಃ ಸಾಗ್ನಿಪುರೋಗಮಾಃ ।
ಊಚುರ್ವಚನಮವ್ಯಗ್ರಾ ಲೋಕಾನಾಂ ಹಿತಕಾಮ್ಯಯಾ ॥೩೦॥

ಶಲ್ಯ– ಅನಂತರ ಅಗ್ನಿಯೇ ಮೊದಲಾದ ಎಲ್ಲ ದೇವತೆಗಳೂ ಇಂದ್ರಾಣಿಯನ್ನು ಕುರಿತು ಲೋಕದ ಹಿತವನ್ನು ಬಯಸಿ ಅವ್ಯಗ್ರವಾಗಿ ಹೀಗೆ ಮಾತನಾಡಿದರು.

ತ್ವಯಾ ಜಗದಿದಂ ಸರ್ವಂ ಧೃತಂ ಸ್ಥಾವರಜಂಗಮಮ್ ।
ಏಕಪತ್ನ್ಯಸಿ ಸಾಧ್ವೀ ಚ ಗಚ್ಛ ತ್ವಂ ನಹುಷಂ ಪ್ರತಿ ॥೩೧॥

ಶಚೀದೇವಿಯೇ, ನೀನು ಸ್ಥಾವರ-ಜಂಗಮವಾದ ಈ ಎಲ್ಲ ಜಗತ್ತನ್ನು ಧರಿಸಿದ್ದೀಯೆ. ನೀನು ಸಾಧ್ವಿಯೂ ಮತ್ತು ಏಕಪತ್ನಿಯೂ ಆಗಿದ್ದೀಯೆ. ನಹುಷನ ಬಳಿಗೆ ಹೋಗು.

**ಕ್ಷಿಪ್ರಂ ತ್ವಾಮಭಿಕಾಮಶ್ಚ ವಿನಶಿಷ್ಯತಿ ಪಾಪಕೃತ್ ।**
**ನಹುಷೋ ದೇವಿ ಶಕ್ರಶ್ಚ ಸುರೈಶ್ವರ್ಯಮವಾಪ್ಸ್ಯತಿ ॥೩೨॥**

ದೇವಿಯೇ, ನಿನ್ನನ್ನು ಬಯಸುವ ಪಾಪಕಾರಿಯಾದ ನಹುಷನು ಶೀಘ್ರವಾಗಿ ವಿನಾಶವನ್ನು ಹೊಂದುವನು. ಮತ್ತು ಇಂದ್ರನೂ ಸಹ ಸುರೈಶ್ವರ್ಯವನ್ನು ಹೊಂದುವನು.

**ಶಲ್ಯಃ**

**ಏವಂ ವಿನಿಶ್ಚಯಂ ಕೃತ್ವಾ ಇಂದ್ರಾಣೀ ಕಾರ್ಯಸಿದ್ಧಯೇ ।**
**ಅಭ್ಯಗಚ್ಛತ್ತ ಸವ್ರೀಡಾ ನಹುಷಂ ಘೋರದರ್ಶನಮ್ ॥೩೩॥**

**ಶಲ್ಯ**– ಇಂದ್ರಾಣಿಯು ತನ್ನ ಮತ್ತು ದೇವತೆಗಳ ಕಾರ್ಯಸಿದ್ಧಿಗಾಗಿ ಹೀಗೆ ನಿಶ್ಚಯವನ್ನು ಮಾಡಿ, ನಾಚಿಕೆಯಿಂದ ಕೂಡಿದವಳಾಗಿ, ಘೋರದರ್ಶನನಾದ ನಹುಷನ ಬಳಿಗೆ ಹೋದಳು.

**ದೃಷ್ಟ್ವಾ ತಾಂ ನಹುಷಶ್ಚಾಪಿ ವಯೋರೂಪಸಮನ್ವಿತಾಮ್ ।**
**ಸಮಹೃಷ್ಯತ ದುಷ್ಟಾತ್ಮಾ ಕಾಮೋಪಹತಚೇತನಃ ॥೩೪॥**

ವಯಸ್ಸು ಮತ್ತು ರೂಪಗಳಿಂದ ಕೂಡಿದ ಅವಳನ್ನು ನೋಡಿ ದುಷ್ಟಾತ್ಮನೂ, ಕಾಮಪೀಡಿತವಾದ ಮನಸ್ಸುಳ್ಳವನೂ ಆದ ನಹುಷನಾದರೂ ಸಂತೋಷಪಟ್ಟನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ದ್ವಾದಶೋऽಧ್ಯಾಯಃ ॥

॥ ಸೇನೋದ್ಯೋಗಪರ್ವಣಿ ದ್ವಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಹನ್ನೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

# ಹದಿಮೂರನೆಯ ಅಧ್ಯಾಯ

ನಹುಷನ ಜೊತೆಯಲ್ಲಿ ಶಚಿಯು ಒಪ್ಪಂದ. ಇಂದ್ರನ ಅಶ್ವಮೇಧಯಾಗ. ಪುನಃ ಅದರ್ಶನ ಮತ್ತು ಶಚಿಯಿಂದ ದುರ್ಗಾಪೂಜೆ.

## ಶಲ್ಯಃ

ಅಥ ತಾಮಬ್ರವೀದ್ ದೃಷ್ಟ್ವಾ ನಹುಷೋ ದೇವರಾಟ್ ತದಾ ॥೧॥

ತ್ರಯಾಣಾಮಪಿ ಲೋಕಾನಾಮಹಮಿಂದ್ರಃ ಶುಚಿಸ್ಮಿತೇ ।
ಭಜಸ್ವ ಮಾಂ ವರಾರೋಹೇ ಪತಿತ್ವೇ ವರವರ್ಣಿನಿ ॥೨॥

ಶಲ್ಯ– ಅನಂತರ ಅವಳನ್ನು ನೋಡಿ ದೇವರಾಜನಾದ ನಹುಷನು ಶುಚಿಸ್ಮಿತೆಯೇ, ಮೂರುಲೋಕಗಳಿಗೂ ನಾನು ಅಧಿಪತಿಯಾಗಿದ್ದೇನೆ. ನಿತಂಬಿನಿಯೇ, ಸುಂದರಿಯೇ, ನನ್ನನ್ನು ಪತಿಯಾಗಿ ವರಿಸು ಎಂದು ಹೇಳಿದನು.

ಏವಮುಕ್ತಾ ತು ಸಾ ದೇವೀ ನಹುಷೇಣ ಪತಿವ್ರತಾ ।
ಪ್ರಾವೇಪತ ಭಯೋದ್ವಿಗ್ನಾ ಪ್ರವಾತೇ ಕದಳೀ ಯಥಾ ॥೩॥

ನಹುಷನಿಂದ ಹೀಗೆ ಹೇಳಲ್ಪಟ್ಟ ಪತಿವ್ರತೆಯಾದ ಆ ಶಚೀದೇವಿಯು ಬಿರುಗಾಳಿಗೆ ಸಿಕ್ಕಿದ ಬಾಳೆಯಂತೆ ಭಯದಿಂದ ನಡುಗಿದಳು.

ಪ್ರಣಮ್ಯ ಸಾ ಹಿ ಬ್ರಹ್ಮಾಣಂ ಶಿರಸಾ ತು ಕೃತಾಂಜಲಿಃ ।
ದೇವರಾಜಮಥೋವಾಚ ನಹುಷಂ ಘೋರದರ್ಶನಮ್ ॥೪॥

ಕಾಲಮಿಚ್ಛಾಮ್ಯಹಂ ಲಬ್ಧುಂ ತ್ವತ್ತಃ ಕಶ್ಚಿತ್ ಸುರೇಶ್ವರ ।
ನ ಹಿ ವಿಜ್ಞಾಯತೇ ಶಕ್ರಃ ಕುತಃ ಪ್ರಾಪ್ತಃ ಕ್ವ ವಾऽऽಗತಃ ॥೫॥

ತತ್ತ್ವಮೇತತ್ತು ವಿಜ್ಞಾಯ ಯದಿ ನ ಜ್ಞಾಯತೇ ವಿಭೋ ।
ತತೋऽಹಂ ತ್ವಾಮುಪಸ್ಥಾಸ್ಯೇ ಸತ್ಯಮೇತದ್ ಬ್ರವೀಮಿ ತೇ ॥೬॥

ಅವಳು ಮನಸ್ಸಿನಲ್ಲಿಯೇ ಬ್ರಹ್ಮದೇವರಿಗೆ ನಮಸ್ಕರಿಸಿ ತಲೆಯ ಮೇಲೆ ಕೈಗಳನ್ನು ಮುಗಿದು ಘೋರದರ್ಶನನಾದ ದೇವರಾಜನಾದ ನಹುಷನನ್ನು ಕುರಿತು ಸುರೇಶ್ವರನೇ, ನಿನ್ನಿಂದ ಸ್ವಲ್ಪ ಕಾಲಾವಕಾಶವನ್ನು ಪಡೆಯಲು ಬಯಸುತ್ತೇನೆ. ಇಂದ್ರನು ಯಾವ

ಕಾರಣದಿಂದ ಎಲ್ಲಿಗೆ ಹೋಗಿದ್ದಾನೆ, ನೀನಾದರೂ ಯಾವ ಕಾರಣದಿಂದ ಇಲ್ಲಿಗೆ ಬಂದಿದ್ದೀಯೆ ಎಂದು ನನಗೆ ತಿಳಿಯುವುದಿಲ್ಲ. ವಿಭುವೇ, ಈ ವಿಷಯವನ್ನು ಸರಿಯಾಗಿ ತಿಳಿದು ಇಂದ್ರನು ಎಲ್ಲಿಯೂ ಕಾಣದಿದ್ದರೆ ಅನಂತರ ನಿನ್ನ ಬಳಿಗೆ ಬರುವೆನು. ಈ ಮಾತನ್ನು ಸತ್ಯವಾಗಿ ಹೇಳುತ್ತಿದ್ದೇನೆ ಎಂದು ಹೇಳಿದಳು.

**ನಹುಷಃ**

**ಏವಮುಕ್ತಃ ಸ ಇಂದ್ರಾಣ್ಯಾ ನಹುಷಃ ಪ್ರೀತಿಮಾನಭೂತ್ ॥೭॥**

**ಏವಂ ಭವತು ಸುಶ್ರೋಣಿ ಯಥಾ ಮಾಮಿಹ ಭಾಷಸೇ ।**
**ಜ್ಞಾತ್ವಾ ಚಾಗಮನಂ ಕಾರ್ಯಂ ಸತ್ಯಮೇತದನುಸ್ಮರ ॥೮॥**

ನಹುಷ– ಇಂದ್ರಾಣಿಯಿಂದ ಹೀಗೆ ಹೇಳಲ್ಪಟ್ಟ ನಹುಷನು ಸಂತೋಷಗೊಂಡನು. ಸುಂದರಿಯೇ, ನೀನು ನನಗೆ ಹೇಳಿದಂತೆಯೇ ಆಗಲಿ. ಇಂದ್ರನ ವಿಷಯವನ್ನು ತಿಳಿದು ನೀನು ಬರಬೇಕು. ಈ ಸತ್ಯವಚನವನ್ನು ಮರೆಯಬೇಡ ಎಂದು ಹೇಳಿದನು.

**ಶಲ್ಯಃ**

**ನಹುಷೇಣ ವಿಸೃಷ್ಟಾ ಸಾ ನಿಶ್ಚಕ್ರಾಮ ತತಃ ಶುಭಾ ।**
**ಬೃಹಸ್ಪತಿನಿಕೇತಂ ಚ ಸಾ ಜಗಾಮ ಯಶಸ್ವಿನೀ ॥೯॥**

ಶಲ್ಯ– ನಹುಷನಿಂದ ಬೀಳ್ಕೊಡಲ್ಪಟ್ಟ ಯಶಸ್ವಿನಿಯೂ ಮತ್ತು ಪವಿತ್ರಳೂ ಆದ ಶಚಿಯು ಅಲ್ಲಿಂದ ಹೊರಟು ಬೃಹಸ್ಪತಿಗಳ ನಿವಾಸಕ್ಕೆ ಬಂದಳು.

**ತಸ್ಯಾಃ ಸಂಶ್ರುತ್ಯ ಚ ವಚೋ ದೇವಾಃ ಸಾಗ್ನಿಪುರೋಗಮಾಃ ।**
**ಮಂತ್ರಯಾಮಾಸುರೇಕಾಗ್ರಾಃ ಶಕ್ರಾರ್ಥಂ ರಾಜಸತ್ತಮ ॥೧೦॥**

ಎಲೈ ರಾಜಶ್ರೇಷ್ಠನೇ, ಅಗ್ನಿ ಮೊದಲಾದ ದೇವತೆಗಳು ಅವಳ ಮಾತನ್ನು ಚೆನ್ನಾಗಿ ಆಲಿಸಿ, ಒಂದೇ ಬುದ್ಧಿಯುಳ್ಳವರಾಗಿ ಇಂದ್ರನನ್ನು ಕಾಣುವ ವಿಷಯದಲ್ಲಿ ಮಂತ್ರಾಲೋಚನೆಯನ್ನು ಮಾಡಿದರು.

**ದೇವದೇವೇನ ಸಂಗಮ್ಯ ವಿಷ್ಣುನಾ ಪ್ರಭವಿಷ್ಣುನಾ ।**
**ಊಚುಶ್ಚೈನಂ ಸಮುದ್ವಿಗ್ನಾ ವಾಕ್ಯಂ ವಾಕ್ಯವಿಶಾರದಾಃ ॥೧೧॥**

ದೇವದೇವನೂ, ಸರ್ವಸಮರ್ಥನೂ ಆದ ವಿಷ್ಣುವನ್ನು ಸಮೀಪಿಸಿ ವಾಕ್ಯವಿಶಾರದರಾದ ಅವರು ಭಯದಿಂದ ಉದ್ವಿಗ್ನರಾಗಿ ಹೀಗೆ ಮಾತನಾಡಿದರು.

**ಬ್ರಹ್ಮಹತ್ಯಾಭಿಭೂತೋ ವೈ ಶಕ್ರಃ ಸುರಗಣೇಶ್ವರಃ ।**
**ಗತಿಶ್ಚ ನಸ್ತ್ವಂ ದೇವೇಶ ಪೂರ್ವಜೋ ಜಗತಃ ಪ್ರಭುಃ ॥೧೨॥**

**ರಕ್ಷಾರ್ಥಂ ಸರ್ವಭೂತಾನಾಂ ವಿಷ್ಣುತ್ವಮುಪಜಗ್ಮಿವಾನ್ ॥೧೩॥**

ದೇವೇಶನೇ, ಸುರಗಣೇಶ್ವರನಾದ ಇಂದ್ರನು ಬ್ರಹ್ಮಹತ್ಯಾದೋಷದಿಂದ ಪರಾಭವಗೊಂಡಿದ್ದಾನೆ. ಅನಾದಿಯಾದ ಮತ್ತು ಜಗತ್ತಿಗೆ ಪ್ರಭುವಾದ ನೀನೇ ನಮಗೆ ಗತಿ. ನೀನು ಎಲ್ಲ ಜೀವರನ್ನೂ ರಕ್ಷಣೆ ಮಾಡುವುದಕ್ಕೋಸ್ಕರ ವಿಷ್ಣುರೂಪವನ್ನು ಧರಿಸಿರುವವನು.

**ತದ್ವೀರ್ಯಾನ್ನಿಹತೇ ವೃತ್ರೇ ವಾಸವೋ ಬ್ರಹ್ಮಹತ್ಯಯಾ ।**
**ವೃತಃ ಸುರಗಣಶ್ರೇಷ್ಠೋ ಮೋಚಧ್ವಂ ಪಾಕಶಾಸನಮ್ ॥೧೪॥**

ನಿನ್ನ ತೇಜಸ್ಸಿನಿಂದ ವೃತ್ರನು ಹತನಾಗುತ್ತಿರಲು ಸುರಗಣಶ್ರೇಷ್ಠನಾದ ಇಂದ್ರನು ಬ್ರಹ್ಮಹತ್ಯಾದೋಷದಿಂದ ಆವರಿಸಲ್ಪಟ್ಟನು. ಪಾಕಶಾಸನನಾದ ಇಂದ್ರನನ್ನು ಆ ದೋಷದಿಂದ ಬಿಡುಗಡೆಯನ್ನು ಮಾಡು.

ಶಲ್ಯಃ

**ತೇಷಾಂ ತದ್ವಚನಂ ಶ್ರುತ್ವಾ ದೇವಾನಾಂ ವಿಷ್ಣುರಬ್ರವೀತ್ ।**
**ಮಾಮೇವ ಯಜತಾಂ ಶಕ್ರಃ ಪಾವಯಿಷ್ಯಾಮಿ ವಜ್ರಿಣಮ್ ॥೧೫॥**

**ಪುಣ್ಯೇನ ಹಯಮೇಧೇನ ಮಾಮಿಷ್ಟ್ವಾ ಪಾಕಶಾಸನಃ ।**
**ಪುನರೇಷ್ಯತಿ ದೇವಾನಾಮಿಂದ್ರತ್ವಮಕುತೋಭಯಃ ॥೧೬॥**

**ಸ್ವಕರ್ಮಭಿಶ್ಚ ನಹುಷೋ ನಾಶಂ ಯಾಸ್ಯತಿ ದುರ್ಮತಿಃ ।**
**ಕಂಚಿತ್ ಕಾಲಮಿಮಂ ದೇವಾ ಮರ್ಷಯಧ್ವಮತಂದ್ರಿತಾಃ ॥೧೭॥**

ಶಲ್ಯ– ದೇವತೆಗಳ ಆ ಮಾತನ್ನು ಕೇಳಿ ವಿಷ್ಣುವು ಅವರನ್ನು ಕುರಿತು ಇಂದ್ರನು ನನ್ನನ್ನೇ ಕುರಿತು ಯಾಗವನ್ನು ಮಾಡಲಿ. ನಾನು ಅವನನ್ನು ಪವಿತ್ರೀಕರಿಸುತ್ತೇನೆ.

ಪಾಕಶಾಸನನಾದ ಇಂದ್ರನು ಪವಿತ್ರವಾದ ಹಯಮೇಧ ಯಾಗದಿಂದ ನನ್ನನ್ನು ಅರ್ಚಿಸಿ ಎಲ್ಲ ಭಯಗಳನ್ನೂ ಕಳೆದುಕೊಂಡು ಪುನಃ ದೇವತೆಗಳಿಗೆ ಒಡೆಯನಾಗುವನು. ದುರ್ಮತಿಯಾದ ನಹುಷನಾದರೂ ತನ್ನ ಕರ್ಮಗಳಿಂದಲೇ ನಾಶವನ್ನು ಹೊಂದುವನು. ದೇವತೆಗಳೇ, ಸ್ವಲ್ಪ ಸಮಯದವರೆಗೆ ಎಚ್ಚರಿಕೆಯಿಂದ ಅವನನ್ನು ಸಹಿಸಿಕೊಳ್ಳಿ ಎಂದು ಹೇಳಿದನು.

**ಶಲ್ಯಃ**

**ಶ್ರುತ್ವಾ ವಿಷ್ಣೋಃ ಶುಭಾಂ ವಾಣೀಂ ತಾಂ ಸತ್ಯಾಮಮೃತೋಪಮಾಮ್।**
**ತತಃ ಸರ್ವೇ ಸುರಗಣಾಃ ಸೋಪಾಧ್ಯಾಯಮಹರ್ಷಿಭಿಃ ॥೧೮॥**

**ಯತ್ರ ಶಕ್ರೋ ಭಯೋದ್ವಿಗ್ನಸ್ತಂ ದೇಶಮುಪಚಕ್ರಮುಃ ॥೧೯॥**

ಶಲ್ಯ– ವಿಷ್ಣುವು ಆಡಿದ ಅಮೃತದಂತಿದ್ದ ಸತ್ಯವಾದ ಶುಭವಚನಗಳನ್ನು ಕೇಳಿ ತಮ್ಮ ಉಪಾಧ್ಯಾಯರಿಂದ ಮತ್ತು ಮಹರ್ಷಿಗಳಿಂದ ಕೂಡಿದ ಎಲ್ಲಾ ದೇವತಾ ಗಣಗಳು ಇಂದ್ರನು ಭಯೋದ್ವಿಗ್ನನಾಗಿ ವಾಸಿಸುತ್ತಿದ್ದ ಪ್ರದೇಶಕ್ಕೆ ಬಂದರು.

**ತತ್ರಾಶ್ವಮೇಧಃ ಸುಮಹಾನ್ ಮಹೇಂದ್ರಸ್ಯ ಮಹಾತ್ಮನಃ ।**
**ವವೃತೇ ಪಾವನಾರ್ಥಂ ವೈ ಬ್ರಹ್ಮಹತ್ಯಾಪಹೋ ನೃಪ ॥೨೦॥**

ಎಲೈ ರಾಜನೇ, ಅಲ್ಲಿ ಮಹಾತ್ಮನಾದ ಮಹೇಂದ್ರನ ಶುದ್ಧಿಗಾಗಿ ಬ್ರಹ್ಮಹತ್ಯಾ ದೋಷವನ್ನು ನಾಶಮಾಡುವ ಬಹಳ ದೊಡ್ಡ ಅಶ್ವಮೇಧ ಯಾಗವು ಜರುಗಿತು.

**ವಿಭಜ್ಯ ಬ್ರಹ್ಮಹತ್ಯಾಂ ತು ವೃಕ್ಷೇಷು ಚ ನದೀಷು ಚ ।**
**ಪರ್ವತೇಷು ಪೃಥಿವ್ಯಾಂ ಚ ಸ್ತ್ರೀಷು ಚೈವ ಯುಧಿಷ್ಠಿರ ॥೨೧॥**

**ಸಂವಿಭಜ್ಯ ಚ ಭೂತೇಷು ವಿಸೃಜ್ಯ ಚ ನರೇಶ್ವರ ।**
**ವಿಜ್ವರೋ ಧೂತಪಾಪ್ಮಾ ಚ ವಾಸವೋಽಭವದಾತ್ಮವಾನ್ ॥೨೨॥**

ಎಲೈ ಯುಧಿಷ್ಠಿರನೇ, ನರೇಶ್ವರನೇ, ಇಂದ್ರನು ಬ್ರಹ್ಮಹತ್ಯಾ ದೋಷವನ್ನು ವೃಕ್ಷಗಳಿಗೂ, ನದಿಗಳಿಗೂ, ಪರ್ವತಗಳಿಗೂ, ಭೂಮಿಗೂ ಮತ್ತು ಇತರ ಪ್ರಾಣಿಗಳಿಗೂ ಹಂಚಿ, ದೋಷದಿಂದ ನಿರ್ಮುಕ್ತನಾಗಿ ಪಾಪವನ್ನು ಕಳೆದುಕೊಂಡು ಮನಸ್ಸಿನ ಕ್ಲೇಶವನ್ನೂ ಕಳೆದುಕೊಂಡು ಸ್ವಸ್ಥಚಿತ್ತನಾದನು.

ಅಕಂಪ್ಯಂ ನಹುಷಂ ಸ್ಥಾನಾದ್ ದೃಷ್ಟ್ವಾ ಬಲನಿಷೂದನಃ ।
ತೇಜೋಘ್ನಂ ಸರ್ವಭೂತಾನಾಂ ವರದಾನಾಚ್ಚ ದುಃಸಹಮ್ ॥೨೩॥

ತತಃ ಶಚೀಪತಿರ್ದೇವಃ ಪುನರೇವ ವ್ಯನಶ್ಯತ ।
ಅದೃಶ್ಯಃ ಸರ್ವಭೂತಾನಾಂ ಕಾಲಾಕಾಂಕ್ಷೀ ಚಚಾರ ಹ ॥೨೪॥

ಬಲನಿಷೂದನನಾದ ಇಂದ್ರನು ಎಲ್ಲ ಭೂತಗಳ ತೇಜಸ್ಸನ್ನು ಅಪಹರಿಸುವ ಮತ್ತು ವರದಾನದಿಂದ ಸಹಿಸಲು ಅಸಾಧ್ಯನಾದ ನಹುಷನನ್ನು ತನ್ನ ಸ್ಥಾನದಿಂದ ಅಲುಗಾಡಿಸಲು ಸಾಧ್ಯವಿಲ್ಲವೆಂದು ತಿಳಿದು ಶಚೀಪತಿಯಾದ ಅವನು ಪುನಃ ಯಾರ ಕಣ್ಣಿಗೂ ಕಾಣದಂತೆ ಅದೃಶ್ಯನಾಗಿ ನಾಶವನ್ನು ಹೊಂದಿ, ಕಾಲವನ್ನು ನಿರೀಕ್ಷಿಸುತ್ತಾ ಸಂಚರಿಸಿದನು.

ಪ್ರನಷ್ಟೇ ತು ತತಃ ಶಕ್ರೇ ಶಚೀ ಶೋಕಸಮನ್ವಿತಾ ।
ಹಾ ಶಕ್ರೇತಿ ತದಾ ದೇವೀ ವಿಲಲಾಪ ಸುದುಃಖಿತಾ ॥೨೫॥

ಶಕ್ರನು ಹೀಗೆ ನಾಶವನ್ನು ಹೊಂದುತ್ತಿರಲು ಶೋಕಸಮನ್ವಿತಳಾದ ಶಚೀದೇವಿಯು ಅಯ್ಯೋ ಇಂದ್ರನೇ ಎಂದು ಬಹಳ ದುಃಖದಿಂದ ವಿಲಾಪವನ್ನು ಮಾಡಿದಳು.

ಇಂದ್ರಾಣೀ

ಯದಿ ದತ್ತಂ ಯದಿ ಹುತಂ ಗುರವಸ್ತೋಷಿತಾ ಯದಿ ।
ಏಕಭರ್ತೃಕತಾ ಮೇಽಸ್ತು ಸತ್ಯಂ ಯದ್ಯಸ್ತಿ ವಾ ಮಯಿ ॥೨೬॥

ಇಂದ್ರಾಣಿ– ನಾನು ದಾನವನ್ನು ಮಾಡಿದ್ದರೆ, ಹೋಮವನ್ನು ಮಾಡಿದ್ದರೆ, ಗುರುಗಳನ್ನು ಸಂತೋಷಪಡಿಸಿದ್ದರೆ ಮತ್ತು ನನ್ನಲ್ಲಿ ಸತ್ಯವಿದ್ದರೆ ನಾನು ಒಬ್ಬನೇ ಪತಿಯುಳ್ಳವಳಾಗಿ ಆಗಬೇಕು.

ಪುಣ್ಯಾಂ ಚೇಮಾಮಹಂ ದಿವ್ಯಾಂ ಪ್ರವೃತ್ತಾಮುತ್ತರಾಯಣೇ ।
ದೇವೀಂ ರಾತ್ರಿಂ ನಮಸ್ಯಾಮಿ ಸಿದ್ಧ್ಯತಾಂ ಮೇ ಮನೋರಥಃ ॥೨೭॥

ಈ ಉತ್ತರಾಯಣ ಕಾಲದಲ್ಲಿ ಪ್ರವೃತ್ತಳಾದ ದಿವ್ಯಳಾದ ಪುಣ್ಯಪ್ರದಳಾದ ರಾತ್ರಿದೇವತೆಯಾದ ದುರ್ಗಾದೇವಿಯನ್ನು ನಮಸ್ಕರಿಸುವೆನು. ನನ್ನ ಮನೋರಥವು ಸಿದ್ಧಿಸಲಿ.

**ಶಲ್ಯಃ**

**ಪ್ರಯತಾ ಚ ನಿಶಾಂ ದೇವೀಮುಪಾತಿಷ್ಠತ ತತ್ರ ಸಾ ।**
**ಪತಿವ್ರತಾತ್ವಾತ್ ಸತ್ಯೇನ ಸೋಪಶ್ರುತಿಮಥಾಕರೋತ್ ॥೨೮॥**

ಶಲ್ಯ– ಅವಳು ರಾತ್ರಿಯ ಕಾಲದಲ್ಲಿ ನಿಯಮದಿಂದ ಕೂಡಿ ದುರ್ಗಾದೇವಿಯನ್ನು ಪೂಜಿಸಿದಳು. ಅವಳು ಪತಿವ್ರತೆಯಾದ್ದರಿಂದ ಅವಳ ಸತ್ಯದ ನಿಮಿತ್ತದಿಂದಾಗಿ ಅವಳು ದುರ್ಗಾದೇವಿಯಿಂದ ಒಂದು ಪ್ರತಿಧ್ವನಿಯನ್ನು ಕೇಳಿದಳು.

**ಯತ್ರಾಸ್ತೇ ದೇವರಾಜೋಽಸೌ ತಂ ದೇಶಂ ದರ್ಶಯಸ್ವ ಮೇ ।**
**ಇತ್ಯಾಹೋಪಶ್ರುತಿಂ ದೇವೀಂ ಸತ್ಯಂ ಸತ್ಯೇನ ದೃಶ್ಯತಾಮ್ ॥೨೯॥**

ಪ್ರತಿಧ್ವನಿಯನ್ನು ಕೊಟ್ಟ ದುರ್ಗಾದೇವಿಯನ್ನು ಕುರಿತು ಅವಳು ದೇವರಾಜನಾದ ಇಂದ್ರನು ಎಲ್ಲಿದ್ದಾನೆಯೋ ಆ ದೇಶವನ್ನು ಸತ್ಯವಾಗಿ ನನಗೆ ತೋರಿಸು. ನಿನ್ನ ಸತ್ಯದಿಂದ ಅವನು ನನಗೆ ಕಾಣಿಸಿಗಲಿ (ಎಂದು ಹೇಳಿದಳು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ತ್ರಯೋದಶೋಽಧ್ಯಾಯಃ ॥

॥ ಸೇನೋದ್ಯೋಗಪರ್ವಣಿ ತ್ರಯೋದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಹದಿಮೂರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

## ಹದಿನಾಲ್ಕನೆಯ ಅಧ್ಯಾಯ

ದುರ್ಗಾದೇವಿಯ ಜೊತೆಯಲ್ಲಿ ಹೋಗಿ ಶಚಿಯಿಂದ ಕಮಲದ
ನಾಳದಲ್ಲಿದ್ದ ಇಂದ್ರನ ದರ್ಶನ ಮತ್ತು ಸ್ತೋತ್ರ.

**ಶಲ್ಯಃ**

**ಅಥೈನಾಂ ರೂಪಿಣೀ ಸಾಧ್ವೀಮುಪಾತಿಷ್ಠದುಪಶ್ರುತಿಃ ।**
**ತಾಂ ವಯೋರೂಪಸಂಪನ್ನಾಂ ದೃಷ್ಟ್ವಾ ದೇವೀಮುಪಸ್ಥಿತಾಮ್ ॥೧॥**

ಇಂದ್ರಾಣೀ ಸಂಪ್ರಹೃಷ್ಟಾತ್ಮಾ ಸಂಪೂಜ್ಯೈನಾಮಥಾಬ್ರವೀತ್ ॥೨॥

ಇಚ್ಛಾಮಿ ತ್ವಾಮಹಂ ಜ್ಞಾತುಂ ಕಾ ತ್ವಂ ಬ್ರೂಹಿ ವರಾನನೇ ॥೩॥

ಶಲ್ಯ– ಅನಂತರ ದುರ್ಗಾದೇವಿಯು ಬೇರೆ ರೂಪವನ್ನು ಧರಿಸಿ ಆ ಪತಿವ್ರತೆಯ ಬಳಿಗೆ ಬಂದಳು. ವಯೋರೂಪಸಂಪನ್ನಳಾಗಿ ತನ್ನ ಬಳಿಗೆ ಬಂದ ಆ ದೇವಿಯನ್ನು ನೋಡಿ ಶಚಿಯು ಸಂತೋಷಗೊಂಡು ಅವಳನ್ನು ಪೂಜಿಸಿ ಸುಂದರವಾದ ಮುಖವುಳ್ಳವಳೇ ನೀನು ಯಾರು ಎಂದು ತಿಳಿಯಲು ಬಯಸುತ್ತೇನೆ, ಹೇಳು ಎಂದು ಕೇಳಿದಳು.

ಉಪಶ್ರುತಿಃ

ಉಪಶ್ರುತಿರಹಂ ದೇವೀ ತವಾಂತಿಕಮುಪಾಗತಾ ।
ದರ್ಶನಂ ಚೈವ ಸಂಪ್ರಾಪ್ತಾ ತವ ಸತ್ಯೇನ ಭಾಮಿನಿ ॥೪॥

ಉಪಶ್ರುತಿ– ದೇವಿಯೇ, ನಾನು ದುರ್ಗೆ. ನಿನ್ನ ಬಳಿಗೆ ಬಂದಿದ್ದೇನೆ. ಭಾಮಿನಿಯೇ, ನಿನ್ನ ಸತ್ಯವನ್ನು ಮೆಚ್ಚಿ ನಾನು ನಿನಗೆ ದರ್ಶನವನ್ನು ನೀಡಿದ್ದೇನೆ.

ಪತಿವ್ರತಾ ಚ ಯುಕ್ತಾ ಚ ಯಮೇನ ನಿಯಮೇನ ಚ ।
ದರ್ಶಯಿಷ್ಯಾಮಿ ತೇ ಶಕ್ರಂ ದೇವಂ ವೃತ್ರನಿಷೂದನಮ್ ॥೫॥

ಕ್ಷಿಪ್ರಮನ್ವೇಹಿ ಭದ್ರಂ ತೇ ದ್ರಕ್ಷ್ಯಸೇ ಸುರಸತ್ತಮಮ್ ॥೬॥

ನೀನು ಪತಿವ್ರತೆಯಾದವಳು ಮತ್ತು ಯಮ-ನಿಯಮಗಳಿಂದ ಕೂಡಿದವಳು. ನಿನಗೆ ವೃತ್ರಶತ್ರುವಾದ ಇಂದ್ರದೇವನನ್ನು ತೋರಿಸುವೆನು. ಶೀಘ್ರವಾಗಿ ನನ್ನ ಜೊತೆಯಲ್ಲಿ ಬಾ. ನಿನಗೆ ಮಂಗಳವಾಗಲಿ. ಸುರಶ್ರೇಷ್ಠನಾದ ಇಂದ್ರನನ್ನು ನೀನು ನೋಡುವಿ.

ಶಲ್ಯಃ

ತತಸ್ತಾಂ ಪ್ರಸ್ಥಿತಾಂ ದೇವೀಮಿಂದ್ರಾಣೀ ಸಾ ಸಮನ್ವಗಾತ್ ॥೭॥

ದೇವಾರಣ್ಯಾನ್ಯತಿಕ್ರಮ್ಯ ಪರ್ವತಾಂಶ್ಚ ಬಹೂಂಸ್ತತಃ ।
ಹಿಮವಂತಮತಿಕ್ರಮ್ಯ ಉತ್ತರಂ ಪಾರ್ಶ್ವಮಾಗಮತ್ ॥೮॥

ಶಲ್ಯ– ಅನಂತರ ಅಲ್ಲಿಂದ ಹೊರಟ ಆ ದುರ್ಗಾದೇವಿಯನ್ನು ಶಚಿಯು ಹಿಂಬಾಲಿಸಿದಳು. ಅವಳು ದೇವಾರಣ್ಯವನ್ನೂ, ಅನೇಕ ಪರ್ವತಗಳನ್ನೂ ಮತ್ತು ಹಿಮಾಲಯವನ್ನೂ ದಾಟಿ ಹಿಮಾಲಯದ ಉತ್ತರ ಭಾಗಕ್ಕೆ ಬಂದಳು.

ಸಮುದ್ರಂ ಚ ಸಮಾಸಾದ್ಯ ಬಹುಯೋಜನವಿಸ್ತೃತಮ್ ।
ಆಸಸಾದ ಮಹಾದ್ವೀಪಂ ನಾನಾದ್ರುಮಲತಾಯುತಮ್ ॥೯॥

ಅಲ್ಲಿಂದ ಬಹುಯೋಜನ ವಿಸ್ತಾರವಾದ ಸಮುದ್ರವನ್ನು ತಲುಪಿ ನಾನಾ ದ್ರುಮಲತೆಗಳಿಂದ ಕೂಡಿದ ಒಂದು ಮಹಾದ್ವೀಪಕ್ಕೆ ಬಂದಳು.

ತತ್ರಾಪಶ್ಯತ್ ಸರೋ ದಿವ್ಯಂ ನಾನಾಶಕುನಿಭಿರ್ವೃತಮ್ ।
ಶತಯೋಜನವಿಸ್ತೀರ್ಣಂ ತಾವದೇವಾಯತಂ ಶುಭಮ್ ॥೧೦॥

ಅಲ್ಲಿ ಅವಳು ಅನೇಕ ಜಲಪಕ್ಷಿಗಳಿಂದ ಕೂಡಿದ ಶತಯೋಜನವಿಸ್ತಾರವಾದ ಅಷ್ಟೇ ಉದ್ದವಾದ ಶುಭವಾದ ದಿವ್ಯಸರೋವರ ಒಂದನ್ನು ನೋಡಿದಳು.

ತತ್ರ ದಿವ್ಯಾನಿ ಪದ್ಮಾನಿ ಪಂಚವರ್ಣಾನಿ ಭಾರತ ।
ಷಟ್ಪದೈರುಪಗೀತಾನಿ ಪ್ರಫುಲ್ಲಾನಿ ಸಹಸ್ರಶಃ ॥೧೧॥

ಎಲೈ ಭಾರತನೇ, ಅಲ್ಲಿ ದುಂಬಿಗಳಿಂದ ಗಾನಪೂರ್ವಕವಾಗಿ ಸುತ್ತುವರಿಯಲ್ಪಟ್ಟ ಚೆನ್ನಾಗಿ ಅರಳಿದ ಪಂಚವರ್ಣೋಪೇತವಾದ ದಿವ್ಯವಾದ ಸಹಸ್ರಾರು ಪದ್ಮಗಳಿದ್ದವು.

ಪದ್ಮಸ್ಯ ಭಿತ್ವಾ ನಾಳಂ ಚ ವಿವೇಶ ಸಹಿತಾ ತಯಾ ।
ಬಿಸತಂತುಪ್ರವಿಷ್ಟಂ ಚ ತತ್ರಾಪಶ್ಯತ್ ಶತಕ್ರತುಮ್ ॥೧೨॥

ಅವಳು ದುರ್ಗಾದೇವಿಯಿಂದ ಸಹಿತಳಾಗಿ ಪದ್ಮದ ನಾಳವನ್ನು ಭೇದಿಸಿ ಬಿಸತಂತುವನ್ನು ಪ್ರವೇಶಿಸಿ ಅಲ್ಲಿದ್ದ ಇಂದ್ರನನ್ನು ನೋಡಿದಳು.

ತಂ ದೃಷ್ಟ್ವಾ ಚ ಸುಸೂಕ್ಷ್ಮೇಣ ರೂಪೇಣಾವಸ್ಥಿತಂ ಪ್ರಭುಮ್ ।
ಸೂಕ್ಷ್ಮರೂಪಧರಾ ದೇವೀ ಬಭೂವೋಪಶ್ರುತಿಶ್ಚ ಸಾ ॥೧೩॥

ಅಲ್ಲಿ ಅತ್ಯಂತ ಸೂಕ್ಷ್ಮರೂಪದಿಂದ ಇದ್ದ ತನ್ನ ಪ್ರಭುವನ್ನು ನೋಡಿ ಅವಳು ಮತ್ತು ದುರ್ಗಾದೇವಿಯು ಸೂಕ್ಷ್ಮರೂಪವನ್ನು ಧರಿಸಿದರು.

ಇಂದ್ರಂ ತುಷ್ಟಾವ ಚೇಂದ್ರಾಣೀ ವಿಶ್ರುತೈಃ ಪೂರ್ವಕರ್ಮಭಿಃ ।
ಸ್ತೂಯಮಾನಸ್ತತೋ ದೇವಃ ಶಚೀಮಾಹ ಪುರಂದರಃ ॥೧೪॥

ಕಿಮರ್ಥಮಸಿ ಸಂಪ್ರಾಪ್ತಾ ವಿಜ್ಞಾತಶ್ಚ ಕಥಂ ತ್ವಹಮ್ ॥೧೫॥

ಶಚೀದೇವಿಯು ಇಂದ್ರನ ಪ್ರಖ್ಯಾತವಾದ ಪೂರ್ವಕರ್ಮಗಳನ್ನು ಹೇಳಿ ಅವನನ್ನು ಸ್ತೋತ್ರ ಮಾಡಿದಳು. ಆಗ ದೇವನಾದ ಪುರಂದರನು ಶಚಿಯನ್ನು ಕುರಿತು ಇಲ್ಲಿಗೆ ಹೇಗೆ ಬಂದೆ, ನನ್ನನ್ನು ಹೇಗೆ ತಿಳಿದೆ ಎಂದು ಕೇಳಿದನು.

ಶಲ್ಯಃ

ತತಃ ಸಾ ಕಥಯಾಮಾಸ ನಹುಷಸ್ಯ ವಿಚೇಷ್ಟಿತಮ್ ॥೧೬॥

ಇಂದ್ರತ್ವಂ ತ್ರಿಷು ಲೋಕೇಷು ಪ್ರಾಪ್ಯ ವೀರ್ಯಸಮನ್ವಿತಃ ।
ದರ್ಪಾವಿಷ್ಟಶ್ಚ ದುಷ್ಟಾತ್ಮಾ ಮಾಮುವಾಚ ಶತಕ್ರತೋ ॥೧೭॥

ಉಪತಿಷ್ಠೇತಿ ಸ ಕ್ರೂರಃ ಕಾಲಂ ಚ ಕೃತವಾನ್ ಮಮ ।
ಯದಿ ನ ತ್ರಾಸ್ಯಸಿ ವಿಭೋ ಕರಿಷ್ಯತಿ ಸ ಮಾಂ ವಶೇ ॥೧೮॥

ಶಲ್ಯ– ಆಗ ಅವಳು ನಹುಷನ ಚೇಷ್ಟೆಗಳನ್ನು ಹೇಳಿದಳು. ಶತಕ್ರತುವೇ, ಮೂರುಲೋಕದ ಆಧಿಪತ್ಯವನ್ನು ಪಡೆದು ವೀರ್ಯಸಮನ್ವಿತನಾದ ದುಷ್ಟಾತ್ಮನಾದ ನಹುಷನು ದರ್ಪದಿಂ ಮಾಡಿದವನಾಗಿ ನನ್ನನ್ನು ಸೇವಿಸು ಎಂದು ನನಗೆ ಹೇಳಿದನು. ಕ್ರೂರನಾದ ಅವನು ನನಗೆ ಸ್ವಲ್ಪಕಾಲಾವಕಾಶವನ್ನು ಕೊಟ್ಟಿದ್ದಾನೆ. ವಿಭುವೇ, ನೀನು ನನ್ನನ್ನು ರಕ್ಷಿಸದಿದ್ದರೆ ಅವನು ನನ್ನನ್ನು ತನ್ನ ವಶವನ್ನಾಗಿ ಮಾಡಿಕೊಳ್ಳುವನು.

ಏತೇನ ಚಾಹಂ ಸಂಪ್ರಾಪ್ತಾ ನೂನಂ ಶಕ್ರ ತವಾಂತಿಕಮ್ ।
ಜಹಿ ರೌದ್ರಂ ಮಹಾಬಾಹೋ ನಹುಷಂ ಪಾಪನಿಶ್ಚಯಮ್ ॥೧೯॥

ಇಂದ್ರನೇ, ಈ ಕಾರಣದಿಂದ ನಾನು ನಿನ್ನ ಬಳಿಗೆ ಬಂದಿದ್ದೇನೆ. ಮಹಾಬಾಹುವೇ, ಪಾಪನಿಶ್ಚಯವುಳ್ಳ ಭಯಂಕರನಾದ ಈ ನಹುಷನನ್ನು ಪರಾಭವಗೊಳಿಸು.

ಪ್ರಕಾಶಯಾತ್ಮನಾऽऽತ್ಮಾನಂ ದೈತ್ಯದಾನವಸೂದನ ।
ತೇಜಃ ಸಮಾಪ್ನುಹಿ ವಿಭೋ ದೇವರಾಜ್ಯಂ ಪ್ರಶಾಧಿ ಚ ॥೨೦॥

ಯಥೈವ ಚ ಮಹಾರಾಜ ತ್ವಯಾ ವೃತ್ರೋ ನಿಷೂದಿತಃ ॥೨೧॥

ದೈತ್ಯ-ದಾನವ ಸಂಹಾರಕನೇ, ನಿನ್ನನ್ನು ನೀನು ಪ್ರಕಾಶಗೊಳಿಸು. ವಿಭುವೇ, ತೇಜಸ್ಸನ್ನು ಹೊಂದುವವನಾಗು. ಮಹಾರಾಜನೇ, ಹಿಂದೆ ವೃತ್ರನನ್ನು ಸಂಹಾರ ಮಾಡಿದಂತೆ ನಹುಷನನ್ನು ಪರಾಭವಗೊಳಿಸಿ ದೇವರಾಜ್ಯವನ್ನು ಆಳುವವನಾಗು (ಎಂದು ಹೇಳಿದಳು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಉದ್ಯೋಗಪರ್ವಣಿ ಚತುರ್ದಶೋऽಧ್ಯಾಯಃ ॥

॥ ಸೇನೋದ್ಯೋಗಪರ್ವಣಿ ಚತುರ್ದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಹದಿನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

## ಹದಿನೈದನೆಯ ಅಧ್ಯಾಯ

ನಹುಷನಿಂದ ತನ್ನ ಪಲ್ಲಕ್ಕಿಯನ್ನು ಹೊರಲು ಸಪ್ತರ್ಷಿಗಳ ನಿಯೋಜನೆ.
ಇಂದ್ರನನ್ನು ಹುಡುಕಿ ಕಾಣದೆ ಅಗ್ನಿಯ ಪ್ರತಿನಿವೃತ್ತಿ

**ಶಲ್ಯಃ**

**ಏವಮುಕ್ತಃ ಸ ಭಗವಾನ್ ಶಚ್ಯಾ ತಾಂ ಪುನರಬ್ರವೀತ್ ॥೧॥**

**ವಿಕ್ರಮಸ್ಯ ನ ಕಾಲೋऽಯಂ ನಹುಷೋ ಬಲವತ್ತರಃ ।**
**ವಿವರ್ಧಿತಶ್ಚ ಋಷಿಭಿರ್ಹವ್ಯೈಃ ಕವ್ಯೈಶ್ಚ ಭಾಮಿನಿ ॥೨॥**

**ನೀತಿಮತ್ರ ವಿಧಾಸ್ಯಾಮಿ ದೇವಿ ತಾಂ ಕರ್ತುಮರ್ಹಸಿ ।**
**ಗುಹ್ಯಮೇತತ್ ತ್ವಯಾ ಕಾರ್ಯಂ ನಾಖ್ಯಾತವ್ಯಂ ಶುಚಿಸ್ಮಿತೇ ॥೩॥**

**ಶಲ್ಯ**– ಶಚಿಯಿಂದ ಹೀಗೆ ಹೇಳಲ್ಪಟ್ಟ ಪೂಜ್ಯನಾದ ಇಂದ್ರನು ಪುನಃ ಅವಳನ್ನು ಕುರಿತು ಭಾಮಿನಿಯೇ, ಇದು ಪರಾಕ್ರಮದ ಕಾಲವಲ್ಲ. ನಹುಷನು ಬಲಿಷ್ಠನಾಗಿದ್ದಾನೆ. ಋಷಿಗಳ ಹವ್ಯಕವ್ಯಗಳಿಂದ ಇನ್ನೂ ಅಭಿವೃದ್ಧಿಯನ್ನು ಹೊಂದಿದ್ದಾನೆ. ದೇವಿಯೇ, ನಾನು ಈ ವಿಷಯದಲ್ಲಿ ಒಂದು ನೀತಿಯನ್ನು ಹೇಳುವೆನು. ಅದನ್ನು ನೀನು ಮಾಡಬೇಕು. ಶುಚಿಸ್ಮಿತೆಯೇ, ಇದನ್ನು ರಹಸ್ಯವಾಗಿ ಇಡಬೇಕು. ಯಾರಿಗೂ ಹೇಳಬಾರದು ಎಂದು ಹೇಳಿದನು.

ಗತ್ವಾ ನಹುಷಮೇಕಾಂತೇ ಬ್ರವೀಹಿ ಚ ಸುಮಧ್ಯಮೇ ॥೪॥

ಋಷಿಯಾನೇನ ದಿವ್ಯೇನ ಮಾಮುಪೈಹಿ ಜಗತ್ಪತೇ ।
ಏವಂ ತವ ವಶೇ ಪ್ರೀತಾ ಭವಿಷ್ಯಾಮೀತಿ ತಂ ವದ ॥೫॥

ಸುಮಧ್ಯಮೆಯೇ, ನೀನು ಏಕಾಂತದಲ್ಲಿ ನಹುಷನ ಬಳಿಗೆ ಹೋಗಿ ಅವನನ್ನು ಕುರಿತು ಜಗತ್ಪತಿಯೇ, ದಿವ್ಯವಾದ ಋಷಿಯಾನದಲ್ಲಿ ಕುಳಿತು ನನ್ನ ಬಳಿಗೆ ಬಾ. ಹೀಗೆ ಮಾಡಿದರೆ ಸಂತೋಷದಿಂದ ನಿನಗೆ ವಶಳಾಗುವೆನು ಎಂದು ಅವನಿಗೆ ಹೇಳು (ಎಂದು ಹೇಳಿದನು).

ಇತ್ಯುಕ್ತಾ ದೇವರಾಜೇನ ಪತ್ಯಾ ಸಾ ಕಮಲೇಕ್ಷಣಾ ।
ಏವಮಸ್ತಿ ತ್ವಥೋಕ್ತ್ವಾ ತು ಜಗಾಮ ನಹುಷಂ ಪ್ರತಿ ॥೬॥

ನಹುಷಸ್ತಾಂ ತತೋ ದೃಷ್ಟ್ವಾ ಸಸ್ಮಿತೋ ವಾಕ್ಯಮಬ್ರವೀತ್ ॥೭॥

ಪತಿಯಾದ ದೇವರಾಜನಿಂದ ಹೀಗೆ ಹೇಳಲ್ಪಟ್ಟ ಆ ಕಮಲನಯನೆಯು ಹಾಗೆಯೇ ಆಗಲಿ ಎಂದು ಹೇಳಿ ನಹುಷನ ಸಮೀಪಕ್ಕೆ ಬಂದಳು. ನಹುಷನು ಅವಳನ್ನು ನೋಡಿ ಮುಗುಳ್ನಗೆಯೊಡನೆ ಹೀಗೆ ಮಾತನಾಡಿದನು.

ಸ್ವಾಗತಂ ತೇ ವರಾರೋಹೇ ಕಿಂ ಕರೋಮಿ ಶುಚಿಸ್ಮಿತೇ ॥೮॥

ಭಕ್ತಂ ಮಾಂ ಭಜ ಕಲ್ಯಾಣಿ ಕಿಮಿಚ್ಛಸಿ ಮನಸ್ವಿನಿ ।
ತವ ಕಲ್ಯಾಣಿ ಯತ್ ಕಾರ್ಯಂ ತತ್ ಕರಿಷ್ಯೇ ಸುಮಧ್ಯಮೇ ॥೯॥

ನ ಚ ವ್ರೀಡಾ ತ್ವಯಾ ಕಾರ್ಯಾ ಸುಶ್ರೋಣಿ ಮಯಿ ವಿಶ್ವಸೇಃ ।
ಸತ್ಯೇನ ವೈ ಶಪೇ ದೇವಿ ಕರಿಷ್ಯೇ ವಚನಂ ತವ ॥೧೦॥

ವರಾರೋಹೆಯೇ, ಶುಚಿಸ್ಮಿತೆಯೇ, ನಿನಗೆ ಸ್ವಾಗತವನ್ನು ಕೋರುತ್ತೇನೆ. ಕಲ್ಯಾಣಿಯೇ, ನಿನ್ನ ಭಕ್ತನಾದ ನನ್ನನ್ನು ಸೇವಿಸು. ಮನಸ್ವಿನಿಯೇ, ನೀನು ಏನು ಬಯಸುತ್ತೀಯೆ? ಕಲ್ಯಾಣಿಯೇ, ಸುಮಧ್ಯಮೆಯೇ, ನೀನು ಏನು ಮಾಡಬೇಕೆಂದು ಹೇಳಿದರೂ ಅದನ್ನು ಮಾಡುವೆನು. ಸುಶ್ರೋಣಿಯೇ, ನೀನು ನಾಚಿಕೆಯನ್ನು ಪಡಬಾರದು. ನನ್ನನ್ನು ನಂಬು. ದೇವಿಯೇ, ಸತ್ಯಪ್ರತಿಜ್ಞೆಯನ್ನು ಮಾಡಿ ಹೇಳುತ್ತಿದ್ದೇನೆ, ನಿನ್ನ ಮಾತನ್ನು ನಡೆಸಿಕೊಡುವೆನು.

ಇಂದ್ರಾಣೀ

ಯೋ ಮೇ ಕೃತಸ್ತ್ವಯಾ ಕಾಲಸ್ತಮಾಕಾಂಕ್ಷೇ ಜಗತ್ಪತೇ ।
ತತಸ್ತ್ವಮೇವ ಭರ್ತಾ ಮೇ ಭವಿಷ್ಯಸಿ ಸುರಾಧಿಪ ॥೧೧॥

ಇಂದ್ರಾಣಿ– ಜಗತ್ಪತಿಯೇ, ನೀನು ಹೇಳಿದ ಕಾಲವನ್ನು ನಾನು ನಿರೀಕ್ಷಿಸುತ್ತಿದ್ದೇನೆ. ಸುರಾಧಿಪನೇ, ಅನಂತರ ನೀನೇ ನನಗೆ ಪತಿಯಾಗುವಿ.

ಕಾರ್ಯಂ ಚ ಹೃದಿ ಮೇ ಯತ್ತದ್ ದೇವರಾಜಾವಧಾರಯ ।
ವಕ್ಷ್ಯಾಮಿ ಯದಿ ಮೇ ರಾಜನ್ ಪ್ರಿಯಮೇತತ್ ಕರಿಷ್ಯಸಿ ॥೧೨॥

ವಾಕ್ಯಂ ಪ್ರಣಯಸಂಯುಕ್ತಂ ತತಸ್ತ್ವಂ ಕರ್ತುಮರ್ಹಸಿ ॥೧೩॥

ದೇವರಾಜನೇ, ನನ್ನ ಮನಸ್ಸಿನಲ್ಲಿರುವ ಒಂದು ಕಾರ್ಯವನ್ನು ತಿಳಿದುಕೊ. ನೀನು ನನಗೆ ಪ್ರಿಯವನ್ನು ಮಾಡುವೆನೆಂದು ಹೇಳಿದರೆ ಆ ಮಾತನ್ನು ಹೇಳುವೆನು. ಪ್ರೀತಿಯಿಂದ ಹೇಳಿದ ಆ ಮಾತನ್ನು ನೀನು ನಡೆಸಿಕೊಡಬೇಕು.

ಇಂದ್ರಸ್ಯ ವಾಜಿನೋ ವಾಹಾ ಹಸ್ತಿನೋऽಥ ರಥಾಸ್ತಥಾ ।
ಇಚ್ಛಾಮ್ಯಹಮಥಾಪೂರ್ವಂ ವಾಹನಂ ತೇ ಸುರಾಧಿಪ ॥೧೪॥

ಇಂದ್ರನ ವಾಹನಗಳೆಂದರೆ ಆನೆಗಳು, ಕುದುರೆಗಳು ಮತ್ತು ರಥಗಳು. ಸುರಾಧಿಪನೇ, ನಿನಗೆ ಮಾತ್ರ ಅಪೂರ್ವವಾದ ವಾಹನವಿರಬೇಕೆಂದು ನಾನು ಬಯಸುತ್ತೇನೆ.

ಯನ್ನ ವಿಷ್ಣೋರ್ನ ರುದ್ರಸ್ಯ ನಾಸುರಾಣಾಂ ನ ರಕ್ಷಸಾಮ್ ।
ವಹಂತು ತ್ವಾಂ ಮಹಾಭಾಗಾ ಋಷಯಃ ಸಂಗತಾ ವಿಭೋ ॥೧೫॥

ಸರ್ವೇ ಶಿಬಿಕಯಾ ರಾಜನ್ ಏತದ್ಧಿ ಮಮ ರೋಚತೇ ॥೧೬॥

ಯಾವ ವಾಹನವು ವಿಷ್ಣುವಿಗಾಗಲೀ, ರುದ್ರನಿಗಾಗಲೀ, ಅಸುರರಿಗಾಗಲೀ, ರಾಕ್ಷಸರಿಗಾಗಲೀ ಇರುವುದಿಲ್ಲವೋ ಅಂತಹ ಎಲ್ಲಾ ಮಹಾನುಭಾವರಾದ ಎಲ್ಲಾ ಋಷಿಗಳಿಂದ ಹೊರಲ್ಪಟ್ಟ ವಾಹನವು ನಿನಗೆ ಇರಬೇಕು. ಎಲೈ ವಿಭುವೇ, ರಾಜನೇ, ಎಲ್ಲಾ ಋಷಿಗಳೂ ಒಟ್ಟಿಗೆ ನಿನ್ನ ಪಲ್ಲಕ್ಕಿಯನ್ನು ಹೊರಲಿ. ಇದು ನನಗೆ ಇಷ್ಟವಾಗುತ್ತದೆ.

ನಾಸುರೇಷು ನ ದೇವೇಷು ತುಲ್ಯೋ ಭವಿತುಮರ್ಹಸಿ ।
ಸರ್ವೇಷಾಂ ತೇಜ ಆದತ್ಸ್ವ ಸ್ವೇನ ವೀರ್ಯೇಣ ದರ್ಶನಾತ್ ॥೧೭॥

ನ ತೇ ಪ್ರಮುಖತಃ ಸ್ಥಾತುಂ ಕಶ್ಚಿಚ್ಛಕ್ನೋತಿ ವೀರ್ಯವಾನ್ ॥೧೮॥

ಆಗ ನೀನು ಯಾವ ಅಸುರರಿಗಾಗಲೀ ಅಥವಾ ದೇವತೆಗಳಿಗಾಗಲೀ ಸಮಾನನಾಗುವುದಿಲ್ಲ. ನೀನು ಯಾರನ್ನು ನೋಡುವಿಯೋ ಅವರ ಪರಾಕ್ರಮವನ್ನು ನಿನ್ನ ಸಾಮರ್ಥ್ಯದಿಂದ ನೀನೇ ಹೊಂದುವವನಾಗು. ಯಾವ ಪರಾಕ್ರಮಶಾಲಿಯೂ ನಿನ್ನ ಎದುರಿಗೆ ನಿಲ್ಲಲು ಸಾಧ್ಯವಾಗುವುದಿಲ್ಲ.

ಏವಮುಕ್ತಶ್ಚ ನಹುಷಃ ಪ್ರಾಹೃಷ್ಯತ ತದಾ ಕಿಲ ।
ಉವಾಚ ವಚನಂ ಚಾಪಿ ಸುರೇಂದ್ರಸ್ತಾಮನಿಂದಿತಾಮ್ ॥೧೯॥

ಹೀಗೆ ಹೇಳಲ್ಪಟ್ಟ ನಹುಷನು ಆಗ ಬಹಳ ಸಂತೋಷಗೊಂಡನಷ್ಟೆ. ದೇವತೆಗಳ ಒಡೆಯನಾದ ಅವನು ಅನಿಂದಿತೆಯಾದ ಅವಳನ್ನು ಕುರಿತು ಮಾತನಾಡಿದನು.

ನಹುಷಃ

ಅಪೂರ್ವಂ ವಾಹನಮಿದಂ ತ್ವಯೋಕ್ತಂ ವರವರ್ಣಿನಿ ।
ದೃಢಂ ಮೇ ರುಚಿರಂ ದೇವಿ ತ್ವದ್ವಶೋಽಸ್ಮಿ ವರಾನನೇ ॥೨೦॥

ನ ಹ್ಯಲ್ಪವೀರ್ಯೋ ಭವತಿ ಯೋ ವಾಹಾನ್ ಕುರುತೇ ಮುನೀನ್ ॥

ನಹುಷ– ವರವರ್ಣಿನಿಯೇ, ನೀನು ಹೇಳಿದ ಈ ವಾಹನವು ಅಪೂರ್ವವಾದುದು. ದೃಢವೂ ಮತ್ತು ಮನೋಹರವೂ ಆಗಿರುತ್ತದೆ. ದೇವಿಯೇ, ವರಾನನೆಯೇ, ನಾನು ನಿನ್ನ ವಶವಾಗಿದ್ದೇನೆ. ಯಾವನು ಋಷಿಗಳನ್ನು ವಾಹನವಾಗಿ ಹೊಂದುತ್ತಾನೋ ಅವನು ಅಲ್ಪಸಾಮರ್ಥ್ಯನಾಗಿ ಇರುವುದಿಲ್ಲ.

ಅಹಂ ತಪಸ್ವೀ ಬಲವಾನ್ ಭೂತಭವ್ಯಭವತ್ಪ್ರಭುಃ ।
ಮಯಿ ಕ್ರುದ್ಧೇ ಜಗನ್ನ ಸ್ಯಾನ್ಮಯಿ ಸರ್ವಂ ಪ್ರತಿಷ್ಠಿತಮ್ ॥೨೨॥

ನಾನು ತಪಸ್ವಿ, ಬಲಿಷ್ಠನಾದವನು ಮತ್ತು ವರ್ತಮಾನ, ಭೂತ ಮತ್ತು ಭವಿಷ್ಯತ್ ಕಾಲದಲ್ಲಿ ಪ್ರಭುವಾದವನು. ನಾನು ಕೋಪಗೊಂಡರೆ ಜಗತ್ತೇ ಉಳಿಯಲಾರದು. ಎಲ್ಲವೂ ನನ್ನನ್ನು ಆಶ್ರಯಿಸಿದೆ.

ದೇವದಾನವಗಂಧರ್ವಾಃ ಕಿನ್ನರೋರಗರಾಕ್ಷಸಾಃ ।
ನ ಮೇ ಕ್ರುದ್ಧಸ್ಯ ಪರ್ಯಾಪ್ತಾಃ ಸರ್ವಲೋಕಾಃ ಶುಚಿಸ್ಮಿತೇ ॥೨೩॥

ಚಕ್ಷುಷಾ ಯಂ ಪ್ರಪಶ್ಯಾಮಿ ತಸ್ಯ ತೇಜೋ ಹರಾಮ್ಯಹಮ್ ॥೨೪॥

ಶುಚಿಸ್ಮಿತೆಯೇ, ದೇವ-ದಾನವ-ಗಂಧರ್ವರಾಗಲೀ, ಕಿನ್ನರ-ಉರಗ-ರಾಕ್ಷಸರಾಗಲೀ, ಸರ್ವಲೋಕಗಳೇ ಆಗಲಿ ಕೋಪಗೊಂಡ ನನಗೆ ಸರಿಸಾಟಿಯಲ್ಲ. ನನ್ನ ದೃಷ್ಟಿಯಿಂದ ಯಾರನ್ನು ನೋಡುತ್ತೇನೆಯೋ ಅವರ ತೇಜಸ್ಸನ್ನು ಅಪಹರಿಸುತ್ತೇನೆ.

ಅಹಮಿಂದ್ರೋಽಸ್ಮಿ ದೇವಾನಾಂ ಲೋಕಾನಾಂ ಚ ಮಹೇಶ್ವರಃ ।
ಮಯಿ ಹವ್ಯಂ ಚ ಕವ್ಯಂ ಚ ಲೋಕಾಶ್ಚೈವ ಸನಾತನಾಃ ॥೨೫॥

ತಸ್ಮಾತ್ ತೇ ವಚನಂ ದೇವಿ ಕರಿಷ್ಯಾಮಿ ನ ಸಂಶಯಃ ॥೨೬॥

ನಾನು ದೇವತೆಗಳಿಗೆ ಒಡೆಯನಾಗಿದ್ದೇನೆ. ಲೋಕಗಳಿಗೆ ಮಹೇಶ್ವರನಾಗಿದ್ದೇನೆ. ಹವ್ಯ-ಕವ್ಯಗಳು ಮತ್ತು ಸನಾತನವಾದ ಎಲ್ಲ ಲೋಕಗಳು ನನ್ನನ್ನೇ ಆಶ್ರಯಿಸಿವೆ. ಆದ್ದರಿಂದ ದೇವಿಯೇ, ನಿನ್ನ ವಚನವನ್ನು ನಡೆಸುವೆನು. ಇದರಲ್ಲಿ ಸಂಶಯವಿಲ್ಲ.

ಸಪ್ತರ್ಷಯೋ ಮಾಂ ವಕ್ಷ್ಯಂತಿ ಸರ್ವೇ ಬ್ರಹ್ಮರ್ಷಯಸ್ತಥಾ ।
ಪಶ್ಯ ಮಾಹಾತ್ಮ್ಯಮಸ್ಮಾಕಮ್ ಋದ್ಧಿಂ ಚ ವರವರ್ಣಿನಿ ॥೨೭॥

ಸಪ್ತರ್ಷಿಗಳು ಮತ್ತು ಎಲ್ಲಾ ಬ್ರಹ್ಮರ್ಷಿಗಳು ನನ್ನ ಪಲ್ಲಕ್ಕಿಯನ್ನು ಹೊರುವರು. ವರವರ್ಣಿನಿಯೇ, ನನ್ನ ಮಹಿಮೆಯನ್ನು ಮತ್ತು ವೈಭವವನ್ನು ನೋಡುವವಳಾಗು.

ಹತೌಜಸೋ ಮಯಾ ಸರ್ವೇ ದೇವಗಂಧರ್ವದಾನವಾಃ ।
ಯದ್ಯಸ್ಯ ತೇಜಃ ಪಶ್ಯಾಮಿ ತಸ್ಯ ತೇಜೋ ಹರಾಮ್ಯಹಮ್ ॥೨೮॥

ದೇವ-ದಾನವ-ಗಂಧರ್ವಗಳೆಲ್ಲರೂ ನನ್ನ ಎದುರಿಗೆ ತಮ್ಮ ಸಾಮರ್ಥ್ಯವನ್ನು ಕಳೆದುಕೊಂಡಿದ್ದಾರೆ. ನಾನು ಎಲ್ಲಾದರೂ ಸಾಮರ್ಥ್ಯವನ್ನು ನೋಡಿದರೆ ಅದನ್ನು ದೃಷ್ಟಿಯಿಂದ ಅಪಹರಿಸುತ್ತೇನೆ.

## ಶಲ್ಯಃ

ಏವಮುಕ್ತ್ವಾ ತು ತಾಂ ದೇವೀಂ ವಿಸೃಜ್ಯ ಚ ವರಾನನಾಮ್ ।
ಅಥ ಸಂಚಿಂತ್ಯ ನಹುಷೋ ಬಲವೀರ್ಯೇಣ ಭಾರತ ॥೨೯॥

ವಿಸೃಜ್ಯ ಸುಪ್ರತೀಕಂ ಚ ನಾಗಮೈರಾವತಂ ತಥಾ ।
ಹಂಸಯುಕ್ತಂ ವಿಮಾನಂ ಚ ಹರಿಯುಕ್ತಂ ತಥಾ ರಥಮ್ ॥೩೦॥

ಶಲ್ಯ– ಎಲೈ ಭಾರತನೇ, ಶಚಿಯನ್ನು ಕುರಿತು ಹೀಗೆ ಹೇಳಿ, ಸುಂದರಿಯಾದ ಅವಳನ್ನು ಬೀಳ್ಕೊಟ್ಟು ಸುಪ್ರತೀಕ ಗಜವನ್ನು ಮತ್ತು ಐರಾವತ ಗಜವನ್ನು ಬಿಟ್ಟು, ಹಾಗೆಯೇ ಹಂಸಯುಕ್ತವಾದ ವಿಮಾನವನ್ನು ಮತ್ತು ಅಶ್ವಗಳಿಂದ ಕೂಡಿದ ರಥವನ್ನು ಬಿಟ್ಟು (ಬಿಟ್ಟನು).

ಸ ತು ದರ್ಪೇಣ ಮಹತಾ ಪರಿಭೂಯ ಮಹಾಮುನೀನ್ ।
ವಿಮಾನೇ ಯೋಜಯಿತ್ವಾ ಸ ಋಷೀನ್ ನಿಯಮಮಾಸ್ಥಿತಾನ್ ॥೩೧॥

ಅಬ್ರಹ್ಮಣ್ಯೋ ಬಲೋಪೇತೋ ಮತ್ತೋ ವರಮದೇನ ಚ ।
ಕಾಮವೃತ್ತಃ ಸ ದುಷ್ಟಾತ್ಮಾ ವಾಹಯಾಮಾಸ ತಾನ್ ಋಷೀನ್ ॥೩೨॥

ನಹುಷೇಣ ವಿಸೃಷ್ಟಾ ಸಾ ಬೃಹಸ್ಪತಿಮಥಾಬ್ರವೀತ್ ॥೩೩॥

ಅವನು ಮಹಾದರ್ಪದಿಂದ ಮಹರ್ಷಿಗಳಿಗೆ ಅವಮಾನವನ್ನು ಮಾಡಿ ವ್ರತ-ನಿಯಮಶೀಲರಾದ ಆ ಋಷಿಗಳನ್ನು ತನ್ನ ಪಲ್ಲಕ್ಕಿಯನ್ನು ಹೊರಲು ಯೋಜಿಸಿ ಬ್ರಾಹ್ಮಣರಿಗೆ ಅಹಿತನೂ, ಬಲೋಪೇತನೂ, ವರಮದದಿಂದ ಮತ್ತನೂ, ತನ್ನ ಇಚ್ಛೆ ಬಂದಂತೆ ನಡೆದುಕೊಳ್ಳುವವನೂ ಆದ ಆ ದುಷ್ಟಾತ್ಮನು ಆ ಋಷಿಗಳಿಂದ ತನ್ನ ಪಲ್ಲಕ್ಕಿಯನ್ನು ಹೊರಿಸಿದನು.

ಸಮಯೋಽಲ್ಪಾವಶೇಷೋ ಮೇ ನಹುಷೇಣ ಹಿ ಯಃ ಕೃತಃ ।
ಶಕ್ರಂ ಮೃಗಯ ಶೀಘ್ರಂ ತಂ ಭಕ್ತಾಯಾಃ ಕುರು ಮೇ ದಯಾಮ್ ॥

ನಹುಷನಿಂದ ಬೀಳ್ಕೊಡಲ್ಪಟ್ಟ ಶಚೀದೇವಿಯು ಬೃಹಸ್ಪತಿಗಳನ್ನು ಸಮೀಪಿಸಿ ನಹುಷನು ಹೇಳಿದ ಕಾಲವು ಅಲ್ಪಮಾತ್ರ ಉಳಿದಿದೆ. ಬೇಗ ಇಂದ್ರನನ್ನು ಹುಡುಕು. ಭಕ್ತಳಾದ ನನ್ನ ಮೇಲೆ ದಯೆಯನ್ನು ಮಾಡು ಎಂದು ಹೇಳಿದಳು.

ಶಲ್ಯಃ

ಬಾಢಮಿತ್ಯೇವ ಭಗವಾನ್ ಬೃಹಸ್ಪತಿರುವಾಚ ತಾಮ್ ॥೩೫॥

ನ ಭೇತವ್ಯಂ ತ್ವಯಾ ದೇವಿ ನಹುಷಾದ್ ದುಷ್ಟಚೇತಸಃ ।
ನ ಹ್ಯೇಷ ಸ್ಥಾಸ್ಯತಿ ಚಿರಂ ಗತ ಏಷ ನರಾಧಮಃ ॥೩೬॥

ಶಲ್ಯ– ಪೂಜ್ಯರಾದ ಬೃಹಸ್ಪತಿಗಳು 'ಹಾಗೆಯೇ ಆಗಲಿ ದೇವಿಯೇ, ದುಷ್ಟ ಮನಸ್ಸುಳ್ಳ ನಹುಷನಿಗೆ ನೀನು ಹೆದರಬೇಡ. ಅವನು ಇನ್ನು ಬಹುಕಾಲ ಇರುವುದಿಲ್ಲ. ಈ ನರಾಧಮನು ಹೊರಟು ಹೋಗಿದ್ದಾನೆ ಎಂದು ತಿಳಿ' ಎಂದು ಅವಳಿಗೆ ಹೇಳಿದರು.

ಅಧರ್ಮಜ್ಞೋ ಮಹರ್ಷೀಣಾಂ ವಾಹನಾಚ್ಚ ಹತಃ ಶುಭೇ ।
ಇಷ್ಟಿಂ ಚಾಹಂ ಕರಿಷ್ಯಾಮಿ ವಿನಾಶಾಯಾಸ್ಯ ದುರ್ಮತೇಃ ॥೩೭॥

ಶಕ್ರಂ ಚಾಧಿಗಮಿಷ್ಯಾಮಿ ಮಾ ಭೈಸ್ತ್ವಂ ಭದ್ರಮಸ್ತು ತೇ ॥೩೮॥

ಶುಭಳಾದವಳೇ, ಧರ್ಮವನ್ನು ತಿಳಿಯದ ಅವನು ಮಹರ್ಷಿಗಳನ್ನು ವಾಹನದಲ್ಲಿ ನಿಯೋಜಿಸುವುದರಿಂದ ಹತನಾಗಿದ್ದಾನೆ. ದುರ್ಮತಿಯಾದ ಅವನ ವಿನಾಶಕ್ಕಾಗಿ ನಾನು ಒಂದು ಹೋಮವನ್ನು ಮಾಡುವೆನು. ಇಂದ್ರನನ್ನೂ ಹುಡುಕುವೆನು. ನೀನು ಹೆದರಬೇಡ. ನಿನಗೆ ಮಂಗಳವಾಗಲಿ (ಎಂದು ಹೇಳಿದರು).

ಶಲ್ಯಃ

ತತಃ ಪ್ರಜ್ವಾಲ್ಯ ವಿಧಿವತ್ ಜುಹಾವ ಸಘೃತಂ ಹವಿಃ ।
ಬೃಹಸ್ಪತಿರ್ಮಹಾತೇಜಾ ದೇವರಾಜೋಪಲಬ್ಧಯೇ ॥೩೯॥

ಶಲ್ಯ– ಅನಂತರ ಮಹಾತೇಜಸ್ವಿಗಳಾದ ಬೃಹಸ್ಪತಿಗಳು ದೇವರಾಜನಾದ ಇಂದ್ರನನ್ನು ಕಾಣುವುದಕ್ಕಾಗಿ ಅಗ್ನಿಯನ್ನು ಪ್ರಜ್ವಲಗೊಳಿಸಿ ಘೃತ ಸಹಿತವಾದ ಹವಿಸ್ಸನ್ನು ವಿಧಿಬದ್ಧವಾಗಿ ಹೋಮವನ್ನು ಮಾಡಿದರು.

ತಸ್ಮಾತ್ ಸ ಭಗವಾನ್ ದೇವಃ ಸ್ವಯಮೇವ ಹುತಾಶನಃ ।
ಸ್ತ್ರೀವೇಷಮದ್ಭುತಂ ಕೃತ್ವಾ ಸಹಸಾऽಂತರಧೀಯತ ॥೪೦॥

ಆ ಹೋಮಕುಂಡದಿಂದ ಪೂಜ್ಯನಾದ ಅಗ್ನಿದೇವನು ಸ್ವಯಂ ಒಂದು ಅದ್ಭುತವಾದ ಸ್ತ್ರೀವೇಷವನ್ನು ಧರಿಸಿ ದರ್ಶನವನ್ನು ಕೊಟ್ಟು ತಕ್ಷಣ ಅಂತರ್ಧಾನವನ್ನು ಹೊಂದಿದನು.

ಸ ದಿಶಃ ಪ್ರದಿಶಶ್ಚೈವ ಪರ್ವತಾಂಶ್ಚ ವನಾನಿ ಚ ।
ಪೃಥಿವೀಂ ಚಾಂತರಿಕ್ಷಂ ಚ ವಿಚಿತ್ಯಾಥ ಮನೋಗತಿಃ ॥೪೧॥

ನಿಮೇಷಾಂತರಮಾತ್ರೇಣ ಬೃಹಸ್ಪತಿಮುಪಾಗಮತ್ ॥೪೨॥

ಮನೋಗತಿಯುಳ್ಳ ಅವನು ದಿಕ್ಕುವಿದಿಕ್ಕುಗಳನ್ನೂ, ಪರ್ವತ ಮತ್ತು ಅರಣ್ಯಗಳನ್ನೂ, ಪೃಥಿವಿ ಮತ್ತು ಅಂತರಿಕ್ಷಗಳನ್ನೂ ಹುಡುಕಿ ಒಂದು ಕ್ಷಣದಲ್ಲಿ ಬೃಹಸ್ಪತಿಗಳ ಎದುರಿಗೆ ಬಂದು ನಿಂತನು.

ಅಗ್ನಿಃ

ಬೃಹಸ್ಪತೇ ನ ಪಶ್ಯಾಮಿ ದೇವರಾಜಮಹಂ ಕ್ವಚಿತ್ ।
ಆಪಃ ಶೇಷಾಃ ಸದಾ ಚಾಪಃ ಪ್ರವೇಷ್ಟುಂ ನೋತ್ಸಹಾಮ್ಯಹಮ್ ॥೪೩॥

ನ ಮೇ ತತ್ರ ಗತಿರ್ಬ್ರಹ್ಮನ್ ಕಿಮನ್ಯತ್ ಕರವಾಣಿ ತೇ ॥೪೪॥

ಅಗ್ನಿ– ಬೃಹಸ್ಪತಿಗಳೇ, ದೇವರಾಜನಾದ ಇಂದ್ರನು ಎಲ್ಲಿಯೂ ಕಾಣಲಿಲ್ಲ. ಜಲವನ್ನು ಬಿಟ್ಟು ಎಲ್ಲ ಕಡೆಯಲ್ಲಿಯೂ ಹುಡುಕಿದ್ದೇನೆ. ನಾನು ಜಲವನ್ನು ಮಾತ್ರ ಪ್ರವೇಶಿಸಲಾರೆ. ಬ್ರಾಹ್ಮಣರೇ, ನೀರಿನಲ್ಲಿ ನನಗೆ ಪ್ರವೇಶವಿಲ್ಲ. ನಾನು ನಿಮ್ಮ ಸಲುವಾಗಿ ಬೇರೆ ಏನು ಮಾಡಲಿ?

ಶಲ್ಯಃ

ತಮಬ್ರವೀದ್ ದೇವಗುರುರಪೋ ವಿಶ ಮಹಾದ್ಯುತೇ ॥೪೫॥

ಶಲ್ಯ– ದೇವಗುರುಗಳಾದ ಬೃಹಸ್ಪತಿಗಳು ಅವನನ್ನು ಕುರಿತು ಮಹಾದ್ಯುತಿಯೇ, ಜಲವನ್ನು ಪ್ರವೇಶಿಸು ಎಂದು ಹೇಳಿದರು.

ಅಗ್ನಿಃ

ನಾಪಃ ಪ್ರವೇಷ್ಟುಂ ಶಕ್ಷ್ಯಾಮಿ ಕ್ಷಯೋ ಮೇಽತ್ರ ಭವಿಷ್ಯತಿ ।
ಶರಣಂ ತ್ವಾಂ ಪ್ರಪನ್ನೋಽಸ್ಮಿ ಸ್ಪೃಷ್ಟಿ ತೇಽಸ್ತು ಮಹಾದ್ಯುತೇ ॥೪೬॥

**ಅದ್ಭ್ಯೋಽಗ್ನಿರ್ಬ್ರಹ್ಮಣಃ ಕ್ಷತ್ರಮಶ್ಮನೋ ಲೋಹಮುತ್ಥಿತಮ್ ।**
**ತೇಷಾಂ ಸರ್ವತ್ರಗಂ ತೇಜಃ ಸ್ವಾಸು ಯೋನಿಷು ಶಾಮ್ಯತಿ ॥೪೭॥**

ಅಗ್ನಿ– ಮಹಾದ್ಯುತಿಯುಳ್ಳವರೇ, ನಾನು ಜಲವನ್ನು ಪ್ರವೇಶಿಸಲಾರೆ. ಅಲ್ಲಿನನ್ನ ವಿನಾಶ ಉಂಟಾಗುವುದು. ನಾನು ನಿಮಗೆ ಶರಣಾಗತನಾಗಿದ್ದೇನೆ. ನಿಮಗೆ ಮಂಗಳವಾಗಲಿ. ಜಲದಿಂದ ಅಗ್ನಿಯು, ಬ್ರಾಹ್ಮಣರಿಂದ ಕ್ಷತ್ರಿಯರು, ಶಿಲೆಯಿಂದ ಲೋಹವು ಉತ್ಪತ್ತಿಯನ್ನು ಹೊಂದುತ್ತವೆ. ಉಳಿದ ಎಲ್ಲ ಕಡೆಯಲ್ಲಿಯೂ ತೋರಿ ಬರುವ ಅವುಗಳ ಸಾಮರ್ಥ್ಯವು ತಮ್ಮ ಉತ್ಪತ್ತಿ ಸ್ಥಾನವನ್ನು ಹೊಂದಿ ನಾಶವನ್ನು ಹೊಂದುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಪಂಚದಶೋಽಧ್ಯಾಯಃ ॥

॥ ಸೇನೋದ್ಯೋಗಪರ್ವಣಿ ಪಂಚದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಹದಿನೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

## ಹದಿನಾರನೆಯ ಅಧ್ಯಾಯ

ಅಗ್ನಿಯಿಂದ ಬೃಹಸ್ಪತಿಗೆ ಶಕ್ರನ ದರ್ಶನ. ಬೃಹಸ್ಪತಿಯಿಂದ ಇಂದ್ರಸ್ತುತಿ.
ಅಲ್ಲಿ ಇಂದ್ರನಿಂದ ದೇವತೆಗಳಿಗೆ ಅವರವರ ಆಧಿಪತ್ಯದಲ್ಲಿ ಅಭಿಷೇಕ.

### ಬೃಹಸ್ಪತಿಃ

**ತ್ವಮಗ್ನೇ ಸರ್ವದೇವಾನಾಂ ಮುಖಂ ತ್ವಮಸಿ ಹವ್ಯವಾಟ್ ।**
**ತ್ವಮಂತಃ ಸರ್ವಭೂತಾನಾಂ ಗೂಢಶ್ಚರಸಿ ಸಾಕ್ಷಿವತ್ ॥೧॥**

ಬೃಹಸ್ಪತಿ– ಅಗ್ನಿಯೇ, ನೀನು ಎಲ್ಲ ದೇವತೆಗಳಿಗೆ ಮುಖವಾಗಿದ್ದೀಯೆ. ನೀನು ಹವಿಸ್ಸನ್ನು ತೆಗೆದುಕೊಂಡು ಹೋಗುವವನಾಗಿದ್ದೀಯೆ. ನೀನು ಎಲ್ಲರ ಹೃದಯದಲ್ಲಿ ಸಾಕ್ಷಿಯಾದ ನಾರಾಯಣನಂತೆ ಗೂಢನಾಗಿ ಸಂಚರಿಸುತ್ತೀಯೆ.

**ತ್ವಾಮಾಹುರೇಕಂ ಕವಯಃ ತ್ವಾಮಾಹುಸ್ತ್ರಿವಿಧಂ ಪುನಃ ।**
**ತ್ವಯಾ ತ್ಯಕ್ತಂ ಜಗಚ್ಚೇದಂ ಸದ್ಯೋ ನಶ್ಯೇದ್ ಹುತಾಶನ ॥೨॥**

ಜ್ಞಾನಿಗಳು ನಿನ್ನನ್ನು ಒಬ್ಬನೆಂದು ಹೇಳುತ್ತಾರೆ. ಇನ್ನು ಕೆಲವರು ಮೂರು ವಿಧದವನೆಂದು ಹೇಳುತ್ತಾರೆ. ಹುತಾಶನನೇ, ನೀನು ತ್ಯಜಿಸಿದರೆ ಈ ಜಗತ್ತು ತಕ್ಷಣದಲ್ಲಿಯೇ ನಾಶವನ್ನು ಹೊಂದುವುದು.

**ಕೃತ್ವಾ ತುಭ್ಯಂ ನಮೋ ವಿಪ್ರಾಃ ಸ್ವಕರ್ಮವಿಜಿತಾಂ ಗತಿಮ್ ।**
**ಗಚ್ಛಂತಿ ಸಹ ಪತ್ನೀಭಿಃ ಸುತೈರಪಿ ಚ ಶಾಶ್ವತೀಮ್ ॥೩॥**

ಬ್ರಾಹ್ಮಣರು ತಮ್ಮ ಪತ್ನೀ-ಪುತ್ರರ ಜೊತೆಯಲ್ಲಿ ನಿನಗೆ ನಮಸ್ಕಾರವನ್ನು ಮಾಡಿ ತಮ್ಮ ಕರ್ಮದಿಂದ ಸಂಪಾದಿಸಿದ ಶಾಶ್ವತವಾದ ಗತಿಯನ್ನು ಹೊಂದುತ್ತಾರೆ.

**ತ್ವಮೇವಾಗ್ನೇ ಹವ್ಯವಾಹಃ ತ್ವಮೇವ ಪರಮಂ ಹವಿಃ ।**
**ಯಜಂತಿ ಸತ್ರೈಸ್ತಾ ತ್ವಮೇವ ಯಜ್ಞೈಶ್ಚ ಪರಮಾಧ್ವರೇ ॥೪॥**

ಅಗ್ನಿಯೇ, ನೀನೇ ಹವಿಸ್ಸನ್ನು ಕೊಂಡೊಯ್ಯುವವನು. ಶ್ರೇಷ್ಠವಾದ ಹವಿಸ್ಸೂ ನೀನೇ. ದೊಡ್ಡ ಯಜ್ಞಗಳಲ್ಲಿ ಮತ್ತು ಸತ್ರಗಳಲ್ಲಿ ನಿನ್ನನ್ನೇ ಪೂಜಿಸುತ್ತಾರೆ.

**ಸೃಷ್ಟಾ ಲೋಕಾಂಸ್ತ್ರೀನಿಮಾನ್ ಹವ್ಯವಾಹ**
**ಕಾಲೇ ಪ್ರಾಪ್ತೇ ಪಚಸಿ ಪುನಃ ಸಮಿದ್ಧಃ ।**
**ತ್ವಂ ಸರ್ವಸ್ಯ ಭುವನಸ್ಯ ಪ್ರಸೂತಿಃ**
**ತ್ವಮೇವಾಗ್ನೇ ಭವಸಿ ಪುನಃ ಪ್ರತಿಷ್ಠಾ ॥೫॥**

ಎಲೈ ಹವ್ಯವಾಹನನೇ, ನೀನು ಈ ಮೂರುಲೋಕಗಳನ್ನೂ ಸೃಷ್ಟಿಮಾಡಿ, ಸಂಹಾರ ಕಾಲವು ಪ್ರಾಪ್ತವಾದಾಗ ಪ್ರಜ್ವಲಿಸಿ ಎಲ್ಲಾ ಲೋಕಗಳನ್ನೂ ದಹಿಸುತ್ತೀಯೆ. ಅಗ್ನಿಯೇ, ನೀನು ಎಲ್ಲಾ ಲೋಕಗಳಿಗೂ ಉತ್ಪತ್ತಿ ಸ್ಥಾನನಾದವನು ಮತ್ತು ಪುನಃ ಆಶ್ರಯನಾದವನು.

**ತ್ವಾಮಗ್ನೇ ಜಲದಾನಾಹುರ್ವಿದ್ಯುತಶ್ಚ ಮನೀಷಿಣಃ ।**
**ದಹಂತಿ ಸರ್ವಭೂತಾನಿ ತ್ವತ್ತೋ ನಿಷ್ಪತ್ಯ ರಶ್ಮಯಃ ॥೬॥**

ಅಗ್ನಿಯೇ, ನಿನ್ನನ್ನು ಮೇಘಗಳೆಂದು ಹೇಳುತ್ತಾರೆ. ಜ್ಞಾನಿಗಳಾದವರು ನೀನೇ ಮಿಂಚು ಎಂದು ಹೇಳುತ್ತಾರೆ. ನಿನ್ನಿಂದ ಹೊರಟ ಕಿರಣಗಳು ಎಲ್ಲ ಜೀವರನ್ನೂ ದಹಿಸುತ್ತವೆ.

ತ್ವಯ್ಯಾಪೋ ನಿಹಿತಾಃ ಸರ್ವಾಃ ತ್ವಯಿ ಸರ್ವಮಿದಂ ಜಗತ್ ।
ನ ತೇಽಸ್ತ್ಯವಿದಿತಂ ಕಿಂಚಿತ್ ತ್ರಿಷು ಲೋಕೇಷು ಪಾವಕ ॥೭॥

ಎಲ್ಲ ಜಲವೂ ನಿನ್ನಲ್ಲಿಯೇ ಇಡಲ್ಪಟ್ಟಿದೆ. ಈ ಎಲ್ಲ ಜಗತ್ತೂ ನಿನ್ನನ್ನೇ ಆಶ್ರಯಿಸಿದೆ. ಎಲೈ ಪಾವಕನೇ, ಮೂರುಲೋಕಗಳಲ್ಲಿ ನೀನು ತಿಳಿಯದ ವಸ್ತುವು ಯಾವುದೂ ಇಲ್ಲ.

ಸ್ತ್ವಾಂ ಯೋನಿಂ ಭಜತೇ ಸರ್ವೋ ವಿಶಸ್ತ್ವಾಪೋಽವಿಶಂಕಿತಃ ।
ಅಹಂ ತ್ವಾಂ ವರ್ಧಯಿಷ್ಯಾಮಿ ಬ್ರಾಹ್ಮೈರ್ಮಂತ್ರೈಃ ಸನಾತನೈಃ ॥೮॥

ಎಲ್ಲರೂ ತಮ್ಮ ಉತ್ಪತ್ತಿ ಸ್ಥಾನವನ್ನೇ ಆಶ್ರಯಿಸುತ್ತಾರೆ. ಆದ್ದರಿಂದ ಯಾವ ಶಂಕೆಯೂ ಇಲ್ಲದೆ ನನ್ನ ಮಾತನ್ನು ನಂಬಿ ಜಲವನ್ನು ಪ್ರವೇಶಿಸು. ನಾನು ಸನಾತನವಾದ ವೇದ ಮಂತ್ರಗಳಿಂದ ನಿನಗೆ ಬಲವು ಅಭಿವೃದ್ಧಿಯಾಗುವಂತೆ ಮಾಡುವೆನು.

ಶಲ್ಯಃ

ಏವಂ ಸ್ತುತೋ ಹವ್ಯವಾಟ್ ಸ ಭಗವಾನ್ ಕವಿರುತ್ತಮಃ ।
ಬೃಹಸ್ಪತಿಮಥೋವಾಚ ಪ್ರೀತಿಮಾನ್ ವಾಕ್ಯಮುತ್ತಮಮ್ ॥೯॥

ದರ್ಶಯಿಷ್ಯಾಮಿ ತೇ ಶಕ್ರಂ ಸತ್ಯಮೇತದ್ ಬ್ರವೀಮಿ ತೇ ॥೧೦॥

ಶಲ್ಯ– ಹೀಗೆ ಸ್ತೋತ್ರ ಮಾಡಲ್ಪಟ್ಟ ಹವ್ಯವಾಹಕನೂ, ಶ್ರೇಷ್ಠನೂ, ಕವಿಯೂ, ಪೂಜ್ಯನೂ ಆದ ಅಗ್ನಿಯು ಸಂತೋಷಯುಕ್ತನಾಗಿ ಬೃಹಸ್ಪತಿಗಳನ್ನು ಕುರಿತು, ನಿಮಗೆ ಇಂದ್ರನನ್ನು ತೋರಿಸುವೆನು. ಈ ಮಾತನ್ನು ಸತ್ಯವಾಗಿ ಹೇಳುತ್ತಿದ್ದೇನೆ ಎಂದು ಉತ್ತಮವಾಗಿ ಮಾತನಾಡಿದನು.

ಶಲ್ಯಃ

ಪ್ರವಿಶ್ಯಾಪಸ್ತತೋ ವಹ್ನಿಃ ಸಸಮುದ್ರಾಃ ಸಪಲ್ವಲಾಃ ।
ಆಜಗಾಮ ಸರಸ್ತಚ್ಚ ಗೂಢೋ ಯತ್ರ ಶತಕ್ರತುಃ ॥೧೧॥

ಶಲ್ಯ– ಅಗ್ನಿಯು ಅನಂತರ ಸಮುದ್ರಗಳಲ್ಲಿ, ಪಲ್ವಲಗಳಲ್ಲಿ ಎಲ್ಲ ಕಡೆಯಲ್ಲಿಯೂ ಇರುವ ನೀರಿನಲ್ಲಿ ಪ್ರವೇಶಿಸಿ ಇಂದ್ರನು ಅವಿತುಕೊಂಡಿದ್ದ ಸರೋವರಕ್ಕೂ ಬಂದನು.

ಅಥ ತತ್ರಾಪಿ ಪದ್ಮಾನಿ ವಿಚಿನ್ವನ್ ಭರತರ್ಷಭ ।
ಅನ್ವಪಶ್ಯತ್ ಸ ದೇವೇಂದ್ರಂ ಬಿಸಮಧ್ಯಗತಂ ತದಾ ॥೧೨॥

ಎಲೈ ಭರತರ್ಷಭನೇ, ಅಲ್ಲಿಯೂ ಪದ್ಮಗಳಲ್ಲಿ ಹುಡುಕುತ್ತಾ ಪದ್ಮನಾಳದ ಮಧ್ಯದಲ್ಲಿರುವ ಎಳೆಯಲ್ಲಿ ಇದ್ದ ದೇವೇಂದ್ರನನ್ನು ನೋಡಿದನು.

ಆಗತ್ಯ ಚ ತತಸ್ತೂರ್ಣಂ ತಮಾಚಷ್ಟ ಬೃಹಸ್ಪತೇಃ ।
ಅಣುಮಾತ್ರೇಣ ವಪುಷಾ ಪದ್ಮತಂತ್ವಾಶ್ರಿತಂ ಪ್ರಭುಮ್ ॥೧೩॥

ಅನಂತರ ಶೀಘ್ರವಾಗಿ ಹಿಂದಿರುಗಿ ಬಂದು ಬೃಹಸ್ಪತಿಗಳಿಗೆ ಅಣುಮಾತ್ರವಾದ ಶರೀರವನ್ನು ಧರಿಸಿ ಪದ್ಮದ ತಂತುವಿನಲ್ಲಿ ಆಶ್ರಿತನಾದ ಪ್ರಭುವಾದ ದೇವೇಂದ್ರನನ್ನು ತಿಳಿಸಿದನು.

ಗತ್ವಾ ದೇವರ್ಷಿಗಂಧರ್ವೈಃ ಸಹಿತೋಽಥ ಬೃಹಸ್ಪತಿಃ ।
ಪುರಾಣೈಃ ಕರ್ಮಭಿರ್ದೇವಂ ತುಷ್ಟಾವ ಬಲಸೂದನಮ್ ॥೧೪॥

ಬೃಹಸ್ಪತಿಗಳು ದೇವತೆಗಳಿಂದ, ಋಷಿಗಳಿಂದ ಮತ್ತು ಗಂಧರ್ವರಿಂದ ಸಹಿತರಾಗಿ ಅಲ್ಲಿಗೆ ಹೋಗಿ ಅವನು ಹಿಂದೆ ಮಾಡಿದ ಶ್ರೇಷ್ಠವಾದ ಕರ್ಮಗಳಿಂದ ಬಲಸೂದನನಾದ ಅವನನ್ನು ಸ್ತೋತ್ರ ಮಾಡಿದರು.

ಮಹಾಸುರೋ ಹತಃ ಶಕ್ರ ನಮುಚಿರ್ದಾರುಣಸ್ತ್ವಯಾ ।
ಶಂಬರಶ್ಚ ಬಲಶ್ಚೈವ ತಥೋಭೌ ಘೋರದರ್ಶನೌ ॥೧೫॥

ಎಲೈ ಶಕ್ರನೇ, ದಾರುಣನೂ ಮತ್ತು ಮಹಾಸುರನೂ ಆಗಿದ್ದ ನಮುಚಿಯು ನಿನ್ನಿಂದ ಹತನಾದನು. ಘೋರದರ್ಶನರಾದ ಶಂಬರ ಮತ್ತು ಬಲ ಇಬ್ಬರೂ ನಿನ್ನಿಂದ ಹತರಾದರು.

ಶತಕ್ರತೋ ವಿವರ್ಧಸ್ವ ಸರ್ವಾನ್ ಶತ್ರೂನ್ ನಿಷೂದಯ ।
ಉತ್ತಿಷ್ಠ ಶಕ್ರ ಸಂಪಶ್ಯ ದೇವರ್ಷೀಂಶ್ಚ ಸಮಾಗತಾನ್ ॥೧೬॥

ಮಹೇಂದ್ರ ದಾನವಾನ್ ಹತ್ವಾ ಲೋಕಾಸ್ತ್ರಾತಾಸ್ತ್ವಯಾ ವಿಭೋ ॥೧೭॥

ಶತಕ್ರತುವೇ, ಬಲದಿಂದ ಬೆಳೆಯುವವನಾಗು. ಎಲ್ಲ ಶತ್ರುಗಳನ್ನೂ ಸಂಹರಿಸು. ಮಹೇಂದ್ರನೇ, ಎದ್ದು ನೋಡು. ದೇವರ್ಷಿಗಳು ಬಂದಿದ್ದಾರೆ. ಮಹೇಂದ್ರನೇ, ವಿಭುವೇ, ನೀನು ಹಿಂದೆ ದಾನವರನ್ನು ಸಂಹಾರ ಮಾಡಿ ಲೋಕಗಳನ್ನು ರಕ್ಷಿಸಿದೆ.

ಅಪಾಂ ಫೇನಂ ಸಮಾಸಾದ್ಯ ವಿಷ್ಣುತೇಜೋಪಬೃಂಹಿತಮ್ ।
ತ್ವಯಾ ವೃತ್ರೋ ಹತಃ ಪೂರ್ವಂ ದೇವರಾಜ ಜಗತ್ಪತೇ ॥೧೮॥

ಎಲೈ ದೇವರಾಜನೇ, ಎಲೈ ಜಗತ್ಪತಿಯೇ, ನೀನು ವಿಷ್ಣು ತೇಜಸ್ಸಿನಿಂದ ಕೂಡಿದ ಸಮುದ್ರದ ನೊರೆಯನ್ನು ತೆಗೆದುಕೊಂಡು ಹಿಂದೆ ವೃತ್ರಾಸುರನನ್ನು ಸಂಹಾರ ಮಾಡಿದೆ.

ತ್ವಂ ಸರ್ವಭೂತೇಷು ಶರಣ್ಯ ಈಡ್ಯಃ
ತ್ವಯಾ ಸಮಂ ವಿದ್ಯತೇ ನೇಹ ಭೂತಮ್ ।
ತ್ವಯಾ ಧಾರ್ಯಂತೇ ಸರ್ವಭೂತಾನಿ ಶಕ್ರ
ತ್ವಂ ದೇವಾನಾಂ ಮಹಿಮಾನಂ ಚಕರ್ಥ ॥೧೯॥

ಪಾಹಿ ಸರ್ವಾನಿಮಾನ್ ಲೋಕಾನ್ ಮಹೇಂದ್ರ ಬಲಮಾಪ್ನುಹಿ ॥೨೦॥

ಎಲ್ಲಾ ಭೂತಗಳಲ್ಲಿಯೂ ನೀನು ಶರಣು ಹೊಂದಲು ಯೋಗ್ಯನಾದವನು. ಸ್ತೋತ್ರ ಮಾಡಲ್ಪಡಲು ಯೋಗ್ಯನಾದವನು. ನಿನ್ನ ಸಮಾನರಾದ ಚೇತನರು ಯಾರೂ ಇಲ್ಲ. ಎಲೈ ಶಕ್ರನೇ, ನೀನು ಎಲ್ಲ ಜೀವರನ್ನು ಧರಿಸಿದ್ದೀಯೆ ಮತ್ತು ದೇವತೆಗಳ ಮಹಿಮೆಗಳೂ ಸಹ ನಿನ್ನ ಅನುಗ್ರಹದಿಂದಲೇ ಪ್ರಾಪ್ತವಾಗಿವೆ. ಮಹೇಂದ್ರನೇ, ಈ ಎಲ್ಲ ಲೋಕಗಳನ್ನೂ ರಕ್ಷಿಸು. ಬಲವನ್ನು ಹೊಂದುವವನಾಗು.

ಶಲ್ಯಃ

ಏವಂ ಸಂಸ್ತೂಯಮಾನಶ್ಚ ಸೋಽವರ್ಧತ ಶನೈಃ ಶನೈಃ ।
ಸ್ವಂ ಚೈವ ವಪುರಾಸ್ಥಾಯ ಬಭೂವ ಸ ಬಲಾನ್ವಿತಃ ॥೨೧॥

ಶಲ್ಯ– ಹೀಗೆ ಸ್ತೋತ್ರ ಮಾಡಲ್ಪಟ್ಟಂತೆ ಅವನು ಮೆಲ್ಲಮೆಲ್ಲನೆ ಬೆಳೆದನು. ಕೊನೆಗೆ ತನ್ನ ನಿಜವಾದ ರೂಪವನ್ನು ತೆಗೆದುಕೊಂಡು ಬಲಾನ್ವಿತನಾದನು.

ಅಬ್ರವೀಚ್ಚ ಗುರುಂ ದೇವೋ ಬೃಹಸ್ಪತಿಮವಸ್ಥಿತಮ್ ॥೨೨॥

ಕಿಂ ಕಾರ್ಯಮವಶಿಷ್ಟಂ ವೋ ಹತಸ್ತಾ ಷ್ಟ್ರೋ ಮಹಾಸುರಃ ।
ವೃತ್ರಶ್ಚ ಸುಮಹಾಕಾಯೋ ಗ್ರಸ್ತುಂ ಲೋಕಾನಿಯೇಷ ಯಃ ॥೨೩॥

ದೇವನಾದ ಅವನು ಎದುರಿಗಿದ್ದ ಗುರುಗಳಾದ ಬೃಹಸ್ಪತಿಗಳನ್ನು ಕುರಿತು, ನಿಮಗೆ ನಾನು ಮಾಡಬೇಕಾದ ಯಾವ ಕಾರ್ಯವು ಉಳಿದಿದೆ? ತ್ವಷ್ಟ್ರನ ಪುತ್ರನಾದ ಬಹಳ ದೊಡ್ಡ ಶರೀರವನ್ನು ಹೊಂದಿದ್ದ ಮಹಾಸುರನಾದ ವೃತ್ರನು ಲೋಕಗಳನ್ನೇ ನುಂಗಲು ಬಯಸಿದ್ದನು. ಅವನು ಈಗ ಹತನಾಗಿದ್ದಾನೆ ಎಂದು ಹೇಳಿದನು.

ಬೃಹಸ್ಪತಿಃ

ಮಾನುಷೋ ನಹುಷೋ ರಾಜಾ ದೇವರ್ಷಿಗಣತೇಜಸಾ ।
ದೇವರಾಜ್ಯಮನುಪ್ರಾಪ್ತಃ ಸರ್ವಾನ್ ನೋ ಬಾಧತೇ ಭೃಶಮ್ ॥೨೪॥

ಬೃಹಸ್ಪತಿ– ಮನುಷ್ಯನಾದ ನಹುಷರಾಜನು ದೇವರ್ಷಿಗಣಗಳ ತೇಜಸ್ಸಿನಿಂದ ದೇವರಾಜ್ಯದ ಆಧಿಪತ್ಯವನ್ನು ಹೊಂದಿದವನಾಗಿ ನಮ್ಮೆಲ್ಲರನ್ನೂ ಬಹಳವಾಗಿ ಬಾಧಿಸುತ್ತಿದ್ದಾನೆ.

ಇಂದ್ರಃ

ಕಥಂ ನು ನಹುಷೋ ರಾಜ್ಯಂ ದೇವಾನಾಂ ಪ್ರಾಪ ದುರ್ಲಭಮ್ ।
ತಪಸಾ ಕೇನ ವಾ ಯುಕ್ತಃ ಕಿಂವೀರ್ಯೋ ವಾ ಬೃಹಸ್ಪತೇ ॥೨೫॥

ತತ್ಸರ್ವಂ ಕಥಯಧ್ವಂ ಮೇ ಯಥೇಂದ್ರತ್ವಮುಪೇಯಿವಾನ್ ॥೨೬॥

ಇಂದ್ರ– ನಹುಷನು ದುರ್ಲಭವಾದ ದೇವರಾಜ್ಯವನ್ನು ಹೇಗೆ ಪಡೆದನು? ಅವನ ತಪಸ್ಸು ಎಂತಹುದು? ಎಲೈ ಬೃಹಸ್ಪತಿಗಳೇ, ಅವನ ಸಾಮರ್ಥ್ಯವಾದರೂ ಏನು? ಅವನು ಹೇಗೆ ಇಂದ್ರನಾದನು ಎಂಬ ಎಲ್ಲ ವಿಷಯವನ್ನೂ ನನಗೆ ಹೇಳಿ.

ಬೃಹಸ್ಪತಿಃ

ತ್ವಯಿ ಪ್ರನಷ್ಟೇ ದೇವೇಶೇ ವಿಶ್ವಂ ಪ್ರವ್ಯಥಿತಂ ಜಗತ್ ।
ಪರಸ್ಪರಭಯೋದ್ವಿಗ್ನಂ ಬಭೂವಾರ್ತಮರಾಜಕಮ್ ॥೨೭॥

ಬೃಹಸ್ಪತಿ– ದೇವೇಶನಾದ ನೀನು ಅದೃಶ್ಯನಾಗಿ ನಾಶವನ್ನು ಹೊಂದುತ್ತಿರಲು ಸಮಸ್ತ ಜಗತ್ತೇ ದುಃಖದಿಂದ ಕೂಡಿತು. ರಾಜರಿಲ್ಲದೆ ಪರಸ್ಪರ ಭಯದಿಂದ ವಿಹ್ವಲರಾಗಿ ಎಲ್ಲರೂ ಆರ್ತರಾದರು.

ತತೋ ದೇವೈಃ ಸಗಂಧರ್ವೈಃ ಸರ್ಷಿಸಂಘೈಃ ಸಪಾವಕೈಃ ।
ಮಾನುಷೋ ನಹುಷೋ ರಾಜಾ ದೇವರಾಜ್ಯೇऽಭಿಷೇಚಿತಃ ॥೨೮॥

ಆಗ ದೇವತೆಗಳೂ, ಗಂಧರ್ವರೂ, ಋಷಿಗಣಗಳೂ ಮತ್ತು ಅಗ್ನಿಗಳು ಎಲ್ಲರೂ ಸೇರಿ ಮನುಷ್ಯನಾದ ನಹುಷನನ್ನು (ನಹುಷನಿಗೆ) ದೇವರಾಜ್ಯದಲ್ಲಿ ಅಭಿಷೇಕ ಮಾಡಿದರು.

ತತೋ ಭೀತಾಃ ಶಕ್ರಮಕಾಮಯಂತ
ತ್ವಯಾ ತ್ಯಕ್ತಂ ಮಹದೈಂದ್ರಂ ಪದಂ ತತ್ ॥೨೯॥

ಅನಂತರ ಅವನಿಗೆ ಹೆದರಿ ಎಲ್ಲರೂ ಶಚೀಪತಿಯಾದ ನಿನ್ನನ್ನು ಬಯಸಿದರು. ನೀನಾದರೂ ಆ ಶ್ರೇಷ್ಠವಾದ ಇಂದ್ರ ಪದವಿಯನ್ನು ಮೊದಲೇ ತೊರೆದಿದ್ದೀಯೆ.

ತದಾ ದೇವಾಃ ಪಿತರೋऽಥರ್ಷಯಶ್ಚ
ಗಂಧರ್ವಮುಖ್ಯಾಶ್ಚ ಸಮೇತ್ಯ ಸರ್ವೇ ।
ಗತ್ವಾऽಬ್ರುವನ್ ನಹುಷಂ ಶಕ್ರ ತತ್ರ
ತ್ವಂ ನೋ ರಾಜಾ ಭುವನಸ್ಯ ಗೋಪ್ತಾ ॥೩೦॥

ಆಗ ದೇವತೆಗಳು, ಪಿತೃಗಳು, ಋಷಿಗಳು ಗಂಧರ್ವರಲ್ಲಿ ಪ್ರಧಾನರಾದವರು ಎಲ್ಲರೂ ಸೇರಿ ನಹುಷನ ಬಳಿಗೆ ಹೋಗಿ ನೀನು ನಮಗೆ ರಾಜನಾಗಿ ಲೋಕವನ್ನು ರಕ್ಷಿಸಬೇಕು ಎಂದು ಕೇಳಿದರು.

ತಾನಬ್ರವೀನ್ನಹುಷೋ ನಾಸ್ಮಿ ಶಕ್ತ
ಆಪ್ಯಾಯಧ್ವಂ ತಪಸಾ ತೇಜಸಾ ಮಾಮ್ ॥೩೧॥

ಅವರನ್ನು ಕುರಿತು ನಹುಷನು ನನಗೆ ನಿಮ್ಮ ರಾಜ್ಯವನ್ನು ನಡೆಸುವಷ್ಟು ಶಕ್ತಿ ಇಲ್ಲ. ನಿಮ್ಮ ತಪಸ್ಸಿನಿಂದಲೂ ಮತ್ತು ತೇಜಸ್ಸಿನಿಂದಲೂ ನನ್ನ ಬಲವನ್ನು ಅಭಿವೃದ್ಧಿಗೊಳಿಸಿ ಎಂದು ಹೇಳಿದನು.

ಏವಂಚೋಕ್ತೈರ್ವರ್ಧಿತಶ್ಚಾಪಿ ದೇವೈ
ರಾಜಾऽಭವನ್ನಹುಷೋ ಘೋರವೀರ್ಯಃ ।
ತ್ರೈಲೋಕ್ಯೇ ಚ ಪ್ರಾಪ್ಯ ರಾಜ್ಯಂ ಮಹರ್ಷೀನ್
ಕೃತ್ವಾ ವಾಹಾನ್ ಯಾತಿ ಲೋಕಾನ್ ದುರಾತ್ಮಾ ॥೩೨॥

ಹೀಗೆ ಹೇಳಲ್ಪಟ್ಟ ದೇವತೆಗಳು ಅವನನ್ನು ಅಭಿವೃದ್ಧಿಗೊಳಿಸಿದರು. ಆಗ ನಹುಷನು ಭಯಂಕರವಾದ ಪರಾಕ್ರಮವುಳ್ಳ ರಾಜನಾದನು. ದುರಾತ್ಮನಾದ ಅವನು ಮೂರುಲೋಕಗಳ ಆಧಿಪತ್ಯವನ್ನು ಪಡೆದು, ಮಹರ್ಷಿಗಳನ್ನು ತನ್ನ ವಾಹನವನ್ನು ಹೊರುವವರನ್ನಾಗಿ ಮಾಡಿಕೊಂಡು ಈಗ ಲೋಕಗಳಿಗೆ ಹೋಗುತ್ತಿದ್ದಾನೆ.

ತೇಜೋಹರಂ ದೃಷ್ಟಿವಿಷಂ ಸುಘೋರಂ
ಮಾ ತ್ವಂ ಪಶ್ಯೇರ್ನಹುಷಂ ವೈ ಕದಾಚಿತ್ ।
ದೇವಾಶ್ಚ ಸರ್ವೇ ನಹುಷಂ ಭೃಶಾರ್ತಾ
ನ ಪಶ್ಯಂತೇ ಗೂಢರೂಪಾಶ್ಚರಂತಃ ॥೩೩॥

ಎದುರಿಗೆ ಬಂದವರ ತೇಜಸ್ಸನ್ನು ಅಪಹರಿಸುವವನೂ, ತನ್ನ ಕಣ್ಣಿನ ದೃಷ್ಟಿಯಲ್ಲಿಯೇ ವಿಷವನ್ನುಳ್ಳವನೂ, ಅತ್ಯಂತ ಘೋರನೂ ಆದ ಆ ನಹುಷನನ್ನು ನೀನು ಎಂದೂ ನೋಡಬೇಡ. ದೇವತೆಗಳೆಲ್ಲರೂ ಬಹಳ ದುಃಖಿತರಾಗಿ ಗೂಢರೂಪವನ್ನು ಧರಿಸಿ ಸಂಚರಿಸುತ್ತಾ ನಹುಷನನ್ನು ನೋಡುವುದಿಲ್ಲ.

ಏವಂ ವದತ್ಯಂಗಿರಸಾಂ ವರಿಷ್ಠೇ
ಬೃಹಸ್ಪತೌ ಲೋಕಪಾಲಃ ಕುಬೇರಃ ।
ವೈವಸ್ವತಶ್ಚೈವ ಯಮಃ ಪುರಾಣೋ
ದೇವಾಶ್ಚ ಸೋಮೋ ವರುಣಶ್ಚಾಜಗಾಮ ॥೩೪॥

ಅಂಗಿರಸ ಕುಲೋತ್ಪನ್ನರಾದ ಶ್ರೇಷ್ಠರಾದ ಬೃಹಸ್ಪತಿಗಳು ಹೀಗೆ ಹೇಳುತ್ತಿರಲು ಲೋಕಪಾಲಕನಾದ ಕುಬೇರನು, ವಿವಸ್ವಾನ್ ಸೂರ್ಯನ ಮಗನಾದ ಯಮನೂ, ಪ್ರಾಚೀನದೇವತೆಯರಾದ ಸೋಮ-ವರುಣರೂ ಅಲ್ಲಿಗೆ ಬಂದರು.

ತೇ ವೈ ಸಮಾಗಮ್ಯ ಮಹೇಂದ್ರಮೂಚುಃ
ದಿಷ್ಟ್ಯಾ ತ್ವಾಷ್ಟ್ರೋ ನಿಹತಶ್ಚೈವ ವೃತ್ರಃ ।
ದಿಷ್ಟ್ಯಾ ತ್ವಾಂ ಕುಶಲಿನಮಕ್ಷತಂ ಚ
ಪಶ್ಯಾಮೋ ವೈ ನಿಹತಾರಿಂ ಚ ಶಕ್ರ ॥೩೫॥

ಅವರು ಮಹೇಂದ್ರನನ್ನು ಸಮೀಪಿಸಿ ಶಕ್ರನೇ, ದೇವರ ದಯದಿಂದ ತ್ವಷ್ಟೃವಿನ ಪುತ್ರನಾದ ವೃತ್ರನು ಹತನಾದನು. ದೇವರ ದಯದಿಂದಲೇ ಶತ್ರುವನ್ನು ಸಂಹರಿಸಿ ವ್ರಣವಿಲ್ಲದೆ ಕ್ಷೇಮದಿಂದಿರುವ ನಿನ್ನನ್ನು ನೋಡುತ್ತಿದ್ದೇವೆ ಎಂದು ಹೇಳಿದರು.

ಸ ತಾನ್ ಯಥಾವಚ್ಚ ಹಿ ಲೋಕಪಾಲಾನ್
ಸಮೇತ್ಯ ವೈ ಪ್ರೀತಮನಾ ಮಹೇಂದ್ರಃ ।
ಉವಾಚ ಚೈತಾನ್ ಪ್ರತಿಭಾಷ್ಯ ಶಕ್ರಃ
ಸಂಚೋದಯಿಷ್ಯನ್ ನಹುಷಸ್ಯಾಂತರೇಣ ॥೩೬॥

ಆ ಇಂದ್ರನು ಲೋಕಪಾಲಕರ ಜೊತೆಯಲ್ಲಿ ಯಥಾಯೋಗ್ಯವಾಗಿ ಮಿಳಿತನಾಗಿ ಮನಸ್ಸಿನಲ್ಲಿ ಸಂತೋಷಗೊಂಡು ನಹುಷನ ವಿಷಯದಲ್ಲಿ ಅವರನ್ನು ಪ್ರೇರೇಪಿಸುವವನಾಗಿ ಅವರನ್ನು ಉದ್ದೇಶಿಸಿ ಮಾತನಾಡಿದನು.

ರಾಜಾ ದೇವಾನಾಂ ನಹುಷೋ ಘೋರರೂಪಃ
ತತ್ರ ಸಾಹ್ಯಂ ದೀಯತಾಂ ಮೇ ಭವದ್ಭಿಃ ॥೩೭॥

ದೇವತೆಗಳ ರಾಜನಾದ ನಹುಷನು ಘೋರರೂಪವನ್ನು ಉಳ್ಳವನಾಗಿದ್ದಾನೆ. ಅವನನ್ನು ಸೋಲಿಸುವ ವಿಷಯದಲ್ಲಿ ನೀವು ನನಗೆ ಸಹಾಯವನ್ನು ಮಾಡಬೇಕು.

ಶಲ್ಯಃ

ತೇ ಚಾಬ್ರುವನ್ ನಹುಷೋ ಘೋರರೂಪೋ
ದೃಷ್ಟೀವಿಷಸ್ತಸ್ಯ ಬಿಭೀಮ ಶಕ್ರ ।
ತ್ವಂ ಚೇದ್ ರಾಜಾ ನಹುಷಂ ಪರಾಜಯೇಃ
ತತೋ ವಯಂ ಭಾಗಮರ್ಹಾಮ ಶಕ್ರ ॥೩೮॥

ಶಲ್ಯ– ಅವರು ಎಲೈ ಶಕ್ರನೇ, ನಹುಷನು ಘೋರರೂಪವುಳ್ಳವನೂ, ದೃಷ್ಟಿಯಲ್ಲೇ ವಿಷವುಳ್ಳವನೂ ಆಗಿದ್ದಾನೆ. ನಾವು ಅವನಿಗೆ ಹೆದರುತ್ತೇವೆ. ರಾಜನಾದ ನೀನು ನಹುಷನನ್ನು ಸೋಲಿಸುವುದಾದರೆ ಆಗ ನಾವೆಲ್ಲರೂ ನಮ್ಮ ಯಜ್ಞಭಾಗಗಳನ್ನು ಪಡೆಯುತ್ತೇವೆ ಎಂದು ಹೇಳಿದರು.

ಇಂದ್ರೋಽಬ್ರವೀತ್ ಭವತು ಭವಾನಪಾಂಪತಿಃ
ಯಮಃ ಕುಬೇರಶ್ಚ ಮಯಾಽಭಿಷೇಕಮ್ ।
ಸಂಪ್ರಾಪ್ನುವಂತ್ವದ್ಯ ಸಹೈವ ತೇ ರಿಪುಂ
ಜಯಾಮ ತಂ ನಹುಷಂ ಘೋರದೃಷ್ಟಿಮ್ ॥೩೯॥

ಇಂದ್ರನು ಅವರನ್ನು ಕುರಿತು ಹೀಗೆ ಮಾತನಾಡಿದನು. ವರುಣನಾದ ನೀನು ಜಲಕ್ಕೆ ಒಡೆಯನಾಗು. ಯಮ ಮತ್ತು ಕುಬೇರರು ತಮ್ಮ ತಮ್ಮ ವಿಷಯಗಳಲ್ಲಿ ನನ್ನಿಂದ ಅಭಿಷೇಕವನ್ನು ಹೊಂದಲಿ. ಈ ದಿನ ನಾವೆಲ್ಲರೂ ಒಟ್ಟಿಗೆ ಸೇರಿ ಘೋರದೃಷ್ಟಿಯುಳ್ಳ ಶತ್ರುವಾದ ನಹುಷನನ್ನು ಜಯಿಸೋಣ.

ತತ್ರ ಶಕ್ರಂ ಜ್ವಲನೋಽಪ್ಯಾಹ ಭಾಗಂ
ಪ್ರಯಚ್ಛ ಮಹ್ಯಂ ತವ ಸಾಹ್ಯಂ ಕರಿಷ್ಯೇ ॥೪೦॥

ಆಗ ಅಗ್ನಿಯು ಇಂದ್ರನನ್ನು ಕುರಿತು ನನಗೂ ಭಾಗವನ್ನು ಕೊಡು. ಆಗ ನಿನಗೆ ಸಹಾಯವನ್ನು ಮಾಡುವೆನು ಎಂದು ಹೇಳಿದನು.

ತಮಾಹ ಶಕ್ರೋ ಭವಿತಾಽಗ್ನೇ ತವಾಪಿ
ಚೇಂದ್ರಾಗ್ನ್ಯೋರ್ವೈ ಭಾಗ ಏಕೋ ಮಹಾಕ್ರತೌ ॥೪೧॥

ಶಕ್ರನು ಅವನನ್ನು ಕುರಿತು ಅಗ್ನಿಯೇ, ನಿನಗೂ ಸಹ ಮಹಾಕ್ರತುವಿನಲ್ಲಿ ಇಂದ್ರಾಗ್ನಿ ರೂಪ ದೇವತಾ ದ್ವಂದ್ವದಲ್ಲಿ ಒಂದು ಭಾಗವು ದೊರೆಯುತ್ತದೆ ಎಂದು ಹೇಳಿದನು.

ಏವಂ ಸಂಚಿಂತ್ಯ ಭಗವಾನ್ ಮಹೇಂದ್ರಃ ಪಾಕಶಾಸನಃ ।
ಕುಬೇರಂ ಸರ್ವಯಕ್ಷಾಣಾಂ ಧನಾನಾಂ ಚ ಪ್ರಭುಂ ತದಾ ॥೪೨॥

ವೈವಸ್ವತಂ ಪಿತೃಣಾಂ ಚ ವರುಣಂ ಚಾಪ್ಯಪಾಂ ತಥಾ ।
ಅಧಿಪತ್ಯಂ ದದೌ ಶಕ್ರಃ ಸತ್ಕೃತ್ಯ ವರದಸ್ತಥಾ ॥೪೩॥

ಹೀಗೆ ಚಿಂತಿಸಿ ಪೂಜ್ಯನೂ, ಪಾಕಶಾಸನನೂ ಆದ ಮಹೇಂದ್ರನು ಕುಬೇರನನ್ನು ಎಲ್ಲ ಯಕ್ಷರಿಗೂ ಮತ್ತು ಧನಕ್ಕೂ ಪತಿಯನ್ನಾಗಿ ಮಾಡಿದನು. ವೈವಸ್ವತನನ್ನು (ಯಮನನ್ನು) ಪಿತೃಗಳಿಗೆ ಅಧಿಪತಿಯನ್ನಾಗಿಯೂ, ವರುಣನನ್ನು ಜಲಕ್ಕೆ ಅಧಿಪತಿಯನ್ನಾಗಿ ಮಾಡಿ, ವರದನಾದ ಇಂದ್ರನು ಅವರನ್ನು ಸತ್ಕರಿಸಿ ಆಧಿಪತ್ಯವನ್ನು ನೀಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಉದ್ಯೋಗಪರ್ವಣಿ ಷೋಡಶೋऽಧ್ಯಾಯಃ ॥

॥ ಸೇನೋದ್ಯೋಗಪರ್ವಣಿ ಷೋಡಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಹದಿನಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

## ಹದಿನೇಳನೆಯ ಅಧ್ಯಾಯ

ಅಗಸ್ತ್ಯಶಾಪದಿಂದ ಸ್ವರ್ಗದಿಂದ ನಹುಷನ ಪತನ

**ಶಲ್ಯಃ**

**ಅಥ ಸಂಚಿಂತಯಾನಸ್ಯ ದೇವರಾಜಸ್ಯ ಧೀಮತಃ ।**
**ನಹುಷಸ್ಯ ವಧೋಪಾಯಂ ಲೋಕಪಾಲೈಃ ಸದೈವತೈಃ** ॥೧॥

**ತಪಸ್ವೀ ತತ್ರ ಭಗವಾನ್ ಅಗಸ್ತ್ಯಃ ಪ್ರತ್ಯದೃಶ್ಯತ** ॥೨॥

ಶಲ್ಯ– ಅನಂತರ ಮೇಧಾವಿಯಾದ ದೇವರಾಜನಾದ ಇಂದ್ರನು ಲೋಕಪಾಲಕರ ಮತ್ತು ದೇವತೆಗಳ ಜೊತೆಯಲ್ಲಿ ನಹುಷನ ವಧೋಪಾಯವನ್ನು ಕುರಿತು ಚಿಂತಿಸುತ್ತಿರುವಂತೆಯೇ ತಪಸ್ವಿಗಳಾದ ಪೂಜ್ಯರಾದ ಅಗಸ್ತ್ಯರು ಅಲ್ಲಿ ಕಾಣಿಸಿಕೊಂಡರು.

**ಸೋऽಬ್ರವೀದರ್ಚ್ಯ ದೇವೇಂದ್ರಂ ದಿಷ್ಟ್ಯಾ ವೈ ವರ್ಧತೇ ಭವಾನ್ ।**
**ವಿಶ್ವರೂಪವಿನಾಶೇನ ವೃತ್ರಾಸುರವಧೇನ ಚ** ॥೩॥

ಅವರು ದೇವೇಂದ್ರನನ್ನು ಅರ್ಚಿಸಿ, ಅವನನ್ನು ಕುರಿತು ವಿಶ್ವರೂಪವಿನಾಶದಿಂದ ಮತ್ತು ವೃತ್ರಾಸುರ ವಧೆಯಿಂದ (ವಧೆಗಳನ್ನು ಮಾಡಿ), ದೇವರ ದಯದಿಂದ ನೀನು ಅಭಿವೃದ್ಧಿಯನ್ನು ಹೊಂದಿದ್ದೀಯೆ.

ದಿಷ್ಟ್ಯಾ ಧರ್ಮಃ ಸ್ಥಿತೋ ಲೋಕೇ ದಿಷ್ಟ್ಯಾ ಲೋಕಾಃ ಪ್ರತಿಷ್ಠಿತಾಃ ।
ದಿಷ್ಟ್ಯಾ ಪಶ್ಯಾಮಿ ದೇವೇಂದ್ರಂ ದಿಷ್ಟ್ಯಾ ಲೋಕಾನ್ ಪುನರ್ನವಾನ್ ॥

ದೇವರ ದಯದಿಂದ ಲೋಕದಲ್ಲಿ ಧರ್ಮವು ಪುನಃ ಸ್ಥಿತವಾಗಿದೆ. ಲೋಕಗಳು ಪ್ರತಿಷ್ಠೆಯನ್ನು ಹೊಂದಿವೆ. ದೇವರದಯದಿಂದಲೇ ದೇವೇಂದ್ರನಾದ ನಿನ್ನನ್ನು ಮತ್ತು ಪುನಃ ಹೊಸದಾಗಿ ಕಾಣುವ ಲೋಕಗಳನ್ನು ನೋಡುತ್ತಿದ್ದೇನೆ.

ದಿಷ್ಟ್ಯಾऽದ್ಯ ನಹುಷೋ ಭ್ರಷ್ಟೋ ದೇವರಾಜ್ಯಾತ್ ಪುರಂದರ ।
ದಿಷ್ಟ್ಯಾ ಭವಂತಂ ಪಶ್ಯಾಮೋ ಹತಾರಿಂ ಬಲಸೂದನ ॥೫॥

ಪುರಂದರನೇ, ದೇವರ ದಯದಿಂದ ಈ ದಿನ ನಹುಷನು ದೇವರಾಜ್ಯದಿಂದ ಭ್ರಷ್ಟನಾಗಿದ್ದಾನೆ. ಬಲಸೂದನನೇ, ದೇವರ ದಯದಿಂದಲೇ ಈ ದಿನ ಶತ್ರುವಿನಾಶವನ್ನು ಹೊಂದಿರುವ ನಿನ್ನನ್ನು ನೋಡುತ್ತಿದ್ದೇವೆ.

ಇಂದ್ರಃ

ಸ್ವಾಗತಂ ತೇ ಮಹರ್ಷೇऽಸ್ತು ಪ್ರೀತೋऽಹಂ ದರ್ಶನಾತ್ ತವ ।
ಪಾದ್ಯಮಾಚಮನೀಯಂ ಚ ಗಾಮರ್ಘ್ಯಂ ಚ ಪ್ರತೀಚ್ಛ ಮೇ ॥೬॥

ಇಂದ್ರ– ಮಹರ್ಷಿಗಳೇ, ನಿಮಗೆ ಸ್ವಾಗತ. ನಿಮ್ಮ ದರ್ಶನದಿಂದ ನಾನು ಸಂತೋಷಗೊಂಡಿದ್ದೇನೆ. ಪಾದ್ಯ, ಆಚಮನೀಯ, ಅರ್ಘ್ಯ ಮತ್ತು ಗೋವನ್ನು ನನ್ನಿಂದ ಸ್ವೀಕರಿಸಿ.

ಶಲ್ಯಃ

ಪೂಜಿತಂ ಚೋಪವಿಷ್ಟಂ ತಮಾಸನೇ ಮುನಿಸತ್ತಮಮ್ ।
ಪರ್ಯಪೃಚ್ಛತ ದೇವೇಶಃ ಪ್ರಹೃಷ್ಟೋ ಬ್ರಾಹ್ಮಣರ್ಷಭಮ್ ॥೭॥

ಏತದಿಚ್ಛಾಮಿ ಭಗವನ್ ಕಥ್ಯಮಾನಂ ದ್ವಿಜೋತ್ತಮ ।
ಪರಿಭ್ರಷ್ಟಃ ಕಥಂ ಸ್ವರ್ಗಾನ್ನಹುಷಃ ಪಾಪನಿಶ್ಚಯಃ ॥೮॥

ಶಲ್ಯ– ಪೂಜಿತರಾಗಿ ಆಸನದಲ್ಲಿ ಕುಳಿತ ಮುನಿಶ್ರೇಷ್ಠರೂ, ಬ್ರಾಹ್ಮಣಶ್ರೇಷ್ಠರೂ ಆದ ಅಗಸ್ತ್ಯರನ್ನು ಕುರಿತು ಸಂತೋಷಗೊಂಡ ದೇವೇಂದ್ರನು ಪೂಜ್ಯರೇ, ದ್ವಿಜಶ್ರೇಷ್ಠರೇ,

ಪಾಪನಿಶ್ಚಯವುಳ್ಳ ನಹುಷನು ಸ್ವರ್ಗದಿಂದ ಹೇಗೆ ಭ್ರಷ್ಟನಾದನು ಎಂದು ನಿಮ್ಮಿಂದ ತಿಳಿಯಲು ನಾನು ಬಯಸುತ್ತೇನೆ ಎಂದು ಕೇಳಿದನು.

**ಅಗಸ್ತ್ಯಃ**

**ಶೃಣು ಶಕ್ರ ಪ್ರಿಯಂ ವಾಕ್ಯಂ ಯಥಾ ರಾಜಾ ದುರಾತ್ಮವಾನ್ ।**
**ಸ್ವರ್ಗಾದ್ ಭ್ರಷ್ಟೋ ದುರಾಚಾರೋ ನಹುಷೋ ಬಲವತ್ತರಃ ॥೯॥**

ಅಗಸ್ತ್ಯ– ಶಕ್ರನೇ, ದುರಾತ್ಮನಾದ ಬಲಿಷ್ಠನಾದ ದುರಾಚಾರಿಯಾದ ನಹುಷನು ಹೇಗೆ ಸ್ವರ್ಗದಿಂದ ಭ್ರಷ್ಟನಾದನೆಂದು ನಾನು ಹೇಳುವ ಪ್ರಿಯವಾಕ್ಯವನ್ನು ಕೇಳು.

**ಶ್ರಮಾರ್ತಾಶ್ಚ ವಹಂತಸ್ತಂ ನಹುಷಂ ಪಾಪಕಾರಿಣಮ್ ।**
**ದೇವರ್ಷಯೋ ಮಹಾಭಾಗಾಸ್ತಥಾ ಬ್ರಹ್ಮರ್ಷಯೋऽಮಲಾಃ ॥೧೦॥**

**ಪಪ್ರಚ್ಛುರ್ನಹುಷಂ ದೇವ ಸಂಶಯಂ ಜಯತಾಂ ವರಮ್ ॥೧೧॥**

ಶಮದಿಂದ ಬಳಲಿ, ಪಾಪಕಾರಿಯಾದ ನಹುಷನನ್ನು ಹೊರುತ್ತಾ, ಮಹಾನುಭಾವರೂ, ಪರಿಶುದ್ಧರೂ ಆದ ದೇವರ್ಷಿಗಳು ಮತ್ತು ಬ್ರಹ್ಮರ್ಷಿಗಳು ಜಯಿಸುವವರಲ್ಲಿ ಶ್ರೇಷ್ಠನಾದ ನಹುಷನನ್ನು ಕುರಿತು ಒಂದು ಪ್ರಶ್ನೆಯನ್ನು ಕೇಳಿದರು.

**ಯ ಇಮೇ ಬ್ರಹ್ಮಣಾ ಪ್ರೋಕ್ತಾ ಮಂತ್ರಾ ವೈ ಪ್ರೋಕ್ಷಣೇ ಗವಾಮ್ ।**
**ಏತೇ ಪ್ರಮಾಣಂ ಭವತ ಉತಾಹೋ ನೇತಿ ವಾಸವ ॥೧೨॥**

**ನಹುಷೋ ನೇತಿ ತಾನಾಹ ತಮಸಾ ಮೂಢಚೇತನಃ ॥೧೩॥**

ಎಲೈ ಇಂದ್ರನೇ, ಬ್ರಹ್ಮದೇವರು ಪರಿಶುದ್ಧವಾದ ಜ್ಞಾನವನ್ನು ಪಡೆಯಲು ಹೇಳಿದ ಈ ವೇದಮಂತ್ರಗಳು ನಿನಗೆ ಪ್ರಮಾಣವೇ ಅಥವಾ ಅಲ್ಲವೇ? (ಎಂಬುದು ಆ ಪ್ರಶ್ನೆಯಾಗಿದ್ದಿತು). ಮೂಢಚೇತನನಾದ ನಹುಷನು ಅಜ್ಞಾನಕ್ಕೆ ಒಳಗಾಗಿ ಅವರನ್ನು ಕುರಿತು ಪ್ರಮಾಣವಲ್ಲ ಎಂದು ಹೇಳಿದನು.

**ಋಷಯಃ**

**ಅಧರ್ಮೇ ಸಂಪ್ರವೃತ್ತಸ್ತ್ವಂ ಧರ್ಮಂ ನ ಪ್ರತಿಪದ್ಯಸೇ ।**
**ಪ್ರಮಾಣಮೇತದಸ್ಮಾಕಂ ಸರ್ವಂ ಪ್ರೋಕ್ತಂ ಮಹರ್ಷಿಭಿಃ ॥೧೪॥**

ಋಷಿಗಳು– ಅಧರ್ಮದಲ್ಲಿ ಪ್ರವೃತ್ತನಾದ ನೀನು ಧರ್ಮವನ್ನು ತಿಳಿಯುತ್ತಿಲ್ಲ. ಪುರಾತನ ಮಹರ್ಷಿಗಳು ಹೇಳಿದ ಈ ಮಂತ್ರಗಳೆಲ್ಲವೂ ನಮಗೆ ಪ್ರಮಾಣ.

ಅಗಸ್ತ್ಯಃ

ತತೋ ವಿವದಮಾನಃ ಸ ಮುನಿಭಿಃ ಸಹ ವಾಸವ ।
ಅಥ ಮಾಮಸ್ಪೃಶನ್ ಮೂರ್ಧ್ನಿ ಪಾದೇನಾಧರ್ಮಪೀಡಿತಃ ॥೧೫॥

ಅಗಸ್ತ್ಯ– ಎಲೈ ಇಂದ್ರನೇ, ಆಗ ಅವನು ಆ ಋಷಿಗಳ ಜೊತೆಯಲ್ಲಿ ವಿವಾದವನ್ನು ಮಾಡುತ್ತಾ ಅಧರ್ಮಪೀಡಿತನಾಗಿ ನನ್ನ ಶಿರಸ್ಸನ್ನು ತನ್ನ ಪಾದದಿಂದ ಒದ್ದನು.

ತೇನಾಭೂದ್ ಹತತೇಜಾಶ್ಚ ನಿಃಶ್ರೀಕಶ್ಚ ಶಚೀಪತೇ ।
ತತಸ್ತಮಹಮಾವಿಗ್ನಮವೋಚಂ ಭಯಪೀಡಿತಮ್ ॥೧೬॥

ಶಚೀಪತಿಯೇ, ಅದರಿಂದ ಅವನು ತನ್ನ ತೇಜಸ್ಸನ್ನೂ ಮತ್ತು ಸಂಪತ್ತನ್ನೂ ಕಳೆದುಕೊಂಡನು. ಆಗ ಗಾಬರಿಗೊಳಗಾಗಿ ಭಯಪೀಡಿತನಾದ ಅವನಿಗೆ ನಾನು ಈ ರೀತಿ ಹೇಳಿದೆನು.

ಯಸ್ಮಾತ್ ಪೂರ್ವೈಃ ಕೃತಂ ಮಾರ್ಗಂ ಬ್ರಹ್ಮರ್ಷಿಭಿರನುಷ್ಠಿತಮ್ ।
ಅದುಷ್ಟಂ ದೂಷಯಸಿ ವೈ ಯನ್ಮೇ ಮೂರ್ಧ್ನ್ಯಸ್ಪೃಶಃ ಪದಾ ॥೧೭॥

ಯಚ್ಚಾಪಿ ತ್ವಮೃಷೀನ್ ಮೂಢ ಬ್ರಹ್ಮಕಲ್ಪಾನ್ ದುರಾಸದಾನ್ ।
ವಾಹಾನ್ ಕೃತ್ವಾ ವಾಹಯಸಿ ತೇನ ಸ್ವರ್ಗಾದ್ ಹತಪ್ರಭಃ ॥೧೮॥

ಧ್ವಂಸ ಪಾಪ ಪರಿಭ್ರಷ್ಟಃ ಕ್ಷೀಣಪುಣ್ಯೋ ಮಹೀತಳೇ ॥೧೯॥

ಯಾವ ಕಾರಣದಿಂದ ಪ್ರಾಚೀನ ಬ್ರಹ್ಮರ್ಷಿಗಳಿಂದ ದೃಷ್ಟವಾದ ಪರಿಶುದ್ಧವಾದ ಮಾರ್ಗವನ್ನು ದೂಷಿಸುತ್ತಿದ್ದೀಯೋ, ಯಾವ ಕಾರಣದಿಂದ ನನ್ನ ಶಿರಸ್ಸನ್ನು ಪಾದದಿಂದ ಒದ್ದಿದ್ದೀಯೋ ಮತ್ತು ಯಾವ ಕಾರಣದಿಂದ ಎಲೈ ಮೂಢನೇ, ಬ್ರಹ್ಮಸಮಾನರಾದ ಸ್ಪರ್ಶಮಾಡಲೂ ಸಾಧ್ಯವಿಲ್ಲದ ಋಷಿಗಳನ್ನು ನೀನು ವಾಹನವನ್ನಾಗಿ ಮಾಡಿಕೊಂಡು ನಿನ್ನನ್ನು ಹೊರಿಸುತ್ತಿದ್ದೀಯೋ ಆ ಕಾರಣದಿಂದ ಎಲೈ ಪಾಪನೇ, ನಿನ್ನ ಕಾಂತಿಯನ್ನು ಕಳೆದುಕೊಂಡು, ಪುಣ್ಯವನ್ನೂ ಕಳೆದುಕೊಂಡು ಸ್ವರ್ಗಲೋಕದಿಂದ ಭೂತಳದಲ್ಲಿ ಬೀಳು.

ದಶವರ್ಷಸಹಸ್ರಾಣಿ ಸರ್ಪರೂಪಧರೋ ಮಹಾನ್ ।
ವಿಚರಿಷ್ಯಸಿ ಪೂರ್ಣೇಷು ಪುನಃ ಸ್ವರ್ಗಮವಾಪ್ಸ್ಯಸಿ ॥೨೦॥

ಹತ್ತುಸಹಸ್ರವರ್ಷಗಳ ಕಾಲ ದೊಡ್ಡ ಸರ್ಪರೂಪವನ್ನು ಧರಿಸಿ ಸಂಚರಿಸುವಿ. ಸರ್ಪಶರೀರದಲ್ಲಿ ಹತ್ತುಸಾವಿರ ವರ್ಷಗಳನ್ನು ಕಳೆದಮೇಲೆ ಪುನಃ ಸ್ವರ್ಗವನ್ನು ಹೊಂದುವಿ.

ದೃಷ್ಟ್ವಾ ಯುಧಿಷ್ಠಿರಂ ನಾಮ ತವ ವಂಶಸಮುದ್ಭವಮ್ ।
ನಿಹತೋ ಬ್ರಹ್ಮಶಾಪೇನ ಪ್ರಪದ್ಯಸ್ವ ತ್ರಿವಿಷ್ಟಪಮ್ ॥೨೧॥

ಬ್ರಾಹ್ಮಣ ಶಾಪಕ್ಕೆ ನಿನ್ನ ವಂಶದಲ್ಲಿ ಹುಟ್ಟಿದ ಯುಧಿಷ್ಠಿರನೆಂಬ ರಾಜನನ್ನು ನೋಡಿ ಒಳಗಾದ ನೀನು ಪುನಃ ಸ್ವರ್ಗವನ್ನು ಹೊಂದುವವನಾಗು.

ಏವಂ ಭ್ರಷ್ಟೋ ದುರಾತ್ಮಾ ಸ ದೇವರಾಜ್ಯಾದರಿಂದಮ ।
ದಿಷ್ಟ್ಯಾ ವರ್ಧಾಮಹೇ ಶಕ್ರ ಹತೋ ಬ್ರಹ್ಮರ್ಷಿಕಂಟಕಃ ॥೨೨॥

ಅರಿಂದಮನೇ, ದುರಾತ್ಮನಾದ ಆ ನಹುಷನು ದೇವರಾಜ್ಯದಿಂದ ಹೀಗೆ ಭ್ರಷ್ಟನಾದನು. ಶಕ್ರನೇ, ಬ್ರಹ್ಮರ್ಷಿಗಳಿಗೆ ಕಂಟಕನಾದ ಅವನು ಶಾಪದಿಂದ ಹತನಾಗಿದ್ದಾನೆ. ನಾವೆಲ್ಲರೂ ದೇವರ ದಯದಿಂದ ಅಭಿವೃದ್ಧಿಯನ್ನು ಹೊಂದುತ್ತಿದ್ದೇವೆ.

ತ್ರಿವಿಷ್ಟಪಂ ಪ್ರಪದ್ಯಸ್ವ ಪಾಹಿ ಲೋಕಾನ್ ಶಚೀಪತೇ ।
ಜಿತೇಂದ್ರಿಯೋ ಜಿತಾಮಿತ್ರಃ ಸ್ತೂಯಮಾನೋ ಮಹರ್ಷಿಭಿಃ ॥೨೩॥

ಶಚೀಪತಿಯೇ, ಸ್ವರ್ಗವನ್ನು ಸೇರಿ ಇಂದ್ರಿಯವಿಜಯವನ್ನು ಹೊಂದಿ, ಶತ್ರುವನ್ನು ಗೆಲ್ಲುವವನಾಗಿ, ಮಹರ್ಷಿಗಳಿಂದ ಸ್ತೋತ್ರ ಮಾಡಲ್ಪಟ್ಟು ಲೋಕಗಳನ್ನು ರಕ್ಷಿಸುವವನಾಗು (ಎಂದು ಹೇಳಿದೆನು).

ಶಲ್ಯಃ

ತತೋ ದೇವಾ ಭೃಶಂ ತುಷ್ಟಾ ಮಹರ್ಷಿಗಣಸಂವೃತಾಃ ।
ಪಿತರಶ್ಚೈವ ಯಕ್ಷಾಶ್ಚ ಭುಜಗಾ ರಾಕ್ಷಸಾಸ್ತಥಾ ॥೨೪॥

ಗಂಧರ್ವಾ ದೇವಕನ್ಯಾಶ್ಚ ಸರ್ವೇ ಚಾಪ್ಸರಸಾಂ ಗಣಾಃ ।
ಸರಾಂಸಿ ಸರಿತಃ ಶೈಲಾಃ ಸಾಗರಾಶ್ಚ ವಿಶಾಂಪತೇ ॥೨೫॥

ಉಪಗಮ್ಯಾಬ್ರುವನ್ ಸರ್ವೇ ದಿಷ್ಟ್ಯಾ ವರ್ಧಸಿ ಶತ್ರುಹನ್ ।
ಹತಶ್ಚ ನಹುಷಃ ಪಾಪೋ ದಿಷ್ಟ್ಯಾಽಗಸ್ತ್ಯೇನ ಧೀಮತಾ ॥೨೬॥

ದಿಷ್ಟ್ಯಾ ಪಾಪಸಮಾಚಾರಃ ಕೃತಃ ಸರ್ಪೋ ಮಹೀತಳೇ ॥೨೭॥

ಶಲ್ಯ– ಎಲೈ ರಾಜನೇ, ಅನಂತರ ಬಹಳ ಸಂತುಷ್ಟರಾದ ಮಹರ್ಷಿಗಣ ಸಹಿತರಾದ ದೇವತೆಗಳು, ಪಿತೃಗಳು, ಯಕ್ಷರು, ಸರ್ಪಗಳು, ರಾಕ್ಷಸರು, ಗಂಧರ್ವರು, ದೇವಕನ್ಯೆಯರು, ಅಪ್ಸರೆಯರ ಎಲ್ಲಾ ಗಣಗಳು, ಸರೋವರಗಳು, ನದಿಗಳು, ಪರ್ವತಗಳು ಇಂದ್ರನ ಸಮೀಪಕ್ಕೆ ಬಂದು ಶತ್ರುನಾಶಕನೇ, ದೇವರ ದಯದಿಂದ ನೀನು ಅಭಿವೃದ್ಧಿಯನ್ನು ಹೊಂದಿದ್ದೀಯೆ. ದೇವರ ದಯದಿಂದ ಮೇಧಾವಿಗಳಾದ ಅಗಸ್ತ್ಯರಿಂದ ಪಾಪಿಯಾದ ನಹುಷನು ಹತನಾಗಿದ್ದಾನೆ. ದೇವರ ದಯದಿಂದಲೇ ಪಾಪದ ಆಚಾರವುಳ್ಳ ಅವನು ಭೂಮಿಯಲ್ಲಿ ಸರ್ಪವಾಗಿ ಮಾಡಲ್ಪಟ್ಟಿದ್ದಾನೆ ಎಂದು ಹೇಳಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಸಪ್ತದಶೋಽಧ್ಯಾಯಃ ॥

॥ ಸೇನೋದ್ಯೋಗಪರ್ವಣಿ ಸಪ್ತದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಹದಿನೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

## ಹದಿನೆಂಟನೆಯ ಅಧ್ಯಾಯ

ಇಂದ್ರನ ಸ್ವರ್ಗಪ್ರಾಪ್ತಿ ಮತ್ತು ಶಲ್ಯನಿಂದ ದುರ್ಯೋಧನಪಕ್ಷಗಮನ.

**ಶಲ್ಯಃ**

ತತಃ ಶಕ್ರಃ ಸ್ತೂಯಮಾನೋ ಗಂಧರ್ವಾಪ್ಸರಸಾಂ ಗಣೈಃ ।
ಐರಾವತಂ ಸಮಾರುಹ್ಯ ದ್ವಿಪೇಂದ್ರಂ ಲಕ್ಷಣೈರ್ಯುತಮ್ ॥೧॥

ಪಾವಕಃ ಸುಮಹಾತೇಜಾ ಮಹರ್ಷಿಶ್ಚ ಬೃಹಸ್ಪತಿಃ ।
ಯಮಶ್ಚ ವರುಣಶ್ಚೈವ ಕುಬೇರಶ್ಚ ಧನೇಶ್ವರಃ ॥೨॥

ಸರ್ವೈರ್ದೇವೈಃ ಪರಿವೃತಃ ಶಕ್ರೋ ವೃತ್ರನಿಷೂದನಃ ।
ಗಂಧರ್ವೈರಪ್ಸರೋಭಿಶ್ಚ ಪ್ರಯಾತಸ್ತ್ರಿದಿವಂ ಪ್ರಭುಃ ॥೩॥

ಶಲ್ಯ– ಅನಂತರ ಇಂದ್ರನು ಗಂಧರ್ವರ ಮತ್ತು ಅಪ್ಸರೆಯರ ಗಣದಿಂದ ಸ್ತೋತ್ರ ಮಾಡಲ್ಪಟ್ಟು ಸಲ್ಲಕ್ಷಣಗಳಿಂದ ಕೂಡಿದ ಗಜಶ್ರೇಷ್ಠವಾದ ಐರಾವತವನ್ನೇರಿ ಹಾಗೆಯೇ ಮಹಾತೇಜಸ್ವಿಯಾದ ಅಗ್ನಿ, ಮಹರ್ಷಿಗಳಾದ ಬೃಹಸ್ಪತಿಗಳು, ಯಮ, ವರುಣ ಮತ್ತು ಧನಪತಿಯಾದ ಕುಬೇರ ಇವರಿಂದ ಸಹಿತನಾಗಿ ಸರ್ವದೇವತೆಗಳಿಂದಲೂ ಪರಿವೃತನಾಗಿ, ಗಂಧರ್ವರಿಂದಲೂ ಮತ್ತು ಅಪ್ಸರೆಯರಿಂದಲೂ ಪರಿವೃತನಾಗಿ ಪ್ರಭುವಾದ ವೃತ್ರಸಂಹಾರಕನಾದ ಇಂದ್ರನು ಸ್ವರ್ಗವನ್ನು ಸೇರಿದನು.

ಸ ಸಮೇತ್ಯ ಮಹೇಂದ್ರಾಣ್ಯಾ ದೇವರಾಜಃ ಶತಕ್ರತುಃ ।
ಮುದಾ ಪರಮಯಾ ಯುಕ್ತಃ ಪಾಲಯಾಮಾಸ ದೇವರಾಟ್ ॥೪॥

ಶತಕ್ರತುವೂ ದೇವರಾಜನೂ ಆದ ಅವನು ಶಚೀದೇವಿಯ ಜೊತೆಯಲ್ಲಿ ಸಮಾಗಮವನ್ನು ಹೊಂದಿ ಬಹಳ ಸಂತೋಷದಿಂದ ಕೂಡಿದವನಾಗಿ ಮೂರು ಲೋಕಗಳನ್ನೂ ಆಳಿದನು.

ತತಃ ಸ ಭಗವಾಂಸ್ತತ್ರ ಅಂಗಿರಾಃ ಸಮದೃಶ್ಯತ ।
ಅಥರ್ವವೇದಮಂತ್ರೈಶ್ಚ ದೇವೇಂದ್ರಂ ಸಮಪೂಜಯತ್ ॥೫॥

ಆಗ ಪೂಜ್ಯರಾದ ಅಂಗೀರಸ ಋಷಿಗಳು ಅಲ್ಲಿ ಕಾಣಿಸಿಕೊಂಡರು. ಅವರು ದೇವೇಂದ್ರನನ್ನು ಅಥರ್ವವೇದ ಮಂತ್ರಗಳಿಂದ ಪೂಜಿಸಿದರು.

ತತಸ್ತು ಭಗವಾನಿಂದ್ರಃ ಪ್ರಹೃಷ್ಟಃ ಸಮಪದ್ಯತ ।
ವರಂ ಚ ಪ್ರದದೌ ತಸ್ಮಾ ಅಥರ್ವಾಂಗಿರಸೇ ತದಾ ॥೬॥

ಆಗ ಪೂಜ್ಯನಾದ ಇಂದ್ರನು ಸಂತೋಷಗೊಂಡು ಆ ಅಥರ್ವಾಂಗಿರ ಋಷಿಗಳಿಗೆ ವರವನ್ನು ಕೊಟ್ಟನು.

ಇಂದ್ರಃ

ಅಥರ್ವಾಂಗಿರಸೋ ನಾಮ ವೇದೇಽಸ್ಮಿನ್ ವೈ ಭವಿಷ್ಯತಿ ।
ಉದಾಹರಣಮೇತದ್ಧಿ ಯಜ್ಞಭಾಗಂ ಚ ಲಪ್ಸ್ಯಸೇ ॥೭॥

ಇಂದ್ರ– ನೀವು ಹೇಳಿದ ಮಂತ್ರಗಳು ಅಥರ್ವಾಂಗಿರೋ ನಾಮದಿಂದ ವೇದದಲ್ಲಿ ಪ್ರಸಿದ್ಧವಾಗುತ್ತದೆ. ನೀವು ಯಜ್ಞಭಾಗವನ್ನೂ ಹೊಂದುವಿರಿ.

**ಶಲ್ಯಃ**

**ಏವಂ ಸಂಪೂಜ್ಯ ಭಗವಾನ್ ಅಥರ್ವಾಂಗಿರಸಂ ತಥಾ ।**
**ವ್ಯಸರ್ಜಯನ್ ಮಹಾರಾಜ ದೇವರಾಜಃ ಶತಕ್ರತುಃ ॥೮॥**

ಶಲ್ಯ– ಎಲೈ ಮಹಾರಾಜನೇ, ದೇವರಾಜನಾದ ಪೂಜ್ಯನಾದ ಶತಕ್ರತುವು ಅಥರ್ವಾಂಗಿರಸ ಋಷಿಗಳನ್ನು ಹೀಗೆ ಪೂಜಿಸಿ ಬೀಳ್ಕೊಟ್ಟನು.

**ಸಂಪೂಜ್ಯ ಸರ್ವಾನ್ ತ್ರಿದಶಾನ್ ಋಷೀಂಶ್ಚಾಪಿ ತಪೋಧನಾನ್ ।**
**ಇಂದ್ರಃ ಪ್ರಮುದಿತೋ ರಾಜನ್ ಧರ್ಮೇಣಾಪಾಲಯತ್ ಪ್ರಜಾಃ ॥೯॥**

ರಾಜನೇ, ಇಂದ್ರನು ಎಲ್ಲ ದೇವತೆಗಳನ್ನೂ ಮತ್ತು ತಪೋಧನರಾದ ಎಲ್ಲ ಋಷಿಗಳನ್ನೂ ಪೂಜಿಸಿ ಸಂತೋಷಗೊಂಡವನಾಗಿ ಧರ್ಮದಿಂದ ಪ್ರಜೆಗಳನ್ನು ಪಾಲಿಸಿದನು.

**ಏವಂ ದುಃಖಮನುಪ್ರಾಪ್ತಮಿಂದ್ರೇಣ ಸಹ ಭಾರ್ಯಯಾ ।**
**ಅಜ್ಞಾತವಾಸಶ್ಚ ಕೃತಃ ಶತ್ರೂಣಾಂ ವಧಕಾಂಕ್ಷಯಾ ॥೧೦॥**

ಹೀಗೆ ಪತ್ನೀಸಹಿತನಾದ ಇಂದ್ರನು ದುಃಖವನ್ನು ಹೊಂದಿದನು ಮತ್ತು ಶತ್ರುಗಳ ವಧೆಯನ್ನು ಬಯಸಿ ಅಜ್ಞಾತವಾಸವನ್ನೂ ಮಾಡಿದನು.

**ನಾತ್ರ ಮನ್ಯುಸ್ತ್ವಯಾ ಕಾರ್ಯೋ ಯತ್ ಕ್ಲಿಷ್ಟೋಽಸಿ ಮಹಾವನೇ ।**
**ದ್ರೌಪದ್ಯಾ ಸಹ ರಾಜೇಂದ್ರ ಭ್ರಾತೃಭಿಶ್ಚ ಮಹಾತ್ಮಭಿಃ ॥೧೧॥**

ರಾಜೇಂದ್ರನೇ, ದೊಡ್ಡ ಕಾಡಿನಲ್ಲಿ ದ್ರೌಪದಿ ಮತ್ತು ಮಹಾತ್ಮರಾದ ತಮ್ಮಂದಿರ ಜೊತೆಯಲ್ಲಿ ಏನು ಕ್ಲೇಶವನ್ನು ಅನುಭವಿಸಿದೆಯೋ ಅದಕ್ಕಾಗಿ ನೀನು ಕೋಪವನ್ನು ಮಾಡಬಾರದು.

**ಏವಂ ತ್ವಮಪಿ ರಾಜೇಂದ್ರ ರಾಜ್ಯಂ ಪ್ರಾಪ್ಸ್ಯಸಿ ಭಾರತ ।**
**ವೃತ್ರಂ ಹತ್ವಾ ಯಥಾ ಪ್ರಾಪ್ತಃ ಶಕ್ರಃ ಕೌರವನಂದನ ॥೧೨॥**

ಎಲೈ ರಾಜೇಂದ್ರನೇ, ಭಾರತನೇ, ಕೌರವನಂದನನೇ, ವೃತ್ರನನ್ನು ಕೊಂದು ಇಂದ್ರನು ರಾಜ್ಯವನ್ನು ಪಡೆದಂತೆ ನೀನೂ ಸಹ ರಾಜ್ಯವನ್ನು ಪಡೆಯುವಿ.

**ದುರಾಚಾರಶ್ಚ ನಹುಷೋ ಬ್ರಹ್ಮದ್ವಿಟ್ ಪಾಪಚೇತನಃ ।**
**ಅಗಸ್ತ್ಯಶಾಪಾಭಿಹತೋ ವಿನಷ್ಟಃ ಶಾಶ್ವತೀಃ ಸಮಾಃ ॥೧೩॥**

ದುರಾಚಾರನೂ, ಪಾಪಬುದ್ಧಿಯುಳ್ಳವನೂ, ಬ್ರಹ್ಮದ್ವೇಷಿಯೂ ಆದ ನಹುಷನು ಅಗಸ್ತ್ಯರ ಶಾಪದಿಂದ ತಾಡಿತನಾಗಿ ಬಹುಕಾಲದವರೆಗೆ ವಿನಷ್ಟನಾದನು.

**ಏವಂ ತವ ದುರಾತ್ಮಾನಃ ಶತ್ರವಃ ಶತ್ರುಸೂದನ ।**
**ಕ್ಷಿಪ್ರಂ ನಾಶಂ ಗಮಿಷ್ಯಂತಿ ಕರ್ಣದುರ್ಯೋಧನಾದಯಃ ॥೧೪॥**

ಎಲೈ ಶತ್ರುಸೂದನನೇ, ಹಾಗೆಯೇ ದುರಾತ್ಮರಾದ ನಿನ್ನ ಶತ್ರುಗಳಾದ ಕರ್ಣ-ದುರ್ಯೋಧನಾದಿಗಳು ಶೀಘ್ರವಾಗಿ ನಾಶವನ್ನು ಹೊಂದುವರು.

**ತತಃ ಸಾಗರಪರ್ಯಂತಾಂ ಭೋಕ್ಷ್ಯಸೇ ಪೃಥಿವೀಮಿಮಾಮ್ ।**
**ಭ್ರಾತೃಭಿಃ ಸಹಿತೋ ವೀರ ದ್ರೌಪದ್ಯಾ ಚ ಸಹಾನಯಾ ॥೧೫॥**

ಎಲೈ ವೀರನೇ, ಅನಂತರ ತಮ್ಮಂದಿರಿಂದ ಒಡಗೂಡಿ ಮತ್ತು ಈ ದ್ರೌಪದಿಯಿಂದಲೂ ಸಹಿತನಾಗಿ ಸಾಗರಪರ್ಯಂತವಾದ ಈ ಭೂಮಿಯನ್ನು ನೀನು ಭೋಗಿಸುವಿ.

**ಉಪಾಖ್ಯಾನಮಿದಂ ಶಕ್ರವಿಜಯಂ ವೇದಸಮ್ಮಿತಮ್ ।**
**ರಾಜ್ಞಾ ವ್ಯೂಢೇಷ್ವನೀಕೇಷು ಶ್ರೋತವ್ಯಂ ಜಯಮಿಚ್ಛತಾ ॥೧೬॥**

ಈ ಉಪಾಖ್ಯಾನಕ್ಕೆ ಶಕ್ರವಿಜಯ ಎಂದು ಹೆಸರು. ಇದು ವೇದಕ್ಕೆ ಸಮಾನವಾದುದು. ಜಯಾಕಾಂಕ್ಷಿಯಾದ ರಾಜನು ಸೈನ್ಯವನ್ನು ವ್ಯೂಹ ಮಾಡುವಾಗ ಈ ಆಖ್ಯಾನವನ್ನು ಕೇಳಬೇಕು.

**ತಸ್ಮಾತ್ ಸಂಶ್ರಾವಯಾಮಿ ತ್ವಾಂ ವಿಜಯಂ ಜಯತಾಂ ವರ ।**
**ಸಂಸ್ತೂಯಮಾನಾ ವರ್ಧಂತೇ ಮಹಾತ್ಮಾನೋ ಯುಧಿಷ್ಠಿರ ॥೧೭॥**

ಜಯಿಸುವವರಲ್ಲಿ ಶ್ರೇಷ್ಠನೇ, ಆದ್ದರಿಂದ ನಿನಗೆ ನಾನು ಈ ಶಕ್ರವಿಜಯವನ್ನು ಕೇಳಿಸುತ್ತಿದ್ದೇನೆ. ಯುಧಿಷ್ಠಿರನೇ, ಮಹಾತ್ಮರು ಸ್ತೋತ್ರ ಮಾಡಿದಷ್ಟು ಅಭಿವೃದ್ಧಿಯನ್ನು ಹೊಂದುತ್ತಾರೆ.

**ಕ್ಷತ್ರಿಯಾಣಾಮಭಾವೋಽಯಂ ಯುಧಿಷ್ಠಿರ ಮಹಾತ್ಮನಾಮ್ ।**
**ದುರ್ಯೋಧನಾಪರಾಧೇನ ಭೀಮಾರ್ಜುನಬಲೇನ ಚ ॥೧೮॥**

ಎಲೈ ಯುಧಿಷ್ಠಿರನೇ, ದುರ್ಯೋಧನನ ಅಪರಾಧದಿಂದ ಮತ್ತು ಭೀಮಾರ್ಜುನರ ಬಲದಿಂದ ಮಹಾತ್ಮರಾದ ಕ್ಷತ್ರಿಯರ ಈ ವಿನಾಶವು ಸನ್ನಿಹಿತವಾಗಿದೆ.

**ಆಖ್ಯಾನಮಿಂದ್ರವಿಜಯಂ ಯ ಇದಂ ನಿಯತಃ ಪಠೇತ್ ।**
**ಧೂತಪಾಪ್ಮಾ ಜಿತಸ್ವರ್ಗಃ ಪರತ್ರೇಹ ಚ ಮೋದತೇ ॥೧೯॥**

ಇಂದ್ರವಿಜಯವೆಂಬ ಈ ಆಖ್ಯಾನವನ್ನು ಯಾವನು ನಿಯಮದಿಂದ ಕೂಡಿ ಪಠಿಸುತ್ತಾನೆಯೋ ಅವನು ಪಾಪವನ್ನು ಕಳೆದುಕೊಂಡು ಸ್ವರ್ಗವನ್ನು ಸಂಪಾದಿಸಿ ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಸುಖಪಡುತ್ತಾನೆ.

**ನ ಚಾರಿಜಂ ಭಯಂ ತಸ್ಯ ನಾಪುತ್ರೋ ವಾ ಭವೇನ್ನರಃ ।**
**ನಾಪದಂ ಪ್ರಾಪ್ನುಯಾದ್ ಕಾಂಚಿದ್ ದೀರ್ಘಮಾಯುಶ್ಚ ವಿಂದತಿ॥೨೦॥**

**ಸರ್ವತ್ರ ಜಯಮಾಪ್ನೋತಿ ನ ಕದಾಚಿತ್ ಪರಾಜಯಮ್ ॥೨೧॥**

ಅವನಿಗೆ ಶತ್ರುಗಳ ಭಯವಿರುವುದಿಲ್ಲ. ಅವನು ಪುತ್ರವಂತನಾಗುತ್ತಾನೆ. ಅವನಿಗೆ ಆಪತ್ತುಗಳು ಉಂಟಾಗುವುದಿಲ್ಲ. ದೀರ್ಘಾಯುಷ್ಯವು ಉಂಟಾಗುತ್ತದೆ. ಎಲ್ಲ ಕಡೆಗಳಲ್ಲಿಯೂ ಜಯವೇ ಉಂಟಾಗುತ್ತದೆ. ಎಂದೂ ಅಪಜಯವಾಗುವುದಿಲ್ಲ.

**ವೈಶಂಪಾಯನಃ**

**ಏವಮಾಶ್ವಾಸಿತೋ ರಾಜಾ ಶಲ್ಯೇನ ಭರತರ್ಷಭ ।**
**ಪೂಜಯಾಮಾಸ ವಿಧಿವತ್ ಶಲ್ಯಂ ಧರ್ಮಭೃತಾಂ ವರಃ ॥೨೨॥**

ವೈಶಂಪಾಯನ– ಎಲೈ ಭರತರ್ಷಭನೇ, ಹೀಗೆ ರಾಜನಾದ ಯುಧಿಷ್ಠಿರನು ಶಲ್ಯನಿಂದ ಸಮಾಧಾನಪಡಿಸಲ್ಪಟ್ಟು ಧರ್ಮಿಷ್ಠರಲ್ಲಿ ಶ್ರೇಷ್ಠನಾದ ಅವನು ವಿಧಿಗೆ ಅನುಗುಣವಾಗಿ ಶಲ್ಯನನ್ನು ಪೂಜಿಸಿದನು.

ಶ್ರುತ್ವಾ ತು ಶಲ್ಯವಚನಂ ಕುಂತೀಪುತ್ರೋ ಯುಧಿಷ್ಠಿರಃ ।
ಪ್ರತ್ಯುವಾಚ ಮಹಾಬಾಹುರ್ಮದ್ರರಾಜಮಿದಂ ವಚಃ ॥೨೩॥

ಭವಾನ್ ಕರ್ಣಸ್ಯ ಸಾರಥ್ಯಂ ಕರಿಷ್ಯತಿ ನ ಸಂಶಯಃ ।
ತತ್ರ ತೇಜೋವಧಃ ಕಾರ್ಯಃ ಕರ್ಣಸ್ಯಾರ್ಜುನಸಂಸ್ತವೇ ॥೨೪॥

ಕುಂತೀಪುತ್ರನೂ, ಮಹಾಬಾಹುವೂ ಆದ ಯುಧಿಷ್ಠಿರನು ಶಲ್ಯನ ಮಾತುಗಳನ್ನು ಕೇಳಿ ಮದ್ರರಾಜನಾದ ಅವನನ್ನು ಕುರಿತು, ನೀನು ಕರ್ಣನ ಸಾರಥ್ಯಮಾಡುವುದರಲ್ಲಿ ಸಂಶಯವಿಲ್ಲ. ಆಗ ಅರ್ಜುನನನ್ನು ಹೊಗಳಿ ನೀನು ಕರ್ಣನ ತೇಜೋವಧೆಯನ್ನು ಮಾಡಬೇಕು ಎಂಬ ಈ ಮಾತನ್ನು ಆಡಿದನು.

ಶಲ್ಯಃ

ಏವಮೇತತ್ ಕರಿಷ್ಯಾಮಿ ಯಥಾ ಮಾಂ ಸಂಪ್ರಭಾಷಸೇ ।
ಯಚ್ಚಾನ್ಯದಪಿ ಶಕ್ಷ್ಯಾಮಿ ತತ್ ಕರಿಷ್ಯಾಮ್ಯಹಂ ತವ ॥೨೫॥

ಶಲ್ಯ– ನೀನು ಹೇಗೆ ಹೇಳುತ್ತಿದ್ದೀಯೋ ಹಾಗೆಯೇ ಮಾಡುವೆನು. ನಿನ್ನ ಹಿತಕ್ಕಾಗಿ ಬೇರೆ ಏನಾದರೂ ಮಾಡಲು ಸಾಧ್ಯವಾದರೆ ನಾನು ಅದನ್ನೂ ಮಾಡುವೆನು.

ವೈಶಂಪಾಯನಃ

ತತಸ್ತಾ ವಮಂತ್ರ್ಯ ಕೌಂತೇಯಾನ್ ಶಲ್ಯೋ ಮದ್ರಾಧಿಪಸ್ತದಾ ।
ಜಗಾಮ ಸಬಲಃ ಶ್ರೀಮಾನ್ ದುರ್ಯೋಧನಮರಿಂದಮಃ ॥೨೬॥

ವೈಶಂಪಾಯನ– ಅನಂತರ ಮದ್ರರಾಜನಾದ, ಸಂಪದ್ಯುಕ್ತನಾದ, ಅರಿಂದಮನಾದ ಶಲ್ಯನು ಕುಂತೀಪುತ್ರರ ಅನುಮತಿಯನ್ನು ಪಡೆದು ತನ್ನ ಸೈನ್ಯದ ಜೊತೆಯಲ್ಲಿ ದುರ್ಯೋಧನನ ಬಳಿಗೆ ಹೋದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಅಷ್ಟಾದಶೋಽಧ್ಯಾಯಃ ॥

॥ ಸೇನೋದ್ಯೋಗಪರ್ವಣಿ ಅಷ್ಟಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಹದಿನೆಂಟನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

# ಹತ್ತೊಂಬತ್ತನೆಯ ಅಧ್ಯಾಯ

ಪಾಂಡವರ ಮತ್ತು ಕೌರವರ ಸೇನಾಸಮವಾಯ.

**ವೈಶಂಪಾಯನಃ**

**ಯುಯುಧಾನಸ್ತತೋ ವೀರಃ ಸಾತ್ವತಾನಾಂ ಮಹಾರಥಃ ।**
**ಮಹತಾ ಚತುರಂಗೇಣ ಬಲೇನಾಗಾದ್ ಯುಧಿಷ್ಠಿರಮ್ ॥೧॥**

**ವೈಶಂಪಾಯನ**– ಮಹಾರಥನಾದ ಸಾತ್ವತವೀರನಾದ ಯುಯುಧಾನನು ಆಗ ಚತುರಂಗ ಸೈನ್ಯಸಹಿತನಾಗಿ ಯುಧಿಷ್ಠಿರನ ಬಳಿಗೆ ಬಂದನು (ಯುಯುಧಾನ ಎಂದರೆ ಸಾತ್ಯಕಿಯು ಮೊದಲೇ ಬಂದಿದ್ದಾನೆ. ಸೇನಾಸಮವಾಯವನ್ನು ಅವನು ಹೇಳುವುದಕ್ಕೋಸ್ಕರ ಪುನಃ ನಿರೂಪಿಸುತ್ತಿದ್ದಾರೆ).

**ತಸ್ಯ ಯೋಧಾ ಮಹಾವೀರ್ಯಾ ನಾನಾದೇಶಸಮಾಗತಾಃ ।**
**ನಾನಾಪ್ರಹರಣಾ ವೀರಾಃ ಶೋಭಯಾಂಚಕ್ರಿರೇ ಬಲಮ್ ॥೨॥**

ಅವನ ಸೈನಿಕರು ನಾನಾದೇಶದಿಂದ ಬಂದವರೂ ಮಹಾಪರಾಕ್ರಮವುಳ್ಳವರೂ, ಅನೇಕ ಆಯುಧಗಳನ್ನು ಹೊಂದಿದವರೂ ಮತ್ತು ವೀರರೂ ಆಗಿ ಆ ಸೈನ್ಯವು ಶೋಭಿಸುವಂತೆ ಮಾಡಿದರು.

**ಪರಶ್ವಧೈರ್ಭಿಂಡಿಪಾಲೈಃ ಶೂಲತೋಮರಮುದ್ಗರೈಃ ।**
**ಪರಿಘೈರ್ಯಷ್ಟಿಭಿಃ ಪ್ರಾಸೈಃ ಕರವಾಲೈಶ್ಚ ನಿರ್ಮಲೈಃ ॥೩॥**

**ಖಡ್ಗಕಾರ್ಮುಕನಿರ್ಯೂಹೈಃ ಶರೈಶ್ಚ ವಿವಿಧೈರಪಿ ।**
**ತೈಲಧೌತೈಃ ಪ್ರಕಾಶದ್ಭಿಸ್ತದಶೋಭತ ವೈ ಬಲಮ್ ॥೪॥**

ಪರಶ್ವಧ, ಭಿಂಡಿಪಾಲ, ಶೂಲ, ತೋಮರ, ಮುದ್ಗರ, ಪರಿಘ, ಯಷ್ಟಿ, ಪ್ರಾಸ, ನಿರ್ಮಲವಾದ ಕರವಾಲಗಳು, ಖಡ್ಗ ಮತ್ತು ಧನುಸ್ಸುಗಳ ಸಮೂಹ, ಅನೇಕ ವಿಧವಾದ ತೈಲದಲ್ಲಿ ಸಾಣೆಯನ್ನು ಹಿಡಿದ ಹೊಳೆಯುವ ಬಾಣಗಳು ಇವುಗಳಿಂದ ಆ ಸೈನ್ಯವು ಶೋಭಿಸಿತು.

ತಸ್ಯ ಮೇಘಪ್ರಕಾಶಸ್ಯ ಶಸ್ತ್ರೌಘೈಃ ಶೋಭಿತಸ್ಯ ಚ ।
ಬಭೂವ ರೂಪಂ ಸೈನ್ಯಸ್ಯ ಮೇಘಸ್ಯೇವ ಸವಿದ್ಯುತಃ ॥೫॥

ಮೇಘದ ಕಾಂತಿಯನ್ನು ಹೊಂದಿದ್ದ ಮತ್ತು ಶಸ್ತ್ರಗಳಿಂದ ಕೂಡಿದ ಆ ಸೈನ್ಯವು ಮಿಂಚುಗಳಿಂದ ಕೂಡಿದ ಮೇಘಸಮೂಹದ ಕಾಂತಿಯನ್ನು ಹೊಂದಿದ್ದಿತು.

ಅಕ್ಷೌಹಿಣೀ ಹಿ ಸಾ ಸೇನಾ ತದಾ ಯೌಧಿಷ್ಠಿರಂ ಬಲಮ್ ।
ಪ್ರವಿಶ್ಯಾಂತರ್ದಧೇ ರಾಜನ್ ಸಾಗರಂ ಕುನದೀ ಯಥಾ ॥೬॥

ಒಂದು ಅಕ್ಷೌಹಿಣಿ ಪರಿಮಾಣದ ಆ ಸೈನ್ಯವು ಯುಧಿಷ್ಠಿರನ ಸೈನ್ಯವನ್ನು ಪ್ರವೇಶಿಸಿ ಸಣ್ಣನದಿಯು ಸಾಗರವನ್ನು ಸೇರಿ ಅದೃಶ್ಯವಾಗುವಂತೆ ಅಂತರ್ಧಾನವನ್ನು ಹೊಂದಿತು.

ತಥೈವಾಕ್ಷೌಹಿಣೀಂ ಗೃಹ್ಯ ಚೇದೀನಾಮೃಷಭೋ ಬಲೀ ।
ಧೃಷ್ಟಕೇತುರುಪಾಗಚ್ಛತ್ ಪಾಂಡವಾನಮಿತೌಜಸಃ ॥೭॥

ಚೇದಿಗಳ ರಾಜನಾದ ಬಲಿಷ್ಠನಾದ ಧೃಷ್ಟಕೇತುವು ಸಹ (ಶಿಶುಪಾಲನ ಪುತ್ರ) ಒಂದು ಅಕ್ಷೌಹಿಣಿ ಸೈನ್ಯದೊಂದಿಗೆ ಅಮಿತಪರಾಕ್ರಮಿಗಳಾದ ಪಾಂಡವರ ಸಮೀಪಕ್ಕೆ ಬಂದನು.

ಮಾಗಧಶ್ಚ ಜಯತ್ಸೇನೋ ಜಾರಾಸಂಧಿರ್ಮಹಾಬಲಃ ।
ಅಕ್ಷೌಹಿಣ್ಯೈವ ಸೈನ್ಯಸ್ಯ ಧರ್ಮರಾಜಮುಪಾಗಮತ್ ॥೮॥

ಜರಾಸಂಧನ ಪುತ್ರನಾದ ಮಗಧದೇಶಾದಿಪತಿಯಾದ ಮಹಾಬಲನಾದ ಜಯತ್ಸೇನನು ಒಂದು ಅಕ್ಷೌಹಿಣಿ ಸೈನ್ಯದೊಂದಿಗೆ ಧರ್ಮರಾಜನನ್ನು ಬಂದು ಸೇರಿದನು.

ತಥೈವ ಪಾಂಡ್ಯೋ ರಾಜೇಂದ್ರ ಸಾಗರಾನೂಪವಾಸಿಭಿಃ ।
ವೃತೋ ಬಹುವಿಧೈರ್ಯೋಧೈರ್ಯುಧಿಷ್ಠಿರಮುಪಾಗಮತ್ ॥೯॥

ಎಲೈ ರಾಜೇಂದ್ರನೇ, ಅದರಂತೆ ಪಾಂಡ್ಯರಾಜನು ಬಹುವಿಧವಾದ ಯೋಧರನ್ನು ಹೊಂದಿದ್ದ ಸಾಗರ ತೀರವಾಸಿಗಳಾದ ಸೈನಿಕರಿಂದ ಕೂಡಿದ್ದ ಸೈನ್ಯದೊಂದಿಗೆ ಯುಧಿಷ್ಠಿರನನ್ನು ಬಂದು ಸೇರಿದನು.

ತಥಾ ಮಾಹಿಷ್ಮತೀವಾಸೋ ನೀಲೋ ನೀಲಾಯುಧೈಃ ಸಹ ।
ಮಹೀಪಾಲೋ ಮಹಾವೀರ್ಯೋ ದಕ್ಷಿಣಾಪಥವಾಸಿಭಿಃ ॥೧೦॥

ತಸ್ಯ ಸೈನ್ಯಮತೀವಾಸೀತ್ ತಸ್ಮಿನ್ ಬಲಸಮಾಗಮೇ ।
ಪ್ರೇಕ್ಷಣೀಯತರಂ ರಾಜನ್ ಸುವೇಷಂ ಬಲವತ್ ತದಾ ॥೧೧॥

ಹಾಗೆಯೇ ಮಾಹಿಷ್ಮತಿ ವಾಸನಾದ ಮಹಾಪರಾಕ್ರಮಿಯಾದ ನೀಲರಾಜನು, ದಕ್ಷಿಣಾಪಥವಾಸಿಗಳಾದ ಮತ್ತು ನೀಲಾಯುಧವನ್ನು ಧರಿಸಿದ ಯೋಧರೊಂದಿಗೆ ಬಂದು ಸೇರಿದನು. ಎಲೈ ರಾಜನೇ, ಅವನ ಸೈನ್ಯವು ಆ ಸೈನ್ಯಸಮುದಾಯದಲ್ಲಿ ಒಳ್ಳೆಯ ವೇಷವನ್ನು ಧರಿಸಿ ಬಲಿಷ್ಠವಾಗಿ ನೋಡಲು ಬಹಳ ಸುಂದರವಾಗಿದ್ದಿತು.

ಕೇಕಯಾಶ್ಚ ನರವ್ಯಾಘ್ರಾಃ ಸೋದರಾಃ ಪಂಚ ಪಾರ್ಥಿವಾಃ ।
ಸಂಹರ್ಷಯಂತಃ ಕೌಂತೇಯಾನ್ ಅಕ್ಷೌಹಿಣ್ಯಾ ಸಮಾಗತಾಃ ॥೧೨॥

ಕೇಕಯದೇಶದ ಸಹೋದರರಾದ, ನರವ್ಯಾಘ್ರರಾದ ಐದು ರಾಜರು ಕುಂತೀಪುತ್ರರನ್ನು ಸಂತೋಷಗೊಳಿಸುತ್ತಾ ಒಂದು ಅಕ್ಷೌಹಿಣಿ ಸೈನ್ಯವನ್ನು ತೆಗೆದುಕೊಂಡು ಬಂದರು.

ದ್ರುಪದಸ್ಯಾಪ್ಯಭೂತ್ ಸೇನಾ ನಾನಾದೇಶಸಮಾಗತೈಃ ।
ಶೋಭಿತಾ ಪುರುಷೈಃ ಶೂರೈಃ ಪುತ್ರೈಶ್ಚ ಸುಮಹಾರಥೈಃ ॥೧೩॥

ದ್ರುಪದನ ಸೈನ್ಯವೂ ಸಹ ನಾನಾ ದೇಶಗಳಿಂದ ಬಂದ ಶೂರರಿಂದಲೂ ಮತ್ತು ಮಹಾರಥರಾದ ಪುತ್ರರಿಂದಲೂ ಶೋಭಿಸುತ್ತಿದ್ದಿತು.

ತಥೈವ ರಾಜಾ ಮತ್ಸ್ಯಾನಾಂ ವಿರಾಟೋ ವಾಹಿನೀಪತಿಃ ।
ಪಾರ್ವತೀಯೈರ್ಮಹೀಪಾಲೈಃ ಸಹಿತಃ ಪಾಂಡವಾನಯಾತ್ ॥೧೪॥

ಹಾಗೆಯೇ ವಾಹಿನೀಪತಿಯಾದ ಮತ್ಸ್ಯರಾಜನಾದ ವಿರಾಟನು ಪರ್ವತ ಪ್ರದೇಶದ ರಾಜರೊಂದಿಗೆ ಪಾಂಡವರನ್ನು ಬಂದು ಸೇರಿದನು.

ಇತಶ್ಚೇತಶ್ಚ ಪಾಂಡೂನಾಂ ಸಮಾಜಗ್ಮುರ್ಮಹಾತ್ಮನಾಮ್ ।
ಅಕ್ಷೌಹಿಣ್ಯಸ್ತು ಸಪ್ತೈತಾ ವಿವಿಧಧ್ವಜಸಂಕುಲಾಃ ॥೧೫॥

ಯುಯುತ್ಸಮಾನಾಃ ಕುರುಭಿಃ ಪಾಂಡವಾನ್ ಸಮಹರ್ಷಯನ್ ॥೧೬॥

ಇನ್ನು ಅಲ್ಲಿಂದ ಇಲ್ಲಿಂದ ಇನ್ನೂ ಅನೇಕ ವೀರರು ಮಹಾತ್ಮರಾದ ಪಾಂಡವರ ಸೈನ್ಯವನ್ನು ಬಂದು ಸೇರಿದರು. ಈ ಏಳು ಅಕ್ಷೌಹಿಣಿ ಸೈನ್ಯವು ಅನೇಕ ವಿಧವಾದ ಧ್ವಜಗಳಿಂದ ನಿಬಿಡವಾಗಿ ಕುರುಗಳ ಜೊತೆಯಲ್ಲಿ ಯುದ್ಧವನ್ನು ಮಾಡಲು ಆಶಿಸುತ್ತಾ ಪಾಂಡವರಿಗೆ ಸಂತೋಷವನ್ನು ಕೊಟ್ಟಿತು (ಸಾತ್ಯಕಿ, ಧೃಷ್ಟಕೇತು, ಜಯತ್ಸೇನ, ಪಾಂಡ್ಯರಾಜ, ನೀಲ, ಕೇಕೇಯರು ಇವರೆಲ್ಲರದ್ದು ಒಂದೊಂದು ಅಕ್ಷೌಹಿಣಿ. ದ್ರುಪದ, ವಿರಾಟ ಮತ್ತು ಅಲ್ಲಿಂದಿಲ್ಲಿಂದ ಬಂದವರು ಸೇರಿ ಒಂದು ಅಕ್ಷೌಹಿಣಿ. ಹೀಗೆ ಪಾಂಡವರ ಸೈನ್ಯವು ಒಟ್ಟು ಏಳು ಅಕ್ಷೌಹಿಣಿಯಾಗಿದೆ).

ತಥೈವ ಧಾರ್ತರಾಷ್ಟ್ರಸ್ಯ ಹರ್ಷಂ ಸಮಭಿವರ್ಧಯನ್ ।
ಭಗದತ್ತೋ ಮಹೀಪಾಲಃ ಸೇನಾಮಕ್ಷೌಹಿಣೀಂ ದದೌ ॥೧೭॥

ಹಾಗೆಯೇ ದುರ್ಯೋಧನನಿಗೆ ಸಂತೋಷವನ್ನುಂಟು ಮಾಡುತ್ತಾ ಭಗದತ್ತ ರಾಜನು ಒಂದು ಅಕ್ಷೌಹಿಣಿ ಸೈನ್ಯವನ್ನು ಕೊಟ್ಟನು.

ತಸ್ಯ ಚೀನೈಃ ಕಿರಾತೈಶ್ಚ ಕಾಂಚನೈರಿವ ಸಂವೃತಮ್ ।
ಬಭೌ ಬಲಮಹಾಧೃಷ್ಯಂ ಕರ್ಣಿಕಾರವನಂ ಯಥಾ ॥೧೮॥

ಚೀನರಿಂದಲೂ, ಕಿರಾತರಿಂದಲೂ, ಚಿನ್ನದಿಂದ ಅಲಂಕೃತವಾದಂತೆ ಇದ್ದ, ಅವನನ್ನು ಸೋಲಿಸಲು ಅಸಾಧ್ಯವಾದ ಸೈನ್ಯವು ಕರ್ಣಿಕಾರಪುಷ್ಪದ ವನದಂತೆ ಶೋಭಿಸುತ್ತಿದ್ದಿತು.

ತಸ್ಯ ಭೂರಿಶ್ರವಾಃ ಶೂರಃ ಶಲ್ಯಶ್ಚ ಕುರುನಂದನ ।
ದುರ್ಯೋಧನಮುಪಾಯಾತಾವಕ್ಷೌಹಿಣ್ಯಾ ಪೃಥಕ್ ಪೃಥಕ್ ॥೧೯॥

ಹಾಗೆಯೇ, ಕುರುನಂದನನೇ, ಭೂರಿಶ್ರವ ಮತ್ತು ಶೂರನಾದ ಶಲ್ಯ ಇವರು ಒಂದೊಂದು ಅಕ್ಷೌಹಿಣಿ ಸೈನ್ಯದೊಂದಿಗೆ ದುರ್ಯೋಧನನ ಬಳಿಗೆ ಬಂದರು.

ಕೃತವರ್ಮಾ ಚ ಹಾರ್ದಿಕ್ಯೋ ಭೋಜಾಂಧಕುಕುರೈಃ ಸಹ ।
ಅಕ್ಷೌಹಿಣ್ಯೈವ ಸೇನಾಯಾ ದುರ್ಯೋಧನಮುಪಾಗಮತ್ ॥೨೦॥

ತಸ್ಯ ತೈಃ ಪುರುಷವ್ಯಾಘ್ರೈರ್ವನಮಾಲಾಧರೈರ್ಬಲಮ್ ।
ಅಶೋಭತ ತಥಾ ಮತ್ತೈರ್ವನಂ ಪ್ರಕ್ರೀಡಿತೈರ್ಗಜೈಃ ॥೨೧॥

ಹಾರ್ದಿಕ್ಯನಾದ ಕೃತವರ್ಮನು ಭೋಜ, ಅಂಧಕ ಮತ್ತು ಕುಕುರರ ಜೊತೆಯಲ್ಲಿ ಒಂದು ಅಕ್ಷೋಹಿಣಿಯೊಂದಿಗೆ ದುರ್ಯೋಧನನ ಬಳಿಗೆ ಬಂದನು. ಪುರುಷವ್ಯಾಘ್ರರಾದ ಆ ಸೈನಿಕರೆಲ್ಲರೂ ವನಮಾಲೆಯನ್ನು ಧರಿಸಿದ್ದ ಆ ಸೈನ್ಯವು ಕಾಡಿನಲ್ಲಿ ಮದಿಸಿದ ಗಜಗಳ ವಿಲಾಸದಂತೆ ತೋರುತ್ತಿದ್ದಿತು.

ಜಯದ್ರಥಮುಖಾಶ್ಚಾನ್ಯೇ ಸಿಂಧುಸೌವೀರವಾಸಿನಃ ।
ಆಜಗ್ಮುಃ ಪೃಥಿವೀಪಾಲಾಃ ಕಂಪಯಂತ ಇವಾಚಲಾನ್ ॥೨೨॥

ತೇಷಾಮಕ್ಷೋಹಿಣೀ ಸೇನಾ ಬಹುಲಾ ವಿಬಭೌ ತದಾ ।
ವಿಧೂಯಮಾನೋ ವಾತೇನ ಬಹುರೂಪ ಇವಾಂಬುದಃ ॥೨೩॥

ಸಿಂಧುಸೌವೀರವಾಸಿಗಳಾದ ಜಯದ್ರಥನೇ ಮೊದಲಾದ ರಾಜರು ಪರ್ವತಗಳನ್ನೇ ನಡುಗಿಸುವಂತೆ ದುರ್ಯೋಧನನ ಬಳಿಗೆ ಬಂದರು. ಅವರ ಒಂದು ಅಕ್ಷೋಹಿಣಿ ಗಾತ್ರದ ದೊಡ್ಡ ಸೈನ್ಯವು ಗಾಳಿಯಿಂದ ಚದುರಿಸಲ್ಪಟ್ಟ ಬಹುರೂಪಗಳುಳ್ಳ ಮೋಡಗಳಂತೆ ಶೋಭಿಸುತ್ತಿದ್ದಿತು.

ಸುದಕ್ಷಿಣಶ್ಚ ಕಾಂಭೋಜೋ ಯವನೈಶ್ಚ ಶಕೈಸ್ತಥಾ ।
ಉಪಾಜಗಾಮ ಕೌರವ್ಯಮಕ್ಷೋಹಿಣ್ಯಾ ವಿಶಾಂಪತೇ ॥೨೪॥

ತಸ್ಯ ಸೇನಾಸಮವಾಯಃ ಶಲಭಾನಾಮಿವಾಬಭೌ ।
ಸ ಚ ಸಂಪ್ರಾಪ್ಯ ಕೌರವ್ಯಂ ತತ್ರೈವಾಂತರ್ದಧೇ ತದಾ ॥೨೫॥

ಕಾಂಭೋಜರಾಜನಾದ ಸುದಕ್ಷಿಣನು ಯವನ ಮತ್ತು ಶಕರ ಜೊತೆಯಲ್ಲಿ ಒಂದು ಅಕ್ಷೋಹಿಣಿ ಸೈನ್ಯದೊಂದಿಗೆ ದುರ್ಯೋಧನನ ಬಳಿಗೆ ಬಂದನು. ಎಲೈ ರಾಜನೇ, ಅವನ ಆ ಸೈನ್ಯಸಮೂಹವು ಪತಂಗಗಳಂತೆ ತೋರುತ್ತಿದ್ದಿತು. ಅವನು ಕೌರವ ಸೈನ್ಯವನ್ನು ಪ್ರವೇಶಿಸಿ ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು.

ಆವಂತ್ಯೌ ಚ ಮಹೀಪಾಲೌ ಮಹಾಬಲಸುಸಂವೃತೌ ।
ಪೃಥಗಕ್ಷೋಹಿಣೀಭ್ಯಾಂ ತಾವಭಿಯಾತೌ ಸುಯೋಧನಮ್ ॥೨೬॥

ಆವಂತಿದೇಶದ ಇಬ್ಬರು ರಾಜರು ಮಹಾಬಲದಿಂದ ಕೂಡಿದವರಾಗಿ ಇಬ್ಬರೂ ಒಂದೊಂದು ಅಕ್ಷೌಹಿಣಿ ಸೈನ್ಯದಿಂದ ಕೂಡಿ ಸುಯೋಧನನ ಬಳಿಗೆ ಬಂದರು.

ಇತಸ್ತತಸ್ತು ಸರ್ವೇಷಾಂ ಭೂಮಿಪಾನಾಂ ಮಹಾತ್ಮನಾಮ್ ।
ತಿಸ್ರೋಽನ್ಯಾಃ ಸಮವರ್ತಂತ ವಾಹಿನ್ಯೋ ಭರತರ್ಷಭ ॥೨೭॥

ಭರತರ್ಷಭನೇ, ಅಲ್ಲಿಂದಿಲ್ಲಿಂದ ಬಂದು ಸೇರಿದ ಮಹಾತ್ಮರಾದ ರಾಜರ ಸೈನ್ಯಗಳು ಬೇರೆ ಮೂರು ಅಕ್ಷೌಹಿಣಿ ಇದ್ದವು.

ಏವಮೇಕಾದಶಾ ವೃತ್ತಾಃ ಸೇನಾ ದುರ್ಯೋಧನಸ್ಯ ತಾಃ ।
ಯುಯುತ್ಸಮಾನಾಃ ಕೌಂತೇಯಾನ್ ನಾನಾಧ್ವಜಸಮಾಕುಲಾಃ ॥೨೮॥

ಹೀಗೆ ಕೌಂತೇಯರ ಜೊತೆಯಲ್ಲಿ ಯುದ್ಧಮಾಡಲು ಬಯಸುವ ನಾನಾ ಧ್ವಜ ನಿಬಿಡವಾದ ದುರ್ಯೋಧನನ ಆ ಸೈನ್ಯಗಳು ಹನ್ನೊಂದು ಅಕ್ಷೌಹಿಣಿ ಇದ್ದವು (ಭಗದತ್ತ-೧, ಭೂರಿಶ್ರವ-೧, ಶಲ್ಯ-೧, ಕೃತವರ್ಮ-೧, ಜಯದ್ರಥ-೧, ಸುದಕ್ಷಿಣ-೧, ಆವಂತಿ ರಾಜರು-೨, ಇತರೆ-೩. ಹೀಗೆ ಒಟ್ಟು ಹನ್ನೊಂದು ಅಕ್ಷೌಹಿಣಿಯಾದವು).

ನ ಹಸ್ತಿನಪುರೇ ರಾಜನ್ ಅವಕಾಶೋಽಭವತ್ ತದಾ ।
ರಾಜ್ಞಾಂ ಸ್ವಬಲಮುಖ್ಯಾನಾಂ ಪ್ರಾಧಾನ್ಯೇನಾಪಿ ಭಾರತ ॥೨೯॥

ಎಲೈ ರಾಜನೇ, ಎಲೈ ಭಾರತನೇ, ತಮ್ಮ ತಮ್ಮ ಪ್ರಧಾನ ಸೈನ್ಯದಿಂದ ಬಂದು ಸೇರಿದಾಗ ಹಸ್ತಿನಪುರದಲ್ಲಿ ಆಗ ಯಾವ ಅವಕಾಶವೂ ಉಳಿದಿರಲಿಲ್ಲ.

ತತಃ ಪಂಚನದಂ ಚೈವ ಕೃತ್ಸ್ನಂ ಚ ಕುರುಜಾಂಗಲಮ್ ।
ತಥಾ ರೋಹಿತಕಾರಣ್ಯಂ ಮರುಭೂಮಿಶ್ಚ ಕೇವಲಾ ॥೩೦॥

ಅಹಿಚ್ಛತ್ರಂ ಕಾಲಕೂಟಂ ಗಂಗಾತೀರಂ ಚ ಭಾರತ ।
ವರ್ಣಾವಾಟಧಾನಂ ಚ ಯಾಮುನಶ್ಚೈವ ಪರ್ವತಃ ॥೩೧॥

ಏಷ ದೇಶಃ ಸುವಿಸ್ತೀರ್ಣಃ ಪ್ರಭೂತಧನಧಾನ್ಯವಾನ್ ।
ಬಭೂವ ಕೌರವೇಯಾಣಾಂ ಬಲೇನ ಸುಸಮಾಕುಲಮ್ ॥೩೨॥

ಎಲೈ ಭಾರತನೇ, ಆಗ ಸಮಗ್ರವಾದ ಪಂಚನದ ದೇಶ, ಕುರುಜಾಂಗಲ, ರೋಹಿತಕಾರಣ್ಯ, ಮರುಭೂಮಿ, ಅಹಿಚ್ಛತ್ರ, ಕಾಲಕೂಟ ಪರ್ವತ, ಗಂಗಾತೀರ, ವಾರಣ, ವಾಟಧಾನ, ಯಾಮುನಪರ್ವತ ಈ ಸುವಿಸ್ತೀರ್ಣವಾದ ಧನಧಾನ್ಯಸಹಿತವಾದ ದೇಶವು ಕೌರವ ಸೈನ್ಯದಿಂದ ತುಂಬಿಹೋಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕೋನವಿಂಶೋಽಧ್ಯಾಯಃ ॥

॥ ಸೇನೋದ್ಯೋಗಪರ್ವಣಿ ಏಕೋನವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಹತ್ತೊಂಬತ್ತನೆಯ
ಅಧ್ಯಾಯ ಮುಗಿಯಿತು.

**॥ ಸಮಾಪ್ತಂ ಸೇನೋದ್ಯೋಗಪರ್ವ ॥**

★ ★ ★ ★ ★

# ೨. ಸಂಜಯಯಾನಪರ್ವ

## ಇಪ್ಪತ್ತನೆಯ ಅಧ್ಯಾಯ

ಹಸ್ತಿನಪುರಕ್ಕೆ ಹೋಗಿ ದ್ರುಪದನ ಪುರೋಹಿತನಿಂದ ದ್ರುಪದಸಂದೇಶಕಥನ

**ವೈಶಂಪಾಯನಃ**

ಯಃ ಸ ಪಾಂಚಾಲರಾಜೇನ ಪ್ರೇಷಿತಃ ಕೌರವಾನ್ ಪ್ರತಿ ॥೧॥

ಸ ಚ ಕೌರವ್ಯಮಾಸಾದ್ಯ ದ್ರುಪದಸ್ಯ ಪುರೋಹಿತಃ ।
ಸತ್ಕೃತೋ ಧೃತರಾಷ್ಟ್ರೇಣ ಭೀಷ್ಮೇಣ ವಿದುರೇಣ ಚ ॥೨॥

ಸರ್ವಂ ಕೌಶಲ್ಯಮುಕ್ತ್ವಾ ತ್ವSSದೌ ಪೃಷ್ಟ್ವಾ ಚೈವಮನಾಮಯಮ್ ।
ಸರ್ವಸೈನ್ಯಪ್ರಣೇತೄಣಾಂ ಮಧ್ಯೇ ವಾಕ್ಯಮುವಾಚ ಹ ॥೩॥

ವೈಶಂಪಾಯನ– ಯಾವ ದ್ರುಪದನ ಪುರೋಹಿತನು ಪಾಂಚಾಲರಾಜನಾದ ದ್ರುಪದನಿಂದ ಕೌರವರ ಬಳಿಗೆ ಕಳುಹಿಸಲ್ಪಟ್ಟನೋ ಅವನು ಧೃತರಾಷ್ಟ್ರನನ್ನು ತಲುಪಿ, ಧೃತರಾಷ್ಟ್ರನಿಂದಲೂ, ಭೀಷ್ಮರಿಂದಲೂ ಮತ್ತು ವಿದುರನಿಂದಲೂ ಪೂಜಿತನಾಗಿ ಮೊದಲು ಎಲ್ಲಾ ಕ್ಷೇಮವನ್ನು ಹೇಳಿ, ಅವರ ಕ್ಷೇಮವನ್ನು ವಿಚಾರಿಸಿ, ಎಲ್ಲಾ ಸೇನಾನಾಯಕರ ಮಧ್ಯದಲ್ಲಿ ಈ ಮಾತುಗಳನ್ನು ಆಡಿದನು.

ಸರ್ವೈರ್ಭವದ್ಭಿರ್ವಿದಿತೋ ರಾಜಧರ್ಮಃ ಸನಾತನಃ ।
ವಾಕ್ಯೋಪಾದಾನಹೇತೋಸ್ತು ವಕ್ಷ್ಯಾಮಿ ವಿದಿತೇ ಸತಿ ॥೪॥

ನಿಮಗೆಲ್ಲರಿಗೂ ಸನಾತನವಾದ ರಾಜಧರ್ಮವು ತಿಳಿದಿದೆ. ನಿಮಗೆ ತಿಳಿದಿದ್ದರೂ ಸಹ ನಾನು ಮಾತನಾಡಬೇಕಾದ ಕಾರಣದಿಂದ ಹೇಳುವೆನು.

ಧೃತರಾಷ್ಟ್ರಶ್ಚ ಪಾಂಡುಶ್ಚ ಸುತಾವೇಕಸ್ಯ ವಿಶ್ರುತೌ ।
ತಯೋಃ ಸಮಾನಂ ದ್ರವಿಣಂ ಪೈತೃಕಂ ನಾತ್ರ ಸಂಶಯಃ ॥೫॥

ಪ್ರಖ್ಯಾತರಾದ ಧೃತರಾಷ್ಟ್ರ ಮತ್ತು ಪಾಂಡು ಇವರಿಬ್ಬರು ಒಬ್ಬನೇ ತಂದೆಯ ಮಕ್ಕಳು. ತಂದೆಯ ಸಂಪತ್ತಿನಲ್ಲಿ ಅವರಿಗೆ ಸಮಾನವಾದ ಭಾಗವಿದೆ ಎಂಬುದರಲ್ಲಿ ಸಂಶಯವಿಲ್ಲ.

ಧೃತರಾಷ್ಟ್ರಸ್ಯ ಯೇ ಪುತ್ರಾಸ್ತೈಃ ಪ್ರಾಪ್ತಂ ಪೈತೃಕಂ ಧನಮ್ ।
ಪಾಂಡುಪುತ್ರಾಃ ಕಥಂ ನಾಮ ನ ಪ್ರಾಪ್ತಾಃ ಪೈತೃಕಂ ವಸು ॥೬॥

ಧೃತರಾಷ್ಟ್ರನ ಪುತ್ರರಿಂದ ಅವರ ಪಿತೃಧನವು ಪ್ರಾಪ್ತವಾಯಿತು. ಪಾಂಡು ಪುತ್ರರಿಗೆ ಮಾತ್ರ ಪಿತೃಧನವು ಏಕೆ ಪ್ರಾಪ್ತವಾಗಲಿಲ್ಲ?

ಏವಂ ಗತೇ ಪಾಂಡವೇಯೈರ್ವಿದಿತಂ ವಃ ಪುರಾ ಯಥಾ ।
ನ ಪ್ರಾಪ್ತಂ ಪೈತೃಕಂ ದ್ರವ್ಯಂ ಧಾರ್ತರಾಷ್ಟ್ರೇಣ ಸಂವೃತಮ್ ॥೭॥

ಪರಿಸ್ಥಿತಿಯು ಹೀಗಿರುವಾಗ ಧೃತರಾಷ್ಟ್ರ ಪುತ್ರನಾದ ದುರ್ಯೋಧನನಿಂದ ಹಿಡಿದುಕೊಳ್ಳಲ್ಪಟ್ಟ ಪಾಂಡವರ ಪಿತೃಧನವು ಪಾಂಡವರಿಗೆ ಹೇಗೆ ಸೇರಲಿಲ್ಲ ಎಂಬ ವಿಷಯವು ನಿಮಗೆ ತಿಳಿದಿದೆ.

ಪ್ರಾಣಾಂತಿಕೈರಪ್ಯುಪಾಯೈಃ ಪ್ರಯತದ್ಭಿರನೇಕಶಃ ।
ಶೇಷವಂತೋ ನ ಶಕಿತಾ ಗಮಿತುಂ ಯಮಸಾದನಮ್ ॥೮॥

ಪ್ರಾಣಾಂತಿಕವಾದ ಅನೇಕ ರೀತಿಯ ಉಪಾಯಗಳನ್ನು ಮಾಡಿ ಪ್ರಯತ್ನಪಟ್ಟರೂ ಪಾಂಡವರಿಗೆ ಆಯುಸ್ಸು ಇನ್ನೂ ಉಳಿದಿದ್ದರಿಂದ ಅವರನ್ನು ಯಮಪಟ್ಟಣಕ್ಕೆ ಕಳುಹಿಸಲು ದುರ್ಯೋಧನಾದಿಗಳಿಗೆ ಸಾಧ್ಯವಾಗಲಿಲ್ಲ.

ಪುನಶ್ಚ ವರ್ಧಿತಂ ರಾಜ್ಯಂ ಸ್ವಬಲೇನ ಮಹಾತ್ಮಭಿಃ ।
ಧಮ್ಮನಾऽಪಹೃತಂ ಕ್ಷುದ್ರೈರ್ಧಾರ್ತರಾಷ್ಟ್ರೈಃ ಸಸೌಬಲೈಃ ॥೯॥

ಮಹಾತ್ಮರಾದ ಪಾಂಡವರು ಆ ರಾಜ್ಯವನ್ನು ತಮ್ಮ ಬಲದಿಂದ ಪುನಃ ಅಭಿವೃದ್ಧಿ ಪಡಿಸಿದರು. ಕ್ಷುದ್ರರಾದ ಧೃತರಾಷ್ಟ್ರಪುತ್ರರು ಶಕುನಿಯ ಜೊತೆಯಲ್ಲಿ ಸೇರಿ ಮೋಸದಿಂದ ಅದನ್ನು ಅಪಹರಿಸಿದರು.

ತದಪ್ಯನುಮತಂ ಕರ್ಮ ಯಥಾಯುಕ್ತಮನೇನ ವೈ ।
ವಿವಾಸಿತಾ ಮಹಾರಣ್ಯೇ ವರ್ಷಾಣೀಹ ತ್ರಯೋದಶ ॥೧೦॥

ದುರ್ಯೋಧನನು ಪ್ರಯೋಗಿಸಿ ಮಾಡಿದ ಈ ಕರ್ಮವನ್ನೂ ಪಾಂಡವರು ಅನುಮೋದಿಸಿದರು. ಮತ್ತು ಹದಿಮೂರು ವರ್ಷಗಳ ಕಾಲ ದೊಡ್ಡ ಕಾಡಿನಲ್ಲಿ ಕಾಲವನ್ನು ಕಳೆದರು.

ಸಭಾಯಾಂ ಕ್ಲೇಶಿತೈರ್ವೀರೈಃ ಸಹಭಾರ್ಯೈಸ್ತಥಾ ಭೃಶಮ್ ।
ಅರಣ್ಯೇ ವಿವಿಧಾಃ ಕ್ಲೇಶಾಃ ಸಂಪ್ರಾಪ್ತಾಸ್ತೈಃ ಸುದಾರುಣಾಃ ॥೧೧॥

ಸಭೆಯಲ್ಲಿ ಪತ್ನಿಯ ಜೊತೆಯಲ್ಲಿ ಅಂತಹ ಬಹಳ ಕ್ಲೇಶಕ್ಕೆ ಒಳಗಾದ ವೀರರಾದ ಅವರು ಕಾಡಿನಲ್ಲಿ ಭಯಂಕರವಾದ ಅನೇಕ ವಿಧವಾದ ಕ್ಲೇಶಗಳನ್ನು ಅನುಭವಿಸಿದರು.

ತಥಾ ವಿರಾಟನಗರೇ ಯೋನ್ಯಂತರಗತೈರಿವ ।
ಪ್ರಾಪ್ತಃ ಪರಮಸಂಕ್ಲೇಶೋ ಯಥಾ ಪಾಪೈರ್ಮಹಾತ್ಮಭಿಃ ॥೧೨॥

ಅದರಂತೆ ವಿರಾಟನಗರದಲ್ಲಿ ಪಾಪಿಗಳು ಅನುಭವಿಸುವ ಅನೇಕ ಕ್ಲೇಶಗಳನ್ನು ಗರ್ಭವಾಸದಲ್ಲಿರುವವರಂತೆ ಮಹಾತ್ಮರಾದ ಅವರು ಅನುಭವಿಸಿದರು.

ತೇ ಸರ್ವೇ ಪೃಷ್ಠತಃ ಕೃತ್ವಾ ತತ್ಸರ್ವಂ ಪೂರ್ವಕಿಲ್ಬಿಷಮ್ ।
ಸಾಮೈವ ಕುರುಭಿಃ ಸಾರ್ಧಮಿಚ್ಛಂತಿ ಕುರುಪುಂಗವಾಃ ॥೧೩॥

ಎಲೈ ಕುರುಪುಂಗವರೇ, ಅವರು ಹಿಂದೆ ಮಾಡಿದ ಎಲ್ಲಾ ಅಪರಾಧಗಳನ್ನೂ ಹಿಂದಕ್ಕೆ ಇಟ್ಟು ಕುರುಗಳ ಜೊತೆಯಲ್ಲಿ ಸಾಮೋಪಾಯವನ್ನೇ ಬಯಸುತ್ತಾರೆ.

**ತೇಷಾಂ ಚ ವೃತ್ತಮಾಜ್ಞಾಯ ವೃತ್ತಂ ದುರ್ಯೋಧನಸ್ಯ ಚ ।**
**ಅನುನೇತುಮಿಹಾರ್ಹಂತಿ ಧೃತರಾಷ್ಟ್ರಂ ಸುಹೃಜ್ಜನಾಃ ॥೧೪॥**

ಪಾಂಡವರ ನಡತೆಯನ್ನು ತಿಳಿದು ಹಾಗೆಯೇ ದುರ್ಯೋಧನನ ನಡತೆಯನ್ನೂ ತಿಳಿದು ಸುಹೃಜ್ಜನರು ಧೃತರಾಷ್ಟ್ರನಿಗೆ ಬುದ್ಧಿಯನ್ನು ಹೇಳಬೇಕು.

**ನ ಹಿ ತೇ ವಿಗ್ರಹಂ ವೀರಾಃ ಕುರ್ವಂತಿ ಕುರುಭಿಃ ಸಹ ।**
**ಅವಿನಾಶೇನ ಲೋಕಸ್ಯ ಕಾಂಕ್ಷಂತೇ ಪಾಂಡವಾಃ ಸ್ವಕಮ್ ॥೧೫॥**

ವೀರರಾದ ಪಾಂಡವರು ಕುರುಗಳ ಜೊತೆಯಲ್ಲಿ ಯುದ್ಧವನ್ನು ಬಯಸುವುದಿಲ್ಲ. ಲೋಕಕ್ಕೆ ವಿನಾಶವಾಗದಂತೆ ತಮ್ಮ ಪಿತೃಧನವನ್ನು ಮಾತ್ರ ಅಪೇಕ್ಷಿಸುತ್ತಾರೆ.

**ಯಶ್ಚಾಪಿ ಧಾರ್ತರಾಷ್ಟ್ರಸ್ಯ ಹೇತುಃ ಸ್ಯಾದ್ ವಿಗ್ರಹಂ ಪ್ರತಿ ।**
**ಸ ಚ ಹೇತುರ್ನ ಮಂತವ್ಯೋ ಬಲೀಯಾಂಸಸ್ತಥಾ ಹಿ ತೇ ॥೧೬॥**

ದುರ್ಯೋಧನನು ಯುದ್ಧವನ್ನು ಮಾಡಲು ಯಾವುದಾದರೂ ಕಾರಣವಿದೆ ಎಂದು ತಿಳಿದರೆ ಅದನ್ನು ಕಾರಣವೆಂದು ತಿಳಿಯಬಾರದು. ಆ ಪಾಂಡವರು ಬಹಳ ಬಲಿಷ್ಠರಾದವರು.

**ಅಕ್ಷೋಹಿಣ್ಯಶ್ಚ ಸ್ತೈವ ಧರ್ಮರಾಜಸ್ಯ ಸಂಗತಾಃ ।**
**ಯುಯುತ್ಸಮಾನಾಃ ಕುರುಭಿಃ ಪ್ರತೀಕ್ಷಂತೇಽಸ್ಯ ಶಾಸನಮ್ ॥೧೭॥**

ಧರ್ಮರಾಜನ ಬಳಿಯಲ್ಲಿ ಏಳು ಅಕ್ಷೋಹಿಣಿ ಸೈನ್ಯವು ಒಟ್ಟಾಗಿದೆ. ಅವರು ಕುರುಗಳ ಜೊತೆಯಲ್ಲಿ ಯುದ್ಧಮಾಡಲು ಬಯಸಿ ಧರ್ಮರಾಜನ ಆಜ್ಞೆಯನ್ನು ನಿರೀಕ್ಷಿಸುತ್ತಿದ್ದಾರೆ.

**ಅಪರೇ ಪುರುಷವ್ಯಾಘ್ರಾಃ ಸಹಸ್ರಾಕ್ಷೋಹಿಣೀಸಮಾಃ ।**
**ಸಾತ್ಯಕಿರ್ಭೀಮಸೇನಶ್ಚ ಯಮೌ ಚ ಸುಮಹಾಬಲೌ ॥೧೮॥**

ಇನ್ನು ಉಳಿದ ಪುರುಷವ್ಯಾಘ್ರರಾದ ಸಾತ್ಯಕಿ, ಭೀಮಸೇನ, ಮಹಾಬಲಿಷ್ಠರಾದ ನಕುಲ-ಸಹದೇವರು ಒಬ್ಬೊಬ್ಬರೂ ಸಾವಿರ ಅಕ್ಷೋಹಿಣಿಗೆ ಸಮನಾದವರು.

ಏಕಾದಶೈತಾಃ ಪೃತನಾ ಏಕತಸ್ತೇ ಸಮಾಗತಾಃ ।
ಏಕತಶ್ಚ ಮಹಾಬಾಹುರ್ಬಹುರೂಪೋ ಧನಂಜಯಃ ॥೧೯॥

ನಿನಗೆ ಹನ್ನೊಂದು ಅಕ್ಷೌಹಿಣಿ ಸೈನ್ಯವು ಒಟ್ಟುಗೂಡಿದೆ. ಅದು ಒಂದು ಕಡೆ. ಇನ್ನೊಂದು ಕಡೆ ಮಹಾಬಾಹುವೂ ಮತ್ತು ಬಹುರೂಪಧರನೂ ಆದ ಅರ್ಜುನನೊಬ್ಬನೇ ಸಾಕು.

ಯಥಾ ಕಿರೀಟೀ ಸರ್ವಾಭ್ಯಃ ಸೇನಾಭ್ಯೋಽಪ್ಯತಿರಿಚ್ಯತೇ ।
ಏವಮೇವ ಮಹಾಬಾಹುರ್ವಾಸುದೇವೋ ಮಹಾದ್ಯುತಿಃ ॥೨೦॥

ಹೇಗೆ ಅರ್ಜುನನು ಎಲ್ಲಾ ಸೇನೆಗಳಿಗಿಂತಲೂ ಮಿಗಿಲಾಗಿದ್ದಾನೆಯೋ ಅದರಂತೆ ಮಹಾಬಾಹುವೂ ಮಹಾದ್ಯುತಿಯೂ ಆದ ಕೃಷ್ಣನು ಎಲ್ಲರಿಗಿಂತಲೂ ಮಿಗಿಲಾಗಿದ್ದಾನೆ.

ಬಹುಲತ್ವಂ ಚ ಸೇನಾಯಾಂ ವಿಕ್ರಮಂ ಚ ಕಿರೀಟಿನಃ ।
ಬುದ್ಧಿಮತ್ತ್ವಂ ಚ ಕೃಷ್ಣಸ್ಯ ಬುದ್ಧ್ವಾ ಯುಧ್ಯೇತ ಕೋ ನರಃ ॥೨೧॥

ಸೈನ್ಯದ ಅಗಾಧತೆಯನ್ನೂ, ಅರ್ಜುನನ ಪರಾಕ್ರಮವನ್ನೂ ಮತ್ತು ಕೃಷ್ಣನ ಬುದ್ಧಿಶಕ್ತಿಯನ್ನೂ ತಿಳಿದ ಯಾವ ಮನುಷ್ಯನು ಅವರ ವಿರುದ್ಧ ಯುದ್ಧಮಾಡಿಯಾನು?

ತೇ ಭವಂತೋ ಯಥಾ ಧರ್ಮಂ ಯಥಾಽನಾಮಯಮೇವ ಚ ।
ಪ್ರಯಚ್ಛಂತು ಪ್ರದಾತವ್ಯಂ ಮಾ ವಃ ಕಾಲೋಽತ್ಯಗಾದಯಮ್ ॥೨೨॥

ಅಂತಹ ನೀವು ಧರ್ಮಕ್ಕೆ ಅನುಗುಣವಾಗಿ ಕ್ಷೇಮದಿಂದ ಪಾಂಡವರಿಗೆ ಏನು ಸಲ್ಲಬೇಕೋ ಅದನ್ನು ಕೊಡಿ. ಕಾಲವು ಮೀರಿ ಹೋಗದಿರಲಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ವಿಂಶೋಽಧ್ಯಾಯಃ ॥

॥ ಸಂಜಯಯಾನಪರ್ವಣಿ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಇಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

# ಇಪ್ಪತ್ತೊಂದನೆಯ ಅಧ್ಯಾಯ

ಪುರೋಹಿತರ ಮಾತಿಗೆ ಭೀಷ್ಮರ ಅನುಮೋದನೆ, ಕರ್ಣನ ಆಕ್ಷೇಪ ಮತ್ತು ಧೃತರಾಷ್ಟ್ರನ ಉತ್ತರ.

**ವೈಶಂಪಾಯನಃ**

**ತಸ್ಯ ತದ್ವಚನಂ ಶ್ರುತ್ವಾ ಪ್ರಜ್ಞಾವೃದ್ಧೋ ಮಹಾದ್ಯುತಿಃ ।**
**ಸಂಪೂಜ್ಯೈನಂ ಯಥಾಕಾಲಂ ಭೀಷ್ಮೋ ವಚನಮಬ್ರವೀತ್ ॥೧॥**

ವೈಶಂಪಾಯನ– ಪುರೋಹಿತನ ಆ ಮಾತುಗಳನ್ನು ಕೇಳಿ ಮಹಾದ್ಯುತಿಯೂ, ಜ್ಞಾನವೃದ್ಧನೂ ಆದ ಭೀಷ್ಮನು ಅವನನ್ನು ಪೂಜಿಸಿ, ಆ ಕಾಲಕ್ಕೆ ಉಚಿತವಾದ ಮಾತುಗಳನ್ನು ಆಡಿದನು.

**ದಿಷ್ಟ್ಯಾ ಕುಶಲಿನಃ ಸರ್ವೇ ಸಹ ದಾಮೋದರೇಣ ತೇ ।**
**ದಿಷ್ಟ್ಯಾ ಸಹಾಯವಂತಶ್ಚ ದಿಷ್ಟ್ಯಾ ಧರ್ಮೇ ಚ ತೇ ರತಾಃ ॥೨॥**

ದೇವರ ದಯದಿಂದ ಕೃಷ್ಣನ ಜೊತೆಯಲ್ಲಿ ಪಾಂಡವರೆಲ್ಲರೂ ಕುಶಲದಿಂದಿದ್ದಾರೆ. ದೇವರ ದಯದಿಂದ ಅವರು ಸಹಾಯವನ್ನು ಹೊಂದಿದವರು ಮತ್ತು ಧರ್ಮದಲ್ಲಿ ನಿರತರೂ ಆಗಿದ್ದಾರೆ.

**ದಿಷ್ಟ್ಯಾ ಚ ಸಂಧಿಕಾಮಾಸ್ತೇ ಭ್ರಾತರಃ ಕುರುನಂದನಾಃ ।**
**ದಿಷ್ಟ್ಯಾ ನ ಯುದ್ಧಮನಸಃ ಪಾಂಡವಾಃ ಸಹ ಬಾಂಧವೈಃ ॥೩॥**

ಕುರುನಂದನರಾದ ಆ ಸಹೋದರರು ದೇವರ ದಯದಿಂದ ಸಂಧಿಯನ್ನು ಬಯಸುವವರಾಗಿದ್ದಾರೆ. ದೇವರ ದಯದಿಂದಲೇ ಪಾಂಡವರು ಬಂಧುಗಳ ಜೊತೆಯಲ್ಲಿ ಯುದ್ಧವನ್ನು ಮಾಡುವ ಮನಸ್ಸನ್ನು ಹೊಂದಿಲ್ಲ.

**ಭವತಾ ಸತ್ಯಮುಕ್ತಂ ತು ಸರ್ವಮೇತನ್ನ ಸಂಶಯಃ ।**
**ಅತಿತೀಕ್ಷ್ಣಂ ತು ತೇ ವಾಕ್ಯಂ ಬ್ರಾಹ್ಮಣ್ಯಾದಿತಿ ಮೇ ಮತಿಃ ॥೪॥**

ನೀವು ಹೇಳಿದ ಎಲ್ಲ ಮಾತುಗಳೂ ಸತ್ಯವಾಗಿವೆ. ಇದರಲ್ಲಿ ಸಂಶಯವಿಲ್ಲ. ಆದರೆ ನೀವು ಬ್ರಾಹ್ಮಣರಾದ ಕಾರಣದಿಂದ ನಿಮ್ಮ ಮಾತುಗಳು ಬಹಳ ತೀಕ್ಷ್ಣ ಎಂದು ನನ್ನ ಅಭಿಪ್ರಾಯ.

ಅಸಂಶಯಂ ಕ್ಲೇಶಿತಾಸ್ತೇ ವನೇ ಚೈವಂ ಚ ಪಾಂಡವಾಃ ।
ಪ್ರಾಪ್ತಾಶ್ಚ ಧರ್ಮತಃ ಸರ್ವಂ ಪಿತುರ್ಧನಮಸಂಶಯಮ್ ॥೫॥

ಪಾಂಡವರು ವನವಾಸದಲ್ಲಿ ನಿಸ್ಸಂಶಯವಾಗಿ ಹೀಗೆ ಕ್ಲೇಶಕ್ಕೆ ಒಳಗಾಗಿದ್ದಾರೆ. ಮತ್ತು ನಿಸ್ಸಂಶಯವಾಗಿ ಧರ್ಮದಿಂದಲೇ ತಮ್ಮ ಪಿತೃಧನವನ್ನು ಪಡೆದವರಾಗಿದ್ದಾರೆ.

ಕಿರೀಟೀ ಬಲವಾನ್ ಶೂರಃ ಕೃತಾಸ್ತ್ರಶ್ಚ ಮಹಾದ್ಯುತಿಃ ।
ಕೋ ಹಿ ಪಾಂಡುಸುತಂ ಯುದ್ಧೇ ವಿಷಹೇತ ಧನಂಜಯಮ್ ॥೬॥

ಅಪಿ ವಜ್ರಧರಃ ಸಾಕ್ಷಾತ್ ಕಿಮುತಾನ್ಯೇ ಧನುರ್ಭೃತಃ ।
ತ್ರಯಾಣಾಮಪಿ ಲೋಕಾನಾಂ ಸಮರ್ಥ ಇತಿ ಮೇ ಮತಿಃ ॥೭॥

ಅರ್ಜುನನು ಬಲಿಷ್ಠನೂ, ಶೂರನೂ, ಅಸ್ತ್ರಪರಿಣತನೂ ಮತ್ತು ಮಹಾತೇಜಸ್ಸುಳ್ಳವನೂ ಆಗಿದ್ದಾನೆ. ಸಾಕ್ಷಾತ್ ವಜ್ರಧರನಾದ ಇಂದ್ರನೇ ಸಹ ಪಾಂಡುಸುತನಾದ ಅರ್ಜುನನನ್ನು ಹೇಗೆ ಯುದ್ಧದಲ್ಲಿ ಎದುರಿಸಿಯಾನು? ಇನ್ನು ಉಳಿದ ಧನುರ್ಧಾರಿಗಳ ಪಾಡೇನು? ಅವನು ಒಬ್ಬನೇ ಮೂರುಲೋಕಗಳನ್ನು ಜಯಿಸಲು ಸಮರ್ಥನಾಗಿದ್ದಾನೆ ಎಂದು ನನ್ನ ಅಭಿಪ್ರಾಯ.

ವೈಶಂಪಾಯನಃ

ಭೀಷ್ಮೇ ಬ್ರುವತಿ ತದ್ ವಾಕ್ಯಂ ಧೃಷ್ಟಮಾಕ್ಷಿಪ್ಯ ಮನ್ಯುನಾ ।
ದುರ್ಯೋಧನಂ ಸಮಾಲೋಕ್ಯ ಕರ್ಣೋ ವಚನಮಬ್ರವೀತ್ ॥೮॥

ವೈಶಂಪಾಯನ– ಭೀಷ್ಮನು ಈ ಮಾತನ್ನು ಆಡುತ್ತಿರಲು ಕರ್ಣನು ಸಿಟ್ಟಿನಿಂದ ಅದನ್ನು ಆಕ್ಷೇಪಿಸಿ ದುರ್ಯೋಧನನನ್ನು ನೋಡುತ್ತಾ ಉದ್ಧಟತನದಿಂದ ಮಾತನಾಡಿದನು.

ನ ತನ್ನ ವಿದಿತಂ ಬ್ರಹ್ಮನ್ ಲೋಕೇ ಭೂತೇನ ಕೇನಚಿತ್ ।
ಪುನರುಕ್ತೇನ ಕಿಂ ತೇನ ಭಾಷಿತೇನ ಪುನಃ ಪುನಃ ॥೯॥

ಬ್ರಾಹ್ಮಣನೇ, ನೀನು ಹೇಳಿದ ವಿಷಯವು ಲೋಕದಲ್ಲಿ ಯಾರಿಗೂ ತಿಳಿದಿಲ್ಲವೆಂದಿಲ್ಲ. ಅದನ್ನು ಮತ್ತೆ ಮತ್ತೆ ಹೇಳುವುದರಿಂದ ಏನು ಪ್ರಯೋಜನ?

ದುರ್ಯೋಧನಾರ್ಥೇ ಶಕುನಿಃ ದ್ಯೂತೇ ನಿರ್ಜಿತವಾನ್ ಪುರಾ ।
ಸಮಯೇನ ಗತೋಽರಣ್ಯಂ ಪಾಂಡುಪುತ್ರೋ ಯುಧಿಷ್ಠಿರಃ ॥೧೦॥

ಹಿಂದೆ ದ್ಯೂತದಲ್ಲಿ ದುರ್ಯೋಧನನ ಪರವಾಗಿ ಶಕುನಿಯು ಗೆದ್ದನು. ಪಾಂಡುಪುತ್ರನಾದ ಯುಧಿಷ್ಠಿರನು ಮಾಡಿಕೊಂಡ ನಿಯಮದಂತೆ ಅರಣ್ಯಕ್ಕೆ ಹೋದನು.

ಸ ತಂ ಸಮಯಮುತ್ಸೃಜ್ಯ ರಾಜ್ಯಮಿಚ್ಛತಿ ಪೈತೃಕಮ್ ।
ಬಲಮಾಶ್ರಿತ್ಯ ಮತ್ಸ್ಯಾನಾಂ ಪಾಂಚಾಲಾನಾಂ ಯುಧಿಷ್ಠಿರಃ ॥೧೧॥

ಈಗ ಧರ್ಮರಾಜನು ಆ ನಿಯಮವನ್ನು ಬಿಟ್ಟು ಮತ್ಸ್ಯರ ಮತ್ತು ಪಾಂಚಾಲರ ಬಲವನ್ನು ಅವಲಂಬಿಸಿ ತಂದೆಯ ರಾಜ್ಯವನ್ನು ಪಡೆಯಲು ಬಯಸುತ್ತಾನೆ.

ದುರ್ಯೋಧನೋ ಭಯಾದ್ ವಿದ್ವನ್ ನ ದದ್ಯಾತ್ ಪಾದಮಂತತಃ ।
ಧರ್ಮತಸ್ತು ಮಹೀಂ ಕೃತ್ಸ್ನಾಂ ಪ್ರದದ್ಯಾಚ್ಛತ್ರವೇಽಪಿ ಚ ॥೧೨॥

ಎಲೈ ವಿದ್ವಾಂಸನೇ, ದುರ್ಯೋಧನನು ಭಯದಿಂದ ಒಂದು ಹೆಜ್ಜೆ ಭೂಮಿಯನ್ನೂ ಕೊಡಲಾರ. ಧರ್ಮದಿಂದಾದರೆ ಮಾತ್ರ ಶತ್ರುವಿಗೂ ಸಹ ಸಮಗ್ರವಾದ ಭೂಮಿಯನ್ನೇ ಕೊಟ್ಟಾನು.

ಯದಿ ಕಾಂಕ್ಷಂತಿ ತೇ ರಾಜ್ಯಂ ಪಿತೃಪೈತಾಮಹಂ ಪುನಃ ।
ಯಥಾಪ್ರತಿಜ್ಞಂ ತಂ ಕಾಲಂ ಚರಂತು ವನಮಾಶ್ರಿತಾಃ ॥೧೩॥

ಪಾಂಡವರು ತಮ್ಮ ಪಿತೃ-ಪೈತಾಮಹ ರಾಜ್ಯವನ್ನು ಅಪೇಕ್ಷಿಸುವುದಾದರೆ ಮೊದಲು ಪ್ರತಿಜ್ಞೆ ಮಾಡಿದಂತೆ ಪುನಃ ಅಷ್ಟು ಕಾಲವನ್ನು ಕಾಡಿನಲ್ಲಿ ಕಳೆಯಲಿ.

ತತೋ ದುರ್ಯೋಧನಸ್ಯಾಂಕೇ ವರ್ತಂತಾಮಕುತೋಭಯಾಃ ।
ಅಧಾರ್ಮಿಕೀಂ ತ್ವಿಮಾಂ ಬುದ್ಧಿಂ ಮೌಖ್ರ್ಯಾತ್ ಕುರ್ವಂತಿ ಕೇವಲಾತ್॥

ಅನಂತರ ದುರ್ಯೋಧನನ ತೊಡೆಯಲ್ಲಿ ನಿರ್ಭಯವಾಗಿ ಮಲಗಬಹುದು. ಆದರೆ ಅವರು ಕೇವಲ ಮೂರ್ಖತನದಿಂದ ಈ ಅಧಾರ್ಮಿಕವಾದ ಬುದ್ಧಿಯನ್ನು ಮಾಡುತ್ತಿದ್ದಾರೆ.

ಅಥ ತೇ ಧರ್ಮಮುತ್ಸೃಜ್ಯ ಯುದ್ಧಮಿಚ್ಛಂತಿ ಪಾಂಡವಾಃ ।
ಆಸಾದ್ಯೇಮಾನ್ ಕುರುಶ್ರೇಷ್ಠಾನ್ ಸ್ಮರಿಷ್ಯಂತಿ ವಚೋ ಮಮ ॥೧೫॥

ಇನ್ನು ಧರ್ಮವನ್ನು ಬಿಟ್ಟು ಪಾಂಡವರು ಯುದ್ಧವನ್ನು ಬಯಸುವುದಾದರೆ ಈ ಕುರುಶ್ರೇಷ್ಠರನ್ನು ಎದುರಿಸಿ ನನ್ನ ಮಾತನ್ನು ಸ್ಮರಿಸುವರು.

ಭೀಷ್ಮಃ

ಕಿಂ ನು ರಾಧೇಯ ವಾಚಾ ತೇ ಕರ್ಮ ತತ್ ಸ್ಮರ್ತುಮರ್ಹಸಿ ।
ಏಕ ಏವ ಯದಾ ಪಾರ್ಥಃ ಷಡ್ರಥಾನ್ ಜಿತವಾನ್ ಯುಧಿ ॥೧೬॥

ಭೀಷ್ಮ– ರಾಧೇಯನೇ, ನಿನ್ನ ಮಾತಿನಿಂದ ಏನು ಪ್ರಯೋಜನ? ಅರ್ಜುನನೊಬ್ಬನೇ ಯುದ್ಧದಲ್ಲಿ ಆರು ಮಹಾರಥರನ್ನು ಗೆದ್ದಾಗ ಏನು ಕರ್ಮವನ್ನು ಮಾಡಿದನೋ ಅದನ್ನು ನೀನು ಸ್ಮರಿಸು.

ವಿರಾಟನಗರೇ ಧೀರಃ ಕಿಂ ತ್ವಂ ತತ್ರೈವ ನಾಗತಃ ।
ಬಹುಶೋ ಜೀಯಮಾನಸ್ಯ ಕರ್ಮ ದೃಷ್ಟಂ ತದೈವ ತೇ ॥೧೭॥

ಧೀರನಾದ ಅರ್ಜುನನು ವಿರಾಟನಗರದಲ್ಲಿ ಆ ಕಾರ್ಯವನ್ನು ಎಸಗಿದಾಗ ನೀನು ಅಲ್ಲಿಗೆ ಬಂದಿರಲಿಲ್ಲವೇ? ಅನೇಕ ಬಾರಿ ಸೋಲನ್ನು ಅನುಭವಿಸಿದ ನಿನ್ನ ಕಾರ್ಯವು ಅಲ್ಲಿಯೇ ದೃಷ್ಟವಾಯಿತು.

ನ ಚೇದಿದಂ ಕರಿಷ್ಯಾಮೋ ಯದಯಂ ಬ್ರಾಹ್ಮಣೋಽಬ್ರವೀತ್ ।
ಧ್ರುವಂ ಯುಧಿ ಹತಾಸ್ತೇನ ಭಕ್ಷಯಿಷ್ಯಾಮ ಪಾಂಸುಕಾನ್ ॥೧೮॥

ದುರ್ಯೋಧನಃ ಸಹಾಮಾತ್ಯೋ ವಿನಂಕ್ಷ್ಯತಿ ನ ಸಂಶಯಃ ॥೧೯॥

ಈ ಬ್ರಾಹ್ಮಣನು ಹೇಳುವ ಕಾರ್ಯವನ್ನು ನಾವು ಮಾಡದಿದ್ದರೆ ಖಂಡಿತವಾಗಿ ನಾವು ಯುದ್ಧದಲ್ಲಿ ಪರಾಭವವನ್ನು ಹೊಂದಿ ಮಣ್ಣನ್ನು ತಿನ್ನುವೆವು. ದುರ್ಯೋಧನನು ತನ್ನ ಅಮಾತ್ಯರ ಜೊತೆಯಲ್ಲಿ ವಿನಾಶವನ್ನು ಹೊಂದುವುದರಲ್ಲಿ ಸಂಶಯವಿಲ್ಲ.

ಧೃತರಾಷ್ಟ್ರಸ್ತತೋ ಭೀಷ್ಮಮನುಮಾನ್ಯ ಪ್ರಸಾದ್ಯ ಚ ।
ಅವಭರ್ತ್ಸ್ಯ ಚ ರಾಧೇಯಮಿದಂ ವಚನಮಬ್ರವೀತ್ ॥೨೦॥

ಅನಂತರ ಧೃತರಾಷ್ಟ್ರನು ಭೀಷ್ಮನಿಗೆ ಸಮ್ಮತಿಯನ್ನು ಸೂಚಿಸಿ, ಅವನನ್ನು ಸಮಾಧಾನಗೊಳಿಸಿ ಕರ್ಣನನ್ನು ಗದರಿಸಿ ಮಾತನಾಡಿದನು.

**ಅಸ್ಮದ್ಧಿತಮಿದಂ ವಾಕ್ಯಮುಕ್ತವಾನ್ ಜಾಹ್ನವೀಸುತಃ ।**
**ಪಾಂಡವಾನಾಂ ಹಿತಂ ಚೈವ ಸರ್ವಸ್ಯ ಜಗತಸ್ತಥಾ ॥೨೧॥**

ಗಂಗಾಸುತನಾದ ಭೀಷ್ಮನು ಪಾಂಡವರಿಗೂ, ನಮಗೂ ಮತ್ತು ಸರ್ವಜಗತ್ತಿಗೂ ಹಿತವಾದ ಮಾತುಗಳನ್ನು ಆಡಿದ್ದಾನೆ.

**ಚಿಂತಯಿತ್ವಾ ತು ಪಾರ್ಥೇಭ್ಯಃ ಪ್ರೇಷಯಿಷ್ಯಾಮಿ ಸಂಜಯಮ್ ।**
**ಭಗವಾನ್ ಪ್ರತಿಯಾತ್ವದ್ಯ ಪಾಂಡವಾನೇವ ಮಾ ಚಿರಮ್ ॥೨೨॥**

ಪೂಜ್ಯರೇ, ನಾನು ವಿಚಾರ ಮಾಡಿ ಪಾಂಡವರ ಬಳಿಗೆ ಸಂಜಯನನ್ನು ದೂತನಾಗಿ ಕಳುಹಿಸುವೆನು. ತಾವು ಈಗ ಶೀಘ್ರವಾಗಿ ಪಾಂಡವರ ಬಳಿಗೇ ಹಿಂದಿರುಗಿ.

**ವೈಶಂಪಾಯನಃ**

**ಸ ತಂ ಸತ್ಕೃತ್ಯ ಕೌರವ್ಯಃ ಪ್ರೇಷಯಾಮಾಸ ಪಾಂಡವಾನ್ ।**
**ಸಭಾಮಧ್ಯೇ ಸಮಾಹೂಯ ಸಂಜಯಂ ವಾಕ್ಯಮಬ್ರವೀತ್ ॥೨೩॥**

**ವೈಶಂಪಾಯನ–** ಧೃತರಾಷ್ಟ್ರನು ಆ ಬ್ರಾಹ್ಮಣರನ್ನು ಸತ್ಕರಿಸಿ ಪಾಂಡವರ ಬಳಿಗೆ ಕಳುಹಿಸಿದನು. ಅನಂತರ ಸಭಾಮಧ್ಯದಲ್ಲಿ ಸಂಜಯನನ್ನು ಕರೆದು ಮಾತನಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕವಿಂಶೋಽಧ್ಯಾಯಃ ॥

॥ ಸಂಜಯಯಾನಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಇಪ್ಪತ್ತೊಂದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

# ಇಪ್ಪತ್ತೆರಡನೆಯ ಅಧ್ಯಾಯ

ಧೃತರಾಷ್ಟ್ರನಿಂದ ಪಾಂಡವರ ಬಳಿಗೆ ದೂತನಾಗಿ ಸಂಜಯನ ಪ್ರೇಷಣ.

**ಧೃತರಾಷ್ಟ್ರಃ**

**ಪ್ರಾಪ್ತಾನಾಹುಃ ಸಂಜಯ ಪಾಂಡುಪುತ್ರಾನ್**
**ಉಪಪ್ಲಾವ್ಯೇ ತಾನ್ ವಿಜಾನೀಹಿ ಗತ್ವಾ ।**
**ಅಜಾತಶತ್ರುಂ ಚ ಸಭಾಜಯೇಥಾ**
**ದಿಷ್ಟ್ಯಾ ಭವಾನ್ ಗ್ರಾಮಮುಪಾಗತಸ್ತಮ್** ॥೧॥

ಧೃತರಾಷ್ಟ್ರ– ಎಲೈ ಸಂಜಯನೇ, ಪಾಂಡುಪುತ್ರರು ಉಪಪ್ಲಾವ್ಯಕ್ಕೆ ಬಂದಿದ್ದಾರೆ ಎಂದು ಹೇಳುತ್ತಾರೆ. ಹೋಗಿ ಅವರನ್ನು ನೋಡು. ಅಜಾತಶತ್ರುವನ್ನು ಸನ್ಮಾನಿಸು. ದೇವರ ದಯದಿಂದ ನೀನು ನಿನ್ನ ಗ್ರಾಮದಿಂದ ನಮ್ಮ ಗ್ರಾಮಕ್ಕೆ ಬಂದಿದ್ದೀಯೆ.

**ಸರ್ವಾನ್ ವದೇಃ ಸಂಜಯ ಸ್ವಸ್ತಿಮಂತಃ**
**ಕೃಚ್ಛ್ರಂ ವಾಸಮತದರ್ಹಂ ನಿರೂಪ್ಯ ।**
**ತೇಷಾಂ ಶಾಂತಿರ್ವಿದ್ಯತೇಽಸ್ಮಾಸು ಶೀಘ್ರಂ**
**ಮಿಥ್ಯೋಪೇತಾನಾಮಪಕಾರಿಣಾಂ ಚ** ॥೨॥

ಸಂಜಯನೇ, ವನವಾಸಕ್ಕೆ ಅರ್ಹರಲ್ಲದ ನೀವು ಕಷ್ಟಕರವಾದ ವನವಾಸವನ್ನು ಮುಗಿಸಿದಿರಿ ಎಂದು ಹೇಳಿ ನಾವೆಲ್ಲರೂ ಕುಶಲಿಗಳಾಗಿದ್ದೇವೆ ಎಂದು ಹೇಳು. ನಾವು ಅವರಿಗೆ ಮೋಸದಿಂದ ನಡೆದುಕೊಂಡು ಅಪಕಾರವನ್ನು ಮಾಡಿದ್ದರೂ ಅವರು ನಮ್ಮಲ್ಲಿ ಶಾಂತಿಯನ್ನೇ ಹೊಂದಿದ್ದಾರೆ.

**ನಾಹಂ ಕ್ವಚಿತ್ ಸಂಜಯ ಪಾಂಡವಾನಾಂ**
**ಮಿಥ್ಯಾವೃತ್ತಿಂ ಕಾಂಚನ ಜಾತ್ವಪಶ್ಯಮ್ ।**
**ಸರ್ವಾಂ ಶ್ರಿಯಂ ಹ್ಯಾತ್ಮವೀರ್ಯೇಣ ಲಬ್ಧಾಂ**
**ಪರ್ಯಾಕಾರ್ಷುಃ ಪಾಂಡವಾ ಮಹ್ಯಮೇವ** ॥೩॥

ಸಂಜಯನೇ, ನಾನು ಪಾಂಡವರಲ್ಲಿ ಎಂದೂ ಒಂದಾದರೂ ಮೋಸದ ನಡವಳಿಕೆಯನ್ನು ನೋಡಲಿಲ್ಲ. ಅವರು ತಮ್ಮ ಪರಾಕ್ರಮದಿಂದ ಗಳಿಸಿದ ಎಲ್ಲ ಸಂಪತ್ತನ್ನೂ ನನಗೇ ಒಪ್ಪಿಸಿದರು.

ದೋಷಂ ಹ್ಯೇಷಾಂ ನಾಧಿಗಚ್ಛೇತ್ ಪರೀಪ್ಸನ್
ನಿತ್ಯಂ ಯೋ ನ ಗರ್ಭೇಽಪಿ ಪಾರ್ಥಾನ್ ।
ಧರ್ಮಾರ್ಥಾಭ್ಯಾಂ ಕರ್ಮ ಕುರ್ವಂತಿ ನಿತ್ಯಂ
ಸುಖಪ್ರಿಯಾ ನಾನುರುಧ್ಯಂತಿ ಕಾಮಾನ್ ॥೪॥

ಎಷ್ಟು ಪರೀಕ್ಷಿಸಿದರೂ ಪಾಂಡವರಲ್ಲಿ ಗರ್ಭದಿಂದಲಾದರೂ ಒಂದು ದೋಷವು ಕಾಣುವುದಿಲ್ಲ. ಅವರು ಯಾವಾಗಲೂ ಧರ್ಮಾರ್ಥಗಳನ್ನು ಅನುಸರಿಸಿ ಕಾರ್ಯವನ್ನು ಮಾಡುತ್ತಾರೆ. ಸುಖಪ್ರಿಯರಾಗಿ ಕಾಮವನ್ನು ಅನುಸರಿಸುವುದಿಲ್ಲ.

ಧರ್ಮಂ ಶೀತಂ ಕ್ಷುತ್ತಿಪಾಸೇ ತಥೈವ
ನಿದ್ರಾಂ ತಂದ್ರೀಂ ಕ್ರೋಧದರ್ಪೌ ಪ್ರಮಾದಮ್ ।
ಧೃತ್ಯಾ ಚೈವ ಪ್ರಜ್ಞಯಾ ಚಾಭಿಭೂಯ
ಧರ್ಮಾರ್ಥಯೋಗಾನ್ ಪ್ರತಿಪದ್ಯಂತಿ ಪಾರ್ಥಾಃ ॥೫॥

ಚಳಿ, ಬಿಸಿಲು, ಹಸಿವು, ನೀರಡಿಕೆಗಳು ಹಾಗೆಯೇ ನಿದ್ರೆ-ಆಲಸ್ಯ, ಕ್ರೋಧ-ದರ್ಪ, ಪ್ರಮಾದ ಇವೆಲ್ಲವನ್ನೂ ತಮ್ಮ ಪ್ರಜ್ಞೆ ಮತ್ತು ಧೈರ್ಯಗಳಿಂದ ಮೆಟ್ಟಿ ಪಾಂಡವರು ಧರ್ಮಾರ್ಥಗಳನ್ನು ಸಾಧಿಸುವ ಉಪಾಯವನ್ನೇ ಹಿಡಿಯುತ್ತಾರೆ.

ತ್ಯಜಂತಿ ಮಿತ್ರೇಷು ಧನಾನಿ ಕಾಲೇ
ನ ಸಂತ್ರಾಸಾಜ್ಜೀರ್ಯತೇ ಮೈತ್ರಮೇಷಾಮ್ ।
ಯಥಾರ್ಹಮಾನಾರ್ಥಕರಾ ಹಿ ಪಾರ್ಥಾಃ
ತೇಷಾಂ ದ್ವೇಷ್ಟಾ ನಾಸ್ತ್ಯಜಮೀಢಪಕ್ಷೇ ॥೬॥

ಅನ್ಯತ್ರ ಪಾಪಾದ್ ವಿಷಮಾನ್ ಮಂದಬುದ್ಧೇಃ
ದುರ್ಯೋಧನಾತ್ ಕ್ಷುದ್ರತರಾಚ್ಚ ಕರ್ಣಾತ್ ॥೭॥

ಯೋಗ್ಯವಾದ ಕಾಲದಲ್ಲಿ ಮಿತ್ರರಿಗೆ ಧನವನ್ನೂ ಕೊಡುತ್ತಾರೆ. ಅವರ ಸ್ನೇಹವು ಕಷ್ಟದಿಂದಾಗಿ ಸವೆದು ಹೋಗುವುದಿಲ್ಲ. ಪಾಂಡವರು ಅವರವರಿಗೆ ಯೋಗ್ಯವಾದ ಸತ್ಕಾರವನ್ನು ಮಾಡುವವರು. ಪಾಪಿಯೂ, ವಿಷಮನೂ, ಮಂದಬುದ್ಧಿಯೂ ಆದ ದುರ್ಯೋಧನನನ್ನೂ ಮತ್ತು ಅತ್ಯಂತ ಕ್ಷುದ್ರನಾದ ಕರ್ಣನನ್ನೂ ಬಿಟ್ಟು ಧರ್ಮರಾಜನ ಪಕ್ಷದಲ್ಲಿ ಅವರನ್ನು ದ್ವೇಷ ಮಾಡುವವನು ಯಾರೂ ಇಲ್ಲ.

ಪುತ್ರೋ ಮಹ್ಯಂ ಮೃತ್ಯುವಶಂ ಜಗಾಮ
ದುರ್ಯೋಧನಃ ಸಂಜಯ ರಾಗಬುದ್ಧಿಃ ॥೮॥

ಸಂಜಯನೇ, ಆಸೆಯಲ್ಲೇ ಬುದ್ಧಿಯನ್ನು ಹೊಂದಿರುವ ನನ್ನ ಮಗನಾದ ದುರ್ಯೋಧನನು ಮೃತ್ಯುವಶನಾಗಿದ್ದಾನೆ.

ಭಾಗಂ ಕರ್ತುಂ ಘಟತೇಽಮಂದಬುದ್ಧಿಃ
ಮಹಾತ್ಮನಾಂ ಸಂಜಯ ದೀಪ್ತತೇಜಸಾಮ್ ।
ತೇಷಾಂ ಹಿ ಮೇಽಹೀನಸುಖಃ ಪ್ರಿಯಾಣಾಂ
ಮಹಾತ್ಮನಾಂ ವರ್ಧಯತೇ ಹಿ ತೇಜಃ ॥೯॥

ಒಳ್ಳೆಯ ಪ್ರಜ್ಞೆ ಇದ್ದವನೂ ಮತ್ತು ಸುಖದಿಂದ ಚ್ಯುತನಾಗದವನೂ ಮಾತ್ರ ಎಲೈ ಸಂಜಯನೇ, ನನಗೆ ಪ್ರಿಯರಾದ ಬೆಳಗುವ ಸಾಮರ್ಥ್ಯವುಳ್ಳ ಮಹಾತ್ಮರಾದ ಅವರಿಗೆ ಭಾಗವನ್ನು ಕೊಡಲು ಒಪ್ಪುತ್ತಾನೆ. ಅಂತಹವನು ಮಹಾತ್ಮರಾದ ಅವರ ಸಾಮರ್ಥ್ಯವನ್ನು ಇನ್ನೂ ಹೆಚ್ಚು ಮಾಡುತ್ತಾನೆ.

ಉತ್ಥಾನವೀರ್ಯಃ ಸುಖಮೇಧಮಾನೋ
ದುರ್ಯೋಧನಃ ಸುಕೃತಂ ಮನ್ಯತೇ ತತ್ ।
ತೇಷಾಮಭಾಗಂ ಮನ್ಯತೇ ಯಚ್ಚ ಬಾಲಃ
ಶಕ್ಯಂ ಹರ್ತುಂ ಜೀವಿತಂ ಪಾಂಡವಾನಾಮ್ ॥೧೦॥

ಆರಂಭಶೂರನೂ, ಸುಖವಾಗಿ ಬೆಳೆದವನೂ ಆದ ದುರ್ಯೋಧನನು ಅವರನ್ನು ಕಾಡಿಗೆ ಕಳುಹಿಸಿದುದು ಒಳ್ಳೆಯ ಕಾರ್ಯವೆಂದು ಭಾವಿಸುತ್ತಾನೆ. ಬಾಲನಾದ ಅವನು ಅವರಿಗೆ ರಾಜ್ಯದಲ್ಲಿ ಭಾಗವಿಲ್ಲವೆಂದೂ ಮತ್ತು ಪಾಂಡವರ ಪ್ರಾಣವನ್ನು ಅಪಹರಿಸುವುದು ಸಾಧ್ಯವೆಂದೂ ಭಾವಿಸುತ್ತಾನೆ.

ಯಸ್ಯಾರ್ಜುನಃ ಪದವೀಂ ಕೇಶವಸ್ಯ
ವೃಕೋದರಃ ಸಾತ್ಯಕೋಽಜಾತಶತ್ರುಃ ।
ಮಾದ್ರೀಪುತ್ರೌ ಸೃಂಜಯಾಶ್ಚಾಪಿ ಯಾಂತಿ
ಪುರಾ ಯುದ್ಧಾತ್ ಸಾಧು ತಸ್ಯ ಪ್ರದಾನಮ್ ॥೧೧॥

ಯಾವ ಧರ್ಮರಾಜನ ಮಾರ್ಗವನ್ನು ಅರ್ಜುನನೂ, ಕೃಷ್ಣನೂ, ವೃಕೋದರನೂ, ಸಾತ್ಯಕಿಯೂ, ಮಾದ್ರಿಪುತ್ರರಾದ ನಕುಲಸಹದೇವರೂ ಮತ್ತು ಸುಹೃಜ್ಜನರೂ ಅನುಸರಿಸುತ್ತಾರೆಯೋ ಅಂತಹ ಅಜಾತಶತ್ರುವಾದ ಯುಧಿಷ್ಠಿರನಿಗೆ ಯುದ್ಧಕ್ಕಿಂತಲೂ ಮೊದಲೇ ಅವನ ಭಾಗವನ್ನು ಕೊಡುವುದು ಒಳ್ಳೆಯದು.

ಸ ಹ್ಯೇವೈಕಃ ಪೃಥಿವೀಂ ಸವ್ಯಸಾಚೀ
ಗಾಂಡೀವಧನ್ವಾ ಪ್ರಣುದೇದ್ ರಥಸ್ಥಃ ।
ತಥಾ ವಿಷ್ಣುಃ ಕೇಶವೋಽಪ್ಯಪ್ರಧೃಷ್ಯೋ
ಲೋಕತ್ರಯಸ್ಯಾಧಿಪತಿರ್ಮಹಾತ್ಮಾ ॥೧೨॥

ಗಾಂಡೀವಧನ್ವನಾದ ಸವ್ಯಸಾಚಿಯಾದ ಅರ್ಜುನನೇ ರಥದಲ್ಲಿ ಕುಳಿತು ಸಮಸ್ತವಾದ ಪೃಥಿವಿಯನ್ನು ಎದುರಿಸಿಯಾನು. ಹಾಗೆಯೇ ಮೂರುಲೋಕಗಳಿಗೆ ಅಧಿಪತಿಯಾದ ಮಹಾತ್ಮನಾದ ವಿಷ್ಣುವಾದ ಕೃಷ್ಣನೂ ಸಹ ಸೋಲಿಸಲು ಅಸಾಧ್ಯನಾದವನು.

ತಿಷ್ಠೇತ ಕಸ್ತಸ್ಯ ಮರ್ತ್ಯಃ ಪುರಸ್ತಾದ್
ಯಃ ಸರ್ವಲೋಕೇಷು ವರೇಣ್ಯ ಏಕಃ ।
ಪರ್ಜನ್ಯಘೋಷಾನ್ ಪ್ರವಪನ್ ಶರೌಘಾನ್
ಪತಂಗಸಂಘಾನಿವ ಶೀಘ್ರವೇಗಾನ್ ॥೧೩॥

ಯಾವನು ಎಲ್ಲ ಲೋಕಗಳಲ್ಲಿಯೂ ಶ್ರೇಷ್ಠನೂ ಮತ್ತು ಪೂಜ್ಯನೂ ಆಗಿದ್ದಾನೆಯೋ ಅಂತಹ ಅರ್ಜುನನ ಎದುರಿಗೆ ಯಾವ ಮನುಷ್ಯನು ತಾನೇ ನಿಲ್ಲಬಹುದು? ಯಾವನು ಶತ್ರುಸೈನಿಕರ ಮೇಲೆ ಮೇಘಗರ್ಜನೆಯಂತೆ ಸದ್ದುಮಾಡುವ ಶೀಘ್ರವೇಗವನ್ನು ಹೊಂದಿರುವ ಪತಂಗಗಳ ಸಮೂಹಗಳಂತಿರುವ ಬಾಣಗಳ ಮಳೆಯನ್ನು ಸುರಿಸುವನೋ ಅಂತಹ ಅರ್ಜುನನ ಮುಂದೆ ಯಾರು ನಿಲ್ಲಬಹುದು?

ದಿಶಂ ಹ್ಯುದೀಚೀಮಪಿ ಚೋತ್ತರಾನ್ ಕುರೂನ್
ಗಾಂಡೀವಧನ್ವೈಕರಥೋ ಜಿಗಾಯ ।
ಧನಂ ಚೈಷಾಮಾಹರತ್ ಸವ್ಯಸಾಚೀ ।
ಸೇನಾನುಗಾನ್ ಬಲಿದಾಂಶ್ಚೈವ ಚಕ್ರೇ ॥೧೪॥

ಗಾಂಡೀವಧನ್ವನಾದ ಅರ್ಜುನನು ಏಕರಥದಲ್ಲಿ ಕುಳಿತು ಉತ್ತರದಿಕ್ಕನ್ನೂ ಮತ್ತು ಉತ್ತರಕುರುಗಳನ್ನೂ ಗೆದ್ದನು. ಸವ್ಯಸಾಚಿಯೂ ಅವರ ಧನವನ್ನು ಗೆದ್ದು ಅವರು ತನ್ನ ಸೈನ್ಯವನ್ನು ಸೇರುವಂತೆ ಮತ್ತು ಕಪ್ಪವನ್ನು ಕೊಡುವಂತೆ ಮಾಡಿದನು.

ಯಶ್ಚೈವ ದೇವಾನ್ ಖಾಂಡವೇ ಸವ್ಯಸಾಚೀ
ಗಾಂಡೀವಧನ್ವಾ ಪ್ರಜಿಗಾಯ ಸೇಂದ್ರಾನ್ ।
ಉಪಾಹರತ್ ಫಲ್ಗುನೋ ಜಾತವೇದಸೇ
ಯಶೋ ಮಾನಂ ವರ್ಧಯನ್ ಪಾಂಡವಾನಾಮ್ ॥೧೫॥

ಆ ಸವ್ಯಸಾಚಿಯಾದ ಗಾಂಡೀವಧನ್ವನು, ಖಾಂಡವದಹನದಲ್ಲಿ ಇಂದ್ರನೇ ಮೊದಲಾದ ದೇವತೆಗಳನ್ನು ಗೆದ್ದನು. ಅರ್ಜುನನು ಅಗ್ನಿದೇವನಿಗೆ ಖಾಂಡವವನವನ್ನು ಉಪಹಾರವನ್ನಾಗಿ ಕೊಟ್ಟು ಪಾಂಡವರ ಕೀರ್ತಿಯನ್ನೂ ಮತ್ತು ಮರ್ಯಾದೆಯನ್ನೂ ಹೆಚ್ಚಿಸಿದನು.

ಗದಾಭೃತಾಂ ನಾಸ್ತಿ ಸಮೋऽದ್ಯ ಭೀಮಾದ್
ಹಸ್ತ್ಯಾರೋಹೇ ನಾಸ್ತಿ ಸಮಶ್ಚ ತಸ್ಯ ।
ರಥೇऽರ್ಜುನಾದಾಹುರದೀನಮೇನಂ
ಬಾಹ್ವೋರ್ಬಲೇನಾಯುತನಾಗವೀರ್ಯಮ್ ॥೧೬॥

ಗದಾಧಾರಿಗಳಲ್ಲಿ ಈ ದಿನ ಭೀಮನಿಗೆ ಸಮನಾದವರು ಯಾರೂ ಇಲ್ಲ. ಗಜಾರೋಹಿಗಳಲ್ಲೂ ಸಹಿತ ಅವನಿಗೆ ಸಮಾನರಾದವರು ಯಾರೂ ಇಲ್ಲ. ರಥದ ವಿಷಯದಲ್ಲಿಯೂ ಕೂಡ ಅವನು ಅರ್ಜುನನಿಗೆ ಕಡಿಮೆಯಾದವನಲ್ಲ ಎಂದು ಹೇಳುತ್ತಾರೆ. ಬಾಹುಬಲದ ವಿಷಯದಲ್ಲಿ ಅವನು ಹತ್ತುಸಾವಿರ ಆನೆಗಳ ಬಲವುಳ್ಳವನು.

ಸ ಶಿಕ್ಷಿತಃ ಕೃತವೈರಸ್ತರಸ್ವೀ
ದಹೇತ್ ಕ್ರುದ್ಧಸ್ತರಸಾ ಧಾರ್ತರಾಷ್ಟ್ರಾನ್ ।
ಸದಾऽತ್ಯಮರ್ಷೀ ಬಲವಾನ್ ನ ಶಕ್ಯೋ
ಯುದ್ಧೇ ಜೇತುಂ ವಾಸವೇನಾಪಿ ಸಾಕ್ಷಾತ್ ॥೧೭॥

ಅವನು ಚೆನ್ನಾದ ಯುದ್ಧಶಿಕ್ಷಣವನ್ನು ಹೊಂದಿದವನು. ದುರ್ಯೋಧನಾದಿಗಳಲ್ಲಿ ದ್ವೇಷವುಳ್ಳವನು ಮತ್ತು ಬಹಳ ವೇಗವುಳ್ಳವನು. ಸಿಟ್ಟಿನಿಂದ ಕೂಡಿದ ಅವನು

ಶೀಘ್ರವಾಗಿ ನನ್ನ ಎಲ್ಲ ಮಕ್ಕಳನ್ನೂ ಸುಟ್ಟಾನು. ಅವನು ಯಾವಾಗಲೂ ಬಹಳ ಕೋಪವುಳ್ಳವನು ಮತ್ತು ಬಲಿಷ್ಠನಾದವನು. ಸಾಕ್ಷಾತ್ ದೇವೇಂದ್ರನೇ ಬಂದರೂ ಯುದ್ಧದಲ್ಲಿ ಅವನನ್ನು ಜಯಿಸಲು ಸಾಧ್ಯವಿಲ್ಲ.

ಸುತೇಜಸೌ ಬಲಿನೌ ಶೀಘ್ರಹಸ್ತೌ
ಸುಶಿಕ್ಷಿತೌ ಭ್ರಾತರೌ ಫಲ್ಗುನೇನ ।
ಶ್ಯೇನೌ ಯಥಾ ಪಕ್ಷಿಪೂಗಾನ್ ರುಜಂತೌ
ನ ಶೇಷಯೇತಾಂ ಪ್ರವಿಭಜ್ಯ ಶತ್ರೂನ್ ॥೧೮॥

ಸಹೋದರರಾದ ನಕುಲ-ಸಹದೇವರು ಒಳ್ಳೆಯ ಪರಾಕ್ರಮವುಳ್ಳವರೂ, ಬಲಿಷ್ಠರೂ, ಕ್ಷಿಪ್ರಹಸ್ತರೂ ಮತ್ತು ಅರ್ಜುನನಿಂದ ಒಳ್ಳೆಯ ಶಿಕ್ಷಣವನ್ನು ಪಡೆದವರು. ಹದ್ದು ಉಳಿದ ಪಕ್ಷಿಸಮೂಹವನ್ನು ಹಿಂಸಿಸಿದಂತೆ ಅವರು ಶತ್ರುಗಳನ್ನು ಹರಿದು ಯಾರನ್ನೂ ಉಳಿಸುವುದಿಲ್ಲ.

ಏತದ್ ಬಲಂ ಪೂರ್ಣಮಸ್ಮಾಕಮೇವಂ
ಯತ್ ಸರ್ವಂ ತಾನ್ ಪ್ರಾಪ್ಯ ನಾಸ್ತೀತಿ ಮನ್ಯೇ ॥೧೯॥

ಈ ನಮ್ಮ ಸಂಪೂರ್ಣವಾದ ಸೈನ್ಯವು ಪಾಂಡವರನ್ನು ಎದುರಿಸಿ ಸಂಪೂರ್ಣವಾಗಿ ನಾಶವನ್ನು ಹೊಂದುವುದು ಎಂದು ಭಾವಿಸುತ್ತೇನೆ.

ತೇಷಾಂ ಮಧ್ಯೇ ವರ್ತಮಾನಸ್ತರಸ್ವೀ
ಧೃಷ್ಟದ್ಯುಮ್ನಃ ಪಾಂಡವಾನಾಮಿಹೈಕಃ ।
ಸಹಾಮಾತ್ಯಃ ಸೋಮಕಾನಾಂ ಪ್ರಬರ್ಹಃ
ಸಂತ್ಯಕ್ತಾತ್ಮಾ ಪಾಂಡವಾರ್ಥೇ ಶ್ರುತೋ ಮೇ ॥೨೦॥

ಆ ಪಾಂಡವರ ಸೈನ್ಯದ ಮಧ್ಯದಲ್ಲಿ ಇರುವ ಶೀಘ್ರಕಾರಿಯಾದ ಧೃಷ್ಟದ್ಯುಮ್ನನು ಒಬ್ಬ ಮುಖ್ಯನಾದವನು. ತನ್ನ ಅಮಾತ್ಯರಿಂದ ಕೂಡಿದ ಸೋಮಕಶ್ರೇಷ್ಠನಾದ ಅವನು ಪಾಂಡವರ ಸಲುವಾಗಿ ಪ್ರಾಣವನ್ನು ತೊರೆಯಲೂ ಸಿದ್ಧ ಎಂದು ನಾನು ಕೇಳಿದ್ದೇನೆ.

ಅಜಾತಶತ್ರುಂ ಪ್ರಸಹೇತ ಕೋಽನ್ಯೋ
ಯೇಷಾಂ ಸ ಸ್ಯಾದಗ್ರಣೀರ್ವೃಷ್ಣಿಸಿಂಹಃ ॥೨೧॥

ಯಾವ ಧರ್ಮರಾಜನಿಗೆ ವೃಷ್ಣಿವೀರನಾದ ಕೃಷ್ಣನು ನಾಯಕನಾಗಿದ್ದಾನೆಯೋ ಅಂತಹ ಧರ್ಮರಾಜನನ್ನು ಯಾರು ತಾನೇ ಎದುರಿಸಬಹುದು?

ಸಹೋಷಿತಶ್ಚರಿತಾರ್ಥೋ ವಯಃಸ್ಥೋ
ಮಾತ್ಸ್ಯೀಯಾನಾಮಧಿಪೋ ವೈ ವಿರಾಟಃ ।
ಸ ವೈ ಸಪುತ್ರಃ ಪಾಂಡವಾರ್ಥೇ ಚ ಶಶ್ವದ್
ಯುಧಿಷ್ಠಿರೇ ಭಕ್ತ ಇತಿ ಶ್ರುತಂ ಮೇ ॥೨೨॥

ಮತ್ಸ್ಯಾಧಿಪತಿಯಾದ ವಿರಾಟನು ಪಾಂಡವರ ಜೊತೆಯಲ್ಲಿ ವಾಸ ಮಾಡಿದವನು. ಒಳ್ಳೆಯ ಕಾರ್ಯವನ್ನು ಮಾಡಿದವನು ಮತ್ತು ಒಳ್ಳೆಯ ವಯಸ್ಸನ್ನು ಹೊಂದಿದವನು. ಅವನು ಯಾವಾಗಲೂ ಪಾಂಡವರ ಹಿತದ ಸಲುವಾಗಿ ತನ್ನ ಪುತ್ರರ ಜೊತೆಯಲ್ಲಿ ಯುಧಿಷ್ಠಿರನ ಜೊತೆಯಲ್ಲಿ ಅನುರಾಗವನ್ನು ಹೊಂದಿದ್ದಾನೆ ಎಂದು ನಾನು ಕೇಳಿದ್ದೇನೆ.

ಅಥಾವರುದ್ಧಾ ರಥಿನಃ ಪಂಚ ಸಂತಿ
ಮಹೇಷ್ವಾಸಾ ಭ್ರಾತರಃ ಕೇಕಯೇಷು ।
ತಾನ್ ಕೇಕಯೇಭ್ಯೋ ರಾಜ್ಯಮಾಕಾಂಕ್ಷಮಾಣಾನ್
ಯುದ್ಧಾರ್ಥಿನಶ್ಚಾನುವಸಂತಿ ಪಾರ್ಥಾನ್ ॥೨೩॥

ಇನ್ನು ರಾಜ್ಯವನ್ನು ಕಳೆದುಕೊಂಡಿರುವ ಮಹಾಧನುರ್ಧಾರಿಗಳಾದ ಮಹಾರಥಿಕರಾದ ಕೇಕಯ ಸಹೋದರರು ಐದುಮಂದಿ ಇದ್ದಾರೆ. ಅವರು ತಮ್ಮ ರಾಜ್ಯವನ್ನು ಪುನಃ ಪಡೆಯಲು ಬಯಸುತ್ತಾ ಯುದ್ಧಾರ್ಥಿಗಳಾಗಿ ಪಾಂಡವರ ಬಳಿಯಲ್ಲಿ ವಾಸ ಮಾಡುವರು.

ಸರ್ವೇ ಚ ವೀರಾಃ ಪೃಥಿವೀಪತೀಂದ್ರಾ
ಸಮಾನೀತಾಃ ಪಾಂಡವಾರ್ಥೇ ನಿವಿಷ್ಟಾಃ ।
ಶೂರಾನಹಂ ಭಕ್ತಿಮತಃ ಶೃಣೋಮಿ
ಪ್ರೀತ್ಯಾ ಯುಕ್ತಾನ್ ಸಂಶ್ರಿತಾನ್ ಧರ್ಮರಾಜಮ್ ॥೨೪॥

ಎಲ್ಲಾ ವೀರರಾದ ಭೂಪಾಲರೂ ಪಾಂಡವರ ಸಲುವಾಗಿ ಬಂದು ಸೇರಿದ್ದಾರೆ. ಅವರೆಲ್ಲರೂ ಶೂರರು, ಪಾಂಡವರಲ್ಲಿ ಅನುರಾಗವುಳ್ಳವರು ಮತ್ತು ಪ್ರೀತಿಯಿಂದಲೇ ಧರ್ಮರಾಜನನ್ನು ಆಶ್ರಯಿಸಿದವರು ಎಂದು ಕೇಳಿದ್ದೇನೆ.

ಗಿರ್ಯಾಶ್ರಯಾ ದುರ್ಗನಿವಾಸಿನಶ್ಚ
ಯೋಧಾಃ ಪೃಥಿವ್ಯಾಂ ಕುಲಜಾಶ್ಚ ವೃದ್ಧಾಃ ।
ಮ್ಲೇಚ್ಛಾಶ್ಚ ನಾನಾಯುಧವೀರ್ಯವಂತಃ
ಸಮಾಗತಾಃ ಪಾಂಡವಾರ್ಥೇ ನಿವಿಷ್ಟಾಃ ॥೨೫॥

ಪರ್ವತನಿವಾಸಿಗಳಾದ ಯೋಧರು, ಭೂಮಿಯಲ್ಲಿ ಸತ್ಕುಲಪ್ರಸೂತರಾದ ವೃದ್ಧರು, ಅನೇಕ ಆಯುಧಗಳನ್ನು ಧರಿಸಿ, ಪರಾಕ್ರಮಶಾಲಿಗಳಾದ ಮ್ಲೇಚ್ಛರು ಪಾಂಡವರ ಸಲುವಾಗಿ ಬಂದು ಸೇರಿದ್ದಾರೆ ಎಂದು ನಾನು ಕೇಳಿದ್ದೇನೆ.

ಪಾಂಡ್ಯಶ್ಚ ರಾಜಾऽಮಿತವೀರ್ಯವಿಕ್ರಮೋ
ಯುಧಿ ಪ್ರವೀರೈರ್ಬಹುಭಿಃ ಸಮೇತಃ ।
ಸಮಾಗತಃ ಪಾಂಡವಾರ್ಥೇ ಮಹಾತ್ಮಾ
ಲೋಕಪ್ರವೀರೋऽಪ್ರತಿವೀರ್ಯತೇಜಾಃ ॥೨೬॥

ಅಮಿತವೀರ್ಯನೂ ಮತ್ತು ಯುದ್ಧದಲ್ಲಿ ಅಮಿತಪರಾಕ್ರಮಿಯೂ ಆದ ಪಾಂಡ್ಯರಾಜನು ಅನೇಕ ವೀರರ ಜೊತೆಯಲ್ಲಿ ಪಾಂಡವರ ಸಲುವಾಗಿ ಬಂದು ಸೇರಿದ್ದಾನೆ. ಅವನು ಮಹಾತ್ಮನೂ, ಲೋಕಪ್ರಸಿದ್ಧನಾದ ವೀರನೂ ಮತ್ತು ಅಸದೃಶವಾದ ಸಾಮರ್ಥ್ಯ ಮತ್ತು ತೇಜಸ್ಸನ್ನು ಹೊಂದಿದವನೂ ಆಗಿದ್ದಾನೆ.

ಅಸ್ತ್ರಂ ದ್ರೋಣಾದರ್ಜುನಾದ್ ವಾಸುದೇವಾತ್
ಕೃಪಾದ್ ಭೀಷ್ಮಾದ್ ಯೇನ ವೃತಂ ಶೃಣೋಮಿ ।
ಯತಶ್ಚ ಕೃಷ್ಣಪ್ರತಿಮಪ್ರಭಾವಃ
ಸ ಸಾತ್ಯಕಿಃ ಪಾಂಡವಾರ್ಥೇ ನಿವಿಷ್ಟಃ ॥೨೭॥

ಯಾವ ಸಾತ್ಯಕಿಯು ದ್ರೋಣರಿಂದಲೂ, ಅರ್ಜುನನಿಂದಲೂ, ಕೃಷ್ಣನಿಂದಲೂ, ಕೃಪರಿಂದಲೂ ಮತ್ತು ಭೀಷ್ಮರಿಂದಲೂ ಅಸ್ತ್ರವಿದ್ಯೆಯನ್ನು ಸಂಪಾದಿಸಿದ್ದಾನೆಂದು ಕೇಳಿದ್ದೇನೆಯೋ ಮತ್ತು ಯಾವ ಅವನು ಕೃಷ್ಣನಿಗೆ ಹೋಲುವ ಸಾಮರ್ಥ್ಯವನ್ನು ಹೊಂದಿದ್ದಾನೆಯೋ ಅಂತಹ ಸಾತ್ಯಕಿಯು ಪಾಂಡವರ ಸಲುವಾಗಿ ಬಂದು ಅವರಲ್ಲಿ ಸೇರಿದ್ದಾನೆ.

ಉಪಾಶ್ರಿತಾಶ್ಚೇದಿಕರೂಶಕಾಶ್ಚ
ಸರ್ವೋದ್ಯೋಗೈರ್ಭೂಮಿಪಾಲಾಃ ಸಮೇತಾಃ ॥೨೮॥

ಚೇದಿ, ಕರೂಶರಾಜ್ಯಗಳ ರಾಜರೂ ಸಹ ಒಟ್ಟಿಗೆ ಸೇರಿ ತಮ್ಮ ಎಲ್ಲಾ ಪ್ರಯತ್ನಗಳಿಂದ ಪಾಂಡವರನ್ನು ಆಶ್ರಯಿಸಿದ್ದಾರೆ.

ತೇಷಾಂ ಮಧ್ಯೇ ಸೂರ್ಯಮಿವಾತಪಂತಂ
ಶ್ರಿಯಾ ವೃತಂ ಚೇದಿಪತಿಂ ಜ್ವಲಂತಮ್ ।
ಅಸ್ತಂಭನೀಯಂ ಯುಧಿ ಮನ್ಯಮಾನಂ
ಜ್ಯಾಂ ಕರ್ಷತಾಂ ಶ್ರೇಷ್ಠತಮಂ ಪೃಥಿವ್ಯಾಮ್ ॥೨೯॥

ಸರ್ವೋತ್ಸಾಹಂ ಕ್ಷತ್ರಿಯಾಣಾಂ ನಿಹತ್ಯ
ಪ್ರಸಹ್ಯ ಕೃಷ್ಣಸ್ತರಸಾ ಸಮ್ಮಮರ್ದ ।
ಯಶೋ ಮಾನಂ ವರ್ಧಯನ್ ಪಾಂಡವಾನಾಂ
ಪುರಾऽಭಿನತ್ ಶಿಶುಪಾಲಂ ಸಮೀಕ್ಷ್ಯ ॥೩೦॥

ಅವರ ಮಧ್ಯದಲ್ಲಿ ಸೂರ್ಯನಂತೆ ಬೆಳಗುವ, ಸಂಪದ್ಯುಕ್ತನಾದ, ಯುದ್ಧದಲ್ಲಿ ತಾನು ಅಚಾಲ್ಯನೆಂದೂ ಮತ್ತು ಧನುರ್ಧಾರಿಗಳಲ್ಲಿ ತಾನು ಶ್ರೇಷ್ಠನೆಂದೂ ತಿಳಿದಿರುವ ಕ್ಷತ್ರಿಯರೆಲ್ಲರಿಗೂ ಉತ್ಸಾಹದಾಯಕನಾದ ಚೇದಿರಾಜನಾದ ಶಿಶುಪಾಲನನ್ನು ಕೃಷ್ಣನು ತನ್ನ ಸಾಮರ್ಥ್ಯದಿಂದ ಮರ್ದಿಸಿದನು. ಅವನು ಪಾಂಡವರ ಕೀರ್ತಿಯನ್ನೂ ಮತ್ತು ಮಾನವನ್ನೂ ಹೆಚ್ಚಿಸುತ್ತಾ ಮೊದಲೇ ಶಿಶುಪಾಲನನ್ನು ಸಂಹರಿಸಿದನು.

ಯಸ್ಯ ಸರ್ವೇ ವರ್ಧಯಂತಿ ಸ್ಮ ಮಾನಂ
ಕರೂಶರಾಜಪ್ರಮುಖಾ ನರೇಂದ್ರಾಃ ॥೩೧॥

ತಮಸಹ್ಯಂ ಕೇಶವಂ ತತ್ರ ಮತ್ವಾ
ಸುಗ್ರೀವಯುಕ್ತೇನ ರಥೇನ ಕೃಷ್ಣಮ್ ।
ಸಂಪ್ರಾದ್ರವನ್ ಚೇದಿಪತಿಂ ವಿಹಾಯ
ಸಿಂಹಾರ್ದಿತಾ ಕ್ಷುದ್ರಮೃಗಾ ಇವಾನ್ಯೇ ॥೩೨॥

ಯಾವ ಶಿಶುಪಾಲನ ಮಾನವನ್ನು ಕರೂಶರಾಜರೇ ಮೊದಲಾದ ರಾಜರು ಹೆಚ್ಚಿಸುತ್ತಿದ್ದರೋ ಅಂತಹ ರಾಜರು ಸುಗ್ರೀವಾದಿ ಅಶ್ವಯುಕ್ತವಾದ ರಥದಲ್ಲಿರುವ ಕೃಷ್ಣನು ಸೋಲಿಸಲು ಅಸಾಧ್ಯನೆಂದು ತಿಳಿದು, ಚೇದಿಪತಿಯನ್ನು ಬಿಟ್ಟು ಸಿಂಹಕ್ಕೆ ಹೆದರಿದ ಕ್ಷುದ್ರಮೃಗಗಳಂತೆ ಓಡಿಹೋದರು.

ಯಸ್ತಂ ಪ್ರತೀಪಸ್ತರಸಾ ಪ್ರತ್ಯುದೀಯಾದ್
ಆಶಂಸಮಾನೋ ದ್ವೈರಥೇ ವಾಸುದೇವಮ್ ।
ಸೋಽಶೇತ ಕೃಷ್ಣೇನ ಹತಃ ಪರಾಸುಃ
ವಾತೇನೇವೋನ್ಮಥಿತಃ ಕರ್ಣಿಕಾರಃ ॥೩೩॥

ಯಾವನು ದ್ವೈರಥದಲ್ಲಿ ಕೃಷ್ಣನನ್ನು ತನ್ನ ಬಲದಿಂದ ಗೆಲ್ಲುವೆನು ಎಂದು ಕೃಷ್ಣನಿಗೆ ವಿರೋಧಿಯಾಗಿ ಅವನನ್ನು ಎದುರಿಸಿದನೋ ಅವನು ಕೃಷ್ಣನಿಂದ ಹತನಾಗಿ, ಪ್ರಾಣಗಳನ್ನು ಕಳೆದುಕೊಂಡು, ಬಿರುಗಾಳಿಯು ಕಿತ್ತೊಗೆದ ಕರ್ಣಿಕಾರ ವೃಕ್ಷದಂತೆ ಭೂಮಿಯ ಮೇಲೆ ಶಯನ ಮಾಡಿದನು.

ಪರಾಕ್ರಮಂ ತೇ ಯದವೇದಯಂತ
ತೇಷಾಮರ್ಥೇ ಸಂಜಯ ಕೇಶವಸ್ಯ ।
ಅನುಸ್ಮರಂತಸ್ತಸ್ಯ ಕರ್ಮಾಣಿ ವಿಷ್ಣೋಃ
ಗಾವಲ್ಗಣೇ ನಾಧಿಗಚ್ಛಾಮಿ ಶಾಂತಿಮ್ ॥೩೪॥

ಎಲೈ ಸಂಜಯನೇ, ಪಾಂಡವರ ಸಲುವಾಗಿ ಕೇಶವನ ಯಾವ ಪರಾಕ್ರಮವನ್ನು ಆ ಪುರುಷರು ನನಗೆ ತಿಳಿಸಿದ್ದಾರೆಯೋ ಗಾವಲ್ಗಣಿಯೇ, ವಿಷ್ಣುವಿನ ಆ ಕರ್ಮಗಳನ್ನು ಸ್ಮರಿಸಿ ನನಗೆ ಶಾಂತಿಯೇ ದೊರಕುತ್ತಿಲ್ಲ.

ನ ಜಾತು ತಾನ್ ಶತ್ರುರನ್ಯಃ ಸಹೇತ
ಯೇಷಾಂ ಸ ಸ್ಯಾದಗ್ರಣೀರ್ವೃಷ್ಣಿಸಿಂಹಃ ।
ಪ್ರವೇಪತೇ ಮೇ ಹೃದಯಂ ಭಯೇನ
ಶ್ರುತ್ವಾ ಕೃಷ್ಣಾವೇಕರಥೇ ಸಮೇತೌ ॥೩೫॥

ಯಾರಿಗೆ ವೃಷ್ಣಿಸಿಂಹನಾದ ಕೃಷ್ಣನು ನಾಯಕನಾಗಿದ್ದಾನೆಯೋ ಅಂತಹ ಪಾಂಡವರನ್ನು ಇನ್ನೊಬ್ಬ ಶತ್ರುವು ಎದುರಿಸಲಾರ. ಕೃಷ್ಣಾರ್ಜುನರು ಒಂದೇ ರಥದಲ್ಲಿ ಇರುತ್ತಾರೆ ಎಂಬ ವಾರ್ತೆಯನ್ನು ಕೇಳಿದ ನನ್ನ ಹೃದಯವು ಭಯದಿಂದ ನಡುಗುತ್ತಿದೆ.

ನ ಚೇದ್ ಗಚ್ಛೇತ್ ಸಂಗರಂ ಮಂದಬುದ್ಧಿಃ
ತಾಭ್ಯಾಂ ಲಭೇಚ್ಚರ್ಮ ತದಾ ಸುತೋ ಮೇ ।
ನೋ ಚೇತ್ ಕುರೂನ್ ಸಂಜಯ ನಿರ್ದಹೇತಾಮ್
ಇಂದ್ರಾವಿಷ್ಣೂ ದೈತ್ಯಸೇನಾಂ ಯಥೈವ ॥೩೬॥

ಮಂದಬುದ್ಧಿಯಾದ ನನ್ನ ಪುತ್ರನು ಯುದ್ಧಕ್ಕೆ ಹೋಗದಿದ್ದರೆ ಕೃಷ್ಣಾರ್ಜುನರಿಂದ ಸುಖವನ್ನು ಪಡೆದಾನು. ಸಂಜಯನೇ, ಇಲ್ಲದಿದ್ದರೆ ಇಂದ್ರ-ವಿಷ್ಣುಗಳು ದೈತ್ಯಸೇನೆಯನ್ನು ಸದೆಬಡಿದಂತೆ ಅವರು ಕುರುಗಳನ್ನು ಸುಟ್ಟುಹಾಕಿಯಾರು.

ಮತೋ ಹಿ ಮೇ ಶಕ್ರಸಮೋ ಧನಂಜಯಃ
ಸನಾತನೋ ವೃಷ್ಣಿವೀರಶ್ಚ ಕೃಷ್ಣಃ ।
ಸ ಧರ್ಮರಾಜೋ ಹ್ರೀನಿಷೇಧಸ್ತರಸ್ವೀ
ಕುಂತೀಪುತ್ರಃ ಪಾಂಡವೋSಜಾತಶತ್ರುಃ ॥೩೭॥

ಧನಂಜಯನು ಇಂದ್ರನಿಗೆ ಸಮನೆಂದು ನನ್ನ ಅಭಿಪ್ರಾಯ. ವೃಷ್ಣಿವೀರನಾದ ಕೃಷ್ಣನಾದರೂ ಸನಾತನನಾದ ವಿಷ್ಣುವು. ಕುಂತೀಪುತ್ರನಾದ ಅಜಾತಶತ್ರುವಾದ ಧರ್ಮರಾಜನೂ ಸಹ ಶೀಘ್ರಕಾರಿಯಾದವನು ಮತ್ತು ಅಧರ್ಮವನ್ನು ಮಾಡಲು ನಾಚಿಕೊಳ್ಳುವವನು.

ದುರ್ಯೋಧನೇನ ನಿಕೃತೋ ಮನಸ್ವೀ
ನೋ ಚೇತ್ ಕ್ರುದ್ಧಃ ಪ್ರದಹೇದ್ ಧಾರ್ತರಾಷ್ಟ್ರಾನ್ ॥೩೮॥

ಪ್ರಶಸ್ತವಾದ ಮನಸ್ಸುಳ್ಳ ಅವನು ದುರ್ಯೋಧನನಿಂದ ಮೋಸ ಮಾಡಲ್ಪಟ್ಟಿದ್ದಾನೆ. ಅವನು ಕೋಪದಿಂದ ನನ್ನ ಪುತ್ರರನ್ನು ಸುಟ್ಟುಹಾಕಬಹುದು.

ನಾಹಂ ತಥಾ ಹ್ಯರ್ಜುನಾದ್ ವಾಸುದೇವಾದ್
ಭೀಮಾದ್ ವಾऽಪಿ ಯಮಯೋರ್ವಾ ಬಿಭೇಮಿ ।
ಯಥಾ ರಾಜ್ಞಃ ಕ್ರೋಧದೀಪ್ತಸ್ಯ ಸೂತ
ವಹ್ನೇರಹಂ ಭೀತತರಃ ಸದೈವ ॥೩೯॥

ಎಲೈ ಸಂಜಯನೇ, ನಾನು ವಹ್ನಿಯಂತಿರುವ ಕ್ರೋಧದೀಪ್ತನಾದ ಅಜಾತಶತ್ರುವಿನಿಂದ ಹೇಗೆ ಹೆದರಿದ್ದೇನೆಯೋ ಹಾಗೆ ಅರ್ಜುನನಿಂದಾಗಲೀ, ಕೃಷ್ಣನಿಂದಾಗಲೀ, ಭೀಮನಿಂದಾಗಲೀ ಅಥವ ನಕುಲಸಹದೇವರಿಂದಾಗಲೀ ಹೆದರುವುದಿಲ್ಲ.

ಮಹಾತಪಾ ಬ್ರಹ್ಮಚರ್ಯೇಣ ಯುಕ್ತಃ
ಸಂಕಲ್ಪೋऽಯಂ ಮಾನಸಸ್ತಸ್ಯ ಸಿದ್ಧ್ಯೇತ್ ।
ತಸ್ಯ ಕ್ರೋಧಂ ಸಂಜಯಾಹಂ ಸಮೀಕ್ಷ್ಯ
ಸ್ಥಾನೇ ಜಾತಂ ಭೃಶಮಸ್ಮ್ಯದ್ಯ ಭೀತಃ ॥೪೦॥

ಅವನು (ಧರ್ಮರಾಜನು) ಮಹಾತಪಸ್ವಿ ಮತ್ತು ಬ್ರಹ್ಮಚರ್ಯದಿಂದ ಕೂಡಿದವನು. ಅವನ ಮನಸ್ಸಿನ ಈ ಸಂಕಲ್ಪವು ಸಿದ್ಧಿಸುತ್ತದೆ. ಎಲೈ ಸಂಜಯನೇ, ಯೋಗ್ಯವಾದ ರೀತಿಯಲ್ಲೇ ಉಂಟಾಗಿರುವ ಅವನ ಕ್ರೋಧವನ್ನು ನೋಡಿ ಈ ದಿನ ನಾನು ಬಹಳವಾಗಿ ಹೆದರಿದ್ದೇನೆ.

ಸಂಗಚ್ಛ ಶೀಘ್ರಂ ಪ್ರಹಿತೋ ರಥೇನ
ಪಾಂಚಾಲರಾಜಸ್ಯ ಚಮೂನಿವೇಶಮ್ ।
ಅಜಾತಶತ್ರುಂ ಕುಶಲಂ ಸ್ಮ ಪೃಚ್ಛೇಃ
ಪುನಃ ಪುನಃ ಪ್ರೀತಿಯುಕ್ತಂ ವದೇಸ್ತ್ವಮ್ ॥೪೧॥

ನನ್ನಿಂದ ಕಳುಹಿಸಲ್ಪಟ್ಟವನಾಗಿ ನೀನು ಶೀಘ್ರವಾಗಿ ರಥದಿಂದ ಹೋಗಿ, ಪಾಂಚಾಲರಾಜನ ಸೇನಾಸಮೂಹವನ್ನು ಸೇರಿ, ಅಜಾತಶತ್ರುವನ್ನು ಕುರಿತು ಕುಶಲ, ಪ್ರಶ್ನೆಯನ್ನು ಮಾಡು. ಅವನ ಜೊತೆಯಲ್ಲಿ ಪುನಃ ಪುನಃ ಪ್ರೀತಿಯಿಂದ ಮಾತನಾಡು.

ಜನಾರ್ದನಂ ಚಾಪಿ ಸಮೇತ್ಯ ಸೂತ
ಮಹಾಮತಿಂ ವೀರ್ಯವತಾಂ ವರಿಷ್ಠಮ್ ।
ಅನಾಮಯಂ ಮದ್ವಚನೇನ ಪೃಚ್ಛೇಃ
ತ್ವಂ ಧಾರ್ತರಾಷ್ಟ್ರೈಃ ಪಾಂಡವೈಃ ಶಾಂತಿಲಿಪ್ಸುಃ ॥೪೨॥

ಎಲೈ ಸೂತನೇ, ಧೃತರಾಷ್ಟ್ರಪುತ್ರರಲ್ಲಿ ಮತ್ತು ಪಾಂಡವರಲ್ಲಿ ಸಂಧಿಯನ್ನು ಬಯಸುವ ನೀನು ಮಹಾಮತಿಯೂ ವೀರ್ಯವಂತರಲ್ಲಿ ಶ್ರೇಷ್ಠನೂ ಆದ ಕೃಷ್ಣನನ್ನು ಸಂಧಿಸಿ, ನನ್ನ ಮಾತಿನಂತೆ ಕುಶಲಪ್ರಶ್ನೆಯನ್ನು ಮಾಡು.

ನ ತಸ್ಯ ಕಿಂಚಿದ್ ವಚನಂ ನ ಕುರ್ಯಾತ್
ಕುಂತೀಪುತ್ರೋ ವಾಸುದೇವಸ್ಯ ಸೂತ ।
ಪ್ರಿಯಶ್ಚೈಷಾಮಾತ್ಮಸಮಶ್ಚ ಕೃಷ್ಣೋ
ವಿದ್ವಾಂಶ್ಚೈಷಾಂ ಕರ್ಮಣಿ ನಿತ್ಯಯುಕ್ತಃ ॥೪೩॥

ಸೂತನೇ, ಕುಂತೀಪುತ್ರನಾದ ಯುಧಿಷ್ಠಿರನು ಕೃಷ್ಣನ ಯಾವ ಮಾತನ್ನೂ ನಡೆಸಿಕೊಡುವುದಿಲ್ಲ ಎಂಬುದು ಇಲ್ಲ. ಕೃಷ್ಣನು ಅವರಿಗೆ ಪ್ರಿಯನಾದವನು, ಪ್ರಾಣಸಮಾನನಾದವನು, ಜ್ಞಾನಿಯಾದವನು ಮತ್ತು ಅವರ ಹಿತಕಾರ್ಯದಲ್ಲಿ ಯಾವಾಗಲೂ ನಿರತನಾದವನು.

ಸಮಾನೀತಾನ್ ಪಾಂಡವಾನ್ ಸೃಂಜಯಾಂಶ್ಚ
ಜನಾರ್ದನಂ ಯುಯುಧಾನಂ ವಿರಾಟಮ್ ।
ಅನಾಮಯಂ ಮದ್‌ವಚನೇನ ಪೃಚ್ಛೇಃ
ಸರ್ವಾಂಸ್ತಥಾ ದ್ರೌಪದೇಯಾಂಶ್ಚ ಪಂಚ ॥೪೪॥

ಸಂಜಯನೇ, ನೀನು ಸೇನಾನಿವೇಶದಲ್ಲಿ ಪ್ರಾಪ್ತರಾದ ಪಾಂಡವರನ್ನೂ, ಸೃಂಜಯರನ್ನೂ, ಜನಾರ್ದನನನ್ನೂ, ಸಾತ್ಯಕಿಯನ್ನೂ, ವಿರಾಟನನ್ನೂ ನನ್ನ ಮಾತಿನಂತೆ ಕ್ಷೇಮ-ಕುಶಲಗಳನ್ನು ಕೇಳು. ಹಾಗೆಯೇ ದ್ರೌಪದಿಯ ಪುತ್ರರಾದ ಐದುಮಂದಿ ಉಪಪಾಂಡವರಿಗೂ ಕುಶಲಪ್ರಶ್ನೆಯನ್ನು ಮಾಡು.

ಯದ್ಯತ್ ತತ್ರ ಪ್ರಾಪ್ತಕಾಲಂ ಪರೇಭ್ಯಃ
ತ್ವಂ ಮನ್ಯೇಥಾ ಭಾರತಾನಾಂ ಹಿತಂ ಚ ।
ತತ್ತದ್ ಭಾಷೇಥಾಃ ಸಂಜಯ ರಾಜಮಧ್ಯೇ
ನ ಮೂರ್ಚ್ಛಯೇದ್ ಯನ್ನ ಭವೇಚ್ಚ ಯುದ್ಧಮ್ ॥೪೫॥

ಸಂಜಯನೇ, ಹಾಗೆಯೇ ರಾಜರ ಮಧ್ಯದಲ್ಲಿ ಏನೇನು ಮಾತನಾಡಿದರೆ ಎಲ್ಲ ಭರತವಂಶಕ್ಕೆ ಹಿತವಾಗುವುದೆಂದು ನೀನು ಭಾವಿಸುವೆಯೋ, ಏನನ್ನು ಮಾತನಾಡಿದರೆ ಯಾರಿಗೂ ವ್ಯಥೆಯಾಗುವುದಿಲ್ಲವೋ ಮತ್ತು ಯುದ್ಧವು ಜರುಗುವುದಿಲ್ಲವೋ ಅಂತಹ ಎಲ್ಲ ವಿಷಯಗಳನ್ನೂ ಮಾತನಾಡುವವನಾಗು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ದ್ವಾವಿಂಶೋಽಧ್ಯಾಯಃ ॥
॥ ಸಂಜಯಯಾನಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಇಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

## ಇಪ್ಪತ್ತಮೂರನೆಯ ಅಧ್ಯಾಯ

ಉಪಪ್ಲಾವ್ಯಕ್ಕೆ ಹೋಗಿ ಸಂಜಯನಿಂದ ಪಾಂಡವರ ಕುಶಲಪ್ರಶ್ನೆ
ಮತ್ತು ಯುಧಿಷ್ಠಿರನಿಂದ ಧೃತರಾಷ್ಟ್ರಾದಿಗಳ ಕುಶಲಪ್ರಶ್ನೆ.

**ವೈಶಂಪಾಯನಃ**

ರಾಜ್ಞಸ್ತು ವಚನಂ ಶ್ರುತ್ವಾ ಧೃತರಾಷ್ಟ್ರಸ್ಯ ಸಂಜಯಃ ।
ಉಪಪ್ಲಾವ್ಯಂ ಯಯೌ ದ್ರಷ್ಟುಂ ಪಾಂಡವಾನಮಿತೌಜಸಃ ॥೧॥

ಸ ತು ರಾಜಾನಮಾಸಾದ್ಯ ಕುಂತೀಪುತ್ರಂ ಯುಧಿಷ್ಠಿರಮ್ ।
ಅಭಿವಾದ್ಯ ತತಃ ಪೂರ್ವಂ ಸೂತಪುತ್ರೋಽಭ್ಯಭಾಷತ ॥೨॥

**ವೈಶಂಪಾಯನ**– ರಾಜನಾದ ಧೃತರಾಷ್ಟ್ರನ ಮಾತುಗಳನ್ನು ಕೇಳಿ ಸಂಜಯನು ಅಮಿತಪರಾಕ್ರಮಿಗಳಾದ ಪಾಂಡವರನ್ನು ನೋಡಲು ಉಪಪ್ಲಾವ್ಯಕ್ಕೆ ಹೋದನು. ಸೂತಪುತ್ರನಾದ ಅವನು ಮೊದಲು ಕುಂತೀಪುತ್ರನಾದ ಯುಧಿಷ್ಠಿರ ರಾಜನನ್ನು ಸಮೀಪಿಸಿ ನಮಸ್ಕರಿಸಿ ಅನಂತರ ಮಾತನಾಡಿದನು.

ಗಾವಲ್ಗಣಿಃ ಸಂಜಯಃ ಸೂತಸೂನುಃ
ಅಜಾತಶತ್ರುಂ ತಮವೋಚತ್ ಪ್ರತೀತಃ ॥೩॥

ಗವಲ್ಗಣನ ಪುತ್ರನಾದ ಸೂತಸೂನುವಾದ ಸಂಜಯನು ಸಂತೋಷದಿಂದ ಆ ಯುಧಿಷ್ಠಿರನನ್ನು ಕುರಿತು ಮಾತನಾಡಿದನು.

ದಿಷ್ಟ್ಯಾ ರಾಜನ್ ತ್ವಾಮರೋಗಂ ಪ್ರಪಶ್ಯೇ
ಸಹಾಯವಂತಂ ಚ ಮಹೇಂದ್ರಕಲ್ಪಮ್ ॥೪॥

ರಾಜನೇ, ದೇವರ ದಯದಿಂದ ಮಹೇಂದ್ರನಂತಿರುವ, ಸಹಾಯದಿಂದ ಕೂಡಿದ ನೀನು ಆರೋಗ್ಯದಿಂದಿರುವುದನ್ನು ನೋಡುತ್ತಿದ್ದೇನೆ.

ಅನಾಮಯಂ ಪೃಚ್ಛತಿ ತ್ವಾಽಂಬಿಕೇಯೋ
ವೃದ್ಧೋ ರಾಜಾ ಧೃತರಾಷ್ಟ್ರೋ ಮನೀಷೀ ।
ಕಚ್ಚಿದ್ ಭೀಮಃ ಕುಶಲೀ ಪಾಂಡವಾಗ್ರ್ಯೋ
ಧನಂಜಯಸ್ತೌ ಚ ಮಾದ್ರೀತನೂಜೌ ॥೫॥

ಮೇಧಾವಿಯೂ, ಅಂಬಿಕಾ ಪುತ್ರನೂ, ವೃದ್ಧನೂ ಆದ ಧೃತರಾಷ್ಟ್ರರಾಜನು ನಿನ್ನ ಕ್ಷೇಮವನ್ನು ವಿಚಾರಿಸುತ್ತಾನೆ. ಪಾಂಡವ ಶ್ರೇಷ್ಠನಾದ ಭೀಮನೂ ಅರ್ಜುನನೂ ಮತ್ತು ಆ ಮಾದ್ರೀ ಪುತ್ರರೂ ಕ್ಷೇಮವಷ್ಟೆ?

ಕಚ್ಚಿತ್ ಕೃಷ್ಣಾ ದ್ರೌಪದೀ ರಾಜಪುತ್ರೀ
ಸತ್ಯವ್ರತಾ ವೀರಪತ್ನೀ ಸಪುತ್ರಾ ।
ಮನಸ್ವಿನೀ ಯತ್ರ ಚ ವಾಂಛಸಿ ತ್ವಮ್
ಇಷ್ಟಾನ್ ಕಾಮಾನ್ ಭಾರತ ಸ್ವಸ್ತಿಕಾಮಃ ॥೬॥

ಸತ್ಯವ್ರತಳೂ, ವೀರಪತಿಗಳನ್ನು ಹೊಂದಿದವಳೂ ಪುತ್ರರನ್ನು ಪಡೆದವಳೂ ಆದ ದ್ರುಪದರಾಜಕುಮಾರಿಯಾದ ಕೃಷ್ಣೆಯು ಕ್ಷೇಮವಷ್ಟೆ? ಎಲೈ ಭಾರತನೇ, ಶುಭಕಾಮನೆಯುಳ್ಳ ನೀನು ಧೈರ್ಯಶಾಲಿಯಾದ ಅವಳಿಂದ ಎಲ್ಲಾ ಕಾಮಗಳನ್ನು ಹೊಂದಲು ಅಪೇಕ್ಷಿಸುವಿಯಷ್ಟೆ?

## ಯುಧಿಷ್ಠಿರಃ

ಗಾವಲ್ಗಣೇ ಸಂಜಯ ಸ್ವಾಗತಂ ತೇ
ಪ್ರೀತಾತ್ಮಾಽಹಂ ತ್ವಾಽಭಿನಂದಾಮಿ ಸೂತ ।
ಅನಾಮಯಂ ಪ್ರತಿಜಾನೇ ತವಾಹಂ
ಸಹಾನುಜೈಃ ಕುಶಲೀ ಚಾಸ್ಮಿ ವಿದ್ವನ್ ॥೭॥

ಯುಧಿಷ್ಠಿರ– ಗವಲ್ಗಣಪುತ್ರನಾದ ಸಂಜಯನೇ ನಿನಗೆ ಸ್ವಾಗತ. ದೂತನೇ, ಸಂತೋಷಗೊಂಡ ಮನಸ್ಸಿನಿಂದ ನಾನು ನಿನ್ನನ್ನು ಅಭಿನಂದಿಸುತ್ತೇನೆ. ವಿದ್ವಾಂಸನೇ, ಮೊದಲು ತಮ್ಮಂದಿರ ಜೊತೆಯಲ್ಲಿ ಕ್ಷೇಮದಿಂದಿದ್ದೇನೆಂದು ನಿನಗೆ ಪ್ರತಿಜ್ಞೆ ಮಾಡಿ ಹೇಳುತ್ತೇನೆ.

ಚಿರಾದಿದಂ ಕುಶಲಂ ಭಾರತಸ್ಯ
ಶ್ರುತ್ವಾ ರಾಜ್ಞಃ ಕುರುವೃದ್ಧಸ್ಯ ಸೂತ ।
ಮನ್ಯೇ ಸಾಕ್ಷಾದ್ ದೃಷ್ಟಮಹಂ ನರೇಂದ್ರಂ
ದೃಷ್ಟ್ವೇವ ತ್ವಾಂ ಸಂಜಯ ಪ್ರೀತಿಯೋಗಾತ್ ॥೮॥

ಸೂತನೇ, ಬಹಳ ಕಾಲದ ನಂತರ ಭಾರತನಾದ ಕುರುವೃದ್ಧನಾದ ಧೃತರಾಷ್ಟ್ರನ ಕುಶಲವನ್ನು ಕೇಳಿ ಮತ್ತು ಎಲೈ ಸಂಜಯನೇ, ಪ್ರೀತಿಯುಕ್ತನಾದ ನಿನ್ನನ್ನು ನೋಡಿ ನಾನು ಧೃತರಾಷ್ಟ್ರರಾಜನನ್ನೇ ಸಾಕ್ಷಾತ್ತಾಗಿ ನೋಡಿದೆನೆಂದು ಭಾವಿಸುತ್ತೇನೆ.

ಪಿತಾಮಹೋ ನಃ ಸ್ಥವಿರೋ ಮನಸ್ವೀ
ಮಹಾಪ್ರಾಜ್ಞಃ ಸರ್ವಧರ್ಮೋಪಪನ್ನಃ ।
ಸ ಕೌರವ್ಯಃ ಕುಶಲೀ ತಾತ ಭೀಷ್ಮೋ
ಯಥಾಪೂರ್ವಂ ವೃತ್ತಿರಪ್ಯಸ್ತಿ ಕಚ್ಚಿತ್ ॥೯॥

ಎಲೈ ಪ್ರೀತಿಪಾತ್ರನೇ, ನಮ್ಮ ಪಿತಾಮಹನೂ, ವೃದ್ಧನೂ, ಧೈರ್ಯಶಾಲಿಯೂ, ಮಹಾಪ್ರಾಜ್ಞನೂ, ಸರ್ವಧರ್ಮೋಪಪನ್ನನೂ, ಕೌರವಕುಲಪ್ರಸೂತನೂ ಆದ ಭೀಷ್ಮನು ಕ್ಷೇಮದಿಂದಿದ್ದು ಮೊದಲಿನಂತೆ ನಡೆವಳಿಕೆಯನ್ನು ಹೊಂದಿದ್ದಾನಷ್ಟೆ?

ಕಚ್ಚಿದ್ ರಾಜಾ ಧೃತರಾಷ್ಟ್ರಃ ಸಪುತ್ರೋ
ವೈಚಿತ್ರ್ಯವೀರ್ಯಃ ಕುಶಲೀ ಮಹಾತ್ಮಾ ।
ಮಹಾರಾಜೋ ಬಾಹ್ಲಿಕಃ ಪ್ರಾತಿಪೇಯಃ
ಕಚ್ಚಿದ್ ವಿದ್ವಾನ್ ಕುಶಲೀ ಸೂತಪುತ್ರ ॥೧೦॥

ವಿಚಿತ್ರವೀರ್ಯನ ಪುತ್ರನಾದ ಮಹಾತ್ಮನಾದ ಧೃತರಾಷ್ಟ್ರರಾಜನು ತನ್ನ ಪುತ್ರರಿಂದೊಡಗೂಡಿ ಕ್ಷೇಮದಿಂದಿರುವನಷ್ಟೆ? ಸೂತಪುತ್ರನೇ, ಪ್ರತೀಪನ ಪುತ್ರನಾದ ವಿದ್ವಾಂಸನಾದ ಬಾಹ್ಲಿಕ ಮಹಾರಾಜನು ಕ್ಷೇಮದಿಂದಿರುವನಷ್ಟೆ?

ಸ ಸೋಮದತ್ತಃ ಕುಶಲೀ ತಾತ ಕಚ್ಚಿದ್
ಭೂರಿಶ್ರವಾಃ ಸತ್ಯಸಂಧಃ ಶಲಶ್ಚ ।
ದ್ರೋಣಃ ಸಪುತ್ರಶ್ಚ ಕೃಪಶ್ಚ ವಿಪ್ರೋ
ಮಹೇಷ್ವಾಸಾಃ ಕಚ್ಚಿದೇತೇಽಪ್ಯರೋಗಾಃ ॥೧೧॥

ಪ್ರೀತಿಪಾತ್ರನೇ, ಸೋಮದತ್ತನು ಕ್ಷೇಮದಿಂದಿರುವನಷ್ಟೆ? ಸತ್ಯಸಂಧನಾದ ಭೂರಿಶ್ರವ, ಶಲ, ಪುತ್ರನಿಂದೊಡಗೂಡಿದ ದ್ರೋಣರು, ಬ್ರಾಹ್ಮಣರಾದ ಕೃಪರು ಈ ಎಲ್ಲಾ ಮಹಾಧನುರ್ಧಾರಿಗಳೂ ಕ್ಷೇಮದಿಂದಿರುವರಷ್ಟೆ?

ಸರ್ವೇ ಕುರುಭ್ಯಃ ಸ್ಪೃಹಯಂತಿ ಸಂಜಯ
ಧನುರ್ಧರಾ ಯೇ ಪೃಥಿವ್ಯಾಂ ಪ್ರಧಾನಾಃ ।
ಮಹಾಪ್ರಾಜ್ಞಾಃ ಸರ್ವಶಾಸ್ತ್ರೇಽವದಾತಾ
ಧನುರ್ಭೃತಾಂ ಮುಖ್ಯತಮಾಃ ಪೃಥಿವ್ಯಾಮ್ ॥೧೨॥

ಕಚ್ಚಿನ್ಮಾನಂ ತಾತ ಲಭಂತ ಏತೇ
ಧನುರ್ಭೃತಃ ಕಚ್ಚಿದೇತೇಽಪ್ಯರೋಗಾಃ ।
ಯೇಷಾಂ ರಾಷ್ಟ್ರೇ ನಿವಸತಿ ದರ್ಶನೀಯೋ
ಮಹೇಷ್ವಾಸಃ ಶೀಲವಾನ್ ದ್ರೋಣಪುತ್ರಃ ॥೧೩॥

ಎಲೈ ಸಂಜಯನೇ, ಭೂಮಿಯಲ್ಲಿರುವ ಮಹಾಪ್ರಾಜ್ಞರಾದ, ಸರ್ವಶಾಸ್ತ್ರಗಳಲ್ಲೂ ನಿಷ್ಣಾತರಾದ, ಧನುರ್ಧಾರಿಗಳಲ್ಲಿ ಶ್ರೇಷ್ಠರಾದ ಎಲ್ಲ ಧನುರ್ಧಾರಿಗಳೂ ಕುರುಗಳ

ಜೊತೆಯಲ್ಲಿ ಸೇರಬೇಕೆಂದು ಬಯಸುತ್ತಾರೆ. ಎಲೈ ಪ್ರೀತಿಪಾತ್ರನೇ, ಈ ಧನುರ್ಧಾರಿಗಳೆಲ್ಲರೂ ಧೃತರಾಷ್ಟ್ರನಿಂದ ಮಾನವನ್ನು ಪಡೆದು ಕ್ಷೇಮದಿಂದಿರುವರಷ್ಟೆ? ಯಾವ ರಾಷ್ಟ್ರದಲ್ಲಿ ಸುಂದರನೂ, ಶೀಲವಂತನೂ, ಮಹಾಧನುರ್ಧಾರಿಯೂ ಆದ ದ್ರೋಣಪುತ್ರನಾದ ಅಶ್ವತ್ಥಾಮನಿರುವನೋ ಅಂತಹ ಧೃತರಾಷ್ಟ್ರನಿಂದ ಮಾನವನ್ನು ಪಡೆಯುವರಷ್ಟೆ?

**ವೈಶ್ಯಾಪುತ್ರಃ ಕುಶಲೀ ತಾತ ಕಚ್ಚಿತ್**
**ಮಹಾಪ್ರಾಜ್ಞೋ ರಾಜಪುತ್ರೋ ಯುಯುತ್ಸುಃ ।**
**ಕರ್ಣೋ ಮಾನೀ ಕುಶಲೀ ತಾತ ಕಚ್ಚಿತ್**
**ಸುಯೋಧನೋ ಯಸ್ಯ ಮಂದೋ ವಿಧೇಯಃ** ॥೧೪॥

ಪ್ರೀತಿಪಾತ್ರನೇ, ರಾಜನ ವೈಶ್ಯಾಪುತ್ರನಾದ ಮಹಾಪ್ರಾಜ್ಞನಾದ ಯುಯುತ್ಸುವೂ ಸಹ ಕ್ಷೇಮದಿಂದಿರುವನಷ್ಟೆ? ಯಾವನಿಗೆ ಮಂದನಾದ ಸುಯೋಧನನು ವಿಧೇಯನಾಗಿದ್ದಾನೆಯೋ ಅಂತಹ ಅಹಂಕಾರಿಯಾದ ಕರ್ಣನೂ ಕ್ಷೇಮದಿಂದಿರುವನಷ್ಟೆ?

**ಸ್ತ್ರಿಯೋ ವೃದ್ಧಾ ಭಾರತಾನಾಂ ಜನನ್ಯೋ**
**ಮಾಹಾನಸ್ಯೋ ದಾಸಭಾರ್ಯಾಶ್ಚ ಸೂತ ।**
**ವಧ್ವಃ ಪುತ್ರಾ ಭಾಗಿನೇಯಾ ಭಗಿನ್ಯೋ**
**ದೌಹಿತ್ರಾ ವಾ ಕಚ್ಚಿದಪ್ಯವ್ಯಲೀಕಾಃ** ॥೧೫॥

ಎಲೈ ಸೂತನೇ, ಭರತವಂಶದವರ ತಾಯಿಯರಾದ ವೃದ್ಧಸ್ತ್ರೀಯರು, ಅಡಿಗೆ ಮನೆಯಲ್ಲಿರುವ ದಾಸಭಾರ್ಯೆಯರು, ಸೊಸೆಯರು, ಮಕ್ಕಳು, ತಂಗಿಯರು, ತಂಗಿಯರ ಮಕ್ಕಳು, ದೌಹಿತ್ರರು ಇವರೆಲ್ಲರೂ ಕ್ಷೇಮದಿಂದಿರುವರಷ್ಟೆ?

**ಕಚ್ಚಿದ್ ರಾಜಾ ಬ್ರಾಹ್ಮಣಾನಾಂ ಯಥಾವತ್**
**ಪ್ರವರ್ತತೇ ಪೂರ್ವವತ್ ತಾತ ವೃತ್ತಿಮ್ ।**
**ಕಚ್ಚಿದ್ ದಾಯಾನ್ ಮಾಮಕಾನ್ ಧಾರ್ತರಾಷ್ಟ್ರೋ**
**ದ್ವಿಜಾತೀನಾಂ ಸಂಜಯ ನೋಪಹಂತಿ** ॥೧೬॥

ಪ್ರೀತಿಪಾತ್ರನೇ, ಬ್ರಾಹ್ಮಣರ ವಿಷಯದಲ್ಲಿ ರಾಜನು ಮೊದಲಿನಂತೆ ಸರಿಯಾದ ನಡತೆಯನ್ನು ಹೊಂದಿರುವನಷ್ಟೆ? ಎಲೈ ಸಂಜಯನೇ, ಬ್ರಾಹ್ಮಣರಿಗೆ ನಾನು ಕೊಟ್ಟಿರುವ ಭಾಗ (ವೃತ್ತಿ)ಗಳನ್ನು ಧೃತರಾಷ್ಟ್ರಪುತ್ರನು ನಾಶಗೊಳಿಸಿಲ್ಲವಷ್ಟೆ?

**ಕಚ್ಚಿದ್ ರಾಜಾ ಧೃತರಾಷ್ಟ್ರಃ ಸಪುತ್ರಃ**
**ಸಮೀಕ್ಷತೇ ಬ್ರಾಹ್ಮಣಾತಿಕ್ರಮಾನ್ ವೈ ।**
**ಕಚ್ಚಿನ್ನ ಹೇತೋರಿವ ಸವ್ಯಲೀಕಮ್**
**ಉಪೇಕ್ಷತೇ ತೇಷು ಸದೈವ ವೃತ್ತಿಮ್** ॥೧೭॥

ಪುತ್ರರಿಂದೊಡಗೂಡಿದ ಧೃತರಾಷ್ಟ್ರ ರಾಜನು ಯಾರಾದರೂ ಬ್ರಾಹ್ಮಣರ ಉಲ್ಲಂಘನೆಯನ್ನು ಮಾಡಿದರೆ ಅದನ್ನು ಗಮನಿಸುತ್ತಿದ್ದಾನಷ್ಟೆ? ಯಾವುದಾದರೂ ನೆಪವನ್ನು ತೆಗೆದು, ಮೋಸವನ್ನು ಮಾಡಿ ಅವರ ಜೀವನೋಪಾಯದ ವಿಷಯದಲ್ಲಿ ಉದಾಸೀನನಾಗಿಲ್ಲವಷ್ಟೆ?

**ಏತಜ್ಜ್ಯೋತೀರುತ್ತಮಂ ಜೀವಲೋಕೇ**
**ಶುಕ್ಲಂ ಪ್ರಧಾನಂ ವಿಹಿತಂ ವಿಧಾತ್ರಾ ।**
**ತೇ ಚೇದ್ ದೋಷಂ ನ ನಿಯಚ್ಛಂತಿ ಮಂದಾಃ**
**ಕೃತ್ಸ್ನೋ ನಾಶೋ ಭವಿತಾ ಕೌರವಾಣಾಮ್** ॥೧೮॥

ಯಥಾಯೋಗ್ಯವಾಗಿ ಪ್ರಜಾಪಾಲನವನ್ನು ಮಾಡುವುದು ಬ್ರಹ್ಮದೇವರು ಜೀವಲೋಕದಲ್ಲಿ ಕ್ಷತ್ರಿಯರಿಗೆ ವಿಧಿಸಿರುವ ಶುದ್ಧವಾದ ಧರ್ಮ. ಮಂದರಾದ ಧೃತರಾಷ್ಟ್ರಪುತ್ರರು ತಮ್ಮ ದೋಷವನ್ನು ನಿವಾರಿಸಿಕೊಳ್ಳದಿದ್ದರೆ ಕೌರವರಿಗೆ ಸಂಪೂರ್ಣನಾಶವು ಉಂಟಾಗುವುದು.

**ಕಚ್ಚಿದ್ ರಾಜಾ ಧೃತರಾಷ್ಟ್ರಸ್ಯ ಪುತ್ರೋ**
**ಬುಭೂಷತೇ ವೃತ್ತಿಮಮಾತ್ಯವರ್ಗೇ ।**
**ಕಚ್ಚಿನ್ನ ಭೇದೇನ ಜಿಜೀವಿಷಂತಿ**
**ಸುಹೃದ್ಭೂಪಾ ದುರ್ಹೃದಶ್ಚೈಕಮತ್ಯಾತ್** ॥೧೯॥

ಧೃತರಾಷ್ಟ್ರಪುತ್ರನಾದ ರಾಜನಾದ ದುರ್ಯೋಧನನು ಅಮಾತ್ಯವರ್ಗದಲ್ಲಿ ಸರಿಯಾದ ವೃತ್ತಿಯನ್ನು ಹೊಂದಿರುವನಷ್ಟೆ? ಅಮಾತ್ಯರೆಲ್ಲರೂ ದುರ್ಹೃದಯದಿಂದ ಒಟ್ಟಾಗಿ ಮೇಲೆ ಸುಹೃದ್ರೂಪವನ್ನು ತೋರಿಸುತ್ತಾ ಭೇದೋಪಾಯದಿಂದ ಜೀವಿಸಲು ಬಯಸುವುದಿಲ್ಲವಷ್ಟೆ?

**ಕಚ್ಚಿತ್ತು ಪಾಪಂ ಕಥಯಂತಿ ತಾತ**
**ನ ಪಾಂಡವಾನಾಂ ಕುರವಃ ಸರ್ವ ಏವ ।**
**ದ್ರೋಣಃ ಸಪುತ್ರಃ ಸಕೃಪಶ್ಚ ವೀರೋ**
**ನಾಸ್ಮಾಸು ಪಾಪಾನಿ ವದಂತಿ ಕಚ್ಚಿತ್** ॥೨೦॥

ಪ್ರೀತಿಪಾತ್ರನೇ, ಕುರುಗಳೆಲ್ಲರೂ ಪಾಂಡವರ ವಿಷಯದಲ್ಲಿ ಯಾವ ಕೆಟ್ಟ ಮಾತನ್ನೂ ಆಡುವುದಿಲ್ಲವಷ್ಟೆ? ಪುತ್ರರಿಂದೊಡಗೂಡಿದ ದ್ರೋಣರಾಗಲೀ ಅಥವಾ ವೀರರಾದ ಕೃಪರಾಗಲೀ ನಮ್ಮ ವಿಷಯದಲ್ಲಿ ಕೆಟ್ಟದಾಗಿ ಮಾತನಾಡುವುದಿಲ್ಲವಷ್ಟೆ?

**ಕಚ್ಚಿದ್ ಗ್ರಾಹ್ಯಂ ಧೃತರಾಷ್ಟ್ರಂ ಸಪುತ್ರಂ**
**ಸಮೇತ್ಯಾಹುಃ ಕುರವಃ ಸರ್ವ ಏವ ।**
**ಕಚ್ಚಿದ್ ದೃಷ್ಟ್ವಾ ದಸ್ಯುಸಂಘಾನ್ ಸಮೇತಾನ್**
**ಸ್ಮರಂತಿ ಪಾರ್ಥಸ್ಯ ಯುಧಾಂ ಪ್ರಣೇತುಃ** ॥೨೧॥

ಉಪದೇಶಿಸಲ್ಪಡಬೇಕಾದ ಪುತ್ರಸಹಿತನಾದ ಧೃತರಾಷ್ಟ್ರನನ್ನು ಸಮೀಪಿಸಿ ಎಲ್ಲ ಕುರುಗಳು ಹಿತವನ್ನು ಹೇಳುವರಷ್ಟೆ? ಒಟ್ಟಿಗೆ ಪ್ರಾಪ್ತರಾದ ದಸ್ಯುಗಣಗಳನ್ನು ನೋಡಿ ಸೇನಾನಾಯಕನಾದ ಅರ್ಜುನನನ್ನು ಸ್ಮರಿಸುವರಷ್ಟೆ?

**ಮೌರ್ವೀಂ ಭುಜಾಗ್ರೇ ಪ್ರಹಿತಾಂ ಸ್ಮ ತಾತ**
**ದೋಧೂಯಮಾನೇನ ಧನುರ್ಗುಣೇನ ।**
**ಗಾಂಡೀವಮುಕ್ತಾನ್ ಸ್ತನಯಿತ್ನುಘೋಷಾನ್**
**ಅಜಿಹ್ಮಗಾನ್ ಕಚ್ಚಿದನುಸ್ಮರಂತಿ** ॥೨೨॥

ಪ್ರೀತಿಪಾತ್ರನೇ, ಹೆಗಲಿನಲ್ಲಿ ಧನುಸ್ಸಿನ ಹೆದೆಯನ್ನು ಹಾಕಿಕೊಂಡು, ಬಹಳವಾಗಿ ಕಂಪಿಸುವ ಆ ಹೆದೆಯಿಂದ ಹೊರಹೊಮ್ಮುವ ಗಾಂಡೀವ ಧನುಸ್ಸಿನಿಂದ ಹೊರಡುವ

ಸಿಡಿಲಿನ ಘೋಷವನ್ನು ಹೊಂದಿರುವ ನೇರವಾಗಿ ತಲುಪುವ ಅರ್ಜುನನ ಬಾಣಗಳನ್ನು ಸ್ಮರಿಸುವರಷ್ಟೆ?

ನತಂ ದೃಷ್ಟ್ವಾ ಕಚ್ಚಿದಸ್ತಿ ಪ್ರತೀಪಂ
ಗತೋ ಗೃಹಂ ಜಾತು ಜಗಾಮ ರಂಗಾತ್ ॥೨೩॥

ಅರ್ಜುನನಿಗೆ ಎದುರಾಗಿ ನಿಂತು ವೈರಿಯಾದ ಅರ್ಜುನನು ಬಾಗಿನಿಂತಿರುವುದನ್ನು ನೋಡಿ ಯುದ್ಧರಂಗದಿಂದ ಮನೆಗೆ ಹಿಂದಿರುಗಿದವನು ಯಾವನೂ ಇಲ್ಲ.

ನ ಚಾಪಶ್ಯಂ ಕಂಚಿದಹಂ ಪೃಥಿವ್ಯಾಂ
ಯೋಧಂ ಸಮಂ ವಾऽಪ್ಯಧಿಕಂ ಚಾರ್ಜುನೇನ ।
ಯಸ್ಯೈಕಷಷ್ಟಿರ್ನಿಹಿತಾಸ್ತೀಕ್ಷ್ಣಧಾರಾಃ
ಸುವಾಸಸಃ ಸಮ್ಮತಾ ಹಸ್ತವಾಪಾಃ ॥೨೪॥

ಯಾವ ಅರ್ಜುನನ ಬಳಿ ತೀಕ್ಷ್ಣವಾದ ಅಲುಗುಳ್ಳ, ಒಳ್ಳೆಯ ಪುಂಖವನ್ನು ಹೊಂದಿರುವ, ಶತ್ರುದೇಹಗಳಲ್ಲಿ ಬೀಜಾವಾಪವನ್ನು ಮಾಡುವಂತಿರುವ ಅರವತ್ತೊಂದು ಬಾಣಗಳು ಬತ್ತಳಿಕೆಯಲ್ಲಿನಿಹಿತವಾಗಿವೆಯೋ ಅಂತಹ ಅರ್ಜುನನಿಗೆ ಸಮನಾದ ಅಥವಾ ಅಧಿಕನಾದ ಯಾವ ಯೋಧನನ್ನೂ ನಾನು ಭೂಮಿಯಲ್ಲಿ ನೋಡಲಿಲ್ಲ.

ಗದಾಪಾಣಿರ್ಭೀಮಸೇನಸ್ತರಸ್ವೀ
ಪ್ರಾದ್ರಾವಯಚ್ಛತ್ರುಸಂಘಾನ್ ಸಮೀಕೇ ।
ನಾಗಃ ಪ್ರಭಿನ್ನ ಇವ ನಡ್ವಲೇಷು
ಚಂಕ್ರಮ್ಯತೇ ಕಚ್ಚಿದೇನಂ ಸ್ಮರಂತಿ ॥೨೫॥

ಗದಾಪಾಣಿಯಾದ ಭೀಮಸೇನನು ವೇಗಶಾಲಿಯಾದವನು. ಯುದ್ಧದಲ್ಲಿ ಅವನು ಶತ್ರುಸಮೂಹವನ್ನು ಓಡಿಸುತ್ತಾ ಮೃದುಪ್ರದೇಶದಲ್ಲಿ ಮದಗಜವು ಚಲಿಸುವಂತೆ ಸಂಚರಿಸುತ್ತಾನೆ. ಅವನನ್ನು ಸ್ಮರಿಸುತ್ತಾರಷ್ಟೆ?

ಮಾದ್ರೀಸುತಃ ಸಹದೇವಃ ಕಳಿಂಗಾನ್
ಸಮಾಗತಾನಜಯದ್ ವಾರ್ಧಿಕೂಲೇ ।

ವಾಮೇನಾಸ್ಯನ್ ದಕ್ಷಿಣೇನೇವ ಯೋ ವೈ
ಮಹಾಬಲಂ ಕಚ್ಚಿದೇನಂ ಸ್ಮರಂತಿ ॥೨೬॥

ಮಾದ್ರೀಪುತ್ರನಾದ ಸಹದೇವನು ಸಮುದ್ರತೀರದಲ್ಲಿ ಸಂಗತರಾದ ಕಳಿಂಗ ಸೈನಿಕರೆಲ್ಲರನ್ನೂ ಸೋಲಿಸಿದನು. ಅವನು ಎಡಗೈಯಿಂದಲೂ ಬಲಗೈಯಂತೆಯೇ ಬಾಣಗಳನ್ನು ಬಿಡುವ ಮಹಾಬಲನಾದವನು. ಅವನನ್ನು ಸ್ಮರಿಸುತ್ತಾರಷ್ಟೆ?

ಪುರಾ ಜೇತುಂ ನಕುಲಃ ಪ್ರೇಷಿತೋಽಯಂ
ಗಾವಲ್ಗಣೇ ಸಂಜಯ ಪಶ್ಯತಸ್ತೇ ।
ದಿಶಂ ಪ್ರತೀಚೀಂ ವಶಮಾನಯನ್ಮೇ
ಮಾದ್ರೀಪುತ್ರಃ ಕಚ್ಚಿದೇನಂ ಸ್ಮರಂತಿ ॥೨೭॥

ಎಲೈ ಸಂಜಯನೇ, ನಾನು ಹಿಂದೆ ನಿನ್ನ ಕಣ್ಣೆದುರಿಗೇ ನಕುಲನನ್ನು ಪಶ್ಚಿಮ ದಿಗ್ವಿಜಯಕ್ಕಾಗಿ ಕಳುಹಿಸಿದೆ. ಗಾವಲ್ಗಣಿಯೇ, ಮಾದ್ರೀಪುತ್ರನಾದ ಅವನು ಪಶ್ಚಿಮ ದಿಕ್ಕನ್ನು ನನ್ನ ವಶವನ್ನಾಗಿ ಮಾಡಿದನು. ಅವನನ್ನು ಸ್ಮರಿಸುತ್ತಾರಷ್ಟೆ?

ಪರಾಭವೋ ದ್ಯೂತವನೇ ಯ ಆಸೀದ್
ದುರ್ಮಂತ್ರಿತೇ ಘೋಷಯಾತ್ರಾಗತಾನಾಮ್ ।
ಯತ್ರ ಮಂದಾನ್ ಶತ್ರುವಶಂ ಪ್ರಪನ್ನಾನ್
ಅಮೋಚಯದ್ ಭೀಮಸೇನೋಽರ್ಜುನಶ್ಚ ॥೨೮॥

ಅಹಂ ಪಶ್ಚಾದರ್ಜುನಮಭ್ಯರಕ್ಷಂ
ಮಾದ್ರೀಪುತ್ರೌ ಭೀಮಸೇನಶ್ಚ ಚಕ್ರೇ ।
ಗಾಂಡೀವಭೃಚ್ಛತ್ರುಸಂಘಾನುದಸ್ಯ
ಸ್ತಸ್ಯಾಗಮತ್ ಕಚ್ಚಿದೇನಂ ಸ್ಮರಂತಿ ॥೨೯॥

ದ್ಯೂತವನದಲ್ಲಿ ಕೆಟ್ಟ ಮಂತ್ರಾಲೋಚನೆಯನ್ನು ಮಾಡಿ ಘೋಷಯಾತ್ರೆಗಾಗಿ ದುರ್ಯೋಧನಾದಿಗಳು ಬಂದಾಗ ಶತ್ರುಗಳಿಗೆ ವಶರಾದ ಆ ಮಂದರಾದ ದುರ್ಯೋಧನಾದಿಗಳನ್ನು ಭೀಮಸೇನ ಮತ್ತು ಅರ್ಜುನರು ವಿಮೋಚನೆ ಮಾಡಿದರು. ನಾನು ಹಿಂದಿನಿಂದ ಅರ್ಜುನನನ್ನು ರಕ್ಷಿಸಿದೆ. ನಕುಲ-ಸಹದೇವರು ಮತ್ತು

ಭೀಮಸೇನನು ಎರಡು ಪಾರ್ಶ್ವಗಳಿಂದ ಅವನನ್ನು ರಕ್ಷಿಸಿದರು. ಗಾಂಡೀವಧಾರಿಯಾದ ಅರ್ಜುನನು ಶತ್ರುಸಂಘವನ್ನು ಚದುರಿಸಿ ಕ್ಷೇಮದಿಂದ ಹಿಂದಿರುಗಿದನು. ಅವನನ್ನು ಸ್ಮರಿಸುತ್ತಾರಷ್ಟೆ?

**ನ ಕರ್ಮಣಾ ಸಾಧುನೈಕೇನ ನೂನಂ**
**ಕಾರ್ಯಂ ಶಕ್ಯಂ ವೈ ಭವತೀಹ ಸಂಜಯ ।**
**ಸರ್ವಾತ್ಮನಾ ಪರಿಜೇತುಂ ವಯಂ ಚೇತ್**
**ನ ಶಕ್ನುಮೋ ಧೃತರಾಷ್ಟ್ರಸ್ಯ ಪುತ್ರಮ್** ॥೩೦॥

ಎಲೈ ಸಂಜಯನೇ, ನಾವು ಧೃತರಾಷ್ಟ್ರಪುತ್ರನನ್ನು ಸರ್ವಾತ್ಮನಾ ಗೆಲ್ಲಲು ಸಾಧ್ಯವಾಗದಿದ್ದರೆ ರಾಜನ ಷಟ್ಕರ್ಮದಲ್ಲಿ ಒಂದಾದ ಸಂಧಿಯಿಂದ ನಮ್ಮ ಕಾರ್ಯವನ್ನು ಸಾಧಿಸಲು ಇಲ್ಲಿ ಸಾಧ್ಯವಾಗುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ತ್ರಯೋವಿಂಶೋಽಧ್ಯಾಯಃ ॥

॥ ಸಂಜಯಯಾನಪರ್ವಣಿ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಇಪ್ಪತ್ತಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

## ಇಪ್ಪತ್ತನಾಲ್ಕನೆಯ ಅಧ್ಯಾಯ

ಸಂಜಯನಿಂದ ಯುಧಿಷ್ಠಿರನ ಪ್ರಶ್ನೆಗಳಿಗೆ ಉತ್ತರದಾನ ಮತ್ತು ಭೀಷ್ಮ-ಧೃತರಾಷ್ಟ್ರಾದಿಗಳ ಅಭಿಪ್ರಾಯಕಥನ.

**ಸಂಜಯಃ**

**ಯದಾತ್ಥ ಮೇ ಪಾಂಡವ ತತ್ ತಥೈವ**
**ಕುರೂನ್ ಕುರುಶ್ರೇಷ್ಠ ಜನಂ ಚ ಪೃಚ್ಛಸಿ ।**
**ಅನಾಮಯಾಸ್ತಾತ ಮನಸ್ವಿನಸ್ತೇ**
**ಕುರುಶ್ರೇಷ್ಠಾನ್ ಪೃಚ್ಛಸಿ ಯಾಂಸ್ತ್ವಮೇವ** ॥೧॥

ಸಂಜಯ– ಪಾಂಡವನೇ, ನೀನು ಏನು ಹೇಳಿದೆಯೋ ಅವೆಲ್ಲವೂ ಹಾಗೆಯೇ ಸರಿ. ಕುರುಶ್ರೇಷ್ಠನೇ, ಕುರುಗಳ ಯೋಗಕ್ಷೇಮದ ವಿಷಯದಲ್ಲಿ ಪ್ರಶ್ನೆಯನ್ನು ಮಾಡುತ್ತಿದ್ದೀಯೆ. ಪ್ರೀತಿಪಾತ್ರನೇ, ಯಾವ ಕುರುಶ್ರೇಷ್ಠರನ್ನು ಕೇಳುತ್ತಿದ್ದೀಯೋ ಅವರೆಲ್ಲರೂ ಕ್ಷೇಮದಿಂದ ಮತ್ತು ಉತ್ಸಾಹವುಳ್ಳ ಮನಸ್ಸಿನಿಂದ ಕೂಡಿದವರಾಗಿದ್ದಾರೆ.

ಸಂತ್ಯೇವ ವೃದ್ಧಾಃ ಸಾಧವೋ ಧಾರ್ತರಾಷ್ಟ್ರೇ
ಸಂತ್ಯೇವ ಪಾಪಾಃ ಪಾಂಡವ ತಸ್ಯ ವಿದ್ಧಿ ।
ದದ್ಯಾತ್ ರಿಪುಭ್ಯೋಽಪಿ ಹಿ ಧಾರ್ತರಾಷ್ಟ್ರಃ
ಕುತೋ ದಾಯಾಂಲ್ಲೋಪಯೇದ್ ಬ್ರಾಹ್ಮಣಾನಾಮ್ ॥೨॥

ಎಲೈ ಪಾಂಡವನೇ, ದುರ್ಯೋಧನನ ಸಮೀಪದಲ್ಲಿ ಸಾಧುಗಳಾದ ವೃದ್ಧರೂ ಇದ್ದಾರೆ ಮತ್ತು ಪಾಪಿಷ್ಠರೂ ಇದ್ದಾರೆ ಎಂದು ತಿಳಿ. ದುರ್ಯೋಧನನು ಶತ್ರುಗಳಿಗೂ ತನ್ನ ಆಸ್ತಿಯನ್ನು ಕೊಟ್ಟಾನು. ಇನ್ನು ಬ್ರಾಹ್ಮಣರಿಗೆ ಕೊಡಬೇಕಾದ ಭಾಗವನ್ನು ಏಕೆ ಲೋಪ ಮಾಡುತ್ತಾನೆ?

ಯತ್ ತದ್ಯುಷ್ಮಾಸು ವರ್ತತೇಽಸಾವಧರ್ಮಮ್
ಅದುಗ್ಧೇಷು ದುಗ್ಧವತ್ ತನ್ನ ಸಾಧು ।
ಮಿತ್ರಧ್ರುಕ್ ಸ್ಯಾದ್ ಧೃತರಾಷ್ಟ್ರಸ್ಯ ಪುತ್ರೋ
ಯುಷ್ಮಾನ್ ದ್ವಿಷನ್ ಸಾಧುವೃತ್ತಾನಸಾಧುಃ ॥೩॥

ನಿಮ್ಮ ವಿಷಯದಲ್ಲಿ ಅವನು ಅಧರ್ಮದಿಂದ ನಡೆದುಕೊಳ್ಳುತ್ತಿದ್ದಾನೆ. ನಿಮ್ಮ ದ್ವೇಷರೂಪವಾದ ವಿಷವನ್ನು ಅವನು ಕ್ಷೀರವೆಂದು ತಿಳಿಯುವುದು ಸರಿಯಲ್ಲ. ಸಾಧು ನಡತೆಯುಳ್ಳ ನಿಮ್ಮನ್ನು ದ್ವೇಷಿಸಿದರೆ ಅಸಾಧುವಾದ ಧೃತರಾಷ್ಟ್ರಪುತ್ರನು ಮಿತ್ರದ್ರೋಹವನ್ನು ಮಾಡಿದಂತಾಗುತ್ತದೆ.

ಸ ಚಾಪಿ ಜಾನಾತಿ ಭೃಶಂ ಚ ತಪ್ಯತೇ
ಶೋಚತ್ಯಂತಃ ಸ್ಥವಿರೋಽಜಾತಶತ್ರೋ ।
ಮಿತ್ರದ್ರೋಹಂ ಬ್ರಾಹ್ಮಣಾನಾಂ ಸಮೇತ್ಯ
ಶೃಣೋತಿ ಹಿ ಪಾಪಕೇಭ್ಯೋ ಗರೀಯಃ ॥೪॥

ಅಜಾತಶತ್ರುವೇ, ವೃದ್ಧನಾದ ಧೃತರಾಷ್ಟ್ರನೂ ಎಲ್ಲವನ್ನು ತಿಳಿದಿದ್ದಾನೆ. ಪಶ್ಚಾತ್ತಾಪವನ್ನು ಪಡುತ್ತಿದ್ದಾನೆ. ಮನಸ್ಸಿನಲ್ಲಿಯೇ ದುಃಖವನ್ನು ಪಡುತ್ತಿದ್ದಾನೆ. ಬ್ರಾಹ್ಮಣರ ಸಮೂಹವನ್ನು ಸೇರಿ ಮಿತ್ರದ್ರೋಹವು ಎಲ್ಲ ಪಾಪಗಳಿಗಿಂತಲೂ ದೊಡ್ಡದಾದ ಪಾಪವೆಂದು ಕೇಳಿ ತಿಳಿದಿದ್ದಾನೆ.

ಸ್ಮರಂತಿ ತುಭ್ಯಂ ನರದೇವ ಸಂಯುಗೇ
ಯುದ್ಧೇ ಚ ಜಿಷ್ಣೋಶ್ಚ ಯುಧಾಂ ಪ್ರಣೇತುಃ ।
ಸಮುದ್ಘುಷ್ಟೇ ದುಂದುಭಿಶಂಖಶಬ್ದೇ
ಗದಾಪಾಣಿಂ ಭೀಮಸೇನಂ ಸ್ಮರಂತಿ ॥೫॥

ನರದೇವನೇ, ಯುದ್ಧದ ಪ್ರಸ್ತಾಪ ಬಂದಾಗ ನಿನ್ನನ್ನು ಸ್ಮರಿಸುತ್ತಾರೆ. ಸೇನಾನಾಯಕನಾದ ಅರ್ಜುನನನ್ನೂ ಸ್ಮರಿಸುತ್ತಾರೆ. ದುಂದುಭಿ-ಶಂಖಗಳ ಶಬ್ದಗಳು ಜೋರಾಗಿ ಕೇಳಿಬರುವಾಗ ಗದಾಪಾಣಿಯಾದ ಭೀಮಸೇನನನ್ನು ಸ್ಮರಿಸುತ್ತಾರೆ.

ಮಾದ್ರೀಸುತೌ ಚಾಪಿ ರಣಾಜಿಮಧ್ಯೇ
ಸರ್ವಾ ದಿಶಃ ಸಂಪತಂತೌ ಸ್ಮರಂತಿ ।
ಸೇನಾಂ ವರ್ಷಂತೌ ಶರವರ್ಷೈರಜಸ್ರಂ
ಮಹಾರಥೌ ಸಮರೇ ದುಷ್ಪ್ರಕಂಪ್ಯೌ ॥೬॥

ಮತ್ತು ಮಹಾರಥರೂ, ಯುದ್ಧದಲ್ಲಿ ಅಲುಗಾಡಿಸಲು ಸಾಧ್ಯವಿಲ್ಲದವರೂ, ತಮ್ಮ ಶರವರ್ಷದಿಂದ ಸತತವಾಗಿ ಶತ್ರುಗಳ ಸೇನೆಯ ಮೇಲೆ ಬಾಣಗಳ ಮಳೆಯನ್ನು ಕರೆಯುವವರೂ, ದಿಕ್ಕುದಿಕ್ಕುಗಳಲ್ಲಿ ಸಂಚರಿಸುವವರೂ ಆದ ಮಾದ್ರೀಪುತ್ರರಿಬ್ಬರನ್ನೂ ಶತ್ರುಗಳ ಯುದ್ಧದ ಮಧ್ಯದಲ್ಲಿ ಸ್ಮರಿಸುತ್ತಾರೆ.

ನನ್ವೇವ ಮನ್ಯೇ ಪುರುಷಸ್ಯ ರಾಜನ್
ಸ್ವಭಾವತೋ ಜಾಯತೇ ಯದ್ ಭವಿಷ್ಯತ್ ।
ತ್ವಂ ಚೇತ್ ತಥಾ ಸರ್ವಧರ್ಮೋಪಪನ್ನಃ
ಪ್ರಾಪ್ತಃ ಕ್ಲೇಶಂ ಪಾಂಡವ ಕೃಚ್ಛ್ರರೂಪಮ್ ॥೭॥

ಎಲೈ ರಾಜನೇ, ಪಾಂಡವನೇ, ನಿನ್ನಂತಹ ಸರ್ವಧರ್ಮೋಪಪನ್ನನಾದವನು ಇಷ್ಟು ಕಷ್ಟರೂಪವಾದ ಕ್ಲೇಶಗಳನ್ನು ಹೊಂದಿದೆ ಎಂದಾದಮೇಲೆ ಮನುಷ್ಯನಿಗೆ ವರ್ತಮಾನ ಕಾಲದಲ್ಲಿ ಮತ್ತು ಭವಿಷ್ಯತ್ಕಾಲದಲ್ಲಿ ಉಂಟಾಗುವುದೆಲ್ಲವೂ ಸ್ವಭಾವದಿಂದಲೇ ಉಂಟಾಗುತ್ತದೆ ಎಂದು ನಾನು ಭಾವಿಸುವುದಿಲ್ಲ.

ತ್ವಮೇವೈತತ್ ಸರ್ವಮತಶ್ಚ ಭೂಯಃ ।
ಸಮೀಕ್ಷ್ಯ ಕುರ್ಯಾಃ ಪ್ರಜ್ಞಯಾऽಜಾತಶತ್ರೋ ॥೮॥

ಅಜಾತಶತ್ರುವೇ, ನೀನೇ ಇವೆಲ್ಲವನ್ನು ಮತ್ತು ಇದಕ್ಕಿಂತ ಹೆಚ್ಚಿನದನ್ನು ನಿನ್ನ ಪ್ರಜ್ಞೆಯಿಂದ ವಿಚಾರ ಮಾಡಿ ಹಿತವನ್ನು ಮಾಡುವವನಾಗು.

ನ ಕಾಮಾರ್ಥಂ ಸಂತ್ಯಜೇಯುರ್ಹಿ ಧರ್ಮಂ
ಪಾಂಡೋಃ ಸುತಾಃ ಸರ್ವ ಏವೇಂದ್ರಕಲ್ಪಾಃ ।
ತ್ವಮೇವೈತತ್ ಪ್ರಜ್ಞಯಾऽಜಾತಶತ್ರೋ
ಸಮೀಕುರ್ಯಾ ಯೇನ ಶರ್ಮಾಪ್ನುಯುಸ್ತೇ ॥೯॥

ಎಲ್ಲರೂ ಇಂದ್ರಕಲ್ಪರಾದ ಪಾಂಡುಪುತ್ರರು ಕಾಮದ ಸಲುವಾಗಿ ಎಂದೂ ಧರ್ಮವನ್ನು ಬಿಡಲಾರರು. ಅಜಾತಶತ್ರುವೇ, ನಿನ್ನ ಪ್ರಜ್ಞೆಯಿಂದ ವಿಚಾರಮಾಡಿ ಹೇಗೆ ಅವರು ಸುಖವನ್ನು ಹೊಂದುವರೋ ಹಾಗೆಯೇ ಎಲ್ಲವನ್ನೂ ಸರಿಮಾಡು.

ಧಾರ್ತರಾಷ್ಟ್ರಾಃ ಪಾಂಡವಾಃ ಸೃಂಜಯಾಶ್ಚ
ಯೇ ಚಾಪ್ಯನ್ಯೇ ಸನ್ನಿವಿಷ್ಟಾ ನರೇಂದ್ರಾಃ ।
ಯನ್ನಾಂ ಬ್ರವೀದ್ ಧೃತರಾಷ್ಟ್ರೋ ನಿಶಾಯಾಮ್
ಅಜಾತಶತ್ರೋ ವಚನಂ ಪಿತಾ ತೇ ॥೧೦॥

ಸಹಾಮಾತ್ಯಃ ಸಹಪುತ್ರಶ್ಚ ರಾಜನ್
ಸಮೇತ್ಯ ತಾಂ ವಾಚಮಿಮಾಂ ನಿಬೋಧ ॥೧೧॥

ಅಜಾತಶತ್ರುವೇ, ಧೃತರಾಷ್ಟ್ರಪುತ್ರರೂ, ಪಾಂಡವರೂ, ಸೃಂಜಯರೂ, ಉಳಿದ ರಾಜರೂ ಎಲ್ಲರೂ ಒಂದುಗೂಡಿದ್ದಾರೆ. ನಿನ್ನೆ ರಾತ್ರಿಯ ವೇಳೆಯಲ್ಲಿ ಅಮಾತ್ಯ ಮತ್ತು

ಪುತ್ರರಿಂದೊಡಗೂಡಿದ ನಿನ್ನ ತಂದೆಯಾದ ಧೃತರಾಷ್ಟ್ರನು ನನಗೆ ಏನು ಹೇಳಿದನೋ ಅಂತಹ ಈ ಮಾತನ್ನು ನೀನು ಕೇಳುವವನಾಗು.

ಯುಧಿಷ್ಠಿರಃ

ಸಮಾಗತಾಃ ಪಾಂಡವಾಃ ಸೃಂಜಯಾಶ್ಚ
ಜನಾರ್ದನೋ ಯುಯುಧಾನೋ ವಿರಾಟಃ ।
ಯತ್ ತೇ ವಾಕ್ಯಂ ಧೃತರಾಷ್ಟ್ರಾನುಶಿಷ್ಟಂ
ಗಾವಲ್ಗಣೇ ಬ್ರೂಹಿ ತತ್ ಸೂತಪುತ್ರ ॥೧೨॥

ಯುಧಿಷ್ಠಿರ– ಎಲೈ ಸೂತಪುತ್ರನೇ, ಗಾವಲ್ಗಣಿಯೇ, ಪಾಂಡವರು, ಸೃಂಜಯರು, ಕೃಷ್ಣನು, ಸಾತ್ಯಕಿಯು, ವಿರಾಟನು ಎಲ್ಲರೂ ಬಂದು ಸೇರಿದ್ದಾರೆ. ಧೃತರಾಷ್ಟ್ರನು ನಿನಗೆ ಆದೇಶಿಸಿದ ಮಾತುಗಳನ್ನು ಹೇಳುವವನಾಗು.

ಸಂಜಯಃ

ಅಜಾತಶತ್ರುಂ ಚ ವೃಕೋದರಂ ಚ
ಧನಂಜಯಂ ಮಾದ್ರವತೀಸುತೌ ಚ ।
ಆಮಂತ್ರಯೇ ವಾಸುದೇವಂ ಚ ಶೌರಿಂ
ಯುಯುಧಾನಂ ಚೇಕಿತಾನಂ ವಿರಾಟಮ್ ॥೧೩॥

ಪಾಂಚಾಲಾನಾಮಧಿಪಂ ಚೈವ ವೃದ್ಧಂ
ಧೃಷ್ಟದ್ಯುಮ್ನಂ ಪಾರ್ಷತಂ ಯಾಜ್ಞಸೇನೀಮ್ ।
ಸರ್ವೇ ವಾಚಂ ಶೃಣುತೇಮಾಂ ಮದೀಯಾಂ
ವಕ್ಷ್ಯಾಮಿ ಯಾಂ ಭೂತಿಮಿಚ್ಛನ್ ಕುರೂಣಾಮ್ ॥೧೪॥

ಸಂಜಯ– ಅಜಾತಶತ್ರುವನ್ನೂ, ವೃಕೋದರನನ್ನೂ, ಅರ್ಜುನನನ್ನೂ, ಮಾದ್ರೀಪುತ್ರರಾದ ನಕುಲ-ಸಹದೇವರನ್ನೂ, ಶೂರಕುಲದಲ್ಲಿ ಜನಿಸಿದ ವಾಸುದೇವನನ್ನೂ, ಸಾತ್ಯಕಿಯನ್ನೂ, ಚೇಕಿತಾನನನ್ನೂ, ವಿರಾಟನನ್ನೂ, ಪಾಂಚಾಲಾಧಿಪತಿಯಾದ ವೃದ್ಧನಾದ ದ್ರುಪದನನ್ನೂ, ದ್ರುಪದನ ಮಗನಾದ ಧೃಷ್ಟದ್ಯುಮ್ನನನ್ನೂ ಮತ್ತು ಯಜ್ಞಸೇನನ ಮಗಳಾದ ದ್ರೌಪದಿಯನ್ನು ಆಮಂತ್ರಿಸುತ್ತೇನೆ. ಕುರುಗಳಿಗೆ ಸಮೃದ್ಧಿಯನ್ನು ಇಚ್ಛಿಸುವವನಾಗಿ ನಾನು ಹೇಳುವ ಈ ಮಾತುಗಳನ್ನು ಎಲ್ಲರೂ ಕೇಳಿ.

ಶಮಂ ರಾಜಾ ಧೃತರಾಷ್ಟ್ರೋಽಭಿನಂದನ್
ಅಯೋಜಯತ್ ತ್ವರಮಾಣೋ ರಥಂ ಮೇ ।
ಸಭ್ರಾತೃಪುತ್ರಸ್ವಜನಸ್ಯ ರಾಜ್ಞಃ
ತದ್ ರೋಚತಾಂ ಪಾಂಡವಾನಾಂ ಶಮೋಽಸ್ತು ॥೧೫॥

ರಾಜನಾದ ಧೃತರಾಷ್ಟ್ರನು ಸಂಧಿಯನ್ನು ಅಭಿನಂದಿಸುತ್ತಾ, ಶೀಘ್ರವಾಗಿ ನನಗೆ ರಥವನ್ನು ಹೂಡಿಸಿದನು. ಭ್ರಾತೃಪುತ್ರಸ್ವಜನ ಸಹಿತನಾದ ಧೃತರಾಷ್ಟ್ರನ ಅಭಿಪ್ರಾಯವು ಪಾಂಡವರಿಗೆ ಇಷ್ಟವಾಗಲಿ. ಸಂಧಿಯುಂಟಾಗಲಿ.

ಸರ್ವೈರ್ಧರ್ಮೈಃ ಸಮುಪೇತಾಸ್ತು ಪಾರ್ಥಾಃ
ಸಂಸ್ಥಾನೇನ ಮಾರ್ದವೇನಾರ್ಜವೇನ ।
ಕುಲೇ ಜಾತಾ ಹ್ಯನೃಶಂಸಾ ವದಾನ್ಯಾ
ಹ್ರೀನಿಷೇಧಾಃ ಕರ್ಮಣಾಂ ನಿಶ್ಚಯಜ್ಞಾಃ ॥೧೬॥

ಪಾಂಡವರು ಎಲ್ಲ ಧರ್ಮಗಳಿಂದಲೂ ಕೂಡಿದವರು. ಮೃದುಸ್ವಭಾವ ಮತ್ತು ನೇರವಾದ ನಡವಳಿಕೆಗಳಿಂದ ಮತ್ತು ಸಂಸ್ಥಾನದಿಂದ ಕೂಡಿದವರು, ಸತ್ಕುಲಪ್ರಸೂತರು, ಮೃದುಸ್ವಭಾವದವರು, ಉದಾರಿಗಳು, ದಾಕ್ಷಿಣ್ಯಸ್ವಭಾವವುಳ್ಳವರು, ಯಾವ ಕರ್ಮವನ್ನು ಮಾಡಬೇಕು, ಯಾವುದನ್ನು ಮಾಡಬಾರದು ಎಂಬ ವಿಷಯದಲ್ಲಿ ನಿಶ್ಚಯವುಳ್ಳವರು.

ನ ಯುಜ್ಯತೇ ಕರ್ಮ ಯುಷ್ಮಾಸು ಹೀನಂ
ಸತ್ತ್ವಂ ಹಿ ವಸ್ತಾದೃಶಂ ಭೀಮಸೇನಾಃ ।
ಉದ್ಬಾಸತೇ ಹ್ಯಂಜನಬಿಂದುವತ್ ತತ್
ಶುಭ್ರೇ ವಸ್ತ್ರೇ ಯದ್ಭವೇತ್ ಕಿಲ್ಬಿಷಂ ವಃ ॥೧೭॥

ಭಯಂಕರ ಸೈನ್ಯವುಳ್ಳ ಪಾಂಡವರೇ ನಿಮ್ಮಲ್ಲಿ ಯಾವ ಹೀನಕರ್ಮವೂ ಉಪಪನ್ನವಾಗುವುದಿಲ್ಲ. ನಿಮ್ಮ ಸ್ವಭಾವವೇ ಆ ರೀತಿಯಿದೆ. ನಿಮ್ಮಲ್ಲಿ ಏನಾದರೂ ಒಂದು ದೋಷವು ಇದ್ದರೆ ಅದು ಶುಭ್ರವಾದ ಬಿಳಿಯ ವಸ್ತ್ರದಲ್ಲಿ ಕಾಡಿಗೆಯ ಬಿಂದುವಿನಂತೆ ಎದ್ದು ತೋರುತ್ತದೆ.

ಸರ್ವಕ್ಷಯೋ ದೃಶ್ಯತೇ ಯತ್ರ ಕೃತ್ಸ್ನಃ
ಪಾಪೋದಯೋ ಭಾವಸಂಸ್ಥಃ ಕುರೂಣಾಮ್ ।
ಕಸ್ತತ್ರ ಕುರ್ಯಾಜ್ಜಾತು ಕರ್ಮ ಪ್ರಜಾನನ್
ಪರಾಜಯೋ ಯತ್ರ ಸಮೋ ಜಯಶ್ಚ ॥೧೮॥

ಯಾವ ಪಾಪವನ್ನು ಆಚರಿಸಿದರೆ ಸಮಗ್ರವಾದ ವಿನಾಶವುಂಟಾಗುತ್ತದೆಯೋ ಅಂತಹ ಪಾಪೋದಯವು ಕುರುಗಳ ಮನಸ್ಸಿನಲ್ಲಿದೆ. ಒಮ್ಮೆ ಸೋಲು, ಒಮ್ಮೆ ಗೆಲುವುಂಟಾಗುವ ಮತ್ತು ಎಲ್ಲಿ ಸೋಲು ಮತ್ತು ಗೆಲುವು ಸಮವಾಗಿರುತ್ತವೆಯೋ ಅಂತಹ ಕೆಟ್ಟದ್ಯೂತವನ್ನು ಯಾವನು ಆಡಿಯಾನು?

ತೇ ವೈ ಧನ್ಯಾ ಯೈಃ ಕೃತಂ ಜ್ಞಾತಿಕಾರ್ಯಂ
ತೇ ವೈ ಪುತ್ರಾ ಸುಹೃದೋ ಬಾಂಧವಾಶ್ಚ ।
ಉಪಕ್ರುಷ್ಟಂ ಜೀವಿತಂ ಸಂತ್ಯಜೇಯುಃ
ಯತಃ ಕುರೂಣಾಂ ನಿಯತಃ ಸ್ಯಾದಭಾವಃ ॥೧೯॥

ಆ ಪಾಂಡವರು ಬಂಧುಕಾರ್ಯವನ್ನು ಮಾಡಿ ನಿಜವಾಗಿಯೂ ಧನ್ಯರಾಗಿದ್ದಾರೆ. ಅವರೇ ನನ್ನ ಸುಹೃದಯವುಳ್ಳ ಬಂಧುಗಳಾದ ಪುತ್ರರು. ನಿಂದನೆಗೆ ಒಳಗಾದರೆ ಅವರು ಜೀವನವನ್ನೂ ತೊರೆದಾರು. ಅವರಿಂದ ಕುರುಗಳಿಗೆ ವಿನಾಶವು ನಿಶ್ಚಯವಾಗಿ ಪ್ರಾಪ್ತವಾಗಿದೆ.

ನ ಚೇತ್ ಕುರೂನನುಶಿಕ್ಷಾಮಿ ಸಾರ್ಧಂ
ನಿರ್ಣೀಯ ಸರ್ವಾನ್ ದ್ವಿಷತೋ ನಿಗೃಹ್ಯ ।
ಸಮಂ ವಸ್ತಜ್ಜೀವಿತಂ ಮೃತ್ಯುನಾ ಸ್ಯಾದ್
ಯಜ್ಜೀವಧ್ವಂ ಜ್ಞಾತಿವಧೇನ ಸಾಧು ॥೨೦॥

ಕುರುಗಳ ಮನೋಗತವಾದ ಅಭಿಪ್ರಾಯವನ್ನು ನಿಶ್ಚಯಿಸಿ, ಸಂಧಿಕಾರ್ಯವನ್ನು ದ್ವೇಷಿಸುವವರನ್ನು ನಿಗ್ರಹಿಸಿ, ನಾನು ಒಳ್ಳೆಯ ಸ್ವಭಾವವನ್ನು ಉಪದೇಶ ಮಾಡದಿದ್ದರೆ ನಿಮ್ಮ ಮುಂದಿನ ಜೀವನವು ಮರಣಕ್ಕೆ ಸಮಾನವಾಗುತ್ತದೆ. ಏಕೆಂದರೆ ಜ್ಞಾತಿವಧೆಯನ್ನು ಮಾಡಿ ನೀವು ಬದುಕುವಿರಿ.

ಕೋ ಹ್ಯೇವ ಯುಷ್ಮಾನ್ ಸಹ ಕೇಶವೇನ
ಸಚೇಕಿತಾನಾನ್ ಪಾರ್ಷತಬಾಹುಗುಪ್ತಾನ್ ।
ಸಸಾತ್ಯಕೀನ್ ವಿಷಹತೇ ಹ ಜೇತುಂ
ಲಬ್ಧ್ವಾಽಪಿ ದೇವಾನ್ ಸಚಿವಾನ್ ಸಹೇಂದ್ರಾನ್ ॥೨೧॥

ಕೇಶವನಿಂದಲೂ, ಚೇಕಿತಾನನಿಂದಲೂ ಸಹಿತರಾದ ದ್ರುಪದನ ಬಾಹುಗಳಿಂದ ಗುಪ್ತರಾದ, ಸಾತ್ಯಕಿಯಿಂದ ಸಹಿತರಾದ ನಿಮ್ಮನ್ನು ಇಂದ್ರಾದಿದೇವತೆಗಳನ್ನೇ ಸಚಿವರಾಗಿ ಹೊಂದಿದರೂ ಕೂಡ ಯಾವನು ಗೆಲ್ಲಲು ಹವಣಿಸುತ್ತಾನೆ?

ಕೋ ವಾ ಕುರೂನ್ ದ್ರೋಣಭೀಷ್ಮಾಭಿಗುಪ್ತಾನ್
ಅಶ್ವತ್ಥಾಮ್ನಾ ಶಲ್ಯಕೃಪಾದಿಭಿಶ್ಚ ।
ರಣೇ ವಿಜೇತುಂ ವಿಷಹೇತ ರಾಜನ್
ರಾಧೇಯಗುಪ್ತಾನ್ ಸಹ ಭೂಮಿಪಾಲೈಃ ॥೨೨॥

ಹಾಗೆಯೇ ದ್ರೋಣ-ಭೀಷ್ಮರಿಂದ ರಕ್ಷಿತವಾದ, ಅಶ್ವತ್ಥಾಮ, ಶಲ್ಯ , ಕೃಪರಿಂದ ರಕ್ಷಿತವಾದ, ಕರ್ಣ ಮತ್ತು ಉಳಿದ ರಾಜರಿಂದ ರಕ್ಷಿತವಾದ ಕುರುಗಳನ್ನಾದರೂ ಎಲೈ ರಾಜನೇ, ಯಾವನು ಜಯಿಸಲು ಬಯಸುತ್ತಾನೆ?

ಮಹದ್ಬಲಂ ಧಾರ್ತರಾಷ್ಟ್ರಸ್ಯ ರಾಜ್ಞಃ
ಕೋ ವೈ ಶಕ್ತೋ ಹಂತುಮಕ್ಷೀಯಮಾಣಃ ।
ಸೋಽಹಂ ಜಯೇ ಚೈವ ಪರಾಜಯೇ ಚ
ನಿಃಶ್ರೇಯಸಂ ನಾಧಿಗಚ್ಛಾಮಿ ಕಿಂಚಿತ್ ॥೨೩॥

ದುರ್ಯೋಧನನ ಸೈನ್ಯವು ಅಪಾರವಾಗಿದೆ. ತಾನು ನಾಶವನ್ನು ಹೊಂದದೆ ಆ ಸೈನ್ಯವನ್ನು ಸಂಹಾರ ಮಾಡಲು ಯಾವನು ಸಮರ್ಥನಾಗುತ್ತಾನೆ? ಆದ್ದರಿಂದ ನಾನು ಈ ಪರಿಸ್ಥಿತಿಯಲ್ಲಿ ಜಯ ಮತ್ತು ಪರಾಜಯಗಳಲ್ಲಿ ಯಾವುದು ಶ್ರೇಷ್ಠ ಎಂದು ತೀರ್ಮಾನಿಸಲಾರೆ.

ಕಥಂ ಹಿ ನೀಚಾ ಇವ ದೌಷ್ಕುಲೇಯಾ
ನಿರ್ಧರ್ಮಾರ್ಥಂ ಕರ್ಮ ಕುರ್ಯುಶ್ಚ ಪಾರ್ಥಾಃ ।

ಸೋಽಹಂ ಪ್ರಸಾದ್ಯ ಪ್ರಣತೋ ವಾಸುದೇವಂ
ಪಾಂಚಾಲಾನಾಮಧಿಪಂ ಚೈವ ವೃದ್ಧಮ್ ॥೨೪॥

ಕೃತಾಂಜಲಿಃ ಶರಣಂ ವಃ ಪ್ರಪದ್ಯೇ
ಕಥಂ ಸ್ವಸ್ತಿ ಸ್ಯಾತ್ ಕುರುಸೃಂಜಯಾನಾಮ್ ।
ನ ಹ್ಯೇವಂ ಮೇ ವಚನಂ ವಾಸುದೇವೋ
ಧನಂಜಯೋ ವಾ ಜಾತು ಕಿಂಚಿನ್ನ ಕುರ್ಯಾತ್ ॥೨೫॥

ಪಾಂಡವರು ದುಷ್ಕುಲಪ್ರಸೂತರಾದ ನೀಚರಂತೆ ಧರ್ಮಾರ್ಥಗಳಿಗೆ ವಿರುದ್ಧವಾದ ಕರ್ಮವನ್ನು ಹೇಗೆ ಮಾಡಿಯಾರು? ಆದ್ದರಿಂದ ನಾನು ವಾಸುದೇವನಿಗೆ ನಮಸ್ಕಾರ ಮಾಡಿ ಪಾಂಚಾಲಾಧಿಪತಿಯಾದ ದ್ರುಪದನಿಗೂ ನಮಸ್ಕಾರ ಮಾಡಿ ಕೈಗಳನ್ನು ಮುಗಿದು ನಿಮಗೆ ಶರಣಾಗತನಾಗುತ್ತೇನೆ. ಕುರು-ಸೃಂಜಯರಿಗೆ ಏನು ಮಾಡಿದರೆ ಕ್ಷೇಮ ಉಂಟಾಗುತ್ತದೆ? ವಾಸುದೇವನಾಗಲೀ ಅಥವಾ ಧನಂಜಯನಾಗಲೀ ನನ್ನ ಮಾತನ್ನು ಎಂದೂ ನಡೆಸಿಕೊಡದೆ ಇರುವುದಿಲ್ಲ.

ಪ್ರಾಣಾನ್ ದದ್ಯಾದ್ ಯಾಚ್ಯಮಾನಃ ಕುತೋಽನ್ಯದ್
ಏತದ್ ವಿದ್ವಾನ್ ಸಾಧನಾರ್ಥಂ ಬ್ರವೀಮಿ ।
ಏತದ್ ರಾಜ್ಞೋ ಭೀಷ್ಮಪುರೋಗಮಸ್ಯ
ಮತಂ ಯದ್ವಃ ಶಾಂತಿರಿಹೋತ್ತಮಾ ಸ್ಯಾತ್ ॥೨೬॥

ಬೇಡಲ್ಪಟ್ಟರೆ ಅಜಾತಶತ್ರುವು ತನ್ನ ಪ್ರಾಣವನ್ನೂ ಕೊಟ್ಟಾನು. ಇನ್ನು ಬೇರೆಯ ವಿಷಯದಲ್ಲಿ ಹೇಳುವುದೇನಿದೆ? ಇದನ್ನು ತಿಳಿದ ನಾನು ನನ್ನ ಕಾರ್ಯಸಾಧನೆಗಾಗಿ ಹೇಳುತ್ತಿದ್ದೇನೆ. ಇದು ಧೃತರಾಷ್ಟ್ರ-ಭೀಷ್ಮ ಮೊದಲಾದವರ ಅಭಿಪ್ರಾಯ. ನಿಮಗೆ ಕೌರವರ ಜೊತೆಯಲ್ಲಿ ಸಂಧಿಯು ಅತ್ಯಂತ ಶ್ರೇಷ್ಠವಾದುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಚತುರ್ವಿಂಶೋಽಧ್ಯಾಯಃ ॥
॥ ಸಂಜಯಯಾನಪರ್ವಣಿ ಪಂಚಮೋಽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಇಪ್ಪತ್ತನಾಲ್ಕನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

# ಇಪ್ಪತ್ತೈದನೆಯ ಅಧ್ಯಾಯ

ಯುಧಿಷ್ಠಿರನಿಂದ ತಮ್ಮ ಪ್ರಾಬಲ್ಯಕಥನಪೂರ್ವಕವಾಗಿ ಇಂದ್ರಪ್ರಸ್ಥದಲ್ಲಿ ರಾಜ್ಯದಾನವನ್ನು ಮಾಡಿದರೆ ಶಾಂತಿಯ ಕಥನ.

**ಯುಧಿಷ್ಠಿರಃ**

**ಕಾಂ ನು ವಾಚಂ ಸಂಜಯ ಮೇ ಶೃಣೋಷಿ**
**ಯುದ್ಧೈಷಿಣೋ ಯೇನ ಯುದ್ಧಾದ್ ಬಿಭೇಷಿ ।**
**ಅಯುದ್ಧಂ ವೈ ತಾತ ಯುದ್ಧಾದ್ ಗರೀಯಃ**
**ಕಸ್ತಲ್ಲಬ್ಧ್ವಾ ಜಾತು ಯುಧ್ಯೇತ ಸೂತ** ॥೧॥

ಯುಧಿಷ್ಠಿರ– ಸೂತನಾದ ಸಂಜಯನೇ, ಯುದ್ಧವನ್ನು ಬಯಸಿ ನಾನು ಆಡಿದ ಯಾವ ಮಾತನ್ನು ಕೇಳಿ ನೀನು ಯುದ್ಧಕ್ಕೆ ಹೆದರುತ್ತಿದ್ದೀಯೆ? ಪ್ರೀತಿಪಾತ್ರನೇ, ಯುದ್ಧವನ್ನು ಮಾಡದಿರುವುದು ಯುದ್ಧ ಮಾಡುವುದಕ್ಕಿಂತ ಶ್ರೇಷ್ಠವಾದುದು. ಅಂತಹ ಯುದ್ಧಾಭಾವವನ್ನು ಸಂಪಾದಿಸಿದ ಯಾವನು ಯುದ್ಧವನ್ನು ಮಾಡಿಯಾನು?

**ಅಕುರ್ವತಶ್ಚೇತ್ ಪುರುಷಸ್ಯ ಸಂಜಯ**
**ಸಿದ್ಧ್ಯೇತ್ ಸಂಕಲ್ಪೋ ಮನಸಾ ಯಂ ಯಮಿಚ್ಛೇತ್ ।**
**ನ ಕರ್ಮ ಕುರ್ಯಾದ್ ವಿದಿತಂ ಮಮೈತದ್**
**ಅನ್ಯತ್ರ ಯುದ್ಧಾದ್ ಬಹು ಯಲ್ಲಘೀಯಃ** ॥೨॥

ಎಲೈ ಸಂಜಯನೇ, ಕರ್ಮವನ್ನು ಮಾಡದೆ, ಯುದ್ಧವನ್ನು ಮಾಡದೆ ಪುರುಷನು ಮನಸ್ಸಿನಲ್ಲಿ ಬಯಸುವುದೆಲ್ಲಾ ಸಿದ್ಧವಾಗುವುದಾದರೆ ಯಾವನೂ ಕರ್ಮವನ್ನು (ಯುದ್ಧವನ್ನು) ಮಾಡಲಾರ. ಈ ವಿಷಯವನ್ನು ನಾನು ತಿಳಿದಿದ್ದೇನೆ. ಯುದ್ಧವನ್ನು ಬಿಟ್ಟು ಬೇರೆ ಅಲ್ಪವಾದ ಲಾಭವೂ ಶ್ಲಾಘನೀಯವಾಗುತ್ತದೆ (ದೊಡ್ಡದಾಗುತ್ತದೆ).

**ಕುತೋ ಯುದ್ಧಂ ಜಾತು ನರೋಽವಗಚ್ಛೇತ್**
**ಕೋ ದೇವಶಪ್ತೋ ಹಿ ವೃಣೀತ ಯುದ್ಧಮ್ ।**
**ಸುಖೈಷಿಣಃ ಕರ್ಮ ಕುರ್ವಂತಿ ಪಾರ್ಥಾ**
**ಧರ್ಮಾದಹೀನಂ ಯಚ್ಚ ಲೋಕಸ್ಯ ಪಥ್ಯಮ್** ॥೩॥

ಧರ್ಮೋದಯಂ ಸುಖಮಾಶಂಸಮಾನಾಃ
ಕೃಚ್ಛ್ರೋದಯಂ ತತ್ತ್ವತಃ ಕರ್ಮ ದುಃಖಮ್ ॥೪॥

ಯಾವ ಮನುಷ್ಯನಾದರೂ ಯುದ್ಧವನ್ನು ಮಾಡಬೇಕೆಂದು ಏಕೆ ತಿಳಿಯಬೇಕು? ದೇವಶಾಪಕ್ಕೆ ಒಳಗಾದ ಯಾವನು ಯುದ್ಧವನ್ನು ಬಯಸಿಯಾನು? ಸುಖವನ್ನು ಬಯಸುವ ಪಾಂಡವರು ಧರ್ಮಕ್ಕೆ ಚ್ಯುತಿ ತರದ, ಲೋಕಕ್ಕೆ ಹಿತವಾದ ಕರ್ಮವನ್ನೇ ಮಾಡುತ್ತಾರೆ. ಸುಖವನ್ನು ಬಯಸುವ ಅವರು ಯಾವ ಕರ್ಮದಿಂದ ಧರ್ಮವು ಉಂಟಾಗುತ್ತದೆಯೋ ಅದನ್ನೇ ಮಾಡುತ್ತಾರೆ. ಪರಧನದ ಅಪಹಾರ ಮೊದಲಾದ ಕರ್ಮಗಳು ಯುದ್ಧಾದಿ ಸಂಕಟದ ಉತ್ಪತ್ತಿಗೂ ಮತ್ತು ದುಃಖಕ್ಕೂ ನಿಜವಾಗಿ ಕಾರಣವಾಗುತ್ತದೆ.

ಕರ್ಮಾಭಿಜ್ಞೋ ವಿಜಿಘಾಂಸುಶ್ಚ ದುಃಖಂ
ಕ ಇಂದ್ರಿಯಾಣಾಂ ಪ್ರೀತಿವಶಾನುಗಾನಾಮ್ ॥೫॥

ಕರ್ಮಾಭಿವೃದ್ಧ್ಯಾ ಸ್ವಶರೀರಂ ದುನೋತಿ
ಯಯಾ ಪ್ರಯುಕ್ತೋಽತ್ರ ಕರೋತಿ ದುಃಖಮ್ ।

ಕರ್ಮಕುಶಲನಾಗಿ ದುಃಖವನ್ನು ಪರಿಹಾರ ಮಾಡಿಕೊಳ್ಳಲು ಇಚ್ಛಿಸುವವನು ಸುಖವನ್ನು ಬಯಸುವ ತನ್ನ ಇಂದ್ರಿಯಗಳಿಗೋಸ್ಕರ ದುಃಖಕರವಾದ ಕರ್ಮವನ್ನು ಅಭಿವೃದ್ಧಿಗೊಳಿಸಿ ಯಾವನು ತನ್ನ ಶರೀರವನ್ನು ದುಃಖಕ್ಕೆ ಈಡುಮಾಡುತ್ತಾನೆ? ಅಂತಹ ಕರ್ಮಾಭಿವೃದ್ಧಿಯು ಪುನಃ ಇಲ್ಲಿ ದುಃಖವನ್ನೇ ಉಂಟುಮಾಡುತ್ತದೆ.

ಯಥೇಧ್ಯಮಾನಸ್ಯ ಸಮಿದ್ಧತೇಜಸೋ
ಭೂಯೋ ಬಲಂ ವರ್ಧತಿ ಪಾವಕಸ್ಯ ॥೬॥

ಕಾಮಾರ್ಥಲೋಭೇನ ತಥೈವ ಭೂಯೋ
ನ ತೃಪ್ಯತೇ ಸರ್ಪಿಷೇವಾಗ್ನಿರಿದ್ಧಃ ।
ಸಂಪಶ್ಯೇಮಂ ಭೋಗಮಯಂ ಮಹಾಂತಂ
ಸಹಾಸ್ಮಾಭಿರ್ಧೃತರಾಷ್ಟ್ರಸ್ಯ ರಾಜ್ಞಃ ॥೭॥

ಹೇಗೆ ಜಾಜ್ವಲ್ಯವಾಗಿ ಉರಿಯುತ್ತಿರುವ ಅಗ್ನಿಗೆ ಕಟ್ಟಿಗೆಯನ್ನು ಹಾಕಿದರೆ ಅದರ ಬಲವು ಪುನಃ ಅಭಿವೃದ್ಧಿಯನ್ನು ಹೊಂದುತ್ತದೆಯೋ ಅದರಂತೆ ಕಾಮ ಮತ್ತು ಅರ್ಥಗಳ ಲೋಭದಿಂದ ಕರ್ಮವನ್ನು ಆಚರಿಸುವವನಿಗೆ ಉರಿಯುತ್ತಿರುವ ಅಗ್ನಿಯು ಘೃತದಿಂದ ಹೇಗೆ ತೃಪ್ತಿಯನ್ನು ಹೊಂದುವುದಿಲ್ಲವೋ ಹಾಗೆಯೇ ತೃಪ್ತಿಯೇ ಉಂಟಾಗುವುದಿಲ್ಲ. ರಾಜನಾದ ಧೃತರಾಷ್ಟ್ರನ ಭೋಗಕ್ಕೆ ಸಮಾನವಾದ ಭೋಗವುಳ್ಳ ಈ ಮಹಾತ್ಮನಾದ ಕೃಷ್ಣನನ್ನು ನೋಡು (ಅವನು ಅಂತಹ ಭೋಗ ಮತ್ತು ತೃಪ್ತಿಯಿಂದ ಕೂಡಿದವನಾಗಿದ್ದಾನೆ).

ನಾಶ್ರೇಯಸಾಮೀಶ್ವರೋ ವಿಗ್ರಹಾಣಾಂ
ನಾಶ್ರೇಯಸಾಂ ವೈ ಗತಿಶಬ್ದಂ ಶೃಣೋತಿ ।
ನಾಶ್ರೇಯಸಾಂ ವೈ ಸೇವತೇ ಮಾಲ್ಯಗಂಧಾನ್
ನ ಚಾಪ್ಯಶ್ರೇಯಸೋಽನುಲೇಪನಾನಿ ॥೮॥

ದರಿದ್ರನಾದವನು ದೇಹಕ್ಕೆ ಪ್ರಭುವಾಗಿರುವುದಿಲ್ಲ (ಕೃಷ್ಣ ಸೇನೆಯಲ್ಲಿರುವವರೆಲ್ಲರೂ ಭಾಗ್ಯವಂತರು ಎಂದು ಅಭಿಪ್ರಾಯ). ಅಂತಹವರು ದರಿದ್ರರ ಗೀತಶಬ್ದವನ್ನು ಕೇಳುವುದಿಲ್ಲ. ಗಂಧರ್ವರ ಗೀತಶಬ್ದವನ್ನೇ ಕೇಳುತ್ತಾರೆ. ದರಿದ್ರರ ಗಂಧಮಾಲ್ಯಗಳನ್ನಾಗಲೀ, ಅನುಲೇಪವನ್ನಾಗಲೀ ಸೇವಿಸುವುದಿಲ್ಲ (ಭಾಗ್ಯವಂತರ ಭೋಗದ್ರವ್ಯಗಳನ್ನೇ ಸೇವಿಸುತ್ತಾರೆ).

ನಾಶ್ರೇಯಸೋ ವೈ ಪ್ರಾವರಾನ್ ಸಂವಿವತ್ಸೇ
ಕಥಂ ನ್ವಸ್ಮಾನ್ ಸಂಪ್ರಣುದೇತ್ ಕುರುಭ್ಯಃ ।
ಅತ್ಯೈವ ಸರ್ವಾನವಧೂಯೈಷ ಕಾಮಃ
ಕುರೂನ್ ಶರೀರೇ ಹೃದಯಂ ದುನೋತಿ ॥೯॥

ಅವರು ದರಿದ್ರರ ವಸ್ತ್ರಗಳನ್ನು ಹೊದೆಯುವುದಿಲ್ಲ. ಕೃಷ್ಣನಿಗೆ ನಮ್ಮ ಜಯದ ನಿಶ್ಚಯವಿಲ್ಲದಿದ್ದರೆ (ಇಂತಹ ತೊಂದರೆ ಉಂಟಾಗುವುದಾದರೆ) ನಮ್ಮನ್ನು ಕುರುಗಳ ಎದುರಾಗಿ ಹೇಗೆ ಪ್ರಚೋದಿಸುತ್ತಾನೆ? ಕೃಷ್ಣನ ಭಕ್ತರು ಇಲ್ಲಿಯೇ ಅನುಭವಿಸಿದ ಭೋಗಗಳು ಎಲ್ಲ ಕುರುಗಳನ್ನೂ ತಿರಸ್ಕರಿಸಿ, ಅವರ ಹೃದಯವನ್ನು ದುಃಖಕ್ಕೆ ಈಡು ಮಾಡುತ್ತವೆ.

ಸ್ವಯಂ ರಾಜಾ ವಿಷಮಸ್ಥಃ ಪರೇಷು
ಸಾಮರ್ಥ್ಯಮನ್ವಿಚ್ಛತಿ ತನ್ನ ಸಾಧು ।
ಯಥಾऽऽತ್ಮನಃ ಪಶ್ಯತಿ ವೃತ್ತಮೇಷಾಂ
ತಥಾ ಪರೇಷಾಮಪಿ ಸೋऽಭ್ಯುಪೈತು ॥೧೦॥

ಸಂಕಟಕ್ಕೆ ಸಿಲುಕಿರುವ ರಾಜನು ಇನ್ನೊಬ್ಬರ ಸಾಮರ್ಥ್ಯವನ್ನು ಬಯಸುತ್ತಿದ್ದಾನೆ. ಅದು ಸರಿಯಲ್ಲ. ತನ್ನನಡತೆ (ಸಂಕಟಗಳು) ಹೇಗಿದೆಯೋ ಹಾಗೆಯೇ ಇನ್ನೊಬ್ಬರಿಗೂ ಇರುತ್ತವೆ ಎಂದು ಅವನು ತಿಳಿಯಬೇಕು.

ಆಸನ್ನಮಗ್ನಿಂ ತು ನಿದಾಘಕಾಲೇ
ಗಭೀರಕಕ್ಷೇ ಗಹನೇ ವಿಸೃಜ್ಯ ।
ಯಥಾ ಪ್ರವೃದ್ಧೇ ವಾಯುವಶೇನ ಶೋಚೇತ್
ಕಕ್ಷಂ ಮುಮುಕ್ಷುಃ ಶಿಶಿರವ್ಯಪಾಯೇ ॥೧೧॥

ಶಿಶಿರಋತುವಿನ ಕೊನೆಯಲ್ಲಿ ಬೇಸಿಗೆ ಕಾಲದಲ್ಲಿ ದಟ್ಟವಾದ ತೃಣಗಳಿರುವ ಕಾಡಿನಲ್ಲಿಸಮೀಪದಲ್ಲಿದ್ದ ಅಗ್ನಿಯನ್ನು ವಿಸರ್ಜನೆ ಮಾಡಿ ವಾಯುವಶದಿಂದ ಅದು ಪ್ರವೃದ್ಧವಾಗುತ್ತಿರಲು ಹೇಗೆ ಶೋಕಪಡುತ್ತಾನೆಯೋ, ಹೇಗೆ ಆ ತೃಣಕಾನನವನ್ನು ತ್ಯಜಿಸಲು ಅಪೇಕ್ಷಿಸುತ್ತಾನೆಯೋ ಅದರಂತೆ ಧೃತರಾಷ್ಟ್ರನು ಇದ್ದಾನೆ.

ಪ್ರಾಪ್ತೈಶ್ವರ್ಯೋ ಧೃತರಾಷ್ಟ್ರೋऽದ್ಯ ರಾಜಾ
ಸಮ್ಮುಹ್ಯತೇ ಸಂಜಯ ಕಸ್ಯ ಹೇತೋಃ ।
ಪ್ರಗೃಹ್ಯ ದುರ್ಬುದ್ಧಿಮನಾರ್ಜವೇ ರತಂ
ಪುತ್ರಂ ಮಂದಂ ಮೂಢಮಮಂತ್ರಿಣಂ ತು ॥೧೨॥

ಎಲೈ ಸಂಜಯನೇ, ಈ ದಿನ ಧೃತರಾಷ್ಟ್ರನು ಸಂಪತ್ತನ್ನು ಪಡೆದು ದುರ್ಬುದ್ಧಿಯೂ, ಆರ್ಜವರಹಿತನೂ, ಮಂದನೂ, ಮೂಢನೂ, ಮಂತ್ರಶಕ್ತಿಹೀನನೂ ಆದ ಮಗನನ್ನು ಅವಲಂಬಿಸಿ ಏತಕ್ಕಾಗಿ ಮೋಹಕ್ಕೆ ಒಳಗಾಗಿದ್ದಾನೆ?

ಅನಾಪ್ತವಚ್ಚಾಪ್ತತಮಸ್ಯ ವಾಚಂ
ಸುಯೋಧನೋ ವಿದುರಸ್ಯಾವಮತ್ಯ ।

ಸುತಸ್ಯ ರಾಜಾ ಧೃತರಾಷ್ಟ್ರಃ ಪ್ರಿಯೈಷೀ
ಸಂಬುದ್ಧ್ಯಮಾನೋ ವಿಶತೇऽಧರ್ಮಮೇವ ॥೧೩॥

ಯಾವ ಸುಯೋಧನನು ಆಪ್ತತಮನಾದ ವಿದುರನ ಮಾತನ್ನು ಅನಾಪ್ತನ ಮಾತಿನಂತೆ ತಿರಸ್ಕರಿಸಿದ್ದಾನೆಯೋ ಅಂತಹ ಪುತ್ರನಿಗೆ ಪ್ರಿಯವನ್ನು ಉಂಟುಮಾಡಲು ಬಯಸಿ ಧೃತರಾಷ್ಟ್ರನು ತಿಳಿದಿದ್ದರೂ ಸಹ ಅಧರ್ಮವನ್ನೇ ಪ್ರವೇಶಿಸುತ್ತಿದ್ದಾನೆ.

ಮೇಧಾವಿನಂ ಹ್ಯರ್ಥಕಾಮಂ ಕುರೂಣಾಂ
ಬಹುಶ್ರುತಂ ವಾಗ್ಮಿನಂ ಶೀಲವಂತಮ್ ।
ಸುತಸ್ಯಾರ್ಥೇ ಧೃತರಾಷ್ಟ್ರಃ ಕುರೂಣಾಮ್
ಅವಾಸೃಜತ್ ವಿದುರಂ ಪುತ್ರಕಾಮಾತ್ ॥೧೪॥

ಮೇಧಾವಿಯೂ, ಕುರುಗಳ ಶ್ರೇಯಸ್ಕಾಮನೂ, ಬಹುಶ್ರುತನೂ, ವಾಗ್ಮಿಯೂ, ಶೀಲಸಂಪನ್ನನೂ ಆದ ವಿದುರನನ್ನು ಮಗನ ಹಿತಕ್ಕೋಸ್ಕರ, ಮಗನ ಮೇಲಿನ ಪ್ರೀತಿಯಿಂದ ಧೃತರಾಷ್ಟ್ರನು ಕುರುದೇಶದಿಂದ ಹೊರಗೆ ಕಳುಹಿಸಿದನು.

ಮಾನಘ್ನಸ್ಯಾಪ್ಯರ್ಥಕಾಮಸ್ಯ ಚೇಷ್ಯೋಃ
ಸಂರಂಭಿಣಃ ಸರ್ವಧರ್ಮಾತಿಗಸ್ಯ ।
ದುರ್ಭಾಷಿಣೋ ಮನ್ಯುವಶಾನುಗಸ್ಯ
ಕಾಮಾತ್ಮನೋ ದೌರ್ಹೃದೈರ್ಭಾವಿತಸ್ಯ ॥೧೫॥

ಅನೇಯಸ್ಯಾಶ್ರೇಯಸೋ ದೀರ್ಘಮನ್ಯೋಃ
ಮಿತ್ರದ್ರುಹಃ ಸಂಜಯ ಪಾಪಬುದ್ಧೇಃ ।
ಸುತಸ್ಯ ರಾಜಾ ಧೃತರಾಷ್ಟ್ರಃ ಪ್ರಿಯೈಷೀ
ಪ್ರದರ್ಶಮಾನಃ ಪ್ರಜಹಾದ್ ಧರ್ಮಕಾಮೌ ॥೧೬॥

ಮಾನವನ್ನು ಕಳೆಯುವವನೂ, ಸಂಪತ್ತಿನಲ್ಲೇ ಆಸಕ್ತಿಯುಳ್ಳವನೂ, ಅಸೂಯಾಪರನೂ, ಕ್ರೋಧಶೀಲನೂ, ಎಲ್ಲ ಧರ್ಮಗಳನ್ನೂ ಮೀರಿದವನೂ, ಕೆಟ್ಟ ಮಾತುಗಳನ್ನು ಆಡುವವನೂ, ಯಾವಾಗಲೂ ಸಿಟ್ಟಿಗೆ ವಶನಾಗುವವನೂ, ಆಸೆಬುರುಕನೂ, ದುರ್ಮಿತ್ರರಿಂದ ಪೂಜಿತನೂ, ತಿದ್ದಲು ಸಾಧ್ಯವಿಲ್ಲದವನೂ,

ಶ್ರೇಯಸ್ಸಿಗೆ ವಿರುದ್ಧನಾದವನೂ, ದೀರ್ಘಮನ್ಯುವೂ, ಮಿತ್ರದ್ರೋಹಿಯೂ ಆದ ಪುತ್ರನ ಪ್ರಿಯವನ್ನು ಬಯಸುವವನಾಗಿ ಎಲೈ ಸಂಜಯನೇ, ಧೃತರಾಷ್ಟ್ರನು ಎಲ್ಲವನ್ನೂ ನೋಡುತ್ತಿದ್ದರೂ ಧರ್ಮ-ಕಾಮಗಳನ್ನು ತ್ಯಜಿಸಿದನು.

ತದೈವ ಮೇ ಸಂಜಯ ದೀವ್ಯತೇಽಭೂ-
ನ್ಮತಿಃ ಕುರೂಣಾಮಾಗತಃ ಸ್ಯಾದಭಾವಃ ।
ಕಾವ್ಯಾಂ ವಾಚಂ ವಿದುರೇ ಭಾಷಮಾಣೇ
ನ ಚಾವಿಂದದ್ ಧೃತರಾಷ್ಟ್ರಾತ್ ಪ್ರಶಂಸಾಮ್ ॥೧೭॥

ಎಲೈ ಸಂಜಯನೇ, ದ್ಯೂತದ ಸಂದರ್ಭದಲ್ಲಿ ವಿದುರನು ಮಧುರವಾದ ಮಾತುಗಳನ್ನು ಆಡುತ್ತಿದ್ದರೂ ಧೃತರಾಷ್ಟ್ರನಿಂದ ಪ್ರಶಂಸೆಯ ಮಾತನ್ನು ಪಡೆಯದಿದ್ದಾಗಲೇ ಕುರುಗಳಿಗೆ ವಿನಾಶದ ಕಾಲವು ಪ್ರಾಪ್ತವಾಗಿದೆ ಎಂದು ನನಗೆ ಬುದ್ಧಿಯುಂಟಾಯಿತು.

ಕ್ಷತ್ತುರ್ಯದಾ ನಾನ್ವವರ್ತಂತ ಬುದ್ಧಿಂ
ಕೃಚ್ಛ್ರಂ ಕುರೂನ್ ಸೂತ ತದಾಽಭ್ಯಾಜಗಾಮ ।
ಯಾವತ್ ಪ್ರಜ್ಞಾಮನ್ವವರ್ತಂತ ತಸ್ಯ
ತಾವತ್ ತೇಷಾಂ ರಾಷ್ಟ್ರವೃದ್ಧಿರ್ಬಭೂವ ॥೧೮॥

ಎಲೈ ಸೂತನೇ, ಯಾವಾಗ ಕುರುಗಳು ವಿದುರನ ಮಾತನ್ನು ಕೇಳಲಿಲ್ಲವೋ ಆಗಲೇ ಅವರಿಗೆ ಸಂಕಟವು ಪ್ರಾಪ್ತವಾಯಿತು. ಎಲ್ಲಿಯವರೆಗೆ ಅವನ ಪ್ರಜ್ಞೆಯನ್ನು ಅನುಸರಿಸಿ ಅವನ ಮಾತನ್ನು ಕೇಳಿದರೋ ಅಲ್ಲಿಯವರೆಗೆ ಅವರಿಗೆ ರಾಷ್ಟ್ರದ ಅಭಿವೃದ್ಧಿ ಇದ್ದಿತು.

ತದರ್ಥಲುಬ್ಧಸ್ಯ ನಿಬೋಧ ಮೇಽದ್ಯ
ಯೇ ಮಂತ್ರಿಣೋ ಧಾರ್ತರಾಷ್ಟ್ರಸ್ಯ ಸೂತ ।
ದುಃಶಾಸನಃ ಶಕುನಿಃ ಸೂತಪುತ್ರೋ
ಗಾವಲ್ಗಣೇ ಪಶ್ಯ ಸಮ್ಮೋಹಮಸ್ಯ ॥೧೯॥

ಸೋಽಹಂ ನ ಪಶ್ಯಾಮಿ ಪರೀಕ್ಷಮಾಣಃ
ಕಥಂ ಸ್ವಸ್ತಿ ಸ್ಯಾತ್ ಕುರುಸೃಂಜಯಾನಾಮ್ ॥೨೦॥

ಸೂತನೇ, ಅರ್ಥಕಾಮುಕನಾದ ದುರ್ಯೋಧನನ ಮಂತ್ರಿಗಳು ದುಶ್ಶಾಸನ, ಶಕುನಿ, ಸೂತಪುತ್ರನಾದ ಕರ್ಣ ಮೊದಲಾದವರು ಯಾರಿದ್ದಾರೆಯೋ ಅವರ ಸಮ್ಮೋಹವನ್ನು ನೋಡು. ಗಾವಲ್ಗಣಿಯೇ, ಇದನ್ನು ನನ್ನಿಂದ ತಿಳಿ. ಅಂತಹ ನಾನು ಎಷ್ಟು ವಿಚಾರ ಮಾಡಿದರೂ ಕುರು-ಸೃಂಜಯರಿಗೆ ಹೇಗೆ ಕ್ಷೇಮವಾಗುವುದೆಂದು ತೋರುವುದಿಲ್ಲ.

ಪ್ರಾಪ್ತೈಶ್ವರ್ಯೋ ಧೃತರಾಷ್ಟ್ರಃ ಪರೇಭ್ಯಃ
ಪ್ರವ್ರಾಜಿತೇ ವಿದುರೇ ದೀರ್ಘದೃಷ್ಟೌ ।
ಆಶಂಸತೇ ಧೃತರಾಷ್ಟ್ರಃ ಸಪುತ್ರೋ
ಮಹಾರಾಜ್ಯಮಸಪತ್ನಂ ಪೃಥಿವ್ಯಾಮ್ ॥೨೧॥

ತಸ್ಮಿನ್ ಶಮಃ ಕೇವಲಂ ನೋಪಲಭ್ಯಃ
ಅತ್ಯಾಸನ್ನಂ ಮದ್ಗತಂ ಮನ್ಯತೇಽರ್ಥಮ್ ॥೨೨॥

ಪಾಂಡವರಿಂದ ಎಲ್ಲ ಸಂಪತ್ತನ್ನೂ ಪಡೆದ ಧೃತರಾಷ್ಟ್ರನು, ದೀರ್ಘ ದೃಷ್ಟಿಯುಳ್ಳ ವಿದುರನು ನಗರವನ್ನು ಬಿಟ್ಟು ಹೋದಮೇಲೆ ತನ್ನ ಪುತ್ರರಿಂದೊಡಗೂಡಿ ಈ ಪೃಥಿವಿಯ ಮಹಾರಾಜ್ಯವು ಶತ್ರುರಹಿತವಾಗಿ ತನ್ನದೆಂದು ಆಶಿಸುತ್ತಾನೆ. ಅವನಲ್ಲಿ ಸಂಧಿಯ ಯಾವ ಲಕ್ಷಣಗಳೂ ಕಾಣುವುದಿಲ್ಲ. ರಾಜ್ಯರೂಪವಾದ ಸಂಪತ್ತು ನನ್ನ ಕೈಯಿಂದ ಜಾರಿ ಅವನಿಗೆ ಅತ್ಯಂತ ಸಮೀಪದಲ್ಲಿದೆ ಎಂದು ತಿಳಿದಿದ್ದಾನೆ.

ಯತ್ತತ್ ಕರ್ಣೋ ಮನ್ಯತೇ ವಾರಣೀಯಂ
ಯುದ್ಧೇ ಗೃಹೀತಾಯುಧಮರ್ಜುನಂ ವೈ ।
ಆಸಂಶ್ಚ ಯುದ್ಧಾನಿ ಪುರಾ ಮಹಾಂತಿ
ಕಥಂ ತದಾ ನಾಭವದ್ ದ್ವೀಪ ಏಷಾಮ್ ॥೨೩॥

ಇನ್ನು ಯುದ್ಧದಲ್ಲಿ ಆಯುಧವನ್ನು ಹಿಡಿದ ಅರ್ಜುನನನ್ನು ನಿವಾರಣೆ ಮಾಡುವೆನೆಂದು ಕರ್ಣನು ಏನು ತಿಳಿದಿದ್ದಾನೆಯೋ (ಆ ವಿಷಯದಲ್ಲಿ ಹೇಳುವುದಾದರೆ) ಹಿಂದೆ ಅನೇಕ ಯುದ್ಧಗಳು ನಡೆದವು. ಆಗ ಕರ್ಣನು ದುರ್ಯೋಧನಾದಿಗಳಿಗೆ ಏಕೆ ರಕ್ಷಕನಾಗಲಿಲ್ಲ?

ಕರ್ಣಶ್ಚ ಜಾನಾತಿ ಸುಯೋಧನಶ್ಚ
ದ್ರೋಣಶ್ಚ ಜಾನಾತಿ ಪಿತಾಮಹಶ್ಚ ।
ಅನ್ಯೇ ಚ ವೈ ಕುರವಸ್ತತ್ರ ಸಂತಿ
ಯಥಾऽರ್ಜುನಾನ್ನಾಸ್ತ್ಯಪರೋ ಧನುರ್ಧರಃ ॥೨೪॥

ಕರ್ಣನೂ, ಸುಯೋಧನನೂ, ದ್ರೋಣರೂ, ಪಿತಾಮಹರಾದ ಭೀಷ್ಮರೂ ಮತ್ತು ಉಳಿದ ಎಲ್ಲಾ ಕುರುಗಳೂ ಸಹ ಅರ್ಜುನನಿಗಿಂತ ಮಿಗಿಲಾದ ಧನುರ್ಧಾರಿಯು ಇಲ್ಲವೆಂದು ತಿಳಿದಿದ್ದಾರೆ.

ಜಾನಂತ್ಯೇತತ್ ಕುರವಃ ಸರ್ವ ಏವ
ಯೇ ಚಾಪ್ಯೇತೇ ಭೂಮಿಪಾಲಾಃ ಸಮೇತಾಃ ।
ದುರ್ಯೋಧನೇ ರಾಜ್ಯಮಿಹಾಭವದ್ ಯಥಾ ।
ಅರಿಂದಮೇ ಫಲ್ಗುನೇऽವಿದ್ಯಮಾನೇ ॥೨೫॥

ತತೋऽರ್ಥಬಂಧಂ ಮನ್ಯತೇ ಧಾರ್ತರಾಷ್ಟ್ರಃ
ಶಕ್ಯಂ ಹರ್ತುಂ ಪಾಂಡವಾನಾಂ ಮಮೇತಿ ॥೨೬॥

ಎಲ್ಲ ಕುರುಗಳಿಗೂ ಮತ್ತು ಇಲ್ಲಿ ನೆರೆದಿರುವ ಎಲ್ಲ ರಾಜರಿಗೂ ಅರಿಂದಮನಾದ ಅರ್ಜುನನು ಇಲ್ಲದಿರುವಾಗ ದುರ್ಯೋಧನನಿಗೆ ಹೇಗೆ ರಾಜ್ಯವು ದೊರಕಿತು ಎಂದು ತಿಳಿದಿದ್ದಾರೆ. ದುರ್ಯೋಧನನು ಪಾಂಡವರ ರಾಜ್ಯವನ್ನು ಅಪಹರಿಸುವುದು ತನಗೆ ಸಾಧ್ಯವೆಂದು ತಿಳಿದಿದ್ದಾನೆ.

ಕಿರೀಟಿನಂ ತಾಲಮಾತ್ರಾಯುಧೇನ
ತದ್ವೇದಿನಾ ಸಂಯುಗಂ ತತ್ರ ಗತ್ವಾ ।
ಗಾಂಡೀವವಿಸ್ಫಾರಿತಶಬ್ದಮಾಜೌ
ಅಶೃಣ್ವಾನಾ ಧಾರ್ತರಾಷ್ಟ್ರಾ ಧ್ರಿಯಂತೇ ॥೨೭॥

ಒಂದು ತಾಲಪ್ರಮಾಣದ ಧನುಸ್ಸನ್ನು ಅರ್ಜುನನು ಹಿಡಿದು ಯುದ್ಧಭೂಮಿಗೆ ಹೋಗಿ ಅವನನ್ನು ಎಲ್ಲಿಯವರೆಗೆ ನೋಡುವುದಿಲ್ಲವೋ, ಎಲ್ಲಿಯವರೆಗೆ ಯುದ್ಧದಲ್ಲಿ ಗಾಂಡೀವಧನುಸ್ಸಿನ ಠೇಂಕಾರವನ್ನು ಕೇಳುವುದಿಲ್ಲವೋ ಅಲ್ಲಿಯವರೆಗೆ ಧೃತರಾಷ್ಟ್ರ ಪುತ್ರರು ಬದುಕಿರುತ್ತಾರೆ.

ಕ್ರುದ್ಧಸ್ಯ ಚೇದ್ ಭೀಮಸೇನಸ್ಯ ವೇಗಾತ್
ಸುಯೋಧನೋ ಮನ್ಯತೇ ಸಿದ್ಧಮರ್ಥಮ್ ॥೨೮॥

ಇಂದ್ರೋಽಪ್ಯೇತನ್ನೋತ್ಸಹೇತಾಪಹರ್ತುಮ್
ಐಶ್ವರ್ಯಂ ನೋ ಜೀವತಿ ಭೀಮಸೇನೇ ।
ಧನಂಜಯೇ ನಕುಲೇ ಚೈವ ಸೂತ
ತಥಾವಿಧೇ ಸಹದೇವೇ ಸಹಿಷ್ಣೌ ॥೨೯॥

ಕ್ರುದ್ಧನಾದ ಭೀಮಸೇನನ ವೇಗವನ್ನು ಮೀರಿ ಸುಯೋಧನನು ತನಗೆ ರಾಜ್ಯವು ದೊರಕಿದೆ ಎಂದು ತಿಳಿದಿದ್ದಾನೆ. ಭೀಮಸೇನನು ಬದುಕಿರುವಾಗ ಇಂದ್ರನೂ ಕೂಡ ನಮ್ಮ ಐಶ್ವರ್ಯವನ್ನು ಅಪಹರಿಸಲು ಬಯಸಲಾರ. ಹಾಗೆಯೇ ಧನಂಜಯ, ನಕುಲ ಮತ್ತು ಸಹನಶೀಲನಾದ ಸಹದೇವ ಇವರು ಬದುಕಿರುವವರೆಗೆ ಇಂದ್ರನೂ ನಮ್ಮ ಸಂಪತ್ತನ್ನು ಅಪಹರಿಸಲಾರ.

ನ ಚೇದೇತಾಂ ಪ್ರತಿಪದ್ಯೇತ ಬುದ್ಧಿಂ
ವೃದ್ಧೋ ರಾಜಾ ಸಹ ಪುತ್ರೇಣ ಸೂತ ।
ಏವಂ ರಣೇ ಪಾಂಡವಕೋಪದಗ್ಧಾ
ನ ನಶ್ಯೇಯುಃ ಸಂಜಯ ಧಾರ್ತರಾಷ್ಟ್ರಾಃ ॥೩೦॥

ಎಲೈ ಸೂತನೇ, ವೃದ್ಧನಾದ ಧೃತರಾಷ್ಟ್ರನು ತನ್ನ ಮಕ್ಕಳ ಜೊತೆಯಲ್ಲಿ ಈ ದುರ್ಬುದ್ಧಿಯನ್ನು ಹೊಂದದಿದ್ದರೆ, ಎಲೈ ಸಂಜಯನೇ, ಯುದ್ಧದಲ್ಲಿ ಧೃತರಾಷ್ಟ್ರಪುತ್ರರು ಪಾಂಡವ ಕೋಪದಗ್ಧರಾಗಿ ನಾಶವನ್ನು ಹೊಂದಲಾರರು.

ಜಾನಾಸಿ ತ್ವಂ ಕ್ಲೇಶಮಸ್ಮಾಸು ವೃತ್ತಂ
ತ್ವಾಂ ಪೂಜಯನ್ ಸಂಜಯಾಹಂ ಕ್ಷಮೇಯಮ್ ॥೩೧॥

ಎಲೈ ಸಂಜಯನೇ, ನಮಗೆ ಹಿಂದೆ ಒದಗಿದ ಕ್ಲೇಶಗಳನ್ನು ನೀನು ತಿಳಿದಿದ್ದೀಯೆ. ನಿನ್ನ ಮೇಲಿನ ಗೌರವದಿಂದ ನಾನು ಕ್ಷಮಿಸುವೆನು.

ಯಚ್ಚಾಸ್ಮಾಕಂ ಕೌರವೈರ್ಭೂತಪೂರ್ವಂ
ಯಾ ನೋ ವೃತ್ತಿರ್ಧಾರ್ತರಾಷ್ಟ್ರೇ ತದಾऽऽಸೀತ್ ।

ಅದ್ಯಾಪಿ ತತ್ ತತ್ರ ತಥೈವ ವರ್ತತಾಂ
ಶಾಂತಿಂ ಗಮಿಷ್ಯಾಮಿ ಮಯಾ ತ್ವಮಾತ್ಥ ॥೩೨॥

ಇಂದ್ರಪ್ರಸ್ಥೇ ವಾ ಭವತು ಮಮೈವ ರಾಜ್ಯಂ
ಸುಯೋಧನೋ ಯಚ್ಛತು ಭಾರತಾಗ್ರ್ಯಃ ॥೩೩॥

ನಾವು ಹಿಂದೆ ಕೌರವರಲ್ಲಿ ಯಾವ ನಡತೆಯನ್ನು ಹೊಂದಿದ್ದೆವೋ, ದುರ್ಯೋಧನನಲ್ಲಿ ಯಾವ ನಡತೆಯನ್ನು ಹೊಂದಿದ್ದೆವೋ ಅದೇ ನಡತೆಯು ಈ ದಿನವೂ ಕೂಡ ಮುಂದುವರೆಯಲಿ. ನೀನು ಹೇಳಿದಂತೆ ನಾನು ಶಾಂತಿಯನ್ನು ಹೊಂದುವೆನು. ನನಗೆ ಇಂದ್ರಪ್ರಸ್ಥವು ರಾಜ್ಯವಾಗಿರಲಿ. ಭಾರತಶ್ರೇಷ್ಠನಾದ ಸುಯೋಧನನು ನಮಗೆ ಇಂದ್ರಪ್ರಸ್ಥವನ್ನು ಕೊಡಲಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಪಂಚವಿಂಶೋಽಧ್ಯಾಯಃ ॥

॥ ಸಂಜಯಯಾನಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

## ಇಪ್ಪತ್ತಾರನೆಯ ಅಧ್ಯಾಯ

ರಾಜ್ಯವನ್ನು ಕೊಡದಿದ್ದರೂ ಶಾಂತಿಯನ್ನು ವಹಿಸುವಂತೆ
ಸಂಜಯನಿಂದ ಯುಧಿಷ್ಠಿರನಿಗೆ ಪ್ರೇರಣೆ.

**ಸಂಜಯಃ**

ಧರ್ಮೇ ನಿತ್ಯಾ ಪಾಂಡವ ತೇ ವಿಚೇಷ್ಟಾ
ಲೋಕೇ ಶ್ರುತಾ ದೃಶ್ಯತೇ ಚಾಪಿ ಪಾರ್ಥ ।
ಮಹಾಸ್ರಾವಂ ಜೀವಿತಂ ಚಾಪ್ಯನಿತ್ಯಂ
ಸಂಪಶ್ಯನ್ ತ್ವಂ ಪಾಂಡವ ಮಾ ವ್ಯನೀನಶಃ ॥೧॥

ಸಂಜಯ– ಎಲೈ ಪಾಂಡವನೇ, ನಿನ್ನ ಎಲ್ಲಾ ಕ್ರಿಯೆಗಳೂ ನಿತ್ಯವೂ ಧರ್ಮದಲ್ಲಿಯೇ ಇವೆ. ಲೋಕದಲ್ಲಿ ಹೀಗೆ ಶ್ರುತವಾಗಿದೆ ಮತ್ತು ಪಾರ್ಥನೇ,

ಪ್ರತ್ಯಕ್ಷವಾಗಿಯೂ ಕಾಣುತ್ತಿದೆ. ನವದ್ವಾರಗಳಿಂದ ಸೋರಿಹೋಗುವ ಈ ದೇಹದ ಜೀವಿತವು ಅನಿತ್ಯವಾದುದು. ಪಾಂಡವನೇ, ಇದನ್ನು ಗಮನಿಸುವವನಾಗಿ ನೀನು ನಾಶವನ್ನು ಹೊಂದಬೇಡ.

ನ ಚೇದ್ ಭಾಗಂ ಕುರವೋಽನ್ಯತ್ರ ಯುದ್ಧಾತ್
ಪ್ರಯಚ್ಛಂತಿ ತುಭ್ಯಮಜಾತಶತ್ರೋ ।
ಭೈಕ್ಷಾಚರ್ಯಾಮಂಧಕವೃಷ್ಣಿರಾಜ್ಯೇ
ಶ್ರೇಯೋ ಮನ್ಯೇ ನ ತು ಯುದ್ಧೇನ ರಾಜ್ಯಮ್ ॥೨॥

ಎಲೈ ಅಜಾತಶತ್ರುವೇ, ಯುದ್ಧವನ್ನು ಬಿಟ್ಟು ಬೇರೆ ಮಾರ್ಗದಿಂದ ಕುರುಗಳು ನಿನಗೆ ರಾಜ್ಯದ ಭಾಗವನ್ನು ಕೊಡದಿದ್ದರೂ ವೃಷ್ಣ್ಯಂಧಕರಾಜ್ಯದಲ್ಲಿ ಭೈಕ್ಷಚರ್ಯವನ್ನು ಮಾಡಿ ಜೀವಿಸುವುದು ನಿನಗೆ ಶ್ರೇಯಸ್ಸೆಂದು ಭಾವಿಸುತ್ತೇನೆ. ಯುದ್ಧವನ್ನು ಮಾಡಿ ರಾಜ್ಯವನ್ನು ಸಂಪಾದಿಸುವುದು ನಿನಗೆ ಶ್ರೇಯಸ್ಕರವಲ್ಲ.

ಮಹಾಸ್ರಾವಂ ಜೀವಿತಂ ಯನ್ಮನುಷ್ಯೇ
ಅಲ್ಪಕಾಲಂ ನಿತ್ಯದುಃಖಂ ಚಲಂ ಚ ।
ಭೂಯಶ್ಚ ತದ್ಯಶಸೋ ನಾನುರೂಪಂ
ತಸ್ಮಾತ್ ಪಾಪಂ ಪಾಂಡವ ಮಾ ವಿನಂಕ್ಷೀಃ ॥೩॥

ಮನುಷ್ಯನ ಜೀವನವು ಸೋರಿಹೋಗುವಂತಹದು, ಅಲ್ಪಕಾಲವಿರುವಂತಹದು, ಚಂಚಲವಾದುದು ಮತ್ತು ನಿತ್ಯದುಃಖಕರವಾದುದು. ಅಲ್ಲದೇ ಯುದ್ಧವು ನಿನ್ನ ಯಶಸ್ಸಿಗೆ ಅನುಗುಣವಾದುದಲ್ಲ. ಆದ್ದರಿಂದ ಎಲೈ ಪಾಂಡವನೇ, ಯುದ್ಧವನ್ನು ಮಾಡಿ ನಿನ್ನ ಕೀರ್ತಿಯನ್ನು ಹಾಳು ಮಾಡಿಕೊಳ್ಳಬೇಡ.

ಕಾಮಾ ಮನುಷ್ಯಂ ಪ್ರದಹಂತ ಏತೇ
ಧರ್ಮಸ್ಯ ಯೇ ವಿಘ್ನಮೂಲಾ ನರೇಂದ್ರ ।
ಪೂರ್ವಂ ನರಸ್ತಾನ್ ಮತಿಮಾನ್ ವಿನಿಘ್ನನ್
ಲೋಕೇ ಪ್ರಶಂಸಾಂ ಲಭತೇಽನವದ್ಯಾಮ್ ॥೪॥

ಎಲೈ ನರೇಂದ್ರನೇ, ಮನುಷ್ಯನನ್ನು ದಹಿಸುವ ಕಾಮಗಳು ಧರ್ಮದ ವಿಘ್ನಕ್ಕೆ ಮೂಲವಾದವುಗಳು. ವಿವೇಕಿಯಾದ ಮನುಷ್ಯನು ಮೊದಲು ಕಾಮಗಳನ್ನು ನಾಶ

ಮಾಡಬೇಕು. ಅನಂತರ ಅವನು ಲೋಕದಲ್ಲಿ ನಿರ್ದುಷ್ಟವಾದ ಪ್ರಶಂಸೆಯನ್ನು ಪಡೆಯುತ್ತಾನೆ.

ನಿಬಂಧನೀ ಹ್ಯರ್ಥತೃಷ್ಣಾ ಹಿ ಪಾರ್ಥ
ತಾಮಿಚ್ಛತಾಂ ಬಾಧ್ಯತೇ ಧರ್ಮ ಏವ ।
ಧರ್ಮಂ ತು ಯಃ ಪ್ರವೃಣುತೇ ಸ ಬುದ್ಧಃ
ಕಾಮೇ ಗೃಧ್ನುರ್ಹೀಯತೇऽರ್ಥಾನುರೋಧಾತ್ ॥೫॥

ಎಲೈ ಪಾರ್ಥನೇ, ಅರ್ಥತೃಷ್ಣೆಯು ಮನುಷ್ಯನನ್ನು ಕಟ್ಟಿಹಾಕುವಂತಹದು. ಅರ್ಥವನ್ನು ಬಯಸುವ ಪುರುಷನಿಗೆ ಧರ್ಮವೇ ಬಾಧಿತವಾಗುತ್ತದೆ. ಯಾವನು ಧರ್ಮವನ್ನು ಆರಿಸುತ್ತಾನೋ ಅವನು ವಿವೇಕಿಯಾದವನು. ಕಾಮವನ್ನು ಬಯಸುವವನು ಆ ಕಾಮ್ಯವಸ್ತುವಿನ ಸ್ವಭಾವಕ್ಕೆ ಅನುಗುಣವಾಗಿ ಹಾನಿಯನ್ನು ಹೊಂದುವನು.

ಧರ್ಮಂ ಕೃತ್ವಾ ಕರ್ಮಣಾ ತಾತ ಮುಖ್ಯಂ
ಮಹಾಪ್ರತಾಪಃ ಸವಿತೇವ ಭಾತಿ ।
ಹಾನೇನ ಧರ್ಮಸ್ಯ ಮಹೀಮಪೀಮಾಂ
ಲಬ್ಧ್ವಾ ನರಃ ಸೀದತಿ ಪಾಪಬುದ್ಧಿಃ ॥೬॥

ಎಲೈ ಪ್ರೀತಿಪಾತ್ರನೇ, ಮುಖ್ಯವಾದ ಕರ್ಮವನ್ನು ಮಾಡಿ ಧರ್ಮವನ್ನು ಗಳಿಸಿದವನು ಮಹಾಪ್ರತಾಪವುಳ್ಳವನಾಗಿ ಸೂರ್ಯನಂತೆ ಬೆಳಗುತ್ತಾನೆ. ಧರ್ಮವನ್ನು ತ್ಯಾಗಮಾಡಿ ಈ ಸಮಗ್ರವಾದ ಭೂಮಿಯನ್ನು ಪಡೆದರೂ ಪಾಪಬುದ್ಧಿಯುಳ್ಳ ಆ ಮನುಷ್ಯನು ನಾಶವನ್ನು ಹೊಂದುತ್ತಾನೆ.

ವೇದೋऽಧೀತಶ್ಚರಿತಂ ಬ್ರಹ್ಮಚರ್ಯಂ
ಯಜ್ಞೈರಿಷ್ಟಂ ಬ್ರಾಹ್ಮಣೇಭ್ಯಶ್ಚ ದತ್ತಮ್ ।
ಪರಂ ಸ್ಥಾನಂ ಮನ್ಯಮಾನೇನ ಭೂಯ
ಆತ್ಮಾ ದತ್ತೋಃ ವರ್ಷಪೂಗಂ ಸುಖೇಭ್ಯಃ ॥೭॥

ಯಾವನು ಪರಲೋಕಸ್ಥಾನವು ಶ್ರೇಷ್ಠವೆಂದು ತಿಳಿದು ವೇದವನ್ನು ಅಧ್ಯಯನ ಮಾಡುತ್ತಾನೆಯೋ, ಬ್ರಹ್ಮಚರ್ಯವನ್ನು ಆಚರಿಸುತ್ತಾನೆಯೋ, ಯಜ್ಞಗಳಿಂದ

ದೇವರನ್ನು ಪೂಜಿಸುತ್ತಾನೆಯೋ, ಬ್ರಾಹ್ಮಣರಿಗೆ ದಾನವನ್ನು ಕೊಡುತ್ತಾನೆಯೋ ಅವನು ತನ್ನನ್ನೇ ಅನೇಕ ವರ್ಷಗಳವರೆಗೆ ಸುಖಗಳಿಗೆ ಕೊಟ್ಟಕೊಂಡಿದ್ದಾನೆ.

ಸುಖಪ್ರಿಯೇ ಸೇವಮಾನೇऽತಿವೇಲಂ
ಯೋಗನ್ಯಾಸೇ ಯೋ ನ ಕರೋತಿ ಕರ್ಮ ।
ವಿತ್ತಕ್ಷಯೇ ಹೀನಸುಖೋऽತಿವೇಲಂ
ದುಃಖಂ ಶೇತೇ ಕಾಮವೇಗಪ್ರಣುನ್ನಃ ॥೮॥

ಯಾವನು ಸುಖವನ್ನು ಕೊಡುವ ಪ್ರಿಯವಾದ ವಸ್ತುವನ್ನು ಸೇವಿಸುತ್ತಾ ಯೋಗ ಮತ್ತು ಸಂನ್ಯಾಸಗಳಿಗೆ ಅನುಕೂಲವಾದ ಕರ್ಮವನ್ನು ಮಾಡುವುದಿಲ್ಲವೋ ಅವನ ಧನವು ಕ್ಷಯವು ಹೊಂದಿದ ಮೇಲೆ ಸುಖದಿಂದ ಚ್ಯುತನಾಗಿ ಕಾಮವೇಗದಿಂದ ತಾಡಿತನಾಗಿ ಬಹಳವಾಗಿ ದುಃಖವನ್ನು ಪಡುತ್ತಾನೆ.

ಏವಂ ಪುನರ್ಬ್ರಹ್ಮಚರ್ಯಾಪ್ರಸಕ್ತೋ
ಹಿತ್ವಾ ಧರ್ಮಂ ಯಃ ಪ್ರಕರೋತ್ಯಧರ್ಮಮ್ ।
ಅಶ್ರದ್ದಧತ್ ಪರಲೋಕಾಯ ಮೂಢೋ
ಹಿತ್ವಾ ದೇಹಂ ತಪ್ಯತಿ ಪ್ರೇತ್ಯ ಮಂದಃ ॥೯॥

ಹಾಗೆಯೇ ಬ್ರಹ್ಮಚರ್ಯದಲ್ಲಿ ಪ್ರಸಕ್ತನಾಗದವನು, ತನ್ನ ಧರ್ಮವನ್ನು ಬಿಟ್ಟು ಅಧರ್ಮವನ್ನು ಮಾಡುವವನು, ಪರಲೋಕವನ್ನು ನಂಬದವನು ಆದ ಮೂಢನೂ ಮಂದನೂ ಆದ ಮನುಷ್ಯನು ದೇಹವನ್ನು ತ್ಯಜಿಸಿ, ಮರಣವನ್ನು ಹೊಂದಿ ಅನಂತರ ದುಃಖವನ್ನು ಪಡುತ್ತಾನೆ.

ನ ಕರ್ಮಣಾಂ ವಿಪ್ರಣಾಶೋऽಸ್ತ್ಯಮುತ್ರ
ಪುಣ್ಯಾನಾಂ ವಾऽಪ್ಯಥವಾ ಪಾಪಕಾನಾಮ್ ।
ಪೂರ್ವಂ ಕರ್ತುರ್ಗಚ್ಛತಿ ಪುಣ್ಯಪಾಪಂ
ಪಶ್ಚಾತ್ತ್ವೇನಮನುಯಾತ್ಯೇವ ಕರ್ತಾ ॥೧೦॥

ಪುಣ್ಯಕರ್ಮವಾಗಲೀ ಅಥವಾ ಪಾಪಕರ್ಮವಾಗಲೀ ಮಾಡಿದ ಕರ್ಮಗಳಿಗೆ ಪರಲೋಕದಲ್ಲಿ ವಿನಾಶವಿರುವುದಿಲ್ಲ. ಮೊದಲು ಪುಣ್ಯಪಾಪಗಳು ಹೋಗುತ್ತವೆ-ನಂತರ ಅವುಗಳ ಹಿಂದೆ ಅದನ್ನು ಮಾಡಿದವನು ಹೋಗುತ್ತಾನೆ.

ನ್ಯಾಯೋಪೇತಂ ಬ್ರಾಹ್ಮಣೇಭ್ಯೋ ಯದನ್ನಂ
ಶ್ರದ್ಧಾಪೂತಂ ಗಂಧರಸೋಪಪನ್ನಮ್ ।
ಅನ್ವಾಹಾರ್ಯೇಷೂತ್ತಮದಕ್ಷಿಣೇಷು
ತಥಾರೂಪಂ ಕರ್ಮ ವಿಖ್ಯಾಯತೇ ತೇ ॥೧೧॥

ನ್ಯಾಯದಿಂದ ಸಂಪಾದಿಸಿ ಬ್ರಾಹ್ಮಣರಿಗೆ ಶ್ರದ್ಧೆಯಿಂದ ಕೊಟ್ಟ ಗಂಧರಸೋಪಪನ್ನವಾದ ಅನ್ನ, ಉತ್ತಮ ದಕ್ಷಿಣವುಳ್ಳ ಯಾಗಗಳಲ್ಲಿ ಅಗ್ನಿಗಳಲ್ಲಿ ಮಾಡಿದ ಹೋಮ, ಇಂತಹ ಕರ್ಮವು ನಿನ್ನ ವಿಷಯದಲ್ಲಿ ಪ್ರಖ್ಯಾತವಾಗಿದೆ.

ಇಹ ಕ್ಷೇತ್ರೇ ಕ್ರಿಯತೇ ಪಾರ್ಥ ಕಾರ್ಯಂ
ನ ವೈ ಕಿಂಚಿತ್ ಕ್ರಿಯತೇ ಪ್ರೇತ್ಯ ಕಾರ್ಯಮ್ ।
ಕೃತಂ ತ್ವಯಾ ಪಾರಲೌಕ್ಯಂ ಚ ಕರ್ಮ
ಪುಣ್ಯಂ ಮಹತ್ ಸದ್ಭಿರನುಪ್ರಶಸ್ತಮ್ ॥೧೨॥

ಎಲೈ ಪಾರ್ಥನೇ, ಈ ಲೋಕದಲ್ಲಿ ಈ ಶರೀರದಲ್ಲಿ ಪರಲೋಕ ಸಾಧನೆಯು ಮಾಡಲ್ಪಡುತ್ತದೆ. ಮರಣದ ಅನಂತರ ಪರಲೋಕದಲ್ಲಿ ಯಾವ ಸಾಧನೆಯೂ ಇರುವುದಿಲ್ಲ. ನೀನು ಪರಲೋಕ ಸುಖಕ್ಕೆ ಸಾಧನವಾದ, ಸಜ್ಜನರಿಂದ ಪ್ರಶಂಸಿಸಲ್ಪಟ್ಟ ದೊಡ್ಡ ಪುಣ್ಯಕರ್ಮಗಳನ್ನು ಮಾಡಿದ್ದೀಯೆ.

ಜಹಾತಿ ಮೃತ್ಯುಂ ಚ ಜರಾಂ ಭಯಂ ಚ
ನ ಕ್ಷುತ್ಪಿಪಾಸೇ ಮನಸೋಽಪ್ರಿಯಾಣಿ ।
ನ ಕರ್ತವ್ಯಂ ವಿದ್ಯತೇ ತತ್ರ ಕಿಂಚಿದ್
ಅನ್ಯತ್ರ ವೈ ಚೇಂದ್ರಿಯಪ್ರೀಣನಾದ್ಧಿ ॥೧೩॥

ಪರಲೋಕದಲ್ಲಿ ಜರಾಮೃತ್ಯುಭಯಗಳಿರುವುದಿಲ್ಲ. ಹಸಿವು-ನೀರಡಿಕೆಗಳಿರುವುದಿಲ್ಲ. ಅಲ್ಲಿ ಮನಸ್ಸಿಗೆ ಅಪ್ರಿಯವಾದುದು ಯಾವುದೂ ಇರುವುದಿಲ್ಲ. ಅಲ್ಲಿ ಸಂಪಾದಿಸಬೇಕಾದ ಯಾವ ಕಾರ್ಯವೂ ಇರುವುದಿಲ್ಲ. ಇಂದ್ರಿಯಸಂತೋಷ ಪಡೆಯುವುದನ್ನು ಬಿಟ್ಟು ಅಲ್ಲಿ ಸಾಧಿಸಬೇಕಾದ ಯಾವ ಕಾರ್ಯವೂ ಇರುವುದಿಲ್ಲ.

ಏವಂರೂಪಂ ಕರ್ಮಫಲಂ ನರೇಂದ್ರ
ಮಾತ್ಮಾವಹಂ ಹೃದಯಸ್ಯ ಪ್ರಿಯೇಣ ।
ಸ ಕ್ರೋಧಜಂ ಪಾಂಡವ ಹರ್ಷಜಂ ಚ
ಲೋಕಾವುಭೌ ಮಾ ಪ್ರಹಾಸೀಶ್ಚಿರಾಯ ॥೧೪॥

ಎಲೈ ನರೇಂದ್ರನೇ, ಕರ್ಮಫಲವು ಈ ರೀತಿಯಾಗಿ ಮನಸ್ಸಿಗೆ ಪ್ರಿಯವಾದ ಸುಖಸಾಮಗ್ರಿಗಳನ್ನು ತಂದುಕೊಡುವಂತಹದಾಗಿದೆ. ಕ್ರೋಧದಿಂದ ಉಂಟಾದ ಕರ್ಮದ ಫಲವು ಬೇರೆಯ ಲೋಕ. ಎಲೈ ಪಾಂಡವನೇ, ಸಂತೋಷದಿಂದ ಉಂಟಾದ ಕರ್ಮದ ಫಲವು ಬೇರೆಯಾಗಿದೆ. ಧರ್ಮದ ಫಲವಾದ ಸುಖರೂಪವಾದ ಲೋಕಗಳು ನಿನಗೆ ಬಹುಕಾಲ ನಾಶ ಹೊಂದದಿರಲಿ.

ಅಂತಂ ಗತ್ವಾ ಕರ್ಮಣಾಂ ಯಾ ಪ್ರಶಂಸಾ
ಸತ್ಯಂ ಧಮಶ್ಚಾರ್ಜವಮಾನೃಶಂಸ್ಯಮ್ ।
ಅಶ್ವಮೇಧೋ ರಾಜಸೂಯಸ್ತಥೇಷ್ಟಃ
ಪಾಪಸ್ಯಾಂತಂ ಕರ್ಮಣೋ ಮಾ ಪುನರ್ಗಾಃ ॥೧೫॥

ಕರ್ಮವನ್ನು ಪೂರೈಸಿದ ಮೇಲೆ ಉಂಟಾಗುವ ಪ್ರಶಂಸೆ, ಸತ್ಯ , ದಮ, ಆರ್ಜವ, ಮಾರ್ದವ, ಆಚರಿಸಿದ ಅಶ್ವಮೇಧ-ರಾಜಸೂಯ ಯಾಗಗಳು ಇವೆಲ್ಲವೂ ಸುಖಲೋಕ ಸಾಧನಗಳು. ಪುನಃ ನೀನು ಪಾಪರೂಪವಾದ ಕರ್ಮಗಳ ಫಲವನ್ನು ಹೊಂದುವುದು ಬೇಡ.

ನ ಚೈವೇದಂ ದ್ವೇಷರೂಪೇಣ ಪಾರ್ಥಾಃ
ಕರಿಷ್ಯಧ್ವಂ ಕರ್ಮ ಪಾಪಂ ಚಿರಾಯ ।
ನಿವಸ್ಯಧ್ವಂ ವರ್ಷಪೂಗಾನ್ ವನೇಷು
ಸುಖಂ ವಾಸಂ ಪಾಂಡವಾ ಧರ್ಮಹೇತೋಃ ॥೧೬॥

ಎಲೈ ಪಾಂಡವರೇ, ನೀವು ದ್ವೇಷದಿಂದ ಪಾಪರೂಪವಾದ ಈ ಯುದ್ಧಕರ್ಮವನ್ನು ಮಾಡದೆ ಅನೇಕ ವರ್ಷಗಳ ಕಾಲ ಕಾಡಿನಲ್ಲಿ ವಾಸ ಮಾಡಿದರೂ ಅದು ಧರ್ಮಕ್ಕೆ ಕಾರಣವಾಗುವುದರಿಂದ ಸುಖವೇ ಆಗುತ್ತದೆ.

ಪ್ರವ್ರಜ್ಯಯಾ ಯಾತಯಿತ್ವಾ ಪುರಸ್ತಾದ್
ಆತ್ಮಾಧೀನಂ ಯದ್ ಬಲಂ ತೇ ತದಾऽऽಸೀತ್ ।
ನಿತ್ಯಂ ಪಾಂಚಾಲಾಃ ಸಚಿವಾಸ್ತವೇಮೇ
ಜನಾರ್ದನೋ ಯುಯುಧಾನೋ ವಿರಾಟಃ ॥೧೭॥

ಮಾತ್ಸ್ಯೋ ರಾಜಾ ರುಗ್ಮರಥಃ ಸಪುತ್ರಃ
ಪ್ರಹಾರಿಭಿಃ ಸಹ ಮಿತ್ರೈಃ ಸಶಸ್ತ್ರೈಃ ।
ರಾಜಾನಶ್ಚ ಯೇ ವಿಜಿತಾಃ ಪುರಸ್ತಾತ್
ತ್ವಾಮೇವ ತೇ ಸಂಶ್ರಯೇಯುಃ ಪುರಸ್ತಾತ್ ॥೧೮॥

ಹಾಗೆ ಕಾಡಿಗೆ ಹೋಗದೆ ನಿನಗೆ ಅಧೀನವಾದ ಬಲವನ್ನು ಯುದ್ಧಭೂಮಿಗೆ ನಡೆಸಿದರೆ ಪಾಂಚಾಲರು ಮತ್ತು ನಿನಗೆ ಸಚಿವರಾದ ಕೃಷ್ಣ ಸಾತ್ಯಕಿ ಮತ್ತು ವಿರಾಟನು, ಮತ್ಸ್ಯರಾಜನಾದ ವಿರಾಟನು, ಪುತ್ರಸಹಿತನಾದ ರುಗ್ಮರಥನು ಮತ್ತು ಶಸ್ತ್ರಸಹಿತರಾದ ಮಿತ್ರರಾದ ಸೈನಿಕರಿಂದ ಕೂಡಿದ, ಮೊದಲು ನಿನ್ನಿಂದ ವಿಜಿತರಾದ, ರಾಜರೆಲ್ಲರೂ ನಿನ್ನನ್ನೇ ಆಶ್ರಯಿಸುತ್ತಾರೆ.

ಮಹಾಸಹಾಯಃ ಪ್ರತಪನ್ ಬಲಸ್ಥಃ
ಪುರಸ್ಕೃತೋ ವಾಸುದೇವಾರ್ಜುನಾಭ್ಯಾಮ್ ।
ಪರಾನ್ ಹನಿಷ್ಯನ್ ದ್ವಿಷತೋ ರಂಗಮಧ್ಯೇ
ವ್ಯನೇಷ್ಯಥಾ ಧಾರ್ತರಾಷ್ಟ್ರಸ್ಯ ದರ್ಪಮ್ ॥೧೯॥

ಮಹಾಸಹಾಯವುಳ್ಳವನಾಗಿ ಬಲವನ್ನು ಆಶ್ರಯಿಸಿದವನಾಗಿ, ಪ್ರತಾಪದಿಂದ ಜ್ವಲಿಸುತ್ತಾ, ಕೃಷ್ಣಾರ್ಜುನರಿಂದ ಸಹಿತನಾಗಿ ಶತ್ರುಗಳನ್ನು ಸಂಹಾರ ಮಾಡುತ್ತಾ ರಣರಂಗ ಮಧ್ಯದಲ್ಲಿ ದುರ್ಯೋಧನನ ದರ್ಪವನ್ನು ನಾಶ ಮಾಡುವವನಾಗುವಿ.

ಬಲಂ ಕಸ್ಮಾದ್ ವರ್ಧಯಿತ್ವಾ ಪರಸ್ಯ
ನಿಜಾನ್ ಕಸ್ಮಾತ್ ಕರ್ಶಯಿತ್ವಾ ಸಹಾಯಾನ್ ।
ನಿರುಷ್ಯ ಕಸ್ಮಾದ್ ವರ್ಷಪೂಗಾನ್ ವನೇಷು
ಯುಯುತ್ಸಸೇ ಪಾಂಡವ ಹೀನಕಾಲೇ ॥೨೦॥

ಎಲೈ ಪಾಂಡವನೇ, ಕಾಡಿನಲ್ಲಿ ಬಹಳ ಕಾಲ ವಾಸವನ್ನು ಮಾಡಿ, ನಿನಗೆ ಸಹಾಯ ಮಾಡುವವರನ್ನು ಕ್ಲೇಶಕ್ಕೆ ಗುರಿಮಾಡಿ, ಶತ್ರುಗಳ ಬಲವು ಅಭಿವೃದ್ಧಿಯಾಗುವಂತೆ ಮಾಡಿ ಈಗ ದುರ್ಬಲನಾಗಿರುವ ಕಾಲದಲ್ಲಿ ಏಕೆ ಯುದ್ಧವನ್ನು ಮಾಡಲು ಬಯಸುತ್ತೀಯೆ?

ಅಪ್ರಜ್ಞೋ ವಾ ಪಾಂಡವ ಯುಧ್ಯಮಾನೋ-
ऽಧರ್ಮಜ್ಞೋ ವಾ ಭೂತಿಮಥಾಭ್ಯುಪೈತಿ ।
ಪ್ರಜ್ಞಾವಾನ್ ವಾ ಯುಧ್ಯಮಾನೋऽಪಿ ಧರ್ಮಾತ್
ಸಂರಂಭಾದ್ವಾ ಸೋऽಪಿ ಭೂತೇರಪೈತಿ ॥೨೧॥

ಪಾಂಡವನೇ, ಅವಿವೇಕಿಯು ಧರ್ಮಿಷ್ಠನಲ್ಲದವನೂ ಯುದ್ಧವನ್ನು ಮಾಡಿ ಸಂಪತ್ತನ್ನು ಪಡೆಯುತ್ತಾನೆ. ವಿವೇಕಿಯಾದವನು ಧರ್ಮದಿಂದಲಾಗಲೀ, ಕೋಪದಿಂದಲಾಗಲೀ ಯುದ್ಧವನ್ನು ಮಾಡಿ ಸಂಪತ್ತನ್ನು ಕಳೆದುಕೊಳ್ಳುತ್ತಾನೆ (ಆದ್ದರಿಂದ ಯುದ್ಧದ ಫಲವು ನಿಶ್ಚಿತವಲ್ಲ).

ನಾಧರ್ಮೇ ತೇ ಧೀಯತೇ ಪಾರ್ಥ ಬುದ್ಧಿಃ
ನ ಸಂರಂಭಾತ್ ಕರ್ಮ ಚಕರ್ಥ ಪಾಪಮ್ ।
ಕಿಮಾತ್ಥ ತತ್ ಕಾರಣಂ ಯಸ್ಯ ಹೇತೋಃ
ಪ್ರಜ್ಞಾವಿರುದ್ಧಂ ಕರ್ಮ ಚಿಕೀರ್ಷಸೀದಮ್ ॥೨೨॥

ಎಲೈ ಪಾರ್ಥನೇ, ನಿನ್ನ ಬುದ್ಧಿಯು ಅಧರ್ಮದಲ್ಲಿ ನೆಲೆಸುವುದಿಲ್ಲ. ನೀನು ಎಂದೂ ಕೋಪದಿಂದ ಪಾಪಕರ್ಮವನ್ನು ಮಾಡಿಲ್ಲ. ನಿನ್ನ ಪ್ರಜ್ಞೆಗೆ ವಿರುದ್ಧವಾದ ಯುದ್ಧರೂಪವಾದ ಈ ಪಾಪಕರ್ಮವನ್ನು ಮಾಡಲು ಬಯಸುವುದಕ್ಕೆ ಏನು ಕಾರಣವಿದೆ ಎಂದು ಹೇಳುತ್ತೀಯೆ?

ಅವ್ಯಾಧಿಜಂ ಕಟುಕಂ ಶೀರ್ಷರೋಗಂ
ಯಶೋಮುಷಂ ಪಾಪಫಲೋದಯಂ ಚ ।
ಸತಾಂ ಪೇಯಂ ಯನ್ನ ಪಿಬಂತ್ಯಸಂತೋ
ಮನ್ಯುಂ ಮಹಾರಾಜ ಪಿಬ ಪ್ರಶಾಮ್ಯ ॥೨೩॥

ಪಾಪಾನುಬಂಧಂ ಕೋ ನು ತಂ ಕಾಮಯೇತ
ಕ್ಷಮೈವ ತೇ ಜ್ಯಾಯಸೀ ನೋತ ಭೋಗಃ ॥೨೪॥

ವ್ಯಾಧಿಯಿಂದ ಉಂಟಾಗದ ಕಹಿಯಾದ ಶಿರೋವೇದನೆಯಾಗಿರುವ ಕೀರ್ತಿನಾಶಕವಾದ ಪಾಪರೂಪವಾದ ಫಲವನ್ನು ಉಂಟುಮಾಡುವ ಅಸಜ್ಜನರು ಪಾನ ಮಾಡಲು ಸಾಧ್ಯವಿಲ್ಲದ, ಸಜ್ಜನರು ಮಾತ್ರ ಪಾನ ಮಾಡಬಹುದಾದ ಕೋಪವನ್ನು ಪಾನ ಮಾಡು. ಶಾಂತಿಯನ್ನು ಹೊಂದು. ಪಾಪವನ್ನು ಸಂಪಾದಿಸಿಕೊಡುವ ಕರ್ಮವನ್ನು ಯಾವನು ಬಯಸುತ್ತಾನೆ? ಕ್ಷಮೆಯೇ ಶ್ರೇಷ್ಠವಾದುದು. ಭೋಗವು ಶ್ರೇಷ್ಠವಲ್ಲ.

ಯತ್ರ ಭೀಷ್ಮಃ ಶಾಂತನವೋ ಹತಃ ಸ್ಯಾದ್
ಯತ್ರ ದ್ರೋಣಃ ಸಹಪುತ್ರೋ ಹತಃ ಸ್ಯಾತ್ ।
ಕೃಪಃ ಶಲ್ಯಃ ಸೌಮದತ್ತಿರ್ವಿಕರ್ಣೋ
ವಿವಿಂಶತಿಃ ಕರ್ಣದುರ್ಯೋಧನೌ ಚ ॥೨೫॥

ಏತಾನ್ ಹತ್ವಾ ಕೀದೃಶಂ ತತ್ ಸುಖಂ ಸ್ಯಾದ್
ಯದ್ ವಿಂದೇಥಾಸ್ತದನು ಬ್ರೂಹಿ ಪಾರ್ಥ ॥೨೬॥

ಎಲೈ ಪಾರ್ಥನೇ, ಎಲ್ಲಿ ಶಾಂತನವನಾದ ಭೀಷ್ಮನು ಹತನಾಗುತ್ತಾನೆಯೋ, ಎಲ್ಲಿ ಪುತ್ರಸಹಿತನಾದ ದ್ರೋಣರು ಹತರಾಗುತ್ತಾರೆಯೋ, ಎಲ್ಲಿ ಕೃಪ-ಶಲ್ಯ-ಸೌಮದತ್ತಿ-ವಿಕರ್ಣ- ವಿವಿಂಶತಿ-ಕರ್ಣ-ದುರ್ಯೋಧನರು ಹತರಾಗುತ್ತಾರೆಯೋ ಅಂತಹ ಯುದ್ಧವನ್ನು ಮಾಡಿ, ಅವರನ್ನು ಕೊಂದು, ನೀನು ಎಂತಹ ಸುಖವನ್ನು ಪಡೆಯುತ್ತೀಯೆ ಎಂದು ಹೇಳು.

ಲಬ್ಧ್ವಾಽಪೀಮಾಂ ಪೃಥಿವೀಂ ಸಾಗರಾಂತಾಂ
ಜರಾಮೃತ್ಯೂ ನೈವ ಹಿ ತ್ವಂ ಪ್ರಜಹ್ಯಾಃ ।
ಪ್ರಿಯಾಪ್ರಿಯೇ ಸುಖದುಃಖೇ ಚ ರಾಜನ್
ಏವಂ ವಿದ್ವಾನ್ ನೈವ ಯುದ್ಧಂ ಕುರು ತ್ವಮ್ ॥೨೭॥

ಎಲೈ ರಾಜನೇ, ನೀನು ಈ ಸಮಗ್ರವಾದ ಸಾಗರಾಂತವಾದ ಭೂಮಿಯನ್ನು ಪಡೆದರೂ ಜರಾ-ಮೃತ್ಯುಗಳನ್ನು ನಿವಾರಿಸಲಾರೆ. ಪ್ರಿಯಾಪ್ರಿಯಗಳು, ಸುಖ-ದುಃಖಗಳು ಇದ್ದೇ ಇರುತ್ತವೆ. ಇದನ್ನು ತಿಳಿದು ಯುದ್ಧದಿಂದ ನಿವೃತ್ತನಾಗು.

ಅಮಾತ್ಯಾನಾಂ ವಾ ಯದಿ ಕಾಮಸ್ಯ ಹೇತೋಃ
ಏವಂ ಯುಕ್ತಂ ಕರ್ಮ ಚಿಕೀರ್ಷಸಿ ತ್ವಮ್ ।
ಅಪಾಕ್ರಮಃ ಸ್ವಪದಾ ಯಸ್ತ್ವಮೇಭ್ಯಃ
ಮಾ ಗಾಸ್ತ್ವಂ ವೈ ದೇವಯಾನಾತ್ ಪಥಶ್ಚ ॥೨೮॥

ಅಮಾತ್ಯರ ಒತ್ತಾಯದ ಕಾರಣದಿಂದ ನೀನು ಇಂತಹ ಕರ್ಮವನ್ನು ಮಾಡಲು ಬಯಸಿದರೆ ಈಗಲಾದರೂ ನಿನ್ನ ಹೆಜ್ಜೆಯಿಂದ ನೀನು ಹಿಂದಕ್ಕೆ ಸರಿ. ದೇವಯಾನದ ಪಥದಿಂದ ನೀನು ದೂರ ಸರಿಯಬೇಡ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಷಡ್‌ವಿಂಶೋಽಧ್ಯಾಯಃ ॥

॥ ಸಂಜಯಯಾನಪರ್ವಣಿ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಇಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

## ಮಹಾಭಾರತತಾತ್ಪರ್ಯನಿರ್ಣಯಃ

ಹಠವಾದೇಽವದದ್ ಭೀಮೋ ಯಂ ಧರ್ಮಂ ದ್ರೌಪದೀ ತಥಾ ।
ತಮೇವೋಕ್ತ್ವಾ ಧರ್ಮಜಸ್ತು ಚಕಾರ ಚ ನಿರುತ್ತರಮ್ ॥೩೯॥

ಆಗ ಹಿಂದೆ ಹಠವಾದದಲ್ಲಿ ಭೀಮ-ದ್ರೌಪದಿಯರು ಯಾವ ಧರ್ಮವನ್ನು ಹೇಳಿದ್ದರೋ ಅದನ್ನೇ ಧರ್ಮರಾಜ ಹೇಳಿ ಸಂಜಯನನ್ನು ನಿರುತ್ತರಗೊಳಿಸಿದ.

★ ★ ★ ★ ★

## ಇಪ್ಪತ್ತೇಳನೆಯ ಅಧ್ಯಾಯ

ಕೃಷ್ಣನ ಶಾಸನವನ್ನು ಮೀರುವುದಿಲ್ಲವೆಂಬ ಯುಧಿಷ್ಠಿರನ ಪ್ರತಿವಚನ.

ಯುಧಿಷ್ಠಿರಃ

ಅಸಂಶಯಂ ಸಂಜಯ ಸತ್ಯಮೇತದ್
ಧರ್ಮೋ ವರಃ ಕರ್ಮಣೋ ಯತ್ ತ್ವಮಾತ್ಥ ।

ಜ್ಞಾತ್ವಾ ತು ಮಾಂ ಸಂಜಯ ಗರ್ಹಯೇಸ್ತ್ವಂ
ಯದಿ ಧರ್ಮಂ ಯದ್ಯಧರ್ಮಂ ಚರಾಮಿ ॥೧೧॥

ಯುಧಿಷ್ಠಿರ– ಸಂಜಯನೇ, ಯುದ್ಧಕರ್ಮಕ್ಕಿಂತಲೂ ಧರ್ಮಾಚರಣೆಯೇ ಶ್ರೇಷ್ಠವಾದುದೆಂದು ನನಗೇನು ಹೇಳಿದೆಯೋ ಅದು ನಿಸ್ಸಂಶಯವಾಗಿ ಸತ್ಯವೇ ಸರಿ. ಆದರೆ ಸಂಜಯನೇ, ನನ್ನನ್ನು ಸರಿಯಾಗಿ ತಿಳಿದು ಎಂದರೆ ಧರ್ಮವನ್ನು ಅಧರ್ಮವನ್ನಾಗಿ ಆಚರಿಸುತ್ತಿದ್ದೇನೆಯೋ, ಅಥವಾ ಅಧರ್ಮವನ್ನು ಧರ್ಮವನ್ನಾಗಿ ಆಚರಿಸುತ್ತಿದ್ದೇನೆಯೋ ಎಂದು ತಿಳಿದು ನೀನು ನನ್ನನ್ನು ನಿಂದಿಸಬಹುದು.

ಯತ್ರಾಧರ್ಮೋ ಧರ್ಮರೂಪಾಣಿ ಬಿಭ್ರತ್
ಧರ್ಮಃ ಕೃತ್ಸ್ನೋ ದೃಶ್ಯತೇऽಧರ್ಮರೂಪಃ ।
ತಥಾऽಧರ್ಮೋ ಧಾರಯನ್ ಧರ್ಮರೂಪಂ
ವಿದ್ವಾಂಸಸ್ತಂ ಸಂಪ್ರಪಶ್ಯಂತಿ ಬುದ್ಧ್ಯಾ ॥೨॥

ಎಲ್ಲಿ ಭಸ್ಮಧಾರಣಾದಿರೂಪವಾದ ಅಧರ್ಮವು ಧರ್ಮರೂಪವನ್ನು ಹೊಂದಿ ಸಮಗ್ರವಾದ ಊರ್ಧ್ವಪುಂಡ್ರಾದಿ ಧಾರಣರೂಪವಾದ ಧರ್ಮವು ಅಧರ್ಮರೂಪವನ್ನು ಹೊಂದುತ್ತದೆಯೋ; ಯಾವ ವಿವೇಕಿಗಳ ಉದ್ದೇಶದಲ್ಲಿ ಊರ್ಧ್ವಪುಂಡ್ರಾದಿ ಧರ್ಮವು ಧರ್ಮವಾಗಿ ಮತ್ತು ಅಧರ್ಮವು ಅಧರ್ಮವಾಗಿ ತೋರುತ್ತದೆಯೋ ಅಲ್ಲಿ ಜ್ಞಾನಿಗಳು ಇದು ಧರ್ಮ, ಇದು ಅಧರ್ಮ ಎಂದು ನಿಶ್ಚಯಿಸುತ್ತಾರೆ (ವಾದಿರಾಜರು).

ಏವಂ ತಥ್ಯೈವಾಪದಿ ಲಿಂಗಮೇತದ್
ಧರ್ಮಾಧರ್ಮೌ ವೃತ್ತಿನಿತ್ಯೌ ಭಜೇತಾಮ್ ।
ಆದ್ಯಂ ಲಿಂಗಂ ಯಸ್ಯ ತಸ್ಯ ಪ್ರಮಾಣಮ್
ಆಪದ್ಧರ್ಮಂ ಸಂಜಯ ತಂ ನಿಬೋಧ ॥೩॥

ಹೀಗೆ ಧರ್ಮಾಧರ್ಮಗಳು ನಿತ್ಯವಾಗಿ ಸ್ಥಿತವಾಗಿರುವಾಗ ಧರ್ಮಾಧರ್ಮಗಳು ಮಹಾ ಆಪತ್ತಿನ ಕಾಲದಲ್ಲಿ ಸಜ್ಜನರಿಗೆ ಪಾಷಂಡಿಗಳ ಚಿಹ್ನೆಗಳನ್ನು ಧರಿಸುತ್ತವೆ. ಮ್ಲೇಚ್ಛದೇಶದಲ್ಲಿ ಅವರ ಭಯದಿಂದ ಸಾಧುಗಳೂ ಸ್ವಶಿರೋಮುಂಡನ, ಶ್ಮಶ್ರುಧಾರಣ,

ಶೂನ್ಯಲಲಾಟತ್ವಾದಿ ಅಧರ್ಮಲಿಂಗಗಳನ್ನೇ ಧರ್ಮರೂಪವಾಗಿ ಧರಿಸುತ್ತಾರೆ. ಅಂತಹ ಸಂದರ್ಭದಲ್ಲಿ ಆದ್ಯಲಿಂಗಂ ಎಂದರೆ ಪಾಷಂಡಿಗಳ ಲಿಂಗವು ಪ್ರಮಾಣದಂತೆ ಅಂಗೀಕಾರಾರ್ಹವಾಗುತ್ತದೆ. ಸಜ್ಜನರು ಮಾಡುವ ಆ ಅಧರ್ಮವನ್ನು ಆಪದ್ಧರ್ಮವೆಂದು ತಿಳಿಯುತ್ತಾರೆ. ಅದು ಅಧರ್ಮವಾದರೂ ಆಪತ್ಕಾಲದಲ್ಲಿ ಮಾಡಿದುದರಿಂದ ನರಕಾದಿ ಹೇತುವಾಗುವುದಿಲ್ಲವಾದ್ದರಿಂದ ಧರ್ಮದಂತೆಯೇ ಅದು ಧರ್ಮವೆನಿಸುತ್ತದೆ. ಹಾಗೆಯೇ ನಾವು ಆಪತ್ಕಾಲದಲ್ಲಿರುವುದರಿಂದ ಸುಹೃಜ್ಜನರ ವಧೆಯೂ ಸಹ ನಮಗೆ ಧರ್ಮವೇ ಆಗುತ್ತದೆ ಎಂದು ನೀನು ತಿಳಿ (ವಾದಿರಾಜರು).

ಲುಪ್ತಾಯಾಂ ತು ಪ್ರಕೃತೌ ಯೋ ನ ಕರ್ಮ
ನಿಷ್ಪಾದಯೇತ್ ತತ್ ಪರೀಪ್ಸೇದಹೀನಃ ।
ಪ್ರಕೃತಿಸ್ಥಶ್ಚಾಪದಿ ವರ್ತಮಾನ
ಉಭೌ ಗರ್ಹ್ಯೌ ಭವತಃ ಸಂಜಯೈತೌ ॥೪॥

ದುರ್ಜನ ಸಂಸರ್ಗವಶದಿಂದ ತನ್ನ ಸ್ವಭಾವವು ಮುಚ್ಚಿಕೊಂಡಿರುವಾಗ ಯಾವನು ಆಪದ್ಧರ್ಮವನ್ನು ಆಚರಿಸುವುದಿಲ್ಲವೋ ಆಪತ್ಕಾಲವಿಲ್ಲದಿರುವಾಗ ತನ್ನ ಸ್ವಭಾವದಲ್ಲಿ ತಾನು ಇರಲು ಯಾವ ಪ್ರತಿಬಂಧಕವೂ ಇಲ್ಲದಿದ್ದಾಗ ಯಾವನು ಆಪದ್ಧರ್ಮವನ್ನು ಆಚರಿಸುವನೋ ಎಲೈ ಸಂಜಯನೇ, ಅವರಿಬ್ಬರೂ ನಿಂದನೀಯರಾಗುತ್ತಾರೆ. ಉತ್ತಮ ಪುರುಷನಾದವನು ಅವರೆಡನ್ನೂ ಪರೀಕ್ಷಿಸಬೇಕು. ಆಪತ್ಕಾಲದಲ್ಲಿಯೂ ನಾನು ಯುದ್ಧವನ್ನು ಮಾಡದಿದ್ದರೆ ಲೋಕವು ನನ್ನ ಅಪಹಾಸ್ಯಮಾಡುತ್ತದೆ ಎಂದು ಅಭಿಪ್ರಾಯ.

ಅತೋऽವಿಲೋಪಮಿಚ್ಛತಾಂ ಬ್ರಾಹ್ಮಣಾನಾಂ
ಪ್ರಾಯಶ್ಚಿತ್ತಂ ವಿಹಿತಂ ಯದ್ ವಿಧಾತ್ರಾ ।
ಆಪದ್ಯೇತಾನ್ ಕರ್ಮಸು ವರ್ತಮಾನಾನ್
ವಿಕರ್ಮಸ್ಥಾನ್ ಸಂಜಯ ಗರ್ಹಯೇಥಾಃ ॥೫॥

ಆದ್ದರಿಂದ ಪ್ರಮಾದದಿಂದ ಕರ್ಮಲೋಪವು ಉಂಟಾದಾಗ ಕರ್ಮದ ಲೋಪವಾಗದಿರಲಿ ಎಂಬ ಇಚ್ಛೆಯಿಂದ ಬ್ರಹ್ಮದೇವರು ಬ್ರಾಹ್ಮಣರಿಗೆ ಪ್ರಾಯಶ್ಚಿತ್ತವನ್ನು ವಿಧಿಸಿದ್ದಾರೆ. ಎಲೈ ಸಂಜಯನೇ, ಆಪತ್ಕಾಲದಲ್ಲಿಯೂ ತಮ್ಮ ಸ್ವಾಭಾವಿಕ ಕರ್ಮವನ್ನೇ

ಆಚರಿಸುವವರನ್ನೂ ಮತ್ತು ಆಪತ್ಕಾಲವಿಲ್ಲದಿದ್ದಾಗಲೂ ವಿಕರ್ಮವನ್ನು ಆಚರಿಸುವವರನ್ನೂ ನೀನು ನಿಂದಿಸಬಹುದು.

ಆಹೋಸ್ವಿತ್ ತ್ವಂ ಮನ್ಯಸೇ ಸರ್ವಮೇವ
ರಾಜ್ಞಾಂ ಯುದ್ಧೇ ವರ್ತತೇ ಧರ್ಮತಂತ್ರಮ್ ।
ಅಯುದ್ಧೇ ವಾ ವರ್ತತೇ ಧರ್ಮತಂತ್ರಮ್
ತಥೈವ ತೇ ವಾಚಮಿಮಾಂ ಶೃಣೋಮಿ ॥೬॥

ಅಥವಾ ನೀನು ರಾಜರ ಎಲ್ಲ ಯುದ್ಧವೂ ಧರ್ಮಕ್ಕೆ ಅನುಸಾರಿಯಾದುದು. ಅಥವಾ ಯುದ್ಧ ಮಾಡದಿರುವುದೆಲ್ಲವೂ ಧರ್ಮಕ್ಕೆ ಅಧೀನವಾದುದು ಎಂದು ನೀನು ತಿಳಿಯುವುದಾದರೆ (ನಾನು ಈ ಮಾತನ್ನು ಹೇಳುತ್ತಿದ್ದೇನೆ. ಏಕೆಂದರೆ ನಿನ್ನ ಈ ಮಾತುಗಳು ಹಾಗೆಯೇ ಕೇಳಿ ಬರುತ್ತಿವೆ).

ಮನೀಷಿಣಾಂ ಸತ್ತ್ವವಿಚ್ಛೇದನಾಯ
ವಿಧೀಯತೇ ಸತ್ಸು ವೃತ್ತಿಃ ಸದೈವ ।
ಅಬ್ರಹ್ಮಣ್ಯಾಃ ಸಂತಿ ತು ಯೇ ನ ವೈದ್ಯಾಃ
ಸರ್ವೋಚ್ಛೇದಂ ಸಾಧು ಮನ್ಯೇತ ತೇಭ್ಯಃ ॥೭॥

ವಿವೇಕಿಗಳಾದವರಿಗೆ ಅವರ ಬುದ್ಧಿಯು ದುರ್ಬುದ್ಧಿಯಿಂದ ವಿಚ್ಛೇದನವನ್ನು ಪಡೆಯದಿರಲು ಯಾವಾಗಲೂ ಸಜ್ಜನರ ವೃತ್ತಿಯು ಶಾಸ್ತ್ರದಲ್ಲಿ ಹೇಳಲ್ಪಡುತ್ತದೆ. ಯಾರು ಬ್ರಾಹ್ಮಣ ದ್ವೇಷಿಗಳೋ, ಯಾರು ವೇದವಿರೋಧಿಗಳೋ ಅವರ ಸರ್ವನಾಶವನ್ನು ಸತ್ಕರ್ಮವೆಂದೇ ತಿಳಿಯಬೇಕು.

ತದರ್ಥಿನಃ ಪಿತರೋ ಯೇ ಚ ಪೂರ್ವೇ
ಪಿತಾಮಹಾ ಯೇ ಚ ತೇಭ್ಯಃ ಪರೇऽನ್ಯೇ ।
ಪ್ರಜ್ಞೈಷಿಣೋ ಯೇ ಚ ಹಿ ಕರ್ಮ ಕುರ್ಯುಃ
ನಾನ್ಯತ್ ತತೋ ನಾಸ್ತಿನಾಸ್ತೀತಿ ಮನ್ಯೇ ॥೮॥

ಅಂತಹ ಬ್ರಾಹ್ಮಣದ್ವೇಷಿಗಳ ನಾಶವನ್ನು ಹಿಂದಿನ ಪಿತೃಪಿತಾಮಹರು ಮತ್ತು ಅವರಿಗಿಂತ ಬೇರೆಯವರೂ ಸಹ ಬಯಸಿದರು. ಜ್ಞಾನವನ್ನು ಅರಸುವ ಅವರು

ಮಾಡಿದ ಆಚಾರಕ್ಕಿಂತ ಭಿನ್ನವಾದ ಧರ್ಮಾಚರಣೆಯು ಇಲ್ಲ, ಇಲ್ಲ, ಇಲ್ಲ ಎಂದು ನಾನು ತಿಳಿದಿದ್ದೇನೆ.

ಯತ್ ಕಿಂಚೇದಂ ವಿತ್ತಮಸ್ಯಾಂ ಪೃಥಿವ್ಯಾಂ
ಯದ್ ದೇವಾನಾಂ ತ್ರಿದಶಾನಾಂ ಪರತ್ರ ।
ಪ್ರಾಜಾಪತ್ಯಂ ತ್ರಿದಿವಂ ಬ್ರಹ್ಮಲೋಕಂ
ನಾಧರ್ಮತಃ ಸಂಜಯ ಕಾಮಯೇ ತತ್ ॥೯॥

ಎಲೈ ಸಂಜಯನೇ, ಈ ಭೂಮಿಯಲ್ಲಿ ಯಾವ ಸಂಪತ್ತು ಇದೆಯೋ, ಪರಲೋಕದಲ್ಲಿ ದೇವತೆಗಳಿಗೆ ಯಾವ ಸಂಪತ್ತು ಇದೆಯೋ, ಬ್ರಹ್ಮದೇವರಿಗೆ ಸಂಬಂಧಪಟ್ಟ ಬ್ರಹ್ಮಲೋಕರೂಪವಾದ ಸ್ವರ್ಗವು ಯಾವುದು ಇದೆಯೋ ಅವು ಯಾವುದನ್ನೂ ನಾನು ಅಧರ್ಮದಿಂದ ಪಡೆಯಲು ಬಯಸುವುದಿಲ್ಲ.

ಧರ್ಮೇಶ್ವರಃ ಕುಶಲೋ ನೀತಿಮಾಂಶ್ಚ
ಉಪಾಸಿತಾ ಬ್ರಾಹ್ಮಣಾನಾಂ ಮನೀಷೀ ।
ನಾನಾವಿಧಾಂಶ್ಚೈವ ಮಹಾಬಲಾಂಶ್ಚ
ರಾಜ್ಞೋ ವಿಜಾನನ್ನನುಶಾಸ್ತಿ ಕೃಷ್ಣಃ ॥೧೦॥

ಧರ್ಮಪ್ರಭುವೂ, ಕುಶಲನೂ, ನೀತಿವಂತನೂ, ಬ್ರಾಹ್ಮಣರ ಉಪಾಸನೆಯನ್ನು ಮಾಡುವವನೂ, ವಿವೇಕಿಯೂ, ಆದ ಕೃಷ್ಣನು ಮಹಾಬಲಿಷ್ಠರಾದ ಅನೇಕ ರಾಜರನ್ನು ತಿಳಿದು ನನಗೆ ಅನುಶಾಸನವನ್ನು ಮಾಡುತ್ತಾನೆ.

ಯದಿ ಹ್ಯಹಂ ವಿಸೃಜಾಮ್ಯಸ್ಯ ಗರ್ಹ್ಯೇ
ಯುಧ್ಯಮಾನೋ ಯದಿ ಜಹ್ಯಾಂ ಸ್ವಧರ್ಮಮ್ ।
ಮಹಾಯಶಾಃ ಕೇಶವಸ್ತದ್ ಬ್ರವೀತು
ವಾಸುದೇವಸ್ತೂಭಯೋರರ್ಥಕಾಮಃ ॥೧೧॥

ನಾನು ಅವನ ಅನುಶಾಸನವನ್ನು ಮೀರುವುದಾದರೆ ನಿಂದನೀಯನಾಗುತ್ತೇನೆ. ಯುದ್ಧವನ್ನು ಮಾಡಿ ನಾನು ನನ್ನ ಧರ್ಮವನ್ನು ಮಾಡುವುದಾದರೆ ಅದನ್ನು

ಮಹಾಕೀರ್ತಿಶಾಲಿಯಾದ ಕೃಷ್ಣನು ಹೇಳಲಿ. ಕೃಷ್ಣನು ಎರಡು ವಂಶಗಳಿಗೂ ಹಿತವನ್ನು ಬಯಸುವವನು.

ಶೈನೇಯೋಽಯಂ ಚೇದಯಶ್ಚಾಂಧಕಾಶ್ಚ
ವಾಷ್ಣೇಯಭೋಜಾಃ ಕುಕುರಾಃ ಸೃಂಜಯಾಶ್ಚ।
ಉಪಾಸೀನಾ ವಾಸುದೇವಸ್ಯ ಬುದ್ಧಿಂ
ನಿಗೃಹ್ಯ ಶತ್ರೂನ್ ಸುಹೃದೋ ನಂದಯಂತಿ ॥೧೨॥

ಈ ಸಾತ್ಯಕಿ, ಚೇದಿಗಳು, ಅಂಧಕರು, ವಾಷ್ಣೇಯರು, ಭೋಜರು, ಕುಕುರರು ಮತ್ತು ಸೃಂಜಯರು ಕೃಷ್ಣನ ಬುದ್ಧಿಯನ್ನು ಆಶ್ರಯಿಸಿ, ಶತ್ರುಗಳನ್ನು ನಿಗ್ರಹಿಸಿ ಸುಹೃದರನ್ನು ಸಂತೋಷಪಡಿಸುತ್ತಾರೆ.

ವೃಷ್ಣ್ಯಂಧಕಾ ಹ್ಯುಗ್ರಸೇನಾದಯೋ ವೈ
ಕೃಷ್ಣಪ್ರಣೀತಾಃ ಸರ್ವ ಏವೇಂದ್ರಕಲ್ಪಾಃ।
ಮನಸ್ವಿನಃ ಸತ್ಯಪರಾಯಣಾಶ್ಚ
ಮಹಾಬಲಾ ಯಾದವಾ ಭೋಗವಂತಃ ॥೧೩॥

ಕೃಷ್ಣನಿಂದ ಮುಂದೆ ನಡೆಸಲ್ಪಟ್ಟ ವೃಷ್ಣಿಗಳು, ಅಂಧಕರು, ಉಗ್ರಸೇನ ಮೊದಲಾದವರೆಲ್ಲರೂ ಇಂದ್ರನಂತೆ ಇದ್ದಾರೆ. ಧೈರ್ಯಶಾಲಿಗಳೂ, ಸತ್ಯಪರಾಯಣರೂ, ಮಹಾಬಲರೂ ಆದ ಯಾದವರು ಒಳ್ಳೆಯ ಭೋಗವನ್ನು ಹೊಂದಿದ್ದಾರೆ.

ಕಾಶ್ಯೋ ಬಭ್ರುಃ ಶ್ರಿಯಮುತ್ತಮಾಂ ಗತೋ
ಲಬ್ಧ್ವಾ ಕೃಷ್ಣಂ ಭ್ರಾತರಮೀಶಿತಾರಮ್ ॥
ಯಸ್ಮೈ ಕಾಮಾನ್ ವರ್ಷತಿ ವಾಸುದೇವೋ
ಗ್ರೀಷ್ಮಾತ್ಯಯೇ ಮೇಘ ಇವ ಪ್ರಜಾಭ್ಯಃ ॥೧೪॥

ಕಾಶಿರಾಜನಾದ ಪೌಂಡ್ರಕವಾಸುದೇವನ ತಮ್ಮನಾದ ಬಭ್ರುವು ಸರ್ವೇಶ್ವರನಾದ ಕೃಷ್ಣನನ್ನು ಭ್ರಾತೃವಾಗಿ ಪಡೆದು ಒಳ್ಳೆಯ ಸಂಪತ್ತನ್ನು ಹೊಂದಿದ್ದಾನೆ. ಗ್ರೀಷ್ಮಕಾಲವು ಮುಗಿದ ಮೇಲೆ ಮೇಘವು ಪ್ರಜೆಗಳಿಗೆ ಮಳೆಯನ್ನು ಸುರಿಸಿದಂತೆ ವಾಸುದೇವನು ಅವನಿಗೆ ಸುಖದ ಮಳೆಯನ್ನು ಸುರಿಸುತ್ತಾನೆ.

ಈದೃಶೋಽಯಂ ಕೇಶವಸ್ತಾತ ಭೂಯೋ
ವಿದ್ಮೋ ಹ್ಯೇನಂ ಕರ್ಮಣೋ ನಿಶ್ಚಯಜ್ಞಮ್ ।
ಪ್ರಿಯಶ್ಚ ನಃ ಸಾಧುತಮಶ್ಚ ಕೃಷ್ಣೋ
ನಾತಿಕ್ರಮೇ ವಚನಂ ಕೇಶವಸ್ಯ ॥೧೫॥

ಪ್ರೀತಿಪಾತ್ರನೇ, ಕೃಷ್ಣನು ಇಂತಹವನು ಮತ್ತು ಅವನು ಕರ್ಮಗಳ ನಿಶ್ಚಯ ಜ್ಞಾನವುಳ್ಳವನು ಎಂದು ತಿಳಿದಿದ್ದೇವೆ. ನಮಗೆ ಅವನು ಪ್ರಿಯನಾದವನು ಮತ್ತು ಬಹಳ ಸತ್ಪುರುಷನಾದವನು. ಅವನ ಮಾತನ್ನು ನಾನು ಮೀರುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಸಪ್ತವಿಂಶೋಽಧ್ಯಾಯಃ ॥

॥ ಸಂಜಯಯಾನಪರ್ವಣಿ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಇಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

## ಮಹಾಭಾರತತಾತ್ಪರ್ಯನಿರ್ಣಯಃ - ಅಧ್ಯಾಯ ೨೪

ಕೃಷ್ಣೋಽಪಿ ತಸ್ಯ ಧರ್ಮಸ್ಯ ಪ್ರಾಮಾಣ್ಯಂ ಪ್ರತ್ಯಪಾದಯತ್ ।
ತತೋ ನಿರುತ್ತರಃ ಕೃಷ್ಣಂ ಪಾಂಡವಾಂಶ್ಚ ಪ್ರಣಮ್ಯ ಸಃ ॥೪೦॥

ಶ್ರೀಕೃಷ್ಣನೂ ಆ ಧರ್ಮದ ಪ್ರಾಮಾಣಿಕತೆಯನ್ನು ಸಮರ್ಥಿಸಿದ. ಸಂಜಯ ನಿರುತ್ತರನಾಗಿ ಕೃಷ್ಣನನ್ನೂ ಪಾಂಡವರನ್ನೂ ನಮಿಸಿ ಧೃತರಾಷ್ಟ್ರನ ಬಳಿಗೆ ಹೋದನು.

★ ★ ★ ★ ★

## ಇಪ್ಪತ್ತೆಂಟನೆಯ ಅಧ್ಯಾಯ

ದುರ್ಯೋಧನನು ಇಷ್ಟು ಅಪರಾಧವನ್ನು ಮಾಡಿದ್ದರೂ
ಸಂಧಿಯು ಶ್ರೇಷ್ಠವೆಂದು ಕೃಷ್ಣನ ವಚನ.

ಶ್ರೀವಾಸುದೇವಃ

ಅವಿನಾಶಂ ಸಂಜಯ ಪಾಂಡವಾನಾಮ್
ಇಚ್ಛಾಮ್ಯಹಂ ಭೂತಿಮೇಷಾಂ ಪ್ರಿಯಂ ಚ ।

ತಥಾ ರಾಜ್ಞೋ ಧೃತರಾಷ್ಟ್ರಸ್ಯ ಸೂತ
ಸದಾऽऽಶಂಸೇ ಬಹುಪುತ್ರಸ್ಯ ವೃದ್ಧಿಮ್ ॥೧॥

ಶ್ರೀವಾಸುದೇವ– ಎಲೈ ಸಂಜಯನೇ, ನಾನು ಪಾಂಡವರ ಅವಿನಾಶವನ್ನೂ, ಸಮೃದ್ಧಿಯನ್ನೂ ಮತ್ತು ಪ್ರಿಯವನ್ನೂ ಬಯಸುತ್ತೇನೆ. ಹಾಗೆಯೇ ಸೂತನೇ, ಬಹುಪುತ್ರರಿಂದ ಕೂಡಿದ ಧೃತರಾಷ್ಟ್ರನಿಗೂ ಸಹ ವೃದ್ಧಿಯನ್ನು ಬಯಸುತ್ತೇನೆ.

ಕರೋಮಿ ಹೇ ಸಂಜಯ ನಿತ್ಯಮೇವಂ
ತಥಾ ಬ್ರೂಯಾಸ್ತಾನಭಿಶಾಮ್ಯತೇತಿ ।
ರಾಜ್ಞಶ್ಚ ಹಿ ಪ್ರಿಯಮೇತತ್ ಶೃಣೋಮಿ
ಮನ್ಯೇ ವೈ ತತ್ ಪಾಂಡವಾನಾಂ ಸಮರ್ಥಮ್ ॥೨॥

ಸಂಜಯನೇ, ನಾನು ನಿತ್ಯವೂ ಹೀಗೆ ಮಾಡುತ್ತೇನೆ. ನೀನು ಹೋಗಿ ಅವರಿಗೆ (ಕೌರವರಿಗೆ) ಶಾಂತಿಯಿಂದ ಸಂಧಿಯನ್ನು ಮಾಡಿಕೊಳ್ಳಿ ಎಂದು ಹೇಳು. ಇದು ಧೃತರಾಷ್ಟ್ರನಿಗೂ ಪ್ರಿಯವಾದುದೆಂದು ನಾನು ಕೇಳಿದ್ದೇನೆ. ಸಂಧಿಯು ಪಾಂಡವರಿಗೂ ಒಳ್ಳೆಯ ಪುರುಷಾರ್ಥವಾಗುತ್ತದೆ.

ಸುದುಷ್ಕರಸ್ತ್ವತ್ರ ಶಮೋ ಹಿ ನೂನಂ
ಪ್ರದರ್ಶಿತಃ ಸಂಜಯ ಪಾಂಡವೇನ ।
ಅಸ್ಮಿನ್ ವೃತ್ತೇ ಧೃತರಾಷ್ಟ್ರೇ ಸಪುತ್ರೇ
ಕಸ್ಮಾದೇಷಾಂ ಕಲಹೋऽನ್ಯತ್ರ ಮೂರ್ಚ್ಛೇತ್ ॥೩॥

ಈ ಸಂದರ್ಭದಲ್ಲಿ ಅತ್ಯಂತ ಕಷ್ಟಕರವಾದ ಶಾಂತಿಯು ಪಾಂಡುಪುತ್ರನಾದ ಧರ್ಮರಾಜನಿಂದ ಖಂಡಿತವಾಗಿ ತೋರಿಸಲ್ಪಟ್ಟಿದೆ. ಪುತ್ರಸಹಿತನಾದ ಧೃತರಾಷ್ಟ್ರನು ಈ ನಡತೆಯನ್ನು ಹೊಂದಿರುವಾಗ ಪಾಂಡವರಲ್ಲದೇ ಬೇರೆಯವರಾಗಿದ್ದರೆ ಏಕೆ ಕಲಹವು ಉಂಟಾಗುತ್ತಿರಲಿಲ್ಲ?

ತತ್ ತ್ವಂ ಧರ್ಮಂ ವ್ಯಾಹರನ್ ಸಂಜಯೇಹ
ಮತ್ತಶ್ಚ ಜಾನಾಸಿ ಯುಧಿಷ್ಠಿರಾಚ್ಚ ॥೪॥

ಅಥೋ ಕಸ್ಮಾತ್ ಸಂಜಯ ಪಾಂಡವಸ್ಯ
ಉತ್ಸಾಹಿನಃ ಪೂರಯತಃ ಸ್ವಕರ್ಮ ।
ಯಥಾಖ್ಯಾತಮಾವಸತಃ ಕುಟುಂಬೇ
ಪುರಾ ಕಸ್ಮಾತ್ ಸಾಧು ವಿಲೋಮಮಾತ್ಥ ॥೫॥

ಸಂಜಯನೇ, ಹೀಗೆ ಧರ್ಮವನ್ನು ಕುರಿತು ಮಾತನಾಡುತ್ತಿರುವ ನೀನು ನನ್ನಿಂದಲೂ ಮತ್ತು ಯುಧಿಷ್ಠಿರನಿಂದಲೂ ಧರ್ಮವನ್ನು ತಿಳಿದಿದ್ದೀಯೆ. ಎಲೈ ಸಂಜಯನೇ, ಹೀಗಿರುವಾಗ ಉತ್ಸಾಹಶೀಲರಾದ ತನ್ನ ಕರ್ಮವನ್ನು ಆಚರಿಸುತ್ತಿರುವ ವಿಹಿತವಾದ ರೀತಿಯಲ್ಲಿ ಕುಟುಂಬದಲ್ಲಿ ವಾಸವನ್ನು ಮಾಡುವ ಪಾಂಡವನಾದ ಯುಧಿಷ್ಠಿರನ ವಿಷಯದಲ್ಲಿ ಮೊದಲು ಏಕೆ ವಿಪರೀತವಾಗಿ ಅಧರ್ಮವುಂಟಾಗುವುದೆಂದು ಮಾತನಾಡಿದೆ?

ಅಸ್ಮಿನ್ ವಿಧೌ ವರ್ತಮಾನೇ ಯಥಾವದ್
ಉಚ್ಚಾವಚಾ ಮತಯೋ ಬ್ರಾಹ್ಮಣಾನಾಮ್ ॥೬॥

ಕರ್ಮಣ್ಯೇಕೇ ಸಿದ್ಧಿಮಾಹುಃ ಪರತ್ರ
ಹಿತ್ವಾ ಕರ್ಮ ವಿದ್ಯಯಾ ಸಿದ್ಧಿಮೇಕೇ ।
ನಾಭುಂಜಾನೋ ಭಕ್ಷ್ಯಭೋಜ್ಯಸ್ಯ ತೃಪ್ಯೇದ್
ಸೋಽಯಂ ವಿಧಿರ್ವಿಹಿತಃ ಕರ್ಮಣೈವ ॥೭॥

ವೇದವಿಧಾನವು ಯಥಾರ್ಥವಾಗಿರುವಾಗ ಬ್ರಾಹ್ಮಣರ ಬುದ್ಧಿಗಳು ಉಚ್ಚನೀಚ ಭಾವಗಳನ್ನು ಹೊಂದಿರುತ್ತವೆ. ಕೆಲವರು ಕರ್ಮದಿಂದ ಪರಲೋಕದಲ್ಲಿ ಸಿದ್ಧಿಯನ್ನು ಹೇಳುತ್ತಾರೆ. ಕರ್ಮವನ್ನು ಬಿಟ್ಟು ವಿದ್ಯೆಯಿಂದಲೇ ಸಿದ್ಧಿ ಎಂದು ಕೆಲವರು ಹೇಳುತ್ತಾರೆ. ಭಕ್ಷ್ಯ-ಭೋಜ್ಯಗಳ ಜ್ಞಾನವಿದ್ದರೂ ಭೋಜನಕರ್ಮವನ್ನು ಮಾಡದಿದ್ದರೆ ತೃಪ್ತಿ ಉಂಟಾಗುವುದಿಲ್ಲ. ಅದರಂತೆ ಈ ವಿಧಿಯೂ ಸಹ ಕರ್ಮದ ಜೊತೆಯಲ್ಲಿಯೇ ಪೂರ್ಣಗೊಳ್ಳುತ್ತದೆ (ಜ್ಞಾನ-ಕರ್ಮಗಳೆರಡೂ ಅವಶ್ಯಕವೆಂದು ಅಭಿಪ್ರಾಯ).

ಯಾ ವೈ ವಿದ್ಯಾಃ ಸಾಧಯಂತೀಹ ಕರ್ಮ
ತಾಸಾಂ ಫಲಂ ವಿದ್ಯತೇ ನೇತರಾಸಾಮ್ ।

ತತ್ರೇಹ ವೈ ದೃಷ್ಟಫಲಂ ತು ಕರ್ಮ
ಪೀತ್ವೋದಕಂ ಶಾಮ್ಯತಿ ತೃಷ್ಣಯಾऽऽರ್ತಃ ॥೮॥

ಇಲ್ಲಿ ಯಾವ ವಿದ್ಯೆಗಳು ಕರ್ಮಾನುಷ್ಠಾನದಲ್ಲಿ ಪರ್ಯವಸಾನವನ್ನು ಹೊಂದುತ್ತವೆಯೋ ಆ ವಿದ್ಯೆಗಳೇ ಸಫಲವಾದವು. ಇಲ್ಲಿ ಕರ್ಮವು ದೃಷ್ಟಫಲವೆಂಬುದು ಸಿದ್ಧವಾಗಿದೆ. ಬಾಯಾರಿಕೆಯಿಂದ ಬಳಲಿದವನು ನೀರನ್ನು ಕುಡಿದೇ ತೃಪ್ತಿಯನ್ನು ಹೊಂದುತ್ತಾನೆ.

ಸೋऽಯಂ ವಿಧಿರ್ವಿಹಿತಃ ಕರ್ಮಣ್ಯೇವ
ತದ್ವತ್ ಕೃತಂ ಸಂಜಯ ತಚ್ಚ ಕರ್ಮ ।
ತತ್ರ ಯೋऽನ್ಯತ್ ಕರ್ಮಣಃ ಸಾಧು ಮನ್ಯೇತ್
ಮೋಘಂ ತಸ್ಯಾಲಪಿತಂ ದುರ್ಬಲಸ್ಯ ॥೯॥

ಆದ್ದರಿಂದ ಎಲೈ ಸಂಜಯನೇ, ಈ ಕ್ಷತ್ರಿಯ ಧರ್ಮವೂ ಸಹ ಕರ್ಮದ ಜೊತೆಯಲ್ಲಿಯೇ ವಿಹಿತವಾಗಿದೆ. ಅದಕ್ಕೆ ಅನುಗುಣವಾಗಿ ಯುಧಿಷ್ಠಿರನು ಕರ್ಮವನ್ನು ಆಚರಿಸಿದ್ದಾನೆ. ಕರ್ಮವನ್ನು ಬಿಟ್ಟು ಫಲಸಿದ್ಧಿಯನ್ನು ಪಡೆಯಲು ಬೇರೆ ಮಾರ್ಗವಿದೆ ಎಂದು ತಿಳಿಯುವ ದುರ್ಬಲನ ಮಾತುಗಳು ವ್ಯರ್ಥವಾದವುಗಳು.

ಕರ್ಮಣಾऽಮೀ ಭಾಂತಿ ದೇವಾಃ ಪರತ್ರ
ಕರ್ಮಣ್ಯೇವೇಹ ಪ್ಲವತೇ ಮಾತರಿಶ್ವಾ ।
ಅಹೋರಾತ್ರೇ ವಿದಧತ್ ಕರ್ಮಣ್ಯೇವ
ಅತಂದ್ರಿತಃ ಶಶ್ವದುದೇತಿ ಸೂರ್ಯಃ ॥೧೦॥

ಈ ದೇವತೆಗಳು ಪರಲೋಕದಲ್ಲಿ ಕರ್ಮದಿಂದಲೇ ಬೆಳಗುತ್ತಾರೆ. ವಾಯುವು ಕರ್ಮದಿಂದಲೇ ಇಲ್ಲಿ ಬೀಸುತ್ತಾನೆ. ಸೂರ್ಯನು ಆಲಸ್ಯವಿಲ್ಲದೆ ತನ್ನ ಕರ್ಮದಿಂದಲೇ ಹಗಲು-ರಾತ್ರಿಗಳನ್ನು ಉಂಟುಮಾಡುತ್ತಾ ನಿತ್ಯದಲ್ಲಿಯೂ ಉದಯಿಸುತ್ತಾನೆ.

ಮಾಸಾರ್ಧಮಾಸಾನಥ ನಕ್ಷತ್ರಯೋಗಾನ್
ಅತಂದ್ರಿತಶ್ಚಂದ್ರಮಾಶ್ಚಾಭ್ಯುಪೈತಿ ।
ಅತಂದ್ರಿತೋ ದಹತೇ ಜಾತವೇದಾಃ
ಸಮಿದ್ಧ್ಯಮಾನಃ ಕರ್ಮ ಕುರ್ವನ್ ಪ್ರಜಾಭ್ಯಃ ॥೧೧॥

ಚಂದ್ರನು ಆಲಸ್ಯವಿಲ್ಲದೆ ಮಾಸ, ಅರ್ಧಮಾಸ ಮತ್ತು ನಕ್ಷತ್ರಯೋಗಗಳನ್ನು ಹೊಂದುತ್ತಾನೆ. ಅಗ್ನಿಯು ಜ್ವಲಿಸಲ್ಪಟ್ಟವನಾಗಿ, ಆಲಸ್ಯವಿಲ್ಲದೆ ಪ್ರಜೆಗಳ ಅನುಕೂಲಕ್ಕಾಗಿ ಕರ್ಮವನ್ನು ಮಾಡುತ್ತಾ ದಹಿಸುತ್ತಾನೆ.

ಅತಂದ್ರಿತಾ ಭಾರಮಿಮಂ ಮಹಾಂತಂ
ಬಿಭರ್ತಿ ದೇವೀ ಪೃಥಿವೀ ಬಲೇನ ।
ಅತಂದ್ರಿತಾಃ ಶೀಘ್ರಮಪೋ ವಹಂತಿ
ಸಂತರ್ಪಯಂತ್ಯಃ ಸರ್ವಭೂತಾನಿ ನದ್ಯಃ ॥೧೨॥

ಈ ಭೂದೇವಿಯು ಆಲಸ್ಯವಿಲ್ಲದೆ ತನ್ನ ಬಲದಿಂದ ಈ ದೊಡ್ಡ ಭಾರವನ್ನು ಹೊರುತ್ತಾಳೆ. ನದಿಗಳು ಆಲಸ್ಯವಿಲ್ಲದೆ ಎಲ್ಲ ಪ್ರಾಣಿಗಳಿಗೂ ತೃಪ್ತಿಯನ್ನು ಉಂಟು ಮಾಡುತ್ತಾ ಶೀಘ್ರವಾಗಿ ಹರಿಯುತ್ತವೆ.

ಅತಂದ್ರಿತೋ ವರ್ಷತಿ ಭೂರಿತೇಜಾಃ
ಸನ್ನಾದಯನ್ನಂತರಿಕ್ಷಂ ದಿಶಶ್ಚ ॥೧೩॥

ಮಹಾಸಾಮರ್ಥ್ಯವುಳ್ಳ ಪರ್ಜನ್ಯನು ಆಲಸ್ಯವಿಲ್ಲದೆ ಸಿಡಿಲು-ಗುಡುಗುಗಳಿಂದ ಪ್ರತಿಧ್ವನಿಸುತ್ತಾ ಅಂತರಿಕ್ಷಗಳಲ್ಲಿ ಮತ್ತು ದಿಕ್ಕುಗಳಲ್ಲಿ ಮಳೆಯನ್ನು ಸುರಿಸುತ್ತಾನೆ.

ಅತಂದ್ರಿತೋ ಬ್ರಹ್ಮಚರ್ಯಂ ಚಚಾರ
ಶ್ರೇಷ್ಠತ್ವಮಿಚ್ಛನ್ ಬಲಭಿದ್ ದೇವತಾನಾಮ್ ।
ಹಿತ್ವಾ ಸುಖಂ ಮನಸಶ್ಚ ಪ್ರಿಯಾಣಿ
ತೇನ ಶಕ್ರಃ ಕರ್ಮಣಾ ಶ್ರೈಷ್ಠ್ಯಮಾಪ ॥೧೪॥

ಬಲಸೂದನನಾದ ಇಂದ್ರನು ದೇವತೆಗಳಲ್ಲಿ ಶ್ರೇಷ್ಠತ್ವವನ್ನು ಬಯಸಿ ಸುಖವನ್ನೂ, ಮನಸ್ಸಿಗೆ ಪ್ರಿಯವಾದ ವಸ್ತುಗಳನ್ನೂ ತ್ಯಜಿಸಿ ಆಲಸ್ಯವಿಲ್ಲದೆ ಬ್ರಹ್ಮಚರ್ಯವನ್ನು ಆಚರಿಸಿದನು. ಆ ಕರ್ಮದಿಂದ ಅವನು ದೇವತೆಗಳಲ್ಲಿ ಶ್ರೇಷ್ಠನಾದನು.

ಸತ್ಯಂ ಧರ್ಮಂ ಪಾಲಯನ್ನಪ್ರಮತ್ತೋ
ದಮಂ ತಿತಿಕ್ಷಾಂ ಸಮತಾಂ ಪ್ರಿಯಂ ಚ ।

ಏತಾನಿ ಸರ್ವಾಣ್ಯುಪಸೇವಮಾನಃ
ಸ ದೇವರಾಜ್ಯಂ ಮಘವಾನ್ ಪ್ರಾಪ ಮುಖ್ಯಮ್ ॥೧೫॥

ಸತ್ಯ-ಧರ್ಮಗಳನ್ನು ಆಲಸ್ಯವಿಲ್ಲದೆ ಪಾಲಿಸುತ್ತಾ ಇಂದ್ರಿಯನಿಗ್ರಹ, ದ್ವಂದ್ವ ಸಹಿಷ್ಣುತೆ, ಮನಸ್ಸಿನ ಸಮತ್ವ ಮತ್ತು ಪ್ರಿಯವಾದ ವಸ್ತುಗಳು ಈ ಎಲ್ಲವನ್ನೂ ಸೇವಿಸುತ್ತಾ ಇಂದ್ರನು ದೇವರಾಜ್ಯವನ್ನು ಹೊಂದಿ ದೇವತೆಗಳಲ್ಲಿ ಪ್ರಧಾನನಾದನು.

ಬೃಹಸ್ಪತಿರ್ಬ್ರಹ್ಮಚರ್ಯಂ ಚಚಾರ
ಸಮಾಹಿತಃ ಸಂಶಿತಾತ್ಮಾ ಯಥಾವತ್ ।
ಹಿತ್ವಾ ಸುಖಂ ಪ್ರತಿರುದ್ಧ್ಯೇಂದ್ರಿಯಾಣಿ
ತೇನ ದೇವಾನಾಮಗಮದ್ ಗೌರವಂ ಸಃ ॥೧೬॥

ಬೃಹಸ್ಪತಿಯು ಸಮಾಧಾನದಿಂದ ಕೂಡಿದವನಾಗಿ, ಮನೋನಿಗ್ರಹವುಳ್ಳವನಾಗಿ ಸುಖವನ್ನು ತ್ಯಜಿಸಿ, ಇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡು ಸರಿಯಾದ ರೀತಿಯಲ್ಲಿ ಬ್ರಹ್ಮಚರ್ಯವನ್ನು ಆಚರಿಸುತ್ತಾನೆ. ಆ ಕರ್ಮದಿಂದ ಅವನು ದೇವತೆಗಳಿಗೆ ಗುರು ಎಂಬ ಸ್ಥಾನವನ್ನು ಹೊಂದಿದನು.

ತಥಾ ನಕ್ಷತ್ರಾಣಿ ಕರ್ಮಣಾऽಮುತ್ರ ಭಾಂತಿ
ರುದ್ರಾದಿತ್ಯಾ ವಸವೋऽಥಾಶ್ವಿನೌ ಚ ॥೧೭॥

ಹಾಗೆಯೇ ಕರ್ಮದಿಂದ ನಕ್ಷತ್ರಗಳು ಆಕಾಶದಲ್ಲಿ ಬೆಳಗುತ್ತವೆ. ರುದ್ರಾದಿತ್ಯರು, ವಸುಗಳು ಮತ್ತು ಅಶ್ವಿನಿಗಳೂ ಸಹ ಕರ್ಮದಿಂದ ಆ ಸ್ಥಾನವನ್ನು ಪಡೆದಿದ್ದಾರೆ.

ಯಮೋ ರಾಜಾ ವೈಶ್ರವಣಃ ಕುಬೇರೋ
ಗಂಧರ್ವಯಕ್ಷಾಪ್ಸರಸಶ್ಚ ಸೂತ ।
ಬ್ರಹ್ಮಚರ್ಯಂ ವೇದವಿದ್ಯಾವ್ರತಂ ಚ
ನಿಷೇವಮಾಣಾ ಮುನಯೋऽಮುತ್ರ ಭಾಂತಿ ॥೧೮॥

ರಾಜನಾದ ಯಮ, ಧನಪತಿಯಾದ ಕುಬೇರ, ಗಂಧರ್ವರು, ಯಕ್ಷರು ಮತ್ತು ಅಪ್ಸರೆಯರು ಮತ್ತು ಋಷಿಗಳು ಬ್ರಹ್ಮಚರ್ಯವನ್ನೂ, ವೇದವಿದ್ಯಾವ್ರತವನ್ನೂ ಸೇವಿಸುವವರಾಗಿ ಸ್ವರ್ಗಲೋಕದಲ್ಲಿ ಬೆಳಗುತ್ತಾರೆ.

ಜಾನಂತೀಮಂ ಸರ್ವಲೋಕಸ್ಯ ಧರ್ಮಂ
ಬ್ರಾಹ್ಮಣಾನಾಂ ಕ್ಷತ್ರಿಯಾಣಾಂ ವಿಶಾಂ ಚ ।
ಸ ಕಸ್ಮಾತ್ ತ್ವಂ ಜ್ಞಾನಿನಾಂ ಜ್ಞಾನವಾಂಶ್ಚ
ವ್ಯಾಯಚ್ಛಸೇ ಸಂಜಯ ಕೌರವಾರ್ಥೇ ॥೧೯॥

ಸರ್ವಲೋಕಗಳ ಈ ಧರ್ಮವನ್ನು ಎಂದರೆ ಬ್ರಾಹ್ಮಣರ, ಕ್ಷತ್ರಿಯರ ಮತ್ತು ವೈಶ್ಯರ ಈ ಧರ್ಮವನ್ನು ಎಲ್ಲರೂ ತಿಳಿದಿದ್ದಾರೆ. ಹಾಗಿರುವಾಗ ಜ್ಞಾನಿಗಳಲ್ಲಿ ಜ್ಞಾನವಂತನಾದ ನೀನು ಎಲೈ ಸಂಜಯನೇ, ಏಕೆ ಕೌರವರ ಪರವಾಗಿ ಮಾತನಾಡುತ್ತಿದ್ದೀಯೆ?

ಸಾಮ್ನಾ ಯೇಷು ನಿತ್ಯಸಂಯೋಗಮಸ್ಯ
ತಥಾऽಶ್ವಮೇಧೇ ರಾಜಸೂಯೇ ಚ ವಿದ್ಧಿ ।
ಸಂಯುಜ್ಯತೇ ಧನುಷಾ ಕರ್ಮಣಾ ಚ
ಹಸ್ತ್ಯಶ್ವಪೃಷ್ಠೇ ರಥಶಸ್ತ್ರೈಶ್ಚ ಭೂಯಃ ॥೨೦॥

ಧರ್ಮರಾಜನಿಗೆ ನಿತ್ಯವೂ ವೇದಾಧ್ಯಯನ ಸಂಬಂಧವಿದೆ. ಹಾಗೆಯೇ ಅಶ್ವಮೇಧ ಮತ್ತು ರಾಜಸೂಯಗಳ ಸಂಬಂಧವೂ ಇದೆ ಎಂದು ತಿಳಿ. ಅವರು ಧನುಸ್ಸಿನಿಂದಲೂ, ಹಸ್ತಿಪೃಷ್ಠ ಮತ್ತು ಅಶ್ವಪೃಷ್ಠಗಳಿಂದಲೂ, ರಥಶಸ್ತ್ರಗಳಿಂದಲೂ ಪುನಃ ಸಂಬಂಧವನ್ನು ಹೊಂದಿದ್ದಾರೆ.

ತೇ ಚೇದಿಮಂ ಕೌರವಾಣಾಮುಪಾಯಮ್
ಅಪೀಚ್ಛೇಯುರವಧೇನೈವ ಪಾರ್ಥಾಃ ।
ಧರ್ಮತ್ರಾಣಂ ಪುಣ್ಯಮೇಷಾಂ ಕೃತಂ ಸ್ಯಾದ್
ಆರ್ಯೇ ವೃತ್ತೇ ಭೈಮಸೇನಾನ್ ನಿಗೃಹ್ಯ ॥೨೧॥

ಅಂತಹ ಪಾಂಡವರು ಯಾರನ್ನೂ ಕೊಲ್ಲದೇ ಕೌರವರ ಈ ಸಾಮೋಪಾಯವನ್ನು ಇಚ್ಛಿಸುವುದಾದರೆ ಭಯಂಕರ ಸೈನ್ಯವುಳ್ಳ ರಾಜರನ್ನು ನಾಶಮಾಡದೆ, ಅವರಿಗೆ ಅನುಗ್ರಹವನ್ನು ಮಾಡಿ ಆರ್ಯನಾದ ಧರ್ಮರಾಜನು ನಡೆದುಕೊಂಡರೆ ಧರ್ಮವು ರಕ್ಷಿತವಾಗುತ್ತದೆ ಮತ್ತು ಪಾಂಡವರೆಲ್ಲರಿಗೂ ಪುಣ್ಯವುಂಟಾಗುತ್ತದೆ.

ತೇ ಚೇತ್ ಪಿತ್ರ್ಯೇ ಕರ್ಮಣಿ ವರ್ತಮಾನಾ
ಆಪದ್ಯೇರನ್ ದಿಷ್ಟವಶೇನ ಮೃತ್ಯುಮ್ ।

ಯಥಾಶಕ್ತ್ಯಾಪೂರಯಂತಃ ಸ್ವಕರ್ಮ
ತದಪ್ಯೇಷಾಂ ನಿಧನಂ ಸ್ಯಾತ್ ಪ್ರಶಸ್ತಮ್ ॥೨೨॥

ಹಾಗಲ್ಲದೆ ಪಾಂಡವರು ಪಿತೃಪಿತಾಮಹರು ಮಾಡಿದ ಕರ್ಮದಲ್ಲಿ ಇರುವವರಾಗಿ ತಮ್ಮ ಶಕ್ತಿ ಇದ್ದಷ್ಟು ಯುದ್ಧರೂಪವಾದ ಸ್ವಕರ್ಮವನ್ನು ಮಾಡಿ ವಿಧಿವಶದಿಂದ ಮೃತ್ಯುವಿಗೆ ತುತ್ತಾದರೆ ಆ ಮರಣವೂ ಸಹ ಅವರಿಗೆ ಪ್ರಶಸ್ತವೇ ಆಗುತ್ತದೆ.

ಚಾತುರ್ವರ್ಣ್ಯಸ್ಯ ಪ್ರಥಮಂ ಸಂವಿಭಾಗಮ್
ಅವೇಕ್ಷ್ಯ ತ್ವಂ ಸಂಜಯ ಸ್ವಂ ಚ ಕರ್ಮ ।
ನಿಶ್ಚಿತ್ಯ ತ್ವಂ ಪಾಂಡವಾನಾಂ ಸ್ವಕರ್ಮ
ಪ್ರಶಂಸ ವಾ ನಿಂದ ವಾ ಯಾ ಮತಿಸ್ತೇ ॥೨೩॥

ಎಲೈ ಸಂಜಯನೇ, ಚಾತುರ್ವರ್ಣ್ಯದ ಮೊದಲನೆಯ ವಿಭಾಗವನ್ನು ಗಮನಿಸಿ ಮತ್ತು ನಿನ್ನ ಕರ್ಮವನ್ನು ಗಮನಿಸಿ ಪಾಂಡವರ ಸ್ವಕರ್ಮ ಯಾವುದೆಂದು ನಿಶ್ಚಯಿಸಿ ಅನಂತರ ನಿನ್ನ ಬುದ್ಧಿ ಇದ್ದಂತೆ ಪಾಂಡವರನ್ನು ಹೊಗಳು ಅಥವಾ ನಿಂದನೆ ಮಾಡು.

ಅಧೀಯೀತ ಬ್ರಾಹ್ಮಣೋಽಥೋ ಯಜೇತ
ದದ್ಯಾದೀಯಾತ್ ತೀರ್ಥಮುಖ್ಯಾನಿ ಚೈವ ।
ಅಧ್ಯಾಪಯೇದ್ ಯಾಜಯೇಚ್ಚಾಪಿ ಯಾಜ್ಯಾನ್
ಪ್ರತಿಗ್ರಹಂ ವಾ ವಿಹಿತಾತ್ ಪ್ರತೀಚ್ಛೇತ್ ॥೨೪॥

ಬ್ರಾಹ್ಮಣನು ಅಧ್ಯಯನವನ್ನು ಮಾಡಬೇಕು, ಅನಂತರ ಯಾಗವನ್ನು ಮಾಡಬೇಕು, ದಾನವನ್ನು ಮಾಡಬೇಕು, ತೀರ್ಥಯಾತ್ರೆಯನ್ನು ಮಾಡಬೇಕು, ಅಧ್ಯಯನವನ್ನು ಮಾಡಿಸಬೇಕು, ಯೋಗ್ಯರಾದವರಿಂದ ಯಾಗವನ್ನು ಮಾಡಿಸಬೇಕು ಮತ್ತು ಶುದ್ಧವಾದ ಪ್ರತಿಗ್ರಹವನ್ನು ಮಾಡಬೇಕು (ದಾನವನ್ನು ಸ್ವೀಕರಿಸಬೇಕು).

ಅಧೀಯೀತ ಕ್ಷತ್ರಿಯೋಽಥೋ ಯಜೇತ
ದದ್ಯಾತ್ ಧನಂ ನ ತು ಯಾಚೇತ ಕಿಂಚಿತ್ ।
ನ ಯಾಜಯೇನ್ನಾಪಿ ಚಾಧ್ಯಾಪಯೀತ
ಏಷ ಸ್ಮೃತಃ ಕ್ಷತ್ರಧರ್ಮಃ ಪುರಾಣಃ ॥೨೫॥

ಕ್ಷತ್ರಿಯನಾದವನು ಅಧ್ಯಯನವನ್ನು ಮಾಡಬೇಕು, ಅನಂತರ ಯಾಗವನ್ನು ಮಾಡಬೇಕು, ವಿತ್ತದಾನವನ್ನು ಮಾಡಬೇಕು, ಏನೂ ಬೇಡಬಾರದು, ಯಾಗವನ್ನು ಮಾಡಿಸಬಾರದು, ಅಧ್ಯಾಪನವನ್ನು ಮಾಡಬಾರದು. ಇದು ಪ್ರಾಚೀನವಾದ ಕ್ಷತ್ರಿಯ ಧರ್ಮವೆಂದು ಸ್ಮೃತವಾಗಿದೆ.

ತಥಾ ರಾಜನ್ಯೋ ರಕ್ಷಣಂ ವೈ ಪ್ರಜಾನಾಂ
ಕೃತ್ವಾ ಧರ್ಮೇಣಾಪ್ರಮತ್ತೋಽಥ ದತ್ವಾ ।
ಯಜ್ಞೈರಿಷ್ಟ್ವಾ ಸರ್ವದೇವಾನ್ ಸ್ವಧರ್ಮಾತ್
ದಾನಂ ದತ್ವಾ ಪುಣ್ಯಕೃದಾವಸೇದ್ ಗೃಹಾನ್ ॥೨೬॥

ಸ ಧರ್ಮಾತ್ಮಾ ಧರ್ಮಮಧೀತ್ಯ ಪುಣ್ಯಂ
ಯದೃಚ್ಛಯಾ ವ್ರಜತಿ ಬ್ರಹ್ಮಲೋಕಮ್ ॥೨೭॥

ಹಾಗೆಯೇ ರಾಜನಾದವನು ಧರ್ಮದಿಂದ ಪ್ರಜೆಗಳ ರಕ್ಷಣೆಯನ್ನು ಮಾಡಿ, ಎಚ್ಚರಿಕೆಯಿಂದ ದಾನವನ್ನು ಮಾಡಿ, ತನ್ನ ಧರ್ಮಕ್ಕೆ ಅನುಗುಣವಾಗಿ ಎಲ್ಲ ದೇವತೆಗಳನ್ನು ಯಜ್ಞದಿಂದ ಪೂಜಿಸಿ ದಾನವನ್ನು ಮಾಡಿ ಪುಣ್ಯವನ್ನು ಸಂಪಾದಿಸುತ್ತಾ ಮನೆಯಲ್ಲಿ ವಾಸಿಸಬೇಕು. ಅಂತಹ ಧರ್ಮಿಷ್ಠನಾದವನು ಅಧ್ಯಯನವನ್ನು ಮಾಡಿ ಪುಣ್ಯವನ್ನು ಸಂಪಾದಿಸಿ ಭಗವದಿಚ್ಛೆಯಿಂದ ಬ್ರಹ್ಮಲೋಕಕ್ಕೆ ಹೋಗುತ್ತಾನೆ.

ವೈಶ್ಯೋಽಧೀತ್ಯ ಕೃಷಿಗೋರಕ್ಷಪಣ್ಯೈಃ
ವಿತ್ತಂ ಚಿತ್ವಾ ಪಾಲಯನ್ನಪ್ರಮತ್ತಃ ।
ಪ್ರಿಯಂ ಕುರ್ವನ್ ಬ್ರಾಹ್ಮಣಕ್ಷತ್ರಿಯಾಣಾಂ
ಧರ್ಮಶೀಲಃ ಪುಣ್ಯಕೃದಾವಸೇದ್ ಗೃಹಾನ್ ॥೨೮॥

ವೈಶ್ಯನಾದವನು ಅಧ್ಯಯನವನ್ನು ಮಾಡಿ ಕೃಷಿಗೋರಕ್ಷವಾಣಿಜ್ಯಗಳಿಂದ ಧನವನ್ನು ಗಳಿಸಿ ಅದನ್ನು ಎಚ್ಚರಿಕೆಯಿಂದ ನೋಡಿಕೊಂಡು ಬ್ರಾಹ್ಮಣಕ್ಷತ್ರಿಯರಿಗೆ ಸೇವೆಯನ್ನು ಮಾಡುತ್ತಾ ಧರ್ಮಶೀಲನಾಗಿ ಪುಣ್ಯವನ್ನು ಸಂಪಾದಿಸುತ್ತಾ ಗೃಹದಲ್ಲಿ ಇರಬೇಕು.

ಪರಿಚರ್ಯಾ ವಂದನಂ ಬ್ರಾಹ್ಮಣಾನಾಂ
ನಾಧೀಯೀತ ಪ್ರತಿಷಿದ್ಧೋಽಸ್ಯ ಯಜ್ಞಃ ।

ನಿತ್ಯೋತ್ಥಿತೋ ಭೂತಯೇಽತಂದ್ರಿತಃ ಸ್ಯಾದ್
ಏಷ ಶ್ರುತಃ ಶೂದ್ರಧರ್ಮಃ ಪುರಾಣಃ ॥೨೯॥

ಪರಿಚರ್ಯ, ಬ್ರಾಹ್ಮಣರಿಗೆ ನಮಸ್ಕಾರ, ಅಧ್ಯಯನ ಮತ್ತು ಯಾಗಗಳ ಪ್ರತಿಷೇಧ, ಸಮೃದ್ಧಿಯನ್ನು ಹೊಂದುವುದರಲ್ಲಿ ಆಲಸ್ಯವಿಲ್ಲದೆ ನಿತ್ಯವೂ ಪ್ರಯತ್ನಶೀಲನಾಗಿರುವುದು ಇದು ಪ್ರಾಚೀನವಾದ ಶೂದ್ರಧರ್ಮವೆಂದು ಶ್ರುತವಾಗಿದೆ.

ಏತಾನ್ ರಾಜಾ ಪಾಲಯನ್ನಪ್ರಮತ್ತೋ
ನಿಯೋಜಯನ್ ಸರ್ವವರ್ಣಾನ್ ಸ್ವಧರ್ಮೇ ।
ಅಕಾಮಾತ್ಮಾ ಸಮವೃತ್ತಿಃ ಪ್ರಜಾಸು
ನಾಧಾರ್ಮಿಕಾನನುರುಧ್ಯೇತ ಕಾಮಾತ್ ॥೩೦॥

ರಾಜನಾದವನು ಸರ್ವವರ್ಣದವರನ್ನು ಅವರವರ ಧರ್ಮದಲ್ಲಿ ನಿಯೋಜಿಸುತ್ತಾ ಆಲಸ್ಯವಿಲ್ಲದೆ ಅವರನ್ನು ರಕ್ಷಿಸುತ್ತಾ, ಭೋಗಾಸಕ್ತನಾಗದೆ ಪ್ರಜೆಗಳಲ್ಲಿ ಸಮವಾಗಿ ನಡೆದುಕೊಂಡು ತನ್ನ ಸುಖಕ್ಕಾಗಿ ಅಧಾರ್ಮಿಕರನ್ನು ಅನುಸರಿಸದೆ ಇರಬೇಕು.

ಶ್ರೇಯಾಂಸ್ತಸ್ಮಾದ್ ಯದಿ ವಿದ್ಯೇತ ಕಶ್ಚಿದ್
ಅಭಿಜ್ಞಾತಃ ಸರ್ವಧರ್ಮೋಪಪನ್ನಃ ।
ಸತಾಂ ದುಷ್ಟಾನನುಶಿಷ್ಯನ್ ಪ್ರಜಾನಾಮ್
ನ ವೈ ಗೃಧ್ಯೇದಿತಿ ತಸ್ಮಿನ್ನಸಾಧು ॥೩೧॥

ಅದಕ್ಕಿಂತಲೂ ಮಿಗಿಲಾದ ಸರ್ವಧರ್ಮ ಉಪಪನ್ನವಾದ ಒಂದು ಧರ್ಮವು ಶಾಸ್ತ್ರದಲ್ಲಿ ಪ್ರಸಿದ್ಧವಾಗಿದೆ ಎಂದರೆ ಅದು ಸಜ್ಜನರಾದ ಪ್ರಜೆಗಳ ಸಲುವಾಗಿ ದುಷ್ಟರನ್ನು ಶಿಕ್ಷಿಸುವುದು. ಅಂತಹ ರಾಜನ ವಿಷಯದಲ್ಲಿ ಯಾವ ಅಮಂಗಳವನ್ನೂ ಆಶಿಸಬಾರದು.

ಯದಾ ಗೃಧ್ಯೇತ್ ಪರಭೂತೌ ನೃಶಂಸೋ
ವಿಧಿಪ್ರಕೋಪಾದ್ ವಿಧಿಮಾದಧಾನಃ ।
ತತೋ ರಾಜ್ಞಾಂ ಭವಿತಾ ಯುದ್ಧಮೇತತ್
ತತ್ರ ಜಾತಂ ವರ್ಮ ಶಸ್ತ್ರಂ ಧನುಶ್ಚ ॥೩೨॥

ಇನ್ನೊಬ್ಬನ ಸಂಪತ್ತನ್ನು ಬಯಸಿದರೆ ಪರಸೈನ್ಯವನ್ನು ವ್ಯೂಹಮಾಡಿದ ಕೋಪದಿಂದ ತನ್ನ ಭಟರನ್ನು ವ್ಯೂಹ ಮಾಡಿದರೆ ಆಗ ರಾಜರಿಗೆ ಯುದ್ಧ ಉಂಟಾಗುವುದು. ಆಗ ಕವಚ, ಧನುಸ್ಸು ಮತ್ತು ಶಸ್ತ್ರಗಳು ಉಂಟಾಗುತ್ತವೆ.

ಇಂದ್ರೇಣೈತದ್ ದಸ್ಯುವಧಾಯ ಕರ್ಮ
ಉತ್ಪಾದಿತಂ ವರ್ಮ ಶಸ್ತ್ರಂ ಧನುಶ್ಚ ।
ತತ್ರ ಪುಣ್ಯಂ ದಸ್ಯುವಧೇನ ಲಭ್ಯತೇ
ಸೋಽಯಂ ದೋಷಃ ಕುರುಭಿಸ್ತೀವ್ರರೂಪಃ ॥೩೩॥

ಅಧರ್ಮಜ್ಞೈರ್ಧರ್ಮಮಬುಧ್ಯಮಾನೈಃ
ಪ್ರಾದುರ್ಭೂತಃ ಸಂಜಯ ಸಾಧು ತನ್ನ ॥೩೪॥

ಇಂದ್ರನು ದಸ್ಯುವಧೆಗೋಸ್ಕರ ಈ ಯುದ್ಧವೆಂಬ ಕರ್ಮವನ್ನು ಮತ್ತು ಕವಚ, ಧನುಸ್ಸು ಮತ್ತು ಶಸ್ತ್ರಗಳನ್ನು ಸೃಷ್ಟಿಸಿದನು. ದಸ್ಯುವಧೆಯಿಂದ ಪುಣ್ಯವು ಲಭ್ಯವಾಗುತ್ತದೆ. ಅಂತಹ ತೀವ್ರವಾದ ದಸ್ಯುದೋಷವು ಅಧರ್ಮಜ್ಞರಾದ ಮತ್ತು ಧರ್ಮವನ್ನು ತಿಳಿಯದ ಕೌರವರಿಂದ ಉದ್ಭವಿಸಿದೆ. ಸಂಜಯನೇ, ಅದು ಸರಿಯಲ್ಲ.

ತತ್ರ ರಾಜಾ ಧೃತರಾಷ್ಟ್ರಃ ಸಪುತ್ರೋ
ಧರ್ಮ್ಯಂ ಹರೇತ್ ಪಾಂಡವಾನಾಮಕಸ್ಮಾತ್ ।
ನಾವೇಕ್ಷಂತೇ ರಾಜಧರ್ಮಂ ಪುರಾಣಂ
ತದನ್ವಯಾಃ ಕುರವಃ ಸರ್ವ ಏವ ॥೩೫॥

ಇಲ್ಲಿ ಪುತ್ರರಿಂದ ಸಹಿತನಾದ ಧೃತರಾಷ್ಟ್ರನು ನಿಷ್ಕಾರಣನಾಗಿ ಪಾಂಡವರ ಧರ್ಮಯುತವಾದ ಸಂಪತ್ತನ್ನು ಅಪಹರಿಸಿದ್ದಾನೆ. ಅವನ ಅವಂಶಕ್ಕೆ ಸೇರಿದ ಎಲ್ಲ ಕುರುಗಳೂ ಸಹ ಪ್ರಾಚೀನವಾದ ರಾಜಧರ್ಮವನ್ನು ಗಮನಿಸುತ್ತಿಲ್ಲ.

ಸ್ತೇನೋ ಹರೇದ್ ಯತ್ರ ಧನಂ ಪ್ರಣಷ್ಟಃ
ಪ್ರಸಹ್ಯ ವಾ ಯತ್ರ ಹರೇತ ದೃಷ್ಟಃ ।
ಉಭೌ ಗರ್ಹ್ಯೌ ಭವತಃ ಸಂಜಯೈತೌ
ಕಿಂ ಪೃಚ್ಛಸೇ ಧೃತರಾಷ್ಟ್ರಸ್ಯ ಪುತ್ರೇ ॥೩೬॥

ಯಾವ ಕಳ್ಳನು ಅವಿತುಕೊಂಡು ಧನವನ್ನು ಅಪಹರಿಸುವನೋ, ಯಾವ ದರೋಡೆಕಾರನು ಕಣ್ಣಿಗೆ ಕಾಣುವಂತೆಯೇ ಬಲಾತ್ಕಾರದಿಂದ ಅಪಹರಿಸುವನೋ ಅವರಿಬ್ಬರೂ ನಿಂದನೀಯರಾಗುತ್ತಾರೆ. ಸಂಜಯನೇ, ಧೃತರಾಷ್ಟ್ರನ ಪುತ್ರನ ವಿಷಯದಲ್ಲಿ ನೀನು ಏನು ಕೇಳುತ್ತಿದ್ದೀಯೆ?

ಸೋಽಯಂ ಲೋಭಾನ್ಮನ್ಯತೇ ಧರ್ಮಮೇನಂ
ಯಮಿಚ್ಛತಿ ಕ್ರೋಧವಶಾನುಗಾಮೀ ।
ಭಾಗಃ ಪುನಃ ಪಾಂಡವಾನಾಂ ನಿವಿಷ್ಟಃ
ತಂ ನಃ ಕಸ್ಮಾದಾದದೀರನ್ ಪರೇ ವೈ ॥೩೭॥

ಅಂತಹ ಧೃತರಾಷ್ಟ್ರಪುತ್ರನು ಲೋಭದಿಂದ ಮತ್ತು ಕ್ರೋಧವಶನಾಗಿ ಪಾಂಡವರ ಭಾಗವನ್ನು ಇಚ್ಛಿಸುತ್ತಾ ಅದನ್ನು ಧರ್ಮವೆಂದು ತಿಳಿದಿದ್ದಾನೆ. ಧೃತರಾಷ್ಟ್ರನ ರಾಜ್ಯದಲ್ಲಿ ಪಾಂಡವರ ಭಾಗವು ಸೇರಿದೆ. ಅದನ್ನು ಅವರು ಏಕೆ ತಮ್ಮ ವಶಕ್ಕೆ ತೆಗೆದುಕೊಳ್ಳುವುದಿಲ್ಲ?

ಅಸ್ಮತ್ಪದೇ ಯುಧ್ಯತಾಂ ನೋ ವಧೋಽಪಿ
ಶ್ಲಾಘ್ಯಃ ಪಿತ್ರ್ಯಃ ಪರರಾಜ್ಯಾದ್ ವಿಶಿಷ್ಟಃ ।
ಏತಾನ್ ಧರ್ಮಾನ್ ಕೌರವಾಣಾಂ ಪುರಾಣಾನ್
ಆಚಕ್ಷೀಥಾಃ ಸಂಜಯ ರಾಜಮಧ್ಯೇ ॥೩೮॥

ಇದಕ್ಕೋಸ್ಕರವಾಗಿ ಯುದ್ಧವನ್ನು ಮಾಡುವ ನಮಗೆ ಮರಣವುಂಟಾದರೂ ಅದು ಶ್ಲಾಘ್ಯವಾದುದು. ಪಿತೃವಿನಿಂದ ಬಂದ ರಾಜ್ಯವು ಇನ್ನೊಬ್ಬನಿಂದ ಬೇಡಿ ತೆಗೆದುಕೊಂಡ ರಾಜ್ಯಕ್ಕಿಂತಲೂ ಶ್ರೇಷ್ಠವಾದುದು. ಎಲೈ ಸಂಜಯನೇ, ಈ ಪ್ರಾಚೀನವಾದ ಧರ್ಮಗಳನ್ನು ರಾಜಸಭೆಯ ಮಧ್ಯದಲ್ಲಿ ಕೌರವರನ್ನು ಕುರಿತು ಹೇಳುವವನಾಗು.

ಏತೇ ಮಂದಾ ಮೃತ್ಯುಪಾಶಾಭಿಪನ್ನಾಃ
ಸಮಾನೀತಾ ಧಾರ್ತರಾಷ್ಟ್ರೇಣ ಮೂಢಾಃ ।
ಇದಂ ಪುನಃ ಕರ್ಮ ಪಾಪೀಯ ಏವ
ಸಭಾಮಧ್ಯೇ ಪಶ್ಯ ವೃತ್ತಂ ಕುರೂಣಾಮ್ ॥೩೯॥

ಮಂದರೂ, ಮೂಢರೂ ಮತ್ತು ಮೃತ್ಯುಪಾಶಕ್ಕೆ ಸಿಲುಕಿದವರೂ ಆದ ಈ ಎಲ್ಲ ರಾಜರು ದುರ್ಯೋಧನನಿಂದ ಕರೆತರಲ್ಪಟ್ಟಿದ್ದಾರೆ. ಕೌರವರ ಸಭೆಯ ಮಧ್ಯದಲ್ಲಿ ಇದೇನು ನಡೆಯಿತೋ ಅದು ಎಲ್ಲದಕ್ಕಿಂತಲೂ ಪಾಪಿಷ್ಠವಾದುದು ಎಂಬುದನ್ನು ನೋಡು.

ಪ್ರಿಯಾಂ ಭಾರ್ಯಾಂ ದ್ರೌಪದೀಂ ಪಾಂಡವಾನಾಂ
ಯಶಸ್ವಿನೀಂ ಶೀಲವೃತ್ತೋಪಪನ್ನಾಮ್ ।
ಯದುಪೈಕ್ಷಂತ ಕುರವೋ ಭೀಷ್ಮಮುಖ್ಯಾಃ
ಕಾಮಾನುಗೇನೋಪರುದ್ಧಾಂ ವ್ರಜಂತೀಮ್ ॥೪೦॥

ಪಾಂಡವರ ಪ್ರಿಯಭಾರ್ಯೆಯಾದ, ಕೀರ್ತಿವಂತಳಾದ, ಶೀಲವೃತ್ತಸಂಪನ್ನಳಾದ ದ್ರೌಪದಿಯು ಕಾಮವಶನಾದ ದುಶ್ಶಾಸನನಿಂದ ತಡೆಯಲ್ಪಟ್ಟು ನಡೆದುಬರುವಾಗ ಭೀಷ್ಮರೇ ಮೊದಲಾದ ಕೌರವರು ಉದಾಸೀನವನ್ನು ಮಾಡಿದರು (ಇದು ಎಲ್ಲಕ್ಕಿಂತಲೂ ಪಾಪಿಷ್ಠವಾದ ಕಾರ್ಯ).

ತಾಂ ಚೇತ್ ತದಾ ತೇ ಸಕುಮಾರವೃದ್ಧಾ
ಅಪಾಲಯಿಷ್ಯನ್ ಕುರವಃ ಸಮೇತಾಃ ।
ಮಮ ಪ್ರಿಯಂ ಧೃತರಾಷ್ಟ್ರೋಽಕರಿಷ್ಯನ್
ಪುತ್ರಾಣಾಂ ಚ ಕೃತಮಸ್ಮಾದ್ ಭವಿಷ್ಯತ್ ॥೪೧॥

ಆಗ ಅವಳನ್ನು ಬಾಲವೃದ್ಧಸಹಿತರಾದ ಕುರುಗಳೆಲ್ಲರೂ ಸೇರಿ ರಕ್ಷಣೆ ಮಾಡಿದ್ದರೆ ಧೃತರಾಷ್ಟ್ರನು ನನಗೆ ಪ್ರಿಯವಾದ ಕಾರ್ಯವನ್ನು ಮಾಡಿರುತ್ತಿದ್ದನು. ಅವನ ಮಕ್ಕಳಿಗೂ ಸಹ ಅದರಿಂದ ಸುಖವುಂಟಾಗುತ್ತಿದ್ದಿತು.

ದುಃಶಾಸನಃ ಪ್ರಾತಿಲೋಮ್ಯಾನ್ನಿನಾಯ
ಸಭಾಮಧ್ಯೇ ಶ್ವಶುರಾಣಾಂ ಚ ಕೃಷ್ಣಾಮ್ ।
ಸಾ ತತ್ರ ದೀನಾ ಕರುಣಾನ್ಯವೋಚತ್
ನಾನ್ಯಂ ಕ್ಷತ್ತುರ್ನಾಥಮವಾಪ ಕಂಚಿತ್ ॥೪೨॥

ದುಶ್ಶಾಸನನು ಪ್ರಾತಿಕಾಮಿಯ ಮೂಲಕ ಮಾವಂದಿರ ಎದುರಿಗೆ ಕೃಷ್ಣೆಯನ್ನು ಸಭಾಮಧ್ಯದಲ್ಲಿ ಎಳೆದು ತಂದನು. ದೀನಳಾದ ಅವಳು ಅಲ್ಲಿ ಕರುಣಾಜನಕವಾದ ಮಾತುಗಳನ್ನಾಡಿದಳು. ಆದರೆ ವಿದುರ ಒಬ್ಬನನ್ನು ಬಿಟ್ಟು ಬೇರೆ ಯಾವ ನಾಥನನ್ನೂ ಪಡೆಯಲಿಲ್ಲ.

**ಕಾರ್ಪಣ್ಯಾದೇವ ಸಹಿತಾಸ್ತತ್ರ ರಾಜಃ**
**ನಾಶಕ್ನುವನ್ ಪ್ರತಿವಕ್ತುಂ ಸಭಾಯಾಮ್ ।**
**ಏಕಃ ಕ್ಷತ್ತಾ ಧರ್ಮ್ಯಮರ್ಥಂ ಬ್ರುವಾಣೋ**
**ಧರ್ಮಂ ಬುದ್ಧ್ವಾ ಪ್ರತ್ಯುವಾಚಾಲ್ಪಬುದ್ಧಿಮ್** ॥೪೩॥

ಅಲ್ಲಿ ನೆರೆದ ರಾಜರು ಸಭೆಯಲ್ಲಿ ಕಾರ್ಪಣ್ಯದಿಂದಲೇ ದ್ರೌಪದಿಗೆ ಪ್ರತಿವಚನವನ್ನು ಕೊಡಲು ಸಾಧ್ಯವಾಗಲಿಲ್ಲ. ವಿದುರನೊಬ್ಬನೇ ಧರ್ಮವನ್ನು ತಿಳಿದವನಾಗಿ ಅಲ್ಪಬುದ್ಧಿಯಾದ ದುರ್ಯೋಧನನನ್ನು ಕುರಿತು ಧರ್ಮವನ್ನೂ ಮತ್ತು ಅರ್ಥವನ್ನೂ ಮಾತನಾಡಿದನು.

**ಅನುಕ್ತ್ವಾ ತಂ ಧರ್ಮಮೇತಂ ಸಭಾಯಾಮ್**
**ಅಥೇಚ್ಛಸೇ ಪಾಂಡವಸ್ಯೋಪದೇಷ್ಟುಮ್** ॥೪೪॥

ನೀನು ಆಗ ಸಭೆಯಲ್ಲಿ ಧರ್ಮದ ಮಾತುಗಳನ್ನಾಡದೆ ಈಗ ಪಾಂಡವರಿಗೆ ಧರ್ಮವನ್ನು ಉಪದೇಶಿಸಲು ಬಯಸುತ್ತಿದ್ದೀಯೆ.

**ಕೃಷ್ಣಾ ತ್ವೇತತ್ ಕರ್ಮ ಚಕಾರ ಶುದ್ಧಂ**
**ಸುದುಷ್ಕರಂ ತತ್ರ ಸಭಾಂ ಸಮೇತ್ಯ ।**
**ಯೇನ ಕೃಚ್ಛ್ರಾತ್ ಪಾಂಡವಾನುಜ್ಜಹಾರ**
**ತಥಾऽऽತ್ಮಾನಂ ನೌರಿವ ಸಾಗರೌಘಾತ್** ॥೪೫॥

ದ್ರೌಪದಿಯು ಆ ಸಭೆಗೆ ಬಂದು ಸುದುಷ್ಕರವಾದ ಶುದ್ಧವಾದ ಕರ್ಮವನ್ನು ಮಾಡಿದಳು. ಅದರಿಂದ ಅವಳು ಪಾಂಡವರನ್ನೂ ಮತ್ತು ತನ್ನನ್ನೂ ಸಹ ಸಾಗರ ಪ್ರವಾಹದಿಂದ ನೌಕೆಯನ್ನು ಎತ್ತುವಂತೆ ಉದ್ಧರಿಸಿದಳು.

ಯದಬ್ರವೀತ್ ಸೂತಪುತ್ರಃ ಸಭಾಯಾಂ
ಪ್ರಾಪ್ತಾಂ ಕೃಷ್ಣಾಂ ಪರಿಷದೋ ವೈ ಸಕಾಶೇ ॥೪೬॥

ನ ತೇ ಗತಿರ್ವಿದ್ಯತೇ ಯಾಜ್ಞಸೇನಿ
ಪ್ರಪದ್ಯೇಥಾ ಧಾರ್ತರಾಷ್ಟ್ರಸ್ಯ ವೇಶ್ಮ ।
ಪರಾಜಿತಾಸ್ತೇ ಪತಯೋ ನ ಸಂತಿ
ಪತಿಂ ಚಾನ್ಯಂ ಭಾಮಿನಿ ತ್ವಂ ವೃಣೀಷ್ವ ॥೪೭॥

ಯೋ ಬೀಭತ್ಸೋರ್ಹೃದಯೇ ಪ್ರೋತ ಆಸೀದ್
ಅಸ್ಥಿ ಚ್ಛಿಂದನ್ ಮರ್ಮಘಾತೀ ಸುಘೋರಃ ।
ಕರ್ಣಾಚ್ಛರೋ ವಾಙ್ಮಯಸ್ತಿಗ್ಮತೇಜಾಃ
ಪ್ರತಿಷ್ಠಿತೋ ಹೃದಯೇ ಫಲ್ಗುನಸ್ಯ ॥೪೮॥

ಸಭೆಯಲ್ಲಿ ದ್ರೌಪದಿಯು ಬಂದಾಗ ಪರಿಷತ್ತಿನ ಎದುರಿನಲ್ಲಿ ಕರ್ಣನು ಯಾಜ್ಞಸೇನಿಯೇ ನಿನಗೆ ಬೇರೆ ಗತಿಯಿಲ್ಲ. ದುರ್ಯೋಧನನ ಮನೆಯನ್ನು ಪ್ರವೇಶಿಸು. ಪರಾಜಿತರಾದ ನಿನ್ನ ಪತಿಗಳು ನಾಶ ಹೊಂದಿದ್ದಾರೆ. ಭಾಮಿನಿಯೇ, ಇನ್ನೊಬ್ಬ ಪತಿಯನ್ನು ವರಿಸುವವಳಾಗು ಎಂದು ಏನು ಹೇಳಿದನೋ ಆ ವಾಙ್ಮಯವಾದ ಕರ್ಣನ ಬಾಣಗಳು ಬಹಳ ಕ್ರೂರಗಳಾಗಿ ಅರ್ಜುನನ ಅಸ್ಥಿಯನ್ನು ಭೇದಿಸಿ, ಘೋರವಾದ ಮರ್ಮಘಾತಿಯಾಗಿ ಅರ್ಜುನನ ಹೃದಯದಲ್ಲಿ ನಾಟಿಹೋಗಿವೆ.

ಕೃಷ್ಣಾಂ ಜಿತಾಂ ವೈ ಪರಿಭರ್ತ್ಸಮಾನೋ
ದುಃಶಾಸನಃ ಕಟುಕಾನಭ್ಯಭಾಷತ್ ।
ಏತೇ ಸರ್ವೇ ಷಂಡತಿಲಾ ವಿನಷ್ಟಾಃ
ಕ್ಷಯಂ ಗತಾ ನರಕಂ ದೀರ್ಘಕಾಲಮ್ ॥೪೯॥

ದ್ರೌಪದಿಯು ದ್ಯೂತದಲ್ಲಿ ಜಿತಳಾದಾಗ ದುಶ್ಶಾಸನನು ಅವಳನ್ನು ಅವಹೇಳನ ಮಾಡುತ್ತಾ ನಿನ್ನ ಪತಿಗಳೆಲ್ಲರೂ ಹುಳಿತುಹೋದ ಎಳ್ಳುಕಾಳುಗಳಂತೆ ಬಹುಕಾಲದವರೆಗೆ ನರಕವನ್ನು ಹೊಂದಿ ವಿನಾಶವನ್ನು ಹೊಂದಿದ್ದಾರೆ ಎಂಬ ಕಟುವಾದ ಮಾತುಗಳನ್ನು ಆಡಿದನು.

ಗಾಂಧಾರರಾಜಃ ಶಕುನಿರ್ನಿಕೃತ್ಯಾ
ಯದಬ್ರವೀದ್ ದ್ಯೂತಕಾಲೇ ಸ ಪಾರ್ಥಮ್ ।
ಪರಾಜಿತೋ ನಕುಲಃ ಕಿಂ ತವಾಸ್ತಿ
ಕೃಷ್ಣಯಾ ತ್ವಂ ದೀವ್ಯ ವೈ ಯಾಜ್ಞಸೇನ್ಯಾ ॥೫೦॥

ಗಾಂಧಾರರಾಜನಾದ ಶಕುನಿಯು ದ್ಯೂತಕಾಲದಲ್ಲಿ ಯುಧಿಷ್ಠಿರನನ್ನು ಕುರಿತು ವಂಚನೆಯಿಂದ ನಕುಲನು ಪರಾಜಿತನಾಗಿದ್ದಾನೆ, ನಿನಗೆ ಇನ್ನೇನು ಉಳಿದಿದೆ, ಯಜ್ಞಸೇನನ ಮಗಳಾದ ಕೃಷ್ಣೆಯನ್ನು ಪಣಕ್ಕಿಟ್ಟು ದ್ಯೂತವಾಡು ಎಂದು ಹೇಳಿದನು.

ಜಾನಾಸಿ ತ್ವಂ ಸಂಜಯ ಸರ್ವಮೇತತ್
ದ್ಯೂತೇ ವಾಕ್ಯಂ ಗರ್ಹ್ಯಮೇವಂ ಯಥೋಕ್ತಮ್ ॥೫೧॥

ಸಂಜಯನೇ, ನೀನು ದ್ಯೂತಕಾಲದಲ್ಲಿ ಆಡಿದ ಎಲ್ಲ ನಿಂದನೀಯವಾದ ಮಾತುಗಳನ್ನೂ ತಿಳಿದಿದ್ದೀಯೆ.

ಸ್ವಯಂ ತ್ವಹಂ ಪ್ರಾರ್ಥಯೇ ತತ್ರ ಗಂತುಂ
ಸಮಾಧಾತುಂ ಕಾರ್ಯಮೇತದ್ ವಿಪನ್ನಮ್ ।
ಜಾನಾಸಿ ತ್ವಂ ಧಾರ್ತರಾಷ್ಟ್ರಸ್ಯ ಮೋಹಂ
ದುರಾತ್ಮನಃ ಪಾಪವಶಾನುಗಸ್ಯ ॥೫೨॥

ಆದರೂ ನಾನೇ ಹಸ್ತಿನಪುರಕ್ಕೆ ಹೋಗಿ ಈ ಕೆಟ್ಟುಹೋದ ಕಾರ್ಯವನ್ನು ಸರಿಮಾಡಲು ಬಯಸುತ್ತೇನೆ. ಆದರೆ ದುರಾತ್ಮನಾದ ದುರ್ಯೋಧನ ಮೋಹವನ್ನೂ ಪಾಪವಶನಾದ ದುರ್ಯೋಧನನನ್ನು ಅನುಸರಿಸುವ ಧೃತರಾಷ್ಟ್ರನನ್ನೂ ನೀನು ತಿಳಿದಿದ್ದೀಯೆ.

ಅಹಾಪಯಿತ್ವಾ ಯದಿ ಪಾಂಡವಾರ್ಥಂ
ಶಮಂ ಕುರೂಣಾಮಪಿ ಚೇಚ್ಚರೇಯಮ್ ।
ಪುಣ್ಯಂ ಚ ಮೇ ಸ್ಯಾಚ್ಚರಿತಂ ಮಹೋದಯಂ
ಮುಚ್ಯೇರಂಶ್ಚ ಕುರವೋ ಮೃತ್ಯುಪಾಶಾತ್ ॥೫೩॥

ಪಾಂಡವರ ಹಿತವನ್ನು ಹಾಳುಮಾಡದೆ, ಕುರುಗಳಿಗೆ ನಾನು ಸಂಧಿಯನ್ನು ಉಪದೇಶಿಸಲು ಸಾಧ್ಯವಾದರೆ ನನಗೆ ಬಹಳ ಪುಣ್ಯವು ಉಂಟಾಗುತ್ತದೆ. ದೊಡ್ಡ ಭಾಗ್ಯೋದಯವು ಉಂಟಾಗುವಂತೆ ಮಾಡಿದಂತಾಗುತ್ತದೆ. ಕುರುಗಳು ಮೃತ್ಯುಪಾಶದಿಂದ ವಿಮುಕ್ತರಾದಾರು.

ಅಪಿ ಮೇ ವಾಚಂ ಭಾಷಮಾಣಸ್ಯ ಕಾವ್ಯಾಂ
ಧರ್ಮಾರಾಮಾಮರ್ಥವತೀಮಹಿಂಸ್ರಾಮ್ ।
ಅವೇಕ್ಷೇರನ್ ಧಾರ್ತರಾಷ್ಟ್ರಾಃ ಸಮರ್ಥಾ
ಮಾಂ ಚ ಪ್ರಾಪ್ತಂ ಕೌರವಾಃ ಪೂಜಯೇಯುಃ ॥೫೪॥

ಧರ್ಮಯುಕ್ತವಾಗಿ ಅವರ ಅರ್ಥಸಾಧಕವಾಗಿ ಅಹಿಂಸಕವಾದ ಮಧುರವಾಗಿ ಮಾತನಾಡುವ ನನ್ನನ್ನೂ ಧಾರ್ತರಾಷ್ಟ್ರರು ಸಮರ್ಥರಾಗಿ ಕೇಳಿ ಅಲ್ಲಿಗೆ ಪ್ರಾಪ್ತನಾದ ನನ್ನನ್ನೂ ಕೌರವರು ಪೂಜಿಸಿದರೆ (ಅವರಿಗೆ ಶುಭವೇ ಆಗುತ್ತದೆ).

ಅತೋಽನ್ಯಥಾ ರಥಿನಾ ಫಲ್ಗುನೇನ
ಭೀಮೇನ ಚೈವಾಹವದಂಸಿತೇನ ।
ಪರಾಜಿತಾನ್ ಧಾರ್ತರಾಷ್ಟ್ರಾನ್ ಸ್ಮ ವಿದ್ಧಿ
ಪ್ರದಹ್ಯಮಾನಾನ್ ಕರ್ಮಣಾ ಸ್ವೇನ ಪಾಪಾನ್ ॥೫೫॥

ಹಾಗೆ ಮಾಡದಿದ್ದರೆ ಧೃತರಾಷ್ಟ್ರ ಪುತ್ರರು ರಥಿಕನಾದ ಅರ್ಜುನನಿಂದಲೂ, ಯುದ್ಧಸಜ್ಜಿತನಾದ ಭೀಮನಿಂದಲೂ ಪರಾಜಿತರಾಗಿ ತಮ್ಮ ಪಾಪಕರ್ಮದಿಂದಲೇ ದಹಿಸಲ್ಪಡುತ್ತಾರೆ ಎಂಬುದನ್ನು ತಿಳಿ.

ಪುರಾ ಜಿತಾನ್ ಪಾಂಡವೇಯಾಂಸ್ತು ವಾಚೋ
ರೌದ್ರಾ ರೂಕ್ಷಾ ಭಾಷತೇ ಧಾರ್ತರಾಷ್ಟ್ರಃ ।
ಗದಾಹಸ್ತೋ ಭೀಮಸೇನೋಽಪ್ರಮತ್ತೋ
ದುರ್ಯೋಧನಂ ಸ್ಮಾರಯಿತಾ ಹಿ ಕಾಲೇ ॥೫೬॥

ಹಿಂದೆ ಪಾಂಡವರು ದ್ಯೂತದಲ್ಲಿ ಜಿತರಾದಾಗ ದುರ್ಯೋಧನನು ಅವರಿಗೆ ಉಗ್ರವಾದ ಮತ್ತು ಒರಟಾದ ಮಾತುಗಳನ್ನು ಆಡಿದನು. ಗದಾಹಸ್ತನಾದ ಭೀಮಸೇನನು

ಆಲಸ್ಯವಿಲ್ಲದೆ ಯೋಗ್ಯವಾದ ಕಾಲದಲ್ಲಿ ದುರ್ಯೋಧನನಿಗೆ ಆ ಮಾತುಗಳನ್ನು ಸ್ಮರಣೆಗೆ ತಂದುಕೊಡುವವನಾಗುವನು.

ಸುಯೋಧನೋ ಮನ್ಯುಮಯೋ ಮಹಾದ್ರುಮಃ
ಸ್ಕಂಧಃ ಕರ್ಣಃ ಶಕುನಿಸ್ತಸ್ಯ ಶಾಖಾಃ ।
ದುಃಶಾಸನಃ ಪುಷ್ಪಫಲೇ ಸಮೃದ್ಧೇ
ಮೂಲಂ ರಾಜಾ ಧೃತರಾಷ್ಟ್ರೋಽಮನೀಷೀ ॥೫೭॥

ಸುಯೋಧನನು ಕ್ರೋಧಾತ್ಮಕನಾದ ದೊಡ್ಡವೃಕ್ಷ. ಕರ್ಣನು ಮೊದಲು ಒಡೆಯುವ ದೊಡ್ಡಕೊಂಬೆ. ಶಕುನಿಯು ಆ ದೊಡ್ಡಕೊಂಬೆಯಿಂದ ಒಡೆಯುವ ಶಾಖೆಗಳು. ದುಶ್ಶಾಸನನು ಸಮೃದ್ಧವಾದ ಪುಷ್ಪ-ಫಲಗಳು. ಆ ವೃಕ್ಷದ ಬುಡವು ಅವಿವೇಕಿಯಾದ ಧೃತರಾಷ್ಟ್ರರಾಜ.

ಯುಧಿಷ್ಠಿರೋ ಧರ್ಮಮಯೋ ಮಹಾದ್ರುಮಃ
ಸ್ಕಂಧೋಽರ್ಜುನೋ ಭೀಮಸೇನೋಽಸ್ಯ ಶಾಖಾಃ ।
ಮಾದ್ರೀಸುತೌ ಪುಷ್ಪಫಲೇ ಸಮೃದ್ಧೇ
ಮೂಲಂ ತ್ವಹಂ ಬ್ರಹ್ಮ ಚ ಬ್ರಾಹ್ಮಣಾಶ್ಚ ॥೫೮॥

ಯುಧಿಷ್ಠಿರನು ಧರ್ಮಾತ್ಮಕವಾದ ಒಂದು ದೊಡ್ಡವೃಕ್ಷ. ಅರ್ಜುನನು ಮೊದಲನೆಯ ದೊಡ್ಡಕೊಂಬೆ. ಭೀಮಸೇನನು ಅದರಿಂದ ಹೊರಡುವ ಶಾಖೆಗಳು. ಮಾದ್ರಿಯ ಮಕ್ಕಳು ಸಮೃದ್ಧವಾದ ಫಲ-ಪುಷ್ಪಗಳು. ವೇದ, ಬ್ರಾಹ್ಮಣರು ಮತ್ತು ನಾನು ಆ ವೃಕ್ಷದ ಬುಡ.

ವನಂ ರಾಜಾ ಧೃತರಾಷ್ಟ್ರಃ ಸಪುತ್ರಃ
ಸಿಂಹಾ ವನೇ ಸಂಜಯ ಪಾಂಡವೇಯಾಃ ।
ಸಿಂಹಾಭಿಗುಪ್ತಂ ನ ವನಂ ವಿನಶ್ಯೇತ್
ಸಿಂಹೋ ನ ನಶ್ಯೇತ ವನಾಭಿಗುಪ್ತಃ ॥೫೯॥

ಪುತ್ರರಿಂದ ಕೂಡಿದ ಧೃತರಾಷ್ಟ್ರರಾಜನು ಒಂದು ವನ. ಸಂಜಯನೇ, ಪಾಂಡುಪುತ್ರರು ವನದಲ್ಲಿರುವ ಸಿಂಹಗಳು. ಸಿಂಹಗಳಿಂದ ರಕ್ಷಿತವಾದರೆ ವನವು

ನಾಶವನ್ನು ಹೊಂದಲಾರದು. ವನದಿಂದ ರಕ್ಷಿತವಾದರೆ ಸಿಂಹಗಳೂ ನಾಶವನ್ನು ಹೊಂದಲಾರವು.

ನಿರ್ವನೋ ವಧ್ಯತೇ ಸಿಂಹೋ ನಿಃಸಿಂಹಂ ವಧ್ಯತೇ ವನಮ್ ।
ತಸ್ಮಾತ್ ಸಿಂಹೋ ವನಂ ರಕ್ಷೇದ್ ವನಂ ಸಿಂಹಂ ಚ ಪಾಲಯೇತ್ ॥

ವನವು ಇಲ್ಲದಿದ್ದರೆ ಸಿಂಹವು ಕೊಲ್ಲಲ್ಪಡುತ್ತದೆ. ಸಿಂಹಗಳಿಲ್ಲದಿದ್ದರೆ ವನವೂ ನಾಶವನ್ನು ಹೊಂದುತ್ತದೆ. ಆದ್ದರಿಂದ ಸಿಂಹವು ವನವನ್ನು ರಕ್ಷಿಸಬೇಕು, ವನವೂ ಸಿಂಹವನ್ನು ರಕ್ಷಿಸಬೇಕು.

ವನಂ ರಾಜಾ ಧೃತರಾಷ್ಟ್ರೋ ವನೇ ಸಿಂಹಾಶ್ಚ ಪಾಂಡವಾಃ ।
ಮಾ ವನಂ ಛಿಂಧಿ ಸಸಿಂಹಂ ಮಾ ಸಿಂಹಾ ನೀನಶುರ್ವನಾತ್ ॥೬೧॥

ಧೃತರಾಷ್ಟ್ರರಾಜನು ವನ. ಪಾಂಡವರು ವನದಲ್ಲಿರುವ ಸಿಂಹಗಳು. ಸಿಂಹದಿಂದ ಸಹಿತವಾದ ವನವನ್ನು ಛೇದಿಸಬೇಡ. ಸಿಂಹಗಳು ವನದಿಂದ ನಾಶವನ್ನು ಹೊಂದುವುದೂ ಬೇಡ.

ಲತಾ ಮತಾ ಧಾರ್ತರಾಷ್ಟ್ರಾಃ ಸಾಲಾಃ ಸಂಜಯ ಪಾಂಡವಾಃ ।
ನ ಲತಾ ವರ್ಧತೇ ಜಾತು ಮಹಾದ್ರುಮಮನಾಶ್ರಿತಾ ॥೬೨॥

ಧೃತರಾಷ್ಟ್ರಪುತ್ರರು ಲತೆ ಇದ್ದಂತೆ. ಸಂಜಯನೇ, ಪಾಂಡವರು ಸಾಲವೃಕ್ಷಗಳಿದ್ದಂತೆ. ಮಹಾವೃಕ್ಷವನ್ನು ಆಶ್ರಯಿಸದಿದ್ದರೆ ಲತೆಯು ಎಂದೂ ಅಭಿವೃದ್ಧಿಯನ್ನು ಹೊಂದುವುದಿಲ್ಲ.

ಸ್ಥಿತಾಃ ಶಿಶ್ರೂಷಿತುಂ ಪಾರ್ಥಾಃ ಸ್ಥಿತಾ ಯೋದ್ಧುಮರಿಂದಮಾಃ ।
ಯತ್ಕೃತ್ಯಂ ಧೃತರಾಷ್ಟ್ರಸ್ಯ ತತ್ ಕರೋತು ನರಾಧಿಪಃ ॥೬೩॥

ಪಾಂಡವರು ಧೃತರಾಷ್ಟ್ರನ ಸೇವೆಯನ್ನು ಮಾಡಲು ಸಿದ್ಧರಾಗಿದ್ದಾರೆ. ಅರಿಂದಮರಾದ ಅವರು ಯುದ್ಧವನ್ನು ಮಾಡಲೂ ಸಿದ್ಧರಾಗಿದ್ದಾರೆ. ಧೃತರಾಷ್ಟ್ರನಿಗೆ ಯಾವ ಕಾರ್ಯವು ಆಗಬೇಕಾಗಿದೆಯೋ ಅದನ್ನು ರಾಜನಾದ ಅವನು ಮಾಡಲಿ.

ಸ್ಥಿತಾಃ ಶಮೇ ಮಹಾತ್ಮಾನಃ ಪಾಂಡವಾ ಧರ್ಮಚಾರಿಣಃ ।
ಯೋಧಾಃ ಸಮರ್ಥಾಸ್ತದ್‌ವಿದ್ವನ್ ಆಚಕ್ಷೀಥಾ ಯಥಾತಥಮ್ ॥೬೪॥

ಮಹಾತ್ಮರೂ, ಧರ್ಮಚಾರಿಗಳೂ ಆದ ಪಾಂಡವರು ಶಾಂತಿಸಂಧಾನದಲ್ಲಿ ಸ್ಥಿತರಾಗಿದ್ದಾರೆ. ಅವರು ಸಮರ್ಥರಾದ ಯೋಧರೂ ಆಗಿದ್ದಾರೆ. ಆದ್ದರಿಂದ ಎಲೈ ವಿದ್ವಾಂಸನೇ, ಸತ್ಯವಾದ ವಿಷಯವನ್ನು ನೀನು ಧೃತರಾಷ್ಟ್ರನಿಗೆ ತಿಳಿಸು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಅಷ್ಟಾವಿಂಶೋಽಧ್ಯಾಯಃ ॥

॥ ಸಂಜಯಯಾನಪರ್ವಣಿ ನವಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಇಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

## ಮಹಾಭಾರತತಾತ್ಪರ್ಯನಿರ್ಣಯಃ

ಧೃತರಾಷ್ಟ್ರಂ ಯಯೌ ತಂ ಚ ವಿನಿಂದ್ಯ ಪ್ರಯಯೌ ಗೃಹಮ್ ।
ನಿಂದಿತಃ ಸಂಜಯೇನಾಸಾವಾಹೂಯ ವಿದುರಂ ನಿಶಿ ॥೪೧॥

ಸಂಜಯನು ಧೃತರಾಷ್ಟ್ರನ ಬಳಿಗೆ ಹೋಗಿ ನಿಂದಿಸಿ ತನ್ನ ಮನೆಗೆ ಹೊರಟು ಹೋದ. ಸಂಜಯನಿಂದ ನಿಂದಿಸಲ್ಪಟ್ಟ ಧೃತರಾಷ್ಟ್ರ ರಾತ್ರಿಯಲ್ಲಿ ವಿದುರನನ್ನು ಕರೆಸಿಕೊಂಡ.

★ ★ ★ ★ ★

## ಇಪ್ಪತ್ತೊಂಬತ್ತನೆಯ ಅಧ್ಯಾಯ

ಉಪಪ್ಲಾವ್ಯದಿಂದ ಹೊರಟ ಸಂಜಯನಿಗೆ ಯುಧಿಷ್ಠಿರನ ಸಂದೇಶ

ಸಂಜಯಃ

ಆಮಂತ್ರಯೇ ತ್ವಾಂ ನರದೇವದೇವ
ಗಚ್ಛಾಮ್ಯಹಂ ಪಾಂಡವ ಸ್ವಸ್ತಿ ತೇಽಸ್ತು ।
ಕಚ್ಚಿನ್ನ ವಾಚಾ ವ್ರಜಿನಂ ಹಿ ಕಿಂಚಿತ್
ಉಚ್ಚಾರಿತಂ ಮೇ ಮನಸೋಽಭಿಷಂಗಾತ್ ॥೧॥

ಸಂಜಯ– ಪಾಂಡವನೇ, ನರದೇವನಾದ ಯುಧಿಷ್ಠಿರನೇ, ನಾನು ನಿನ್ನ ಅನುಮತಿಯನ್ನು ತೆಗೆದುಕೊಂಡು ಹೋಗಿಬರುತ್ತೇನೆ. ನಿನಗೆ ಮಂಗಳವಾಗಲಿ. ನಾನು ನನ್ನ ಮನಸ್ಸಿನ ವ್ಯಗ್ರತೆಯಿಂದ ನನ್ನ ಮಾತಿನಿಂದ ನಿನಗೆ ಏನಾದರೂ ಅಪಚಾರವನ್ನು ಮಾಡಿಲ್ಲವಷ್ಟೆ?

ಜನಾರ್ದನಂ ಭೀಮಸೇನಾರ್ಜುನೌ ಚ
ಮಾದ್ರೀಸುತೌ ಸಾತ್ಯಕಿಂ ಚೇಕಿತಾನಮ್ ।
ಆಮಂತ್ರ್ಯ ಗಚ್ಛಾಮಿ ಶಿವಂ ಸುಖಂ ವಃ
ಸೌಮ್ಯೇನ ಮಾಂ ಪಶ್ಯತ ಚಕ್ಷುಷಾ ನೃಪಾಃ ॥೨॥

ಜನಾರ್ದನನನ್ನು, ಭೀಮಸೇನಾರ್ಜುನರನ್ನು, ಮಾದ್ರೀಪುತ್ರನನ್ನೂ, ಸಾತ್ಯಕೀ, ಚೇಕಿತಾನನನ್ನೂ ಆಮಂತ್ರಿಸಿ (ಅವರ ಅನುಮತಿಯನ್ನು ಪಡೆದು) ಹೋಗಿ ಬರುತ್ತೇನೆ. ನಿಮಗೆ ಮಂಗಳವು ಮತ್ತು ಸುಖವು ಉಂಟಾಗಲಿ. ಎಲೈ ರಾಜರೇ, ಸೌಮ್ಯದೃಷ್ಟಿಯಿಂದ ನನ್ನನ್ನು ನೋಡಿ.

ಯುಧಿಷ್ಠಿರಃ

ಅನುಜ್ಞಾತಃ ಸಂಜಯ ಸ್ವಸ್ತಿ ಗಚ್ಛ
ನ ನೋ ಕಾರ್ಷೀರಪ್ರಿಯಂ ಜಾತು ಕಿಂಚಿತ್ ।
ವಿದ್ಮಶ್ಚ ತ್ವಾಂ ತೇ ಚ ವಯಂ ಚ ಸರ್ವೇ
ಶುದ್ಧಾತ್ಮಾನಂ ಮಧ್ಯಗತಂ ಸಭಾಸ್ಥಮ್ ॥೩॥

ಯುಧಿಷ್ಠಿರ– ಸಂಜಯನೇ, ನಿನಗೆ ಅನುಮತಿಯನ್ನು ನೀಡಿದ್ದೇನೆ. ಸುಖವಾಗಿ ಹೋಗಿ ಬಾ. ನೀನು ನಮಗೆ ಯಾವ ಅಪ್ರಿಯವನ್ನೂ ಮಾಡಿಲ್ಲ. ನಾವೆಲ್ಲರೂ ನಿನ್ನನ್ನು ಶುದ್ಧಮನಸ್ಸುಳ್ಳವನೆಂದೂ ಮಧ್ಯಸ್ಥನಾಗಿ ಸಭೆಯಲ್ಲಿರುವವನೆಂದೂ ಚೆನ್ನಾಗಿ ತಿಳಿದಿದ್ದೇವೆ.

ಆಪ್ತೋ ದೂತಃ ಸಂಜಯ ಸುಪ್ರಿಯೋಽಸಿ
ಕಲ್ಯಾಣವಾನ್ ಶೀಲವಾಂಸ್ತುಷ್ಟಿಮಾಂಶ್ಚ ।
ನ ಮುಹ್ಯೇಸ್ತ್ವಂ ಸಂಜಯ ಜಾತು ಮತ್ಯಾ
ನ ಚ ಕ್ರುದ್ಧ್ಯೇರುಚ್ಯಮಾನೋ ದುರುಕ್ತೈಃ ॥೪॥

ಸಂಜಯನೇ, ಆಪ್ತದೂತನಾದ ನೀನು ನಮಗೆ ಬಹಳ ಪ್ರಿಯನಾದವನು. ನೀನು ಕಲ್ಯಾಣಶೀಲ ಮತ್ತು ತೃಪ್ತಿಯುಳ್ಳವನು. ಸಂಜಯನೇ, ನಿನ್ನ ಬುದ್ಧಿಗೆ ಎಂದೂ ಮೋಹವು ಉಂಟಾಗುವುದಿಲ್ಲ. ಕೆಟ್ಟ ಮಾತುಗಳನ್ನಾಡಿದರೂ ನೀನು ಕೋಪಗೊಳ್ಳುವುದಿಲ್ಲ.

ನ ಮರ್ಮಗಾಂ ಜಾತು ವಕ್ತಾಽಸಿ ರೂಕ್ಷಾಂ
ನೋತ ಸ್ತುತಿಂ ಕಟುಕಾಂ ನೋತ ಶುಷ್ಕಾಮ್ ।
ಧರ್ಮಾರಾಮಾಮರ್ಥವತೀಮಹಿಂಸ್ರಾಮ್
ಏತಾಂ ವಾಚಂ ತವ ಜಾನೀಮ ಸೂತ ॥೫॥

ಮರ್ಮವನ್ನು ಚುಚ್ಚುವ ಒರಟು ಮಾತುಗಳನ್ನು ನೀನು ಎಂದೂ ಆಡುವುದಿಲ್ಲ. ಅಥವಾ ಕೆಟ್ಟದಾದ ಅಥವಾ ಶುಷ್ಕವಾದ ಸ್ತುತಿಯನ್ನೂ ಮಾಡುವುದಿಲ್ಲ. ಎಲೈ ಸೂತನೇ, ನಿನ್ನ ಮಾತು ಧರ್ಮದಲ್ಲಿಯೇ ಸಂತೋಷಪಡುವುದೆಂದೂ, ಅರ್ಥಸಿದ್ಧಿಗೆ ಕಾರಣವೆಂದೂ, ಅಹಿಂಸಾರೂಪವೆಂದೂ ನಾವು ತಿಳಿದಿದ್ದೇವೆ.

ತ್ವಮೇವ ನಃ ಪ್ರಿಯತಮೋಽಸಿ ದೂತ
ಇಹಾಗಚ್ಛೇದ್ ವಿದುರೋ ವಾ ದ್ವಿತೀಯಃ ।
ಅಭೀಕ್ಷ್ಣದೃಷ್ಟೋಽಸಿ ಪುರಾ ಹಿ ನಸ್ತ್ವಂ
ಧನಂಜಯಸ್ಯಾತ್ಮಸಮಃ ಸಖಾಽಸಿ ॥೬॥

ನೀನೇ ನಮಗೆ ಪರಮಪ್ರಿಯನಾದ ದೂತನಾಗಿದ್ದೀಯೆ. ಇಲ್ಲದಿದ್ದರೆ ವಿದುರನು ಎರಡನೆಯವನಾಗಿ ಇಲ್ಲಿಗೆ ಬರಬೇಕಾಗಿದ್ದಿತು. ನಾವು ನಿನ್ನನ್ನು ಬಹಳ ಸಮಯದಿಂದ ನೋಡುತ್ತಿದ್ದೇವೆ. ನೀನು ಅರ್ಜುನನಿಗೆ ಆತ್ಮಸಮನಾದ ಸ್ನೇಹಿತನಾಗಿದ್ದೀಯೆ.

ಇತೋ ಗತ್ವಾ ಸಂಜಯ ಕ್ಷಿಪ್ರಮೇವ
ಉಪಾತಿಷ್ಠೇಥಾ ಬ್ರಾಹ್ಮಣಾನ್ ಯೇ ತದರ್ಹಾಃ ।
ವಿಶುದ್ಧಕರ್ತ್ಯಾಂಶ್ಚರಣೋಪಪನ್ನಾನ್
ಕುಲೇ ಜಾತಾನ್ ಸರ್ವಧರ್ಮೋಪಪನ್ನಾನ್ ॥೭॥

ಸ್ವಾಧ್ಯಾಯಿನೋ ಬ್ರಾಹ್ಮಣಾ ಭಿಕ್ಷವಶ್ಚ
ತಪಸ್ವಿನೋ ಯೇ ಚ ನಿತ್ಯಾ ವನೇಷು ।

ಅಭಿವಾದ್ಯ ತಾನ್ ಮದ್ವಚನೇನ ವೃದ್ಧಾನ್
ತಥೈವ ತಾನ್ ಕುಶಲಂ ತಾತ ಪೃಚ್ಛೇಃ ॥೮॥

ಸಂಜಯನೇ, ನೀನು ಇಲ್ಲಿಂದ ಕ್ಷಿಪ್ರವಾಗಿ ಹೋಗಿ ವಿಶುದ್ಧವಾದ ಕಾರ್ಯವನ್ನು ಮಾಡುವವರೂ, ಒಳ್ಳೆಯ ಆಚರಣೆಯಿಂದ ಕೂಡಿದವರೂ, ಸತ್ಕುಲಪ್ರಸೂತರೂ, ಸರ್ವಧರ್ಮೋಪಪನ್ನರೂ ಆದ ಸ್ತೋತ್ರಕ್ಕೆ ಅರ್ಹರಾದ ಬ್ರಾಹ್ಮಣರನ್ನು ಸ್ತೋತ್ರ ಮಾಡುವವನಾಗು. ಸ್ವಾಧ್ಯಾಯಶೀಲರಾದ ಬ್ರಾಹ್ಮಣರು, ಭಿಕ್ಷುಗಳು, ಯಾವಾಗಲೂ ವನದಲ್ಲಿ ವಾಸಮಾಡುವ ತಪಸ್ವಿಗಳು ಅಂತಹ ವೃದ್ಧರನ್ನು ನನ್ನ ಮಾತಿನಂತೆ ನಮಸ್ಕರಿಸಿ ಅವರ ಕ್ಷೇಮವನ್ನು ವಿಚಾರಿಸು.

ಪುರೋಹಿತಂ ಧೃತರಾಷ್ಟ್ರಸ್ಯ ರಾಜ್ಞಃ
ತಥಾऽऽಚಾರ್ಯಾನ್ ಋತ್ವಿಜೋ ಯೇ ಚ ತಸ್ಯ ।
ತಾಂಶ್ಚೈವ ತ್ವಂ ಸಹಿತಾನ್ ವೈ ಯಥಾವತ್
ಸಂಗಚ್ಛೇಥಾಃ ಕುಶಲೇನೈವ ಸೂತ ॥೯॥

ಎಲೈ ಸೂತನೇ, ಧೃತರಾಷ್ಟ್ರರಾಜನ ಪುರೋಹಿತ, ಅವನ ಆಚಾರ್ಯರು ಮತ್ತು ಋತ್ವಿಕ್ಕುಗಳು ಯಾರಿದ್ದಾರೆಯೋ ಅವರೆಲ್ಲರನ್ನೂ ನೀನು ಒಟ್ಟಿಗೆ ನೋಡಿ ಯಥಾಯೋಗ್ಯವಾಗಿ ಕುಶಲಪ್ರಶ್ನೆಯ ಜೊತೆಯಲ್ಲಿ ಸಮಾಗಮವನ್ನು ಹೊಂದುವವನಾಗು.

ಸುಶ್ರೋತ್ರಿಯಾ ಯೇ ಚ ವಸಂತಿ ವೃದ್ಧಾ
ಮನಸ್ವಿನಃ ಶೀಲಬಲೋಪಪನ್ನಾಃ ।
ಆಶಂಸಂತೋऽಸ್ಮಾಕಮನುಸ್ಮರಂತೋ
ಯಥಾಶಕ್ತಿ ಧರ್ಮಮಾತ್ರಂ ಚರಂತಃ ॥೧೦॥

ತತೋऽವ್ಯಗ್ರಸ್ತನ್ಮನಾಃ ಪ್ರಾಂಜಲಿಶ್ಚ
ಕುರ್ಯಾ ನಮೋ ಮದ್ವಚನೇನ ತೇಭ್ಯಃ ॥೧೧॥

ಯಾವ ಒಳ್ಳೆಯ ಶ್ರೋತ್ರಿಯರೂ, ಜಿತಮನಸ್ಕರೂ, ಶೀಲ-ಬಲಗಳಿಂದ ಕೂಡಿದವರೂ, ನಮ್ಮನ್ನು ಸ್ಮರಣೆ ಮಾಡಿ ಯಾವಾಗಲೂ ನಮಗೆ ಶುಭವನ್ನು ಆಶಿಸುವವರೂ, ಕೇವಲ ಧರ್ಮವನ್ನೇ ಯಥಾಶಕ್ತಿ ಆಚರಿಸುವವರೂ ಇದ್ದಾರೆಯೋ

ಅಂತಹ ವೃದ್ಧರನ್ನು ಅವ್ಯಗ್ರನಾಗಿ ಅವರಲ್ಲಿಯೇ ಮನಸ್ಸಿಟ್ಟು ಕೈಗಳನ್ನು ಮುಗಿದು ನನ್ನ ಮಾತಿನಂತೆ ಅವರಿಗೆ ನಮಸ್ಕಾರವನ್ನು ಮಾಡು.

ಯೇ ಜೀವಂತಿ ವ್ಯವಹಾರೇಣ ರಾಷ್ಟ್ರೇ
ಪಶೂಂಶ್ಚ ಯೇ ಪಾಲಯಂತೋ ವಸಂತಿ ।
ಕೃಷೀವಲಾ ಪ್ರಭೃತಯೋ ಯೇ ಚ ಲೋಕಾಃ
ತೇಷಾಂ ಸರ್ವೇಷಾಂ ಕುಶಲಂ ಸ್ಮ ಪೃಚ್ಛೇಃ ॥೧೨॥

ಕುರುರಾಜ್ಯದಲ್ಲಿ ಯಾರು ವಿತ್ತವ್ಯವಹಾರದಿಂದ ಜೀವನವನ್ನು ಮಾಡುತ್ತಾರೆಯೋ, ಪಶುಪಾಲನೆಯನ್ನು ಮಾಡಿಕೊಂಡು ವಾಸಮಾಡುತ್ತಾರೆಯೋ ಮತ್ತು ಕೃಷೀವಲರು ಮೊದಲಾದ ಜನರು ಯಾರು ಇದ್ದಾರೆಯೋ ಅವರೆಲ್ಲರ ಕ್ಷೇಮವನ್ನು ಕೇಳುವವನಾಗು.

ಆಚಾರ್ಯ ಇಷ್ಟೋ ನಯಗೋ ವಿಧೇಯೋ
ವೇದಾನಧೀಪ್ಸುರ್ಬ್ರಹ್ಮಚರ್ಯಂ ಚಚಾರ ।
ಯೋಽಸ್ತ್ರಂ ಚತುಷ್ಪಾತ್ ಸಕಲಂ ಚಕ್ರೇ
ದ್ರೋಣಃ ಪ್ರಸನ್ನೋಽಭಿವಾದ್ಯಃ ತ್ವಯಾಽಸೌ ॥೧೩॥

ನಮಗೆ ಪ್ರಿಯರಾದ, ನೀತಿಯನ್ನು ತಿಳಿದ, ವಿಧೇಯರಾದ, ವೇದಾಧ್ಯಯನ ಶೀಲರಾದ, ಬ್ರಹ್ಮಚರ್ಯ ವ್ರತಸ್ಥರಾದ ದ್ರೋಣರು, ನಾಲ್ಕುಪಾದಗಳಿಂದ ಕೂಡಿದ ಧರ್ಮವನ್ನು ಆಚರಿಸುವವರು ಮತ್ತು ಸಕಲ ಅಸ್ತ್ರಗಳನ್ನು ಬಲ್ಲವರು, ನೀನು ಸಂತೋಷದಿಂದ ಅವರಿಗೆ ನಮಸ್ಕಾರವನ್ನು ಮಾಡು.

ಅಧೀತ್ಯ ವೇದಾಂಶ್ಚರಣೋಪಪನ್ನೋ
ಯೋಽಸ್ತ್ರಂ ಚತುಷ್ಪಾತ್ ಪುನರೇವ ಚಕ್ರೇ ।
ಗಂಧರ್ವಪುತ್ರಪ್ರತಿಮಂ ತರಸ್ವಿನಂ
ತಮಶ್ವತ್ಥಾಮಾನಂ ಕುಶಲಂ ಸ್ಮ ಪೃಚ್ಛೇಃ ॥೧೪॥

ಯಾವ ಅಶ್ವತ್ಥಾಮರು ವೇದಗಳನ್ನು ಅಧ್ಯಯನ ಮಾಡಿ ಸದಾಚಾರ ಸಂಪನ್ನರಾಗಿ ನಾಲ್ಕುಪಾದಗಳಿಂದ ಕೂಡಿದ ಅಸ್ತ್ರವಿದ್ಯೆಯನ್ನು ಚೆನ್ನಾಗಿ ಕಲಿತರೋ ಅಂತಹ ಗಂಧರ್ವಪುತ್ರಸದೃಶರಾದ, ಧೈರ್ಯಶಾಲಿಗಳಾದ ಅಶ್ವತ್ಥಾಮರನ್ನು ಕುಶಲವನ್ನು ಕೇಳುವವನಾಗು.

ಶಾರದ್ವತಸ್ಯಾವಸಥಂ ಸ್ಮ ಗತ್ವಾ
ಮಹಾರಥಸ್ಯಾಸ್ತ್ರವಿದಾಂ ವರಸ್ಯ ।
ತ್ವಂ ಮಾಮಭೀಕ್ಷ್ಣಂ ಪರಿಕೀರ್ತಯನ್ ವೈ
ಕೃಪಸ್ಯ ಪಾದೌ ಸಂಜಯ ಪಾಣಿನಾ ಸ್ಪೃಶೇಃ ॥೧೫॥

ಕೃಪಾಚಾರ್ಯರ ಬಿಡಾರಕ್ಕೆ ಹೋಗಿ ಮಹಾರಥರೂ, ಅಸ್ತ್ರಜ್ಞರಲ್ಲಿ ಶ್ರೇಷ್ಠರೂ ಆದ ಅವರ ಪಾದಗಳನ್ನು ಮತ್ತೆ ಮತ್ತೆ ನನ್ನ ಹೆಸರನ್ನು ಹೇಳುತ್ತಾ ಹಿಡಿಯುವವನಾಗು.

ಯಸ್ಮಿನ್ ಶೌರ್ಯಮಾನೃಶಂಸ್ಯಂ ತಪಶ್ಚ
ಪ್ರಜ್ಞಾ ಶೀಲಂ ಶ್ರುತರೂಪೇ ಧೃತಿಶ್ಚ ।
ಪಾದೌ ಗೃಹೀತ್ವಾ ಕುರುಸತ್ತಮಸ್ಯ
ಭೀಷ್ಮಸ್ಯ ಮಾಂ ತತ್ರ ನಿವೇದಯೇಥಾಃ ॥೧೬॥

ಯಾರಲ್ಲಿ ಶೌರ್ಯವು, ದಯೆಯು, ತಪಸ್ಸು, ಪ್ರಜ್ಞೆಯು, ಶೀಲವು, ವಿದ್ಯೆ ರೂಪಗಳು, ಧೈರ್ಯವು ಇವೆಯೋ ಅಂತಹ ಕುರುಶ್ರೇಷ್ಠರಾದ ಭೀಷ್ಮರ ಪಾದಗಳನ್ನು ಹಿಡಿದು ನನ್ನನ್ನು ಅಲ್ಲಿ ನಿವೇದಿಸು.

ಪ್ರಜ್ಞಾಚಕ್ಷುರ್ಯಃ ಪ್ರಣೇತಾ ಕುರೂಣಾಂ
ಬಹುಶ್ರುತೋ ವೃದ್ಧಸೇವೀ ಮನೀಷೀ ।
ತಸ್ಮೈ ರಾಜ್ಞೇ ಸ್ಥವಿರಾಯಾಭಿವಾದ್ಯ
ಆಚಕ್ಷೀಥಾಃ ಸಂಜಯ ಮಾಮರೋಗಮ್ ॥೧೭॥

ಯಾರು ಪ್ರಜ್ಞಾಚಕ್ಷುವೋ, ಕುರುಗಳಿಗೆ ಅಧಿನಾಯಕನೋ, ಬಹುಶ್ರುತನೋ, ವೃದ್ಧಸೇವಿಯೋ, ಮೇಧಾವಿಯೋ ಅಂತಹ ವೃದ್ಧನಾದ ಧೃತರಾಷ್ಟ್ರರಾಜನಿಗೆ ನಮಸ್ಕಾರವನ್ನು ಮಾಡಿ ಎಲೈ ಸಂಜಯನೇ, ನಾನು ಆರೋಗ್ಯದಿಂದಿದ್ದೇನೆ ಎಂದು ಹೇಳು.

ಜ್ಯೇಷ್ಠಃ ಪುತ್ರೋ ಧೃತರಾಷ್ಟ್ರಸ್ಯ ಮಂದೋ
ಮೂರ್ಖಃ ಶಠಃ ಸಂಜಯ ಪಾಪಶೀಲಃ ।
ಯಸ್ಯಾಪರಾಧಃ ಪೃಥಿವೀಂ ಯಾತಿ ಸರ್ವಾಂ
ಸುಯೋಧನಂ ಕುಶಲಂ ತಾತ ಪೃಚ್ಛೇಃ ॥೧೮॥

ಧೃತರಾಷ್ಟ್ರನ ಜ್ಯೇಷ್ಠಪುತ್ರನಾದ ಮಂದನೂ, ಮೂರ್ಖನೂ, ದ್ವೇಷಿಯೂ, ಪಾಪಶೀಲನೂ ಮತ್ತು ಯಾವನ ಅಪರಾಧವು ಭೂಮಿಯನ್ನೆಲ್ಲಾ ವ್ಯಾಪಿಸಿದೆಯೋ ಎಲೈ ಸಂಜಯನೇ, ಅಂತಹ ಸುಯೋಧನನ ಕುಶಲಪ್ರಶ್ನೆಯನ್ನು ಮಾಡು.

ಭ್ರಾತಾ ಕನೀಯಾನಪಿ ತಸ್ಯ ಮಂದಃ
ತಥಾಶೀಲಃ ಸಂಜಯ ಸೋಽಪಿ ಶಶ್ವತ್ ।
ಮಹೇಷ್ವಾಸಃ ಶೂರತಮಃ ಕುರೂಣಾಂ
ದುಃಶಾಸನಃ ಕುಶಲಂ ತಾತ ಪೃಚ್ಛೇಃ ॥೧೯॥

ಪ್ರೀತಿಪಾತ್ರನಾದ ಸಂಜಯನೇ, ಅವನ ತಮ್ಮನಾದ ಮಂದನಾದ, ಯಾವಾಗಲೂ ಅಣ್ಣನ ಸ್ವಭಾವವನ್ನೇ ಹೊಂದಿರುವ, ಮಹಾಧನುರ್ಧಾರಿಯಾದ, ಕುರುಗಳಲ್ಲಿ ಅತ್ಯಂತ ಶೂರನಾದ ದುಶ್ಶಾಸನನ ಕುಶಲಪ್ರಶ್ನೆಯನ್ನು ಮಾಡು.

ತಥೈವ ಯೇ ತಸ್ಯ ವಶಾನುಗಾಶ್ಚ
ಯೇ ಚಾಪ್ಯನ್ಯೇ ಪಾರ್ಥಿವಾಶ್ಚ ಪ್ರಧಾನಾಃ ।
ತೇಭ್ಯೋ ಯಥಾರ್ಹಂ ಕುಶಲಂ ಚ ಸರ್ವಂ
ತ್ವಯಾ ವಾಚ್ಯಂ ಮದ್ವಚನಾಚ್ಚ ಸೂತ ॥೨೦॥

ಎಲೈ ಸೂತನೇ, ಹಾಗೆಯೇ, ಅವನಿಗೆ ವಶವರ್ತಿಗಳಾದ ಬೇರೆ ಯಾವ ಪ್ರಧಾನರಾದ ರಾಜರಿದ್ದಾರೆಯೋ ಅವರಿಗೆ ಯಥಾಯೋಗ್ಯವಾಗಿ ನನ್ನ ಮಾತಿನಂತೆ ನಮ್ಮ ಕುಶಲವನ್ನು ಹೇಳುವವನಾಗು.

ವೃಂದಾರಕಂ ಕವಿಮರ್ಥೇಷ್ವಮೂಢಂ
ಮಹಾಪ್ರಾಜ್ಞಂ ಸರ್ವಧರ್ಮೋಪಪನ್ನಮ್ ।
ನ ತಸ್ಯ ಯುದ್ಧಂ ರೋಚತೇ ವೈ ಕದಾಚಿತ್
ವೈಶ್ಯಾಪುತ್ರಂ ಕುಶಲಂ ತಾತ ಪೃಚ್ಛೇಃ ॥೨೧॥

ಕ್ಷತ್ರಿಯ ವೃಂದವನ್ನು ಸಂತೋಷಪಡಿಸುವ ಕವಿಯಾದ, ಅರ್ಥಗಳ ವಿಷಯದಲ್ಲಿ ಮೋಹವನ್ನು ಹೊಂದದಿರುವ, ಮಹಾಪ್ರಾಜ್ಞನೂ, ಸರ್ವಧರ್ಮೋಪಪನ್ನನೂ ಆದ ಯಾವ ಅವನಿಗೆ ಯುದ್ಧವು ಎಂದೂ ರುಚಿಸುವುದಿಲ್ಲವೋ ಅಂತಹ ವೈಶ್ಯಾಪುತ್ರನಾದ ಯುಯುತ್ಸುವನ್ನು ಕುಶಲಪ್ರಶ್ನೆಯನ್ನು ಮಾಡು.

ನಿಕೃಂತನೇ ದೇವನೇ ಯೋಽದ್ವಿತೀಯಃ
ಛನ್ನೋಪಾಯಃ ಸಾಧುದೇವೀ ಮತಾಕ್ಷಃ ।
ಯೋ ದುರ್ಜಯೋ ದೇವಿತವ್ಯೇ ನ ಸಂಖೇ
ಸ ಚಿತ್ರಸೇನಃ ಕುಶಲಂ ತಾತ ವಾಚ್ಯಃ ॥೨೨॥

ಶತ್ರುಸಂಹಾರದಲ್ಲಿಯೂ, ಅಕ್ಷಕ್ರೀಡೆಯಲ್ಲಿಯೂ ಯಾವನು ಅದ್ವಿತೀಯನೋ, ಯಾವನ ಸಾಮಾದಿ ಉಪಾಯಗಳು ಯಾರಿಗೂ ತಿಳಿಯುವುದಿಲ್ಲವೋ, ಯಾವನು ಅಕ್ಷವಿದ್ಯೆಯನ್ನು ತಿಳಿದು ಪ್ರಾಮಾಣಿಕವಾಗಿ ಆಡುತ್ತಾನೆಯೋ, ಯಾವನು ಅಕ್ಷಕ್ರೀಡೆಯಲ್ಲಿ ಮಾತ್ರ ದುರ್ಜಯನೋ ಯುದ್ಧದಲ್ಲಲ್ಲವೋ ಅಂತಹ ಚಿತ್ರಸೇನನಿಗೆ ನಮ್ಮ ಕುಶಲವನ್ನು ಹೇಳುವವನಾಗು.

ಯಸ್ಯ ಕಾಮೋ ವರ್ತತೇ ನಿತ್ಯಮೇವ
ನಾನ್ಯಃ ಶಮಾದ್ ಭಾರತಾನಾಮಿತಿ ಸ್ಮ ।
ಸ ಬಾಹ್ಲಿಕಾನಾಮೃಷಭೋ ಮನೀಷೀ
ಪುನರ್ಯಥಾ ಮಾಽಭಿವದೇತ್ ಪ್ರಸನ್ನಃ ॥೨೩॥

ತ್ವಯಾ ಸ ವಾಚ್ಯಃ ಸಂಜಯ ಸಾಧುಶೀಲಃ ॥೨೪॥

ಯಾವನಿಗೆ, ಭಾರತರಿಗೆ ಸಂಧಿಯನ್ನು ಬಿಟ್ಟು ಬೇರೆ ಮಾರ್ಗವೇ ಇಲ್ಲ ಎಂದು ನಿತ್ಯವೂ ಆಸೆ ಇದೆಯೋ ಅಂತಹ ಮನೀಷಿಯೂ, ಬಾಹ್ಲಿಕದೇಶದ ಶ್ರೇಷ್ಠರಾಜನೂ ಸಾಧುಶೀಲನೂ ಆದ ಬಾಹ್ಲಿಕನು ಪುನಃ ಸಂತೋಷದಿಂದ ನನ್ನ ಜೊತೆಯಲ್ಲಿ ಮಾತನಾಡುವಂತೆ ನೀನು ಅವನಿಗೆ ಕುಶಲವನ್ನು ಹೇಳಬೇಕು.

ಗುಣೈರನೇಕೈಃ ಪ್ರವರೈಶ್ಚ ಯುಕ್ತೋ
ವಿಜ್ಞಾನವಾನ್ ನೈವ ಚ ನಿಷ್ಠುರೋ ಯಃ ।
ಸ್ನೇಹಾದಮರ್ಷಂ ಸಹತೇ ಸದೈವ
ಸ ಸೋಮದತ್ತಃ ಪೂಜನೀಯೋ ಮತೋ ಮೇ ॥೨೫॥

ಅನೇಕ ಶ್ರೇಷ್ಠಗುಣಗಳಿಂದ ಕೂಡಿದವನೂ, ಒಳ್ಳೆಯ ಜ್ಞಾನವುಳ್ಳವನೂ, ನಿಷ್ಠುರವಾಗಿ ಮಾತನಾಡದವನೂ, ಸ್ನೇಹದಿಂದ ಕೋಪವನ್ನು ತಡೆದುಕೊಳ್ಳುವವನೂ ಆದ ಆ ಸೋಮದತ್ತನು ಪೂಜೆಗೆ ಯೋಗ್ಯನೆಂದು ನನ್ನ ಅಭಿಪ್ರಾಯ.

ಅರ್ಹತ್ತಮಃ ಕುರುಷು ಸ ಸೌಮದತ್ತಿಃ
ಸ ನೋ ಭ್ರಾತಾ ಸಂಜಯ ಮತ್ಸಖಾ ಚ ।
ಮಹೇಷ್ವಾಸೋ ರಥಿನಾಮುತ್ತಮೋಽರ್ಹಃ
ಸಹಾಮಾತ್ಯಃ ಕುಶಲಂ ತಾತ ವಾಚ್ಯಃ ॥೨೬॥

ಎಲೈ ಸಂಜಯನೇ, ಪ್ರೀತಿಪಾತ್ರನೇ, ಸೋಮದತ್ತನ ಮಗನು (ಭೂರಿಶ್ರವನು) ಕುರುಗಳಲ್ಲಿ ಬಹಳ ಪೂಜ್ಯನಾದವನು. ಅವನು ನಮ್ಮ ಸಹೋದರ ಮತ್ತು ಸ್ನೇಹಿತನಾದವನು. ಮಹಾಧನುರ್ಧಾರಿ, ರಥಿಗಳಲ್ಲಿ ಶ್ರೇಷ್ಠಮತ್ತು ಯೋಗ್ಯನಾದವನು. ಪ್ರೀತಿಪಾತ್ರನೇ, ಅಮಾತ್ಯರಿಂದೊಡಗೂಡಿದ ಅವನಿಗೆ ನಮ್ಮ ಕುಶಲವನ್ನು ಹೇಳಬೇಕು.

ಭೂರಿಶ್ರವಾಸ್ತಾತ ನಿಪಾತಯೋಧೀ
ಮಹೇಷ್ವಾಸೋ ರಥಿನಾಮುತ್ತಮೋಽಗ್ರ್ಯಃ ।
ಗತ್ವಾ ಸ್ಮ ತಂ ಮದ್ವಚನೇನ ಬ್ರೂಯಾಃ
ಶಲ್ಯಂ ತಥಾ ಮದ್ವಚನಾತ್ ಪ್ರತೀತಃ ॥೨೭॥

ಪ್ರೀತಿಪಾತ್ರನೇ, ಭೂರಿಶ್ರವನು ಶತ್ರುಗಳ ಮೇಲೆ ಎರಗಿ ಯುದ್ಧವನ್ನು ಮಾಡುವವನು. ಮಹಾಧನುರ್ಧಾರಿ. ರಥಿಗಳಲ್ಲಿ ಉತ್ತಮನಾದವನು ಮತ್ತು ಶ್ರೇಷ್ಠನಾದವನು. ನೀನು ಹೋಗಿ ಅವನ ಬಳಿ ಅದರಂತೆ, ಶಲ್ಯನ ಬಳಿಯೂ ಸಹ ಸಂತೋಷದಿಂದ ನನ್ನ ಮಾತಿನಂತೆ ಕ್ಷೇಮವನ್ನು ಹೇಳುವವನಾಗು.

ಮಹೇಷ್ವಾಸೋ ರಥಿನಾಮುತ್ತಮೋಽಗ್ರ್ಯಃ
ಸಮಃಶಲೋ ರಕ್ಷಿತಾ ಪೃಷ್ಠಮಸ್ಯ ।
ಹ್ರೀನಿಷೇಧೋ ದೇವಿತಾ ಯೋ ಮತಾಕ್ಷಃ
ಸತ್ಯವ್ರತಃ ಪುರುಮಿತ್ರೋ ಜಯಶ್ಚ ॥೨೮॥

ಯೇ ಪ್ರಸ್ಥಾನಂ ತತ್ರ ಮೇ ನಾಭ್ಯನಂದನ್
ತೇಷಾಂ ಸರ್ವೇಷಾಂ ಕುಶಲಂ ತಾತ ಪೃಚ್ಛೇಃ ॥೨೯॥

ಮಹಾಧನುರ್ಧಾರಿಯೂ, ರಥಿಕರಲ್ಲಿ ಉತ್ತಮನೂ, ಶ್ರೇಷ್ಠನೂ, ಯಾವಾಗಲೂ ಸಮನಾಗಿರುವವನೂ ಆದ ಶಲನು ಅವನನ್ನು ಹಿಂದುಗಡೆಯಿಂದ ರಕ್ಷಿಸುವವನು.

ಅವನು ದಾಕ್ಷಿಣ್ಯಸ್ವಭಾವದವನೂ, ಅಕ್ಷವಿದ್ಯೆಯನ್ನು ಬಲ್ಲವನೂ ಮತ್ತು ಆಡುವವನೂ ಆಗಿದ್ದಾನೆ. ಅದರಂತೆ ಸತ್ಯವ್ರತ, ಪುರುಮಿತ್ರ ಮತ್ತು ಜಯ ಇವರೂ ಸಹ ನಾನು ಹಸ್ತಿನಪುರದಿಂದ ಹೊರಡುವುದನ್ನು ಅಭಿನಂದಿಸಲಿಲ್ಲ. ಪ್ರೀತಿಪಾತ್ರನೇ, ಅವರೆಲ್ಲರ ಕುಶಲಪ್ರಶ್ನೆಯನ್ನು ಮಾಡು.

ಯೇ ಚೈವಾನ್ಯೇ ಕುರುಮುಖ್ಯಾ ಯುವಾನಃ
ಪುತ್ರಾಃ ಪೌತ್ರಾ ಭ್ರಾತರಶ್ಚೈವ ಯೇ ನಃ ।
ಯಂ ಯಮೇಷಾಂ ಮನ್ಯಸೇ ಯೇನ ಯೋಗ್ಯಂ
ತತ್ತತ್ ಪ್ರೋಚ್ಯಾನಾಮಯಂ ಸೂತ ವಾಚ್ಯಾಃ ॥೩೦॥

ಇನ್ನು ಉಳಿದ ಯುವಕರಾದ ಯಾವ ಕುರುಮುಖ್ಯರಿದ್ದಾರೆಯೋ ಮತ್ತು ನಮ್ಮ ಪುತ್ರರೂ, ಪೌತ್ರರೂ ಮತ್ತು ಸಹೋದರರೂ ಯಾರಿದ್ದಾರೆಯೋ ಮತ್ತು ನೀನು ಯಾರು ಯಾರನ್ನು ಯೋಗ್ಯರೆಂದು ಭಾವಿಸುತ್ತೀಯೋ ಎಲೈ ಸೂತನೇ, ಅವರೆಲ್ಲರಿಗೂ ಆಯಾ ವಿಷಯಗಳನ್ನು ಹೇಳಿ ನಮ್ಮ ಕ್ಷೇಮವನ್ನು ಹೇಳುವವನಾಗು.

ಯೇ ರಾಜಾನಃ ಪಾಂಡವಾಯೋಧನಾಯ
ಸಮಾನೀತಾ ಧಾರ್ತರಾಷ್ಟ್ರೇಣ ಕೇಚಿತ್ ।
ವಸಾತಯಃ ಸಾಲ್ವಕಾಃ ಕೇಕಯಾಶ್ಚ
ತಥಾಽಂಬಷ್ಠಾ ಯೇ ತ್ರಿಗರ್ತಾಶ್ಚ ಮುಖ್ಯಾಃ ॥೩೧॥

ಪ್ರಾಚ್ಯೋದೀಚ್ಯಾ ದಾಕ್ಷಿಣಾತ್ಯಾಶ್ಚ ಶೂರಾಃ
ತಥಾ ಪ್ರತೀಚ್ಯಾಃ ಪಾರ್ವತೀಯಾಶ್ಚ ಸರ್ವೇ ।
ಯೇ ಚಾನೃಶಂಸಾಃ ಶೀಲವೃತ್ತೋಪಪನ್ನಾಃ
ತೇಷಾಂ ಸರ್ವೇಷಾಂ ಕುಶಲಂ ತಾತ ಪೃಚ್ಛೇಃ ॥೩೨॥

ಯಾವ ರಾಜರನ್ನು ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡಲು ದುರ್ಯೋಧನನು ಕರೆದುಕೊಂಡು ಬಂದಿದ್ದಾನೆಯೋ ಅಂತಹ ವಸಾತಿಗಳು, ಸಾಲ್ವಕರು, ಕೇಕಯರು, ಅಂಬಷ್ಠರು, ಮುಖ್ಯರಾದ ತ್ರಿಗರ್ತರು, ಪೂರ್ವ-ಉತ್ತರ ಮತ್ತು ದಕ್ಷಿಣ ದಿಕ್ಕುಗಳಿಂದ ಬಂದ ಶೂರರು, ಹಾಗೆಯೇ ಪಶ್ಚಿಮ ದಿಕ್ಕಿನ ಪರ್ವತ

ಪ್ರದೇಶದಿಂದ ಬಂದ ಎಲ್ಲರೂ ಯಾರು ಮೃದುಸ್ವಭಾವದವರೂ, ಒಳ್ಳೆಯ ಶೀಲ ಮತ್ತು ನಡತೆಯುಳ್ಳವರೂ ಆಗಿದ್ದಾರೆಯೋ ಅವರೆಲ್ಲರ ಕುಶಲವನ್ನು ಪ್ರಶ್ನೆ ಮಾಡುವವನಾಗು.

ಹಸ್ತ್ಯಾರೋಹಾ ರಥಿನಃ ಸಾದಿನಶ್ಚ
ಪದಾತಯಶ್ಚಾಂತಭೂರ್ತಾ ಮಹಾಂತಃ ।
ಆಖ್ಯಾಯ ಮಾಂ ಕುಶಲಿನಂ ಸ್ಮ ನಿತ್ಯಮ್
ಅನಾಮಯಂ ಪರಿಪೃಚ್ಛೇಃ ಸಮಗ್ರಾನ್ ॥೩೩॥

ರಥಿಕರೂ, ಗಜಾರೋಹಿಗಳೂ, ಅಶ್ವಾರೋಹಿಗಳೂ ಮತ್ತು ಸೇನೆಯಲ್ಲಿ ಅಂತಭೂರ್ತರಾದ ಪದಾತಿಗಳು ಮಹಾನುಭಾವರು ಯಾರಿದ್ದಾರೆಯೋ ಅವರೆಲ್ಲರಿಗೂ ನಾನು ಯಾವಾಗಲೂ ಕ್ಷೇಮದಿಂದಿದ್ದೇನೆಂದು ಹೇಳಿ ಅವರ ಆರೋಗ್ಯವನ್ನು ವಿಚಾರಿಸುವವನಾಗು.

ತಥಾ ರಾಜ್ಞೋ ಹ್ಯರ್ಥಯುಕ್ತಾನಮಾತ್ಯಾನ್
ದೌವಾರಿಕಾನ್ ಯೇ ಚ ಸೇನಾಂ ನಯಂತಿ ।
ಆಯವ್ಯಯೌ ಯೇ ಗಣಯಂತಿ ನಿತ್ಯಮ್
ಅರ್ಥಾಂಶ್ಚ ಯೇ ಮಹತಶ್ಚಿಂತಯಂತಿ ॥೩೪॥

ಆಖ್ಯಾಯ ಮಾಂ ಕುಶಲಿನಂ ಸ್ಮ ನಿತ್ಯಮ್
ಅನಾಮಯಂ ಪರಿಪೃಚ್ಛೇಃ ಸಮಗ್ರಾನ್ ॥೩೫॥

ಹಾಗೆಯೇ ರಾಜನ ಹಿತವನ್ನೇ ಚಿಂತಿಸುವ ಅಮಾತ್ಯರು, ದ್ವಾರಪಾಲಕರು, ಸೇನಾನಾಯಕರು, ನಿತ್ಯವೂ ಧನವನ್ನೇ ಚಿಂತಿಸುವ ಮಹಾತ್ಮರಾದ ಆಯವ್ಯಯವನ್ನು ಎಣಿಸುವ ಗಣಕರು ಇವರಿಗೆ ನನ್ನ ಕ್ಷೇಮವನ್ನು ಹೇಳಿ ಅವರೆಲ್ಲರ ಕುಶಲವನ್ನು ವಿಚಾರಿಸು.

ಗಾಂಧಾರರಾಜಃ ಶಕುನಿಃ ಪಾರ್ವತೀಯೋ
ನಿಕರ್ತನೇ ಯೋऽದ್ವಿತೀಯೋऽಕ್ಷದೇವೀ ।
ಮಾನಂ ಕುರ್ವನ್ ಧಾರ್ತರಾಷ್ಟ್ರಸ್ಯ ಸೂತ
ಮಿಥ್ಯಾಬುದ್ಧೇಃ ಕುಶಲಂ ತಾತ ಪೃಚ್ಛೇಃ ॥೩೬॥

ಗಾಂಧಾರರಾಜನಾದ ಶಕುನಿಯು ಪರ್ವತಪ್ರದೇಶದಿಂದ ಬಂದವನು. ಶತ್ರುಸಂಹಾರದಲ್ಲಿ ಮತ್ತು ಆಕ್ಷಕ್ರೀಡೆಯಲ್ಲಿ ಅವನು ಅದ್ವಿತೀಯನಾದವನು. ಮೋಸದ ಬುದ್ಧಿಯುಳ್ಳ ದುರ್ಯೋಧನನಿಗೆ ಅವನು ಯಾವಾಗಲೂ ಸನ್ಮಾನವನ್ನು ಮಾಡುವವನು. ಪ್ರೀತಿಪಾತ್ರನೇ, ಅಂತಹ ಶಕುನಿಯ ಕುಶಲಪ್ರಶ್ನೆಯನ್ನು ಮಾಡು.

ಯಃ ಪಾಂಡವಾನೇಕರಥೇನ ವೀರಃ
ಸಮುತ್ಸಹತ್ಯಪ್ರಧೃಷ್ಯಾನ್ ವಿಜೇತುಮ್ ।
ಯೋ ಮುಹ್ಯತಾಂ ಮೋಹಯಿತಾऽದ್ವಿತೀಯೋ
ವೈಕರ್ತನಃ ಕುಶಲಂ ತಸ್ಯ ಪೃಚ್ಛೇಃ ॥೩೭॥

ಯಾವ ವೀರನು ಸೋಲಿಸಲು ಸಾಧ್ಯವಿಲ್ಲದ ಪಾಂಡವರನ್ನು ಏಕರಥದಿಂದ ಸೋಲಿಸಲು ಯಾವಾಗಲೂ ಹವಣಿಸುತ್ತಾನೆಯೋ, ಯಾವನು ಮೋಹಕ್ಕೆ ಒಳಗಾಗುವವರನ್ನು ಮೋಹಪಡಿಸುತ್ತಾನೆಯೋ ಅಂತಹ ಅದ್ವಿತೀಯನಾದ ಕರ್ಣನ ಕುಶಲಪ್ರಶ್ನೆಯನ್ನು ಮಾಡು.

ಸ ಏವ ಭಕ್ತಃ ಸ ಗುರುಃ ಸ ಭೃತ್ಯಃ
ಸ ವೈ ಪಿತಾ ಸ ಚ ಮಾತಾ ಸುಹೃಚ್ಚ ।
ಅಗಾಧಬುದ್ಧಿರ್ವಿದುರೋ ದೀರ್ಘದರ್ಶೀ
ಸ ನೋ ಮಂತ್ರೀ ಕುಶಲಂ ತಂ ಸ್ಮ ಪೃಚ್ಛೇಃ ॥೩೮॥

ಅವನೇ ನಮ್ಮ ಭಕ್ತ. ಅವನೇ ನಮಗೆ ಗುರು. ಅವನೇ ಸೇವಕ. ಅವನೇ ತಂದೆ. ಅವನೇ ತಾಯಿ ಮತ್ತು ಬಂಧು. ಅವನೇ ನಮ್ಮ ಮಂತ್ರಿ. ಅಂತಹ ಅಗಾಧ ಬುದ್ಧಿಯೂ ದೀರ್ಘದರ್ಶಿಯೂ ಆದ ವಿದುರನ ಕುಶಲಪ್ರಶ್ನೆಯನ್ನು ಮಾಡು.

ವೃದ್ಧಾಃ ಸ್ತ್ರಿಯೋ ಯಾಶ್ಚ ಗುಣೋಪಪನ್ನಾ
ಜ್ಞಾಯಂತೇ ನಃ ಸಂಜಯ ಮಾತರಸ್ತಾಃ ।
ತಾಭಿಃ ಸರ್ವಾಭಿಃ ಸಹಿತಾಭಿಃ ಸಮೇತ್ಯ
ಸ್ತ್ರೀಭಿರ್ವೃದ್ಧಾಭಿರಭಿವಾದ್ಯಾನುಪೃಚ್ಛೇಃ ॥೩೯॥

ಎಲೈ ಸಂಜಯನೇ, ಗುಣೋಪಪನ್ನರಾದ ವೃದ್ಧರಾದ ಯಾವ ಸ್ತ್ರೀಯರಿದ್ದಾರೆಯೋ ಅವರೆಲ್ಲರೂ ನನ್ನ ಮಾತೆಯರು. ಅವರೆಲ್ಲರೂ ಒಟ್ಟಗಿರುವಾಗ ಅವರಿಗೆ ನಮಸ್ಕರಿಸಿ ಅವರ ಕುಶಲಪ್ರಶ್ನೆಯನ್ನು ಮಾಡು.

ಕಚ್ಚಿತ್ ಪುತ್ರಾ ಜೀವಪುತ್ರಾಃ ಸುಸಮ್ಯಗ್
ವರ್ತಂತೇ ವೈ ವೃತ್ತಿಮನೃಶಂಸಸ್ವರೂಪಾಮ್ ।
ಇತಿ ಸ್ಮೋಕ್ತ್ವಾ ಸಂಜಯ ಬ್ರೂಹಿ ಪಶ್ಚಾದ್
ಅಜಾತಶತ್ರುಃ ಕುಶಲೀ ಸಪುತ್ರಃ ॥೪೦॥

ನಿಮ್ಮ ಮಕ್ಕಳು ಮತ್ತು ನೀವು ಜೀವಿಕಾದಾನವನ್ನು ಮಾಡಿ ತೆಗೆದುಕೊಂಡ ಮಕ್ಕಳು ಎಲ್ಲರೂ ನಿಮ್ಮಲ್ಲಿ ಮೃದುವಾದ ವೃತ್ತಿಯನ್ನು ಹೊಂದಿದ್ದಾರಷ್ಟೆ? ಎಂದು ಹೇಳಿ ಎಲೈ ಸಂಜಯನೇ, ಅನಂತರ ಪುತ್ರಸಹಿತನಾದ ಅಜಾತಶತ್ರುವು ಕ್ಷೇಮದಿಂದಿದ್ದಾನೆಂದು ಹೇಳು.

ಯಾ ನೋ ಭಾರ್ಯಾಃ ಸಂಜಯ ವೇತ್ಥ ತತ್ರ
ತಾಸಾಂ ಸರ್ವಾಸಾಂ ಕುಶಲಂ ತಾತ ಪೃಚ್ಛೇಃ ।
ಸುಸಂಗುಪ್ತಾಃ ಸುರತಯೋಽನವದ್ಯಾಃ
ಕಚ್ಚಿದ್ ಗೃಹಾನಾವಸಥಾಪ್ರಮತ್ತಾಃ ॥೪೧॥

ಸಂಜಯನೇ, ನಾವು ಪೋಷಿಸಲು ಯೋಗ್ಯರಾದ ಯಾವ ಸ್ತ್ರೀಯರಿದ್ದಾರೆಯೋ ಅವರೆಲ್ಲರ ಕುಶಲಪ್ರಶ್ನೆಯನ್ನು ಮಾಡು. ಒಳ್ಳೆಯ ರಕ್ಷಣೆಯನ್ನು ಹೊಂದಿದವರಾಗಿ, ಒಳ್ಳೆಯ ಸುಖವನ್ನು ಅನುಭವಿಸುವವರಾಗಿ, ನಿರ್ದುಷ್ಟರಾಗಿ ಎಚ್ಚರಿಕೆಯಿಂದ ಗೃಹಗಳಲ್ಲಿ ವಾಸ ಮಾಡುತ್ತಿದೀರಷ್ಟೆ? ಎಂದು ಕೇಳು.

ಕಚ್ಚಿದ್ ವೃತ್ತಿಂ ಶ್ವಶುರೇಷು ಭದ್ರಾಃ
ಕಲ್ಯಾಣೀಂ ವರ್ತಧ್ವಮನೃಶಂಸರೂಪಾಃ ।
ಯಥಾ ಚ ವಃ ಸ್ಯುಃ ಪತಯೋಽನುಕೂಲಾಃ
ತಥಾ ವೃತ್ತಿಮಾತ್ಮನಃ ಸ್ಥಾಪಯಧ್ವಮ್ ॥೪೨॥

ಎಲೌ ಮಂಗಳಸ್ವರೂಪರೇ, ನಿಮ್ಮ ಅತ್ತೆ-ಮಾವಂದಿರ ವಿಷಯದಲ್ಲಿ ಮಾರ್ದವದಿಂದ ಕೂಡಿದ, ಮಂಗಳಕರವಾದ ನಡತೆಯಿಂದ ನಡೆದುಕೊಳ್ಳುತ್ತಿದ್ದೀರಷ್ಟೆ? ಹೇಗೆ ನಿಮ್ಮ ಪತಿಗಳು ನಿಮಗೆ ಅನುಕೂಲವಾಗಿರುತ್ತಾರೆಯೋ ಹಾಗೆ ನಿಮ್ಮ ನಡತೆಯನ್ನು ನೀವು ತಿದ್ದಿಕೊಳ್ಳಿ (ಎಂದು ಹೇಳು).

ಯಾ ನಃ ಸ್ನುಷಾಃ ಸಂಜಯ ವೇತ್ಥ ತತ್ರ
ಪ್ರಾಪ್ತಾಃ ಕುಲೇಭ್ಯಶ್ಚ ಗುಣೋಪಪನ್ನಾಃ ।
ಪ್ರಜಾವತ್ಯೋ ಬ್ರೂಹಿ ಸಮೇತ್ಯ ತಾಶ್ಚ
ಯುಧಿಷ್ಠಿರೋ ವೋಽಭ್ಯವದತ್ ಪ್ರಸನ್ನಃ ॥೪೩॥

ಸಂಜಯನೇ, ನೀನು ಅಲ್ಲಿ ಒಳ್ಳೆಯ ಕುಲದಿಂದ ತಂದ ಗುಣವಂತರಾದ ಮಕ್ಕಳನ್ನು ಹೊಂದಿದ ಯಾವ ನಮ್ಮ ಸೊಸೆಯರನ್ನು ತಿಳಿದಿದ್ದೀಯೋ ಅವರ ಜೊತೆಯಲ್ಲಿ ಸಂಗತನಾಗಿ ಯುಧಿಷ್ಠಿರನು ಪ್ರಸನ್ನನಾಗಿ ನಿಮಗೆ ಕುಶಲವನ್ನು ತಿಳಿಸುತ್ತಿದ್ದಾನೆ ಎಂದು ಹೇಳು.

ಕನ್ಯಾಃ ಸ್ವಜೇಥಾಃ ಸದನೇಷು ಸಂಜಯ
ಅನಾಮಯಂ ಮದ್ವಚನೇನ ಪೃಚ್ಛೇಃ ।
ಕಲ್ಯಾಣಾಃ ವಃ ಸಂತು ಪತಯೋಽನುಕೂಲಾಃ
ಯೂಯಂ ಪತೀನಾಂ ಭವತಾನುಕೂಲಾಃ ॥೪೪॥

ಸಂಜಯನೇ, ಮನೆಗಳಲ್ಲಿರುವ ಚಿಕ್ಕ ಹೆಣ್ಣುಮಕ್ಕಳನ್ನು ಆಲಿಂಗಿಸಿ ನನ್ನ ಮಾತಿನಂತೆ ಅವರ ಕ್ಷೇಮವನ್ನು ಕೇಳು. ನಿಮಗೆ ಕಲ್ಯಾಣವಾಗಲಿ. ಅನುಕೂಲರಾದ ಪತಿಗಳು ದೊರೆಯಲಿ. ನೀವೂ ಸಹ ಪತಿಗಳಿಗೆ ಅನುಕೂಲವಾಗಿರಿ (ಎಂದು ಹೇಳು).

ಸ್ವಲಂಕೃತಾಃ ವಸ್ತ್ರವತ್ಯಃ ಸುಗಂಧಾ
ಅಬೀಭತ್ಸಾಃ ಸುಖಿತಾ ಭೋಗವತ್ಯಃ ।
ಲಘು ಯಾಸಾಂ ದರ್ಶನಂ ವಾಕ್ ಚ ಲಘ್ವೀ
ವೇಶ್ಯಾಸ್ತ್ರಿಯಃ ಕುಶಲಂ ತಾತ ಪೃಚ್ಛೇಃ ॥೪೫॥

ಒಳ್ಳೆಯ ಆಲಂಕಾರವನ್ನು ಮಾಡಿಕೊಂಡು, ವಸ್ತ್ರಗಳನ್ನು ಧರಿಸಿ, ಒಳ್ಳೆಯ ಗಂಧವನ್ನು ಧರಿಸಿ, ಬೀಭತ್ಸರೂಪವನ್ನು ಹೊಂದದಿರುವ ಸುಖಿಗಳೂ,

ಭೋಗವತಿಯರೂ ಆದ ಯಾರ ದರ್ಶನ ಮತ್ತು ಮಾತುಗಳು ಬಹಳ ಚಿಕ್ಕದಾಗಿರುತ್ತವೆಯೋ ಅಂತಹ ವೇಶ್ಯಾಸ್ತ್ರೀಯರನ್ನು ಕುಶಲಪ್ರಶ್ನೆಯನ್ನು ಮಾಡುವವನಾಗು.

ದಾಸೀಪುತ್ರಾ ಯೇ ಚ ದಾಸಾಃ ಕುರೂಣಾಂ
ತದಾಶ್ರಯಾ ಬಹವಃ ಕುಬ್ಜಖಿಂಜಾಃ ।
ಆಖ್ಯಾಯ ಮಾಂ ಕುಶಲಿನಂ ಸ್ಮ ತೇಭ್ಯೋ೬-
ಪ್ಯನಾಮಯಂ ಪರಿಪೃಚ್ಛೇರ್ಜಘನ್ಯಮ್ ॥೪೬॥

ಇನ್ನು ಕುರುಗಳ ಯಾವ ದಾಸರು ಮತ್ತು ದಾಸೀಪುತ್ರರು ಇದ್ದಾರೆಯೋ ಮತ್ತು ಕುರುಗಳನ್ನು ಆಶ್ರಯಿಸಿರುವ ಅನೇಕ ಕುಬ್ಜರು ಮತ್ತು ಏಕಪಾದವುಳ್ಳ ಕುಂಟರು ಇದ್ದಾರೆಯೋ ಅವರಿಗೆ ನಾನು ಕುಶಲದಿಂದಿದ್ದೇನೆ ಎಂದು ಹೇಳಿ ಅನಂತರ ಅವರ ಯೋಗಕ್ಷೇಮವನ್ನು ವಿಚಾರಿಸುವವನಾಗು.

ಕಚ್ಚಿದ್ ವೃತ್ತಿರ್ವರ್ತತೇ ವೈ ಪುರಾಣೇ
ಕಚ್ಚಿದ್ ಭೋಗಾನ್ ಧಾರ್ತರಾಷ್ಟ್ರೋ ದದಾತಿ ।
ಅಂಗಹೀನಾನ್ ಕೃಪಣಾನ್ ವಾಮನಾನ್ ವಾ
ಯಾನಾನೃಶಂಸ್ಯಾದ್ ಧೃತರಾಷ್ಟ್ರೋ ಬಿಭರ್ತಿ ॥೪೭॥

ನಿಮಗೆ ಹಿಂದಿನಂತೆ ಜೀವನವು ನಡೆಯುತ್ತಿದೆಯಷ್ಟೆ? ಯಾವ ಅಂಗಹೀನರನ್ನು, ಕೃಪಣರನ್ನು, ವಾಮನರನ್ನು, ದಯೆಯಿಂದ ಧೃತರಾಷ್ಟ್ರನು ಪೋಷಿಸುತ್ತಿದ್ದನೋ ಅವರಿಗೆ (ಅಂತಹ ನಿಮಗೆ) ದುರ್ಯೋಧನನು ಆಹಾರದ ಭೋಗವಸ್ತುಗಳನ್ನು ಕೊಡುತ್ತಿದ್ದಾನಷ್ಟೆ? (ಎಂದು ಕೇಳು).

ಅಂಧಾಶ್ಚ ಸರ್ವೇ ಬಧಿರಾಸ್ತಥೈವ
ಧ್ವಸ್ತಾಜೀವಾ ಬಹವೋ ಯೇ೬ತ್ರ ಸಂತಿ ।
ಆಖ್ಯಾಯ ಮಾಂ ಕುಶಲಿನಂ ಸ್ಮ ತೇಭ್ಯೋ೬-
ಪ್ಯನಾಮಯಂ ಪರಿಪೃಚ್ಛೇರ್ಜಘನ್ಯಮ್ ॥೪೮॥

ಕುರುಡರು, ಕಿವುಡರು ಮತ್ತು ಜೀವನೋಪಾಯವಿಲ್ಲದ ಬಹಳ ಜನರು ಯಾರು ಅಲ್ಲಿ ಇದ್ದಾರೆಯೋ ಅವರಿಗೆ ನಾನು ಕುಶಲದಿಂದಿದ್ದೇನೆಂದು ಹೇಳಿ ಅನಂತರ ಅವರ ಕ್ಷೇಮವನ್ನು ವಿಚಾರಿಸು.

ಮಾ ಭೈಷ್ಟ ದುಃಖೇನ ಕುಜೀವಿತೇನ
ನೂನಂ ಕೃತಂ ಪರಲೋಕೇಷು ಪಾಪಮ್ ।
ನಿಗೃಹ್ಯ ಶತ್ರೂನ್ ಸುಹೃದೋಽನುಗೃಹ್ಯ
ವಾಸೋಭಿರನ್ನೇನ ಚ ವೋ ಭರಿಷ್ಯೇ ॥೪೯॥

ದುಃಖದಿಂದ ಮತ್ತು ಕೆಟ್ಟ ಜೀವನದಿಂದ ಹೆದರಬೇಡಿ. ನೀವು ಹಿಂದಿನ ಜನ್ಮದಲ್ಲಿ ಖಂಡಿತವಾಗಿ ಪಾಪವನ್ನು ಮಾಡಿದ್ದೀರಿ. ಶತ್ರುಗಳನ್ನು ನಿಗ್ರಹಿಸಿ, ಸುಹೃದರನ್ನು ಅನುಗ್ರಹಿಸಿ, ಅನ್ನ-ವಸ್ತ್ರಗಳನ್ನು ನೀಡಿ ನಿಮ್ಮನ್ನು ಪೋಷಿಸುವೆನು (ಎಂದು ಹೇಳು).

ನ ಚಾಪ್ಯೇತಚ್ಛಕ್ಯಮೇಕೇನ ವಕ್ತುಂ
ನಾನಾದೇಶ್ಯಾ ಬಹವೋ ಜಾತಿಸಂಘಾಃ ।
ವಿಪ್ರೋಷಿತೋ ಬಾಲವದ್ ದ್ರಷ್ಟುಮಿಚ್ಛನ್
ನಮಸ್ಯೇಽಹಂ ಸಂಜಯ ಭೈಮಸೇನಾನ್ ॥೫೦॥

ತೇ ಮೇ ಯಥಾ ವಾಚಮಿಮಾಂ ಯಥೋಕ್ತಾಂ
ತ್ವಯೋಚ್ಯಮಾನಾಂ ಶೃಣುಯುಸ್ತಥಾ ಕುರು ॥೫೧॥

ನಾನಾ ದೇಶಗಳಿಂದ ಬಂದ ಅನೇಕ ಜಾತಿಯ ಸೈನಿಕರು ಮತ್ತು ರಾಜಸಂಘಗಳಲ್ಲಿ ಒಬ್ಬೊಬ್ಬರನ್ನೂ ಹೇಳಲು ಸಾಧ್ಯವಿಲ್ಲ. ನಿಮ್ಮಿಂದ ದೂರ ಹೋದವನಾಗಿ, ಬಾಲರಂತೆ ನಿಮ್ಮನ್ನು ನೋಡಲು ಬಯಸಿ, ಭಯಂಕರ ಸೈನ್ಯವುಳ್ಳ ನಿಮ್ಮನ್ನು ಇಲ್ಲಿಂದಲೇ ನಮಸ್ಕರಿಸುತ್ತೇನೆ ಎಂದು ಹೇಳಿ ಎಲೈ ಸಂಜಯನೇ, ನಾನು ನೀನು ಹೇಳುವ ನನ್ನ ಈ ಮಾತನ್ನು ಅವರು ಕೇಳುವಂತೆ ಮಾಡು.

ಸಂತ್ಯೇವ ಮೇ ಬ್ರಾಹ್ಮಣೇಭ್ಯಃ ಕೃತಾನಿ
ಭೋಗಾನ್ಯಥೋ ವಿಜಯಂ ವರ್ತಯಂತಿ ।
ಪಶ್ಯಾಮ್ಯಹಂ ಯುಕ್ತರೂಪಾಂಸ್ತಥೈವ
ತಾಮೇವ ವಿದ್ಧಿ ಶ್ರಾವಯೇಥಾ ನೃಪಂ ತಮ್ ॥೫೨॥

ನಾನು ಬ್ರಾಹ್ಮಣರಿಗೆ ಹಿಂದೆ ಕೊಟ್ಟ ಭೋಗಗಳು ಇದ್ದೇ ಇವೆ. ಅವರು ನನ್ನ ವಿಜಯವನ್ನು ಆಶಿಸುತ್ತಾರೆ. ಅವರು ಯೋಗ್ಯವಾದ ರೂಪವನ್ನು ಹೊಂದಿ ಇರುವುದನ್ನು ನಾನು ನೋಡುತ್ತಿದ್ದೇನೆ. ಇಂತಹ ಸುದ್ದಿಯನ್ನು ಧೃತರಾಷ್ಟ್ರರಾಜನಿಗೆ ಹೇಳುವವನಾಗು.

ಯೇ ಚಾನ್ಯಥಾ ದುರ್ಬಲಾಃ ಸರ್ವಕಾಲಮ್
ಆತ್ಮನ್ಯೇವ ಪ್ರಯತಂತೇಽಥ ಮೂಢಾಃ ।
ತಾಂಶ್ಚಾಪಿ ತ್ವಂ ಕೃಪಣಾನ್ ಸರ್ವಥೈವ
ಅಸ್ಮದ್ವಾಕ್ಯಾತ್ ಕುಶಲಂ ತಾತ ಪೃಚ್ಛೇಃ ॥೫೩॥

ಎಲೈ ಪ್ರೀತಿಪಾತ್ರನೇ, ಇನ್ನು ಯಾರು ಯಾವಾಗಲೂ ವಿರುದ್ಧವಾಗಿಯೇ ಪ್ರಯತ್ನವನ್ನು ಮಾಡುತ್ತಾರೆಯೋ, ಯಾವಾಗಲೂ ಮೂಢರಾಗಿ ತಮ್ಮಲ್ಲಿಯೇ ಪ್ರಯತ್ನ ಮಾಡುತ್ತಾರೆಯೋ ಅಂತಹ ಕೃಪಣರನ್ನು ಸಂಧಿಸಿ ಕುಶಲವನ್ನು ಕೇಳುವವನಾಗು.

ತೇ ಚಾಪ್ಯನ್ಯೇ ಸಂಶ್ರಿತಾ ಧಾರ್ತರಾಷ್ಟ್ರಾನ್
ನಾನಾದಿಗ್ಭ್ಯೋಽಭ್ಯಾಗತಾಃ ಸೂತಪುತ್ರ ।
ದೃಷ್ಟ್ವಾ ತಾಂಶ್ಚೈವಾರ್ಹತಶ್ಚಾಪಿ ಸರ್ವಾನ್
ಸಂಪೃಚ್ಛೇಥಾಃ ಕುಶಲಂ ಚಾವ್ಯಯಂ ಚ ॥೫೪॥

ಎಲೈ ಸೂತಪುತ್ರನೇ, ಇನ್ನು ನಾನಾ ದೇಶಗಳಿಂದ ದುರ್ಯೋಧನಾದಿಗಳ ಬಳಿಗೆ ಬಂದ ಜನರು ಏನಿದ್ದಾರೆಯೋ ಅವರನ್ನೆಲ್ಲಾ ನೋಡಿ ಅವರಲ್ಲಿ ಯೋಗ್ಯರಾದವರಿಗೆಲ್ಲಾ ಕುಶಲವನ್ನೂ ಮತ್ತು ಕ್ಷೇಮವನ್ನೂ ಕೇಳುವವನಾಗು.

ಏವಂ ಸರ್ವಾನಾಗತಾಭ್ಯಾಗತಾಂಶ್ಚ
ರಾಜ್ಞೋ ದೂತಾನ್ ಸರ್ವದಿಗ್ಭ್ಯೋಽಭ್ಯುಪೇತಾನ್ ।
ಪೃಷ್ಟ್ವಾ ಸರ್ವಾನ್ ಕುಶಲಂ ತಾಂಶ್ಚ ಸೂತ
ಪಶ್ಚಾದಹಂ ಕುಶಲೀ ತಾತ ವಾಚ್ಯಃ ॥೫೫॥

ಸೂತನೇ, ಹೀಗೆ ಎಲ್ಲಾ ದಿಕ್ಕುಗಳಿಂದ ಆಹ್ವಾನಿಸಿ ಬಂದ ಅಥವಾ ತಾವಾಗಿಯೇ ಬಂದ ಎಲ್ಲ ದೂತರನ್ನೂ ನೋಡಿ ಅವರ ಕುಶಲಪ್ರಶ್ನೆಯನ್ನು ಮಾಡಿ ಅನಂತರ ನಾನು ಕ್ಷೇಮದಿಂದಿದ್ದೇನೆಂದು ಅವರಿಗೆ ಹೇಳಬೇಕು.

ನ ಹೀದೃಶಾಃ ಸಂತಿ ಪರೇ ಪೃಥಿವ್ಯಾಂ
ಯೇ ಯೋಧಕಾ ಧಾರ್ತರಾಷ್ಟ್ರೇಣ ಲಬ್ಧಾಃ ।
ಧರ್ಮಸ್ತು ನಿತ್ಯೋ ಮಮ ಧರ್ಮ ಏವ
ಮಹಾಬಲಃ ಶತ್ರುನಿಬರ್ಹಣಾಯ ॥೫೬॥

ಇದಂ ಪುನರ್ವಚನಂ ಧಾರ್ತರಾಷ್ಟ್ರಂ
ಸುಯೋಧನಂ ಸಂಜಯ ಶ್ರಾವಯೇಥಾಃ ॥೫೭॥

ದುರ್ಯೋಧನನು ಎಂತಹ ಯೋಧರನ್ನು ಸಂಪಾದಿಸಿದ್ದಾನೆಯೋ ಅಂತಹ ಇನ್ನೊಬ್ಬ ಯೋಧರು ಭೂಮಿಯಲ್ಲೇ ದೊರೆಯಲಾರರು. ಧರ್ಮವು ನಿತ್ಯವಾದುದು. ನನಗಾದರೂ ಶತ್ರುಸಂಹಾರ ವಿಷಯದಲ್ಲಿ ಧರ್ಮವೇ ಮಹಾಬಲವಾಗಿದೆ. ಸಂಜಯನೇ, ಧೃತರಾಷ್ಟ್ರಪುತ್ರನಾದ ದುರ್ಯೋಧನನನ್ನು ಕುರಿತು ಈ ಮುಂದಿನ ಮಾತನ್ನು ಹೇಳು.

ಯಸ್ತೇ ಶರೀರೇ ಹೃದಯಂ ಧುನೋತಿ
ಕಾಮಃ ಕುರೂನಸಪತ್ನೋಽನುಶಿಷ್ಯಾಮ್ ।
ನ ವಿದ್ಯತೇ ಯುಕ್ತಿರೇತಸ್ಯ ಕಾಚಿ-
ನ್ನೈವಂ ವಿಧಾಸ್ಯಾಮ ಯಥಾ ಪ್ರಿಯಂ ತೇ ॥೫೮॥

ದದಸ್ವ ವಾ ಶಕ್ರಪುರೀಂ ಮಮೈವ
ಯುಧ್ಯಸ್ವ ವಾ ಭಾರತಮುಖ್ಯ ವೀರ ॥೫೯॥

ನಿನ್ನ ಶರೀರದಲ್ಲಿ ಕುರುಗಳನ್ನು ಶತ್ರುರಹಿತನಾಗಿ ನಾನೇ ಅನುಶಾಸನ ಮಾಡುತ್ತೇನೆ ಎಂಬ ಆಸೆಯು ಯಾವ ನಿನ್ನನ್ನು ಅಲುಗಾಡಿಸುತ್ತಿದೆಯೋ ಅದಕ್ಕೆ ಯಾವ ಅವಕಾಶವೂ ಇಲ್ಲ. ನಿನಗೆ ಪ್ರಿಯವಾಗುವಂತೆ ನಾವು ಮಾಡುವುದಿಲ್ಲ. ಭಾರತಮುಖ್ಯವೀರನೇ, ನನಗೆ ಇಂದ್ರಪ್ರಸ್ಥವನ್ನು ಕೊಡು ಅಥವಾ ಯುದ್ಧವನ್ನು ಮಾಡು (ಎಂದು ಹೇಳು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕೋನತ್ರಿಂಶೋಽಧ್ಯಾಯಃ ॥
॥ ಸಂಜಯಯಾನಪರ್ವಣಿ ದಶಮೋಽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಇಪ್ಪತ್ತೊಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

# ಮೂವತ್ತನೆಯ ಅಧ್ಯಾಯ

ಸಂಜಯನಿಗೆ ಯುಧಿಷ್ಠಿರನ ಸಂದೇಶ.
ಐದುಗ್ರಾಮಗಳನ್ನಾದರೂ ಕೊಡುವಂತೆ ಒತ್ತಾಯ.

**ಯುಧಿಷ್ಠಿರಃ**

**ಉತ ಸಂತಮಸಂತಂ ವಾ ಜಡಂ ವೀರಂ ಚ ಸಂಜಯ ।**
**ಉತಾಬಲಂ ಬಲೀಯಾಂಸಂ ಧಾತಾ ಪ್ರಕುರುತೇ ವಶೇ ॥೧॥**

ಯುಧಿಷ್ಠಿರ– ಸಂಜಯನೇ, ಸಜ್ಜನನನ್ನಾಗಲೀ ಅಥವಾ ದುರ್ಜನನನ್ನಾಗಲೀ, ಮೂರ್ಖನನ್ನಾಗಲೀ ಅಥವಾ ವೀರನನ್ನಾಗಲೀ, ದುರ್ಬಲನನ್ನಾಗಲೀ ಅಥವಾ ಪ್ರಬಲನನ್ನಾಗಲೀ ವಿಧಿಯು ತನ್ನ ವಶಪಡಿಸಿಕೊಳ್ಳುತ್ತಾನೆ.

**ಉತ ಬಾಲಾಯ ಪಾಂಡಿತ್ಯಂ ಪಂಡಿತಾಯೋತ ಬಾಲತಾಮ್ ।**
**ದದಾತಿ ಸರ್ವಮೀಶಾನಃ ಪುರಸ್ತಾಚ್ಛುಕ್ರಮುಚ್ಚರನ್ ॥೨॥**

ಅಸಮರ್ಥನಾದ ಸರ್ವನು ಮೊದಲೇ ಶುಭ್ರವಾದುದನ್ನು ಕೊಡುತ್ತಾ ಬಾಲಕನಿಗೆ ಪಾಂಡಿತ್ಯವನ್ನು, ಪಂಡಿತನಿಗೆ ಬಾಲತ್ವವನ್ನು ಕೊಡುತ್ತಾನೆ.

**ಅಲಂ ವಿಜ್ಞಾಪನಾಯಾದ್ಯ ಆಚಕ್ಷೀಥಾ ಯಥಾತಥಮ್ ।**
**ಅಥೋಪಮಂತ್ರಯೇಥಾಸ್ತ್ವಮ್ ಅನ್ಯೋನ್ಯೇನಾತಿಹೃಷ್ಟವತ್ ॥೩॥**

ಸಂಧಿಯನ್ನು ಸಾಧಿಸುವುದಕ್ಕೆ ಏನೇನನ್ನು ಹೇಳಬಹುದೋ ಅವೆಲ್ಲವನ್ನೂ ಸರಿಯಾಗಿ ಹೇಳುವವನಾಗು. ಅನಂತರ ಪರಸ್ಪರವಾಗಿ ಭೇಟಿಯಾಗಿ ಅತಿಸಂತೋಷಗೊಂಡವನಂತೆ ಹೀಗೆ ಮಾತನಾಡು.

**ಗಾವಲ್ಗಣೇ ಕುರೂನ್ ಗತ್ವಾ ಧೃತರಾಷ್ಟ್ರಂ ಮಹಾಬಲಮ್ ।**
**ಅಭಿವಾದ್ಯೋಪಸಂಗೃಹ್ಯ ತತಃ ಪೃಚ್ಛೇರನಾಮಯಮ್ ॥೪॥**

ಗಾವಲ್ಗಣಿಯೇ, ಕುರುದೇಶಕ್ಕೆ ಹೋಗಿ ಮಹಾಬಲನಾದ ಧೃತರಾಷ್ಟ್ರನಿಗೆ ನಮಸ್ಕರಿಸಿ ಅವನ ಪಾದವನ್ನು ಹಿಡಿದು ಅನಂತರ ಕ್ಷೇಮವನ್ನು ಕೇಳು.

ಬ್ರೂಯಾಶ್ಚೈನಂ ಸಮಾಸೀನಂ ಕುರುಭಿಃ ಪರಿವಾರಿತಮ್ ।
ತವೈವ ರಾಜನ್ ವೀರ್ಯೇಣ ಸುಖಂ ಜೀವಂತಿ ಪಾಂಡವಾಃ ॥೫॥

ಕುರುಗಳಿಂದ ಸುತ್ತುವರಿಯಲ್ಪಟ್ಟು ಕುಳಿತಿರುವ ಅವನನ್ನು ಕುರಿತು ರಾಜನೇ, ನಿನ್ನ ಸಾಮರ್ಥ್ಯದಿಂದಲೇ ಪಾಂಡವರು ಸುಖವಾಗಿ ಜೀವಿಸಿದ್ದಾರೆ ಎಂದು ಅವನಿಗೆ ಹೇಳು.

ತವ ಪ್ರಸಾದಾದ್ ಬಾಲಾಸ್ತೇ ಪ್ರಾಪ್ತಾ ರಾಜ್ಯಮರಿಂದಮ ।
ರಾಜ್ಯೇ ತಾನ್ ಸ್ಥಾಪಯಿತ್ವಾಽಗ್ರೇ ನೋಪೇಕ್ಷೇಥಾ ವಿನಶ್ಯತಃ ॥೬॥

ಅರಿಂದಮನೇ, ನಿನ್ನ ಅನುಗ್ರಹದಿಂದಲೇ ಬಾಲಕರಾದ ಅವರು ಹಿಂದೆ ರಾಜ್ಯವನ್ನು ಪಡೆದರು. ಮೊದಲು ಅವರನ್ನು ರಾಜ್ಯದಲ್ಲಿ ಕೂಡಿಸಿ, ಈಗ ಕಷ್ಟದಲ್ಲಿರುವ ಅವರನ್ನು ಉದಾಸೀನ ಮಾಡಬೇಡ.

ಸರ್ವಂ ರಾಜ್ಯಂ ತದೇಕಸ್ಯ ನಾಲಂ ಭರ್ತುಂ ಹಿ ಕಸ್ಯಚಿತ್ ।
ತಸ್ಮಾತ್ ಸಂಗತ್ಯ ಜೀವಾಮೋ ದ್ವಿಷತಾಂ ಮಾ ವಶಂ ಗಮಃ ॥೭॥

ಎಲ್ಲ ರಾಜ್ಯವನ್ನೂ ಯಾವನೇ ಒಬ್ಬನಿಗೂ ಆಳಲು ಸಾಧ್ಯವಿಲ್ಲ. ಆದ್ದರಿಂದ ನಾವು ಒಟ್ಟಿಗೇ ಸೇರಿ ಬದುಕೋಣ. ನೀನು ಶತ್ರುಗಳಿಗೆ ವಶನಾಗಬೇಡ (ಎಂದು ಹೇಳು).

ತಥಾ ಭೀಷ್ಮಂ ಶಾಂತನವಂ ಭಾರತಾನಾಮಮದ್ಯಪಮ್ ।
ಶಿರಸಾ ಚಾಭಿವಂದೇಥಾ ಮಮ ನಾಮ ಪ್ರಕೀರ್ತಯನ್ ॥೮॥

ಹಾಗೆಯೇ, ಶಂತನುವಿನ ಪುತ್ರನಾದ ಭಾರತರಲ್ಲಿ ಮದ್ಯಪಾನ ಮಾಡದಿರುವ ಭೀಷ್ಮರನ್ನು ನನ್ನ ಹೆಸರನ್ನು ಹೇಳುತ್ತಾ ಶಿರಸಾ ನಮಸ್ಕಾರವನ್ನು ಮಾಡು (ರಾಜರು ಪ್ರಾಯಃ ಮದ್ಯಪಾನವನ್ನು ಮಾಡುವವರಾದರೂ ಭೀಷ್ಮರು ವ್ರತಶೀಲರಾದುದರಿಂದ ಮದ್ಯವನ್ನು ಪಾನ ಮಾಡುತ್ತಿರಲಿಲ್ಲ– ವಾದಿರಾಜರು).

ಅಭಿವಾದ್ಯ ಚ ವಕ್ತವ್ಯಃ ತತೋಽಸ್ಮಾಕಂ ಪಿತಾಮಹಃ ॥೯॥

ಭವತಾ ಶಂತನೋರ್ವಂಶೋ ನಿಮಗ್ನಃ ಪುನರುದ್ಧೃತಃ ।
ಸ ತ್ವಂ ಕುರು ತಥಾ ತಾತ ಸ್ವಮತೇನ ಪಿತಾಮಹ ॥೧೦॥

**ಯಥಾ ಜೀವಂತಿ ತೇ ಪೌತ್ರಾಃ ಪ್ರೀತಿಯುಕ್ತಾಃ ಪರಸ್ಪರಮ್ ॥೧೧॥**

ನಮ್ಮ ಪಿತಾಮಹರಾದ ಅವರಿಗೆ ನಮಸ್ಕಾರವನ್ನು ಮಾಡಿ ಮುಳುಗಿ ಹೋಗಿದ್ದ ಶಂತನುವಿನ ವಂಶವು ನಿಮ್ಮಿಂದ ಪುನಃ ಉದ್ಧಾರ ಮಾಡಲ್ಪಟ್ಟಿತು. ಪ್ರೀತಿಪಾತ್ರರಾದ ಪಿತಾಮಹರೇ, ನಿಮ್ಮ ಬುದ್ಧಿಗೆ ತೋರಿದಂತೆ ನಿಮ್ಮ ಮೊಮ್ಮಕ್ಕಳು ಪರಸ್ಪರವಾಗಿ ಪ್ರೀತಿಯಿಂದ ಇರುವಂತೆ ನೀವು ಏನಾದರೂ ಮಾಡಿ ಎಂದು ಹೇಳು.

**ತಥೈವ ವಿದುರಂ ಬ್ರೂಯಾಃ ಕುರೂಣಾಂ ಮಂತ್ರಧಾರಿಣಮ್ ।**
**ಅಯುದ್ಧಂ ಸೌಮ್ಯ ಭಾಷೇಥಾಃ ಶಮಕಾಮೋ ಯುಧಿಷ್ಠಿರಃ ॥೧೨॥**

ಹಾಗೆಯೇ, ಕುರುಗಳಿಗೆ ಮಂತ್ರಧಾರಿಯಾದ ವಿದುರನನ್ನು ಕುರಿತು ಯುಧಿಷ್ಠಿರನು ಶಾಂತಿಯನ್ನು ಬಯಸುತ್ತಾನೆ ಎಂದು, ಪ್ರೀತಿಪಾತ್ರನೇ, ಯುದ್ಧವು ಬೇಡವೆಂದು ಮಾತನಾಡು.

**ಅಥ ದುರ್ಯೋಧನಂ ಬ್ರೂಯಾ ರಾಜಪುತ್ರಮಮರ್ಷಣಮ್ ।**
**ಮಧ್ಯೇ ಕುರೂಣಾಮಾಸೀನಮ್ ಅನುನೀಯ ಪುನಃ ಪುನಃ ॥೧೩॥**

ಅನಂತರ ಕುರುಗಳ ಮಧ್ಯೆ ಕುಳಿತಿರುವ ಕ್ರೋಧಶೀಲನಾದ, ರಾಜಪುತ್ರನಾದ ದುರ್ಯೋಧನನನ್ನು ಮತ್ತೆ ಮತ್ತೆ ಅನುನಯವನ್ನು ಮಾಡಿ ಹೀಗೆ ಹೇಳು.

**ಅಪಾಪಾಂ ಯದುಪೈಕ್ಷಂತ ಕೃಷ್ಣಾಮೇತಾಂ ಸಭಾಗತಾಮ್ ।**
**ತದ್ ದುಃಖಂ ಚ ತಿತಿಕ್ಷಾಮ ಮಾ ವಧೀಸ್ತ್ವಂ ಕುರೂನಿತಿ ॥೧೪॥**

ಸಭೆಗೆ ಎಳೆತಂದ ನಿರಪರಾಧಿನಿಯಾದ ದ್ರೌಪದಿಗೆ ನೀವು ಏನು ಅವಮಾನವನ್ನು ಮಾಡಿದಿರೋ ಆ ದುಃಖವನ್ನೂ ಸಹಿಸಿಕೊಳ್ಳುತ್ತೇವೆ. ನೀನು ಕುರುಗಳನ್ನು ಕೊಲ್ಲಬೇಡ ಎಂದು ಹೇಳು.

**ಏವಂ ಪೂರ್ವಾಪರಾನ್ ಕ್ಲೇಶಾನ್ ಅತಿತಿಕ್ಷಂತ ಪಾಂಡವಾಃ ।**
**ಯಥಾऽಬಲೀಯಸಃ ಸಂತೋ ಯತ್ ತತ್ ಸರ್ವಂ ಕುರವೋ ವಿದುಃ ॥**

ಹೀಗೆ ಹಿಂದಿನ ಮತ್ತು ಮುಂದಿನ ಅನೇಕ ಕ್ಲೇಶಗಳನ್ನು ಸಜ್ಜನರಾದ ಪಾಂಡವರು ದುರ್ಬಲರಂತೆ ಸಹಿಸಿದರು. ಅದನ್ನು ಎಲ್ಲಾ ಕುರುಗಳೂ ತಿಳಿದಿದ್ದಾರೆ.

ಯನ್ನಃ ಪ್ರಾವ್ರಾಜಯಃ ಸೌಮ್ಯಾನ್ ಅಜಿನೈಃ ಪ್ರತಿವಾಸಿತಾನ್ ।
ತದ್ ದುಃಖಮತಿತಿಕ್ಷಾಮ ಮಾ ವಧೀಷ್ಮ ಕುರೂನಿತಿ ॥೧೬॥

ಸೌಮ್ಯಸ್ವಭಾವದ ನಮ್ಮನ್ನು ಕೃಷ್ಣಾಜಿನವನ್ನು ಧರಿಸಿದವರನ್ನಾಗಿ ಮಾಡಿ ನಗರದಿಂದ ಏನು ಹೊರಗೆ ಕಳುಹಿಸಿದೆಯೋ ಆ ದುಃಖವನ್ನೂ ಸಹಿಸುತ್ತೇವೆ. ನೀನು ಕುರುಗಳನ್ನು ಕೊಲ್ಲಬೇಡ ಎಂದು ಹೇಳು.

ಯತ್ ಕುಂತೀಂ ಸಮತಿಕ್ರಮ್ಯ ಕೃಷ್ಣಾಂ ಕೇಶೇಷ್ವಧರ್ಷಯತ್ ।
ದುಃಶಾಸನಸ್ತೇऽನುಮತೇ ತಚ್ಚಾಸ್ಮಾಭಿರುಪೇಕ್ಷಿತಮ್ ॥೧೭॥

ಕುಂತಿಯನ್ನೂ ಮೀರಿ ದುಶ್ಶಾಸನನು ನಿನ್ನ ಅನುಮತಿಯಂತೆ ದ್ರೌಪದಿಯನ್ನು ತಲೆಕೂದಲುಗಳಲ್ಲಿ ಹಿಡಿದು ಏನು ಎಳೆದನೋ ಅದನ್ನೂ ನಾವು ಉಪೇಕ್ಷೆ ಮಾಡಿದ್ದೇವೆ.

ಯಥೋಚಿತಂ ಸ್ವಕಂ ಭಾಗಂ ಲಭೇಮಹಿ ಪರಂತಪ ।
ನಿವರ್ತಯ ಪರದ್ರವ್ಯೇ ಬುದ್ಧಿಂ ಗೃದ್ಧಾಂ ನರರ್ಷಭ ॥೧೮॥

ಪರಂತಪನೇ, ನಮಗೆ ಯೋಗ್ಯವಾದ ಭಾಗವನ್ನು ನಾವು ಹೊಂದುವೆವು. ನರರ್ಷಭನೇ, ಪರದ್ರವ್ಯದಲ್ಲಿ ಆಸೆಪಡುವ ನಿನ್ನ ಬುದ್ಧಿಯನ್ನು ಹಿಂದಕ್ಕೆ ತಿರುಗಿಸು.

ಶಾಂತಿರೇವ ಭವೇದ್ ರಾಜನ್ ಪ್ರೀತಿರೇವ ಪರಸ್ಪರಮ್ ।
ರಾಜ್ಯೈಕದೇಶಮಪಿ ನಃ ಪ್ರಯಚ್ಛ ಶಮಮಿಚ್ಛತಾಮ್ ॥೧೯॥

ರಾಜನೇ, ನಮಗೆ ಪರಸ್ಪರವಾಗಿ ಶಾಂತಿಯೇ ಉಂಟಾಗಲಿ. ಪ್ರೀತಿಯೇ ಉಂಟಾಗಲಿ. ಸಂಧಿಯನ್ನು (ಶಾಂತಿಯನ್ನು) ಬಯಸುವ ನಮಗೆ ರಾಜ್ಯದ ಒಂದು ಭಾಗವನ್ನಾದರೂ ಕೊಡು.

ಕುಶಸ್ಥಲಂ ವೃಕಸ್ಥಲಮ್ ಅವಂತೀಂ ವಾರಣಾವತಮ್ ।
ಅವಸಾನಂ ಭವೇದತ್ರ ಕಿಂಚಿದೇಕಂ ಚ ಪಂಚಮಮ್ ॥೨೦॥

ಭ್ರಾತೄಣಾಂ ದೇಹಿ ಪಂಚಾನಾಂ ಪಂಚ ಗ್ರಾಮಾನ್ ಸುಯೋಧನ ।
ಶಾಂತಿರ್ನೋऽಸ್ತು ಮಹಾಪ್ರಾಜ್ಞ ಭ್ರಾತೃಭಿಃ ಸಹ ಭಾರತ ॥೨೧॥

ಕುಶಸ್ಥಲ, ವೃಕಸ್ಥಲ, ಅವಂತೀ, ವಾರಣಾವತ ಮತ್ತು ಐದರ ಸಂಖ್ಯೆಯನ್ನು ಪೂರೈಸಲು ಇನ್ನಾವುದಾದರೂ ಒಂದು ಗ್ರಾಮ. ಹೀಗೆ ಐದು ಜನ ಅಣ್ಣ-ತಮ್ಮಂದಿರಿಗೆ ಐದುಗ್ರಾಮಗಳನ್ನು ಕೊಡು. ಸುಯೋಧನನೇ, ಮಹಾಪ್ರಾಜ್ಞನೇ, ಭಾರತನೇ, ನಮಗೆ ಅಣ್ಣ-ತಮ್ಮಂದಿರ ಜೊತೆಯಲ್ಲಿ ಶಾಂತಿಯೇ ಉಂಟಾಗಲಿ.

**ಭ್ರಾತಾ ಭ್ರಾತರಮನ್ವೇತು ಪಿತಾ ಪುತ್ರೇಣ ಯುಜ್ಯತಾಮ್ ।**
**ಸ್ಮಯಮಾನಾಃ ಸಮಾಯಾಂತು ಪಾಂಚಾಲಾಃ ಕುರುಭಿಃ ಸಹ ॥೨೨॥**

ಸಹೋದರನು ಸಹೋದರನ ಜೊತೆಯಲ್ಲಿ ಸೇರಲಿ. ತಂದೆಯು ಮಗನ ಜೊತೆಯಲ್ಲಿ ಸೇರಲಿ. ಪಾಂಚಾಲರು ಕುರುಗಳ ಜೊತೆಯಲ್ಲಿ ನಗುನಗುತ್ತಾ ಬಂದು ಸೇರಲಿ.

**ಹರ್ಷಿತಾನ್ ಕುರುಪಾಂಚಾಲಾನ್ ಪಶ್ಯೇಯಮಿತಿ ಕಾಮಯೇ ।**
**ಸರ್ವೇ ಸುಮನಸಸ್ತಾತ ಶಾಮ್ಯಾಮ ಭರತರ್ಷಭಾಃ ॥೨೩॥**

ಸಂತೋಷಗೊಂಡ ಕುರು-ಪಾಂಚಾಲರನ್ನು ನೋಡುವೆನೆಂದು ಬಯಸುತ್ತೇನೆ. ಪ್ರೀತಿಪಾತ್ರನೇ, ಎಲ್ಲ ಭರತಶ್ರೇಷ್ಠರೂ ಒಳ್ಳೆಯ ಮನಸ್ಸನ್ನು ಹೊಂದಿದವರು. ಆದ್ದರಿಂದ ನಾವು ಶಾಂತಿಯನ್ನು ಹೊಂದೋಣ (ಎಂದು ಹೇಳು).

**ಅಲಮೇವ ಶಮಂ ಯಾಮಿ ತಥಾ ಯುದ್ಧಾಯ ಸಂಜಯ ।**
**ಧರ್ಮಾನ್ವಯೋ ಬಲಂ ಚಾಹಂ ಮೃದವೇ ದಾರುಣಾಯ ಚ ॥೨೪॥**

ಸಂಜಯನೇ, ನಾನು ಶಾಂತಿಗೂ ಸಿದ್ಧನಾಗಿದ್ದೇನೆ. ಯುದ್ಧಕ್ಕೂ ಸಿದ್ಧನಾಗಿದ್ದೇನೆ. ಧರ್ಮಾನುಸಾರಿಯಾದ ನಾನು ಮೃದುವಾದ ಕರ್ಮಕ್ಕೂ ಸಿದ್ಧನಾಗಿದ್ದೇನೆ. ಬಲವುಳ್ಳ ನಾನು ದಾರುಣವಾದ ಯುದ್ಧಕ್ಕೂ ಸಿದ್ಧನಾಗಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ತ್ರಿಂಶೋऽಧ್ಯಾಯಃ ॥

॥ ಸಂಜಯಯಾನಪರ್ವಣಿ ಏಕಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಮೂವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

# ಮೂವತ್ತೊಂದನೆಯ ಅಧ್ಯಾಯ

ಸಂಜಯನಿಗೆ ಅರ್ಜುನನ ಸಂದೇಶ ಮತ್ತು ಸಂಜಯನ ಪ್ರತಿನಿವೃತ್ತಿ.

**ವೈಶಂಪಾಯನಃ**

**ಧರ್ಮರಾಜಸ್ಯ ತು ವಚಃ ಶ್ರುತ್ವಾ ಪಾರ್ಥೋ ಧನಂಜಯಃ ।**
**ಉವಾಚ ಸಂಜಯಂ ತತ್ರ ವಾಸುದೇವಸ್ಯ ಶೃಣ್ವತಃ ॥೧॥**

ವೈಶಂಪಾಯನ– ಧರ್ಮರಾಜನ ಮಾತುಗಳನ್ನು ಕೇಳಿ ಕುಂತೀಪುತ್ರನಾದ ಧನಂಜಯನು ಕೃಷ್ಣನು ಕೇಳುತ್ತಿರುವಂತೆ ಅಲ್ಲಿ ಸಂಜಯನನ್ನು ಕುರಿತು ಮಾತನಾಡಿದನು.

**ಪಿತಾಮಹಂ ಶಾಂತನವಂ ಧೃತರಾಷ್ಟ್ರಂ ಚ ಸಂಜಯ ।**
**ದ್ರೋಣಂ ಸಪುತ್ರಂ ಶಲ್ಯಂ ಚ ಮಹಾರಾಜಂ ಚ ಬಾಹ್ಲಿಕಮ್ ॥೨॥**

**ವಿಕರ್ಣಂ ಸೋಮದತ್ತಂ ಚ ಶಕುನಿಂ ಚಾಪಿ ಸೌಬಲಮ್ ।**
**ವಿವಿಂಶತಿಂ ಚಿತ್ರಸೇನಂ ಜಯತ್ಸೇನಂ ಚ ಸಂಜಯ ॥೩॥**

**ಭಗದತ್ತಂ ತಥಾ ಚೈವ ಶೂರಂ ರಣಕೃತಾಂ ವರಮ್ ॥೪॥**

**ಯೇ ಚಾಪ್ಯನ್ಯೇ ಕುರವಸ್ತತ್ರ ಸಂತಿ**
**ರಾಜಾನಶ್ಚೈದ್ ಭೂಮಿಪಾಲಾಃ ಸಮೇತಾಃ ।**
**ಯುಯುತ್ಸವಃ ಪಾರ್ಥಿವಾಃ ಸೈಂಧವಾಶ್ಚ**
**ಸಮಾನೀತಾ ಧಾರ್ತರಾಷ್ಟ್ರೇಣ ಸೂತ ॥೫॥**

**ಯಥಾನ್ಯಾಯಂ ಕುಶಲಂ ವಂದನಂ ಚ**
**ಸಮಾಗಮೇ ಮದ್ವಚನೇನ ವಾಚ್ಯಾಃ ॥೬॥**

ಸಂಜಯನೇ, ಪಿತಾಮಹರಾದ ಭೀಷ್ಮರು, ಧೃತರಾಷ್ಟ್ರ, ಪುತ್ರನಿಂದೊಡಗೂಡಿದ ದ್ರೋಣರು, ಶಲ್ಯ , ಬಾಹ್ಲಿಕಮಹಾರಾಜ, ವಿಕರ್ಣ, ಸೋಮದತ್ತ , ಸೌಬಲನಾದ ಶಕುನಿ, ವಿವಿಂಶತಿ, ಚಿತ್ರಸೇನ, ಶೂರನಾದ, ಯುದ್ಧಮಾಡುವವರಲ್ಲಿ ಶ್ರೇಷ್ಠನಾದ ಭಗದತ್ತ, ಮತ್ತು ಸೂತನೇ, ಅಲ್ಲಿ ಬೇರೆ ಯಾರು ಕುರುಗಳು ಇದ್ದಾರೆಯೋ, ಭೂಮಿಗೆ ಒಡೆಯರಾದ ಯಾವ ರಾಜರು ಯುದ್ಧವನ್ನು ಮಾಡಲು ಉತ್ಸುಕರಾಗಿ ಸಿಂಧು

ಮೊದಲಾದ ದೇಶಗಳಿಂದ ದುರ್ಯೋಧನನಿಂದ ಕರೆತರಲ್ಪಟ್ಟು ಸೇರಿದ್ದಾರೆಯೋ, ಅವರೆಲ್ಲರಿಗೂ ನನ್ನ ಮಾತಿನಂತೆ ಯಥೋಚಿತವಾಗಿ ವಂದನೆಯನ್ನು ಮಾಡಿ ನಮ್ಮ ಕುಶಲವನ್ನು ಹೇಳಬೇಕು.

ತತೋ ಬ್ರೂಯಾಃ ಸಂಜಯ ರಾಜಮಧ್ಯೇ
ದುರ್ಯೋಧನಂ ಪಾಪಕೃತಾಂ ಪ್ರಧಾನಮ್ ॥೭॥

ಸಂಜಯನೇ, ಅನಂತರ ರಾಜರ ಮಧ್ಯದಲ್ಲಿ ಪಾಪವನ್ನು ಮಾಡುವವರಲ್ಲಿ ಪ್ರಧಾನನಾದ ದುರ್ಯೋಧನನನ್ನು ಕುರಿತು ಹೇಳಬೇಕು.

ವೈಶಂಪಾಯನಃ

ಏವಂ ಪ್ರತಿಷ್ಠಾಪ್ಯ ಧನಂಜಯಸ್ತಂ
ತತೋऽರ್ಥವದ್ ಧರ್ಮವಚ್ಚೈವ ಪಾರ್ಥಃ ।
ಉವಾಚ ವಾಕ್ಯಂ ಸ್ವಜನಪ್ರಹರ್ಷಂ
ವಿತ್ರಾಸನಂ ಧೃತರಾಷ್ಟ್ರಾತ್ಮಜಾನಾಮ್ ॥೮॥

ವೈಶಂಪಾಯನ– ಹೀಗೆ ಅರ್ಜುನನು ಸಂಜಯನನ್ನು ಕಳುಹಿಸಿಕೊಟ್ಟು ಅನಂತರ ಧರ್ಮದಿಂದಲೂ ಮತ್ತು ಅರ್ಥದಿಂದಲೂ ಕೂಡಿದ, ಸ್ವಜನರಿಗೆ ಹರ್ಷವನ್ನುಂಟು ಮಾಡುವ ಮತ್ತು ಧೃತರಾಷ್ಟ್ರ ಪುತ್ರರಿಗೆ ಭಯವನ್ನುಂಟು ಮಾಡುವ ಮಾತುಗಳನ್ನು ಆಡಿದನು.

ಅರ್ಜುನೇನ ಸಮಾದಿಷ್ಟಃ ತಥೇತ್ಯುಕ್ತ್ವಾ ತು ಸಂಜಯಃ ।
ಪಾರ್ಥಾನಾಮಂತ್ರಯಾಮಾಸ ಕೇಶವಂ ಚ ಯಶಸ್ವಿನಮ್ ॥೯॥

ಅರ್ಜುನನಿಂದ ಆದಿಷ್ಟನಾದ ಸಂಜಯನು ಹಾಗೆಯೇ ಆಗಲಿ ಎಂದು ಹೇಳಿ ಪಾಂಡವರ ಮತ್ತು ಕೀರ್ತಿವಂತನಾದ ಕೃಷ್ಣನ ಅನುಮತಿಯನ್ನು ಕೇಳಿದನು.

ಅನುಜ್ಞಾತಃ ಪಾಂಡವೇನ ಪ್ರಯಯೌ ಸಂಜಯಸ್ತದಾ ।
ಶಾಸನಂ ಧೃತರಾಷ್ಟ್ರಸ್ಯ ಸರ್ವಂ ಕೃತ್ವಾ ಮಹಾತ್ಮನಃ ॥೧೦॥

ಪಾಂಡವರಿಂದ ಅನುಮತಿಯನ್ನು ಪಡೆದ ಸಂಜಯನು ಮಹಾತ್ಮನಾದ ಧೃತರಾಷ್ಟ್ರನು ಹೇಳಿದ ಎಲ್ಲಾ ಕಾರ್ಯಗಳನ್ನೂ ಮಾಡಿ ಅಲ್ಲಿಂದ ಹೊರಟನು.

ತತಸ್ತು ಸಂಜಯಃ ಕ್ಷಿಪ್ರಮೇಕಾಹೇನ ಪರಂತಪಃ ।
ಯಾತಿ ಸ್ಮ ಹಸ್ತಿನಪುರಂ ನಿಶಾಕಾಲೇ ಪರಂತಪ ॥೧೧॥

ಎಲೈ ಪರಂತಪನಾದ ಜನಮೇಜಯನೇ, ಅನಂತರ ಪರಂತಪನಾದ ಸಂಜಯನು ಶೀಘ್ರವಾಗಿ ಒಂದೇ ದಿನದಲ್ಲಿ ಪ್ರಯಾಣ ಮಾಡಿ ರಾತ್ರಿಯ ವೇಳೆಗೆ ಹಸ್ತಿನಪುರವನ್ನು ತಲುಪಿದನು.

ಸಂಪ್ರಾಪ್ಯ ಹಸ್ತಿನಪುರಂ ಶೀಘ್ರಮಶ್ವೈರ್ಮಹಾಜವೈಃ ।
ಅಂತಃಪುರಮುಪಸ್ಥಾಯ ದ್ವಾಃಸ್ಥಂ ವಚನಮಬ್ರವೀತ್ ॥೧೨॥

ಆಚಕ್ಷ್ವ ಧೃತರಾಷ್ಟ್ರಾಯ ದ್ವಾಃಸ್ಥ ಮಾಂ ಸಮುಪಾಗತಮ್ ।
ಸಕಾಶಾತ್ ಪಾಂಡುಪುತ್ರಾಣಾಂ ಸಂಜಯಂ ಮಾ ಚಿರಂ ಕೃಥಾಃ ॥೧೩॥

ಜಾಗರ್ತಿ ಚೇದಭಿವದೇಸ್ತ್ವಂ ಹಿ ದ್ವಾಃಸ್ಥ
ಪ್ರವಿಶೇಯಂ ವಿದಿತೋ ಭೂಮಿಪಸ್ಯ ॥೧೪॥

ಶೀಘ್ರವಾದ ಮಹಾವೇಗವುಳ್ಳ ಅಶ್ವಗಳಿಂದ ಹಸ್ತಿನಪುರವನ್ನು ತಲುಪಿ ಅಂತಃಪುರವನ್ನು ಸಮೀಪಿಸಿ, ದ್ವಾರಪಾಲಕನನ್ನುದ್ದೇಶಿಸಿ ಅವನು ದ್ವಾರಪಾಲಕನೇ, ಸಂಜಯನಾದ ನಾನು ಪಾಂಡವರ ಕಡೆಯಿಂದ ಹಿಂದಿರುಗಿ ಬಂದಿದ್ದೇನೆ ಎಂದು ಧೃತರಾಷ್ಟ್ರನಿಗೆ ಹೇಳು, ತಡಮಾಡಬೇಡ. ದ್ವಾರಪಾಲಕನೇ, ಅವನು ಎಚ್ಚರವಾಗಿದ್ದರೆ ಅವನಿಗೆ ನಮಸ್ಕಾರವನ್ನು ತಿಳಿಸು. ರಾಜನ ಅಪ್ಪಣೆಯನ್ನು ಪಡೆದು ನಾನು ಪ್ರವೇಶಿಸುವೆನು ಎಂದು ಹೇಳಿದನು.

ದ್ವಾಃಸ್ಥಃ

ಸಂಜಯೋಽಯಂ ಭೂಮಿಪತೇ ನಮಸ್ತೇ
ದಿದೃಕ್ಷಯಾ ದ್ವಾರಮುಪಾಗತಸ್ತೇ ।
ಪ್ರಾಪ್ತೋ ದೂತಃ ಪಾಂಡವಾನಾಂ ಸಕಾಶಾತ್
ಪ್ರಶಾಧಿ ರಾಜನ್ ಕಿಮಯಂ ಕರೋತು ॥೧೫॥

ದ್ವಾರಪಾಲಕ– ರಾಜನೇ, ನಿನಗೆ ನಮಸ್ಕಾರ. ಈ ಸಂಜಯನು ನಿನ್ನ ದರ್ಶನಾಕಾಂಕ್ಷಿಯಾಗಿ ದ್ವಾರದಲ್ಲಿ ನಿಂತಿದ್ದಾನೆ. ಪಾಂಡವರ ಸಮೀಪದಿಂದ ದೂತನಾಗಿ ಬಂದಿದ್ದಾನೆ. ರಾಜನೇ, ಅವನು ಏನು ಮಾಡಬೇಕೆಂದು ಆಜ್ಞೆಯನ್ನು ಮಾಡು.

ಧೃತರಾಷ್ಟ್ರಃ

ಆಚಕ್ಷ್ವ ಮಾಂ ಸುಖಿನಂ ಕಾಲ್ಯಮಸ್ಮೈ
ಪ್ರವೇಶ್ಯತಾಂ ಸ್ವಾಗತಂ ಸಂಜಯಾಯ ।
ನ ಚಾಹಮೇತಸ್ಯ ಭವಾಮ್ಯಕಾಲ್ಯಃ
ಸ ಮೇ ಕಸ್ಮಾದ್ ದ್ವಾರಿ ತಿಷ್ಠೇಚ್ಚ ಸೂತಃ ॥೧೬॥

ಧೃತರಾಷ್ಟ್ರ– ನಾನು ಸುಖವಾಗಿದ್ದೇನೆ ಮತ್ತು ಅವನ ಪ್ರವೇಶಕ್ಕೆ ಯೋಗ್ಯನಾಗಿದ್ದೇನೆ ಎಂದು ಸಂಜಯನಿಗೆ ಹೇಳಿ ಸ್ವಾಗತವನ್ನು ಕೋರಿ ಸಂಜಯನನ್ನು ಒಳಗೆ ಬಿಡು. ಅವನಿಗೆ ದರ್ಶನಕ್ಕೆ ಅಯೋಗ್ಯವಾದ ಕಾಲವು ಯಾವುದೂ ಇಲ್ಲ. ಸೂತನಾದ ಅವನು ಏಕೆ ಬಾಗಿಲಿನಲ್ಲಿ ನಿಂತಿದ್ದಾನೆ?

ವೈಶಂಪಾಯನಃ

ತತಃ ಪ್ರವಿಶ್ಯಾನುಮತೇ ನೃಪಸ್ಯ
ಮಹಾವೇಶ್ಮ ಪ್ರಾಜ್ಞಶೂರಾರ್ಯಗುಪ್ತಮ್ ।
ಸಿಂಹಾಸನಸ್ಥಂ ಪಾರ್ಥಿವಮಾಸಸಾದ
ವೈಚಿತ್ರ್ಯವೀರ್ಯಂ ಪ್ರಾಂಜಲಿಃ ಸೂತಪುತ್ರಃ ॥೧೭॥

ಅನಂತರ ರಾಜನ ಅನುಮತಿಯನ್ನು ಪಡೆದು ಸೂತಪುತ್ರನಾದ ಸಂಜಯನು ಪ್ರಾಜ್ಞರಿಂದಲೂ, ಶೂರರಾದ ಸಜ್ಜನರಿಂದಲೂ ರಕ್ಷಿತವಾದ ಅವನ ಅರಮನೆಯನ್ನು ಪ್ರವೇಶಿಸಿ, ಕೈಗಳನ್ನು ಮುಗಿದುಕೊಂಡು ವಿಚಿತ್ರವೀರ್ಯನ ಮಗನಾದ ಸಿಂಹಾಸನದಲ್ಲಿ ಕುಳಿತಿದ್ದ ಧೃತರಾಷ್ಟ್ರನ ಬಳಿಗೆ ಹೋದನು.

ಸಂಜಯಃ

ಸಂಜಯೋಽಹಂ ಭೂಮಿಪತೇ ನಮಸ್ತೇ
ಪ್ರಾಪ್ತೋಽಸ್ಮಿ ಗತ್ವಾ ನರದೇವ ಪಾಂಡವಾನ್ ।

ಅಭಿವಾದ್ಯ ತ್ವಾಂ ಪಾಂಡುಪುತ್ರೋ ಮನಸ್ವೀ
ಯುಧಿಷ್ಠಿರಃ ಕುಶಲಂ ಚಾನ್ವಪೃಚ್ಛತ್ ॥೧೮॥

ಸಂಜಯ– ರಾಜನೇ, ಸಂಜಯನಾದ ನಾನು ನಿನಗೆ ನಮಸ್ಕಾರವನ್ನು ಮಾಡುತ್ತಿದ್ದೇನೆ. ನರದೇವನೇ, ಪಾಂಡವರ ಸಮೀಪಕ್ಕೆ ಹೋಗಿ ಹಿಂದಿರುಗಿದ್ದೇನೆ. ಪಾಂಡುಪುತ್ರನೂ ಧೈರ್ಯಶಾಲಿಯೂ ಆದ ಯುಧಿಷ್ಠಿರನು ನಿನಗೆ ನಮಸ್ಕಾರವನ್ನು ಮಾಡಿ ಕುಶಲಪ್ರಶ್ನೆಯನ್ನು ಮಾಡುತ್ತಾನೆ.

ಸ ತೇ ಪುತ್ರಾನ್ ಪೃಚ್ಛತಿ ಪ್ರೀಯಮಾಣಃ
ಕಚ್ಚಿತ್ ಪುತ್ರೈಃ ಪ್ರೀಯಸೇ ನಪ್ತೃಭಿಶ್ಚ ।
ತಥಾ ಸುಹೃದ್ಭಿಃ ಸಚಿವೈಶ್ಚ ರಾಜನ್
ಯೇ ಚಾಪಿ ತ್ವಾಮುಪಜೀವಂತಿ ತೈಶ್ಚ ॥೧೯॥

ಅವನು ಸಂತೋಷದಿಂದ ನಿನ್ನ ಪುತ್ರರ ಕುಶಲವನ್ನು ಕೇಳುತ್ತಾನೆ. ಎಲೈ ರಾಜನೇ, ಮಕ್ಕಳು-ಮೊಮ್ಮಕ್ಕಳಿಂದೊಡಗೂಡಿ ಹಾಗೆಯೇ ಸುಹೃದ್ಬಾಂಧವರು ಮತ್ತು ಸಚಿವರಿಂದೊಡಗೂಡಿ ಮತ್ತು ಯಾರು ನಿನ್ನನ್ನು ಆಶ್ರಯಿಸಿದ್ದಾರೆಯೋ ಅವರಿಂದೊಡಗೂಡಿ ಸಂತೋಷದಿಂದ ಇದ್ದೀಯಾ ಎಂದು ನಿನ್ನನ್ನು ಕೇಳುತ್ತಾನೆ.

ಧೃತರಾಷ್ಟ್ರಃ

ಅಭ್ಯೇತ್ಯ ತ್ವಾಂ ತಾತ ವದಾಮಿ ಸಂಜಯ
ಅಜಾತಶತ್ರುಂ ಚ ಸುಖೇನ ಪಾರ್ಥಮ್ ।
ಕಚ್ಚಿತ್ ಸ ರಾಜಾ ಕುಶಲೀ ಸಪುತ್ರಃ
ಸಹಾಮಾತ್ಯಃ ಸಾನುಜಃ ಕೌರವಾಣಾಮ್ ॥೨೦॥

ಧೃತರಾಷ್ಟ್ರ– ಪ್ರೀತಿಪಾತ್ರನೇ, ಅಜಾತಶತ್ರುವಿನ ಬಳಿಗೆ ಹೋಗಿ ಸುಖದಿಂದ ಹಿಂದಿರುಗಿದ ನಿನ್ನನ್ನು ಕೇಳುತ್ತಿದ್ದೇನೆ. ಕೌರವರ ರಾಜನಾದ ಯುಧಿಷ್ಠಿರನು ಪುತ್ರ, ಅಮಾತ್ಯ, ಸಹೋದರರ ಸಹಿತವಾಗಿ ಕ್ಷೇಮದಿಂದಿದ್ದಾನೆಯೇ?

ಸಂಜಯಃ

ಸಹಾಮಾತ್ಯಃ ಕುಶಲೀ ಪಾಂಡುಪುತ್ರೋ
ಭೂಯಶ್ಚಾಹೋ ಯಚ್ಚ ತೇಽಗ್ರೇ ಮನೋಽಭೂತ್ ।

ನಿರ್ನಿಕ್ತಧರ್ಮಾರ್ಥಕರೋ ಮನಸ್ವೀ
ಬಹುಶ್ರುತೋ ದೃಷ್ಟಿಮಾನ್ ಶೀಲವಾಂಶ್ಚ ॥೨೧॥

ಸಂಜಯ– ಅಮಾತ್ಯರ ಜೊತೆಯಲ್ಲಿ ಪಾಂಡುಪುತ್ರನಾದ ಯುಧಿಷ್ಠಿರನು ಕುಶಲದಿಂದಿದ್ದಾನೆ. ನಿನಗೆ ಯಾವ ಅವನ ರಾಜ್ಯದಲ್ಲಿ ಮೊದಲು ಮನಸ್ಸಿದ್ದಿತೋ ಅದನ್ನೇ ಅವನು ಇನ್ನೂ ಬಯಸುತ್ತಿದ್ದಾನೆ. ಅವನು ಪರಿಶುದ್ಧವಾದ ಧರ್ಮಾರ್ಥವನ್ನು ಆಚರಿಸುವವನೂ, ಧೈರ್ಯಶಾಲಿಯೂ, ಬಹುಶ್ರುತನೂ, ದೂರದೃಷ್ಟಿಯುಳ್ಳವನೂ ಮತ್ತು ಶೀಲವಂತನೂ ಆಗಿದ್ದಾನೆ.

ಪರೋ ಧರ್ಮಃ ಪಾಂಡವಸ್ಯಾನೃಶಂಸ್ಯಂ
ಧರ್ಮಃ ಪರೋ ವಿತ್ತಚಯಾತ್ಮನೋಽಸ್ಯ ।
ಸುಖಪ್ರಿಯೇ ಧರ್ಮಹೀನೇ ನ ಪಾರ್ಥೇ ಽನು-
ರುಧ್ಯತೇ ಭಾರತ ತಸ್ಯ ಬುದ್ಧಿಃ ॥೨೨॥

ಪಾಂಡವನಾದ ಯುಧಿಷ್ಠಿರನ ಶ್ರೇಷ್ಠವಾದ ಧರ್ಮವು ಮಾರ್ದವ. ವಿತ್ತಸಮೂಹ ರೂಪವಾದ ಈ ರಾಜ್ಯದಲ್ಲಿ ಅವನಿಗೆ ಧರ್ಮವೇ ಶ್ರೇಷ್ಠವಾದುದು. ಎಲೈ ಭಾರತನೇ, ಧರ್ಮರಹಿತವಾದ ಸುಖ ಮತ್ತು ಪ್ರಿಯಗಳಲ್ಲಿ ಅವನ ಬುದ್ಧಿಯು ಎಂದೂ ಹೋಗುವುದಿಲ್ಲ.

ನನ್ವೇವ ಮನ್ಯೇ ಪುರುಷಸ್ಯ ಕರ್ಮ
ಸಂಪದ್ಯತೇ ಸುಪ್ರಯುಕ್ತಂ ಯಥಾವತ್ ।
ಅಕುರ್ವತಃ ಸ್ಯಾದ್ ಯದಿ ಚಾಪಿ ಸರ್ವಂ
ತಸ್ಮಾದಾಹುಃ ಪೌರುಷಂ ಕರ್ಮಣೋ ಹಿ ॥೨೩॥

ಯಾವ ಪುರುಷನು ಯಾವ ಕರ್ಮವನ್ನು ಸರಿಯಾಗಿ ಮಾಡುತ್ತಾನೆಯೋ ಆ ಪುರುಷನಿಗೆ ಅದೇ ಕರ್ಮವೇ ಸಿದ್ಧಿಯನ್ನು ತಂದುಕೊಡುತ್ತದೆ ಎಂದು ನಾನು ಭಾವಿಸಿದ್ದೇನಷ್ಟೆ? ಕರ್ಮವನ್ನು ಮಾಡದಿದ್ದರೂ ಎಲ್ಲವೂ ಸಿದ್ಧಿಸುವುದಾದರೆ (ಪುರುಷ ಪ್ರಯತ್ನಕ್ಕೆ ಬೆಲೆ ಏನು?) ಆದ್ದರಿಂದ ಪುರುಷಪ್ರಯತ್ನವನ್ನು ಕರ್ಮದ ಸಾಮರ್ಥ್ಯವೆಂದು ಹೇಳುತ್ತಾರೆ.

ಮಾತುಃ ಪಿತುಃ ಕರ್ಮಣಾऽಭಿಪ್ರಸೂತಃ
ಸಂವರ್ಧತೇ ಕರ್ಮಣಾ ಭೋಜನೇನ ।
ಪ್ರಿಯಾಪ್ರಿಯೇ ಸುಖದುಃಖೇ ಚ ರಾಜನ್
ನಿಂದಾಪ್ರಶಂಸೇ ಚ ಭಜೇತ ಯೇನ ॥೨೪॥

ಮಾತಾ-ಪಿತೃಗಳು ಮತ್ತು ತನ್ನ ಕರ್ಮದ ನಿಮಿತ್ತದಿಂದಾಗಿ ಜನ್ಮವನ್ನು ಪಡೆದ ಪುರುಷನು ತನ್ನ ಕರ್ಮದಿಂದ ಸಂಪಾದಿಸಿದ ಭೋಜನದಿಂದ ಬೆಳೆಯುತ್ತಾನೆ. ರಾಜನೇ, ಅವನು ಪ್ರಿಯಾಪ್ರಿಯಗಳನ್ನೂ, ಸುಖ-ದುಃಖಗಳನ್ನೂ, ನಿಂದಾ-ಪ್ರಶಂಸೆಗಳನ್ನೂ ಪಡೆಯುತ್ತಾನೆ.

ಪರಪ್ರಯುಕ್ತಃ ಪುರುಷೋ ವಿಚೇಷ್ಟತೇ
ಸೂತ್ರಪ್ರೋತಾ ದಾರುಮಯೀವ ಯೋಷಾ ।
ಇಮಂ ಚ ದೃಷ್ಟ್ವಾ ತವ ಕರ್ಮದೋಷಂ
ಮನ್ಯೇ ವರಂ ಕರ್ಮ ದೈವಂ ಮನುಷ್ಯಾತ್ ॥೨೫॥

ಇಮಂ ಚ ದೃಷ್ಟ್ವಾ ತವ ಕರ್ಮದೋಷಂ
ಪಾಪೋದರ್ಕಂ ಘೋರಮವರ್ಣರೂಪಮ್ ।

ಪರಮಾತ್ಮನಿಂದ ಪ್ರೇರಿತನಾಗಿ ಪುರುಷನು ಸೂತ್ರವನ್ನು ಪೋಣಿಸಿದ ಮರದ ಹೆಣ್ಣುಗೊಂಬೆಯಂತೆ ಕರ್ಮಗಳನ್ನು ಮಾಡುತ್ತಾನೆ. ಪಾಪದ ಉದಯಕ್ಕೆ ಕಾರಣವೂ, ಘೋರವೂ, ವರ್ಣಿಸಲು ಅಸಾಧ್ಯವೂ ಆದ ಈ ನಿನ್ನ ಕರ್ಮದೋಷವನ್ನು ನೋಡಿ ನಾನು ಮನುಷ್ಯಪ್ರಯತ್ನಕ್ಕಿಂತಲೂ ದೈವಚಿತ್ತ ಮತ್ತು ಕರ್ಮಗಳೇ ಶ್ರೇಷ್ಠವೆಂದು ಭಾವಿಸುತ್ತೇನೆ (ಶುಷ್ಕಕರ್ಮವೇ ಫಲವನ್ನು ಕೊಡಲು ಸಮರ್ಥವಲ್ಲ. ಹರಿಯ ಅನುಗ್ರಹವು ಮುಖ್ಯವಾದುದು ಎಂದು ಅಭಿಪ್ರಾಯ – ವಾದಿರಾಜರು).

ಯಾವತ್ ಪರಂ ಕಾಮಯತೇऽತಿಕಾಲ್ಯಂ
ತಾವನ್ನರೋऽಯಂ ಲಭತೇ ಪ್ರಶಂಸಾಮ್ ॥೨೬॥

ಎಲ್ಲಿಯವರೆಗೆ ಪರಮಾತ್ಮನು ಆ ಪುರುಷನ ವಿಷಯದಲ್ಲಿ ಶುಭವನ್ನು ಕಾಮಿಸುತ್ತಾನೆಯೋ ಅಲ್ಲಿಯವರೆಗೆ ಆ ಪುರುಷನು ಪ್ರಶಂಸೆಯನ್ನು ಪಡೆಯುತ್ತಾನೆ.

ಅಜಾತಶತ್ರುಸ್ತು ವಿಹಾಯ ಪಾಪಂ
ಜೀರ್ಣಾಂ ತ್ವಚಂ ಸರ್ಪ ಇವಾವಮುಚ್ಯ ।
ವಿರೋಚತೇ ಹ್ಯಾರ್ಯವೃತ್ತೇನ ವೀರೋ
ಯುಧಿಷ್ಠಿರಸ್ತ್ವಯಿ ಪಾಪಂ ವಿಸೃಜ್ಯ ॥೨೭॥

ಅಜಾತಶತ್ರುವಾದ ಯುಧಿಷ್ಠಿರನು ಸರ್ಪವು ಹಳೆಯ ಪೊರೆಯನ್ನು ಬಿಟ್ಟಂತೆ ಪಾಪವನ್ನು ತ್ಯಜಿಸಿ ವೀರನಾಗಿ ಪೂಜ್ಯರ ನಡತೆಯಿಂದ ಕೂಡಿದವನಾಗಿ ನಿನ್ನಲ್ಲಿ ಪಾಪವನ್ನೂ ತ್ಯಜಿಸಿ (ಕೆಟ್ಟದ್ದನ್ನು ಯೋಚನೆ ಮಾಡದೆ) ಕಂಗೊಳಿಸುತ್ತಿದ್ದಾನೆ.

ಅಂಗಾತ್ಮನಃ ಕರ್ಮ ನಿಬೋಧ ರಾಜನ್
ಧರ್ಮಾರ್ಥಯುಕ್ತಾದಾರ್ಯವೃತ್ತಾದಪೇತಮ್ ।
ಉಪಕ್ರೋಶಂ ಚೇಹ ಗತೋಽಸಿ ರಾಜನ್
ಭೂಯಶ್ಚ ಪಾಪಂ ವಿಸೃಜನ್ನಮುತ್ರ ॥೨೮॥

ಪ್ರಿಯನಾದ ರಾಜನೇ, ನಿನ್ನ ಕರ್ಮವು ಧರ್ಮಾರ್ಥಯುಕ್ತವಾದ ಆರ್ಯರ ನಡತೆಯಿಂದ ದೂರವಾದುದು ಎಂದು ತಿಳಿ. ನೀನು ಪರಲೋಕದಲ್ಲಿ ಪಾಪವನ್ನು ಸೃಷ್ಟಿಮಾಡುತ್ತಾ ಇಲ್ಲಿಯೂ ದುಃಖವನ್ನು ಅನುಭವಿಸುತ್ತಿದ್ದೀಯೆ.

ಸ ತ್ವಮರ್ಥಂ ಸಂಶಯಿತಂ ವಿನಾ ತೈಃ
ಆಶಂಸಸೇ ಪುತ್ರವಶಾನುಗಃ ಸನ್ ।
ಅಧರ್ಮಶಬ್ದಶ್ಚ ಮಹಾನ್ ಪೃಥಿವ್ಯಾಂ
ನೇದಂ ಕರ್ಮ ತ್ವತ್ಸಮಂ ಭಾರತಾಗ್ರ್ಯ ॥೨೯॥

ಭಾರತಶ್ರೇಷ್ಠನೇ, ನೀನು ಪಾಂಡವರನ್ನು ತೊರೆದು ಪುತ್ರವಶನಾಗಿ ಸಂಶಯಗ್ರಸ್ತನಾಗಿ ಪಾಂಡವರ ಭಾಗವನ್ನು ಅಪೇಕ್ಷಿಸುತ್ತಿದ್ದೀಯೆ. ಇದರಿಂದ ನಿನಗೆ ಭೂಮಿಯಲ್ಲಿ ದೊಡ್ಡ ಅಧರ್ಮಶಬ್ದವುಂಟಾಗಿದೆ. ಈ ಕಾರ್ಯವು ನಿನಗೆ ಯೋಗ್ಯವಾದುದಲ್ಲ.

ಹೀನಪ್ರಜ್ಞೋ ದೌಷ್ಕುಲೇಯೋ ನೃಶಂಸೋ
ಧರ್ಮದ್ವೇಷೀ ಕ್ಷತ್ರವಿದ್ಯಾಸ್ವಧೀರಃ ।

ಏವಂಧರ್ಮಾ ನಾಪದಃ ಸಂತಿತೀರ್ಷೇತ್
ಹೀನೋ ವೀರ್ಯಾದ್ ಯಶ್ಚ ಭವೇದಶಿಷ್ಟಃ ॥೩೦॥

ಪ್ರಜ್ಞಾಹೀನನಾದವನು, ದುಷ್ಕುಲಪ್ರಸೂತನಾದವನು, ಕ್ರೂರನಾದವನು, ಧರ್ಮದ್ವೇಷಿಯಾದವನು, ಕ್ಷತ್ರಿಯವಿದ್ಯೆಗಳನ್ನು ತಿಳಿಯದವನು, ಪರಾಕ್ರಮಹೀನನಾದವನು ಮತ್ತು ಅಶಿಷ್ಟನಾದವನು – ಇಂತಹ ದೋಷಗಳನ್ನು ಹೊಂದಿದವನು ಆಪತ್ತನ್ನು ದಾಟಲು ಆಸೆ ಪಡಬಾರದು.

ಕುಲೇ ಜಾತೋ ಬಲವಾನ್ ಯೋ ಯಶಸ್ವೀ
ಬಹುಶ್ರುತಃ ಸುಖಜೀವೀ ಜಿತಾತ್ಮಾ ।
ಧರ್ಮಾಧರ್ಮೌ ಗ್ರಥಿತೌ ಯೋ ಬಿಭರ್ತಿ
ಸ ಹ್ಯಸ್ಯ ದಿಷ್ಟಸ್ಯ ವಶಾದುಪೈತಿ ॥೩೧॥

ಯಾವನು ಸತ್ಕುಲಪ್ರಸೂತನೋ, ಬಲಿಷ್ಠನೋ, ಕೀರ್ತಿವಂತನೋ, ಬಹುಶ್ರುತನೋ, ಸುಖಜೀವಿಯೋ, ಮನೋಜಯವುಳ್ಳವನೋ, ಧರ್ಮಾಧರ್ಮಗಳು ಒಟ್ಟಿಗೇ ಸೇರಿದಾಗ ಅವುಗಳನ್ನು ಪ್ರತ್ಯೇಕಿಸಿ ಯಾವನು ಧರ್ಮವನ್ನೇ ಪೋಷಿಸುತ್ತಾನೆಯೋ ಅಂತಹವನು ದೈವಸಹಾಯದಿಂದ ಸಂಪತ್ತನ್ನು ಹೊಂದುವನು.

ಕಥಂ ಹಿ ಮಂತ್ರಾಗ್ರ್ಯಧರೋ ಮನೀಷೀ
ಧರ್ಮಾರ್ಥಯೋರಾಪದಿ ಸಂಪ್ರಣೇತಾ ।
ಏವಂ ಯುಕ್ತಃ ಸರ್ವಮಂತ್ರೈರ್ವಿಹೀನಮ್
ಅನಾಶಾಸ್ಯಂ ಕರ್ಮ ಕುರ್ಯಾದಮೂಢಃ ॥೩೨॥

ಶ್ರೇಷ್ಠವಾದ ಮಂತ್ರಾಲೋಚನೆಯುಳ್ಳವನೂ, ವಿವೇಕಿಯೂ, ಆಪತ್ತು ಒದಗಿದಾಗ ಧರ್ಮಾರ್ಥಗಳನ್ನು ಸರಿಯಾಗಿ ನಡೆಸುವವನೂ, ಮೂಢನಲ್ಲದವನೂ ಆದ ಯಾವನು ಎಲ್ಲಾ ಮಂತ್ರಾಲೋಚನೆಗೆ ವಿರುದ್ಧವಾದ, ಯಾರಿಂದಲೂ ಹೊಗಳಲ್ಪಡದ ಕರ್ಮವನ್ನು ಮಾಡಿಯಾನು?

ತವ ಹ್ಯಮೀ ಮಂತ್ರವಿದಃ ಸಮೇತ್ಯ
ಸಮಾಸತೇ ಕರ್ಮಸು ನಿತ್ಯಯುಕ್ತಾಃ ।

ತೇಷಾಮಯಂ ಬಲವಾನ್ ನಿಶ್ಚಯಶ್ಚ
ಕುರುಕ್ಷಯೋ ನಿಯಮೇನ ವ್ಯಪಾಯೀ ॥೩೩॥

ಈ ಮಂತ್ರವೇತ್ತರು ನಿತ್ಯವೂ ನಿನ್ನ ಹಿತವಾದ ಕರ್ಮಗಳಲ್ಲಿ ರತರಾಗಿ ನಿನ್ನ ಸುತ್ತಲೂ ಇದ್ದಾರೆ. ಅವರಿಗೆ ದೊಡ್ಡ ಅಪಾಯವನ್ನು ತಂದೊಡ್ಡುವ ಕುರುಕುಲಕ್ಷಯವು ಉಂಟಾಗುತ್ತದೆ ಎಂಬ ನಿಶ್ಚಯವು ಪ್ರಬಲವಾಗಿದೆ.

ಅಕಾಲಿಕಂ ಕುರವೋ ನಾಭವಿಷ್ಯನ್
ಪಾಪೇನ ಚೇತ್ ಪಾಪಮಜಾತಶತ್ರುಃ ।
ಇಚ್ಛೇತ್ ಜಾತು ತ್ವಯಿ ಪಾಪಂ ವಿಸೃಜ್ಯ
ನಿಂದಾಂ ಚೇಯಂ ತವ ತದೇವಾಭವಿಷ್ಯತ್ ॥೩೪॥

ಅಜಾತಶತ್ರುವು ನಿನಗೆ ಹಿಂಸೆ ಮಾಡುವುದನ್ನು ಬಿಟ್ಟು ಪಾಪವುಳ್ಳ ದುರ್ಯೋಧನನು ದ್ಯೂತವನ್ನು ಪ್ರವರ್ತಿಸಿದಾಗ ದುರ್ಯೋಧನನ ವಿಷಯದಲ್ಲಿಯೇ ವಧೆಯ ರೂಪವಾದ ಪಾಪಕರ್ಮವನ್ನು ಮಾಡಿದ್ದರೆ ಕುರುಗಳು ಮೃತ್ಯುಕಾಲವಲ್ಲದ ನಿನ್ನ ಕಾಲದಲ್ಲಿಯೇ ವಿನಾಶವನ್ನು ಹೊಂದಿರುತ್ತಿದ್ದರು. ಆಗ ಧೃತರಾಷ್ಟ್ರನು ದ್ಯೂತವನ್ನು ನಿವಾರಣೆ ಮಾಡಲಿಲ್ಲ ಎಂಬ ಅಪಕೀರ್ತಿಯೂ ನಿನಗೆ ಬರುತ್ತಿರಲಿಲ್ಲ.

ಕಿಮನ್ಯತ್ರ ವಿಷಯಾದೀಶ್ವರಾಣಾಂ
ಯತ್ರ ಪಾರ್ಥಃ ಪರಲೋಕಂ ಸ್ಮ ದ್ರಷ್ಟುಮ್ ।
ಅತ್ಯಕ್ರಾಮತ್ ಸ ತಥಾ ಸರ್ವಮರ್ತ್ಯಾನ್
ಸ ಕೇಶವೋ ಯಸ್ಯ ಮನುಷ್ಯಕಾರಃ ॥೩೫॥

ಸಮರ್ಥನಾದ ಅರ್ಜುನಾದಿಗಳನ್ನು ಬಿಟ್ಟು ಬೇರೆ ಎಲ್ಲಿ ಪರಾಕ್ರಮವಿದೆ? ಯಾವಾಗ ಅರ್ಜುನನು ಸ್ವರ್ಗಲೋಕವನ್ನು ನೋಡಲು ಹೊರಟನೋ ಆಗಲೇ ಅವನು ಎಲ್ಲ ಮನುಷ್ಯರನ್ನೂ ಮೀರಿದನು. ಜೊತೆಗೆ ಎಲ್ಲ ಮನುಷ್ಯರಿಗಿಂತ ಮಿಗಿಲಾದ ಕೇಶವನು ಅವನಿಗೆ ಸಹಾಯನಾಗಿದ್ದಾನೆ.

ಏತಾನ್ ಗುಣಾನ್ ಕರ್ಮಕೃತಾನವೇಕ್ಷ್ಯ
ಭಾವಾಭಾವೌ ವರ್ತಮಾನಾವನಿತ್ಯೌ ।

ಏವಂಧರ್ಮಾ ನಾಪದಃ ಸಂತಿತೀರ್ಷೇತ್
ಹೀನೋ ವೀರ್ಯಾದ್ ಯಶ್ಚ ಭವೇದಶಿಷ್ಟಃ ॥೩೦॥

ಪ್ರಜ್ಞಾಹೀನನಾದವನು, ದುಷ್ಕುಲಪ್ರಸೂತನಾದವನು, ಕ್ರೂರನಾದವನು, ಧರ್ಮದ್ವೇಷಿಯಾದವನು, ಕ್ಷತ್ರಿಯವಿದ್ಯೆಗಳನ್ನು ತಿಳಿಯದವನು, ಪರಾಕ್ರಮಹೀನನಾದವನು ಮತ್ತು ಅಶಿಷ್ಟನಾದವನು – ಇಂತಹ ದೋಷಗಳನ್ನು ಹೊಂದಿದವನು ಆಪತ್ತನ್ನು ದಾಟಲು ಆಸೆ ಪಡಬಾರದು.

ಕುಲೇ ಜಾತೋ ಬಲವಾನ್ ಯೋ ಯಶಸ್ವೀ
ಬಹುಶ್ರುತಃ ಸುಖಜೀವೀ ಜಿತಾತ್ಮಾ ।
ಧರ್ಮಾಧರ್ಮೌ ಗ್ರಥಿತೌ ಯೋ ಬಿಭರ್ತಿ
ಸ ಹ್ಯಸ್ಯ ದಿಷ್ಟ್ಯಸ್ಯ ವಶಾದುಪೈತಿ ॥೩೧॥

ಯಾವನು ಸತ್ಕುಲಪ್ರಸೂತನೋ, ಬಲಿಷ್ಠನೋ, ಕೀರ್ತಿವಂತನೋ, ಬಹುಶ್ರುತನೋ, ಸುಖಜೀವಿಯೋ, ಮನೋಜಯವುಳ್ಳವನೋ, ಧರ್ಮಾಧರ್ಮಗಳು ಒಟ್ಟಿಗೇ ಸೇರಿದಾಗ ಅವುಗಳನ್ನು ಪ್ರತ್ಯೇಕಿಸಿ ಯಾವನು ಧರ್ಮವನ್ನೇ ಪೋಷಿಸುತ್ತಾನೆಯೋ ಅಂತಹವನು ದೈವಸಹಾಯದಿಂದ ಸಂಪತ್ತನ್ನು ಹೊಂದುವನು.

ಕಥಂ ಹಿ ಮಂತ್ರಾಗ್ರ್ಯಧರೋ ಮನೀಷೀ
ಧರ್ಮಾರ್ಥಯೋರಾಪದಿ ಸಂಪ್ರಣೇತಾ ।
ಏವಂ ಯುಕ್ತಃ ಸರ್ವಮಂತ್ರೈರ್ವಿಹೀನಮ್
ಅನಾಶಾಸ್ಯಂ ಕರ್ಮ ಕುರ್ಯಾದಮೂಢಃ ॥೩೨॥

ಶ್ರೇಷ್ಠವಾದ ಮಂತ್ರಾಲೋಚನೆಯುಳ್ಳವನೂ, ವಿವೇಕಿಯೂ, ಆಪತ್ತು ಒದಗಿದಾಗ ಧರ್ಮಾರ್ಥಗಳನ್ನು ಸರಿಯಾಗಿ ನಡೆಸುವವನೂ, ಮೂಢನಲ್ಲದವನೂ ಆದ ಯಾವನು ಎಲ್ಲಾ ಮಂತ್ರಾಲೋಚನೆಗೆ ವಿರುದ್ಧವಾದ, ಯಾರಿಂದಲೂ ಹೊಗಳಲ್ಪಡದ ಕರ್ಮವನ್ನು ಮಾಡಿಯಾನು?

ತವ ಹ್ಯಮೀ ಮಂತ್ರವಿದಃ ಸಮೇತ್ಯ
ಸಮಾಸತೇ ಕರ್ಮಸು ನಿತ್ಯಯುಕ್ತಾಃ ।

ತೇಷಾಮಯಂ ಬಲವಾನ್ ನಿಶ್ಚಯಶ್ಚ
ಕುರುಕ್ಷಯೋ ನಿಯಮೇನ ವ್ಯಪಾಯೀ ॥೩೩॥

ಈ ಮಂತ್ರವೇತ್ತರು ನಿತ್ಯವೂ ನಿನ್ನ ಹಿತವಾದ ಕರ್ಮಗಳಲ್ಲಿ ರತರಾಗಿ ನಿನ್ನ ಸುತ್ತಲೂ ಇದ್ದಾರೆ. ಅವರಿಗೆ ದೊಡ್ಡ ಅಪಾಯವನ್ನು ತಂದೊಡ್ಡುವ ಕುರುಕುಲಕ್ಷಯವು ಉಂಟಾಗುತ್ತದೆ ಎಂಬ ನಿಶ್ಚಯವು ಪ್ರಬಲವಾಗಿದೆ.

ಅಕಾಲಿಕಂ ಕುರವೋ ನಾಭವಿಷ್ಯನ್
ಪಾಪೇನ ಚೇತ್ ಪಾಪಮಜಾತಶತ್ರುಃ ।
ಇಚ್ಛೇತ್ ಜಾತು ತ್ವಯಿ ಪಾಪಂ ವಿಸೃಜ್ಯ
ನಿಂದಾಂ ಚೇಯಂ ತವ ತದೇವಾಭವಿಷ್ಯತ್ ॥೩೪॥

ಅಜಾತಶತ್ರುವು ನಿನಗೆ ಹಿಂಸೆ ಮಾಡುವುದನ್ನು ಬಿಟ್ಟು ಪಾಪವುಳ್ಳ ದುರ್ಯೋಧನನು ದ್ಯೂತವನ್ನು ಪ್ರವರ್ತಿಸಿದಾಗ ದುರ್ಯೋಧನನ ವಿಷಯದಲ್ಲಿಯೇ ವಧೆಯ ರೂಪವಾದ ಪಾಪಕರ್ಮವನ್ನು ಮಾಡಿದ್ದರೆ ಕುರುಗಳು ಮೃತ್ಯುಕಾಲವಲ್ಲದ ನಿನ್ನ ಕಾಲದಲ್ಲಿಯೇ ವಿನಾಶವನ್ನು ಹೊಂದಿರುತ್ತಿದ್ದರು. ಆಗ ಧೃತರಾಷ್ಟ್ರನು ದ್ಯೂತವನ್ನು ನಿವಾರಣೆ ಮಾಡಲಿಲ್ಲ ಎಂಬ ಅಪಕೀರ್ತಿಯೂ ನಿನಗೆ ಬರುತ್ತಿರಲಿಲ್ಲ.

ಕಿಮನ್ಯತ್ರ ವಿಷಯಾದೀಶ್ವರಾಣಾಂ
ಯತ್ರ ಪಾರ್ಥಃ ಪರಲೋಕಂ ಸ್ಮ ದ್ರಷ್ಟುಮ್ ।
ಅತ್ಯಕ್ರಾಮತ್ ಸ ತಥಾ ಸರ್ವಮರ್ತ್ಯಾನ್
ಸ ಕೇಶವೋ ಯಸ್ಯ ಮನುಷ್ಯಕಾರಃ ॥೩೫॥

ಸಮರ್ಥನಾದ ಅರ್ಜುನಾದಿಗಳನ್ನು ಬಿಟ್ಟು ಬೇರೆ ಎಲ್ಲಿ ಪರಾಕ್ರಮವಿದೆ? ಯಾವಾಗ ಅರ್ಜುನನು ಸ್ವರ್ಗಲೋಕವನ್ನು ನೋಡಲು ಹೊರಟನೋ ಆಗಲೇ ಅವನು ಎಲ್ಲ ಮನುಷ್ಯರನ್ನೂ ಮೀರಿದನು. ಜೊತೆಗೆ ಎಲ್ಲ ಮನುಷ್ಯರಿಗಿಂತ ಮಿಗಿಲಾದ ಕೇಶವನು ಅವನಿಗೆ ಸಹಾಯನಾಗಿದ್ದಾನೆ.

ಏತಾನ್ ಗುಣಾನ್ ಕರ್ಮಕೃತಾನವೇಕ್ಷ್ಯ
ಭಾವಾಭಾವೌ ವರ್ತಮಾನಾವನಿತ್ಯೌ ।

ಬಲಿರ್ಹಿ ರಾಜಾ ಪಾರಮವಿಂದಮಾನೋ
ನಾನ್ಯತ್ ಕಾಲಾತ್ ಕಾರಣಂ ತತ್ರ ಮೇನೇ ॥೩೬॥

ಕರ್ಮಗಳಿಂದ ಉಂಟಾಗುವ ಸಂಪತ್ತು ಮತ್ತು ವಿಪತ್ತು ರೂಪವಾದ ಫಲಗಳು ಅನಿತ್ಯವಾಗಿರುತ್ತವೆ ಎಂದು ತಿಳಿದ ಬಲಿಯು ಒಂದು ನಿರ್ಣಯಕ್ಕೆ ಬರಲಾರದೆ ಕಾಲವನ್ನು ಬಿಟ್ಟು ಬೇರೆ ಕಾರಣವಿಲ್ಲ ಎಂದು ತಿಳಿದನು.

ಚಕ್ಷುಃಶ್ರೋತ್ರೇ ನಾಸಿಕಾ ತ್ವಕ್ ಚ ಜಿಹ್ವಾ
ಜ್ಞಾನಸ್ಯೈತಾನ್ಯಾಯತನಾನಿ ಜಂತೋಃ ।
ನಾನ್ಯಪ್ರೀತಸ್ತತ್ರ ತೃಷ್ಣಾಕ್ಷಯೇ ತು
ತಾನ್ಯವ್ಯಥೋ ದುಃಖಹೀನಃ ಪ್ರಣುದ್ಯಾತ್ ॥೩೭॥

ಚಕ್ಷುಃ-ಶ್ರೋತ್ರಗಳು, ನಾಸಿಕಾ, ತ್ವಕ್ ಮತ್ತು ಜಿಹ್ವಾ ಇವು ಜಂತುವಿಗೆ ಜ್ಞಾನದ ಸಾಧನಗಳು. ಹರಿಯನ್ನು ಬಿಟ್ಟು ಬೇರೆ ಕಡೆಯಲ್ಲಿ ಸಂತೋಷಗೊಳ್ಳದೆ ಇಂದ್ರಿಯ ವಿಷಯಗಳಾದ ಶಬ್ದಾದಿಗಳಲ್ಲಿ ಆಸೆಯನ್ನು ತೊರೆದವನು ವ್ಯಥೆ ಇಲ್ಲದೆ ದುಃಖಹೀನನಾಗಿ ಜ್ಞಾನಸಾಧನಗಳನ್ನು ಪ್ರೇರಿಸುತ್ತಾನೆ.

ನ ತ್ವೇವ ಮನ್ಯೇ ಪುರುಷಸ್ಯ ಕರ್ಮ
ಸಂವರ್ತತೇ ಸಂಪ್ರಯುಕ್ತಂ ಯಥಾವತ್ ।
ಮಾತುಃ ಪಿತುಃ ಕರ್ಮಣಾऽಭಿಪ್ರಸೂತಃ
ಸಂವರ್ಧತೇ ಕರ್ಮಣಾ ಭೋಜನೇನ ॥೩೮॥

ಪುರುಷನು ಹಿಂದೆ ಸರಿಯಾಗಿ ಮಾಡಿದ ಕರ್ಮವೇ ಎಲ್ಲ ಫಲವನ್ನೂ ಕೊಡುತ್ತದೆ ಎಂದು ನನಗೆ ಎನಿಸುವುದಿಲ್ಲ. ತಂದೆ-ತಾಯಿ ಮತ್ತು ತನ್ನ ಕರ್ಮದಿಂದ ಜನ್ಮವನ್ನು ಪಡೆದವನು ತನ್ನ ಕರ್ಮದಿಂದ ಸಂಪಾದಿಸಿದ ಭೋಜನದಿಂದ ಬೆಳೆಯುತ್ತಾನೆ (ಮಾತಾ-ಪಿತೃಗಳು ಮತ್ತು ಆಹಾರ - ಇವು ಕೂಡ ಪುರುಷನ ಕರ್ಮಸಿದ್ಧಿಯನ್ನು ಕುರಿತು ಕಾರಣವಾಗುತ್ತವೆ).

ಪ್ರಿಯಾಪ್ರಿಯೇ ಸುಖದುಃಖೇ ಚ ರಾಜನ್
ನಿಂದಾಪ್ರಶಂಸೇ ಚ ಭಜಂತ ಏನಮ್ ।

ಪರಸ್ತ್ವೇನಂ ಗರ್ಹಯತೇಽಪರಾಧೇ
ಪ್ರಶಂಸತೇ ಸಾಧುವೃತ್ತಂ ತಮೇವ ॥೩೯॥

ಹಾಗೆ ಜನಿಸಿದ ಮನುಷ್ಯನಿಗೆ ಪ್ರಿಯಾಪ್ರಿಯಗಳೂ, ಸುಖದುಃಖಗಳೂ, ನಿಂದಾ-ಪ್ರಶಂಸೆಗಳೂ ಉಂಟಾಗುತ್ತವೆ. ಅವನು ಅಪರಾಧವನ್ನು ಮಾಡಿದರೆ ಇನ್ನೊಬ್ಬನು ಅವನನ್ನು ನಿಂದಿಸುತ್ತಾನೆ. ಒಳ್ಳೆಯ ನಡತೆಯನ್ನು ಹೊಂದಿದ್ದರೆ ಅವನನ್ನೇ ಹೊಗಳುತ್ತಾನೆ.

ಸ ತ್ವಾಂ ಗರ್ಹೇ ಭಾರತಾನಾಂ ವಿರೋಧಾದ್
ಅಂತೋ ನೂನಂ ಭವಿತಾಽಯಂ ಪ್ರಜಾನಾಮ್ ।
ನೋ ಚೇದಿದಂ ತವ ಕರ್ಮಾಪರಾಧಾತ್
ಕುರೂನ್ ದಹೇತ್ ಕೃಷ್ಣವರ್ತ್ಮೇವ ಕಕ್ಷಮ್ ॥೪೦॥

ಅಂತಹ ನಾನು ಭರತವಂಶದವರಿಗೆ ವಿರೋಧ ಉಂಟಾಗುವುದರಿಂದ ನಿನ್ನನ್ನು ನಿಂದಿಸುತ್ತೇನೆ. ನಿಶ್ಚಿತವಾಗಿ ಇದರಿಂದ ಸಂತತಿಯ ಕ್ಷಯವು ಉಂಟಾಗುತ್ತದೆ. ಒಂದು ಪಕ್ಷ ಸಂತತಿ ಕ್ಷಯವಾಗದಿದ್ದರೆ ನಿನ್ನ ಕರ್ಮಾಪರಾಧದಿಂದ ಮುಂದೆ ಒದಗಲಿರುವ ಯುದ್ಧವು ಹುಲ್ಲುಗಾವಲನ್ನು ಅಗ್ನಿಯು ಸುಡುವಂತೆ ಕುರುಗಳನ್ನು ಸುಟ್ಟುಹಾಕುತ್ತದೆ.

ತ್ವಮೇವೈಕೋ ಜಾತು ಪುತ್ರಸ್ಯ ರಾಜನ್
ವಶಂ ಗತ್ವಾ ಸರ್ವಲೋಕೇ ನರೇಂದ್ರ ।
ಯದಾತ್ಮಾನಂ ಶ್ಲಾಘಸೇ ದ್ಯೂತಕಾಲೇ
ನಾಗಾಃ ಶಮಂ ಪಶ್ಯ ವಿಪಾಕಮಸ್ಯ ॥೪೧॥

ಎಲೈ ನರೇಂದ್ರನೇ, ದ್ಯೂತಕಾಲದಲ್ಲಿ ಸರ್ವಲೋಕಗಳ ಮಧ್ಯೆ ನೀನೊಬ್ಬನೇ ಪುತ್ರನಿಗೆ ವಶನಾಗಿ ನಿನ್ನನ್ನೇ ನೀನು ಹೊಗಳಿಕೊಳ್ಳುತ್ತಾ ಶಾಂತಿಯನ್ನು ಹೊಂದಲಿಲ್ಲ. ಅದರ ವಿಪಾಕವನ್ನು ನೋಡು.

ಅನಾಪ್ತಾನಾಂ ಸಂಗ್ರಹಾತ್ ತ್ವಂ ನರೇಂದ್ರ
ತಥಾಽಽಪ್ತಾನಾಂ ನಿಗ್ರಹಾಚ್ಚೈವ ರಾಜನ್ ।
ಭೂಮಿಂ ಸ್ಫೀತಾಂ ದುರ್ಬಲತ್ವಾದನಂತಾಮ್
ಅಶಕ್ತಸ್ತ್ವಂ ರಕ್ಷಿತುಂ ಕೌರವೇಯ ॥೪೨॥

ಎಲೈ ನರೇಂದ್ರನೇ, ಎಲೈ ಕುರುವಂಶಜಾತನೇ, ನೀನು ಆಪ್ತರಲ್ಲದವರನ್ನು ಸಮೀಪದಲ್ಲಿಟ್ಟುಕೊಂಡು ಆಪ್ತರನ್ನು ನಿಗ್ರಹಿಸಿರುವುದರಿಂದ ದುರ್ಬಲನಾಗಿ ಅಪಾರವಾದ ಮತ್ತು ಶುದ್ಧವಾದ ಭೂಮಿಯನ್ನು ರಕ್ಷಣೆ ಮಾಡಲು ಸಮರ್ಥನಾಗಿಲ್ಲ.

**ಅನುಜ್ಞಾತೋ ರಥವೇಗಾವಧೂತಃ**
**ಶ್ರಾಂತೋಽಭಿಪದ್ಯೇ ಶಯನಂ ನೃಸಿಂಹ ।**
**ಪ್ರಾತಃ ಶ್ರೋತಾರಃ ಕುರವಃ ಸಭಾಯಾಮ್**
**ಅಜಾತಶತ್ರೋರ್ವಚನಂ ಸಮೇತಾಃ** ॥೪೩॥

ನರಸಿಂಹನೇ, ರಥದ ವೇಗದಿಂದ ಬಹಳವಾಗಿ ಅಲ್ಲಾಡಿ ನಾನು ದಣಿದಿದ್ದೇನೆ. ನಿನ್ನ ಅನುಮತಿಯನ್ನು ಪಡೆದು ನಾನು ಹೋಗಿ ಮಲಗುತ್ತೇನೆ. ಅಜಾತಶತ್ರುವಿನ ಸಂದೇಶವನ್ನು ನಾಳೆಯ ಪ್ರಾತಃಕಾಲದಲ್ಲಿ ಸಭೆಯಲ್ಲಿ ಎಲ್ಲಾ ಕುರುಗಳೂ ಕೇಳುವರು.

**ಧೃತರಾಷ್ಟ್ರಃ**

**ಅನುಜ್ಞಾತೋಽಸ್ಯಾವಸಥಂ ಪರೈಹಿ**
**ಪ್ರಪದ್ಯಸ್ವ ಶಯನಂ ಸೂತಪುತ್ರ ।**
**ಪ್ರಾತಃ ಶ್ರೋತಾರಃ ಕುರವಃ ಸಭಾಯಾಮ್**
**ಅಜಾತಶತ್ರೋರ್ವಚನಂ ಸಮೇತಾಃ** ॥೪೪॥

**ಧೃತರಾಷ್ಟ್ರ**– ಸೂತಪುತ್ರನೇ, ಅನುಮತಿಯನ್ನು ನೀಡಿದ್ದೇನೆ. ನಿನ್ನ ಮನೆಗೆ ಹೋಗಿ ನಿದ್ರಿಸು. ಅಜಾತಶತ್ರುವಿನ ಸಂದೇಶವಚನವನ್ನು ನಾಳೆಯ ಸಭೆಯಲ್ಲಿ ಎಲ್ಲಾ ಕುರುಗಳೂ ಒಟ್ಟಾಗಿ ಸೇರಿ ಕೇಳುವರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕತ್ರಿಂಶೋಽಧ್ಯಾಯಃ ॥

॥ ಸಂಜಯಯಾನಪರ್ವಣಿ ದ್ವಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಮೂವತ್ತೊಂದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

## ಮಹಾಭಾರತತಾತ್ಪರ್ಯನಿರ್ಣಯಃ

ಪಪ್ರಚ್ಛ ಸೋಽವದದ್ ಧರ್ಮ ಪಾರ್ಥಾನಾಂ ರಾಜ್ಯದಾಪನಮ್ ।
ಐಹಿಕಸ್ಯ ಸುಖಸ್ಯಾಪಿ ಕಾರಣಂ ತದನಿಂದಿತಮ್ ॥೪೨॥

ಧರ್ಮದ ಬಗ್ಗೆ ಧೃತರಾಷ್ಟ್ರನು ವಿದುರನಲ್ಲಿ ಕೇಳಲಾಗಿ, ಆಗ ವಿದುರ 'ಪಾಂಡವರಿಗೆ ರಾಜ್ಯ ಕೊಡಿಸುವುದೇ ನಿನಗೆ ಧರ್ಮ ಎಂದ. ಪಾಂಡವರಿಗೆ ರಾಜ್ಯ ಕೊಟ್ಟರೆ ಅದು ಐಹಿಕ ಸುಖಕ್ಕೂ ಕಾರಣವಾಗುವುದು'.

ಅನ್ಯಥಾ ಸರ್ವಪುತ್ರಾಣಾಂ ನಾಶಂ ಧರ್ಮಾತಿಲಂಘನಮ್ ।
ತತ್ರ ಭಾವಮಕೃತ್ವಾ ಸ ಜ್ಞಾನಾದಿಚ್ಛನ್ನಘಕ್ಷಯಮ್ ॥೪೩॥

'ಕೊಡದಿದ್ದರೆ ಧರ್ಮೋಲ್ಲಂಘನೆಯೇ ಆಗುವುದು. ನಿನ್ನೆಲ್ಲ ಮಕ್ಕಳ ನಾಶವೂ ಆಗುವುದು' ಎಂದ. ಧೃತರಾಷ್ಟ್ರ ವಿದುರನ ಸಲಹೆಯನ್ನೊಪ್ಪದೆ ಪಾಂಡವದ್ವೇಷದ ಪಾಪವನ್ನು ತತ್ತ್ವಜ್ಞಾನದಿಂದ ಕ್ಷಯ ಮಾಡಿಕೊಳ್ಳಲು ಬಯಸಿದ.

॥ ಸಮಾಪ್ತಂ ಸಂಜಯಯಾನಪರ್ವ ॥

★ ★ ★ ★ ★

# ೩. ಪ್ರಜಾಗರಪರ್ವ

## ಮೂವತ್ತೆರಡನೆಯ ಅಧ್ಯಾಯ

ವಿದುರನೀತಿ

**ವೈಶಂಪಾಯನಃ**

**ದ್ವಾಃಸ್ಥಂ ತ್ವಾಹ ಮಹಾಪ್ರಾಜ್ಞೋ ಧೃತರಾಷ್ಟ್ರೋ ಮಹೀಪತಿಃ ।**
**ವಿದುರಂ ದ್ರಷ್ಟುಮಿಚ್ಛಾಮಿ ತಮಿಹಾನಯ ಮಾಚಿರಮ್ ॥೧॥**

ವೈಶಂಪಾಯನ– ಮಹಾಪ್ರಾಜ್ಞನಾದ ಧೃತರಾಷ್ಟ್ರರಾಜನು ದ್ವಾರಪಾಲಕನನ್ನು ಕುರಿತು, ವಿದುರನನ್ನು ನೋಡಲು ಬಯಸುತ್ತೇನೆ. ಅವನನ್ನು ಬೇಗ ಇಲ್ಲಿಗೆ ಕರೆದುಕೊಂಡು ಬಾ ಎಂದು ಹೇಳಿದನು.

**ಪ್ರಹಿತೋ ಧೃತರಾಷ್ಟ್ರೇಣ ದೂತಃ ಕ್ಷತ್ತಾರಮಬ್ರವೀತ್ ॥೨॥**

**ಈಶ್ವರಸ್ತ್ವಾಂ ಮಹಾರಾಜೋ ಮಹಾಪ್ರಾಜ್ಞೋ ದಿದೃಕ್ಷತಿ ॥೩॥**

ಧೃತರಾಷ್ಟ್ರನಿಂದ ಕಳುಹಿಸಲ್ಪಟ್ಟ ದೂತನು ವಿದುರನ ಬಳಿಗೆ ಬಂದು ಪ್ರಭುವೂ, ಮಹಾಪ್ರಾಜ್ಞನೂ ಆದ ಮಹಾರಾಜನು ನಿನ್ನನ್ನು ನೋಡಲು ಬಯಸುತ್ತಾನೆ ಎಂದು ಹೇಳಿದನು.

ಏವಮುಕ್ತಸ್ತು ವಿದುರಃ ಪ್ರಾಪ್ಯ ರಾಜನಿವೇಶನಮ್ ।
ಅಬ್ರವೀದ್ ಧೃತರಾಷ್ಟ್ರಾಯ ದ್ವಾಃಸ್ಥಂ ಮಾಂ ಪ್ರತಿಬೋಧಯ ॥೪॥

ಹೀಗೆ ಹೇಳಲ್ಪಟ್ಟ ವಿದುರನು ರಾಜನಿವಾಸಕ್ಕೆ ಹೋಗಿ ದ್ವಾರಪಾಲಕನನ್ನು ಕುರಿತು ಧೃತರಾಷ್ಟ್ರನಿಗೆ ನಾನು ಬಂದಿದ್ದೇನೆಂದು ಹೇಳು ಎಂದು ತಿಳಿಸಿದನು.

ದ್ವಾಃಸ್ಥಃ

ವಿದುರೋಽಯಮನುಪ್ರಾಪ್ತೋ ರಾಜೇಂದ್ರ ತವ ಶಾಸನಾತ್ ।
ದ್ರಷ್ಟುಮಿಚ್ಛತಿ ತೇ ಪಾದೌ ಕಿಂ ಕರೋತಿ ಪ್ರಶಾಧಿ ಮಾಮ್ ॥೫॥

ದ್ವಾರಪಾಲಕ– ರಾಜೇಂದ್ರನೇ, ನಿನ್ನ ಅಪ್ಪಣೆಯಂತೆ ಈ ವಿದುರನು ಬಂದಿದ್ದಾನೆ. ನಿನ್ನ ಪಾದಗಳನ್ನು ನೋಡಲು ಬಯಸುತ್ತಾನೆ. ಅವನು ಏನು ಮಾಡಬೇಕೆಂದು ನನಗೆ ಆಜ್ಞಾಪಿಸು.

ಧೃತರಾಷ್ಟ್ರಃ

ಪ್ರವೇಶಯ ಮಹಾಪ್ರಾಜ್ಞಂ ವಿದುರಂ ದೀರ್ಘದರ್ಶನಮ್ ।
ಅಹಂ ಹಿ ವಿದುರಸ್ಯಾಸ್ಯ ನಾಕಾಲ್ಯೋ ಜಾತು ದರ್ಶನೇ ॥೬॥

ಧೃತರಾಷ್ಟ್ರ– ಮಹಾಪ್ರಾಜ್ಞನಾದ ದೀರ್ಘದರ್ಶಿಯಾದ ವಿದುರನನ್ನು ಒಳಗೆ ಬಿಡು. ವಿದುರನ ದರ್ಶನಕ್ಕೆ ನಾನು ಯಾವ ಕಾಲದಲ್ಲಿಯೂ ಅಲಭ್ಯನಲ್ಲ.

ದ್ವಾಃಸ್ಥಃ

ಪ್ರವಿಶಾಂತಃಪುರಂ ಕ್ಷತ್ತುರ್ಮಹಾರಾಜಸ್ಯ ಧೀಮತಃ ।
ನ ಹಿ ತೇ ದರ್ಶನೇಽಕಾಲ್ಯೋ ಜಾತು ರಾಜಾಽಬ್ರವೀದ್ಧಿ ಮಾಮ್ ॥

ದಾಸ– ವಿದುರನೇ, ಮೇಧಾವಿಯಾದ ಮಹಾರಾಜನ ಅಂತಃಪುರವನ್ನು ಪ್ರವೇಶಿಸು. ರಾಜನು ನಿನ್ನ ದರ್ಶನಕ್ಕೆ ತಾನು ಯಾವ ಕಾಲದಲ್ಲಿಯೂ ಅಲಭ್ಯನಲ್ಲವೆಂದು ನನಗೆ ಹೇಳಿದನು.

ವೈಶಂಪಾಯನಃ

ತತಃ ಪ್ರವಿಶ್ಯ ವಿದುರೋ ಧೃತರಾಷ್ಟ್ರನಿವೇಶನಮ್ ।
ಅಬ್ರವೀತ್ ಪ್ರಾಂಜಲಿರ್ವಾಕ್ಯಂ ಚಿಂತಯಾನಂ ನರಾಧಿಪಮ್ ॥೮॥

ವಿದುರೋಽಹಂ ಮಹಾಪ್ರಾಜ್ಞ ಸಂಪ್ರಾಪ್ತಸ್ತವ ಶಾಸನಾತ್ ।
ಯದಿ ಕಿಂಚನ ಕರ್ತವ್ಯಮಯಮಸ್ಮಿ ಪ್ರಶಾಧಿ ಮಾಮ್ ॥೯॥

ವೈಶಂಪಾಯನ– ಅನಂತರ ವಿದುರನು ಧೃತರಾಷ್ಟ್ರನ ನಿವಾಸವನ್ನು ಪ್ರವೇಶಿಸಿ ಕೈಗಳನ್ನು ಮುಗಿದು ಚಿಂತಾಪರನಾಗಿದ್ದ ರಾಜನನ್ನು ಕುರಿತು ಮಹಾಪ್ರಾಜ್ಞನೇ, ನಿನ್ನ ಅಪ್ಪಣೆಯಂತೆ ನಾನು ಬಂದಿದ್ದೇನೆ. ನನ್ನಿಂದ ಏನಾದರೂ ಆಗಬೇಕಾಗಿದ್ದರೆ ನಾನು ಸಿದ್ಧನಾಗಿದ್ದೇನೆ. ನನಗೆ ಅಪ್ಪಣೆಯನ್ನು ಕೊಡು ಎಂದು ಹೇಳಿದನು.

ಧೃತರಾಷ್ಟ್ರಃ

ಸಂಜಯೋ ವಿದುರ ಪ್ರಾಪ್ತೋ ಗರ್ಹಯಿತ್ವಾ ತು ಮಾಂ ಗತಃ ।
ಅಜಾತಶತ್ರೋಃ ಶ್ವೋ ವಾಕ್ಯಂ ಸಭಾಮಧ್ಯೇ ಸ ವಕ್ಷ್ಯತಿ ॥೧೦॥

ಧೃತರಾಷ್ಟ್ರ– ವಿದುರನೇ, ಸಂಜಯನು ಹಿಂದಿರುಗಿ ಬಂದು ನನ್ನನ್ನು ನಿಂದಿಸಿ ಹೊರಟು ಹೋದನು. ಅಜಾತಶತ್ರುವಾದ ಯುಧಿಷ್ಠಿರನ ಮಾತುಗಳನ್ನು ನಾಳೆಯ ದಿನ ಸಭೆಯಲ್ಲಿ ಹೇಳುವನು.

ತಸ್ಯಾದ್ಯ ಕುರುವೀರಸ್ಯ ನ ವಿಜ್ಞಾತಂ ವಚೋ ಮಯಾ ।
ತನ್ಮೇ ದಹತಿ ಗಾತ್ರಾಣಿ ತದಕಾರ್ಷೀತ್ ಪ್ರಜಾಗರಮ್ ॥೧೧॥

ನನಗೆ ಕುರುವೀರನಾದ ಅವನ ಮಾತುಗಳು ಈ ದಿನ ತಿಳಿಯಲಿಲ್ಲ. ಅದು ನನ್ನ ದೇಹವನ್ನು ಸುಡುತ್ತಾ ನನಗೆ ಜಾಗರಣೆಯನ್ನು ಉಂಟುಮಾಡಿದೆ.

ಜಾಗ್ರತೋ ದಹ್ಯಮಾನಸ್ಯ ಶ್ರೇಯೋ ಯದನುಪಶ್ಯಸಿ ।
ತದ್ ಬ್ರೂಹಿ ತ್ವಂ ಹಿ ನಸ್ತಾತ ಧರ್ಮಾರ್ಥಕುಶಲೋ ಹ್ಯಸಿ ॥೧೨॥

ಪ್ರೀತಿಪಾತ್ರನೇ, ಹೀಗೆ ದುಃಖತಪ್ತನಾಗಿ ಎಚ್ಚರಿಕೆಯಿಂದ ಇರುವ ನನಗೆ ಯಾವುದು ಶ್ರೇಯಸ್ಸೆಂದು ತಿಳಿಯುತ್ತೀಯೋ ಅದನ್ನು ಹೇಳು. ಪ್ರೀತಿಪಾತ್ರನೇ, ನಮಗೆ ನೀನೇ ಧರ್ಮಾರ್ಥಕುಶಲನಾದವನು.

ಯತಃ ಪ್ರಾಪ್ತಃ ಸಂಜಯಃ ಪಾಂಡವೇಭ್ಯೋ
ನ ಮೇ ಯಥಾವನ್ಮನಸಃ ಪ್ರಶಾಂತಿಃ ।

ಸರ್ವೇಂದ್ರಿಯಾಣ್ಯಪ್ರಕೃತಿಂ ಗತಾನಿ
ಕಿಂ ವಕ್ಷ್ಯತೀತ್ಯೇವ ಹಿ ಮೇಽದ್ಯ ಚಿಂತಾ ॥೧೩॥

ಸಂಜಯನು ಪಾಂಡವರ ಕಡೆಯಿಂದ ಹಿಂದಿರುಗಿ ಬಂದಾಗಿನಿಂದ ನನ್ನ ಮನಸ್ಸಿಗೆ ಸರಿಯಾದ ಸಮಾಧಾನವೇ ಇಲ್ಲ. ನನ್ನ ಎಲ್ಲಾ ಇಂದ್ರಿಯಗಳೂ ವ್ಯಗ್ರವಾಗಿವೆ. ನಾಳೆ ಅವನು ಏನು ಹೇಳುವನು ಎಂದೇ ನನ್ನ ಈ ದಿನದ ಚಿಂತೆ.

ತನ್ಮೇ ಬ್ರೂಹಿ ವಿದುರ ತ್ವಂ ಯಥಾವತ್
ಮನೀಷಿತಂ ಸರ್ವಮಜಾತಶತ್ರೋಃ ।
ಯಥಾ ಚ ನಸ್ತಾತ ಹಿತಂ ಭವೇಚ್ಚ
ಪ್ರಜಾಶ್ಚ ಸರ್ವಾಃ ಸುಖಿತಾ ಭವೇಯುಃ ॥೧೪॥

ಎಲೈ ವಿದುರನೇ, ಅಜಾತಶತ್ರುವಿನ ಅಭಿಪ್ರಾಯವನ್ನೆಲ್ಲಾ ನೀನು ನನಗೆ ಸರಿಯಾಗಿ ಹೇಳು. ಪ್ರೀತಿಪಾತ್ರನೇ, ನಮಗೆ ಹಿತವಾಗುವಂತೆ ಎಲ್ಲ ಪ್ರಜೆಗಳಿಗೂ ಸುಖವಾಗುವಂತೆ ಅವನ ಅಭಿಪ್ರಾಯವು ಏನಿದೆ?

ವಿದುರಃ

ಅಭಿಯುಕ್ತಂ ಬಲವತಾ ದುರ್ಬಲಂ ಹೀನಸಾಧನಮ್ ।
ಹೃತಸ್ವಂ ಕಾಮಿನಂ ಚೋರಮಾವಿಶಂತಿ ಪ್ರಜಾಗರಾಃ ॥೧೫॥

ಕಚ್ಚಿದೇತೈರ್ಮಹಾದೋಷೈರ್ನ ಸ್ಪೃಷ್ಟೋಽಸಿ ನರಾಧಿಪ ।
ಕಚ್ಚಿಚ್ಚ ಪರವಿತ್ತೇಷು ಗೃಧ್ನನ್ ನ ಪರಿತಪ್ಯಸೇ ॥೧೬॥

ವಿದುರ– ಬಲಿಷ್ಠರಾಜನ ಆಕ್ರಮಣಕ್ಕೆ ಒಳಗಾದ ದುರ್ಬಲನಾದ ರಾಜನಿಗೆ, ತನ್ನ ಸಂಪತ್ತೆಲ್ಲವನ್ನೂ ಕಳೆದುಕೊಂಡವನಿಗೆ, ಕಾಮಿಯಾದವನಿಗೆ ಮತ್ತು ಚೋರನಿಗೆ ಜಾಗರಣೆಯು ಉಂಟಾಗುತ್ತದೆ. ಎಲೈ ನರಾಧಿಪನೇ, ನೀನು ಈ ಯಾವ ದೋಷದಿಂದಲೂ ಕೂಡಿಲ್ಲವಷ್ಟೆ? ಇನ್ನೊಬ್ಬರ ಸಂಪತ್ತಿನಲ್ಲಿ ಆಸೆಯನ್ನು ಮಾಡಿ ಪರಿತಾಪವನ್ನು ಪಡುತ್ತಿಲ್ಲವಷ್ಟೆ?

## ಧೃತರಾಷ್ಟ್ರಃ

ಶ್ರೋತುಮಿಚ್ಛಾಮಿ ತೇ ಧರ್ಮ್ಯಂ ಪರಂ ನೈಶ್ರೇಯಸಂ ವಚಃ ।
ಅಸ್ಮಿನ್ ರಾಜರ್ಷಿವಂಶೇ ಹಿ ತ್ವಮೇಕಃ ಪ್ರಾಜ್ಞತಮಃ ॥೧೭॥

ಧೃತರಾಷ್ಟ್ರ– ನಿನ್ನಿಂದ ಮೋಕ್ಷಸಾಧಕವಾದ ಧರ್ಮದ ಮಾತುಗಳನ್ನು ಕೇಳಲು ಬಯಸುತ್ತೇನೆ. ಈ ರಾಜರ್ಷಿವಂಶದಲ್ಲಿ ನೀನೊಬ್ಬನೇ ಅತ್ಯಂತ ಪ್ರಾಜ್ಞನಾದವನು.

## ವಿದುರಃ

ರಾಜಲಕ್ಷಣಸಂಪನ್ನಃ ತ್ರೈಲೋಕಸ್ಯಾಪಿ ಯಃ ಪ್ರಿಯಃ ।
ಪ್ರೇಷ್ಯಂತೇ ಪ್ರೇಷಿತಶ್ಚೈವ ಧೃತರಾಷ್ಟ್ರ ಯುಧಿಷ್ಠಿರಮ್ ॥೧೮॥

ವಿಪರೀತಃ ಸಪುತ್ರಸ್ತ್ವಂ ಭಾಗಧೇಯೇನ ಲಂಭಿತಃ ॥೧೯॥

ವಿದುರ– ಎಲೈ ಧೃತರಾಷ್ಟ್ರನೇ, ರಾಜಲಕ್ಷಣಗಳಿಂದ ಕೂಡಿ ಮೂರುಲೋಕಗಳಿಗೂ ಪ್ರಿಯನಾದ ಯುಧಿಷ್ಠಿರನ ಬಳಿಗೆ ದೂತರು ಹಿಂದೆ ಕಳುಹಿಸಲ್ಪಟ್ಟಿದ್ದಾರೆ. ಮುಂದೆಯೂ ಕಳುಹಿಸಲ್ಪಡುತ್ತಾರೆ (ದೂತರು ಮಾತ್ರ ಹೋಗುತ್ತಾರೆಯೇ ಹೊರತು ರಾಜ್ಯದಾನವನ್ನು ಮಾಡುವ ವಿಷಯದಲ್ಲಿ ನಿನ್ನ ಅಭಿಪ್ರಾಯವಿಲ್ಲ ಎಂದು ಧ್ವನಿ). ನಿನ್ನ ಪುತ್ರರ ಸ್ವಭಾವಕ್ಕೆ ವಿಪರೀತವಾದ ಸ್ವಭಾವವುಳ್ಳ ಯುಧಿಷ್ಠಿರನು ನಿನ್ನ ಅದೃಷ್ಟದಿಂದ ನಿನಗೆ ಪುತ್ರನಾಗಿ ದೊರೆತಿದ್ದಾನೆ.

ಅರ್ಚಿಷಾ ಪ್ರಜ್ಞಯಾ ಚೈವ ಧರ್ಮಾತ್ಮಾ ಧರ್ಮಕೋವಿದಃ ॥೨೦॥

ಆನೃಶಂಸ್ಯಾದನುಕ್ರೋಶಾದ್ ಧರ್ಮಾತ್ ಸತ್ಯಾತ್ ಪರಾಕ್ರಮಾತ್ ।
ಗುರುತ್ವಂ ತ್ವಯಿ ಸಂಪ್ರೇಕ್ಷ್ಯ ಬಹೂನ್ ಕ್ಲೇಶಾಂಸ್ತಿತಿಕ್ಷತೇ ॥೨೧॥

ತನ್ನ ಕಾಂತಿಯಿಂದಲೂ, ಪ್ರಜ್ಞೆಯಿಂದಲೂ ಅವನು ಧರ್ಮಾತ್ಮನೂ ಮತ್ತು ಧರ್ಮಕೋವಿದನೂ ಆಗಿದ್ದಾನೆ. ಮಾರ್ದವ, ದಯೆ, ಧರ್ಮ, ಸತ್ಯ, ಪರಾಕ್ರಮ - ಈ ಗುಣಗಳು ಅವನಲ್ಲಿರುವುದರಿಂದ ನಿನ್ನ ಗುರುತ್ವವನ್ನು ಗಮನಿಸಿ ಅನೇಕ ಕ್ಲೇಶಗಳನ್ನು ಅನುಭವಿಸುತ್ತಿದ್ದಾನೆ.

ದುರ್ಯೋಧನೇ ಸೌಬಲೇ ಚ ಕರ್ಣೇ ದುಃಶಾಸನೇ ತಥಾ ।
ಏತೇಷ್ವೈಶ್ವರ್ಯಮಾಧಾಯ ಕಥಂ ತ್ವಂ ಭೂತಿಮಿಚ್ಛಸಿ ॥೨೨॥

ದುರ್ಯೋಧನ, ಶಕುನಿ, ಕರ್ಣ, ದುಶ್ಶಾಸನ ಇವರಲ್ಲಿ ನಿನ್ನ ಐಶ್ವರ್ಯವನ್ನು ಒಪ್ಪಿಸಿ ನೀನು ಹೇಗೆ ಸಮೃದ್ಧಿಯನ್ನು ಬಯಸುವಿ?

**ಆತ್ಮಜ್ಞಾನಂ ಸಮಾರಂಭಃ ತಿತಿಕ್ಷಾ ಧರ್ಮನಿತ್ಯತಾ ।**
**ವಾಕ್‌ಸಂಯಮಶ್ಚ ದಾನಂ ಚ ನೈತೇಷ್ವೇತಾನಿ ಕೃತ್ಸ್ನಶಃ ॥೨೩॥**

ಆತ್ಮಜ್ಞಾನ, ಒಳ್ಳೆಯ ಉಪಕ್ರಮ, ದ್ವಂದ್ವಸಹಿಷ್ಣುತೆ, ನಿತ್ಯವೂ ಧರ್ಮಾಚರಣೆ, ಮಾತಿನಲ್ಲಿ ನಿಯಂತ್ರಣ, ದಾನ ಈ ಗುಣಗಳು ಇವರಿಂದ ಸಂಪೂರ್ಣವಾಗಿ ಹೊರಟುಹೋಗಿವೆ.

**ಏಕಸ್ಮಾದ್ ವೃಕ್ಷಾದ್ ಯಜ್ಞಪಾತ್ರಾಣಿ ರಾಜನ್**
**ಸ್ರುಕ್ ಚ ದ್ರೋಣೇ ಪೀಡಿನೀ ಲೋಡಿನೀ ಚ ।**
**ಏತದ್ ರಾಜನ್ ಬ್ರುವತೋ ಮೇ ನಿಬೋಧ**
**ಏಕಸ್ಮಾದ್ ವೈ ಜಾಯತೇಽಸಚ್ಚ ಸಚ್ಚ ॥೨೪॥**

ರಾಜನೇ, ಒಂದೇ ಅಶ್ವತ್ಥವೃಕ್ಷದಿಂದ ಯಜ್ಞಪಾತ್ರೆಗಳಾದ ಸ್ರುಕ್, ದ್ರೋಣೆ ಮೊದಲಾದವು, ಹಿಂಡುವ ಮತ್ತು ವಿಷವನ್ನು ಕಲುಕುವ ಪೀಡಿನೀ, ಲೋಡಿನೀ ಪಾತ್ರೆಗಳು ಉಂಟಾಗುತ್ತವೆ. ರಾಜನೇ, ನನ್ನ ಮಾತಿನಿಂದ ಇದನ್ನು ತಿಳಿ. ಒಬ್ಬನಿಂದಲೇ ಒಳ್ಳೆಯದು ಮತ್ತು ಕೆಟ್ಟದ್ದು ಎರಡೂ ಉಂಟಾಗುತ್ತದೆ( ಒಂದೇ ಕುಲದಲ್ಲಿಯೇ ಸುಪುತ್ರರೂ, ದುಷ್ಪುತ್ರರೂ ಜನಿಸುತ್ತಾರೆ).

**ನಿಷೇವತೇ ಪ್ರಶಸ್ತಾನಿ ನಿಂದಿತಾನಿ ನ ಸೇವತೇ ।**
**ಅನಾಸ್ತಿಕಃ ಶುದ್ಧಭಾವಃ ಶ್ರದ್ದಧಾನಃ ಸ ಪಂಡಿತಃ ॥೨೫॥**

ಯಾವನು ಪ್ರಶಸ್ತವಾದ ವಸ್ತುಗಳನ್ನು ಸೇವಿಸುತ್ತಾನೆಯೋ, ನಿಂದಿತವಾದ ವಸ್ತುಗಳನ್ನು ತ್ಯಜಿಸುತ್ತಾನೆಯೋ, ಅನಾಸ್ತಿಕನಾಗಿ ಶುದ್ಧವಾದ ಅಭಿಪ್ರಾಯವನ್ನು ಹೊಂದಿ ಶ್ರದ್ಧಾಳುವಾದ ಅವನು ಪಂಡಿತನೆನಿಸುತ್ತಾನೆ.

**ಕ್ರೋಧೋ ಹರ್ಷಶ್ಚ ದರ್ಪಶ್ಚ ಹ್ರೀಃ ಸ್ತಂಭೋ ಮಾನ್ಯಮಾನಿತಾ ।**
**ಯಮರ್ಥಾಃ ನಾಪಕರ್ಷಂತಿ ಸ ವೈ ಪಂಡಿತ ಉಚ್ಯತೇ ॥೨೬॥**

ಕ್ರೋಧ, ಧನಾದಿ ಮದ, ದರ್ಪ, ಪೂಜ್ಯರನ್ನು ಪೂಜಿಸುವುದರಲ್ಲಿ ನಾಚಿಕೆ, ತನ್ನನ್ನೇ ಎಲ್ಲರಿಗಿಂತಲೂ ಶ್ರೇಷ್ಠನೆಂದು ತಿಳಿದುಕೊಳ್ಳುವುದು ಈ ಪದಾರ್ಥಗಳು ಯಾವನನ್ನು ಕೆಳಗೆ ಎಳೆಯುವುದಿಲ್ಲವೋ ಅವನು ಪಂಡಿತನೆನಿಸುತ್ತಾನೆ.

**ಯಸ್ಯ ಕೃತ್ಯಂ ನ ಜಾನಂತಿ ಮಂತ್ರಂ ವಾ ಮಂತ್ರಿತಂ ಪರೇ ।**
**ಕೃತಮೇವಾಸ್ಯ ಜಾನಂತಿ ಸ ವೈ ಪಂಡಿತ ಉಚ್ಯತೇ ॥೨೭॥**

ಯಾವನ ಮುಂದೆ ಮಾಡಲಿರುವ ಕಾರ್ಯವನ್ನಾಗಲೀ, ಮಂತ್ರಾಲೋಚನೆಯನ್ನಾಗಲೀ ಇನ್ನೊಬ್ಬರು ತಿಳಿಯುವುದಿಲ್ಲವೋ, ಅವನು ಮಾಡಿದುದನ್ನು ಮಾತ್ರ ತಿಳಿಯುತ್ತಾರೆಯೋ ಅವನು ಪಂಡಿತನೆನಿಸುತ್ತಾನೆ.

**ಯಸ್ಯ ಕೃತ್ಯಂ ನ ವಿಘ್ನಂತಿ ಶೀತಮುಷ್ಣಂ ಭಯಂ ರತಿಃ ।**
**ಸಮೃದ್ಧಿರಸಮೃದ್ಧಿರ್ವಾ ಸ ವೈ ಪಂಡಿತ ಉಚ್ಯತೇ ॥೨೮॥**

ಯಾವನ ಉದ್ದಿಷ್ಟವಾದ ಕಾರ್ಯಕ್ಕೆ ಶೀತವಾಗಲೀ, ಉಷ್ಣವಾಗಲೀ, ಭಯವಾಗಲೀ, ಆಸೆಯಾಗಲೀ, ಸಮೃದ್ಧಿಯಾಗಲೀ ಅಥವಾ ಬಡತನವಾಗಲೀ ಅಡ್ಡಿಯನ್ನು ಮಾಡುವುದಿಲ್ಲವೋ ಅವನು ಪಂಡಿತನೆನಿಸುತ್ತಾನೆ.

**ಯಸ್ಯ ಸಂಸಾರಿಣೀ ಪ್ರಜ್ಞಾ ಧರ್ಮಾರ್ಥಾವನುವರ್ತತೇ ।**
**ಕಾಮಾದರ್ಥಂ ವೃಣೀತೇ ಯಃ ಸ ವೈ ಪಂಡಿತ ಉಚ್ಯತೇ ॥೨೯॥**

ಯಾವನ ವಿಸ್ತಾರವಾದ ಪ್ರಜ್ಞೆಯು ಧರ್ಮಾರ್ಥಗಳಿಗೆ ಅನುಗುಣವಾಗಿರುತ್ತದೆಯೋ ಮತ್ತು ಯಾವನು ಕಾಮಕ್ಕಿಂತಲೂ ಅರ್ಥವನ್ನೇ ಆರಿಸಿಕೊಳ್ಳುತ್ತಾನೆಯೋ ಅವನು ಪಂಡಿತನೆನಿಸುತ್ತಾನೆ.

**ಯಥಾಶಕ್ತಿ ಚಿಕೀರ್ಷಂತಿ ಯಥಾಶಕ್ತಿ ಚ ಕುರ್ವತೇ ।**
**ನ ಕಿಂಚಿದವಮನ್ಯಂತೇ ಪಂಡಿತಾ ಭರತರ್ಷಭ ॥೩೦॥**

ಎಲೈ ಭರತರ್ಷಭನೇ, ಪಂಡಿತರಾದವರು ತಮ್ಮ ಶಕ್ತಿಗೆ ಅನುಗುಣವಾಗಿ ಕಾರ್ಯವನ್ನು ಮಾಡಲು ಬಯಸುತ್ತಾರೆ ಮತ್ತು ಶಕ್ತಿಗನುಗುಣವಾಗಿ ಮಾಡುತ್ತಾರೆ. ಅವರು ಯಾರನ್ನೂ ಅವಮಾನಗೊಳಿಸುವುದಿಲ್ಲ.

ಕ್ಷಿಪ್ರಂ ವಿಜಾನಾತಿ ಚಿರಂ ಶೃಣೋತಿ
ವಿಜ್ಞಾಯ ಚಾರ್ಥಂ ಭಜತೇ ನ ಕಾಮಾನ್ ।
ನಾಸಂಪೃಷ್ಟೋ ವ್ಯುಪಯುಂಕ್ತೇ ಪರಾರ್ಥೇ
ತತ್ ಪ್ರಜ್ಞಾನಂ ಪ್ರಥಮಂ ಪಂಡಿತಸ್ಯ ॥೩೧॥

ಅವರು ಬೇಗ ವಿಷಯವನ್ನು ತೆಗೆದುಕೊಳ್ಳುತ್ತಾರೆ. ಬಹಳ ಕಾಲ ಕೇಳುತ್ತಾರೆ. ತಿಳಿದ ಮೇಲೆ ಅರ್ಥವನ್ನು ಸೇವಿಸುತ್ತಾರೆ, ಕಾಮಗಳನ್ನಲ್ಲ. ಇನ್ನೊಬ್ಬರ ಅನುಮತಿ ಇಲ್ಲದೆ ಅವರ ವಸ್ತುಗಳನ್ನು ಉಪಯೋಗಿಸುವುದಿಲ್ಲ. ಇದು ಪಂಡಿತರ ಮೊದಲನೆಯ ಲಕ್ಷಣ.

ನಾಪ್ರಾಪ್ಯಮಭಿವಾಂಛಂತಿ ನಷ್ಟಂ ನೇಚ್ಛಂತಿ ಶೋಚಿತುಮ್ ।
ಆಪತ್ಸು ಚ ನ ಮುಹ್ಯಂತಿ ನರಾಃ ಪಂಡಿತಬುದ್ಧಯಃ ॥೩೨॥

ತಮಗೆ ದೊರಕಲಾರದುದನ್ನು ಬಯಸುವುದಿಲ್ಲ. ನಷ್ಟವಾದ ವಸ್ತುವನ್ನು ಕುರಿತು ಶೋಕಪಡಲು ಬಯಸುವುದಿಲ್ಲ. ಆಪತ್ತುಗಳಲ್ಲಿ ಮೋಹಕ್ಕೆ ಒಳಗಾಗುವುದಿಲ್ಲ. ಅಂತಹ ಮನುಷ್ಯರು ಪಂಡಿತಬುದ್ಧಿಯುಳ್ಳವರು.

ನಿಶ್ಚಿತ್ಯ ಯಃ ಕುರುತೇ ನಾಂತರ್ವಸತಿ ಕರ್ಮಣಃ ।
ಅವಂಧ್ಯಕಾಲೇ ವಶ್ಯಾತ್ಮಾ ಸ ವೈ ಪಂಡಿತ ಉಚ್ಯತೇ ॥೩೩॥

ಸರಿಯಾಗಿ ನಿಶ್ಚಯವನ್ನು ಮಾಡಿ ಕಾರ್ಯವನ್ನು ಆರಂಭಿಸುತ್ತಾರೆ. ಆರಂಭಿಸಿದ ಕರ್ಮವನ್ನು ಮಧ್ಯದಲ್ಲಿಯೇ ನಿಲ್ಲಿಸುವುದಿಲ್ಲ. ಕಾಲವನ್ನು ವ್ಯರ್ಥವಾಗಿ ಕಳೆಯುವುದಿಲ್ಲ. ಮನಸ್ಸನ್ನು ನಿಯಂತ್ರಣದಲ್ಲಿ ಇಟ್ಟುಕೊಂಡಿರುತ್ತಾರೆ. ಅವರು ಪಂಡಿತರೆನಿಸುತ್ತಾರೆ.

ಆರ್ಯಕರ್ಮಣಿ ರಜ್ಯಂತೇ ಭೂತಿಕರ್ಮಾಣಿ ಕುರ್ವತೇ ।
ಹಿತಂ ಚ ನಾಭ್ಯಸೂಯಂತಿ ಪಂಡಿತಾ ಭರತರ್ಷಭ ॥೩೪॥

ಎಲೈ ಭರತರ್ಷಭನೇ, ಪಂಡಿತರು ಶ್ರೇಷ್ಠವಾದ ಕರ್ಮಗಳಲ್ಲಿ ಆಸಕ್ತರಾಗುತ್ತಾರೆ. ಸಮೃದ್ಧಿಯನ್ನು ಉಂಟುಮಾಡುವ ಕರ್ಮಗಳನ್ನು ಮಾಡುತ್ತಾರೆ. ಹಿತರಾದವರನ್ನು ನೋಡಿ ಎಂದೂ ಅಸೂಯೆ ಪಡುವುದಿಲ್ಲ.

ನ ಹೃಷ್ಯತ್ಯಾತ್ಮಸಮ್ಮಾನೇ ನಾವಮಾನೇನ ತಪ್ಯತೇ ।
ಗಾಂಗೋ ಹ್ರದ ಇವಾಕ್ಷೋಭ್ಯೋ ಯಃ ಸ ಪಂಡಿತ ಉಚ್ಯತೇ ॥೩೫॥

ಯಾವನು ತನಗೆ ಸನ್ಮಾನವನ್ನು ಮಾಡಿದರೆ ಸಂತೋಷಪಡುವುದಿಲ್ಲವೋ, ಅವಮಾನವನ್ನು ಮಾಡಿದರೆ ದುಃಖಪಡುವುದಿಲ್ಲವೋ, ಗಂಗಾನದಿಯ ಮಡುವಿನಂತೆ ಅಚಾಲ್ಯನಾಗಿರುತ್ತಾನೆಯೋ ಅವನು ಪಂಡಿತನೆನಿಸುತ್ತಾನೆ.

ತತ್ತ್ವಜ್ಞಃ ಸರ್ವಭೂತಾನಾಂ ಯೋಗಜ್ಞಃ ಸರ್ವಕರ್ಮಣಾಮ್ ।
ಉಪಾಯಜ್ಞೋ ಮನುಷ್ಯಾಣಾಂ ನರಃ ಪಂಡಿತ ಉಚ್ಯತೇ ॥೩೬॥

ಎಲ್ಲ ಪ್ರಾಣಿಗಳ ತತ್ವವನ್ನು ತಿಳಿದವನೂ, ಎಲ್ಲ ಕರ್ಮವನ್ನು ಮಾಡುವ ರೀತಿಯನ್ನು ತಿಳಿದವನೂ, ಮನುಷ್ಯರ ಉಪಾಯಗಳನ್ನು ತಿಳಿದವನೂ ಪಂಡಿತನೆನಿಸುತ್ತಾನೆ.

ಪ್ರವೃತ್ತವಾಕ್ ಚಿತ್ರಕಥ ಊಹವಾನ್ ಪ್ರತಿಭಾನವಾನ್ ।
ಶ್ರುದ್ಧಗ್ರಂಥಸ್ಯ ವಕ್ತಾ ಚ ಯಃ ಸ ಪಂಡಿತ ಉಚ್ಯತೇ ॥೩೭॥

ಉತ್ತಮರ ಚರಿತ್ರೆಯಲ್ಲಿರುವ ಮಾತನ್ನು ಹೇಳುವವನು, ವಿಚಿತ್ರವಾದ ಕಥೆಯನ್ನು ಹೇಳುವವನು, ಕಲ್ಪನಾಶಕ್ತಿಯನ್ನುಳ್ಳವನು, ಪ್ರತಿಭಾಶಕ್ತಿಯುಳ್ಳವನು, ಶುದ್ಧವಾದ ಗ್ರಂಥವನ್ನು ಹೇಳುವವನು ಪಂಡಿತನೆನಿಸುತ್ತಾನೆ.

ಶ್ರುತಂ ಪ್ರಜ್ಞಾನುಗಂ ಯಸ್ಯ ಪ್ರಜ್ಞಾ ಚೈವ ಶ್ರುತಾನುಗಾ ।
ಅಸಂಭಿನ್ನಾರ್ಯಮರ್ಯಾದಃ ಪಂಡಿತಾಖ್ಯಾಂ ಲಭೇತ್ ತು ಸಃ ॥೩೮॥

ಯಾವನ ವಿದ್ಯೆಯು ಅವನ ಬುದ್ಧಿಗೆ ಅನುಸಾರವಾಗಿರುತ್ತದೆಯೋ, ಯಾವನ ಬುದ್ಧಿಯು ಅವನ ವಿದ್ಯೆಗೆ ಅನುಸಾರವಾಗಿರುತ್ತದೆಯೋ, ಯಾವನು ಉತ್ತಮರು ಹಾಕಿದ ಎಲ್ಲೆಯನ್ನು ಮೀರುವುದಿಲ್ಲವೋ ಅವನು ಪಂಡಿತನೆಂಬ ಹೆಸರನ್ನು ಪಡೆಯುತ್ತಾನೆ.

ಅರ್ಥಂ ಮಹಾಂತಮಾಸಾದ್ಯ ವಿದ್ಯಾಮೈಶ್ವರ್ಯಮೇವ ಚ ।
ವಿಚರತ್ಯಸಮುನ್ನದ್ಧೋ ಯಃ ಸ ಪಂಡಿತ ಉಚ್ಯತೇ ॥೩೯॥

ಬಹಳ ಧನವನ್ನೂ, ವಿದ್ಯೆಯನ್ನೂ ಮತ್ತು ಐಶ್ವರ್ಯವನ್ನೂ ಹೊಂದಿ ಯಾವನು ಅಹಂಕಾರವಿಲ್ಲದೆ ಸಂಚರಿಸುತ್ತಾನೆಯೋ ಅವನು ಪಂಡಿತನೆನಿಸುತ್ತಾನೆ.

ಅಶ್ರುತಶ್ಚ ಸಮುನ್ನದ್ಧೋ ದರಿದ್ರಶ್ಚ ಮಹಾಮನಾಃ ।
ಅರ್ಥಾಂಶ್ಚಾಕರ್ಮಣಾ ಪ್ರೇಪ್ಸುಃ ಮೂಢ ಇತ್ಯುಚ್ಯತೇ ಬುಧೈಃ ॥೪೦॥

ವಿದ್ಯೆ ಇಲ್ಲದಿದ್ದರೂ ಅಹಂಕಾರಿಯಾದವನು, ದರಿದ್ರನಾದರೂ ಗರ್ವವನ್ನು ಹೊಂದಿದವನು, ಕರ್ಮವನ್ನು ಮಾಡದೆ ಫಲವನ್ನು ಅಪೇಕ್ಷಿಸುವವನು ಬುಧರಿಂದ ಮೂಢನೆಂದು ಕರೆಯಲ್ಪಡುತ್ತಾನೆ.

ಸ್ವಮರ್ಥಂ ಯಃ ಪರಿತ್ಯಜ್ಯ ಪರಾರ್ಥಮನುತಿಷ್ಠತಿ ।
ಮಿಥ್ಯಾ ಚರತಿ ಮಿತ್ರಾರ್ಥೇ ಯಶ್ಚ ಮೂಢಃ ಸ ಉಚ್ಯತೇ ॥೪೧॥

ತನ್ನ ಸ್ನಾನ-ಜಪಾದಿಕಾರ್ಯವನ್ನು ಬಿಟ್ಟು ಯಾವನು ಬೇರೆಯವರಿಗಾಗಿ ಜಪಾದಿಗಳನ್ನು ಮಾಡುತ್ತಾನೆಯೋ ಮತ್ತು ಸ್ನೇಹಿತರ ವಿಷಯದಲ್ಲಿ ಮೋಸದಿಂದ ನಡೆದುಕೊಳ್ಳುತ್ತಾನೆಯೋ ಅವನು ಮೂಢನೆನಿಸುತ್ತಾನೆ.

ಅಕಾಮಾನ್ ಕಾಮಯತಿ ಯಃ ಕಾಮಯಾನಾನ್ ಪರಿತ್ಯಜೇತ್ ।
ಬಲವಂತಂ ಚ ಯೋ ದ್ವೇಷ್ಟಿ ತಮಾಹುರ್ಮೂಢಚೇತಸಮ್ ॥೪೨॥

ಕಾಮಿಸಬಾರದವರನ್ನು ಕಾಮಿಸುತ್ತಾನೆ, ಕಾಮಿಸಬೇಕಾದ ಸ್ವಪತ್ನಿ ಮೊದಲಾದವರನ್ನು ಪರಿತ್ಯಜಿಸುತ್ತಾನೆ, ತನಗಿಂತ ಬಲಿಷ್ಠರಾದವರನ್ನು ದ್ವೇಷಿಸುತ್ತಾನೆ ಅಂತಹವನು ಮೂಢಚೇತಸನೆನಿಸುತ್ತಾನೆ.

ಅಮಿತ್ರಂ ಕುರುತೇ ಮಿತ್ರಂ ಮಿತ್ರಂ ದ್ವೇಷ್ಟಿ ಹಿನಸ್ತಿ ಚ ।
ಕರ್ಮ ಚಾರಭತೇ ದುಷ್ಟಂ ತಮಾಹುರ್ಮೂಢಚೇತಸಮ್ ॥೪೩॥

ಶತ್ರುವನ್ನು ಮಿತ್ರರನ್ನಾಗಿ ಮಾಡಿಕೊಳ್ಳುತ್ತಾನೆ, ಮಿತ್ರರನ್ನು ದ್ವೇಷ ಮಾಡುತ್ತಾನೆ ಮತ್ತು ಹಿಂಸಿಸುತ್ತಾನೆ, ದುಷ್ಟಕಾರ್ಯವನ್ನು ಪ್ರಾರಂಭಿಸುತ್ತಾನೆ, ಅವನನ್ನು ಮೂಢನೆನ್ನುತ್ತಾರೆ.

ಸಂಸಾರಯತಿ ಕೃತ್ಯಾನಿ ಸರ್ವತ್ರ ವಿಚಿಕಿತ್ಸತೇ ।
ಚಿರಂ ಕರೋತಿ ಕ್ಷಿಪ್ರಾರ್ಥೇ ಸ ಮೂಢೋ ಭರತರ್ಷಭ ॥೪೪॥

ಪುಣ್ಯಕರ್ಮಗಳನ್ನು ಇನ್ನೊಬ್ಬರಿಗೆ ಉಪದೇಶ ಮಾಡುತ್ತಾನೆ (ತಾನು ಮಾತ್ರ ಮಾಡುವುದಿಲ್ಲ), ಎಲ್ಲ ಕಡೆಯಲ್ಲಿಯೂ ಸಂಶಯವನ್ನು ಹೊಂದುತ್ತಾನೆ, ಬೇಗ ಮಾಡಬೇಕಾದ ಕಾರ್ಯವನ್ನು ವಿಳಂಬವಾಗಿ ಮಾಡುತ್ತಾನೆ, ಭರತರ್ಷಭನೇ, ಅವನು ಮೂಢ.

**ಶ್ರಾದ್ಧಂ ಪಿತೃಭ್ಯೋ ನಾದತ್ತೇ ದೈವತಾನಿ ನ ಚಾರ್ಚತಿ ।**
**ಸುಹೃನ್ಮಿತ್ರಂ ನ ಭಜತೇ ತಮಾಹುರ್ಮೂಢಲಕ್ಷಣಮ್ ॥೪೫॥**

ಪಿತೃಗಳಿಗೆ ಶ್ರಾದ್ಧವನ್ನು ಕೊಡುವುದಿಲ್ಲ, ದೇವತೆಗಳನ್ನು ಅಥವಾ ಸಹೃದರನ್ನೂ, ಮಿತ್ರರನ್ನೂ ಸೇವಿಸುವುದಿಲ್ಲ ಅಂತಹವನು ಮೂಢಲಕ್ಷಣವುಳ್ಳವನು.

**ಅನಾಹೂತಃ ಸಂಪ್ರವಿಶೇದ್ ಅಪೃಷ್ಟೋ ಪರಿಭಾಷತೇ ।**
**ಅವಿಶಸ್ತೇ ವಿಶಸ್ತಿತಿ ಮೂಢಚೇತಾ ನರಾಧಮಃ ॥೪೬॥**

ಮೂಢನಾದ ನರಾಧಮನು ಆಹ್ವಾನವಿಲ್ಲದೆ ಪ್ರವೇಶಿಸುತ್ತಾನೆ, ಕೇಳದಿದ್ದರೂ ಮಾತನಾಡುತ್ತಾನೆ, ವಿಶ್ವಾಸಕ್ಕೆ ಯೋಗ್ಯರಲ್ಲದವರಲ್ಲಿ ವಿಶ್ವಾಸವನ್ನು ಮಾಡುತ್ತಾನೆ.

**ಪರಂ ಕ್ಷಿಪತಿ ದೋಷೇಣ ವರ್ತಮಾನಃ ಸ್ವಯಂ ತಥಾ ।**
**ಯಶ್ಚ ಗೃಧ್ಯತ್ಯನೀಶಃ ಸನ್ ಸ ಚ ಮೂಢತಮೋ ನರಃ ॥೪೭॥**

ತಾನು ಸ್ವತಃ ದುಷ್ಟನಾಗಿ ಅದೇ ದೋಷದಿಂದ ಕೂಡಿದ ಇನ್ನೊಬ್ಬರನ್ನು ನಿಂದಿಸುತ್ತಾನೆ. ತನಗೆ ಯಾವ ಸಾಮರ್ಥ್ಯವಿಲ್ಲದಿದ್ದರೂ ಎಲ್ಲವನ್ನೂ ಬಯಸುತ್ತಾನೊ ಅವನು ಅತ್ಯಂತ ಮೂಢನಾದ ಮನುಷ್ಯ .

**ಆತ್ಮನೋ ಬಲಮಜ್ಞಾಯ ಧರ್ಮಾರ್ಥಪರಿವರ್ಜಿತಃ ।**
**ಅಸಾಧ್ಯಂ ಕರ್ಮ ಯಃ ಕುರ್ಯಾತ್ ಮೂಢಬುದ್ಧಿರಿಹೋಚ್ಯತೇ ॥೪೮॥**

ಯಾವನು ತನ್ನ ಸಾಮರ್ಥ್ಯವನ್ನು ತಿಳಿಯದೆ ಧರ್ಮಾರ್ಥಗಳನ್ನು ಪರಿತ್ಯಜಿಸಿ ಅಸಾಧ್ಯವಾದ ಕರ್ಮವನ್ನು ಮಾಡಲು ಹೊರಡುತ್ತಾನೆಯೋ ಅವನನ್ನು ಮೂಢ ಬುದ್ಧಿ ಎಂದು ಇಲ್ಲಿ ಕರೆಯುತ್ತಾರೆ.

**ಅಶಿಷ್ಯಂ ಶಾಸ್ತಿ ಯೋ ರಾಜನ್ ಯಶ್ಚ ಶಿಷ್ಯಂ ನ ಶಾಸ್ತಿ ಚ ।**
**ಕದರ್ಯಂ ಭಜತೇ ಯಸ್ತು ತಮಾಹುರ್ಮೂಢಚೇತಸಮ್ ॥೪೯॥**

ರಾಜನೇ, ಶಿಷ್ಯನಲ್ಲದವನಿಗೆ ಯಾವನು ಶಾಸನವನ್ನು ಮಾಡುತ್ತಾನೆಯೋ, ಯಾವನು ಶಿಷ್ಯನಿಗೆ ಶಾಸನವನ್ನು ಮಾಡುವುದಿಲ್ಲವೋ ಮತ್ತು ನೀಚವ್ಯಕ್ತಿಯನ್ನು ಸೇವಿಸುತ್ತಾನೆಯೋ ಅವನನ್ನು ಮೂಢನೆಂದು ಕರೆಯುತ್ತಾರೆ.

**ಏಕಃ ಸಂಪನ್ನಮಶ್ನಾತಿ ವಸ್ತೇ ವಾಸಶ್ಚ ಶೋಭನಮ್ ।**
**ಯೋಽಸಂವಿಭಜ್ಯ ಭೃತ್ಯೇಭ್ಯಃ ಕೋ ನೃಶಂಸತರಸ್ತತಃ ॥೫೦॥**

ಯಾವನು ಭಕ್ತರಿಗೆ (ಆಶ್ರಿತರಿಗೆ) ಹಂಚದೆ ಒಬ್ಬನೇ ಒಳ್ಳೆಯ ಊಟವನ್ನು ಮಾಡುತ್ತಾನೆಯೋ, ಒಳ್ಳೆಯ ವಸ್ತ್ರಗಳನ್ನು ಧರಿಸುತ್ತಾನೆಯೋ ಅವನಿಗಿಂತ ಕ್ರೂರರಾದವರು ಯಾರಿದ್ದಾರೆ?

**ಏಕಃ ಪಾಪಾನಿ ಕುರುತೇ ಫಲಂ ಭುಂಕ್ತೇ ಮಹಾಜನಃ ।**
**ಭೋಕ್ತಾರೋ ವಿಪ್ರಮುಚ್ಯಂತೇ ಕರ್ತಾ ದೋಷೇಣ ಲಿಪ್ಯತೇ ॥೫೧॥**

ಒಬ್ಬನು ಪಾಪವನ್ನು ಮಾಡುತ್ತಾನೆ, ಅವನ ಸಂಸರ್ಗವಶದಿಂದ ಮಹಾಜನರು ಅಹಿತಕರ್ಮದ ಫಲವನ್ನು ಅನುಭವಿಸುತ್ತಾರೆ. ಫಲವನ್ನು ಅನುಭವಿಸಿದ ಮಹಾಜನರು ಪರಲೋಕದ ಅನೃತದಿಂದ ಬಿಡುಗಡೆಯನ್ನು ಹೊಂದುತ್ತಾರೆ. ಪಾಪಕರ್ಮವನ್ನು ಮಾಡಿದವನು ಮಾತ್ರ ಪರಲೋಕದ ದುಃಖಫಲವನ್ನು ಅನುಭವಿಸುತ್ತಾನೆ.

**ಏಕಂ ಹನ್ಯಾನ್ನ ವಾ ಹನ್ಯಾದ್ ಇಷುರ್ಮುಕ್ತೋ ಧನುಷ್ಮತಾ ।**
**ಬುದ್ಧಿರ್ಬುದ್ಧಿಮತೋತ್ಸೃಷ್ಟಾ ಹನ್ಯಾದ್ ರಾಷ್ಟ್ರಂ ಸರಾಜಕಮ್ ॥೫೨॥**

ಧನುರ್ಧಾರಿಯು ಪ್ರಯೋಗಿಸಿದ ಬಾಣವು ಒಬ್ಬನನ್ನು ಕೊಲ್ಲಬಹುದು ಅಥವಾ ಕೊಲ್ಲದೆ ಇರಬಹುದು. ಆದರೆ ಬುದ್ಧಿವಂತನಾದವನು ಪ್ರಯೋಗಿಸಿದ ಒಂದು ಬುದ್ಧಿಯು (ದುರ್ಬುದ್ಧಿಯು) ರಾಜಸಹಿತವಾದ ರಾಷ್ಟ್ರವನ್ನೇ ಕೊಂದೀತು!

**ಏಕಯಾ ದ್ವೌ ವಿನಿಶ್ಚಿತ್ಯ ತ್ರೀಂಶ್ಚತುರ್ಭಿರ್ವಶೇ ಕುರು ।**
**ಪಂಚ ಜಿತ್ವಾ ವಿಜಿತ್ವಾ ಷಟ್ ಸಪ್ತ ಹಿತ್ವಾ ಸುಖೀ ಭವ ॥೫೩॥**

ಒಂದು ವೇದದಿಂದ ಪ್ರವೃತ್ತಿ-ನಿವೃತ್ತಿ ಮಾರ್ಗಗಳೆರಡನ್ನೂ ನಿಶ್ಚಯಿಸಿ ಯಜ್ಞ, ದಾನ, ಅಧ್ಯಯನ ಮತ್ತು ತಪಸ್ಸು ಎಂಬ ನಾಲ್ಕರಿಂದ ಧರ್ಮಾರ್ಥಕಾಮರೂಪವಾದ ಮೂರು ಪುರುಷಗಳನ್ನು ನಿನ್ನ ವಶದಲ್ಲಿಟ್ಟುಕೊ (ಧರ್ಮಾರ್ಥಕಾಮಗಳಿಗೇ ವಶನಾಗಬೇಡ. ಐದುಜ್ಞಾನೇಂದ್ರಿಯಗಳನ್ನೂ, ಐದು ಕರ್ಮೇಂದ್ರಿಯಗಳನ್ನೂ ಜಯಿಸಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳನ್ನು ಚೆನ್ನಾಗಿ ಜಯಿಸಿ ತ್ವಕ್, ಚರ್ಮ, ರಕ್ತ, ಮಾಂಸ, ಮೇಧಸ್ಸು, ಮಜ್ಜಾ, ಅಸ್ಥಿರೂಪವಾದ ಸಪ್ತಧಾತುಗಳನ್ನು ಪರಿತ್ಯಜಿಸಿ ಸ್ವರೂಪಸುಖವನ್ನು ಅನುಭವಿಸುವವನಾಗು).

**ಏಕಂ ವಿಷರಸೋ ಹಂತಿ ಶಸ್ತ್ರೇಣೈಕಶ್ಚ ವಧ್ಯತೇ ।**
**ಸರಾಷ್ಟ್ರಂ ಸಪ್ರಜಂ ಹಂತಿ ರಾಜಾನಂ ಮಂತ್ರವಿಸ್ರವಃ ॥೫೪॥**

ವಿಷರಸವು ಒಬ್ಬನನ್ನು ಕೊಲ್ಲುತ್ತದೆ. ಶಸ್ತ್ರದಿಂದ ಒಬ್ಬನು ಹತನಾಗುತ್ತಾನೆ. ದುರ್ಮಂತ್ರವು (ಮಂತ್ರವಿಸ್ರವವು) ರಾಜ ಮತ್ತು ಪ್ರಜೆಗಳಿಂದ ಕೂಡಿದ ರಾಷ್ಟ್ರವನ್ನೇ ಕೊಲ್ಲುತ್ತದೆ.

**ಏಕಃ ಸ್ವಾದು ನ ಭುಂಜೀತ ಏಕಶ್ಚಾರ್ಥಾನ್ ನ ಚಿಂತಯೇತ್ ।**
**ಏಕೋ ನ ಗಚ್ಛೇದಧ್ವಾನಂ ನೈಕಃ ಸುಪ್ತೇಷು ಜಾಗೃಯಾತ್ ॥೫೫॥**

ಒಬ್ಬನೇ ಒಳ್ಳೆಯ ಊಟವನ್ನು ಮಾಡಬಾರದು. ಒಬ್ಬನೇ ಚಿಂತನೆಯನ್ನು ಮಾಡಬಾರದು. ಒಬ್ಬನೇ ಪ್ರಯಾಣಕ್ಕೆ ಹೊರಡಬಾರದು. ಎಲ್ಲರೂ ಮಲಗಿರುವಾಗ ಒಬ್ಬನೇ ಎದ್ದಿರಬಾರದು.

**ಏಕಮೇವಾದ್ವಿತೀಯಂ ತದ್ ಯದ್ ರಾಜನ್ ನಾವಬುಧ್ಯಸೇ ।**
**ಸತ್ಯಂ ಸ್ವರ್ಗಸ್ಯ ಸೋಪಾನಂ ಪಾರಾವಾರಸ್ಯ ನೌರಿವ ॥೫೬॥**

ರಾಜನೇ, ಪರಮಾತ್ಮನೆಂಬ ವಸ್ತುವು ಮುಖ್ಯವಾದುದು, ಸ್ವಗತಭೇದ ವರ್ಜಿತವಾದುದು ಮತ್ತು ಅಸದೃಶವಾದುದು. ನೀನು ಅದನ್ನು ತಿಳಿಯುವುದಿಲ್ಲ. ಸಮುದ್ರಕ್ಕೆ ಹಡಗಿದ್ದಂತೆ ಸದ್ಗುಣಪೂರ್ಣವಾದ ಆ ವಸ್ತುವು ಸ್ವರ್ಗಕ್ಕೆ (ಮೋಕ್ಷಕ್ಕೆ) ಸೋಪಾನವಾದುದು.

ಏಕಃ ಕ್ಷಮಾವತಾಂ ದೋಷೋ ದ್ವಿತೀಯೋ ನೋಪಪದ್ಯತೇ ।
ಯದೇನಂ ಕ್ಷಮಯಾ ಯುಕ್ತಮಶಕ್ತಂ ಮನ್ಯತೇ ಜನಃ ॥೫೭॥

ಕ್ಷಮೆಯುಳ್ಳವನನ್ನು ಜನರು ಅಶಕ್ತನೆಂದು ತಿಳಿಯುತ್ತಾರೆ. ಕ್ಷಮೆಯುಳ್ಳವರಿಗೆ ಇದೊಂದೇ ದೋಷ. ಎರಡನೆಯ ಯಾವ ದೋಷವೂ ಇಲ್ಲ.

ಸೋಽಸ್ಯ ದೋಷೋ ನ ಮಂತವ್ಯಃ ಕ್ಷಮಾ ಹಿ ಪರಮಂ ಸುಖಮ್ ।
ಕ್ಷಮಾ ಬಲಮಶಕ್ತಾನಾಂ ಶಕ್ತಾನಾಂ ಭೂಷಣಂ ಕ್ಷಮಾ ॥೫೮॥

ಅದನ್ನೂ ಸಹ ಅವನ ದೋಷವೆಂದು ತಿಳಿಯಬಾರದು. ಏಕೆಂದರೆ ಕ್ಷಮೆಯೇ ಪರಮ ಸುಖಸಾಧನವಾದುದು. ಅಶಕ್ತರಾದವರಿಗೆ ಕ್ಷಮೆಯೇ ಬಲ. ಶಕ್ತರಾದವರಿಗೆ ಕ್ಷಮೆಯು ಭೂಷಣ.

ಕ್ಷಮಾ ವಶೀಕೃತಿರ್ಲೋಕೇ ಕ್ಷಮಯಾ ಕಿಂ ನ ಸಾಧ್ಯತೇ ।
ಶಾಂತಿಖಡ್ಗಃ ಕರೇ ಯಸ್ಯ ಕಿಂ ಕರಿಷ್ಯತಿ ದುರ್ಜನಃ ॥೫೯॥

ಕ್ಷಮೆಯು ಲೋಕದಲ್ಲಿ ಇನ್ನೊಬ್ಬರನ್ನು ವಶೀಕರಿಸುವ ಸಾಧನ. ಕ್ಷಮೆಯಿಂದ ಏನು ಸಾಧ್ಯವಾಗುವುದಿಲ್ಲ? ಯಾವನು ತನ್ನ ಕೈಯಲ್ಲಿ ಶಾಂತಿಯ ಖಡ್ಗವನ್ನು ಹಿಡಿದಿದ್ದಾನೆಯೋ ಅವನಿಗೆ ದುರ್ಜನನು ಏನು ಮಾಡುವನು?

ಅತೃಣೇ ಪತಿತೋ ವಹ್ನಿಃ ಸ್ವಯಮೇವೋಪಶಾಮ್ಯತಿ ।
ಅಕ್ಷಮಾವಾನ್ ಪರಂ ದೋಷೈರಾತ್ಮಾನಂ ಚೈವ ಯೋಜಯೇತ್ ॥೬೦॥

ತೃಣವಲ್ಲದ ಶಿಲೆಯಲ್ಲಿ ಬಿದ್ದ ವಹ್ನಿಯು ತಾನೇ ನಂದಿಹೋಗುತ್ತದೆ. ಕ್ಷಮೆ ಇಲ್ಲದವನು ಇನ್ನೊಬ್ಬನಿಗೂ ಮತ್ತು ತನಗೂ ದೋಷದ ಸಂಬಂಧವನ್ನು ಮಾಡಿಕೊಳ್ಳುತ್ತಾನೆ.

ಏಕೋ ಧರ್ಮಃ ಪರಂ ಶ್ರೇಯಃ ಕ್ಷಮೈಕಾ ಶಾಂತಿರುತ್ತಮಾ ।
ವಿದ್ಯೈಕಾ ಪರಮಾ ತುಷ್ಟಿರಹಿಂಸೈಕಾ ಸುಖಾವಹಾ ॥೬೧॥

ಮೋಕ್ಷಸಾಧನವಾದುದೇ ಶ್ರೇಷ್ಠಧರ್ಮ. ಸಹನೆಯೇ ಶ್ರೇಷ್ಠವಾದ ಶಾಂತಿ, ವಿದ್ಯೆಯೇ ಶ್ರೇಷ್ಠವಾದ ತೃಪ್ತಿ. ಅಹಿಂಸೆಯೇ ಶ್ರೇಷ್ಠ ಸುಖಪ್ರದವಾದುದು.

ದ್ವಾವಿಮೌ ಗ್ರಸತೇ ಭೂಮಿಃ ಸರ್ಪೋ ಬಿಲೇಶಯಾನಿವ ।
ರಾಜಾನಂ ಚಾಪ್ಯಯೋದ್ಧಾರಂ ಬ್ರಾಹ್ಮಣಂ ಚಾಪ್ರವಾಸಿನಮ್ ॥೬೨॥

ಯುದ್ಧ ಮಾಡದಿರುವ ರಾಜ, ಪ್ರವಾಸ ಹೋಗದಿರುವ ಬ್ರಾಹ್ಮಣ ಇವರಿಬ್ಬರನ್ನೂ ಸರ್ಪವು ಇಲಿಗಳನ್ನು ನುಂಗಿದಂತೆ ಭೂಮಿಯು ನುಂಗುತ್ತದೆ.

ಪೃಥಿವ್ಯಾಂ ಸಾಗರಾಂತಾಯಾಂ ದ್ವಾವಿಮೌ ಪುರುಷಾಧಮೌ ।
ಗೃಹಸ್ಥೋ ವೈ ನಿರಾರಂಭಃ ಸಾರಂಭಶ್ಚೈವ ಭಿಕ್ಷುಕಃ ॥೬೩॥

ಗೃಹಸ್ಥನಾಗಿ ಯಾವ ಕಾರ್ಯವನ್ನೂ ಮಾಡದಿರುವವನು ಮತ್ತು ಸಂನ್ಯಾಸಿಯಾಗಿ ದೊಡ್ಡ ಕಾರ್ಯಗಳನ್ನು ಮಾಡಲು ಹೊರಡುವವನು ಇವರಿಬ್ಬರೂ ಸಾಗರಾಂತವಾದ ಭೂಮಿಯಲ್ಲಿ ಪುರುಷಾಧಮರು.

ದ್ವೇ ಕರ್ಮಣೀ ನರಃ ಕುರ್ವನ್ ಅಸ್ಮಿನ್ ಲೋಕೇ ಮಹೀಯತೇ ।
ಅಬ್ರುವನ್ ಪರುಷಂ ಕಿಂಚಿದ್ ಅಸತೋಽನರ್ಚಯಂಸ್ತಥಾ ॥೬೪॥

ಒರಟಾಗಿ ಮಾತನಾಡದಿರುವುದು, ದುಷ್ಟರನ್ನು ಪೂಜಿಸದಿರುವುದು ಈ ಎರಡು ಕಾರ್ಯವನ್ನು ಮಾಡುವ ಮನುಷ್ಯನು ಈ ಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ದ್ವಾವಿಮೌ ಪುರುಷವ್ಯಾಘ್ರ ಪರಪ್ರತ್ಯಯಕಾರಿಣೌ ।
ಸ್ತ್ರಿಯಃ ಕಾಮಿತಕಾಮಿನ್ಯೋ ಮೂರ್ಖಾಃ ಪೂಜಿತಪೂಜಕಾಃ ॥೬೫॥

ಪುರುಷವ್ಯಾಘ್ರನೇ, ಇವರಿಬ್ಬರೂ ಇನ್ನೊಬ್ಬರು ಮಾಡಿದಂತೆ ಮಾಡುವವರು. ಸ್ತ್ರೀಯರು ಇನ್ನೊಬ್ಬರು ಮೆಚ್ಚಿದ್ದನ್ನೇ ಮೆಚ್ಚುತ್ತಾರೆ. ಮೂರ್ಖರು ಇನ್ನೊಬ್ಬರು ಪೂಜಿಸಿದವರನ್ನೇ ಪೂಜಿಸುತ್ತಾರೆ.

ದ್ವಾವಿಮೌ ಕಂಟಕೌ ತೀಕ್ಷ್ಣೌ ಶರೀರಪರಿಶೋಷಣೌ ।
ಯಶ್ಚಾಧನಃ ಕಾಮಯತೇ ಯಶ್ಚ ಕುಪ್ಯತ್ಯನೀಶ್ವರಃ ॥೬೬॥

ಯಾವನು ನಿರ್ಧನನಾಗಿ ವಸ್ತುವನ್ನು ಬಯಸುತ್ತಾನೆಯೋ ಮತ್ತು ಯಾವನು ದರಿದ್ರನಾಗಿ ಕೋಪಗೊಳ್ಳುತ್ತಾನೆಯೋ ಈ ಕಾಮ ಮತ್ತು ಕೋಪಗಳೆರಡೂ ಶರೀರವನ್ನೇ ಒಣಗಿಸುವ ನಿಶಿತವಾದ ಕಂಟಕಗಳು.

ದ್ವಾವಿಮೌ ಪುರುಷೌ ರಾಜನ್ ಸ್ವರ್ಗಸ್ಯೋಪರಿ ತಿಷ್ಠತಃ ।
ಪ್ರಭುಶ್ಚ ಕ್ಷಮಯಾ ಯುಕ್ತೋ ದರಿದ್ರಶ್ಚ ಪ್ರದಾನವಾನ್ ॥೬೭॥

ಎಲೈ ರಾಜನೇ, ಕ್ಷಮೆಯಿಂದ ಕೂಡಿದ ಪ್ರಭುವು ಮತ್ತು ಪ್ರತಾಪಶಾಲಿಯಾದ (ದಾನಶೀಲನಾದ) ದರಿದ್ರ ಇವರಿಬ್ಬರೂ ಸ್ವರ್ಗದ ಮೇಲೆ ಇರುತ್ತಾರೆ.

ನ್ಯಾಯಾಗತಸ್ಯ ದ್ರವ್ಯಸ್ಯ ಬೋದ್ಧವ್ಯೌ ದ್ವಾವತಿಕ್ರಮೌ ।
ಅಪಾತ್ರೇ ಪ್ರತಿಪತ್ತಿಶ್ಚ ಪಾತ್ರೇ ಚಾಪ್ರತಿಪಾದನಮ್ ॥೬೮॥

ನ್ಯಾಯದಿಂದ ಸಂಪಾದಿಸಿದ ದ್ರವ್ಯಕ್ಕೆ ಅಪಾತ್ರರಲ್ಲಿ ದಾನ ಮತ್ತು ಪಾತ್ರರಲ್ಲಿ ಅದಾನ ಇವೆರಡನ್ನು ಅಕ್ರಮಗಳೆಂದು ತಿಳಿಯಬೇಕು.

ದ್ವಾವಂಭಸಿ ಪ್ರವೇಷ್ಟವ್ಯೌ ಗಲೇ ಬದ್ಧ್ವಾ ದೃಢಾಂ ಶಿಲಾಮ್ ।
ಧನವಂತಮದಾತಾರಂ ದರಿದ್ರಂ ಚಾತಪಸ್ವಿನಮ್ ॥೬೯॥

ಧನವಂತನಾಗಿ ದಾನವನ್ನು ಮಾಡದಿರುವವನು, ದರಿದ್ರನಾಗಿ ತಪಸ್ಸನ್ನು ಮಾಡದಿರುವವನು- ಇವರಿಬ್ಬರ ಕತ್ತಿನಲ್ಲಿ ದೊಡ್ಡ ಕಲ್ಲನ್ನು ಕಟ್ಟಿ ಇವರಿಬ್ಬರನ್ನೂ ನೀರಿನಲ್ಲಿ ಮುಳುಗಿಸಬೇಕು.

ದ್ವಾವಿಮೌ ಪುರುಷವ್ಯಾಘ್ರ ಸೂರ್ಯಮಂಡಲಭೇದಿನೌ ।
ಪರಿವ್ರಾಡ್ ಯೋಗಯುಕ್ತಶ್ಚ ರಣೇ ಚಾಭಿಮುಖೋ ಹತಃ ॥೭೦॥

ಎಲೈ ಪುರುಷವ್ಯಾಘ್ರನೇ, ಯೋಗಯುಕ್ತನಾದ ಸಂನ್ಯಾಸಿ ಮತ್ತು ಯುದ್ಧದಲ್ಲಿ ಶತ್ರುವಿಗೆ ಅಭಿಮುಖನಾಗಿ ಹತನಾದವನು ಇವರಿಬ್ಬರೂ ಸೂರ್ಯಮಂಡಲವನ್ನು ಭೇದಿಸುತ್ತಾರೆ.

ತ್ರಯೋ ನ್ಯಾಯಾ ಮನುಷ್ಯಾಣಾಂ ಶ್ರೂಯಂತೇ ಭರತರ್ಷಭ ।
ಕನೀಯಾನ್ ಮಧ್ಯಮಃ ಶ್ರೇಷ್ಠ ಇತಿ ವೇದವಿದೋ ವಿದುಃ ॥೭೧॥

ಭರತರ್ಷಭನೇ, ಮನುಷ್ಯರಿಗೆ ಉತ್ತಮ, ಮಧ್ಯಮ ಮತ್ತು ಅಧಮ ಎಂಬ ಮೂರು ನ್ಯಾಯಗಳಿವೆ ಎಂದು ವೇದಜ್ಞರು ತಿಳಿಯುತ್ತಾರೆ.

ದ್ವಾವಿಮೌ ಗ್ರಸತೇ ಭೂಮಿಃ ಸರ್ಪೋ ಬಿಲೇಶಯಾನಿವ ।
ರಾಜಾನಂ ಚಾಪ್ಯಯೋದ್ಧಾರಂ ಬ್ರಾಹ್ಮಣಂ ಚಾಪ್ರವಾಸಿನಮ್ ॥೬೨॥

ಯುದ್ಧ ಮಾಡದಿರುವ ರಾಜ, ಪ್ರವಾಸ ಹೋಗದಿರುವ ಬ್ರಾಹ್ಮಣ ಇವರಿಬ್ಬರನ್ನೂ ಸರ್ಪವು ಇಲಿಗಳನ್ನು ನುಂಗಿದಂತೆ ಭೂಮಿಯು ನುಂಗುತ್ತದೆ.

ಪೃಥಿವ್ಯಾಂ ಸಾಗರಾಂತಾಯಾಂ ದ್ವಾವಿಮೌ ಪುರುಷಾಧಮೌ ।
ಗೃಹಸ್ಥೋ ವೈ ನಿರಾರಂಭಃ ಸಾರಂಭಶ್ಚೈವ ಭಿಕ್ಷುಕಃ ॥೬೩॥

ಗೃಹಸ್ಥನಾಗಿ ಯಾವ ಕಾರ್ಯವನ್ನೂ ಮಾಡದಿರುವವನು ಮತ್ತು ಸಂನ್ಯಾಸಿಯಾಗಿ ದೊಡ್ಡ ಕಾರ್ಯಗಳನ್ನು ಮಾಡಲು ಹೊರಡುವವನು ಇವರಿಬ್ಬರೂ ಸಾಗರಾಂತವಾದ ಭೂಮಿಯಲ್ಲಿ ಪುರುಷಾಧಮರು.

ದ್ವೇ ಕರ್ಮಣೀ ನರಃ ಕುರ್ವನ್ ಅಸ್ಮಿನ್ ಲೋಕೇ ಮಹೀಯತೇ ।
ಅಬ್ರುವನ್ ಪರುಷಂ ಕಿಂಚಿದ್ ಅಸತೋಽನರ್ಚಯಂಸ್ತಥಾ ॥೬೪॥

ಒರಟಾಗಿ ಮಾತನಾಡದಿರುವುದು, ದುಷ್ಟರನ್ನು ಪೂಜಿಸದಿರುವುದು ಈ ಎರಡು ಕಾರ್ಯವನ್ನು ಮಾಡುವ ಮನುಷ್ಯನು ಈ ಲೋಕದಲ್ಲಿ ಪೂಜಿಸಲ್ಪಡುತ್ತಾನೆ.

ದ್ವಾವಿಮೌ ಪುರುಷವ್ಯಾಘ್ರ ಪರಪ್ರತ್ಯಯಕಾರಿಣೌ ।
ಸ್ತ್ರಿಯಃ ಕಾಮಿತಕಾಮಿನ್ಯೋ ಮೂರ್ಖಾಃ ಪೂಜಿತಪೂಜಕಾಃ ॥೬೫॥

ಪುರುಷವ್ಯಾಘ್ರನೇ, ಇವರಿಬ್ಬರೂ ಇನ್ನೊಬ್ಬರು ಮಾಡಿದಂತೆ ಮಾಡುವವರು. ಸ್ತ್ರೀಯರು ಇನ್ನೊಬ್ಬರು ಮೆಚ್ಚಿದ್ದನ್ನೇ ಮೆಚ್ಚುತ್ತಾರೆ. ಮೂರ್ಖರು ಇನ್ನೊಬ್ಬರು ಪೂಜಿಸಿದವರನ್ನೇ ಪೂಜಿಸುತ್ತಾರೆ.

ದ್ವಾವಿಮೌ ಕಂಟಕೌ ತೀಕ್ಷ್ಣೌ ಶರೀರಪರಿಶೋಷಣೌ ।
ಯಶ್ಚಾಧನಃ ಕಾಮಯತೇ ಯಶ್ಚ ಕುಪ್ಯತ್ಯನೀಶ್ವರಃ ॥೬೬॥

ಯಾವನು ನಿರ್ಧನನಾಗಿ ವಸ್ತುವನ್ನು ಬಯಸುತ್ತಾನೆಯೋ ಮತ್ತು ಯಾವನು ದರಿದ್ರನಾಗಿ ಕೋಪಗೊಳ್ಳುತ್ತಾನೆಯೋ ಈ ಕಾಮ ಮತ್ತು ಕೋಪಗಳೆರಡೂ ಶರೀರವನ್ನೇ ಒಣಗಿಸುವ ನಿಶಿತವಾದ ಕಂಟಕಗಳು.

ದ್ವಾವಿಮೌ ಪುರುಷೌ ರಾಜನ್ ಸ್ವರ್ಗಸ್ಯೋಪರಿ ತಿಷ್ಠತಃ ।
ಪ್ರಭುಶ್ಚ ಕ್ಷಮಯಾ ಯುಕ್ತೋ ದರಿದ್ರಶ್ಚ ಪ್ರದಾನವಾನ್ ॥೬೭॥

ಎಲೈ ರಾಜನೇ, ಕ್ಷಮೆಯಿಂದ ಕೂಡಿದ ಪ್ರಭುವು ಮತ್ತು ಪ್ರತಾಪಶಾಲಿಯಾದ (ದಾನಶೀಲನಾದ) ದರಿದ್ರ ಇವರಿಬ್ಬರೂ ಸ್ವರ್ಗದ ಮೇಲೆ ಇರುತ್ತಾರೆ.

ನ್ಯಾಯಾಗತಸ್ಯ ದ್ರವ್ಯಸ್ಯ ಬೋದ್ಧವ್ಯೌ ದ್ವಾವತಿಕ್ರಮೌ ।
ಅಪಾತ್ರೇ ಪ್ರತಿಪತ್ತಿಶ್ಚ ಪಾತ್ರೇ ಚಾಪ್ರತಿಪಾದನಮ್ ॥೬೮॥

ನ್ಯಾಯದಿಂದ ಸಂಪಾದಿಸಿದ ದ್ರವ್ಯಕ್ಕೆ ಅಪಾತ್ರರಲ್ಲಿ ದಾನ ಮತ್ತು ಪಾತ್ರರಲ್ಲಿ ಅದಾನ ಇವೆರಡನ್ನು ಅಕ್ರಮಗಳೆಂದು ತಿಳಿಯಬೇಕು.

ದ್ವಾವಂಭಸಿ ಪ್ರವೇಷ್ಟವ್ಯೌ ಗಲೇ ಬದ್ಧ್ವಾ ದೃಢಾಂ ಶಿಲಾಮ್ ।
ಧನವಂತಮದಾತಾರಂ ದರಿದ್ರಂ ಚಾತಪಸ್ವಿನಮ್ ॥೬೯॥

ಧನವಂತನಾಗಿ ದಾನವನ್ನು ಮಾಡದಿರುವವನು, ದರಿದ್ರನಾಗಿ ತಪಸ್ಸನ್ನು ಮಾಡದಿರುವವನು- ಇವರಿಬ್ಬರ ಕತ್ತಿನಲ್ಲಿ ದೊಡ್ಡ ಕಲ್ಲನ್ನು ಕಟ್ಟಿ ಇವರಿಬ್ಬರನ್ನೂ ನೀರಿನಲ್ಲಿ ಮುಳುಗಿಸಬೇಕು.

ದ್ವಾವಿಮೌ ಪುರುಷವ್ಯಾಘ್ರ ಸೂರ್ಯಮಂಡಲಭೇದಿನೌ ।
ಪರಿವ್ರಾಡ್ ಯೋಗಯುಕ್ತಶ್ಚ ರಣೇ ಚಾಭಿಮುಖೋ ಹತಃ ॥೭೦॥

ಎಲೈ ಪುರುಷವ್ಯಾಘ್ರನೇ, ಯೋಗಯುಕ್ತನಾದ ಸಂನ್ಯಾಸಿ ಮತ್ತು ಯುದ್ಧದಲ್ಲಿ ಶತ್ರುವಿಗೆ ಅಭಿಮುಖನಾಗಿ ಹತನಾದವನು ಇವರಿಬ್ಬರೂ ಸೂರ್ಯಮಂಡಲವನ್ನು ಭೇದಿಸುತ್ತಾರೆ.

ತ್ರಯೋ ನ್ಯಾಯಾ ಮನುಷ್ಯಾಣಾಂ ಶ್ರೂಯಂತೇ ಭರತರ್ಷಭ ।
ಕನೀಯಾನ್ ಮಧ್ಯಮಃ ಶ್ರೇಷ್ಠ ಇತಿ ವೇದವಿದೋ ವಿದುಃ ॥೭೧॥

ಭರತರ್ಷಭನೇ, ಮನುಷ್ಯರಿಗೆ ಉತ್ತಮ, ಮಧ್ಯಮ ಮತ್ತು ಅಧಮ ಎಂಬ ಮೂರು ನ್ಯಾಯಗಳಿವೆ ಎಂದು ವೇದಜ್ಞರು ತಿಳಿಯುತ್ತಾರೆ.

ತ್ರಿವಿಧಾಃ ಪುರುಷಾ ರಾಜನ್ನುತ್ತಮಾಧಮಮಧ್ಯಮಾಃ ।
ನಿಯೋಜಯೇದ್ ಯಥಾವದ್ ತಾನ್ ತ್ರಿವಿಧೇಷ್ವೇವ ಕರ್ಮಸು ॥೭೨॥

ಎಲೈ ರಾಜನೇ, ಮನುಷ್ಯರೂ ಸಹ ಉತ್ತಮ, ಮಧ್ಯಮ, ಅಧಮ ಭೇದದಿಂದ ಮೂರುವಿಧರಾದವರು. ಅವರನ್ನು ಅನುಗುಣವಾಗಿ ಮೂರುವಿಧವಾದ ಕರ್ಮಗಳಲ್ಲಿ ನಿಯೋಜಿಸಬೇಕು.

ತ್ರಯ ಏವಾಧನಾ ರಾಜನ್ ಭಾರ್ಯಾ ದಾಸಸ್ತಥಾ ಸುತಃ ।
ಯತ್ ತೇ ಸಮಧಿಗಚ್ಛಂತಿ ಯಸ್ಯೈತೇ ತಸ್ಯ ತದ್ಧನಮ್ ॥೭೩॥

ರಾಜನೇ, ಪತ್ನಿ, ದಾಸ ಮತ್ತು ಪುತ್ರ ಈ ಮೂರು ಜನರು ನಿರ್ಧನರಾದವರು. ಅವರು ಏನನ್ನು ಸಂಪಾದಿಸುತ್ತಾರೋ ಆ ಧನವು ಅವರ ಒಡೆಯನಿಗೆ ಸೇರಿದುದು.

ಹರಣಂ ಚ ಪರಸ್ವಾನಾಂ ಪರದಾರಾಭಿಮರ್ಶನಮ್ ।
ಸುಹೃದಶ್ಚ ಪರಿತ್ಯಾಗಃ ತ್ರಯೋ ದೋಷಾ ಭಯಪ್ರದಾಃ ॥೭೪॥

ಇನ್ನೊಬ್ಬರ ಸ್ವತ್ತಿನ ಅಪಹರಣ, ಇನ್ನೊಬ್ಬರ ಹೆಂಡತಿಯ ಸ್ಪರ್ಶ ಮತ್ತು ಸುಹೃದರ ಪರಿತ್ಯಾಗ ಈ ಮೂರುದೋಷಗಳು ಭಯವನ್ನು ಉಂಟುಮಾಡುತ್ತವೆ.

ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ ।
ಕಾಮಃ ಕ್ರೋಧಸ್ತಥಾ ಲೋಭಃ ತಸ್ಮಾದೇತತ್ ತ್ರಯಂ ತ್ಯಜೇತ್ ॥೭೫॥

ಕಾಮ, ಕ್ರೋಧ ಮತ್ತು ಲೋಭ ಈ ಮೂರು ಆತ್ಮನಾಶವನ್ನು ಮಾಡುವ ನರಕದ ದ್ವಾರಗಳು. ಆದ್ದರಿಂದ ಈ ಮೂರನ್ನೂ ತ್ಯಜಿಸಬೇಕು.

ಭಕ್ತಂ ಚ ಭಜಮಾನಂ ಚ ತವಾಸ್ಮೀತಿ ಚ ವಾದಿನಮ್ ।
ತ್ರೀನೇತಾನ್ ಶರಣಂ ಪ್ರಾಪ್ತಾನ್ ವಿಷಮೇಽಪಿ ನ ಸಂತ್ಯಜೇತ್ ॥೭೬॥

ಭಕ್ತನಾದವನು, ಸೇವಕನಾದವನು ಮತ್ತು ನಾನು ನಿನ್ನವನೇ ಎಂದು ಹೇಳುವವನು ಶರಣಾಗತರಾದ ಈ ಮೂರುಜನರನ್ನು ಎಂತಹ ಕಷ್ಟಪರಿಸ್ಥಿತಿಯಲ್ಲಿಯೂ ತ್ಯಜಿಸಬಾರದು.

ವರಪ್ರದಾನಂ ರಾಷ್ಟ್ರಂ ಚ ಪುತ್ರಜನ್ಮ ಚ ಭಾರತ ।
ಶತ್ರೋಶ್ಚ ಮೋಕ್ಷಣಂ ಕೃಚ್ಛ್ರಾತ್ ತ್ರೀಣಿ ಚೈಕಂ ಚ ತತ್ ಸಮಮ್ ॥

ಎಲೈ ಭಾರತನೇ, ವರದಾನವನ್ನು ಪಡೆಯುವುದು, ರಾಷ್ಟ್ರವನ್ನು ಪಡೆಯುವುದು, ಪುತ್ರನನ್ನು ಪಡೆಯುವುದು ಈ ಮೂರನ್ನು ಒಟ್ಟು ಮಾಡಿದುದಕ್ಕೆ ಶತ್ರುವಿನಿಂದ ಉಂಟಾದ ಕಷ್ಟದಿಂದ ಬಿಡುಗಡೆ ಮಾಡುವುದು ಸಮವಾದುದು.

ಚತ್ವಾರಿ ರಾಜ್ಞಾ ತು ಮಹಾಬಲೇನ
ವರ್ಜ್ಯಾನ್ಯಾಹುಃ ಪಂಡಿತಸ್ತಾನಿ ವಿದ್ಯಾತ್ ।
ಅಲ್ಪಪ್ರಜ್ಞೈಃ ಸಹ ಮಂತ್ರಂ ನ ಕುರ್ಯಾತ್
ನ ದೀರ್ಘಸೂತ್ರೈರಲಸೈಶ್ಚಾರಣೈಶ್ಚ ॥೭೮॥

ಮಹಾಬಲನಾದ ರಾಜನು ನಾಲ್ಕು ವಸ್ತುಗಳನ್ನು ಬಿಡಬೇಕು ಎಂದು ಹೇಳುತ್ತಾರೆ. ಅದನ್ನು ಪಂಡಿತನು ತಿಳಿಯಬೇಕು. ಅಲ್ಪಪ್ರಜ್ಞರ ಜೊತೆಯಲ್ಲಿ, ನಿಧಾನವಾಗಿ ಕೆಲಸ ಮಾಡುವವರ ಜೊತೆಯಲ್ಲಿ, ಸೋಮಾರಿಗಳ ಜೊತೆಯಲ್ಲಿ ಮತ್ತು ಅಲೆಮಾರಿಗಳ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಬಾರದು (ಅಂತಹ ನಾಲ್ಕುಜನರನ್ನು ಪರಿತ್ಯಜಿಸಬೇಕು).

ಚತ್ವಾರಿ ತೇ ತಾತ ಗೃಹೇ ವಸಂತು
ಶ್ರಿಯಾऽಭಿಜುಷ್ಟಸ್ಯ ಗೃಹಸ್ಥಧರ್ಮೇ ।
ವೃದ್ಧೋ ಜ್ಞಾತಿರವಸನ್ನಃ ಕುಲೀನಃ
ಸಖಾ ದರಿದ್ರೋ ಭಗಿನೀ ಚಾನಪತ್ಯಾ ॥೭೯॥

ಎಲೈ ಪ್ರೀತಿಪಾತ್ರನೇ, ಗೃಹಸ್ಥಧರ್ಮದಲ್ಲಿ ನಿರತನಾದ, ಸಂಪದ್ಯುಕ್ತನಾದ ನಿನ್ನ ಮನೆಯಲ್ಲಿ ವೃದ್ಧನಾದ ಜ್ಞಾತಿ, ಕಷ್ಟಕ್ಕೆ ಸಿಲುಕಿದ ಕುಲೀನನು, ದರಿದ್ರನಾದ ಸ್ನೇಹಿತನು ಮತ್ತು ಮಕ್ಕಳಿಲ್ಲದ ಸಹೋದರಿ ಈ ನಾಲ್ಕು ಜನರೂ ವಾಸ ಮಾಡಲಿ.

ಚತ್ವಾರ್ಯಾಹ ಮಹಾರಾಜ ಸಾದ್ಯಸ್ಕಾನಿ ಬೃಹಸ್ಪತಿಃ ।
ಪೃಚ್ಛತೇ ತ್ರಿದಶೇಂದ್ರಾಯ ತಾನೀಮಾನಿ ನಿಬೋಧ ಮೇ ॥೮೦॥

ಮಹಾರಾಜನೇ, ಇಂದ್ರನ ಪ್ರಶ್ನೆಗೆ ಉತ್ತರವಾಗಿ ಬೃಹಸ್ಪತಿಗಳು ಈ ನಾಲ್ಕು ವಸ್ತುಗಳು ತಕ್ಷಣದಲ್ಲಿಯೇ ಫಲವನ್ನು ಕೊಡುವವು ಎಂದು ಹೇಳಿದರು. ಅವುಗಳನ್ನು ನನ್ನಿಂದ ತಿಳಿದುಕೊ.

ದೇವತಾನಾಂ ಚ ಸಂಕಲ್ಪಮನುಭಾವಂ ಚ ಧೀಮತಾಮ್ ।
ವಿನಯಂ ಕೃತವಿದ್ಯಾನಾಂ ವಿನಾಶಂ ಪಾಪಕರ್ಮಿಣಾಮ್ ॥೮೧॥

ದೇವತೆಗಳ ಸಂಕಲ್ಪ, ಮೇಧಾವಿಗಳ ಸಾಮರ್ಥ್ಯ, ವಿದ್ಯಾವಂತರ ವಿನಯ ಮತ್ತು ಪಾಪಕರ್ಮವನ್ನು ಮಾಡುವವರ ವಿನಾಶ (ಇವೇ ಆ ನಾಲ್ಕು ವಸ್ತುಗಳು).

ಪಂಚಾಗ್ನಯೋ ಮನುಷ್ಯಾಣಾಂ ಪರಿಚರ್ಯಾಃ ಪ್ರಯತ್ನತಃ ।
ಪಿತಾ ಮಾತಾಽಗ್ನಿರಾತ್ಮಾ ಚ ಗುರುಶ್ಚ ಭರತರ್ಷಭ ॥೮೨॥

ಎಲೈ ಭರತರ್ಷಭನೇ, ತಂದೆ, ತಾಯಿ, ಅಗ್ನಿ, ತಾನು ಮತ್ತು ಗುರು ಈ ಪಂಚಾಗ್ನಿಗಳನ್ನು ಪ್ರಯತ್ನಪೂರ್ವಕವಾಗಿ ಮನುಷ್ಯರು ಪರಿಚರಿಸಬೇಕು.

ಪಂಚೈವ ಪೂಜಯನ್ ಲೋಕೇ ಕೀರ್ತಿಂ ಪ್ರಾಪ್ನೋತಿ ಕೇವಲಮ್ ।
ದೇವಾನ್ ಪಿತೄನ್ ಮನುಷ್ಯಾಂಶ್ಚ ಭಿಕ್ಷೂನತಿಥಿಪಂಚಮಾನ್ ॥೮೩॥

ದೇವತೆಗಳು, ಪಿತೃಗಳು, ಮನುಷ್ಯರು, ಸಂನ್ಯಾಸಿಗಳು ಮತ್ತು ಅತಿಥಿಗಳು ಈ ಐದುಜನರನ್ನು ಪೂಜಿಸುವ ಮನುಷ್ಯನು ಲೋಕದಲ್ಲಿ ಶುದ್ಧವಾದ ಕೀರ್ತಿಯನ್ನು ಪಡೆಯುತ್ತಾನೆ.

ಪಂಚ ತ್ವಾಽನುಗಮಿಷ್ಯಂತಿ ಯತ್ರ ಯತ್ರ ಗಮಿಷ್ಯಸಿ ।
ಮಿತ್ರಾಣ್ಯಮಿತ್ರಾ ಮಧ್ಯಸ್ಥಾ ಉಪಜೀವ್ಯೋಪಜೀವಿನಃ ॥೮೪॥

ಮಿತ್ರರು, ಶತ್ರುಗಳು, ತಟಸ್ಥರು, ನಿನ್ನನ್ನು ಅವಲಂಬಿಸಿರುವವರು ಮತ್ತು ನೀನು ಯಾರನ್ನು ಅವಲಂಬಿಸಿದ್ದೀಯೋ ಅವರು, ಈ ಐದುಜನರು ನೀನು ಹೋದೆಡೆಯಲ್ಲೆಲ್ಲಾ ನಿನ್ನ ಹಿಂದೆ ಬರುತ್ತಾರೆ.

ಪಂಚೇಂದ್ರಿಯಸ್ಯ ಮರ್ತ್ಯಸ್ಯ ಛಿದ್ರಂ ಚೇದೇಕಮಿಂದ್ರಿಯಮ್ ।
ತತೋಽಸ್ಯ ಸ್ರವತೇ ಪ್ರಜ್ಞಾ ಹ್ಯದ್ರೇಃ ಪಾದಾದಿವೋದಕಮ್ ॥೮೫॥

ಪಂಚೇಂದ್ರಿಯವುಳ್ಳ ಮನುಷ್ಯರಿಗೆ ಒಂದು ಇಂದ್ರಿಯವು ಛಿದ್ರವಾದರೆ ಬೆಟ್ಟದ ಪಾದದಿಂದ ನೀರು ಹರಿದುಹೋದಂತೆ ಅವನ ಪ್ರಜ್ಞೆಯು ಆ ಇಂದ್ರಿಯದಿಂದ ಹರಿದುಹೋಗುತ್ತದೆ.

**ಷಡ್ ದೋಷಾಃ ಪುರುಷೇಣೇಹ ಹಾತವ್ಯಾ ಭೂತಿಮಿಚ್ಛತಾ ।**
**ನಿದ್ರಾ ತಂದ್ರೀ ಭಯಂ ಕ್ರೋಧ ಆಲಸ್ಯಂ ದೀರ್ಘಸೂತ್ರತಾ ॥೮೬॥**

ನಿದ್ರೆ, ತೂಕಡಿಕೆ, ಭಯ, ಕ್ರೋಧ, ಆಲಸ್ಯ, ವಿಲಂಬಕಾರಿತ್ವ ಈ ಆರು ದೋಷಗಳನ್ನು ಏಳಿಗೆಯನ್ನು ಬಯಸುವ ಪುರುಷನು ಇಲ್ಲಿ ಬಿಡಬೇಕು.

**ಷಡಿಮಾನ್ ಪುರುಷೋ ಜಹ್ಯಾದ್ ಭಿನ್ನಾಂ ನಾವಮಿವಾರ್ಣವೇ ।**
**ಅಪ್ರವಕ್ತಾರಮಾಚಾರ್ಯಮನಧೀಯಾನಮೃತ್ವಿಜಮ್ ॥೮೭॥**

**ಅರಕ್ಷಿತಾರಂ ರಾಜಾನಂ ಭಾರ್ಯಾಂ ಚಾಪ್ರಿಯವಾದಿನೀಮ್ ।**
**ಗ್ರಾಮಕಾಮಂ ಚ ಗೋಪಾಲಂ ವನಕಾಮಂ ಚ ನಾಪಿತಮ್ ॥೮೮॥**

ಪಾಠವನ್ನು ಹೇಳದಿರುವ ಆಚಾರ್ಯ, ಅಧ್ಯಯನ ಮಾಡದಿರುವ ಋತ್ವಿಕ್, ರಕ್ಷಣೆ ಮಾಡದಿರುವ ರಾಜ, ಅಪ್ರಿಯವಾಗಿ ಮಾತನಾಡುವ ಹೆಂಡತಿ, ಗ್ರಾಮದಲ್ಲಿ ಇರಲು ಬಯಸುವ ಗೋಪಾಲ ಮತ್ತು ಕಾಡಿನಲ್ಲೇ ಇರಲು ಬಯಸುವ ಕ್ಷೌರಿಕ ಈ ಆರುಜನರನ್ನು ಸಮುದ್ರದಲ್ಲಿ ಒಡೆದು ಹೋದ ನಾವೆಯನ್ನು ಬಿಡುವಂತೆ ಪುರುಷನು ಬಿಡಬೇಕು.

**ಷಡೇವ ತು ಗುಣಾಃ ಪುಂಸಾಂ ನ ಹಾತವ್ಯಾ ಕದಾಚನ ।**
**ಸತ್ಯಂ ದಾನಮನಾಲಸ್ಯಮನಸೂಯಾ ಕ್ಷಮಾ ಧೃತಿಃ ॥೮೯॥**

ಸತ್ಯ, ದಾನ, ಅನಾಲಸ್ಯ, ಅನಸೂಯ, ಕ್ಷಮಾ, ಧೈರ್ಯ ಈ ಆರು ಗುಣಗಳನ್ನು ಪುರುಷನು ಯಾವಾಗಲೂ ಬಿಡಬಾರದು.

**ಷಣ್ಣಾಮಾತ್ಮನಿ ನಿತ್ಯಾನಾಮೈಶ್ವರ್ಯಂ ಯೋಽಧಿಗಚ್ಛತಿ ।**
**ನ ಸ ಪಾಪೈಃ ಕುತೋಽನರ್ಥೈರ್ಯುಜ್ಯತೇ ವಿಜಿತೇಂದ್ರಿಯಃ ॥೯೦॥**

ತನ್ನಲ್ಲಿ ನಿತ್ಯವಾಗಿ ವಾಸಿಸುವ ಆರು ವಸ್ತುಗಳ ಮೇಲೆ ಯಾರು ಪ್ರಭುತ್ವವನ್ನು ಸಾಧಿಸುತ್ತಾನೆಯೋ ಅಂತಹ ಜಿತೇಂದ್ರಿಯನಿಗೆ ಪಾಪದ ಲೇಪವೂ ಆಗುವುದಿಲ್ಲ, ಅನರ್ಥದ ಸಂಬಂಧವೂ ಆಗುವುದಿಲ್ಲ.

**ಷಡಿಮೇ ಷಟ್ಸು ಜೀವಂತಿ ಸಪ್ತಮೋ ನೋಪಲಭ್ಯತೇ ।**
**ಚೋರಾಃ ಪ್ರಮತ್ತೇ ಜೀವಂತಿ ವ್ಯಾಧಿತೇಷು ಚಿಕಿತ್ಸಕಾಃ ॥೯೧॥**

ಈ ಆರು ಮಂದಿಗಳು ಆರು ಜನರಲ್ಲಿ ಜೀವಿಸುತ್ತಾರೆ. ಏಳನೆಯ ವ್ಯಕ್ತಿ ಇಲ್ಲ. ಪ್ರಮತ್ತನಲ್ಲಿ ಅಂದರೆ ಎಚ್ಚರಿಕೆ ಇಲ್ಲದವರ ನಿಮಿತ್ತದಿಂದ ಚೋರರು ಜೀವಿಸುತ್ತಾರೆ. ರೋಗಗ್ರಸ್ತರ ನಿಮಿತ್ತದಿಂದ ವೈದ್ಯರು ಜೀವಿಸುತ್ತಾರೆ.

**ಪ್ರಮದಾಃ ಕಾಮಯಾನೇಷು ಯಜಮಾನೇಷು ಯಾಜಕಾಃ ।**
**ರಾಜಾ ವಿವಿದಮಾನೇಷು ನಿತ್ಯಂ ಮೂರ್ಖೇಷು ಪಂಡಿತಾಃ ॥೯೨॥**

ಕಾಮವುಳ್ಳವರ ನಿಮಿತ್ತದಿಂದ ವನಿತೆಯರು ಜೀವಿಸುತ್ತಾರೆ. ಯಾಗ ಮಾಡಿಸುವವರ ನಿಮಿತ್ತದಿಂದ ಪುರೋಹಿತರು ಜೀವಿಸುತ್ತಾರೆ. ವಿವಾದವನ್ನು ಮಾಡುವ ಪುರುಷರ ನಿಮಿತ್ತದಿಂದ ರಾಜನು ಜೀವಿಸುತ್ತಾನೆ. ನಿತ್ಯವೂ ಮೂರ್ಖರು ಇರುವ ನಿಮಿತ್ತದಿಂದ ಪಂಡಿತರು ಜೀವಿಸುತ್ತಾರೆ.

**ಷಡಿಮಾನಿ ವಿನಶ್ಯಂತಿ ಮುಹೂರ್ತಮನವೇಕ್ಷಣಾತ್ ।**
**ಗಾವಃ ಸೇವಾ ಕೃಷಿರ್ಭಾರ್ಯಾ ವಿದ್ಯಾ ವೃಷಲಸಂಗತಿಃ ॥೯೩॥**

ಗೋವುಗಳು, ಸೇವೆ, ಕೃಷಿ, ಭಾರ್ಯೆ, ವಿದ್ಯಾ ಮತ್ತು ಶೂದ್ರಸಂಗತಿ – ಈ ಆರು ವಸ್ತುಗಳು ಒಂದುಮುಹೂರ್ತ ನೋಡಿಕೊಳ್ಳದಿದ್ದರೆ ನಾಶವನ್ನು ಹೊಂದುತ್ತವೆ.

**ಷಡೇತೇ ಹ್ಯವಮನ್ಯಂತೇ ನಿತ್ಯಂ ಪೂರ್ವೋಪಕಾರಿಣಮ್ ।**
**ಆಚಾರ್ಯಂ ಶಿಕ್ಷಿತಾಃ ಶಿಷ್ಯಾಃ ಕೃತದಾರಾಶ್ಚ ಮಾತರಮ್ ॥೯೪॥**

**ನಾರೀಂ ವಿಗತಕಾಮಾಸ್ತು ಕೃತಾರ್ಥಾಶ್ಚ ಪ್ರಯೋಜಕಮ್ ।**
**ನಾವಂ ನಿಸ್ತೀರ್ಣಕಾಂತಾರಾ ಆತುರಾಶ್ಚ ಚಿಕಿತ್ಸಕಮ್ ॥೯೫॥**

ವಿದ್ಯೆಯನ್ನು ಕಲಿತ ಶಿಷ್ಯರು ಆಚಾರ್ಯನನ್ನು, ವಿವಾಹವನ್ನು ಮಾಡಿಕೊಂಡ ಮನುಷ್ಯನು ತಾಯಿಯನ್ನು, ಕಾಮರಹಿತನಾದವನು ವನಿತೆಯನ್ನು, ಕೆಲಸವು ಮುಗಿದ ಮೇಲೆ ಕೆಲಸ ಮಾಡಿಕೊಟ್ಟವನನ್ನು, ನೀರನ್ನು ದಾಟಿದ ಮೇಲೆ ನಾವೆಯನ್ನು, ರೋಗಿಯು ಚಿಕಿತ್ಸಕನನ್ನು ಹೀಗೆ ಈ ಆರು ಜನರು ಮೊದಲು ಉಪಕಾರ ಮಾಡಿದವನನ್ನು ಯಾವಾಗಲೂ ತೊರೆದು ಅಪಮಾನ ಮಾಡುತ್ತಾರೆ.

ಆರೋಗ್ಯಮಾನೃಣ್ಯಮವಿಪ್ರವಾಸಃ
ಸದ್ಭಿರ್ಮನುಷ್ಯೈಃ ಸಹ ಸಂಪ್ರಯೋಗಃ ।
ಸ್ವಪ್ರತ್ಯಯಾ ವೃತ್ತಿರಭೀತವಾಸಃ
ಷಡ್ ಜೀವಲೋಕಸ್ಯ ಸುಖಾನಿ ರಾಜನ್ ॥೯೬॥

ರಾಜನೇ, ಆರೋಗ್ಯ, ಸಾಲವಿಲ್ಲದಿರುವಿಕೆ, ಮನೆಯನ್ನು ತೊರೆದು ದೂರ ಹೋಗದಿರುವುದು, ಸಜ್ಜನರ ಸಮಾಗಮ, ತನ್ನ ನಿರ್ಧಾರದಂತೆ ನಡೆದುಕೊಳ್ಳುವುದು, ಭಯವಿಲ್ಲದೆ ವಾಸಮಾಡುವುದು - ಈ ಆರು ಜೀವಲೋಕಕ್ಕೆ ಸುಖಪ್ರದವಾದುದು.

ಈರ್ಷ್ಯುರ್ಘೃಣೀ ನಸಂತುಷ್ಟಃ ಕ್ರೋಧನೋ ನಿತ್ಯಶಂಕಿತಃ ।
ಪರಭಾಗ್ಯೋಪಜೀವೀ ಚ ಷಡೇತೇ ನಿತ್ಯದುಃಖಿತಾಃ ॥೯೭॥

ಅಸೂಯೆಯುಳ್ಳವನು, ಕರುಣೆಯುಳ್ಳವನು, ಅತೃಪ್ತನಾದವನು, ಕ್ರೋಧಶೀಲನಾದವನು, ಎಲ್ಲ ಕಡೆಯಲ್ಲಿಯೂ ಸಂಶಯ ಪಡುವವನು, ಇನ್ನೊಬ್ಬರ ಸಂಪತ್ತಿನಿಂದ ಬದುಕುವವನು - ಈ ಆರು ಜನರು ನಿತ್ಯದುಃಖಿಗಳು.

ಸಪ್ತ ದೋಷಾಃ ಸದಾ ರಾಜ್ಞಾ ಹಾತವ್ಯಾ ವಿಜಿಗೀಷುಣಾ ।
ಪ್ರಾಯಶೋ ಯೈರ್ವಿನಶ್ಯಂತಿ ಕೃತ್ತಮೂಲಾ ಅಪೀಶ್ವರಾಃ ॥೯೮॥

ಜಯವನ್ನು ಬಯಸುವ ರಾಜನು ಏಳು ದೋಷಗಳನ್ನು ಸದಾ ಬಿಡಬೇಕು. ಆ ದೋಷಗಳಿದ್ದರೆ ಪ್ರಾಯಶಃ ಪ್ರಭುಗಳೂ ಸಹ ತಮ್ಮ ಮೂಲವನ್ನು ಕಡಿದುಕೊಂಡು ನಾಶವನ್ನು ಹೊಂದುತ್ತಾರೆ.

ಸ್ತ್ರಿಯೋಽಕ್ಷಾ ಮೃಗಯಾ ಪಾನಂ ವಾಕ್‌ಪಾರುಷ್ಯಂ ಚ ಪಂಚಮಮ್ ।
ಮಹಚ್ಚ ದಂಡಪಾರುಷ್ಯಮ್ ಅರ್ಥದೂಷಣಮೇವ ಚ ॥೯೯॥

ಸ್ತ್ರೀಯರು, ದ್ಯೂತ, ಬೇಟೆ, ಪಾನ, ಒರಟುಮಾತು, ಉಗ್ರವಾದ ದಂಡ ಮತ್ತು ದಾನ ತೆಗೆದುಕೊಂಡ ಪದಾರ್ಥದ ನಿಂದನೆ - ಇವು ಆ ಏಳು ಪದಾರ್ಥಗಳು.

ಅಷ್ಟೌ ಪೂರ್ವನಿಮಿತ್ತಾನಿ ನರಸ್ಯ ವಿನಶಿಷ್ಯತಃ ।
ಬ್ರಾಹ್ಮಣಾನ್ ಪ್ರಥಮಂ ದ್ವೇಷ್ಟಿ ಬ್ರಾಹ್ಮಣೈಶ್ಚ ವಿರುದ್ಧ್ಯತೇ ॥೧೦೦॥

ವಿನಾಶವನ್ನು ಹೊಂದಲಿರುವ ನರನಿಗೆ ಮೊದಲು ಎಂಟು ಸೂಚನೆಗಳು ಕಾಣಿಸಿಕೊಳ್ಳುತ್ತವೆ. ಮೊದಲು ಬ್ರಾಹ್ಮಣರನ್ನು ದ್ವೇಷ ಮಾಡುತ್ತಾನೆ. ಬ್ರಾಹ್ಮಣರ ಜೊತೆಯಲ್ಲಿ ಜಗಳವಾಡುತ್ತಾನೆ.

ಬ್ರಾಹ್ಮಣಸ್ವಾನಿ ಚಾದತ್ತೇ ಬ್ರಾಹ್ಮಣಾಂಶ್ಚ ಜಿಘಾಂಸತಿ ।
ರಮತೇ ನಿಂದಯಾ ಚೈಷಾಂ ಪ್ರಶಂಸಾಂ ನಾಭಿನಂದತಿ ॥೧೦೧॥

ಬ್ರಾಹ್ಮಣರ ಸ್ವತ್ತನ್ನು ಅಪಹರಿಸುತ್ತಾನೆ. ಬ್ರಾಹ್ಮಣರನ್ನು ಕೊಲ್ಲಲು ಬಯಸುತ್ತಾನೆ. ಬ್ರಾಹ್ಮಣರ ನಿಂದನೆಯಿಂದ ಸಂತೋಷಪಡುತ್ತಾನೆ. ಬ್ರಾಹ್ಮಣರ ಪ್ರಶಂಸೆಯನ್ನು ಸಹಿಸುವುದಿಲ್ಲ.

ನೈನಾನ್ ಸ್ಮರತಿ ಕೃತ್ಯೇಷು ಯಾಚಿತಶ್ಚಾಭ್ಯಸೂಯತಿ ।
ಏತಾನ್ ದೋಷಾನ್ ನರಃ ಪ್ರಾಜ್ಞೋ ಬುದ್ಧ್ಯಾ ಬುಧ್ವಾ ವಿಸರ್ಜಯೇತ್ ॥

ತನಗೆ ಕಾರ್ಯವಾಗಬೇಕಾದಾಗ ಬ್ರಾಹ್ಮಣರನ್ನು ಸ್ಮರಿಸುವುದಿಲ್ಲ. ಬ್ರಾಹ್ಮಣರು ಯಾಚನೆ ಮಾಡಿದರೆ ಅಸೂಯೆ ಪಡುತ್ತಾನೆ. ಪ್ರಾಜ್ಞನಾದವನು ಈ ದೋಷಗಳನ್ನು ತನ್ನ ಬುದ್ಧಿಯಿಂದ ತಿಳಿದು ಪರಿತ್ಯಾಗ ಮಾಡಬೇಕು.

ಅಷ್ಟಾವಿಮಾನಿ ಹರ್ಷಸ್ಯ ನವನೀತಾನಿ ಭಾರತ ।
ವರ್ತಮಾನಾನಿ ದೃಶ್ಯಂತೇ ತಾನ್ಯೇವ ಸುಸುಖಾನ್ಯಪಿ ॥೧೦೩॥

ಎಲೈ ಭಾರತನೇ, ಈ ಎಂಟು ರಮಣೀಯವಾದ ಪದಾರ್ಥಗಳು ಸುಖಕ್ಕೆ ಕಾರಣವಾದವು. ಅವು ಸ್ವತಃ ಸುಖರೂಪವಾಗಿವೆ ಎಂದು ಕಂಡುಬರುತ್ತವೆ.

ಸಮಾಗಮಶ್ಚ ಸಖಿಭಿರ್ಮಹಾಂಶ್ಚೈವ ಧನಾಗಮಃ ।
ತನಯಸ್ಯ ಪರಿಷ್ವಂಗಃ ಸನ್ನಿಪಾತಶ್ಚ ಮೈಥುನೇ ॥೧೦೪॥

ಸಮಯೇ ಚ ಪ್ರಿಯಾಲಾಪಃ ಸ್ವಯೂಥ್ಯೇಷು ಸಮುನ್ನತಿಃ ।
ಅಭಿಪ್ರೇತಸ್ಯ ಲಾಭಶ್ಚ ಪೂಜಾ ಚ ಜನಸಂಸದಿ ॥೧೦೫॥

ಸ್ನೇಹಿತರ ಜೊತೆಯಲ್ಲಿ ಸಮಾಗಮ, ಬಹಳವಾದ ಧನದ ಪ್ರಾಪ್ತಿ, ಪುತ್ರನ ಆಲಿಂಗನ, ಮೈಥುನದಲ್ಲಿ ಬೀಳುವುದು, ಸಮಯದಲ್ಲಿ ಪ್ರಿಯರ ಮಾತುಗಳು, ತಮ್ಮ ಗುಂಪಿಗೆ ಸೇರಿದ ಅಭ್ಯುದಯ, ಬಯಸಿದುದರ ಲಾಭ ಮತ್ತು ಜನರಲ್ಲಿ ಸನ್ಮಾನ (ಇವು ಆ ಎಂಟು ಪದಾರ್ಥಗಳು).

ಅಷ್ಟೌ ಗುಣಾಃ ಪುರುಷಂ ದೀಪಯಂತಿ
ಪ್ರಜ್ಞಾ ಚ ಕೌಲ್ಯಂ ಚ ದಮಃ ಶ್ರುತಂ ಚ ।
ಪರಾಕ್ರಮಶ್ಚಾಬಹುಭಾಷಿತಾ ಚ
ದಾನಂ ಯಥಾಶಕ್ತಿ ಕೃತಜ್ಞತಾ ಚ ॥೧೦೬॥

ಪ್ರಜ್ಞೆ, ಕುಲ, ದಮ, ವಿದ್ಯೆ, ಪರಾಕ್ರಮ, ಅಲ್ಪಭಾಷಿತಾ, ಯಥಾಶಕ್ತಿ ದಾನ ಮತ್ತು ಕೃತಜ್ಞತೆ - ಈ ಎಂಟುಗುಣಗಳು ಪುರುಷನು ಶೋಭಿಸುವಂತೆ ಮಾಡುತ್ತವೆ.

ನವದ್ವಾರಮಿದಂ ವೇಶ್ಮ ತ್ರಿಸ್ಥೂಣಂ ಪಂಚಸಾಕ್ಷಿಕಮ್ ।
ಕ್ಷೇತ್ರಜ್ಞಾಧ್ಯುಷಿತಂ ವಿದ್ವಾನ್ ಯೋ ವೇದ ಸ ಪರಃ ಕವಿಃ ॥೧೦೭॥

ಈ ಮನೆಯಲ್ಲಿ ನವದ್ವಾರಗಳಿವೆ. ಮೂರುಕಂಬಗಳು, ಐದುಸಾಕ್ಷಿಗಳು ಇದ್ದು ಕ್ಷೇತ್ರಜ್ಞನಿಂದ ವಾಸಿಸಲ್ಪಟ್ಟಿದೆ. ಇದನ್ನು ತಿಳಿದವನು ಶ್ರೇಷ್ಠನಾದ ಜ್ಞಾನಿ (ಈ ದೇಹದಲ್ಲಿ ನವದ್ವಾರಗಳು- ಸತ್ವ, ರಜಸ್, ತಮೋ ಗುಣಗಳೆಂಬ ಮೂರು ಕಂಬಗಳು, ಪಂಚ ಜ್ಞಾನೇಂದ್ರರೂಪವಾದ ಸಾಕ್ಷಿಗಳು ಮತ್ತು ಕ್ಷೇತ್ರಜ್ಞನಾದ ಪರಮಾತ್ಮನು ಇದ್ದಾರೆ).

ದಶ ಧರ್ಮಾನ್ ನ ಜಾನಂತಿ ಧೃತರಾಷ್ಟ್ರ ನಿಬೋಧ ತಾನ್ ॥೧೦೮॥

ಮತ್ತಃ ಪ್ರಮತ್ತ ಉನ್ಮತ್ತಃ ಶ್ರಾಂತಃ ಕ್ರುದ್ಧೋ ಬುಭುಕ್ಷಿತಃ ।
ತ್ವರಮಾಣಶ್ಚ ಲುಬ್ಧಶ್ಚ ಭೀತಃ ಕಾಮೀ ಚ ತೇ ದಶ ॥೧೦೯॥

ತಸ್ಮಾದೇತೇಷು ಭಾವೇಷು ನ ಪ್ರಸಜ್ಜೇತ ಪಂಡಿತಃ ॥೧೧೦॥

ಧೃತರಾಷ್ಟ್ರನೇ, ಹತ್ತು ಜನರು ಧರ್ಮವನ್ನು ತಿಳಿಯುವುದಿಲ್ಲ. ಅವರು ಯಾರೆಂದು ತಿಳಿದುಕೊ. ಪಾನಾದಿ ಮತ್ತನಾದವನು, ಮೈಮೇಲೆ ಎಚ್ಚರಿಕೆ ಇಲ್ಲದವನು, ಹುಚ್ಚು ಹಿಡಿದವನು, ದಣಿದವನು, ಕೋಪಗೊಂಡವನು, ಹಸಿದವನು, ತ್ವರೆಯಲ್ಲಿ ಇರುವವನು, ಲೋಭಿ, ಭೀತ ಮತ್ತು ಕಾಮಿಯಾದವನು ಇವರೇ ಆ ಹತ್ತು ಮಂದಿ. ಆದ್ದರಿಂದ ಪಂಡಿತನಾದವನು ಇಂತಹ ವಸ್ತುಗಳಲ್ಲಿ ಸಿಲುಕಿಕೊಳ್ಳಬಾರದು.

ಅತ್ರೈವೋದಾಹರಂತೀಮಮ್ ಇತಿಹಾಸಂ ಪುರಾತನಮ್ ।
ಪುತ್ರಾರ್ಥಮಸುರೇಂದ್ರೇಣ ಗೀತಂ ಚೈವ ಸುಧನ್ವನಾ ॥೧೧೧॥

ಈ ವಿಷಯದಲ್ಲಿಯೇ ಅಸುರೇಂದ್ರನಾದ ಸುಧನ್ವನು ತನ್ನ ಮಗನಿಗಾಗಿ ಹಾಡಿದ ಪುರಾತನವಾದ ಇತಿಹಾಸವನ್ನು ಜ್ಞಾನಿಗಳು ಹೇಳುತ್ತಾರೆ.

ಯಃ ಕಾಮಮನ್ಯೂ ಪ್ರಜಹಾತಿ ರಾಜಾ
ಪಾತ್ರೇ ಪ್ರತಿಷ್ಠಾಪಯತೇ ಧನಂ ಚ ।
ವಿಶೇಷವಿಚ್ಛ್ರುತವಾನ್ ಕ್ಷಿಪ್ರಕಾರೀ
ತಂ ಸರ್ವಲೋಕಃ ಕುರುತೇ ಪ್ರಮಾಣಮ್ ॥೧೧೨॥

ಯಾವ ರಾಜನು ಕಾಮ-ಕ್ರೋಧವನ್ನು ಪರಿತ್ಯಜಿಸುತ್ತಾನೋ, ಪಾತ್ರರಲ್ಲಿ ದಾನವನ್ನು ಮಾಡುತ್ತಾನೆಯೋ, ಉತ್ತಮ-ಅಧಮ-ಮಧ್ಯಮರ ಭೇದವನ್ನು ತಿಳಿಯುತ್ತಾನೆಯೋ, ವಿದ್ಯಾವಂತನೋ, ಶೀಘ್ರಕಾರಿಯೋ ಅವನನ್ನು ಸರ್ವಲೋಕವೂ ಪ್ರಮಾಣವೆಂದು ಸ್ವೀಕರಿಸುತ್ತದೆ.

ಜಾನಾತಿ ವಿಶ್ವಾಸಯಿತುಂ ಮನುಷ್ಯಾನ್
ವಿಜ್ಞಾತದೋಷೇಷು ದಧಾತಿ ದಂಡಮ್ ।
ಜಾನಾತಿ ಪಥ್ಯಂ ಚ ತಥಾ ಕ್ಷಮಾಂ ಚ
ತಂ ತಾದೃಶಂ ಶ್ರೀರ್ಜುಷತೇ ಸಮಗ್ರಾ ॥೧೧೩॥

ಮನುಷ್ಯರಲ್ಲಿ ವಿಶ್ವಾಸ ಮೂಡಿಸುವುದು ಹೇಗೆ ಎಂದು ತಿಳಿದಿರುತ್ತಾನೆ. ದೋಷವನ್ನು ತಿಳಿದು ಅದಕ್ಕೆ ಸರಿಯಾದ ದಂಡವನ್ನು ವಿಧಿಸುತ್ತಾನೆ. ಹಿತವನ್ನು ತಿಳಿದಿರುತ್ತಾನೆ ಮತ್ತು ಕ್ಷಮೆಯನ್ನು ಹೊಂದಿರುತ್ತಾನೆ. ಅಂತಹವನನ್ನು ಸಮಗ್ರವಾದ ಸಂಪತ್ತು ಬಂದು ಸೇರುತ್ತದೆ.

ಸುದುರ್ಬಲಂ ನಾವಜಾನಾತಿ ಕಿಂಚಿದ್
ಯುಕ್ತ್ಯಾ ರಿಪುಂ ಸೇವತೇ ಬುದ್ಧಿಪೂರ್ವಮ್ ।
ನ ವಿಕ್ರಮಂ ರೋಚಯತೇ ಬಲಸ್ಥೈಃ
ಕಾಲೇ ಚ ಯೋ ವಿಕ್ರಮತೇ ಸ ಧೀರಃ ॥೧೧೪॥

ಯಾವನು ಅತ್ಯಂತ ದುರ್ಬಲರನ್ನೂ ಸ್ವಲ್ಪವೂ ಅವಮಾನ ಮಾಡುವುದಿಲ್ಲವೋ, ಎಚ್ಚರಿಕೆಯಿಂದ ಬುದ್ಧಿಪೂರ್ವಕವಾಗಿ ಶತ್ರುವನ್ನು ಸೇವಿಸುತ್ತಾನೆಯೋ, ಬಲಿಷ್ಠರ ಜೊತೆಯಲ್ಲಿ ವಿರೋಧವನ್ನು ಇಷ್ಟಪಡದೆ ಯೋಗ್ಯಕಾಲದಲ್ಲಿ ಪರಾಕ್ರಮವನ್ನು ತೋರಿಸುತ್ತಾನೆಯೋ ಅವನು ಧೀರನಾದವನು.

ಪ್ರಾಪ್ಯಾಪದಂ ನ ವ್ಯಥತೇ ಕದಾಚಿದ್
ಉದ್ಯೋಗಮನ್ವಿಚ್ಛತಿ ಚಾಪ್ರಮತ್ತಃ ।
ದುಃಖಂ ಚ ಕಾಲೇ ಸಹತೇ ಮತಾತ್ಮಾ
ಧುರಂಧರಸ್ತಸ್ಯ ಜಿತಾಃ ಸಪತ್ನಾಃ ॥೧೧೫॥

ಆಪತ್ತು ಒದಗಿದಾಗ ಎಂದೂ ವ್ಯಥೆ ಪಡುವುದಿಲ್ಲ. ಎಚ್ಚರಿಕೆಯಿಂದ ತನ್ನ ಕಾರ್ಯಗಳನ್ನು ಮಾಡುತ್ತಾನೆ. ತನ್ನ ಮನಸ್ಸನ್ನು ಜಯಿಸಿ, ಆಯಾ ಕಾಲದಲ್ಲಿ ಬಂದ ದುಃಖವನ್ನು ಸಹಿಸುತ್ತಾನೆ. ಸಜ್ಜನರ ಜವಾಬ್ದಾರಿಯನ್ನು ಹೊರುತ್ತಾನೆ. ಅಂತಹವನು ಶತ್ರುಗಳನ್ನು ಜಯಿಸುತ್ತಾನೆ.

ಅನರ್ಥಕಂ ವಿಪ್ರವಾಸಂ ಗೃಹೇಭ್ಯಃ
ಪಾಪೈಃ ಸಂಧಿಂ ಪರದಾರಾಭಿಮರ್ಶಮ್ ।
ಡಂಭಂ ಸ್ಪೈನ್ಯಂ ಪೈಶುನಂ ಮದ್ಯಪಾನಂ
ನ ಸೇವತೇ ಯಃ ಸ ಸುಖೀ ಸದೈವ ॥೧೧೬॥

ಯಾವನು ಮನೆಯನ್ನು ಬಿಟ್ಟು ವ್ಯರ್ಥವಾದ ಪ್ರಯಾಣವನ್ನೂ, ದುಷ್ಟರ ಜೊತೆಯಲ್ಲಿ ಸಂಧಿಯನ್ನೂ, ಪರಭಾರ್ಯೆಯರ ಸಂಬಂಧವನ್ನೂ, ಡಂಭವನ್ನೂ, ಕಳ್ಳತನವನ್ನೂ, ಚಾಡಿ ಹೇಳುವುದನ್ನೂ, ಮದ್ಯಪಾನವನ್ನೂ ಮಾಡುವುದಿಲ್ಲವೋ ಅವನು ಯಾವಾಗಲೂ ಸುಖಿಯಾಗಿರುತ್ತಾನೆ.

ನ ಸಂರಂಭೇಣಾರಭತೇ ತ್ರಿವರ್ಗಮ್
ಆಕಾರಿತಃ ಶಂಸತಿ ತಥ್ಯಮೇವ ।
ನ ಮಿತ್ರಾರ್ಥೇ ರೋಚಯತೇ ವಿವಾದಂ
ನಾಪೂಜಿತಃ ಕುಪ್ಯತಿ ಚಾಪ್ಯಮೂಢಃ ॥೧೧೭॥

ಅಮೂಢನಾದವನು (ವಿವೇಕಿಯಾದವನು) ಸಿಟ್ಟಿನಿಂದ ಧರ್ಮಾರ್ಥ ಕಾಮಗಳನ್ನು ಆರಂಭಿಸುವುದಿಲ್ಲ. ಕರೆದಾಗ ನಿಜವನ್ನೇ ಹೇಳುತ್ತಾನೆ. ಮಿತ್ರರ ಜೊತೆಯಲ್ಲಿ ವಿವಾದವನ್ನು ಬಯಸುವುದಿಲ್ಲ ಮತ್ತು ತನ್ನನ್ನು ಪೂಜಿಸದಿದ್ದರೆ ಕೋಪಗೊಳ್ಳುವುದಿಲ್ಲ.

ನ ಚಾಭ್ಯಸೂಯತ್ಯನುಕಂಪತೇ ಚ
ನ ದುರ್ಬಲಃ ಪ್ರತಿಭಾವ್ಯಂ ಕರೋತಿ ।
ನಾಪ್ಯಾಹ ಕಿಂಚಿತ್ ಕ್ಷಮತೇ ವಿವಾದಂ
ಸರ್ವತ್ರ ತಾದೃಗ್ ಲಭತೇ ಪ್ರಶಂಸಾಮ್ ॥೧೧೮॥

ಯಾರಲ್ಲಿಯೂ ಅಸೂಯೆ ಪಡುವುದಿಲ್ಲ, ಅನುಕಂಪವನ್ನು ತೋರಿಸುತ್ತಾನೆ, ದುರ್ಬಲನಾಗಿ ಎದುರು ಮಾತನಾಡುವುದಿಲ್ಲ, ಮೌನವಾಗಿರುತ್ತಾನೆ, ವಿವಾದವನ್ನು ಸಹಿಸುತ್ತಾನೆ, ಅಂತಹವನು ಎಲ್ಲ ಕಡೆಯಲ್ಲಿಯೂ ಪ್ರಶಂಸೆಯನ್ನು ಪಡೆಯುತ್ತಾನೆ.

ಯೋ ನೋದ್ಧತಂ ಕುರುತೇ ಜಾತು ವೇಷಂ
ನ ಪೌರುಷೇಣಾಪಿ ವಿಕತ್ಥತೇಽನ್ಯಾನ್ ।
ನ ಮೂರ್ಛಿತಃ ಕಟುಕಾನ್ಯಾಹ ಕಿಂಚಿತ್
ಪ್ರಿಯಂ ಸದಾ ತಂ ಕುರುತೇ ಜನೋ ಹಿ ॥೧೧೯॥

ಯಾವನು ಉದ್ಧತವಾದ ವೇಷವನ್ನು ಧರಿಸುವುದಿಲ್ಲವೋ, ಯಾವನು ತನಗೆ ಪೌರುಷವಿದ್ದರೂ ಇನ್ನೊಬ್ಬರ ಎದುರಿಗೆ ಅದನ್ನು ಹೇಳಿಕೊಳ್ಳುವುದಿಲ್ಲವೋ, ಯಾವನು ಯಾವನಿಂದ ಕಷ್ಟಕ್ಕೆ ಗುರಿಯಾಗುತ್ತಾನೆಯೋ ಅವನಿಗೆ ಉಗ್ರವಾದ ಮಾತನ್ನು ಆಡುವುದಿಲ್ಲವೋ ಅಂತಹವನನ್ನು ಜನರು ಯಾವಾಗಲೂ ತಮ್ಮ ಪ್ರಿಯನನ್ನಾಗಿ ಮಾಡಿಕೊಳ್ಳುತ್ತಾರೆ.

ನ ವೈರಮುದ್ದೀಪಯತಿ ಪ್ರಶಾಂತಂ
ನ ದರ್ಪಮಾರೋಹತಿ ಶಾಂತಿಮೇತಿ ।
ನ ದುರ್ಗತೋಽಸ್ಮೀತಿ ಕರೋತ್ಯಕಾರ್ಯಂ
ತಮಾರ್ಯಶೀಲಂ ಪರಮಾಹುರಾರ್ಯಾಃ ॥೧೨೦॥

ಯಾವನು ಶಾಂತವಾದ ವೈರವನ್ನು ಪುನಃ ಹಚ್ಚುವುದಿಲ್ಲವೋ, ಯಾವನು ದರ್ಪವನ್ನು ಹೊಂದದೆ ಶಾಂತಿಯನ್ನು ಹೊಂದುವನೋ, ಕಷ್ಟಕ್ಕೆ ಸಿಲುಕಿದ್ದೇನೆಂದು ಯಾವನು ಅಕಾರ್ಯವನ್ನು ಮಾಡುವುದಿಲ್ಲವೋ ಅಂತಹವನನ್ನು ದೊಡ್ಡವರು ಆರ್ಯಶೀಲನೆಂದು ಕರೆಯುತ್ತಾರೆ.

ನ ಸ್ವೇ ಸುಖೇ ವೈ ಕುರುತೇ ಪ್ರಹರ್ಷಂ
ನಾನ್ಯಸ್ಯ ದುಃಖೇ ಭವತಿ ಪ್ರಹೃಷ್ಟಃ ।
ದತ್ತ್ವಾ ನ ಪಶ್ಚಾತ್ ಕುರುತೇಽನುತಾಪಂ
ನ ಕತ್ಥತೇ ಸತ್ಪುರುಷಾರ್ಯಶೀಲಃ ॥೧೨೧॥

ಸಜ್ಜನನಾದವನು ತನಗೆ ಸುಖ ಒದಗಿದಾಗ ಸಂತೋಷ ಪಡುವುದಿಲ್ಲ, ಇನ್ನೊಬ್ಬರಿಗೆ ದುಃಖ ಬಂದಾಗಲೂ ಸಂತೋಷ ಪಡುವುದಿಲ್ಲ, ದಾನವನ್ನು ಕೊಟ್ಟು ಪಶ್ಚಾತ್ತಾಪವನ್ನು ಪಡುವುದಿಲ್ಲ, ತನ್ನನ್ನು ತಾನು ಹೊಗಳಿಕೊಳ್ಳುವುದಿಲ್ಲ, ಅಂತಹವನನ್ನು ಸತ್ಪುರುಷ ಮತ್ತು ಆರ್ಯಪುರುಷ ಎಂದು ಕರೆಯುತ್ತಾರೆ.

ದೇಶಾಚಾರಾನ್ ಸಮಯಾನ್ ಜಾತಿಧರ್ಮಾನ್
ಬುಭೂಷತೇ ಯಃ ಸ ಪರಾವರಜ್ಞಃ ।
ಸ ಯತ್ರ ತತ್ರಾಭಿಗತಃ ಸದೈವ
ಮಹಾಜನಸ್ಯಾಧಿಪತ್ಯಂ ಕರೋತಿ ॥೧೨೨॥

ಯಾವನು ಉತ್ತಮರನ್ನು ಮತ್ತು ಅಧಮರನ್ನು ತಿಳಿದು ದೇಶಾಚಾರಗಳನ್ನೂ, ನಿಯಮಗಳನ್ನೂ, ಜಾತಿಧರ್ಮಗಳನ್ನೂ ತಿಳಿದು ಆಚರಿಸುತ್ತಾನೆಯೋ ಅವನು ಹೋದಲ್ಲೆಲ್ಲಾ ಮಹಾಜನರ ಆಧಿಪತ್ಯವನ್ನು ಹೊಂದುತ್ತಾನೆ.

ಡಂಭಂ ಮೋಹಂ ಮತ್ಸರಂ ಪಾಪಕೃತ್ಯಂ
ರಾಜದ್ವಿಷ್ಟಂ ಪೈಶುನಂ ಪೂಗವೈರಮ್ ।
ಮತ್ತೋನ್ಮತ್ತೈರ್ದುರ್ಜನೈಶ್ಚಾಪಿ ವಾದಂ
ಯಃ ಪ್ರಜ್ಞಾವಾನ್ ವರ್ಜಯೇತ್ ಸ ಪ್ರಧಾನಃ ॥೧೨೩॥

ಯಾವ ಪ್ರಜ್ಞೆಯುಳ್ಳವನು ಡಂಭವನ್ನೂ, ಮೋಹವನ್ನೂ, ಮತ್ಸರವನ್ನೂ, ಪಾಪಕಾರ್ಯವನ್ನೂ, ರಾಜನಿಗೆ ಅಪ್ರಿಯವಾದುದನ್ನೂ, ಚಾಡಿಯನ್ನೂ, ಸಮೂಹ ವೈರವನ್ನೂ, ಹುಚ್ಚರ ಮತ್ತು ದುರ್ಜನರ ಜೊತೆಯಲ್ಲಿ ವಿವಾದವನ್ನೂ ತ್ಯಜಿಸುತ್ತಾನೆಯೋ ಅಂತಹ ಪ್ರಜ್ಞಾವಂತನು ಪ್ರಧಾನನಾಗುತ್ತಾನೆ.

ದಮಂ ಶೌಚಂ ದೈವಿಕಂ ಮಂಗಲಾನಿ
ಪ್ರಾಯಶ್ಚಿತ್ತಾನ್ ವಿವಿಧಾನ್ ಲೋಕವಾದಾನ್ ।
ಏತಾನಿ ಯಃ ಕುರುತೇ ನೈತ್ಯಕಾನಿ
ತಸ್ಯೋತ್ಥಾನಂ ದೇವತಾ ಧಾರಯಂತಿ ॥೧೨೪॥

ದಮ, ಶೌಚ, ದೈವಿಕಮಂಗಳಗಳು, ಪ್ರಾಯಶ್ಚಿತ್ತಗಳು, ವಿವಿಧ ಲೋಕಾಚಾರಗಳು ಇವುಗಳನ್ನು ಯಾವನು ನಿತ್ಯವೂ ಅನುಷ್ಠಾನ ಮಾಡುತ್ತಾನೆಯೋ ಅವನ ಏಳಿಗೆಯನ್ನು ದೇವತೆಗಳು ಉಂಟುಮಾಡುತ್ತಾರೆ.

ಸಮೈರ್ವಿವಾಹಂ ಕುರುತೇ ನ ಹೀನೈಃ
ಸಮೈಃ ಸಖ್ಯಂ ವ್ಯವಹಾರಂ ಕಥಾಶ್ಚ ।
ಗುಣೈರ್ವಿಶಿಷ್ಟಾಂಶ್ಚ ಪುರೋ ದಧಾತಿ
ವಿಪಶ್ಚಿತಸ್ತಸ್ಯ ನಯಾಃ ಸುನೀತಾಃ ॥೧೨೫॥

ಸಮಾನರಾದವರ ಜೊತೆಯಲ್ಲಿ ವಿವಾಹವನ್ನು ಬೆಳೆಸುತ್ತಾನೆ, ಹೀನರ ಜೊತೆಯಲ್ಲಲ್ಲ. ಸಮಾನರಾದವರ ಜೊತೆಯಲ್ಲಿ ಸಖ್ಯವನ್ನೂ, ವ್ಯವಹಾರವನ್ನೂ ಮತ್ತು ಸಂವಾದವನ್ನೂ ಮಾಡುತ್ತಾನೆ. ತನಗಿಂತ ಉತ್ತಮ ಗುಣವುಳ್ಳವರನ್ನು ಮುಂದೆ ಇಟ್ಟುಕೊಳ್ಳುತ್ತಾನೆ. ಅಂತಹ ಜ್ಞಾನಿಯ ಎಲ್ಲ ನಡೆಗಳೂ ಒಳ್ಳೆಯ ನಡವಳಿಕೆ ಎಂದು ಹೇಳಲ್ಪಡುತ್ತವೆ.

ಮಿತಂ ಭುಂಕ್ತೇ ಸಂವಿಭಜ್ಯಾಶ್ರಿತೇಭ್ಯೋ
ಮಿತಂ ಸ್ವಪಿತ್ಯಮಿತಂ ಕರ್ಮ ಕೃತ್ವಾ ।

ದದಾತ್ಯಮಿತ್ರೇಷ್ವಪಿ ಯಾಚಿತಃ ಸನ್
ತಮಾತ್ಮವಂತಂ ಪ್ರಜಹತ್ಯನರ್ಥಾಃ ॥೧೨೬॥

ಆಶ್ರಿತರಿಗೆ ಅನ್ನವನ್ನು ಹಂಚಿ ಮಿತವಾಗಿ ಊಟ ಮಾಡುತ್ತಾನೆ, ಅಮಿತವಾದ ಕಾರ್ಯವನ್ನು ಮಾಡಿ ಮಿತವಾಗಿ ನಿದ್ರಿಸುತ್ತಾನೆ, ಶತ್ರುಗಳು ಯಾಚಿಸಿದರೂ ದಾನವನ್ನು ಮಾಡುತ್ತಾನೆ, ಅಂತಹ ಜಿತಮನಸ್ಕನಾದ ಮನುಷ್ಯನನ್ನು ಅನರ್ಥಗಳು ಬಿಟ್ಟು ಹೋಗುತ್ತವೆ.

ಚಿಕೀರ್ಷಿತಂ ವಿಪ್ರಕೃತಂ ಚ ಯಸ್ಯ
ನಾನ್ಯೇ ಜನಾಃ ಕರ್ಮ ಜಾನಂತಿ ಕಿಂಚಿತ್ ।
ಮಂತ್ರೇ ಗುಪ್ತೇ ಸಮ್ಯಗನುಷ್ಠಿತೇ ಚ
ಸ್ವಲ್ಪೋ ನಾಸ್ಯ ಚ್ಯವತೇ ಕಶ್ಚಿದರ್ಥಃ ॥೧೨೭॥

ಯಾವನ ಮಾಡಲು ಇಚ್ಛಿಸಿದ ಕಾರ್ಯವನ್ನು ಮತ್ತು ಮಾಡಿ ಕೆಟ್ಟುಹೋದ ಕಾರ್ಯವನ್ನು ಬೇರೆ ಜನರು ತಿಳಿಯುವುದಿಲ್ಲವೋ, ಯಾವನ ಮಂತ್ರವು (ಮಂತ್ರಾಲೋಚನೆಯು) ರಹಸ್ಯವಾಗಿ ಸರಿಯಾಗಿ ಅನುಷ್ಠಾನ ಮಾಡಲ್ಪಡುತ್ತದೆಯೋ ಅವನಿಂದ ಸ್ವಲ್ಪ ಸಂಪತ್ತೂ ಸಹ ಬಿಟ್ಟು ಹೋಗುವುದಿಲ್ಲ.

ಸ ಸರ್ವಭೂತಪ್ರಶಮೇ ನಿವಿಷ್ಟಃ
ಸತ್ಯೋ ಮೃದುರ್ಮಾನಕೃಚ್ಛುದ್ಧಭಾವಃ ।
ಅತೀವ ಸ ಜ್ಞಾಯತೇ ಜ್ಞಾತಿಮಧ್ಯೇ
ಮಹಾಮಣಿರ್ಜಾತ್ಯ ಇವ ಪ್ರಧಾನಃ ॥೧೨೮॥

ಯಾವನು ಎಲ್ಲರನ್ನೂ ಸಮಾಧಾನ ಮಾಡುವುದರಲ್ಲಿ ನಿರತನಾಗಿರುತ್ತಾನೆಯೋ, ಸತ್ಯವಚನನೂ, ಮೃದುವೂ, ಇನ್ನೊಬ್ಬರಿಗೆ ಮಾನವನ್ನು ಕೊಡುವವನೂ ಮತ್ತು ಶುದ್ಧ ಸ್ವಭಾವದವನೂ ಆಗಿರುತ್ತಾನೆಯೋ ಅವನು ಮಾಲೆಯಲ್ಲಿ ಇರುವ ಒಳ್ಳೆಯ ಜಾತಿಯ ಮಹಾಮಣಿಯಂತೆ ಜ್ಞಾತಿಗಳ ಮಧ್ಯದಲ್ಲಿ ಪ್ರಧಾನನಾಗಿ ಶೋಭಿಸುತ್ತಾನೆ.

ಯಶ್ಚಾತ್ಮನಾऽಪತ್ರಪತೇ ಭೃಶಂ ನರಃ
ಸ ಸರ್ವಲೋಕಸ್ಯ ಗುರುರ್ಭವತ್ಯುತ ।
ಅನಂತತೇಜಾಃ ಸುಮನಾಃ ಸಮಾಹಿತಃ
ಸ ತೇಜಸಾ ಸೂರ್ಯ ಇವಾವಭಾಸತೇ ॥೧೨೯॥

ಯಾವನು ತಾನೇ ಬಹಳವಾಗಿ ನಾಚಿಕೊಳ್ಳುತ್ತಾನೆಯೋ ಅವನು ಎಲ್ಲ ಲೋಕಕ್ಕೂ ಗುರುವಾಗುತ್ತಾನೆ. ಅನಂತ ತೇಜಸ್ಸುಳ್ಳವನಾಗಿ, ಒಳ್ಳೆಯ ಮನಸ್ಸುಳ್ಳವನಾಗಿ, ಸಮಾಧಾನದಿಂದ ಕೂಡಿದವನಾಗಿ ಅವನು ತನ್ನ ತೇಜಸ್ಸಿನಿಂದ ಸೂರ್ಯನಂತೆ ಬೆಳಗುತ್ತಾನೆ.

ವನೇ ಜಾತಾಃ ಶಾಪದಗ್ಧಸ್ಯ ರಾಜ್ಞಃ
ಪಾಂಡೋಃ ಪುತ್ರಾಃ ಪಂಚ ಪಂಚೇಂದ್ರಕಲ್ಪಾಃ ।
ತ್ವಯ್ಯೇವ ಬಾಲಾ ವರ್ಧಿತಾಃ ಶಿಕ್ಷಿತಾಶ್ಚ
ತವಾದೇಶಂ ಪಾಲಯಂತ್ಯಾಂಬಿಕೇಯ ॥೧೩೦॥

ಕಿಂದಮರ ಶಾಪದಿಂದ ದಗ್ಧರಾದ ಪಾಂಡು ಮಹಾರಾಜನಿಗೆ ಐದು ಮಕ್ಕಳು ಜನಿಸಿದರು. ಐದುಮಕ್ಕಳೂ ಐವರು ಇಂದ್ರರಿಗೆ ಸಮಾನರಾದವರು. ಅಂಬಿಕೇಯನೇ, ನೀನೇ ಅವರನ್ನು ಬೆಳೆಸಿ ಶಿಕ್ಷಣವನ್ನು ನೀಡಿದ್ದೀಯೆ. ಅವರು ನಿನ್ನ ಆಜ್ಞೆಯನ್ನು ಪಾಲಿಸುತ್ತಾರೆ.

ಪ್ರದಾಯೈಷಾಮುಚಿತಂ ತಾತ ರಾಜ್ಯಂ
ಸುಖೀ ಪುತ್ರೈಃ ಸಹಿತೋ ಮೋದಮಾನಃ ।
ನ ದೇವಾನಾಂ ನಾಪಿ ಮಾನುಷಾಣಾಂ
ಭವಿಷ್ಯಸಿ ತ್ವಂ ಗರ್ಹಣೀಯೋ ನರೇಂದ್ರ ॥೧೩೧॥

ಪ್ರೀತಿಪಾತ್ರನೇ, ಅವರಿಗೆ ಯೋಗ್ಯವಾದ ರಾಜ್ಯವನ್ನು ಕೊಟ್ಟು ಪುತ್ರರ ಜೊತೆಯಲ್ಲಿ ಸುಖ-ಸಂತೋಷದಿಂದ ಇರುವವನಾಗು. ನರೇಂದ್ರನೇ, ಹಾಗೆ ಮಾಡಿದರೆ ನೀನು ದೇವತೆಗಳಿಂದಾಗಲೀ ಅಥವಾ ಮನುಷ್ಯರಿಂದಾಗಲೀ ನಿಂದನೀಯನಾಗುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ದ್ವಾತ್ರಿಂಶೋಽಧ್ಯಾಯಃ ॥

॥ ಪ್ರಜಾಗರಪರ್ವಣಿ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಮೂವತ್ತೆರಡನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

# ಮೂವತ್ಮೂರನೆಯ ಅಧ್ಯಾಯ

ವಿದುರನೀತಿ. ಯುಧಿಷ್ಠಿರನಿಗೆ ರಾಜ್ಯವನ್ನು ಕೊಡುವಂತೆ ನಿರ್ಬಂಧ.

**ಧೃತರಾಷ್ಟ್ರಃ**

**ಜಾಗ್ರತೋ ದಹ್ಯಮಾನಸ್ಯ ಯತ್ ಕೃತ್ಯಮನುಪಶ್ಯಸಿ ।**
**ತದ್ ಬ್ರೂಹಿ ಸರ್ವಂ ನಸ್ತಾತ ಧರ್ಮಾರ್ಥಕುಶಲೋ ಹ್ಯಸಿ** ॥೧॥

**ಧೃತರಾಷ್ಟ್ರ**– ಪ್ರೀತಿಪಾತ್ರನೇ, ಚಿಂತೆಯಿಂದ ಬೆಂದುಹೋಗುತ್ತಾ ಜಾಗರಣೆಯಲ್ಲಿರುವ ನನಗೆ ನೀನು ಯಾವ ಕಾರ್ಯವು ಯುಕ್ತವೆಂದು ಭಾವಿಸುತ್ತೀಯೋ ಅದೆಲ್ಲವನ್ನೂ ಹೇಳು. ನೀನು ಧರ್ಮಾರ್ಥ ಕುಶಲನಾಗಿದ್ದೀಯೆ.

**ತ್ವಂ ಮಾಂ ಯಥಾವದ್ ವಿದುರ ಪ್ರಶಾಧಿ**
**ಪ್ರಜ್ಞಾಪೂರ್ವಂ ಸರ್ವಮಜಾತಶತ್ರೋಃ ।**
**ಯನ್ಮನ್ಯಸೇ ಪಥ್ಯಮದೀನಸತ್ವ**
**ಶ್ರೇಯಃ ಪಥ್ಯಂ ಬ್ರೂಹಿ ತದ್ಧ್ಯಕುರೂಣಾಮ್** ॥೨॥

ಎಲೈ ವಿದುರನೇ, ನೀನು ಪ್ರಜ್ಞಾಪೂರ್ವಕವಾಗಿ ನನಗೆ ಸರಿಯಾಗಿ ಶಾಸನವನ್ನು ಮಾಡು. ಅದೀನವಾದ ಮನಸ್ಸುಳ್ಳವನೇ, ಅಜಾತಶತ್ರುವಿಗೆ ಯಾವುದು ಹಿತವೆಂದು ಭಾವಿಸುತ್ತೀಯೋ ಹಾಗೆಯೇ ಕುರುಗಳಿಗೂ ಯಾವುದು ಹಿತವೆಂದು ಮತ್ತು ಶ್ರೇಯಸ್ಸೆಂದು ಭಾವಿಸುತ್ತೀಯೋ ಅದನ್ನೇ ಹೇಳುವವನಾಗು.

**ಪಾಪಾಶಂಕೀ ಪಾಪಮೇವಾನುಪಶ್ಯನ್**
**ಪೃಚ್ಛಾಮಿ ತ್ವಾಂ ವ್ಯಾಕುಲೇನಾತ್ಮನಾऽಹಮ್ ।**
**ಕವೇ ತನ್ಮೇ ಬ್ರೂಹಿ ತತ್ತ್ವಂ ಯಥಾವತ್**
**ಮನೀಷಿತಂ ಸರ್ವಮಜಾತಶತ್ರೋಃ** ॥೩॥

ಪಾಪಾಕಾಂಕ್ಷಿಯಾಗಿ ಮುಂದೆ ಪಾಪವನ್ನೇ ನೋಡುವವನಾಗಿ ವ್ಯಾಕುಲವಾದ ಮನಸ್ಸಿನಿಂದ ನಾನು ನಿನ್ನನ್ನು ಕೇಳುತ್ತಿದ್ದೇನೆ. ಜ್ಞಾನಿಯಾದವನೇ, ನನಗೆ ತತ್ವವನ್ನು ಯಥಾರ್ಥವಾಗಿ ಹೇಳು. ಅಜಾತಶತ್ರುವಿನ ಎಲ್ಲಾ ಅಭಿಪ್ರಾಯವನ್ನೂ ತಿಳಿಸು.

ವಿದುರಃ

ಶುಭಂ ವಾ ಯದಿ ವಾ ಪಾಪಂ ಪ್ರಿಯಂ ವಾ ಯದಿ ವಾऽಪ್ರಿಯಮ್ ।
ಅಪೃಷ್ಟಃ ಕಸ್ಯಚಿದ್ ಬ್ರೂಯಾದ್ ಯಃ ಸ ಗಚ್ಛೇತ್ ಪರಾಭವಮ್ ॥೪॥

ವಿದುರ– ಶುಭವಾಗಲೀ ಅಥವಾ ಅಶುಭವಾಗಲೀ, ಪ್ರಿಯವಾಗಲೀ ಅಥವಾ ಅಪ್ರಿಯವಾಗಲೀ, ಪ್ರಶ್ನೆ ಮಾಡದೇ ಉತ್ತರವನ್ನು ಹೇಳುವವನು ಪರಾಭವವನ್ನು ಹೊಂದುತ್ತಾನೆ.

ತಸ್ಮಾದ್ ವಕ್ಷ್ಯಾಮಿ ತೇ ರಾಜನ್ ಶಮಮಿಚ್ಛನ್ ಕುರೂನ್ ಪ್ರತಿ ।
ವಚಃ ಶ್ರೇಯಸ್ಕರಂ ಧರ್ಮ್ಯಂ ಬ್ರುವತಸ್ತನ್ನಿಬೋಧ ಮೇ ॥೫॥

ನೀನು ಪ್ರಶ್ನೆ ಮಾಡಿರುವುದರಿಂದ ಎಲೈ ರಾಜನೇ, ಕುರುಗಳಿಗೆ ಶಾಂತಿಯನ್ನು ಬಯಸಿ ಮಾತನಾಡುವೆನು. ಶ್ರೇಯಸ್ಕರವೂ, ಧರ್ಮಕ್ಕೆ ಅನುಗುಣವೂ ಆದ ನನ್ನ ಮಾತುಗಳನ್ನು ಕೇಳು.

ಮಿಥ್ಯೋಪೇತಾನಿ ಕರ್ಮಾಣಿ ಸಿದ್ಧ್ಯೇಯುರ್ಯದಿ ಭಾರತ ।
ಅನುತಾಪಪ್ರಯುಕ್ತಾನಿ ಮಾ ಸ್ಮ ತೇಷು ಮನಃ ಕೃಥಾಃ ॥೬॥

ಎಲೈ ಭಾರತನೇ, ಮೋಸದಿಂದ ಮಾಡಿದ ಕರ್ಮಗಳು ಅನಂತರ ಪಶ್ಚಾತ್ತಾಪದಿಂದ ಕೂಡಿದರೂ ಸಿದ್ಧಿಯನ್ನು ಕೊಡುವುದಾದರೆ (ಸಫಲವಾಗುವುದಾದರೆ) ಅಂತಹ ಕರ್ಮಗಳಲ್ಲಿ ಮನಸ್ಸನ್ನು ಮಾಡಬೇಡ.

ತಥೈವ ಯೋಗವಿಹಿತಂ ನ ಸಿದ್ಧ್ಯೇತ್ ಕರ್ಮ ಯನ್ನೃಪ ।
ಉಪಾಯಯುಕ್ತಂ ಮೇಧಾವೀ ನ ಚ ತತ್ರ ಪತೇತ್ ತಮಃ ॥೭॥

ರಾಜನೇ, ಮೇಧಾವಿಯಾದವನು ಈ ಜನ್ಮದಲ್ಲಿ ಮತ್ತು ಕಾಲಾಂತರದಲ್ಲಿ ಅಥವಾ ಮುಂದಿನ ಜನ್ಮದಲ್ಲಿ ಒಳ್ಳೆಯ ಫಲವನ್ನು ಕೊಡುವ, ಶಾಸ್ತ್ರವಿಹಿತವಾದ ಕರ್ಮವನ್ನು ಮಾಡಿ, ಅದು ಈ ಜನ್ಮದಲ್ಲಿ ಸಿದ್ಧಿಸದಿದ್ದರೆ ಅದರಲ್ಲಿ ಮನೋವಿಷಾದವನ್ನು ಹೊಂದಬಾರದು.

ಅನುಬಂಧಾನಪೇಕ್ಷೇತ ಸಾನುಬಂಧೇಷು ಕರ್ಮಸು ।
ಸಂಪ್ರಧಾರ್ಯ ಚ ಕುರ್ವೀತ ನ ವೇಗೇನ ಸಮಾಚರೇತ್ ॥೮॥

ಇನ್ನೊಬ್ಬರ ಸಹಾಯದಿಂದ ಮಾಡುವ ಕರ್ಮಗಳಲ್ಲಿ ಇನ್ನೊಬ್ಬರ ಸಹಾಯವನ್ನು ಅಪೇಕ್ಷಿಸಬೇಕು. ಚೆನ್ನಾಗಿ ವಿಚಾರ ಮಾಡಿ ಕರ್ಮವನ್ನು ಮಾಡಬೇಕು, ತ್ವರೆಯಿಂದ ಮಾಡಬಾರದು.

**ಅನುಬಂಧಂ ಚ ಸಂಪ್ರೇಕ್ಷ್ಯ ವಿಪಾಕಂ ಚೈವ ಕರ್ಮಣಾಮ್ ।**
**ಉತ್ಥಾನಮಾತ್ಮನಶ್ಚಾದೌ ಧೀರಃ ಕುರ್ವೀತ ವಾ ನ ವಾ ॥೯॥**

ಕರ್ಮಕ್ಕೆ ಬೇಕಾದ ಸಹಾಯವನ್ನು ಗಮನಿಸಿ ಕರ್ಮದ ಪರಿಣಾಮವನ್ನೂ ಗಮನಿಸಿ ಅದಕ್ಕಿಂತ ಮೊದಲು ತನ್ನ ಉತ್ಸಾಹ ಮತ್ತು ಅಭಿವೃದ್ಧಿಯನ್ನು ಗಮನಿಸಿ ಧೀರನಾದವನು ಕರ್ಮವನ್ನು ಮಾಡಬಹುದು ಅಥವಾ ಬಿಡಬಹುದು.

**ಯಃ ಪ್ರಮಾಣಂ ನ ಜಾನಾತಿ ಸ್ಥಾನೇ ವೃದ್ಧೌ ತಥಾ ಕ್ಷಯೇ ।**
**ಕೋಶೇ ಜನಪದೇ ದಂಡೇ ನ ಸ ರಾಜ್ಯೇऽವತಿಷ್ಠತೇ ॥೧೦॥**

ಯಾವ ರಾಜನು ಸ್ಥಾನ, ವೃದ್ಧಿ, ಕ್ಷಯ, ಕೋಶ, ಜನಪದ ಮತ್ತು ದಂಡ - ಈ ಆರು ವಿಷಯಗಳಲ್ಲಿ ಪ್ರಮಾಣವನ್ನು ತಿಳಿದಿಲ್ಲವೋ ಅವನು ರಾಜ್ಯದಲ್ಲಿ ಉಳಿಯುವುದಿಲ್ಲ.

**ಯಸ್ತ್ವೇತಾನಿ ಯಥೋಕ್ತಾನಿ ಪ್ರಮಾಣಾನ್ಯನುಪಶ್ಯತಿ ।**
**ಯುಕ್ತೋ ಧರ್ಮಾರ್ಥಯೋರ್ಜ್ಞಾನೇ ಸ ರಾಜ್ಯಮಧಿತಿಷ್ಠತಿ ॥೧೧॥**

ಯಾವನು ಈ ಆರು ವಿಷಯಗಳಲ್ಲಿ ಶಾಸ್ತ್ರೋಕ್ತವಾದ ಪ್ರಮಾಣಗಳನ್ನು ಗಮನಿಸಿ ಧರ್ಮಾರ್ಥಗಳ ಜ್ಞಾನದಲ್ಲಿ ನಿರತನಾಗಿರುತ್ತಾನೆಯೋ ಅವನು ರಾಜ್ಯದಲ್ಲಿ ಪ್ರತಿಷ್ಠಿತನಾಗುತ್ತಾನೆ.

**ನ ರಾಜ್ಯಂ ಪ್ರಾಪ್ತಮಿತ್ಯೇವಂ ವರ್ತಿತವ್ಯಮಸಾಂಪ್ರತಮ್ ।**
**ಶ್ರಿಯಂ ಹ್ಯವಿನಯೋ ಹಂತಿ ಜರಾ ರೂಪಮಿವೋತ್ತಮಮ್ ॥೧೨॥**

ರಾಜ್ಯವು ದೊರಕಿದೆ ಎಂಬ ಒಂದು ಕಾರಣದಿಂದ ಅಯುಕ್ತವಾದುದನ್ನು ಆಚರಿಸಬಾರದು. ಮುಪ್ಪು ಸೌಂದರ್ಯವನ್ನು ನಾಶಮಾಡಿದಂತೆ ಅವಿನಯವು ಸಂಪತ್ತನ್ನು ನಾಶಪಡಿಸುತ್ತದೆ.

ಭಕ್ಷ್ಯೈತ್ತಮಪ್ರತಿಚ್ಛನ್ನಂ ಮತ್ಸ್ಯೋ ಬಡಿಶಮಾಯಸಮ್ ।
ಅನ್ನಾಭಿಲಾಷೀ ಗ್ರಸತೇ ನಾನುಬಂಧಮವೇಕ್ಷತೇ ॥೧೩॥

ಆಹಾರವನ್ನು ಬಯಸುವ ಮತ್ಸ್ಯವು ಒಳ್ಳೆಯ ಭಕ್ಷ್ಯದಿಂದ ಮರೆಮಾಡಲ್ಪಟ್ಟ ಕಬ್ಬಿಣದ ಗಾಳವನ್ನು ನುಂಗುತ್ತದೆ. ಅದರ ಪರಿಣಾಮವನ್ನು ಗಮನಿಸುವುದಿಲ್ಲ.

ಯಚ್ಚಕ್ಯಂ ಗ್ರಸಿತುಂ ಗೃಹ್ಯಂ ಗ್ರಸ್ತಂ ಪರಿಣಮಚ್ಚ ಯತ್ ।
ಹಿತಂ ಚ ಪರಿಮಾಣೇ ಯತ್ ತದಾದ್ಯಂ ಭೂತಿಮಿಚ್ಛತಾ ॥೧೪॥

ಯಾವುದನ್ನು ಹಸ್ತದಿಂದ ಹಿಡಿಯಲು ಮತ್ತೆ ಬಾಯಿಂದ ನುಂಗಲು ಸಾಧ್ಯವೋ, ಯಾವುದನ್ನು ನುಂಗಿದರೆ ಜೀರ್ಣವಾಗುತ್ತದೆಯೋ, ಜೀರ್ಣವಾದ ಮೇಲೆಯೂ ಯಾವುದು ಹಿತವಾಗುತ್ತದೆಯೋ ಸಂಪತ್ತನ್ನು ಅಪೇಕ್ಷಿಸುವವನು ಅಂತಹ ಭೋಜ್ಯವನ್ನೇ ಅಪೇಕ್ಷಿಸಬೇಕು.

ವನಸ್ಪತೇರಪಕ್ವಾನಿ ಫಲಾನಿ ವಿಚಿನೋತಿ ಯಃ ।
ನ ಪ್ರಾಪ್ನೋತಿ ರಸಂ ತೇಭ್ಯೋ ಬೀಜಂ ಚಾಸ್ಯ ವಿನಶ್ಯತಿ ॥೧೫॥

ಯಾವನು ಒಂದು ವೃಕ್ಷದ ಪಕ್ವವಾಗದ ಫಲಗಳನ್ನು ತಿನ್ನುತ್ತಾನೆಯೋ ಅವನಿಗೆ ಆ ಫಲದ ರಸವಾಗಲೀ ಮತ್ತು ಆ ಫಲದಿಂದ ಬೀಜಗಳಾಗಲೀ ದೊರೆಯುವುದಿಲ್ಲ. ಅವು ನಾಶವನ್ನು ಹೊಂದುತ್ತವೆ.

ಯಸ್ತು ಪಕ್ವಮುಪಾದತ್ತೇ ಕಾಲೇ ಪರಿಣತಂ ಫಲಮ್ ।
ಫಲಾದ್ ರಸಂ ಸ ಲಭತೇ ಬೀಜಾಚ್ಚೈವ ಫಲಂ ಪುನಃ ॥೧೬॥

ಯಾವನು ಯೋಗ್ಯವಾದ ಕಾಲದಲ್ಲಿ ಪಕ್ವವಾದ ಫಲವನ್ನು ಸ್ವೀಕರಿಸುತ್ತಾನೆಯೋ ಅವನು ಫಲದಿಂದ ರಸವನ್ನೂ ಮತ್ತು ಪುನಃ ಬೀಜದಿಂದ ಫಲವನ್ನೂ ಪಡೆಯುತ್ತಾನೆ.

ಯಥಾ ಮಧು ಸಮಾದತ್ತೇ ರಕ್ಷನ್ ಪುಷ್ಪಾಣಿ ಷಟ್‌ಪದಃ ।
ತದ್ವದರ್ಥಾನ್ ಮನುಷ್ಯೇಭ್ಯ ಆದದ್ಯಾದವಿಹಿಂಸಯಾ ॥೧೭॥

ಹೇಗೆ ದುಂಬಿಯು ಪುಷ್ಪಗಳನ್ನು ರಕ್ಷಿಸಿ ಮಧುವನ್ನು ಮಾತ್ರ ತೆಗೆದುಕೊಳ್ಳುತ್ತದೋ ಅದರಂತೆ ಮನುಷ್ಯರನ್ನು ಹಿಂಸಿಸದೆ ರಾಜನು ಅವರಿಂದ ಧನವನ್ನು ಸಂಗ್ರಹಿಸಬೇಕು.

ಪುಷ್ಪಂ ಪುಷ್ಪಂ ವಿಚಿನ್ವೀಯಾತ್ ಮೂಲಚ್ಛೇದಂ ನ ಕಾರಯೇತ್ ।
ಮಾಲಾಕಾರ ಇವಾರಾಮೇ ನ ಯಥಾಽಂಗಾರಕಾರಕಃ ॥೧೮॥

ಹೂಮಾಲೆಯನ್ನು ಕಟ್ಟುವವನು ತೋಟದಲ್ಲಿ ಒಂದೊಂದು ಹೂವನ್ನು ಆರಿಸಿದಂತೆ ಆರಿಸಿಕೊಳ್ಳಬೇಕು. ಇದ್ದಿಲನ್ನು ಮಾಡುವವನಂತೆ ಮೂಲಚ್ಛೇದವನ್ನೇ ಮಾಡಬಾರದು.

ಕಿಂ ನು ಮೇ ಸ್ಯಾದಿದಂ ಕೃತ್ವಾ ಕಿಂ ನು ಮೇ ಸ್ಯಾದಕುರ್ವತಃ ।
ಇತಿ ಕರ್ಮಾಣಿ ಸಂಚಿಂತ್ಯ ಕುರ್ಯಾದ್ವಾ ಪುರುಷೋ ನ ವಾ ॥೧೯॥

ನಾನು ಈ ಕಾರ್ಯವನ್ನು ಮಾಡಿದರೆ ಏನಾಗಬಹುದು ಅಥವಾ ಮಾಡದಿದ್ದರೆ ಏನಾಗಬಹುದು ಎಂದು ಕಾರ್ಯದ ವಿಷಯದಲ್ಲಿ ಚಿಂತಿಸಿ ಪುರುಷನು ಅನಂತರ ಮಾಡಬಹುದು ಅಥವಾ ಬಿಡಬಹುದು.

ಅನಾರಭ್ಯಾ ಭವಂತ್ಯರ್ಥಾಃ ಕೇಚಿನ್ನಿತ್ಯಂ ತಥಾऽऽಗತಾಃ ।
ಕೃತಃ ಪುರುಷಕಾರೋ ಹಿ ಭವೇದ್ಯೇಷು ನಿರರ್ಥಕಃ ॥೨೦॥

ಕೆಲವು ಅರ್ಥಗಳು ನಿತ್ಯದಲ್ಲಿ ತಾವಾಗಿಯೇ ಬಂದು ಒದಗುತ್ತವೆ. ಅದಕ್ಕಾಗಿ ಮಾಡುವ ಪುರುಷ ಪ್ರಯತ್ನವು ವ್ಯರ್ಥವಾಗುತ್ತವೆ.

ಅನರ್ಥೇ ಚೈವ ನಿರತಮರ್ಥೇ ಚೈವ ಪರಾಙ್ಮುಖಮ್ ।
ಪ್ರಸಾದೋ ನಿಷ್ಫಲೋ ಯಸ್ಯ ಕ್ರೋಧಶ್ಚಾಪಿ ನಿರರ್ಥಕಃ ॥೨೧॥

ನ ತಂ ಭರ್ತಾರಮಿಚ್ಛಂತಿ ಷಂಡಂ ಪತಿಮಿವ ಸ್ತ್ರಿಯಃ ॥೨೨॥

ಯಾವನು ಅನರ್ಥದಲ್ಲಿಯೇ ನಿರತನಾಗಿರುತ್ತಾನೆಯೋ ಮತ್ತು ಅರ್ಥದಿಂದ ವಿಮುಖನಾಗಿರುತ್ತಾನೆಯೋ ಅವನ ಅನುಗ್ರಹವು ನಿಷ್ಫಲ ಮತ್ತು ಅವನ ಕ್ರೋಧವು ನಿರರ್ಥಕವಾದುದು. ಸ್ತ್ರೀಯರು ನಪುಂಸಕನಾದ ಪತಿಯನ್ನು ಬಯಸದಂತೆ ಪ್ರಜೆಗಳು ಅಂತಹ ಪ್ರಭುವನ್ನು ಬಯಸುವುದಿಲ್ಲ.

ಕಾಂಶ್ಚಿದರ್ಥಾನ್ ನರಃ ಪ್ರಾಜ್ಞೋ ಲಘುಮೂಲಾನ್ ಮಹಾಫಲಾನ್ ।
ಕ್ಷಿಪ್ರಮಾರಭತೇ ಕರ್ತುಂ ನ ವಿಘ್ನಯತಿ ತಾದೃಶಾನ್ ॥೨೩॥

ಪ್ರಾಜ್ಞನಾದವನು ಅಲ್ಪಪ್ರಯತ್ನದಿಂದ ಆರಂಭಿಸಲು ಸಾಧ್ಯವಾದ ಮಹಾಫಲವನ್ನು ಕೊಡುವ ಕೆಲವು ಕಾರ್ಯಗಳನ್ನು ಶೀಘ್ರವಾಗಿ ಆರಂಭಿಸುತ್ತಾನೆ. ಅಂತಹ ಕಾರ್ಯಗಳಿಗೆ ವಿಘ್ನವನ್ನು ತಂದುಕೊಳ್ಳುವುದಿಲ್ಲ.

ಋಜು ಪಶ್ಯತಿ ಯಃ ಸರ್ವಂ ಚಕ್ಷುಷಾ ನು ಪಿಬನ್ನಿವ ।
ಆಸೀನಮಪಿ ತೂಷ್ಣೀಕಮನುರಜ್ಯಂತಿ ತಂ ಪ್ರಜಾಃ ॥೨೪॥

ಯಾವ ರಾಜನು ಕಣ್ಣಿನಿಂದ ಪಾನ ಮಾಡುವವನಂತೆ ಎಲ್ಲವನ್ನೂ ನೇರವಾಗಿ ನೋಡುತ್ತಾನೆಯೋ ಅವನು ಸುಮ್ಮನೇ ಕುಳಿತಿದ್ದರೂ ಸಹ ಅಂತಹ ರಾಜನಲ್ಲಿ ಪ್ರಜೆಗಳು ಅನುರಕ್ತರಾಗುತ್ತಾರೆ.

ಸುಪುಷ್ಪಿತಃ ಸ್ಯಾದಫಲಃ ಫಲಿತಃ ಸ್ಯಾದ್ ದುರಾರುಹಃ ।
ಅಪಕ್ವಃ ಪಕ್ವಸಂಕಾಶೋ ನ ಚ ಶೀರ್ಯೇತ ಕರ್ಹಿಚಿತ್ ॥೨೫॥

ಒಳ್ಳೆಯ ಪುಷ್ಪಗಳಿದ್ದರೂ ಫಲವಿಲ್ಲದೆ ಇರಬೇಕು. ಫಲವಿದ್ದರೂ ವೃಕ್ಷವು ಹತ್ತಲು ಸಾಧ್ಯವಾಗದಂತೆ ಇರಬೇಕು. ಅಪಕ್ವವಾದ ಫಲವು ಪಕ್ವದಂತೆ ತೋರುತ್ತಿರಬೇಕು. ಅಂತಹ ವೃಕ್ಷವು ಎಂದೂ ನಾಶವನ್ನು ಹೊಂದುವುದಿಲ್ಲ.

ಚಕ್ಷುಷಾ ಮನಸಾ ವಾಚಾ ಕರ್ಮಣಾ ಚ ಚತುರ್ವಿಧಮ್ ।
ಪ್ರಸಾದಯತಿ ಯೋ ಲೋಕಂ ತಂ ಲೋಕೋऽನುಪ್ರಸೀದತಿ ॥೨೬॥

ಚಕ್ಷುಸ್ಸಿನಿಂದ, ಮನಸ್ಸಿನಿಂದ, ಮಾತಿನಿಂದ ಮತ್ತು ಕರ್ಮದಿಂದ ನಾಲ್ಕುವಿಧವಾಗಿ ಯಾವನು ಪ್ರಜೆಗಳನ್ನು ಸಂತೋಷಪಡಿಸುತ್ತಾನೋ ಅಂತಹ ರಾಜನಲ್ಲಿ ಲೋಕವು ಅನುರಕ್ತವಾಗುತ್ತದೆ.

ಯಸ್ಮಾತ್ ತ್ರಸ್ಯಂತಿ ಭೂತಾನಿ ಮೃಗವ್ಯಾಧಾನ್ಮೃಗಾ ಇವ ।
ಸಾಗರಾಂತಾಮಪಿ ಮಹೀಂ ಲಬ್ಧ್ವಾ ಸ ಪರಿಹೀಯತೇ ॥೨೭॥

ಬೇಟೆಯಾಡುವವನಿಗೆ ಮೃಗಗಳು ಹೆದರಿದಂತೆ ಯಾವನಿಗೆ ಎಲ್ಲರೂ ಹೆದರುತ್ತಾರೆಯೋ ಅಂತಹವನು ಸಾಗರಾಂತ ಭೂಮಿಯನ್ನು ಪಡೆದರೂ ಅದು ನಾಶವನ್ನು ಹೊಂದುತ್ತದೆ.

ಪಿತೃಪೈತಾಮಹಂ ರಾಜ್ಯಂ ಪ್ರಾಪ್ಯಾಪಿ ಸ್ವೇನ ಕರ್ಮಣಾ ।
ವಾಯುರಭ್ರಮಿವಾಸಾದ್ಯ ಭ್ರಂಶಯತ್ಯನಯಾಸ್ಥಿತಃ ॥೨೮॥

ತನ್ನ ಕರ್ಮದಿಂದ ಪಿತೃ-ಪಿತಾಮಹರ ರಾಜ್ಯವನ್ನು ಪಡೆದರೂ ಮೋಡಗಳ ಸಮೂಹಕ್ಕೆ ವಾಯು ಬಂದು ಸೇರಿದಂತೆ ಅವನು ಆಶ್ರಯಿಸಿದ ಅನೀತಿಯು ರಾಜ್ಯವನ್ನು ನಾಶಪಡಿಸುತ್ತದೆ.

ಧರ್ಮಮಾಚರತೋ ರಾಜ್ಞಃ ಸದ್ಭಿಶ್ಚರಿತಮಾದಿತಃ ।
ವಸುಧಾ ವಸುಸಂಪೂರ್ಣಾ ವರ್ಧತೇ ಭೂತಿವರ್ಧನೀ ॥೨೯॥

ಮೊದಲಿನಿಂದಲೂ ಸಜ್ಜನರು ಆಚರಿಸಿದ ಧರ್ಮವನ್ನು ಆಚರಿಸುವ ರಾಜನಿಗೆ ಭೂಮಿಯು ಧನಸಂಪೂರ್ಣವಾಗಿ ಅವನ ಸಂಪತ್ತನ್ನು ಹೆಚ್ಚಿಸುತ್ತದೆ.

ಅಥ ಸಂತ್ಯಜತೋ ಧರ್ಮಮಧರ್ಮಮನುತಿಷ್ಠತಃ ।
ಪ್ರತಿಸಂವೇಷ್ಟತೇ ಭೂಮಿರಗ್ನೌ ಚರ್ಮಾಹಿತಂ ಯಥಾ ॥೩೦॥

ಹಾಗಲ್ಲದೆ ಧರ್ಮವನ್ನು ಬಿಟ್ಟು ಅಧರ್ಮವನ್ನು ಅನುಷ್ಠಾನ ಮಾಡುವ ರಾಜನಿಗೆ ಅಗ್ನಿಯಲ್ಲಿ ಹಾಕಿದ ಚರ್ಮವು ಮುದುಡಿಕೊಳ್ಳುವಂತೆ ಭೂಮಿಯು ಮುದುಡಿಕೊಳ್ಳುತ್ತದೆ.

ಯ ಏವ ಯತ್ನಃ ಕ್ರಿಯತೇ ಪರರಾಷ್ಟ್ರವಿಮರ್ದನೇ ।
ಸ ಏವ ಯತ್ನಃ ಕರ್ತವ್ಯಃ ಸ್ವರಾಷ್ಟ್ರಪರಿಪಾಲನೇ ॥೩೧॥

ಪರರಾಷ್ಟ್ರವನ್ನು ವಿಮರ್ದನ ಮಾಡಲು ಯಾವ ಪ್ರಯತ್ನವು ಮಾಡಲ್ಪಡುತ್ತದೆಯೋ ಅದೇ ಯತ್ನವನ್ನು ತನ್ನ ರಾಷ್ಟ್ರಪರಿಪಾಲನೆಗೆ ಮಾಡಬೇಕು.

ಧರ್ಮೇಣ ರಾಜ್ಯಂ ವಿಂದೇತ ಧರ್ಮೇಣ ಪರಿಪಾಲಯೇತ್ ।
ಧರ್ಮಮೂಲಾಂ ಶ್ರಿಯಂ ಪ್ರಾಪ್ಯ ನ ಜಹಾತಿ ನ ಹೀಯತೇ ॥೩೨॥

ಧರ್ಮದಿಂದ ರಾಜ್ಯವನ್ನು ಪಡೆಯಬೇಕು. ಧರ್ಮದಿಂದ ಪಾಲಿಸಬೇಕು. ಧರ್ಮ ಮೂಲವಾದ ಸಂಪತ್ತನ್ನು ಹೊಂದಿದವನು ಸಂಪತ್ತನ್ನು ಕಳೆದುಕೊಳ್ಳುವುದಿಲ್ಲ. ಸಂಪತ್ತೂ ಅವನನ್ನು ಬಿಡುವುದಿಲ್ಲ.

ಅಪ್ಯುನ್ಮತ್ತಾತ್ ಪ್ರಲಪತೋ ಬಾಲಾದಪಿ ಸುಭಾಷಿತಮ್ ।
ಸರ್ವತಃ ಸಾರಮಾದದ್ಯಾತ್ ಅಶ್ಮಭ್ಯ ಇವ ಕಾಂಚನಮ್ ॥೩೩॥

ಒಳ್ಳೆಯ ಮಾತುಗಳನ್ನು ಮಕ್ಕಳಿಂದಲೂ ಅಥವಾ ಹುಚ್ಚರ ಪ್ರಲಾಪದಿಂದಲೂ ಕಲ್ಲಿನಿಂದ ಚಿನ್ನವನ್ನು ತೆಗೆದುಕೊಂಡಂತೆ ಎಲ್ಲ ಕಡೆಗಳಿಂದಲೂ ಶ್ರೇಷ್ಠವಾದುದನ್ನು ತೆಗೆದುಕೊಳ್ಳಬೇಕು.

ಸುವ್ಯಾಹೃತಾನಿ ಮಹತಾಂ ಸುಕೃತಾನಿ ತತಸ್ತತಃ ।
ಸಂಚಿನ್ವನ್ ಧೀರ ಆಸೀತ ಶಿಲಾಹಾರೀ ಶಿಲಾಂ ಯಥಾ ॥೩೪॥

ದೊಡ್ಡವರ ಒಳ್ಳೆಯ ಮಾತುಗಳನ್ನು, ಅವರ ಒಳ್ಳೆಯ ಕೃತಿಗಳನ್ನು ಧೀರನಾದವನು ಪಾರಿವಾಳವು ಕಲ್ಲಿನ ಕಣವನ್ನು ಆರಿಸಿಕೊಳ್ಳುವಂತೆ ಆರಿಸಿಕೊಂಡಿರಬೇಕು.

ಗಂಧೇನ ಗಾವಃ ಪಶ್ಯಂತಿ ಶಾಸ್ತ್ರೈಃ ಪಶ್ಯಂತಿ ಬ್ರಾಹ್ಮಣಾಃ ।
ಚಾರೈಃ ಪಶ್ಯಂತಿ ರಾಜಾನಃ ಚಕ್ಷುರ್ಭ್ಯಾಮಿತರೇ ಜನಾಃ ॥೩೫॥

ಗೋವುಗಳು ಗಂಧದಿಂದ ನೋಡುತ್ತವೆ, ಬ್ರಾಹ್ಮಣರು ಶಾಸ್ತ್ರದಿಂದ ನೋಡುತ್ತಾರೆ, ರಾಜರು ಚಾರರಿಂದ ನೋಡುತ್ತಾರೆ, ಇತರ ಜನರು ಕಣ್ಣುಗಳಿಂದ ನೋಡುತ್ತಾರೆ.

ಭೂಯಾಂಸಂ ಲಭತೇ ಕ್ಲೇಶಂ ಯಾ ಗೌರ್ಭವತಿ ದುರ್ದುಘಾ ।
ಅಥ ಯಾ ಸುದುಘಾ ಭವತಿ ನೈವ ತಾಂ ವಿತುದಂತ್ಯಪಿ ॥೩೬॥

ಯಾವ ಹಸುವು ಹಾಲನ್ನು ಕರೆಯುವುದಕ್ಕೆ ಕಷ್ಟವನ್ನು ಕೊಡುತ್ತದೆಯೋ ಅದು ಬಹಳ ಕ್ಲೇಶಗಳಿಗೆ ಒಳಗಾಗುತ್ತದೆ. ಯಾವುದು ಸುಲಭವಾಗಿ ಹಾಲನ್ನು ಕೊಡುತ್ತದೆಯೋ ಅದನ್ನು ಯಾರೂ ಹಿಂಸಿಸುವುದಿಲ್ಲ.

ಯದತಪ್ತಂ ಪ್ರಣಮತೇ ನ ತತ್ ಸಂತಾಪಯತ್ಯುತ ।
ಯಚ್ಚ ಸ್ವಯಂ ನಮೇದ್ ದಾರು ನ ತತ್ ಸಂತಾಪಯೇದ್ ಬುಧಃ ॥
ಏತಯೋಪಮಾ ಧೀರಃ ಸನ್ನಮೇತ ಬಲೀಯಸೇ ॥೩೮॥

ಯಾವುದು ಕಾಯಿಸದಿದ್ದರೆ ಬಗ್ಗುವುದಿಲ್ಲವೋ ಅಂತಹ ಕಬ್ಬಿಣದ ವಸ್ತುಗಳನ್ನು ಕಾಯಿಸುತ್ತಾರೆ. ಯಾವ ಮರವು ತಾನಾಗಿಯೇ ಬಗ್ಗುತ್ತದೆಯೋ ಅದನ್ನು

ವಿವೇಕಿಯಾದವನು ಕಾಯಿಸುವುದಿಲ್ಲ. ಈ ದೃಷ್ಟಾಂತದಿಂದ ಧೀರನಾದವನು ಪ್ರಬಲನಾದವನಿಗೆ ಬಾಗಬೇಕು.

**ಪರ್ಜನ್ಯನಾಥಾಃ ಪಶವೋ ರಾಜಾನೋ ಮಂತ್ರಿಬಾಂಧವಾಃ ।**
**ಪತಯೋ ದೇವತಾಃ ಸ್ತ್ರೀಣಾಂ ಬ್ರಾಹ್ಮಣಾ ವೇದಬಾಂಧವಾಃ ॥೫೯॥**

ಪಶುಗಳಿಗೆ ಪರ್ಜನ್ಯನು ಒಡೆಯನು. ರಾಜರಿಗೆ ಮಂತ್ರಿಗಳು ಬಾಂಧವರು. ಸ್ತ್ರೀಯರಿಗೆ ಪತಿಗಳೇ ದೇವತೆಗಳು. ಬ್ರಾಹ್ಮಣರಿಗೆ ವೇದಗಳೇ ಬಾಂಧವರು.

**ಸತ್ಯೇನ ರಕ್ಷ್ಯತೇ ಧರ್ಮೋ ವಿದ್ಯಾ ಯೋಗೇನ ರಕ್ಷ್ಯತೇ ।**
**ಮೃಜಯಾ ರಕ್ಷ್ಯತೇ ರೂಪಂ ಕುಲಂ ವೃತ್ತೇನ ರಕ್ಷ್ಯತೇ ॥೬೦॥**

ಧರ್ಮವು ಸತ್ಯದಿಂದ ರಕ್ಷಿಸಲ್ಪಡುತ್ತದೆ. ವಿದ್ಯೆಯು ಯೋಗದಿಂದ ರಕ್ಷಿಸಲ್ಪಡುತ್ತದೆ. ಶುದ್ಧಿಯಿಂದ ರೂಪವು ರಕ್ಷಿಸಲ್ಪಡುತ್ತದೆ. ನಡತೆಯಿಂದ ಕುಲವು ರಕ್ಷಿಸಲ್ಪಡುತ್ತದೆ.

**ಮಾನೇನ ರಕ್ಷ್ಯತೇ ಧಾನ್ಯಮಶ್ವಾನ್ ರಕ್ಷೇದನುಕ್ರಮಾತ್ ।**
**ಅಭೀಕ್ಷ್ಣದರ್ಶನಾದ್ ಗಾವಃ ಸ್ತ್ರಿಯೋ ರಕ್ಷೇತ್ ಕುಶೀಲತಃ ॥೬೧॥**

ಧಾನ್ಯವು ಪರಿಮಾಣದಿಂದ ರಕ್ಷಿಸಲ್ಪಡುತ್ತದೆ. ಅಶ್ವಗಳು ಅವುಗಳನ್ನೇ ನಡೆದಾಡಿಸಿ ಓಡಾಡಿಸುವುದರಿಂದ ರಕ್ಷಿತವಾಗುತ್ತವೆ. ಸತತವಾಗಿ ನೋಡಿಕೊಳ್ಳುವುದರಿಂದ ಗೋವುಗಳು ರಕ್ಷಿತವಾಗುತ್ತವೆ. ಸ್ತ್ರೀಯರನ್ನು ಕೆಟ್ಟ ಮನುಷ್ಯರಿಂದ ರಕ್ಷಿಸಬೇಕು.

**ನ ಕುಲಂ ವೃತ್ತಹೀನಸ್ಯ ಪ್ರಮಾಣಮಿತಿ ಮೇ ಮತಿಃ ।**
**ಅಂತ್ಯೇಷ್ವಪಿ ಹಿ ಜಾತಾನಾಂ ವೃತ್ತಮೇವ ವಿಶಿಷ್ಯತೇ ॥೬೨॥**

ನಡತೆಯಿಂದ ಹೀನನಾದವನಿಗೆ ಕುಲವು ಯಾವ ಮರ್ಯಾದೆಯನ್ನೂ ತಂದುಕೊಡುವುದಿಲ್ಲವೆಂದು ನನ್ನ ಅಭಿಪ್ರಾಯ. ಅಂತ್ಯಜರಾಗಿ ಜನಿಸಿದವರೂ ಸಹ ತಮ್ಮ ನಡತೆಯಿಂದ ಶ್ರೇಷ್ಠರೆನಿಸುತ್ತಾರೆ.

**ಯ ಈರ್ಷ್ಯುಃ ಪರವಿತ್ತೇಷು ರೂಪೇ ವೀರ್ಯೇ ಕುಲೇऽನ್ವಯೇ ।**
**ಸುಖಸೌಭಾಗ್ಯಸತ್ಕಾರೇ ತಸ್ಯ ಚಾಧಿರನಂತಕಃ ॥೬೩॥**

ಯಾವನು ಇನ್ನೊಬ್ಬರ ಸಂಪತ್ತಿನಲ್ಲಿ, ರೂಪದಲ್ಲಿ, ಪರಾಕ್ರಮದಲ್ಲಿ, ಕುಲದಲ್ಲಿ, ಸಂತತಿಯಲ್ಲಿ, ಸುಖ-ಸೌಭಾಗ್ಯ-ಸತ್ಕಾರಗಳಲ್ಲಿ ಅಸೂಯೆ ಪಡುತ್ತಾನೆಯೋ ಅವನ ಮನೋರೋಗವು ಅನಂತವಾದುದು (ಕೊನೆಯಿಲ್ಲದುದು).

**ಅಕಾರ್ಯಕರಣಾದ್ ಭೀತಃ ಕಾರ್ಯಾಣಾಂ ಚ ಏವರ್ಜನಾತ್ ।**
**ಅಕಾಲೇ ಮಂತ್ರಭೇದಾಚ್ಚ ಯೋ ನ ಮಾದ್ಯೇತ್ ಸ ನೋದ್ವಿಜೇತ್ ॥**

ಯಾವನು ಅಕಾರ್ಯವನ್ನು ಮಾಡುವುದರಿಂದಲೂ, ಮಾಡಬೇಕಾದುದನ್ನು ಮಾಡದಿರುವುದರಿಂದಲೂ, ಯೋಗ್ಯಕಾಲಕ್ಕಿಂತ ಮುಂಚೆ ಮಂತ್ರವು ಬಹಿರಂಗವಾಗುವುದರಿಂದಲೂ ಹೆದರಿ ಮತ್ತನಾಗುವುದಿಲ್ಲವೋ ಅವನು ಉದ್ವೇಗವನ್ನು ಹೊಂದುವುದಿಲ್ಲ.

**ವಿದ್ಯಾಮದೋ ಧನಮದಃ ತೃತೀಯೋಽಭಿಜನೋ ಮದಃ ।**
**ಮದಾ ಏತೇಽವಲಿಪ್ತಾನಾಂ ನ ಚೈವ ಸ್ಯುಃ ಸತಾಂ ಮದಾಃ ॥೪೫॥**

ವಿದ್ಯಾಮದ, ಧನಮದ ಮತ್ತು ಮೂರನೆಯದಾದ ಕುಲಮದ - ಈ ಮೂರು ಮದಗಳು ದುರಹಂಕಾರಿಗಳಿಗೆ ಇರುತ್ತವೆ. ಸಜ್ಜನರಿಗೆ ಇರುವುದಿಲ್ಲ.

**ಅಸಂತೋಽಭ್ಯರ್ಚಿತಾಃ ಸದ್ಭಿಃ ಕ್ವಚಿತ್ ಕಾರ್ಯೇ ಕದಾಚನ ।**
**ಮನ್ಯಂತೇ ಸಂತಮಾತ್ಮಾನಮಸಂತಮಪಿ ವಿಶ್ರುತಮ್ ॥೪೬॥**

ಅಸಜ್ಜನರನ್ನು ಸಜ್ಜನರು ಯಾವುದು ಕಾರ್ಯನಿಮಿತ್ತವಾಗಿ ಒಮ್ಮೊಮ್ಮೆ ಅರ್ಚಿಸಿದರೆ ಅವರು ಅಸಜ್ಜನರೆಂದು ಲೋಕವಿಶ್ರುತರಾಗಿದ್ದರೂ ತಮ್ಮನ್ನು ಸಜ್ಜನರೆಂದು ಭಾವಿಸುತ್ತಾರೆ.

**ಗತಿರಾತ್ಮವತಾಂ ಸಂತಃ ಸಂತ ಏವ ಸತಾಂ ಗತಿಃ ।**
**ಅಸತಾಂ ಚ ಗತಿಃ ಸಂತೋ ನ ತ್ವಸಂತಃ ಸತಾಂ ಗತಿಃ ॥೪೭॥**

ಆತ್ಮವಂತರಿಗೆ ಸಜ್ಜನರು ಗತಿ. ಸಜ್ಜನರಿಗೂ ಸಜ್ಜನರೇ ಗತಿ. ಅಸಜ್ಜನರಿಗೂ ಸಜ್ಜನರೇ ಗತಿ. ಅಸಜ್ಜನರು ಸಜ್ಜನರಿಗೆ ಎಂದೂ ಗತಿಯಾಗುವುದಿಲ್ಲ.

**ಸಭಾ ಜಿತಾ ವಸ್ತ್ರವತಾ ಸಮಾಖ್ಯಾ ಗೋಮತಾ ಜಿತಾ ।**
**ಅಧ್ವಾ ಜಿತಾ ಯಾನವತಾ ಸರ್ವಂ ಶೀಲವತಾ ಜಿತಮ್ ॥೪೮॥**

ಸಭೆಯು ಒಳ್ಳೆಯ ವಸ್ತ್ರವನ್ನು ಧರಿಸಿರುವವನಿಂದ ಜಿತವಾಗುತ್ತದೆ. ವಿದ್ವತ್‌ಸಭೆಯು ವಾಗ್ಮಿಯಿಂದ ಜಿತವಾಗುತ್ತದೆ, ಮಾರ್ಗವು ವಾಹನವುಳ್ಳ ಪುರುಷನಿಂದ ಜಿತವಾಗುತ್ತದೆ. ಶೀಲವುಳ್ಳ ಪುರುಷನಿಂದ ಎಲ್ಲವೂ ಜಿತವಾಗುತ್ತದೆ.

**ಶೀಲಂ ಪ್ರಧಾನಂ ಪುರುಷೇ ತದ್ಯಸ್ಯೇಹ ಪ್ರಣಶ್ಯತಿ ।**
**ನ ತಸ್ಯ ಜೀವಿತೇನಾರ್ಥೋ ನ ಧನೇನ ನ ಬಂಧುಭಿಃ ॥೪೯॥**

ಪುರುಷನಲ್ಲಿ ಶೀಲವು ಪ್ರಧಾನ. ಅದು ಯಾವನಿಗೆ ನಾಶವನ್ನು ಹೊಂದುತ್ತದೋ ಅವನ ಜೀವನಕ್ಕೆ ಧನದಿಂದಲಾಗಲೀ, ಬಂಧುಗಳಿಂದಾಗಲೀ ಯಾವ ಪ್ರಯೋಜನವೂ ಇಲ್ಲ.

**ಆಢ್ಯಾನಾಂ ಮಾಂಸಪರಮಂ ಮಧ್ಯಾನಾಂ ಗೋರಸೋತ್ತರಮ್ ।**
**ಲವಣೋತ್ತರಂ ದರಿದ್ರಾಣಾಂ ಭೋಜನಂ ಭರತರ್ಷಭ ॥೫೦॥**

ಶ್ರೀಮಂತರಿಗೆ ಮಾಂಸಭೋಜನವು ಶ್ರೇಷ್ಠವಾದುದು. ಮಧ್ಯಮರಿಗೆ ಕ್ಷೀರ, ದಧಿ ಮೊದಲಾದ ಭೋಜನವು ಶ್ರೇಷ್ಠವಾದುದು. ಭರತರ್ಷಭನೇ, ದರಿದ್ರರಿಗೆ ಲವಣಯುಕ್ತವಾದ ಭೋಜನವೇ ಶ್ರೇಷ್ಠವಾದುದು. (ಸ್ಥೂಲಕಾಯರಾದ, ಮದಾಂಧರಾದ ನಿನ್ನ ಮಕ್ಕಳಿಗೆ ಮಾಂಸಭೋಜನವಿದೆ. ರಾಜ್ಯವನ್ನು ಕಳೆದುಕೊಂಡ ಕಾರಣದಿಂದ ದರಿದ್ರರಾದ ಪಾಂಡವರಿಗೆ ಲವಣಸಮುದ್ರದವರೆಗೆ ಇರುವ ಭೂಮಿಯೇ ಭೋಜನವಾಗುತ್ತದೆ ಎಂದು ಧ್ವನಿ).

**ಸಂಪನ್ನತರಮೇವಾನ್ನಂ ದರಿದ್ರಾ ಭುಂಜತೇ ಜನಾಃ (ಸದಾ) ।**
**ಕ್ಷುತ್ ಸ್ವಾದುತಾಂ ಜನಯತಿ ಸಾ ಚಾಢ್ಯೇಷು ಸುದುರ್ಲಭಾ ॥೫೧॥**

ದರಿದ್ರರಾದ ಜನರು ಯಾವಾಗಲೂ ಒಳ್ಳೆಯ ಊಟವನ್ನೇ ಮಾಡುತ್ತಾರೆ. ಹಸಿವು ರುಚಿಯನ್ನು ಉಂಟುಮಾಡುತ್ತದೆ. ಧನಾಢ್ಯರಿಗೆ ಅದು ಬಹಳ ದುರ್ಲಭವಾದುದು.

**ಪ್ರಾಯೇಣ ಶ್ರೀಮತಾಂ ಲೋಕೇ ಭೋಕ್ತುಂ ಶಕ್ತಿರ್ನ ವಿದ್ಯತೇ ।**
**ದರಿದ್ರಾಣಾಂ ತು ರಾಜೇಂದ್ರ ಕಾಷ್ಠಂ ವಾऽಶ್ಮಾಪಿ ಜೀರ್ಯತೇ ॥೫೨॥**

ರಾಜೇಂದ್ರನೇ, ಶ್ರೀಮಂತರಿಗೆ ಬಹುಶಃ ತಿನ್ನುವ ಶಕ್ತಿಯು ಇರುವುದಿಲ್ಲ. ದರಿದ್ರರಿಗೆ ಮಾತ್ರ ಕಲ್ಲು, ಕಟ್ಟಿಗೆಯೂ ಅರಗಿಹೋಗುತ್ತದೆ.

ಅವೃತ್ತಿರ್ಭಯಮಂತ್ಯಾನಾಂ ಮಧ್ಯಾನಾಂ ಮರಣಾದ್ ಭಯಮ್ ।
ಉತ್ತಮಾನಾಂ ತು ಮರ್ತ್ಯಾನಾಮವಮಾನಾತ್ ಮಹದ್ ಭಯಮ್॥

ಅಧಮರಿಗೆ ಜೀವನೋಪಾಯವನ್ನು ಕಳೆದುಕೊಳ್ಳುತ್ತೇವೆಂಬ ಭಯ. ಮಧ್ಯಮರಿಗೆ ಮರಣದ ಭಯ. ಉತ್ತಮ ಮನುಷ್ಯರಿಗೆ ಅವಮಾನದಿಂದ ದೊಡ್ಡ ಭಯ.

ಐಶ್ವರ್ಯಮತ್ತಃ ಪಾಪಿಷ್ಠೋ ಮಧುಪಾನಮದಾದಪಿ ।
ಐಶ್ವರ್ಯಮದಮತ್ತೋ ಹಿ ನಾವತಿಷ್ಠತಿ ಕುತ್ರಚಿತ್ ॥೫೪॥

ಐಶ್ವರ್ಯದಿಂದ ಉಂಟಾದ ಮದವು ಮದ್ಯಪಾನದಿಂದ ಉಂಟಾದ ಮದಕ್ಕಿಂತಲೂ ಪಾಪಿಷ್ಠವಾದುದು. ಐಶ್ವರ್ಯಮದಮತ್ತನಾದವನು ಎಲ್ಲಿಯೂ ನಿಲ್ಲುವುದಿಲ್ಲ.

ಇಂದ್ರಿಯೈರಿಂದ್ರಿಯಾರ್ಥೇಷು ವರ್ತಮಾನೈರನಿಗ್ರಹೈಃ ।
ತೈರಯಂ ತಾಪ್ಯತೇ ಲೋಕೋ ನಕ್ಷತ್ರಾಣಿ ಗ್ರಹೈರಿವ ॥೫೫॥

ಇಂದ್ರಿಯಗಳು ನಿಗ್ರಹಿತವಾಗದೆ ತಮ್ಮ ವಿಷಯಗಳಲ್ಲಿಯೇ ಇದ್ದರೆ ಗ್ರಹಗಳಿಂದ ನಕ್ಷತ್ರಗಳು ಪೀಡಿತವಾದಂತೆ ಈ ಜನರು ಇಂದ್ರಿಯಗಳಿಂದ ಪೀಡಿತರಾಗುತ್ತಾರೆ.

ಯೋ ಜಿತಃ ಪಂಚವರ್ಗೇಣ ಸಮಾಜೇನಾನುಕರ್ಷಿಣಾ ।
ಆಪದಸ್ತಸ್ಯ ವರ್ಧಂತೇ ಶುಕ್ಲಪಕ್ಷ ಇವೋಡುರಾಟ್ ॥೫೬॥

ಯಾವನು ತನ್ನನ್ನು ಎಳೆಯುವ ಪಂಚೇಂದ್ರಿಯಗಳ ಸಮೂಹದಿಂದ ಜಿತನಾಗುತ್ತಾನೋ ಅವನಿಗೆ ಆಪತ್ತುಗಳು ಶುಕ್ಲಪಕ್ಷದ ಚಂದ್ರನಂತೆ ಅಭಿವೃದ್ಧಿಯನ್ನು ಹೊಂದುತ್ತವೆ.

ಅವಿಜಿತ್ಯ ಯ ಆತ್ಮಾನಮಮಾತ್ಯಾನ್ ವಿಜಿಗೀಷತೇ ।
ಅಜಿತಾತ್ಮಾ ಜಿತಾಮಾತ್ಯಃ ಸೋಽವಶಃ ಪರಿಹೀಯತೇ ॥೫೭॥

ಯಾವನು ತನ್ನನ್ನು ಜಯಿಸಿಕೊಳ್ಳದೆ ಅಮಾತ್ಯರನ್ನು ಜಯಿಸಲು ಬಯಸುತ್ತಾನೋ ಅಂತಹ ಅಜಿತಾತ್ಮನು ಅಮಾತ್ಯರನ್ನು ಜಯಿಸಿ ಅವಶನಾಗಿ ನಾಶವನ್ನು ಹೊಂದುತ್ತಾನೆ.

ಆತ್ಮಾನಮೇವ ಪ್ರಥಮಂ ದ್ವೇಷ್ಯರೂಪೇಣ ಯೋಜಯೇತ್ ।
ತತೋಽಮಾತ್ಯಾನಮಿತ್ರಾಂಶ್ಚ ನಿಯತಂ ಕುರುತೇ ವಶೇ ॥೫೮॥

ಯಾವುದಾದರು ಕೆಟ್ಟದು ಇದ್ದರೆ ಅದನ್ನು ಮೊದಲು ತಾನೇ ಸ್ವೀಕರಿಸಬೇಕು. ಅದರಿಂದ ಅಮಾತ್ಯರನ್ನು ಮತ್ತು ಶತ್ರುಗಳನ್ನು ನಿಶ್ಚಿತವಾಗಿ ವಶಮಾಡಿಕೊಳ್ಳುತ್ತಾನೆ.

ವಶ್ಯೇಂದ್ರಿಯಂ ಜಿತಾತ್ಮಾನಂ ಧೃತದಂಡಂ ವಿಕಾರಿಷು ।
ಪರೀಕ್ಷ್ಯಕಾರಿಣಂ ದಾಂತಮತ್ಯಂತಂ ಶ್ರೀರ್ನಿಷೇವತೇ ॥೫೯॥

ಇಂದ್ರಿಯಜಯವುಳ್ಳವನನ್ನೂ, ಮನೋಜಯವುಳ್ಳವನನ್ನೂ, ಅಪರಾಧವನ್ನು ಮಾಡುವುದರಲ್ಲಿ ದಂಡವನ್ನು ವಿಧಿಸುವವನನ್ನೂ, ಯೋಚನೆ ಮಾಡಿ ಕಾರ್ಯವನ್ನು ಮಾಡುವವನನ್ನೂ ಮತ್ತು ಇಂದ್ರಿಯನಿಗ್ರಹವುಳ್ಳವನನ್ನೂ ಸಂಪತ್ತು ಬಹಳವಾಗಿ ಸೇವಿಸುತ್ತದೆ.

ರಥಃ ಶರೀರಂ ಪುರುಷಸ್ಯ ರಾಜನ್ .
ಆತ್ಮಾ ನಿಯಂತೇಂದ್ರಿಯಾಣ್ಯಸ್ಯ ಚಾಶ್ವಾಃ ।
ತೈರಪ್ರಮತ್ತಃ ಕುಶಲಃ ಸದಶ್ವೈಃ
ದಾಂತೈಃ ಸುಖಂ ಯಾತಿ ಸದೈವ ಧೀರಃ ॥೬೦॥

ಎಲೈ ರಾಜನೇ, ಮನುಷ್ಯನ ಶರೀರವೇ ರಥ. ಜೀವನೇ ರಥಿಕ. ಇಂದ್ರಿಯಗಳು ಅಶ್ವಗಳು. ಜಾಗರೂಕತೆಯಿಂದ ಇರುವ ಕುಶಲನೂ, ಧೀರನೂ ಆದ ಪುರುಷನು ಚೆನ್ನಾಗಿ ಪಳಗಿದ ಒಳ್ಳೆಯ ಅಶ್ವಗಳಿಂದ ಯಾವಾಗಲೂ ಸುಖವಾಗಿಯೇ ಸಂಚಾರ ಮಾಡುತ್ತಾನೆ.

ಏತಾನ್ಯನಿಗೃಹೀತಾನಿ ವ್ಯಾಪಾದಯಿತುಮಪ್ಯಲಮ್ ।
ಅವಿಧೇಯಾಃ ಇವಾದಾಂತಾಃ ಸರಥಂ ಸಾರಥಿಂ ಹಯಾಃ ॥೬೧॥

ಈ ಇಂದ್ರಿಯಗಳನ್ನು ನಿಗ್ರಹಿಸದಿದ್ದರೆ ಅವುಗಳು ಅವಿಧೇಯವಾಗಿ ಪಳಗಿಸದೆ ಇದ್ದ ಕುದುರೆಗಳಂತೆ ರಥವನ್ನೂ ಮತ್ತು ಸಾರಥಿಯನ್ನೂ ಕೊಲ್ಲಲೂ ಸಮರ್ಥವಾಗುತ್ತವೆ.

ಅನರ್ಥಮರ್ಥತಃ ಪಶ್ಯನ್ನರ್ಥಂ ಚೈವಾಪ್ಯನರ್ಥತಃ ।
ಇಂದ್ರಿಯೈರಜಿತೈರ್ಬಾಲಃ ಸುದುಃಖಂ ಮನ್ಯತೇ ಸುಖಮ್ ॥೬೨॥

ಇಂದ್ರಿಯಗಳನ್ನು ಜಯಿಸದಿದ್ದ ಬಾಲಕನು ಅನರ್ಥವನ್ನು ಅರ್ಥವೆಂದೂ, ಅರ್ಥವನ್ನು ಅನರ್ಥವೆಂದೂ ತಿಳಿದು, ದುಃಖಸಾಧನವನ್ನು ಸುಖಸಾಧನವೆಂದು ತಿಳಿಯುತ್ತಾನೆ.

ಧರ್ಮಾರ್ಥೌ ಯಃ ಪರಿತ್ಯಜ್ಯ ಸ್ಯಾದಿಂದ್ರಿಯವಶಾನುಗಃ ।
ಶ್ರೀಪ್ರಾಣಧನಧಾನ್ಯೇಭ್ಯಃ ಕ್ಷಿಪ್ರಂ ಸ ಪರಿಹೀಯತೇ ॥೬೩॥

ಯಾವನು ಧರ್ಮಾರ್ಥಗಳನ್ನು ತ್ಯಜಿಸಿ ಇಂದ್ರಿಯಗಳಿಗೆ ವಶನಾಗಿ ಅವುಗಳನ್ನು ಅನುಸರಿಸುತ್ತಾನೆಯೋ ಅವನು ಸಂಪತ್ತು, ಪ್ರಾಣ, ಧನ-ಧಾನ್ಯಗಳಿಂದ ಶೀಘ್ರವಾಗಿ ಹೀನನಾಗುತ್ತಾನೆ.

ಅರ್ಥಾನಾಮೀಶ್ವರೋ ಯಃ ಸ್ಯಾದಿಂದ್ರಿಯಾಣಾಮನೀಶ್ವರಃ ।
ಇಂದ್ರಿಯಾಣಾಮನೈಶ್ವರ್ಯಾದೈಶ್ವರ್ಯಾದ್ ಭ್ರಶ್ಯತೇ ಹಿ ಸಃ ॥೬೪॥

ಯಾವನು ಇಂದ್ರಿಯಗಳಿಗೆ ಪ್ರಭುವಾಗದೆ ತನ್ನ ಸಂಪತ್ತಿಗೆ ಮಾತ್ರ ಪ್ರಭುವಾಗುತ್ತಾನೆಯೋ ಅಂತಹವನು ಇಂದ್ರಿಯಗಳ ಮೇಲಿನ ಪ್ರಭುತ್ವವಿಲ್ಲದ ಕಾರಣದಿಂದಾಗಿ ಐಶ್ವರ್ಯವನ್ನು ಕಳೆದುಕೊಳ್ಳುತ್ತಾನೆ.

ಆತ್ಮನಾऽऽತ್ಮಾನಮನ್ವಿಚ್ಛೇನ್ಮನೋಬುದ್ಧೀಂದ್ರಿಯೈರ್ಯತೈಃ ।
ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ಗತಿರಾತ್ಮನಃ ॥೬೫॥

ಪರಮಾತ್ಮನನ್ನು ಜಿತವಾದ ಮನಸ್ಸು, ಬುದ್ಧಿ ಮತ್ತು ಇಂದ್ರಿಯಗಳಿಂದ ತಾನೇ ಹುಡುಕಬೇಕು. ಮನುಷ್ಯನಿಗೆ ಮನಸ್ಸೇ ಬಂಧು ಮತ್ತು ಮನಸ್ಸೇ ಗತಿ.

ಬಂಧುರಾತ್ಮಾऽऽತ್ಮನಸ್ತಸ್ಯ ಯೇನೈವಾತ್ಮಾऽऽತ್ಮನಾ ಜಿತಃ ।
ಸ ಏವ ನಿಯತೋ ಬಂಧುಃ ಸ ಏವಾನಿಯತೋ ರಿಪುಃ ॥೬೬॥

ಯಾವ ಪುರುಷನು ಪ್ರಯತ್ನದಿಂದ ತನ್ನ ಮನಸ್ಸನ್ನು ಗೆಲ್ಲುತ್ತಾನೆಯೋ ಅವನಿಗೆ ನಿಗ್ರಹಿಸಿದರೆ ಮನಸ್ಸೇ ಬಂಧು, ನಿಗ್ರಹಿಸದಿದ್ದರೆ ಮನಸ್ಸೇ ಶತ್ರು.

ಕ್ಷುದ್ರಾಕ್ಷೇಣೇವ ಜಾಲೇನ ಝಷಾವಪಿಹಿತಾವುಭೌ ।
ಕಾಮಶ್ಚ ರಾಜನ್ ಕ್ರೋಧಶ್ಚ ತೌ ಪ್ರಜ್ಞಾನಂ ವಿಲುಂಪತಃ ॥೬೭॥

ಎಲೈ ರಾಜನೇ, ಸಣ್ಣ ರಂಧ್ರಗಳಿರುವ ಬಲೆಯಿಂದ ಎರಡು ಮೀನುಗಳು ಮುಚ್ಚಲ್ಪಟ್ಟಿವೆ. ಆ ಕಾಮ ಮತ್ತು ಕ್ರೋಧಗಳು ಪುರುಷನ ಜ್ಞಾನವನ್ನು ನಾಶಪಡಿಸುತ್ತವೆ (ಸಣ್ಣರಂಧ್ರವಿರುವ ಬಲೆ ಎಂದರೆ ಕ್ಷುದ್ರವಾದ ಮನಸ್ಸು. ಕಾಮ-ಕ್ರೋಧಗಳು ಅದನ್ನು ಭೇದಿಸಿಕೊಂಡು ಹೋಗಿ ಮನುಷ್ಯನ ಜ್ಞಾನವನ್ನು ಹಾಳುಮಾಡುತ್ತವೆ ಎಂದು ಅಭಿಪ್ರಾಯ).

ಸಮವೇಕ್ಷ್ಯೇಹ ಧರ್ಮಾರ್ಥೌ ಸಂಭಾರಾನ್ ಯೋಽಧಿಗಚ್ಛತಿ ।
ಸ ವೈ ಸಂಭೃತಸಂಭಾರಃ ಸತತಂ ಸುಖಮೇಧತೇ ॥೬೮॥

ಧರ್ಮಾರ್ಥಗಳನ್ನು ಚೆನ್ನಾಗಿ ಗಮನಿಸಿ ಯಾವನು ಪದಾರ್ಥಗಳನ್ನು ಸಂಪಾದಿಸುತ್ತಾನೆಯೋ ಅಂತಹವನು ಅಂತಹ ಪದಾರ್ಥಗಳಿಂದ ಸತತವಾಗಿ ಸುಖವನ್ನು ಪಡುತ್ತಾನೆ.

ಯಃ ಪಂಚಾಭ್ಯಂತರಾನ್ ಶತ್ರೂನವಿಜಿತ್ಯ ಮತಿಕ್ಷಯಾತ್ ।
ಜಿಗೀಷತೇ ರಿಪೂನನ್ಯಾನಾಪದೋಽಭಿಭವಂತಿ ತಮ್ ॥೬೯॥

ಯಾವನು ಬುದ್ಧಿಶೂನ್ಯನಾಗಿ ತನ್ನ ಒಳಗಿರುವ ಐದು ಶತ್ರುಗಳನ್ನು ಜಯಿಸದೆ ಹೊರಗಿನ ಶತ್ರುಗಳನ್ನು ಜಯಿಸಲು ಉದ್ಯುಕ್ತನಾಗುತ್ತಾನೆಯೋ ಅವನನ್ನು ಆಪತ್ತುಗಳು ಪರಾಭವಗೊಳಿಸುತ್ತವೆ.

ದೃಶ್ಯಂತೇ ಹಿ ದುರಾತ್ಮಾನೋ ವಧ್ಯಮಾನಾಃ ಸ್ವಕರ್ಮಭಿಃ ।
ಇಂದ್ರಿಯಾಣಾಮನೀಶತ್ವಾದ್ ರಾಜಾನೋ ರಾಜ್ಯವಿಚ್ಯುತಾಃ ॥೭೦॥

ದುಷ್ಟರು ತಮ್ಮ ದುಷ್ಕರ್ಮಗಳಿಂದ ವಧೆಯನ್ನು ಹೊಂದುವುದು ಕಂಡು ಬರುತ್ತದೆ. ಇಂದ್ರಿಯ ಜಯವಿಲ್ಲದ ಕಾರಣ ರಾಜರು ರಾಜ್ಯವನ್ನು ಕಳೆದುಕೊಳ್ಳುತ್ತಾರೆ.

ಅಸಂತ್ಯಾಗಾತ್ ಪಾಪಕೃತಾಮಪಾಪಾನ್
ತುಲ್ಯೋ ದಂಡಃ ಸ್ಪೃಶತೇ ಮಿಶ್ರಭಾವಾತ್ ।

ಶುಷ್ಕೇಣಾರ್ದ್ರಂ ದಹ್ಯತೇ ಮಿಶ್ರಭಾವಾತ್
ತಸ್ಮಾತ್ ಪಾಪೈಃ ಸಹ ಸಂಧಿಂ ನ ಕುರ್ಯಾತ್ ॥೭೧॥

ಪಾಪಕರ್ಮವನ್ನು ಮಾಡುವವರನ್ನು ಪರಿತ್ಯಾಗ ಮಾಡದೆ ಅವರ ಜೊತೆಯಲ್ಲಿ ಸೇರಿಕೊಂಡರೆ ಅವರಿಗೆ ಸಲ್ಲುವ ದಂಡವು ಪಾಪವನ್ನು ಮಾಡದಿರುವವರಿಗೂ ಉಂಟಾಗುತ್ತದೆ. ಒಣಕಟ್ಟಿಗೆಯ ಜೊತೆಯಲ್ಲಿ ಸೇರಿದರೆ ಮಿಶ್ರಣದಿಂದಾಗಿ ಹಸಿಯಾದ ಕಟ್ಟಿಗೆಯೂ ಉರಿಯುತ್ತದೆ. ಆದ್ದರಿಂದ ಪಾಪಿಗಳ ಜೊತೆಯಲ್ಲಿ ಸೇರಬಾರದು (ಸಂಧಿಯನ್ನು ಮಾಡಿಕೊಳ್ಳಬಾರದು).

ನಿಜಾನುತ್ಪತತಃ ಶತ್ರೂನ್ ಪಂಚ ಪಂಚಪ್ರಯೋಜನಾತ್ ।
ಯೋ ಮೋಹಾನ್ನ ನಿಗೃಹ್ಣಾತಿ ತಮಾಪದ್ ಗ್ರಸತೇ ನರಮ್ ॥೭೨॥

ರೂಪ-ರಸಾದಿ ಪಂಚವಿಷಯಾನುಭವರೂಪವಾದ ಪ್ರಯೋಜನವುಳ್ಳ ತನ್ನೊಳಗೇ ಇರುವ ತನ್ನವರೇ ಆದ ಕ್ಷಣಕ್ಷಣಕ್ಕೂ ಮೇಲಕ್ಕೆ ಹಾರುವ ಐದು ಇಂದ್ರಿಯಗಳನ್ನು ಮೋಹದಿಂದ ಯಾವನು ನಿಗ್ರಹಿಸುವುದಿಲ್ಲವೋ ಅಂತಹ ಮನುಷ್ಯನನ್ನು ಆಪತ್ತು ನುಂಗುತ್ತದೆ.

ಅನಸೂಯಾSSರ್ಜವಂ ಶೌಚಂ ಸಂತೋಷಃ ಪ್ರಿಯವಾದಿತಾ ।
ದಮಃ ಸತ್ಯಮನಾಯಾಸೋ ನ ಭವಂತಿ ದುರಾತ್ಮನಾಮ್ ॥೭೩॥

ದುರಾತ್ಮರಿಗೆ ಅಸೂಯಾರಾಹಿತ್ಯ, ಆರ್ಜವ, ಶೌಚ, ಸಂತೋಷ, ಪ್ರಿಯವಚನಗಳು, ದಮ, ಸತ್ಯ ಮತ್ತು ಅನಾಯಾಸ ಇವುಗಳು ಇರುವುದಿಲ್ಲ.

ಆತ್ಮಜ್ಞಾನಮನಾಯಾಸಃ ತಿತಿಕ್ಷಾ ಧರ್ಮನಿತ್ಯತಾ ।
ವಾಕ್ ಚೈವ ಗುಪ್ತಾ ದಾನಂ ಚ ನೈತಾನ್ಯನ್ಯೇಷು ಭಾರತ ॥೭೪॥

ಎಲೈ ಭಾರತನೇ, ಆತ್ಮಜ್ಞಾನ, ಅನಾಯಾಸ, ದ್ವಂದ್ವ ಸಹಿಷ್ಣುತೆ, ನಿತ್ಯಧರ್ಮಾಚರಣೆ, ಸಂರಕ್ಷಿತವಾದ ವಚನ, ದಾನ ಇವುಗಳು ಸಜ್ಜನರನ್ನು ಬಿಟ್ಟು ಬೇರೆಯವರಲ್ಲಿ ಇರುವುದಿಲ್ಲ.

ಆಕ್ರೋಶಪರಿವಾದಾಭ್ಯಾಂ ವಿಹಿಂಸಂತ್ಯಬುಧಾ ಬುಧಾನ್ ।
ವಕ್ತಾ ಪಾಪಮುಪಾದತ್ತೇ ಕ್ಷಮಮಾಣೋ ವಿಮುಚ್ಯತೇ ॥೭೫॥

ಅವಿವೇಕಿಗಳಾದವರು ಬುಧರನ್ನು, ಆಕ್ರೋಶ ಮತ್ತು ಪರಿವಾದಗಳಿಂದ (ಕಿರುಚಾಟ ಮತ್ತು ನಿಂದನೆಗಳಿಂದ) ಹಿಂಸಿಸುತ್ತಾರೆ. ಹೀಗೆ ಮಾತನಾಡುವ ದುರ್ಜನನು ಪಾಪವನ್ನು ಹೊಂದುತ್ತಾನೆ. ಸುಮ್ಮನಿದ್ದು ಅವನನ್ನು ಕ್ಷಮಿಸುವವನು ನಿರ್ಮುಕ್ತನಾಗುತ್ತಾನೆ.

**ಹಿಂಸಾ ಬಲಮಸಾಧೂನಾಂ ರಾಜ್ಞಾಂ ದಂಡವಿಧಿರ್ಬಲಮ್ ।**
**ಶುಶ್ರೂಷಾ ತು ಬಲಂ ಸ್ತ್ರೀಣಾಂ ಕ್ಷಮಾ ಗುಣವತಾಂ ಬಲಮ್ ॥೭೬॥**

ಅಸಜ್ಜನರಿಗೆ ಹಿಂಸೆಯೇ ಬಲ. ರಾಜರಿಗೆ ಶಿಕ್ಷೆಯನ್ನು ವಿಧಿಸುವುದೇ ಬಲ. ಸ್ತ್ರೀಯರಿಗೆ ಪತ್ಯಾದಿ ಶುಶ್ರೂಷೆಯೇ ಬಲ. ಗುಣವಂತರಿಗೆ ಕ್ಷಮೆಯೇ ಬಲ.

**ವಾಕ್ಸಂಯಮೋ ಹಿ ನೃಪತೇಃ ಸುದುಷ್ಕರತಮೋ ಮತಃ ।**
**ಅರ್ಥವಚ್ಚ ವಿಚಿತ್ರಂ ಚ ನ ಶಕ್ಯಂ ಬಹು ಭಾಷಿತುಮ್ ॥೭೭॥**

ರಾಜನಾದವನಿಗೆ ಮಾತಿನ ನಿಯಂತ್ರಣವು ಬಹಳ ಕಷ್ಟಸಾಧ್ಯವಾದುದೆಂದು ಹೇಳಲ್ಪಡುತ್ತದೆ. ಪ್ರಯೋಜನವುಳ್ಳ ಮತ್ತು ವಿಚಿತ್ರವಾದ ಬಹಳ ಮಾತುಗಳನ್ನು ಆಡುವುದು ಸಾಧ್ಯವಿಲ್ಲ.

**ಅಭ್ಯಾವಹತಿ ಕಲ್ಯಾಣಂ ವಿವಿಧಾ ವಾಕ್ ಸುಭಾಷಿತಾ ।**
**ಸೈವ ದುರ್ಭಾಷಿತಾ ರಾಜನ್ ಅನರ್ಥಾಯೋಪಪದ್ಯತೇ ॥೭೮॥**

ಎಲೈ ರಾಜನೇ, ಚೆನ್ನಾಗಿ ಆಡಿದ ವಿವಿಧವಾದ ಮಾತುಗಳು ಕಲ್ಯಾಣವನ್ನು ತಂದುಕೊಡುತ್ತವೆ. ಅದೇ ಮಾತುಗಳನ್ನೇ ಕೆಟ್ಟದಾಗಿ ಆಡಿದರೆ ಅನರ್ಥ ಉಂಟಾಗುತ್ತದೆ.

**ರೋಹತೇ ಸಾಯಕೈರ್ವಿದ್ಧಂ ವನಂ ಪರಶುನಾ ಹತಮ್ ।**
**ವಾಚಾ ದುರುಕ್ತಂ ಬೀಭತ್ಸಂ ನ ಸಂರೋಹತಿ ವಾಕ್‌ಕ್ಷತಮ್ ॥೭೯॥**

ಬಾಣಗಳಿಂದ ವಿದ್ಧವಾದ (ಹೊಡೆತ ತಿಂದ) ಮತ್ತು ಕೊಡಲಿಯಿಂದ ಕಡಿಯಲ್ಪಟ್ಟ ವನವು ಪುನಃ ಬೆಳೆಯುತ್ತದೆ. ಆದರೆ ಕೆಟ್ಟ ಮಾತನ್ನು ಆಡಿ ಉಂಟಾದ ಭಯಂಕರವಾದ ಗಾಯವು ಮಾತ್ರ ಪುನಃ ಬೆಳೆಯಲು ಅವಕಾಶವನ್ನು ಕೊಡುವುದಿಲ್ಲ.

**ಕರ್ಣಿನಾಲೀಕನಾರಾಚಾನ್ ನಿರ್ಹರಂತಿ ಶರೀರತಃ ।**
**ವಾಕ್ಶಲ್ಯಸ್ತು ನ ನಿರ್ಹರ್ತುಂ ಶಕ್ಯೋ ಹೃದಿಶಯೋ ಹಿ ಸಃ ॥೮೦॥**

ಕರ್ಣ, ನಾಲೀಕ, ನಾರಾಚ ಮೊದಲಾದ ಬಾಣ ವಿಶೇಷಗಳನ್ನು ದೇಹದಿಂದ ಎಳೆದು ತೆಗೆಯುತ್ತಾರೆ. ಆದರೆ ವಾಗ್ಬಾಣವನ್ನು ಮಾತ್ರ ತೆಗೆಯಲು ಸಾಧ್ಯವಿಲ್ಲ. ಅದು ಹೃದಯದಲ್ಲಿಯೇ ಮಲಗಿರುತ್ತದೆ.

ವಾಕ್ಸಾಯಕಾ ವದನಾನ್ನಿಷ್ಪತಂತಿ
ಯೈರಾಹತಃ ಶೋಚತಿ ರಾತ್ರ್ಯಹಾನಿ ।
ಪರಸ್ಯ ವಾ ಮರ್ಮಸು ಯೇ ಪತಂತಿ
ತಾನ್ ಪಂಡಿತೋ ನಾವಸೃಜೇತ್ ಪರೇಷು ॥೮೧॥

ವಾಗ್ಬಾಣಗಳು ದುಷ್ಟರ ಮುಖದಿಂದ ಹೊರಹೊಮ್ಮುತ್ತವೆ. ಅವುಗಳಿಂದ ಹೊಡೆಯಲ್ಪಟ್ಟವನು ಹಗಲೂ ರಾತ್ರಿಯೂ ಶೋಕ ಪಡುತ್ತಾನೆ. ಇನ್ನೊಬ್ಬರ ಮರ್ಮಸ್ಥಾನಗಳಲ್ಲಿ ಬೀಳುವಂತಹ ಅಂತಹ ವಾಗ್ಬಾಣಗಳನ್ನು ಪಂಡಿತನಾದವನು ಇನ್ನೊಬ್ಬರಲ್ಲಿ ಪ್ರಯೋಗಿಸಬಾರದು.

ಯಸ್ಯೈ ದೇವಾಃ ಪ್ರಯಚ್ಛಂತಿ ಪುರುಷಾಯ ಪರಾಭವಮ್ ।
ಬುದ್ಧಿಂ ತಸ್ಯಾಪಕರ್ಷಂತಿ ಸೋಽವಾಚೀನಾನಿ ಪಶ್ಯತಿ ॥೮೨॥

ದೇವತೆಗಳು ಯಾವ ಪುರುಷನಿಗೆ ಪರಾಭವವನ್ನು ಕೊಡಲು ಬಯಸುತ್ತಾರೆಯೋ ಅವನ ಬುದ್ಧಿಯನ್ನು ಮೊದಲು ಅಪಹರಿಸುತ್ತಾರೆ. ಅವನು ನೀಚವಾದ ವಸ್ತುಗಳನ್ನು ನೋಡುವವನಾಗುತ್ತಾನೆ.

ಬುದ್ಧೌ ಕಲುಷಭೂತಾಯಾಂ ವಿನಾಶೇ ಪ್ರತ್ಯುಪಸ್ಥಿತೇ ।
ಅನಯೋ ನಯಸಂಕಾಶೋ ಬುದ್ಧಿಮಾಕ್ರಮ್ಯ ತಿಷ್ಠತಿ ॥೮೩॥

ವಿನಾಶವು ಸಮೀಪವಾಗಿ ಬುದ್ಧಿಯು ಕಲುಷಿತವಾದಾಗ ಅನೀತಿಯು ನೀತಿಯ ರೂಪವನ್ನು ಧರಿಸಿ ಬುದ್ಧಿಯನ್ನು ಆಕ್ರಮಿಸಿಕೊಂಡು ನಿಲ್ಲುತ್ತವೆ.

ನ ದೇವಾ ಯಷ್ಟಿಮಾದಾಯ ರಕ್ಷಂತಿ ಪಶುಪಾಲವತ್ ।
ಯಂ ಹಿ ರಕ್ಷಿತುಮಿಚ್ಛಂತಿ ಬುದ್ಧ್ಯಾ ಸಂಯೋಜಯಂತಿ ತಮ್ ॥೮೪॥

ದೇವತೆಗಳು ಪಶುಪಾಲಕರಂತೆ ಕೈಯಲ್ಲಿ ಕೋಲನ್ನು ಹಿಡಿದು ರಕ್ಷಿಸುವುದಿಲ್ಲ. ಯಾವನನ್ನು ರಕ್ಷಿಸಲು ಬಯಸುತ್ತಾರೆಯೋ ಅವನಿಗೆ ಸದ್ಬುದ್ಧಿಯನ್ನು ನೀಡುತ್ತಾರೆ.

ಸೇಯಂ ಬುದ್ಧಿಃ ಪರೀತಾ ತೇ ಪುತ್ರಾಣಾಂ ಭರತರ್ಷಭ ।
ಪಾಂಡವಾನಾಂ ವಿರೋಧೇನ ನ ಚೈತಾನವಬುದ್ಧ್ಯಸೇ ॥೮೫॥

ಎಲೈ ಭರತರ್ಷಭನೇ, ಅಂತಹ ನಿನ್ನ ಮಕ್ಕಳ ಬುದ್ಧಿಯು ಪಾಂಡವರಿಗೆ ವಿರೋಧ ಮಾಡುವ ಕಾರಣದಿಂದ ಕಲುಷಿತವಾಗಿದೆ. ನೀನು ಅವರನ್ನು ತಿಳಿಯುತ್ತಿಲ್ಲ.

ರಾಜಾ ಲಕ್ಷಣಸಂಪನ್ನಃ ತ್ರೈಲೋಕಸ್ಯಾಪಿ ಯೋ ಭವೇತ್ ।
ಶಿಷ್ಯತೇ ಶಾಸಿತಾ ಸೋಽಸ್ತು ಧೃತರಾಷ್ಟ್ರ ಯುಧಿಷ್ಠಿರಃ ॥೮೬॥

ರಾಜಲಕ್ಷಣಸಂಪನ್ನನಾದ ಯಾವ ಯುಧಿಷ್ಠಿರನು ಮೂರುಲೋಕಕ್ಕೂ ರಾಜನಾಗಲು ಅರ್ಹನಾಗಿದ್ದಾನೆಯೋ, ಎಲೈ ಧೃತರಾಷ್ಟ್ರನೇ, ಅಂತಹ ನಿನ್ನ ಶಿಷ್ಯನಾದ ಯುಧಿಷ್ಠಿರನು ರಾಜನಾಗಲಿ.

ಅತೀವ ಸರ್ವಾನ್ ಪುತ್ರಾಂಸ್ತೇ ಭಾಗಧೇಯಪುರಸ್ಕೃತಃ ।
ತೇಜಸಾ ಪ್ರಜ್ಞಯಾ ಚೈವ ಯುಕ್ತೋ ಧರ್ಮಾರ್ಥತತ್ತ್ವವಿತ್ ॥೮೭॥

ತೇಜಸ್ಸಿನಿಂದಲೂ, ಪ್ರಜ್ಞೆಯಿಂದಲೂ ಕೂಡಿದ ಧರ್ಮಾರ್ಥತತ್ತ್ವವನ್ನು ತಿಳಿದು ರಾಜ್ಯಾಂಶಕ್ಕೆ ಭಾಗಿಯಾಗಿರುವ ಅವನು ನಿನ್ನ ಎಲ್ಲಾ ಪುತ್ರರಿಗಿಂತಲೂ ಶ್ರೇಷ್ಠನಾದವನು.

ಅನುಕ್ರೋಶಾದಾನೃಶಂಸ್ಯಾದ್ ಯೋಽಸೌ ಧರ್ಮಭೃತಾಂ ವರಃ ।
ಗೌರವಾತ್ ತವ ರಾಜೇಂದ್ರ ಬಹೂನ್ ಕ್ಲೇಶಾಂಸ್ತಿತಿಕ್ಷತಿ ॥೮೮॥

ಧರ್ಮಿಷ್ಠರಲ್ಲಿ ಶ್ರೇಷ್ಠನಾದ ಅವನು ದಯೆಯಿಂದಲೂ, ಮಾರ್ದವದಿಂದಲೂ ಮತ್ತು ನಿನ್ನ ಮೇಲಿನ ಗೌರವದಿಂದಲೂ ಎಲೈ ರಾಜೇಂದ್ರನೇ, ಅನೇಕ ಕ್ಲೇಶಗಳನ್ನು ಸಹಿಸುತ್ತಿದ್ದಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ತ್ರಯಸ್ತ್ರಿಂಶೋಽಧ್ಯಾಯಃ ॥

॥ ಪ್ರಜಾಗರಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಮೂವತ್ಮೂರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

# ಮೂವತ್ನಾಲ್ಕನೆಯ ಅಧ್ಯಾಯ

ವಿದುರನಿಂದ ಧೃತರಾಷ್ಟ್ರನಿಗೆ ಸುಧನ್ವ ವಿರೋಚನಸಂವಾದಕಥನ.

**ಧೃತರಾಷ್ಟ್ರಃ**

**ಬ್ರೂಹಿ ಭೂಯೋ ಮಹಾಬುದ್ಧೇ ಧರ್ಮಾರ್ಥಸಹಿತಂ ವಚಃ ।**
**ಶೃಣ್ವತೋ ನಾಸ್ತಿ ಮೇ ತೃಪ್ತಿರ್ವಿಚಿತ್ರಾಣೀಹ ಭಾಷಸೇ ॥೧॥**

ಧೃತರಾಷ್ಟ್ರ– ಮಹಾಬುದ್ಧಿಯುಳ್ಳವನೇ, ಧರ್ಮಾರ್ಥಸಹಿತವಾದ ಮಾತನ್ನು ಪುನಃ ಹೇಳು. ನಿನ್ನ ಮಾತನ್ನು ಕೇಳಿ ನನಗೆ ತೃಪ್ತಿಯೇ ಇಲ್ಲ. ನೀನು ವಿಚಿತ್ರವಾಗಿ ಮಾತನಾಡುತ್ತೀಯೆ.

**ವಿದುರಃ**

**ಸರ್ವತೀರ್ಥೇಷು ವಾ ಸ್ನಾನಂ ಸರ್ವಭೂತೇಷು ಚಾರ್ಜವಮ್ ।**
**ಉಭೇ ತ್ವೇತೇ ಸಮೇ ಸ್ಯಾತಾಮಾರ್ಜವಂ ವಾ ವಿಶಿಷ್ಯತೇ ॥೨॥**

ವಿದುರ– ಎಲ್ಲ ತೀರ್ಥಗಳಲ್ಲಿ ಸ್ನಾನ ಮತ್ತು ಎಲ್ಲರ ವಿಷಯದಲ್ಲಿ ಆರ್ಜವ, ಇವೆರಡೂ ಸಮವಾಗುತ್ತವೆ ಅಥವಾ ಆರ್ಜವವೇ ಶ್ರೇಷ್ಠವಾಗುತ್ತದೆ.

**ಆರ್ಜವಂ ಪ್ರತಿಪದ್ಯಸ್ವ ಪುತ್ರೇಷು ಸ್ವೇಷು ತೇಷು ಚ ।**
**ಇಹ ಕೀರ್ತಿಂ ಪರಾಂ ಪ್ರಾಪ್ಯ ಪ್ರೇತ್ಯ ಸ್ವರ್ಗಮವಾಪ್ನುಹಿ ॥೩॥**

ನೀನು ನಿನ್ನ ಮಕ್ಕಳಲ್ಲಿಯೂ ಮತ್ತು ಪಾಂಡವರಲ್ಲಿಯೂ ಆರ್ಜವವನ್ನು ಹೊಂದುವವನಾಗು. ಇಲ್ಲಿ ಉತ್ತಮ ಕೀರ್ತಿಯನ್ನು ಪಡೆದು ಮರಣಾಂತರದಲ್ಲಿ ಸ್ವರ್ಗವನ್ನು ಹೊಂದು.

**ಯಾವತ್ ಕೀರ್ತಿರ್ಮನುಷ್ಯಸ್ಯ ಪುಣ್ಯಾ ಲೋಕೇ ಪ್ರಗೀಯತೇ ।**
**ತಾವತ್ ಸ ಪುರುಷವ್ಯಾಘ್ರ ಸ್ವರ್ಗಲೋಕೇ ಮಹೀಯತೇ ॥೪॥**

ಪುರುಷವ್ಯಾಘ್ರನೇ, ಎಲ್ಲಿಯವರೆಗೆ ಈ ಲೋಕದಲ್ಲಿ ಅವನ ಒಳ್ಳೆಯ ಕೀರ್ತಿ ಇರುತ್ತದೆಯೋ ಅಲ್ಲಿಯವರೆಗೆ ಮನುಷ್ಯನು ಸ್ವರ್ಗದಲ್ಲಿ ಸುಖವಾಗಿರುತ್ತಾನೆ.

ಅತ್ರಾಪ್ಯುದಾಹರಂತೀಮಮ್ ಇತಿಹಾಸಂ ಪುರಾತನಮ್ ।
ವಿರೋಚನಸ್ಯ ಸಂವಾದಂ ಕೇಶಿನ್ಯರ್ಥೇ ಸುಧನ್ವನಾ ॥೫॥

ಈ ವಿಷಯದಲ್ಲಿ ಕೇಶಿನಿಯ ಸಲುವಾಗಿ ವಿರೋಚನ ಮತ್ತು ಸುಧನ್ವರಿಗೆ ನಡೆದ ಸಂವಾದದ ಒಂದು ಪುರಾತನ ಇತಿಹಾಸವನ್ನು ಹೇಳುತ್ತಾರೆ.

ಸ್ವಯಂವರೇ ಸ್ಥಿತಾ ಕನ್ಯಾ ಕೇಶಿನೀ ನಾಮ ನಾಮತಃ ।
ರೂಪೇಣಾಪ್ರತಿಮಾ ರಾಜನ್ ವಿಶಿಷ್ಟಪತಿಕಾಮ್ಯಯಾ ॥೬॥

ಎಲೈ ರಾಜನೇ, ಅಸದೃಶವಾದ ರೂಪವುಳ್ಳ ಕೇಶಿನೀ ಎಂಬ ಕನ್ಯೆಯು ಶ್ರೇಷ್ಠನಾದ ಪತಿಯನ್ನು ಪಡೆಯುವ ಸಲುವಾಗಿ ಸ್ವಯಂವರದಲ್ಲಿ ಉಪಸ್ಥಿತಳಾಗಿದ್ದಳು.

ವಿರೋಚನೋऽಥ ದೈತೇಯಃ ತದಾ ತತ್ರಾಜಗಾಮ ಹ ।
ಪ್ರಾಪ್ತುಮಿಚ್ಛನ್ ತತಸ್ತತ್ರ ದೈತ್ಯೇಂದ್ರಂ ಪ್ರಾಹ ಕೇಶಿನೀ ॥೭॥

ದಿತಿಯ ವಂಶದಲ್ಲಿ ಜನಿಸಿದ ವಿರೋಚನನು ಅವಳನ್ನು ಪಡೆಯಲು ಇಚ್ಛಿಸಿ ಅಲ್ಲಿಗೆ ಬಂದನು. ಆಗ ಆ ದೈತ್ಯೇಂದ್ರನನ್ನು ಕುರಿತು ಕೇಶಿನಿಯು ಹೇಳಿದಳು;

ಕಿಂ ಬ್ರಾಹ್ಮಣಾಃ ಸ್ವಿಚ್ಛ್ರೇಯಾಂಸೋ ದಿತಿಜಾಃ ಸ್ವಿದ್ ವಿರೋಚನ ।
ಅಥ ಕೇನ ಸ್ಮ ಪರ್ಯಂಕಂ ಸುಧನ್ವಾ ನಾಧಿರೋಹತಿ ॥೮॥

ವಿರೋಚನನೇ, ಬ್ರಾಹ್ಮಣರು ಶ್ರೇಷ್ಠರೋ ಅಥವಾ ದೈತ್ಯರು ಶ್ರೇಷ್ಠರೋ? ಯಾವ ಕಾರಣದಿಂದ ಸುಧನ್ವನು ಪರ್ಯಂಕದ ಮೇಲೆ ಕುಳಿತುಕೊಳ್ಳುವುದಿಲ್ಲ?

ವಿರೋಚನಃ

ಪ್ರಾಜಾಪತ್ಯಾ ವಯಂ ಶ್ರೇಷ್ಠಾಃ ಸರ್ವೇ ಕೇಶಿನಿ ಸತ್ತಮಾಃ ।
ಅಸ್ಮಾಕಂ ಖಲ್ವಿಮೇ ಲೋಕಾಃ ಕೇ ದೇವಾಃ ಕೇ ದ್ವಿಜಾತಯಃ ॥೯॥

ವಿರೋಚನ– ಕೇಶಿನಿಯೇ, ನಾವು ಕಶ್ಯಪ ಪ್ರಜಾಪತಿಗಳ ಮಕ್ಕಳು. ಆದ್ದರಿಂದ ಶ್ರೇಷ್ಠರು ಮತ್ತು ಬಹಳ ಸಜ್ಜನರು. ಈ ಲೋಕಗಳೆಲ್ಲಾ ನಮ್ಮ ಸಲುವಾಗಿಯೇ ಇವೆ. ನಮ್ಮ ಮುಂದೆ ದೇವತೆಗಳು ಯಾರು? ಬ್ರಾಹ್ಮಣರು ಯಾರು?

ಕೇಶಿನೀ

ಇಹೈವಾವಾಂ ಪ್ರತೀಕ್ಷಾವ ಉಪಸ್ಥಾನೇ ವಿರೋಚನ ।
ಸುಧನ್ವಾ ಪ್ರಾತರಾಗಂತಾ ಪಶ್ಯೇಯಂ ವಾಂ ಸಮಾಗತೌ ॥೧೦॥

ಕೇಶಿನೀ– ವಿರೋಚನನೇ, ಈ ಪೂಜಾಸ್ಥಾನದಲ್ಲಿಯೇ ನಾವಿಬ್ಬರೂ ನಿರೀಕ್ಷಿಸೋಣ. ನಾಳೆಯ ಪ್ರಾತಃಕಾಲದಲ್ಲಿ ಸುಧನ್ವನು ಬರುವನು. ಆಗ ನಿಮ್ಮಿಬ್ಬರನ್ನೂ ನಾನು ನೋಡುವೆನು.

ವಿರೋಚನಃ

ತಥಾ ಭದ್ರೇ ಕರಿಷ್ಯಾಮಿ ಯಥಾ ತ್ವಂ ಭೀರು ಭಾಷಸೇ ।
ಸುಧನ್ವಾನಂ ಚ ಮಾಂ ಚೈವ ಪ್ರಾತರ್ದ್ರಷ್ಟಾಸಿ ಸಂಗತೌ ॥೧೧॥

ವಿರೋಚನ– ಎಲೌ ಭೀರುವೇ, ಮಂಗಳಸ್ವರೂಪಳೇ, ನೀನು ಹೇಳಿದಂತೆಯೇ ಮಾಡುವೆನು. ಸುಧನ್ವನನ್ನೂ ಮತ್ತು ನನ್ನನ್ನೂ ನೀನು ಒಟ್ಟಿಗೆ ನಾಳೆಯ ಪ್ರಾತಃಕಾಲದಲ್ಲಿ ನೋಡಬಹುದು.

ವಿದುರಃ

ಅತೀತಾಯಾಂ ಚ ಶರ್ವರ್ಯಾಮುದಿತೇ ಸೂರ್ಯಮಂಡಲೇ ।
ಅಥಾಜಗಾಮ ತಂ ದೇಶಂ ಸುಧನ್ವಾ ರಾಜಸತ್ತಮ ॥೧೨॥

ವಿರೋಚನೋ ತತ್ರ ವಿಭೋ ಕೇಶಿನ್ಯಾ ಸಹಿತಃ ಸ್ಥಿತಃ ।
ಸುಧನ್ವಾ ತಂ ಸಮಾಗಚ್ಛತ್ ಪ್ರಾಹ್ಲಾದಿಂ ಕೇಶಿನೀ ತಥಾ ॥೧೩॥

ವಿದುರ– ಎಲೈ ರಾಜಸತ್ತಮನೇ, ರಾತ್ರಿಯು ಕಳೆದು ಸೂರ್ಯನು ಉದಯಿಸುತ್ತಿರಲು ಎಲ್ಲಿ ವಿರೋಚನನು ಕೇಶಿನಿಯ ಜೊತೆಯಲ್ಲಿದ್ದನೋ ಆ ದೇಶಕ್ಕೆ ಸುಧನ್ವನು ಬಂದನು. ಕೇಶಿನಿಯು ಹೇಗೆ ವಿರೋಚನನ ಜೊತೆಯಲ್ಲಿ ಬಂದು ಸೇರಿದಳೋ ಅದರಂತೆ ಸುಧನ್ವನೂ ಬಂದು ಪ್ರಹ್ಲಾದನ ಮಗನಾದ ವಿರೋಚನನ ಜೊತೆಯಲ್ಲಿ ಸೇರಿದನು.

ಸಮಾಗತಂ ದ್ವಿಜಂ ದೃಷ್ಟ್ವಾ ಕೇಶಿನೀ ಭರತರ್ಷಭ ।
ಪ್ರತ್ಯುತ್ಥಾಯಾಸನಂ ತಸ್ಮೈ ಪಾದ್ಯಮರ್ಘ್ಯಂ ದದೌ ಪುನಃ ॥೧೪॥

ಎಲೈ ಭರತರ್ಷಭನೇ, ಬ್ರಾಹ್ಮಣನು ಬಂದದ್ದನ್ನು ನೋಡಿ ಕೇಶಿನಿಯು ಎದ್ದು ಅವನಿಗೆ ಆಸನವನ್ನೂ, ಅರ್ಘ್ಯಪಾದ್ಯಗಳನ್ನೂ ಕೊಟ್ಟಳು ಮತ್ತು ವಿರೋಚನನನ್ನು ಕುರಿತು ಹೀಗೆ ಶ್ರೇಷ್ಠವಾದ ಮಾತನ್ನು ಆಡಿದಳು.

ವಿದುರ

**ಇತಿ ಹೋವಾಚ ವಚನಂ ವಿರೋಚನಮನುತ್ತಮಮ್ ॥೧೫॥**

ವಿದುರ– ಆಗ ಸುಧನ್ವನು ವಿರೋಚನನನ್ನು ಕುರಿತು ಈ ಶ್ರೇಷ್ಠವಾದ ಮಾತನ್ನು ಆಡಿದನು.

ಸುಧನ್ವಾ

**ಆಃಸ್ವ ತಲ್ಪೇ ಹಿ ಸೌವರ್ಣೇ ಪ್ರಾಹ್ಲಾದೇ ಬ್ರಾಹ್ಮಣಸ್ತ್ವಹಮ್ ।**
**ಅನ್ವಾಲಭೇ ಹಿರಣ್ಮಯಂ ಪ್ರಾಹ್ಲಾದೇದಂ ವರಾಸನಮ್ ॥೧೬॥**

**ಏಕತ್ವಮುಪಸಂಪನ್ನೋ ನ ತ್ವಾಸೇಯಂ ತ್ವಯಾ ಸಹ ॥೧೭॥**

ಸುಧನ್ವಾ– ಪ್ರಹ್ಲಾದಪುತ್ರನೇ, ಈ ಸುವರ್ಣಮಯವಾದ ಹಾಸಿಗೆಯಲ್ಲಿ ಕುಳಿತುಕೊ. ನಾನು ಬ್ರಾಹ್ಮಣ. ನಾನು ಈ ಇನ್ನೊಂದು ಶ್ರೇಷ್ಠವಾದ ಸುವರ್ಣಮಯವಾದ ಆಸನದಲ್ಲಿ ಕುಳಿತುಕೊಳ್ಳುತ್ತೇನೆ. ನಿನ್ನ ಜೊತೆಯಲ್ಲಿ ಒಟ್ಟಿಗೆ ಕೂಡುವುದಿಲ್ಲ.

ವಿರೋಚನಃ

**ತವಾರ್ಹತೇ ತು ಫಲಕಂ ಕೂರ್ಚಂ ವಾऽಪ್ಯಥವಾ ಬೃಸೀ ।**
**ಹರಂತು ಫಲಕಂ ಕೂರ್ಚಂ ತಥಾ ಬೃಸ್ಯಸ್ತೃಣಾನಿ ಚ ॥೧೮॥**

**ಸುಧನ್ವನ್ ನ ತ್ವಮರ್ಹೋऽಸಿ ಮಯಾ ಸಹ ಸಮಾಸನಮ್ ॥೧೯॥**

ವಿರೋಚನ– ಅರ್ಹನಾದ ನಿನಗೆ ಮಣೆ, ಕೂರ್ಚ ಅಥವಾ ದರ್ಭಾಸನವೇ ಯೋಗ್ಯವಾದುದು. ಸೇವಕರು ನಿನಗಾಗಿ ಮಣೆಯನ್ನಾಗಲೀ, ಕೂರ್ಚವನ್ನಾಗಲೀ, ದರ್ಭಾಸನವನ್ನಾಗಲೀ, ಚಾಪೆಯನ್ನಾಗಲೀ ತರಲಿ. ಸುಧನ್ವನೇ, ನೀನು ನನ್ನ ಜೊತೆಯಲ್ಲಿ ಒಂದೇ ಆಸನದಲ್ಲಿ ಕುಳಿತುಕೊಳ್ಳಲು ಅರ್ಹನಲ್ಲ.

ಸುಧನ್ವಾ

ಪಿತಾಪುತ್ರೌ ಸಹಾಸೀತಾಂ ದ್ವೌ ವಿಪ್ರೌ ಕ್ಷತ್ರಿಯಾವಪಿ ।
ವೈಶ್ಯೌ ದ್ವೌ ಚೈವ ಶೂದ್ರೌ ಚ ನ ತ್ವನ್ಯಾವಿತರೇತರಮ್ ॥೨೦॥

ಸುಧನ್ವಾ– ತಂದೆ-ಮಕ್ಕಳು ಒಂದೇ ಆಸನದಲ್ಲಿ ಕುಳಿತುಕೊಳ್ಳಬಹುದು. ಇಬ್ಬರು ಬ್ರಾಹ್ಮಣರು, ಇಬ್ಬರು ಕ್ಷತ್ರಿಯರು, ಇಬ್ಬರು ವೈಶ್ಯರು, ಇಬ್ಬರು ಶೂದ್ರರು ಒಂದೇ ಆಸನದಲ್ಲಿ ಕುಳಿತುಕೊಳ್ಳಬಹುದು. ಆದರೆ ಪರಸ್ಪರವಾಗಿ ಬೇರೆ ಜಾತಿಗೆ ಸೇರಿದವರು ಒಂದೇ ಆಸನದಲ್ಲಿ ಕುಳಿತುಕೊಳ್ಳುವಂತಿಲ್ಲ.

ಪಿತಾ ಹಿ ತೇ ಸಮಾಸೀನಮುಪೋಪಾಸೀತ ಮಾಮಧಃ ।
ಬಾಲಃ ಸುಖೋಷಿತೋ ಗೇಹೇ ನ ತ್ವಂ ಕಿಂಚನ ಬುಧ್ಯಸೇ ॥೨೧॥

ನಾನು ಆಸನದಲ್ಲಿ ಕುಳಿತಿದ್ದಾಗ ನಿನ್ನ ತಂದೆಯು ಕೆಳಗೆ ಕುಳಿತಿರುತ್ತಿದ್ದನು. ನೀನಿನ್ನೂ ಬಾಲಕ. ಮನೆಯಲ್ಲಿ ಸುಖವಾಗಿ ಬೆಳೆದಿದ್ದೀಯೆ. ನಿನಗೆ ಒಂದೂ ತಿಳಿಯುವುದಿಲ್ಲ.

ವಿರೋಚನಃ

ಹಿರಣ್ಯಂ ಚ ಗವಾಶ್ವಂ ಚ ಯದ್ವಿತ್ತಮಸುರೇಷು ನಃ ।
ಸುಧನ್ವನ್ ವಿಪಣೇ ತೇನ ಪ್ರಶ್ನಂ ಪೃಚ್ಛಾವ ಯೇ ವಿದುಃ ॥೨೨॥

ವಿರೋಚನ– ಅಸುರರಾದ ನಮ್ಮಲ್ಲಿ ಏನು ಹಿರಣ್ಯ, ಗೋವುಗಳು, ಅಶ್ವಗಳು ಮೊದಲಾದ ಸಂಪತ್ತಿದೆಯೋ ಅದೆಲ್ಲವನ್ನೂ ಪಣವಾಗಿಟ್ಟು ಎಲೈ ಸುಧನ್ವನೇ, ತಿಳಿದವರ ಬಳಿಯಲ್ಲಿ ಪ್ರಶ್ನೆಯನ್ನು ಮಾಡೋಣ.

ಸುಧನ್ವಾ

ಹಿರಣ್ಯಂ ಚ ಗವಾಶ್ವಂ ಚ ತವೈವಾಸ್ತು ವಿರೋಚನ ।
ಪ್ರಾಣಯೋಸ್ತು ಪಣಂ ಕೃತ್ವಾ ಪ್ರಶ್ನಂ ಪೃಚ್ಛಾವ ಯೇ ವಿದುಃ ॥೨೩॥

ಸುಧನ್ವಾ– ಎಲೈ ವಿರೋಚನನೇ, ಸುವರ್ಣ ಮತ್ತು ಗವಾಶ್ವಗಳು ನಿನಗೇ ಇರಲಿ. ನಮ್ಮ ಪ್ರಾಣಗಳನ್ನು ಪಣಕ್ಕಿಟ್ಟು ತಿಳಿದವರನ್ನು ಪ್ರಶ್ನೆ ಮಾಡೋಣ.

ವಿರೋಚನಃ

ಆವಾಂ ಕುತ್ರ ಗಮಿಷ್ಯಾವಃ ಪ್ರಾಣಯೋರ್ವಿಪಣೇ ಕೃತೇ ।
ನ ತು ದೇವೇಷ್ವಹಂ ಸ್ಥಾತಾ ನ ಮನುಷ್ಯೇಷು ಕರ್ಹಿಚಿತ್ ॥೨೪॥

ವಿರೋಚನ– ಪ್ರಾಣಗಳನ್ನು ಪಣಕ್ಕಿಟ್ಟ ಮೇಲೆ ನಾವು ಯಾರಲ್ಲಿಗೆ ಹೋಗೋಣ? ನಾನು ದೇವತೆಗಳ ಬಳಿಗೆ ಹೋಗುವುದಿಲ್ಲ, ಮನುಷ್ಯರ ಬಳಿಗೂ ಹೋಗುವವನಲ್ಲ.

ಸುಧನ್ವಾ

ಪಿತರಂ ತೇ ಗಮಿಷ್ಯಾವಃ ಪ್ರಾಣಯೋರ್ವಿಪಣೇ ಕೃತೇ ।
ಪುತ್ರಸ್ಯಾಪಿ ಸ ಹೇತೋರ್ಹಿ ಪ್ರಹ್ಲಾದೋ ನಾನೃತಂ ವದೇತ್ ॥೨೫॥

ಸುಧನ್ವಾ– ಪ್ರಾಣಗಳನ್ನು ಪಣಕ್ಕಿಟ್ಟು ನಿನ್ನ ತಂದೆಯ ಬಳಿಗೆ ಹೋಗೋಣ. ಮಗನ ಸಲುವಾಗಿಯೂ ಸಹ ಪ್ರಹ್ಲಾದನು ಸುಳ್ಳನ್ನು ಹೇಳುವುದಿಲ್ಲ.

ವಿದುರಃ

ಏವಂ ಕೃತಪಣೌ ಕ್ರುದ್ಧೌ ತದಾ ತತ್ಯೈವ ಜಗ್ಮತುಃ ।
ವಿರೋಚನಸುಧನ್ವಾನೌ ಪ್ರಹ್ಲಾದೋ ಯತ್ರ ತಿಷ್ಠತಿ ॥೨೬॥

ವಿದುರ– ಹೀಗೆ ವಿರೋಚನ, ಸುಧನ್ವಾ ಇಬ್ಬರೂ ಪಣವನ್ನು ಇಟ್ಟು ಸಿಟ್ಟಿನಿಂದ ಕೂಡಿದವರಾಗಿ ಪ್ರಹ್ಲಾದನು ಎಲ್ಲಿ ಇದ್ದನೋ ಅಲ್ಲಿಗೆ ಹೋದರು.

ಪ್ರಹ್ಲಾದಃ

ಇಮೌ ತೌ ಸಂಪ್ರದೃಶ್ಯೇತೇ ಯಾಭ್ಯಾಂ ನ ಚರಿತಂ ಸಹ ।
ಆಶೀವಿಷಾವಿವ ಕ್ರುದ್ಧಾವೇಕಮಾರ್ಗಾವಿಹಾಗತೌ ॥೨೭॥

ಪ್ರಹ್ಲಾದ– ಎಂದೂ ಒಟ್ಟಿಗೆ ಸಂಚರಿಸದ ಇವರಿಬ್ಬರೂ ಸಿಟ್ಟುಗೊಂಡ ಸರ್ಪಗಳಂತೆ ಒಂದೇ ಮಾರ್ಗದಲ್ಲಿ ಜೊತೆಯಲ್ಲಿ ಇಲ್ಲಿಗೆ ನಡೆದು ಬರುತ್ತಿದ್ದಾರೆ.

ಕಿಂ ವಾ ಸಹೈವ ಚರಥೋ ನ ಪುರಾ ಚರಥಃ ಸಹ ।
ವಿರೋಚನೈತತ್ ಪೃಚ್ಛಾಮಿ ಕಿಂ ತೇ ಸಖ್ಯಂ ಸುಧನ್ವನಾ ॥೨೮॥

ಎಲೈ ವಿರೋಚನನೇ, ಹೀಗೆ ಎಂದೂ ಒಟ್ಟಿಗೆ ನಡೆಯದಿದ್ದವರು ಈ ದಿನ ಒಟ್ಟಿಗೆ ಏಕೆ ನಡೆದು ಬರುತ್ತಿದ್ದೀರಿ? ವಿರೋಚನನೇ, ನಿನ್ನನ್ನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಸುಧನ್ವನ ಜೊತೆಯಲ್ಲಿ ನಿನ್ನ ಸಖ್ಯಕ್ಕೆ ಕಾರಣವೇನು?

**ವಿರೋಚನಃ**

**ನ ಮೇ ಸುಧನ್ವಾ ಸಖ್ಯಂ ಪ್ರಾಣಯೋರ್ವಿಪಣಾವಹೇ ।**
**ತತ್ ತ್ವಾಂ ಪೃಚ್ಛಾವಹೇ ತಾತ ಮಾ ಪ್ರಶ್ನಮನೃತಂ ವದೇಃ ॥೨೯॥**

ವಿರೋಚನ– ನನಗೆ ಸುಧನ್ವನ ಜೊತೆಯಲ್ಲಿ ಸಖ್ಯವಿಲ್ಲ. ನಮ್ಮ ಪ್ರಾಣಗಳನ್ನು ಪಣಕ್ಕೆ ಇಟ್ಟಿದ್ದೇವೆ. ತಂದೆಯೇ, ಆದ್ದರಿಂದ ನಾವಿಬ್ಬರೂ ನಿನ್ನನ್ನು ಕೇಳುತ್ತಿದ್ದೇವೆ. ನಮ್ಮ ಪ್ರಶ್ನೆಗೆ ಸುಳ್ಳು ಉತ್ತರವನ್ನು ಹೇಳಬೇಡ.

**ಪ್ರಹ್ಲಾದಃ**

**ಉದಕಂ ಮಧುಪರ್ಕಂ ಚಾಪ್ಯಾನಯಂತು ಸುಧನ್ವನೇ ।**
**ಬ್ರಹ್ಮನ್ನಭ್ಯರ್ಚನೀಯೋಽಸಿ ಶ್ವೇತಾ ಗೌಃ ಪೀವರೀಕೃತಾ ॥೩೦॥**

ಪ್ರಹ್ಲಾದ– ಸುಧನ್ವನಿಗೋಸ್ಕರ ಉದಕವನ್ನೂ ಮತ್ತು ಮಧುಪರ್ಕವನ್ನೂ ತೆಗೆದುಕೊಂಡು ಬನ್ನಿ. ಬ್ರಾಹ್ಮಣನೇ, ನೀನು ಪೂಜನೀಯನಾಗಿದ್ದೀಯೆ. ಚೆನ್ನಾಗಿ ಸಾಕಿದ ಒಂದು ಬಿಳಿಯ ಬಣ್ಣದ ಗೋವು ನಿನ್ನ ದಾನಕ್ಕಾಗಿ ಸಿದ್ಧವಾಗಿದೆ.

**ಸುಧನ್ವಾ**

**ಉದಕಂ ಮಧುಪರ್ಕಂ ಚ ಪ್ರಶ್ನವಾಚಾಽರ್ಪಿತಂ ಮಮ ॥೩೧॥**

**ಪ್ರಹ್ಲಾದ ತ್ವಂ ತು ಮೇ ತಥ್ಯಂ ಪ್ರಶ್ನಂ ಪ್ರಬ್ರೂಹಿ ಪೃಚ್ಛತಃ ।**
**ಕಿಂ ಬ್ರಾಹ್ಮಣಾಃ ಶ್ವಿಚ್ಛ್ರೇಯಾಂಸ ಉತಾಹೋಸ್ವಿದ್ ವಿರೋಚನಃ ॥೩೨॥**

ಸುಧನ್ವಾ– ನಿನ್ನ ಮಾತಿನಿಂದಲೇ ನೀನು ನನಗೆ ಉದಕವನ್ನೂ ಮತ್ತು ಮಧುಪರ್ಕವನ್ನೂ ನೀಡಿದಂತಾಗಿದೆ. ರಾಜನೇ, ಪ್ರಶ್ನೆಯನ್ನು ಮಾಡುವ ನನಗೆ ನೀನು ಸರಿಯಾದ ಉತ್ತರವನ್ನು ಹೇಳು. ಬ್ರಾಹ್ಮಣರು ಶ್ರೇಷ್ಠರೋ ಅಥವಾ ವಿರೋಚನನು ಶ್ರೇಷ್ಠನೋ?

ಪ್ರಹ್ಲಾದಃ

ನ ಕಲ್ಮಾಷೋ ನ ಕಪಿಲೋ ನ ಕೃಷ್ಣೋ ನ ಚ ಲೋಹಿತಃ ।
ಅಣೀಯಾನ್ ಕ್ಷುರಧಾರಾಯಾಃ ಕೋ ಧರ್ಮಂ ವಕ್ತುಮರ್ಹಸಿ ॥೩೩॥

ಪ್ರಹ್ಲಾದ– ಕಲ್ಮಾಷ ಗೋವಾಗಲೀ, ಕಪಿಲ ಗೋವಾಗಲೀ, ಕೃಷ್ಣ ಗೋವಾಗಲೀ ಅಥವಾ ಕೆಂಪು ಬಣ್ಣದ ಗೋವಾಗಲೀ ಯಾವುದೂ ಕತ್ತಿಯ ಅಲುಗಿನ ಮುಂದೆ ಸಣ್ಣದಲ್ಲ (ನ್ಯಾಯದ ಕತ್ತಿಗೆ ಎಲ್ಲರೂ ಸಮಾನರು). ಧರ್ಮವನ್ನು ಯಾವನು ಹೇಳಲು ಸಾಧ್ಯ ?

ಪುತ್ರ ಏಕೋ ಮಮ ಬ್ರಹ್ಮನ್ ತ್ವಂ ಚ ಸಾಕ್ಷ್ಯೇ ವ್ಯವಸ್ಥಿತಃ ।
ತಯೋರ್ವಿವದತೋಃ ಪ್ರಶ್ನಂ ಕಥಮಸ್ಮದ್ವಿಧೋ ವದೇತ್ ॥೩೪॥

ಎಲೈ ಬ್ರಾಹ್ಮಣನೇ, ನಿಮ್ಮಿಬ್ಬರಲ್ಲಿ ಒಬ್ಬನು ನನ್ನ ಪುತ್ರ. ನೀನು ಸಾಕ್ಷಿಯನ್ನು ಹುಡುಕಿಕೊಂಡು ಬಂದಿದ್ದೀಯೆ. ನೀವಿಬ್ಬರೂ ಹೀಗೆ ವಿವಾದ ಮಾಡುವಾಗ ನನ್ನಂತಹವನು ಹೇಗೆ ಪ್ರಶ್ನೆಗೆ ಉತ್ತರವನ್ನು ಹೇಳಲು ಸಾಧ್ಯ ?

ಸುಧನ್ವಾ

ಯದ್ಯತತ್ತ್ವಂ ತು ವಕ್ತಾಸಿ ಯದಿ ವಾऽಪಿ ನ ವಕ್ಷ್ಯಸಿ ।
ಪ್ರಹ್ಲಾದ ಪ್ರಶ್ನಮತುಲಂ ಮೂರ್ಧಾ ತೇ ವಿಫಲಿಷ್ಯತಿ ॥೩೫॥

ಸುಧನ್ವಾ– ಪ್ರಹ್ಲಾದನೇ, ನಮ್ಮ ಅಸದೃಶವಾದ ಪ್ರಶ್ನೆಗೆ ನೀನು ಉತ್ತರವನ್ನು ಹೇಳದಿದ್ದರೆ ಅಥವಾ ತಪ್ಪು ಉತ್ತರವನ್ನು ಹೇಳುವವನಾದರೆ ನಿನ್ನ ತಲೆಯು ಬಿರಿದು ಹೋಗುತ್ತದೆ.

ವಿದುರಃ

ಆದಿತ್ಯೇನ ಸಹಾಯಾಂತಂ ಪ್ರಹ್ಲಾದೋ ಹಂಸಮಬ್ರವೀತ್ ।
ಧೃತರಾಷ್ಟ್ರಂ ಮಹಾಪ್ರಾಜ್ಞಂ ಸರ್ವಜ್ಞಂ ಸರ್ವದರ್ಶಿನಮ್ ॥೩೬॥

ವಿದುರ– ಆಗ ಪ್ರಹ್ಲಾದನು ಸೂರ್ಯನ ಜೊತೆಯಲ್ಲಿ ಬರುತ್ತಿದ್ದಂತಹ ಧೃತರಾಷ್ಟ್ರನೆಂಬ ಮಹಾಪ್ರಾಜ್ಞನೂ, ಸರ್ವಜ್ಞನೂ, ಎಲ್ಲವನ್ನೂ ಪ್ರತ್ಯಕ್ಷದಿಂದ

ನೋಡುವವನೂ ಆದ ಹಂಸನನ್ನು ಕುರಿತು ಹೇಳಿದನು (ಹಂಸ ಎಂದರೆ ಸಂನ್ಯಾಸಿಗಳ ಒಂದು ಪ್ರಭೇದ).

**ಪ್ರಹ್ಲಾದಃ**

**ಪುತ್ರೋ ವಾಽನ್ಯೋ ಭವೇದ್ ಬ್ರಹ್ಮನ್ ಸಾಕ್ಷ್ಯೇ ಚಾಪಿ ಭವೇತ್ ಸ್ಥಿತಃ।**
**ತಯೋರ್ವಿವದತೋರ್ಹಂಸ ಕಥಂ ಧರ್ಮಃ ಪ್ರವರ್ತತೇ ॥೩೭॥**

ಪ್ರಹ್ಲಾದ– ಎಲೈ ಬ್ರಾಹ್ಮಣನೇ, ಮಗನೇ ಆಗಲಿ ಅಥವಾ ಇನ್ನೊಬ್ಬನಾಗಲೀ ವಿವಾದವನ್ನು ಮಾಡಿಕೊಂಡು ಸಾಕ್ಷಿಯನ್ನು ಕೇಳಲು ಬಂದಾಗ ಎಲೈ ಹಂಸನೇ, ಧರ್ಮವು ಹೇಗೆ ಪ್ರವೃತ್ತವಾಗುತ್ತದೆ?

**ಹಂಸಃ**

**ಗಾಂ ವೈ ದದ್ಯಾತ್ ತೌರಸಾಯ ಯದ್ವಾಽನ್ಯತ್ ಸ್ಯಾತ್ ಪ್ರಿಯಂ ಧನಮ್ ।**
**ದ್ವಯೋರ್ವಿವದತೋಸ್ತಥ್ಯಂ ವಾಚ್ಯಂ ಚ ಮತಿಮಂಸ್ತ್ವಯಾ ॥೩೮॥**

ಹಂಸ– ಎಲೈ ಮತಿವಂತನೇ, ಔರಸ ಪುತ್ರನಿಗೆ ಗೋವನ್ನು ಕೊಡಬಹುದು ಅಥವಾ ಬೇರೆ ಏನಾದರೂ ಪ್ರಿಯವಿದ್ದರೆ ಅದನ್ನೂ ಧನವನ್ನೂ ಕೊಡಬಹುದು. ಆದರೆ ಇಬ್ಬರು ವಿವಾದವನ್ನು ಮಾಡುವಾಗ ನೀನು ಸತ್ಯವನ್ನೇ ನುಡಿಯಬೇಕು.

**ಪ್ರಹ್ಲಾದಃ**

**ಅಥ ಯೋ ನೈವ ಪ್ರಬ್ರೂಯಾತ್ ಸತ್ಯಂ ವಾ ಯದಿ ವಾಽನೃತಮ್ ।**
**ಹಂಸ ತತ್ತ್ವೇನ ಪೃಚ್ಛಾಮಿ ದುರ್ವಿವೇಕ್ತಾಸ್ಮಿ ಕಿಂ ವದೇ ॥೩೯॥**

ಪ್ರಹ್ಲಾದ– ಎಲೈ ಹಂಸನೇ, ಯಾವನು ಸತ್ಯವನ್ನು ನುಡಿಯುವುದಿಲ್ಲವೋ ಅಥವಾ ಸುಳ್ಳನ್ನು ನುಡಿಯುತ್ತಾನೋ ಅವರಲ್ಲಿ ಉತ್ತಮರು, ಅಧಮರನ್ನು ನಾನು ತಿಳಿದುಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ನಿನ್ನನ್ನು ಕೇಳುತ್ತಿದ್ದೇನೆ.

**ಹಂಸಃ**

**ಪೃಷ್ಟೋ ಧರ್ಮಂ ನ ವಿಬ್ರೂಯಾತ್ ಗೋಕರ್ಣಶಿಥಿಲಂ ಚರನ್ ।**
**ಧರ್ಮಾದ್ ಭ್ರಶ್ಯತಿ ರಾಜಂಸ್ತು ನಾಸ್ಯ ಲೋಕೋಽಸ್ತಿ ನ ಪ್ರಜಾಃ ॥೪೦॥**

ಹಂಸ– ಧರ್ಮದ ಪ್ರಶ್ನೆಯನ್ನು ಕೇಳಿದಾಗ ಕೇಳಿಸಿದರೂ ಕೇಳಿಸದೆ ಇದ್ದಂತೆ ಸುಮ್ಮನಿರುವವನು ತನ್ನ ಧರ್ಮವನ್ನು ಕಳೆದುಕೊಳ್ಳುತ್ತಾನೆ. ಎಲೈ ರಾಜನೇ, ಅವನಿಗೆ ಪರಲೋಕವೂ ಇಲ್ಲ, ಸಂತತಿಯೂ ಇಲ್ಲ.

ಧರ್ಮ ಏತಾನ್ ಸಂರುಜತಿ ಯಥಾ ನದ್ಯನುಕೂಲಜಾನ್ ॥೪೧॥

ನದಿಯ ಪ್ರವಾಹವು ತೀರದಲ್ಲಿದ್ದ ವೃಕ್ಷಗಳನ್ನು ಕೊಚ್ಚಿಕೊಂಡು ಹೋಗುವಂತೆ ಧರ್ಮವೇ ಅವನನ್ನು ಕೊಚ್ಚಿಕೊಂಡು ಹೋಗುತ್ತದೆ.

ಯೇ ಧರ್ಮಮನುಪಶ್ಯಂತಃ ತೂಷ್ಣೀಂ ಧ್ಯಾಯಂತ ಆಸತೇ ।
ಶ್ರೇಷ್ಠೋಽರ್ಧಂ ತು ಹರೇತ್ ತತ್ರ ಭವೇತ್ ಪಾದಶ್ಚ ಕರ್ತರಿ ॥೪೨॥

ಪಾದಸ್ತೇಷು ಸಭಾಸತ್ಸು ಯತ್ರ ನಿಂದ್ಯೋ ನ ನಿಂದ್ಯತೇ ॥೪೩॥

ಪ್ರಶ್ನೆಯನ್ನು ಕೇಳಿದಾಗ ಯಾರು ಧರ್ಮವು ಗೊತ್ತಿದ್ದರೂ ಸುಮ್ಮನೆ ಧ್ಯಾನ ಮಾಡುವವರಂತೆ ಕುಳಿತಿರುತ್ತಾರೋ ಅವರ ಪುಣ್ಯದ ಅರ್ಧಭಾಗವನ್ನು ಪ್ರಶ್ನೆಯನ್ನು ಮಾಡಿದ ಶ್ರೇಷ್ಠನಾದವನು ತೆಗೆದುಕೊಳ್ಳುತ್ತಾನೆ. ಇನ್ನು ಕಾಲುಭಾಗವು ಅವರಲ್ಲಿ ಅಪಕಾರ ಮಾಡಿದವನಿಗೆ ಸೇರುತ್ತದೆ. ನಿಂದನೀಯನಾದವನನ್ನು ನಿಂದಿಸದಿದ್ದರೆ ಸಭಾಸದರಿಗೆ ಉಳಿದ ಕಾಲುಭಾಗವು ಸೇರುತ್ತದೆ.

ಅನೇನಾ ಭವತಿ ಶ್ರೇಷ್ಠೋ ಮುಚ್ಯಂತೇ ಚ ಸಭಾಸದಃ ।
ಕರ್ತಾರಮೇನೋ ಗಚ್ಛೇಚ್ಚ ನಿಂದ್ಯೋ ಯತ್ರ ಹಿ ನಿಂದ್ಯತೇ ॥೪೪॥

ನಿಂದನೀಯನಾದವನು ಯಾವ ಸಭೆಯಲ್ಲಿ ನಿಂದಿಸಲ್ಪಡುತ್ತಾನೆಯೋ ಅಲ್ಲಿ ವಿವಾದವನ್ನು ತಂದವರಲ್ಲಿ ಶ್ರೇಷ್ಠನಾದವನು ನಿರ್ದೋಷಿಯಾಗುತ್ತಾನೆ. ಸಭಾಸದರಿಗೆ ಯಾವ ದೋಷವೂ ಉಂಟಾಗುವುದಿಲ್ಲ ಮತ್ತು ನಿಂದನೀಯವಾದ ಕರ್ಮವನ್ನು ಮಾಡಿದವರಿಗೆ ಪಾಪವು ಉಂಟಾಗುತ್ತದೆ.

ಪ್ರಹ್ಲಾದಃ

ಮೋಹಾದ್ವಾ ಚೈವ ಕಾಮಾದ್ವಾ ಮಿಥ್ಯಾವಾದಂ ಯದಿ ಬ್ರುವನ್ ।
ಧೃತರಾಷ್ಟ್ರ ತತ್ ತ್ವಂ ಪೃಚ್ಛಾಮಿ ದುರ್ವಿವಕ್ತಾ ತು ಕಿಂ ವಸೇತ್ ॥೪೫॥

ಪ್ರಹ್ಲಾದ– ಎಲೈ ಧೃತರಾಷ್ಟ್ರ ಹಂಸನೇ, ಮೋಹದಿಂದಲಾಗಲೀ, ಕಾಮದಿಂದಾಗಲೀ ಯಾವನು ಸುಳ್ಳು ಮಾತನ್ನು ಆಡುವವನಾಗಿ ವಿವಾದವನ್ನು ಕೆಟ್ಟದಾಗಿ ಪರಿಹರಿಸಲು ನೋಡುತ್ತಾನೆಯೋ ಅವನು ಎಲ್ಲಿಗೆ ಹೋಗುತ್ತಾನೆ ಎಂದು ನಿನ್ನನ್ನು ಕೇಳುತ್ತೇನೆ.

ಹಂಸಃ

ಯಾಂ ರಾತ್ರಿಮಧಿವಿನ್ನಾ ಸ್ತ್ರೀ ಯಾಂ ಚೈವಾಕ್ಷಪರಾಜಿತಃ ।
ಯಾಂ ಚ ಭಾರಾಭಿತಪ್ತಾಂಗೋ ದುರ್ವಿವಕ್ತಾ ತು ತಾಂ ವಸೇತ್॥೪೬॥

ಹಂಸ– ಪತಿಯನ್ನು ಕಳೆದುಕೊಂಡ ಸ್ತ್ರೀಯು ಆ ದಿನ ರಾತ್ರಿಯಲ್ಲಿ ಹೇಗೆ ವಾಸ ಮಾಡುತ್ತಾಳೆಯೋ ದ್ಯೂತದಲ್ಲಿ ಪರಾಜಿತನಾದವನು ಆ ರಾತ್ರಿಯಲ್ಲಿ ಹೇಗೆ ವಾಸ ಮಾಡುತ್ತಾನೆಯೋ, ದೊಡ್ಡ ಭಾರದಿಂದ ತಪ್ತವಾದ ಶರೀರವುಳ್ಳವನು ರಾತ್ರಿಯಲ್ಲಿ ಹೇಗೆ ವಾಸ ಮಾಡುತ್ತಾನೆಯೋ ಸಭೆಯಲ್ಲಿ ಅನ್ಯಾಯವನ್ನು ನುಡಿಯುವವನು ಹಾಗೆ ವಾಸ ಮಾಡುತ್ತಾನೆ (ಅಂತಹ ದುಃಖವನ್ನು ಹೊಂದುತ್ತಾನೆ).

ನಗರೇ ಪ್ರತಿರುದ್ಧಃ ಸನ್ ಬಹಿರ್ದ್ವಾರೋ ಬುಭುಕ್ಷಿತಃ ।
ಅಮಿತ್ರಾನ್ ಭೂಯಸಃ ಪಶ್ಯನ್ ದುರ್ವಿವಕ್ತಾ ತು ತಾಂ ವಸೇತ್ ॥

ನಗರದ ಹೊರಗೆ ಕೋಟೆಯ ಬಾಗಿಲಿನಿಂದ ಆಚೆಗೆ ಉಳಿದು ನಗರಕ್ಕೆ ಪ್ರವೇಶಿಸದಂತೆ ತಡೆಯಲ್ಪಟ್ಟ ಹಸಿದ ರಾಜನು ತನ್ನ ಸುತ್ತಲೂ ಅನೇಕ ಶತ್ರುಗಳನ್ನು ನೋಡುವಾಗ ಹೇಗಿರುತ್ತಾನೆಯೋ ಅದರಂತೆ ಕೆಟ್ಟದಾಗಿ ನಿರ್ಣಯವನ್ನು ಕೊಡುವವನು ದುಃಖವನ್ನು ಅನುಭವಿಸುತ್ತಾನೆ.

ಯಾಂ ಚ ರಾತ್ರಿಮಭಿದ್ರುಗ್ಧೋ ಯಾಂ ಚ ಪುತ್ರೇ ಪ್ರಿಯೇ ಮೃತೇ ।
ಸರ್ವಸ್ವೇನ ಚ ಯೋ ಹೀನೋ ದುರ್ವಿವಕ್ತಾ ತು ತಾಂ ವಸೇತ್ ॥೪೮॥

ಮೋಸವನ್ನು ಮಾಡಲ್ಪಟ್ಟವನು ಆ ರಾತ್ರಿಯನ್ನು ಕಳೆದಂತೆ, ಪ್ರಿಯನಾದ ಪುತ್ರನು ಮೃತನಾದ ದಿವಸದಲ್ಲಿ ರಾತ್ರಿಯನ್ನು ಕಳೆದಂತೆ, ಸರ್ವಸ್ವವನ್ನು ಕಳೆದುಕೊಂಡವನು ದುಃಖವನ್ನು ಅನುಭವಿಸುವಂತೆ, ಅನ್ಯಾಯದ ನಿರ್ಣಯವನ್ನು ಕೊಡುವವನು ವಾಸ ಮಾಡುತ್ತಾನೆ.

ಪಂಚ ಪಶ್ವನೃತಂ ಹಂತಿ ದಶ ಹಂತಿ ಗವಾನೃತೇ ।
ಶತಮಶ್ವಾನೃತೇ ಹಂತಿ ಸಹಸ್ರಂ ಪುರುಷಾನೃತೇ ॥೪೯॥

ಪಶುವಿನ ಸಲುವಾಗಿ ಅನೃತವನ್ನು ಹೇಳಿದರೆ ಐದು ಜನರನ್ನು ಕೊಲ್ಲುತ್ತದೆ. ಗೋವಿನ ಸಲುವಾಗಿ ಅನೃತವನ್ನು ಹೇಳಿದರೆ ಹತ್ತು ಜನರನ್ನು ಕೊಲ್ಲುತ್ತದೆ. ಅಶ್ವದ ಸಲುವಾಗಿ ಅನೃತವನ್ನು ಹೇಳಿದರೆ ನೂರುಜನರನ್ನು ಕೊಲ್ಲುತ್ತದೆ. ಮನುಷ್ಯನ ಸಲುವಾಗಿ ಅನೃತವನ್ನು ಹೇಳಿದರೆ ಸಹಸ್ರ ಜನರನ್ನು ಕೊಲ್ಲುತ್ತದೆ.

ಹಂತಿ ಜಾತಾನಜಾತಾಂಶ್ಚ ಹಿರಣ್ಯಾರ್ಥೇऽನೃತಂ ವದನ್ ।
ಸರ್ವಂ ಭೂಮ್ಯನೃತೇ ಹಂತಿ ಮಾ ಸ್ಮ ಭೂಮ್ಯನೃತಂ ವದೇಃ ॥೫೦॥

ಸುವರ್ಣದ ಸಲುವಾಗಿ ಅನೃತವನ್ನು ಹೇಳಿದರೆ ಅದು ಹುಟ್ಟಿದ ಮತ್ತು ಮುಂದೆ ಹುಟ್ಟುವ ಮಕ್ಕಳನ್ನೆಲ್ಲಾ ಕೊಲ್ಲುತ್ತದೆ. ಭೂಮಿಯ ಸಲುವಾಗಿ ಅನೃತವನ್ನು ಹೇಳಿದರೆ ಎಲ್ಲವನ್ನೂ ನಾಶಮಾಡುತ್ತದೆ. ಆದ್ದರಿಂದ ಭೂಮಿಯ ಸಲುವಾಗಿ ಅನೃತವನ್ನು ಹೇಳಬೇಡ.

ಪ್ರಹ್ಲಾದಃ

ಮತ್ತಃ ಶ್ರೇಯಾನಂಗಿರಾ ವೈ ಸುಧನ್ವಾ ತ್ವದ್ ವಿರೋಚನ ।
ಮಾತಾऽಸ್ಯ ಶ್ರೇಯಸೀ ಮಾತುಸ್ತಸ್ಮಾತ್ ತ್ವಂ ತೇನ ವೈ ಜಿತಃ ॥೫೧॥

ಪ್ರಹ್ಲಾದ– ಅಂಗಿರಸರು ನನಗಿಂತ ಶ್ರೇಷ್ಠರಾದವರು. ಸುಧನ್ವನ ತಾಯಿಯು ನಿನ್ನ ತಾಯಿಗಿಂತಲೂ ಶ್ರೇಷ್ಠಳಾದವಳು. ಆದ್ದರಿಂದ ಸುಧನ್ವನು ಎಲೈ ವಿರೋಚನನೇ, ನಿನಗಿಂತಲೂ ಶ್ರೇಷ್ಠನಾದವನು. ನೀನು ಈ ಪಣದಲ್ಲಿ ಸುಧನ್ವನಿಗೆ ಸೋತಿದ್ದೀಯೆ.

ವಿರೋಚನ ಸುಧನ್ವಾऽಯಂ ಪ್ರಾಣಾನಾಮೀಶ್ವರಸ್ತವ ।
ಸುಧನ್ವನ್ ಪುತ್ರಮಿಚ್ಛಾಮಿ ತ್ವಯಾ ದತ್ತಂ ವಿರೋಚನಮ್ ॥೫೨॥

ಎಲೈ ವಿರೋಚನನೇ, ಈಗ ಈ ಸುಧನ್ವನು ನಿನ್ನ ಪ್ರಾಣಗಳಿಗೆ ಒಡೆಯನಾಗಿದ್ದಾನೆ. ಎಲೈ ಸುಧನ್ವನೇ, ನೀನು ನನಗೆ ಮಗನಾದ ವಿರೋಚನನನ್ನು ದಾನ ಮಾಡು ಎಂದು ಕೇಳುತ್ತಿದ್ದೇನೆ.

**ಸುಧನ್ವಾ**

**ಯದ್ಧರ್ಮಮವೃಣೇಥಾಸ್ತ್ವಂ ನ ಕಾಮಾದನೃತಂ ವದೀಃ ।**
**ಪುನರ್ದದಾಮಿ ತೇ ಪುತ್ರಂ ತಸ್ಮಾತ್ ಪ್ರಹ್ಲಾದ ದುರ್ಲಭಮ್ ॥೫೩॥**

**ಸುಧನ್ವಾ**– ಯಾವ ಕಾರಣದಿಂದ ನೀನು ಧರ್ಮವನ್ನೇ ಆಶ್ರಯಿಸಿದೆಯೋ, ಕಾಮದಿಂದ ಸುಳ್ಳನ್ನು ಹೇಳಲಿಲ್ಲವೋ, ಆದ್ದರಿಂದ ಎಲೈ ಪ್ರಹ್ಲಾದನೇ, ದುರ್ಲಭನಾದ ಪುತ್ರನನ್ನು ನಿನಗೆ ಪುನಃ ಕೊಡುತ್ತೇನೆ.

**ಏಷ ಪ್ರಹ್ಲಾದ ಪುತ್ರಸ್ತೇ ಮಯಾ ದತ್ತೋ ವಿರೋಚನಃ ।**
**ಪಾದಪ್ರಕ್ಷಾಲನಂ ಕುರ್ಯಾತ್ ಕುಮಾರ್ಯಾಃ ಸನ್ನಿಧೌ ಮಮ ॥೫೪॥**

ಪ್ರಹ್ಲಾದನೇ, ಇದೋ ನಿನ್ನ ಪುತ್ರನಾದ ವಿರೋಚನನನ್ನು ನಿನಗೆ ಕೊಡುತ್ತಿದ್ದೇನೆ. ಅವನು ಈ ಕೇಶಿನಿಯ ಸನ್ನಿಧಿಯಲ್ಲಿ ನನ್ನ ಪಾದಪ್ರಕ್ಷಾಲನೆಯನ್ನು ಮಾಡಲಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಚತುಸ್ತ್ರಿಂಶೋಽಧ್ಯಾಯಃ ॥

॥ ಪ್ರಜಾಗರಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಮೂವತ್ನಾಲ್ಕನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

## ಮೂವತ್ತೈದನೆಯ ಅಧ್ಯಾಯ

ವಿದುರನೀತಿ ಮತ್ತು ಧೃತರಾಷ್ಟ್ರನಿಗೆ ಪಾಂಡವರಲ್ಲಿ ಪುತ್ರದೃಷ್ಟಿವಿಧಾನ.

**ವಿದುರಃ**

**ತಸ್ಮಾದ್ ರಾಜೇಂದ್ರ ಭೂಮ್ಯರ್ಥೇ ನಾನೃತಂ ವಕ್ತುಮರ್ಹಸಿ ।**
**ಮಾ ಗಮಃ ಸಸುತಾಮಾತ್ಯೋ ನಾಶಂ ಪುತ್ರಾರ್ಥಮಬ್ರುವನ್ ॥೧॥**

**ವಿದುರ**– ಎಲೈ ರಾಜೇಂದ್ರನೇ, ಆದ್ದರಿಂದ ಭೂಮಿಯ ವಿಷಯದಲ್ಲಿ ಎಂದೂ ಸುಳ್ಳನ್ನು ಹೇಳಬೇಡ. ಮಕ್ಕಳ ಹಿತಕ್ಕಾಗಿ ಏನೂ ಮಾತನಾಡದೆ ಪುತ್ರಾಮಾತ್ಯರ ಜೊತೆಯಲ್ಲಿ ನಾಶವನ್ನು ಹೊಂದಬೇಡ.

ನ ದೇವಾ ದಂಡಮಾದಾಯ ರಕ್ಷಂತಿ ಪಶುಪಾಲವತ್ ।
ಯಂ ತು ರಕ್ಷಿತುಮಿಚ್ಛಂತಿ ಬುದ್ಧ್ಯಾ ಸಂಯೋಜಯಂತಿ ತಮ್ ॥೨॥

ದೇವತೆಗಳು ಗೋಪಾಲಕರಂತೆ ಕೋಲನ್ನು ಹಿಡಿದು ರಕ್ಷಿಸುವುದಿಲ್ಲ. ಯಾರನ್ನು ರಕ್ಷಿಸಲು ಬಯಸುತ್ತಾರೆಯೋ ಅವರಿಗೆ ಒಳ್ಳೆಯ ಬುದ್ಧಿಯನ್ನು ಕೊಡುತ್ತಾರೆ.

ಯಥಾ ಯಥಾ ಹಿ ಪುರುಷಃ ಕಲ್ಯಾಣೇ ಕುರುತೇ ಮನಃ ।
ತಥಾ ತಥಾऽಸ್ಯ ಸರ್ವಾರ್ಥಾಃ ಸಿದ್ಧ್ಯಂತೇ ನಾತ್ರ ಸಂಶಯಃ ॥೩॥

ಹೇಗೆ ಹೇಗೆ ಪುರುಷನು ಒಳ್ಳೆಯದನ್ನೇ ಮಾಡಲು ಮನಸ್ಸು ಮಾಡುತ್ತಾನೆಯೋ ಹಾಗೆ ಹಾಗೆ ಅವನಿಗೆ ಎಲ್ಲಾ ಅರ್ಥಗಳೂ ಸಿದ್ಧಿಸುತ್ತವೆ. ಇದರಲ್ಲಿ ಸಂಶಯವಿಲ್ಲ.

ನೈನಂ ಛಿಂದಂತಿ ವೃಜಿನಾತ್ ತಾರಯಂತಿ
ಮಾಯಾವಿನಂ ಮಾಯಯಾ ವರ್ತಮಾನಮ್ ।
ನೀಡಂ ಶಕುಂತಾ ಇವ ಜಾತಪಕ್ಷಾಃ
ಛಂದಾಂಸ್ಯೇನಂ ಪ್ರಜಹತ್ಯಂತಕಾಲೇ ॥೪॥

ಇನ್ನೊಬ್ಬರಿಗೆ ಮೋಸವನ್ನು ಮಾಡಿ ಕಪಟದಿಂದ ಜೀವಿಸುವವನನ್ನು ವೇದಗಳು ಪಾಪದಿಂದ ಪಾರು ಮಾಡುವುದಿಲ್ಲ. ರೆಕ್ಕೆಯು ಮೂಡಿದ ಪಕ್ಷಿಗಳು ಗೂಡನ್ನು ಬಿಟ್ಟು ಹೋಗುವಂತೆ ಅಂತಕಾಲದಲ್ಲಿ ವೇದಗಳು ಅವನನ್ನು ತೊರೆಯುತ್ತವೆ.

ಮದ್ಯಪಾನಂ ಕಲಹಂ ಪೂಗವೈರಂ
ಭಾರ್ಯಾಪತ್ಯೋರಂತರಂ ಜ್ಞಾತಿಭೇದಮ್ ।
ರಾಜದ್ವೇಷಂ ಸ್ತ್ರೀಪುಂಸಯೋರ್ವಿವಾದಂ
ವರ್ಜ್ಯಾನ್ಯಾಹುರ್ಯಶ್ಚ ಪಂಥಾ ಪ್ರದುಷ್ಟಃ ॥೫॥

ಮದ್ಯಪಾನ, ಕಲಹ, ಸಮೂಹದ್ವೇಷ, ಗಂಡ-ಹೆಂಡಿರನ್ನು ಒಡೆಯುವುದು, ದಾಯಾದಿಗಳನ್ನು ಒಡೆಯುವುದು, ರಾಜದ್ವೇಷ, ಸ್ತ್ರೀ-ಪುರುಷರ ಜಗಳಗಳು ಮತ್ತು ದುಷ್ಟವಾದ ಮಾರ್ಗ ಇವೆಲ್ಲವೂ ವರ್ಜ್ಯವಾದವು.

ಸಾಮುದ್ರಿಕಂ ವಣಿಜಂ ಚೋರಪೂರ್ವಂ
ಶಲಾಕಸೂತ್ರಂ ಚ ಚಿಕಿತ್ಸಕಂ ಚ ।

ಅರಿಂ ಚ ಮಿತ್ರಂ ಚ ಕುಶೀಲವಂ ಚ
ನೈತಾನ್ ಸಾಕ್ಷ್ಯೇ ತ್ವಧಿಕುರ್ವೀತ ಸಪ್ತ ॥೬॥

ಸಮುದ್ರದಲ್ಲಿ ವ್ಯಾಪಾರ ಮಾಡುವ ವರ್ತಕನನ್ನು, ಹಿಂದೆ ಕಳ್ಳನಾಗಿದ್ದವನನ್ನು, ಶಲಾಕಿಗೆ ಬಟ್ಟೆಯನ್ನು ಸುತ್ತಿ ಬೀದಿಯಲ್ಲಿ ಮಾರುವವನನ್ನು, ವೈದ್ಯನನ್ನು, ಶತ್ರುವನ್ನು, ಮಿತ್ರನನ್ನು ಮತ್ತು ನಟನನ್ನೂ – ಈ ಏಳು ಜನರನ್ನು ಎಂದೂ ಸಾಕ್ಷ್ಯಸ್ಥಾನದಲ್ಲಿ (ನಿರ್ಣಾಯಕ ಸ್ಥಾನದಲ್ಲಿ) ಕೂಡಿಸಬಾರದು.

ಮಾನಾಗ್ನಿಹೋತ್ರಮುತ ಮಾನಮೌನಂ
ಮಾನೇನಾಧೀತಮುತ ಮಾನಯಜ್ಞಃ ।
ಏತಾನಿ ಚತ್ವಾರ್ಯಭಯಂಕರಾಣಿ
ಭಯಂ ಪ್ರಯಚ್ಛಂತ್ಯಯಥಾಕೃತಾನಿ ॥೭॥

ಅಗ್ನಿಹೋತ್ರ, ಮೌನ, ಅಧ್ಯಯನ ಮತ್ತು ಯಜ್ಞ - ಈ ನಾಲ್ಕು ಅಭಯಪ್ರದವಾದವು. ಆದರೆ ಅದನ್ನೇ ಬೇರೆ ರೀತಿಯಲ್ಲಿ ಮಾಡಿದರೆ ಎಂದರೆ ಅಹಂಕಾರದಿಂದ ಮಾಡಿದ ಅಗ್ನಿಹೋತ್ರ, ಮೌನ, ಅಧ್ಯಯನ ಮತ್ತು ಯಜ್ಞಗಳು ಭಯವನ್ನುಂಟು ಮಾಡುತ್ತವೆ.

ಅಗಾರದಾಹೀ ಗರದಃ ಕುಂಡಾಶೀ ಸೋಮವಿಕ್ರಯೀ ।
ಚರ್ಮಕಾರಶ್ಚ ಸೂಚೀ ಚ ಮಿತ್ರಧ್ರುಕ್ ಪಾರದಾರಿಕಃ ॥೮॥

ಭ್ರೂಣಹಾ ಗುರುತಲ್ಪೀ ಚ ಯಶ್ಚ ಸ್ಯಾತ್ ಪಾನಪೋ ದ್ವಿಜಃ ।
ಅತಿತೀಕ್ಷ್ಣಶ್ಚ ಕಾರುಶ್ಚ ನಾಸ್ತಿಕೋ ವೇದನಿಂದಕಃ ॥೯॥

ಸುರಾಪ್ರಹಾಪಣೋ ವ್ರಾತ್ಯಃ ಕೀನಾಶಶ್ಚಾತ್ಮಹಾಽಪಿ ಚ ।
ರಕ್ಷ್ಯತ್ಯುಕ್ತಶ್ಚ ಯೋ ಹಿಂಸ್ಯಾತ್ ಸರ್ವೇ ಬ್ರಹ್ಮಹಭಿಃ ಸಮಾಃ ॥೧೦॥

ಮನೆಗೆ ಬೆಂಕಿಯನ್ನು ಕೊಟ್ಟು ಸುಡುವವನೂ, ವಿಷವನ್ನು ಕೊಡುವವನೂ, ವ್ಯಭಿಚಾರವನ್ನು ಪ್ರೋತ್ಸಾಹಿಸಿ ಜೀವಿಸುವವನೂ, ಸೋಮವಿಕ್ರಯವನ್ನು ಮಾಡುವವನೂ, ಚರ್ಮಕಾರನೂ, ಚಾಡಿಯನ್ನು ಹೇಳುವವನೂ, ಮಿತ್ರದ್ರೋಹವನ್ನು

ಮಾಡುವವನೂ, ಪರಪತ್ನೀ ಗಮನವನ್ನು ಮಾಡುವವನೂ, ಭ್ರೂಣಹತ್ಯೆಯನ್ನು ಮಾಡುವವನೂ, ಗುರುತಲ್ಪಗಾಮಿಯಾದವನೂ, ಬ್ರಾಹ್ಮಣನಾಗಿ ಮದ್ಯಪಾನವನ್ನು ಮಾಡುವವನೂ, ಬಹಳ ಉಗ್ರನಾದವನೂ, ಕಾರುವೂ, ನಾಸ್ತಿಕನೂ, ವೇದನಿಂದಕನೂ, ಮದ್ಯವನ್ನು ಮಾಡುವುದಕ್ಕಾಗಿ ಹೂವನ್ನು ಕಿತ್ತು ಎಸೆಯುವವನೂ, ವ್ರತಹೀನನೂ, ದೈನ್ಯದಿಂದ ಜೀವಿಸುವವನೂ, ಆತ್ಮಹತ್ಯೆಯನ್ನು ಮಾಡಿಕೊಳ್ಳುವವನೂ, ಶರಣಾಗತರನ್ನು ಹಿಂಸಿಸುವವನೂ ಇವರೆಲ್ಲರೂ ಬ್ರಹ್ಮಹತ್ಯೆಯನ್ನು ಮಾಡಿದವನಿಗೆ ಸಮಾನರಾದವರು.

ತೃಣೋಲ್ಕಯಾ ಜ್ವಾಲಯತೇ ಜಾತರೂಪಂ
ವೃತ್ತೇನ ಭದ್ರೋ ವ್ಯವಹಾರೇಣ ಸಾಧುಃ ।
ಶೂರೋ ಭಯೇಷ್ವರ್ಥಕೃಚ್ಛ್ರೇಷು ಧೀರಃ
ಕೃಚ್ಛ್ರಾಸ್ವಾಪತ್ಸು ಸುಹೃದಶ್ಚಾರಯಶ್ಚ ॥೧೧॥

ತೃಣದ ಮೇಲೆ ಬಿದ್ದ ಕಾಂತಿಯಿಂದ ಸುವರ್ಣವು ತಿಳಿಯುತ್ತದೆ. ನಡತೆಯಿಂದ ಮಂಗಳ ಸ್ವಭಾವವು ತಿಳಿಯಲ್ಪಡುತ್ತದೆ. ವ್ಯವಹಾರದಿಂದ ಸಜ್ಜನನು ತಿಳಿಯಲ್ಪಡುತ್ತಾನೆ. ಭಯ ಉಂಟಾದಾಗ ಶೂರನು ತಿಳಿಯಲ್ಪಡುತ್ತಾನೆ. ಕಷ್ಟಗಳು ಒದಗಿದಾಗ ಧೀರನು ತಿಳಿಯಲ್ಪಡುತ್ತಾನೆ. ಆಪತ್ತುಗಳು ಒದಗಿದಾಗ ಶತ್ರುಗಳು ಮತ್ತು ಮಿತ್ರರು ತಿಳಿಯಲ್ಪಡುತ್ತಾರೆ.

ಜರಾ ರೂಪಂ ಹರತಿ ಹಿ ಧೈರ್ಯಮಾಶಾ
ಮೃತ್ಯುಃ ಪ್ರಾಣಾನ್ ಧರ್ಮಚರ್ಯಾಮಸೂಯಾ ।
ಕ್ರೋಧಃ ಶ್ರಿಯಂ ಶೀಲಮನಾರ್ಯಸೇವಾ
ಹ್ರಿಯಂ ಕಾಮಃ ಸರ್ವಮೇವಾಭಿಮಾನಃ ॥೧೨॥

ಮುಪ್ಪು ರೂಪವನ್ನು ನಾಶಪಡಿಸುತ್ತದೆ. ಆಸೆಯು ಧೈರ್ಯವನ್ನು ನಾಶಪಡಿಸುತ್ತದೆ. ಮೃತ್ಯುವು ಪ್ರಾಣವನ್ನು, ಅಸೂಯೆಯು ಧರ್ಮವನ್ನು ನಾಶಪಡಿಸುತ್ತದೆ. ಕ್ರೋಧವು ಸಂಪತ್ತನ್ನೂ, ಅನಾರ್ಯಸೇವೆಯು ಶೀಲವನ್ನೂ, ಕಾಮವು ನಾಚಿಕೆಯನ್ನೂ, ಅಭಿಮಾನವು ಎಲ್ಲವನ್ನೂ ನಾಶಪಡಿಸುತ್ತದೆ.

ನ ಕ್ರೋಧಿನೋಽರ್ಥೋ ನ ನೃಶಂಸಸ್ಯ ಮಿತ್ರಂ
ಕ್ರೂರಸ್ಯ ನ ಸ್ತ್ರೀ ಸುಖಿನೋ ನ ವಿದ್ಯಾ ।
ನ ಕಾಮಿನೋ ಹ್ರೀರಲಸಸ್ಯ ನ ಶ್ರೀಃ
ಸರ್ವಂ ತು ನ ಸ್ಯಾದನವಸ್ಥಿತಸ್ಯ ॥೧೩॥

ಕೋಪದ ಸ್ವಭಾವವುಳ್ಳವನು ಯಾವ ಅರ್ಥವನ್ನೂ ಸಂಪಾದಿಸುವುದಿಲ್ಲ. ಕ್ರೂರಿಗೆ ಮಿತ್ರರಿರುವುದಿಲ್ಲ. ಕ್ರೂರನಾದವನಿಗೆ ಪತ್ನಿಯು ಇರುವುದಿಲ್ಲ. ಸುಖವನ್ನು ಬಯಸುವವನಿಗೆ ವಿದ್ಯೆಯು ಇರುವುದಿಲ್ಲ. ಕಾಮಿಗೆ ನಾಚಿಕೆಯೂ, ಸೋಮಾರಿಗೆ ಸಂಪತ್ತೂ ಇರುವುದಿಲ್ಲ. ಚಂಚಲನಾದವನಿಗೆ ಏನೂ ಇರುವುದಿಲ್ಲ.

ಶ್ರೀರ್ಮಂಗಲಾತ್ ಪ್ರಭವತಿ ಪ್ರಾಗಲ್ಭ್ಯಾತ್ ಸಂಪ್ರವರ್ಧತೇ ।
ದಾಕ್ಷ್ಯಾತ್ತು ಕುರುತೇ ಮೂಲಂ ಸಂಯಮಾತ್ ಪ್ರತಿತಿಷ್ಠತಿ ॥೧೪॥

ಮಂಗಳಕಾರ್ಯಗಳನ್ನು ಮಾಡುವುದರಿಂದ ಸಂಪತ್ತು ಉಂಟಾಗುತ್ತದೆ. ಔದಾರ್ಯದಿಂದ ಅದು ಹೆಚ್ಚುತ್ತದೆ. ದಕ್ಷತೆಯಿಂದ ಅದು ಬೇರನ್ನು ಪಡೆಯುತ್ತದೆ. ಸಂಯಮಗಳಿಂದ ಭದ್ರವಾಗಿ ನಿಲ್ಲುತ್ತದೆ.

ಅಷ್ಟೌ ಗುಣಾಃ ಪುರುಷಂ ದೀಪಯಂತಿ
ಪ್ರಜ್ಞಾ ಚ ಕೌಲ್ಯಂ ಚ ದಮಃ ಶ್ರುತಂ ಚ ।
ಪರಾಕ್ರಮಶ್ಚಾಬಹುಭಾಷಿತಾ ಚ
ದಾನಂ ಯಥಾಶಕ್ತಿ ಕೃತಜ್ಞತಾ ಚ ॥೧೫॥

ಪ್ರಜ್ಞಾ, ಕುಲ, ದಮ, ವಿದ್ಯೆ, ಪರಾಕ್ರಮ, ಅಲ್ಪಭಾಷಿತಾ, ಯಥಾಶಕ್ತಿ ದಾನ ಮತ್ತು ಕೃತಜ್ಞತೆ - ಈ ಎಂಟುಗುಣಗಳು ಮನುಷ್ಯನನ್ನು ಬೆಳಗುತ್ತವೆ.

ಏತಾನ್ ಗುಣಾಂಸ್ತಾತ ಮಹಾನುಭಾವಾನ್
ಏಕೋ ಗುಣಃ ಸಂಶ್ರಯತೇ ಪ್ರಸಹ್ಯ ।
ರಾಜಾ ಯದಾ ಸಂಶ್ರಯತೇ ಮನುಷ್ಯಾನ್
ಸರ್ವಾನ್ ಗುಣಾನೇಷ ಗುಣೋಽತಿಭಾತಿ ॥೧೬॥

ಪ್ರೀತಿಪಾತ್ರನೇ, ಈ ಮಹಾಸಾಮರ್ಥ್ಯವುಳ್ಳ ಎಂಟುಗುಣಗಳನ್ನು ಒಂದೇ ಗುಣವು ತನ್ನ ಬಲದಿಂದ ಆಶ್ರಯಿಸಿಕೊಂಡಿರುತ್ತದೆ. ರಾಜನು ಯೋಗ್ಯರಾದ ಮನುಷ್ಯರನ್ನು ಸತ್ಕರಿಸಿದರೆ ಆ ಗುಣವು ಉಳಿದ ಎಲ್ಲಾ ಗುಣಗಳಿಗಿಂತಲೂ ಹೆಚ್ಚಾಗಿ ಮೆರೆಯುತ್ತದೆ.

ಅಷ್ಟೌ ನೃಪೇಮಾನಿ ಮನುಷ್ಯಲೋಕೇ
ಸ್ವರ್ಗಸ್ಯ ಲೋಕಸ್ಯ ನಿದರ್ಶನಾನಿ ।
ಯಜ್ಞೋ ದಾನಮಧ್ಯಯನಂ ತಪಶ್ಚ
ಚತ್ವಾರ್ಯೇತಾನ್ಯನ್ವವೇತಾನಿ ಸದ್ಭಿಃ ॥೧೭॥

ದಮಃ ಸತ್ಯಮಾರ್ಜವಮಾನೃಶಂಸ್ಯಂ
ಚತ್ವಾರ್ಯೇತಾನ್ಯನ್ವವಯಂತಿ ಸಂತಃ ॥೧೮॥

ಎಲೈ ರಾಜೇಂದ್ರನೇ, ಮನುಷ್ಯಲೋಕದಲ್ಲಿ ಎಂಟು ವಸ್ತುಗಳು ಸ್ವರ್ಗಲೋಕಕ್ಕೆ ಕಾರಣವಾದವುಗಳು. ಯಜ್ಞ, ದಾನ, ಅಧ್ಯಯನ ಮತ್ತು ತಪಸ್ಸು ಇವು ಸ್ವರ್ಗಕ್ಕೆ ಸಾಧನವಾಗಿ ಸ್ವರ್ಗಕ್ಕೆ ಹೋಗುವುದಕ್ಕಿಂತಲೂ ಮುಂಚೆಯಿಂದಲೂ ಇರಬೇಕೆಂದು ಸಜ್ಜನರು ತಿಳಿಯುತ್ತಾರೆ. ದಮ, ಸತ್ಯ, ಆರ್ಜವ ಮತ್ತು ಮಾರ್ದವ- ಈ ನಾಲ್ಕು ಗುಣಗಳು ಸ್ವರ್ಗಕ್ಕಿಂತ ಮುಂಚೆಯೂ ಮತ್ತು ಸ್ವರ್ಗದಲ್ಲಿಯೂ ಇರಬೇಕಾದುದೆಂದು ಸಜ್ಜನರು ತಿಳಿಯುತ್ತಾರೆ.

ಇಜ್ಯಾಧ್ಯಯನದಾನಾನಿ ತಪಃ ಸತ್ಯಂ ಘೃಣಾ ಕ್ಷಮಾ ।
ಅಲೋಭ ಇತಿ ಮಾರ್ಗೋಽಯಂ ಧರ್ಮಸ್ಯಾಷ್ಟವಿಧಃ ಸ್ಮೃತಃ ॥೧೯॥

ಯಾಗ, ಅಧ್ಯಯನ, ದಾನ, ತಪಸ್ಸು, ಸತ್ಯ, ಕರುಣೆ, ಕ್ಷಮೆ, ಅಲೋಭ ಇವು ಧರ್ಮದ ಎಂಟು ವಿಧವಾದ ಮಾರ್ಗಗಳು.

ನ ಸಾ ಸಭಾ ಯತ್ರ ನ ಸಂತಿ ವೃದ್ಧಾ
ನ ತೇ ವೃದ್ಧಾ ಯೇ ನ ವದಂತಿ ಧರ್ಮಮ್ ।
ನಾಸೌ ಧರ್ಮೋ ಯತ್ರ ನ ಸತ್ಯಮಸ್ತಿ
ನ ತತ್ಸತ್ಯಂ ಯಚ್ಛಲೇನಾನುವಿದ್ಧಮ್ ॥೨೦॥

ಎಲ್ಲಿ ವೃದ್ಧರು ಇರುವುದಿಲ್ಲವೋ ಅದು ಸಭೆಯಲ್ಲ. ಯಾರು ಧರ್ಮವನ್ನು ಹೇಳುವುದಿಲ್ಲವೋ ಅವರು ವೃದ್ಧರಲ್ಲ. ಎಲ್ಲಿ ಸತ್ಯವಿಲ್ಲವೋ ಅದು ಧರ್ಮವಲ್ಲ. ಯಾವುದು ಕಪಟದಿಂದ ಸೇರಿರುತ್ತದೆಯೋ ಅದು ಸತ್ಯವಲ್ಲ.

**ಸತ್ಯಂ ರೂಪಂ ಶ್ರುತಂ ವಿದ್ಯಾ ಕೌಲ್ಯಂ ಶೀಲಂ ಬಲಂ ಧನಮ್ ।**
**ಶೌರ್ಯಂ ಚ ಚಿತ್ರಭಾಷ್ಯಂ ಚ ದಶೇಮೇ ಸ್ವರ್ಗಯೋನಯಃ ॥೨೧॥**

ಸತ್ಯ, ರೂಪ, ಶ್ರವಣ, ವಿದ್ಯೆ, ಕುಲ, ಶೀಲ, ಬಲ, ಧನ, ಶೌರ್ಯ ಮತ್ತು ಒಳ್ಳೆಯ ಮಾತು- ಈ ಹತ್ತು ಸ್ವರ್ಗಕ್ಕೆ ಕಾರಣವಾದವುಗಳು.

**ಪಾಪಂ ಕುರ್ವನ್ ಪಾಪಕೀರ್ತಿಃ ಪಾಪಮೇವಾಶ್ನುತೇ ಫಲಮ್ ।**
**ಪುಣ್ಯಂ ಕುರ್ವನ್ ಪುಣ್ಯಕೀರ್ತಿಃ ಪುಣ್ಯಮತ್ಯಂತಮಶ್ನುತೇ ॥೨೨॥**

**ತಸ್ಮಾತ್ ಪಾಪಂ ನ ಕುರ್ವೀತ ಪುರುಷಃ ಸಂಶಿತವ್ರತಃ ॥೨೩॥**

ಪಾಪವನ್ನು ಮಾಡುವವನು ಅಪಕೀರ್ತಿಯನ್ನು ಪಡೆದು ಪಾಪದ ಫಲವನ್ನೇ ಹೊಂದುತ್ತಾನೆ. ಪುಣ್ಯವನ್ನು ಮಾಡುವವನು ಪವಿತ್ರವಾದ ಕೀರ್ತಿಯನ್ನು ಹೊಂದಿ ಪುಣ್ಯರೂಪವಾದ ಫಲವನ್ನೇ ಪಡೆಯುತ್ತಾನೆ. ಆದ್ದರಿಂದ ಒಳ್ಳೆಯ ವ್ರತಶೀಲನಾದ ಪುರುಷನು ಪಾಪವನ್ನು ಮಾಡಬಾರದು.

**ಪಾಪಂ ಪ್ರಜ್ಞಾಂ ನಾಶಯತಿ ಕ್ರಿಯಮಾಣಂ ಪುನಃ ಪುನಃ ।**
**ನಷ್ಟಪ್ರಜ್ಞಃ ಪಾಪಮೇವ ನಿತ್ಯಮಾರಭತೇ ನರಃ ॥೨೪॥**

ಪುನಃ ಪುನಃ ಪಾಪವನ್ನು ಮಾಡಿದರೆ ಅದು ಪ್ರಜ್ಞೆಯನ್ನು ನಾಶಮಾಡುತ್ತದೆ. ಪ್ರಜ್ಞೆಯು ನಾಶವಾದ ಮೇಲೆ ಮನುಷ್ಯನು ಯಾವಾಗಲೂ ಪಾಪವನ್ನೇ ಮಾಡಲು ಆರಂಭಿಸುತ್ತಾನೆ.

**ಪುಣ್ಯಂ ಪ್ರಜ್ಞಾಂ ವರ್ಧಯತಿ ಕ್ರಿಯಮಾಣಂ ಪುನಃ ಪುನಃ ।**
**ವೃದ್ಧಪ್ರಜ್ಞಃ ಪುಣ್ಯಮೇವ ನಿತ್ಯಮಾರಭತೇ ನರಃ ॥೨೫॥**

ಪುನಃ ಪುನಃ ಮಾಡಲ್ಪಡುವ ಪುಣ್ಯವು ಪ್ರಜ್ಞೆಯನ್ನು ಹೆಚ್ಚಿಸುತ್ತದೆ. ಅಂತಹ ಪ್ರಜ್ಞೆಯುಳ್ಳ ಮನುಷ್ಯನು ನಿತ್ಯವೂ ಪುಣ್ಯವನ್ನೇ ಮಾಡಲು ಪ್ರಾರಂಭಿಸುತ್ತಾನೆ.

ಪುಣ್ಯಂ ಕುರ್ವನ್ ಪುಣ್ಯಕೀರ್ತಿಃ ಪುಣ್ಯಂ ಸ್ಥಾನಂ ಸ್ಮ ಗಚ್ಛತಿ ।
ತಸ್ಮಾತ್ ಪುಣ್ಯಂ ನಿಷೇವೇತ ಪುರುಷಃ ಸುಸಮಾಹಿತಃ ॥೨೬॥

ಪುಣ್ಯವನ್ನು ಮಾಡುವವನು ಪವಿತ್ರವಾದ ಕೀರ್ತಿಯನ್ನು ಪಡೆದು ಪುಣ್ಯಸ್ಥಾನಕ್ಕೆ ಹೋಗುತ್ತಾನೆ. ಆದ್ದರಿಂದ ಸಮಾಧಾನವುಳ್ಳ ಪುರುಷನು ಪುಣ್ಯವನ್ನೇ ಮಾಡಬೇಕು.

ಅಸೂಯಕೋ ಅಕೃತಪ್ರಜ್ಞಃ ನಿಷ್ಕುರೋ ವೈರಕೃಚ್ಛಠಃ ।
ಸ ಕೃಚ್ಛ್ರಂ ಮಹದಾಪ್ನೋತಿ ನಚಿರಾತ್ ಪಾಪಮಾಚರನ್ ॥೨೭॥

ಅಸೂಯೆಯನ್ನು ಪಡುವವನು ಮತ್ತು ಅವಿವೇಕಿಯಾದವನು ನಿಷ್ಕುರಿಯು, ವೈರವನ್ನು ಮಾಡುವವನು ಮತ್ತು ಶಠನು ಶೀಘ್ರವಾಗಿ ಪಾಪವನ್ನು ಆಚರಿಸಿ ದೊಡ್ಡ ಕಷ್ಟಕ್ಕೆ ಸಿಲುಕುತ್ತಾನೆ.

ಅನಸೂಯುಃ ಕೃತಪ್ರಜ್ಞಃ ಶೋಭನಾನ್ಯಾಚರನ್ ಸದಾ ।
ಶುಭಂ ಮಹದವಾಪ್ನೋತಿ ಸರ್ವತ್ರ ಚ ವಿರೋಚತೇ ॥೨೮॥

ಅಸೂಯೆ ಇಲ್ಲದವನು, ವಿವೇಕಿಯಾದವನು ಯಾವಾಗಲೂ ಒಳ್ಳೆಯ ಕಾರ್ಯವನ್ನೇ ಮಾಡುತ್ತಾ ದೊಡ್ಡ ಶುಭವನ್ನು ಹೊಂದುತ್ತಾನೆ. ಎಲ್ಲ ಕಡೆಗಳಲ್ಲಿಯೂ ಶೋಭಿಸುತ್ತಾನೆ.

ಪ್ರಜ್ಞಾಮೇವಾಭಿಗಮಯತಿ ಯಃ ಪ್ರಾಜ್ಞೇಭ್ಯಃ ಸ ಪಂಡಿತಃ ।
ಪ್ರಾಜ್ಞೋ ಹ್ಯವಾಪ್ಯ ಧರ್ಮಾರ್ಥೌ ಶಕ್ನೋತಿ ಸುಖಮೇಧಿತುಮ್॥೨೯॥

ಯಾವನು ಪ್ರಾಜ್ಞರಿಂದ ಪ್ರಜ್ಞೆಯನ್ನೇ ಸಂಪಾದಿಸುತ್ತಾನೆಯೋ ಅವನು ಪಂಡಿತನಾದವನು. ಪ್ರಾಜ್ಞನಾದವನು ಧರ್ಮಾರ್ಥಗಳನ್ನು ಹೊಂದಿ ಸುಖವನ್ನು ಅನುಭವಿಸಲು ಸಮರ್ಥನಾಗುತ್ತಾನೆ.

ದಿವಸೇನೈವ ತತ್ಕುರ್ಯಾದ್ ಯೇನ ರಾತ್ರೌ ಸುಖಂ ವಸೇತ್ ।
ಅಷ್ಟಮಾಸೇನ ತತ್ ಕುರ್ಯಾದ್ ಯೇನ ವರ್ಷಂ ಸುಖಂ ವಸೇತ್ ॥

ರಾತ್ರಿಯಲ್ಲಿ ಸುಖವಾಗಿರಬೇಕಾದರೆ ಹಗಲಿನಲ್ಲಿಯೇ ಎಲ್ಲ ಕೆಲಸವನ್ನೂ ಮುಗಿಸಬೇಕು. ಒಂದು ವರ್ಷದ ಕಾಲ ಸುಖವಾಗಿರಬೇಕಾದರೆ ವರ್ಷದ ಕೆಲಸವನ್ನು ಎಂಟು ತಿಂಗಳಿನಲ್ಲಿಯೇ ಮುಗಿಸಬೇಕು.

ಪೂರ್ವೇ ವಯಸಿ ತತ್ ಕುರ್ಯಾದ್ ಯೇನ ವೃದ್ಧಃ ಸುಖಂ ವಸೇತ್ ।
ಯಾವಜ್ಜೀವಂ ತು ತತ್ ಕುರ್ಯಾದ್ ಯೇನ ಪ್ರೇತ್ಯ ಸುಖಂ ವಸೇತ್

ವೃದ್ಧನಾಗಿ ಸುಖವಾಗಿರಬೇಕಾದರೆ ಪೂರ್ವವಯಸ್ಸಿನಲ್ಲಿ ಎಲ್ಲವನ್ನೂ ಮಾಡಬೇಕು. ಮರಣಾನಂತರದಲ್ಲಿ ಸುಖವಾಗಿರಬೇಕಾದರೆ ಜೀವನದುದ್ದಕ್ಕೂ ಅಂತಹ ಕಾರ್ಯವನ್ನು ಮಾಡಬೇಕು.

ಜೀರ್ಣಮನ್ನಂ ಪ್ರಶಂಸಂತಿ ಭಾರ್ಯಾಂ ಚ ಗತಯೌವನಾಮ್ ।
ಶೂರಂ ವಿಜಿತಸಂಗ್ರಾಮಂ ಗತಪಾರಂ ತಪಸ್ವಿನಮ್ ॥೩೨॥

ಅರಗಿದ ಅನ್ನವನ್ನು ಪ್ರಶಂಸಿಸುತ್ತಾರೆ. ಯೌವನವನ್ನು ಕಳೆದ ಭಾರ್ಯೆಯನ್ನು ಪ್ರಶಂಸಿಸುತ್ತಾರೆ. ಯುದ್ಧದಲ್ಲಿ ಗೆದ್ದ ಶೂರನನ್ನು ಮತ್ತು ಸಂಕಲ್ಪವನ್ನು ಪೂರೈಸಿದ ತಪಸ್ವಿಯನ್ನು ಪ್ರಶಂಸಿಸುತ್ತಾರೆ.

ಧನೇನಾಧರ್ಮಲಬ್ಧೇನ ಯಚ್ಛಿದ್ರಮಪಿಧೀಯತೇ ।
ಅಸಂವೃತಂ ತದ್ ಭವತಿ ತತೋಽನ್ಯದವದೀರ್ಯತೇ ॥೩೩॥

ಅಧರ್ಮದಿಂದ ಪ್ರಾಪ್ತವಾದ ಧನದಿಂದ ನಡತೆಯ ಛಿದ್ರವನ್ನು ಮುಚ್ಚಲು ಪ್ರಯತ್ನಿಸಿದರೆ ಅದು ಮುಚ್ಚಿಕೊಳ್ಳುವುದಿಲ್ಲ. ಇನ್ನೊಂದು ಕಡೆ ಬಿರಿಯುತ್ತದೆ.

ಗುರುರಾತ್ಮವತಾಂ ಶಾಸ್ತಾ ಶಾಸ್ತಾ ರಾಜಾ ದುರಾತ್ಮನಾಮ್ ।
ಅಂತಃಪ್ರಚ್ಛನ್ನಪಾಪಾನಾಂ ಶಾಸ್ತಾ ವೈವಸ್ವತೋ ಯಮಃ ॥೩೪॥

ಮುನಿಗಳಿಗೆ ಗುರುವು ಶಾಸನವನ್ನು ಮಾಡುತ್ತಾನೆ. ದುಷ್ಟರಿಗೆ ರಾಜನು ಶಾಸನವನ್ನು ಮಾಡುತ್ತಾನೆ. ಇನ್ನೊಬ್ಬರಿಗೆ ಕಾಣದಂತೆ ಮಾಡಿದ ಪಾಪಗಳಿಗೆಲ್ಲಾ ಯಮನು ಶಾಸನವನ್ನು ಮಾಡುತ್ತಾನೆ.

ಋಷೀಣಾಂ ಚ ನದೀನಾಂ ಚ ಕುಲಾನಾಂ ಚ ಮಹಾತ್ಮನಾಮ್ ।
ಪ್ರಭವೋ ನಾಧಿಗಂತವ್ಯಃ ಸ್ತ್ರೀಣಾಂ ದುಶ್ಚರಿತಸ್ಯ ಚ ॥೩೫॥

ಋಷಿಗಳ, ನದಿಗಳ, ಕುಲಗಳ ಮತ್ತು ಮಹಾತ್ಮರ ಮೂಲವನ್ನು ಹುಡುಕಬಾರದು. ಸ್ತ್ರೀಯರ ದುಶ್ಚರಿತ್ರದ ಮೂಲವನ್ನೂ ಹುಡುಕಬಾರದು.

ದ್ವಿಜಾತಿಪೂಜಾಭಿರತೋ ದಾತಾ ಜ್ಞಾತಿಷು ಚಾರ್ಜವೀ ।
ಕ್ಷತ್ರಿಯಃ ಶೀಲಭಾಗ್ ರಾಜನ್ ಚಿರಂ ಪಾಲಯತೇ ಮಹೀಮ್ ॥೩೬॥

ಬ್ರಾಹ್ಮಣರ ಪೂಜೆಯಲ್ಲಿ ನಿರತನಾಗಿ ದಾನವನ್ನು ಮಾಡುವ ಜ್ಞಾತಿಗಳಲ್ಲಿ ನೇರವಾಗಿ ನಡೆದುಕೊಳ್ಳುವ ಶೀಲವಂತನಾದ ಕ್ಷತ್ರಿಯನು ಎಲೈ ರಾಜನೇ, ಬಹುಕಾಲ ಭೂಮಿಯನ್ನು ಆಳುತ್ತಾನೆ.

ಸುವರ್ಣಪುಷ್ಪಾಂ ಪೃಥಿವೀಂ ಚಿನ್ವಂತಿ ಪುರುಷಾಸ್ತ್ರಯಃ ।
ಶೂರಶ್ಚ ಕೃತವಿದ್ಯಶ್ಚ ಯಶ್ಚ ಜಾನಾತಿ ಸೇವಿತುಮ್ ॥೩೭॥

ಶೂರನಾದವನು, ವಿದ್ಯೆಯನ್ನು ಸಂಪಾದಿಸಿದವನು, ಇನ್ನೊಬ್ಬನ ಸೇವೆಯನ್ನು ಮಾಡಲು ತಿಳಿದಿರುವವನು - ಈ ಮೂರು ಜನರು ಭೂಮಿಯಿಂದ ಸುವರ್ಣ ಪುಷ್ಪವನ್ನು ಆರಿಸಿಕೊಳ್ಳುತ್ತಾರೆ.

ಬುದ್ಧಿಶ್ರೇಷ್ಠಾನಿ ಕರ್ಮಾಣಿ ಬಾಹುಮಧ್ಯಾನಿ ಭಾರತ ।
ತಾನಿ ಜಹ್ಯಾಜ್ಜಘನ್ಯಾನಿ ಭಾರಪ್ರತ್ಯವರಾಣಿ ಚ ॥೩೮॥

ಬುದ್ಧಿಯಿಂದ ಮಾಡುವ ರಾಜ್ಯಪರಿಪಾಲನೆ ಮುಂತಾದ ವೀರಕ್ಷತ್ರಿಯ ಕರ್ಮಗಳು ಶ್ರೇಷ್ಠವಾದವುಗಳು. ಬಾಹುವಿನಿಂದ ಮಾಡುವ ಕೃಷಿ-ವಾಣಿಜ್ಯಾದಿ ವೈಶ್ಯಕರ್ಮಗಳು ಮಧ್ಯಮವಾದವು. ಭಾರವನ್ನು ಹೊರುವುದು ಮುಂತಾದ ಕಾರ್ಯಗಳು ನೀಚಕಾರ್ಯಗಳು. ಮನುಷ್ಯನು ನೀಚಕಾರ್ಯಗಳನ್ನೇ ತ್ಯಜಿಸಬೇಕು (ಉತ್ತಮ, ಮಧ್ಯಮ ಕಾರ್ಯಗಳನ್ನು ತ್ಯಜಿಸಬಾರದು).

ದುರ್ಯೋಧನೇऽಥ ಶಕುನೌ ಮೂಢೇ ದುಃಶಾಸನೇ ತಥಾ ।
ಕರ್ಣೇ ಚೈಶ್ವರ್ಯಮಾಧಾಯ ಕಥಂ ತ್ವಂ ಭೂತಿಮಿಚ್ಛಸಿ ॥೩೯॥

ನೀನು ದುರ್ಯೋಧನ, ಶಕುನಿ, ಮೂಢನಾದ ದುಃಶಾಸನ ಮತ್ತು ಕರ್ಣರಲ್ಲಿ ಐಶ್ವರ್ಯವನ್ನು ತುಂಬಿ ಹೇಗೆ ಕ್ಷೇಮವನ್ನು ಬಯಸುತ್ತೀಯೆ?

ಸರ್ವೈರ್ಗುಣೈರುಪೇತಾಸ್ತು ಪಾಂಡವಾ ಭರತರ್ಷಭ ।
ಪಿತೃವತ್ ತ್ವಯಿ ವರ್ತಂತೇ ತೇಷು ವರ್ತಸ್ವ ಪುತ್ರವತ್ ॥೪೦॥

ಎಲೈ ಭರತರ್ಷಭನೇ, ಪಾಂಡವರು ಎಲ್ಲ ಗುಣಗಳಿಂದಲೂ ಕೂಡಿದವರು. ನಿನ್ನನ್ನು ತಂದೆಯಂತೆ ಅವರು ನೋಡುತ್ತಾರೆ. ನೀನು ಅವರೊಂದಿಗೆ ನಿನ್ನ ಮಕ್ಕಳಂತೆ ವರ್ತಿಸು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಪಂಚತ್ರಿಂಶೋಽಧ್ಯಾಯಃ ॥
ಪ್ರಜಾಗರಪರ್ವಣಿ ಚತುರ್ಥೋಽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಮೂವತ್ತೈದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

## ಮೂವತ್ತಾರನೆಯ ಅಧ್ಯಾಯ

ವಿದುರನಿಂದ ಧೃತರಾಷ್ಟ್ರನಿಗೆ ಆತ್ರೇಯೋಕ್ತನೀತಿಕಥನ.

ವಿದುರಃ

ಅತ್ರೈವೋದಾಹರಂತೀಮಮ್ ಇತಿಹಾಸಂ ಪುರಾತನಮ್ ।
ಆತ್ರೇಯಸ್ಯ ಚ ಸಂವಾದಂ ಸಾಧ್ಯಾನಾಂ ಚೇತಿ ನಃ ಶ್ರುತಮ್ ॥೧॥

ವಿದುರ– ಇದೇ ವಿಷಯದಲ್ಲಿ ಆತ್ರೇಯರಿಗೂ ಮತ್ತು ಸಾಧ್ಯರಿಗೂ ನಡೆದ ಪುರಾತನವಾದ ಇತಿಹಾಸವನ್ನು ಹಿರಿಯರು ಹೇಳುತ್ತಾರೆ ಎಂದು ನಾವು ಕೇಳಿದ್ದೇವೆ.

ಚರಂತಂ ಹಂಸರೂಪೇಣ ಮಹರ್ಷಿಂ ಸಂಶಿತವ್ರತಮ್ ।
ಸಾಧ್ಯಾ ದೇವಾ ಮಹಾಪ್ರಾಜ್ಞಂ ಪರ್ಯಪೃಚ್ಛಂತ ವೈ ಪುರಾ ॥೨॥

ಒಳ್ಳೆಯ ವ್ರತಧಾರಿಗಳಾದ ಹಂಸರೂಪದಿಂದ ಚಲಿಸುತ್ತಿದ್ದ ಮಹಾಪ್ರಾಜ್ಞರಾದ ಮಹರ್ಷಿಗಳಾದ ಆತ್ರೇಯರನ್ನು ಕುರಿತು ಹಿಂದೆ ಸಾಧ್ಯ ದೇವತೆಗಳು ಪ್ರಶ್ನೆಯನ್ನು ಮಾಡಿದರು.

ಸಾಧ್ಯಾಃ

ಸಾಧ್ಯಾ ದೇವಾ ವಯಮೇತೇ ಮಹರ್ಷೇ
ದೃಷ್ಟ್ವಾ ಭವಂತಂ ನ ಶಕ್ನುಮೋಽನುಮಾತುಮ್ ।

ಶ್ರುತೇನ ಧೀರೋ ಬುದ್ಧಿಮಾಂಸ್ತ್ವಂ ಮತೋ ನಃ
ಕಾವ್ಯಾಂ ವಾಚಂ ವಕ್ತುಮರ್ಹಸ್ಯುದಾರಮ್ ॥೩॥

ಸಾಧ್ಯರು– ಮಹರ್ಷಿಗಳೇ, ಈ ನಾವು ಸಾಧ್ಯಗಣಕ್ಕೆ ಸೇರಿದ ದೇವತೆಗಳು. ನಿಮ್ಮನ್ನು ನೋಡಿ ನೀವು ಯಾರೆಂದು ತಿಳಿಯಲು ಸಾಧ್ಯವಾಗುತ್ತಿಲ್ಲ. ನಿಮ್ಮ ವಿದ್ಯೆಯಿಂದ ನೀವು ಧೀರರು ಮತ್ತು ಮೇಧಾವಿಗಳು ಎಂದು ನಾವು ತಿಳಿದಿದ್ದೇವೆ. ನೀವು ಉದಾರವಾದ ಮತ್ತು ಜ್ಞಾನಪೂರ್ವಕವಾದ ಮಾತುಗಳನ್ನು ಆಡಬೇಕು.

ಹಂಸಃ

ಏತತ್ ಕಾರ್ಯಮಮರಾಃ ಸಂಶ್ರುತಂ ಮೇ
ಧೃತಿಃ ಶಮಃ ಸತ್ಯಧರ್ಮಾನುವೃತ್ತಿಃ ।
ಗ್ರಂಥಿಂ ವಿಭಿದ್ಯ ಹೃದಯಸ್ಯ ಸರ್ವಂ
ಪ್ರಿಯಾಪ್ರಿಯೇ ಚಾನುಶಮಂ ನಯೀತ ॥೪॥

ಹಂಸ– ದೇವತೆಗಳೇ, ಧೈರ್ಯ, ಶಮ, ಸತ್ಯ, ಧರ್ಮಗಳ ಪಾಲನೆ ಇದನ್ನು ಮಾಡಬೇಕೆಂದು ನಾನು ಬಹಳವಾಗಿ ಕೇಳಿದ್ದೇನೆ. ಇವು ಹೃದಯಗ್ರಂಥಿಯಾದ ಅಜ್ಞಾನವನ್ನು ಭೇದಿಸಿ ಮನುಷ್ಯನನ್ನು ಮೋಕ್ಷದ ಕಡೆಗೆ ಕರೆದೊಯ್ಯುತ್ತವೆ.

ಆಕ್ರುಶ್ಯಮಾನೋ ನಾಕ್ರೋಶೇನ್ಮನ್ಯುರೇವ ತಿತಿಕ್ಷತಃ ।
ಆಕ್ರೋಷ್ಟಾರಂ ನಿರ್ದಹತಿ ಸುಕೃತಂ ಚಾಸ್ಯ ವಿಂದತಿ ॥೫॥

ಕಿರುಚಿ ನಿಂದಿಸುವವರನ್ನು ಕುರಿತು ಪ್ರತಿಯಾಗಿ ಕಿರುಚಬಾರದು. ಅದನ್ನು ಸಹಿಸುವವನ ಕೋಪವೇ ನಿಂದಿಸುವವನನ್ನು ಜಯಿಸುತ್ತದೆ ಮತ್ತು ಅವನ ಪುಣ್ಯವನ್ನು ಅಪಹರಿಸುತ್ತದೆ.

ನಾಕ್ರೋಶೀ ಸ್ಯಾನ್ನಾವಮಾನೀ ಪರಸ್ಯ
ಮಿತ್ರದ್ರೋಹೀ ನೋತ ನೀಚೋಪಸೇವೀ ।
ನ ಚಾಭಿಮಾನೀ ನ ಚ ನೀಚವೃತ್ತೋ
ನೀಚಾಂ ವಾಚಂ ರುಶತೀಂ ವರ್ಜಯೇತ ॥೬॥

ಇನ್ನೊಬ್ಬರ ಬಗ್ಗೆ ಆಕ್ರೋಶವನ್ನು ಮಾಡಬಾರದು. ಅವಮಾನವನ್ನಾಗಲೀ, ಮಿತ್ರದ್ರೋಹವನ್ನಾಗಲೀ, ನೀಚಸೇವೆಯನ್ನಾಗಲೀ ಮಾಡಬಾರದು. ಅಹಂಕಾರವನ್ನು ಮಾಡಬಾರದು. ನೀಚವಾದ ನಡತೆಯನ್ನು ಹೊಂದಬಾರದು. ನೀಚವಾದ ಅಮಂಗಳವಾದ ಮಾತುಗಳನ್ನು ಆಡಬಾರದು.

ಮರ್ಮಾಣ್ಯಸ್ಥೀನಿ ಹೃದಯಂ ತಥಾऽಸೂನ್
ರೂಕ್ಷಾ ವಾಚೋ ನಿರ್ದಹಂತೀಹ ಪುಂಸಾಮ್ ।
ತಸ್ಮಾದ್ ವಾಚಂ ರುಶತೀಂ ರೂಕ್ಷರೂಪಾಂ
ಧರ್ಮಾರಾಮೋ ನಿತ್ಯಶೋ ವರ್ಜಯೀತ ॥೭॥

ಕ್ರೂರವಾದ ಮಾತುಗಳು ಮನುಷ್ಯರ ಮರ್ಮಗಳನ್ನೂ, ಅಸ್ಥಿಗಳನ್ನೂ, ಹೃದಯವನ್ನೂ ಮತ್ತು ಪ್ರಾಣಗಳನ್ನೂ ದಹಿಸುತ್ತವೆ. ಆದ್ದರಿಂದ ಧರ್ಮಾಸಕ್ತನಾದವನು ಅಮಂಗಳವಾದ ಮತ್ತು ಕ್ರೂರವಾದ ಮಾತುಗಳನ್ನು ಯಾವಾಗಲೂ ವರ್ಜಿಸಬೇಕು.

ಅರುಂತುದಂ ಪರುಷಂ ರೂಕ್ಷವಾಚಂ
ವಾಕ್ಕಂಟಕೈರ್ವಿತುದಂತಂ ಮನುಷ್ಯಾನ್ ।
ವಿದ್ಯಾದಲಕ್ಷ್ಮೀಕತಮಂ ಜನಾನಾಂ
ಮುಖೇ ನಿಬದ್ಧಾಂ ನಿರ್ಋತಿಂ ವೈ ವಹಂತಮ್ ॥೮॥

ಇನ್ನೊಬ್ಬರ ಮರ್ಮವನ್ನು ಭೇದಿಸುವಂತಹ ಒರಟಾದ ಮತ್ತು ಕ್ರೂರವಾದ ಮಾತುಗಳನ್ನು ಆಡುವಂತಹ ತನ್ನ ಮಾತು ಎಂಬ ಬಿಲ್ಲುಗಳಿಂದ ಇನ್ನೊಬ್ಬರನ್ನು ಚುಚ್ಚುವಂತಹ ಮನುಷ್ಯನನ್ನು ಪುರುಷರಲ್ಲಿ ಅಮಂಗಳಸ್ವರೂಪನೆಂದೂ, ಮುಖದಲ್ಲಿಯೇ ರಾಕ್ಷಸನನ್ನು ಹೊಂದಿರುವವನೆಂದೂ ತಿಳಿಯಬೇಕು.

ಪರಶ್ಚೇದೇನಮಭಿವಿದ್ಧ್ಯೇತ ಬಾಣೈಃ
ಭೃಶಂ ಸುತೀಕ್ಷ್ಣೈರನಲಾರ್ಕದೀಪ್ತೈಃ ।
ವಿರಿಂಚಮಾನೋऽಪ್ಯತಿರಿಚ್ಯಮಾನೋ
ವಿದ್ಯಾತ್ ಕವಿಃ ಸುಕೃತಂ ಮೇ ದಧಾತಿ ॥೯॥

ಇನ್ನೊಬ್ಬನು ಬಹಳ ತೀಕ್ಷ್ಣವಾದ ಅಗ್ನಿ-ಸೂರ್ಯರಂತೆ ದೀಪ್ತವಾದ ವಾಗ್ಬಾಣಗಳಿಂದ ಹಿಂಸಿಸಿದರೂ ಬ್ರಹ್ಮಾದಿಗಳೂ ಕೂಡ ತಾವು ಅತಿಶಯವನ್ನು

ಹೊಂದುವುದಾದರೆ, ಪ್ರತಿಯಾಗಿ ವಾಗ್ಬಾಣಗಳಿಂದ ಅವನನ್ನು ಹಿಂಸಿಸದಿದ್ದರೆ ಅವನನ್ನು ಜ್ಞಾನಿ ಎಂದು ತಿಳಿಯಬೇಕು. ಅವನು ನನಗೆ ತನ್ನ ಪುಣ್ಯವನ್ನು ಕೊಡುತ್ತಿದ್ದಾನೆ ಎಂದು ತಿಳಿಯಬೇಕು.

ಯದಿ ಸಂತಂ ಸೇವತೇ ಯದ್ಯಸಂತಂ
ತಪಸ್ವಿನಂ ಯದಿ ವಾ ಸ್ತೇನಮೇವ ।
ವಾಸೋ ಯಥಾ ರಾಗವಶಂ ಪ್ರಯಾತಿ
ತಥಾ ಸ ತೇಷಾಂ ವಶಮಭ್ಯುಪೈತಿ ॥೧೦॥

ಸಜ್ಜನರನ್ನು ಅಥವಾ ದುರ್ಜನರನ್ನು ಸೇವಿಸಿದರೆ, ತಪಸ್ವಿಯನ್ನು ಅಥವಾ ಕಳ್ಳನನ್ನು ಸೇವಿಸಿದರೆ, ಬಣ್ಣಗಳ ಜೊತೆಯಲ್ಲಿಟ್ಟ ವಸ್ತ್ರವು ಹೇಗೆ ಬಣ್ಣಗಳ ವಶವಾಗುತ್ತದೆಯೋ ಹಾಗೆಯೇ ಅವರಿಗೆ ವಶನಾಗುತ್ತಾನೆ.

ಅತಿವಾದಂ ನ ಪ್ರವದೇನ್ನ ವಾದಯೇದ್
ಯೋ ನಾ ಹತಃ ಪ್ರತಿಹನ್ಯಾನ್ನ ಘಾತಯೇತ್ ।
ಹಂತುಶ್ಚ ಯೋ ನೇಚ್ಛತಿ ಪಾಪಕಂ ವೈ
ತಸ್ಮೈ ದೇವಾಃ ಸ್ಪೃಹಯಂತ್ಯಾಗತಾಯ ॥೧೧॥

ನಿಂದನೀಯ ಮಾತುಗಳನ್ನು ಆಡಬಾರದು. ಇನ್ನೊಬ್ಬರಿಂದ ಆಡಿಸಬಾರದು. ತಾಡಿತನಾದ ಪುರುಷನು ಪ್ರತಿಯಾಗಿ ತಾಡನೆಯನ್ನು ಮಾಡಬಾರದು. ಅವನನ್ನು ಕೊಲ್ಲಲೂ ಬಾರದು. ತನ್ನನ್ನು ಹಿಂಸಿಸುವವನಿಗೂ ಯಾವನು ಅಮಂಗಳವನ್ನು ಬಯಸುವುದಿಲ್ಲವೋ ಅಂತಹವನು ಸ್ವರ್ಗಕ್ಕೆ ಬರಲಿ ಎಂದು ದೇವತೆಗಳು ಆಶಿಸುತ್ತಾರೆ (ಸ್ವರ್ಗಕ್ಕೆ ಬಂದ ಮೇಲೆ ಅವನಲ್ಲಿ ಪ್ರೀತಿಯನ್ನು ಮಾಡುತ್ತಾರೆ).

ಅವ್ಯಾಹೃತಂ ವ್ಯಾಹೃತಾಚ್ಛ್ರೇಯ ಆಹುಃ
ಸತ್ಯಂ ವದೇತ್ ವ್ಯಾಹೃತಂ ತದ್ ದ್ವಿತೀಯಮ್ ।
ಪ್ರಿಯಂ ವದೇದ್ ವ್ಯಾಹೃತಂ ತತ್ ತೃತೀಯಂ
ಧರ್ಮ್ಯಂ ವದೇತ್ ವ್ಯಾಹೃತಂ ತಚ್ಚತುರ್ಥಮ್ ॥೧೨॥

ಮೌನವು ಮಾತನಾಡುವುದಕ್ಕಿಂತ ಶ್ರೇಷ್ಠವಾದುದು. ಮಾತನಾಡಿದರೆ ಸತ್ಯವನ್ನು ಮಾತನಾಡುವುದು ಶ್ರೇಷ್ಠವಾದುದು. ಪ್ರಿಯವನ್ನು ಮಾತನಾಡುವುದು ಅದಕ್ಕಿಂತಲೂ

ಶ್ರೇಷ್ಠವಾದುದು. ಧರ್ಮಕ್ಕೆ ಅನುಗುಣವಾದ ಮಾತುಗಳನ್ನಾಡುವುದು ಅದಕ್ಕಿಂತಲೂ ಶ್ರೇಷ್ಠವಾದುದು.

**ಯಾದೃಶೈಃ ಸನ್ನಿವಿಶತೇ ಯಾದೃಶಾಂಶ್ಚೋಪಜೀವತೇ ।**
**ಯಾದೃಗಿಚ್ಛೇಚ್ಚ ಭವಿತುಂ ತಾದೃಗ್ ಭವತಿ ಪೂರುಷಃ ॥೧೩॥**

ಎಂತಹ ಜನರ ಜೊತೆಯಲ್ಲಿ ವಾಸ ಮಾಡುತ್ತಾನೆಯೋ, ಎಂತಹ ಜನರನ್ನು ಸೇವಿಸುತ್ತಾನೆಯೋ, ಹೇಗೆ ಆಗಬೇಕೆಂದು ಬಯಸುತ್ತಾನೆಯೋ ಮನುಷ್ಯನು ಅದರಂತೆ ಆಗುತ್ತಾನೆ.

**ಯತೋ ಯತೋ ನಿವರ್ತೇತ ತತಸ್ತತೋ ವಿಮುಚ್ಯತೇ ।**
**ನಿವರ್ತಿತಾತ್ ತು ಸರ್ವತೋ ಚ ನಾಸ್ತಿ ದುಃಖಮಣ್ವಪಿ ॥೧೪॥**

ಮನುಷ್ಯನು ಯಾವ ಯಾವುದರಿಂದ ಹಿಂದೆ ಸರಿಯುತ್ತಾನೆಯೋ, ಅದರಿಂದಾಗುವ ದುಃಖದಿಂದ ನಿರ್ಮುಕ್ತನಾಗುತ್ತಾನೆ. ಎಲ್ಲದರಿಂದಲೂ ಹಿಂದೆ ಸರಿದರೆ ಅಣುವಿನಷ್ಟೂ ದುಃಖವಿರುವುದಿಲ್ಲ.

**ನ ಜೇಯತೇ ನಾನುಜಿಗೀಷತೇಽನ್ಯಾನ್**
**ನ ವೈರಕೃಚ್ಚಾಪ್ರತಿಘಾತಕಶ್ಚ ।**
**ನಿಂದಾಪ್ರಶಂಸಾಸು ಸಮಸ್ವಭಾವೋ**
**ನ ಶೋಚತೇ ಹೃಷ್ಯತಿ ನೈವ ಚಾಯಮ್ ॥೧೫॥**

ಅವನು ಇನ್ನೊಬ್ಬರನ್ನು ಜಯಿಸುವುದಿಲ್ಲ, ಜಯಿಸಲು ಬಯಸುವುದಿಲ್ಲ, ಇನ್ನೊಬ್ಬರಿಗೆ ಸೋಲುವುದೂ ಇಲ್ಲ, ಇನ್ನೊಬ್ಬರ ವೈರವನ್ನು ಮಾಡುವುದಿಲ್ಲ, ಇನ್ನೊಬ್ಬರಿಗೆ ಹೊಡೆಯುವುದಿಲ್ಲ, ತನ್ನನ್ನು ನಿಂದಿಸಿದರೂ ಅಥವಾ ಪ್ರಶಂಸೆ ಮಾಡಿದರೂ ಸಮನಾಗಿರುತ್ತಾನೆ. ಅಂತಹವನು ಶೋಕ ಮತ್ತು ಹರ್ಷಗಳನ್ನು ಪಡುವುದಿಲ್ಲ.

**ಭಾವಮಿಚ್ಛತಿ ಸರ್ವಸ್ಯ ನಾಭಾವೇ ಕುರುತೇ ಮನಃ ।**
**ಸತ್ಯವಾದೀ ಮೃದುರ್ದಾಂತೋ ಯಃ ಸ ಉತ್ತಮಪೂರುಷಃ ॥೧೬॥**

ಯಾವನು ಎಲ್ಲರಿಗೂ ಮಂಗಳವನ್ನೇ ಬಯಸುತ್ತಾನೆಯೋ, ಅಮಂಗಳದಲ್ಲಿ ಎಂದೂ ಮನಸ್ಸನ್ನು ಹಾಕುವುದಿಲ್ಲವೋ, ಸತ್ಯವನ್ನು ನುಡಿಯುವವನೂ, ಮೃದುವೂ, ದಾಂತನೂ ಆಗಿರುತ್ತಾನೆಯೋ ಅವನು ಉತ್ತಮ ಪುರುಷ.

**ನಾನರ್ಥಕಂ ಸಾಂತ್ವಯತಿ ಪ್ರತಿಜ್ಞಾಯ ದದಾತಿ ಚ ।**
**ರಂಧ್ರಂ ಪರಸ್ಯ ಜಾನಾತಿ ಯಃ ಸ ಮಧ್ಯಮಪೂರುಷಃ ॥೧೭॥**

ಯಾವನು ವ್ಯರ್ಥವಾಗಿ (ತನಗೆ ಪ್ರಯೋಜನವಿಲ್ಲದೆ) ಇನ್ನೊಬ್ಬರಿಗೆ ಸಮಾಧಾನವನ್ನು ಮಾಡುವುದಿಲ್ಲವೋ, ವಾಗ್ದಾನವನ್ನು ಮಾಡಿ ದಾನವನ್ನು ಮಾಡುತ್ತಾನೆಯೋ, ಇನ್ನೊಬ್ಬರ ದೋಷಗಳನ್ನು ತಿಳಿಯುತ್ತಾನೆಯೋ ಅವನು ಮಧ್ಯಮಪುರುಷ.

**ದುಃಶಾಸನಸ್ತೂಪಹತೋಽಭಿಶಸ್ತೋ**
**ನಾವರ್ತತೇ ಮನ್ಯುವಶಾತ್ ಕೃತಘ್ನಃ ।**
**ನ ಕಸ್ಯಚಿನ್ಮಿತ್ರಮಥೋ ದುರಾತ್ಮಾ**
**ಕಲಾಶ್ಚೈತಾ ಅಧಮಸ್ಯೇಹ ಪುಂಸಃ ॥೧೮॥**

ಯಾವ ಮನುಷ್ಯನನ್ನು ಶಾಸನ ಮಾಡುವುದು ಅಸಾಧ್ಯವೋ, ಯಾವನು ನಿಂದಿಸಿದರೆ ಅಥವಾ ಹಿಂಸಿಸಿದರೆ ಕೋಪದಿಂದ ಹಿಂತಿರುಗಿ ಬೀಳುತ್ತಾನೆಯೋ, ಕೃತಘ್ನನೋ, ಯಾವನಿಗೆ ಯಾರೂ ಮಿತ್ರರಾಗಿರುವುದಿಲ್ಲವೋ ಅವನು ದುರಾತ್ಮನು. ಇವು ಅಧಮಪುರುಷನ ಲಕ್ಷಣಗಳು.

**ನ ಶ್ರದ್ದಧಾತಿ ಕಲ್ಯಾಣಂ ಪರೇಭ್ಯೋಽಪ್ಯಾತ್ಮಶಂಕಿತಃ ।**
**ನಿರಾಕರೋತಿ ಮಿತ್ರಾಣಿ ಯೋ ವೈ ಸೋಽಧಮಪೂರುಷಃ ॥೧೯॥**

ಒಳ್ಳೆಯ ವಿಷಯಗಳಲ್ಲಿ ಶ್ರದ್ಧೆ ಇರುವುದಿಲ್ಲ, ಇನ್ನೊಬ್ಬರಿಂದ ತನಗೆ ಕೇಡಾಗುತ್ತದೆ ಎಂದು ಯಾವಾಗಲೂ ಶಂಕಿಸುತ್ತಾನೆ, ಮಿತ್ರರನ್ನು ನಿರಾಕರಿಸುತ್ತಾನೆ. ಅಂತಹವನು ಅಧಮಪುರುಷ.

**ಉತ್ತಮಾನೇವ ಸೇವೇತ ಪ್ರಾಪ್ತಕಾಲೇ ತು ಮಧ್ಯಮಾನ್ ।**
**ಅಧಮಾಂಸ್ತು ನ ಸೇವೇತ ಯ ಇಚ್ಛೇತ್ ಭೂತಿಮಾತ್ಮನಃ ॥೨೦॥**

ಉತ್ತಮರನ್ನೇ ಸೇವಿಸಬೇಕು. ಕಾರ್ಯವಾಗಬೇಕಾದಾಗ ಮಧ್ಯಮರನ್ನು ಸೇವಿಸಬೇಕು. ಯಾವನು ತನ್ನ ಏಳಿಗೆಯನ್ನು ಬಯಸುತ್ತಾನೆಯೋ ಅವನು ಅಧಮರನ್ನು ಮಾತ್ರ ಎಂದೂ ಸೇವಿಸಬಾರದು.

ಪ್ರಾಪ್ನೋತಿ ವೈ ವಿತ್ತಮಯಂ ಬಲೇನ
ನಿತ್ಯೋತ್ಥಾನಾತ್ ಪ್ರಜ್ಞಯಾ ಪೌರುಷೇಣ ।
ಸದೈವ ಸಮ್ಯಗ್ ಲಭತೇ ಪ್ರಶಂಸಾಂ
ನ ವೃತ್ತಿಮಾಪ್ನೋತಿ ಮಹಾಕುಲಾನಾಮ್ ॥೨೧॥

ಸತ್ಪುರುಷನಾದವನು ತನ್ನ ಬಲದಿಂದಲೂ, ನಿತ್ಯೋತ್ಸಾಹದಿಂದಲೂ, ಪ್ರಜ್ಞೆಯಿಂದಲೂ ಮತ್ತು ಪರಾಕ್ರಮದಿಂದಲೂ ಧನವನ್ನು ಗಳಿಸುತ್ತಾನೆ. ಅವನು ಯಾವಾಗಲೂ ಪ್ರಶಂಸೆಯನ್ನು ಪಡೆಯುತ್ತಾನೆ. ಕುಲರಹಿತರಾದವರ ನಡತೆಯನ್ನು ಅವನು ಎಂದೂ ಅನುಸರಿಸುವುದಿಲ್ಲ.

ಧೃತರಾಷ್ಟ್ರಃ

ಮಹಾಕುಲಾನಾಂ ಸ್ಪೃಹಯಂತಿ ದೇವಾ
ಧರ್ಮಾರ್ಥನಿತ್ಯಾಶ್ಚ ಬಹುಶ್ರುತಾಶ್ಚ ।
ಪೃಚ್ಛಾಮಿ ತ್ವಾಂ ವಿದುರ ಪ್ರಶ್ನಮೇತಂ
ಭವಂತಿ ವೈ ಕಾನಿ ಮಹಾಕುಲಾನಿ ॥೨೨॥

ನಿತ್ಯವೂ ಧರ್ಮಾರ್ಥರತರಾದ ಮತ್ತು ಬಹುಶ್ರುತರಾದ ದೇವತೆಗಳು ಮಹಾಕುಲದಲ್ಲಿ ಹುಟ್ಟಿದ ಪುರುಷರಲ್ಲಿ ಪ್ರೀತಿಯುಳ್ಳವರಾಗುತ್ತಾರೆ. ವಿದುರನೇ, ಮಹಾಕುಲಗಳು ಯಾವುವು ಎಂಬ ಈ ಪ್ರಶ್ನೆಯನ್ನು ನಾನು ನಿನ್ನನ್ನು ಕೇಳುತ್ತಿದ್ದೇನೆ.

ವಿದುರಃ

ತಪೋ ದಮೋ ಬ್ರಹ್ಮವಿತ್ತ್ವಂ ತಿತಿಕ್ಷಾ
ಪುಣ್ಯಾ ವಿವಾಹಾಃ ಸಾಂತ್ವನಂ ಚಾನ್ನದಾನಮ್ ।
ಅಷ್ಟಾವೇತೇ ನಿತ್ಯಮೇವಂ ಭವಂತಿ
ಸತಾಂ ಗುಣಾಸ್ತಾನಿ ಮಹಾಕುಲಾನಿ ॥೨೩॥

ವಿದುರ– ತಪಸ್ಸು, ದಮ, ಬ್ರಹ್ಮಜ್ಞಾನ, ದ್ವಂದ್ವಸಹಿಷ್ಣುತೆ, ಪವಿತ್ರಕಾರ್ಯಗಳು, ವಿವಾಹ, ಇನ್ನೊಬ್ಬರನ್ನು ಸಂತೈಸುವುದು, ಅನ್ನದಾನ - ಈ ಎಂಟುಗುಣಗಳು ಯಾವ ಸಜ್ಜನರಲ್ಲಿ ಯಾವಾಗಲೂ ಇರುತ್ತವೆಯೋ ಅಂತಹವರ ಕುಲಗಳು ಮಹಾಕುಲಗಳು.

ಯೇಷಾಂ ನ ವೃತ್ತಂ ವ್ಯಥತೇ ನ ಯೋನಿಃ
ಚಿತ್ತಪ್ರಸಾದೇನ ಚರಂತಿ ಧರ್ಮಮ್ ।
ಯೇ ಕೀರ್ತಿಮಿಚ್ಛಂತಿ ಕುಲೇ ವಿಶಿಷ್ಟಾಂ
ತ್ಯಕ್ತಾನೃತಾಸ್ತಾನಿ ಮಹಾಕುಲಾನಿ ॥೨೪॥

ಯಾರಿಗೆ ತಮ್ಮ ನಡತೆಯಾಗಲೀ ಅಥವಾ ಯೋನಿಯಾಗಲೀ ಯಾವಾಗಲೂ ದುಃಖವನ್ನು ತಂದುಕೊಡುವುದಿಲ್ಲವೋ, ಮನಸ್ಸಿನ ಹರ್ಷದಿಂದಲೇ ಯಾರು ಧರ್ಮಗಳನ್ನು ಆಚರಿಸುತ್ತಾರೆಯೋ, ಯಾರು ತಮ್ಮ ಕುಲಕ್ಕೆ ವಿಶಿಷ್ಟವಾದ ಕೀರ್ತಿಯನ್ನು ಬಯಸುತ್ತಾರೆಯೋ, ಅನೃತವಚನವನ್ನು ವರ್ಜಿಸಿರುತ್ತಾರೆಯೋ ಅಂತಹವರ ಕುಲಗಳು ಮಹಾಕುಲಗಳು.

ಅನಿಜ್ಯಯಾऽವಿವಾಹೈಶ್ಚ ವೇದಸ್ಯೋತ್ಸಾದನೇನ ಚ ।
ಕುಲಾನ್ಯಕುಲತಾಂ ಯಾಂತಿ ಧರ್ಮಸ್ಯಾತಿಕ್ರಮೇಣ ಚ ॥೨೫॥

ಅರ್ಚನೆಯ ಅಭಾವ, ವಿವಾಹವಿಲ್ಲದಿರುವಿಕೆ, ವೇದದ ವಿನಾಶ, ಧರ್ಮದ ಅತಿಕ್ರಮಣ - ಇವುಗಳಿಂದ ಕುಲಗಳು ಅಕುಲಗಳಾಗುತ್ತವೆ.

ದೇವದ್ರವ್ಯವಿನಾಶೇನ ಬ್ರಹ್ಮಸ್ವಹರಣೇನ ಚ ।
ಕುಲಾನ್ಯಕುಲತಾಂ ಯಾಂತಿ ಬ್ರಾಹ್ಮಣಾತಿಕ್ರಮೇಣ ಚ ॥೨೬॥

ದೇವದ್ರವ್ಯದ ವಿನಾಶವನ್ನು ಮಾಡುವುದರಿಂದ, ಬ್ರಹ್ಮಸ್ವವನ್ನು ಅಪಹಾರ ಮಾಡುವುದರಿಂದ ಮತ್ತು ಬ್ರಾಹ್ಮಣರ ಅತಿಕ್ರಮಣವನ್ನು ಮಾಡುವುದರಿಂದ ಕುಲಗಳು ಅಕುಲಗಳಾಗುತ್ತವೆ, ನಾಶವನ್ನು ಹೊಂದುತ್ತವೆ.

ಬ್ರಾಹ್ಮಣಾನಾಂ ಪರಿಭವಾತ್ ಪರಿವಾದಾಚ್ಚ ಭಾರತ ।
ಕುಲಾನ್ಯಕುಲತಾಂ ಯಾಂತಿ ನ್ಯಾಸಾಪಹರಣೇನ ಚ ॥೨೭॥

ಎಲೈ ಭಾರತನೇ, ಬ್ರಾಹ್ಮಣರನ್ನು ಅವಮಾನ ಮಾಡುವುದರಿಂದ, ಅವರ ನಿಂದನೆ ಮಾಡುವುದರಿಂದ ಮತ್ತು ನ್ಯಾಸವಾಗಿಟ್ಟ ವಸ್ತುಗಳನ್ನು ಅಪಹಾರ ಮಾಡುವುದರಿಂದ ಕುಲಗಳು ನಾಶವನ್ನು ಹೊಂದುತ್ತವೆ.

**ಕುಲಾನಿ ಸಮವೇತಾನಿ ಗೋಭಿಃ ಪುರುಷತೋಽರ್ಥತಃ ।**
**ಕುಲಸಂಖ್ಯಾಂ ನ ಗಚ್ಛಂತಿ ಯಾನಿ ಹೀನಾನಿ ವೃತ್ತತಃ ॥೨೮॥**

ಒಳ್ಳೆಯ ಮಾತುಗಳಿಂದ, ಸತ್ಪುರುಷರಿಂದ ಮತ್ತು ಪರೋಪಕಾರಗಳಿಂದ ಕೂಡಿದ ಕುಲಗಳು ಕುಲಗಳೆನಿಸುತ್ತವೆ. ನಡತೆಯಿಂದ ಹೀನವಾದ ಕುಲಗಳು ಕುಲಗಳ ಮಧ್ಯದಲ್ಲಿ ಗಣನೆಗೆ ಬರುವುದಿಲ್ಲ.

**ವೃತ್ತತಃ ತ್ವವಿಹೀನಾನಿ ಕುಲಾನ್ಯಲ್ಪಧನಾನ್ಯಪಿ ।**
**ಕುಲಸಂಖ್ಯಾಂ ತು ಗಚ್ಛಂತಿ ಕರ್ಷಂತಿ ಚ ಮಹಾಜನಮ್ ॥೨೯॥**

ನಡತೆಯಿಂದ ಹೀನವಾಗದಿದ್ದ ಕುಲಗಳು ಅಲ್ಪಧನವನ್ನು ಹೊಂದಿದ್ದರೂ ಸಹ ಕುಲಗಳಲ್ಲಿ ಗಣನೆಯನ್ನು ಹೊಂದುತ್ತವೆ ಮತ್ತು ಮಹಾಜನರನ್ನು ತಮ್ಮ ಕಡೆಗೆ ಆಕರ್ಷಿಸುತ್ತವೆ.

**ವೃತ್ತಂ ಯತ್ನೇನ ಸಂರಕ್ಷೇದ್ ವಿತ್ತಮೇತಿ ಚ ಯಾತಿ ಚ ।**
**ಅಕ್ಷೀಣೋ ವಿತ್ತತಃ ಕ್ಷೀಣೋ ವೃತ್ತತಸ್ತು ಹತೋ ಹತಃ ॥೩೦॥**

ನಡತೆಯನ್ನು ಪ್ರಯತ್ನಪೂರ್ವಕವಾಗಿ ರಕ್ಷಿಸಬೇಕು. ಧನವು ಬರುತ್ತದೆ ಮತ್ತು ಹೋಗುತ್ತದೆ. ಧನದಿಂದ ಕ್ಷೀಣನಾಗದೆ ನಡತೆಯಿಂದ ಕ್ಷೀಣನಾದರೆ ಅವನು ಸತ್ತಂತೆಯೇ.

**ಗೋಭಿಃ ಪಶುಭಿರಶ್ವೈಶ್ಚ ಕೃಷ್ಯಾ ಚ ಸುಸಮೃದ್ಧಯಾ ।**
**ಕುಲಾನಿ ನ ಪ್ರರೋಹಂತಿ ಯಾನಿ ಹೀನಾನಿ ವೃತ್ತತಃ ॥೩೧॥**

ನಡತೆಯಿಂದ ಹೀನವಾದ ಕುಲಗಳು ಗೋವುಗಳಿಂದಾಗಲೀ, ಅಶ್ವಮೊದಲಾದ ಪಶುಗಳಿಂದಾಗಲೀ, ಕೃಷಿಯಿಂದಾಗಲಿ ಅಥವಾ ಸಮೃದ್ಧಿಯಿಂದಲೇ ಆಗಲಿ ಏಳಿಗೆಯನ್ನು ಹೊಂದುವುದಿಲ್ಲ.

ಮಾ ನಃ ಕುಲೇ ವೈರಕೃತ್ ಕಶ್ಚಿದಸ್ತು
ರಾಜ್ಞಾವಧ್ಯೋ ಮಾ ಪರಸ್ವಾಪಹಾರೀ ।
ಮಿತ್ರದ್ರೋಹೀ ನೈಕೃತಿಕೋऽನೃತೀ ವಾ
ಪೂರ್ವಾಶೀ ವಾ ಪಿತೃದೇವಾತಿಥಿಭ್ಯಃ ॥೩೨॥

ನಮ್ಮ ಕುಲದಲ್ಲಿ ವೈರ ಮಾಡುವವನು ಯಾವನೂ ಬೇಡ. ಪರರಾಷ್ಟ್ರದ ರಾಜ್ಯದಿಂದ ವಧ್ಯನಾಗುವವನು, ಪರಸ್ವತ್ತನ್ನು ಅಪಹಾರ ಮಾಡುವವನು, ಮಿತ್ರದ್ರೋಹಿಯಾದವನು, ಮೋಸಗಾರನು, ಸುಳ್ಳನ್ನು ಹೇಳುವವನು, ಪಿತೃ-ದೇವತಾ ಅತಿಥಿಗಳಿಗಿಂತ ಮೊದಲು ಭೋಜನ ಮಾಡುವವನು ಯಾವನೂ ಬೇಡ.

ಯಶ್ಚ ನೋ ಬ್ರಾಹ್ಮಣಾನ್ ಹನ್ಯಾದ್ ಯಶ್ಚ ನೋ ಬ್ರಾಹ್ಮಣಾನ್ ದ್ವಿಷೇತ್ ।
ನ ನಃ ಸ ಸಮಿತಿಂ ಗಚ್ಛೇದ್ ಯಶ್ಚ ನೋ ನಿರ್ವಪೇತ್ ಕೃಷಿಮ್ ॥೩೩॥

ಯಾವನು ಬ್ರಾಹ್ಮಣರನ್ನು ಹಿಂಸಿಸುವುದಿಲ್ಲವೋ, ಯಾವನು ಬ್ರಾಹ್ಮಣರನ್ನು ದ್ವೇಷಿಸುವುದಿಲ್ಲವೋ, ಯಾವನು ಕೃಷಿಯನ್ನು ಮಾಡುವುದಿಲ್ಲವೋ ಅಂತಹ ಬ್ರಾಹ್ಮಣನು ನಮ್ಮ ಸಭೆಗೆ ಬರಲಿ.

ತೃಣಾನಿ ಭೂಮಿರುದಕಂ ವಾಕ್ ಚತುರ್ಥೀ ಚ ಸೂನೃತಾ ।
ಸತಾಮೇತಾನಿ ಗೇಹೇಷು ನೋಚ್ಛಿದ್ಯಂತೇ ಕದಾಚನ ॥೩೪॥

ತೃಣಮಯವಾದ ಚಾಪೆ, ಕುಳಿತುಕೊಳ್ಳುವುದಕ್ಕೆ ಭೂಮಿ, ಕುಡಿಯಲು ನೀರು ಮತ್ತು ನಾಲ್ಕನೆಯದಾದ ಮಧುರವಾದ ಮಾತುಗಳು - ಇವುಗಳು ಸಜ್ಜನರ ಮನೆಯಲ್ಲಿ ಎಂದೂ ವಿನಾಶವನ್ನು ಹೊಂದುವುದಿಲ್ಲ.

ಶ್ರದ್ಧಯಾ ಪರಯಾ ರಾಜನ್ನುಪನೀತಾನಿ ಸತ್ಕೃತಿಮ್ ।
ಪ್ರವೃತ್ತಾನಿ ಮಹಾಪ್ರಾಜ್ಞ ಧರ್ಮಿಣಾಂ ಪುಣ್ಯಕರ್ಮಿಣಾಮ್ ॥೩೫॥

ಎಲೈ ಮಹಾಪ್ರಾಜ್ಞನೇ, ಪುಣ್ಯಕರ್ಮವನ್ನು ಮಾಡುವವರ ಶ್ರೇಷ್ಠವಾದ ವರ್ತನೆಗಳು ಅವರ ಶ್ರೇಷ್ಠವಾದ ಶ್ರದ್ಧೆಯಿಂದ ಅತಿಥಿ-ಅಭ್ಯಾಗತರ ಪೂಜೆಗೆ ಯೋಗ್ಯವಾಗಿ ಉಪಪನ್ನವಾಗುತ್ತವೆ.

ಸೂಕ್ಷ್ಮೋऽಪಿ ಭಾರಂ ನೃಪತೇ ಸ್ಯಂದನೋ ವೈ
ಶಕ್ತೋ ವೋಢುಂ ನ ತಥಾऽನ್ಯೇ ಮಹೀಜಾಃ ।
ಏವಂ ಯುಕ್ತಾ ಭಾರಸಹಾ ಭವಂತಿ
ಮಹಾಕುಲೀನಾ ನ ತಥಾऽನ್ಯೇ ಮನುಷ್ಯಾಃ ॥೩೬॥

ಎಲೈ ರಾಜನೇ, ರಥವು ಚಿಕ್ಕದಾಗಿದ್ದರೂ ದೊಡ್ಡಭಾರವನ್ನು ಹೊರಲು ಸಮರ್ಥವಾಗಿರುತ್ತದೆ. ಉಳಿದ ಮರಗಳು ಸಮರ್ಥವಾಗುವುದಿಲ್ಲ. ಹೀಗೆ ಜೊತೆಯಲ್ಲಿ ಕೂಡಿದ್ದರೆ ಮಹಾಕುಲೀನರಾದವರು ಎಂತಹ ಭಾರವನ್ನಾದರೂ ಸಹಿಸುತ್ತಾರೆ. ಬೇರೆ ಮನುಷ್ಯರು ಸಹಿಸುವುದಿಲ್ಲ.

ನ ತನ್ಮಿತ್ರಂ ಯಸ್ಯ ಕೋಪಾದ್ ಬಿಭೇತಿ
ಯದ್ವೈ ಮಿತ್ರಂ ಕೋಪನೇ ನೋಪಶಕ್ಯಮ್ ।
ಯಸ್ಮಿನ್ ಮಿತ್ರೇ ಪಿತರೀವಾಶ್ವಸೀತ
ತದ್ವೈ ಮಿತ್ರಂ ಸಂಗತಾನೀತರಾಣಿ ॥೩೭॥

ಯಾವನ ಕೋಪಕ್ಕೆ ಹೆದರುತ್ತಾನೆಯೋ ಅವನು ಮಿತ್ರನಲ್ಲ. ಯಾವನನ್ನು ಕೋಪಗೊಳಿಸಲು ಸಾಧ್ಯವಿಲ್ಲವೋ ಅವನೇ ಮಿತ್ರ. ಯಾವನಲ್ಲಿ ತಂದೆಯಂತೆ ವಿಶ್ವಾಸವನ್ನು ಮಾಡಬಹುದೋ ಅವನು ಮಿತ್ರ. ಉಳಿದವರು ಜೊತೆಯಲ್ಲಿರುವವರು ಮಾತ್ರ.

ಯದಿ ಚೇದತ್ರ ಸಂಬಂಧೋ ಮಿತ್ರಭಾವೇನ ವರ್ತತೇ ।
ಸ ಏವ ಬಂಧುಸ್ತನ್ಮಿತ್ರಂ ಸಾ ಗತಿಸ್ತತ್ ಪರಾಯಣಮ್ ॥೩೮॥

ಯಾವನ ಜೊತೆಯಲ್ಲಿ ಇಲ್ಲಿ ಮಿತ್ರಭಾವದಿಂದ ಸಂಬಂಧವಿರುತ್ತದೆಯೋ ಅವನೇ ಬಂಧು, ಅವನೇ ಮಿತ್ರ, ಅವನೇ ಗತಿ, ಅವನೇ ಪರಮಾಶ್ರಯ.

ಚಲಚಿತ್ತಸ್ಯ ವೈ ಪುಂಸೋ ವೃದ್ಧಾನನುಪಸೇವತಃ ।
ಪಾರಿಪ್ಲವಮತೇರ್ನಿತ್ಯಮಧ್ರುವೋ ಮಿತ್ರಸಂಗ್ರಹಃ ॥೩೯॥

ಚಂಚಲವಾದ ಚಿತ್ತವುಳ್ಳ, ಹಿರಿಯರ ಸೇವೆಯನ್ನು ಮಾಡದಿರುವ, ಚಪಲಚಿತ್ತನಾದ ಮನುಷ್ಯನು ಮಿತ್ರರನ್ನು ಶಾಶ್ವತವಾಗಿ ಸಂಗ್ರಹಿಸಲು ಎಂದೂ ಸಾಧ್ಯವಿಲ್ಲ.

ಚಲಚಿತ್ತಮನಾತ್ಮಾನಮಿಂದ್ರಿಯಾಣಾಂ ವಶಾನುಗಮ್ ।
ಅರ್ಥಾಃ ಸಮತಿವರ್ತಂತೇ ಹಂಸಾಃ ಶುಷ್ಕಂ ಸರೋ ಯಥಾ ॥೪೦॥

ಚಂಚಲಚಿತ್ತನೂ, ಮನಸ್ಸು ಮತ್ತು ಇಂದ್ರಿಯಗಳಿಗೆ ವಶನಾದವನೂ ಆದ ಮನುಷ್ಯನನ್ನು ಅರ್ಥಗಳು, ಹಂಸಗಳು ಒಣಗಿದ ಸರೋವರವನ್ನು ದಾಟುವಂತೆ ದಾಟಿ ಹೋಗುತ್ತವೆ.

ಅಕಸ್ಮಾದೇವ ಕುಪ್ಯಂತಿ ಪ್ರಸೀದಂತ್ಯನಿಮಿತ್ತತಃ ।
ಶೀಲಮೇತದಸಾಧೂನಾಮಭ್ರಂ ಪಾರಿಪ್ಲವಂ ಯಥಾ ॥೪೧॥

ಕಾರಣವಿಲ್ಲದೆಯೇ ಕೋಪಗೊಳ್ಳುತ್ತಾರೆ, ಕಾರಣವಿಲ್ಲದೆಯೇ ಪ್ರಸನ್ನರಾಗುತ್ತಾರೆ. ಇದು ಚಂಚಲವಾದ ಮೋಡಗಳಂತಿರುವ ಅಸಜ್ಜನರ ನಡತೆ.

ಸತ್ಕೃತಾಶ್ಚ ಕೃತಾರ್ಥಾಶ್ಚ ಮಿತ್ರಾಣಾಂ ನ ಭವಂತಿ ಯೇ ।
ತಾನ್ ಮೃತಾನಪಿ ಕ್ರವ್ಯಾದಾಃ ಕೃತಘ್ನಾನ್ ನೋಪಭುಂಜತೇ ॥೪೨॥

ಯಾರು ಪೂಜಿಸಲ್ಪಟ್ಟರೂ, ತೃಪ್ತಿಪಡಿಸಲ್ಪಟ್ಟರೂ, ಮಿತ್ರರ ಸಹಾಯಕ್ಕೆ ಬರುವುದಿಲ್ಲವೋ ಅಂತಹ ಕೃತಘ್ನರು ಮೃತರಾದರೆ ಹದ್ದುಗಳೂ ಅವರನ್ನು ಮುಟ್ಟುವುದಿಲ್ಲ.

ಅರ್ಥಯೇದೇವ ಮಿತ್ರಾಣಿ ಸತಿ ವಾಽಸತಿ ವಾ ಧನೇ ।
ನಾನರ್ಥಯನ್ ವಿಜಾನಾತಿ ಮಿತ್ರಾಣಾಂ ಸಾರಫಲ್ಗುತಾಮ್ ॥೪೩॥

ಧನವಿರಲಿ ಅಥವಾ ಇಲ್ಲದಿರಲಿ ಮಿತ್ರರನ್ನು ಯಾಚಿಸಬೇಕು. ಯಾಚಿಸದಿದ್ದರೆ ಮಿತ್ರರಲ್ಲಿ ಯಾರು ಶ್ರೇಷ್ಠ ಮತ್ತು ಯಾರು ಕನಿಷ್ಠ ಎಂದು ತಿಳಿಯುವುದಿಲ್ಲ.

ಸಂತಾಪಾದ್ ಭ್ರಶ್ಯತೇ ರೂಪಂ ಸಂತಾಪಾದ್ ಭ್ರಶ್ಯತೇ ಬಲಮ್ ।
ಸಂತಾಪಾದ್ ಭ್ರಶ್ಯತೇ ಜ್ಞಾನಂ ಸಂತಾಪಾದ್ ವ್ಯಾಧಿಮೃಚ್ಛತಿ ॥೪೪॥

ಸಂತಾಪದಿಂದ ರೂಪವು ನಾಶವಾಗುತ್ತದೆ. ಸಂತಾಪದಿಂದ ಬಲವು ನಾಶವಾಗುತ್ತದೆ. ಸಂತಾಪದಿಂದ ಜ್ಞಾನವು ನಾಶವಾಗುತ್ತದೆ. ಸಂತಾಪದಿಂದ ವ್ಯಾಧಿಯು ಉಂಟಾಗುತ್ತದೆ.

ಅನವಾಪ್ಯಂ ಚ ಶೋಕೇನ ಶರೀರಂ ಚೋಪತಪ್ಯತೇ ।
ಅಮಿತ್ರಾಶ್ಚ ಪ್ರಹೃಷ್ಯಂತಿ ಮಾ ಸ್ಮ ಶೋಕೇ ಮನಃ ಕೃಥಾಃ ॥೪೫॥

ಶೋಕದಿಂದ ಯಾವ ಪ್ರಯೋಜನವನ್ನೂ ಹೊಂದಲು ಸಾಧ್ಯವಿಲ್ಲ. ಶರೀರವು ತಾಪಕ್ಕೆ ಈಡಾಗುತ್ತದೆ. ಶತ್ರುಗಳು ಸಂತೋಷಪಡುತ್ತಾರೆ. ಶೋಕದಲ್ಲಿ ಮನಸ್ಸನ್ನು ಮಾಡಬೇಡ.

ಪುನರ್ನರೋ ಮ್ರಿಯತೇ ಜಾಯತೇ ಚ
ಪುನರ್ನರೋ ಹೀಯತೇ ವರ್ಧತೇ ಚ ।
ಪುನರ್ನರೋ ಯಾಚತಿ ಯಾಚ್ಯತೇ ಚ
ಪುನರ್ನರಃ ಶೋಚತಿ ಶೋಚ್ಯತೇ ಚ ॥೪೬॥

ಮನುಷ್ಯನು ಪುನಃ ಸಾಯುತ್ತಾನೆ ಮತ್ತು ಹುಟ್ಟುತ್ತಾನೆ. ಪುನಃ ಸಂಪತ್ತನ್ನು ಕಳೆದುಕೊಳ್ಳುತ್ತಾನೆ ಮತ್ತು ಸಂಪತ್ತಿನ ಅಭಿವೃದ್ಧಿಯನ್ನು ಹೊಂದುತ್ತಾನೆ. ಪುನಃ ಇನ್ನೊಬ್ಬರನ್ನು ಬೇಡುತ್ತಾನೆ ಮತ್ತು ಇನ್ನೊಬ್ಬರಿಂದ ಬೇಡಲ್ಪಡುತ್ತಾನೆ. ಪುನಃ ಶೋಕಪಡುತ್ತಾನೆ ಮತ್ತು ಇನ್ನೊಬ್ಬರಿಂದ ಶೋಕಿಸಲ್ಪಡುತ್ತಾನೆ.

ಸುಖಂ ಚ ದುಃಖಂ ಚ ಭವಾಭವೌ ಚ
ಲಾಭಾಲಾಭೌ ಮರಣಂ ಜೀವಿತಂ ಚ ।
ಪರ್ಯಾಯಶಃ ಸರ್ವಮೇತೇ ಸ್ಪೃಶಂತಿ
ತಸ್ಮಾದ್ ವೀರೋ ನ ಚ ಹೃಷ್ಯೇನ್ನ ಶೋಚೇತ್ ॥೪೭॥

ಸುಖ-ದುಃಖಗಳು, ಸಮೃದ್ಧಿ-ಅಸಮೃದ್ಧಿಗಳು, ಲಾಭಾಲಾಭಗಳು, ಜೀವನ-ಮರಣಗಳು ಪರ್ಯಾಯವಾಗಿ ಎಲ್ಲರಿಗೂ ಉಂಟಾಗುತ್ತವೆ. ಆದ್ದರಿಂದ ವೀರನಾದವನು ಇವುಗಳಿಗೆ ಹರ್ಷವನ್ನೂ ಪಡಬಾರದು, ಶೋಕವನ್ನೂ ಪಡಬಾರದು.

ಚಲಾನಿ ಹೀಮಾನಿ ಷಡಿಂದ್ರಿಯಾಣಿ
ತೇಷಾಂ ಯದ್ಯದ್ ವರ್ಧತೇ ಯತ್ರ ಯತ್ರ ।
ತತಸ್ತತಃ ಸ್ರವತೇ ಬುದ್ಧಿರಸ್ಯ
ಚ್ಛಿದ್ರೋದಕುಂಭಾದಿವ ನಿತ್ಯಮಂಭಃ ॥೪೮॥

ಈ ಆರು ಇಂದ್ರಿಯಗಳು ಚಂಚಲವಾದವು. ಅವುಗಳಲ್ಲಿ ಯಾವುದು ಯಾವ ಯಾವ ವಿಷಯಗಳಲ್ಲಿ ಬೆಳೆಯುತ್ತದೆಯೋ ಆಯಾ ವಿಷಯದ ಮೂಲಕವಾಗಿ ಮನುಷ್ಯನ ಬುದ್ಧಿಯು ಒಡಕು ಮಡಕೆಯಿಂದ ನೀರು ಹರಿದುಹೋಗುವಂತೆ ನಿತ್ಯವೂ ಹರಿದುಹೋಗುತ್ತವೆ.

**ಧೃತರಾಷ್ಟ್ರಃ**

**ತನುರುಚ್ಚಶಿಖೀ ರಾಜಾ ಮಿಥ್ಯೋಪಚರಿತೋ ಮಯಾ ।**
**ಮಂದಾನಾಂ ಮಮ ಪುತ್ರಾಣಾಂ ಯುದ್ಧೇನಾಂತಂ ಕರಿಷ್ಯತಿ ॥೪೯॥**

ಧೃತರಾಷ್ಟ್ರ– ಅಲ್ಪನೂ, ಆತ್ಮಾಭಿಮಾನಿಯೂ ಆದ ದುರ್ಯೋಧನನನ್ನು ನಾನು ವ್ಯರ್ಥವಾಗಿ ರಾಜನೆಂದು ಉಪಚಾರ ಮಾಡಿದೆ. ಆ ಮಂದನು ಯುದ್ಧದಿಂದ ನನ್ನ ಎಲ್ಲಾ ಪುತ್ರರಿಗೂ ವಿನಾಶವನ್ನು ತಂದೊಡ್ಡುವನು.

**ನಿತ್ಯೋದ್ವಿಗ್ನಮಿದಂ ಸರ್ವಂ ನಿತ್ಯೋದ್ವಿಗ್ನಮಿದಂ ಮನಃ ।**
**ಯತ್ತತ್ ಪದಮನುದ್ವಿಗ್ನಂ ತನ್ಮೇ ವದ ಮಹಾಮತೇ ॥೫೦॥**

ಇದೆಲ್ಲವೂ ಯಾವಾಗಲೂ ಉದ್ವೇಗದಿಂದ ಕೂಡಿದೆ. ನನ್ನ ಈ ಮನಸ್ಸೂ ಉದ್ವೇಗದಿಂದ ಕೂಡಿದೆ. ಮಹಾಮತಿಯೇ, ಉದ್ವೇಗವಿಲ್ಲದಿರುವ ಒಂದು ವಸ್ತು ಸ್ವರೂಪವನ್ನು ನನಗೆ ಹೇಳು.

**ವಿದುರಃ**

**ನಾನ್ಯತ್ರ ವಿದ್ಯಾತಪಸೋರ್ನಾನ್ಯತ್ರೇಂದ್ರಿಯನಿಗ್ರಹಾತ್ ।**
**ನಾನ್ಯತ್ರ ಲೋಭಸಂತ್ಯಾಗಾತ್ ಶಾಂತಿಂ ಪಶ್ಯಾಮಿ ತೇಽನಘ ॥೫೧॥**

ವಿದುರ– ಎಲೈ ಅನಘನೇ, ವಿದ್ಯಾ-ತಪಸ್ಸುಗಳನ್ನು ಬಿಟ್ಟು, ಇಂದ್ರಿಯನಿಗ್ರಹಗಳನ್ನು ಬಿಟ್ಟು, ಲೋಭತ್ಯಾಗವನ್ನು ಮಾಡುವುದನ್ನು ಬಿಟ್ಟು ಬೇರೆ ಎಲ್ಲಿಯೂ ನಾನು ನಿನಗೆ ಶಾಂತಿಯನ್ನು ಕಾಣುವುದಿಲ್ಲ.

**ಬುದ್ಧ್ಯಾ ಭಯಂ ಪ್ರಣುದತಿ ತಪಸಾ ವಿಂದತೇ ಮಹತ್ ।**
**ಗುರುಶುಶ್ರೂಷಯಾ ಜ್ಞಾನಂ ಶಾಂತಿಂ ಯೋಗೇನ ವಿಂದತಿ ॥೫೨॥**

ಬುದ್ಧಿಯಿಂದ ಭಯವನ್ನು ದೂರಮಾಡಬೇಕು. ತಪಸ್ಸಿನಿಂದ ಮಹತ್ವವನ್ನು ಪಡೆಯಬೇಕು. ಗುರುಶುಶ್ರೂಷೆಯಿಂದ ಜ್ಞಾನವನ್ನೂ, ಯೋಗದಿಂದ ಶಾಂತಿಯನ್ನೂ ಪಡೆಯಬೇಕು.

ಅನಾಶ್ರಿತಾ ದಾನಪುಣ್ಯಂ ವೇದಪುಣ್ಯಮನಾಶ್ರಿತಾಃ ।
ರಾಗದ್ವೇಷವಿನಿರ್ಮುಕ್ತಾ ವಿಚರಂತೀಹ ಮೋಕ್ಷಿಣಃ ॥೫೩॥

ದಾನಪುಣ್ಯವನ್ನು ಬಯಸದೆ, ವೇದಾಧ್ಯಯನಾದಿ ಜನ್ಯಪುಣ್ಯವನ್ನೂ ಬಯಸದೆ, ರಾಗ-ದ್ವೇಷದಿಂದ ಮುಕ್ತರಾದವರು ಮುಮುಕ್ಷುಗಳಾಗಿ ಇಲ್ಲಿ ಸಂಚರಿಸುತ್ತಾರೆ.

ಸ್ವಧೀತಸ್ಯ ಸುಯುದ್ಧಸ್ಯ ಸುಕೃತಸ್ಯ ಚ ಕರ್ಮಣಃ ।
ತಪಸಶ್ಚ ಸುತಪ್ತಸ್ಯ ತಸ್ಯಾಂತೇ ಸುಖಮೇಧತೇ ॥೫೪॥

ಒಳ್ಳೆಯ ಅಧ್ಯಯನ, ಒಳ್ಳೆಯ ಯುದ್ಧ, ಚೆನ್ನಾಗಿ ಮಾಡಿದ ಕರ್ಮ, ಚೆನ್ನಾಗಿ ಮಾಡಿದ ತಪಸ್ಸು ಇವುಗಳ ಕೊನೆಯಲ್ಲಿ ಸುಖವನ್ನು ಅನುಭವಿಸುತ್ತಾರೆ.

ಸಾಸ್ತೀರ್ಣಾನಿ ಶಯನಾನಿ ಪ್ರಪನ್ನಾ
ನ ವೈ ಭಿನ್ನಾ ಜಾತು ನಿದ್ರಾಂ ಲಭಂತೇ ।
ನ ಸ್ತ್ರೀಷು ರಾಜನ್ ರತಿಮಾಪ್ನುವಂತಿ
ನ ಮಾಗಧೈಃ ಸ್ತೂಯಮಾನಾ ನ ಸೂತೈಃ ॥೫೫॥

ಯಾರಿಗೆ ಬುದ್ಧಿಭೇದವು ಉಂಟಾಗಿದೆಯೋ ಅವರು ಚೆನ್ನಾಗಿ ಹಾಸಿದ ಸುಪತ್ತಿಗೆಯಲ್ಲಿ ಮಲಗಿದರೂ ನಿದ್ರೆಯನ್ನು ಹೊಂದುವುದಿಲ್ಲ. ಎಲೈ ರಾಜನೇ, ಸ್ತ್ರೀಯರಲ್ಲಿ ರತಿಯನ್ನು ಪಡೆಯುವುದಿಲ್ಲ. ಸೂತ ಮಾಗಧರಿಂದ ಸ್ತೋತ್ರ ಮಾಡಲ್ಪಟ್ಟರೂ ಸಂತೋಷ ಪಡುವುದಿಲ್ಲ.

ನ ವೈ ಭಿನ್ನಾ ಜಾತು ಚರಂತಿ ಧರ್ಮಂ
ನ ವೈ ಸುಖಂ ಪ್ರಾಪ್ನುವಂತೀಹ ಭಿನ್ನಾಃ ।
ನ ವೈ ಭಿನ್ನಾ ಗೌರವಂ ಪ್ರಾಪ್ನುವಂತಿ
ನ ವೈ ಭಿನ್ನಾಃ ಪ್ರಶಮಂ ರೋಚಯಂತಿ ॥೫೬॥

ಬುದ್ಧಿಭೇದವನ್ನು ಹೊಂದಿದವರು ಧರ್ಮವನ್ನು ಆಚರಿಸುವುದಿಲ್ಲ. ಸುಖವನ್ನು ಹೊಂದುವುದಿಲ್ಲ. ಗೌರವವನ್ನೂ ಪಡೆಯುವುದಿಲ್ಲ. ಅಂತಹವರಿಗೆ ಸಂಧಿಯೂ ರುಚಿಸುವುದಿಲ್ಲ (ಶಾಂತಿಯೂ ರುಚಿಸುವುದಿಲ್ಲ).

**ನ ವೈ ತೇಷಾಂ ಸ್ವದತೇ ಪಥ್ಯಮುಕ್ತಂ**
**ಯೋಗಕ್ಷೇಮಂ ಕಲ್ಪತೇ ನೈವ ತೇಷಾಮ್ ।**
**ಭಿನ್ನಾನಾಂ ವೈ ಮನುಜೇಂದ್ರ ಪರಾಯಣಂ**
**ನ ವಿದ್ಯತೇ ಕಿಂಚಿದನ್ಯದ್ ವಿನಾಶಾತ್ ॥೫೭॥**

ಅವರಿಗೆ ಪಥ್ಯವಾದ ಮಾತುಗಳು ರುಚಿಸುವುದಿಲ್ಲ. ಅವರಿಗೆ ಯೋಗಕ್ಷೇಮಗಳೂ ಉಂಟಾಗುವುದಿಲ್ಲ. ಎಲೈ ಮನುಷ್ಯೇಂದ್ರನೇ, ಬುದ್ಧಿಭೇದವನ್ನು ಹೊಂದಿದ ಮನುಷ್ಯರಿಗೆ ವಿನಾಶವನ್ನು ಬಿಟ್ಟು ಬೇರೆ ಗತಿಯೇ ಇಲ್ಲ.

**ಸಂಭಾವ್ಯಂ ಗೋಷು ಸಂಪನ್ನಂ ಸಂಭಾವ್ಯಂ ಬ್ರಾಹ್ಮಣೇ ತಪಃ ।**
**ಸಂಭಾವ್ಯಂ ಚಾಪಲಂ ಸ್ತ್ರೀಷು ಸಂಭಾವ್ಯಂ ಜ್ಞಾತಿತೋಽಭಯಮ್ ॥**

ಗೋವುಗಳಲ್ಲಿ ಕ್ಷೀರವು ಪ್ರಶಂಸನೀಯವಾದುದು. ಬ್ರಾಹ್ಮಣನಲ್ಲಿ ತಪಸ್ಸು ಪ್ರಶಂಸನೀಯವಾದುದು. ಸ್ತ್ರೀಯರಲ್ಲಿ ಚಂಚಲತೆಯು ಪ್ರಶಂಸನೀಯವಾದುದು. ಜ್ಞಾತಿಗಳಿಂದ ಅಭಯವು ಪ್ರಶಂಸನೀಯವಾದುದು.

**ತಂತವೋಽಪ್ಯಾಯತಾ ನಿತ್ಯಂ ತನವೋ ಬಹುಲಾಃ ಸಮಾಃ ।**
**ಬಹೂನ್ ಬಹುತ್ವಾದಾಯಾಸಾನ್ ಸಹಂತೀತ್ಯುಪಮಾ ಸತಾಮ್॥೫೯॥**

ತೆಳುವಾದ, ದೀರ್ಘವಾದ, ಸಮವಾದ ತಂತು (ದಾರ)ಗಳಿಗೂ ಸಹ ಬಹುತ್ವವಿರುವ ಕಾರಣದಿಂದ ಬಹಳ ಆಯಾಸವನ್ನು (ಭಾರವನ್ನು) ಸಹಿಸುತ್ತವೆ ಎಂಬುದು ಸಜ್ಜನರಿಗೆ ದೃಷ್ಟಾಂತ.

**ಧೂಮಾಯಂತೇ ವ್ಯಪೇತಾನಿ ಜ್ವಲಂತಿ ಸಹಿತಾನಿ ಚ ।**
**ಧೃತರಾಷ್ಟ್ರೋಲ್ಮುಕಾನೀವ ಜ್ಞಾತಯೋ ಭರತರ್ಷಭ ॥೬೦॥**

ಎಲೈ ಭರತರ್ಷಭನೇ, ಎಲೈ ಧೃತರಾಷ್ಟ್ರನೇ, ಜ್ಞಾತಿಗಳು ಬೇರೆ ಬೇರೆಯಾದರೆ ಕೊಳ್ಳಿಗಳಂತೆ ಹೊಗೆಯನ್ನು ಕಾರುತ್ತಾರೆ. ಒಟ್ಟುಗೂಡಿದರೆ ಕೊಳ್ಳಿಗಳಂತೆ ಉರಿಯುತ್ತಾರೆ.

ಬುದ್ಧಿಯಿಂದ ಭಯವನ್ನು ದೂರಮಾಡಬೇಕು. ತಪಸ್ಸಿನಿಂದ ಮಹತ್ವವನ್ನು ಪಡೆಯಬೇಕು. ಗುರುಶುಶ್ರೂಷೆಯಿಂದ ಜ್ಞಾನವನ್ನೂ, ಯೋಗದಿಂದ ಶಾಂತಿಯನ್ನೂ ಪಡೆಯಬೇಕು.

**ಅನಾಶ್ರಿತಾ ದಾನಪುಣ್ಯಂ ವೇದಪುಣ್ಯಮನಾಶ್ರಿತಾಃ ।**
**ರಾಗದ್ವೇಷವಿನಿರ್ಮುಕ್ತಾ ವಿಚರಂತೀಹ ಮೋಕ್ಷಿಣಃ ॥೫೩॥**

ದಾನಪುಣ್ಯವನ್ನು ಬಯಸದೆ, ವೇದಾಧ್ಯಯನಾದಿ ಜನ್ಯಪುಣ್ಯವನ್ನೂ ಬಯಸದೆ, ರಾಗ-ದ್ವೇಷದಿಂದ ಮುಕ್ತರಾದವರು ಮುಮುಕ್ಷುಗಳಾಗಿ ಇಲ್ಲಿ ಸಂಚರಿಸುತ್ತಾರೆ.

**ಸ್ವಧೀತಸ್ಯ ಸುಯುದ್ಧಸ್ಯ ಸುಕೃತಸ್ಯ ಚ ಕರ್ಮಣಃ ।**
**ತಪಸಶ್ಚ ಸುತಪ್ತಸ್ಯ ತಸ್ಯಾಂತೇ ಸುಖಮೇಧತೇ ॥೫೪॥**

ಒಳ್ಳೆಯ ಅಧ್ಯಯನ, ಒಳ್ಳೆಯ ಯುದ್ಧ, ಚೆನ್ನಾಗಿ ಮಾಡಿದ ಕರ್ಮ, ಚೆನ್ನಾಗಿ ಮಾಡಿದ ತಪಸ್ಸು ಇವುಗಳ ಕೊನೆಯಲ್ಲಿ ಸುಖವನ್ನು ಅನುಭವಿಸುತ್ತಾರೆ.

**ಸಾಸ್ಥೀರ್ಣಾನಿ ಶಯನಾನಿ ಪ್ರಪನ್ನಾ**
**ನ ವೈ ಭಿನ್ನಾ ಜಾತು ನಿದ್ರಾಂ ಲಭಂತೇ ।**
**ನ ಸ್ತ್ರೀಷು ರಾಜನ್ ರತಿಮಾಪ್ನುವಂತಿ**
**ನ ಮಾಗಧೈಃ ಸ್ತೂಯಮಾನಾ ನ ಸೂತೈಃ ॥೫೫॥**

ಯಾರಿಗೆ ಬುದ್ಧಿಭೇದವು ಉಂಟಾಗಿದೆಯೋ ಅವರು ಚೆನ್ನಾಗಿ ಹಾಸಿದ ಸುಪತ್ತಿಗೆಯಲ್ಲಿ ಮಲಗಿದರೂ ನಿದ್ರೆಯನ್ನು ಹೊಂದುವುದಿಲ್ಲ. ಎಲೈ ರಾಜನೇ, ಸ್ತ್ರೀಯರಲ್ಲಿ ರತಿಯನ್ನು ಪಡೆಯುವುದಿಲ್ಲ. ಸೂತ ಮಾಗಧರಿಂದ ಸ್ತೋತ್ರ ಮಾಡಲ್ಪಟ್ಟರೂ ಸಂತೋಷ ಪಡುವುದಿಲ್ಲ.

**ನ ವೈ ಭಿನ್ನಾ ಜಾತು ಚರಂತಿ ಧರ್ಮಂ**
**ನ ವೈ ಸುಖಂ ಪ್ರಾಪ್ನುವಂತೀಹ ಭಿನ್ನಾಃ ।**
**ನ ವೈ ಭಿನ್ನಾ ಗೌರವಂ ಪ್ರಾಪ್ನುವಂತಿ**
**ನ ವೈ ಭಿನ್ನಾಃ ಪ್ರಶಮಂ ರೋಚಯಂತಿ ॥೫೬॥**

ಬುದ್ಧಿಭೇದವನ್ನು ಹೊಂದಿದವರು ಧರ್ಮವನ್ನು ಆಚರಿಸುವುದಿಲ್ಲ. ಸುಖವನ್ನು ಹೊಂದುವುದಿಲ್ಲ. ಗೌರವವನ್ನೂ ಪಡೆಯುವುದಿಲ್ಲ. ಅಂತಹವರಿಗೆ ಸಂಧಿಯೂ ರುಚಿಸುವುದಿಲ್ಲ (ಶಾಂತಿಯೂ ರುಚಿಸುವುದಿಲ್ಲ).

**ನ ವೈ ತೇಷಾಂ ಸ್ವದತೇ ಪಥ್ಯಮುಕ್ತಂ**
**ಯೋಗಕ್ಷೇಮಂ ಕಲ್ಪತೇ ನೈವ ತೇಷಾಮ್ ।**
**ಭಿನ್ನಾನಾಂ ವೈ ಮನುಜೇಂದ್ರ ಪರಾಯಣಂ**
**ನ ವಿದ್ಯತೇ ಕಿಂಚಿದನ್ಯದ್ ವಿನಾಶಾತ್** ॥೫೭॥

ಅವರಿಗೆ ಪಥ್ಯವಾದ ಮಾತುಗಳು ರುಚಿಸುವುದಿಲ್ಲ. ಅವರಿಗೆ ಯೋಗಕ್ಷೇಮಗಳೂ ಉಂಟಾಗುವುದಿಲ್ಲ. ಎಲೈ ಮನುಷ್ಯೇಂದ್ರನೇ, ಬುದ್ಧಿಭೇದವನ್ನು ಹೊಂದಿದ ಮನುಷ್ಯರಿಗೆ ವಿನಾಶವನ್ನು ಬಿಟ್ಟು ಬೇರೆ ಗತಿಯೇ ಇಲ್ಲ.

**ಸಂಭಾವ್ಯಂ ಗೋಷು ಸಂಪನ್ನಂ ಸಂಭಾವ್ಯಂ ಬ್ರಾಹ್ಮಣೇ ತಪಃ ।**
**ಸಂಭಾವ್ಯಂ ಚಾಪಲಂ ಸ್ತ್ರೀಷು ಸಂಭಾವ್ಯಂ ಜ್ಞಾತಿತೋಽಭಯಮ್ ॥**

ಗೋವುಗಳಲ್ಲಿ ಕ್ಷೀರವು ಪ್ರಶಂಸನೀಯವಾದುದು. ಬ್ರಾಹ್ಮಣನಲ್ಲಿ ತಪಸ್ಸು ಪ್ರಶಂಸನೀಯವಾದುದು. ಸ್ತ್ರೀಯರಲ್ಲಿ ಚಂಚಲತೆಯು ಪ್ರಶಂಸನೀಯವಾದುದು. ಜ್ಞಾತಿಗಳಿಂದ ಅಭಯವು ಪ್ರಶಂಸನೀಯವಾದುದು.

**ತಂತವೋಽಪ್ಯಾಯತಾ ನಿತ್ಯಂ ತನವೋ ಬಹುಲಾಃ ಸಮಾಃ ।**
**ಬಹೂನ್ ಬಹುತ್ವಾದಾಯಾಸಾನ್ ಸಹಂತೀತ್ಯುಪಮಾ ಸತಾಮ್॥೫೯॥**

ತೆಳುವಾದ, ದೀರ್ಘವಾದ, ಸಮವಾದ ತಂತು (ದಾರ)ಗಳಿಗೂ ಸಹ ಬಹುತ್ವವಿರುವ ಕಾರಣದಿಂದ ಬಹಳ ಆಯಾಸವನ್ನು (ಭಾರವನ್ನು) ಸಹಿಸುತ್ತವೆ ಎಂಬುದು ಸಜ್ಜನರಿಗೆ ದೃಷ್ಟಾಂತ.

**ಧೂಮಾಯಂತೇ ವ್ಯಪೇತಾನಿ ಜ್ವಲಂತಿ ಸಹಿತಾನಿ ಚ ।**
**ಧೃತರಾಷ್ಟ್ರೋಲ್ಮುಕಾನೀವ ಜ್ಞಾತಯೋ ಭರತರ್ಷಭ** ॥೬೦॥

ಎಲೈ ಭರತರ್ಷಭನೇ, ಎಲೈ ಧೃತರಾಷ್ಟ್ರನೇ, ಜ್ಞಾತಿಗಳು ಬೇರೆ ಬೇರೆಯಾದರೆ ಕೊಳ್ಳಿಗಳಂತೆ ಹೊಗೆಯನ್ನು ಕಾರುತ್ತಾರೆ. ಒಟ್ಟುಗೂಡಿದರೆ ಕೊಳ್ಳಿಗಳಂತೆ ಉರಿಯುತ್ತಾರೆ.

ಬ್ರಾಹ್ಮಣೇಷು ಚ ಯೇ ಶೂರಾಃ ಸ್ತ್ರೀಷು ಜ್ಞಾತಿಷು ಗೋಷು ಚ ।
ವೃಂತಾದಿವ ಫಲಂ ಪಕ್ವಂ ಧೃತರಾಷ್ಟ್ರ ಪತಂತಿ ತೇ ॥೬೧॥

ಯಾರು ಬ್ರಾಹ್ಮಣರ ವಿಷಯದಲ್ಲಿ, ಸ್ತ್ರೀಯರ ವಿಷಯದಲ್ಲಿ, ಜ್ಞಾತಿಗಳ ವಿಷಯದಲ್ಲಿಮತ್ತು ಗೋವುಗಳ ಮೇಲೆ ತಮ್ಮ ಶೌರ್ಯವನ್ನು ತೋರಿಸುತ್ತಾರೆಯೋ ಅವರು ಎಲೈ ಧೃತರಾಷ್ಟ್ರನೇ, ಮಾಗಿದ ಫಲವು ತೊಟ್ಟಿನಿಂದ ಕಳಚಿ ಬೀಳುವಂತೆ ಬೀಳುತ್ತಾರೆ.

ಮಹಾನಪ್ಯೇಕಜೋ ವೃಕ್ಷೋ ಬಲವಾನ್ ಸುಪ್ರತಿಷ್ಠಿತಃ ।
ಪ್ರಸಹ್ಯ ಏವ ವಾತೇನ ಸಸ್ಕಂಧೋ ಮರ್ದಿತುಂ ಕ್ಷಣಾತ್ ॥೬೨॥

ಒಂದೇ ವೃಕ್ಷವು ದೊಡ್ಡದಾಗಿದ್ದರೂ, ಬಲಿಷ್ಠವಾಗಿದ್ದರೂ, ಒಳ್ಳೆಯ ಬೇರುಗಳನ್ನು ಹೊಂದಿದ್ದರೂ ಅದು ವಾಯುವಿನಿಂದ ಒಂದು ಕ್ಷಣದಲ್ಲಿ ಕೊಂಬೆಗಳ ಜೊತೆಯಲ್ಲಿ ಬಲಾತ್ಕರಿಸಲ್ಪಟ್ಟು ಬೀಳಿಸಲು ಸಾಧ್ಯವಾಗುತ್ತದೆ.

ಅಥ ಯೇ ಸಹಿತಾ ವೃಕ್ಷಾಃ ಸಂಘಶಃ ಸುಪ್ರತಿಷ್ಠಿತಾಃ ।
ತೇ ಹಿ ಶೀಘ್ರತಮಾನ್ ವಾತಾನ್ ಸಹಂತೇऽನ್ಯೋನ್ಯಸಂಶ್ರಯಾತ್ ॥

ಮತ್ತು ಯಾವ ವೃಕ್ಷಗಳು ಗುಂಪಾಗಿ ಚೆನ್ನಾಗಿ ಬೇರುಬಿಟ್ಟಿರುತ್ತವೆಯೋ ಅವು ಪರಸ್ಪರವಾಗಿ ಅವಲಂಬಿಸಿರುವುದರಿಂದ ಎಷ್ಟೇ ದೊಡ್ಡ ಬಿರುಗಾಳಿಯನ್ನೂ ಸಹಿಸುತ್ತವೆ.

ಏವಂ ಮನುಷ್ಯಮಪ್ಯೇಕಂ ಗುಣೈರಪಿ ಸಮನ್ವಿತಮ್ ।
ಶಕ್ಯಂ ದ್ವಿಷಂತೋ ಮನ್ಯಂತೇ ವಾಯುರ್ದ್ರುಮಮಿವೈಕಜಮ್ ॥೬೪॥

ಹೀಗೆ ಮನುಷ್ಯನೂ ಒಬ್ಬನೇ ಇದ್ದರೆ ಅವನು ಗುಣಗಳಿಂದ ಕೂಡಿದ್ದರೂ ಅವನ ಶತ್ರುಗಳು ಒಂದು ವೃಕ್ಷವು ವಾಯುವಿನಿಂದ ಬೀಳಿಸಲ್ಪಟ್ಟಂತೆ ಅವನನ್ನು ಬೀಳಿಸಲು ಸಾಧ್ಯ ಎಂದು ತಿಳಿಯುತ್ತಾರೆ.

ಅನ್ಯೋನ್ಯಸಮುಪಸ್ತಂಭಾದ್ ಅನ್ಯೋನ್ಯಾಶ್ರಯಣೇನ ಚ ।
ಜ್ಞಾತಯಃ ಸಂಪ್ರವರ್ಧಂತೇ ಸರಸೀವೋತ್ಪಲಾನ್ಯುತ ॥೬೫॥

ಮತ್ತು ಪರಸ್ಪರವಾಗಿ ಬಲವನ್ನು ಕೊಡುವುದರಿಂದ ಮತ್ತು ಪರಸ್ಪರವಾಗಿ ಆಶ್ರಯಿಸುವುದರಿಂದ ಜ್ಞಾತಿಗಳು ಸರೋವರದ ಉತ್ಪಲಗಳಂತೆ ಅಭಿವೃದ್ಧಿಯನ್ನು ಹೊಂದುತ್ತಾರೆ.

**ಅವಧ್ಯಾ ಬ್ರಾಹ್ಮಣಾ ಗಾವೋ ಜ್ಞಾತಯಃ ಶಿಶವಃ ಸ್ತ್ರಿಯಃ ।**
**ಯೇಷಾಂ ಚಾನ್ನಾನಿ ಭುಂಜೀತ ಯೇ ಚ ಸ್ಯುಃ ಶರಣಾಗತಾಃ ॥೬೬॥**

ಬ್ರಾಹ್ಮಣರು, ಗೋವುಗಳು, ಜ್ಞಾತಿಗಳು, ಶಿಶುಗಳು, ಸ್ತ್ರೀಯರು ಮತ್ತು ಯಾರ ಅನ್ನವನ್ನು ಊಟ ಮಾಡುತ್ತಾರೆಯೋ ಅವರು ಮತ್ತು ಶರಣಾಗತರು - ಇಷ್ಟು ಜನರು ಅವಧ್ಯರಾಗುತ್ತಾರೆ.

**ನ ಮನುಷ್ಯೇ ಗುಣಃ ಕಶ್ಚಿದನ್ಯೋ ಧನವತಾಮಪಿ ।**
**ಅನಾತುರತ್ವಾದ್ ಭದ್ರಂ ತೇ ಮೃತಕಲ್ಪಾ ಹಿ ರೋಗಿಣಃ ॥೬೭॥**

ನಿನಗೆ ಮಂಗಳವಾಗಲಿ. ಧನವುಳ್ಳ ಮನುಷ್ಯರಿಗೂ ಸಹ ಆರೋಗ್ಯವನ್ನು ಬಿಟ್ಟು ಬೇರೆ ಯಾವುದೂ ಗುಣವಿಲ್ಲ. ರೋಗಗ್ರಸ್ತರೂ ಸತ್ತವರಂತೆ ಇರುತ್ತಾರಷ್ಟೆ?

**ಅವ್ಯಾಧಿಜಂ ಕಟುಕಂ ಶೀರ್ಷರೋಗಿ**
**ಪಾಪಾನುಬಂಧಂ ಪರುಷಂ ತೀಕ್ಷ್ಣಮುಗ್ರಮ್ ।**
**ಸತಾಂ ಪೇಯಂ ಯನ್ನ ಪಿಬಂತ್ಯಸಂತೋ**
**ಮನ್ಯುಂ ಮಹಾರಾಜ ಪಿಬ ಪ್ರಶಾಮ್ಯ ॥೬೮॥**

ಎಲೈ ಮಹಾರಾಜನೇ, ವ್ಯಾಧಿಯಿಂದ ಹುಟ್ಟದ, ಕಹಿಯಾದ, ತಲೆಯ ಶೂಲೆಯನ್ನುಂಟು ಮಾಡುವ, ಪಾಪಾನುಬಂಧಿಯಾದ, ಒರಟಾದ, ಹರಿತವಾದ, ಭಯಂಕರವಾದ, ಸಜ್ಜನರು ಮಾತ್ರ ಕುಡಿಯಲು (ಅರಗಿಸಿಕೊಳ್ಳಲು ಸಾಧ್ಯವಾದ) ಅಸಜ್ಜನರು ಕುಡಿಯಲು ಸಾಧ್ಯವಿಲ್ಲದಿರುವ ಕೋಪವನ್ನು ಪಾನ ಮಾಡು. ಶಾಂತಿಯನ್ನು ಹೊಂದುವವನಾಗು.

**ರೋಗಾರ್ದಿತಾ ನ ಫಲಾನ್ಯಾದ್ರಿಯಂತೇ**
**ನ ವೈ ಲಭಂತೇ ವಿಷಯೇಷು ತತ್ವಮ್ ।**

ಬ್ರಾಹ್ಮಣೇಷು ಚ ಯೇ ಶೂರಾಃ ಸ್ತ್ರೀಷು ಜ್ಞಾತಿಷು ಗೋಷು ಚ ।
ವೃಂತಾದಿವ ಫಲಂ ಪಕ್ವಂ ಧೃತರಾಷ್ಟ್ರ ಪತಂತಿ ತೇ ॥೬೧॥

ಯಾರು ಬ್ರಾಹ್ಮಣರ ವಿಷಯದಲ್ಲಿ, ಸ್ತ್ರೀಯರ ವಿಷಯದಲ್ಲಿ, ಜ್ಞಾತಿಗಳ ವಿಷಯದಲ್ಲಿಮತ್ತು ಗೋವುಗಳ ಮೇಲೆ ತಮ್ಮ ಶೌರ್ಯವನ್ನು ತೋರಿಸುತ್ತಾರೆಯೋ ಅವರು ಎಲೈ ಧೃತರಾಷ್ಟ್ರನೇ, ಮಾಗಿದ ಫಲವು ತೊಟ್ಟಿನಿಂದ ಕಳಚಿ ಬೀಳುವಂತೆ ಬೀಳುತ್ತಾರೆ.

ಮಹಾನಪ್ಯೇಕಜೋ ವೃಕ್ಷೋ ಬಲವಾನ್ ಸುಪ್ರತಿಷ್ಠಿತಃ ।
ಪ್ರಸಹ್ಯ ಏವ ವಾತೇನ ಸಸ್ಕಂಧೋ ಮರ್ದಿತುಂ ಕ್ಷಣಾತ್ ॥೬೨॥

ಒಂದೇ ವೃಕ್ಷವು ದೊಡ್ಡದಾಗಿದ್ದರೂ, ಬಲಿಷ್ಠವಾಗಿದ್ದರೂ, ಒಳ್ಳೆಯ ಬೇರುಗಳನ್ನು ಹೊಂದಿದ್ದರೂ ಅದು ವಾಯುವಿನಿಂದ ಒಂದು ಕ್ಷಣದಲ್ಲಿ ಕೊಂಬೆಗಳ ಜೊತೆಯಲ್ಲಿ ಬಲಾತ್ಕರಿಸಲ್ಪಟ್ಟು ಬೀಳಿಸಲು ಸಾಧ್ಯವಾಗುತ್ತದೆ.

ಅಥ ಯೇ ಸಹಿತಾ ವೃಕ್ಷಾಃ ಸಂಘಶಃ ಸುಪ್ರತಿಷ್ಠಿತಾಃ ।
ತೇ ಹಿ ಶೀಘ್ರತಮಾನ್ ವಾತಾನ್ ಸಹಂತೇऽನ್ಯೋನ್ಯಸಂಶ್ರಯಾತ್ ॥

ಮತ್ತು ಯಾವ ವೃಕ್ಷಗಳು ಗುಂಪಾಗಿ ಚೆನ್ನಾಗಿ ಬೇರುಬಿಟ್ಟಿರುತ್ತವೆಯೋ ಅವು ಪರಸ್ಪರವಾಗಿ ಅವಲಂಬಿಸಿರುವುದರಿಂದ ಎಷ್ಟೇ ದೊಡ್ಡ ಬಿರುಗಾಳಿಯನ್ನೂ ಸಹಿಸುತ್ತವೆ.

ಏವಂ ಮನುಷ್ಯಮಪ್ಯೇಕಂ ಗುಣೈರಪಿ ಸಮನ್ವಿತಮ್ ।
ಶಕ್ಯಂ ದ್ವಿಷಂತೋ ಮನ್ಯಂತೇ ವಾಯುರ್ವೃಮಮಿವೈಕಜಮ್ ॥೬೪॥

ಹೀಗೆ ಮನುಷ್ಯನೂ ಒಬ್ಬನೇ ಇದ್ದರೆ ಅವನು ಗುಣಗಳಿಂದ ಕೂಡಿದ್ದರೂ ಅವನ ಶತ್ರುಗಳು ಒಂದು ವೃಕ್ಷವು ವಾಯುವಿನಿಂದ ಬೀಳಿಸಲ್ಪಟ್ಟಂತೆ ಅವನನ್ನು ಬೀಳಿಸಲು ಸಾಧ್ಯ ಎಂದು ತಿಳಿಯುತ್ತಾರೆ.

ಅನ್ಯೋನ್ಯಸಮುಪಸ್ತಂಭಾದ್ ಅನ್ಯೋನ್ಯಾಶ್ರಯಣೇನ ಚ ।
ಜ್ಞಾತಯಃ ಸಂಪ್ರವರ್ಧಂತೇ ಸರಸೀವೋತ್ಪಲಾನ್ಯುತ ॥೬೫॥

ಮತ್ತು ಪರಸ್ಪರವಾಗಿ ಬಲವನ್ನು ಕೊಡುವುದರಿಂದ ಮತ್ತು ಪರಸ್ಪರವಾಗಿ ಆಶ್ರಯಿಸುವುದರಿಂದ ಜ್ಞಾತಿಗಳು ಸರೋವರದ ಉತ್ಪಲಗಳಂತೆ ಅಭಿವೃದ್ಧಿಯನ್ನು ಹೊಂದುತ್ತಾರೆ.

**ಅವಧ್ಯಾ ಬ್ರಾಹ್ಮಣಾ ಗಾವೋ ಜ್ಞಾತಯಃ ಶಿಶವಃ ಸ್ತ್ರಿಯಃ ।**
**ಯೇಷಾಂ ಚಾನ್ನಾನಿ ಭುಂಜೀತ ಯೇ ಚ ಸ್ಯುಃ ಶರಣಾಗತಾಃ ॥೬೬॥**

ಬ್ರಾಹ್ಮಣರು, ಗೋವುಗಳು, ಜ್ಞಾತಿಗಳು, ಶಿಶುಗಳು, ಸ್ತ್ರೀಯರು ಮತ್ತು ಯಾರ ಅನ್ನವನ್ನು ಊಟ ಮಾಡುತ್ತಾರೆಯೋ ಅವರು ಮತ್ತು ಶರಣಾಗತರು - ಇಷ್ಟು ಜನರು ಅವಧ್ಯರಾಗುತ್ತಾರೆ.

**ನ ಮನುಷ್ಯೇ ಗುಣಃ ಕಶ್ಚಿದನ್ಯೋ ಧನವತಾಮಪಿ ।**
**ಅನಾತುರತ್ವಾದ್ ಭದ್ರಂ ತೇ ಮೃತಕಲ್ಪಾ ಹಿ ರೋಗಿಣಃ ॥೬೭॥**

ನಿನಗೆ ಮಂಗಳವಾಗಲಿ. ಧನವುಳ್ಳ ಮನುಷ್ಯರಿಗೂ ಸಹ ಆರೋಗ್ಯವನ್ನು ಬಿಟ್ಟು ಬೇರೆ ಯಾವುದೂ ಗುಣವಿಲ್ಲ. ರೋಗಗ್ರಸ್ತರೂ ಸತ್ತವರಂತೆ ಇರುತ್ತಾರಷ್ಟೆ?

**ಅವ್ಯಾಧಿಜಂ ಕಟುಕಂ ಶೀರ್ಷರೋಗಿ**
**ಪಾಪಾನುಬಂಧಂ ಪರುಷಂ ತೀಕ್ಷ್ಣಮುಗ್ರಮ್ ।**
**ಸತಾಂ ಪೇಯಂ ಯನ್ನ ಪಿಬಂತ್ಯಸಂತೋ**
**ಮನ್ಯುಂ ಮಹಾರಾಜ ಪಿಬ ಪ್ರಶಾಮ್ಯ ॥೬೮॥**

ಎಲೈ ಮಹಾರಾಜನೇ, ವ್ಯಾಧಿಯಿಂದ ಹುಟ್ಟದ, ಕಹಿಯಾದ, ತಲೆಯ ಶೂಲೆಯನ್ನುಂಟು ಮಾಡುವ, ಪಾಪಾನುಬಂಧಿಯಾದ, ಒರಟಾದ, ಹರಿತವಾದ, ಭಯಂಕರವಾದ, ಸಜ್ಜನರು ಮಾತ್ರ ಕುಡಿಯಲು (ಅರಗಿಸಿಕೊಳ್ಳಲು ಸಾಧ್ಯವಾದ) ಅಸಜ್ಜನರು ಕುಡಿಯಲು ಸಾಧ್ಯವಿಲ್ಲದಿರುವ ಕೋಪವನ್ನು ಪಾನ ಮಾಡು. ಶಾಂತಿಯನ್ನು ಹೊಂದುವವನಾಗು.

**ರೋಗಾರ್ದಿತಾ ನ ಫಲಾನ್ಯಾದ್ರಿಯಂತೇ**
**ನ ವೈ ಲಭಂತೇ ವಿಷಯೇಷು ತತ್ವಮ್ ।**

ದುಃಖೋಪೇತಾ ರೋಗಿಣೋ ನಿತ್ಯಮೇವ
ನ ಬುದ್ಧ್ಯಂತೇ ಧನಯೋಗಾನ್ನ ಸೌಖ್ಯಮ್ ॥೬೯॥

ರೋಗಗ್ರಸ್ತರಾದವರು ಹಣ್ಣುಗಳನ್ನು ಬಯಸುವುದಿಲ್ಲ. ವಿಷಯಗಳ ಸಾರಭಾಗವನ್ನು ಪಡೆಯುವುದಿಲ್ಲ. ರೋಗಿಗಳು ಯಾವಾಗಲೂ ದುಃಖದಿಂದ ಕೂಡಿರುತ್ತಾರೆ. ಅವರು ಧನಪ್ರಾಪ್ತಿಯಿಂದಲೂ ಸುಖವನ್ನು ಹೊಂದುವುದಿಲ್ಲ.

ಪುರಾऽಪ್ಯುಕ್ತಂ ನಾಕರೋಸ್ತ್ವಂ ವಚೋ ಮೇ
ದ್ಯೂತೇ ಜಿತಾಂ ದ್ರೌಪದೀಂ ಪ್ರೇಕ್ಷ್ಯ ರಾಜನ್ ।
ದುರ್ಯೋಧನಂ ವಾರಯೇತ್ಯಕ್ಷವತ್ಯಾಂ
ಕಿತವತ್ವಂ ವೈ ಪಂಡಿತಾ ವರ್ಜಯಂತಿ ॥೭೦॥

ಎಲೈ ರಾಜನೇ, ದ್ಯೂತದಲ್ಲಿ ಜಿತಳಾದ ದ್ರೌಪದಿಯನ್ನು ನೋಡಿ ನಾನು ಹಿಂದೆಯೇ ನಿನಗೆ ಅಕ್ಷಕ್ರೀಡೆಯಲ್ಲಿ ದುರ್ಯೋಧನನನ್ನು ತಡೆ ಎಂದು ಹೇಳಿದೆನು. ನೀನು ನನ್ನ ಮಾತನ್ನು ನಡೆಸಿಕೊಡಲಿಲ್ಲ. ದ್ಯೂತವನ್ನು ಪಂಡಿತರು ಪರಿತ್ಯಜಿಸುತ್ತಾರೆ.

ನ ತದ್ ಬಲಂ ಯನ್ಮೃದುನಾ ವಿರುಧ್ಯತೇ
ಸೂಕ್ಷ್ಮೋ ಧರ್ಮಸ್ತರಸಾ ಸೇವಿತವ್ಯಃ ।
ಪ್ರಧ್ವಂಸಿನೀ ಕ್ರೂರಸಮಾಹಿತಾ ಶ್ರೀಃ
ಮೃದುಪ್ರೋಢಾ ಗಚ್ಛತಿ ಪುತ್ರಪೌತ್ರಾನ್ ॥೭೧॥

ಮೃದುವಾದ ಮನುಷ್ಯನ ಮೇಲೆ ವಿರೋಧ ಮಾಡಿ ಪ್ರಯೋಗಿಸಿದ ಬಲವು ಬಲವೇ ಅಲ್ಲ. ಸೂಕ್ಷ್ಮವಾದ ಧರ್ಮವನ್ನು ಶೀಘ್ರವಾಗಿ ತಿಳಿಯಬೇಕು. ತಿಳಿದು ಸೇವಿಸಬೇಕು. ಕ್ರೂರನಲ್ಲಿರುವ ಸಂಪತ್ತು ಅವನ ನಾಶವನ್ನು ಉಂಟುಮಾಡುತ್ತದೆ. ಮೃದುವಾದ ಮನುಷ್ಯರು ಗಳಿಸಿದ ಸಂಪತ್ತು ಮಕ್ಕಳು ಮತ್ತು ಮೊಮ್ಮಕ್ಕಳವರೆಗೂ ಹೋಗುತ್ತದೆ.

ಧಾರ್ತರಾಷ್ಟ್ರಾಃ ಪಾಂಡವಾನ್ ಪಾಲಯಂತು
ಪಾಂಡೋಃ ಪುತ್ರಾಸ್ತವ ಪುತ್ರಾಂಶ್ಚ ಪಾಂತು ।
ಏಕಾರಿಮಿತ್ರಾಃ ಕುರವೋ ಹ್ಯೇಕಕಾರ್ಯಾ
ಜೀವಂತು ರಾಜನ್ ಸುಖಿನಃ ಸಮೃದ್ಧಾಃ ॥೭೨॥

ಧೃತರಾಷ್ಟ್ರಪುತ್ರರು ಪಾಂಡವರನ್ನು ರಕ್ಷಿಸಲಿ. ಪಾಂಡುಪುತ್ರರು ನಿನ್ನ ಪುತ್ರರನ್ನು ರಕ್ಷಿಸಲಿ. ಎಲೈ ರಾಜನೇ, ಕುರುಗಳು ಸಮಾನವಾದ ಶತ್ರು-ಮಿತ್ರರನ್ನು ಹೊಂದಿದವರಾಗಿ, ಸಮಾನವಾದ ಕಾರ್ಯಗಳನ್ನು ಹೊಂದಿದವರಾಗಿ ಸುಖ-ಸಮೃದ್ಧಿಗಳಿಂದ ಜೀವಿಸಲಿ.

**ಮೇಢೀಭೂತಃ ಕೌರವಾಣಾಂ ತ್ವಮದ್ಯ**
**ತ್ವಯ್ಯಾಯತ್ತಂ ಕುರುಕುಲಮಾಜಮೀಢ ।**
**ಪಾರ್ಥಾನ್ ಬಾಲಾನ್ ವನವಾಸಪ್ರತಪ್ತಾನ್**
**ಗೋಪಾಯಸ್ವ ಸ್ವಂ ಯಶಸ್ತಾತ ರಕ್ಷನ್** ॥೭೩॥

ಎಲೈ ಆಜಮೀಢನೇ, ನೀನು ಕೌರವರಿಗೆ ಈ ದಿನ ಮೇಢಿಯಂತೆ ಇದ್ದೀಯೆ. ಕುರುಕುಲವು ನಿನ್ನನ್ನು ಅವಲಂಬಿಸಿದೆ. ನೀನು ನಿನ್ನ ಕೀರ್ತಿಯನ್ನು ರಕ್ಷಿಸಿಕೊಂಡು ವನವಾಸದ ಕ್ಲೇಶವನ್ನು ಅನುಭವಿಸಿರುವ ಬಾಲಕರಾದ ಪಾಂಡವರನ್ನು ರಕ್ಷಿಸುವವನಾಗು.

**ಸಂಧತ್ಸ್ವ ತ್ವಂ ಕೌರವ ಪಾಂಡುಪುತ್ರೈಃ**
**ಮಾ ತೇಽಂತರಂ ರಿಪವಃ ಪ್ರಾರ್ಥಯಂತು ।**
**ಸತ್ಯೇ ಸ್ಥಿತಾಸ್ತೇ ನರದೇವ ಸರ್ವೇ**
**ದುರ್ಯೋಧನಂ ಸ್ಥಾಪಯ ತ್ವಂ ಸುಮಾರ್ಗೇ** ॥೭೪॥

ಎಲೈ ಕೌರವನೇ, ನೀನು ಪಾಂಡುಪುತ್ರರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊ. ಶತ್ರುಗಳು ನಿಮ್ಮಿಬ್ಬರ ನಡುವೆ ಛಿದ್ರವನ್ನು ಆಶಿಸುವುದು ಬೇಡ. ಎಲೈ ನರದೇವನೇ, ಪಾಂಡವರೆಲ್ಲರೂ ಸತ್ಯದಲ್ಲಿ ಸ್ಥಿತರಾಗಿದ್ದಾರೆ. ನೀನು ದುರ್ಯೋಧನನನ್ನು ಸನ್ಮಾರ್ಗದಲ್ಲಿ ಇಡುವವನಾಗು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಷಟ್‌ತ್ರಿಂಶೋಽಧ್ಯಾಯಃ ॥
॥ ಪ್ರಜಾಗರಪರ್ವಣಿ ಪಂಚಮೋಽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಮೂವತ್ತಾರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

# ಮೂವತ್ತೇಳನೆಯ ಅಧ್ಯಾಯ

ವಿದುರ ನೀತಿ. ಪಾಂಡವರಿಗೆ ರಾಜ್ಯ ಕೊಡುವಂತೆ ನಿರ್ಬಂಧ.

**ವಿದುರಃ**

**ಸಪ್ತದಶೇಮಾನ್ ರಾಜೇಂದ್ರ ಮನುಃ ಸ್ವಾಯಂಭುವೋಽಬ್ರವೀತ್ ।**
**ವೈಚಿತ್ರವೀರ್ಯ ಪುರುಷಾನ್ ಆಕಾಶಂ ಮುಷ್ಟಿಭಿರ್ಹತಃ ॥೧॥**

**ತಾನೇವೇಂದ್ರಸ್ಯ ಹಿ ಧನುರನಾಮ್ಯಂ ನಮತೋಽಬ್ರವೀತ್ ।**
**ಅಥೋ ಮರೀಚಿನಃ ಪಾದಾನಗ್ರಾಹ್ಯಾನ್ ಗೃಹ್ಣತಸ್ತಥಾ ॥೨॥**

ವಿದುರ– ಎಲೈ ರಾಜೇಂದ್ರನೇ, ವಿಚಿತ್ರವೀರ್ಯಪುತ್ರನೇ, ಈ ಹದಿನೇಳು ಪುರುಷರನ್ನು ಆಕಾಶವನ್ನು ಮುಷ್ಟಿಯಿಂದ ಗುದ್ದುವವರು ಎಂದು ಸ್ವಾಯಂಭುವ ಮನುವು ಹೇಳಿದ್ದಾನೆ. ಅವರನ್ನೇ ಬಗ್ಗಿಸಲಾರದ ಇಂದ್ರನ ಧನುಸ್ಸನ್ನು (ಕಾಮನ ಬಿಲ್ಲನ್ನು) ಬಗ್ಗಿಸುವವರೆಂದೂ ಮತ್ತು ಕೈಯಲ್ಲಿ ಹಿಡಿಯಲಾಗದ ಸೂರ್ಯಕಿರಣಗಳನ್ನು ಕೈಯಲ್ಲಿ ಹಿಡಿಯುವವರೆಂದೂ ಹೇಳಿದ್ದಾನೆ.

**ಯಚ್ಚಾಶಿಷ್ಯಂ ಶಾಸ್ತಿ ವೈ ಯಶ್ಚ ತುಷ್ಯೇದ್**
**ಯಶ್ಚಾತಿವೇಲಂ ಭಜತೇ ದ್ವಿಷಂತಮ್ ।**
**ಸ್ತ್ರಿಯಶ್ಚ ನೋ ರಕ್ಷತಿ ಭದ್ರಮಸ್ತು ತೇ**
**ಯಶ್ಚಾಯಾಚ್ಯಂ ಯಾಚತೇ ಕಥ್ಯತೇ ವಾ ॥೩॥**

ಯಾವನು ಶಿಷ್ಯನಲ್ಲದವನಿಗೆ ಶಾಸನ ಮಾಡುತ್ತಾನೆಯೋ, ಯಾವನು ತೃಪ್ತಿಯನ್ನು ಪಡುತ್ತಾನೆಯೋ, ಯಾವನು ಶತ್ರುವನ್ನು ಬಹಳವಾಗಿ ಭಜಿಸುತ್ತಾನೆಯೋ, ಯಾವನು ಸ್ತ್ರೀಯರನ್ನು ರಕ್ಷಿಸುವುದಿಲ್ಲವೋ, ಯಾವನು ಬೇಡಬಾರದವನನ್ನು ಬೇಡುತ್ತಾನೆಯೋ ಅಥವಾ ಹೊಗಳುತ್ತಾನೆಯೋ;

**ಯಶ್ಚಾಭಿಜಾತಃ ಪ್ರಕರೋತ್ಯಕಾರ್ಯಂ**
**ಯಶ್ಚಾಬಲೋ ಬಲಿನಾಂ ನಿತ್ಯವೈರೀ ।**
**ಅಶ್ರದ್ದಧಾನಾಯ ಚ ಯೋ ಬ್ರವೀತಿ**
**ಯಶ್ಚಾಕಾಮಂ ಕಾಮಯತೇ ನರೇಂದ್ರ ॥೪॥**

ಯಾವನು ಒಳ್ಳೆಯ ಕುಲದಲ್ಲಿ ಹುಟ್ಟಿ ಅಕಾರ್ಯವನ್ನು ಮಾಡುತ್ತಾನೆಯೋ, ಯಾವನು ದುರ್ಬಲನಾಗಿ ಬಲಿಷ್ಠರ ಜೊತೆಯಲ್ಲಿ ನಿತ್ಯವೂ ವೈರವನ್ನು ಮಾಡುತ್ತಾನೆಯೋ, ಯಾವನು ಶ್ರದ್ಧೆ ಇಲ್ಲದವರಿಗೆ ಉಪದೇಶ ಮಾಡುತ್ತಾನೆಯೋ, ಯಾವನು ಕಾಮವಿಲ್ಲದವನನ್ನು ಕಾಮಿಸುತ್ತಾನೆಯೋ;

ವಧ್ವಾ ವಾಸಂ ಶ್ವಶುರೋ ಯಶ್ಚ ಮನ್ಯತೇ
ವಧ್ವಾ ವಾಸಂ ಸಹತೇ ಮಾನಕಾಮಃ ।
ಪರಕ್ಷೇತ್ರೇ ನಿರ್ವಪತಿ ಯಶ್ಚ ಬೀಜಂ
ಸ್ತ್ರಿಯಶ್ಚ ಯಃ ಪರಿವದತೇಽತಿವೇಲಮ್ ॥೫॥

ಎಲೈ ನರೇಂದ್ರನೇ, ಯಾವ ಮಾವನು ಸೊಸೆಯ ಜೊತೆಯಲ್ಲಿ ವಾಸ ಮಾಡುವುದನ್ನು ಅಂಗೀಕರಿಸುತ್ತಾನೆಯೋ, ಯಾವ ಮಾನವುಳ್ಳವನು ಸೊಸೆಯ ಜೊತೆಯಲ್ಲಿ ವಾಸವನ್ನು ಸಹಿಸುತ್ತಾನೆಯೋ, ಯಾವನು ಪರಕ್ಷೇತ್ರದಲ್ಲಿ ಬೀಜಾವಾಪ ಮಾಡುತ್ತಾನೆಯೋ, ಯಾವನು ಸ್ತ್ರೀಯರನ್ನು ಬಹಳವಾಗಿ ನಿಂದಿಸುತ್ತಾನೆಯೋ;

ಯಶ್ಚಾಪಿ ಲಬ್ಧ್ವಾ ನ ಸ್ಮರಾಮೀತಿ ವಾದೀ
ದತ್ತ್ವಾ ಚ ಯಃ ಕತ್ಥತಿ ಯಾಚ್ಯಮಾನಮ್ ।
ಯಶ್ಚಾಸತಃ ಸತ್ವಮುಪಾನಯೀತ
ಏತಾನ್ ನಯಂತಿ ನಿರಯಂ ಪಾಶಹಸ್ತಾಃ ॥೬॥

ಯಾವನು ಒಬ್ಬನಿಂದ ವಸ್ತುವನ್ನು ತೆಗೆದುಕೊಂಡು ನನಗೆ ಅದರ ಸ್ಮರಣೆ ಇಲ್ಲ ಎಂದು ಹೇಳುತ್ತಾನೆಯೋ, ಬೇಡುವವನಿಗೆ ನೀಡಿ ಯಾವನು ತನ್ನನ್ನೇ ಹೊಗಳಿಕೊಳ್ಳುತ್ತಾನೆಯೋ, ಯಾವನು ಅಸಜ್ಜನರಿಂದ ವಸ್ತುಗಳನ್ನು ಸ್ವೀಕರಿಸುತ್ತಾನೆಯೋ ಈ ಹದಿನೇಳು ಜನರನ್ನು ಪಾಶಹಸ್ತರಾದ ಯಮಭಟರು ನರಕಕ್ಕೆ ಒಯ್ಯುತ್ತಾರೆ.

ಯಸ್ಮಿನ್ ಯಥಾ ವರ್ತತೇ ಯೋ ಮನುಷ್ಯಃ
ತಸ್ಮಿಂಸ್ತಥಾ ವರ್ತಿತವ್ಯಂ ಸ ಧರ್ಮಃ ।
ಮಾಯಾಚಾರೋ ಮಾಯಯಾ ಬಾಧಿತವ್ಯಃ
ಸಾಧ್ವಾಚಾರಃ ಸಾಧುನಾ ಪ್ರತ್ಯುಪೇಯಃ ॥೭॥

ಯಾವ ಮನುಷ್ಯನು ಯಾರಲ್ಲಿ ಯಾವ ರೀತಿಯಲ್ಲಿ ನಡೆದುಕೊಳ್ಳುತ್ತಾನೆಯೋ, ಆ ಮನುಷ್ಯನ ವಿಷಯದಲ್ಲಿಯೂ ಹಾಗೆಯೇ ನಡೆದುಕೊಳ್ಳುವುದು ಧರ್ಮ. ಕಪಟದಿಂದ ನಡೆದುಕೊಳ್ಳುವವರನ್ನು ಕಪಟದಿಂದಲೇ ಬಾಧಿಸಬೇಕು. ಒಳ್ಳೆಯ ನಡತೆಯುಳ್ಳವರನ್ನು ಒಳ್ಳೆಯ ನಡತೆಯಿಂದಲೇ ಸ್ವೀಕರಿಸಬೇಕು.

ಜರಾ ರೂಪಂ ಹರತಿ ಹಿ ಧೈರ್ಯಮಾಶಾ
ಮೃತ್ಯುಃ ಪ್ರಾಣಾನ್ ಧರ್ಮಚರ್ಯಾಮಸೂಯಾ ।
ಕಾಮೋ ಹ್ರಿಯಂ ವೃತ್ತಮನಾರ್ಯಸೇವಾ
ಕ್ರೋಧಃ ಶ್ರಿಯಂ ಸರ್ವಮೇವಾಭಿಮಾನಃ ॥೮॥

ಮುಪ್ಪು ರೂಪವನ್ನು ನಾಶಪಡಿಸುತ್ತದೆ. ಆಸೆಯು ಧೈರ್ಯವನ್ನು ನಾಶಪಡಿಸುತ್ತದೆ. ಮೃತ್ಯುವು ಪ್ರಾಣಗಳನ್ನು ನಾಶಪಡಿಸುತ್ತದೆ. ಅಸೂಯೆಯು ಧರ್ಮಾಚರಣೆಯನ್ನು ನಾಶಪಡಿಸುತ್ತದೆ. ಕಾಮವು ನಾಚಿಕೆಯನ್ನು ನಾಶಪಡಿಸುತ್ತದೆ. ಅನಾರ್ಯಸೇವೆಯು ನಡತೆಯನ್ನು ನಾಶಪಡಿಸುತ್ತದೆ. ಕ್ರೋಧವು ಸಂಪತ್ತನ್ನು ನಾಶಪಡಿಸುತ್ತದೆ. ಅಹಂಕಾರವು ಎಲ್ಲವನ್ನೂ ನಾಶಪಡಿಸುತ್ತದೆ.

ಧೃತರಾಷ್ಟ್ರಃ

ಶತಾಯುರುಕ್ತಃ ಪುರುಷಃ ಸರ್ವವೇದೇಷು ವೈ ಯದಾ ।
ಪ್ರಾಪ್ನೋತ್ಯಥ ಚ ತತ್ ಸರ್ವಮಾಯುಃ ಕೇನೇಹ ಹೇತುನಾ ॥೯॥

ಧೃತರಾಷ್ಟ್ರ- ಎಲ್ಲ ವೇದಗಳಲ್ಲಿ ಪುರುಷನಿಗೆ ನೂರುವರ್ಷ ಆಯುಸ್ಸು ಎಂದು ಹೇಳಲ್ಪಟ್ಟಿದೆ. ಪುರುಷನು ಆ ಪೂರ್ಣವಾದ ಆಯುಸ್ಸನ್ನು ಯಾವ ಕಾರಣದಿಂದ ಪಡೆಯುತ್ತಾನೆ?

ವಿದುರಃ

ಅಭಿಮಾನೋऽತಿವಾದಶ್ಚ ತಥಾऽತ್ಯಾಗೋ ನರಾಧಿಪ ।
ಕ್ರೋಧಶ್ಚಾತ್ಮವಿಧಿತ್ಸಾ ಚ ಮಿತ್ರದ್ರೋಹಶ್ಚ ತಾನಿ ಷಟ್ ॥೧೦॥

ಏತ ಏವಾಯಸಸ್ತೀಕ್ಷ್ಣಾಃ ಕೃಂತಂತ್ಯಾಯೂಂಷಿ ದೇಹಿನಾಮ್ ।
ಏತಾನಿ ಮಾನವಾನ್ ಘ್ನಂತಿ ನ ಮೃತ್ಯುರ್ಭದ್ರಮಸ್ತು ತೇ ॥೧೧॥

ವಿದುರ– ಎಲೈ ನರಾಧಿಪನೇ, ಅಹಂಕಾರ, ಪರನಿಂದೆ, ಅತ್ಯಾಗ, ಕ್ರೋಧ, ಸ್ವಾರ್ಥಪರತೆ, ಮಿತ್ರದ್ರೋಹ ಈ ಆರು ಪದಾರ್ಥಗಳೇ ಹರಿತವಾದ ಕತ್ತಿಗಳು. ಅವು ಪುರುಷನ ಆಯಸ್ಸನ್ನು ಕತ್ತರಿಸುತ್ತವೆ. ಮನುಷ್ಯರನ್ನು ಇವೇ ಕೊಲ್ಲುತ್ತವೆ. ಮೃತ್ಯುವು ಕೊಲ್ಲುವುದಲ್ಲ. ನಿನಗೆ ಮಂಗಳವಾಗಲಿ.

ವಿಶ್ವಸ್ತಸ್ಯೈತಿ ಯೋ ದಾರಾನ್ ಯಶ್ಚಾಪಿ ಗುರುತಲ್ಪಗಃ ।
ವೃಷಲೀಪತಿರ್ದ್ವಿಜೋ ಯಶ್ಚ ಪಾನಪಶ್ಚೈವ ಭಾರತ ॥೧೨॥

ಆದೇಶಕೃದ್ ವೃತ್ತಿಹಂತಾ ದ್ವಿಜಾನಾಂ ಪ್ರೇಷಕಶ್ಚ ಯಃ ।
ಶರಣಾಗತಹಾ ಚೈವ ಸರ್ವೇ ಬ್ರಹ್ಮಹಣೈಃ ಸಮಾಃ ॥೧೩॥

ಏತೈಃ ಸಮೇತ್ಯ ಕರ್ತವ್ಯಂ ಪ್ರಾಯಶ್ಚಿತ್ತಮಿತಿ ಸ್ಮೃತಮ್ ॥೧೪॥

ಯಾವನು ವಿಶ್ವಾಸಪಾತ್ರನ ಪತ್ನಿಯ ಮೇಲೆ ಅತ್ಯಾಚಾರ ಮಾಡುತ್ತಾನೆಯೋ, ಯಾವನು ಗುರುಪತ್ನಿಯ ಸಹವಾಸವನ್ನು ಮಾಡುತ್ತಾನೆಯೋ, ಎಲೈ ಭಾರತನೇ, ಯಾವ ದ್ವಿಜನು ಶೂದ್ರಳನ್ನು ಮದುವೆ ಮಾಡಿಕೊಳ್ಳುತ್ತಾನೆಯೋ ಮತ್ತು ಮದ್ಯಪಾನವನ್ನು ಮಾಡುತ್ತಾನೆಯೋ, ಯಾವನು ಬ್ರಾಹ್ಮಣರಿಗೆ ಆಜ್ಞೆ ಮಾಡುತ್ತಾನೆಯೋ, ಬ್ರಾಹ್ಮಣರನ್ನು ಯಾವನು ಸೇವಕನನ್ನಾಗಿ ಮಾಡಿಕೊಳ್ಳುತ್ತಾನೆಯೋ, ಯಾವನು ಶರಣಾಗತರಾದವರನ್ನು ಕೊಲ್ಲುತ್ತಾನೆಯೋ ಇವರೆಲ್ಲರೂ ಬ್ರಹ್ಮಹತ್ಯೆಯನ್ನು ಮಾಡಿದವರಿಗೆ ಸಮಾನರಾದವರು. ಇವರ ಸಹವಾಸವನ್ನು ಮಾಡಿದರೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು.

ಗೃಹೀ ವದಾನ್ಯೋಽನಪವಿದ್ಧಾಗ್ನಿಹೋತ್ರಃ
ಶೇಷಾನ್ನಭೋಕ್ತಾ ಹ್ಯವಿಹಿಂಸಕಶ್ಚ ।
ನಾನರ್ಥಕೃತ್ಯಾಕುಲಿತಃ ಕೃತಜ್ಞಃ
ಸತ್ಯೋ ಮೃದುಃ ಸ್ವರ್ಗಮುಪೈತಿ ವಿದ್ವಾನ್ ॥೧೫॥

ಉದಾರಿಯೂ, ಅಗ್ನಿಹೋತ್ರವನ್ನು ಬಿಡದವನೂ, ಯಜ್ಞ ಮತ್ತು ಅತಿಥಿಗಳ ಶೇಷವನ್ನು ಭುಂಜಿಸುವವನೂ, ಇನ್ನೊಬ್ಬರನ್ನು ಹಿಂಸೆ ಮಾಡದವನೂ, ಅನರ್ಥವಾದ ಕಾರ್ಯಗಳನ್ನು ಮಾಡದವನೂ, ಕೃತಜ್ಞನಾದವನೂ, ಸತ್ಯವಚನನೂ, ಮೃದುವೂ, ವಿದ್ವಾಂಸನೂ ಆದ ಗೃಹಸ್ಥನು ಸ್ವರ್ಗವನ್ನು ಪಡೆಯುತ್ತಾನೆ.

ಸುಲಭಾಃ ಪುರುಷಾ ರಾಜನ್ ಸತತಂ ಪ್ರಿಯವಾದಿನಃ ।
ಅಪ್ರಿಯಸ್ಯ ತು ಪಥ್ಯಸ್ಯ ವಕ್ತಾ ಶ್ರೋತಾ ಚ ದುರ್ಲಭಃ ॥೧೬॥

ರಾಜನೇ, ಸತತವಾಗಿ ಪ್ರಿಯವನ್ನು ಮಾತನಾಡುವ ಪುರುಷರು ಸುಲಭವಾಗಿ ದೊರೆಯುತ್ತಾರೆ. ಅಪ್ರಿಯವಾದರೂ ಹಿತವನ್ನು ಹೇಳುವವನು ಮತ್ತು ಕೇಳುವವನು ಇಬ್ಬರೂ ದುರ್ಲಭರು.

ಯೋ ಹಿ ಧರ್ಮಂ ಸಮಾಶ್ರಿತ್ಯ ಹಿತ್ವಾ ಭರ್ತುಃ ಪ್ರಿಯಾಪ್ರಿಯೇ ।
ಅಪ್ರಿಯಾಣ್ಯಾಹ ಪಥ್ಯಾನಿ ತೇನ ರಾಜಾ ಸಹಾಯವಾನ್ ॥೧೭॥

ಯಾವನು ಧರ್ಮವನ್ನು ಅವಲಂಬಿಸಿ ಸ್ವಾಮಿಯ ಪ್ರಿಯಾಪ್ರಿಯಗಳನ್ನು ಲೆಕ್ಕಿಸದೆ ಅವನಿಗೆ ಹಿತವಾದುದನ್ನೇ ನುಡಿಯುತ್ತಾನೆಯೋ ರಾಜನು ಅಂತಹವನಿಂದ ಸಹಾಯವುಳ್ಳವನಾಗುತ್ತಾನೆ.

ತ್ಯಜೇತ್ ಕುಲಾರ್ಥೇ ಪುರುಷಂ ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್ ।
ಗ್ರಾಮಂ ಜನಪದಸ್ಯಾರ್ಥೇ ಆತ್ಮಾರ್ಥೇ ಪೃಥಿವೀಂ ತ್ಯಜೇತ್ ॥೧೮॥

ಒಂದು ಕುಲದ ಸಲುವಾಗಿ ಒಬ್ಬ ಪುರುಷನನ್ನು ಬಿಡಬೇಕಾದೀತು. ಒಂದು ಗ್ರಾಮದ ಸಲುವಾಗಿ ಒಂದು ಕುಲವನ್ನು ಬಿಡಬೇಕಾದೀತು. ಜನಪದದ (ರಾಜ್ಯದ) ಸಲುವಾಗಿ ಒಂದು ಗ್ರಾಮವನ್ನು ಬಿಡಬೇಕಾದೀತು. ತನ್ನ ಸಲುವಾಗಿ ಇಡೀ ಭೂಮಿಯನ್ನೇ ಬಿಡಬೇಕಾದೀತು.

ಆಪದರ್ಥಂ ಧನಂ ರಕ್ಷೇದ್ ದಾರಾನ್ ರಕ್ಷೇದ್ ಧನೈರಪಿ ।
ಆತ್ಮಾನಂ ಸರ್ವತೋ ರಕ್ಷೇದ್ ದಾರೈರಪಿ ಧನೈರಪಿ ॥೧೯॥

ಆಪತ್ತಿಗೋಸ್ಕರವಾಗಿ (ಆಪತ್ತನ್ನು ಪರಿಹಾರ ಮಾಡಿಕೊಳ್ಳಲು) ಧನವನ್ನು ರಕ್ಷಿಸಬೇಕು. ಧನದಿಂದ ಪತ್ನಿಯರನ್ನು ರಕ್ಷಿಸಬೇಕು. ಪತ್ನಿಯರಿಂದಲೂ ಮತ್ತು ಧನದಿಂದಲೂ ತನ್ನನ್ನು ಎಲ್ಲ ರೀತಿಯಲ್ಲಿಯೂ ರಕ್ಷಿಸಿಕೊಳ್ಳಬೇಕು.

ದ್ಯೂತಮೇತತ್ ಪುರಾ ಕಲ್ಪೇ ದೃಷ್ಟಂ ವೈರಕರಂ ನೃಣಾಮ್ ।
ತಸ್ಮಾದ್ ದ್ಯೂತಂ ನ ಸೇವೇತ ಹಾಸ್ಯಾರ್ಥಮಪಿ ಬುದ್ಧಿಮಾನ್ ॥೨೦॥

ಹಿಂದಿನ ಕಲ್ಪದಲ್ಲಿ ಈ ದ್ಯೂತವು ಮನುಷ್ಯರಿಗೆ ವೈರವನ್ನು ಉಂಟುಮಾಡುವಂತಹದು ಎಂದು ದೃಷ್ಟವಾಗಿದೆ. ಆದ್ದರಿಂದ ವಿವೇಕಿಯಾದವನು ಹಾಸ್ಯದ ಸಲುವಾಗಿಯೂ ದ್ಯೂತವನ್ನು ಸೇವಿಸಬಾರದು.

ಉಕ್ತಂ ಮಯಾ ದ್ಯೂತಕಾಲೇಽಪಿ ರಾಜನ್
ನೇದಂ ಯುಕ್ತಂ ವಚನಂ ಪ್ರಾತಿಪೇಯಮ್ ।
ಯಥೌಷಧಂ ಪಥ್ಯಮಿವಾತುರಸ್ಯ
ನ ರೋಚತೇ ತವ ವೈಚಿತ್ರವೀರ್ಯ ॥೨೧॥

ರಾಜನೇ, ದ್ಯೂತಕಾಲದಲ್ಲಿಯೂ ನಾನು ನಿನಗೆ ಈ ಮಾತನ್ನು ಹೇಳಿದೆ. ಆದರೆ ವಿಚಿತ್ರವೀರ್ಯಪುತ್ರನೇ, ರೋಗಿಗೆ ಔಷಧವು ಹಿಡಿಸದಿರುವಂತೆ ನನ್ನ ಯೋಗ್ಯವಾದ ಈ ಮಾತುಗಳು ನಿನಗೆ ಹಿಡಿಸುವುದಿಲ್ಲ.

ಕಾಕೈರಿಮಾಂಶ್ಚಿತ್ರಬರ್ಹಾನ್ ಮಯೂರಾನ್
ಪರಾಜಯೇಥಾಃ ಪಾಂಡವಾನ್ ಧಾರ್ತರಾಷ್ಟ್ರೈಃ ।
ಹಿತ್ವಾ ಸಿಂಹಾನ್ ಕ್ರೋಷ್ಟುಕಾನ್ ಗೂಹಮಾನಃ
ಪ್ರಾಪ್ತೇ ಕಾಲೇ ಶೋಚಿತಾ ತ್ವಂ ನರೇಂದ್ರ ॥೨೨॥

ನರೇಂದ್ರನೇ, ಕಾಗೆಗಳಂತಿರುವ ನಿನ್ನ ಪುತ್ರರಿಂದ ಸುಂದರವಾದ ಪುಕ್ಕಗಳಿರುವ ನವಿಲುಗಳಾದ ಈ ಪಾಂಡವರನ್ನು ನೀನು ಪರಾಜಯಿಸುತ್ತಿದ್ದೀಯೆ. ಸಿಂಹಗಳನ್ನು ತ್ಯಜಿಸಿ ನರಿಗಳನ್ನು ರಕ್ಷಿಸುವ ನೀನು ಕಾಲವು ಬಂದಾಗ ಶೋಕಪಡುವವನಾಗುವಿ.

ಯಸ್ತಾತ ನೋ ಕ್ರುದ್ಧ್ಯತಿ ಸರ್ವಕಾಲಂ
ಭೃತ್ಯಸ್ಯ ಭಕ್ತಸ್ಯ ಹಿತೇ ರತಸ್ಯ ।
ಯಸ್ಮಿನ್ ಭೃತ್ಯಾ ಭರ್ತರಿ ವಿಶ್ವಸಂತಿ
ನ ಚೈನಮಾಪತ್ಸು ಪರಿತ್ಯಜಂತಿ ॥೨೩॥

ಪ್ರೀತಿಪಾತ್ರನೇ, ಯಾವನು ಭೃತ್ಯರಲ್ಲಿ, ಭಕ್ತರಲ್ಲಿ ಮತ್ತು ತನ್ನ ಹಿತದಲ್ಲಿ ರತರಾದವರ ವಿಷಯದಲ್ಲಿ ಯಾವಾಗಲೂ ಕೋಪಗೊಳ್ಳುವುದಿಲ್ಲವೋ, ಯಾವ ಪ್ರಭುವಿನಲ್ಲಿ ಭೃತ್ಯರು ವಿಶ್ವಾಸ ಮಾಡುತ್ತಾರೆಯೋ ಅಂತಹ ಭೃತ್ಯರು ಆ ಪ್ರಭುವನ್ನು ಆಪತ್ತುಗಳು ಒದಗಿದಾಗ ಪರಿತ್ಯಜಿಸುವುದಿಲ್ಲ.

ನ ಭೃತ್ಯಾನಾಂ ವೃತ್ತಿಸಂರೋಧನೇನ
ರಾಜ್ಯಂ ಧನಂ ಸಂಜಿಘೃಕ್ಷೇದಪೂರ್ವಮ್ ।
ತ್ಯಜಂತಿ ಹ್ಯೇನಂ ವಂಚಿತಾ ವೈ ವಿರುದ್ಧಾಃ
ಸ್ನಿಗ್ಧಾ ಹ್ಯಮಾತ್ಯಾಃ ಪರಿಹೀನಭೋಗಾಃ ॥೨೪॥

ಭೃತ್ಯರ ವೇತನವನ್ನು ನಿಲ್ಲಿಸಿ ರಾಜ್ಯವನ್ನಾಗಲೀ, ಹೊಸದಾದ ಧನವನ್ನಾಗಲೀ ಸಂಗ್ರಹ ಮಾಡಬಾರದು. ಸ್ನಿಗ್ಧರಾದ ಅಮಾತ್ಯರು ತಮ್ಮ ಭೋಗವನ್ನು ಕಳೆದುಕೊಂಡು ವಂಚಿತರಾದರೆ ಆ ರಾಜನಿಗೆ ವಿರುದ್ಧವಾಗಿ ನಿಲ್ಲುತ್ತಾರೆ.

ಕೃತ್ಯಾನಿ ಪೂರ್ವಂ ಪರಿಸಂಖ್ಯಾಯ ಸರ್ವಾ-
ಣ್ಯಾಯವ್ಯಯೌ ಚಾನುರೂಪಾಂ ಚ ವೃತ್ತಿಮ್ ।
ಸಂಗೃಹ್ಣೀಯಾದನುರೂಪಾನ್ ಸಹಾಯಾನ್
ಸಹಾಯಸಾಧ್ಯಾನಿ ಹಿ ದುಷ್ಕರಾಣಿ ॥೨೫॥

ಮಾಡಬೇಕಾದ ಕಾರ್ಯಗಳನ್ನು ಮೊದಲು ಗಣನೆ ಮಾಡಿ, ಅದಕ್ಕೆ ಬೇಕಾದ ಆಯವ್ಯಯಗಳನ್ನು ಗಮನಿಸಿ, ಮಾಡಬೇಕಾದ ರೀತಿಯನ್ನೂ ಗಮನಿಸಿ, ಅದನ್ನು ಮಾಡುವ ತನಗೆ ಸಹಾಯಕರಾದ ಅನುರೂಪರಾದ ಪುರುಷರನ್ನೂ ಸಂಗ್ರಹಿಸಿ ಕಾರ್ಯವನ್ನು ಮಾಡಬೇಕು. ಕಷ್ಟವಾದ ಕೆಲಸಗಳನ್ನು ಸಹಾಯದಿಂದಲೇ ಮಾಡಬೇಕು.

ಅಭಿಪ್ರಾಯಂ ಯೋ ವಿದಿತ್ವಾ ತು ಭರ್ತುಃ
ಸರ್ವಾಣಿ ಕಾರ್ಯಾಣಿ ಕರೋತ್ಯವಕ್ರಃ ।
ವಕ್ತಾ ಹಿತಾನಾಮನುರಕ್ತ ಆರ್ಯಃ
ಶಕ್ತಿಜ್ಞ ಆತ್ಮೇವ ಹಿ ಸೋऽನುಕಂಪ್ಯಃ ॥೨೬॥

ಸ್ವಾಮಿಯ ಅಭಿಪ್ರಾಯವನ್ನು ತಿಳಿದು ಎಲ್ಲ ಕಾರ್ಯಗಳನ್ನೂ ಯಾವನು ನೇರವಾಗಿ ಮಾಡುತ್ತಾನೆಯೋ, ಯಾವನು ಹಿತವನ್ನು ನುಡಿಯುತ್ತಾನೆಯೋ, ಯಾವನು ಪ್ರಭುವಿನ ಶಕ್ತಿಯನ್ನು ತಿಳಿದು ಅವನಲ್ಲಿ ಅನುರಕ್ತನಾಗುತ್ತಾನೆಯೋ ಅಂತಹ ಆರ್ಯನು ತನ್ನಂತೆಯೇ ಅನುಕಂಪೆಗೆ ಅರ್ಹನಾದವನು.

ವಾಕ್ಯಂ ತು ಯೋ ನಾದ್ರಿಯತೇऽನುಶಿಷ್ಟಃ
ಪ್ರತ್ಯಾಹ ಯಶ್ಚಾಪಿ ನಿಯುಜ್ಯಮಾನಃ ।

ಪ್ರಾಜ್ಞಾಭಿಮಾನೀ ಪ್ರತಿಕೂಲವಾದೀ
ತ್ಯಾಜ್ಯಃ ಸ ತಾದೃಕ್ ತ್ವರಯೈವ ಭೃತ್ಯಃ ॥೨೭॥

ಆಜ್ಞೆಯನ್ನು ಮಾಡಿದರೂ ಯಾವನು ಅದನ್ನು ಆದರಿಸುವುದಿಲ್ಲವೋ, ಕಾರ್ಯದಲ್ಲಿ ನಿಯೋಗವನ್ನು ಮಾಡಿದಾಗ ಯಾವನು ಎದುರು ಮಾತನಾಡುತ್ತಾನೆಯೋ, ಯಾವನು ತನ್ನನ್ನು ಪ್ರಾಜ್ಞನೆಂದು ತಿಳಿದಿದ್ದಾನೆಯೋ ಮತ್ತು ಪ್ರತಿಕೂಲವಾಗಿ ಮಾತನಾಡುತ್ತಾನೆಯೋ ಅಂತಹ ಭೃತ್ಯನನ್ನು ಬೇಗ ಪರಿತ್ಯಜಿಸಬೇಕು.

ಅಸ್ತಬ್ಧಮಕ್ಲೀಬಮದೀರ್ಘಸೂತ್ರಂ
ಸಾನುಕ್ರೋಶಂ ಶ್ಲಕ್ಷ್ಣಮಹಾರ್ಯಮನ್ಯೈಃ ।
ಅರೋಗಜಾತೀಯಮುದಾರವಾಕ್ಯಂ
ದೂತಂ ವದಂತ್ಯಷ್ಟಗುಣೋಪಪನ್ನಮ್ ॥೨೮॥

ಸ್ತಬ್ಧನಲ್ಲದವನು, ಹೇಡಿಯಲ್ಲದವನು, ವಿಲಂಬಕಾರಿಯಲ್ಲದವನು, ದಯೆಯಿಂದ ಕೂಡಿದವನು, ಸೂಕ್ಷ್ಮಕಾರಿಯಾದವನು, ಇನ್ನೊಬ್ಬರಿಂದ ಹಾರಿಸಲ್ಪಡದವನು, ಆರೋಗ್ಯವಾಗಿರುವವನು ಮತ್ತು ಉದಾರವಾಕ್ಯವನ್ನು ಮಾತನಾಡುವವನೂ - ಈ ಎಂಟು ಗುಣವುಳ್ಳವನಿಗೆ ದೂತನೆಂದು ಹೇಳುತ್ತಾರೆ.

ನ ವಿಶ್ವಾಸಾಜ್ಜಾತು ಪರಸ್ಯ ಗೇಹಂ
ಗಚ್ಛೇನ್ನರಶ್ಚೇತಯಾನೋ ವಿಕಾಲೇ ।
ನ ಚತ್ವರೇ ನಿಶಿ ತಿಷ್ಠೇನ್ನಿಗೂಢೋ
ನ ರಾಜಕಾಮ್ಯಾಂ ಯೋಷಿತಂ ಪ್ರಾರ್ಥಯೀತ ॥೨೯॥

ಇನ್ನೊಬ್ಬನ ಮೇಲಿನ ವಿಶ್ವಾಸದಿಂದ ಬುದ್ಧಿ ಇದ್ದ ಮನುಷ್ಯನು ಅಕಾಲದಲ್ಲಿ ಅವನ ಮನೆಗೆ ಹೋಗಬಾರದು. ಅಂಗಳದಲ್ಲಿ ರಾತ್ರಿಯ ವೇಳೆಯಲ್ಲಿ ಮರೆಯಲ್ಲಿ ನಿಲ್ಲಬಾರದು. ರಾಜನಿಗೆ ಇಷ್ಟವಾಗುವ ಸ್ತ್ರೀಯನ್ನು ಬಯಸಬಾರದು.

ನ ನಿಹ್ನವಂ ಮಂತ್ರಗತಸ್ಯ ಗಚ್ಛೇತ್
ಸಂಸೃಷ್ಟಮಂತ್ರಸ್ಯ ಕುಸಂಗತಸ್ಯ ।
ನ ಚ ಬ್ರೂಯಾನ್ನಾಶ್ವಸಿಮಿ ತ್ವಯೀತಿ
ಸಕಾರಣಂ ವ್ಯಪದೇಶಂ ಚ ಕುರ್ಯಾತ್ ॥೩೦॥

ರಾಜನು ಮಂತ್ರಾಲೋಚನೆಗೆ ಬಂದ ಕೆಟ್ಟಪುರುಷನನ್ನು ಪರಿಹರಿಸಬಾರದು. ನಿನ್ನಲ್ಲಿ ವಿಶ್ವಾಸವಿಲ್ಲ ಎಂದು ಹೇಳಬಾರದು. ಕಾರ್ಯವನ್ನು ಮಾಡುವುದು ಇಷ್ಟವಾಗದಿದ್ದರೆ ಅಥವಾ ಕಷ್ಟವಾದರೆ ಮಧ್ಯದಲ್ಲಿ ನದಿ ಇದೆ, ಈಗ ಮಳೆಗಾಲ, ರಾಜಕಾರ್ಯವನ್ನು ಹೇಗೆ ಮಾಡುವುದು ಮೊದಲಾಗಿ ಕಾರಣಸಹಿತವಾಗಿ ಕಾರ್ಯವನ್ನು ಮುಂದೂಡಬೇಕು. ಮೌನವಹಿಸಿ ಇರಬಾರದು (ವಾದಿರಾಜರು).

ಘೃಣೀ ರಾಜಾ ಪುಂಶ್ಚಲೀ ರಾಜಭೃತ್ಯಃ
ಪುತ್ರೋ ಭ್ರಾತಾ ವಿಧವಾ ಬಾಲಪುತ್ರಾ ।
ಸೇನಾಜೀವೀ ಚೋದ್ಧೃತಭೂತಿರೇವ
ವ್ಯವಹಾರೇ ವೈ ವರ್ಜನೀಯಾ ಸ್ಯುರೇತೇ ॥೩೧॥

ದಯಾಳು, ರಾಜ, ವೇಶ್ಯೆ, ರಾಜಭೃತ್ಯ, ಪುತ್ರ, ಭ್ರಾತೃ, ಚಿಕ್ಕಮಕ್ಕಳುಳ್ಳ ವಿಧವೆ, ಸೈನ್ಯದಲ್ಲಿ ಜೀವಿಸುವವನು, ತನ್ನ ಸಂಪತ್ತನ್ನು ಕಳೆದುಕೊಂಡವನು ಇಷ್ಟು ಜನರನ್ನು ವ್ಯವಹಾರ ಮಾಡುವಾಗ ಪರಿತ್ಯಜಿಸಬೇಕು.

ಗುಣಾ ದಶ ಸ್ನಾನಶೀಲಂ ಭಜಂತೇ
ಬಲಂ ರೂಪಂ ಸ್ವರವರ್ಣಪ್ರಶುದ್ಧಿಃ ।
ಸ್ಪರ್ಶಶ್ಚ ಗಂಧಶ್ಚ ವಿಶುದ್ಧತಾ ಚ
ಶ್ರೀಃ ಸೌಕುಮಾರ್ಯಂ ಪ್ರವರಾಶ್ಚ ನಾರ್ಯಃ ॥೩೨॥

ಬಲ, ರೂಪ, ಸ್ವರವರ್ಣಗಳ ಶುದ್ಧಿ, ಸ್ಪರ್ಶ, ಗಂಧ, ದೇಹದ ಶುದ್ಧಿ, ಕಾಂತಿ, ಕೋಮಲತೆ ಮತ್ತು ಸುಂದರಸ್ತ್ರೀಯರು ಈ ಹತ್ತುಗುಣಗಳು ಸ್ನಾನಶೀಲನನ್ನು ಬಂದು ಸೇರುತ್ತವೆ.

ಗುಣಾಶ್ಚ ಷಣ್ಮಿತಭುಕ್ತಂ ಭಜಂತೇ
ಆರೋಗ್ಯಮಾಯುಶ್ಚ ಬಲಂ ಸುಖಂ ಚ ।
ಅನಾವಿಲಂ ಚಾಸ್ಯ ಭವತ್ಯಪತ್ಯಂ
ನ ಚೈನಾಮಾದ್ಯೂನ ಇತಿ ಕ್ಷಿಪಂತಿ ॥೩೩॥

ಆರೋಗ್ಯ, ಆಯುಷ್ಯ, ಬಲ, ಸುಖ, ಆರೋಗ್ಯವುಳ್ಳ ಮಕ್ಕಳು ಮತ್ತು ಹೊಟ್ಟೆಬಾಕನೆಂಬ ನಿಂದೆಗೆ ಗುರಿಯಾಗದಿರುವುದು ಈ ಆರು ಗುಣಗಳು ಮಿತಭೋಜನವನ್ನು ಮಾಡುವವನನ್ನು ಬಂದು ಸೇರುತ್ತವೆ.

ಅಕರ್ಮಶೀಲಂ ಚ ಮಹಾಶನಂ ಚ
ಲೋಕದ್ವಿಷ್ಟಂ ಬಹುಮಾಯಂ ನೃಶಂಸಮ್ ।
ಅದೇಶಕಾಲಜ್ಞಮನಿಷ್ಟವೇಷಮ್
ಏತಾನ್ ಗೃಹೇ ನ ಪ್ರತಿವಾಸಯೇತ ॥೩೪॥

ಕಾರ್ಯವನ್ನು ಮಾಡದಿರುವವನು, ಬಹಳ ಭೋಜನವನ್ನು ಮಾಡುವವನು, ಎಲ್ಲ ಜನರ ದ್ವೇಷಕ್ಕೆ ಗುರಿಯಾದವನು, ಕಪಟಿಯಾದವನು, ಕ್ರೂರಿಯಾದವನು, ದೇಶ-ಕಾಲಜ್ಞಾನವಿಲ್ಲದವನು, ಕೆಟ್ಟ ಅಲಂಕಾರವನ್ನು ಮಾಡಿಕೊಳ್ಳುವವನು ಇಷ್ಟು ಜನರನ್ನು ಮನೆಯಲ್ಲಿ ವಾಸಿಸಲು ಇಟ್ಟುಕೊಳ್ಳಬಾರದು.

ಕದರ್ಯಮಾಕ್ರೋಶಕಮಶ್ರುತಂ ಚ
ವನೌಕಸಂ ಧೂರ್ತಮಮಾನ್ಯಮಾನಿನಮ್ ।
ನಿಷ್ಠೂರಿಣಂ ಕೃತವೈರಂ ಕೃತಘ್ನಮ್
ಏತಾನ್ ಭೃಶಾರ್ತೋಽಪಿ ನ ಜಾತು ಯಾಚೇತ್ ॥೩೫॥

ಕೆಟ್ಟ ಸ್ವಾಮಿ, ಕಿರುಚಿ ನಿಂದಿಸುವವನು, ಶಾಸ್ತ್ರಶ್ರವಣವಿಲ್ಲದವನು, ಕಿರಾತ, ಧೂರ್ತನಾದವನು, ಮಾನಕ್ಕೆ ಅಯೋಗ್ಯರಾದವರನ್ನು ಸನ್ಮಾನಿಸುವವನು, ನಿಷ್ಠೂರವಾಗಿ ಮಾತನಾಡುವವನು, ವೈರವನ್ನು ಮಾಡಿದವನು, ಕೃತಘ್ನನಾದವನು ಇವರನ್ನು ಎಷ್ಟೇ ಸಂಕಟ ಒದಗಿದರೂ ಯಾಚಿಸಬಾರದು.

ಸಂಶ್ಲಿಷ್ಟಕರ್ಮಾಣಮತಿಪ್ರಮಾದಂ
ನಿತ್ಯಾನೃತಂ ಚಾದೃಢಭಕ್ತಿಕಂ ಚ ।
ವಿಸ್ಪಷ್ಟರಾಗಂ ಪಟುಮಾನಿನಂ ಚಾ-
ಪ್ಯೇತಾನ್ ನ ಸೇವೇತ ನರಾಧಮಾನ್ ಷಟ್ ॥೩೬॥

ಜನರ ಗುಂಪು ಇದ್ದಾಗ ಮಾತ್ರ ಸತ್ಕರ್ಮವನ್ನು ಮಾಡುವವನು (ಡಾಂಭಿಕನಾದವನು), ಯಾವಾಗಲೂ ಮರೆಯುವವನು, ನಿತ್ಯವೂ ಸುಳ್ಳನ್ನು ಹೇಳುವವನು, ತನ್ನಲ್ಲಿ ದೃಢವಾದ ಪ್ರೀತಿಯಿಲ್ಲದವನು, ತನ್ನ ಆಸೆಯನ್ನು ಸ್ಪಷ್ಟವಾಗಿ ಹೇಳಿಕೊಳ್ಳುವವನು, ತಾನು ಸಮರ್ಥನೆಂದು ತಿಳಿದಿರುವವನು - ಈ ಆರು ನರಾಧಮರನ್ನು ಎಂದೂ ಸೇವಿಸಬಾರದು.

**ಸಹಾಯಬಂಧನಾ ಹ್ಯರ್ಥಾಃ ಸಹಾಯಾಶ್ಚಾರ್ಥಬಂಧನಾಃ ।**
**ಅನ್ಯೋನ್ಯಬಂಧನಾವೇತೌ ವಿನಾऽನ್ಯೋನ್ಯಂ ನ ಸಿದ್ಧ್ಯತಃ ॥೩೭॥**

ಅರ್ಥಗಳು ಸಹಾಯದಿಂದ ಸಿದ್ಧಿಸುತ್ತವೆ. ಸಹಾಯಗಳು ಅರ್ಥದಿಂದ ಒದಗುತ್ತವೆ. ಹೀಗೆ ಅರ್ಥ ಮತ್ತು ಸಹಾಯಗಳು ಪರಸ್ಪರ ಬಂಧನವುಳ್ಳವುಗಳು. ಒಂದಿಲ್ಲದೆ ಇನ್ನೊಂದು ಸಿದ್ಧಿಸುವುದಿಲ್ಲ.

**ಉತ್ಪಾದ್ಯ ಪುತ್ರಾನನೃಣಾಂಶ್ಚ ಕೃತ್ವಾ**
**ವೃತ್ತಿಂ ಚ ತೇಭ್ಯೋऽನುವಿಧಾಯ ಕಾಂಚಿತ್ ।**
**ಸ್ಥಾನೇ ಕುಮಾರೀಃ ಪ್ರತಿಪಾದ್ಯ ಸರ್ವಾ**
**ಅರಣ್ಯಸಂಸ್ಥೋऽಥ ಮುನಿರ್ಬುಭೂಷೇತ್ ॥೩೮॥**

ಮಕ್ಕಳನ್ನು ಪಡೆದು, ಅವರಿಗೆ ಸಾಲವನ್ನು ಹೊರಿಸದೆ, ಅವರಿಗೆ ಜೀವನೋಪಾಯವನ್ನು ಕಲ್ಪಿಸಿ, ಎಲ್ಲಾ ಹೆಣ್ಣುಮಕ್ಕಳನ್ನು ಯೋಗ್ಯರಿಗೆ ದಾನ ಮಾಡಿ, ಅರಣ್ಯಕ್ಕೆ ಹೋಗುವ ಮುನಿಯು ಸಿದ್ಧಿಯನ್ನು ಪಡೆಯುತ್ತಾನೆ.

**ಹಿತಂ ಯತ್ ಸರ್ವಭೂತಾನಾಮಾತ್ಮನಶ್ಚ ಸುಖಾವಹಮ್ ।**
**ತತ್ ಕುರ್ಯಾದೀಶ್ವರೋ ಹ್ಯೇತನ್ಮೂಲಂ ಧರ್ಮಾರ್ಥಸಿದ್ಧಯೇ ॥೩೯॥**

ಎಲ್ಲ ಪ್ರಾಣಿಗಳಿಗೂ ಯಾವುದು ಹಿತವೋ ಮತ್ತು ತನಗೆ ಯಾವುದು ಸುಖವನ್ನು ತಂದುಕೊಡುತ್ತದೆಯೋ ಪ್ರಭುವಾದವನು ಅಂತಹ ಕಾರ್ಯವನ್ನು ಮಾಡಬೇಕು. ಇದು ಧರ್ಮಾರ್ಥ ಸಿದ್ಧಿಗಳಿಗೆ ಮೂಲವಾದುದು.

ವೃದ್ಧಿಃ ಪ್ರಭಾವಸ್ತೇಜಶ್ಚ ಸತ್ತ್ವಮುತ್ಥಾನಮೇವ ಚ ।
ವ್ಯವಸಾಯಶ್ಚ ಯಸ್ಯ ಸ್ಯಾದ್ ತಸ್ಯ ವೃತ್ತಿಭಯಂ ಕುತಃ ॥೪೦॥

ಯಾವನಿಗೆ ವೃದ್ಧಿ, ಪ್ರಭಾವ, ತೇಜಸ್ಸು, ಸತ್ತ್ವ, ಉತ್ಥಾನ ಮತ್ತು ನಿಷ್ಠೆಗಳು ಇರುತ್ತವೆಯೋ ಅವನಿಗೆ (ಜೀವನ) ವೃತ್ತಿಯ ಭಯವೇಕೆ?

ಪಶ್ಯ ದೋಷಾನ್ ಪಾಂಡವೈರ್ವಿಗ್ರಹೇ ತ್ವಂ
ಯತ್ರ ವ್ಯಥೇಯುರಪಿ ದೇವಾಃ ಸಶಕ್ರಾಃ ।
ಪುತ್ರೈರ್ವೈರಂ ನಿತ್ಯಮುದ್ವಿಗ್ನವಾಸೋ
ಯಶಃಪ್ರಣಾಶೋ ದ್ವಿಷತಾಂ ಚ ಹರ್ಷಃ ॥೪೧॥

ಇಂದ್ರನಿಂದ ಸಹಿತರಾದ ದೇವತೆಗಳೂ ಸಹ ಯಾವ ವಿರೋಧಕ್ಕೆ ಹೆದರುತ್ತಾರೆಯೋ ಅಂತಹ ಪಾಂಡವರ ಜೊತೆಯಲ್ಲಿ ವಿರೋಧವನ್ನು ಮಾಡಿದರೆ ಉಂಟಾಗುವ ದೋಷಗಳನ್ನು ಗಮನಿಸು. ಮಕ್ಕಳ ಜೊತೆಯಲ್ಲಿ ವೈರವು ನಿತ್ಯವಾಗಿ ಭಯದಿಂದ ವಾಸ ಮಾಡುವುದನ್ನು, ಕೀರ್ತಿಯ ನಾಶವನ್ನು, ಶತ್ರುಗಳ ಹರ್ಷವನ್ನು ಉಂಟುಮಾಡುತ್ತದೆ.

ಭೀಷ್ಮಸ್ಯ ಕೋಪಸ್ತವ ಚೈವೇಂದ್ರಕಲ್ಪ
ದ್ರೋಣಸ್ಯ ರಾಜ್ಞಶ್ಚ ಯುಧಿಷ್ಠಿರಸ್ಯ ।
ಉತ್ಸಾದಯೇಲ್ಲೋಕಮಿಮಂ ಪ್ರವೃದ್ಧಃ
ಶ್ವೇತೋ ಗ್ರಹಸ್ತ್ವಪತನ್ ವೈ ಯಥೈವ ॥೪೨॥

ಎಲೈ ಇಂದ್ರನಿಗೆ ಸಮಾನನಾದವನೇ, ಭೀಷ್ಮರ, ದ್ರೋಣರ, ರಾಜನಾದ ಯುಧಿಷ್ಠಿರನ ಕೋಪವು ಮತ್ತು ನಿನ್ನ ಕೋಪವು ದೊಡ್ಡದಾಗಿ ಬೆಳೆದು ಧೂಮಕೇತುವು ಎರಗಿದಂತೆ ಈ ಲೋಕವನ್ನೇ ನಾಶ ಮಾಡೀತು.

ತವ ಪುತ್ರಶತಂ ಚೈವ ಕರ್ಣಃ ಪಂಚ ಚ ಪಾಂಡವಾಃ ।
ಪೃಥಿವೀಮನುಶಾಸೇಯುರಖಿಲಾಂ ಸಾಗರಾಂಬರಾಮ್ ॥೪೩॥

ನಿನ್ನ ನೂರುಮಕ್ಕಳು, ಕರ್ಣ ಮತ್ತು ಪಂಚಪಾಂಡವರು, ಸಮುದ್ರ ವಸನಳಾದ ಸಮಗ್ರವಾದ ಭೂಮಿಯನ್ನು ಆಳಿಯಾರು.

ಧಾರ್ತರಾಷ್ಟ್ರಾ ವನಂ ರಾಜನ್ ವ್ಯಾಘ್ರಾಃ ಪಾಂಡುಸುತಾ ಮತಾಃ ।
ಮಾ ವನಂ ಛಿಂಧಿ ಸವ್ಯಾಘ್ರಂ ಮಾ ವ್ಯಾಘ್ರಾ ನೀನಶನ್ ವನಾತ್ ॥

ರಾಜನೇ, ಧೃತರಾಷ್ಟ್ರ ಪುತ್ರರು ವನ. ಪಾಂಡುಪುತ್ರರು ವ್ಯಾಘ್ರದಂತಿದ್ದಾರೆ. ವ್ಯಾಘ್ರಸಹಿತವಾದ ವನವನ್ನು ಕಡಿಯಬೇಡ. ವನದಿಂದ ವ್ಯಾಘ್ರಗಳು ನಾಶವಾಗದಿರಲಿ.

ನ ಸ್ಯಾದ್ ವನಮೃತೇ ವ್ಯಾಘ್ರೋ ವ್ಯಾಘ್ರೋ ನ ಸ್ಯಾದೃತೇ ವನಮ್ ।
ವನಂ ಹಿ ರಕ್ಷ್ಯತೇ ವ್ಯಾಘ್ರೈರ್ವ್ಯಾಘ್ರಾನ್ ರಕ್ಷತಿ ಕಾನನಮ್ ॥೪೫॥

ವನವಿಲ್ಲದೆ ವ್ಯಾಘ್ರವಿರುವುದಿಲ್ಲ. ವ್ಯಾಘ್ರವಿಲ್ಲದೆ ವನವೂ ಉಳಿಯುವುದಿಲ್ಲ. ವ್ಯಾಘ್ರಗಳು ವನವನ್ನು ರಕ್ಷಿಸುತ್ತವೆ, ವನವು ವ್ಯಾಘ್ರಗಳನ್ನು ರಕ್ಷಿಸುತ್ತದೆ.

ನ ತಥೇಚ್ಛಂತಿ ಕಲ್ಯಾಣಾನ್ ಪರೇಷಾಂ ವೇದಿತುಂ ಗುಣಾನ್ ।
ಯದೇಷಾಂ ಜ್ಞಾತುಮಿಚ್ಛಂತಿ ನೈರ್ಗುಣ್ಯಂ ಪಾಪಚೇತಸಃ ॥೪೬॥

ಪಾಪಬುದ್ಧಿಯುಳ್ಳವರು ಇನ್ನೊಬ್ಬರ ದೋಷವನ್ನು ತಿಳಿದುಕೊಳ್ಳಲು ಹೇಗೆ ಬಯಸುತ್ತಾರೆಯೋ ಹಾಗೆ ಅವರ ಕಲ್ಯಾಣಗುಣಗಳನ್ನು ತಿಳಿಯಲು ಬಯಸುವುದಿಲ್ಲ.

ಅರ್ಥಸಿದ್ಧಿಂ ಪರಾಮಿಚ್ಛನ್ ಧರ್ಮಮೇವಾದಿತಶ್ಚರೇತ್ ।
ನ ಹಿ ಧರ್ಮಾದಪೈತ್ಯರ್ಥಃ ಸ್ವರ್ಗಲೋಕಾದಿವಾಮೃತಮ್ ॥೪೭॥

ಶ್ರೇಷ್ಠವಾದ ಅರ್ಥಸಿದ್ಧಿಯನ್ನು ಬಯಸುವವನು ಮೊದಲು ಧರ್ಮವನ್ನು ಆಚರಿಸಬೇಕು. ಅಮೃತವು ಸ್ವರ್ಗಲೋಕವನ್ನು ಬಿಟ್ಟುಹೋಗದಂತೆ ಅರ್ಥವು ಧರ್ಮವನ್ನು ಬಿಟ್ಟು ಇರುವುದಿಲ್ಲ.

ಯಸ್ಯಾತ್ಮಾ ವಿರತಃ ಪಾಪಾತ್ ಕಲ್ಯಾಣೇ ಚ ನಿವೇಶಿತಃ ।
ತೇನ ಸರ್ವಮಿದಂ ಬುದ್ಧಂ ಪ್ರಕೃತಿರ್ವಿಕೃತಿಶ್ಚ ಯಾ ॥೪೮॥

ಯಾವನ ಮನಸ್ಸು ಪಾಪದಿಂದ ಹಿಂದಕ್ಕೆ ಬಂದು ಕಲ್ಯಾಣದಲ್ಲಿಯೇ ನೆಲೆಗೊಂಡಿರುತ್ತದೆಯೋ ಅವನು ಪ್ರಕೃತಿ-ವಿಕೃತಿಮಯವಾದ ಈ ಜಗತ್ತೆಲ್ಲವನ್ನೂ ತಿಳಿದವನಾಗಿರುತ್ತಾನೆ.

ಯೋ ಧರ್ಮಮರ್ಥಂ ಕಾಮಂ ಚ ಯಥಾಕಾಲಂ ನಿಷೇವತೇ ।
ಧರ್ಮಾರ್ಥಕಾಮಸಂಯೋಗಂ ಸೋऽಮುತ್ರೇಹ ಚ ವಿಂದತಿ ॥೪೯॥

ಯಾವನು ಧರ್ಮ, ಅರ್ಥ ಮತ್ತು ಕಾಮಗಳನ್ನು ಯೋಗ್ಯಕಾಲದಲ್ಲಿ ಸೇವಿಸುತ್ತಾನೆಯೋ ಧರ್ಮಾರ್ಥಕಾಮಗಳ ಸಂಯೋಗವನ್ನು ಯೋಗ್ಯಕಾಲದಲ್ಲಿ ಸೇವಿಸುತ್ತಾನೆಯೋ ಅವನು ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಸುಖವನ್ನು ಹೊಂದುತ್ತಾನೆ.

ಸನ್ನಿಯಚ್ಛತಿ ಯೋ ವೇಗಮುತ್ಥಿತಂ ಕ್ರೋಧಹರ್ಷಯೋಃ ।
ಸ ಶ್ರಿಯೋ ಭಾಜನಂ ರಾಜನ್ ಯಶ್ಚಾಪತ್ಸು ನ ಮುಹ್ಯತಿ ॥೫೦॥

ಎಲೈ ರಾಜನೇ, ಯಾವನು ಉತ್ಪನ್ನವಾದ ಕ್ರೋಧ-ಹರ್ಷಗಳ ವೇಗವನ್ನು ನಿಯಂತ್ರಿಸುತ್ತಾನೆಯೋ ಮತ್ತು ಯಾವನು ಆಪತ್ತುಗಳಲ್ಲಿ ಮೋಹಕ್ಕೆ ಒಳಗಾಗುವುದಿಲ್ಲವೋ ಅವನು ಸಂಪತ್ತಿಗೆ ಭಾಜನನಾಗುತ್ತಾನೆ.

ಬಲಂ ಪಂಚವಿಧಂ ನಿತ್ಯಂ ಪುರುಷಾಣಾಂ ನಿಬೋಧ ಮೇ ।
ಯತ್ತು ಬಾಹುಬಲಂ ನಾಮ ಪ್ರಥಮಂ ಬಲಮುಚ್ಯತೇ ॥೫೧॥

ಅಮಾತ್ಯಲಾಭೋ ಭದ್ರಂ ತೇ ದ್ವಿತೀಯಂ ಬಲಮುಚ್ಯತೇ ।
ತೃತೀಯಂ ಧನಲಾಭಂ ತು ಬಲಮಾಹುರ್ಮನೀಷಿಣಃ ॥೫೨॥

ಯತ್ತ್ವಸ್ಯ ಸಹಜಂ ರಾಜನ್ ಪಿತೃಪೈತಾಮಹಂ ಬಲಮ್ ।
ಅಭಿಜಾತಬಲಂ ನಾಮ ತಚ್ಚತುರ್ಥಂ ಬಲಂ ಸ್ಮೃತಮ್ ॥೫೩॥

ಯೇನ ತ್ವೇತಾನಿ ಸರ್ವಾಣಿ ಸಂಗೃಹೀತಾನಿ ಭಾರತ ।
ಯದ್ ಬಲಾನಾಂ ಬಲಂ ಶ್ರೇಷ್ಠಂ ತತ್ ಪ್ರಜ್ಞಾಬಲಮುಚ್ಯತೇ ॥೫೪॥

ಪುರುಷರಿಗೆ ಯಾವಾಗಲೂ ಐದುವಿಧವಾದ ಬಲವಿದೆ. ಅದನ್ನು ನನ್ನಿಂದ ಕೇಳು. ಬಾಹುಬಲವೆಂದು ಕರೆಯಲ್ಪಡುವುದು ಮೊದಲನೆಯ ಬಲ. ಅಮಾತ್ಯಲಾಭವು ಎರಡನೆಯ ಬಲವೆನಿಸುತ್ತದೆ. ಧನಲಾಭವು ಮೂರನೆಯ ಬಲವೆಂದು ವಿವೇಕಿಗಳು ಹೇಳುತ್ತಾರೆ. ಎಲೈ ರಾಜನೇ, ಪಿತೃ-ಪಿತಾಮಹರಿಂದ ಬಂದ ಯಾವ ತನ್ನ ಸ್ವಂತ ಬಲವಿದೆಯೋ ಅದು ನಾಲ್ಕನೆಯ ಬಲವೆಂದು ಹೇಳಲ್ಪಡುತ್ತದೆ. ಎಲೈ ಭಾರತನೇ, ಯಾವುದು ಈ ಎಲ್ಲಾ ಬಲಗಳನ್ನೂ ಸಂಗ್ರಹಿಸುತ್ತದೆಯೋ, ಬಲಗಳಲ್ಲಿ ಶ್ರೇಷ್ಠ ಬಲವಾದ ಅದು ಪ್ರಜ್ಞಾಬಲವೆನಿಸುತ್ತದೆ.

**ಮಹತೇ ಯೋಽಪಕಾರಾಯ ನರಸ್ಯ ಪ್ರಭವೇನ್ನರಃ ।**
**ತೇನ ವೈರಂ ಸಮಾಸಜ್ಯ ದೂರಸ್ಥೋಽಸ್ಮೀತಿ ನಾಶ್ವಸೇತ್ ॥೫೫॥**

ಯಾವ ಮನುಷ್ಯನು ತನಗೆ ದೊಡ್ಡ ಅಪಕಾರವನ್ನು ಮಾಡಲು ಶಕ್ತನಾಗಿದ್ದಾನೆಯೋ ಅವನ ವೈರವನ್ನು ಸಂಪಾದಿಸಿ ನಾನು ಅವನಿಂದ ದೂರದಲ್ಲಿದ್ದೇನೆ ಎಂದು ಸಮಾಧಾನವನ್ನು ಹೊಂದಬಾರದು.

**ಸ್ತ್ರೀಷು ರಾಜಸು ಸರ್ಪೇಷು ಸ್ವಾಧ್ಯಾಯೇ ಶತ್ರುಸೇವಿಷು ।**
**ಭೋಗೇಷ್ವಾಯುಷಿ ವಿಶ್ವಾಸಂ ಕಃ ಪ್ರಾಜ್ಞಃ ಕರ್ತುಮರ್ಹತಿ ॥೫೬॥**

ಸ್ತ್ರೀಯರು, ರಾಜರು, ಸರ್ಪಗಳು, ಅಧ್ಯಯನ, ಶತ್ರುಗಳನ್ನು ಸೇವಿಸುವವರು, ಭೋಗಗಳು, ಆಯುಸ್ಸು, ಪ್ರಾಜ್ಞನಾದವನು ಈ ವಸ್ತುಗಳಲ್ಲಿ ವಿಶ್ವಾಸವನ್ನು ಮಾಡಬಾರದು (ಸ್ಥಿರವೆಂದು ನಂಬಬಾರದು).

**ಪ್ರಜ್ಞಾಶರೇಣಾಭಿಹತಸ್ಯ ಜಂತೋಃ**
**ಚಿಕಿತ್ಸಕಾಃ ಸಂತಿ ನ ಚೌಷಧಾನಿ ।**
**ನ ಹೋಮಮಂತ್ರಾ ನ ಚ ಮಂಗಲಾನಿ**
**ನಾಥರ್ವಣಾ ನಾಪ್ಯಗದಾಃ ಸುಸಿದ್ಧಾಃ ॥೫೭॥**

ಪ್ರಜ್ಞಾಬಾಣದಿಂದ ತಾಡಿತನಾದ ಮನುಷ್ಯನಿಗೆ (ಪ್ರಜ್ಞಾಶೂನ್ಯನಾದವನಿಗೆ) ಚಿಕಿತ್ಸಕರು ಇದ್ದಾರೆ, ಔಷಧಿಗಳಿಲ್ಲ. ಹೋಮಮಂತ್ರಗಳಾಗಲೀ, ಮಂಗಳಗಳಾಗಲೀ, ಅಥರ್ವಮಂತ್ರಗಳಾಗಲೀ ಅಥವಾ ಪ್ರಸಿದ್ಧವಾದ ಔಷಧಿಗಳಾಗಲೀ ಇಲ್ಲ.

ಸರ್ಪಶ್ಚಾಗ್ನಿಶ್ಚ ಸಿಂಹಶ್ಚ ಕುಲಪುತ್ರಶ್ಚ ಭಾರತ ।
ನಾವಜ್ಞೇಯಾ ಮನುಷ್ಯೇಣ ಸರ್ವೇ ಹ್ಯೇತೇಽತಿತೇಜಸಃ ॥೫೮॥

ಭಾರತನೇ, ಸರ್ಪ, ಅಗ್ನಿ, ಸಿಂಹ ಮತ್ತು ಕುಲಪುತ್ರ ಇವರಿಗೆ ಮನುಷ್ಯನು ಅವಮಾನವನ್ನು ಮಾಡಬಾರದು. ಇವರೆಲ್ಲರೂ ಬಹಳ ತೇಜಸ್ಸನ್ನು ಹೊಂದಿದವರು.

ಅಗ್ನಿಸ್ತೇಜೋ ಮಹಲ್ಲೋಕೇ ಗೂಢಸ್ತಿಷ್ಠತಿ ದಾರುಷು ।
ನ ಚೋಪಯುಂಕ್ತೇ ತದ್ ದಾರು ಯಾವನ್ನೋದ್ದೀಪ್ಯತೇ ಪರೈಃ ॥೫೯॥

ಸ ಏವ ಖಲು ದಾರುಭ್ಯೋ ಯದಾ ನಿರ್ಮಥ್ಯ ದೀಪ್ಯತೇ ।
ತದ್ ದಾರು ಚ ವನಂ ಚಾನ್ಯನ್ನಿರ್ದಹತ್ಯಾಶು ತೇಜಸಾ ॥೬೦॥

ಲೋಕದಲ್ಲಿ ದೊಡ್ಡ ತೇಜಸ್ಸಾದ ಅಗ್ನಿಯು ಕಟ್ಟಿಗೆಯಲ್ಲಿ ಗೂಢವಾಗಿರುತ್ತದೆ. ಇನ್ನೊಬ್ಬರು ಅದನ್ನು ಹತ್ತಿಸುವವರೆಗೆ ಅದು ಮರವನ್ನು ಭಕ್ಷಿಸುವುದಿಲ್ಲ. ಅದೇ ಕಟ್ಟಿಗೆಗಳಿಂದ ಮಥನ ಮಾಡಿ ಅಗ್ನಿಯನ್ನು ಹತ್ತಿಸಿದರೆ ಆ ಕಟ್ಟಿಗೆಯನ್ನು ಮತ್ತು ಆ ವನವನ್ನೂ ತನ್ನ ತೇಜಸ್ಸಿನಿಂದ ಶೀಘ್ರವಾಗಿ ಸುಡುತ್ತದೆ.

ಏವಮೇವ ಕುಲೇ ಜಾತಾಃ ಪಾವಕೋಪಮತೇಜಸಃ ।
ಕ್ಷಮಾವಂತೋ ನಿರಾಕಾರಾಃ ಕಾಷ್ಠೇಽಗ್ನಿರಿವ ಶೇರತೇ ॥೬೧॥

ಹೀಗೆಯೇ ಕುಲದಲ್ಲಿ ಹುಟ್ಟಿದವರೂ, ಅಗ್ನಿಯಂತೆ ತೇಜಸ್ಸುಳ್ಳವರೂ, ಕ್ಷಮಾವಂತರೂ ಆದ ಪಾಂಡವರು ತಮ್ಮ ಆಕಾರವನ್ನು ತೋರ್ಗೊಡದೆ ಕಾಷ್ಠದಲ್ಲಿ ಅಗ್ನಿಯಂತೆ ಇದ್ದಾರೆ.

ಲತಾಧರ್ಮಾ ತ್ವಂ ಸಪುತ್ರಃ ಸಾಲಾಃ ಪಾಂಡುಸುತಾ ಮತಾಃ ।
ನ ಲತಾ ವರ್ಧತೇ ಜಾತು ಮಹಾದ್ರುಮಮನಾಶ್ರಿತಾ ॥೬೨॥

ಪುತ್ರರಿಂದ ಒಡಗೂಡಿದ ನೀನು ಲತೆಯ ಧರ್ಮವನ್ನು ಹೊಂದಿದವನು. ಪಾಂಡುಸುತರು ಸಾಲವೃಕ್ಷಗಳೆಂದು ತಿಳಿಯಲ್ಪಡುತ್ತಾರೆ. ಮಹಾವೃಕ್ಷವನ್ನು ಆಶ್ರಯಿಸದ ಲತೆಯು ಎಂದೂ ಅಭಿವೃದ್ಧಿಯನ್ನು ಹೊಂದುವುದಿಲ್ಲ.

ವನಂ ರಾಜಂಸ್ತವ ಪುತ್ರೋಽಂಬಿಕೇಯ
ಸಿಂಹಾನ್ ವನೇ ಪಾಂಡವಾಂಸ್ತಾತ ವಿದ್ಧಿ ।
ಸಿಂಹೈರ್ವಿಹೀನಂ ಹಿ ವನಂ ವಿನಶ್ಯೇತ್
ಸಿಂಹಾ ವಿನಶ್ಯೇಯುರ್ಯತೇ ವನೇನ ॥೬೩॥

ಅಂಬಿಕೇಯನೇ, ರಾಜನೇ, ನಿನ್ನ ಮಗನು ವನ. ಪಾಂಡವರನ್ನು ವನದಲ್ಲಿರುವ ಸಿಂಹಗಳೆಂದು ತಿಳಿ. ಸಿಂಹಗಳಿಲ್ಲದಿದ್ದರೆ ವನವು ನಾಶವನ್ನು ಹೊಂದುತ್ತದೆ. ವನವಿಲ್ಲದಿದ್ದರೆ ಸಿಂಹಗಳೂ ನಾಶವನ್ನು ಹೊಂದುತ್ತವೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಸಪ್ತತ್ರಿಂಶೋಽಧ್ಯಾಯಃ ॥
॥ ಪ್ರಜಾಗರಪರ್ವಣಿ ಷಷ್ಠೋಽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಮೂವತ್ತೇಳನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

## ಮೂವತ್ತೆಂಟನೆಯ ಅಧ್ಯಾಯ

ವಿದುರನೀತಿ.

### ವಿದುರಃ

ಊರ್ಧ್ವಂ ಪ್ರಾಣಾ ಹ್ಯುತ್ಕ್ರಮಂತಿ ಯೂನಃ ಸ್ಥವಿರ ಆಗತೇ ।
ಪ್ರತ್ಯುತ್ಥಾನಾಭಿವಾದಾಭ್ಯಾಂ ಪುನಸ್ತಾನ್ ಪ್ರತಿಪದ್ಯತೇ ॥೧॥

ವಿದುರ– ಹಿರಿಯರು ಬಂದಾಗ ಯುವಕರ ಪ್ರಾಣಗಳು ತಮ್ಮ ಸ್ಥಾನದಿಂದ ಏಳುತ್ತವೆ. ಎದ್ದು ಹಿರಿಯರಿಗೆ ನಮಸ್ಕಾರವನ್ನು ಮಾಡುವುದರಿಂದ ಆ ಪ್ರಾಣಗಳು ಮೊದಲಿನ ಸ್ಥಾನವನ್ನು ಹೊಂದುತ್ತವೆ.

ಪೀಠಂ ದತ್ತ್ವಾ ಸಾಧವೇಽಭ್ಯಾಗತಾಯ
ಆನೀಯಾಪಃ ಪರಿನಿರ್ಣಿಜ್ಯ ಪಾದೌ ।
ಸುಖಂ ಪೃಷ್ಟ್ವಾ ಪ್ರತಿವೇದ್ಯಾತ್ಮಸಂಸ್ಥಾಂ
ತತೋ ದದ್ಯಾದನ್ನಮವೇಕ್ಷ್ಯ ಧೀರಃ ॥೨॥

ಧೀರನಾದವನು ಮನೆಗೆ ಬಂದ ಸಜ್ಜನರಿಗೆ ಕುಳಿತುಕೊಳ್ಳಲು ಆಸನವನ್ನು ಕೊಟ್ಟು, ನೀರನ್ನು ತಂದು, ಪಾದಗಳನ್ನು ತೊಳೆದು, ಅವರ ಕ್ಷೇಮವನ್ನು ಕೇಳಿ, ತನ್ನ ಕ್ಷೇಮವನ್ನು ತಿಳಿಸಿ ಅವನನ್ನು ನೋಡಿ ಅನಂತರ ಅನ್ನದಾನವನ್ನು ಮಾಡಬೇಕು.

ಯಸ್ಯೋದಕಂ ಮಧುಪರ್ಕಂ ಚ ಗಾಂ ಚ
ನ ಮಂತ್ರವಿತ್ ಪ್ರತಿಗೃಹ್ಣಾತಿ ಗೇಹೇ ।
ಲೋಭಾದ್ ಭಯಾದರ್ಥಕಾರ್ಪಣ್ಯತೋ ವಾ
ತಸ್ಯಾನರ್ಥಂ ಜೀವಿತಮಾಹುರಾರ್ಯಾಃ ॥೩॥

ಸಜ್ಜನನು ಮನೆಗೆ ಬಂದಾಗ ಯಾವನ ಮನೆಯಲ್ಲಿ ಮನೆಯ ಯಜಮಾನನ ಲೋಭದಿಂದಾಗಲೀ, ಭಯದಿಂದಾಗಲೀ, ಅರ್ಥಕಾರ್ಪಣ್ಯದಿಂದಾಗಲೀ ಮಂತ್ರಜ್ಞನಾದ ಸಜ್ಜನನು ಜಲವನ್ನು, ಮಧುಪರ್ಕವನ್ನು, ಗೋವನ್ನು ಸ್ವೀಕರಿಸುವುದಿಲ್ಲವೋ ಅಂತಹ ಮನೆಯ ಯಜಮಾನನ ಜೀವನವು ವ್ಯರ್ಥ ಎಂದು ದೊಡ್ಡವರು ಹೇಳುತ್ತಾರೆ.

ಚಿಕಿತ್ಸಕಃ ಶಲ್ಯಕರ್ತಾऽವಕೀರ್ಣೀ
ಸ್ತೇನಃ ಪಾಪೋ ಮದ್ಯಪೋ ಭ್ರೂಣಹಾ ಚ ।
ಸೇನಾಜೀವೀ ಶ್ರುತಿವಿಕ್ರಾಯಕಶ್ಚ
ಭೃಶಂ ಪ್ರಿಯೋऽಪ್ಯತಿಥಿರ್ನೋದಕಾರ್ಹಃ ॥೪॥

ವೈದ್ಯ, ಆಯುಧವನ್ನು ಮಾಡುವವನು, ವ್ರತಭ್ರಷ್ಟನಾದವನು, ಕಳ್ಳ, ಪಾಪಿ, ಮದ್ಯಪಾನವನ್ನು ಮಾಡುವವನು, ಭ್ರೂಣಹಂತಕ, ಸೈನ್ಯದಲ್ಲಿ ಜೀವನವನ್ನು ಮಾಡುವವನು, ವೇದವನ್ನು ಮಾರುವವನು, ಅತ್ಯಂತ ಪ್ರಿಯನಾದವನು ಇವರು ಅತಿಥಿಗಳಾದರೂ ಉದಕಕ್ಕೆ ಅರ್ಹರಲ್ಲ.

ಅವಿಕ್ರೇಯಂ ಲವಣಂ ಪಕ್ವಮನ್ನಂ
ದಧಿ ಕ್ಷೀರಂ ಮಧು ತೈಲಂ ಘೃತಂ ಚ ।
ತಿಲಾ ಮಾಂಸಂ ಮೂಲಫಲಾನಿ ಶಾಕಂ
ರಕ್ತಂ ವಾಸಃ ಸರ್ವಗಂಧಾ ಗುಡಂ ಚ ॥೫॥

ಉಪ್ಪು, ಬೇಯಿಸಿದ ಅನ್ನ, ದಧಿ, ಕ್ಷೀರ, ಮಧು, ತೈಲ, ಘೃತ, ಎಳ್ಳು, ಮಾಂಸ, ಮೂಲಫಲಗಳು, ತರಕಾರಿ, ಕೆಂಪು ವಸ್ತ್ರ, ಎಲ್ಲಾ ವಿಧವಾದ ಸುಗಂಧ ದ್ರವ್ಯಗಳು ಮತ್ತು ಬೆಲ್ಲ ಇವುಗಳನ್ನು ಮಾರಬಾರದು.

**ಅರೋಷಣೋ ಯಃ ಸಮಲೋಷ್ಟಕಾಂಚನಃ**
**ಪ್ರಹೀಣಶೋಕೋ ಗತಸಂಧಿವಿಗ್ರಹಃ ।**
**ನಿಂದಾಪ್ರಶಂಸೋಪರತಃ ಪ್ರಿಯಾಪ್ರಿಯೇ**
**ಚರನ್ನುದಾಸೀನವದೇವ ಭಿಕ್ಷುಕಃ ॥೬॥**

ಯಾವನು ರೋಷವನ್ನು ತೊರೆದಿರುತ್ತಾನೆಯೋ, ಮಣ್ಣು ಮತ್ತು ಸುವರ್ಣಗಳನ್ನು ಸಮವಾಗಿ ನೋಡುತ್ತಾನೆಯೋ, ಶೋಕವನ್ನೂ ತೊರೆದಿರುತ್ತಾನೆಯೋ, ಯಾರ ಜೊತೆಯಲ್ಲಿಯೂ ಸಂಧಿಯನ್ನಾಗಲೀ ವಿರೋಧವನ್ನಾಗಲೀ ಮಾಡುವುದಿಲ್ಲವೋ, ನಿಂದಾ-ಪ್ರಶಂಸೆಗಳನ್ನು, ಪ್ರಿಯಾಪ್ರಿಯಗಳನ್ನು ಬಿಟ್ಟು ಉದಾಸೀನನಂತೆಯೇ ಸಂಚರಿಸುತ್ತಾನೆಯೋ ಅವನು ಸಂನ್ಯಾಸಿ.

**ನೀವಾರಮೂಲೇಂಗುದಶಾಕವೃತ್ತಿಃ**
**ಸುಸಂಯತಾತ್ಮಾಽಗ್ನಿಕಾರ್ಯೇಷ್ವಶೋಧ್ಯಃ ।**
**ವನೇ ವಸನ್ನತಿಥಿಷ್ವಪ್ರಮತ್ತೋ**
**ದುರಂಧರಃ ಪುಣ್ಯಕೃದೇಷ ತಾಪಸಃ ॥೭॥**

ನೀವಾರ, ಗೆಡ್ಡೆಗಳು, ಇಂಗುದ ಮತ್ತು ತರಕಾರಿಗಳಿಂದ ಜೀವನ ನಡೆಸುತ್ತಾ, ಇಂದ್ರಿಯನಿಗ್ರಹವುಳ್ಳವನಾಗಿ ಇನ್ನೊಬ್ಬರಿಗೆ ಸಂಶಯ ಬರದಂತೆ ಅಗ್ನಿಕಾರ್ಯವನ್ನು ಮಾಡುವವನಾಗಿ, ಅತಿಥಿಗಳನ್ನು ಎಚ್ಚರಿಕೆಯಿಂದ ಪೂಜಿಸಿ, ತನ್ನ ಕಾರ್ಯದ ಭಾರವನ್ನು ಹೊತ್ತು ಕಾಡಿನಲ್ಲಿ ವಾಸ ಮಾಡಿ ಪುಣ್ಯವನ್ನು ಸಂಪಾದಿಸುವವನು ವಾನಪ್ರಸ್ಥ.

**ಅಪಕೃತ್ಯ ಬುದ್ಧಿಮತೋ ದೂರಸ್ಥೋಽಸ್ಮೀತಿ ನಾಶ್ವಸೇತ್ ।**
**ದೀರ್ಘೌ ಬುದ್ಧಿಮತೋ ಬಾಹೂ ಯಾಭ್ಯಾಂ ಹಿಂಸತಿ ಹಿಂಸಿತಃ ॥೮॥**

ಬುದ್ಧಿವಂತರಿಗೆ ಅಪಕಾರವನ್ನು ಮಾಡಿ ದೂರದಲ್ಲಿದ್ದೇನೆ ಎಂದು ವಿಶ್ವಾಸದಿಂದಿರಬಾರದು. ಬುದ್ಧಿವಂತರ ಬಾಹುಗಳು ದೀರ್ಘವಾಗಿರುತ್ತವೆ. ತಮಗೆ ಹಿಂಸೆ ಕೊಟ್ಟವನನ್ನು ಅವು ಹಿಂಸಿಸುತ್ತವೆ.

**ನ ವಿಶ್ವಸೇದವಿಶ್ವಸ್ತೇ ವಿಶ್ವಸ್ತೇ ನಾತಿವಿಶ್ವಸೇತ್ ।**
**ವಿಶ್ವಾಸಾದ್ ಭಯಮುತ್ಪನ್ನಂ ಮೂಲಾನ್ಯಪಿ ನಿಕೃಂತತಿ ॥೯॥**

ವಿಶ್ವಾಸಹೀನರನ್ನು ನಂಬಬಾರದು. ನಂಬಿದವನನ್ನು ಅತಿಯಾಗಿ ನಂಬಬಾರದು. ನಂಬಿದವನಿಂದ ಉಂಟಾಗುವ ಭಯವು ಮೂಲಸಹಿತವಾಗಿ ನಾಶವನ್ನು ಮಾಡುತ್ತದೆ.

**ಅನಿಷ್ಠುರೋ ಗುಪ್ತದಾರಃ ಸಂವಿಭಾಗೀ ಪ್ರಿಯಂವದಃ ।**
**ಶ್ಲಕ್ಷ್ಣೋ ಮಧುರವಾಕ್ ಸ್ತ್ರೀಣಾಂ ನ ಚಾಸಾಂ ವಶಗೋ ಭವೇತ್ ॥**

ನಿಷ್ಠುರವಾಗಿ ಮಾತನಾಡದೆ ತನ್ನ ಪತ್ನಿಯನ್ನು ರಕ್ಷಿಸಿಕೊಂಡು, ತನ್ನ ದ್ರವ್ಯವನ್ನು ಇನ್ನೊಬ್ಬರಿಗೆ ಹಂಚಿ, ಪ್ರಿಯವಾಗಿ ಮಾತನಾಡುವವನಾಗಿ ನಿಪುಣನೂ ಮತ್ತು ಸ್ತ್ರೀಯರಿಗೆ ಮಧುರವಾಗಿ ಮಾತನಾಡುವವನೂ ಆಗಿರಬೇಕು. ಸ್ತ್ರೀಯರ ವಶನಾಗಬಾರದು.

**ಪೂಜನೀಯಾ ಮಹಾಭಾಗಾಃ ಪುಣ್ಯಾಶ್ಚ ಗೃಹದೀಪ್ತಯಃ ।**
**ಸ್ತ್ರಿಯಃ ಶ್ರಿಯೋ ಗೃಹಸ್ಯೋಕ್ತಾಃ ತಸ್ಮಾದ್ ರಕ್ಷ್ಯಾ ವಿಶೇಷತಃ ॥೧೧॥**

ಮಹಾನುಭಾವರೂ, ಪವಿತ್ರರೂ, ಮನೆಯ ಬೆಳಕೂ ಆದ ಸ್ತ್ರೀಯರು ಪೂಜನೀಯರು. ಅವರನ್ನು ಮನೆಯ ಲಕ್ಷ್ಮೀ ಎಂದು ಹೇಳುತ್ತಾರೆ. ಆದ್ದರಿಂದ ಅವರನ್ನು ವಿಶೇಷವಾಗಿ ರಕ್ಷಿಸಬೇಕು.

**ಭೋಜನೇ ಮಾತರಂ ಕುರ್ಯಾತ್ ಪಿತರಂ ಚಾತ್ಮರಕ್ಷಣೇ ।**
**ಗೋಷು ಚಾತ್ಮಸಮಂ ದದ್ಯಾತ್ ಸ್ವಯಮೇವ ಕೃಷಿಂ ವ್ರಜೇತ್ ॥೧೨॥**

**ಭೃತ್ಯೈರ್ವಾಣಿಜ್ಯಚಾರಂ ಚ ಪುತ್ರೈಃ ಸೇವೇತ ಚ ದ್ವಿಜಾನ್ ॥೧೩॥**

ಭೋಜನದಲ್ಲಿ ಬಡಿಸಲು ತಾಯಿಯನ್ನು ಅಪೇಕ್ಷಿಸಬೇಕು. ತನ್ನ ರಕ್ಷಣೆಯನ್ನು ಮಾಡಲು ತಂದೆಯನ್ನು ಬಯಸಬೇಕು. ಗೋವುಗಳ ರಕ್ಷಣೆಯನ್ನು ಮಾಡಲು ತನಗೆ ಸಮಾನನಾದವನನ್ನು ನಿಯೋಜಿಸಬೇಕು. ಕೃಷಿಯನ್ನು ನೋಡಲು ತಾನೇ ಹೋಗಬೇಕು. ವ್ಯಾಪಾರವನ್ನು ನೋಡಿಕೊಳ್ಳಲು ಭೃತ್ಯರನ್ನು ನಿಯೋಜಿಸಬೇಕು ಮತ್ತು ಬ್ರಾಹ್ಮಣರ ಸೇವೆಯನ್ನು ಮಾಡಲು ಪುತ್ರರನ್ನು ನಿಯೋಜಿಸಬೇಕು.

ಅದ್ಭ್ಯೋಽಗ್ನಿರ್ಬ್ರಹ್ಮತಃ ಕ್ಷತ್ರಮಶ್ಮನೋ ಲೋಹಮುತ್ಥಿತಮ್ ।
ತೇಷಾಂ ಸರ್ವತ್ರಗಂ ತೇಜಃ ಸ್ವಾಸು ಯೋನಿಷು ಶಾಮ್ಯತಿ ॥೧೪॥

ಜಲದಿಂದ ಅಗ್ನಿಯೂ, ಬ್ರಾಹ್ಮಣರಿಂದ ಕ್ಷತ್ರಿಯರೂ, ಕಲ್ಲಿನಿಂದ ಕಬ್ಬಿಣವೂ ಉಂಟಾಗುತ್ತದೆ. ಬೇರೆ ಎಲ್ಲಕಡೆಯಲ್ಲಿಯೂ ತೋರಿ ಬರುವ ಅವುಗಳ ಸಾಮರ್ಥ್ಯವು ತಮ್ಮ ಮೂಲಕಾರಣವನ್ನು ಸೇರಿ ನಾಶವನ್ನು ಹೊಂದುತ್ತದೆ.

ನಿತ್ಯಂ ಸಂತಃ ಕುಲೇ ಜಾತಾಃ ಪಾವಕೋಪಮತೇಜಸಃ ।
ಕ್ಷಮಾವಂತೋ ನಿರಾಕಾರಾಃ ಕಾಷ್ಠೇಽಗ್ನಿರಿವ ಶೇರತೇ ॥೧೫॥

ಕುಲದಲ್ಲಿ ಹುಟ್ಟಿದ ಸಜ್ಜನರು ಅಗ್ನಿಗೆ ಸಮಾನವಾದ ತೇಜಸ್ಸುಳ್ಳವರಾಗಿ, ಕ್ಷಮಾಗುಣವನ್ನು ಹೊಂದಿದವರಾಗಿ, ಯಾರಿಗೂ ತಮ್ಮನ್ನು ತೋರಗೊಡದೆ ಕಟ್ಟಿಗೆಯಲ್ಲಿರುವ ಅಗ್ನಿಯಂತೆ ಯಾವಾಗಲೂ ಸುಪ್ತರಾಗಿರುತ್ತಾರೆ.

ಯಸ್ಯ ಮಂತ್ರಂ ನ ಜಾನಂತಿ ಬಾಹ್ಯಾಶ್ಚಾಭ್ಯಂತರಾಶ್ಚ ಯೇ ।
ಸ ರಾಜಾ ಸರ್ವತಶ್ಚಕ್ಷುಃ ಚಿರಮೈಶ್ವರ್ಯಮಶ್ನುತೇ ॥೧೬॥

ಯಾವ ರಾಜನ ಮಂತ್ರವನ್ನು (ರಹಸ್ಯ) ಹೊರಗಿನವರಾಗಲೀ ಅಥವಾ ಒಳಗಿನವರಾಗಲೀ ತಿಳಿಯಲಾಗುವುದಿಲ್ಲವೋ ಅಂತಹ ಎಲ್ಲ ಕಡೆಯಲ್ಲಿಯೂ ಕಣ್ಣಿರುವ ರಾಜನು ಬಹುಕಾಲ ಐಶ್ವರ್ಯವನ್ನು ಹೊಂದುತ್ತಾನೆ.

ಕರಿಷ್ಯನ್ ನ ಪ್ರಭಾಷೇತ ಕೃತಾನ್ಯೇವ ತು ದರ್ಶಯೇತ್ ।
ಧರ್ಮಕಾಮಾರ್ಥಕಾರ್ಯಾಣಿ ತಥಾ ಮಂತ್ರೋ ನ ಭಿದ್ಯತೇ ॥೧೭॥

ಮುಂದೆ ಮಾಡಲಿರುವ ಧರ್ಮಕಾಮಾರ್ಥಕಾರ್ಯಗಳನ್ನು ಯಾರಿಗೂ ತಿಳಿಸಬಾರದು. ಮಾಡಿ ಮುಗಿಸಿದ ಕಾರ್ಯವನ್ನು ಮಾತ್ರ ತೋರಿಸಬೇಕು. ಹಾಗೆ ಮಾಡಿದರೆ ಮಂತ್ರವು ಭಿನ್ನವಾಗುವುದಿಲ್ಲ (ಮಂತ್ರಾಲೋಚನೆಯು ಸೋರಿ ಹೋಗುವುದಿಲ್ಲ).

ಗಿರಿಪೃಷ್ಠಮುಪಾರುಹ್ಯ ಪ್ರಾಸಾದಂ ವಾ ರಹೋಗತಃ ।
ಅರಣ್ಯೇ ನಿಃಶಲಾಕೇ ವಾ ತತ್ರ ಮಂತ್ರೋ ವಿಧೀಯತೇ ॥೧೮॥

ಪರ್ವತಶಿಖರವನ್ನೇರಿ ಅಥವಾ ಉಪ್ಪರಿಗೆಯಲ್ಲಿ ಅಥವಾ ಏಕಾಂತ ಸ್ಥಳದಲ್ಲಿ ಅಥವಾ ಮುಳ್ಳುಕಡ್ಡಿಗಳು ಇಲ್ಲದಿರುವ ಅರಣ್ಯ ಪ್ರದೇಶದಲ್ಲಿ ಮಂತ್ರಾಲೋಚನೆಯನ್ನು ಮಾಡಬೇಕೆಂದು ವಿಧಿಸಲ್ಪಡುತ್ತದೆ.

**ನಾಸುಹೃತ್ ಪರಮಂ ಮಂತ್ರಂ ಭಾರತಾರ್ಹತಿ ವೇದಿತುಮ್ ।**
**ಅಪಂಡಿತೋ ವಾऽಪಿ ಸುಹೃತ್ ಪಂಡಿತೋ ವಾऽಪ್ಯನಾತ್ಮವಾನ್॥೧೯॥**

ಎಲೈ ಭಾರತನೇ, ವಿಶ್ವಾಸವಿಲ್ಲದವನು ರಾಜನ ಮಂತ್ರವನ್ನು ತಿಳಿಯಲು ಅರ್ಹನಲ್ಲ. ಅಪಂಡಿತನಾದ ವಿಶ್ವಾಸಿಯಾಗಲೀ ಅಥವಾ ಮನೋಜಯವಿಲ್ಲದ ಪಂಡಿತನಾಗಲೀ ರಾಜನ ಮಂತ್ರವನ್ನು ತಿಳಿಯಲು ಅರ್ಹನಲ್ಲ.

**ನಾಪರೀಕ್ಷ್ಯ ಮಹೀಪಾಲಃ ಕುರ್ಯಾತ್ ಸಚಿವಮಾತ್ಮನಃ ॥೨೦॥**
**ಅಮಾತ್ಯೇऽಪ್ಯರ್ಥಲಿಪ್ಸಾ ಚ ಮಂತ್ರರಕ್ಷಣಮೇವ ಚ ।**

ರಾಜನು ಪರೀಕ್ಷೆ ಮಾಡದೆ ಯಾರನ್ನೂ ತನ್ನ ಸಚಿವರನ್ನಾಗಿ ಮಾಡಿಕೊಳ್ಳಬಾರದು. ಸಚಿವನಾಗಿ ಮಾಡಿಕೊಳ್ಳುವವನಲ್ಲಿ ಇರುವ ಧನದ ಆಸೆಯನ್ನು ಮತ್ತು ಮಂತ್ರ ರಕ್ಷಣ ಸಾಮರ್ಥ್ಯವನ್ನು ಗಮನಿಸಬೇಕು.

**ಕೃತಾನಿ ಸರ್ವಕಾರ್ಯಾಣಿ ಯಸ್ಯ ಪಾರಿಷದಾ ವಿದುಃ ॥೨೧॥**
**ಗೂಢಮಂತ್ರಸ್ಯ ನೃಪತೇಃ ತಸ್ಯ ಸಿದ್ಧಿರಸಂಶಯಮ್ ॥೨೨॥**

ಯಾವ ರಾಜನು ಮಾಡಿದ ಕಾರ್ಯಗಳನ್ನು ಮಾತ್ರ ಸಭಾಸದರು ತಿಳಿಯುತ್ತಾರೆಯೋ ಮತ್ತು ಯಾವ ಅವನ ಮಂತ್ರಗಳು ಗೂಢವಾಗಿರುತ್ತವೆಯೋ ಅಂತಹ ರಾಜನು ನಿಸ್ಸಂಶಯವಾಗಿ ಸಿದ್ಧಿಯನ್ನು ಪಡೆಯುತ್ತಾನೆ.

**ಅಪ್ರಶಸ್ತಾನಿ ಕಾರ್ಯಾಣಿ ಯೋ ಮೋಹಾದನುತಿಷ್ಠತಿ ।**
**ಸ ತೇಷಾಂ ವಿಪರಿಭ್ರಂಶಾದ್ ಭ್ರಶ್ಯತೇ ಜೀವಿತಾದಪಿ ॥೨೩॥**

ಯಾವನು ಮೋಹದಿಂದ ಅಪ್ರಶಸ್ತವಾದ ಕಾರ್ಯವನ್ನು ಮಾಡುತ್ತಾನೆಯೋ ಅವನು ಅವುಗಳ ವಿಪರಿಣಾಮದಿಂದ ಜೀವಿತವನ್ನೇ ಕಳೆದುಕೊಳ್ಳುತ್ತಾನೆ.

ಕರ್ಮಣಾಂ ತು ಪ್ರಶಸ್ತಾನಾಮನುಷ್ಠಾನಂ ಸುಖಾವಹಮ್ ।
ತೇಷಾಮೇವಾನನುಷ್ಠಾನಂ ಪಶ್ಚಾತ್ತಾಪಕರಂ ಮಹತ್ ॥೨೪॥

ಪ್ರಶಸ್ತವಾದ ಕರ್ಮಗಳ ಅನುಷ್ಠಾನವು ಸುಖವನ್ನು ತಂದುಕೊಡುತ್ತದೆ. ಅವುಗಳ ಅನುಷ್ಠಾನವನ್ನು ಮಾಡದಿದ್ದರೆ ದೊಡ್ಡ ಪಶ್ಚಾತ್ತಾಪವನ್ನು ಉಂಟುಮಾಡುತ್ತವೆ.

ಅನಧೀತ್ಯ ತಥಾ ವೇದಾನ್ ನ ವಿಪ್ರಃ ಶ್ರಾದ್ಧಮರ್ಹತಿ ।
ಏವಮಶ್ರುತಷಾಡ್ಗುಣ್ಯೋ ನ ಮಂತ್ರಂ ಶ್ರೋತುಮರ್ಹತಿ ॥೨೫॥

ವೇದವನ್ನು ಅಧ್ಯಯನ ಮಾಡದ ಬ್ರಾಹ್ಮಣನು ಶ್ರಾದ್ಧಕ್ಕೆ ಅರ್ಹನಲ್ಲ. ಅದರಂತೆ ಸ್ಥಾನ, ವೃದ್ಧಿ, ಕ್ಷಯ, ದ್ವೈಧ, ಯಾನ, ಸಂಧಿ ಮೊದಲಾದ ರಾಜನೀತಿಯ ಆರು ಅಂಗಗಳನ್ನು ತಿಳಿಯದವನು ರಾಜನ ಮಂತ್ರಾಲೋಚನೆಗೆ ಅರ್ಹನಲ್ಲ.

ಸ್ಥಾನವೃದ್ಧಿಕ್ಷಯಜ್ಞಶ್ಚ ಷಾಡ್ಗುಣ್ಯವಿದಿತಾತ್ಮನಃ ।
ಅನವಜ್ಞಾತಶೀಲಸ್ಯ ಸ್ವಾಧೀನಾ ಪೃಥಿವೀ ನೃಪ ॥೨೬॥

ಎಲೈ ರಾಜನೇ, ಯಾವ ರಾಜನಿಗೆ ಸ್ಥಾನ-ವೃದ್ಧಿ-ಕ್ಷಯ ಮೊದಲಾದ ರಾಜನೀತಿಗಳು ತಿಳಿದಿವೆಯೋ ಮತ್ತು ತನ್ನ ಸ್ಥಾನ-ವೃದ್ಧ್ಯಾದಿಗಳು ತಿಳಿದಿವೆಯೋ ಮತ್ತು ಯಾವನ ಶೀಲವು ತಿರಸ್ಕಾರಕ್ಕೆ ಒಳಗಾಗುವುದಿಲ್ಲವೋ ಅಂತಹ ರಾಜನು ಪೃಥಿವಿಯನ್ನು ವಶಪಡಿಸಿಕೊಳ್ಳುತ್ತಾನೆ.

ಅಮೋಘಕ್ರೋಧಹರ್ಷಸ್ಯ ಸ್ವಯಂ ಕೃತ್ಯಾನ್ಯವೇಕ್ಷತಃ ।
ಆತ್ಮಪ್ರತ್ಯಯಕೋಶಸ್ಯ ವಸುದೈವ ವಸುಂಧರಾ ॥೨೭॥

ಯಾವನ ಕ್ರೋಧ ಮತ್ತು ಹರ್ಷಗಳು ವ್ಯರ್ಥವಲ್ಲವೋ, ಯಾವನು ತನ್ನ ಕಾರ್ಯಗಳನ್ನು ತಾನೇ ನೋಡಿಕೊಳ್ಳುತ್ತಾನೆಯೋ, ಯಾವನಿಗೆ ತನ್ನಲ್ಲಿಯೇ ನಂಬಿಕೆಯ ದೊಡ್ಡ ಕೋಶವಿದೆಯೋ ಅಂತಹವನಿಗೆ ಭೂಮಿಯು ಸಂಪತ್ತನ್ನು ಕೊಡುತ್ತದೆ.

ನಾಮಮಾತ್ರೇಣ ತುಷ್ಯೇತ ಛತ್ರೇಣ ಚ ಮಹೀಪತಿಃ ।
ಭೃತ್ಯೇಭ್ಯೋ ವಿಸೃಜೇದರ್ಥಾನ್ ನೈಕಃ ಸರ್ವಹರೋ ಭವೇತ್ ॥೨೮॥

ರಾಜನು ರಾಜ ಎಂಬ ಹೆಸರಿನಿಂದಲೇ ಮತ್ತು ಶ್ವೇತಚ್ಛತ್ರದಿಂದಲೇ ತೃಪ್ತನಾಗಿರಬೇಕು. ತನ್ನನ್ನು ಆಶ್ರಯಿಸಿದವರಿಗೆ ಎಲ್ಲಾ ವಸ್ತುಗಳನ್ನೂ ಕೊಡಬೇಕು. ತಾನೊಬ್ಬನೇ ಎಲ್ಲವನ್ನೂ ಸ್ವೀಕರಿಸಬಾರದು.

**ಬ್ರಾಹ್ಮಣೋ ಬ್ರಾಹ್ಮಣಂ ವೇದ ಭರ್ತಾ ವೇದ ಸ್ತ್ರಿಯಂ ತಥಾ ।**
**ಅಮಾತ್ಯಂ ನೃಪತಿರ್ವೇದ ರಾಜಾ ರಾಜಾನಮೇವ ಚ ॥೨೯॥**

ಬ್ರಾಹ್ಮಣನು ಬ್ರಾಹ್ಮಣನನ್ನು ತಿಳಿದಿರುತ್ತಾನೆ. ಪತಿಯು ಪತ್ನಿಯನ್ನು ತಿಳಿದಿರುತ್ತಾನೆ. ರಾಜನು ಅಮಾತ್ಯನನ್ನು ತಿಳಿದಿರುತ್ತಾನೆ. ಒಬ್ಬ ರಾಜನು ಇನ್ನೊಬ್ಬ ರಾಜನನ್ನು ತಿಳಿದಿರುತ್ತಾನೆ.

**ನ ಶತ್ರುರ್ವಶಮಾಪನ್ನೋ ಮೋಕ್ತವ್ಯೋ ವಧ್ಯತಾಂ ಗತಃ ।**
**ಅಹತಾದ್ಧಿ ಭಯಂ ತಸ್ಮಾದ್ ಜಾಯತೇ ನಚಿರಾದಿವ ॥೩೦॥**

ವಧೆಗೆ ಯೋಗ್ಯವಾದ ಶತ್ರುವು ಕರವಶನಾದಾಗ ಅವನನ್ನು ಬಿಡಬಾರದು. ಅವನನ್ನು ಬಿಡುಗಡೆಗೊಳಿಸಿದರೆ ಹತನಾಗದಿದ್ದ ಅವನಿಂದ ಶೀಘ್ರದಲ್ಲಿಯೇ ಭಯ ಉಂಟಾಗುತ್ತದೆ.

**ದೈವತೇಷು ಚ ಯತ್ನೇನ ರಾಜಸು ಬ್ರಾಹ್ಮಣೇಷು ಚ ।**
**ನಿಯಂತವ್ಯಃ ಸದಾ ಕ್ರೋಧೋ ವೃದ್ಧಬಾಲಾತುರೇಷು ಚ ॥೩೧॥**

ದೇವತೆಗಳ ವಿಷಯದಲ್ಲಿ ರಾಜರು, ಬ್ರಾಹ್ಮಣರು, ವೃದ್ಧರು, ಬಾಲರು ಮತ್ತು ರೋಗಿಗಳ ವಿಷಯದಲ್ಲಿ ಪ್ರಯತ್ನಪಟ್ಟು ಕ್ರೋಧವನ್ನು ಯಾವಾಗಲೂ ನಿಯಂತ್ರಿಸಬೇಕು.

**ನಿರರ್ಥಂ ಕಲಹಂ ಪ್ರಾಜ್ಞೋ ವರ್ಜಯೇನ್ಮೂಢಸೇವಿತಮ್ ।**
**ಕೀರ್ತಿಂ ಚ ಲಭತೇ ಲೋಕೇ ನ ಚಾನರ್ಥೇನ ಯುಜ್ಯತೇ ॥೩೨॥**

ವಿವೇಕಿಯಾದವನು ಮೂಢರಂತೆ ವ್ಯರ್ಥವಾದ ಕಲಹವನ್ನು ಮಾಡಬಾರದು. ಆಗ ಲೋಕದಲ್ಲಿ ಕೀರ್ತಿಯನ್ನು ಪಡೆಯುತ್ತಾನೆ ಮತ್ತು ಅನರ್ಥಗಳಿಗೆ ಸಿಲುಕುವುದಿಲ್ಲ.

ಪ್ರಸಾದೋ ನಿಷ್ಫಲೋ ಯಸ್ಯ ಕ್ರೋಧಶ್ಚಾಪಿ ನಿರರ್ಥಕಃ ।
ನ ತಂ ಭರ್ತಾರಮಿಚ್ಛಂತಿ ಷಂಡಂ ಪತಿಮಿವ ಸ್ತ್ರಿಯಃ ॥೩೩॥

ಯಾವನ ಪ್ರಸನ್ನತೆಯು ನಿಷ್ಫಲವೋ, ಯಾವನ ಕ್ರೋಧವು ವ್ಯರ್ಥವೋ ಅಂತಹವನನ್ನು ಸ್ತ್ರೀಯರು ಷಂಡನನ್ನು ಪತಿಯಾಗಿ ಬಯಸದಂತೆ ಭೃತ್ಯರು ಅಥವಾ ಪ್ರಜೆಗಳು ಸ್ವಾಮಿಯಾಗಿ ಬಯಸುವುದಿಲ್ಲ.

ನ ಬುದ್ಧಿರ್ಧನಲಾಭಾಯ ನ ಜಾಡ್ಯಮಸಮೃದ್ಧಯೇ ।
ಲೋಕಪರ್ಯಾಯವೃತ್ತಾಂತಂ ಪ್ರಾಜ್ಞೋ ಜಾನಾತಿ ನೇತರಃ ॥೩೪॥

ಬುದ್ಧಿಯು ಧನಲಾಭಕ್ಕಾಗಿ ಅಲ್ಲ. ಸುಮ್ಮನಿರುವುದು ಅಸಂಪತ್ತಿಗಾಗಿ ಅಲ್ಲ. ಲೋಕದಲ್ಲಿ ನಡೆಯುವ ವೃತ್ತಾಂತವನ್ನು ಪ್ರಾಜ್ಞನು ತಿಳಿಯುತ್ತಾನೆ, ಇನ್ನೊಬ್ಬನು ತಿಳಿಯುವುದಿಲ್ಲ.

ವಿದ್ಯಾಶೀಲವಯೋವೃದ್ಧಾನ್ ಬುದ್ಧಿವೃದ್ಧಾಂಶ್ಚ ಭಾರತ ।
ಧನಾಭಿಜಾತವೃದ್ಧಾಂಶ್ಚ ನಿತ್ಯಂ ಮೂಢೋऽವಮನ್ಯತೇ ॥೩೫॥

ಎಲೈ ಭಾರತನೇ, ವಿದ್ಯಾಶೀಲವಯೋವೃದ್ಧರನ್ನೂ, ಬುದ್ಧಿವೃದ್ಧರನ್ನೂ, ಧನ ಮತ್ತು ಕುಲವೃದ್ಧರನ್ನೂ ಮೂಢನು ಯಾವಾಗಲೂ ಅವಮಾನ ಮಾಡುತ್ತಾನೆ.

ಅನಾರ್ಯವೃತ್ತಮಪ್ರಾಜ್ಞಮಸೂಯಕಮಧಾರ್ಮಿಕಮ್ ।
ಅನರ್ಥಾಃ ಕ್ಷಿಪ್ರಮಾಯಾಂತಿ ವಾಗ್ದುಷ್ಟಂ ಕ್ರೋಧನಂ ತಥಾ ॥೩೬॥

ಒಳ್ಳೆಯ ನಡತೆಯನ್ನು ಹೊಂದದವನೂ, ಪ್ರಾಜ್ಞನಲ್ಲದವನೂ, ಅಸೂಯಾಪರನೂ, ಅಧಾರ್ಮಿಕನೂ, ದುಷ್ಟಮಾತುಳ್ಳವನೂ ಮತ್ತು ಸಿಟ್ಟಾಗುವವನೂ ಆದವನಿಗೆ ಅನರ್ಥಗಳು ಬೇಗ ಉಂಟಾಗುತ್ತವೆ.

ಅವಿಸಂವಾದನಂ ದಾನಂ ಸಮಯಸ್ಯಾನತಿಕ್ರಮಃ ।
ಆವರ್ತಯಂತಿ ಭೂತಾನಿ ಸಮ್ಯಕ್ ಪ್ರಣಿಹಿತಾ ಚ ವಾಕ್ ॥೩೭॥

ಜಗಳವಾಡದಿರುವುದು, ದಾನ, ಕಾಲವನ್ನು ಮೀರದಿರುವುದು, ಒಳ್ಳೆಯ ಮಾತು ಇವುಗಳು ವಿಮುಖರಾದವರನ್ನೂ ತಮ್ಮ ಕಡೆಗೆ ತಿರುಗಿಸುತ್ತವೆ.

ಅವಿಸಂವಾದಕೋ ದಕ್ಷಃ ಕೃತಜ್ಞೋ ಮತಿಮಾನ್ ಋಜುಃ ।
ಅತಿಸಂಕ್ಷೀಣಕೋಶೋಽಪಿ ಲಭತೇ ಪರಿಚಾರಿಣಮ್ ॥೩೮॥

ಯಾವನು ಜಗಳವಾಡುವುದಿಲ್ಲವೋ, ದಕ್ಷನೋ, ಕೃತಜ್ಞನೋ, ಮೇಧಾವಿಯೂ ಮತ್ತು ಸರಳನೋ ಅವನು ಅಲ್ಪಧನವುಳ್ಳವನಾದರೂ ಪರಿಚಾರಕರನ್ನು ಪಡೆಯುತ್ತಾನೆ.

ಧೃತಿಃ ಶಮೋ ದಮಃ ಶೌಚಂ ಕಾರುಣ್ಯಂ ವಾಗನಿಷ್ಠುರಾ ।
ಮಿತ್ರಾಣಾಂ ಚಾನಭಿದ್ರೋಹಃ ಸಪ್ತೈತಾಃ ಸಮಿಧಃ ಶ್ರಿಯಃ ॥೩೯॥

ಧೈರ್ಯ, ಶಮ, ದಮ, ಶೌಚ, ಕಾರುಣ್ಯ, ಮೃದುವಚನ, ಮಿತ್ರದ್ರೋಹ ಮಾಡದಿರುವುದು ಈ ಏಳು ಸಂಪತ್ತನ್ನು ಸಾಧಿಸುವ ಸಮಿತ್ತುಗಳು.

ಅಸಂವಿಭಾಗೀ ದುಷ್ಟಾತ್ಮಾ ಕೃತಘ್ನೋ ನಿರಪತ್ರಪಃ ।
ತಾದೃಙ್ ನರಾಧಮೋ ಲೋಕೇ ವರ್ಜನೀಯೋ ನರಾಧಿಪ ॥೪೦॥

ಎಲೈ ನರಾಧಿಪನೇ, ತನ್ನ ವಸ್ತುವನ್ನು ಇನ್ನೊಬ್ಬರಿಗೆ ಹಂಚದಿರುವವನು, ದುಷ್ಟನು, ಕೃತಘ್ನನು, ನಾಚಿಕೆಯಿಲ್ಲದವನು ಅಂತಹ ನರಾಧಮನನ್ನು ಲೋಕದಲ್ಲಿ ದೂರದಲ್ಲಿಡಬೇಕು.

ನ ಸ ರಾತ್ರೌ ಸುಖಂ ಶೇತೇ ಸಸರ್ಪ ಇವ ವೇಶ್ಮನಿ ।
ಯಃ ಕೋಪಯತಿ ನಿರ್ದೋಷಂ ಸದೋಷೋಽಭ್ಯಂತರಂ ಜನಮ್ ॥

ಯಾವನು ತನ್ನಲ್ಲೇ ದೋಷವನ್ನಿಟ್ಟುಕೊಂಡು ನಿರ್ದೋಷರಾದ ಸಮೀಪದ ಜನರನ್ನು ಕೋಪಗೊಳಿಸುತ್ತಾನೆಯೋ ಅವನು ಸರ್ಪವು ಪ್ರವೇಶಿಸಿರುವ ಗೃಹದಲ್ಲಿ ಮಲಗಿರುವವನಂತೆ ರಾತ್ರಿಯಲ್ಲಿ ಸುಖವಾಗಿ ಮಲಗುವುದಿಲ್ಲ.

ಯೇಷು ದುಷ್ಟೇಷು ದೋಷಃ ಸ್ಯಾದ್ ಯೋಗಕ್ಷೇಮಸ್ಯ ಭಾರತ ।
ಸದಾ ಪ್ರಸಾದನಂ ತೇಷಾಂ ದೇವತಾನಾಮಿವಾಚರೇತ್ ॥೪೨॥

ಯಾವ ದುಷ್ಟರನ್ನು ನೋಡಿದರೆ ತನ್ನ ಯೋಗಕ್ಷೇಮಕ್ಕೆ ಭಂಗ ಬರುತ್ತದೆಯೋ ಅಂತಹವರನ್ನು ದೇವತೆಗಳನ್ನು ಪೂಜಿಸಿದಂತೆ ಯಾವಾಗಲೂ ಪ್ರಸನ್ನೀಕರಿಸಬೇಕು.

ಯೇऽರ್ಥಾಃ ಸ್ತ್ರೀಷು ಸಮಾಸಕ್ತಾಃ ಪ್ರಮತ್ತಪತಿತೇಷು ಚ ।
ಯೇ ಚಾನಾರ್ಯಸಮಾಸಕ್ತಾಃ ಸರ್ವೇ ತೇ ಸಂಶಯಂ ಗತಾಃ ॥೪೩॥

ಸ್ತ್ರೀಯರ ಕೈಯಲ್ಲಿ ಸೇರಿದ ವಸ್ತುಗಳು, ಹುಚ್ಚರ ಕೈಯಲ್ಲಿ, ಪತಿತರ ಕೈಯಲ್ಲಿ ಮತ್ತು ನೀಚರ ಕೈಯಲ್ಲಿಸೇರಿದ ವಸ್ತುಗಳು ಸಂಶಯಕ್ಕೆ ಈಡಾಗುತ್ತವೆ.

ಯತ್ರ ಸ್ತ್ರೀ ಯತ್ರ ಕಿತವೋ ಯತ್ರ ಬಾಲೋऽನುಶಾಸ್ತಿ ಚ ।
ಮಜ್ಜಂತಿ ತೇऽವಶಾ ರಾಜನ್ನುದಧಾವಪ್ಲವಾ ಇವ ॥೪೪॥

ಎಲ್ಲಿ ಸ್ತ್ರೀಯಾಗಲೀ, ಸುಳ್ಳನ್ನು ಹೇಳುವ ಮನುಷ್ಯನಾಗಲೀ ಅಥವಾ ಮೂರ್ಖನಾಗಲೀ ಶಾಸನವನ್ನು ಮಾಡುತ್ತಾರೆಯೋ ಅಲ್ಲಿ ಪ್ರಜೆಗಳು ನಾವೆ ಇಲ್ಲದ ಸಮುದ್ರದಲ್ಲಿ ಮುಳುಗುವಂತೆ ಅವಶರಾಗಿ ಮುಳುಗುತ್ತಾರೆ.

ಪ್ರಯೋಜನೇಷು ಯೇ ಸಕ್ತಾ ನ ವಿಶೇಷೇಷು ಭಾರತ ।
ತಾನಹಂ ಪಂಡಿತಾನ್ ಮನ್ಯೇ ವಿಶೇಷಾ ವಿಘ್ನಕಾರಕಾಃ ॥೪೫॥

ಯಾರು ತಮ್ಮ ಕಾರ್ಯಕ್ಕೆ ಸಹಾಯ ಮಾಡುವವರಲ್ಲಿ ಆಸಕ್ತರಾಗಿ ಇತರ ಜನರಲ್ಲಿ ಉದಾಸೀನರಾಗಿರುತ್ತಾರೆಯೋ ಅವರನ್ನು ನಾನು ಪಂಡಿತರೆಂದು ತಿಳಿಯುತ್ತೇನೆ. ಇತರ ಜನರು ಕಾರ್ಯಕ್ಕೆ ವಿಘ್ನವನ್ನು ಮಾಡುವವರು.

ಯಂ ಪ್ರಶಂಸಂತಿ ಕಿತವಾ ಯಂ ಪ್ರಶಂಸಂತಿ ಚೋರಕಾಃ ।
ಯಂ ಪ್ರಶಂಸಂತಿ ಬಂಧಕ್ಯೋ ನ ಸ ಜೀವತಿ ಮಾನವಃ ॥೪೬॥

ಯಾವನನ್ನು ವೋಸಗಾರರು ಪ್ರಶಂಸಿಸುತ್ತಾರೆಯೋ, ಚೋರರು ಪ್ರಶಂಸಿಸುತ್ತಾರೆಯೋ, ವೇಶ್ಯೆಯರು ಪ್ರಶಂಸಿಸುತ್ತಾರೆಯೋ ಅಂತಹ ಮನುಷ್ಯನು ಬಹುಕಾಲ ಜೀವಿಸಿರುವುದಿಲ್ಲ.

ಹಿತ್ವಾ ತಾನ್ ಪರಮೇಷ್ವಾಸಾನ್ ಪಾಂಡವಾನಮಿತೌಜಸಃ ।
ಆಹಿತಂ ಭಾರತೈಶ್ವರ್ಯಂ ತ್ವಯಾ ದುರ್ಯೋಧನೇ ಮಹತ್ ॥೪೭॥

ಎಲೈ ಭಾರತನೇ, ನೀನು ಅಮಿತಪರಾಕ್ರಮಿಗಳಾದ, ಮಹಾಧನುರ್ಧಾರಿಗಳಾದ ಆ ಪಾಂಡವರನ್ನು ಬಿಟ್ಟು ನಿನ್ನ ಎಲ್ಲಾ ಐಶ್ವರ್ಯವನ್ನೂ ದುರ್ಯೋಧನನಿಗೆ ಹೊರಿಸಿದ್ದೀಯೆ.

**ತಂ ದ್ರಕ್ಷ್ಯಸಿ ಪರಿಭ್ರಷ್ಟಂ ತಸ್ಮಾತ್ ತ್ವಂ ನಚಿರಾದಿವ ।**
**ಐಶ್ವರ್ಯಮದಸಮ್ಮೂಢಂ ಬಲಿಂ ಲೋಕತ್ರಯಾದಿವ ॥೪೮॥**

ಬಲಿಯು ಲೋಕತ್ರಯದಿಂದ ಚ್ಯುತನಾದಂತೆ ಶೀಘ್ರವಾಗಿ ಐಶ್ವರ್ಯಮದ ಮತ್ತನಾದ ಅವನು ಐಶ್ವರ್ಯದಿಂದ ಪರಿಭ್ರಷ್ಟನಾಗುವುದನ್ನು ನೀನು ನೋಡುವಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಅಷ್ಟಸ್ತ್ರಿಂಶೋऽಧ್ಯಾಯಃ ॥

॥ ಪ್ರಜಾಗರಪರ್ವಣಿ ಸಪ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಮೂವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

## ಮೂವತ್ತೊಂಬತ್ತನೆಯ ಅಧ್ಯಾಯ

ವಿದುರನೀತಿ. ಜ್ಞಾತಿಸಂಗ್ರಹದಲ್ಲಿ ಇರುವ ಗುಣನಿರೂಪಣ.

### ಧೃತರಾಷ್ಟ್ರಃ

**ಅನೀಶ್ವರೋऽಯಂ ಪುರುಷೋ ಭವಾಭವೇ**
**ಸೂತ್ರಪ್ರೋತಾ ದಾರುಮಯೀವ ಯೋಷಾ ।**
**ಧಾತ್ರಾ ತು ದಿಷ್ಟಸ್ಯ ವಶೇ ಕೃತೋऽಹಂ**
**ತಸ್ಮಾದ್ ವದ ತ್ವಂ ಶ್ರವಣೇ ಧೃತೋऽಹಮ್ ॥೧॥**

**ಧೃತರಾಷ್ಟ್ರ**– ಮನುಷ್ಯನು ಸೂತ್ರವು ಪೋಣಿಸಿದ ಮರದ ಹೆಣ್ಣು ಗೊಂಬೆಯಂತೆ ತನ್ನ ಶುಭಾಶುಭಗಳನ್ನು ಸಂಪಾದಿಸಿಕೊಳ್ಳಲು ಅಸಮರ್ಥನಾದವನು. ಬ್ರಹ್ಮನು ನನ್ನನ್ನು ಅದೃಷ್ಟದ ವಶವನ್ನಾಗಿ ಮಾಡಿದ್ದಾನೆ. ನಾನು ಶ್ರವಣದಲ್ಲಿ ಆಸಕ್ತನಾಗಿದ್ದೇನೆ. ಆದ್ದರಿಂದ ನೀನು ಮಾತನಾಡು.

ವಿದುರಃ

ಅಪ್ರಾಪ್ತಕಾಲಂ ವಚನಂ ಬೃಹಸ್ಪತಿರಪಿ ಬ್ರುವನ್ ।
ಲಭತೇ ಬುದ್ಧ್ಯವಜ್ಞಾನಮವಮಾನಂ ಚ ಭಾರತ ॥೨॥

ವಿದುರ– ಎಲೈ ಭಾರತನೇ, ಅಯೋಗ್ಯವಾದ ಸಮಯದಲ್ಲಿ ಬೃಹಸ್ಪತಿಯೇ ಮಾತನಾಡಿದರೂ ಬುದ್ಧಿಯ ಮಾಲಿನ್ಯವನ್ನು ಮತ್ತು ಅವಮಾನವನ್ನು ಪಡೆಯುತ್ತಾನೆ.

ಪ್ರಿಯೋ ಭವತಿ ದಾನೇನ ಪ್ರಿಯವಾದೇನ ಚಾಪರಃ ।
ಮಂತ್ರಮೂಲಬಲೇನಾನ್ಯೋ ಯಃ ಪ್ರಿಯಃ ಪ್ರಿಯ ಏವ ಸಃ ॥೩॥

ಕೆಲವರು ದಾನದಿಂದ ಪ್ರಿಯರಾಗುತ್ತಾರೆ, ಇನ್ನು ಕೆಲವರು ಒಳ್ಳೆಯ ಮಾತಿನಿಂದ ಪ್ರಿಯರಾಗುತ್ತಾರೆ, ಇನ್ನು ಕೆಲವರು ಮಂತ್ರಮೂಲಾದಿ ಬಲದಿಂದ ಪ್ರಿಯರಾಗುತ್ತಾರೆ, ಪರಮಾತ್ಮನೊಬ್ಬನೇ ಯಾವಾಗಲೂ ಪ್ರಿಯನಾದವನು.

ದ್ವೇಷ್ಯೋ ನ ಸಾಧುರ್ಭವತಿ ನ ಮೇಧಾವೀ ನ ಪಂಡಿತಃ ।
ಪ್ರಿಯೇ ಶುಭಾನಿ ಕರ್ಮಾಣಿ ದ್ವೇಷ್ಯೇ ಪಾಪಾನಿ ಚೈವ ಹ ॥೪॥

ಸಾಧುವು ದ್ವೇಷಕ್ಕೆ ವಿಷಯನಾಗುವುದಿಲ್ಲ. ಮೇಧಾವಿಯು ಮತ್ತು ಪಂಡಿತನು ದ್ವೇಷಕ್ಕೆ ವಿಷಯರಾಗುವುದಿಲ್ಲ. ಶುಭಕರ್ಮಗಳು ಪ್ರಿಯರನ್ನು ಜ್ಞಾಪಿಸುತ್ತವೆ. ಪಾಪಕರ್ಮಗಳು ದ್ವೇಷಿಯನ್ನು ಜ್ಞಾಪಿಸುತ್ತವೆ.

ಉಕ್ತಂ ಮಯಾ ಜಾತಮಾತ್ರೇऽಪಿ ರಾಜನ್
ದುರ್ಯೋಧನಂ ತ್ಯಜ ಪುತ್ರಂ ತ್ವಮೇಕಮ್ ।
ತಸ್ಯ ತ್ಯಾಗಾತ್ ಪುತ್ರಶತಸ್ಯ ವೃದ್ಧಿಃ
ಅಸ್ಯಾತ್ಯಾಗಾತ್ ಪುತ್ರಶತಸ್ಯ ನಾಶಃ ॥೫॥

ರಾಜನೇ, ಹುಟ್ಟಿದಾಗಲೇ ನಾನು ದುರ್ಯೋಧನನೆಂಬ ಒಬ್ಬ ಪುತ್ರನನ್ನು ಬಿಡು. ಅವನನ್ನು ತ್ಯಾಗ ಮಾಡುವುದರಿಂದ ನೂರುಮಕ್ಕಳ ವೃದ್ಧಿಯುಂಟಾಗುತ್ತದೆ. ತ್ಯಾಗ ಮಾಡದಿದ್ದರೆ ನೂರುಮಕ್ಕಳ ನಾಶವಾಗುತ್ತದೆ ಎಂದು ಹೇಳಿದೆ.

ನ ವೃದ್ಧಿರ್ಬಹುಮಂತವ್ಯಾ ಯಾ ವೃದ್ಧಿಃ ಕ್ಷಯಮಾವಹೇತ್ ।
ಕ್ಷಯೋऽಪಿ ಬಹುಮಂತವ್ಯೋ ಯಃ ಕ್ಷಯೋ ವೃದ್ಧಿಮಾವಹೇತ್ ॥೬॥

ಯಾವ ವೃದ್ಧಿಯು ನಾಶವನ್ನು ಉಂಟುಮಾಡುತ್ತದೆಯೋ ಆ ವೃದ್ಧಿಯು ಶ್ಲಾಘನೀಯವಲ್ಲ. ಯಾವ ಕ್ಷಯವು ವೃದ್ಧಿಯನ್ನು ಉಂಟುಮಾಡುತ್ತದೆಯೋ ಅಂತಹ ಕ್ಷಯವೂ ಶ್ಲಾಘನೀಯವಾದುದು.

**ನ ಸ ಕ್ಷಯೋ ಮಹಾರಾಜ ಯಃ ಕ್ಷಯೋ ವೃದ್ಧಿಮಾವಹೇತ್ ।**
**ಕ್ಷಯಃ ಸ ತ್ವಿಹ ಮಂತವ್ಯೋ ಯಂ ಲಬ್ಧ್ವಾ ಬಹು ನಾಶಯೇತ್ ॥೭॥**

ಎಲೈ ಮಹಾರಾಜನೇ, ಯಾವ ಕ್ಷಯವು ವೃದ್ಧಿಯನ್ನು ಉಂಟು ಮಾಡಿಕೊಡುತ್ತದೆಯೋ ಅದು ಕ್ಷಯವೇ ಅಲ್ಲ. ಆದರೆ ಯಾವ ಲಾಭವು ಬಹಳ ನಾಶವನ್ನು ಉಂಟುಮಾಡುತ್ತದೆಯೋ ಅದನ್ನು ಕ್ಷಯವೆಂದು ತಿಳಿಯಬೇಕು.

**ಸಮೃದ್ಧಾ ಗುಣತಃ ಕೇಚಿದ್ ಭವಂತಿ ಧನತೋಽಪರೇ ।**
**ಧನವೃದ್ಧಾನ್ ಗುಣೈರ್ಹೀನಾನ್ ಧೃತರಾಷ್ಟ್ರ ವಿವರ್ಜಯ ॥೮॥**

ಕೆಲವರು ಗುಣಗಳಿಂದ ಸಮೃದ್ಧರಾಗಿರುತ್ತಾರೆ. ಇನ್ನು ಕೆಲವರು ಧನದಿಂದ ಸಮೃದ್ಧರಾಗಿರುತ್ತಾರೆ. ಧೃತರಾಷ್ಟ್ರನೇ, ಧನದಿಂದ ಅಭಿವೃದ್ಧರಾಗಿ ಗುಣಗಳಿಂದ ಹೀನರಾದವರನ್ನು ಪರಿತ್ಯಜಿಸು.

**ಧೃತರಾಷ್ಟ್ರಃ**

**ಸರ್ವಂ ತ್ವಮಾಯತೀತ್ಯುಕ್ತಂ ವದಸಿ ಪ್ರಾಜ್ಞಸಮ್ಮತಮ್ ।**
**ನ ಚೋತ್ಸಹೇ ಸುತಂ ತ್ಯಕ್ತುಂ ಯತೋ ಧರ್ಮಸ್ತತೋ ಜಯಃ ॥೯॥**

ಧೃತರಾಷ್ಟ್ರ- ನೀನು ಪ್ರಾಜ್ಞಸಮ್ಮತವಾಗಿ ಮುಂದೆ ಆಗುವ ವಿಷಯಗಳನ್ನೆಲ್ಲಾ ಹೇಳುತ್ತಿದ್ದೀಯೆ. ನಾನು ಮಗನನ್ನು ಬಿಡಲಾರೆ. ಎಲ್ಲಿ ಧರ್ಮವಿದೆಯೋ ಅಲ್ಲಿ ಜಯವುಂಟಾಗುತ್ತದೆ.

**ವಿದುರಃ**

**ಅತೀವಗುಣಸಂಪನ್ನೋ ನ ಜಾತು ವಿನಯಾನ್ವಿತಃ ।**
**ಸುಸೂಕ್ಷ್ಮಮಪಿ ಭೂತಾನಾಮುಪಮರ್ದಮಪೇಕ್ಷತೇ ॥೧೦॥**

ವಿದುರ– ಬಹಳ ಗುಣಸಂಪನ್ನನಾದರೂ ಎಂದೂ ವಿನಯವನ್ನು ಹೊಂದದಿದ್ದರೆ ಅವನು ಪ್ರಾಣಿಗಳಿಗೆ ಸ್ವಲ್ಪವಾದರೂ ಸಂಘರ್ಷವನ್ನು ಬಯಸುತ್ತಾನೆ.

**ಪರಾಪವಾದನಿರತಾ ಪರದುಃಖೋದಯೇಷು ಚ ।**
**ಪರಸ್ಪರವಿರೋಧೇ ಚ ಯತಂತೇ ಸತತೋತ್ಥಿತಾಃ ॥೧೧॥**

ದುಷ್ಟರು ಪರಾಪವಾದದಲ್ಲಿ ನಿರತರಾಗಿ, ಪರರಿಗೆ ದುಃಖವುಂಟು ಮಾಡುವುದರಲ್ಲಿಯೂ ನಿರತರಾಗಿ, ಪರಸ್ಪರ ವಿರೋಧದಲ್ಲಿಯೂ ನಿರತರಾಗಿ ಆ ವಿಷಯದಲ್ಲಿ ಸತತವಾದ ಪ್ರಯತ್ನವನ್ನು ಮಾಡುತ್ತಾರೆ.

**ಸದೋಷಂ ದರ್ಶನಂ ಯೇಷಾಂ ಸಂವಾಸೇ ಸುಮಹದ್ಭಯಮ್ ।**
**ಅರ್ಥಾದಾನೇ ಮಹಾನ್ ದೋಷಃ ಪ್ರದಾನೇ ಚ ಮಹದ್ಭಯಮ್ ॥**

ಯಾವ ಅಂತಹವರ ದರ್ಶನವೇ ದೋಷವನ್ನು ಉಂಟುಮಾಡುತ್ತದೆ. ಅವರ ಜೊತೆಯಲ್ಲಿ ವಾಸ ಮಾಡುವುದು ದೊಡ್ಡ ಭಯಕ್ಕೆ ಕಾರಣ. ಅವರಿಗೆ ದ್ರವ್ಯವನ್ನು ಕೊಡದಿದ್ದರೆ ದೊಡ್ಡ ದೋಷ. ಕೊಟ್ಟರೆ ದೊಡ್ಡ ಭಯವು ಉಂಟಾಗುತ್ತದೆ.

**ಯೇ ವೈ ಭೇದನಶೀಲಾಸ್ತು ಸಕಾಮಾ ನಿಸ್ತ್ರಪಾಃ ಶಠಾಃ ।**
**ಯೇ ಪಾಪಾ ಇತಿ ವಿಖ್ಯಾತಾಃ ಸಂವಾಸೇ ಪರಿಗರ್ಹಿತಾಃ ॥೧೩॥**

ಯಾರು ಸ್ನೇಹಿತರನ್ನು ಒಡೆಯುವ ಸ್ವಭಾವವುಳ್ಳವರೋ, ಕಾಮಿಗಳೋ, ನಾಚಿಕೆ ಇಲ್ಲದವರೋ, ಶಠರೋ ಮತ್ತು ಯಾರು ಪಾಪಿಷ್ಠರೆಂದು ಪ್ರಸಿದ್ಧರಾಗಿದ್ದಾರೆಯೋ ಅಂತಹವರು ಜೊತೆಯಲ್ಲಿ ವಾಸಮಾಡುವುದಕ್ಕೆ ನಿಂದಿತರಾದವರು.

**ಯುಕ್ತಾಶ್ಚಾನ್ಯೈರ್ಮಹಾದೋಷೈರ್ಯೇ ನರಾಸ್ತಾನ್ ವಿವರ್ಜಯೇತ್ ।**
**ನೀತೇ ಯಾ ಫಲನಿರ್ವೃತ್ತಿಃ ಸೌಹೃದೇ ಚೈವ ಯತ್ ಸುಖಮ್ ॥೧೪॥**

**ನಿವರ್ತಮಾನೇ ಸೌಭಾಗ್ಯೇ ಪ್ರೀತಿರ್ನೀಚೇ ವಿನಶ್ಯತಿ ॥೧೫॥**

ಬೇರೆ ದೋಷಗಳಿಂದ ಯುಕ್ತರಾದ ಮನುಷ್ಯರನ್ನೂ ಪರಿತ್ಯಜಿಸಬೇಕು. ತನ್ನಿಂದ ಸೌಭಾಗ್ಯವು ದೂರ ಹೋದರೆ ವಿನೀತನಲ್ಲಿರುವ ಫಲನಿಷ್ಪತ್ತಿಯೂ, ಸೌಹಾರ್ದದಲ್ಲಿರುವ ಸುಖವೂ, ನೀಚನಲ್ಲಿರುವ ಪ್ರೀತಿಯೂ ಎಲ್ಲವೂ ನಷ್ಟವಾಗುತ್ತದೆ?

ಯತತೇ ಚಾಪವಾದಾಯ ಯತ್ನಮಾರಭತೇ ಕ್ಷಯೇ ॥೧೬॥

ಸ್ವಲ್ಪೇಽಪ್ಯಪಕೃತೇ ಮೋಹಾನ್ನ ಶಾಂತಿಮುಪಗಚ್ಛತಿ ॥೧೭॥

ತಾದೃಶೈಃ ಸಂಗತಂ ನೀಚೈರ್ನೃಶಂಸೈರಕೃತಾತ್ಮಭಿಃ ।
ನಿಶಮ್ಯ ನಿಪುಣಂ ಬುದ್ಧ್ಯಾ ವಿದ್ವಾನ್ ದೂರಾದ್ ವಿವರ್ಜಯೇತ್ ॥

ಯಾವನು ಅಪವಾದವನ್ನು ಹೊರಿಸಲು ಪ್ರಯತ್ನಪಡುತ್ತಾನೆಯೋ, ವಿನಾಶವನ್ನು ಮಾಡಲು ಪ್ರಯತ್ನ ಪಡುತ್ತಾನೆಯೋ, ಸ್ವಲ್ಪ ಅಪರಾಧವನ್ನು ಮಾಡಿದರೂ ಮೋಹದಿಂದ ಸಮಾಧಾನವನ್ನು ಹೊಂದುವುದಿಲ್ಲವೋ ಅಂತಹ ನೀಚರ, ಕ್ರೂರಿಗಳ ಮತ್ತು ಮನೋಜಯವಿಲ್ಲದವರ ಜೊತೆಯಲ್ಲಿ ಸಂಗವನ್ನು ಮಾಡಬಾರದು. ವಿದ್ವಾಂಸನಾದವನು ಬುದ್ಧಿಯಿಂದ ಚೆನ್ನಾಗಿ ವಿಚಾರ ಮಾಡಿ ಅವರನ್ನು ದೂರದಲ್ಲಿ ಪರಿತ್ಯಾಗ ಮಾಡಬೇಕು.

ಯೋ ಜ್ಞಾತಿಮನುಗೃಹ್ಣಾತಿ ದರಿದ್ರಂ ದೀನಮಾತುರಮ್ ।
ಸ ಪುತ್ರಪಶುವೃದ್ಧಿಂ ಚ ಶ್ರೇಯಶ್ಚಾನಂತಮಶ್ನುತೇ ॥೧೯॥

ಯಾವನು ದರಿದ್ರನಾದ, ದೀನನಾದ ಮತ್ತು ರೋಗಿಯಾದ ದಾಯಾದಿಗೆ ಉಪಕಾರ ಮಾಡುತ್ತಾನೆಯೋ ಅವನು ಪಶು-ಪುತ್ರವೃದ್ಧಿಯನ್ನೂ, ಅನಂತವಾದ ಶ್ರೇಯಸ್ಸನ್ನೂ ಹೊಂದುತ್ತಾನೆ.

ಜ್ಞಾತಯೋ ವರ್ಧನೀಯಾಸ್ತೈರ್ಯ ಇಚ್ಛಂತ್ಯಾತ್ಮನಃ ಸುಖಮ್ ।
ಕುಲವೃದ್ಧಿಂ ಚ ರಾಜೇಂದ್ರ ತಸ್ಮಾತ್ ಸಾಧು ಸಮಾಚರ ॥೨೦॥

ಶ್ರೇಯಸಾ ಯೋಕ್ಷ್ಯಸೇ ರಾಜನ್ ಕುರ್ವಾಣೋ ಜ್ಞಾತಿಸತ್ಕ್ರಿಯಾಮ್ ॥

ಯಾವ ಜ್ಞಾತಿಗಳಿಂದ ನಾವು ಸುಖವನ್ನು ಬಯಸುತ್ತೇವೆಯೋ ಅಂತಹ ಜ್ಞಾತಿಗಳು ಪೋಷಿಸಲ್ಪಡಬೇಕು. ರಾಜೇಂದ್ರನೇ, ಆದ್ದರಿಂದ ಕುಲವೃದ್ಧಿಯನ್ನು ಚೆನ್ನಾಗಿ ಮಾಡು. ರಾಜನೇ, ಜ್ಞಾತಿಗಳಿಗೆ ಸತ್ಕಾರವನ್ನು ಮಾಡಿದರೆ ಶ್ರೇಯಸ್ಸನ್ನು ಹೊಂದುವಿ.

ವಿಗುಣಾ ಹ್ಯಪಿ ಸಂರಕ್ಷ್ಯಾ ಜ್ಞಾತಯೋ ಭರತರ್ಷಭ ।
ಕಿಂ ಪುನರ್ಗುಣವಂತಸ್ತೇ ತ್ವತ್ಪ್ರಸಾದಾಭಿಕಾಂಕ್ಷಿಣಃ ॥೨೨॥

ಭರತರ್ಷಭನೇ, ಗುಣವಿಲ್ಲದ ಜ್ಞಾತಿಗಳನ್ನೂ ಸಂರಕ್ಷಣೆ ಮಾಡಬೇಕು. ಹೀಗಿರುವಾಗ ಗುಣವಂತರೂ ಮತ್ತು ನಿನ್ನ ಅನುಗ್ರಹವನ್ನು ಅಪೇಕ್ಷಿಸುವವರೂ ಆದ ಪಾಂಡವರ ವಿಷಯದಲ್ಲಿ ಹೇಳುವುದೇನಿದೆ?

**ಪ್ರಸಾದಂ ಕುರು ವೀರಾಣಾಂ ಪಾಂಡವಾನಾಂ ವಿಶಾಂಪತೇ ।**
**ದೀಯತಾಂ ಗ್ರಾಮಕಾಃ ಕೇಚಿತ್ ತೇಷಾಂ ವೃತ್ತ್ಯರ್ಥಮೀಶ್ವರ ॥೨೩॥**

ರಾಜನೇ, ವೀರರಾದ ಪಾಂಡವರಿಗೆ ಅನುಗ್ರಹವನ್ನು ಮಾಡು. ಈಶ್ವರನೇ, ಅವರ ಜೀವನಕ್ಕಾಗಿ ಅವರಿಗೆ ಕೆಲವು ಗ್ರಾಮಗಳನ್ನು ಕೊಡು.

**ಏವಂ ಲೋಕೇ ಯಶಃ ಪ್ರಾಪ್ತಂ ಭವಿಷ್ಯತಿ ನರಾಧಿಪ ।**
**ವೃದ್ಧೇನ ಹಿ ತ್ವಯಾ ಕಾರ್ಯಂ ಪುತ್ರಾಣಾಂ ತಾತ ರಕ್ಷಣಮ್ ॥೨೪॥**

**ಮಯಾ ಚಾಪಿ ಹಿತಂ ವಾಚ್ಯಂ ವಿದ್ಧಿ ಮಾಂ ತ್ವದ್ಧಿತೈಷಿಣಮ್ ॥೨೫॥**

ನರಾಧಿಪನೇ, ಹಾಗೆ ಮಾಡಿದರೆ ಲೋಕದಲ್ಲಿ ನಿನಗೆ ಕೀರ್ತಿ ಉಂಟಾಗುತ್ತದೆ. ಪ್ರೀತಿಪಾತ್ರನೇ, ನೀನು ಮಕ್ಕಳಿಗೆ ರಕ್ಷಣೆಯನ್ನು ಮಾಡಬೇಕಾದವನು. ನಾನೂ ಸಹ ಹಿತವನ್ನು ಹೇಳಬೇಕು. ನನ್ನನ್ನು ನಿನ್ನ ಹಿತೈಷಿ ಎಂದು ತಿಳಿ.

**ಜ್ಞಾತಿಭಿರ್ವಿಗ್ರಹಸ್ತಾತ ನ ಕರ್ತವ್ಯೋ ಭವಾರ್ಥಿನಾ ।**
**ಸುಖಾನಿ ಸಹಭೋಜ್ಯಾನಿ ಜ್ಞಾತಿಭಿರ್ಭರತರ್ಷಭ ॥೨೬॥**

ಪ್ರೀತಿಪಾತ್ರನೇ, ಏಳಿಗೆಯನ್ನು ಅಪೇಕಿಸುವವನು ಜ್ಞಾತಿಗಳ ಜೊತೆಯಲ್ಲಿ ವಿರೋಧವನ್ನು ಮಾಡಿಕೊಳ್ಳಬಾರದು. ಭರತರ್ಷಭನೇ, ಸುಖಗಳು ಜ್ಞಾತಿಗಳ ಜೊತೆಯಲ್ಲಿ ಭೋಗಿಸಬೇಕಾದವುಗಳು.

**ಸಭೋಜನಂ ಸಂಕಥನಂ ಸಂಪ್ರೀತಿಶ್ಚ ಪರಸ್ಪರಮ್ ।**
**ಜ್ಞಾತಿಭಿಃ ಸಹ ಕಾರ್ಯಾಣಿ ನ ವಿರೋಧಃ ಕದಾಚನ ॥೨೭॥**

ಜ್ಞಾತಿಗಳ ಜೊತೆಯಲ್ಲಿ ಭೋಜನವನ್ನು ಮಾಡಬೇಕು, ಒಳ್ಳೆಯ ಮಾತುಗಳನ್ನು ಆಡಬೇಕು, ಪರಸ್ಪರ ಪ್ರೀತಿಯನ್ನು ಮಾಡಬೇಕು, ಆದರೆ ಎಂದೂ ವಿರೋಧವನ್ನು ಮಾಡಬಾರದು.

ಜ್ಞಾತಯಸ್ತಾರಯಂತೀಹ ಜ್ಞಾತಯೋ ಮಜ್ಜಯಂತಿ ಚ ।
ಸುವೃತ್ತಾಸ್ತಾರಯಂತೀಹ ದುರ್ವೃತ್ತಾ ಮಜ್ಜಯಂತಿ ಚ ॥೨೮॥

ಇಲ್ಲಿ ಜ್ಞಾತಿಗಳು ಆಪತ್ತಿನಿಂದ ದಾಟಿಸುತ್ತಾರೆ ಮತ್ತು ಮುಳುಗಿಸುತ್ತಾರೆ ಕೂಡ. ಒಳ್ಳೆಯ ನಡತೆಯುಳ್ಳವರು ದಾಟಿಸುತ್ತಾರೆ ಮತ್ತು ಕೆಟ್ಟ ನಡತೆಯುಳ್ಳವರು ಮುಳುಗಿಸುತ್ತಾರೆ.

ಸುವೃತ್ತೋ ಭವ ರಾಜೇಂದ್ರ ಪಾಂಡವಾನ್ ಪ್ರತಿ ಮಾನದ ।
ಅಧರ್ಷಣೀಯಃ ಶತ್ರೂಣಾಂ ತೈರ್ವೃತಸ್ತ್ವಂ ಭವಿಷ್ಯಸಿ ॥೨೯॥

ರಾಜೇಂದ್ರನೇ, ಮಾನದನೇ, ಪಾಂಡವರ ವಿಷಯದಲ್ಲಿ ಒಳ್ಳೆಯ ನಡತೆಯನ್ನು ಹೊಂದು. ಅವರಿಂದ ಯುಕ್ತನಾದ ನೀನು ಶತ್ರುಗಳಿಂದ ಅವಮಾನ ಮಾಡಲು ಸಾಧ್ಯವಿಲ್ಲದವನಾಗಿ ಆಗುವಿ.

ಶ್ರೀಮಂತಂ ಜ್ಞಾತಿರಾಸಾದ್ಯ ಯೋ ಜ್ಞಾತಿಮವಸೀದತಿ ।
ದಿಗ್ಧಹಸ್ತಾತ್ ಮೃಗ ಇವ ಸ ಏನಸ್ತಸ್ಯ ವಿಂದತಿ ॥೩೦॥

ಜ್ಞಾತಿಯಾದವನು ಶ್ರೀಮಂತನಾದ ಜ್ಞಾತಿಯನ್ನು ಸಮೀಪಿಸಿ ಅವನನ್ನು ವಿಷದ ಲೇಪವುಳ್ಳ ಹಸ್ತದಿಂದ ಮೃಗವು ನಾಶವಾಗುವಂತೆ ನಾಶ ಮಾಡಿದರೆ, ನಾಶ ಹೊಂದಿದವನ ಪಾಪವೆಲ್ಲವೂ ನಾಶ ಮಾಡಿದವನಿಗೆ ಸೇರುತ್ತದೆ.

ಪಶ್ಚಾದಪಿ ನರಶ್ರೇಷ್ಠ ತವ ತಾಪೋ ಭವಿಷ್ಯತಿ ।
ತಾನ್ ವಾ ಹತಾನ್ ಸುತಾನ್ ವಾऽಪಿ ಶ್ರುತ್ವಾ ತದನುಚಿಂತಯ ॥

ರಾಜೇಂದ್ರನೇ, ಪಾಂಡವರು ಹತರಾದುದನ್ನು ಅಥವಾ ನಿನ್ನ ಮಕ್ಕಳು ಹತರಾದುದನ್ನು ಕೇಳಿ ಅನಂತರವೂ ಕೂಡ ನಿನಗೆ ಪಶ್ಚಾತ್ತಾಪ ಉಂಟಾಗುವುದು. ನರಶ್ರೇಷ್ಠನೇ, ಈ ವಿಷಯವನ್ನು ಚೆನ್ನಾಗಿ ಯೋಚಿಸು.

ಯೇನ ಖಟ್ವಾಂ ಸಮಾರೂಢಃ ಪರಿತಪ್ಯೇತ ಕರ್ಮಣಾ ।
ಆದಾವೇವ ನ ತತ್ ಕುರ್ಯಾದಧ್ರುವೇ ಜೀವಿತೇ ಸತಿ ॥೩೨॥

ರಾತ್ರಿ ಮಲಗುವಾಗ ಮಂಚವನ್ನು ಏರುವವನು ತನ್ನ ಕರ್ಮದಿಂದ ಪರಿತಾಪವನ್ನು ಹೊಂದಬಾರದವನಾಗಿದ್ದರೆ ಜೀವನವು ಅಶಾಶ್ವತವಾಗಿರುವಾಗ ಅದಕ್ಕೆ ಬೇಕಾದ ಕರ್ಮವನ್ನು ಮೊದಲೇ ಮಾಡಬೇಕು.

**ನ ಕಶ್ಚಿನ್ನಾಪನಯತೇ ಪುಮಾನನ್ಯತ್ರ ಭಾರ್ಗವಾತ್ ।**
**ಶೇಷಸಂಪ್ರತಿಪತ್ತಿಸ್ತು ಬುದ್ಧಿಮತ್ಸ್ವವತಿಷ್ಠತಿ ॥೩೩॥**

ಕುಂಬಾರನನ್ನು ಬಿಟ್ಟು ಬೇರೆ ಯಾರೂ ಒಮ್ಮೆ ಕೊಟ್ಟ ವಸ್ತುವನ್ನು ಪುನಃ ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ (ಕುಂಬಾರನು ಮಾತ್ರ ಒಮ್ಮೆ ಮಾರಿದ ಪದಾರ್ಥಗಳನ್ನು ತೆಗೆದುಕೊಂಡು ಅದನ್ನೇ ಸ್ವಲ್ಪ ಹೊಸದನ್ನಾಗಿ ಮಾಡಿ ಪುನಃ ಮಾರುತ್ತಾನೆ). ವಿವೇಕಿಗಳಾದವರು ದತ್ತಾಪಹಾರವನ್ನು ಮಾಡುವುದಿಲ್ಲ (ವಾದಿರಾಜರು).

**ದುರ್ಯೋಧನೇನ ಯದ್ಯೇತತ್ ತತ್ ಪಾಪಂ ತೇ ಪುರಾಕೃತಮ್ ।**
**ತ್ವಯಾ ತತ್ಕುಲವೃದ್ಧೇನ ಪ್ರತ್ಯಾನೇಯಂ ಜನೇಶ್ವರ ॥೩೪॥**

ಎಲೈ ಜನೇಶ್ವರನೇ, ದುರ್ಯೋಧನನ ಮೂಲಕ ನೀನು ಹಿಂದೆ ಯಾವ ಪಾಪವನ್ನು ಮಾಡಿದೆಯೋ ಈಗ ಕುಲವೃದ್ಧನಾದ ನೀನು ಅದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು.

**ತಾನ್ ಸ್ವೇ ಪದೇ ಪ್ರತಿಷ್ಠಾಪ್ಯ ಲೋಕೇ ವಿಗತಕಲ್ಮಷಃ ।**
**ಭವಿಷ್ಯಸಿ ನರಶ್ರೇಷ್ಠ ಪೂಜನೀಯೋ ಮನೀಷಿಣಾಮ್ ॥೩೫॥**

ನರಶ್ರೇಷ್ಠನೇ, ಅವರನ್ನು ಅವರ ಸ್ಥಾನದಲ್ಲಿ ಪ್ರತಿಷ್ಠಾಪನೆ ಮಾಡಿದರೆ ಲೋಕದಲ್ಲಿ ಅಪವಾದದಿಂದ ದೂರನಾಗುವಿ, ಜ್ಞಾನಿಗಳಿಂದ ಪೂಜನೀಯನೂ ಆಗುವಿ.

**ಸುವ್ಯಾಹೃತಾನಿ ಧೀರಾಣಾಂ ಫಲತಃ ಪರಿಚಿಂತ್ಯ ಚ ।**
**ಅಧ್ಯವಸ್ಯತಿ ಕಾರ್ಯೇಷು ಚಿರಂ ಯಶಸಿ ತಿಷ್ಠತಿ ॥೩೬॥**

ಯಾವನು ಧೀರರ ಒಳ್ಳೆಯ ಮಾತುಗಳನ್ನೂ, ಅದರಿಂದ ಉಂಟಾಗುವ ಫಲಗಳನ್ನೂ ಚೆನ್ನಾಗಿ ಚಿಂತಿಸಿ ಕಾರ್ಯವನ್ನು ಮಾಡಲು ನಿಶ್ಚಯಿಸುತ್ತಾನೆಯೋ ಅವನು ಬಹುಕಾಲ ಕೀರ್ತಿಯನ್ನು ಹೊಂದುತ್ತಾನೆ.

ಅಸಮ್ಯಗುಪಯುಕ್ತಂ ಹಿ ಜ್ಞಾನಂ ಸುಕುಶಲೈರಪಿ ।
ಉಪಲಭ್ಯಂ ಚಾವಿದಿತಂ ವಿದಿತಂ ಚಾನನುಷ್ಠಿತಮ್ ॥೩೭॥

ಪಾಪೋದಯಫಲಂ ವಿದ್ವಾನ್ ಯೋ ನಾರಭತಿ ವರ್ಧತೇ ॥೩೮॥

ಒಳ್ಳೆಯ ಕುಶಲರೂ ಕೂಡ ತಮ್ಮ ಜ್ಞಾನವನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳುವುದಿಲ್ಲ. ದೊರೆತಿರುವ ಜ್ಞಾನವು ಅರ್ಥವಾಗುವುದಿಲ್ಲ, ಅರ್ಥವಾದುದು ಅನುಷ್ಠಾನಕ್ಕೆ ಬರುವುದಿಲ್ಲ, ಇಂತಹ ಆರಂಭವು ಪಾಪವನ್ನೇ ಉಂಟುಮಾಡುತ್ತದೆ ಎಂದು ತಿಳಿದು ಯಾವನು ಆರಂಭವನ್ನೇ ಮಾಡುವುದಿಲ್ಲವೋ ಅವನು ಅಭಿವೃದ್ಧಿಯನ್ನು ಹೊಂದುತ್ತಾನೆ.

ಯಸ್ತು ಪೂರ್ವಕೃತಂ ಪಾಪಮವಿಮೃಶ್ಯಾನುವರ್ತತೇ ।
ಅಗಾಧಪಂಕೇ ದುರ್ಮೇಧಾ ವಿಷಮೇ ವಿನಿಪಾತ್ಯತೇ ॥೩೯॥

ಯಾವನು ತಾನು ಮೊದಲು ಮಾಡಿದ ಪಾಪವನ್ನು ವಿಮರ್ಶೆ ಮಾಡದೆ ಅದನ್ನೇ ಮುಂದುವರೆಸುತ್ತಾನೆಯೋ, ಅಂತಹ ದುರ್ಮೇಧನಾದ ಅವನು ದುಃಖಕರವಾದ ಅಗಾಧವಾದ ಕೆಸರಿನಲ್ಲಿ ಬೀಳುತ್ತಾನೆ (ಬೀಳಿಸಲ್ಪಡುತ್ತಾನೆ).

ಮಂತ್ರಭೇದಸ್ಯ ಷಟ್ ಪ್ರಾಜ್ಞೋ ದ್ವಾರಾಣೇಮಾನಿ ಲಕ್ಷಯೇತ್ ।
ಅರ್ಥಸಂತತಿಕಾಮಶ್ಚ ರಕ್ಷೇದೇತಾನಿ ನಿತ್ಯಶಃ ॥೪೦॥

ಪ್ರಾಜ್ಞನಾದವನು ಮಂತ್ರಭೇದಕ್ಕೆ (ಮಂತ್ರವು ಸೋರಿ ಹೋಗುವುದಕ್ಕೆ) ಆರು ದ್ವಾರಗಳನ್ನು ಗಮನಿಸಬೇಕು. ಅರ್ಥದ ಅಭಿವೃದ್ಧಿಯನ್ನು ಬಯಸುವವನು ಇವುಗಳನ್ನು ಯಾವಾಗಲೂ ರಕ್ಷಿಸಬೇಕು.

ಮದ್ಯಂ ಸ್ವಪ್ನಮವಿಜ್ಞಾನಮಾಕಾರಂ ಚಾತ್ಮಸಂಭವಮ್ ।
ದುಷ್ಟಾಮಾತ್ಯೇಷು ವಿಸ್ರಂಭಂ ದೂತಾಚ್ಚಾಕುಶಲಾದಪಿ ॥೪೧॥

ದ್ವಾರಾಣ್ಯೇತಾನಿ ಯೋ ಜ್ಞಾತ್ವಾ ಸಂವೃಣೋತಿ ಸದಾ ನೃಪಃ ।
ತ್ರಿವರ್ಗಾಚರಣೇ ಯುಕ್ತಃ ಸ ಶತ್ರೂನಧಿತಿಷ್ಠತಿ ॥೪೨॥

ಮದ್ಯ, ನಿದ್ರೆ, ಅಜ್ಞಾನ, ತನ್ನ ಆಕಾರ, ದುಷ್ಟ ಅಮಾತ್ಯರಲ್ಲಿ ವಿಶ್ವಾಸ ಮತ್ತು ಅಕುಶಲರಾದ ದೂತರು - ಯಾವ ರಾಜನು ಈ ಆರು ದ್ವಾರಗಳನ್ನು ತಿಳಿದು ಯಾವಾಗಲೂ ಮುಚ್ಚುತ್ತಾನೆಯೋ ಮತ್ತು ಧರ್ಮಾರ್ಥಕಾಮಗಳ ಆಚರಣೆಯಲ್ಲಿ ನಿರತನಾಗುತ್ತಾನೆಯೋ ಅವನು ಶತ್ರುಗಳನ್ನು ಮೆಟ್ಟಿ ನಿಲ್ಲುತ್ತಾನೆ.

**ನ ವೈ ಶ್ರುತಮವಿಜ್ಞಾಯ ವೃದ್ಧಾನನುಪಸೇವ್ಯ ವಾ ।**
**ಧರ್ಮಾರ್ಥೌ ವೇದಿತುಂ ಶಕ್ಯೌ ಬೃಹಸ್ಪತಿಸಮೈರಪಿ ॥೪೩॥**

ವಿದ್ಯೆಯನ್ನು ಅಭ್ಯಾಸ ಮಾಡದೆ, ದೊಡ್ಡವರ ಸೇವೆಯನ್ನು ಮಾಡದೆ ಬೃಹಸ್ಪತಿಗೆ ಸಮಾನರಾದವರೂ ಸಹ ಧರ್ಮಾರ್ಥಗಳನ್ನು ತಿಳಿಯಲು ಸಾಧ್ಯವಿಲ್ಲ.

**ನಷ್ಟಂ ಸಮುದ್ರೇ ಪತಿತಂ ನಷ್ಟಂ ವಾಕ್ಯಮಶೃಣ್ವತಿ ।**
**ಅನಾತ್ಮನಿ ಶ್ರುತಂ ನಷ್ಟಂ ನಷ್ಟಂ ಹುತಮನಗ್ನಿಕಮ್ ॥೪೪॥**

ಸಮುದ್ರದಲ್ಲಿ ಬಿದ್ದ ವಸ್ತುವು ನಷ್ಟವಾಗುತ್ತದೆ. ಕೇಳದಿದ್ದವನಿಗೆ ಹೇಳಿದ ಮಾತು ನಷ್ಟವಾಗುತ್ತದೆ. ಮನೋಜಯವಿಲ್ಲದವನ ವಿದ್ಯೆಯು ನಷ್ಟವಾಗುತ್ತದೆ. ಅಗ್ನಿ ಇಲ್ಲದೆ ಮಾಡಿದ ಹೋಮವು ನಷ್ಟವಾಗುತ್ತದೆ.

**ಸತ್ಯಂ ಪರೀಕ್ಷ್ಯ ಮೇಧಾವೀ ಬುದ್ಧ್ಯಾ ಸಂಪಾದ್ಯ ಚಾಸಕೃತ್ ।**
**ಶ್ರುತ್ವಾ ದೃಷ್ಟ್ವಾಽಥ ವಿಜ್ಞಾಯ ಪ್ರಾಜ್ಞೈರ್ಮೈತ್ರೀಂ ಸಮಾಚರೇತ್ ॥**

ಮೇಧಾವಿಯಾದವನು ತನ್ನ ಬುದ್ಧಿಯಿಂದ ಅನೇಕ ಸಲ ಒಳ್ಳೆಯ ನಡತೆಯನ್ನು ಪರೀಕ್ಷೆ ಮಾಡಿ, ಇನ್ನೊಬ್ಬರಿಂದ ಕೇಳಿ, ತಾನು ನೋಡಿ, ಅನಂತರ ತಿಳಿದುಕೊಂಡು ಪ್ರಾಜ್ಞರ ಜೊತೆಯಲ್ಲಿ ಸ್ನೇಹವನ್ನು ಮಾಡಬೇಕು.

**ಅವೃತ್ತಂ ವಿನಯೋ ಹಂತಿ ಹಂತ್ಯನರ್ಥಂ ಪರಾಕ್ರಮಃ ।**
**ಹಂತಿ ನಿತ್ಯಂ ಕ್ಷಮಾ ಕ್ರೋಧಮಾಚಾರೋ ಹಂತ್ಯಲಕ್ಷಣಮ್ ॥೪೬॥**

ವಿನಯವು ದುರ್ನಡತೆಯನ್ನು ನಾಶಮಾಡುತ್ತದೆ. ಪರಾಕ್ರಮವು ಅನರ್ಥವನ್ನು ನಾಶಮಾಡುತ್ತದೆ. ಕ್ಷಮೆಯು ನಿತ್ಯವೂ ಕ್ರೋಧವನ್ನು ನಾಶ ಮಾಡುತ್ತದೆ. ಒಳ್ಳೆಯ ಆಚಾರವು ಅವಲಕ್ಷಣಗಳನ್ನು ನಾಶ ಮಾಡುತ್ತದೆ.

ಪರಿಚ್ಛದೇನ ಕ್ಷೇತ್ರೇಣ ವೇಶ್ಮನಾ ಬ್ರಹ್ಮಚರ್ಯಯಾ ।
ಪರೀಕ್ಷೇತ ಕುಲಂ ರಾಜನ್ ಭೋಜನಾಚ್ಛಾದನೇನ ಚ ॥೪೭॥

ರಾಜನೇ, ಒಂದು ಕುಲವನ್ನು ಅದರ ವಾತಾವರಣದಿಂದ, ಅದರ ಕ್ಷೇತ್ರದಿಂದ (ಆಸ್ತಿಯಿಂದ), ಗೃಹದಿಂದ, ವೇದಾಭ್ಯಾಸದಿಂದ, ಭೋಜನ ಮತ್ತು ವಸ್ತುಗಳಿಂದ ಪರೀಕ್ಷಿಸಬೇಕು.

ಯಯೋಶ್ಚಿತ್ತೇನ ವಾ ಚಿತ್ತಂ ನಿಭೃತಂ ನಿಭೃತೇನ ವಾ ।
ಸಮೇತಿ ಪ್ರಜ್ಞಯಾ ಪ್ರಜ್ಞಾ ತಯೋರ್ಮೈತ್ರೀ ನ ಜೀರ್ಯತೇ ॥೪೮॥

ಯಾವ ಇಬ್ಬರಿಗೆ ಚಿತ್ತದೊಡನೆ ಚಿತ್ತವು ಬೆರೆಯುತ್ತದೆಯೋ, ಅವಧಾನವು ಅವಧಾನದೊಡನೆ ಬೆರೆಯುತ್ತದೆಯೋ, ಪ್ರಜ್ಞೆಯು ಪ್ರಜ್ಞೆಯೊಡನೆ ಬೆರೆಯುತ್ತದೆಯೋ ಅವರಿಬ್ಬರ ಸ್ನೇಹವು ನಶಿಸಿಹೋಗುವುದಿಲ್ಲ.

ದುರ್ಬುದ್ಧಿಮಕೃತಪ್ರಜ್ಞಂ ಛನ್ನಂ ಕೂಪಂ ತೃಣೈರಿವ ।
ವಿವರ್ಜಯೀತ ಮೇಧಾವೀ ತಸ್ಮಿನ್ ಮೈತ್ರೀ ಪ್ರಣಶ್ಯತಿ ॥೪೯॥

ಮೇಧಾವಿಯಾದವನು ದುರ್ಬುದ್ಧಿಯುಳ್ಳ, ಪ್ರಜ್ಞಾಶೂನ್ಯನಾದ ಮನುಷ್ಯನನ್ನು ತೃಣದಿಂದ ಮುಚ್ಚಲ್ಪಟ್ಟ ಕೂಪದಂತೆ ಪರಿತ್ಯಜಿಸಬೇಕು. ಅವನಲ್ಲಿ ಮಾಡಿದ ಸ್ನೇಹವು ನಾಶವನ್ನು ಹೊಂದುತ್ತದೆ.

ಅವಲಿಪ್ತೇಷು ಮೂರ್ಖೇಷು ರೌದ್ರಸಾಹಸಿಕೇಷು ಚ ।
ತಥೈವಾಪೇತಧರ್ಮೇಷು ನ ಮೈತ್ರೀಮಾಚರೇದ್ ಬುಧಃ ॥೫೦॥

ಅಹಂಕಾರವುಳ್ಳವರಲ್ಲಿ, ಮೂರ್ಖರಲ್ಲಿ, ಭಯಂಕರ ಸಾಹಸಗಳನ್ನು ಮಾಡುವವರಲ್ಲಿ, ಧರ್ಮಭ್ರಷ್ಟರಾದವರಲ್ಲಿ ವಿವೇಕಿಯಾದವನು ಸ್ನೇಹವನ್ನು ಮಾಡಬಾರದು.

ಕೃತಜ್ಞಂ ಧಾರ್ಮಿಕಂ ಸತ್ಯಮಕ್ಷುದ್ರಂ ದೃಢಭಕ್ತಿಕಮ್ ।
ಜಿತೇಂದ್ರಿಯಂ ಸ್ಥಿತಂ ಸ್ಥಿತ್ಯಾಂ ಮಿತ್ರಮಿತ್ಯಭಿವಾಂಛತಿ ॥೫೧॥

ಕೃತಜ್ಞನಾದವನು, ಧಾರ್ಮಿಕನಾದವನು, ಸದ್ಗುಣಗಳುಳ್ಳವನು, ಕ್ಷುದ್ರನಲ್ಲದವನು, ದೃಢವಾದ ಭಕ್ತಿಯನ್ನು ಹೊಂದಿದವನು, ಜಿತೇಂದ್ರಿಯನು, ತನ್ನ ಧೋರಣೆಯಲ್ಲಿಯೇ ನಿಲ್ಲುವವನು, ಇಂತಹವನನ್ನು ಮಿತ್ರನನ್ನಾಗಿ ಬಯಸಬೇಕು.

ಇಂದ್ರಿಯಾಣಾಮನುತ್ಸರ್ಗೋಽಮೃತ್ಯುನಾ ಚ ವಿಶಿಷ್ಯತೇ ।
ಅತ್ಯರ್ಥಂ ಪುನರುತ್ಸರ್ಗಃ ಶಾತಯೇದ್ ದೈವತಾನ್ಯಪಿ ॥೫೨॥

ಇಂದ್ರಿಯಗಳನ್ನು ನಿಗ್ರಹಿಸಿ ಅವುಗಳನ್ನು ವಿಷಯದ ಕಡೆಗೆ ಬಿಡದಿರುವುದು ಮೋಕ್ಷಕ್ಕಿಂತಲೂ ಶ್ರೇಷ್ಠವಾದುದು. ವಿಷಯದ ಕಡೆಗೆ ಬಹಳವಾಗಿ ಬಿಟ್ಟರೆ ಅವು ದೇವತೆಗಳನ್ನೂ ಧ್ವಂಸ ಮಾಡುತ್ತವೆ.

ಮಾರ್ದವಂ ಸರ್ವಭೂತಾನಾಮನಸೂಯಾ ಕ್ಷಮಾ ಧೃತಿಃ ।
ಆಯುಷ್ಯಾಣಿ ಬುಧಾಃ ಪ್ರಾಹುರ್ಮಿತ್ರಾಣಾಂ ಚಾವಿಮಾನನಾ ॥೫೩॥

ಮಾರ್ದವ, ಯಾರಲ್ಲೂ ಅಸೂಯೆಯನ್ನು ಮಾಡದಿರುವುದು, ಕ್ಷಮೆ, ಧೈರ್ಯ, ಮಿತ್ರರನ್ನು ಅವಮಾನ ಮಾಡದಿರುವುದು ಇವು ಆಯುಷ್ಯಪ್ರದವೆಂದು ಜ್ಞಾನಿಗಳು ಹೇಳುತ್ತಾರೆ.

ಅಪ(ವಿ)ನೀತಂ ಸುನೀತೇನ ಯೇಽರ್ಥಂ ಪ್ರತ್ಯಾನಿನೀಷತಿ ।
ಮತಿಮಾಸ್ಥಾಯ ಸುದೃಢಾಂ ತದೇಕಂ ಪುರುಷವ್ರತಮ್ ॥೫೪॥

ಹಿಂದೆ ಇನ್ನೊಬ್ಬರಿಂದ ಅಪಹೃತವಾದುದನ್ನು ಒಳ್ಳೆಯ ನೀತಿಯನ್ನು ಅನುಸರಿಸಿ, ದೃಢವಾದ ಒಳ್ಳೆಯ ಬುದ್ಧಿಯನ್ನು ಹೊಂದಿ ಯಾವನು ಹಿಂದಕ್ಕೆ ತರುತ್ತಾನೆಯೋ ಅದಕ್ಕೆ ಮುಖ್ಯವಾದ ಪುರುಷವ್ರತವೆಂದು ಹೇಳುತ್ತಾರೆ.

ಆಯತ್ಯಾಂ ಪ್ರತಿಕಾರಜ್ಞಃ ತಥಾತ್ವೇ ದೃಢನಿಶ್ಚಯಃ ।
ಅತೀತೇ ಕಾರ್ಯಶೇಷಜ್ಞೋ ನರೋಽರ್ಥೈರ್ನ ಪ್ರಹೀಯತೇ ॥೫೫॥

ಭವಿಷ್ಯಕಾಲದಲ್ಲಿ ಉಂಟಾಗುವ ಅನರ್ಥಗಳಿಗೆ ಪ್ರತೀಕಾರವನ್ನು ಮಾಡಲು ತಿಳಿದವನು, ವರ್ತಮಾನಕಾಲದಲ್ಲಿ ಮಾಡಬೇಕಾದ ಕಾರ್ಯವನ್ನು ದೃಢವಾಗಿ ತಿಳಿದವನು ಮತ್ತು ಭೂತಕಾಲದ ಕಾರ್ಯದ ಶೇಷವನ್ನು ತಿಳಿದವನು ಎಂದೂ ಅರ್ಥವನ್ನು ಕಳೆದುಕೊಳ್ಳುವುದಿಲ್ಲ.

ಕರ್ಮಣಾ ಮನಸಾ ವಾಚಾ ಯದಭೀಕ್ಷ್ಣಂ ನಿಷೇವತೇ ।
ತದೇವಾಪಹರತ್ಯೇನಂ ತಸ್ಮಾತ್ ಕಲ್ಯಾಣಮಾಚರೇತ್ ॥೫೬॥

ಕರ್ಮದಿಂದ, ಮನಸ್ಸಿನಿಂದ ಮತ್ತು ಮಾತಿನಿಂದ ಸತತವಾಗಿ ಯಾವ ವಸ್ತುವನ್ನು ಸೇವಿಸುತ್ತಾನೆಯೋ ಆ ವಸ್ತುವೇ ಅವನನ್ನು ಅಪಹರಿಸುತ್ತದೆ. ಆದ್ದರಿಂದ (ಮೂರರಿಂದಲೂ) ಒಳ್ಳೆಯದನ್ನೇ ಮಾಡಬೇಕು.

ಮಂಗಲಾಲಾಪನಂ ಯೋಗಃ ಶ್ರುತಮುತ್ಥಾನಮಾರ್ಜವಮ್ ।
ಭೂತಿಮೇತಾನಿ ಕುರ್ವಂತಿ ಸತಾಂ ಚಾಭೀಕ್ಷ್ಣದರ್ಶನಮ್ ॥೫೭॥

ಮಂಗಳವಾದ ಮಾತುಗಳು, ಯೋಗ, ಶಾಸ್ತ್ರಶ್ರವಣ, ಉತ್ಸಾಹ, ಆರ್ಜವ (ಸರಳತೆ) ಮತ್ತು ಸತತವಾಗಿ ಸಜ್ಜನರ ದರ್ಶನ - ಇವು ಸಂಪತ್ತನ್ನೇ ತಂದುಕೊಡುತ್ತವೆ.

ಅನಿರ್ವೇದಃ ಶ್ರಿಯೋ ಮೂಲಂ ಲಾಭಸ್ಯ ಚ ಶುಭಸ್ಯ ಚ ।
ಮಹಾನ್ ಭವತ್ಯನಿರ್ವಿಣ್ಣಃ ಸುಖಂ ಚಾನಂತಮಶ್ನುತೇ ॥೫೮॥

ತೃಪ್ತಿಯು ಸಂಪತ್ತಿಗೂ ಲಾಭಕ್ಕೂ ಮತ್ತು ಶುಭಕ್ಕೂ ಮೂಲವಾದುದು. ತೃಪ್ತನಾದವನು ದೊಡ್ಡವನಾಗುತ್ತಾನೆ, ಅನಂತವಾದ ಸುಖವನ್ನು ಹೊಂದುತ್ತಾನೆ.

ನಾತಃ ಶ್ರೇಮತ್ತರಂ ಕಿಂಚಿದನ್ಯತ್ ಪಥ್ಯತಮಂ ಮತಮ್ ।
ಪ್ರಭವಿಷ್ಣೋರ್ಯಥಾ ತಾತ ಕ್ಷಮಾ ಸರ್ವತ್ರ ಸರ್ವದಾ ॥೫೯॥

ಸಾಮರ್ಥ್ಯವನ್ನು ಹೊಂದಿರುವವನಿಗೆ ಯಾವಾಗಲೂ ಕ್ಷಮೆಯನ್ನು ಹೊಂದಿರುವುದಕ್ಕಿಂತ ಹೆಚ್ಚು ಸಂಪತ್ಕರವಾದುದಾಗಲೀ ಅಥವಾ ಹೆಚ್ಚು ಹಿತವಾದುದಾಗಲೀ ಬೇರೆ ಯಾವುದೂ ಇಲ್ಲ.

ಕ್ಷಮೇದಶಕ್ತಃ ಸರ್ವಸ್ಯ ಶಕ್ತಿಮಾನ್ ಧರ್ಮಕಾರಣಾತ್ ।
ಅರ್ಥಾನರ್ಥೌ ಸಮೌ ಯಸ್ಯ ತಸ್ಯ ನಿತ್ಯಂ ಕ್ಷಮಾ ಹಿತಾ ॥೬೦॥

ಅಶಕ್ತನಾದವನು ಎಲ್ಲವನ್ನೂ ಕ್ಷಮಿಸಬೇಕು. ಶಕ್ತಿಯುಳ್ಳವನು ಧರ್ಮಕ್ಕಾಗಿ ಎಲ್ಲವನ್ನೂ ಕ್ಷಮಿಸಬೇಕು. ಯಾವನಿಗೆ ಅರ್ಥ ಮತ್ತು ಅನರ್ಥಗಳೆರಡೂ ಸಮವಾಗಿರುತ್ತವೆಯೋ ಅವನಿಗೆ ಕ್ಷಮೆಯು ಯಾವಾಗಲೂ ಹಿತವಾದುದು.

ಯತ್ಸುಖಂ ಸೇವಮಾನೋಽಪಿ ಧರ್ಮಾರ್ಥಾಭ್ಯಾಂ ನ ಹೀಯತೇ ।
ಕಾಮಂ ತದುಪಸೇವೇತ ನ ಮೂಢವ್ರತಮಾಚರೇತ್ ॥೬೧॥

ಯಾವ ಸುಖವನ್ನು ಸೇವಿಸುವಾಗ ಧರ್ಮಾರ್ಥಗಳಿಗೆ ಚ್ಯುತಿಯಾಗುವುದಿಲ್ಲವೋ ಅಂತಹ ಕಾಮವನ್ನು ಸೇವಿಸಬೇಕು. ಮೂಢವ್ರತವನ್ನು ಆಚರಿಸಬಾರದು.

ದುಃಖಾರ್ತೇಷು ಪ್ರಮತ್ತೇಷು ನಾಸ್ತಿಕೇಷ್ವಲಸೇಷು ಚ ।
ನ ಶ್ರೀರ್ವರ್ತತ್ಯದಾಂತೇಷು ಯೇ ಚೋತ್ಸಾಹವಿವರ್ಜಿತಾಃ ॥೬೨॥

ದುಃಖಾರ್ತರಲ್ಲಿ, ಪ್ರಮತ್ತರಲ್ಲಿ, ನಾಸ್ತಿಕರಲ್ಲಿ, ಸೋಮಾರಿಗಳಲ್ಲಿ, ಇಂದ್ರಿಯ ನಿಗ್ರಹವಿಲ್ಲದವರಲ್ಲಿ ಮತ್ತು ಉತ್ಸಾಹವರ್ಜಿತರಲ್ಲಿ ಸಂಪತ್ತು ಉಳಿಯುವುದಿಲ್ಲ.

ಆರ್ಜವೇನ ನರಂ ಯುಕ್ತಂ ಮಾರ್ದವಾತ್ ಸವ್ಯಪತ್ರಪಮ್ ।
ಅಶಕ್ತಂ ಮನ್ಯಮಾನಾಸ್ತು ಧರ್ಷಯಂತಿ ಕುಬುದ್ಧಯಃ ॥೬೩॥

ಆರ್ಜವ, ಮಾರ್ದವ ಮತ್ತು ನಾಚಿಕೆಯಿಂದ ಕೂಡಿದ ಮನುಷ್ಯನನ್ನು ದುರ್ಬುದ್ಧಿಯುಳ್ಳವರು ಅಶಕ್ತನೆಂದು ತಿಳಿದು ಅವಮಾನಗೊಳಿಸುತ್ತಾರೆ.

ಅತ್ಯಾರ್ಯಮತಿದಾತಾರಮತಿಶೂರಮತಿವ್ರತಮ್ ।
ಪ್ರಜ್ಞಾಭಿಮಾನಿನಂ ಚೈವ ಶ್ರೀರ್ಭಯಾನ್ನೋಪಸರ್ಪತಿ ॥೬೪॥

ಆರ್ಯರನ್ನು ಮೀರಿ ಇರುವವನು, ದಾತೃಗಳನ್ನು ಮೀರಿ ಇರುವವನು, ಶೂರರನ್ನು ಮೀರಿ ಇರುವವನು, ವ್ರತಗಳನ್ನು ಮೀರಿ ಇರುವವನು, ತನ್ನ ಪ್ರಜ್ಞೆಯಲ್ಲಿಯೇ ಅಭಿಮಾನವುಳ್ಳ ಮನುಷ್ಯನ ಬಳಿಗೆ ಸಂಪತ್ತು ಭಯದಿಂದ ಹೋಗುವುದಿಲ್ಲ.

ನ ಚಾತಿಗುಣವತ್ಸ್ವೇಷಾ ನಾತ್ಯಂತಂ ನಿರ್ಗುಣೇಷು ಚ ।
ಉನ್ಮತ್ತಾ ಗೌರಿವಾಂಧಾ ಶ್ರೀಃ ಕ್ವಚಿದೇವಾವತಿಷ್ಠತೇ ॥೬೫॥

ಲಕ್ಷ್ಮಿಯು (ಸಂಪತ್ತು) ಬಹಳ ಗುಣವುಳ್ಳವರ ಬಳಿಗೆ ಹೋಗುವುದಿಲ್ಲ, ನಿರ್ಗುಣರ ಬಳಿಗೂ ಹೋಗುವುದಿಲ್ಲ. ಹುಚ್ಚು ಹಿಡಿದ ಗೋವಿನಂತೆ ಕುರುಡುತನದಿಂದ ಎಲ್ಲೋ ಒಂದು ಕಡೆ ವಾಸ ಮಾಡುತ್ತದೆ.

ಅಗ್ನಿಹೋತ್ರಫಲಾ ವೇದಾಃ ಶೀಲವೃತ್ತಫಲಂ ಶ್ರುತಮ್ ।
ರತಿಪುತ್ರಫಲಾ ನಾರೀ ದತ್ತಭುಕ್ತಫಲಂ ಧನಮ್ ॥೬೬॥

ಅಗ್ನಿಹೋತ್ರವು ವೇದದ ಫಲ. ಶೀಲ-ವೃತ್ತಗಳು ಶ್ರವಣದ ಫಲ. ರತಿ ಮತ್ತು ಪುತ್ರರು ಭಾರ್ಯೆಯ ಫಲ. ದಾನ ಮತ್ತು ಭೋಗವು ಧನದ ಫಲ.

ಅಧರ್ಮೋಪಾರ್ಜಿತೈರರ್ಥೈರ್ಯಃ ಕರೋತ್ಯೌರ್ಧ್ವದೈಹಿಕಮ್ ।
ನ ಸ ತಸ್ಯ ಫಲಂ ಪ್ರೇತ್ಯ ಭುಂಕ್ತೇऽರ್ಥಸ್ಯ ದುರಾಗಮಾತ್ ॥೬೭॥

ಅಧರ್ಮದಿಂದ ಧನವನ್ನು ಗಳಿಸಿ, ಅದರಿಂದ ಪರಲೋಕದಲ್ಲಿ ಸುಖಕ್ಕೆ ಸಾಧನವಾದ ಕರ್ಮಗಳನ್ನು ಮಾಡಿದರೆ, ಅವನು ಕೆಟ್ಟದಾಗಿ ಧನವನ್ನು ಸಂಪಾದನೆ ಮಾಡಿರುವುದರಿಂದ ಸ್ವರ್ಗದಲ್ಲಿ ಅದರ ಫಲವನ್ನು ಭೋಗಿಸುವುದಿಲ್ಲ.

ಕಾಂತಾರವನದುರ್ಗೇಷು ಕೃಚ್ಛ್ರಾಸ್ವಾಪತ್ಸು ಸಂಭ್ರಮೇ ।
ಉದ್ಯತೇಷು ಚ ಶಸ್ತ್ರೇಷು ನಾಸ್ತಿ ಸತ್ತ್ವವತಾಂ ಭಯಮ್ ॥೬೮॥

ಕಾಡಿನಲ್ಲಿ, ದುರ್ಗಗಳಲ್ಲಿ, ಕಷ್ಟಮಯವಾದ ಆಪತ್ತುಗಳಲ್ಲಿ, ಸಂಭ್ರಮದಲ್ಲಿ, ಎತ್ತಿದ ಆಯುಧಗಳಿರುವಲ್ಲಿ ಧೈರ್ಯವಿದ್ದವರಿಗೆ ಭಯವಿಲ್ಲ.

ಉತ್ಥಾನಂ ಸಂಯಮೋ ದಾಕ್ಷ್ಯಮಪ್ರಮಾದೋ ಧೃತಿಃ ಸ್ಮೃತಿಃ ।
ಸಮೀಕ್ಷ್ಯ ಚ ಸಮಾರಂಭೋ ವೃದ್ಧಿಮೂಲಂ ಭವಸ್ಯ ತು ॥೬೯॥

ಉತ್ಸಾಹ, ಸಂಯಮ, ದಕ್ಷತೆ, ಅಪ್ರಮಾದ, ಧೈರ್ಯ, ಸ್ಮೃತಿ, ವಿಚಾರ ಮಾಡಿ ಕಾರ್ಯಾರಂಭ ಮಾಡುವುದು ಇವು ಸಂಸಾರದಲ್ಲಿ (ಜೀವನದಲ್ಲಿ) ಸಮೃದ್ಧಿಗೆ ಮೂಲವಾದವುಗಳು.

ತಪೋ ಬಲಂ ತಾಪಸಾನಾಂ ಬ್ರಹ್ಮ ಬ್ರಹ್ಮವಿದಾಂ ಬಲಮ್ ।
ಹಿಂಸಾ ಬಲಮಸಾಧೂನಾಂ ಕ್ಷಮಾ ಗುಣವತಾಂ ಬಲಮ್ ॥೭೦॥

ತಪಸ್ವಿಗಳಿಗೆ ತಪಸ್ಸು ಬಲ. ಬ್ರಹ್ಮಜ್ಞಾನಿಗಳಿಗೆ ವೇದವು ಬಲ. ಅಸಜ್ಜನರಿಗೆ ಹಿಂಸೆಯು ಬಲ. ಗುಣವಂತರಿಗೆ ಕ್ಷಮೆಯು ಬಲ.

ಅಷ್ಟೌ ತಾನ್ಯವ್ರತಘ್ನಾನಿ ಆಪೋ ಮೂಲಂ ಘೃತಂ ಪಯಃ ।
ಹವಿರ್ಬ್ರಾಹ್ಮಣಕಾಮಾ ಚ ಗುರೋರ್ವಚನಮೌಷಧಮ್ ॥೭೧॥

ಜಲ, ಗೆಡ್ಡೆ-ಗೆಣಸುಗಳು, ಘೃತ, ಕ್ಷೀರ, ಹವಿಸ್ಸು, ಬ್ರಾಹ್ಮಣ ಕಾಮನೆ, ಗುರುವಚನ ಮತ್ತು ಔಷಧಿ - ಈ ಎಂಟು ವಸ್ತುಗಳು ವ್ರತವನ್ನು ಕೆಡಿಸುವುದಿಲ್ಲ.

ನ ತತ್ ಪರಸ್ಯ ಸಂದಿಹ್ಯಾತ್ ಪ್ರತಿಕೂಲಂ ಯದಾತ್ಮನಃ ।
ಸಂಗ್ರಹೇಣೈವ ಧರ್ಮಃ ಸ್ಯಾತ್ ಕಾಮಾದನ್ಯಃ ಪ್ರವರ್ತತೇ ॥೭೨॥

ಹಿಂದೆ ಹೇಳಿದ ಅಷ್ಟಧರ್ಮವನ್ನು ಆಚರಿಸುವ ವಿಷಯದಲ್ಲಿ ತನಗೆ ಪ್ರತಿಕೂಲವಾದುದನ್ನು ಪರರಿಗೂ ಯೋಚಿಸಬಾರದು. ಅಂತಹವರನ್ನು ಸಂಗ್ರಹಿಸುವುದರಿಂದ ಧರ್ಮವುಂಟಾಗುತ್ತದೆ. ಉಳಿದವರು ಕಾಮದಿಂದ ಪ್ರವೃತ್ತರಾಗುತ್ತಾರೆ.

ಅಕ್ರೋಧೇನ ಜಯೇತ್ ಕ್ರೋಧಮಸಾಧುಂ ಸಾಧುನಾ ಜಯೇತ್ ।
ಜಯೇತ್ ಕದರ್ಯಂ ದಾನೇನ ಜಯೇತ್ ಸತ್ಯೇನ ಚಾನೃತಮ್ ॥೭೩॥

ಕ್ರೋಧವನ್ನು ಮಾಡದಿರುವುದರಿಂದ ಕ್ರೋಧವನ್ನು ಜಯಿಸಬೇಕು. ಸಾಧುತ್ವದಿಂದ ಅಸಾಧು ಸ್ವಭಾವವನ್ನು ಜಯಿಸಬೇಕು. ಅಧಮ ಪುರುಷನನ್ನು ದಾನದಿಂದ ಜಯಿಸಬೇಕು. ಅನೃತವನ್ನು ಸತ್ಯದಿಂದ ಜಯಿಸಬೇಕು.

ಸ್ತ್ರೀಷು ಧೂರ್ತೇಽಲಸೇ ಭೀರೌ ಚಂಡೇ ಪರುಷವಾದಿನಿ ।
ಚೋರೇ ಕೃತಘ್ನೇ ವಿಶ್ವಾಸೋ ನ ಕಾರ್ಯೋ ನ ಚ ನಾಸ್ತಿಕೇ ॥೭೪॥

ಸ್ತ್ರೀಯರಲ್ಲಿ, ಧೂರ್ತರಲ್ಲಿ, ಸೋಮಾರಿಯಲ್ಲಿ, ಭೀರುವಿನಲ್ಲಿ, ಹಠಮಾರಿಯಲ್ಲಿ, ಒರಟಾಗಿ ಮಾತನಾಡುವವನಲ್ಲಿ, ಚೋರನಲ್ಲಿ, ಕೃತಘ್ನನಲ್ಲಿ, ನಾಸ್ತಿಕನಲ್ಲಿ ವಿಶ್ವಾಸವನ್ನು ಮಾಡಬಾರದು.

ಅಭಿವಾದನಶೀಲಸ್ಯ ನಿತ್ಯಂ ವೃದ್ಧೋಪಸೇವಿನಃ ।
ಚತ್ವಾರಿ ಸಂಪ್ರವರ್ಧಂತೇ ಆಯುಃ ಪ್ರಜ್ಞಾ ಯಶೋ ಬಲಮ್ ॥೭೫॥

ಹಿರಿಯರ ಸೇವೆಯನ್ನು ಮಾಡಿ, ನಿತ್ಯವೂ ಅವರಿಗೆ ನಮಸ್ಕಾರ ಮಾಡುವವರಿಗೆ ಆಯುಸ್ಸು, ಪ್ರಜ್ಞೆ, ಕೀರ್ತಿ ಮತ್ತು ಬಲ ಈ ನಾಲ್ಕು ಅಭಿವೃದ್ಧಿ ಹೊಂದುತ್ತವೆ.

ಅತಿಕ್ಲೇಶೇನ ಯೇಽರ್ಥಾಃ ಸ್ಯುರ್ಧರ್ಮಸ್ಯಾತಿಕ್ರಮೇಣ ಚ ।
ಅರೇರ್ವಾ ಪ್ರಣಿಪಾತೇನ ಮಾ ಸ್ಮ ತೇಷು ಮನಃ ಕೃಥಾಃ ॥೭೬॥

ಬಹಳ ಕ್ಲೇಶದಿಂದ ಯಾವ ಅರ್ಥವನ್ನು ಸಂಪಾದಿಸಬಹುದೋ, ಧರ್ಮವನ್ನು ಮೀರುವುದರಿಂದ ಅಥವಾ ಶತ್ರುವಿಗೆ ನಮಸ್ಕಾರ ಮಾಡುವುದರಿಂದ ಯಾವ ಅರ್ಥವನ್ನು ಸಂಪಾದಿಸಬಹುದೋ ಅದರಲ್ಲಿ ಮನಸ್ಸು ಇಡಬೇಡ.

ಅವಿದ್ಯಃ ಪುರುಷಃ ಶೋಚ್ಯಃ ಶೋಚ್ಯಂ ಮೈಥುನಮಪ್ರಜಮ್ ।
ನಿರಾಹಾರಾಃ ಪ್ರಜಾಃ ಶೋಚ್ಯಾಃ ಶೋಚ್ಯಂ ರಾಜ್ಯಮರಾಜಕಮ್ ॥೭೭॥

ವಿದ್ಯೆ ಇಲ್ಲದ ಪುರುಷನೂ, ಮಕ್ಕಳಿಲ್ಲದ ಮೈಥುನವೂ, ಆಹಾರವಿಲ್ಲದ ಪ್ರಜೆಗಳೂ, ರಾಜನಿಲ್ಲದ ರಾಷ್ಟ್ರವೂ ಶೋಚನೀಯವಾದವುಗಳು.

ಅಧ್ವಾ ಜರಾ ದೇಹಭೃತಾಂ ಪರ್ವತಾನಾಂ ಜಲಂ ಜರಾ ।
ಅಸಂಭೋಗೋ ಜರಾ ಸ್ತ್ರೀಣಾಂ ವಾಕ್ಶಲ್ಯಂ ಮನಸೋ ಜರಾ ॥೭೮॥

ದೇಹವನ್ನು ಧರಿಸಿದವರಿಗೆ ಮಾರ್ಗವು ಮುಪ್ಪು. ಪರ್ವತಗಳಿಗೆ ಜಲವು ಮುಪ್ಪು. ಸಂಭೋಗ ಮಾಡದಿರುವುದು ಸ್ತ್ರೀಯರಿಗೆ ಮುಪ್ಪು. ವಾಗ್ಬಾಣಗಳು ಮನಸ್ಸಿಗೆ ಮುಪ್ಪು.

ಅನಾಮ್ನಾಯಮಲಾ ವೇದಾ ಬ್ರಾಹ್ಮಣಸ್ಯಾವ್ರತಂ ಮಲಮ್ ।
ಮಲಂ ಪೃಥಿವ್ಯಾ ಬಾಹ್ಲೀಕಾಃ ಪುರುಷಸ್ಯಾನೃತಂ ಮಲಮ್ ॥೭೯॥

ವೇದಗಳಿಗೆ ಅಭ್ಯಾಸ ಮಾಡದಿರುವ ಮಲ. ಬ್ರಾಹ್ಮಣನಿಗೆ ವ್ರತವನ್ನು ಮಾಡದಿರುವುದು ಮಲ. ಭೂಮಿಗೆ ಬಾಹ್ಲೀಕ ದೇಶವು ಮಲ. ಪುರುಷನಿಗೆ ಅನೃತವು ಮಲ.

ಕೌತೂಹಲಮಲಾ ಸಾಧ್ವೀ ವಿಪ್ರವಾಸಮಲಾಃ ಸ್ತ್ರಿಯಃ ॥೮೦॥

ಸುವರ್ಣಸ್ಯ ಮಲಂ ರೂಪ್ಯಂ ರೂಪ್ಯಸ್ಯಾಪಿ ಮಲಂ ತ್ರಪು ।
ಜ್ಞೇಯಂ ತ್ರಪುಮಲಂ ಸೀಸಂ ಸೀಸಸ್ಯಾಪಿ ಮಲಂ ಮಲಮ್ ॥೮೧॥

ಸಾಧ್ವಿಗೆ ಕುತೂಹಲವು ಮಲ. ಸ್ತ್ರೀಯರಿಗೆ ಪ್ರಯಾಣವು ಮಲ. ಸುವರ್ಣಕ್ಕೆ ಬೆಳ್ಳಿಯು ಮಲ. ಬೆಳ್ಳಿಗೆ ತ್ರಪುವು ಮಲ. ಸೀಸವು ತ್ರಪುವಿಗೆ ಮಲ. ಸೀಸಕ್ಕೆ ಅಮೇಧ್ಯವು ಮಲ.

ನಸ್ವಪ್ನೇನ ಜಯೇನ್ನಿದ್ರಾಂ ನಕಾಮೇನ ಜಯೇತ್ ಸ್ತ್ರಿಯಃ ।
ನೇಂಧನೇನ ಜಯೇದಗ್ನಿಂ ನಪಾನೇನ ಸುರಾಂ ಜಯೇತ್ ॥೮೨॥

ಜಾಗರಣೆಯಿಂದ ನಿದ್ರೆಯನ್ನು ಜಯಿಸಬೇಕು. ಅಕಾಮದಿಂದ ಸ್ತ್ರೀಯರನ್ನು ಜಯಿಸಬೇಕು. ಕಟ್ಟಿಗೆಯನ್ನು ಹಾಕದೆ ಅಗ್ನಿಯನ್ನು ಜಯಿಸಬೇಕು. ಪಾನವನ್ನು ಮಾಡದೆ ಮದ್ಯವನ್ನು ಜಯಿಸಬೇಕು.

ಯಸ್ಯ ದಾನಜಿತಂ ಮಿತ್ರಂ ಶತ್ರವೋ ಯುಧಿ ನಿರ್ಜಿತಾಃ ।
ಅನ್ನಪಾನಜಿತಾ ದಾರಾಃ ಸಫಲಂ ತಸ್ಯ ಜೀವಿತಮ್ ॥೮೩॥

ಯಾವನಿಗೆ ಮಿತ್ರರು ದಾನದಿಂದ ಜಿತರಾಗುತ್ತಾರೋ, ಶತ್ರುಗಳು ಯುದ್ಧದಿಂದ ಜಿತರಾಗುತ್ತಾರೆಯೋ, ಪತ್ನಿಯರು ಅನ್ನ-ಪಾನಗಳಿಂದ ಜಿತರಾಗುತ್ತಾರೆಯೋ ಅವನ ಜೀವನವು ಸಾರ್ಥಕವಾದುದು.

ಸಹಸ್ರಿಣೋಽಪಿ ಜೀವಂತಿ ಜೀವಂತಿ ಶತಿನಸ್ತಥಾ ।
ಧೃತರಾಷ್ಟ್ರ ವಿಮುಂಚೇಚ್ಚಾಂ ನ ಕಥಂಚಿನ್ನ ಜೀರ್ಯತಿ ॥೮೪॥

ಸಹಸ್ರ ಧನವಿದ್ದವರೂ ಬದುಕುತ್ತಾರೆ, ಅದರಂತೆ ಶತಧನವಿದ್ದವರೂ ಬದುಕುತ್ತಾರೆ. ಧೃತರಾಷ್ಟ್ರನೇ ಆಸೆಯನ್ನು ಬಿಡು, ಆಸೆಯು ಎಂದೂ ಮುಪ್ಪನ್ನು ಹೊಂದುವುದಿಲ್ಲ.

ಯತ್ ಪೃಥಿವ್ಯಾಂ ವ್ರೀಹಿಯವಂ ಹಿರಣ್ಯಂ ಪಶವಃ ಸ್ತ್ರಿಯಃ ।
ನಾಲಮೇಕಸ್ಯ ತತ್ ಸರ್ವಮಿತಿ ಪಶ್ಯನ್ ನ ಮುಹ್ಯತಿ ॥೮೫॥

ಪೃಥಿವಿಯಲ್ಲಿ ಎಷ್ಟು ಧಾನ್ಯಗಳು, ಸುವರ್ಣ, ಪಶುಗಳು ಮತ್ತು ಸ್ತ್ರೀಯರು ಇದ್ದಾರೆಯೋ ಅವೆಲ್ಲವೂ ಒಬ್ಬನ ಭೋಗಕ್ಕೆ ಸಾಕಾಗುವುದಿಲ್ಲ ಎಂದು ತಿಳಿದು ಮೋಹವನ್ನು ಬಿಡಬೇಕು.

ರಾಜನ್ ಭೂಯೋ ಬ್ರವೀಮಿ ತ್ವಾಂ ಪುತ್ರೇಷು ಸಮಮಾಚರ ।
ಸಮತಾ ಯದಿ ತೇ ರಾಜನ್ ಸ್ವೇಷು ಪಾಂಡುಸುತೇಷು ಚ ॥೮೬॥

ರಾಜನೇ, ನಿನಗೆ ಪುನಃ ಹೇಳುತ್ತಿದ್ದೇನೆ. ನಿನ್ನಲ್ಲಿ ಸಮತೆ ಇರುವುದಾದರೆ ಪುತ್ರರಲ್ಲಿ ಸಮವಾಗಿ ವರ್ತಿಸು. ರಾಜನೇ, ನಿನ್ನ ಪುತ್ರರಲ್ಲೂ, ಪಾಂಡುಪುತ್ರರಲ್ಲೂ ಸಮನಾಗಿರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕೋನಚತ್ವಾರಿಂಶೋಽಧ್ಯಾಯಃ ॥
॥ ಪ್ರಜಾಗರಪರ್ವಣಿ ಅಷ್ಟಮೋಽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಮೂವತ್ತೊಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

## ನಲವತ್ತನೆಯ ಅಧ್ಯಾಯ

ವಿದುರನೀತಿ. ವರ್ಣಾಶ್ರಮ ಧರ್ಮಕಥನ.
ಪಾಂಡವರಿಗೆ ರಾಜ್ಯವನ್ನು ಕೊಡಲು ಒತ್ತಾಯ.

### ವಿದುರಃ

ಯೋಽಭ್ಯರ್ಥಿತಃ ಸದ್ಭಿರಸಜ್ಜಮಾನಃ
ಕರೋತ್ಯರ್ಥಂ ಶಕ್ತಿಮಹಾಪಯಿತ್ವಾ ।
ಕ್ಷಿಪ್ರಂ ಪ್ರಶತಂ ಸಮುಪೈತಿ ಸದ್ಭಿಃ
ಅಲಂ ಪ್ರಸನ್ನಾ ಹಿ ಸುಖಾಯ ಸಂತಃ ॥೧॥

ವಿದುರ– ಯಾವನು ಸಜ್ಜನರಿಂದ ಪ್ರಾರ್ಥಿಸಲ್ಪಟ್ಟವನಾಗಿ, ದುರ್ಜನರನ್ನು ಸೇರದೆ ತನ್ನ ಶಕ್ತಿಯನ್ನು ಕಡಿಮೆ ಮಾಡಿಕೊಳ್ಳದೆ (ಶಕ್ತಿ ಇದ್ದಷ್ಟು), ಕಾರ್ಯವನ್ನು ಸಾಧಿಸುತ್ತಾನೆಯೋ ಅವನು ಕ್ಷಿಪ್ರವಾಗಿ ಸಜ್ಜನರಿಂದ ಪ್ರಶಂಸಿಸಲ್ಪಡುತ್ತಾನೆ (ಅಥವಾ ಸಜ್ಜನರ ಅನುಗ್ರಹದಿಂದ ಪ್ರಶಸ್ತ ಫಲವನ್ನು ಪಡೆಯುತ್ತಾನೆ). ಸಜ್ಜನರು ಪ್ರಸನ್ನರಾದರೆ ಸುಖದ ಫಲವನ್ನು ಕೊಡಲು ಸಮರ್ಥರಾದವರು.

ಮಹಾಂತಮಪ್ಯರ್ಥಮಧರ್ಮಯುಕ್ತಂ
ಯಃ ಸಂತ್ಯಜತ್ಯನುಪಾಕೃಷ್ಟ ಏವ ।
ಸುಖಂ ಸ ದುಃಖಾನ್ಯವಮುಚ್ಯ ಶೇತೇ
ಜೀರ್ಣಾಂ ತ್ವಚಂ ಸರ್ಪ ಇವಾವಮುಚ್ಯ ॥೨॥

ಯಾವನು ಯಾರೂ ನಿಂದಿಸದಿದ್ದರೂ ಅಧರ್ಮಯುಕ್ತವಾದ ದೊಡ್ಡ ಅರ್ಥವನ್ನು ತ್ಯಾಗ ಮಾಡುತ್ತಾನೆಯೋ ಅಂತಹವನು ಸರ್ಪವು ಹಳೆಯ ಚರ್ಮವನ್ನು ಬಿಟ್ಟಂತೆ ದುಃಖವನ್ನು ಬಿಟ್ಟು ಸುಖವಾಗಿ ನಿದ್ರಿಸುತ್ತಾನೆ.

**ಅನೃತೇ ಚ ಸಮುತ್ಕರ್ಷೋ ರಾಜಗಾಮಿ ಚ ಪೈಶುನಮ್ ।**
**ಗುರೋಶ್ಚಾಲೀಕನಿರ್ಬಂಧಂ ಸಮಾನಿ ಬ್ರಹ್ಮಹತ್ಯಯಾ ॥೩॥**

ಅನೃತದಿಂದ ಉಂಟಾಗುವ ಸಮೃದ್ಧಿ ರಾಜನವರೆಗೂ ಹೇಳುವ ಚಾಡಿ, ಗುರುವಿಗೆ ಮಾಡುವ ಅನ್ಯಾಯದ ಒತ್ತಾಯ ಇವು ಬ್ರಹ್ಮಹತ್ಯೆಗೆ ಸಮನಾದವುಗಳು.

**ಅಸೂಯೈಕಪದಂ ಮೃತ್ಯುರತಿವಾದಃ ಶ್ರಿಯೋ ವಧಃ ।**
**ಅಶುಶ್ರೂಷಾ ತ್ವರಾ ಶ್ಲಾಘಾ ವಿದ್ಯಾಯಾಃ ಶತ್ರವಸ್ತ್ರಯಃ ॥೪॥**

ಅಸೂಯೆಯು ಮೃತ್ಯು ಎಂಬುದಕ್ಕೆ ಇನ್ನೊಂದು ಶಬ್ದ. ಅತಿವಾದವು (ಬಹಳವಾಗಿ ಹೊಗಳಿಕೊಳ್ಳುವುದು ಅಥವಾ ಬಹಳವಾಗಿ ಮಾತನಾಡುವುದು) ಸಂಪತ್ತಿಗೆ ವಧೆ. ಗುರುಸೇವೆಯನ್ನು ಮಾಡದಿರುವುದು, ತ್ವರೆ ಮಾಡುವುದು ಮತ್ತು ತನ್ನನ್ನು ಹೊಗಳಿಕೊಳ್ಳುವುದು ಈ ಮೂರು ವಿದ್ಯೆಯ ಶತ್ರುಗಳು.

**ಆಲಸ್ಯಂ ಮದಮೋಹೌ ಚ ಚಾಪಲಂ ಗೋಷ್ಠಿರೇವ ಚ ।**
**ಸ್ತಬ್ಧತಾ ಚಾತಿಮಾನಿತ್ವಂ ತಥಾ ತ್ಯಾಗಿತ್ವಮೇವ ಚ ॥೫॥**

**ಏತೇ ವೈ ಸಪ್ತ ದೋಷಾಸ್ತು ಸದಾ ವಿದ್ಯಾರ್ಥಿನಾಂ ಮತಾಃ ॥೬॥**

ಆಲಸ್ಯ, ಮದಮೋಹಗಳು, ಚಾಪಲ್ಯ, ಒಟ್ಟಿಗೆ ಕುಳಿತು ವ್ಯರ್ಥವಾಗಿ ಮಾತನಾಡುವುದು, ಹಿರಿಯರು ಮಾತನಾಡಿಸಿದರೆ ಮಾತನಾಡದೇ ಇರುವುದು, ಅಹಂಕಾರ ಮತ್ತು ವಿಸ್ಮೃತಿ - ಈ ಏಳು ವಿದ್ಯಾರ್ಥಿಗಳ ದೋಷಗಳೆಂದು ಸದಾ ತಿಳಿಯಲ್ಪಡುತ್ತವೆ.

**ಸುಖಾರ್ಥಿನಃ ಕುತೋ ವಿದ್ಯಾ**
**ನಾಸ್ತಿ ವಿದ್ಯಾರ್ಥಿನಃ ಸುಖಮ್ ।**
**ಸುಖಾರ್ಥೀ ವಾ ತ್ಯಜೇದ್ ವಿದ್ಯಾಂ**
**ವಿದ್ಯಾರ್ಥೀ ವಾ ತ್ಯಜೇತ್ ಸುಖಮ್ ॥೭॥**

ಸುಖವನ್ನು ಬಯಸುವವನಿಗೆ ವಿದ್ಯೆಯು ಎಲ್ಲಿಂದ? ವಿದ್ಯೆಯನ್ನು ಬಯಸುವವನಿಗೆ ಸುಖವಿಲ್ಲ. ಸುಖಾರ್ಥಿಯಾದವನು ವಿದ್ಯೆಯನ್ನು ಬಿಡಬೇಕು ಅಥವಾ ವಿದ್ಯಾರ್ಥಿಯಾದವನು ಸುಖವನ್ನು ಬಿಡಬೇಕು.

**ನಾಗ್ನಿಸ್ತೃಪ್ಯತಿ ಕಾಷ್ಠಾನಾಂ ನಾಪಗಾನಾಂ ಮಹೋದಧಿಃ ।**
**ನಾಂತಕಃ ಸರ್ವಭೂತಾನಾಂ ನ ಪುಂಸಾಂ ವಾಮಲೋಚನಾಃ ॥೮॥**

ಅಗ್ನಿಯು ಕಾಷ್ಠಗಳಿಂದ ತೃಪ್ತಿಯನ್ನು ಪಡೆಯುವುದಿಲ್ಲ. ಮಹಾಸಮುದ್ರವು ನದಿಗಳಿಂದ ತೃಪ್ತಿಯನ್ನು ಹೊಂದುವುದಿಲ್ಲ. ಯಮನು ಎಲ್ಲ ಜೀವರಿಂದ ತೃಪ್ತಿಯನ್ನು ಹೊಂದುವುದಿಲ್ಲ. ಸ್ತ್ರೀಯರು ಎಲ್ಲ ಪುರುಷರಿಂದಲೂ ತೃಪ್ತಿಯನ್ನು ಹೊಂದುವುದಿಲ್ಲ.

**ಆಶಾ ಧೃತಿಂ ಹಂತಿ ಸಮೃದ್ಧಿಮಂತಕಃ**
**ಕ್ರೋಧಃ ಶ್ರಿಯಂ ಹಂತಿ ಯಶಃ ಕದರ್ಯತಾ ।**
**ಅಪಾಲನಂ ಹಂತಿ ಪಶೂಂಶ್ಚ ರಾಜನ್**
**ಏಕಃ ಕ್ರುದ್ಧೋ ಬ್ರಾಹ್ಮಣೋ ಹಂತಿ ರಾಷ್ಟ್ರಮ್ ॥೯॥**

ಆಸೆಯು ಧೈರ್ಯವನ್ನು ನಾಶ ಮಾಡುತ್ತದೆ. ಅಂತಕನು ಸಮೃದ್ಧಿಯನ್ನೂ, ಕ್ರೋಧವು ಸಂಪತ್ತನ್ನೂ, ನೀಚ ನಡವಳಿಕೆಯು ಕೀರ್ತಿಯನ್ನು ನಾಶ ಮಾಡುತ್ತದೆ. ರಾಜನೇ, ಅರಕ್ಷಣೆಯು ಪಶುಗಳನ್ನು ನಾಶ ಮಾಡುತ್ತದೆ. ಕೋಪಗೊಂಡ ಒಬ್ಬ ಬ್ರಾಹ್ಮಣನು ರಾಷ್ಟ್ರವನ್ನು ನಾಶ ಮಾಡುತ್ತಾನೆ.

**ಅಜಾಶ್ಚ ಕಾಂಸ್ಯಂ ರಜತಂ ಚ ನಿತ್ಯಂ**
**ಮಧ್ವಾದರ್ಶಃ ಶಕುನಿಃ ಶ್ರೋತ್ರಿಯಶ್ಚ ।**
**ವೃದ್ಧೋ ಜ್ಞಾತಿರವಸನ್ನಃ ಕುಲೀನ**
**ಏತಾನಿ ತೇ ಸಂತು ಗೃಹೇ ಸದೈವ ॥೧೦॥**

ಆಡುಗಳು, ಕಂಚಿನ ಪಾತ್ರೆಗಳು, ರಜತ, ಜೇನುತುಪ್ಪ, ಕನ್ನಡಿ, ಪಕ್ಷಿಗಳು, ಶ್ರೋತ್ರಿಯನಾದ ಬ್ರಾಹ್ಮಣ, ವೃದ್ಧನಾದ ದಾಯಾದಿ, ಕಷ್ಟಕ್ಕೆ ಸಿಲುಕಿದ ಕುಲೀನ ಇಷ್ಟು ಮಂದಿ ಯಾವಾಗಲೂ ನಿನ್ನ ಮನೆಯಲ್ಲಿ ವಾಸವನ್ನು ಮಾಡಲಿ.

ಯಾವನು ಯಾರೂ ನಿಂದಿಸದಿದ್ದರೂ ಅಧರ್ಮಯುಕ್ತವಾದ ದೊಡ್ಡ ಅರ್ಥವನ್ನು ತ್ಯಾಗ ಮಾಡುತ್ತಾನೆಯೋ ಅಂತಹವನು ಸರ್ಪವು ಹಳೆಯ ಚರ್ಮವನ್ನು ಬಿಟ್ಟಂತೆ ದುಃಖವನ್ನು ಬಿಟ್ಟು ಸುಖವಾಗಿ ನಿದ್ರಿಸುತ್ತಾನೆ.

**ಅನೃತೇ ಚ ಸಮುತ್ಕರ್ಷೋ ರಾಜಗಾಮಿ ಚ ಪೈಶುನಮ್ ।**
**ಗುರೋಶ್ಚಾಲೀಕನಿರ್ಬಂಧಂ ಸಮಾನಿ ಬ್ರಹ್ಮಹತ್ಯಯಾ ॥೩॥**

ಅನೃತದಿಂದ ಉಂಟಾಗುವ ಸಮೃದ್ಧಿ ರಾಜನವರೆಗೂ ಹೇಳುವ ಚಾಡಿ, ಗುರುವಿಗೆ ಮಾಡುವ ಅನ್ಯಾಯದ ಒತ್ತಾಯ ಇವು ಬ್ರಹ್ಮಹತ್ಯೆಗೆ ಸಮನಾದವುಗಳು.

**ಅಸೂಯೈಕಪದಂ ಮೃತ್ಯುರತಿವಾದಃ ಶ್ರಿಯೋ ವಧಃ ।**
**ಅಶುಶ್ರೂಷಾ ತ್ವರಾ ಶ್ಲಾಘಾ ವಿದ್ಯಾಯಾಃ ಶತ್ರವಸ್ತ್ರಯಃ ॥೪॥**

ಅಸೂಯೆಯು ಮೃತ್ಯು ಎಂಬುದಕ್ಕೆ ಇನ್ನೊಂದು ಶಬ್ದ. ಅತಿವಾದವು (ಬಹಳವಾಗಿ ಹೊಗಳಿಕೊಳ್ಳುವುದು ಅಥವಾ ಬಹಳವಾಗಿ ಮಾತನಾಡುವುದು) ಸಂಪತ್ತಿಗೆ ವಧೆ. ಗುರುಸೇವೆಯನ್ನು ಮಾಡದಿರುವುದು, ತ್ವರೆ ಮಾಡುವುದು ಮತ್ತು ತನ್ನನ್ನು ಹೊಗಳಿಕೊಳ್ಳುವುದು ಈ ಮೂರು ವಿದ್ಯೆಯ ಶತ್ರುಗಳು.

**ಆಲಸ್ಯಂ ಮದಮೋಹೌ ಚ ಚಾಪಲಂ ಗೋಷ್ಠಿರೇವ ಚ ।**
**ಸ್ತಬ್ಧತಾ ಚಾತಿಮಾನಿತ್ವಂ ತಥಾ ತ್ಯಾಗಿತ್ವಮೇವ ಚ ॥೫॥**

**ಏತೇ ವೈ ಸಪ್ತ ದೋಷಾಸ್ತು ಸದಾ ವಿದ್ಯಾರ್ಥಿನಾಂ ಮತಾಃ ॥೬॥**

ಆಲಸ್ಯ, ಮದಮೋಹಗಳು, ಚಾಪಲ್ಯ, ಒಟ್ಟಿಗೆ ಕುಳಿತು ವ್ಯರ್ಥವಾಗಿ ಮಾತನಾಡುವುದು, ಹಿರಿಯರು ಮಾತನಾಡಿಸಿದರೆ ಮಾತನಾಡದೇ ಇರುವುದು, ಅಹಂಕಾರ ಮತ್ತು ವಿಸ್ಮೃತಿ - ಈ ಏಳು ವಿದ್ಯಾರ್ಥಿಗಳ ದೋಷಗಳೆಂದು ಸದಾ ತಿಳಿಯಲ್ಪಡುತ್ತವೆ.

**ಸುಖಾರ್ಥಿನಃ ಕುತೋ ವಿದ್ಯಾ**
**ನಾಸ್ತಿ ವಿದ್ಯಾರ್ಥಿನಃ ಸುಖಮ್ ।**
**ಸುಖಾರ್ಥೀ ವಾ ತ್ಯಜೇದ್ ವಿದ್ಯಾಂ**
**ವಿದ್ಯಾರ್ಥೀ ವಾ ತ್ಯಜೇತ್ ಸುಖಮ್ ॥೭॥**

ಸುಖವನ್ನು ಬಯಸುವವನಿಗೆ ವಿದ್ಯೆಯು ಎಲ್ಲಿಂದ? ವಿದ್ಯೆಯನ್ನು ಬಯಸುವವನಿಗೆ ಸುಖವಿಲ್ಲ. ಸುಖಾರ್ಥಿಯಾದವನು ವಿದ್ಯೆಯನ್ನು ಬಿಡಬೇಕು ಅಥವಾ ವಿದ್ಯಾರ್ಥಿಯಾದವನು ಸುಖವನ್ನು ಬಿಡಬೇಕು.

**ನಾಗ್ನಿಸ್ತೃಪ್ಯತಿ ಕಾಷ್ಠಾನಾಂ ನಾಪಗಾನಾಂ ಮಹೋದಧಿಃ ।**
**ನಾಂತಕಃ ಸರ್ವಭೂತಾನಾಂ ನ ಪುಂಸಾಂ ವಾಮಲೋಚನಾಃ ॥೮॥**

ಅಗ್ನಿಯು ಕಾಷ್ಠಗಳಿಂದ ತೃಪ್ತಿಯನ್ನು ಪಡೆಯುವುದಿಲ್ಲ. ಮಹಾಸಮುದ್ರವು ನದಿಗಳಿಂದ ತೃಪ್ತಿಯನ್ನು ಹೊಂದುವುದಿಲ್ಲ. ಯಮನು ಎಲ್ಲ ಜೀವರಿಂದ ತೃಪ್ತಿಯನ್ನು ಹೊಂದುವುದಿಲ್ಲ. ಸ್ತ್ರೀಯರು ಎಲ್ಲ ಪುರುಷರಿಂದಲೂ ತೃಪ್ತಿಯನ್ನು ಹೊಂದುವುದಿಲ್ಲ.

**ಆಶಾ ಧೃತಿಂ ಹಂತಿ ಸಮೃದ್ಧಿಮಂತಕಃ**
**ಕ್ರೋಧಃ ಶ್ರಿಯಂ ಹಂತಿ ಯಶಃ ಕದರ್ಯತಾ ।**
**ಅಪಾಲನಂ ಹಂತಿ ಪಶೂಂಶ್ಚ ರಾಜನ್**
**ಏಕಃ ಕ್ರುದ್ಧೋ ಬ್ರಾಹ್ಮಣೋ ಹಂತಿ ರಾಷ್ಟ್ರಮ್ ॥೯॥**

ಆಸೆಯು ಧೈರ್ಯವನ್ನು ನಾಶ ಮಾಡುತ್ತದೆ. ಅಂತಕನು ಸಮೃದ್ಧಿಯನ್ನೂ, ಕ್ರೋಧವು ಸಂಪತ್ತನ್ನೂ, ನೀಚ ನಡವಳಿಕೆಯು ಕೀರ್ತಿಯನ್ನು ನಾಶ ಮಾಡುತ್ತದೆ. ರಾಜನೇ, ಅರಕ್ಷಣೆಯು ಪಶುಗಳನ್ನು ನಾಶ ಮಾಡುತ್ತದೆ. ಕೋಪಗೊಂಡ ಒಬ್ಬ ಬ್ರಾಹ್ಮಣನು ರಾಷ್ಟ್ರವನ್ನು ನಾಶ ಮಾಡುತ್ತಾನೆ.

**ಅಜಾಶ್ಚ ಕಾಂಸ್ಯಂ ರಜತಂ ಚ ನಿತ್ಯಂ**
**ಮಧ್ವಾದರ್ಶಃ ಶಕುನಿಃ ಶ್ರೋತ್ರಿಯಶ್ಚ ।**
**ವೃದ್ಧೋ ಜ್ಞಾತಿರವಸನ್ನಃ ಕುಲೀನ**
**ಏತಾನಿ ತೇ ಸಂತು ಗೃಹೇ ಸದೈವ ॥೧೦॥**

ಆಡುಗಳು, ಕಂಚಿನ ಪಾತ್ರೆಗಳು, ರಜತ, ಜೇನುತುಪ್ಪ, ಕನ್ನಡಿ, ಪಕ್ಷಿಗಳು, ಶ್ರೋತ್ರಿಯನಾದ ಬ್ರಾಹ್ಮಣ, ವೃದ್ಧನಾದ ದಾಯಾದಿ, ಕಷ್ಟಕ್ಕೆ ಸಿಲುಕಿದ ಕುಲೀನ ಇಷ್ಟು ಮಂದಿ ಯಾವಾಗಲೂ ನಿನ್ನ ಮನೆಯಲ್ಲಿ ವಾಸವನ್ನು ಮಾಡಲಿ.

ಅಜೋಽಶ್ವಶ್ಚಂದನಂ ವೀಣಾ ಆದರ್ಶೋ ಮಧುಸರ್ಪಿಷೀ ।
ವಿಷಮೌದುಂಬರಂ ಶಂಖಃ ಸ್ವರ್ಣನಾಭೋಽಥ ರೋಚನಾ ॥೧೧॥

ಗೃಹೇ ಸ್ಥಾಪಯಿತವ್ಯಾನಿ ಧರ್ಮ್ಯಾಣಿ ಮನುರಬ್ರವೀತ್ ।
ದೇವಬ್ರಾಹ್ಮಣಪೂಜಾರ್ಥಮತಿಥೀನಾಂ ಚ ಭಾರತ ॥೧೨॥

ಆಡು, ಅಶ್ವ, ಚಂದನ, ವೀಣೆ, ಕನ್ನಡಿ, ಜೇನುತುಪ್ಪ ಮತ್ತು ಘೃತ, ಜಲ, ಅಕ್ಕಿ, ಶಂಖ, ಸ್ವರ್ಣನಾಭ, ರೋಚನ ಈ ಧಾರ್ಮಿಕ ಪದಾರ್ಥಗಳನ್ನು ಮನೆಯಲ್ಲಿ ಯಾವಾಗಲೂ ಇಡಬೇಕೆಂದು ಮನುವು ಹೇಳಿದನು. ಭಾರತನೇ, ದೇವ-ಬ್ರಾಹ್ಮಣ ಪೂಜೆಯ ಸಲುವಾಗಿ ಮತ್ತು ಅತಿಥಿಗಳ ಸಲುವಾಗಿ ಇವು ನಿನ್ನ ಮನೆಯಲ್ಲಿ ಇರಲಿ.

ಇದಂ ಚ ತ್ವಾಂ ಸರ್ವಪರಂ ಬ್ರವೀಮಿ
ಪುಣ್ಯಂ ಪದಂ ತಾತ ಮಹಾವಿಶಿಷ್ಟಮ್ ।
ನ ಜಾತು ಕಾಮಾನ್ನ ಭಯಾನ್ನ ಲೋಭಾದ್
ಧರ್ಮಂ ಜಹ್ಯಾ ಜೀವಿತಸ್ಯಾಪಿ ಹೇತೋಃ ॥೧೩॥

ಪುಣ್ಯಕ್ಕೆ ಕಾರಣವಾದ, ಮಹಾವಿಶಿಷ್ಟವಾದ, ಎಲ್ಲಕ್ಕಿಂತಲೂ ಮಿಗಿಲಾದ ಈ ವಿಷಯವನ್ನು ನಿನಗೆ ಹೇಳುತ್ತಿದ್ದೇನೆ. ಅದೇನೆಂದರೆ ಕಾಮದಿಂದಲಾಗಲಿ, ಭಯದಿಂದಲಾಗಲಿ, ಲೋಭದಿಂದಲಾಗಲಿ, ಜೀವನದ ಸಲುವಾಗಿಯೇ ಆಗಲಿ ಧರ್ಮವನ್ನು ಬಿಡಬೇಡ.

ನಿತ್ಯೋ ಧರ್ಮಃ ಸುಖದುಃಖೇ ಹ್ಯನಿತ್ಯೇ
ಜೀವೋ ನಿತ್ಯೋ ಧಾತುರಸ್ಯ ತ್ವನಿತ್ಯಃ ।
ತ್ಯಕ್ತ್ವಾನಿತ್ಯಂ ಪ್ರತಿಷ್ಠಸ್ವ ನಿತ್ಯೇ
ಸಂತುಷ್ಯ ಸಂತೋಷಪರಾ ಹಿ ಸಂತಃ ॥೧೪॥

ಧರ್ಮವು ನಿತ್ಯವಾದುದು. ಸುಖ-ದುಃಖಗಳು ಅನಿತ್ಯವೆಂದು ಪ್ರಸಿದ್ಧವಾಗಿವೆ. ಜೀವನು ನಿತ್ಯನಾದವನು, ಅವನ ಶರೀರದ ಧಾತುಗಳು ಅನಿತ್ಯವಾದವುಗಳು. ಅನಿತ್ಯವಾದುದನ್ನು ಬಿಟ್ಟು ನಿತ್ಯವಾದ ಧರ್ಮದಲ್ಲಿ ಪ್ರತಿಷ್ಠಿತನಾಗಿ ಸಂತೋಷಪಡು. ಸಜ್ಜನರು ಸಂತೋಷಪಡುವ ಸ್ವಭಾವವುಳ್ಳವರು.

ಮಹಾಬಲಾನ್ ಪಶ್ಯ ಮಹಾನುಭಾವಾನ್
ಪ್ರಶಾಸ್ಯ ಭೂಮಿಂ ಧನಧಾನ್ಯಪೂರ್ಣಾಮ್ ।
ಸಜ್ಞಾನ್ ಹಿತ್ವಾ ವಿಪುಲಾಂಶ್ಚ ಭೋಗಾನ್
ಗತಾನ್ ನರೇಂದ್ರಾನ್ ವಶಮಂತಕಸ್ಯ ॥೧೫॥

ಮಹಾಬಲಿಷ್ಠರೂ, ಮಹಾನುಭಾವರು, ಧನ-ಧಾನ್ಯಸಮೃದ್ಧವಾದ ಭೂಮಿಯನ್ನು ಆಳಿದವರೂ ಆದ ರಾಜರು ಸಿದ್ಧವಾದ ವಿಪುಲವಾದ ಭೋಗವನ್ನು ಬಿಟ್ಟು ಅಂತಕನ ವಶವಾಗಿರುವುದನ್ನು ನೋಡು.

ಮೃತಂ ಪುತ್ರಂ ದುಃಖಪುಷ್ಟಂ ಮನುಷ್ಯಾ
ಉತ್‌ಕ್ಷಿಪ್ಯ ರಾಜನ್ ಸ್ವಗೃಹಾನ್ನಿರ್ಹರಂತಿ ।
ತಂ ಮುಕ್ತಕೇಶಾಃ ಕರುಣಂ ರುದಂತಃ
ಚಿತಾಮಧ್ಯೇ ಕಾಷ್ಠಮಿವ ಕ್ಷಿಪಂತಿ ॥೧೬॥

ಕಷ್ಟದಿಂದ ಸಾಕಿ ಮೃತನಾದ ಪುತ್ರನನ್ನು ಮನುಷ್ಯರು ತಮ್ಮ ಮನೆಯಿಂದ ಎತ್ತಿಕೊಂಡು ಹೊರಟು ದಹಿಸುತ್ತಾರೆ. ತಲೆಗೂದಲುಗಳನ್ನು ಬಿಚ್ಚಿಕೊಂಡು ಕರುಣಾಜನಕವಾಗಿ ಅಳುತ್ತಾ ಚಿತೆಯ ಮಧ್ಯದಲ್ಲಿ ಕಾಷ್ಠದಂತೆ ಅವನನ್ನು ಎಸೆಯುತ್ತಾರೆ.

ಅನ್ಯೋ ಧನಂ ಪ್ರೇತಗತಸ್ಯ ಭುಂಕ್ತೇ
ವಯಾಂಸಿ ಚಾಗ್ನಿಶ್ಚ ಶರೀರಧಾತೂನ್ ।
ದ್ವಾಭ್ಯಾಮಯಂ ಸಹ ಗಚ್ಛತ್ಯಮುತ್ರ
ಪುಣ್ಯೇನ ಪಾಪೇನ ಚ ವೇಷ್ಟ್ಯಮಾನಃ ॥೧೭॥

ಮರಣ ಹೊಂದಿದವನ ಧನವನ್ನು ಇನ್ನೊಬ್ಬನು ಭೋಗಿಸುತ್ತಾನೆ. ಪಕ್ಷಿಗಳೂ ಮತ್ತು ಅಗ್ನಿಯು ಅವನ ಶರೀರದ ಧಾತುಗಳನ್ನು ಭೋಗಿಸುತ್ತಾರೆ. ಪುಣ್ಯ-ಪಾಪ ಇವೆರಡರಿಂದ ಸುತ್ತಲ್ಪಟ್ಟು ಜೀವನು ಪರಲೋಕಕ್ಕೆ ಹೋಗುತ್ತಾನೆ.

ಉತ್ಸೃಜ್ಯ ವಿನಿವರ್ತಂತೇ ಜ್ಞಾತಯಃ ಸುಹೃದಃ ಸುತಾಃ ।
ಅಪುಷ್ಪಾನಫಲಾನ್ ವೃಕ್ಷಾನ್ ಯಥಾ ತಾತ ಪತತ್ರಿಣಃ ॥೧೮॥

ಪುಷ್ಪ-ಫಲಗಳಿಲ್ಲದ ವೃಕ್ಷಗಳನ್ನು ಪಕ್ಷಿಗಳು ಬಿಡುವಂತೆ ಜ್ಞಾತಿಗಳು ಮತ್ತು ಬಾಂಧವರು ಮತ್ತು ಮಕ್ಕಳು ಆ ದೇಹವನ್ನು ಅಲ್ಲಿಯೇ ಬಿಟ್ಟು ಹಿಂದಿರುಗುತ್ತಾರೆ.

**ಅಗ್ನೌ ಪ್ರಾಸ್ತಂ ತು ಪುರುಷಂ ಕರ್ಮೈವಾನ್ವೇತಿ ಯತ್ ಕೃತಮ್ ।**
**ತಸ್ಮಾತ್ ತು ಸುಸುಖೋ ಯತ್ನಾದ್ ಧರ್ಮಂ ಸಂಚಿನುಯಾಚ್ಛನೈಃ ॥**

ಅಗ್ನಿಯಲ್ಲಿ ಬಿದ್ದ ಪುರುಷನ ಜೊತೆಯಲ್ಲಿ ಅವನು ಹಿಂದೆ ಮಾಡಿದ ಕರ್ಮಗಳು ಮಾತ್ರ ಹೋಗುತ್ತವೆ. ಆದ್ದರಿಂದ ಎಷ್ಟೇ ಸುಖವಿದ್ದರೂ ಪ್ರಯತ್ನಪೂರ್ವಕವಾಗಿ ನಿಧಾನವಾಗಿ ಧರ್ಮವನ್ನು ಸಂಪಾದಿಸಬೇಕು.

**ಅಸ್ಮಾಲ್ಲೋಕಾದೂರ್ಧ್ವಮಮುಷ್ಯ ಚಾಧೋ**
**ಮಹತ್ ತಮಸ್ತಿಷ್ಠತಿ ಹ್ಯಂಧಕಾರಮ್ ।**
**ತದ್ವೈ ಮಹನ್ಮೋಹನಮಿಂದ್ರಿಯಾಣಾಂ**
**ಬುದ್ಧ್ಯಸ್ವ ಮಾ ತ್ವಾಂ ಪ್ರಲಭೇತ ರಾಜನ್ ॥೨೦॥**

ಈ ಲೋಕದ ಮೇಲ್ಭಾಗದಲ್ಲಿ ಮತ್ತು ಕೆಳಭಾಗದಲ್ಲಿ ದೊಡ್ಡ ಅಂಧಕಾರವಿದೆ. ಅದು ಇಂದ್ರಿಯಗಳಿಗೆ ದೊಡ್ಡ ಅಜ್ಞಾನವನ್ನು ಉಂಟುಮಾಡುವಂತಹದು. ಆ ಎರಡು ಲೋಕಗಳನ್ನು ಸರಿಯಾಗಿ ತಿಳಿದುಕೊ. ಇನ್ನೊಬ್ಬರಿಗೆ ವಂಚನೆಯನ್ನು ಮಾಡಬೇಡ.

**ಇದಂ ವಚಃ ಶಕ್ಷ್ಯತಿ ಚೇತ್ ಯಥಾವತ್**
**ನಿಶಮ್ಯ ಸರ್ವಂ ಪ್ರತಿಪತ್ತುಮೇವ ।**
**ಯಶಃ ಪರಂ ಪ್ರಾಪ್ಸ್ಯಸಿ ಜೀವಲೋಕೇ**
**ಭಯಂ ನ ಚಾಮುತ್ರ ನ ಚೇಹ ತೇಽಸ್ತಿ ॥೨೧॥**

ನಾನು ಹೇಳಿದ ಎಲ್ಲ ಮಾತುಗಳನ್ನೂ ಸರಿಯಾಗಿ ಕೇಳಿ ತಿಳಿದುಕೊಳ್ಳಲು ಶಕ್ತನಾದರೆ ಈ ಜೀವಲೋಕದಲ್ಲಿ ಶ್ರೇಷ್ಠವಾದ ಕೀರ್ತಿಯನ್ನು ಹೊಂದುವಿ. ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ನಿನಗೆ ಭಯವಿರುವುದಿಲ್ಲ.

**ಆತ್ಮಾ ನದೀ ಭಾರತ ಪುಣ್ಯತೀರ್ಥಾ**
**ಸತ್ಯೋದಕಾ ಶೀಲಕೂಲಾ ದಮೋರ್ಮಿಃ ।**

ಯಸ್ಯಾಂ ಸ್ನಾತಃ ಪೂಯತೇ ಪುಣ್ಯಕರ್ಮಾ
ಯಥಾತ್ಮಾನಂ ಪುಣ್ಯವಂತೋ ಜನಾಶ್ಚ ॥೨೨॥

ಎಲೈ ಭಾರತನೇ, ಆತ್ಮನು ಪುಣ್ಯಶಾಸನಗಳಿರುವ ನದಿ, ಸತ್ಯವೇ ಅದರ ಉದಕ, ಶೀಲವು ದಡ, ಇಂದ್ರಿಯ ನಿಗ್ರಹವು ಅಲೆ, ಅದರಲ್ಲಿ ಸ್ನಾನ ಮಾಡಿದವನು ಪುಣ್ಯವಂತ. ಜನರು ಪರಮಾತ್ಮನನ್ನು ಹೊಂದಿ ಪವಿತ್ರರಾಗುವಂತೆ ಇವನೂ ಪುಣ್ಯಕರ್ಮವನ್ನು ಮಾಡಿ ಪವಿತ್ರನಾಗುತ್ತಾನೆ.

ಕಾಮಕ್ರೋಧಗ್ರಾಹವತೀಂ ಪಂಚೇಂದ್ರಿಯಜಲಾಂ ನದೀಮ್ ।
ನಾವಂ ಧೃತಿಮಯೀಂ ಕೃತ್ವಾ ಜನ್ಮದುರ್ಗಾಣಿ ಸಂತರ ॥೨೩॥

ಕಾಮ-ಕ್ರೋಧಗಳೆಂಬ ಮೊಸಳೆಗಳಿರುವ ಪಂಚೇಂದ್ರಿಯಗಳ ಜಲವುಳ್ಳ ಈ ಸಂಸಾರವೆಂಬ ನದಿಯನ್ನು ಧೈರ್ಯವನ್ನು ದೋಣಿಯನ್ನಾಗಿ ಮಾಡಿ ಜನನ-ಮರಣಗಳೆಂಬ ದುರ್ಗಗಳನ್ನು ದಾಟುವವನಾಗು.

ಪ್ರಜ್ಞಾವೃದ್ಧಂ ಧರ್ಮವೃದ್ಧಂ ಸ್ವಬಂಧುಂ
ವಿದ್ಯಾವೃದ್ಧಂ ವಯಸಾ ಚಾಪಿ ವೃದ್ಧಮ್ ।
ಕಾರ್ಯಾಕಾರ್ಯೇ ಚಾಭಿಪದ್ಯ ಪ್ರಸಾದ್ಯ
ಯಃ ಸಂಪೃಚ್ಛೇನ್ನ ಸ ಮುಹ್ಯೇತ್ ಕದಾಚಿತ್ ॥೨೪॥

ಯಾವನು ಜ್ಞಾನವೃದ್ಧನೂ, ಧರ್ಮವೃದ್ಧನೂ, ತನ್ನ ಬಂಧುವೂ, ವಿದ್ಯಾವೃದ್ಧನೂ, ವಯೋವೃದ್ಧನೂ ಆದವನನ್ನು ಸಮೀಪಿಸಿ, ಸಂತೋಷಪಡಿಸಿ ಕಾರ್ಯಾಕಾರ್ಯಗಳನ್ನು ಪ್ರಶ್ನೆ ಮಾಡಿ ತಿಳಿಯುತ್ತಾನೆಯೋ ಅವನು ಎಂದೂ ಮೋಹಕ್ಕೆ ಒಳಗಾಗುವುದಿಲ್ಲ.

ಧೃತ್ಯಾ ಶಿಶ್ನೋದರಂ ರಕ್ಷೇತ್ ಪಾಣಿಪಾದಂ ಚ ಚಕ್ಷುಷಾ ।
ಚಕ್ಷುಃಶ್ರೋತ್ರೇ ಚ ಮನಸಾ ಮನೋ ವಾಚಂ ಚ ವಿದ್ಯಯಾ ॥೨೫॥

ಧೈರ್ಯದಿಂದ ಶಿಶ್ನೋದರಗಳನ್ನು ರಕ್ಷಿಸಬೇಕು. ಚಕ್ಷುಸ್ಸಿನಿಂದ ಹಸ್ತ-ಪಾದಗಳನ್ನು ರಕ್ಷಿಸಬೇಕು. ಚಕ್ಷುಃ-ಶ್ರೋತ್ರಗಳನ್ನು ಮನಸ್ಸಿನಿಂದ ರಕ್ಷಿಸಬೇಕು. ಮನಸ್ಸು ಮತ್ತು ವಾಗಿಂದ್ರಿಯವನ್ನು ವಿದ್ಯೆಯಿಂದ ರಕ್ಷಿಸಬೇಕು.

ನಿತ್ಯೋದಕೀ ನಿತ್ಯಯಜ್ಞೋಪವೀತೀ
ನಿತ್ಯಸ್ವಾಧ್ಯಾಯೀ ಪತಿತಾನ್ನವರ್ಜೀ ।
ಸತ್ಯಂ ಬ್ರುವನ್ ಗುರವೇ ಕರ್ಮ ಕುರ್ವನ್
ನ ಬ್ರಾಹ್ಮಣಃ ಚ್ಯವತೇ ಬ್ರಹ್ಮಲೋಕಾತ್ ॥೨೬॥

ನಿತ್ಯಸ್ನಾನ ಮಾಡುವವನು ನಿತ್ಯವೂ ಯಜ್ಞೋಪವೀತವನ್ನು ಧರಿಸಿದವನೂ, ನಿತ್ಯವೂ ವೇದಾಧ್ಯಯನವನ್ನು ಮಾಡುವವನೂ, ಪತಿತಾನ್ನವನ್ನು ತೊರೆದವನೂ, ಸತ್ಯವನ್ನು ನುಡಿಯುವವನೂ, ಗುರುಗಳು ಹೇಳಿದ ಕರ್ಮವನ್ನು ಮಾಡುವವನೂ ಆದ ಬ್ರಾಹ್ಮಣನು ಬ್ರಹ್ಮಲೋಕದಿಂದ ಚ್ಯುತನಾಗುವುದಿಲ್ಲ.

ಅಧೀತ್ಯ ವೇದಾನ್ ಪರಿಸಂಸ್ತೀರ್ಯ ಚಾಗ್ನೀನ್
ಇಷ್ಟ್ವಾ ಯಜ್ಞೈಃ ಪಾಲಯಿತ್ವಾ ಪ್ರಜಾಶ್ಚ ।
ಗೋಬ್ರಾಹ್ಮಣಾರ್ಥೇ ಶಸ್ತ್ರಪೂತಾಂತರಾತ್ಮಾ
ಹತಃ ಸಂಗ್ರಾಮೇ ಕ್ಷತ್ರಿಯಃ ಸ್ವರ್ಗಮೇತಿ ॥೨೭॥

ವೇದವನ್ನು ಅಧ್ಯಯನ ಮಾಡಿ, ಸಂಸ್ತನಾದಿಗಳನ್ನು ಮಾಡಿ, ಅಗ್ನಿಗಳಲ್ಲಿ ಯಜ್ಞಗಳನ್ನು ಮಾಡಿ, ಪ್ರಜೆಗಳ ಪಾಲನೆಯನ್ನು ಮಾಡಿ, ಗೋ-ಬ್ರಾಹ್ಮಣರ ಸಲುವಾಗಿ ಯುದ್ಧದಲ್ಲಿ ಶಸ್ತ್ರದಿಂದ ಹತನಾಗುವ ಕ್ಷತ್ರಿಯನು ಸ್ವರ್ಗವನ್ನು ಪಡೆಯುತ್ತಾನೆ.

ವೈಶ್ಯೋಽಧೀತ್ಯ ಬ್ರಾಹ್ಮಣಾನ್ ಕ್ಷತ್ರಿಯಾಂಶ್ಚ
ಧನೈಃ ಕಾಲೇ ಸಂವಿಭಜ್ಯಾಶ್ರಿತಾಂಶ್ಚ ।
ತ್ರಯೀಪೂತಂ ಧೂಮಮಾಘ್ರಾಯ ಪುಣ್ಯಂ
ಪ್ರೇತ್ಯ ಸ್ವರ್ಗೇ ದೇವಸುಖಾನಿ ಭುಂಕ್ತೇ ॥೨೮॥

ವೈಶ್ಯನು ಅಧ್ಯಯನವನ್ನು ಮಾಡಿ, ಬ್ರಾಹ್ಮಣರಿಗೂ ಕ್ಷತ್ರಿಯರಿಗೂ ಮತ್ತು ತನ್ನನ್ನು ಆಶ್ರಯಿಸಿದವರಿಗೂ ಯೋಗ್ಯವಾದ ಕಾಲದಲ್ಲಿ ತನ್ನ ಧನವನ್ನು ಬಿಟ್ಟು ಮೂರುವೇದಗಳ ತ್ವರೆಯಿಂದ ಪವಿತ್ರವಾದ ಧೂಮವನ್ನು ಆಘ್ರಾಣಿಸಿ, ಮರಣವನ್ನು ಹೊಂದಿ ಸ್ವರ್ಗದಲ್ಲಿ ದೇವತೆಗಳ ಸುಖವನ್ನು ಅನುಭವಿಸುತ್ತಾನೆ.

ಬ್ರಹ್ಮ ಕ್ಷತ್ರಂ ವೈಶ್ಯವರ್ಣಂ ಚ ಶೂದ್ರಃ
ಕ್ರಮೇಣೈತಾನ್ ನ್ಯಾಯತಃ ಪೂಜಯಾನಃ ।
ತುಷ್ಟೇಷ್ವೇತೇಷ್ವವ್ಯಥೋ ದಗ್ಧಪಾಪಃ
ತ್ಯಕ್ತ್ವಾ ದೇಹಂ ಸಿದ್ಧಸುಖಾನಿ ಭುಂಕ್ತೇ ॥೨೯॥

ಶೂದ್ರನಾದವನು ಕ್ರಮವಾಗಿ ಬ್ರಾಹ್ಮಣ-ಕ್ಷತ್ರಿಯ-ವೈಶ್ಯವರ್ಣದವರನ್ನು ನ್ಯಾಯದಿಂದ ಪೂಜೆಮಾಡಿ, ಅವರು ಸಂತೋಷಗೊಂಡರೆ ತನ್ನ ಪಾಪಗಳನ್ನು ಕಳೆದುಕೊಂಡು ವ್ಯಥೆಯಿಲ್ಲದೆ ದೇಹವನ್ನು ಬಿಟ್ಟು ಸಿದ್ಧರ ಸುಖವನ್ನು ಅನುಭವಿಸುತ್ತಾನೆ.

ಚಾತುರ್ವರ್ಣ್ಯಸ್ಯೈಷ ಧರ್ಮಸ್ತವೋಕ್ತೋ
ಹೇತುಂ ಚಾತ್ರ ಬ್ರುವತೋ ಮೇ ನಿಬೋಧ ।
ಕ್ಷತ್ರಾದ್ ಧರ್ಮಾದ್ ಈಯತೇ ಪಾಂಡುಪುತ್ರಾಃ
ತತ್ ತ್ವಂ ರಾಜನ್ ರಾಜಧರ್ಮೇ ನಿಯುಂಕ್ಷ್ವ ॥೩೦॥

ಚಾತುರ್ವರ್ಣದ ಈ ಧರ್ಮಗಳನ್ನು ನಾನು ನಿನಗೆ ಹೇಳಿದ್ದೇನೆ. ಅದಕ್ಕೆ ಕಾರಣವನ್ನು ಹೇಳುತ್ತೇನೆ, ಕೇಳು. ಪಾಂಡವರು ಕ್ಷತ್ರಿಯ ಧರ್ಮದಿಂದ ಕೂಡಿದವರಾಗಿ ಇರುವುದು ತಿಳಿದುಬರುತ್ತಿದೆ. ಎಲೈ ರಾಜನೇ, ನೀನು ನಿನ್ನನ್ನು ರಾಜಧರ್ಮದಲ್ಲಿ ವಿನಿಯೋಗಿಸು.

ಧೃತರಾಷ್ಟ್ರಃ

ಏವಮೇತದ್ ಯಥಾಽಽತ್ಥ ತ್ವಮನುಶಾಸಸಿ ನಿತ್ಯದಾ ।
ಮಮಾಪಿ ಚ ಮತಿಃ ಸೌಮ್ಯ ಭವತ್ಯೇವಂ ಯಥಾಽಽತ್ಥ ಮಾಮ್ ॥

ಧೃತರಾಷ್ಟ್ರ– ನೀನು ನಿತ್ಯವೂ ಹೇಗೆ ನನಗೆ ಅನುಶಾಸನ ಮಾಡುತ್ತೀಯೋ ಅದರಂತೆ ಎಲ್ಲವೂ ಸರಿ. ಎಲೈ ಸೌಮ್ಯನೇ, ನನಗೂ ಸಹ ನೀನು ಹೇಳಿದಂತೆಯೇ ಬುದ್ಧಿಯು ಉಂಟಾಗುತ್ತದೆ.

ವಿದುರಃ

ಸಾಧುಬುದ್ಧಿಃ ಕೃತಾಽಪ್ಯೇವಂ ಪಾಂಡವಾನ್ ಪ್ರತಿ ಭಾರತ ।
ದುರ್ಯೋಧನಂ ಸಮಾಸಾದ್ಯ ಪುನರ್ವಿಪರಿವರ್ತತೇ ॥೩೨॥

ವಿದುರ– ಭಾರತನೇ, ಪಾಂಡವರ ವಿಷಯದಲ್ಲಿ ಇಂತಹ ಸದ್ಬುದ್ಧಿ ಉಂಟಾದರೂ ದುರ್ಯೋಧನನನ್ನು ನೋಡಿದ ಕೂಡಲೇ ನಿನ್ನ ಬುದ್ಧಿಯು ತಿರುಗಿಬಿಡುತ್ತದೆ.

**ನ ದಿಷ್ಟ್ಯಮಭ್ಯತಿಕ್ರಾಂತುಂ ಶಕ್ಯಂ ಭೂತೇನ ಕೇನಚಿತ್ ।**
**ದಿಷ್ಟ್ಯಮೇವ ಧ್ರುವಂ ಮನ್ಯೇ ಪೌರುಷಂ ತು ನಿರರ್ಥಕಮ್ ॥೩೩॥**

ವಿಧಿಯನ್ನು ಮೀರಲು ಯಾರಿಗೂ ಸಾಧ್ಯವಿಲ್ಲ. ವಿಧಿಯೇ ಧ್ರುವವೆಂದು ಭಾವಿಸುತ್ತೇನೆ. ಪುರುಷ ಪ್ರಯತ್ನವು ನಿರರ್ಥಕವಾದುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಚತ್ವಾರಿಂಶೋಽಧ್ಯಾಯಃ ॥
॥ ಪ್ರಜಾಗರಪರ್ವಣಿ ನವಮೋಽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನಲವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

## ನಲವತ್ತೊಂದನೆಯ ಅಧ್ಯಾಯ

ತಾನು ಶೂದ್ರನಾದುದರಿಂದ ವಿದುರನ ಉಪದೇಶ ಸಂಕ್ಷೇಪ
ಮತ್ತು ಸನತ್ಕುಮಾರರ ಆಗಮನ.

**ಧೃತರಾಷ್ಟ್ರಃ**

**ಅನುಕ್ತಂ ಯದಿ ತೇ ಕಿಂಚಿದ್ ವಾಚಾ ವಿದುರ ವಿದ್ಯತೇ ।**
**ತನ್ಮೇ ಶುಶ್ರೂಷವೇ ಬ್ರೂಹಿ ವಿಚಿತ್ರಾಣಿ ಹಿ ಭಾಷಸೇ ॥೧॥**

ಧೃತರಾಷ್ಟ್ರ– ವಿದುರನೇ, ನೀನು ಹೇಳದೇ ಇರುವುದು ಏನಾದರೂ ಇದ್ದರೆ ಕೇಳಲು ಬಯಸುವ ನನಗೆ ಅದನ್ನು ಹೇಳು. ವಿಚಿತ್ರವಾಗಿ ಮಾತನಾಡುತ್ತಿದ್ದೀಯೆ.

**ವಿದುರಃ**

**ಧೃತರಾಷ್ಟ್ರ ಕುಮಾರೋ ವೈ ಯಃ ಪುರಾಣಃ ಸನಾತನಃ ।**
**ಸನತ್ಸುಜಾತಃ ಪ್ರೋವಾಚ ಮೃತ್ಯುರ್ನಾಸ್ತೀತಿ ಭಾರತ ॥೨॥**

**ಸ ತೇ ಗುಹ್ಯಾನ್ ಪ್ರಕಾಶಾಂಶ್ಚ ಸರ್ವಾನ್ ಹೃದಯಸಂಶ್ರಯಾನ್ ।**
**ಪ್ರವಕ್ಷ್ಯತಿ ಮಹಾರಾಜ ಸರ್ವಬುದ್ಧಿಮತಾಂ ವರಃ ॥೩॥**

ವಿದುರ– ಧೃತರಾಷ್ಟ್ರನೇ, ಪ್ರಾಚೀನನಾದ, ಕುಮಾರನಾದ ಸನಾತನ ಮತ್ತು ಸನತ್ಸುಜಾತ ಎಂದು ಕರೆಸಿಕೊಳ್ಳಲ್ಪಡುವ ಸನತ್ಕುಮಾರನು ಎಲೈ ಭಾರತನೇ, ಮೃತ್ಯುವು ನಾಸ್ತಿ ಎಂದು ಹೇಳಿದನು. ಅವನು ಗುಹ್ಯವಾದ ಮತ್ತು ಪ್ರಕಾಶವಾದ ನಿನ್ನ ಹೃದಯದ ಎಲ್ಲ ಸಂಶಯಗಳಿಗೂ ಉತ್ತರವನ್ನು ಹೇಳುವನು. ಮಹಾರಾಜನೇ, ಅವನು ಎಲ್ಲಾ ಬುದ್ಧಿವಂತರಲ್ಲಿ ಶ್ರೇಷ್ಠನಾದವನು.

**ಧೃತರಾಷ್ಟ್ರಃ**

**ಕಿಂ ತ್ವಂ ನ ವೇದ ತದ್ ಭೂಯೋ ಯನ್ಮೇ ಬ್ರೂಯಾತ್ ಸನಾತನಃ ।**
**ತ್ವಮೇವ ವಿದುರ ಬ್ರೂಹಿ ಪ್ರಜ್ಞಾಶೇಷೋಽಸ್ತಿ ಚೇತ್ ತವ ॥೪॥**

ಧೃತರಾಷ್ಟ್ರ– ಸನಾತನನು ನನಗೆ ಪುನಃ ಏನು ಹೇಳುವನೋ ಅದನ್ನು ನೀನು ತಿಳಿದಿಲ್ಲವೇ? ವಿದುರನೇ, ನೀನು ಹೇಳಬೇಕಾದ ವಿಷಯವಿನ್ನೂ ಇದ್ದರೆ ನೀನೇ ಹೇಳುವವನಾಗು.

**ವಿದುರಃ**

**ಶೂದ್ರಯೋನಾವಹಂ ಜಾತೋ ನಾತೋಽನ್ಯದ್ ವಕ್ತುಮುತ್ಸಹೇ ।**
**ಕುಮಾರಸ್ಯ ತು ಯಾ ಬುದ್ಧಿರ್ವೇದ ತಾಂ ಶಾಶ್ವತೀಮಹಮ್ ॥೫॥**

**ಬ್ರಾಹ್ಮೀಂ ಹಿ ಯೋನಿಮಾಪನ್ನಃ ಸುಗುಹ್ಯಮಪಿ ಯೋ ವದೇತ್ ।**
**ನ ತೇನ ಗರ್ಹ್ಯೋ ದೇವಾನಾಂ ತಸ್ಮಾದೇತದ್ ಬ್ರವೀಮಿ ತೇ ॥೬॥**

ನಾನು ಶೂದ್ರಯೋನಿಯಲ್ಲಿ ಜನಿಸಿದವನು. ಇದಕ್ಕಿಂತ ಹೆಚ್ಚು ಹೇಳಲಾರೆ. ಸನತ್ಕುಮಾರನ ಬುದ್ಧಿಯು ಶಾಶ್ವತವಾದುದು (ಸರ್ವವಿಷಯಕವಾದುದು ಎಂದು ನಾನು ತಿಳಿದಿದ್ದೇನೆ). ಬ್ರಾಹ್ಮಣನಾದ ಅವನು ಅತ್ಯಂತ ರಹಸ್ಯವನ್ನೂ ನಿನಗೆ ಹೇಳಬಹುದು. ಆದ್ದರಿಂದ ನಾನು ಹೆಚ್ಚು ಹೇಳುವುದಿಲ್ಲ ಎಂದು ಹೇಳಿದ ಕಾರಣದಿಂದಾಗಿ ದೇವತೆಗಳಿಂದ ನಾನು ನಿಂದನೀಯನಾಗುವುದಿಲ್ಲ. ಆದ್ದರಿಂದ ನಾನು ಇದನ್ನು ಹೇಳುತ್ತಿದ್ದೇನೆ.

**ಧೃತರಾಷ್ಟ್ರಃ**

**ಬ್ರವೀಹಿ ವಿದುರ ತ್ವಂ ಮೇ ಪುರಾಣಂ ತಂ ಸನಾತನಮ್ ।**
**ಕಥಮೇತೇನ ದೇಹೇನ ಸ್ಯಾದಿಹೈವ ಸಮಾಗಮಃ ॥೭॥**

**ಧೃತರಾಷ್ಟ್ರ**– ವಿದುರನೇ, ಆ ಪ್ರಾಚೀನನಾದ ಸನಾತನರ ಸಂಗಮವು ನನಗೆ ಈ ದೇಹದಲ್ಲಿಯೇ ಇಲ್ಲಿಯೇ ಹೇಗಾಗುತ್ತದೆ ಎಂದು ಹೇಳು.

**ವೈಶಂಪಾಯನಃ**

**ಚಿಂತಯಾಮಾಸ ವಿದುರಃ ತಮೃಷಿಂ ಸಂಶಿತವ್ರತಮ್ ।**
**ಸ ಚ ತಚ್ಚಿಂತಿತಂ ಜ್ಞಾತ್ವಾ ದರ್ಶಯಾಮಾಸ ಭಾರತ ॥೮॥**

**ವೈಶಂಪಾಯನ**– ವಿದುರನು ಒಳ್ಳೆಯ ವ್ರತಧಾರಿಗಳಾದ ಆ ಋಷಿಯನ್ನು ಮನಸ್ಸಿನಲ್ಲಿ ಚಿಂತಿಸಿದನು. ಎಲೈ ಭಾರತನೇ, ಅವನಾದರೂ ಅವನ ಚಿಂತನೆಯನ್ನು ತಿಳಿದು ಪ್ರತ್ಯಕ್ಷನಾದನು.

**ಸ ಚೈನಂ ಪ್ರತಿಜಗ್ರಾಹ ವಿಧಿದೃಷ್ಟೇನ ಕರ್ಮಣಾ ।**
**ಸುಖೋಪವಿಷ್ಟಂ ವಿಶ್ರಾಂತಮಥೈನಂ ವಿದುರೋऽಬ್ರವೀತ್ ॥೯॥**

ವಿದುರನು ಅವನನ್ನು ವಿಧಿಪೂರ್ವಕವಾಗಿ ಸ್ವೀಕರಿಸಿದನು. ಅನಂತರ ವಿಶ್ರಾಂತಿಯನ್ನು ಪಡೆದು ಸುಖವಾಗಿ ಕುಳಿತ ಅವನನ್ನು ಕುರಿತು ವಿದುರನು ಹೇಳಿದನು.

**ಭಗವಾನ್ ಸಂಶಯಃ ಕಶ್ಚಿದ್ ಧೃತರಾಷ್ಟ್ರಸ್ಯ ಮಾನಸೇ ।**
**ಯೋ ನ ಶಕ್ಯೋ ಮಯಾ ವಕ್ತುಂ ತ್ವಮಸ್ಮೈ ವಕ್ತುಮರ್ಹಸಿ ॥೧೦॥**

ಪೂಜ್ಯರೇ, ಧೃತರಾಷ್ಟ್ರನ ಮನಸ್ಸಿನಲ್ಲಿ ಒಂದು ಸಂಶಯವಿದೆ. ಅದನ್ನು ನಾನು ಬಿಡಿಸಲಾರೆ. ನೀವು ಅವನಿಗೆ ಅದನ್ನು ಪರಿಹರಿಸಬೇಕು.

**ಯಂ ಶ್ರುತ್ವಾऽಯಂ ಮನುಷ್ಯೇಂದ್ರಃ ಸರ್ವದುಃಖಾತಿಗೋ ಭವೇತ್ ॥**

**ಲಾಭಾಲಾಭೌ ಪ್ರಿಯದ್ವೇಷೌ ಯಥೈನಂ ನ ಜರಾಂತಕೌ ।**
**ವಿಷಹೇರನ್ ಕ್ಷಯಾಮರ್ಷೌ ಕ್ಷುತ್ತಿಪಾಸೇ ಭಯಾಭಯೇ ॥೧೨॥**

**ಅರತಿಶ್ಚೈವ ತಂದ್ರೀ ಚ ಕಾಮಕ್ರೋಧೌ ಕ್ಷಯೋದಯೌ ॥೧೩॥**

ಯಾವುದನ್ನು ಕೇಳಿದರೆ ಅವನನ್ನು ಲಾಭಾಲಾಭಗಳೂ, ಹಿತಾಹಿತಗಳೂ, ಜರಾಮೃತ್ಯುಗಳೂ, ಹಾನಿ ಮತ್ತು ಕ್ರೋಧಗಳೂ, ಹಸಿವು-ನೀರಡಿಕೆಗಳೂ,

ಭಯಾಭಯಗಳೂ, ಅರತಿ ಮತ್ತು ಸೋಮಾರಿತನಗಳೂ, ಕಾಮ-ಕ್ರೋಧಗಳೂ, ಸಮೃದ್ಧಿ ಮತ್ತು ಕ್ಷಯಗಳೂ ಅವನ ಮೇಲೆ ಪರಿಣಾಮವನ್ನು ಮಾಡದೇ ಈ ಮನುಷ್ಯೇಂದ್ರನು ಎಲ್ಲ ದುಃಖಗಳನ್ನು ದಾಟಿ ಹೋಗುವನೋ ಅಂತಹ ಉಪದೇಶವನ್ನು ನೀವು ಮಾಡಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಉದ್ಯೋಗಪರ್ವಣಿ ಏಕಚತ್ವಾರಿಂಶೋಽಧ್ಯಾಯಃ ॥

॥ ಪ್ರಜಾಗರಪರ್ವಣಿ ದಶಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನಲವತ್ತೊಂದನೆಯ ಅಧ್ಯಾಯ ಮುಗಿಯಿತು.

## ॥ ಸಮಾಪ್ತಂ ಪ್ರಜಾಗರಪರ್ವ ॥

★ ★ ★ ★ ★

# ೪. ಸನತ್ಸುಜಾತಪರ್ವ

## ನಲವತ್ತೆರಡನೆಯ ಅಧ್ಯಾಯ

### ವೈಶಂಪಾಯನಃ

ತತೋ ರಾಜಾ ಧೃತರಾಷ್ಟ್ರೋ ಮನೀಷೀ
ಸಂಪೂಜ್ಯಂ ತಂ ಧರ್ಮಭೃತಾಂ ವರಿಷ್ಠಮ್ ।
ಸನತ್ಕುಮಾರಂ ರಹಿತೇ ಮಹಾತ್ಮಾ
ಪಪ್ರಚ್ಛ ಬುದ್ಧಿಂ ಪರಮಾಂ ಬುಭೂಷನ್ ॥೧॥

ವೈಶಂಪಾಯನ– ಸಾಕ್ಷಾತ್ ಯಮಾವತಾರನಾದ ವಿದುರನು, ಸ್ವರೂಪದಲ್ಲಿ ತನಗಿಂತ ಅವರನಾದ ಧೃತರಾಷ್ಟ್ರನೆಂದು ನಾಮಕನಾದ ಗಂಧರ್ವನು ಭೂಮಿಯಲ್ಲಿ ಕ್ಷತ್ರಿಯ ಕುಲದಲ್ಲಿ ತನ್ನ ಅಣ್ಣನಾಗಿ ಧೃತರಾಷ್ಟ್ರನೆಂಬ ಹೆಸರಿನಿಂದಲೇ ಪ್ರಸಿದ್ಧನಾಗಿ, ಅಸುರಾವೇಷಬಲದಿಂದ ದುಷ್ಟನಾದ ಪುತ್ರನ ಸ್ನೇಹದಿಂದ ಉಂಟಾದ ಮಹಾಪಾತಕಗಳ ಫಲವಾಗಿ ನರಕಾದಿ ಅನರ್ಥಭಾಜನನಾದ ತನ್ನ ಅಣ್ಣನನ್ನು ಉದ್ಧಾರ ಮಾಡಲು ಬಯಸಿ ಮೊದಲು ಗುಡಜಿಹ್ವಿಕಾ ನ್ಯಾಯದಿಂದ ಅಧ್ಯಾತ್ಮಜ್ಞಾನಗರ್ಭಿತವಾದ ನೀತಿಶಾಸ್ತ್ರವನ್ನು ಅವನಿಗೆ ಬೋಧಿಸಿ, ಅದರಿಂದ ಅವನಿಗೆ ವೇದಾಂತಶಾಸ್ತ್ರಶ್ರವಣದಲ್ಲಿ ಅಭಿರುಚಿಯನ್ನು ಉಂಟುಮಾಡಿದನು. ಆಗ ಧೃತರಾಷ್ಟ್ರನು ಮೊದಲು ಶೋಕ-ಮೋಹಾದಿಗಳಿಂದ ತಪ್ತನಾಗಿದ್ದರೂ ತನಗಿಂತ ಉತ್ತಮನಾದ ಗುರುವಾದ ವಿದುರನ

ಉಪದೇಶದಿಂದ ವೈರಾಗ್ಯವನ್ನು ಹೊಂದಿ ಬ್ರಹ್ಮಜ್ಞಾನವನ್ನು ಪಡೆದವನು ಶೋಕವನ್ನು ದಾಟುತ್ತಾನೆ ಎಂಬ ನಿಯಮದಂತೆ ತನ್ನ ಶೋಕದ ಪರಿಹಾರಕ್ಕಾಗಿ ಬ್ರಹ್ಮವಿದ್ಯೆಯನ್ನು ಕೇಳಲು ಬಯಸಿ ಪುನಃ ವಿದುರನನ್ನು ಕುರಿತು ವಿದುರನೇ, ನೀನು ಹೇಳದೆ ಇರುವುದು ಏನಾದರೂ ಉಳಿದಿದ್ದರೆ ಅದನ್ನೂ ನನಗೆ ಹೇಳು ಎಂದು ಕೇಳುತ್ತಾನೆ.

ಧೃತರಾಷ್ಟ್ರನು ಈ ಪ್ರಶ್ನೆಯನ್ನು ಮಾಡಿದ ಮೇಲೆ **'ಧೃತರಾಷ್ಟ್ರಕುಮಾರೋವೈ'** ಎಂಬ ಎರಡು ಶ್ಲೋಕಗಳಿಂದ ವಿದುರನು ಸನತ್ಸುಜಾತನು ನಿನ್ನ ಪ್ರಶ್ನೆಗೆ ಉತ್ತರವನ್ನು ಹೇಳುತ್ತಾನೆ ಎಂದು ಹೇಳಿದ ಮೇಲೆ ಪುನಃ ಧೃತರಾಷ್ಟ್ರನು ಅವನು ಎಲ್ಲವನ್ನೂ ತಿಳಿದಿದ್ದಾನೆಯೇ? ನೀನೇ ಎಲ್ಲವನ್ನೂ ತಿಳಿದಿರುವಿ. ಆದ್ದರಿಂದ ನೀನೇ ನನಗೆ ಉಪದೇಶವನ್ನು ಮಾಡು ಎಂದು ಹೇಳಿದನು. ಆಗ ವಿದುರನು ತಾನು ಬ್ರಹ್ಮಜ್ಞಾನ ಸಂಪನ್ನನಾದರೂ ಶೂದ್ರಜಾತಿಯಲ್ಲಿ ಅವತಾರ ಮಾಡಿರುವುದರಿಂದ ಉಪದೇಶವನ್ನು ಕೊಡಲು ಅನರ್ಹನೆಂದು ಭಾವಿಸಿ, ವೇದಾಂತ ಉಪದೇಶವನ್ನು ಕೊಡಲು ಬ್ರಾಹ್ಮಣರಿಗೇ ಅಧಿಕಾರ, ಇನ್ನೊಬ್ಬರಿಗೆ ಇಲ್ಲ ಎಂದು ಸೂಚಿಸುತ್ತಾ **'ಶೂದ್ರಯೋನಾ ವಹಂ ಜಾತಃ'** ಎಂಬ ಎರಡು ಶ್ಲೋಕಗಳಿಂದ ತನಗೆ ಅಧಿಕಾರವಿಲ್ಲದಿರುವುದರಿಂದ ಸನತ್ಸುಜಾತರನ್ನೇ ಕೇಳುವಂತೆ ಹೇಳುತ್ತಾನೆ. ಆಗ ಧೃತರಾಷ್ಟ್ರನು ಪರಮಹಂಸರೂ, ಯೋಗಿಪ್ರತ್ಯಕ್ಷಕ್ಕೆ ಮಾತ್ರ ವಿಷಯರೂ ಆದ ಸನತ್ಸುಜಾತರನ್ನು ನಾನು ನೋಡಲು ಸಾಧ್ಯವಿಲ್ಲ. ನೀನೇ ಅವರನ್ನು ತೋರಿಸು ಎಂದು ಪ್ರಾರ್ಥಿಸಿದಾಗ ವಿದುರನು ಸನತ್ಸುಜಾತರನ್ನು ಸ್ಮರಿಸುತ್ತಾನೆ. ವಿದುರನ ಚಿಂತೆಯನ್ನು ತಿಳಿದ ಸನತ್ಸುಜಾತರು ತಕ್ಷಣ ಪ್ರತ್ಯಕ್ಷರಾಗುತ್ತಾರೆ. ಅವರೇ ಸನತ್ಕುಮಾರರು. ಆಗ ವಿದುರನು ಅವರನ್ನು ಪೂಜಿಸಿ, ರಾಜನಿಗೆ ನಿವೇದಿಸಿ ರಾಜನ ಶೋಕವನ್ನು ಪರಿಹಾರ ಮಾಡಬೇಕೆಂದು **'ಭಗವನ್ ಸಂಶಯಃ ಕಶ್ಚಿತ್'** ಮುಂತಾದ ನಾಲ್ಕು ಶ್ಲೋಕಗಳಿಂದ ಪ್ರಾರ್ಥನೆ ಮಾಡುತ್ತಾರೆ.

ವಿದುರನು ತನ್ನ ಮಾತನ್ನು ಮುಗಿಸಿದ ಮೇಲೆ ಮೇಧಾವಿಯಾದ ಧೃತರಾಷ್ಟ್ರನು ವಿದುರನು ಹೇಳಿದ ನೀತಿರೂಪವಾದ ಮಾತುಗಳನ್ನು ಪೂಜಿಸಿ ದುಷ್ಪಜನರಹಿತವಾದ ಒಂದು ಏಕಾಂತಸ್ಥಳದಲ್ಲಿ ಪ್ರಶ್ನೆ ಮಾಡುತ್ತಾನೆ. ಸನತ್ಸುಜಾತ ಎಂಬಲ್ಲಿ ಸನತ್ ಎಂಬುದು ಅವ್ಯಯ. ಅವ್ಯಯಗಳಿಗೆ ಅನೇಕಾರ್ಥಗಳಿರುವುದರಿಂದ ನಿತ್ಯ ಎಂದು ಅರ್ಥ. 'ಸನತ್' ಎಂದರೆ ನಿತ್ಯನಾದ, 'ಸು' ಎಂದರೆ ಚೆನ್ನಾಗಿ, 'ಜಾತ' ಎಂದರೆ

ಅಭಿವ್ಯಕ್ತನಾದವನು ಎಂದು ಅರ್ಥ. ಸನತ್ಕುಮಾರ ಎಂಬುದು ದೇವರ ಶುದ್ಧವಾದ ರೂಪ. ಬ್ರಹ್ಮದೇವರ ಮಕ್ಕಳಾದ ಸನತ್ಕುಮಾರರಲ್ಲಿ ಸನತ್ಕುಮಾರ ನಾಮಕನಾದ ಪರಮಾತ್ಮನ ವಿಶೇಷ ಸನ್ನಿಧಾನವಿದೆ. ಬ್ರಹ್ಮದೇವರ ಮಕ್ಕಳಾದ ಸನತ್ಕುಮಾರರ ವಿಷಯದಲ್ಲಿ ಸನತ್ಸುಜಾತ ಎಂಬ ಶಬ್ದವು ಸನತ್=ನಿತ್ಯರಾದ, ಸು=ಬ್ರಹ್ಮದೇವರಿಂದ, ಜಾತ= ಹುಟ್ಟಿದವರು ಎಂಬ ಅರ್ಥದಲ್ಲಿದೆ. ಆಚಾರ್ಯರು ಸನತ್ಕುಮಾರ ನಾಮಕ ಭಗವಂತನ ಸನ್ನಿಧಾನವು ಬ್ರಹ್ಮಪುತ್ರರಾದ ಸನತ್ಕುಮಾರರಲ್ಲಿ ಇದೆ ಎಂಬ ವಿಷಯವನ್ನು 'ಸ ಏವ ಪ್ರಥಮಂ ದೇವಃ' ಎಂಬ ಶ್ರೀಮದ್ಭಾಗವತ ಶ್ಲೋಕದ (೧-೩-೬) ತಾತ್ಪರ್ಯದಲ್ಲಿ ಹೇಳಿದ್ದಾರೆ. ಕೆಲವು ವ್ಯಾಖ್ಯಾನಕಾರರು ಈ ತಾತ್ಪರ್ಯದ ಪರಿಜ್ಞಾನವಿಲ್ಲದೆ ಸನತ್ಕುಮಾರ ಎಂದರೆ ಬ್ರಹ್ಮದೇವರ ಪುತ್ರ ಎಂದು ಮಾತ್ರ ಹೇಳುತ್ತಾರೆ. ಅಂತಹ ವ್ಯಾಖ್ಯಾನವು ಅಪ್ರಾಮಾಣಿಕವಾದುದರಿಂದ ಅದನ್ನು ಬಿಡಬೇಕು. ಅಂತಹ ಸನತ್ಕುಮಾರರನ್ನು ಕುರಿತು ಪರಾಪರತತ್ತ್ವವಿಷಯಕವಾದ ಶ್ರೇಷ್ಠವಾದ ಜ್ಞಾನವನ್ನು ಹೊಂದಲು ಬಯಸಿ ಧೃತರಾಷ್ಟ್ರನು ಪ್ರಶ್ನೆ ಮಾಡಿದನು. 'ಪರಮಾಂ' ಎಂಬ ಶಬ್ದಕ್ಕೆ 'ಪರ' ಎಂದರೆ ಪೂರ್ಣಾನಂದ ಅದ್ವಿತೀಯತ್ವಾದಿ ಗುಣವಿಶಿಷ್ಟನಾದ ಜಗತ್ತಿಗಿಂತ ಅತ್ಯಂತ ಭಿನ್ನನಾದ ಭಗವಂತನು, 'ಮಾ' ಎಂದರೆ ಯಾವುದರಿಂದ ತಿಳಿಯಲ್ಪಡುತ್ತಾನೆಯೋ ಅಂತಹ ಶ್ರೇಷ್ಠವಾದ ಎಂದು ಅರ್ಥ. ಅದು ವಿದ್ಯೆ ಎಂಬುದಕ್ಕೆ ವಿಶೇಷಣ. ಕೆಲವು ಪುಸ್ತಕಗಳಲ್ಲಿ ಸನತ್ಸುಜಾತ ಎಂಬುದಕ್ಕೆ ಬದಲಾಗಿ ಸನತ್ಕುಮಾರ ಎಂದೇ ಪಾಠವಿದೆ.

**ಧೃತರಾಷ್ಟ್ರಃ**

ಸನತ್ಸುಜಾತ ಯದಿಮಂ ಶೃಣೋಮಿ
ಮೃತ್ಯುರ್ಹಿ ನಾಸ್ತೀತಿ ತವೋಪದೇಶಮ್ ।
ದೇವಾಸುರಾಭ್ಯಂತರಚಾರಿಣಸ್ತೇ
ಅಮೃತ್ಯವೇ ತತ್ ಕತರನ್ನು ಸತ್ಯಮ್ ॥೨॥

ಧೃತರಾಷ್ಟ್ರ- ಹೀಗೆ ವಿದುರನ ಮುಖದಿಂದ ಒಳ್ಳೆಯ ನೀತಿಶಾಸ್ತ್ರವನ್ನು ಕೇಳಿದ ಧೃತರಾಷ್ಟ್ರನು ಪ್ರಾರಬ್ಧವಶದಿಂದ ದುಷ್ಟಪುತ್ರನಲ್ಲಿ ಸ್ನೇಹವನ್ನು ಹೊಂದಿ ಪರಾಪರ ತತ್ತ್ವಜ್ಞಾನವನ್ನು ಮರೆತರೂ ಪರಮಸಜ್ಜನನಾದ ವಿದುರನ ಸಹವಾಸದಿಂದ ಉಂಟಾದ

ತಾತ್ಕಾಲಿಕವಾದ ವಿಷಯವೈರಾಗ್ಯವನ್ನು ಹೊಂದಿ, ಸನತ್ಸುಜಾತರು ಉಪದೇಶ ಮಾಡುವ ಪರತತ್ತ್ವವನ್ನು ಕೇಳಲು ಬಯಸಿ, ಸನತ್ಸುಜಾತರಿಂದ ಹಿಂದೆ ಉಪದಿಷ್ಟವಾದ ಮೃತ್ಯುವು ಇಲ್ಲ ಎಂಬ ವಾಕ್ಯದ ಅಭಿಪ್ರಾಯವನ್ನು ತಿಳಿಯದೆ ಈ ಶ್ಲೋಕದಲ್ಲಿ ಆ ವಾಕ್ಯದ ಅಭಿಪ್ರಾಯವನ್ನು ಕುರಿತೇ ಪ್ರಶ್ನೆ ಮಾಡುತ್ತಾನೆ.

ಎಲೈ ಸನತ್ಸುಜಾತರೇ ಎಂದರೆ ಎಲೈ ಸನತ್ಕುಮಾರರೇ, ನೀವು ಶಿಷ್ಯರನ್ನು ಕುರಿತು ಮೃತ್ಯುವು ಇಲ್ಲ ಎಂದು ಉಪದೇಶವನ್ನು ಮಾಡಿದಿರಿ ಎಂಬ ವಿಷಯವನ್ನು ನಾನು ವಿದುರನಿಂದ ತಿಳಿದಿದ್ದೇನೆ. ಆದ್ದರಿಂದ ನಾನು ಲೋಕದಲ್ಲಿ ಯಾರಿಗೂ ಮೃತ್ಯುವಿಲ್ಲವೆಂದು ಭಾವಿಸುತ್ತೇನೆ. ಆದರೆ ಛಾಂದೋಗ್ಯ ಉಪನಿಷತ್ತಿನಲ್ಲಿ ಇಂದ್ರನು ಒಂದುನೂರು ವರ್ಷಗಳ ಕಾಲ ಬ್ರಹ್ಮದೇವರಲ್ಲಿ ಬ್ರಹ್ಮಚರ್ಯವನ್ನು ಮಾಡಿದನು. ಆಗ ದೇವತೆಗಳೂ ಮತ್ತು ಅಸುರರೂ ಜ್ಞಾನವನ್ನು ಪಡೆದರು ಎಂದು ಆರಂಭಿಸಿ ಅವರು ಮೂವತ್ತೆರಡು ವರ್ಷಗಳ ಕಾಲ ಬ್ರಹ್ಮಚರ್ಯವ್ರತವನ್ನು ಅನುಷ್ಠಾನ ಮಾಡಿದರು ಮುಂತಾದ ವಾಕ್ಯಗಳಿಂದ ಇಂದ್ರ-ವಿರೋಚನರಿಬ್ಬರೂ ಮೃತ್ಯುವನ್ನು ಪರಿಹಾರ ಮಾಡಿಕೊಳ್ಳಲು ಬ್ರಹ್ಮಚರ್ಯಾಚರಣ ಮೊದಲಾದವನ್ನು ಮಾಡಿದರೆಂದು ಕೇಳಿಬರುತ್ತದೆ. ಅಂತಹ ಶ್ರುತಿವಾಕ್ಯಕ್ಕೂ ತಮ್ಮ ಉಪದೇಶಕ್ಕೂ ವಿರೋಧ ಕಾಣುತ್ತದೆ. ಮೃತ್ಯುವು ಇದೆ ಎಂದು ತಿಳಿಯುತ್ತದೆ. ಮೃತ್ಯುವೇ ಇಲ್ಲದಿದ್ದರೆ ಅದರ ಪರಿಹಾರಕ್ಕಾಗಿ ಅವರು ಏಕೆ ಪ್ರಯತ್ನಪಡುತ್ತಾರೆ? ಆದ್ದರಿಂದ ಮೃತ್ಯುವು ಇದೆ ಮತ್ತು ಮೃತ್ಯುವಿಲ್ಲ ಎಂಬ ಎರಡು ಪಕ್ಷದಲ್ಲಿ ಯಾವುದು ಸತ್ಯವೆಂದು ನನಗೆ ನಿಶ್ಚಿತವಾಗಿ ಹೇಳಿ.

'ದೇವಾಸುರಾಭ್ಯಂತರಚಾರಿಣಃ' ಎಂಬ ಪದಕ್ಕೆ ದೇವತೆಗಳ ಮತ್ತು ಅಸುರರ ಹೃದಯದಲ್ಲಿ ಕಾಮರೂಪದಿಂದ ಸಂಚರಿಸುವ ನಿಮಗೆ ಎಂದು ಅರ್ಥ. ಸನತ್ಕುಮಾರರು ಕಾಮಾವತಾರರಾದ್ದರಿಂದ ಮತ್ತು ಸನತ್ಕುಮಾರನಾಮಕನಾದ ಪರಮಾತ್ಮನು ಸರ್ವಾಂತರ್ಯಾಮಿಯಾದುದರಿಂದ ದೇವತೆಗಳ ಮತ್ತು ಅಸುರರ ಮನಸ್ಸಿನಲ್ಲಿ ಸಂಚರಿಸುವ ನಿಮಗೆ ಎಲ್ಲವೂ ತಿಳಿದಿದೆ ಎಂದು ಅಭಿಪ್ರಾಯ. ಆದ್ದರಿಂದ ಮೃತ್ಯುವೇ ಇಲ್ಲದಿದ್ದರೆ ಮೃತ್ಯು ಪರಿಹಾರಕ್ಕಾಗಿ ದೇವತೆಗಳು ಏಕೆ ಅಮೃತಪಾನವನ್ನು ಮಾಡಿದರು? ಅಸುರರು ರುದ್ರಾದಿಗಳನ್ನು ಕುರಿತು ಏಕೆ ಉಗ್ರವಾದ ತಪಸ್ಸನ್ನು ಮಾಡಿದರು? ಎಂದು ಪ್ರಶ್ನೆಯ ಅಭಿಪ್ರಾಯ.

ಅಭಿವ್ಯಕ್ತನಾದವನು ಎಂದು ಅರ್ಥ. ಸನತ್ಕುಮಾರ ಎಂಬುದು ದೇವರ ಶುದ್ಧವಾದ ರೂಪ. ಬ್ರಹ್ಮದೇವರ ಮಕ್ಕಳಾದ ಸನತ್ಕುಮಾರರಲ್ಲಿ ಸನತ್ಕುಮಾರ ನಾಮಕನಾದ ಪರಮಾತ್ಮನ ವಿಶೇಷ ಸನ್ನಿಧಾನವಿದೆ. ಬ್ರಹ್ಮದೇವರ ಮಕ್ಕಳಾದ ಸನತ್ಕುಮಾರರ ವಿಷಯದಲ್ಲಿ ಸನತ್ಸುಜಾತ ಎಂಬ ಶಬ್ದವು ಸನತ್=ನಿತ್ಯರಾದ, ಸು=ಬ್ರಹ್ಮದೇವರಿಂದ, ಜಾತ= ಹುಟ್ಟಿದವರು ಎಂಬ ಅರ್ಥದಲ್ಲಿದೆ. ಆಚಾರ್ಯರು ಸನತ್ಕುಮಾರ ನಾಮಕ ಭಗವಂತನ ಸನ್ನಿಧಾನವು ಬ್ರಹ್ಮಪುತ್ರರಾದ ಸನತ್ಕುಮಾರರಲ್ಲಿ ಇದೆ ಎಂಬ ವಿಷಯವನ್ನು 'ಸ ಏವ ಪ್ರಥಮಂ ದೇವಃ' ಎಂಬ ಶ್ರೀಮದ್ಭಾಗವತ ಶ್ಲೋಕದ (೧-೩-೬) ತಾತ್ಪರ್ಯದಲ್ಲಿ ಹೇಳಿದ್ದಾರೆ. ಕೆಲವು ವ್ಯಾಖ್ಯಾನಕಾರರು ಈ ತಾತ್ಪರ್ಯದ ಪರಿಜ್ಞಾನವಿಲ್ಲದೆ ಸನತ್ಕುಮಾರ ಎಂದರೆ ಬ್ರಹ್ಮದೇವರ ಪುತ್ರ ಎಂದು ಮಾತ್ರ ಹೇಳುತ್ತಾರೆ. ಅಂತಹ ವ್ಯಾಖ್ಯಾನವು ಅಪ್ರಾಮಾಣಿಕವಾದುದರಿಂದ ಅದನ್ನು ಬಿಡಬೇಕು. ಅಂತಹ ಸನತ್ಕುಮಾರರನ್ನು ಕುರಿತು ಪರಾಪರತತ್ತ್ವ ವಿಷಯಕವಾದ ಶ್ರೇಷ್ಠವಾದ ಜ್ಞಾನವನ್ನು ಹೊಂದಲು ಬಯಸಿ ಧೃತರಾಷ್ಟ್ರನು ಪ್ರಶ್ನೆ ಮಾಡಿದನು. 'ಪರಮಾಂ' ಎಂಬ ಶಬ್ದಕ್ಕೆ 'ಪರ' ಎಂದರೆ ಪೂರ್ಣಾನಂದ ಅದ್ವಿತೀಯತ್ವಾದಿ ಗುಣವಿಶಿಷ್ಟನಾದ ಜಗತ್ತಿಗಿಂತ ಅತ್ಯಂತ ಭಿನ್ನನಾದ ಭಗವಂತನು, 'ಮಾ' ಎಂದರೆ ಯಾವುದರಿಂದ ತಿಳಿಯಲ್ಪಡುತ್ತಾನೆಯೋ ಅಂತಹ ಶ್ರೇಷ್ಠವಾದ ಎಂದು ಅರ್ಥ. ಅದು ವಿದ್ಯೆ ಎಂಬುದಕ್ಕೆ ವಿಶೇಷಣ. ಕೆಲವು ಪುಸ್ತಕಗಳಲ್ಲಿ ಸನತ್ಸುಜಾತ ಎಂಬುದಕ್ಕೆ ಬದಲಾಗಿ ಸನತ್ಕುಮಾರ ಎಂದೇ ಪಾಠವಿದೆ.

**ಧೃತರಾಷ್ಟ್ರಃ**

ಸನತ್ಸುಜಾತ ಯದಿಮಂ ಶೃಣೋಮಿ
ಮೃತ್ಯುರ್ಹಿ ನಾಸ್ತೀತಿ ತವೋಪದೇಶಮ್ ।
ದೇವಾಸುರಾಭ್ಯಂತರಚಾರಿಣಸ್ತೇ
ಅಮೃತ್ಯವೇ ತತ್ ಕತರನ್ನು ಸತ್ಯಮ್ ॥೨॥

ಧೃತರಾಷ್ಟ್ರ- ಹೀಗೆ ವಿದುರನ ಮುಖದಿಂದ ಒಳ್ಳೆಯ ನೀತಿಶಾಸ್ತ್ರವನ್ನು ಕೇಳಿದ ಧೃತರಾಷ್ಟ್ರನು ಪ್ರಾರಬ್ಧವಶದಿಂದ ದುಷ್ಟಪುತ್ರನಲ್ಲಿ ಸ್ನೇಹವನ್ನು ಹೊಂದಿ ಪರಾಪರ ತತ್ತ್ವ ಜ್ಞಾನವನ್ನು ಮರೆತರೂ ಪರಮಸಜ್ಜನನಾದ ವಿದುರನ ಸಹವಾಸದಿಂದ ಉಂಟಾದ

ತಾತ್ಕಾಲಿಕವಾದ ವಿಷಯವೈರಾಗ್ಯವನ್ನು ಹೊಂದಿ, ಸನತ್ಸುಜಾತರು ಉಪದೇಶ ಮಾಡುವ ಪರತತ್ತ್ವವನ್ನು ಕೇಳಲು ಬಯಸಿ, ಸನತ್ಸುಜಾತರಿಂದ ಹಿಂದೆ ಉಪದಿಷ್ಟವಾದ ಮೃತ್ಯುವು ಇಲ್ಲ ಎಂಬ ವಾಕ್ಯದ ಅಭಿಪ್ರಾಯವನ್ನು ತಿಳಿಯದೆ ಈ ಶ್ಲೋಕದಲ್ಲಿ ಆ ವಾಕ್ಯದ ಅಭಿಪ್ರಾಯವನ್ನು ಕುರಿತೇ ಪ್ರಶ್ನೆ ಮಾಡುತ್ತಾನೆ.

ಎಲೈ ಸನತ್ಸುಜಾತರೇ ಎಂದರೆ ಎಲೈ ಸನತ್ಕುಮಾರರೇ, ನೀವು ಶಿಷ್ಯರನ್ನು ಕುರಿತು ಮೃತ್ಯುವು ಇಲ್ಲ ಎಂದು ಉಪದೇಶವನ್ನು ಮಾಡಿದಿರಿ ಎಂಬ ವಿಷಯವನ್ನು ನಾನು ವಿದುರನಿಂದ ತಿಳಿದಿದ್ದೇನೆ. ಆದ್ದರಿಂದ ನಾನು ಲೋಕದಲ್ಲಿ ಯಾರಿಗೂ ಮೃತ್ಯುವಿಲ್ಲವೆಂದು ಭಾವಿಸುತ್ತೇನೆ. ಆದರೆ ಛಾಂದೋಗ್ಯ ಉಪನಿಷತ್ತಿನಲ್ಲಿ ಇಂದ್ರನು ಒಂದುನೂರು ವರ್ಷಗಳ ಕಾಲ ಬ್ರಹ್ಮದೇವರಲ್ಲಿ ಬ್ರಹ್ಮಚರ್ಯವನ್ನು ಮಾಡಿದನು. ಆಗ ದೇವತೆಗಳೂ ಮತ್ತು ಅಸುರರೂ ಜ್ಞಾನವನ್ನು ಪಡೆದರು ಎಂದು ಆರಂಭಿಸಿ ಅವರು ಮೂವತ್ತೆರಡು ವರ್ಷಗಳ ಕಾಲ ಬ್ರಹ್ಮಚರ್ಯವ್ರತವನ್ನು ಅನುಷ್ಠಾನ ಮಾಡಿದರು ಮುಂತಾದ ವಾಕ್ಯಗಳಿಂದ ಇಂದ್ರ-ವಿರೋಚನರಿಬ್ಬರೂ ಮೃತ್ಯುವನ್ನು ಪರಿಹಾರ ಮಾಡಿಕೊಳ್ಳಲು ಬ್ರಹ್ಮಚರ್ಯಾಚರಣ ಮೊದಲಾದವನ್ನು ಮಾಡಿದರೆಂದು ಕೇಳಿಬರುತ್ತದೆ. ಅಂತಹ ಶ್ರುತಿವಾಕ್ಯಕ್ಕೂ ತಮ್ಮ ಉಪದೇಶಕ್ಕೂ ವಿರೋಧ ಕಾಣುತ್ತದೆ. ಮೃತ್ಯುವು ಇದೆ ಎಂದು ತಿಳಿಯುತ್ತದೆ. ಮೃತ್ಯುವೇ ಇಲ್ಲದಿದ್ದರೆ ಅದರ ಪರಿಹಾರಕ್ಕಾಗಿ ಅವರು ಏಕೆ ಪ್ರಯತ್ನಪಡುತ್ತಾರೆ? ಆದ್ದರಿಂದ ಮೃತ್ಯುವು ಇದೆ ಮತ್ತು ಮೃತ್ಯುವಿಲ್ಲ ಎಂಬ ಎರಡು ಪಕ್ಷದಲ್ಲಿ ಯಾವುದು ಸತ್ಯವೆಂದು ನನಗೆ ನಿಶ್ಚಿತವಾಗಿ ಹೇಳಿ.

'ದೇವಾಸುರಾಭ್ಯಂತರಚಾರಿಣಃ' ಎಂಬ ಪದಕ್ಕೆ ದೇವತೆಗಳ ಮತ್ತು ಅಸುರರ ಹೃದಯದಲ್ಲಿ ಕಾಮರೂಪದಿಂದ ಸಂಚರಿಸುವ ನಿಮಗೆ ಎಂದು ಅರ್ಥ. ಸನತ್ಕುಮಾರರು ಕಾಮಾವತಾರರಾದ್ದರಿಂದ ಮತ್ತು ಸನತ್ಕುಮಾರನಾಮಕನಾದ ಪರಮಾತ್ಮನು ಸರ್ವಾಂತರ್ಯಾಮಿಯಾದುದರಿಂದ ದೇವತೆಗಳ ಮತ್ತು ಅಸುರರ ಮನಸ್ಸಿನಲ್ಲಿ ಸಂಚರಿಸುವ ನಿಮಗೆ ಎಲ್ಲವೂ ತಿಳಿದಿದೆ ಎಂದು ಅಭಿಪ್ರಾಯ. ಆದ್ದರಿಂದ ಮೃತ್ಯುವೇ ಇಲ್ಲದಿದ್ದರೆ ಮೃತ್ಯು ಪರಿಹಾರಕ್ಕಾಗಿ ದೇವತೆಗಳು ಏಕೆ ಅಮೃತಪಾನವನ್ನು ಮಾಡಿದರು? ಅಸುರರು ರುದ್ರಾದಿಗಳನ್ನು ಕುರಿತು ಏಕೆ ಉಗ್ರವಾದ ತಪಸ್ಸನ್ನು ಮಾಡಿದರು? ಎಂದು ಪ್ರಶ್ನೆಯ ಅಭಿಪ್ರಾಯ.

## ಸನತ್ಸುಜಾತಃ

**ಅಮೃತ್ಯುಃ ಕರ್ಮಣಾ ಕೇಚಿನ್ಮೃತ್ಯುರ್ನಾಸ್ತೀತಿ ಚಾಪರೇ ।**
**ಶೃಣು ಮೇ ಬ್ರುವತೋ ರಾಜನ್ ಯಥೈತನ್ಮೇ ವಿಶಂಕಿಥಾಃ ॥೩॥**

ಸನತ್ಸುಜಾತ– ಹೀಗೆ ಧೃತರಾಷ್ಟ್ರನಿಂದ ಕೇಳಲ್ಪಟ್ಟು ಮೃತ್ಯುವು ಇದೆ ಮತ್ತು ಮೃತ್ಯುವು ಇಲ್ಲ ಎಂಬ ಎರಡು ಪಕ್ಷಗಳು ಬೇರೆ ಬೇರೆ ಜ್ಞಾನಿಗಳಿಗೆ ಬೇರೆ ಬೇರೆ ದೃಷ್ಟಿಗಳಿಂದ ಸಮ್ಮತವಾಗಿದೆ ಎಂದು ಹೇಳುವವರಾಗಿ ಆ ಜ್ಞಾನಿಗಳ ಅಭಿಪ್ರಾಯವನ್ನು ಹೇಳುವುದಕ್ಕಾಗಿ ಇಲ್ಲಿ ಪ್ರತಿಜ್ಞೆಯನ್ನು ಮಾಡುತ್ತಾರೆ.

ಎಲೈ ರಾಜನೇ, ಯದ್ಯಪಿ ಮೃತ್ಯುವಿದೆ. ಆದರೂ ವೇದೋದಿತಕರ್ಮರೂಪವಾದ ತನಗೆ ಉಚಿತವಾದ ಕರ್ಮಾನುಷ್ಠಾನದಿಂದ ಮೃತ್ಯುವಿನ ಅಭಾವವು ಉಂಟಾಗುತ್ತದೆ ಎಂದು ಕೆಲವು ಜ್ಞಾನಿಗಳು ಹೇಳುತ್ತಾರೆ ಅಥವಾ ಅಮೃತ್ಯು ಎಂದರೆ ಸಂಸಾರಾಭಾವರೂಪ ಮೋಕ್ಷವು, ಕರ್ಮ ಎಂದರೆ ಸರ್ವಕರ್ತೃವಾದ ಸರ್ವಜ್ಞನಾದ ಪರಮಾತ್ಮನ ಅನುಗ್ರಹದಿಂದ ಉಂಟಾಗುತ್ತದೆ ಎಂದು ಅಭಿಪ್ರಾಯಪಡುತ್ತಾರೆ. ಇನ್ನು ಕೆಲವು ಜ್ಞಾನಿಗಳು ಮೃತ್ಯುವೇ ಇಲ್ಲವೆಂದು ಹೇಳುತ್ತಾರೆ. ಇವೆರಡು ಪರಸ್ಪರ ವಿರುದ್ಧವಾಗಿ ತೋರುವ ಪಕ್ಷಗಳಿಗೆ ಹೇಗೆ ವಿರೋಧವಿಲ್ಲ ಎಂದು ನಾನು ಹೇಳುತ್ತೇನೆ. ನನ್ನ ಮಾತಿನಲ್ಲಿ ಸಂಶಯವನ್ನು ಪಡದೆ ಅದನ್ನು ಕೇಳುವವನಾಗು.

**ಉಭೇ ಸತ್ಯೇ ಕ್ಷತ್ರಿಯಾದ್ಯ ಪ್ರವೃತ್ತೇ**
**ಮೋಹೋ ಮೃತ್ಯುಃ ಸಮ್ಮತೋ ಯಃ ಕವೀನಾಮ್ ।**
**ಪ್ರಮಾದಂ ವೈ ಮೃತ್ಯುಮಹಂ ಬ್ರವೀಮಿ**
**ಸದಾऽಪ್ರಮಾದಮಮೃತತ್ವಂ ಬ್ರವೀಮಿ ॥೪॥**

ಈ ಶ್ಲೋಕಗಳಲ್ಲಿ ದೇಹವಿಯೋಗರೂಪವಾದ ಮರಣವು ಮೃತ್ಯುಶಬ್ದದ ಅರ್ಥವೆಂದು ಅಭಿಪ್ರಾಯವಲ್ಲ. ಏಕೆಂದರೆ ದೇಹ-ವಿಯೋಗರೂಪವಾದ ಮರಣವು ಬ್ರಹ್ಮದೇವರಿಂದ ಆರಂಭಿಸಿ ಎಲ್ಲರಿಗೂ ಪ್ರತ್ಯಕ್ಷಸಿದ್ಧವಾಗಿದೆ. ಆದರೆ ಸ್ವತಃ ಅಚ್ಛೇದ್ಯನೂ ಅಭೇದ್ಯನೂ ಆದ ಸಂಸಾರಿಜೀವನಿಗೆ ಈಶ್ವರನ ಇಚ್ಛೆಯಿಂದ ಒದಗಿದ ಸಂಸಾರವೇ ಮೃತ್ಯುರೂಪವಾದುದು ಎಂದು ಮೃತ್ಯುವು ಇದೆ ಎಂದು ಹೇಳುವ ಜ್ಞಾನಿಗಳ

ಅಭಿಪ್ರಾಯ. ಅಂತಹ ಸಂಸಾರವು ಈಶ್ವರೇಚ್ಛೆಯಿಂದ ಎಂದಾದರೂ ಒಂದು ದಿನ ಅವಶ್ಯವಾಗಿ ನಾಶವನ್ನು ಹೊಂದುವುದರಿಂದ ಜೀವನಾದರೂ ನಾಶವನ್ನು ಹೊಂದದೆ ಉಳಿಯುವುದರಿಂದ ಮೃತ್ಯುವು ಇಲ್ಲ ಎಂಬುದು ಇನ್ನು ಕೆಲವು ಜ್ಞಾನಿಗಳ ಅಭಿಪ್ರಾಯ. ಹೀಗೆ ಎರಡು ಮತಗಳಿಗೂ ಅಭಿಪ್ರೇತವಾದ ಸತ್ಯತ್ವವನ್ನು ಅರ್ಧಶ್ಲೋಕದಿಂದ ಹೇಳಿ ತಮ್ಮ ಅಭಿಪ್ರಾಯವನ್ನು ಉಳಿದ ಅರ್ಧಶ್ಲೋಕದಿಂದ ಹೇಳುತ್ತಾರೆ.

ಎಲೈ ಕ್ಷತ್ರಿಯನೇ, ಅನಾದಿಕಾಲದಿಂದ ಉಂಟಾಗಿರುವ ಮೃತ್ಯುವು ಇದೆ ಮತ್ತು ಇಲ್ಲ ಎಂಬ ಎರಡು ಪಕ್ಷಗಳೂ ಸತ್ಯವಾದವುಗಳೇ. ಪರಸ್ಪರವಿರುದ್ಧವಾದ ಎರಡು ಧರ್ಮಗಳು ಒಂದೇ ಅಧಿಕರಣದಲ್ಲಿ ಇರುವುದು ಹೇಗೆ ವಿರುದ್ಧವಾಗುವುದಿಲ್ಲ ಎಂದರೆ ಆ ಮಾತಿನ ಅಭಿಪ್ರಾಯವನ್ನು ಹೇಳುತ್ತಾರೆ.

'ಮೃತ್ಯು' ಎಂದರೆ ಮೋಹ. ಮೋಹ ಎಂದರೆ ಚಿತ್ತವೈಕಲ್ಯ ಎಂಬುದು 'ಮುಹ' ಧಾತುವಿನಿಂದ ಲಬ್ಧವಾದ ಅರ್ಥ. ಮುಕ್ತಿಯೋಗ್ಯರಾದ ಸಾತ್ವಿಕಜೀವರು ಸ್ವಬಿಂಬೋಪಾಸನೆಯನ್ನು ಬಿಟ್ಟು ದೇಹ-ಗೇಹಾದಿಗಳಲ್ಲಿ ಅಭಿಮಾನವುಳ್ಳ ಕಾರಣದಿಂದ ಒದಗಿಬರುವ ಸಂಸಾರವೇ ಅವರಿಗೆ ಮೃತ್ಯು. ತಮೋಧಿಕಾರಿಗಳು ತಮಗೂ ಮತ್ತು ತಮ್ಮ ಬಿಂಬನಿಗೂ ಐಕ್ಯೋಪಾಸನೆಯನ್ನು ಮುಖ್ಯವಾಗಿ ಮಾಡಿ, ಜೊತೆಗೆ ವೇದವಿಹಿತವಾದ ಧರ್ಮವನ್ನು ಆಚರಿಸಿ, ವಿಪರೀತ ಜ್ಞಾನ ಮೂಲಕವಾಗಿ ಒದಗಿ ಬಂದ ಸಂಸಾರವೇ ಅವರಿಗೆ ಮೃತ್ಯು. ಅಂತಹ ಮೃತ್ಯುವು ಎಲ್ಲರಿಗೂ ಇದೆ ಎಂದು ಅಸ್ತಿತ್ವವಾದಿಗಳ ಅಭಿಪ್ರಾಯ. ನಾಸ್ತಿತ್ವವಾದಿಗಳ ಪಕ್ಷದಲ್ಲಿ ಅಮೃತ್ಯು ಮತ್ತು ಅಮೋಹ ಎಂದು ಪದಚ್ಛೇದ. ಅಮೋಹ ಎಂದರೆ ಬಾಹ್ಯ ಅಂತಃಕರಣದಲ್ಲಿರುವ ಸಂಶಯವಿಪರೀತಜ್ಞಾನಾಭಾವ ಅದರ ಅಭಾವವು ಮುಕ್ತಿದೆಶೆಯಲ್ಲಿರುತ್ತದೆ. ಅದೇ ಅಮೃತ್ಯು. ಎಂದರೆ ಮುಕ್ತಿದೆಶೆಯಲ್ಲಿ ಬಾಹ್ಯಾಂತಃಕರಣಗತವಾದ ಸಂಶಯವಿಪರ್ಯಯಗಳು ಇರುವುದಿಲ್ಲ. ಇದು ನಾಸ್ತಿತ್ವವಾದಿಗಳ ಅಭಿಪ್ರಾಯ. ಈ ಅಮೃತ್ಯುವಾದರೂ ಸಾತ್ವಿಕ, ರಾಜಸ, ತಾಮಸ ಜೀವರಿಗೆ ಸಮಾನವಾಗಿಯೇ ಇರುತ್ತದೆ. ಏಕೆಂದರೆ ಎಲ್ಲರಿಗೂ ಲಿಂಗಭಂಗಾನಂತರದಲ್ಲಿ ಪುನರಾವರ್ತಿಯು ಉಂಟಾಗುವುದಿಲ್ಲ. ಯದ್ಯಪಿ ಜ್ಞಾನಿಗಳಿಗೆ ಮೋಹ ಮತ್ತು ಅಮೋಹಗಳು ಮೃತ್ಯು ಮತ್ತು ಅಮೃತ್ಯುವೆಂದು ಸಮ್ಮತವಾಗಿದೆ. ನನಗೆ (ಸನತ್ಸುಜಾತರಿಗೆ) ಸಮ್ಮತವಾದ

ಮೃತ್ಯುವೆಂದರೆ ಪ್ರಮಾದ. ಪ್ರಮಾದ ಎಂದರೆ ಅನವಧಾನತೆ. ಎಂದರೆ ಎಲ್ಲ ಪ್ರಮಾದಗಳಿಗೂ ಕಾರಣವಾದ ಅಹಂಕಾರ ಎಂದರೆ ತನ್ನಲ್ಲಿ ಸ್ವತಂತ್ರಕರ್ತೃತ್ವರೂಪವಾದ ಮಿಥ್ಯಾಜ್ಞಾನವೇ ಪ್ರಮಾದ. ನನ್ನ ಅಭಿಪ್ರಾಯದಲ್ಲಿ ಅದೇ ಮೃತ್ಯು. ಏಕೆಂದರೆ ಅದು ಪುನರಾವರ್ತಿ ಇಲ್ಲದ ತಮಸ್ಸಿಗೆ ಕೊಂಡೊಯ್ಯುತ್ತದೆ. ಅಂತಹ ಮಿಥ್ಯಾಜ್ಞಾನರಾಹಿತ್ಯವನ್ನು ಅಮೃತ್ಯು ಎಂದು ಹೇಳುತ್ತೇನೆ. ಹಾಗಾದರೆ ಮೃತ್ಯುವೇ ಇಲ್ಲ ಎಂಬ ನಿಮ್ಮ ಮಾತಿಗೆ ಏನು ಅಭಿಪ್ರಾಯವೆಂದು ಕೇಳಿದರೆ ಸ್ವತಃ ಚಿದಾನಂದಾತ್ಮಕನಾದ ಸಾತ್ವಿಕಜೀವನಿಗೆ ಮತ್ತು ಸ್ವಭಾವತಃ ವಿಪರೀತ ಜ್ಞಾನಾನಂದಾತ್ಮಕನಾದ ತಾಮಸಜೀವರಿಗೆ ನಾವು ಹೇಳಿದ ಮೃತ್ಯುಶಬ್ದವಾಚಕವಾದ ಸಂಸಾರವು ಅಸ್ವಾಭಾವಿಕವಾದುದರಿಂದ ಮೃತ್ಯುವು ಇಲ್ಲ ಎಂದು ನನ್ನ ಅಭಿಪ್ರಾಯ. ಸ್ವಾಭಾವಿಕವಲ್ಲ ಎಂದು ತಾತ್ಪರ್ಯ.

ಪ್ರಮಾದಾದ್ವಾ ಅಸುರಾಃ ಪರಾಭವನ್
ಅಪ್ರಮಾದಾದ್ ಬ್ರಹ್ಮಭೂತಾಃ ಸುರಾಶ್ಚ।
ನ ವೈ ಮೃತ್ಯುರ್ವ್ಯಾಘ್ರ ಇವಾತ್ತಿ ಜಂತೂನ್
ನಾಪ್ಯಸ್ಯ ರೂಪಮುಪಲಭ್ಯತೇ ಹ ॥೫॥

ಅಹಂಕಾರ ಮತ್ತು ಅನಹಂಕಾರ ಎಂಬ ಪರ್ಯಾಯ ಶಬ್ದಗಳಿಂದ ವಾಚ್ಯವಾದ ಪ್ರಮಾದ ಮತ್ತು ಅಪ್ರಮಾದ ಶಬ್ದಗಳಿಂದ ಹೇಳಲ್ಪಟ್ಟ ಮೃತ್ಯು ಮತ್ತು ಅಮೃತ್ಯುಗಳು ಶತ್ರುವಿನಂತೆ ಕ್ರಮವಾಗಿ ಪರಾಭವಕ್ಕೂ ಮತ್ತು ಬ್ರಹ್ಮಭಾವಕ್ಕೂ ಕಾರಣಗಳೆಂದು ದೃಢೀಕರಿಸುತ್ತಾ, ದೇವಾಸುರರ ಸ್ವಭಾವವನ್ನೂ ಮತ್ತು ಅವರ ಗತಿಯನ್ನೂ ಈ ಶ್ಲೋಕದಲ್ಲಿ ಹೇಳುತ್ತಾರೆ.

'ಪ್ರಮಾದಾತ್' ಎಂದರೆ ವಿಶ್ವವು ಮಿಥ್ಯಾ, ಬ್ರಹ್ಮನು ನಿರ್ಗುಣ, ಜೀವನು ಬ್ರಹ್ಮಾಭಿನ್ನನು, ವೇದವು ಅಪ್ರಮಾಣ ಮೊದಲಾದ ಮಿಥ್ಯಾಜ್ಞಾನದಿಂದ ಎಂದು ಅರ್ಥ. 'ವಾ' ಶಬ್ದಕ್ಕೆ ಅವಧಾರಣೆಯು ಅರ್ಥ. ಎಂದರೆ ಇಂತಹ ಮಿಥ್ಯಾಜ್ಞಾನದಿಂದಲೇ ಅಸುರರು ಎಂದರೆ ವಿಷ್ಣುವೈಷ್ಣವದ್ವೇಷಿಗಳಾದ ಕಲಿ ಮೊದಲಾದ ದೈತ್ಯರು ಪರಾಭವವನ್ನು ಹೊಂದಿದರು. ಪರಾಭವವೆಂದರೆ ಈ ಲೋಕದಲ್ಲಿ ಪರಾಜಯಾದಿ ಅನಿಷ್ಟಗಳು ಮತ್ತು ಪರಲೋಕದಲ್ಲಿ ತಮಃಪ್ರಾಪ್ತಿರೂಪವಾದ ಅನಿಷ್ಟ

ಎಂದು ಅರ್ಥ. ಮುಖ್ಯಪ್ರಾಣ ಮೊದಲಾದ ದೇವತೆಗಳು ಅಪ್ರಮಾದದಿಂದ ಎಂದರೆ ವಿಶ್ವವು ಸತ್ಯ , ಹರಿಯು ಸ್ವತಂತ್ರಕರ್ತಾ, ಜೀವನು ಪಾರಮಾರ್ಥಿಕವಾಗಿ ಬ್ರಹ್ಮನಿಂದ ಭಿನ್ನನಾದವನು, ವೇದಗಳು ಸತ್ಯ ಮತ್ತು ಪ್ರಮಾಣ ಮೊದಲಾದ ತತ್ತ್ವಜ್ಞಾನದಿಂದ ಉಂಟಾದ ಈಶ್ವರಾನುಗ್ರಹಕ್ಕೆ ಪಾತ್ರರಾದ್ದರಿಂದ ಪ್ರಮಾದವನ್ನು ಹೊಂದದೆ ಬ್ರಹ್ಮಭೂತರಾದರು. ಎಂದರೆ ಬ್ರಹ್ಮನಲ್ಲೇ ನೆಟ್ಟಮನಸ್ಸುಳ್ಳವರೂ ಮತ್ತು ಮೋಕ್ಷದಲ್ಲಿ ಬ್ರಹ್ಮನಲ್ಲಿಯೇ ಸ್ಥಿತಿಯುಳ್ಳವರೂ ಆದರು. ಅಥವಾ ಮೋಕ್ಷದಲ್ಲಿ ಆನಂದಾದಿಗಳ ಅಭಿವೃದ್ಧಿಯನ್ನು ಹೊಂದಿದವರೂ ಆದರು ಎಂದೂ ಅರ್ಥ.

ಎಲ್ಲ ಜೀವರನ್ನೂ ಕೊಲ್ಲುವ ಮೃತ್ಯುವು ಇಲ್ಲಿ ಅಭಿಪ್ರೇತವಲ್ಲ. ಏಕೆಂದರೆ ಆಯುಸ್ಸು ಮುಗಿದಾಗ ಎಲ್ಲರಿಗೂ ದೇಹಪಾತವು ಅವಶ್ಯವಾಗಿ ಆಗಲೇಬೇಕು. ಮತ್ತು ಮೃತ್ಯುಶಬ್ದವಾಚ್ಯನಾದ ದೇವತೆಯೂ ಸಹ ಹರಿಯ ಆಜ್ಞೆಯಿಂದಲೇ ನಿಮಿತ್ತಮಾತ್ರನಾಗಿ ಜೀವರಿಗೆ ಮರಣವನ್ನು ಉಂಟುಮಾಡುತ್ತಾನೆ ಮತ್ತು ಮಹಾಪ್ರಳಯದಲ್ಲಿ ಆ ಮೃತ್ಯುದೇವತೆಗೂ ಮರಣವು ಇದೆ. ಅದೂ ಅಲ್ಲದೆ ಮರಣದೆಶೆಯಲ್ಲಿ ಆ ಮೃತ್ಯುದೇವತೆಯನ್ನು ಜೀವರೂ ನೋಡಿರುವುದಿಲ್ಲ. ಆದ್ದರಿಂದ ಇಲ್ಲಿ ಅದು ವಿವಕ್ಷಿತವಲ್ಲ. ಅದೂ ಅಲ್ಲದೆ ಆ ಮೃತ್ಯುದೇವತೆಯು ವ್ಯಾಘ್ರದಂತೆ ಕಣ್ಣೆದುರಿಗೆ ಬಂದು ಯಾವಾಗಲೂ ಜನರಿಗೆ ಮರಣವನ್ನು ಉಂಟುಮಾಡುವುದಿಲ್ಲ. ಆಯುಸ್ಸಿನ ಕ್ಷಯ ಉಂಟಾದಾಗಲೇ ಮರಣವನ್ನು ಉಂಟುಮಾಡುತ್ತದೆ. ಆ ಮೃತ್ಯುವಿನ ರೂಪವೂ ಸಹ ಯಾರಿಗೂ ಗೋಚರವಾಗುವುದಿಲ್ಲ. ಪ್ರಮಾದರೂಪವಾದ ಮೃತ್ಯುವಿನ ರೂಪವು ಮಾತ್ರ ಅದು ಅಸುರರ ಸ್ವರೂಪಕ್ಕಿಂತ ಅಭಿನ್ನವಾದುದರಿಂದ ಮೋಕ್ಷ ದೆಶೆಯಲ್ಲಿ ತೋರಿಯೇ ತೋರುತ್ತದೆ. ಆದ್ದರಿಂದ ಆ ಮೃತ್ಯುವೇ ಇಲ್ಲಿ ಅಭಿಪ್ರೇತವಾದುದು.

ಒಟ್ಟಿನಲ್ಲಿ ಪ್ರಸಿದ್ಧವಾದ ಮೃತ್ಯುವು ಇಲ್ಲಿ ವಿವಕ್ಷಿತವಲ್ಲ. ಇಲ್ಲಿ ಪ್ರಮಾದರೂಪವಾದ ಮೃತ್ಯುವೇ ಮೇಲೆ ಹೇಳಿದ ಕಾರಣದಿಂದಾಗಿ ವಿವಕ್ಷಿತವಾದುದು ಎಂದು ಅಭಿಪ್ರಾಯ.

ಭಾರತ ಶ್ರೀನಿವಾಸಾಚಾರ್ಯರು ಛಾಂದೋಗ್ಯಭಾಷ್ಯವನ್ನು ಉದಾಹರಿಸಿ ಅಪ್ರಮಾದದ ಲಕ್ಷಣವನ್ನು ಹೇಳಿರುತ್ತಾರೆ.

'ಅವಿಸ್ಮೃತಿಃ ಸದಾ ವಿಷ್ಣೋಃ ಅನ್ಯಥಾಜ್ಞಾನವರ್ಜನಂ
ಶಾಸ್ತ್ರಾಭ್ಯಾಸಃ ಸದೋದ್ಯೋಗಾತ್ ಶ್ರವಣಾಚ್ಚ ವಿರಾಗತಃ ।
ನಿಷಿದ್ಧಕರ್ಮಣಾಂ ತ್ಯಾಗಃ ಸ್ವಧರ್ಮಸ್ಯ ಕೃತಿಃ ಸದಾ
ಅಪ್ರಮಾದ ಇತಿ ಪ್ರೋಕ್ತಃ ಶಾಸ್ತ್ರಂ ವೇದಾಶ್ಚ ಪಂಚ ಚ ॥'

ಎಂದರೆ ಯಾವಾಗಲೂ ವಿಷ್ಣುವಿನ ಸ್ಮರಣೆ, ಅನ್ಯಥಾಜ್ಞಾನರಾಹಿತ್ಯ, ಪ್ರಯತ್ನಪೂರ್ವಕವಾಗಿ ವೈರಾಗ್ಯವೃತ್ತನಾಗಿ ಗುರುಮುಖಶ್ರವಣದಿಂದ ಶಾಸ್ತ್ರಾಭ್ಯಾಸ, ನಿಷಿದ್ಧಕರ್ಮಗಳ ತ್ಯಾಗ, ಸ್ವಧರ್ಮಾಚರಣೆ, ಇತಿಹಾಸಾದಿ ಸಹಿತವಾದ ಋಗಾದಿ ಐದುವೇದಗಳಲ್ಲಿ ಪ್ರಾಮಾಣ್ಯಬುದ್ಧಿ ಇದಕ್ಕೆ ಅಪ್ರಮಾದವೆಂದು ಹೆಸರು. ಬೃಹದಾರಣ್ಯಕ ಉಪನಿಷತ್ತಿನಲ್ಲಿ– **'ಮೃತ್ಯುರ್ವೈತಮಃ ಜ್ಯೋತಿರಮೃತಂ'** ಎಂದು ಹೇಳಿ ಅಜ್ಞಾನಕ್ಕೆ ಮೃತ್ಯುತ್ವವನ್ನು ಹೇಳಿದ್ದಾರೆ. ಏಕೆಂದರೆ **'ನ ಚೇದಿಹಾವೇದೀತ್ ಮಹತೀ ವಿನಷ್ಟಿಃ'** ಎಂದು ಇನ್ನೊಂದು ಉಪನಿಷತ್ತಿನಲ್ಲಿ ಅಜ್ಞಾನಕ್ಕೆ ಮಹಾವಿನಾಶ ಕಾರಣತ್ವವನ್ನು ಹೇಳಿದ್ದಾರೆ ಎಂದು ಭಾರತ ಶ್ರೀನಿವಾಸಾಚಾರ್ಯರು ನಿರೂಪಿಸಿದ್ದಾರೆ.

ಯಮಂ ತ್ವೇಕೇ ಮೃತ್ಯುಮತೋऽನ್ಯಮಾಹುಃ
ಆತ್ಮಾ ವಾಸೀದಮೃತಂ ಬ್ರಹ್ಮಚರ್ಯಮ್ ।
ಪಿತೃಲೋಕೇ ರಾಜ್ಯಮನುಶಾಸ್ತಿ ದೇವಃ
ಶಿವಃ ಶಿವಾನಾಮಶಿವೋऽಶಿವಾನಾಮ್ ॥೬॥

ಹೀಗೆ ಸನತ್ಸುಜಾತರು ಮೃತ್ಯುರೂಪವಾದ ಸಂಸಾರದ ಭಯವನ್ನು ಪರಿಹರಿಸಿ ಸ್ವರೂಪಾನಂದಾವಿರ್ಭಾವಕ್ಕೆ ಜ್ಞಾನವೇ ಸಾಧನವಾದುದು, ಇನ್ನು ಯಾವುದೂ ಅಲ್ಲ ಎಂದು ಶ್ರುತಿಯ ಸಮ್ಮತಿಯಿಂದ ಹೇಳಿದ ಮೇಲೆ ಆ ಜ್ಞಾನ ಮಹಿಮೆಯನ್ನು ಕೇಳಿದ ಧೃತರಾಷ್ಟ್ರನು ದುಃಖದ ಪರಿಹಾರ ಮತ್ತು ಸುಖಪ್ರಾಪ್ತಿಗಾಗಿ ಶ್ರುತಿಯಲ್ಲಿ ಹೇಳಿದ ಜ್ಯೋತಿಷ್ಟೋಮಾದಿ ಯಾಗವನ್ನು ಮಾಡುವುದರಿಂದ ಉಂಟಾದ ಪುಣ್ಯದಿಂದಲೇ ಅಂತಹ ಸುಖರೂಪವಾದ ಸ್ವರ್ಗಾದಿ ಲೋಕಪ್ರಾಪ್ತಿಯು ಕೇಳಿಬರುವುದರಿಂದ ಜ್ಞಾನವೇ ಮುಖ್ಯಕಾರಣ, ಬೇರೆ ಯಾವುದೂ ಅಲ್ಲ ಎಂದು ನಿರ್ಧಾರವನ್ನು ಮಾಡಲು ಹೇಗೆ ಸಾಧ್ಯ ವುತ್ತು **'ನಾನ್ಯಃ ಪಂಥಾ ಅಯನಾಯ ವಿದ್ಯತೇ'** ಎಂಬ ಮುಖ್ಯಸಾಧನತ್ವವನ್ನು ಹೇಳುವ ಶ್ರುತಿವಾಕ್ಯಕ್ಕೂ **'ಜ್ಯೋತಿಷ್ಟೋಮೇನ ಸ್ವರ್ಗಕಾಮೋ ಯಜೇತ'** ಎಂಬ ಜ್ಯೋತಿಷ್ಟೋಮಕ್ಕೆ ಸ್ವರ್ಗಸುಖಸಾಧನತ್ವವನ್ನು ಹೇಳುವ ಶ್ರುತಿವಾಕ್ಯಕ್ಕೂ

ಪರಸ್ಪರ ವಿರೋಧವು ಬರುವುದರಿಂದ ಜ್ಞಾನಿಗಳ ಪ್ರವೃತ್ತಿಯು ಯಾವ ರೀತಿ ಇರುತ್ತದೆ ಎಂದು ಪ್ರಶ್ನೆ ಮಾಡುತ್ತಾನೆ.

ಹೀಗೆ ಕೇಳಲ್ಪಟ್ಟ ಸನತ್ಸುಜಾತರು ಅಧ್ಯಾತ್ಮದೃಷ್ಟಿಯಿಂದ ಪ್ರಮಾದರೂಪವಾದ ಮಿಥ್ಯಾಜ್ಞಾನವೇ ಮೃತ್ಯುಶಬ್ದದ ಅರ್ಥ ಎಂದು ಹೇಳಿ ಈಗ ಈ ಶ್ಲೋಕದಲ್ಲಿ ಮುಖ್ಯಾಮುಖ್ಯಮೃತ್ಯುಗಳನ್ನೂ ಮತ್ತು ಅಂತಹ ಯಾವ ಮೃತ್ಯುವೂ ಇಲ್ಲದ ಭಗವಂತನ ಸ್ವರೂಪವನ್ನೂ ಉಪದೇಶ ಮಾಡುತ್ತಾರೆ. ಕೆಲವು ಜ್ಞಾನಿಗಳು ಯಮನನ್ನು ಸರ್ವಜನಮಾರಕನಾದ ಮೃತ್ಯುದೇವತೆ ಎಂದು ಹೇಳುತ್ತಾರೆ. ಅವನು ಮುಖ್ಯನಾದ ಮೃತ್ಯು . ಏಕೆಂದರೆ ಅಮುಖ್ಯಮಾರಕರಾದ ಯಮನ ತಮ್ಮನಿಗೂ ಮೃತ್ಯುಶಬ್ದವಾಚ್ಯತ್ವ ಇರುವುದರಿಂದ ಯಮನು ಮುಖ್ಯವಾದ ಮೃತ್ಯು ಎಂದು 'ತು' ಶಬ್ದವು ಸೂಚಿಸುತ್ತದೆ. ಅಥವಾ ನರಸಿಂಹನು ಮೃತ್ಯುವಿಗೂ ಮಾರಕನಾದ ಮೃತ್ಯುವು ಎಂಬ ಪ್ರಮಾಣವಿರುವುದರಿಂದ ಭಗವಂತನ ಸ್ವರೂಪವನ್ನು ತಿಳಿದ ಇನ್ನೂ ಕೆಲವು ಜ್ಞಾನಿಗಳು ಮೃತ್ಯುಶಬ್ದವಾಚ್ಯರಾದ ಯಮಾದಿಗಳಿಗಿಂತಲೂ ಭಿನ್ನನಾದ ನರಸಿಂಹನನ್ನೇ ಮುಖ್ಯವಾದ ಮೃತ್ಯು ಎಂದು ಹೇಳುತ್ತಾರೆ. ಯಮ ಎಂದರೆ ಸರ್ವಪ್ರೇರಕನಾದ ನರಸಿಂಹ ಎಂದು ಅರ್ಥ. 'ಆತ್ಮಾ ವಾ ಇದಮೇಕನ್ಯ ಏವ ಅಗ್ರ ಆಸೀತ್' ಎಂಬ ಶ್ರುತಿಯಿಂದಲೂ 'ಶಿಷ್ಯತೇ ಅಶೇಷಸಂಜ್ಞಃ' ಎಂಬ ಭಾಗವತ ಸ್ಮೃತಿಯಿಂದಲೂ ಈ ಅರ್ಥವು ಸೂಚಿತವಾಗುತ್ತದೆ ಎಂದು ತಿಳಿಸಲು 'ಆತ್ಮಾವಾಸೀತ್' ಎಂದು ಪ್ರತ್ಯೇಕ ಗ್ರಹಣವನ್ನು ಮಾಡಿದ್ದಾರೆ. ಎಂದರೆ ಜಗತ್ತಿನ ಉತ್ಪತ್ತಿಗಿಂತಲೂ ಮೊದಲೇ ಮಹಾಪ್ರಳಯದಲ್ಲಿ ಪೂರ್ಣಸಚ್ಚಿದಾನಂದಾತ್ಮಕನಾಗಿ ಮುಖ್ಯತಃ ಸರ್ವಸ್ವತಂತ್ರನಾಗಿ ಇರುವವನು ಎಂದು ಅರ್ಥ. 'ಅಮೃತಮ್' ಎಂದರೆ ಮೃತ ಪದದಿಂದ ಹೇಳಲ್ಪಟ್ಟ ಅನೇಕ ವಿಧವಾದ ವಸ್ತುಗಳಿಗಿಂತಲೂ ವಿಲಕ್ಷಣ ಎಂದು ಅರ್ಥ. 'ತದೇವ ಸತ್ಯಮಮೃತಂ ತದ್ಬ್ರಹ್ಮ ತದಾಹುಃ' ಎಂಬ ಶ್ರುತಿಯು ಅವನನ್ನು ಅಮೃತನೆಂದು ಹೇಳುವುದಷ್ಟೆ? ಅಮೃತಶಬ್ದಕ್ಕೆ ನಾನಾವಿಧಮೃತ್ಯುರಹಿತನಾದವನು ಎಂದು ಅರ್ಥಮಾಡಬಹುದು. ಬ್ರಹ್ಮಚರ್ಯ ಎಂಬ ಶಬ್ದದಲ್ಲಿ ಬ್ರಹ್ಮ ಎಂದರೆ ವೇದಗಳು. ಅದರಿಂದ ಚರ್ಯನಾದವನು ಜ್ಞೇಯನಾದವನು ಎಂದು ಒಂದು ಅರ್ಥ. ಅಥವಾ 'ಚರ ಗತಿ ಭಕ್ಷಣಯೋಃ' ಎಂದು ಧಾತುವಿರುವುದರಿಂದ ಚರ್ಯ ಎಂದರೆ ಸರ್ವಭಕ್ಷಕ. ಬ್ರಹ್ಮ ಎಂದರೆ ಪೂರ್ಣ ಎಂದು ಅರ್ಥ.

ಇಂತಹ ನರಸಿಂಹನಾಮಕನಾದ ವಸ್ತುವು ಪಿತೃಲೋಕದಲ್ಲಿ ಎಂದರೆ ಯಮಲೋಕದಲ್ಲಿ ಇದ್ದು ಯಮಾದಿಗಳನ್ನು ಅನುಶಾಸನ ಮಾಡುತ್ತದೆ ಮತ್ತು ಸರ್ವಸಂಹಾರವನ್ನೂ ಮಾಡುತ್ತದೆ. 'ರಾಮೋ ಯಮಸಭಾತಲೇ' ಎಂಬ ವಚನವಿರುವುದರಿಂದ ಯಮಲೋಕದಲ್ಲಿ ರಾಮಚಂದ್ರರೂಪಿಯಾದ ಪರಮಾತ್ಮನಿದ್ದಾನೆ ಅಥವಾ 'ನೃಸಿಂಹೋ ಬ್ರಹ್ಮಸದನೇ ರಾಮೋ ಯಮಸಭಾತಲೇ ಉಪೇಂದ್ರಶ್ಚಾವುರಾವತ್ಯಾಂ ಸ್ಥಿತ್ವಾ ತತ್ರಾನುಶಾಸ್ತಿ ಹಿ' (ನರಸಿಂಹನು ಬ್ರಹ್ಮಸದನದಲ್ಲಿಯೂ ರಾಮಚಂದ್ರನು ಯಮಸಭೆಯಲ್ಲಿಯೂ, ಉಪೇಂದ್ರನು ಅಮರಾವತಿಯಲ್ಲಿಯೂ ಇದ್ದು ಅಲ್ಲಲ್ಲಿ ಅನುಶಾಸನ ಮಾಡುತ್ತಾರೆ) ಎಂಬ ವಚನವಿರುವುದರಿಂದ ಪಿತೃಲೋಕೇ ಎಂದರೆ ಸತ್ಯಲೋಕ ಎಂದೂ ಅರ್ಥವನ್ನು ಮಾಡಬಹುದು. ಏಕೆಂದರೆ ಆದಿವರಾಹದೇವರು ಚತುರ್ಮುಖಬ್ರಹ್ಮದೇವರ ನಾಸಿಕದಿಂದ ಹೊರಗೆ ಬಂದುದರಿಂದ ಚತುರ್ಮುಖದೇವರು ಆದಿವರಾಹನ ಪಿತೃಗಳು. ಪಿತೃಲೋಕ ಎಂದರೆ ಅವರ ಲೋಕವಾದ ಸತ್ಯಲೋಕ. ಅಲ್ಲಿ ಅನುಶಾಸನ ಮಾಡುತ್ತಾರೆ ಎಂದರೆ ಬ್ರಹ್ಮದೇವರ ಸಹಭೋಗರೂಪವಾದ ರಾಜ್ಯವನ್ನು ಅನುಶಾಸನ ಮಾಡುತ್ತಾರೆ ಎಂದು ಅರ್ಥ. ಬ್ರಹ್ಮಪುತ್ರ ಎಂದು ಹೇಳಿದುದರಿಂದ ಕ್ರೀಡಾದಿ ಗುಣವಿಶಿಷ್ಟನಾದ ಪರಮಾತ್ಮನಿಗೆ ಯಾವ ದೋಷವೂ ಇಲ್ಲ ಎಂದು ಸೂಚನೆ ಮಾಡಲು ದೇವ ಎಂಬ ಪದವನ್ನು ಪ್ರಯೋಗಿಸಿದ್ದಾರೆ. ಸತ್ಯಲೋಕದಲ್ಲಿ ಪರಮಾತ್ಮನು ಬ್ರಹ್ಮದೇವರಿಂದ ಪೂಜಿಸಲ್ಪಟ್ಟು ವಾಸಿಸುತ್ತಾನೆ ಎಂಬ ವಿಷಯವು '**ಅತೋಸುರಾಣಾಂ ಪ್ರವರಃ ಸುರಾರ್ಚಿತಃ ಸ್ವಯೇಕತನ್ವಾನ್ಯವಸತ್ಸುರಾಲಯೇ**' ಮೊದಲಾದ ಪ್ರಮಾಣಗಳಿಂದ ಸಿದ್ಧವಾಗಿದೆ. ಯಮಾದಿಲೋಕದಲ್ಲಿ ಇರುವ ನರಸಿಂಹರೂಪಿಯಾದ ನಾರಾಯಣನು ರಾಜ್ಯಾನುಶಾಸನವನ್ನು ಮಾಡುವ ಕ್ರಮವನ್ನು ಈ ಶ್ಲೋಕದ ನಾಲ್ಕನೆಯ ಪಾದದಿಂದ ಹೇಳುತ್ತಾರೆ. ಯಮಲೋಕಗತನಾದ ರಾಮಚಂದ್ರನು ಅಲ್ಲಿಗೆ ಬಂದ ಪುಣ್ಯಶೀಲರಾದ ಪ್ರಾಣಿಗಳಿಗೆ ಮಾಂಗಲ್ಯವನ್ನು ಉಂಟುಮಾಡುವವನಾಗಿ ಸ್ವರ್ಗಾದಿಲೋಕಗಳನ್ನು ಕೊಡುತ್ತಾನೆ. ಅಶಿವರಿಗೆ ಎಂದರೆ ಪಾಪಶೀಲರಿಗೆ ಭಯಂಕರ ರೂಪವನ್ನು ತೋರಿಸಿ ನರಕಯಾತನೆಗಳನ್ನು ನೀಡುತ್ತಾನೆ. ಸತ್ಯಲೋಕದಲ್ಲಿರುವ ಪರಮಾತ್ಮನೂ ಸಹ ಸತ್ಯಲೋಕಕ್ಕೆ ಬಂದ ಮುಕ್ತಿಯೋಗ್ಯರಿಗೆ ಮುಕ್ತಿರೂಪವಾದ ಮಂಗಳವನ್ನು ಕೊಡುತ್ತಾನೆ. ಅಶಿವರಾದ ತಾಮಸರಿಗೆ ಅವನು ತಮಸ್ಸು ಮೊದಲಾದವುಗಳನ್ನು ಕೊಡುತ್ತಾನೆ. ಇಂತಹ

ನಾರಾಯಣನೇ ನೃಸಿಂಹ ಮೊದಲಾದ ರೂಪದಿಂದ ಸರ್ವಮಾರಕಮೃತ್ಯುಶಬ್ದದಿಂದ ಮುಖ್ಯವಾಗಿ ವಾಚ್ಯನಾದವನು ಎಂದು ಸಿದ್ಧವಾಗುತ್ತದೆ.

**ಅಸ್ಯಾದೇಶಾನ್ನಿಃಸರತೇ ನರಾಣಾಂ (ಆಸ್ಯಾದೇಷ....)**
**ಕ್ರೋಧಃ ಪ್ರಮಾದೋ ಮೋಹರೂಪಶ್ಚ ಮೃತ್ಯುಃ ।**
**ಅಹಂಗತೇನೈವ ಚರನ್ ವಿಮಾರ್ಗಾನ್**
**ನ ಚಾತ್ಮನೋ ಯೋಗಮುಪೈತಿ ಕಶ್ಚಿತ್** ॥೭॥

ಸನತ್ಸುಜಾತರು ಹೀಗೆ ಪ್ರಸಂಗದಿಂದ ಪ್ರಾಪ್ತವಾದ ನಿತ್ಯಸಿದ್ಧನಾದ ನರಸಿಂಹರೂಪನಾದ ಮೃತ್ಯುದೇವತೆಯ ಸ್ವರೂಪವನ್ನು ಹೇಳಿ ಈಗ ತಾವು ಹೇಳಿದ ಮಿಥ್ಯಾಜ್ಞಾನರೂಪವಾದ ಪ್ರಮಾದವೇ ಮೃತ್ಯು ಎಂಬುದಕ್ಕೆ ಸಂಬಂಧಿಸಿದಂತೆ ಅಂತಹ ಮೃತ್ಯುವಿನ ಉತ್ಪತ್ತಿಕಾರಣವನ್ನೂ, ಕ್ರೋಧ-ಮೋಹಗಳು ಮೃತ್ಯುವಿನ ಅಂಶವೆಂಬುದನ್ನೂ, ಅವುಗಳ ಸಂಬಂಧದಿಂದಲೇ ಜೀವನು ಅಜ್ಞಾನದಿಂದ ದುರ್ಮಾರ್ಗದಲ್ಲಿ ಪ್ರವೃತ್ತನಾಗುತ್ತಾನೆಂಬುದನ್ನೂ ಇಲ್ಲಿ ತಿಳಿಸುತ್ತಾರೆ. ಈ ಪ್ರಮಾದಾತ್ಮಕವಾದ ಮೃತ್ಯುವು ಜೀವನ ಅನಾದಿಕಾಲದಿಂದ ಪ್ರಾಪ್ತವಾದ ಲಿಂಗದೇಹ ಸಂಬಂಧದಿಂದ ಉಂಟಾದ ತನ್ನಲ್ಲಿ ಇಲ್ಲದಿರುವ ಮಿಥ್ಯಾಭೂತವಾದ ಸ್ವಾತಂತ್ರ್ಯರೂಪವಾದ ಅಹಂಕಾರದಿಂದ ಉತ್ಪನ್ನವಾಗುತ್ತದೆ. ದುರಹಂಕಾರವು ಆಸ್ಯಶಬ್ದವಾಚ್ಯ ಎಂಬ ವಿಷಯದಲ್ಲಿ 'ಸರ್ವದಾಕ್ಷೇಪಸಂಯೋಗಾತ್ ಅಸುಧಾತು ಸಮನ್ವಯಾತ್ । ಆಸ್ಯಇಚ್ಚತೇ ಘೋರಃಹ್ಯಹಂಕಾರೋ ಸುಷು ಸ್ಥಿತಃ' (ಅಸುನಿರಶನ ಎಂಬ ಧಾತುಪಾಠ ಇರುವುದರಿಂದ ಯಾವಾಗಲೂ ಇನ್ನೊಬ್ಬರ ಆಕ್ಷೇಪದಿಂದ ಕೂಡಿರುವುದರಿಂದ ಜೀವರಲ್ಲಿರುವ ಘೋರವಾದ ಅಹಂಕಾರವು ಆಸ್ಯ ಎಂದು ಹೇಳಲ್ಪಡುತ್ತದೆ) ಎಂಬ ಪ್ರಮಾಣ ಇರುವುದರಿಂದ 'ಆಸ್ಯ' ಶಬ್ದಕ್ಕೆ ಅಹಂಕಾರ ಎಂಬ ಅರ್ಥವನ್ನು ಮಾಡಿದ್ದಾಯಿತು. ಅಥವಾ **'ಅಸ್ಯಾದೇಶಾತ್'** ಎಂಬ ಪಾಠವನ್ನು ಇಟ್ಟುಕೊಂಡರೆ 'ಅಸ್ಯ' ಎಂದರೆ ಈ ಸರ್ವಸ್ವಾಮಿಯಾದ ನಾರಾಯಣನ 'ಆದೇಶಾತ್' ಆಜ್ಞಾಶಕ್ತಿಯಿಂದಲೇ, ನಿಸ್ಸರತೇ- ಈ ಪ್ರಮಾದರೂಪವಾದ ಮೃತ್ಯುವು ಉತ್ಪನ್ನವಾಗುತ್ತದೆ. ಇಲ್ಲಿಯೂ ಕೂಡ ಮೋಹರೂಪಶ್ಚ ಎಂಬಲ್ಲಿರುವ ಚಶಬ್ದದಿಂದ ಲಿಂಗದೇಹದ ಸಂಬಂಧವೇ ಇನ್ನೊಂದು ಕಾರಣ ಎಂದು ತಿಳಿಯಬೇಕು. ಈ

ಪ್ರಮಾದವಾದರೂ ಕ್ರೋಧ ಮತ್ತು ಮೋಹರೂಪವಾದುದು. ಈ ಜೀವನು 'ಅಹಂಗತೇನ' ಎಂದರೆ ಮಿಥ್ಯಾಭೂತವಾದ ಅಹಂಕಾರದಿಂದ ಉಂಟಾದ ಪ್ರಮಾದರೂಪವಾದ ಮೃತ್ಯುವಿನ ಸಂಬಂಧದಿಂದಲೇ, ವಿಮಾರ್ಗಾನ್- ಶ್ರುತಿಸ್ಮೃತಿ ವಿರುದ್ಧವಾದ ಅನೇಕ ವಿಧವಾದ ದುರ್ಮಾರ್ಗಗಳನ್ನು, ಚರನ್- ಆಚರಿಸುತ್ತಾನೆ. ಆತ್ಮನಃ- ಪರಮಾತ್ಮನ ವಿಷಯದಲ್ಲಿ, ಯೋಗಂ- ಜ್ಞಾನಯೋಗ, ಭಕ್ತಿಯೋಗ ಮತ್ತು ಕರ್ಮಯೋಗಗಳಲ್ಲಿ ಒಂದು ಯೋಗವನ್ನೂ ಸಹ, ನೋಪಯಾತಿ- ಹೊಂದುವುದಿಲ್ಲ. 'ಆತ್ಮಾವಾರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿಧಿದ್ಯಾಸಿತವ್ಯಃ' ಎಂಬ ಶ್ರುತಿಯಲ್ಲಿ ಹೇಳಿದಂತೆ ಶ್ರವಣ, ಮನನ, ಧ್ಯಾನಗಳಲ್ಲಿ ಒಂದು ಉಪಾಯವನ್ನೂ ಅನುಷ್ಠಾನವನ್ನು ಮಾಡುವುದಿಲ್ಲ. ರಾಜಸತಾಮಸರು ಮಿಶ್ರಿತ ಜ್ಞಾನವುಳ್ಳವರಾದ್ದರಿಂದ ಅವರಿಗೆ ಇದು ಸಹಜವಾದರೂ, ಕಶ್ಚಿತ್- ಸುಖಜ್ಞಾನಸ್ವರೂಪನಾದ ಸಾತ್ವಿಕಜೀವನೂ ಸಹ ಲಿಂಗದೇಹ ಇರುವವರೆಗೆ ಕರ್ಮನಿಬಂಧನೆಗೊಳಗಾಗಿ, ಸಂಸಾರದೆಶೆಯಲ್ಲಿ ಅಹಂಕಾರವನ್ನು ಹೊಂದಿದವನಾಗಿ, ದುರ್ಮಾರ್ಗಗಳಲ್ಲಿ ಸಂಚರಿಸುತ್ತಾ ಭಗವಂತನ ತತ್ತ್ವಜ್ಞಾನವನ್ನು ಶೀಘ್ರವಾಗಿ ಹೊಂದುವುದಿಲ್ಲ ಎಂದು ಅಭಿಪ್ರಾಯ.

ತೇ ಮೋಹಿತಾಸ್ತದ್ವಶೇ ವರ್ತಮಾನಾ
ಇತಃ ಪ್ರೇತಾಸ್ತತ್ರ ಪುನಃ ಪತಂತಿ ।
ತತಸ್ತಂ ದೇವಾ ಽನುಪರಿಪ್ಲವಂತೇ
ತತೋ ಮೃತ್ಯುಃ ಮರಣಾದಭ್ಯುಪೈತಿ ॥೮॥

ಹೀಗೆ ಮಿಥ್ಯಾಭೂತವಾದ ಅಹಂಕಾರದಿಂದ ಉಂಟಾದ, ಪ್ರಮಾದರೂಪವಾದ ಮೃತ್ಯುವಿನ ಸಂಬಂಧದಿಂದ ಪರಮಾತ್ಮನ ವಿಸ್ಮರಣೆಗೆ ಕಾರಣವಾದ, ದುರ್ಮಾರ್ಗಾಚರಣೆಯನ್ನು ಮಾಡುತ್ತಾ ಸ್ವರ್ಗ-ನರಕಾದಿ ಲೋಕಗಳಲ್ಲಿ ಪುನಃ ಪುನಃ ಚಕ್ರದಂತೆ ತಿರುಗುತ್ತಾ ಅಂತಹ ಜೀವರು ಸಂಸಾರದಿಂದ ಎದ್ದು ಮೇಲೆ ಬರುವುದಿಲ್ಲವೆಂಬ ವಿಷಯವನ್ನು ಈ ಶ್ಲೋಕದಲ್ಲಿ ಹೇಳುತ್ತಾರೆ. ಆ ಜೀವರು ಪ್ರಮಾದರೂಪವಾದ ಮೃತ್ಯುವಿನ ವಶದಲ್ಲಿ ಇರುವವರಾಗಿ ಆದ್ದರಿಂದಲೇ ಮೋಹಿತರಾಗಿ ಸಂಸಾರದೆಶೆಯನ್ನು ಹೊಂದಿ, ಇಲ್ಲಿ ಮನುಷ್ಯದೇಹದಿಂದ ಮರಣವನ್ನು ಹೊಂದಿ, ಪುನಃ ನರಕಾದಿಗಳಲ್ಲಿ ಸ್ವಲ್ಪಕಾಲ ವಾಸವನ್ನು ಮಾಡಿ ತಮ್ಮ ಕರ್ಮದ ಫಲವನ್ನು

ಅನುಭವಿಸಿ, ಸ್ವಲ್ಪ ಪಾಪ-ಪುಣ್ಯಶೇಷವನ್ನು ಇಟ್ಟುಕೊಂಡು ವರ್ಷಾದಿಕ್ರಮಗಳಲ್ಲಿ (ಕೆಲವರು ಒಂದುವರ್ಷದ ಕಾಲದಲ್ಲಿ, ಕೆಲವರು ಅದಕ್ಕಿಂತಲೂ ಕಡಿಮೆ ಕಾಲದಲ್ಲಿ, ಇನ್ನು ಕೆಲವರು ಅದಕ್ಕಿಂತಲೂ ಹೆಚ್ಚಿನ ಕಾಲದಲ್ಲಿ) ದೈವವಶರಾಗಿ ಪುನಃ ಮನುಷ್ಯಗರ್ಭವನ್ನು ಪ್ರವೇಶಿಸುತ್ತಾರೆ. ತತಃ– ಜೀವರು ಮನುಷ್ಯಗರ್ಭವನ್ನು ಪ್ರವೇಶ ಮಾಡಿದ ಮೇಲೆ, ದೇವಾಃ– ಹರಿ, ಮುಖ್ಯಪ್ರಾಣ ಮತ್ತು ತತ್ತ್ವಾಭಿಮಾನಿದೇವತೆಗಳು, ಅನು– ಕ್ರಮವಾಗಿ, ಪರಿ– ತಮ್ಮ ತಮ್ಮ ಸ್ಥಾನಗಳಲ್ಲಿ, ಪ್ಲವಂತೇ– ಪ್ರವೇಶ ಮಾಡುತ್ತಾರೆ. ಆ ದೇವತೆಗಳು ಪ್ರವೇಶಮಾಡುವುದು ಅಯೋಗ್ಯಜೀವನಿಂದ ಪಾಪಕರ್ಮವನ್ನು ಮಾಡಿಸುವುದಕ್ಕಾಗಿಯೇ ಹೊರತು ಅವನಿಗೆ ಉಪಕಾರ ಮಾಡುವುದಕ್ಕಲ್ಲ ಎಂಬುದನ್ನು ಪ್ಲವಂತೇ ಎಂಬಲ್ಲಿ ಇರುವ ಆತ್ಮನೇ ಪದದಿಂದ ಸೂಚಿಸುತ್ತಾರೆ. ತತ್ತ್ವಾಭಿಮಾನಿ ದೇವತೆಗಳು ಪ್ರವೇಶಮಾಡಿದ ಮೇಲೆ ಮೃತ್ಯುದೇವತೆಯು ಪ್ರವೇಶ ಮಾಡುತ್ತದೆ. ಮರಣಾತ್ ಎಂಬುದು ಲ್ಯಬ್‌ಲೋಪನಿಮಿತ್ತ ಪಂಚಮೀ ವಿಭಕ್ತಿ. ಪ್ರವೇಶ ಮಾಡಿದ ದೇವತೆಗಳು ಮರಣವುಂಟಾಗುವವರೆಗೆ ಆ ದೇಹದಲ್ಲಿ ಇರುತ್ತಾರೆ ಎಂದು ಅಭಿಪ್ರಾಯ. ಮರಣಾನಂತರದಲ್ಲಿ ಈ ಜೀವನು ಪುನರ್ಜನ್ಮವನ್ನು ಹೊಂದುತ್ತಾನೆ. 'ಜಾತೋ ಜಾತಃ ಮೃತೋ ಮೃತಃ' ಎಂಬ ಪ್ರಮಾಣಕ್ಕೆ ಅನುಸಾರವಾಗಿ ಮರಣಾನಂತರದಲ್ಲಿ ಹಿಂದಿನಂತೆ ನರಕಾದಿಗಳಲ್ಲಿ ವಾಸವನ್ನು ಮಾಡಿ ಪುನಃ ಕರ್ಮಸಂಪಾದಿತವಾದ ದೇಹವನ್ನೂ ಪುನಃ ಮೃತ್ಯುವನ್ನೂ ಪಡೆದು ಹೀಗೆ ಜನ್ಮ-ಮರಣಚಕ್ರಕ್ಕೆ ಸಿಲುಕಿ ಎಂದೂ ಬಿಡುಗಡೆಯನ್ನು ಹೊಂದುವುದಿಲ್ಲ ಎಂದು ಅಭಿಪ್ರಾಯ.

ಭಾರತ ಶ್ರೀನಿವಾಸಾಚಾರ್ಯರು ಬ್ರಹ್ಮಸೂತ್ರಭಾಷ್ಯಕ್ಕೆ ಅನುಗುಣವಾಗಿ ಮರಣಹೊಂದಿದಾಗ ದೇವತೆಗಳು ಒಂದು ಭಾಗದಿಂದ ತಮ್ಮ ಮೂಲರೂಪಗಳಿಗೂ, ಇನ್ನೊಂದು ಭಾಗದಿಂದ ಜೀವನ ಜೊತೆಯಲ್ಲಿಯೂ ಹೋಗುತ್ತಾರೆ. ಜೀವನು ಪುನಃ ಇನ್ನೊಂದು ದೇಹವನ್ನು ಪಡೆದಾಗ ಮೂಲರೂಪವನ್ನು ಸೇರಿದ ಆ ಅಂಶಗಳೇ ಪುನಃ ಬಂದು ಜೀವನಲ್ಲಿರುವ ತಮ್ಮ ಅಂಶಗಳೊಂದಿಗೆ ಸೇರಿಕೊಳ್ಳುತ್ತವೆ ಎಂದು ತಿಳಿಸಿದ್ದಾರೆ.

ಕರ್ಮೋದಯೇ ಕರ್ಮಫಲಾನುರಾಗಾಃ
ತತ್ರಾನುಯಾಂತಿ ನ ತರಂತಿ ಮೃತ್ಯುಮ್ ।

ಸದರ್ಥಯೋಗಾನವಗಮಾತ್ ಸಮಂತಾತ್
ಪ್ರವರ್ತತೇ ಭೋಗಯೋಗೇನ ದೇಹೀ ॥೯॥

ಹೀಗೆ ಪ್ರಮಾದರೂಪವಾದ ಮೃತ್ಯುವಿನ ಸಂಬಂಧದಿಂದ ಪುನಃ ಪುನಃ ಜನನ-ಮರಣ ರೂಪವಾದ ಸಂಸಾರದಿಂದ ಮೇಲೆ ಏಳದಿರಲು ವಿಷಯಾನುರಾಗವೇ ಮುಖ್ಯವಾದ ಕಾರಣವೆಂದು ಈ ಶ್ಲೋಕದಲ್ಲಿ ಹೇಳುತ್ತಾರೆ. 'ಸ್ವರ್ಗಕಾಮೋ ಯಜೇತ' ಮೊದಲಾದ ವೇದವಾಕ್ಯಗಳನ್ನು ನೋಡಿ ಬಹಿರ್ಮುಖರಾಗಿ ಕಾಮ್ಯಕರ್ಮವನ್ನು ಮಾಡುವ ಜೀವರಿಗೆ 'ಕರ್ಮೋದಯೇ' ಎಂದರೆ ನಶ್ವರವಾದ ಕರ್ಮಫಲವು ಉಂಟಾಗುತ್ತಿರಲು ಅವರು ಪುನಃ 'ಕರ್ಮಫಲಾನುರಾಗಾಃ' ಸ್ರಕ್‌ಚಂದನ ವನಿತಾದಿ ಭೋಗರೂಪವಾದ ಕರ್ಮಫಲದಲ್ಲಿಯೇ ಸ್ನೇಹದಿಂದ ಕೂಡಿದವರಾಗಿರುತ್ತಾರೆ. ಆ ಭೋಗವು ಮುಗಿದರೂ ಪ್ರಬಲವಾದ ಸಂಸ್ಕಾರಕ್ಕೆ ವಶರಾಗಿ ಪುನಃ ಅಂತಹದೇ ಕಾಮ್ಯಕರ್ಮವನ್ನು ಮಾಡಿ ಪುನಃ ಪುನಃ ಪ್ರವೃತ್ತರಾಗುತ್ತಾರೆ. ಆದ್ದರಿಂದ ಸಂಸಾರವನ್ನು ದಾಟುವುದಿಲ್ಲ. ಸಂಸಾರ ಸಮುದ್ರವನ್ನು ದಾಟಿಸುವವನನ್ನೂ ಸೇರುವುದಿಲ್ಲ. ಯದ್ಯಪಿ 'ನ ಕರ್ಮಣಾಂ ಅನಾರಂಭಾತ್ ನೈಷ್ಕರ್ಮ್ಯಂ ಪುರುಷೋऽಶ್ನುತೇ' (ಕರ್ಮವನ್ನು ಮಾಡದಿರುವುದರಿಂದ ಯಾವ ಪುರುಷನೂ ಮೋಕ್ಷವನ್ನು ಪಡೆಯುವುದಿಲ್ಲ) 'ಕರ್ಮಣೈವ ಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ' (ಜನಕಾದಿರಾಜನು ಕರ್ಮದಿಂದಲೇ ಪೂರ್ಣಸಿದ್ಧಿಯನ್ನು ಪಡೆದರು) ಇತ್ಯಾದಿ ವಚನಗಳು ಕರ್ಮಕ್ಕೂ ಮೋಕ್ಷಸಾಧನತ್ವವನ್ನು ಹೇಳುತ್ತವೆ. ಆದರೆ ಅದು ಜ್ಞಾನಪೂರ್ವಕವಾಗಿ ಮಾಡಿದ ಕರ್ಮವಿಷಯಕವಾದುದು. ಆದರೆ ಅಜ್ಞಾನಿಗಳಿಗೆ ಆ ಜ್ಞಾನವಿಲ್ಲ. 'ತದರ್ಥಯೋಗ ಅನನುಗಮ' ತದರ್ಥ ಎಂದರೆ ಸರ್ವೋತ್ತಮವಾದ ವಸ್ತು ಪರಮಾತ್ಮ. ಅವನ ಯೋಗ ಎಂದರೆ ಚಿಂತನೆ. ಅದರ ಅವಗಮ ಎಂದರೆ ಅನುಸಂಧಾನ. ಭಗವಂತನ ಚಿಂತನೆ ಇಲ್ಲದೆ ಮಾಡಿದ ಪುಣ್ಯಕರ್ಮಗಳೂ ಸಹ ನಶ್ವರವಾದ ಫಲವನ್ನೇ ಕೊಡುತ್ತವೆ. ಈ ವಿಷಯವನ್ನು 'ಅನೇವಂ ವಿತ್‌ಪುಣ್ಯಂ ಕರ್ಮ ಕರೋತಿ ತದ್ಧಾಸ್ಯ ಅಂತತಃ ಕ್ಷೀಯತೇ ಏವ' ಎಂಬ ಶ್ರುತಿಯು ಹೇಳುತ್ತದೆ. ಅಂತಹ ಭಗವದನುಸಂಧಾನ ಇಲ್ಲದಿರುವುದರಿಂದ 'ದೇಹಿ' ಎಂದರೆ ಜೀವನು, 'ಭೋಗಯೋಗೇನ' ಭೋಗದ ಆಸೆಯಿಂದಲೇ, 'ಸರ್ವಥಾ ಪ್ರವರ್ತತೇ' ಎಲ್ಲಕಡೆಯಲ್ಲಿಯೂ ಪ್ರವೃತ್ತಿ ಮಾಡುತ್ತಾನೆ. ಯದ್ಯಪಿ ಶ್ರುತಿಯು ಹೇಳಿರುವ ಕರ್ಮಾನುಷ್ಠಾನಕ್ಕೆ ಮೋಕ್ಷಸಾಧನತ್ವವು ಇದೆ. ಆದರೆ

ಅಜ್ಞರಿಗೆ ಜ್ಞಾನಪೂರ್ವಕವಾದ ಅನುಷ್ಠಾನವು ಇಲ್ಲದಿರುವುದರಿಂದ ಅದು ಬರುವುದಿಲ್ಲ. ಜ್ಞಾನಪೂರ್ವಕವಾಗಿ ಅನುಷ್ಠಾನ ಮಾಡಿದ ಕರ್ಮವೇ ಶ್ರೇಷ್ಠ ಫಲವನ್ನು ಕೊಡಲು ಸಮರ್ಥವಾಗುವುದೆಂದು 'ಮಾ ಕರ್ಮಫಲಹೇತುರ್ಭೂಃ ಮಾ ತೇ ಸಂಗೋಸ್ತ್ವಕರ್ಮಣಿ', 'ಅಸಕ್ತೋ ಹ್ಯಾಚರನ್ ಕರ್ಮ ಪರಮಾಪ್ನೋತಿ ಪುರುಷಃ ತಸ್ಮಾದಸಕ್ತಃ ಸತತಂ ಕಾರ್ಯಂ ಕರ್ಮಸಮಾಚರ' ಮುಂತಾದ ಗೀತಾ ವಾಕ್ಯಗಳಲ್ಲಿ ಫಲಾಪೇಕ್ಷೆ ಇಲ್ಲದೆ ಆಯಾ ಕರ್ಮ ಮತ್ತು ದೇವತಾಂತರ್ಯಾಮಿಯಾಗಿ ಭಗವಂತನನ್ನು ಚಿಂತಿಸಿ 'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ' ಎಂದು ಗೀತೆಯಲ್ಲಿ ಹೇಳಿದ ರೀತಿಯಲ್ಲಿ ಆ ಕರ್ಮಫಲವನ್ನು ಭಗವಂತನಲ್ಲಿ ಸಮರ್ಪಿಸಿ, ಇಂತಹ ಅನುಸಂಧಾನಪೂರ್ವಕವಾಗಿ ಮಾಡಿದ ಕರ್ಮಗಳೇ ಮೋಕ್ಷಸಾಧನವೆಂಬ ನಿರ್ದುಷ್ಟವಾದ ಜ್ಞಾನವಿಲ್ಲದಿರುವುದರಿಂದ ಜೀವರು ಪುನಃ ಪುನಃ ಸಂಸಾರದಲ್ಲಿ ತೊಡಗುತ್ತಾರೆ. ಆದ್ದರಿಂದ ಯಾವಾಗಲೂ ಸಂಸಾರದಿಂದ ಮೇಲೆದ್ದು ಬರುವುದಿಲ್ಲ ಎಂದು ತಾತ್ಪರ್ಯ.

ತದ್ವೈ ಮಹಾಮೋಹನಮಿಂದ್ರಿಯಾಣಾಂ
ಮಿಥ್ಯಾರ್ಥಯೋಗೇಽಸ್ಯ ಗತಿರ್ಹಿ ನಿತ್ಯಾ ।
ಮಿಥ್ಯಾರ್ಥಯೋಗಾಭಿಹತಾಂತರಾತ್ಮಾ
ಸ್ಮರನ್ನುಪಾಸ್ತೇ ವಿಷಯಾನ್ ಸಮಂತಾತ್ ॥೧೦॥

ಹಿಂದಿನ ಶ್ಲೋಕದಲ್ಲಿ ಸಂಸಾರಿಜೀವರು ಸಂಸಾರದಿಂದ ಮೇಲೆ ಏಳದಿರುವುದಕ್ಕೆ ಭಗವತ್‌ಸ್ಮರಣೆಯನ್ನು ಉಂಟುಮಾಡದಿರುವ ವಿಷಯಾಸಕ್ತಿಯೇ ಕಾರಣ, ಬೇರೆ ಯಾವುದೂ ಅಲ್ಲ ಎಂದು ಹೇಳಿದ ವಿಷಯಾಸಕ್ತಿ ಪ್ರಕಾರವನ್ನೇ ಈ ಶ್ಲೋಕದಲ್ಲಿ ಸ್ಪಷ್ಟಪಡಿಸುತ್ತಾರೆ. ತತ್ ಎಂದರೆ ವಿಷಯಗಳಲ್ಲಿ ರಾಗದಿಂದ ಪ್ರವೃತ್ತಿ ಮಾಡುವುದೇ ಇಂದ್ರಿಯಗಳಿಗೆ ಮಹಾಮೋಹಸಂಪಾದಕವಾದುದು. ಈ ವಿಷಯಗಳಾದರೂ ಮಿಥ್ಯಾ ಎಂದರೆ ವ್ಯರ್ಥವಾದವುಗಳು. 'ಯತ್ರ ತ್ರಿಸರ್ಗೋ ಮೃಷಾ' 'ಮಿಥ್ಯೈತದ್ವ್ಯವಸಾಯಸ್ತೇ' ಮುಂತಾದ ಪ್ರಯೋಗಗಳಲ್ಲಿ ಮಿಥ್ಯಾ, ಮೃಷಾ ಶಬ್ದಗಳು ವ್ಯರ್ಥ ಎನ್ನುವ ಅರ್ಥಗಳನ್ನು ಹೊಂದಿವೆ. ಆದ್ದರಿಂದಲೇ ಮಿಥ್ಯಾಭೂತವಾದ ಅರ್ಥಗಳು ಎಂದರೆ ವ್ಯರ್ಥವಾದ ಅರ್ಥಗಳನ್ನು ಎಂದರ್ಥ. ಅವುಗಳ ಯೋಗದಿಂದ ಎಂದರೆ ಸಂಬಂಧದಿಂದ

ಅಭಿಹತವಾದ ಎಂದರೆ ಸರ್ವತ್ರ ವಿಷಯಾಸಕ್ತಿಯಿಂದ ತುಚ್ಛೀಕೃತವಾದ, ತಿರಸ್ಕೃತವಾದ, ಅಂತರಾತ್ಮ– ಅಂತಃಕರಣವುಳ್ಳ ಜೀವನು, ಎಂದರೆ ನಿರರ್ಥಕವಾದ ಸತತಧ್ಯಾನದಿಂದ ಕಲುಷಿತಗೊಂಡ ಜೀವನು ಎಂದು ತಾತ್ಪರ್ಯ. ಅಂತಹ ಜೀವನು ಕಲುಷಿತವಾದ ಮನಸ್ಸಿನಿಂದ ಹಿಂದಿನ ಸಂಸ್ಕಾರಕ್ಕೆ ವಶನಾಗಿ ಮೊದಲು ಅನುಭವಿಸಿದ ವಿಷಯಗಳನ್ನೇ ಮತ್ತೆ ಮತ್ತೆ ಸ್ಮರಣೆ ಮಾಡಿ ಧ್ಯಾನಮಾಡುತ್ತಾ ಸ್ವರ್ಗಾದಿ ಲೋಕಗಳಲ್ಲಿಯೂ ಅದನ್ನೇ ಸೇವಿಸುತ್ತಾನೆ. ಎಂದೂ ಭಗವಂತನನ್ನು ಸ್ಮರಣೆ ಮಾಡುವುದಿಲ್ಲ ಎಂದು ಅಭಿಪ್ರಾಯ.

ಭಾರತ ಶ್ರೀನಿವಾಸಾಚಾರ್ಯರು 'ನ ಜಾತು ಕಾಮಃ ಕಾಮಾನಾಂ' ಎಂಬ ಶ್ಲೋಕವನ್ನು ಉದಾಹರಣೆ ಮಾಡಿ ಕಾಮಭೋಗದಿಂದ ಮನಸ್ಸಿನ ಆಸೆಯ ನಿವೃತ್ತಿಯು ಎಂದೂ ಉಂಟಾಗುವುದಿಲ್ಲ ಎಂದು ತಿಳಿಸಿದ್ದಾರೆ.

ಅಭಿಧ್ಯಾ ವೈ ಪ್ರಥಮಂ ಹಂತಿ ಚೈನಂ
ಕಾಮಕ್ರೋಧೌ ಗೃಹ್ಯ ಚೈನಂ ಚ(ತು) ಪಶ್ಚಾತ್ ।
ಏತಾನ್ ಬಾಲಾನ್ ಮೃತ್ಯವೇ ಪ್ರಾಪಯಂತಿ
ಧೀರಾಸ್ತು ಧೈರ್ಯೇಣ ತರಂತಿ ಮೃತ್ಯುಮ್ ॥೧೧॥

ಸ್ರಕ್‌ಚಂದನ ವನಿತಾದಿ ವಿಷಯಗಳು ಸುಖಕ್ಕೆ ಕಾರಣವಾದುದರಿಂದ ಅವುಗಳ ನಿರಂತರ ಚಿಂತನೆಯಿಂದ ಪುನಃ ಪುನಃ ಅವುಗಳ ಪ್ರಾಪ್ತಿಯೂ ಮತ್ತು ಅವುಗಳಿಂದ ಸುಖವೂ ಉಂಟಾಗುವುದರಿಂದ ವಿಷಯಾನುಸ್ಮರಣೆಗೆ ದುಃಖಕಾರಣತ್ವವನ್ನು ಏಕೆ ಹೇಳುತ್ತಾರೆ ಎಂಬ ಪ್ರಶ್ನೆಗೆ ಇಲ್ಲಿ ವಿಷಯಗಳು ಅನಿತ್ಯವಾದುದರಿಂದ ಕಾಮದಿಂದ ಕೂಡಿದ ಮನಸ್ಸುಳ್ಳ ಪಾಮರರು ನಿರಂತರವಾಗಿ ಅವುಗಳನ್ನು ಚಿಂತನೆ ಮಾಡುವುದರಿಂದ ಅವು ದೊರೆಯುವುದಿಲ್ಲವಾದ್ದರಿಂದ ಕ್ರೋಧಾದಿಗಳು ಉಂಟಾಗುತ್ತವೆ. ಕಾಮ-ಕ್ರೋಧಗಳ ಸಮುಚ್ಚಯದಿಂದ ಸರ್ವನಾಶಕವಾದ ಮೋಹವೇ ಉಂಟಾಗುತ್ತದೆ ಎಂದು ತಿಳಿದು ವಿವೇಕಿಗಳಾದವರು ವಿಷಯವೈರಾಗ್ಯದಿಂದ ಕೂಡಿ, ಭಗವದಪರೋಕ್ಷ ಜ್ಞಾನವನ್ನು ಪಡೆದು, ಮೃತ್ಯುಶಬ್ದವಾಚ್ಯವಾದ ಸಂಸಾರವನ್ನು ದಾಟುತ್ತಾರೆ ಎಂಬ ಉತ್ತರವನ್ನು ಹೇಳುತ್ತಾರೆ. ಅಭಿಧ್ಯಾ= ದುರ್ವಿಷಯಗಳ ನಿರಂತರ ಚಿಂತನೆಯು, ಏನಂ ದೇಹಿನಂ= ಈ ಸಂಸಾರಿ ಜೀವನನ್ನು, ಪ್ರಥಮಂ= ಮೊದಲು, ಹಂತಿ=

ಹಿಂಸಿಸುತ್ತದೆ. ಹಂತಿ ಎಂದರೆ ಇಲ್ಲಿ ಕೊಲ್ಲುತ್ತದೆ ಎಂದು ಅರ್ಥವಲ್ಲ. ಆದರೆ 'ಚಿಂತಾಯಾಶ್ಚ ಚಿತಾಯಾಶ್ಚ ಬಿಂದುಮಾತ್ರಂ ವಿಶಿಷ್ಯತೇ। ಚಿತಾದಹತಿ ನಿರ್ಜೀವಂ ಚಿಂತಾ ದಹತಿ ಜೀವಿತಂ' (ಚಿಂತಾ ಮತ್ತು ಚಿತಾ ಶಬ್ದಗಳಿಗೆ ಒಂದು ಅನುಸ್ವಾರ ಮಾತ್ರ ವ್ಯತ್ಯಾಸವಿದೆ. ಚಿತೆಯು ನಿರ್ಜೀವವಾದುದನ್ನು ಸುಡುತ್ತದೆ. ಚಿಂತೆಯು ಜೀವಸಹಿತವಾದುದನ್ನು ಸುಡುತ್ತದೆ) ಎಂದು ಹೇಳಿದ ರೀತಿಯಲ್ಲಿ ಪ್ರಾಣನಾಶಕ್ಕೆ ಸಮವಾದ ದುಃಖವನ್ನು ಕೊಡುವ ಚಿಂತೆಯೇ ಇಲ್ಲಿ ಹನನವೆಂದು ಹೇಳಲ್ಪಡುತ್ತದೆ. ಪಶ್ಚಾತ್= ವಿಷಯಾಭಿಜ್ಞಾನದ ಅನಂತರದಲ್ಲಿ, ಕಾಮಕ್ರೋಧೌ= ಕಾಮ-ಕ್ರೋಧಗಳು ಉಂಟಾಗುತ್ತವೆ. ಏಕೆಂದರೆ ಕಾಮಾತ್ ಕ್ರೋಧೋಭಿಜಾಯತೇ (ಕಾಮದಿಂದ ಕ್ರೋಧವು ಉಂಟಾಗುತ್ತದೆ ಎಂದು ನಿಯಮವಿದೆ). ಆ ಕಾಮ-ಕ್ರೋಧಗಳೆರಡೂ ಸೇರಿ, ಏನಂ= ದುರ್ವಿಷಯಗಳ ಚಿಂತನೆಯಿಂದ ಮೃತನಂತಿರುವ ಅದೇ ದೇಹಿಯನ್ನು, ಗೃಹ್ಯ= ಹಿಡಿದುಕೊಂಡು, ಸ್ವಾಧೀನಪಡಿಸಿಕೊಂಡು, ಚ= ಎಂದರೆ ನಾಶವನ್ನೂ ಮಾಡುತ್ತವೆ ಎಂದು ಇಟ್ಟುಕೊಳ್ಳಬೇಕು. ಇಲ್ಲಿಯೂ ನಾಶವೆಂದರೆ ಕ್ರೋಧಾದ್ಭವತಿ ಸಂಮೋಹಃ (ಕ್ರೋಧದಿಂದ ಸಂಮೋಹವು ಉಂಟಾಗುತ್ತದೆ ಎಂಬ ಪ್ರಮಾಣಕ್ಕೆ ಅನುಸಾರವಾಗಿ) ವಿವೇಕಜ್ಞಾನಶೂನ್ಯತೆ ಎಂದು ಅರ್ಥ. ಕಾಮ-ಕ್ರೋಧಗಳು ದೇಹಿಯನ್ನು ವಿವೇಕಜ್ಞಾನಶೂನ್ಯನನ್ನಾಗಿ ಮಾಡುತ್ತವೆ. ಯದ್ಯಪಿ ಕ್ರೋಧಾತ್ ಎಂಬಲ್ಲಿ ಪಂಚಮೀ ವಿಭಕ್ತಿ ಇದೆ. ಆದ್ದರಿಂದ ಕ್ರೋಧವೇ ಸಂಮೋಹಕ್ಕೆ ಕಾರಣವೆಂದು ತೋರುತ್ತದೆ. ಆದರೂ ಕ್ರೋಧ-ಕಾಮಗಳಿಗೆ ಕಾರ್ಯ-ಕಾರಣಭಾವವಿರುವುದರಿಂದ ಮತ್ತು ಕಾರಣವಾದ ಕಾಮವು ಕಾರ್ಯವಾದ ಕ್ರೋಧದಲ್ಲಿ ಹೊಂದಿಕೊಂಡಿರುವುದರಿಂದ ಕಾಮಕ್ರೋಧಗಳೆರಡನ್ನೂ ಒಂದೆಂದು ಭಾವಿಸಿ 'ಕ್ರೋಧಾತ್' ಎಂದು ಏಕವಚನವನ್ನು ಪ್ರಯೋಗ ಮಾಡಿದ್ದಾರೆ. ಏತಾನ್= ಕಾಮ-ಕ್ರೋಧಸಂಬಂಧದಿಂದ ಸಂಮೋಹಿತರಾದ ಬಾಲಾನ್= ವಿವೇಕಜ್ಞಾನಶೂನ್ಯರಾದ ದೇಹಿಗಳನ್ನು, ಮೃತ್ಯವೇ ಪ್ರಾಪಯಂತಿ= ಸಂಸಾರಕ್ಕೆ ತಳ್ಳುತ್ತವೆ. ಪ್ರಾಪಯಂತಿ ಎಂಬ ಬಹುವಚನವು ಚಿಂತನೆ, ಕಾಮ ಮತ್ತು ಕ್ರೋಧ ಈ ಮೂರೂ ಸೇರಿ ದೇಹಿಯನ್ನು ಸಂಸಾರದಲ್ಲಿ ಕೆಡವುತ್ತವೆ ಎಂಬ ಅಭಿಪ್ರಾಯವನ್ನು ಸೂಚಿಸುತ್ತದೆ. ಉತ್ತರಾರ್ಧದಲ್ಲಿ ಏತಾನ್ ಎಂದು ದೇಹಿಗಳನ್ನು ಹೇಳುವ ಶಬ್ದಗಳು ಬಹುವಚನಾಂತವಾದ್ದರಿಂದ ಪೂರ್ವಾರ್ಧದಲ್ಲಿ 'ಏನಂ' ಎಂದು ಏಕವಚನವು

ಜಾತ್ಯೇಕವಚನದ ಅಭಿಪ್ರಾಯದಲ್ಲಿ ಪ್ರಯೋಗಿಸಲ್ಪಟ್ಟಿದೆ. ಹಾಗಾದರೆ ಸಂಸಾರದಿಂದ ಯಾರೂ ಮುಕ್ತರಾಗುವುದಿಲ್ಲ ಎಂಬ ಪ್ರಸಂಗವಿಲ್ಲ. ಏಕೆಂದರೆ ಧೀರಾಃ= ಭಗವದ್ವಿಷಯಕಜ್ಞಾನದಿಂದ ಸಂತೋಷಪಡುವ ಬ್ರಹ್ಮಾದಿ ತೃಣಾಂತರಾದ ಮುಕ್ತಿಯೋಗ್ಯರಾದ ಸಾತ್ವಿಕ ಜೀವರು, ಧೃಯೇರ್ಣಾ= ನಶ್ವರವಾದ ವಿಷಯದಲ್ಲಿ ವಿರಕ್ತಿಯಿಂದ ಕೂಡಿದ ಸ್ವಬಿಂಬ ವಿಷಯದ ಅಪರೋಕ್ಷಜ್ಞಾನದಿಂದ ಮೃತ್ಯುಂ= ಅಜ್ಞಾನದೆಶೆಯಲ್ಲಿ ಅಭಿಧ್ಯಾದಿ ಸಂಸರ್ಗದಿಂದ ಉಂಟಾದ ಸಂಸಾರರೂಪವಾದ ಮೃತ್ಯುವನ್ನು ತರಂತಿ= ದಾಟುತ್ತಾರೆ.

ಭಾರತ ಶ್ರೀನಿವಾಸಾಚಾರ್ಯರು ಗೀತೆಯಲ್ಲಿನ 'ಧ್ಯಾಯತೋ ವಿಷಯಾನ್ ಪುಂಸಃ' ಎಂಬ ಶ್ಲೋಕವನ್ನು ಉದಾಹರಣೆ ಮಾಡಿ ವಿಷಯಾಭಿಧ್ಯಾನದಿಂದ ಬುದ್ಧಿನಾಶದವರೆಗೆ ನಡೆಯುವ ಪ್ರಕ್ರಿಯೆಯನ್ನು ವಿವರಿಸಿದ್ದಾರೆ.

**ಯೋಽಭಿಧ್ಯಾಯನ್ ಪ್ರತ್ಯಭೀಕ್ಷ್ಣಂ ನಿಹನ್ಯಾದ್**
**ಅನಾದರೇಣಾಪ್ರತಿಬುಧ್ಯಮಾನಃ ।**
**ಸ ವೈ ಮೃತ್ಯುರ್ಮೃತ್ಯುರಿವಾತ್ತಿ ಭೂತಾ-**
**ನೇವಂ ವಿದ್ವಾನ್ ಯೋ ನಿಹಂತೀಹ ಕಾಮಾನ್** ॥೧೨॥

ಈ ರೀತಿಯಲ್ಲಿ ಈಶ್ವರೇಚ್ಛೆಯಿಂದ ಅನಾದಿಕಾಲದಿಂದ ಬಂದ ಅಜ್ಞಾನರೂಪವಾದ ಲಿಂಗಸಂಬಂಧದಿಂದ ಉಂಟಾದ ಮಿಥ್ಯಾಜ್ಞಾನರೂಪವಾದ ಪ್ರಮಾದವೆಂಬ ಹೆಸರಿನ ಮೃತ್ಯುಸಂಬಂಧದಿಂದ ಸಂಸಾರಕ್ಕೆ ಬಂದು, ವಿವಿಧ ಸಾಂಸಾರಿಕ ದುಃಖದರ್ಶನದಿಂದ ವಿಷಯವಿರಕ್ತಿಯನ್ನು ಹೊಂದಿದ ಮೋಕ್ಷಾಧಿಕಾರಿಗಳಾದ ಸಾತ್ವಿಕ ಜೀವರಿಗೆ ಈಶ್ವರನ ಅನುಗ್ರಹದಿಂದ ಯಾವುದೋ ಒಂದು ಜನ್ಮದಲ್ಲಿ ಸ್ವೋತ್ತಮರಾದ ಜ್ಞಾನಿಗಳಾದ ಗುರುಗಳ ಸಹವಾಸ ಉಂಟಾಗಿ, ಅದರಿಂದ ತಮ್ಮ ಬಿಂಬಾಪರೋಕ್ಷ ಜ್ಞಾನವನ್ನು ಪಡೆದು, ಅಪರೋಕ್ಷಜ್ಞಾನದ್ವಾರಾ ಮೃತ್ಯು ಶಬ್ದವಾಚ್ಯವಾದ ಸಂಸಾರವನ್ನು ದಾಟುತ್ತಾರೆ ಎಂದು ಹೇಳಿ ಈಗ ರಾಜಸ, ತಾಮಸ ಜೀವರ ಪ್ರವೃತ್ತಿಯನ್ನು ಅಥವಾ ಅಂತಹ ಪ್ರವೃತ್ತಿಯಿಂದ ಉಂಟಾಗುವ ಫಲವನ್ನು ಉಪದೇಶ ಮಾಡುತ್ತಾರೆ. ಯಃ= ಯಾವ ಪುರುಷನು, ಪ್ರತ್ಯಭೀಕ್ಷ್ಣಂ= ಪ್ರತಿ ಪ್ರತಿ ವಿಷಯದಲ್ಲಿಯೂ ಪುನಃ ಪುನಃ, ಅಭಿದ್ಯಾಯನ್= ಚಿಂತಿಸುವವನಾಗಿ, ಪ್ರತ್ಯಭೀಕ್ಷ್ಣಂ

ಎಂಬುದಕ್ಕೆ ಬದಲಾಗಿ ಉತ್ಪತಿಷ್ಣೂನ್ ಎಂಬ ಪಾಠದಲ್ಲಿ ಅನಿತ್ಯ ಸ್ವಭಾವವುಳ್ಳ ವಿಷಯವನ್ನು ಪುನಃ ಪುನಃ ಚಿಂತಿಸುವವನಾಗಿ ಎಂದು ಅರ್ಥ. ಹೀಗೆ ಪೂರ್ವಾನುಭೂತವಾದ ವಿಷಯವನ್ನೇ ಸ್ಮರಿಸುತ್ತಾ, ಅನಾಚಾರೇಣ (ಅನಾದರೇಣ)= ಶ್ರುತಿ-ಸ್ಮೃತಿ ವಿಹಿತವಲ್ಲದ ಕೇವಲ ಸ್ವಾರ್ಥಪರವಾದ, ವಿರುದ್ಧಕರ್ಮಾಚರಣೆಯನ್ನು ಮಾಡುವವನಾಗಿ (ಶ್ರುತಿಯಲ್ಲಿ ಹೇಳಿದ ಶ್ರೇಯೋಮಾರ್ಗದಲ್ಲಿ ಆದರವಿಲ್ಲದವನಾಗಿ) ಅಪ್ರತಿಬುದ್ಯಮಾನಃ= ನಾನು ನನ್ನ ಸಲುವಾಗಿ ಕೊಂದ ಈ ಪಶುಗಳು ನರಕಕ್ಕೆ ಹೋದಮೇಲೆ ನನ್ನನ್ನೇ ಕೊಲ್ಲುತ್ತವೆ ಎಂದು ತಿಳಿಯದೇ ಅಥವಾ ಬ್ರಹ್ಮಾರ್ಪಣಂ ಬ್ರಹ್ಮಹವಿ ಎಂಬ ವಾಕ್ಯಕ್ಕೆ ಅನುಸಾರವಾಗಿ ಎಲ್ಲವೂ ಭಗವತ್ಪೂಜೆ ಎಂಬ ಅನುಸಂಧಾನವಿಲ್ಲದೆ, ನಿಹನ್ಯಾತ್= ಈ ಲೋಕದಲ್ಲಿ ಪಶುಗಳನ್ನು ಕೊಲ್ಲುವನೋ, ಸವೈ ಮೃತ್ಯುಃ= ವೃಥಾ ಪಶುಹನನ ಜನ್ಯವಾದ ಪಾಪವೆಂಬ ಮೃತ್ಯುವು, ಮೃತ್ಯುರಿವ ವೈ= ಪ್ರಸಿದ್ಧವಾದ ಮೃತ್ಯುವಿನಂತೆಯೇ ಆ ಪಶುಹನನ ಮಾಡಿ ಮರಣವನ್ನು ಹೊಂದಿ ನರಕಕ್ಕೆ ಹೋದ ಪಾಪಿಯನ್ನು, ಅತ್ತಿ= ಕಾಕ, ಬಕಾದಿ ಪಕ್ಷಿಗಳ ರೂಪದಿಂದ ಅಥವಾ ಪಶುಗಳ ರೂಪದಿಂದ ತಿನ್ನುತ್ತದೆ. 'ಪ್ರೇತ್ಯ ಖಾದಂತಿ ತೇ ಚ ತಾನ್' ಎಂದು ಇಲ್ಲಿಯೇ ಈ ವಿಷಯವನ್ನು ಮುಂದೆ ಹೇಳುವವರಿದ್ದಾರೆ. ಯಾವ ಪುರುಷನು ಏವಂ= ಸ್ವಾರ್ಥಕ್ಕಾಗಿ ಪ್ರಾಣಿ ಹಿಂಸೆ ಮಾಡುವವರಿಗೆ ಮಹಾನರ್ಥಪ್ರಾಪ್ತಿಯಾಗುತ್ತದೆ ಎಂದು ತಿಳಿದು, ಇಹ= ಮನುಷ್ಯ ಲೋಕದಲ್ಲಿ, ಭೂತಾನ್= ತನ್ನ ಮನಸ್ಸಿನಲ್ಲಿ ಅನಾದಿ ಸಂಸ್ಕಾರ ವಶದಿಂದ ಪುನಃ ಪುನಃ ಉದ್ಭೂತವಾಗುವ, ಕಾಮಾನ್= ವಿಷಯಗಳನ್ನು, ಹಂತಿ= ವೈರಾಗ್ಯದಿಂದ ತ್ಯಜಿಸುತ್ತಾನೆಯೋ, ಸಃ= ಅವನೇ, ವಿದ್ವಾನ್= ವಿವೇಕಿಯಾದವನು. ಇಲ್ಲಿ ಕಾಮಗಳ ಹನನ ಎಂದರೆ ಅನನುಸ್ಮರಣವನ್ನೇ ಪರಿತ್ಯಾಗ ಎಂದು ತಿಳಿಯಬೇಕು.

ಅಥವಾ ಈ ಶ್ಲೋಕಕ್ಕೆ ಇನ್ನೊಂದು ರೀತಿಯಲ್ಲಿಯೂ ವ್ಯಾಖ್ಯಾನ ಮಾಡಬಹುದು. ಹಿಂದಿನ ಶ್ಲೋಕದ ಕೊನೆಯ ಪಾದದಲ್ಲಿ 'ಧೀರಾಸ್ತು ಧೈರ್ಯೇಣ ತರಂತಿ' ಎಂದು ಜ್ಞಾನಿವರ್ಗದ ಲಕ್ಷಣವನ್ನು ಹೇಳಿ, ಈ ಶ್ಲೋಕದಲ್ಲಿ ಜ್ಞಾನಿಗಳ ಪ್ರವೃತ್ತಿಯ ಸ್ವರೂಪವನ್ನು ಉಪದೇಶ ಮಾಡುತ್ತಾರೆ. ಯಃ= ಯಾವ ಜ್ಞಾನಿಯು, ಅಭೀಕ್ಷ್ಣಂ= ನಿರಂತರವಾಗಿ, ಅಭಿದ್ಯಾಯನ್= ವಿಷಯಗಳು ಅನಿತ್ಯ, ಅಶುಚಿ ಮತ್ತು ದುಃಖವನ್ನು ತಂದು ಕೊಡುವಂತಹವು ಎಂದು ಅವುಗಳ ದೋಷವನ್ನು ಚಿಂತಿಸುವವನಾಗಿ, ಉತತಿಷ್ಣೂನ್

ಎಂಬ ಪಾಠದಲ್ಲಿ ವಾಸನಾವಶದಿಂದ ತನ್ನ ಮನಸ್ಸಿನಲ್ಲಿ ಪುನಃ ಮೇಲೆದ್ದು ಸ್ಮೃತಿಗೆ ವಿಷಯವಾಗುವಂತಹ ಎಂದು ಅರ್ಥ. ಇಂತಹ ವಿಷಯಗಳನ್ನು, ಅಪ್ರತಿಬುಧ್ಯಮಾನಃ= ವಿರಕ್ತನಾಗಿ ಅವುಗಳ ಕಡೆಗೆ ಗಮನವನ್ನು ಕೊಡದೆ ವಿಷಯಗಳನ್ನು ಚಿಂತಿಸದೆ, ನಿಹನ್ಯಾತ್= ವಿಷಯಗಳ ಪರಿತ್ಯಾಗರೂಪವಾದ ಹನನವನ್ನು ಮಾಡುತ್ತಾನೆಯೋ ಅಂತಹವನು ಎಂದು ಅರ್ಥ. ವಿಷಯವಿರಕ್ತನಾದ ಜ್ಞಾನಿಯು ವಿಷಯ ಹನನ ಸಾಮರ್ಥ್ಯವನ್ನು ಹೊಂದಿರುವುದು 'ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ಅರ್ಜುನ' ಇತ್ಯಾದಿ ಗೀತೆಯಲ್ಲಿ ಹೇಳಲ್ಪಟ್ಟಿದೆ. ಅಂತಹ ಜ್ಞಾನಿಯು ಮೂಲಸಹಿತವಾಗಿ ಮೃತ್ಯುವನ್ನು ನಾಶಮಾಡುತ್ತಾನೆ ಎಂಬ ವಿಷಯವನ್ನು ಸರ್ವಜನ ನಾಶಕವಾದ ಮೃತ್ಯುವಿನ ದೃಷ್ಟಾಂತದಿಂದ ಉಪಪಾದನೆ ಮಾಡುತ್ತಾರೆ. ಸ ವೈ= ವಿಷಯಾಲಂಬುದ್ಧಿಯಿಂದ ಕೂಡಿದ ಜ್ಞಾನಿಯೇ, ಮೃತ್ಯುರಿವ= ದೇಹಗಳನ್ನು ಪುನಃ ಏಳದಂತೆ ಮಾಡುವ ಹನನಸಾಮರ್ಥ್ಯವುಳ್ಳ ಪ್ರಸಿದ್ಧ ಮೃತ್ಯುವಿನಂತೆ, ಮೃತ್ಯುಃ= ತನ್ನ ಸಂಸಾರಕ್ಕೆ ಮಾರಕನಾಗಿ, ಭವತಿ= ಆಗುತ್ತಾನೆ ಎಂದು ಇಟ್ಟುಕೊಳ್ಳಬೇಕು. ಯಾವ ಜ್ಞಾನಿಯು ವಾಸನಾವಶದಿಂದ ಮನಸ್ಸಿನಲ್ಲಿ ಮತ್ತೆ ಮತ್ತೆ ಉಂಟಾಗುವ ಕಾಮ್ಯವಾದ ವಿಷಯಗಳನ್ನು ಪೂರ್ವೋಕ್ತ ರೀತಿಯಲ್ಲಿ ಈ ಮನುಷ್ಯ ಶರೀರದಲ್ಲಿ ಸರ್ವಥಾ ಪರಿತ್ಯಾಗ ಮಾಡುತ್ತಾನೆಯೋ ಅವನೇ ವಿದ್ವಾನ್= ಅವನೇ ಜ್ಞಾನಿ. ಎಂದರೆ ವಿಷಯಲಂಪಟನಾಗದಿರುವ ಕಾರಣ ಶಾಸ್ತ್ರಾಧ್ಯಯನವನ್ನು ಮಾಡಿ ಜ್ಞಾನಿಯಾಗುತ್ತಾನೆ ಎಂದು ಅಭಿಪ್ರಾಯ.

ಭಾರತ ಶ್ರೀನಿವಾಸಾಚಾರ್ಯರು ಆಚಾರ್ಯರು ಅನುವ್ಯಾಖ್ಯಾನದಲ್ಲಿರುವ 'ವಿಷಯೇಷು ಚ ಸಂಸರ್ಗಾತ್ ಶಾಶ್ವತಸ್ಯ ಚ ಸಂಶಯಾತ್ । ಮನಸಾ ಚಾನ್ಯದಾಕಾಂಕ್ಷಾತ್ ಪರಂನಪ್ರತಿಪದ್ಯತೇ' ಎಂಬ ಶ್ಲೋಕವನ್ನು ಉದಾಹರಿಸಿ ವಿಷಯಗಳ ಸಂಸರ್ಗ, ಶಾಶ್ವತವಾದ ಸಂಶಯ, ಮನಸ್ಸಿನ ಅನ್ಯಾಕಾಂಕ್ಷೆ ಇವುಗಳು ಭಗವಂತನ ಜ್ಞಾನಕ್ಕೆ ಪ್ರತಿಬಂಧಕಗಳು ಎಂದು ಉಪಪಾದನೆ ಮಾಡಿದ್ದಾರೆ.

ಕಾಮಾನುಸಾರೀ ಪುರುಷಃ ಕಾಮಾನನು ವಿನಶ್ಯತಿ ।
ಕಾಮಾನ್ ವ್ಯುದಸ್ಯ ಧುನುತೇ ಯತ್ ಕಿಂಚಿತ್ ಪುರುಷೋ ರಜಃ॥೧೩॥

ಸಂಸಾರಕ್ಕೆ ಬಂದ ಜೀವರಿಗೆ ನಿರಂತರವಾದ ವಿಷಯಸೇವನೆಯೇ ಅನರ್ಥವನ್ನುಂಟು ಮಾಡುವಂತಹುದು. ವಿಷಯಗಳಿಂದ ದೂರವಿರುವುದೇ ದೊಡ್ಡ ಅನರ್ಥವನ್ನು ನಾಶಮಾಡುವಂತಹದು ಎಂಬುದನ್ನು ಇಲ್ಲಿ ಹೇಳುತ್ತಾರೆ.

ಯಾವ ಪುರುಷನು ಕಾಮಾನುಸಾರೀ= ಚಂಚಲವಾದ ಮನಸ್ಸಿನಿಂದ ಚರ್ವಿತ ಚರ್ವಣದಂತಿರುವ ವಿಷಯಭೋಗದಲ್ಲಿಯೇ ಪ್ರವೃತ್ತಿಯನ್ನು ಮಾಡುತ್ತಾನೆಯೋ ಅಂತಹ ಪುರುಷನು ಕಾಮಾನ್= ನಶ್ವರವಾದ ವನಿತಾದಿ ವಿಷಯಗಳನ್ನು ಅನು= ಅನುಸರಿಸಿ ಎಂದರೆ ಅವುಗಳು ನಾಶವನ್ನು ಹೊಂದಿದರೆ ಅದನ್ನು ಅನುಸರಿಸಿ ವಿನಶ್ಯತಿ= ಅನಂತರ ಅವುಗಳ ಚಿಂತನೆಯಿಂದ ತಾನೂ ನಷ್ಟನಾಗುತ್ತಾನೆ. ಪರಾಪರ ತತ್ತ್ವಜ್ಞಾನಶೂನ್ಯನಾಗುತ್ತಾನೆ ಎಂದು ಅಭಿಪ್ರಾಯ. ಯಾವ ಪುರುಷನು ಕಾಮಾನ್ ವ್ಯುದಸ್ಯ= ವೈರಾಗ್ಯವನ್ನು ಹೊಂದಿ ವಿಷಯಗಳ ಚಿಂತನೆಯನ್ನು ಮಾಡದೆ ಅವುಗಳನ್ನು ಪರಿತ್ಯಜಿಸಿ ಯತ್ ಕಿಂಚಿತ್ ರಜಃ= ತನಗೆ ಪಾಪಜನಕವಾದ ಅಥವಾ ತನ್ನ ಪಾಪಜನ್ಯವಾದ ಅಲ್ಪಪ್ರಮಾಣದ ರಜೋಗುಣವನ್ನು ಧುನುತೇ= ಪೂರ್ಣವಾಗಿ ನಾಶಮಾಡುತ್ತಾನೆ. ಆದ್ದರಿಂದ ವಿಷಯಭೋಗಗಳ ಚಿಂತನೆಯನ್ನು ಮಾಡಬಾರದು ಎಂದು ಅಭಿಪ್ರಾಯ.

ಭಾರತ ಶ್ರೀನಿವಾಸಾಚಾರ್ಯರು ಕಾಮಗಳು ಅನಿತ್ಯವಾದುದರಿಂದ ಅವುಗಳ, ಕಾಲಕ್ರಮದಲ್ಲಿ ನಾಶಹೊಂದಿದ ಮೇಲೆ, ಅವುಗಳನ್ನು ಚಿಂತಿಸುವವನೂ ನಾಶವನ್ನು ಹೊಂದುತ್ತಾನೆ. ಅವುಗಳನ್ನು ಪರಿತ್ಯಾಗ ಮಾಡಿದವನು ತನಗೆ ಉಂಟಾದ ಅಲ್ಪ ರಜಸ್ಸನ್ನು ಎಂದರೆ ಪಾಪವನ್ನು ವಿನಾಶ ಮಾಡುತ್ತಾನೆ ಎಂದು ವ್ಯಾಖ್ಯಾನ ಮಾಡುತ್ತಾರೆ.

**ದೇಹೋऽಪ್ರಕಾಶೋ ಭೂತಾನಾಂ ನರಕೋ ಯಃ ಪ್ರದೃಶ್ಯತೇ ।**
**ಗೃಧ್ಯಂತ ಏವ ಧಾವಂತಿ ಗಚ್ಛಂತಃ ಶ್ವಭ್ರಮುನ್ಮುಖಾಃ ॥೧೪॥**

ಸರ್ವಸುಖಕ್ಕೆ ಸಾಧನವಾದ ಶಿರೀಕ್ಷಪುಷ್ಪಕ್ಕಿಂತಲೂ ಮೃದುವಾದ ವನಿತಾದಿದೇಹ ಶಬ್ದವಾಚ್ಯವಾದ ವಿಷಯಸಮೂಹವು ದುಃಖಾತ್ಮಕವೆಂದು ಅಂಗೀಕರಿಸಿ ಹೇಯವೆಂದು ಹೇಗೆ ಹೇಳುತ್ತೀರಿ ಎಂಬ ಪ್ರಶ್ನೆಗೆ ಉತ್ತರವಾಗಿ 'ದೇಹ' ಶಬ್ದದಿಂದ ಉಪಲಕ್ಷಿತವಾದ ಎಲ್ಲ ವಿಷಯವೂ ನರಕಕ್ಕೆ ಸದೃಶವಾದುದೆಂದು ಇಲ್ಲಿ ಉಪಪಾದಿಸುತ್ತಾರೆ.

ಭೂತಾನಾಂ= ಪತ್ನಿ-ಪುತ್ರಾದಿಗಳ, ಯೋ ದೇಹಃ= ಯಾವ ದೇಹವರ್ಗವು, ಪ್ರದೃಶ್ಯತೇ= ಸೌಕುಮಾರ್ಯ ಮೊದಲಾದ ಗುಣಗಳಿಂದ ಕೂಡಿ ಸುಖಸಾಧನವೆಂದು ಪ್ರತ್ಯಕ್ಷವಾಗಿ ಕಾಣುತ್ತದೆಯೋ ಅಂತಹ ಆ ದೇಹವರ್ಗವು, ಅಪ್ರಕಾಶೋ ನರಕಃ= ಆಚ್ಛಾದಿತವಾದ ನರಕ, ಏಕೆಂದರೆ ಶ್ಲೇಷ್ಮ, ರಕ್ತ, ಕೀವು, ಮಲ-ಮೂತ್ರಗಳಿಂದ ಅದು ಒಳಗೆ ತುಂಬಿದೆ. ಮನುವು 'ಅಸ್ತಿಸ್ಥೂಣಂ ಸ್ನಾಯುಬದ್ಧಂ ಮಾಂಸ-ಶೋಣಿತಲೇಪನಮ್ । ಚರ್ಮಾವನದ್ಧಂ ದುರ್ಗಂಧಿ ಪೂರ್ಣಂ ಮೂತ್ರಪುರೀಷಯೋಃ' 'ಜರಾಶೋಕಸಮಾವಿಷ್ಟಂ ರೋಗಾಯತನಮಾತುರಂ । ರಜಸ್ವಲಮನಿತ್ಯಂ ಚ ಭೂತಾವಾಸಮಿಮಂ ತ್ಯಜೇತ್' (ಮೂಳೆಗಳೆಂಬ ಕಂಬಗಳನ್ನೂ, ಸ್ನಾಯುಗಳೆಂಬ ರಜ್ಜುಗಳನ್ನೂ, ಮಾಂಸ-ಶೋಣಿತವೆಂಬ ಲೇಪನವನ್ನೂ ಹೊಂದಿದ ಮೇಲುಚರ್ಮದ ಹೊದಿಕೆಯನ್ನು ಹೊಂದಿದ ಈ ದೇಹವು ಮೂತ್ರ-ಮಲಗಳಿಂದ ಪೂರಿತವಾಗಿ ದುರ್ಗಂಧವುಳ್ಳದ್ದಾಗಿದೆ. ಜರಾ-ಶೋಕಗಳಿಂದ ಕೂಡಿ ಎಲ್ಲ ರೋಗಗಳಿಗೂ ಆಶ್ರಯವಾಗಿ ದುರ್ಬಲವಾಗಿ ಕಶ್ಮಲದಿಂದ ಕೂಡಿದ ಈ ಅನಿತ್ಯವಾದ ಶರೀರವನ್ನು ತ್ಯಜಿಸಬೇಕು) ಎಂದು ಹೇಳಿದ್ದಾನಷ್ಟೆ? ಆದ್ದರಿಂದ ಮೇಲೆ ಚರ್ಮದ ಹೊದಿಕೆ ಇದ್ದರೂ ಒಳಗೆ ಅಸಹ್ಯಪದಾರ್ಥಗಳಿಂದ ತುಂಬಿರುವ ಈ ದೇಹವು ಆಚ್ಛಾದಿತ ನರಕ ಎಂದು ಹೇಳಲ್ಪಡುತ್ತದೆ. ಗೃಧ್ಯಂತಃ= ಸುಖವನ್ನು ಪಡೆಯಲು ದುಃಖಸಾಧನವಾದ ನರಕಕ್ಕೆ ಸದೃಶವಾದ ವನಿತಾದಿ ದೇಹವನ್ನು ಅಪೇಕ್ಷಿಸುವ ಪ್ರಾಣಿಗಳು, ಧಾವಂತಿ= ಅದರ ಪ್ರಾಪ್ತಿಗಾಗಿ ಸಾಧನವನ್ನು ಅನುಷ್ಠಾನ ಮಾಡಲು ತ್ವರೆಯಿಂದ ಸಂಚರಿಸುತ್ತಾರೆ. ಏವ ಧಾವಂತಿ ಎಂಬಲ್ಲಿರುವ ಏವ ಶಬ್ದವು ನರಕಸದೃಶವಾದ ಮಾತಾ-ಪಿತೃಗಳ ದೇಹದಲ್ಲಿಯೂ ಮತ್ತು ಪ್ರಸಿದ್ಧವಾದ ನರಕದಲ್ಲಿಯೂ ಬೀಳುತ್ತಾರೆ ಎಂದು ಸೂಚಿಸುತ್ತದೆ. ಈ ವಿಷಯದಲ್ಲಿ ಒಂದು ದೃಷ್ಟಾಂತವನ್ನು ಹೇಳುತ್ತಾರೆ. ಉನ್ಮುಖಾಃ= ಹೆಜ್ಜೆಯನ್ನು ಇಡಲು ಭೂಮಿಯನ್ನು ನೋಡದೆ ಮುಖವನ್ನೆತ್ತಿ ಆಕಾಶವನ್ನು ನೋಡಿಕೊಂಡು ನಡೆಯುವ ಪುರುಷರು ಹೇಗೆ, ಶ್ವಭ್ರಂ= ಹಳ್ಳದಲ್ಲಿ ಬೀಳುತ್ತಾರೆಯೋ ಅದರಂತೆ ಎಂದು ದೃಷ್ಟಾಂತ.

ಅಮೂಢವೃತ್ತೇಃ ಪುರುಷಸ್ಯೇಹ ಕುರ್ಯಾತ್
ಕಿಂ ವೈ ಮೃತ್ಯುಸ್ತಾರ್ಣ ಇವಾಸ್ಯ ವ್ಯಾಘ್ರಃ ।
ಅಮನ್ಯಮಾನಃ ಕ್ಷತ್ರಿಯ ಕಂಚಿದನ್ಯಂ
ನಾಧೀಯೀತ ನಿರ್ನದಭಿ ವಾಸ್ಯ ವಾಯುಃ ॥೧೫॥

ಹಾಗಾದರೆ ದೇಹ-ಗೇಹಾದಿ ಸಂಬಂಧವು ಯಾವಾಗಲೂ ಇರುವುದರಿಂದ ಅವುಗಳಿಂದ ಉಂಟಾಗುವ ಅನರ್ಥ ಪರಂಪರೆಯು ಯಾವಾಗಲೂ ವಿನಾಶವನ್ನು ಹೊಂದದಿರುವುದರಿಂದ ಯಾರಿಗೂ ಸಂಸಾರದಿಂದ ಉತ್ತಾರ್ಣವಾಗಲಾರದು ಎಂಬ ಪ್ರಶ್ನೆಗೆ ಅಭಿಧ್ಯಾದಿಗಳು ಪ್ರಬಲ ಎಂದು ಮೂರುಶ್ಲೋಕಗಳಿಂದ ಅಭಿದ್ಯೆಯ ಸಾಮರ್ಥ್ಯವನ್ನು ಹೇಳಿ ಪುನಃ ಜ್ಞಾನಶೂನ್ಯರಾದವರಿಗೆ ಕಾಮಾದಿಗಳ ವಶತ್ವವನ್ನು ಪ್ರದರ್ಶಿಸಿ ಈಗ 'ಬ್ರಹ್ಮವಿದಾಪ್ನೋತಿ ಪರಂ', 'ಜ್ಞಾನೇನ ಅಮೃತೀಭವತಿ', 'ಜ್ಞಾನವಾನ್ ಮಾಂ ಪ್ರಪದ್ಯತೇ' ಮುಂತಾದ ಶ್ರುತಿ-ಸ್ಮೃತಿಗಳಿಂದ ಜ್ಞಾನಮಾರ್ಗವರ್ತಿಯಾದ ಅಧಿಕಾರಿಜೀವನಿಗೆ ಅಂತಹ ಮೃತ್ಯುವಿನ ಭಯವು ಇಲ್ಲವೆಂದು ದೃಷ್ಟಾಂತ ಮುಖದಿಂದ ಉಪಪಾದನೆ ಮಾಡುತ್ತಾರೆ.

ಅಮೂಢವೃತ್ತೇಃ ಪುರುಷಸ್ಯ= ಮೋಹವನ್ನು ಹೊಂದದಿರುವ ಪುರುಷನಿಗೆ, ಮೃತ್ಯುಃ= ಮೃತ್ಯುವು, ತಾರ್ಣಃ ವ್ಯಾಘ್ರ ಇವ= ತೃಣಮಯವಾದ ವ್ಯಾಘ್ರದಂತೆ, ಕಿಂ ವೈ= ಏನು ಮಾಡಲು ಸಾಧ್ಯ ? ಏನೂ ಮಾಡಲು ಸಾಧ್ಯವಿಲ್ಲವೆಂದು ಅಭಿಪ್ರಾಯ. ಕ್ಷತ್ರಿಯ= ಎಲೈ ಕ್ಷತ್ರಿಯನಾದ ಧೃತರಾಷ್ಟ್ರನೇ, ಅಮನ್ಯಮಾನಃ= ಕಾಮವನ್ನು ಬಿಟ್ಟು ಬೇರೆ ಪುರುಷಾರ್ಥವನ್ನು ತಿಳಿಯದಿರುವವನು, ನಾಧೀಯೀತ= ವೇದಾಧ್ಯಯನಾದಿಗಳನ್ನು ಮಾಡುವುದಿಲ್ಲ, ನಿರ್ಮುತ್= ಎಲ್ಲವನ್ನೂ ನಿರ್ಮೂಲ ಮಾಡುವ, ಅಭಿವಾಯುಃ= ಸುಂಟರಗಾಳಿಯು, ಅಸ್ಯ= ಅಂತಹ ಪುರುಷನಿಗೆ, ವಾ= ಉಪಮಾ ದೃಷ್ಟಾಂತವಾಗುತ್ತದೆ. **'ವಾ ವಿಕಲ್ಪೋಪಮಾನಯೋಃ'** (ಎಂದು ಕೋಶ ಇರುವುದರಿಂದ ವಾ ಶಬ್ದಕ್ಕೆ ಉಪಮಾನ ಎಂದು ಅರ್ಥವನ್ನು ಮಾಡಬಹುದು)

**ಕ್ರೋಧಾಲ್ಲೋಭಾನ್ಮೋಹಭಯಾಂತರಾತ್ಮಾ**
**ಸ ವೈ ಮೃತ್ಯುಸ್ತ್ವಚ್ಛರೀರೇ ಯ ಏಷಃ** ॥೧೬॥

ಹೀಗೆ ಉಪದೇಶವನ್ನು ಮಾಡುತ್ತಾ ಪರಮ ದಯಾಳುಗಳಾದ ಸನತ್ಸುಜಾತರು ಧೃತರಾಷ್ಟ್ರನಿಗೆ ವೈರಾಗ್ಯವನ್ನು ಉಂಟುಮಾಡಲು ತಾವು ಮಹಾಸಜ್ಜನರಾದ ಪಾಂಡವರ ಪಕ್ಷಪಾತಿಗಳಾದುದರಿಂದ ಅವರಿಗೆ ರಾಜ್ಯವನ್ನು ಕೊಡದಿರುವುದೇ ನಾನು ಹೇಳಿದ ಲೋಭ-ಮೋಹಾತ್ಮಕವಾದ ಭ್ರಮಾದಿರೂಪವಾದ ಮೃತ್ಯು. ಅದು ನಿನ್ನ ಶರೀರದಲ್ಲಿಯೇ ಕಾಣುತ್ತಿದೆ ಎಂದು ಶೃಂಗಿಗ್ರಾಹಕತಯಾ ಉಪದೇಶ ಮಾಡುತ್ತಾರೆ.

ಧೃತರಾಷ್ಟ್ರನಿಗೂ ಸಹ ಪಾಂಡವರು ಅರ್ಧರಾಜ್ಯವನ್ನು ಕೇಳುತ್ತಾರೆಂದು ಕೋಪ. ತನ್ನ ಭಾಗ್ಯಹಾನಿ ಉಂಟಾಗುವುದೆಂಬ ಭಯದಿಂದ ಕೊಡಬಾರದು ಎಂಬ ಲೋಭ. ಕ್ರೋಧದಿಂದ ಮೋಹ ಮತ್ತು ಲೋಭದಿಂದ ಭಯ ಇವುಗಳು ಇವೆ.

ಕ್ರೋಧದಿಂದ ಉಂಟಾದ ಮೋಹದಿಂದಲೂ, ಲೋಭದಿಂದ ಉಂಟಾದ ಭಯದಿಂದಲೂ ಕೂಡಿದ ಮನಸ್ಸುಳ್ಳ ಈ ನಿನ್ನ ಶರೀರದಲ್ಲಿಯೇ ನಾನು ಈವರೆಗೆ ಹೇಳಿದ ಪ್ರಮಾದರೂಪವಾದ ಮೃತ್ಯುವು ಕಾಣಿಸುತ್ತಿದೆ ಎಂದು ಸನತ್ಸುಜಾತರ ಅಭಿಪ್ರಾಯ.

ಏವಂ ಮೃತ್ಯುಂ ಜಾಯಮಾನಂ ವಿದಿತ್ವಾ
ಜ್ಞಾನೇನ ತಿಷ್ಠನ್ ನ ಬಿಭೇತೀಹ ಮೃತ್ಯೋಃ ।
ವಿನಶ್ಯತೇ ವಿಷಯೇ ತಸ್ಯ ಮೃತ್ಯುಃ
ಮೃತ್ಯೋರ್ಯಥಾ ವಿಷಯಂ ಪ್ರಾಪ್ಯ ಮರ್ತ್ಯಃ ॥೧೭॥

ಏವಂ= ಹಿಂದೆ ಹೇಳಿದ ಪ್ರಕಾರದಿಂದ ಉಂಟಾಗುವ, ಲಿಂಗದೇಹ ಸಂಬಂಧದಿಂದ ಪ್ರಾಪ್ತವಾದ, ಅಹಂಕಾರ ರೂಪವಾದ, ಮಿಥ್ಯಾಜ್ಞಾನರೂಪವಾದ, ಪ್ರಮಾದದಿಂದ ಉಂಟಾದ, ಮೃತ್ಯುಂ= ಸಂಸಾರರೂಪವಾದ ಮೃತ್ಯುವನ್ನು, ವಿದಿತ್ವಾ= ತಿಳಿದು (ಅದರ ಸ್ವರೂಪವನ್ನು ಚೆನ್ನಾಗಿ ತಿಳಿದು ಎಂದು ಅಭಿಪ್ರಾಯ), ಜ್ಞಾನೇನ= ದೇಹ-ಗೇಹಾದಿ ಎಲ್ಲ ವಿಷಯವರ್ಗವೂ ನಶ್ವರವಾದುದು ಎಂಬ ಜ್ಞಾನದ ನಿಮಿತ್ತದಿಂದ, ತಿಷ್ಠನ್= ನಿವೃತ್ತಿಮಾರ್ಗದಲ್ಲಿ ಸ್ಥಿರನಾಗಿ ಇರುವಂತಹ ಅಥವಾ ಭಗವನ್ನಿಷ್ಠೆಯಲ್ಲಿ ಸ್ಥಿರನಾಗಿ ಇರುವಂತಹ ಅಥವಾ ವಿಷ್ಣುಸರ್ವೋತ್ತಮತ್ವಜ್ಞಾನದಲ್ಲಿ ಸ್ಥಿರವಾಗಿ ಇರುವಂತಹ, ಜ್ಞಾನಿಯಾದ ಪುರುಷನು, ಮೃತ್ಯೋಃ= ಸಂಸಾರಾಖ್ಯವಾದ ಮೃತ್ಯುವಿಗೆ, ನ ಬಿಭೇತಿ= ಹೆದರುವುದಿಲ್ಲ. ಏಕೆಂದರೆ ಯಥಾ= ಹೇಗೆ, ಮೃತ್ಯೋಃ= ಸರ್ವಮಾರಕನಾದ ಮೃತ್ಯುವಿನ, ವಿಷಯಂ= ಮಾರ್ಗವನ್ನು, ಪ್ರಾಪ್ಯ= ಹೊಂದಿದ, ಮರ್ತ್ಯಃ= ಮರಣಶೀಲನಾದ ದೇಹಿಯು, ವಿನಶ್ಯತೇ= ನಾಶವನ್ನು ಹೊಂದುತ್ತಾನೆಯೋ ಅದರಂತೆ, ತಸ್ಯ ವಿಷಯೇ= ಆ ಜ್ಞಾನಿಯ ವಿಷಯದಲ್ಲಿ, ಮೃತ್ಯುಃ= ಸಂಸಾರರೂಪವಾದ ಮೃತ್ಯುವೇ, ವಿನಶ್ಯತೇ= ನಾಶವನ್ನು ಹೊಂದುತ್ತದೆ.

ಧೃತರಾಷ್ಟ್ರಃ

ಯಾನೇವಾಹುರಿಜ್ಯಯಾ ಸಾಧುಲೋಕಾನ್
ದ್ವಿಜಾತೀನಾಂ ಪುಣ್ಯತಮಾನ್ ಸನಾತನಾನ್ ।
ತೇಷಾಮಪಾರ್ಥಾನ್ ಕಥಯಂತೀಹ ವೇದಾ
ಏವಂ ವಿದ್ವಾನೇತಿ ಕಥಂ ನು ಕರ್ಮ ॥೧೮॥

ಹೀಗೆ ಸನತ್ಸುಜಾತರು ಮೃತ್ಯುಶಬ್ದವಾಚ್ಯವಾದ ಸಂಸಾರದ ಭಯವನ್ನು ಪರಿಹರಿಸಿ ಸ್ವರೂಪಾನಂದಾವಿರ್ಭಾವಕ್ಕೆ ಜ್ಞಾನವನ್ನು ಬಿಟ್ಟು ಬೇರೆ ಸಾಧನವಿಲ್ಲ ಎಂದು ಶ್ರುತಿ ಸಮ್ಮತಿಯಿಂದ ಪ್ರತಿಪಾದನೆ ಮಾಡಿದರು. ಅನಂತರ 'ಜ್ಯೋತಿಷ್ಟೋಮೇನ ಸ್ವರ್ಗಕಾಮೋ ಯಜೇತ' ಮುಂತಾದ ವಾಕ್ಯಗಳಿಂದ ಜ್ಯೋತಿಷ್ಟೋಮಾದಿ ಯಜ್ಞಜನ್ಯ ಪುಣ್ಯಕ್ಕೂ ಮಹಾಫಲ ಪ್ರಾಪ್ತಿಯು ತಿಳಿದು ಬರುವುದರಿಂದ, ಜ್ಞಾನವನ್ನು ಬಿಟ್ಟು ಬೇರೆ ಸಾಧನವಿಲ್ಲ ಎಂದು ಅನ್ಯಯೋಗವ್ಯವಚ್ಛೇದವನ್ನು ಮಾಡಿ, ಸಾರ್ವತ್ರಿಕವಾದ ಮಹಾಫಲ ಪ್ರಾಪ್ತಿಗಾಗಿ ಜ್ಞಾನವೇ ಹೇಗೆ ಮುಖ್ಯಕಾರಣವಾಗುತ್ತದೆ ಎಂಬ ಶಂಕೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಧೃತರಾಷ್ಟ್ರನು ಜ್ಞಾನಕ್ಕೇ ಮುಖ್ಯತ್ವ ಪ್ರತಿಪಾದಕವಾದ 'ನಾನ್ಯಃಪಂಥಾ ಅಯನಾಯ ವಿದ್ಯತೇ' ಎಂಬ ವಾಕ್ಯಗಳಿಗೂ ಕರ್ಮಕ್ಕೂ ಮುಖ್ಯತ್ವ ಪ್ರತಿಪಾದಕವಾದ 'ನ ಕರ್ಮಣಾಮನಾರಂಭಾತ್ ನೈಷ್ಕರ್ಮ್ಯಂ ಪುರುಷೋऽಶ್ನುತೇ, ಸ್ವರ್ಗಕಾಮೋ ಯಜೇತ' ಮುಂತಾದ ವಾಕ್ಯಗಳಿಗೂ ಪರಸ್ಪರ ವಿರೋಧವನ್ನು ಆಶಂಕಿಸಿ ಇಲ್ಲಿ ಪ್ರಶ್ನೆಯನ್ನು ಮಾಡುತ್ತಾನೆ.

ಯಾನ್ ಸನಾತನಾನ್= ಯಾವ ನಿತ್ಯವಾದ, ಪುಣ್ಯತಮಾನ್= ಪರಮ ಪವಿತ್ರವಾದ, ಸಾಧುಲೋಕಾನ್= ವೈಕುಂಠಾದಿ ಲೋಕಗಳನ್ನು, ದ್ವಿಜಾತೀನಾಂ= ಬ್ರಾಹ್ಮಣರಿಗೆ, ಯೇವೇದಾಃ= ಯಾವ ವೇದಗಳು, ಕಥಯಂತಿ= ಹೇಳುತ್ತವೆಯೋ, ಅಥವಾ ಯಾನ್= ಎಂದರೆ ಜ್ಞಾನಾತ್ಮಕವಾದ ಎಂದೂ ಅರ್ಥವನ್ನು ಮಾಡಬಹುದು. ಯೇತಿ ಜ್ಞಾನಂ ಸಮುದ್ದಿಷ್ಟಂ (ಯ ಎಂಬುದು ಜ್ಞಾನವನ್ನು ಹೇಳುತ್ತದೆ) ಎಂಬ ವಚನವಿದೆ. ಅಂತಹ ವೇದಗಳು, ತೇಷಾಂ= ವೇದರಹಿತ ಯಜ್ಞಾನುಷ್ಠಾನದಿಂದ ಪ್ರಾಪ್ತವಾದ ಆ ಲೋಕಗಳನ್ನೇ , ಅಪಾರ್ಥಾನ್= ಮೋಕ್ಷರೂಪವಾದ ಪ್ರಯೋಜನರಹಿತವಾಗಿ, ಆಹುಃ= ಹೇಳುತ್ತವೆ. ಈ ಅಜ್ಞಾನಿಗಳಿಂದ ಪ್ರಾಪ್ತವಾದ

ಧರ್ಮವು ಮೋಕ್ಷಕ್ಕೆ ಉಪಯೋಗಿಯಲ್ಲ ಎಂದು ಹೇಳುತ್ತವೆ ಎಂದು ತಾತ್ಪರ್ಯ. ಹಾಗಾದರೆ ವೇದವಾಕ್ಯಗಳಿಗೇ ಪರಸ್ಪರ ವಿರೋಧವು ಬರುವುದರಿಂದ ಈ ರೀತಿಯಲ್ಲಿ ಕರ್ಮದಿಂದ ಪಡೆಯುವ ಲೋಕಗಳು ಅನಿತ್ಯವೆಂದು ತಿಳಿಯುವ ಜ್ಞಾನಿಯು ಪುನಃ, ಕರ್ಮ ಕಥಂ ನು ಏತಿ= ವೇದರಹಿತವಾದ ಯಾಗಾದಿ ಕರ್ಮಗಳನ್ನು ಹೇಗೆ ಅನುಷ್ಠಾನ ಮಾಡುತ್ತಾನೆ? ವೇದರಹಿತವಾದ ಯಾಗಾದಿ ಕರ್ಮಗಳು ವ್ಯರ್ಥವಾದರೆ ಜ್ಞಾನಿಗಳು ಆ ಕರ್ಮಗಳನ್ನು ಏಕೆ ಅನುಷ್ಠಾನ ಮಾಡುತ್ತಾರೆ ಎಂದು ಪ್ರಶ್ನೆಯ ಅಭಿಪ್ರಾಯ.

**ಸನತ್ಸುಜಾತಃ**

**ಏವಂ ವಿದ್ವಾನ್ ಪ್ರತಿಯಾತಿ ತತ್ರ**
**ತಥಾऽರ್ಥಜಾತಂ ಚ ವದಂತಿ ವೇದಾಃ ।**
**ಸ ನೇಹ ಆಯಾತಿ ಪರಂ ಪರಾತ್ಮಾ**
**ಪ್ರಯಾತಿ ಮಾರ್ಗೇಣ ನಿಹಂತಿ ಮಾರ್ಗಾನ್** ॥೧೯॥

ಹೀಗೆ ಧೃತರಾಷ್ಟ್ರನಿಂದ ಕೇಳಲ್ಪಟ್ಟ ಸನತ್ಸುಜಾತರು 'ಜ್ಞಾನೇನ ಅಮೃತೀ ಭವತಿ' (ಜ್ಞಾನದಿಂದ ಮೋಕ್ಷವನ್ನು ಪಡೆಯುತ್ತಾನೆ) ಮೊದಲಾದ ವಾಕ್ಯಗಳಿರುವುದರಿಂದ ಮಹಾಫಲರೂಪವಾದ ಮೋಕ್ಷಫಲ ಪ್ರಾಪ್ತಿಗಾಗಿ ಭಗವಜ್ಞಾನವೇ ಮುಖ್ಯಸಾಧನ. ಆದರೂ 'ಕರ್ಮಣಾ ಜ್ಞಾನಮಾತನೋತಿ' (ಕರ್ಮದಿಂದ ಜ್ಞಾನವನ್ನು ಸಂಪಾದನೆ ಮಾಡುತ್ತಾನೆ) ಮುಂತಾದ ವಾಕ್ಯಗಳಿಂದ ಸ್ವಯೋಗ್ಯ ಜ್ಞಾನಪ್ರಾಪ್ತಿಗಾಗಿ 'ಅಸಕ್ತೋ ಹ್ಯಾಚರನ್ ಕರ್ಮ ಪರಮಾಪ್ನೋತಿ ಪುರುಷಃ' ಎಂದು ಹಿಂದೆ ಹೇಳಿದ ರೀತಿಯಲ್ಲಿ ವಿಷ್ಣು ಅನುಸಂಧಾನ ಪೂರ್ವಕವಾಗಿ ಮಾಡಿದ ಕರ್ಮವೂ ಸಹ ಜ್ಞಾನಾಭಿವ್ಯಕ್ತಿ ದ್ವಾರಾ ಪರಮಪುರುಷಾರ್ಥ ಸಾಧನವಾಗುವುದಾದರೂ ಬಹಿರ್ಮುಖರಾದ ಜೀವರಿಗೆ ಮಾತ್ರ ಪರಸ್ಪರ ವಿರುದ್ಧವಾಗಿ ಕಾಣುವ ಈ ವೇದವಾಕ್ಯಗಳು ಜ್ಞಾನಿಗಳ ದೃಷ್ಟಿಯಲ್ಲಿ 'ಸರ್ವೇ ವೇದಾ ಯತ್ಪದಮಾಮನಂತಿ' (ಎಲ್ಲ ವೇದಗಳೂ ಯಾವ ಅವನ ಸ್ವರೂಪವನ್ನೇ ತಿಳಿಸುತ್ತವೆಯೋ) ಮುಂತಾದ ವಾಕ್ಯಗಳು ಹೇಳುವ ರೀತಿಯಲ್ಲಿ ಜ್ಞಾನಪೂರ್ವಕವಾಗಿ ಆಚರಿಸುವ ಕರ್ಮಾನುಷ್ಠಾನಕ್ಕೆ ಅಂತಹ ಫಲವಿರುವುದರಿಂದ ಜ್ಞಾನಿಗಳ ದೃಷ್ಟಿಯಲ್ಲಿ ಇಂತಹ ವಾಕ್ಯಗಳಿಗೆ ವಿರೋಧವಿಲ್ಲ ಎಂದು ಹೇಳುತ್ತಾ ಧೃತರಾಷ್ಟ್ರನ ಶಂಕೆಯನ್ನು ಪರಿಹರಿಸುತ್ತಾರೆ.

ಏವಂ ವಿದ್ವಾನ್= ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ (ಪುಣ್ಯವು ನಾಶವಾದ ಮೇಲೆ ಮರ್ತ್ಯಲೋಕಕ್ಕೆ ಬರುತ್ತಾರೆ) ಇತ್ಯಾದಿ ಪ್ರಮಾಣಗಳಲ್ಲಿ ಹೇಳಿದ ರೀತಿಯಲ್ಲಿ ಕಾಮ್ಯಕರ್ಮದಿಂದ ಲಭ್ಯವಾದ ಸ್ವರ್ಗಾದಿಗಳು ಅನಿತ್ಯವಾದುದರಿಂದ ಅದು ಪುರುಷಾರ್ಥವಲ್ಲ ಎಂದು ತಿಳಿದ ಜ್ಞಾನಿಯು, ತತ್ರ= ಜ್ಞಾನಪೂರ್ವಕವಾಗಿ ಆಚರಿಸಲ್ಪಡುವ ಕರ್ಮಮಾರ್ಗದಲ್ಲಿ, ಪ್ರತಿಯಾತಿ= ಭಗವಜ್ಞಾನಪ್ರಾಪ್ತಿಗಾಗಿ ವಿಷ್ಣ್ವರ್ಪಣಬುದ್ಧಿಯಿಂದ ಪ್ರವೃತ್ತನಾಗುತ್ತಾನೆ. ತಥಾ= ಹೀಗೆ ಅನುಸಂಧಾನ ಪೂರ್ವಕವಾಗಿ ಜ್ಞಾನಿಯು ಕರ್ಮಕಲಾಪವನ್ನು ಮಾಡುತ್ತಿರಲು, ವೇದಾಃ= 'ಅಪಾಮಸೋಮಂ ಅಮೃತಾ ಅಭೂಮ' (ಸೋಮಪಾನವನ್ನು ಮಾಡುತ್ತೇವೆ, ಮುಕ್ತರಾಗುತ್ತೇವೆ) ಇತ್ಯಾದಿ ವಾಕ್ಯಗಳು, ಅರ್ಥಜಾತಂ= ಧರ್ಮಾದಿಯಾಗಿ ಮೋಕ್ಷ ಪರ್ಯಂತವಾದ ಪುರುಷಾರ್ಥಸಮೂಹವನ್ನು, ವದಂತಿ= ಹೇಳುತ್ತವೆ. ಸಃ= ಸರ್ವ ಪುರುಷಾರ್ಥಭಾಜನನಾದ, ಜ್ಞಾನಪೂರ್ವಕವಾಗಿ ಕರ್ಮಾನುಷ್ಠಾನವನ್ನು ಮಾಡುವ ಪುರುಷನು, ಇಹ= ಸಂಸಾರ ಮಾರ್ಗದಲ್ಲಿ ಅಥವಾ ಮೃತ್ಯುಲೋಕದಲ್ಲಿ, ನಾಯಾತಿ= ಪುನಃ ಬರುವುದಿಲ್ಲ. ಹಾಗಾದರೆ ಎಲ್ಲಿ ಹೋಗುತ್ತಾನೆ ಎಂದು ಕೇಳಿದರೆ ಪರಾತ್ಮಾ= ಪರೇ- ಶ್ರೇಷ್ಠನಾದ ಭಗವಂತನಲ್ಲಿ, ಆತ್ಮಾ- ಮನಸ್ಸನ್ನು ಹೊಂದಿದ ಆ ಜ್ಞಾನಿಯು, ಪರಂ= ಪೃಪಾಲನ ಪೂರಣಯೋಃ ಎಂಬ ಧಾತು ಇರುವುದರಿಂದ ಸರ್ವಜನ ಪಾಲನಾದಿ ಕರ್ತೃವಾದ ಶ್ರೀಮನ್ನಾರಾಯಣನನ್ನು, ಮಾರ್ಗೇಣ= ಅರ್ಚಿರಾದಿ ಮಾರ್ಗಗಳಿಂದ, ಪ್ರಯಾತಿ= ಹೊಂದುತ್ತಾನೆ ಅಥವಾ ಪರಂ= ವೈಕುಂಠಾದಿ ಸ್ಥಾನವನ್ನು, ಪ್ರಯಾತಿ= ಹೊಂದುತ್ತಾನೆ. ಮಾರ್ಗಾನ್= ಜನರಿಂದ ಅನ್ವೇಷಿಸಲ್ಪಡುವ ವಿಷಯಮಾರ್ಗಗಳನ್ನು, ನಿಹಂತಿ= ನಾಶಗೊಳಿಸುತ್ತಾನೆ, ಪರಿತ್ಯಾಗ ಮಾಡುತ್ತಾನೆ ಎಂದು ಅರ್ಥ.

ಧೃತರಾಷ್ಟ್ರಃ

ಕೋಽಸೌ ನಿಯುಂಕ್ತೇ ತಮಜಂ ಪುರಾಣಂ
ಸ ಚೇದಿದಂ ಸರ್ವಮನುಕ್ರಮೇತ ।
ಕಿಂ ವಾಽಸ್ಯ ಕಾರ್ಯಮಥವಾ ಸುಖಂ ಚ
ತನ್ಮೇ ವಿದ್ವನ್ ಬ್ರೂಹಿ ಸರ್ವಂ ಯಥಾವತ್ ॥೨೦॥

ಹೀಗೆ ಸನತ್ಸುಜಾತರ ಉಪದೇಶದಿಂದ ಎಲ್ಲ ವೇದವಾಕ್ಯಗಳೂ ಭಗವಂತನನ್ನೇ ಹೇಳುತ್ತವೆ ಎಂಬ ಜ್ಞಾನವನ್ನು ಪಡೆದ ಧೃತರಾಷ್ಟ್ರನು ಹಿಂದಿನ ಶ್ಲೋಕದಲ್ಲಿ 'ಪರಂ ಪ್ರಯಾತಿ' ಎಂದು ಹೇಳಿದ ಪರವಸ್ತು ಸ್ವರೂಪವನ್ನು ಕೇಳಲು ಅಪೇಕ್ಷಿಸಿ ಪ್ರಶ್ನೆ ಮಾಡುತ್ತಾನೆ.

ವಿದ್ವನ್= ಎಲೈ ಸರ್ವಜ್ಞರಾದ ಸನತ್ಸುಜಾತರೇ, ಅಜಂ= ಜನನರಹಿತನಾದ, ಪುರಾಣಂ= ಅನಾದಿಕಾಲದಿಂದಲೂ ಇರುವ, ಜೀವಂ= ಜೀವನನ್ನು, ಯಃ= ಯಾವ ಪರಮಾತ್ಮನು, ನಿಯುಂಕ್ತೇ= ಪ್ರೇರಣೆ ಮಾಡುತ್ತಾನೆಯೋ, ಅಸೌ= ಅಂತಹ ಪುರುಷನು, ಕಃ= ಯಾವನಾಗುತ್ತಾನೆ, ಎಂತಹ ಲಕ್ಷಣ ಉಳ್ಳವನಾಗುತ್ತಾನೆ ಎಂದು ಅಭಿಪ್ರಾಯ. ಸಃ= ಜೀವನಿಯಾಮಕನಾದ ಆ ವಿಷ್ಣುವು, ಇದಂ ಸರ್ವಂ= ಈ ಜಗತ್ತೆಲ್ಲವನ್ನೂ, ಅನುಕ್ರಮೇತ= ಸೃಷ್ಟ್ಯಾದಿ ಕರ್ಮದಿಂದ ಪ್ರವರ್ತಿಸುವವನಾದರೆ, ಅಸ್ಯ= ಆ ವಿಷ್ಣುವಿಗೆ, ಕಿಂ ಕಾರ್ಯಂ= ಅದರಿಂದ ಸಾಧ್ಯವಾದ ಪ್ರಯೋಜನವು ಏನು? ವಿಷ್ಣುವು ಯಾವ ಪ್ರಯೋಜನವನ್ನು ಉದ್ದೇಶಿಸಿ ಜಗತ್ತಿನ ಸೃಷ್ಟ್ಯಾದಿ ವ್ಯಾಪಾರಗಳನ್ನು ಮಾಡುತ್ತಾನೆ ಎಂದು ಪ್ರಶ್ನೆಯ ಅಭಿಪ್ರಾಯ ಅಥವಾ ಕಿಂ ಸುಖಂ= ಅಥವಾ ಸೃಷ್ಟ್ಯಾದಿ ವ್ಯಾಪಾರಗಳಿಂದ ಅವನಿಗೆ ಉಂಟಾಗುವ ಸುಖವಾದರೂ ಏನು? ಯಾವ ಪ್ರಯೋಜನವೂ ಇಲ್ಲದೆ ಸೃಷ್ಟ್ಯಾದಿಗಳನ್ನು ಮಾಡುತ್ತಾನೆ ಎಂದು ಅಂಗೀಕರಿಸಿದರೆ, 'ಪ್ರಯೋಜನಮನುದ್ದಿಶ್ಯ ನಮಂದೋಽಪಿ ಪ್ರವರ್ತತೇ' (ಪ್ರಯೋಜನದ ಉದ್ದೇಶವಿಲ್ಲದೆ ಮೂರ್ಖನೂ ಪ್ರವೃತ್ತನಾಗುವುದಿಲ್ಲ) ಎಂಬ ಮಾತಿರುವುದರಿಂದ ಪ್ರಯೋಜನವಿರುವಂತೆ ತೋರುತ್ತದೆ. ಅದೆಲ್ಲವನ್ನೂ ಯಥಾವತ್= ಯಥಾರ್ಥವಾಗಿ, ಬ್ರೂಹಿ= ನನಗೆ ಹೇಳಿ (ಎಂದು ಧೃತರಾಷ್ಟ್ರನು ಪ್ರಶ್ನೆ ಮಾಡುತ್ತಾನೆ).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ದ್ವಿಚತ್ವಾರಿಂಶೋಽಧ್ಯಾಯಃ ॥
॥ ಸನತ್ಸುಜಾತಪರ್ವಣಿ ಪ್ರಥಮೋಽಧ್ಯಾಯಃ ॥
॥ ಇತಿ ಉದ್ಯೋಗಪರ್ವಣಿ ಸನತ್ಸುಜಾತದುರ್ಬೋಧಾರ್ಥಪ್ರಕಾಶಿಕಾಯಾಂ
ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನಲವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

# ನಲವತ್ಮೂರನೆಯ ಅಧ್ಯಾಯ

## ಸನತ್ಸುಜಾತಃ

ಅಯಂ ಮಹಾನತ್ರ ಬಿಭೇದ ಯೋಗೈಃ
ಹ್ಯನಾದಿಯೋಗೇನ ಭವಂತಿ ನಿತ್ಯಾಃ ।
ತಥಾऽಸ್ಯ ನಾಧಿಕ್ಯಮುಪೈತಿ ಕಿಂಚಿದ್
ಅನಾದಿಯೋಗೇನ ಭವಂತಿ ಪುಂಸಃ ॥೧॥

ಈ ರೀತಿಯಲ್ಲಿ ಧೃತರಾಷ್ಟ್ರನಿಂದ ಪ್ರಶ್ನೆ ಮಾಡಲ್ಪಟ್ಟ ಸನತ್ಸುಜಾತರು '**ದೇವಸ್ಯೈಷ ಸ್ವಭಾವೋऽಯಮ್ ಆಪ್ತಕಾಮಸ್ಯ ಕಾ ಸ್ಪೃಹಾ**', '**ನ ಪ್ರಯೋಜನವತ್ತ್ವಾತ್**', '**ಲೋಕವತ್ತು ಲೀಲಾಕೈವಲ್ಯಮ್**', '**ಬಾಲಃ ಕ್ರೀಡನಕೈರಿವ**' ಇವೇ ಮೊದಲಾದ ಶ್ರುತಿ-ಸೂತ್ರ-ಸ್ಮೃತಿಗಳ ಪ್ರಮಾಣದಿಂದ ಅನಾದಿಕಾಲದಿಂದಲೂ ಸಿದ್ಧವಾದ ಸಕಲ ಕಾಮಗಳುಳ್ಳ ವಿಷ್ಣುವಿಗೆ ಜಗತ್ತಿನ ಸೃಷ್ಟ್ಯಾದಿ ವ್ಯಾಪಾರಗಳಿಂದ ತನಗೆ ಆಗಬೇಕಾದ ಪ್ರಯೋಜನವಿಲ್ಲದಿದ್ದರೂ ಅನಾದಿಸಿದ್ಧರಾದ, ಆದಿಮಧ್ಯಾಂತಶೂನ್ಯರಾದ, ಅಸ್ವತಂತ್ರರಾದ, ಅನಂತರಾದ, ಅನೇಕ ವಿಧವಾದ ಭೇದಗಳಿಂದ ಕೂಡಿದ ಸಾತ್ವಿಕಾದಿ ಜೀವರಿಗೆ ಅವರ ಸ್ವರೂಪದಿಂದ ಅಭಿನ್ನವಾದ, ಅನಾದಿಕಾಲದಿಂದಲೂ ಬಂದಿರುವ ಅವರ ಯೋಗ್ಯತೆಯನ್ನು ಅಭಿವ್ಯಕ್ತವನ್ನಾಗಿ ಮಾಡಿ, ಶುಭಾಶುಭ ಫಲಗಳನ್ನು ಕೊಡುವುದರಿಂದ ಸರ್ವೋಪಕಾರಕನಾದ ಕಾರಣ ವಿಷ್ಣುವಿಗೆ ಜಗಜ್ಜನ್ಮಾದಿಕರ್ತೃತ್ವವು ಉಪಪನ್ನವಾಗುತ್ತದೆ ಎಂದು ಉಪದೇಶ ಮಾಡುತ್ತಾ ಧೃತರಾಷ್ಟ್ರನ ಶಂಕೆಯನ್ನು ಪರಿಹರಿಸುತ್ತಾರೆ.

ಅತ್ರ= ಈ ಜಗತ್ತಿನಲ್ಲಿ, ಮಹಾನ್= '**ಮಹ ಪೂಜಾಯಾಮ್**' ಎಂಬ ಧಾತುವಿರುವುದರಿಂದ ಸರ್ವಪೂಜ್ಯನಾದ, ಅಯಂ= ಈ ಪರಮಾತ್ಮನು, ಯೋಗೈಃ= '**ಯೋಗಃ ಸನ್ನಹನೋಪಾಯಃ**' ಎಂದು ಅಭಿಧಾನವಿರುವುದರಿಂದ ತನ್ನ ಲೀಲಾರೂಪವಾದ ಉಪಾಯಗಳಿಂದ, ಜೀವರನ್ನು ಎಂದು ಅಧ್ಯಾಹಾರ ಮಾಡಬೇಕು, ಬಿಭೇದ= ದೇವಾದಿಭೇದ ವಿಶಿಷ್ಟರನ್ನಾಗಿ ಸೃಷ್ಟಿ ಮಾಡಿದನು. ಅನಾದಿನಿತ್ಯರಾದ ಜೀವರಿಗೆ ಈಶ್ವರನಿಂದಲಾದರೂ ಹೇಗೆ ಉತ್ಪತ್ತಿಯು ಉಂಟಾಗುತ್ತದೆ ಎಂಬ ಶಂಕೆಗೆ '**ಯಾವಲ್ಲಿಂಗಾನ್ವಿತೋ ಹ್ಯಾತ್ಮಾ ತಾವತ್ ಕರ್ಮನಿಬಂಧನಮ್**' (ಜೀವನು

ಲಿಂಗದೇಹದಿಂದ ಕೂಡಿರುವವರೆಗೆ ಅವನ ಜೊತೆಯಲ್ಲಿ ಕರ್ಮಗಳು ಮತ್ತು ಆ ಕರ್ಮ ಸಂಬಂಧದಿಂದ ಬಂದ ದೇಹವೂ ಇರುತ್ತದೆ), 'ಜೀವೋ ನಿತ್ಯೋ ಧಾತುರಸ್ಯ ತ್ವನಿತ್ಯಃ' (ಜೀವನು ನಿತ್ಯನಾದವನು ಆದರೆ ಅವನ ಶರೀರಧಾತುವಾದ ರಕ್ತ-ಮಾಂಸಾದಿಗಳು ಅನಿತ್ಯವಾದವು) ಇತ್ಯಾದಿ ಪ್ರಮಾಣಗಳಲ್ಲಿ ಹೇಳಿದ ರೀತಿಯಲ್ಲಿ ಜೀವರು ಸ್ವರೂಪತಃ ನಿತ್ಯರಾದರೂ ಅನಾದಿಸಿದ್ಧವಾದ ಲಿಂಗದೇಹದ ಸಂಬಂಧದಿಂದ ಮಧ್ಯೆ ಉಂಟಾಗುವ ಜನನಾದಿ ಧರ್ಮವಿಶಿಷ್ಟವಾದ ಸ್ಥೂಲದೇಹಗಳು ಭಗವಂತನಿಂದ ಸೃಷ್ಟಿಸಲ್ಪಡುತ್ತವೆ ಎಂದು 'ಯತೋ ವಾ ಇಮಾನಿ ಭೂತಾನಿ ಜಾಯಂತೇ' ಇತ್ಯಾದಿ ಶ್ರುತಿಗಳಲ್ಲಿ ಹೇಳಿರುವುದರಿಂದ ದೇಹವಿಶಿಷ್ಟರಾದ ಜೀವರ ಉತ್ಪತ್ತಿಯು ಉಪಪನ್ನವಾಗುತ್ತದೆ ಎಂದು ಹೇಳಿ, ಧೃತರಾಷ್ಟ್ರನ ಶಂಕೆಯನ್ನು ಪರಿಹರಿಸುತ್ತಾರೆ. ಅನಾದಿಯೋಗೇನ= ಅನಾದಿಕಾಲದಿಂದ ಪ್ರಾಪ್ತವಾದ ಲಿಂಗದೇಹ ಸಂಬಂಧ ಎಂಬ ಕಾರಣದಿಂದಾಗಿ, ನಿತ್ಯಃ= ಸ್ವರೂಪವಿವಕ್ಷೆಯಿಂದ ಜೀವರು ನಿತ್ಯರಾದರೂ, ಭವಂತಿ= ಈಶ್ವರನಿಂದಲೇ ಸೃಷ್ಟಿಸಲ್ಪಡುತ್ತಾರೆ. ಹಾಗಾದರೆ ಇಂತಹ ಅನಂತ ಜೀವರ ಮಧ್ಯದಲ್ಲಿ ಈಶ್ವರನಿಗೂ ಮತ್ತು ಜೀವರಿಗೂ ಚೇತನತ್ವ ಸಾಮ್ಯವಿರುವುದರಿಂದ ಯಾವನಾದರೂ ಒಬ್ಬ ಜೀವನು ವಿಷ್ಣುವಿನ ಸಾಮ್ಯಾಧಿಕ್ಯವನ್ನು ಪಡೆಯುತ್ತಾನೆಯೋ ಎಂಬ ಶಂಕೆಗೆ 'ನ ತೇ ವಿಷ್ಣೋ ಜಾಯಮಾನೋ ನ ಜಾತೋ ದೇವ ಮಹಿಮ್ನಃ ಪರಮಂತಮಾಪ' (ವಿಷ್ಣುವೇ ದೇವನೇ ಹಿಂದೆ ಹುಟ್ಟಿದವನು, ಈಗ ಹುಟ್ಟಿರುವವನು ಮತ್ತು ಮುಂದೆ ಹುಟ್ಟುವವನು ಯಾವನೂ ನಿನ್ನ ಮಹಿಮೆಯ ಅಂತವನ್ನು ಹೊಂದಲಾರ), 'ಸಾಮ್ಯಂ ನ ಚಾಸ್ಯ ಪರಮೇಣ ಚ ಕೇನ ಚಾऽಪ್ಯಮ್' (ಯಾವ ಜೀವನೂ ಸತ್ತಮನಾದ ಪರಮಾತ್ಮನೂ ಸಾಮ್ಯವನ್ನು ಹೊಂದುವುದಿಲ್ಲ), 'ನ ವಿಷ್ಣೋಃ ಸದೃಶಃ ಕಶ್ಚಿತ್ ಭೂತೋ ವಾ ಭವಿತಾऽಪಿ ವಾ' (ಹಿಂದೆ ಹುಟ್ಟಿದ ಅಥವಾ ಮುಂದೆ ಹುಟ್ಟುವ ಯಾವನೂ ವಿಷ್ಣುವಿಗೆ ಸದೃಶನಾಗುವುದಿಲ್ಲ) ಇತ್ಯಾದಿ ಅನೇಕ ಶ್ರುತಿ-ಸ್ಮೃತಿಗಳ ಬಲದಿಂದ ಯಾವ ಜೀವನೂ ವಿಷ್ಣುವಿನ ಸಾಮ್ಯವನ್ನಾಗಲೀ, ಆಧಿಕ್ಯವನ್ನಾಗಲೀ ಪಡೆಯುವುದಿಲ್ಲ ಎಂದು ಹೇಳುತ್ತಾರೆ. ಮೂರನೆಯ ಪಾದದಲ್ಲಿರುವ ತಥಾ ಎಂಬುದು ಒಂದು ಅವ್ಯಯ. ಅವ್ಯಯಗಳಿಗೆ ಅನೇಕಾರ್ಥವಿರುವುದರಿಂದ ಇಲ್ಲಿ ತಥಾಶಬ್ದಬಲದಿಂದಾಗಿ ಸಾಮ್ಯ ಎಂದು ಅನುಸಂಧಾನ ಮಾಡಲ್ಪಡುತ್ತದೆ. ತಥಾ ಎಂದರೆ ಆದರೂ ಎಂದು ಇನ್ನೊಂದು ಅರ್ಥ. ಈಗ ತಥಾ= ಜೀವೇಶ್ವರರು ಇಬ್ಬರೂ ಚೇತನತ್ವ ಸಾಮ್ಯವನ್ನು ಹೊಂದಿದ್ದರೂ,

ಅಸ್ಯ= ಈ ವಿಷ್ಣುವಿನ, ಕಿಂಚಿತ್= ಸ್ವಲ್ಪವಾದರೂ, ಆಧಿಕ್ಯಂ= ಆಧಿಕ್ಯವನ್ನಾಗಲೀ, ಅಥವಾ ತಥಾ ಶಬ್ದ ಸೂಚಕವಾದ ಸಾಮ್ಯವನ್ನಾಗಲೀ, ನೋಪೈತಿ= ಪಡೆಯುವುದಿಲ್ಲ, ಈಶ್ವರನಿಗೆ ಸಮಾಧಿಕರು ಇಲ್ಲದಿರುವುದರಿಂದ ಅವನು ಸರ್ವೋತ್ತಮನಾಗಲಿ, ಆದರೆ ಅವನಿಗೆ ಸರ್ವಜೀವನಿಯಾಮಕತ್ವವನ್ನು ಏಕೆ ಒಪ್ಪಬೇಕು ಎಂಬ ಪ್ರಶ್ನೆಗೆ 'ರೂಪಂ ರೂಪಂ ಪ್ರತಿರೂಪೋ ಬಭೂವ' (ಜೀವನ ಒಂದೊಂದು ರೂಪಕ್ಕೂ ಪರಮಾತ್ಮನು ಬಿಂಬನಾಗಿದ್ದಾನೆ, ಪರಮಾತ್ಮನ ಒಂದೊಂದು ರೂಪಕ್ಕೆ ಒಬ್ಬೊಬ್ಬ ಜೀವನು ಪ್ರತಿಬಿಂಬನಾಗಿದ್ದಾನೆ), 'ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ' (ಜೀವೇಶ್ವರರೆಂಬ ಎರಡು ಹಕ್ಕಿಗಳು ದೇಹವೆಂಬ ಒಂದೇ ವೃಕ್ಷದಲ್ಲಿ ಸ್ನೇಹಿತರಾಗಿ ಜೊತೆಗೂಡಿ ಒಬ್ಬೊರನ್ನೊಬ್ಬರು ಆಲಿಂಗಿಸಿಕೊಂಡಿದ್ದಾರೆ) ಇತ್ಯಾದಿ ಶ್ರುತಿಗಳಲ್ಲಿ ಹೇಳಿದ ಜೀವೇಶ್ವರರಿಗೆ ಅನಾದಿಕಾಲದಿಂದಲೂ ಬಿಂಬ-ಪ್ರತಿಬಿಂಬಭಾವವು ಸಿದ್ಧವಾಗಿರುವುದರಿಂದ ಪ್ರತಿಬಿಂಬನಾದ ಜೀವನು ಈಶ್ವರನಿಗೆ ಅಧೀನವಾದ ಅಸ್ತಿತ್ವವುಳ್ಳವನು, ಈಶ್ವರನು ಸ್ವತಂತ್ರವಾದ ಅಸ್ತಿತ್ವವುಳ್ಳವನು ಎಂಬ ಕಾರಣದಿಂದ ಜೀವರಿಗೆ ನಿಯಮ್ಯತ್ವವೂ ಈಶ್ವರನಿಗೆ ನಿಯಾಮಕತ್ವವೂ ಸಿದ್ಧವಾಗುತ್ತದೆ ಎಂದು ಹೇಳುತ್ತಾರೆ. ಪುಂಸಃ= ಪೂರ್ಣಷಡ್ಗುಣವುಳ್ಳ ವಿಷ್ಣುವಿನ, ಅನಾದಿಯೋಗೇನ= ಅನಾದಿಸಿದ್ಧವಾದ ಬಿಂಬರೂಪನಾದ ಅವನ ಸಂಬಂಧದಿಂದ, ಭವಂತಿ= ಅನಾದಿ ಕಾಲದಿಂದಲೂ ಅವನ ಆಧೀನವಾದ ಅಸ್ತಿತ್ವವುಳ್ಳ ಪ್ರತಿಬಿಂಬರಾದ ಸರ್ವಜೀವರೂ ಉತ್ಪತ್ತಿಯನ್ನು ಪಡೆಯುತ್ತಾರೆ. ಸಮಾಧಿಕರಹಿತನಾದುದರಿಂದ ಮತ್ತು ಆಪ್ತ ಸಮಸ್ತ ಕಾಮನಾದುದರಿಂದ ವಿಷ್ಣುವಿಗೆ ಜಗತ್ತಿನ ಸೃಷ್ಟ್ಯಾದಿಗಳಿಂದ ತನಗೆ ಪ್ರಯೋಜನವಿಲ್ಲದಿದ್ದರೂ ತನಗೆ ಅಧೀನರಾದ ಅನಂತಜೀವರಿಗೆ ಅವರವರ ಯೋಗ್ಯತೆಯನ್ನು ಅಭಿವ್ಯಕ್ತ ಮಾಡಿ ಚಿದಚಿದಾತ್ಮಕವಾದ ಮುಕ್ತಿ, ತಮಸ್ಸುಗಳನ್ನು ಕೊಡುವುದರಿಂದ ಸ್ವಾಭಾವಿಕವಾದ ಪರೋಪಕಾರರೂಪವಾದ ಪ್ರಯೋಜನವು ಸಿದ್ಧವಾಗುತ್ತದೆ ಎಂದು ಸಮಗ್ರ ಶ್ಲೋಕದ ಅಭಿಪ್ರಾಯ.

ಇದೇ ಶ್ಲೋಕದಲ್ಲಿ ಪೂರ್ವಾರ್ಧಕ್ಕೆ 'ದೋಷೋ ಮಹಾನತ್ರ ಬಿಭೇದಯೋಗೇ ಹ್ಯನಾದಿಯೋಗೇನ ಭವಂತಿ ನಿತ್ಯಾಃ' ಎಂದು ಪಾಠಾಂತರವಿದೆ. ಆ ಪಾಠವನ್ನು ತೆಗೆದುಕೊಂಡರೆ ಅತ್ರ= ಭೂತ-ಭವಿಷ್ಯದ್-ವರ್ತಮಾನಭೇದದಿಂದ ಮೂರುರೂಪವಾದ ಕಾಲದಲ್ಲಿ, ಅನಾದಿಯೋಗೇನ= ಅನಾದಿಕಾಲದಿಂದಲೂ

ಭಗವಂತನಿಂದ ಅಭಿನ್ನನಾಗಿರುವ ಅವನ ಇಚ್ಛಾನಿಮಿತ್ತದಿಂದ, ಹಿಶಬ್ದಸೂಚಿತವಾದ ಪ್ರತ್ಯೇಕವಾಗಿ ಅನಾದಿನಿತ್ಯವಾದ ಅನಂತ ಭಗವದವತಾರಗಳು, ಭವಂತಿ= ಇರುತ್ತವೆ, ಬಿಭೇದಯೋಗೇ= ಇಂತಹ ಪರಮಾತ್ಮನ ಅವತಾರರೂಪಗಳಿಗೆ ಪರಸ್ಪರ ಭೇದ ಸಂಬಂಧವನ್ನು ಅಂಗೀಕಾರ ಮಾಡಿದರೆ, ಮಹಾನ್ ದೋಷಃ= ಪುನರಾವೃತ್ತಿ ಇಲ್ಲದಿರುವ ತಮಃ ಪ್ರಾಪ್ತಿಸಾಧಕವಾದ ಮಿಥ್ಯಾಜ್ಞಾನರೂಪವಾದ ದೊಡ್ಡ ದೋಷವು ಉಂಟಾಗುತ್ತದೆ ಎಂದು ಅಭಿಪ್ರಾಯ.

ಭಾರತ ಶ್ರೀನಿವಾಸಾಚಾರ್ಯರು ಅತ್ರ= ನಿರ್ದಿಷ್ಟನಾದ ಪರಮಾತ್ಮನಲ್ಲಿ, ಮಹಾನ್ ದೋಷಃ= ಪಾರತಂತ್ರ್ಯಾದಿ ದೋಷವು, ನ= ಕೂಡುವುದಿಲ್ಲ ಮುಂತಾದ ರೀತಿಯಲ್ಲಿ ವ್ಯಾಖ್ಯಾನ ಮಾಡುತ್ತಾರೆ. ಅವರು 'ದೋಷೋ ಮಹಾನ್ ನಾತ್ರ' ಎಂಬ ಪಾಠವನ್ನು ಹಿಡಿದಿರುತ್ತಾರೆ.

**ಯದೇತದಾಹ ಭಗವಾನ್ ಸ ನಿತ್ಯಂ**
**ವಿಕಾರಯೋಗೇನ ಕರೋತಿ ವಿಶ್ವಮ್ ।**
**ತಥಾऽಸ್ಯ ಶಕ್ತಿಶ್ಚ ತಥೇತಿ ಮನ್ಯೇ**
**ತಥಾऽರ್ಥಯೋಗೇ ಚ ಭವಂತಿ ವೇದಾಃ** ॥೨॥

ಸರ್ವಜ್ಞರಾದ ಸನತ್ಸುಜಾತರು ಹೀಗೆ ಮೊದಲನೆಯ ಶ್ಲೋಕದಲ್ಲಿ ಅನ್ಯನಿರಪೇಕ್ಷನಾಗಿಯೇ ಪರಬ್ರಹ್ಮನು ಜಗಜ್ಜನ್ಮಾದಿಗಳನ್ನು ಮಾಡುತ್ತಾನೆ ಎಂದು ಹೇಳಿ, ಈ ಎರಡನೆಯ ಶ್ಲೋಕದಲ್ಲಿ ಅನೇಕ ಶ್ರುತಿ-ಸ್ಮೃತಿಗಳಲ್ಲಿ ಉಕ್ತವಾದ ವಚನಗಳಿಗೆ ಅನುಸಾರವಾಗಿ ಪ್ರವಾಹತಃ ಅನಾದಿ ನಿತ್ಯವಾದ, ಪ್ರಕೃತಿವಿಕಾರವಾದ, ಸತ್ಯವಾದ, ಇನ್ನೊಬ್ಬನಿಂದ ಮಾಡಲು ಅಸಾಧ್ಯವಾದ ಜಗತ್‌ಸೃಷ್ಟಿಯನ್ನು ಹೇಳುವ ಮೂಲಕ ಹಿಂದಿನ ಶ್ಲೋಕದಲ್ಲಿ ಹೇಳಿದ ಕರ್ತೃತ್ವವನ್ನೇ ಸ್ಪಷ್ಟಪಡಿಸುತ್ತಾರೆ. ಹಿಂದಿನ ಶ್ಲೋಕದಲ್ಲಿ ಚೇತನ ಸೃಷ್ಟಿಯನ್ನು ಹೇಳಿದ್ದಾಯಿತು. ಇಲ್ಲಿ ಜಡ ಸೃಷ್ಟಿಯನ್ನು ಹೇಳುತ್ತಾರೆ.

ಸಃ ಭಗವಾನ್= ನಿತ್ಯಾನಂದನಾದ ಭಗವಂತನು, ನಿತ್ಯಂ= ಪ್ರವಾಹ ರೂಪದಿಂದ ಅನಾದಿನಿತ್ಯವಾದ ಪ್ರತ್ಯಕ್ಷಾದಿಸಿದ್ಧವಾದ, ವಿಶ್ವಂ= 'ವಿಶ್ವಂ ಸತ್ಯಂ ಮಘವಾನಾ ಯುವೋಃ' (ಎಲೈ ಮಘವಂತರೇ ನೀವಿಬ್ಬರೂ ಸೃಷ್ಟಿ ಮಾಡಿದ ಈ ಪ್ರಪಂಚವು

ಸತ್ಯವಾದುದು) ಇತ್ಯಾದಿ ಶ್ರುತಿ ಸಿದ್ಧವಾದ ಸತ್ಯವಾದ ಜಗತ್ತನ್ನು, ವಿಕಾರಯೋಗೇನ= ಗುಣತ್ರಯಗಳು, ಮಹದಹಂಕಾರ, ಪಂಚಭೂತಗಳು ಮತ್ತು ಪಂಚತನ್ಮಾತ್ರಗಳು ಇವುಗಳ, ಯೋಗೇನ ಎಂದರೆ ಪಂಚೀಕರಣ ಉಪಾಯದಿಂದ, ಕರೋತಿ= ನಿರ್ಮಾಣ ಮಾಡುತ್ತಾನೆ. ಏತತ್= ಈ ಪ್ರಮೇಯವನ್ನು, ಭಗವಾನ್= ಸರ್ವಪೂಜ್ಯವಾದ, ವೇದಃ= ವೇದವು, ಆಹ= 'ತತ್ಸೃಷ್ಟ್ವಾ ತದೇವಾನು ಪ್ರಾವಿಶತ್' ಇತ್ಯಾದಿ ವಾಕ್ಯಗಳಿಂದ ಹೇಳುತ್ತದೆ. ಅನೇಕ ವೇದವಾಕ್ಯಗಳು ಬ್ರಹ್ಮನಿಗೇ ಜಗಜ್ಜನ್ಮಾದಿಕರ್ತೃತ್ವವೆಂದು ಹೇಳಲಿ, ಆದರೆ ನೀವು ಸರ್ವಜ್ಞರಾದ ಋಷಿಗಳಾದ್ದರಿಂದ ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು ಎಂಬ ಪ್ರಶ್ನೆಗೆ ಉತ್ತರಾರ್ಧದಲ್ಲಿ ಉತ್ತರವನ್ನು ಹೇಳುತ್ತಾರೆ. ಮನ್ಯೇ ಎಂಬ ಉತ್ತಮ ಪುರುಷ ಕ್ರಿಯಾಪದ ಪ್ರಯೋಗವಿರುವುದರಿಂದ, ಅಹಂ ಎಂಬ ಪದವು ಲಬ್ಧವಾಗುತ್ತದೆ. ಅಹಂ ಚ= ಸನತ್ಸುಜಾತ ನಾಮವನ್ನು ಧರಿಸಿದ ನಾನೂ ಸಹ, ತಥಾ= ಶ್ರುತ್ಯಾದಿಗಳಲ್ಲಿ ಹೇಳಿದುದಕ್ಕೆ ಅನುಗುಣವಾಗಿಯೇ, ಶಕ್ತಿಃ ಇತಿ= ಭಗವಂತನಿಂದ ಅಭಿನ್ನವಾದ ಅವನ ಶಕ್ತಿಯು, ಕರೋತಿ ಇತಿ ಮನ್ಯೇ= ಸೃಷ್ಟಿ ಮಾಡುತ್ತದೆ ಎಂದು ತಿಳಿಯುತ್ತೇನೆ. ಶಕ್ತಿ ಮತ್ತು ಶಕ್ತಿ ಉಳ್ಳ ಪದಾರ್ಥಗಳಿಗೆ ಅಭೇದವಿರುವ ಅಭಿಪ್ರಾಯದಿಂದ ಪರಮಾತ್ಮನ ವಿಷಯದಲ್ಲಿ ಪ್ರಶ್ನೆಯನ್ನು ಮಾಡಿದರೂ ಪರಮಾತ್ಮನ ಶಕ್ತಿಯು ಸೃಷ್ಟಿ ಮಾಡುತ್ತದೆ ಎಂದು ಉತ್ತರವನ್ನು ಹೇಳುತ್ತಾರೆ. ಪರಮಾತ್ಮನೇ ಜಗತ್ಸೃಷ್ಟಿಯನ್ನು ಮಾಡುತ್ತಾನೆ ಎಂದು ನಾನೂ ಸಹ ತಿಳಿದಿದ್ದೇನೆ ಎಂದು ತಾತ್ಪರ್ಯ. ತಮ್ಮ ಅಭಿಪ್ರಾಯವೂ ಸಹ ವೇದಗಳಿಗೆ ಅನುಗುಣವಾದುದೆಂದು ತಿಳಿಸಲು ಪುನಃ ವೇದವಾಕ್ಯಗಳ ಸಮ್ಮತಿಯನ್ನು ನಾಲ್ಕನೆಯ ಚರಣದಿಂದ ಹೇಳುತ್ತಾರೆ. ವೇದಾಃ= 'ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ' (ಅವನ ಸರ್ವೋತ್ತಮವಾದ ಶಕ್ತಿಯು ಅನೇಕ ವಿಧವಾದುದೆಂದು ಶ್ರುತಿಗಳಲ್ಲಿ ತಿಳಿದುಬರುತ್ತದೆ. ಅದರಂತೆ ಅವನ ಸ್ವಾಭಾವಿಕವಾದ ಜ್ಞಾನ-ಬಲ-ಕ್ರಿಯೆಗಳೂ ಶ್ರುತಿಗಳಿಂದ ತಿಳಿದುಬರುತ್ತವೆ) ಇತ್ಯಾದಿ ವೇದಗಳು, ತಥಾರ್ಥಯೋಗೇ ಚ = ನನ್ನ ಅಭಿಪ್ರಾಯಕ್ಕೂ ಅನುಗುಣವಾದ ಜಗತ್ತು ಭಗವಂತನ ಶಕ್ತಿಯಿಂದ ಜನ್ಯ ಎಂಬ ಅರ್ಥಸಂಬಂಧವನ್ನು ಹೇಳುವ ವಿಷಯದಲ್ಲಿ, ಭವಂತಿ= ಪ್ರಮಾಣವಾಗುತ್ತವೆ. ಸಮ್ಮತಿಯನ್ನು ಸೂಚಿಸುತ್ತವೆ. ಆದ್ದರಿಂದ ವೇದವಚನಕ್ಕೂ ಮತ್ತು ನನ್ನ ಅಭಿಪ್ರಾಯಕ್ಕೂ ಏಕವಾಕ್ಯತೆ ಇದೆ ಎಂದು ತಾತ್ಪರ್ಯ.

## ಧೃತರಾಷ್ಟ್ರಃ

**ಯಸ್ಮಾದ್ ಧರ್ಮಾನಾಚರಂತೀಹ ಕೇಚಿತ್**
**ತಥಾऽಧರ್ಮಾನ್ ಕೇಚಿದಿಹಾಚರಂತಿ ।**
**ಧರ್ಮಃ ಪಾಪೇನ ಪ್ರತಿಹನ್ಯತೇ ವಾ**
**ಉತಾಹೋ ಧರ್ಮಃ ಪ್ರತಿಹಂತಿ ಪಾಪಮ್** ॥೩॥

ಹೀಗೆ ಸಕಲ ಶಾಸ್ತ್ರಸಮ್ಮತಿಯಿಂದ ಭಗವಂತನ ಜಗಜ್ಜನ್ಮಾದಿ ಕರ್ತೃತ್ವನಿಯಮವನ್ನು ತಿಳಿದ ಧೃತರಾಷ್ಟ್ರನು ಈಗ ಶ್ರುತಿವಿಹಿತವಾದ ನಿಷ್ಕಾಮ, ಸಕಾಮ ಭೇದಭಿನ್ನವಾದ ಎರಡು ವಿಧವಾದ ಪುಣ್ಯಕರ್ಮಗಳ ಮಧ್ಯದಲ್ಲಿ ನಿಷ್ಕಾಮ ಕರ್ಮವೇ ಪುನರಾವೃತ್ತಿ ರಹಿತವಾದ ಸ್ಥಾನವನ್ನು ಹೊಂದಿಸುವುದರಿಂದ ಅದನ್ನೇ ಮಾಡಬೇಕೆ? ಅಥವಾ ಕಾಮ್ಯಕರ್ಮಗಳನ್ನು ಮಾಡಬೇಕೆ? ಎಂದು ಕರ್ಮಸ್ವರೂಪವನ್ನು ತಿಳಿಯಲು ಬಯಸಿ ಪ್ರಶ್ನೆಯನ್ನು ಮಾಡುತ್ತಾನೆ. ಇಹ ಲೋಕೇ= ಮನುಷ್ಯ ಲೋಕದಲ್ಲಿ, ಕೇಚಿತ್= ಅಪರೋಕ್ಷ ಜ್ಞಾನಸಂಪನ್ನರಾದ ಕೆಲವು ಅಧಿಕಾರಿಗಳು, ಧರ್ಮಾನ್= ನಿವೃತ್ತಿ ಧರ್ಮಗಳನ್ನು, ಆಚರಂತಿ= ನಿಷ್ಕಾಮನೆಯಿಂದ ವಿಷ್ಣುಪ್ರೀತ್ಯರ್ಥವಾಗಿ ಆಚರಿಸುತ್ತಾರೆ ಎಂದು ಪ್ರಸಿದ್ಧವಾಗಿದೆ. ತಥಾ= ಅದರಂತೆ ಪ್ರಾರಬ್ಧವಶದಿಂದ ಅವರೇ, ಅಧರ್ಮಾನ್= ಅಗಮ್ಯಾಗಮನಾದಿ ರೂಪ ಕರ್ಮಗಳನ್ನೂ, ಆಚರಂತಿ= ಆಚರಿಸುತ್ತಾರೆ. ಹೀಗಿರುವಾಗ, ಧರ್ಮಃ= ಮೊದಲು ಆಚರಣೆ ಮಾಡಿದ ನಿವೃತ್ತಿ ಧರ್ಮವು, ಪಾಪೇನ= ಅನಂತರದಲ್ಲಿ ಮಾಡಿದ ಪಾಪಕರ್ಮದಿಂದ, ಪ್ರತಿಹನ್ಯತೇ ವಾ= ವಿನಾಶವನ್ನು ಹೊಂದುತ್ತದೆಯೇ? ಉತಾಹೋ= ಅಥವಾ, ಧರ್ಮಃ= ಮೊದಲು ಮಾಡಿದ ನಿವೃತ್ತಿ ಧರ್ಮವೇ ಸ್ವಯಂ ವಿನಾಶವನ್ನು ಹೊಂದದೆ, ಪಾಪಂ= ಅನಂತರ ಮಾಡಿದ ಪಾಪವನ್ನು, ಪ್ರತಿಹಂತಿ ವಾ= ವಿನಾಶವನ್ನು ಮಾಡುತ್ತದೆಯೇ?

ಅಥವಾ ಇಲ್ಲಿ ಕೇಚಿತ್ ಎಂಬ ಪದದಿಂದ ಗೃಹಸ್ಥಾಶ್ರಮಿಗಳನ್ನೇ ತೆಗೆದುಕೊಳ್ಳಬೇಕು. ಯಸ್ಮಾತ್= ಶ್ರುತಿಯಲ್ಲಿ ವಿಹಿತವಾಗಿದೆ ಎಂಬ ಕಾರಣದಿಂದ, ಇಹಲೋಕೇ= ಈ ಮನುಷ್ಯಲೋಕದಲ್ಲಿ, ಕೇಚಿತ್= ಮಧ್ಯಮಾಧಿಕಾರಿಗಳಾದ ಗೃಹಸ್ಥಾಶ್ರಮಿಗಳಾದ ಪುರುಷರು, ಧರ್ಮಾನ್= 'ಪ್ರಾತಃಸಂಧ್ಯಾಂ ಉಪಾಸೀತ' ಮೊದಲಾದ ಶ್ರುತಿ ವಿಹಿತವಾದ ಧರ್ಮಗಳನ್ನು, ಆಚರಂತಿ= ಆಚರಿಸುತ್ತಾರೆ. ತಥಾ=

ಅದರಂತೆ, ಅಧರ್ಮಾನ್= ದುಷ್ಪ್ರತಿಗ್ರಹರೂಪವಾದ ಅಧರ್ಮವನ್ನೂ, ಆಚರಂತಿ= ಆಚರಿಸುತ್ತಾರೆ. ಧರ್ಮಃ= ತಾವು ಅನುಷ್ಠಾನ ಮಾಡಿದ ಸಂಧ್ಯಾವಂದನಾದಿ ರೂಪವಾದ ನಿಷ್ಕಾಮ ಧರ್ಮವು, ಪಾಪೇನ= ದುಷ್ಪ್ರತಿಗ್ರಹ ಮೊದಲಾದ ಪಾಪಗಳಿಂದ, ಪ್ರತಿಹನ್ಯತೇ ಕಿಂ= ವಿನಾಶವನ್ನು ಹೊಂದುತ್ತದೆಯೇ? ಉತಾಹೋ= ಅಥವಾ, ಧರ್ಮಃ= ಸಂಧ್ಯಾವಂದನಾದಿ ರೂಪವಾದ ಧರ್ಮವೇ, ಪಾಪಂ= ದುಷ್ಪ್ರತಿಗ್ರಹಾದಿ ರೂಪವಾದ ಅಧರ್ಮವನ್ನು, ಪ್ರತಿಹಂತಿ ವಾ= ವಿನಾಶವನ್ನು ಮಾಡುತ್ತದೆಯೇ? ಹೀಗೆ ಅನುಷ್ಠಾನ ಮಾಡಿದ ಸಕಾಮ, ನಿಷ್ಕಾಮ ಕರ್ಮಗಳು ಪರಸ್ಪರ ವಿರುದ್ಧವಾದುದರಿಂದ ಒಂದರಿಂದ ಇನ್ನೊಂದು ನಾಶವನ್ನು ಹೊಂದುತ್ತದೆಯೇ ಅಥವಾ ಇಲ್ಲವೇ ಎಂದು ಪ್ರಶ್ನೆಯ ಅಭಿಪ್ರಾಯ.

'ಇಹ ಕೇಚಿತ್' ಎಂಬ ಒಂದು ಪಾಠವೂ, 'ಇಹ ಲೋಕೇ' ಎಂದು ಇನ್ನೊಂದು ಪಾಠವೂ ಇರುವುದರಿಂದ ಇಲ್ಲಿ 'ಇಹ ಲೋಕೇ' ಎಂಬ ಪಾಠವನ್ನು ಹಿಡಿದು ವ್ಯಾಖ್ಯಾನ ಮಾಡಿದ್ದಾರೆ.

**ಸನತ್ಸುಜಾತಃ**

**ತಸ್ಮಿನ್ ಸ್ಥಿತೋ ವಾऽಪ್ಯಭಯಂ ಹಿ ನಿತ್ಯಂ**
**ಜ್ಞಾನೇನ ವಿದ್ವಾನ್ ಪ್ರತಿಹಂತಿ ಸಿದ್ಧಿಮ್ ।**
**ಅತೋऽನ್ಯಥಾ ಪುಣ್ಯಮುಪೈತಿ ದೇಹೀ**
**ತಥಾಗತಂ ಪಾಪಮುಪೈತಿ ಸಿದ್ಧಿಮ್ ॥೪॥**

ಹೀಗೆ ಧೃತರಾಷ್ಟ್ರನಿಂದ ಕೇಳಲ್ಪಟ್ಟ ಸನತ್ಸುಜಾತರು ಜ್ಞಾನಿ ಮತ್ತು ಅಜ್ಞಾನಿಗಳು ಆಚರಿಸಿದ ಪುಣ್ಯಪಾಪ ಕರ್ಮಗಳಿಗೆ ಅಧಿಕಾರಿಭೇದದಿಂದ ಆಯಾ ಅಧಿಕಾರಿಗಳಿಗೆ ಅನುಸಾರವಾದ ಫಲವೇ ಉಂಟಾಗುವುದೆಂದು ತಿಳಿಸಲು ಉಭಯವಿಧವಾದ ಅಧಿಕಾರಿಗಳ ಪ್ರವೃತ್ತಿ ಪ್ರಕಾರವನ್ನು ತಿಳಿಸುತ್ತಾರೆ.

ತಸ್ಮಿನ್= ಆ ಪರಮಾತ್ಮನಲ್ಲಿ, ನಿತ್ಯಂ ಸ್ಥಿತಃ= ಒಂದೇ ರೀತಿಯಿಂದ ಅವನಲ್ಲೇ ನಿಷ್ಠೆಯನ್ನುಳ್ಳ, ವಿದ್ವಾನ್= ಅಪರೋಕ್ಷ ಜ್ಞಾನಿಯು, ಉಭಯಂ= ಸಂಚಿತ ಮತ್ತು ಆಗಾಮಿಗಳಾದ ಪುಣ್ಯ-ಪಾಪವೆರಡನ್ನೂ, ಪ್ರತಿಹಂತಿ= 'ತದಾ ವಿದ್ವಾನ್ ಪುಣ್ಯಪಾಪೇ

ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ' (ಅಪರೋಕ್ಷಜ್ಞಾನಿಯು ಪುಣ್ಯ ಪಾಪವೆರಡನ್ನೂ ಕಳೆದುಕೊಂಡು ದೋಷರಹಿತನಾಗಿ ಪರಮಾತ್ಮನ ನಿರ್ದುಃಖಿತ್ವಾದಿ ರೂಪವಾದ ಶ್ರೇಷ್ಠ ಸಾಮ್ಯವನ್ನೂ ಹೊಂದುತ್ತಾನೆ). 'ತದಧಿಗಮ ಉತ್ತರಪೂರ್ವಾಘಯೋರಶ್ಲೇಷವಿನಾಶೌ ತದ್ವ್ಯಪದೇಶಾತ್' (ಪರಮಾತ್ಮನ ಅಪರೋಕ್ಷಜ್ಞಾನವು ಉಂಟಾದಾಗ ಸಂಚಿತ ಮತ್ತು ಆಗಾಮಿ ಪಾಪಗಳು ವಿನಾಶವನ್ನೂ ಮತ್ತು ಅಶ್ಲೇಷವನ್ನು ಪಡೆಯುತ್ತವೆ) ಎಂಬ ಪ್ರಮಾಣಗಳಿಗೆ ಅನುಸಾರವಾಗಿ ವಿನಾಶಗೊಳಿಸುತ್ತಾನೆ. ಸಿದ್ಧಿಂ ಹಿ= ನಶ್ವರ ಪುಣ್ಯ-ಪಾಪ ಜನಿತವಾದ ಸ್ವರ್ಗ-ನರಕಾದಿ ಪ್ರಾಪ್ತಿರೂಪವಾದ ಸಿದ್ಧಿಯನ್ನೂ ಸಹ, ಪ್ರತಿಹಂತಿ= ಅದನ್ನೂ ನಾಶ ಮಾಡುತ್ತಾನೆ. ಈ ರೀತಿಯಾಗಿ ಭಗವದ್ಭಕ್ತಿಭರಿತನಾದ ಅಪರೋಕ್ಷ ಜ್ಞಾನಿಯು ಎಲ್ಲ ಪುಣ್ಯಕರ್ಮಗಳನ್ನೂ ಭಗವಂತನ ಪ್ರೀತಿಯ ಉದ್ದೇಶದಿಂದ ಅನುಷ್ಠಾನ ಮಾಡಬೇಕೆಂದು ತಿಳಿದು ಕರ್ಮಗಳಲ್ಲಿ ಪ್ರವೃತ್ತನಾಗುತ್ತಾನೆ. ಅತಃ ಅನ್ಯಥಾ= ಇದಕ್ಕೆ ವಿಪರೀತವಾಗಿ ಧರ್ಮಾಚರಣಶೀಲನಾದ, ದೇಹೀ= ಅಪಕ್ವಯೋಗಿಯಾದ ಪುರುಷನು, ತಥಾ ಗತಂ= ಫಲೋದ್ದೇಶಪೂರ್ವಕವಾಗಿ ಮಾಡಿದ ಕರ್ಮಾಚರಣೆಯಿಂದ ಉಂಟಾದ ಫಲಾನುಭವವನ್ನು ಮಾಡದಿದ್ದರೆ ಎಂದೂ ನಾಶವನ್ನು ಹೊಂದದಿರುವ, ಪುಣ್ಯಂ= ಪುಣ್ಯವನ್ನೂ, 'ನಾಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿಶತೈರಪಿ' (ಒಂದು ಕೋಟಿ ಕಲ್ಪಗಳಾದರೂ ಭೋಗಿಸದಿದ್ದ ಕರ್ಮವು ವಿನಾಶವನ್ನು ಹೊಂದುವುದಿಲ್ಲ ಎಂಬುದಾಗಿ ಕಾಮ್ಯಕರ್ಮಸ್ವರೂಪವನ್ನು ಹೇಳಿರುವುದರಿಂದ) ಸಿದ್ಧಿಂ ಚ= ಅದರಿಂದ ಉಂಟಾದ ಸ್ವರ್ಗಪ್ರಾಪ್ತಿ ಮೊದಲಾದ ಸಿದ್ಧಿಯನ್ನೂ, ಉಪೈತಿ= ಹೊಂದುತ್ತಾನೆ. ಅಂತಹ ಕರ್ಮದಿಂದಲೇ ಪ್ರಾಪ್ತವಾದ ನರಕಾದಿ ಫಲವನ್ನೂ ಹೊಂದುತ್ತಾನೆ. ಹೀಗೆ ಪಕ್ವ ಅಪರೋಕ್ಷ ಜ್ಞಾನವುಳ್ಳವನಿಗೆ ಅಪರೋಕ್ಷಜ್ಞಾನ ಬಂದ ಕಾಲದಲ್ಲಿಯೇ ಸಂಚಿತಾಗಾಮೀ ಪುಣ್ಯಾದಿ ಕರ್ಮಗಳು ಸ್ವರೂಪತಃ ನಾಶವನ್ನು ಹೊಂದುವುದರಿಂದ ಅದರಿಂದ ಉಂಟಾದ ಸುಖ-ದುಃಖಾದಿ ರೂಪವಾದ ಫಲವನ್ನೂ ಅವನು ಅನುಭವಿಸುವುದಿಲ್ಲ. ಅಪಕ್ವಯೋಗಿಯಾದರೂ ಪುಣ್ಯ-ಪಾಪರೂಪವಾದ ಕರ್ಮನಾಶವನ್ನು ಹೊಂದುವುದಿಲ್ಲವಾದ್ದರಿಂದ ಅದರಿಂದ ಉಂಟಾದ ಸುಖ-ದುಃಖ ರೂಪವಾದ ಫಲವನ್ನು ಹೊಂದುತ್ತಾನೆ ಎಂದು (ಧೃತರಾಷ್ಟ್ರನ ಪ್ರಶ್ನೆಯ) ಉತ್ತರದ ಸಾರಾಂಶ.

ಸ್ಥಿತ್ವೋಭಯಂ ಕರ್ಮಣಿ ಭೋಜ್ಯತೇ ಸ್ಥಿರಂ
ಶುಭಸ್ಯ ಪಾಪಸ್ಯ ಸ ಚಾಪಿ ಕರ್ಮಣಃ ।
ಧರ್ಮೇಣ ಪಾಪಂ ಪ್ರಣುದತೀಹ ವಿದ್ವಾನ್
ಧರ್ಮೋ ಬಲೀಯಾನಿತಿ ತಸ್ಯ ವಿದ್ಧಿ ॥೫೫॥

ಈ ಶ್ಲೋಕದಲ್ಲಿ ಅಪರೋಕ್ಷದಶಾವಿಶಿಷ್ಟನಾದ ಜ್ಞಾನಿಯು ಮತ್ತು ಅಜ್ಞಾನಿಯು ಆಚರಿಸಿದ ಪುಣ್ಯ-ಪಾಪ ಕರ್ಮಗಳು ಕ್ರಮವಾಗಿ ನಶ್ವರವಾದ ಫಲಪ್ರಾಪಕಗಳಲ್ಲ ಮತ್ತು ಅಂತಹ ಫಲಪ್ರಾಪಕಗಳು ಎಂದು ವರ್ಣಿಸುತ್ತಾರೆ.

ಸ್ಥಿತ್ವಾಸ್ಥಿರಂ= ಸ್ಥಿರಂ ಎಂಬುದು ಕ್ರಿಯಾ ವಿಶೇಷಣ, 'ಇಷ್ಟಾಪೂರ್ತಂ ಮನ್ಯಮಾನಾ ವರಿಷ್ಠಂ ನಾನ್ಯಚ್ಛ್ರೇಯೋ ವೇದಯಂತೇ ಪ್ರಮೂಢಾಃ' (ಇಷ್ಟಾಪೂರ್ತಗಳೇ ಶ್ರೇಷ್ಠವಾದ ಸುಖಸಾಧನವೆಂದು ತಿಳಿದು ಮೂಢರಾದ ಜನರು ಅದಕ್ಕಿಂತ ಭಿನ್ನವಾದ ಪರಮಶ್ರೇಯಸ್ಸಾಧನವನ್ನು ತಿಳಿಯುವುದಿಲ್ಲ), 'ತ್ರೈವಿದ್ಯಾ ಮಾಂ ಸೋಮಪಾಃ ಪೂತಪಾಪಾಃ ಯಜ್ಞೈರಿಷ್ಟ್ವಾ ಸ್ವರ್ಗತಿಂ ಪ್ರಾರ್ಥಯಂತೇ' (ಪಾಮರ ಜನರು ನನ್ನನ್ನು ಯಜ್ಞಗಳಿಂದ ಆರಾಧಿಸಿ, ಸೋಮಪಾನವನ್ನು ಮಾಡಿ, ಪಾಪವನ್ನು ಕಳೆದುಕೊಂಡು ಸ್ವರ್ಗಪ್ರಾಪ್ತಿಯನ್ನು ಅಪೇಕ್ಷಿಸುತ್ತಾರೆ), 'ಜ್ಯೋತಿಷ್ಟೋಮೇನ ಸ್ವರ್ಗಕಾಮೋ ಯಜೇತ', 'ಅನ್ನದಾನಾದೇತೇ ಲೋಕಾಃ' (ಅನ್ನದಾನದಿಂದ ಇಂತಹ ಶುಭಲೋಕಗಳ ಪ್ರಾಪ್ತಿಯಾಗುತ್ತದೆ) ಇವೇ ಮೊದಲಾದ ಶ್ರುತಿಗಳಲ್ಲಿ ಹೇಳಿದ ಫಲದ ಆಸೆಯಿಂದ, ಕರ್ಮಣಿ= ಕಾಮ್ಯಕರ್ಮದಲ್ಲಿ ಸ್ಥಿರಂ ಸ್ಥಿತ್ವಾ= ಸ್ಥಿರವಾಗಿ ನಿಂತು, ಅದರ ಅನುಷ್ಠಾನ ಮಾಡಿ ಎಂದು ಇಟ್ಟುಕೊಳ್ಳಬೇಕು, ಸಃ= ಕಾಮ್ಯಕರ್ಮಾನುಷ್ಠಾನ ಶೀಲನಾದ ಪುರುಷನು, ಶುಭಸ್ಯ= ನಶ್ವರ ಕಾಮ್ಯ ಕರ್ಮದಿಂದ ಉಂಟಾದ ಪುಣ್ಯದ ಅದರಂತೆ, ಪಾಪಸ್ಯಾಪಿ= ಪಾಪಕರ್ಮಗಳ, ನರಕಾಪಾದಕವಾದ ನಶ್ವರ ಪಾಪಕರ್ಮಗಳ ಫಲವನ್ನು, ಭೋಜ್ಯತೇ= ಯಮದೂತರಿಂದಲೂ ಮತ್ತು ಸ್ವರ್ಗದೂತರಿಂದಲೂ ಭೋಗಿಸುವಂತೆ ಮಾಡಲ್ಪಡುತ್ತಾನೆ. ಭುಂಜತೇ ಎಂಬ ಪಾಠವಿದ್ದರೆ ಚೆನ್ನಾಗಿ ಅನುಭವಿಸುತ್ತಾನೆ ಎಂದು ಅರ್ಥ. ವಿದ್ವಾನ್= 'ಧರ್ಮಸ್ಯ ಹ್ಯಾಪವರ್ಗ್ಯಸ್ಯ ನಾರ್ಥೋರ್ಥಾಯೇಹ ಕಲ್ಪತೇ । ನಾರ್ಥಸ್ಯ ಧರ್ಮ್ಯೈಕಾಂತಸ್ಯ ಕಾಮೋ ಲಾಭಾಯ ಹಿ ಸ್ಮೃತಃ ॥' (ಮೋಕ್ಷಸಾಧನವಾದ

ಧರ್ಮಕ್ಕೆ ಅರ್ಥಪ್ರಾಪ್ತಿಯು ಪ್ರಯೋಜನವಲ್ಲ. ಧರ್ಮ ಒಂದನ್ನೇ ಪ್ರಯೋಜನವಾಗಿ ಹೊಂದಿದ ಅರ್ಥಕ್ಕೆ ಭೋಗವು ಪ್ರಯೋಜನವಲ್ಲ- ಭಾಗವತ), 'ವಾಸುದೇವಪರಾ ಮಖಾಃ' (ಎಲ್ಲ ಯಜ್ಞಗಳು ವಾಸುದೇವನನ್ನು ಉದ್ದೇಶಿಸಿಕೊಂಡು ಪ್ರವೃತ್ತವಾಗುತ್ತವೆ- ಭಾಗವತ).

'ಮಯಿ ಸರ್ವಾಣಿ ಕರ್ಮಾಣಿ ಸನ್ನ್ಯಾಧ್ಯಾತ್ಮಚೇತಸಾ । ನಿರಾಶೀರ್ನಿರ್ಮಮೋ ಭೂತ್ವಾ ಯುಧ್ಯಸ್ವ ವಿಗತಜ್ವರಃ ॥' (ಅಧ್ಯಾತ್ಮನಿಷ್ಠನಾಗಿ ಎಲ್ಲ ಕರ್ಮಗಳ ಫಲಗಳನ್ನು ನನ್ನಲ್ಲಿ ಸಮರ್ಪಿಸಿ, ಫಲದ ಆಸೆಯನ್ನಾಗಲೀ, ಅಹಂಕಾರವನ್ನಾಗಲೀ ಮಾಡದೆ ನಿರಾತಂಕವಾಗಿ ಯುದ್ಧವನ್ನು ಮಾಡು- ಗೀತಾ). 'ಕಾಮ್ಯಾನಾಂ ಕರ್ಮಣಾಂ ನ್ಯಾಸಮ್' (ಜ್ಞಾನಿಗಳು ಕಾಮ್ಯಕರ್ಮಗಳನ್ನು ಬಿಡುವುದನ್ನೇ ಸಂನ್ಯಾಸ ಎಂದು ತಿಳಿಯುತ್ತಾರೆ - ಗೀತಾ) ಇತ್ಯಾದಿ ಅನೇಕ ಪ್ರಮಾಣಗಳಲ್ಲಿ ಕಾಮ್ಯಕರ್ಮಗಳ ಪರಿತ್ಯಾಗವು ಕೇಳಿ ಬರುವುದರಿಂದ 'ನ ಕರ್ಮಣಾಮನಾರಂಭಾನ್ನೈಷ್ಕರ್ಮ್ಯಂ ಪುರುಷೋಶ್ನುತೇ' ಮುಂತಾದ ಪ್ರಮಾಣಗಳಲ್ಲಿ ಕರ್ಮಾಚರಣೆಯು ಆವಶ್ಯಕವೆಂದು ಕೇಳಿ ಬರುವುದರಿಂದ ಶ್ರುತ್ಯುಕ್ತವಾದ ಎಲ್ಲ ಕರ್ಮಗಳನ್ನೂ ವಿಷ್ಣ್ವರ್ಪಣ ಬುದ್ಧಿಯಿಂದ ಮಾಡಿದರೆ ಅವು ಸಾರ್ಥಕವಾಗುತ್ತವೆ ಎಂದು ತಿಳಿದು ಅನುಷ್ಠಾನ ಮಾಡುವ ಅಪರೋಕ್ಷ ಜ್ಞಾನಿಯು, ಧರ್ಮೇಣ= ತಾನು ಅನುಷ್ಠಾನ ಮಾಡಿದ ವಿಹಿತವಾದ ಧರ್ಮದಿಂದ, ಪಾಪಂ= ತಾನು ಪೂರ್ವದಲ್ಲಿ ಸಂಪಾದಿಸಿದ ಪಾಪವನ್ನು, ಪ್ರಣುದತಿ= ವಿನಾಶ ಮಾಡುತ್ತಾನೆ. ಇಹ= ಜ್ಞಾನಿ-ಅಜ್ಞಾನಿಗಳು ಆಚರಿಸಿದ ಕರ್ಮಗಳ ಮಧ್ಯದಲ್ಲಿ, ತಸ್ಯ= ಜ್ಞಾನಿಯು ಅನುಷ್ಠಾನ ಮಾಡಿದ ಆ, ಧರ್ಮಃ= ವಿಷ್ಣ್ವರ್ಪಣ ರೂಪವಾದ ಧರ್ಮವು, ಬಲೀಯಾನ್ ಇತಿ= ಪಾಪನಾಶಕ ಶಕ್ತಿ ಉಳ್ಳದ್ದೆಂದು, ವಿದ್ಧಿ= ತಿಳಿಯುವವನಾಗು. ಇದರಿಂದ ಫಲೋದ್ದೇಶ ಪೂರ್ವಕವಾಗಿ ಅಜ್ಞಾನಿಗಳು ಆಚರಿಸುವ ಕಾಮ್ಯಕರ್ಮಗಳಿಗೆ ಅದರಿಂದ ಉಂಟಾದ ಪುಣ್ಯ-ಪಾಪಗಳ ಫಲಗಳ ಭೋಗವು ನಿಯತವಾಗಿ ಇರುತ್ತದೆ. ಅದೇ ಕರ್ಮಗಳನ್ನು ವಿಷ್ಣ್ವರ್ಪಣ ಬುದ್ಧಿಯಿಂದ ಮಾಡುವ ಜ್ಞಾನಿಗಳಿಗೆ ಪ್ರಬಲವಾದ ಪುಣ್ಯದ ಸಂಬಂಧದಿಂದ ಅನಿಷ್ಟಾಪಾದಕವಾದ ಪಾಪಗಳು ನಾಶವನ್ನು ಹೊಂದುತ್ತವೆ ಎಂಬ ತಾತ್ಪರ್ಯವು ಸೂಚಿತವಾಗುತ್ತದೆ.

**ಧೃತರಾಷ್ಟ್ರಃ**

**ಯಾನಿಹಾಹುಃ ಸ್ವಸ್ಯ ಧರ್ಮಸ್ಯ ಲೋಕಾನ್**
**ದ್ವಿಜಾತೀನಾಂ ಪುಣ್ಯಕೃತಾಂ ಸನಾತನಾನ್ ।**
**ತೇಷಾಂ ಕ್ರಮಾನ್ ಕಥಯ ತತೋಽಪಿ ಚಾನ್ಯಾನ್**
**ಏತದ್ ವಿದ್ವನ್ ವೇತ್ತುಮಿಚ್ಛಾಮಿ ಕರ್ಮ** ॥೬॥

**ಧೃತರಾಷ್ಟ್ರ**– ಎಲೈ ಸರ್ವಜ್ಞರಾದ ಸನತ್ಸುಜಾತರೇ, ಪುಣ್ಯವನ್ನು ಆಚರಿಸುವ ಬ್ರಾಹ್ಮಣರಿಗೆ ತಾವು ಆಚರಣೆ ಮಾಡಿದ ಪುಣ್ಯದಿಂದ ಯಾವ ಸನಾತನ ಲೋಕಗಳನ್ನು ವೇದಗಳು ಮತ್ತು ಜ್ಞಾನಿಗಳು ಹೇಳುತ್ತಾರೆಯೋ ಆ ಲೋಕಗಳ ಕ್ರಮವನ್ನೂ ಮತ್ತು ಅದಕ್ಕಿಂತ ಅಧಿಕವಾದ ಲೋಕಗಳನ್ನೂ ನಾನು ತಿಳಿಯಲು ಬಯಸುತ್ತೇನೆ. ಈ ಕರ್ಮಸಾಧ್ಯವಾದ ಲೋಕಗಳ ವಿವರವನ್ನು ನನಗೆ ಹೇಳಿ.

**ಸನತ್ಸುಜಾತಃ**

**ಯೇಷಾಂ ಧರ್ಮೇಷು(ವ್ರತೇಽಥ) ವಿಸ್ಪರ್ಧಾ ಬಲೇ ಬಲವತಾಮಿವ ।**
**ತೇ ಬ್ರಾಹ್ಮಣಾ ಇತಃ ಪ್ರೇತ್ಯ ಸ್ವರ್ಗೇ ಯಾಂತಿ ಪ್ರಕಾಶತಾಮ್** ॥೭॥

ಈಗ ಪೂರ್ವಶ್ಲೋಕದಲ್ಲಿ ಜ್ಞಾನಿ ಮತ್ತು ಅಜ್ಞಾನಿಗಳು ಆಚರಿಸಿದ ಒಂದೇ ಪುಣ್ಯಕರ್ಮಕ್ಕೆ ಮೋಕ್ಷ ಮತ್ತು ಸ್ವರ್ಗಫಲವನ್ನು ಹೇಳಿ ಮುಂದಿನ ಶ್ಲೋಕಗಳಲ್ಲಿ ಅವುಗಳನ್ನು ವಿವರಿಸುವವರಾಗಿ ಮೊದಲು ಕಾಮ್ಯಕರ್ಮಿಗಳಿಗೆ ಸ್ವರ್ಗಾದಿಗಳು ಉಂಟಾಗುವ ಪ್ರಕಾರವನ್ನು ತಿಳಿಸುತ್ತಾರೆ. ಯೇಷಾಂ= ಯಾವ ವಿಷಯಾಭಿಲಾಷೆಯುಳ್ಳ ಪುರುಷರಿಗೆ, ಧರ್ಮೇಷು= ಪ್ರವೃತ್ತಕರ್ಮಗಳಲ್ಲಿ, ವಿಸ್ಪರ್ಧಾ= ವಿಶೇಷವಾದ ಸ್ಪರ್ಧೆಯು ಇರುತ್ತದೆಯೋ, ಅಧಿಕ ಪುಣ್ಯದಿಂದ ಸ್ವರ್ಗದಲ್ಲಿ ಅಧಿಕ ಸುಖ ಎಂದು ಕೇಳಿ ಸ್ವರ್ಗಸುಖಕ್ಕಾಗಿ ಪುಣ್ಯಕರ್ಮಾನುಷ್ಠಾನವನ್ನು ಮಾಡುವ ಬೇರೆ ಪುರುಷರನ್ನು ನೋಡಿ ನಾನು ಅವರಿಗಿಂತ ಹೆಚ್ಚು ಪುಣ್ಯವನ್ನು ಆಚರಿಸಿ ಸ್ವರ್ಗದಲ್ಲಿ ಅವರಿಗಿಂತ ಹೆಚ್ಚು ಸುಖವನ್ನು ಅನುಭವಿಸುತ್ತೇನೆ ಎಂಬ ಸ್ಪರ್ಧೆಯುಳ್ಳವರಿಗೆ ಎಂದು ಅಭಿಪ್ರಾಯ, ಈ ವಿಷಯದಲ್ಲಿ 'ಬಲೇ ಬಲವತಾಮಿವ' ಎಂದು ದೃಷ್ಟಾಂತವನ್ನು ಹೇಳುತ್ತಾರೆ. ತನ್ನ ಸೈನ್ಯದಿಂದ ಕೂಡಿದ ಇನ್ನೊಬ್ಬ ರಾಜನು ತನಗಿಂತ ಬಲಿಷ್ಠನಾಗಿರುವುದನ್ನು ನೋಡಿ ನಾನೂ ಸಹ ಅವನಿಗಿಂತ ದೊಡ್ಡ ಸೈನ್ಯವನ್ನು ಸಂಪಾದಿಸಿ

ಯುದ್ಧದಲ್ಲಿ ಅವನನ್ನು ಸೋಲಿಸಿ ಅವನಿಗಿಂತ ಹೆಚ್ಚು ಸುಖವಾಗಿರುತ್ತೇನೆ ಎಂದು ದುರ್ಬಲನಾದ ರಾಜನು ಚಿಂತಿಸುವಂತೆ ಎಂದು ದೃಷ್ಟಾಂತದ ಅಭಿಪ್ರಾಯ. ಕಾಮ್ಯಕರ್ಮವನ್ನು ಅನುಷ್ಠಾನ ಮಾಡುವವರ ಸ್ಪರ್ಧೆಯೂ ಸಹ ಅದೇ ರೀತಿಯಾದುದು. ತೇ ಬ್ರಾಹ್ಮಣಾಃ= ಕಾಮ್ಯಕರ್ಮಾಚರಣೆಯನ್ನು ಮಾಡುವ ಸ್ವಭಾವವುಳ್ಳ ಅದೇ ಬ್ರಾಹ್ಮಣರು, ಇತಃ= ಈ ಭೂಲೋಕದಿಂದ, ಪ್ರೇತ್ಯ= ಮರಣವನ್ನು ಹೊಂದಿ ಹೋಗುವವರಾಗಿ, ಸ್ವರ್ಗೇ= ಸ್ವರ್ಗಲೋಕದಲ್ಲಿ, ಪ್ರಕಾಶತಾಮ್= ಧರ್ಮಾಧಿಕ್ಯದಿಂದ ಸೌಖ್ಯಾಧಿಕ್ಯವನ್ನು, ಕಾಂತಿಯ ಆಧಿಕ್ಯವನ್ನು, ಯಾಂತಿ= ಹೊಂದುತ್ತಾರೆ.

**ಯೇಷಾಂ ಧರ್ಮೇ ನ ಚ ಸ್ಪರ್ಧಾ ತೇಷಾಂ ತತ್ ಜ್ಞಾನಸಾಧನಮ್ ।**
**ತೇ ಬ್ರಾಹ್ಮಣಾ ಇತೋ ಮುಕ್ತಾಃ ಸ್ವರ್ಗಂ ಯಾಂತಿ ತ್ರಿವಿಷ್ಟಪಮ್ ॥೮॥**

ಹೀಗೆ ಸ್ವರ್ಗಾದಿ ಸುಖದಲ್ಲಿ ಆಸೆಯುಳ್ಳ ಪುರುಷರಿಗೆ 'ಸ್ವರ್ಗಕಾಮೋ ಯಜೇತ' ಮುಂತಾದ ಶ್ರುತಿಗಳ ಬಾಹ್ಯವಾದ ಅರ್ಥದ ಅನುಸಂಧಾನ ಪೂರ್ವಕವಾಗಿ ಅನುಷ್ಠಾನ ಮಾಡಿದ ಪುಣ್ಯಕರ್ಮಗಳಿಂದ ಅನಿತ್ಯವಾದ ಸ್ವರ್ಗಾದಿ ಲೋಕಪ್ರಾಪ್ತಿಯು ಸ್ವಲ್ಪ ಸಮಯದವರೆಗೆ ಉಂಟಾಗುತ್ತದೆ ಎಂದು ಹೇಳಿ ಈಗ ಭಗವದೇಕನಿಷ್ಠರಾದ ವಿರಕ್ತರಾದ ಜ್ಞಾನಿಗಳು 'ಸ್ವರ್ಗಕಾಮೋ ಯಜೇತ' ಎಂಬ ಅದೇ ವಾಕ್ಯದಿಂದ ವಿಹಿತವಾದ ಜ್ಯೋತಿಷ್ಟೋಮಾದಿ ಯಾಗಗಳನ್ನು ಅನುಷ್ಠಾನ ಮಾಡಿ ಸ್ವರ್ಗಶಬ್ದವಾಚ್ಯವಾದ ವೈಕುಂಠಾದಿ ಲೋಕವನ್ನು ಹೊಂದುವ ಪ್ರಕಾರವನ್ನು ತಿಳಿಸುತ್ತಾರೆ.

ಯೇಷಾಂ= ಯಾವ ಜ್ಞಾನಿಗಳಿಗೆ, ಧರ್ಮೇ= ಸಕಾಮ ಧರ್ಮಾಚರಣೆಯಲ್ಲಿ, ಸ್ಪರ್ಧಾ ನ ಚ= ಅನಿತ್ಯವಾದ ಫಲವು ಹೇಯವೆಂದು ತಿಳಿದಿರುವುದರಿಂದ ಫಲದ ಆಸೆಯುಳ್ಳವರಿಗೆ ಇರುವಂತೆ ಸ್ಪರ್ಧೆ ಇರುವುದಿಲ್ಲವೋ, ಫಲದ ಆಸೆಯನ್ನು ಬಿಟ್ಟು ತಾವು ವಿಧಿ-ನಿಷೇಧಕ್ಕೆ ವಿಷಯವಾಗಿರುವುದರಿಂದ ಕರ್ಮಾಚರಣೆಯು ವಿಹಿತವಾಗಿರುವುದರಿಂದ ವಿಷ್ಣುಪ್ರೀತ್ಯರ್ಥವಾಗಿಯೇ ಕರ್ಮಗಳನ್ನು ಆಚರಿಸುತ್ತೇನೆ ಎಂದು ಆಚರಣೆ ಮಾಡುತ್ತಾರೆಯೋ ಎಂದು ತಾತ್ಪರ್ಯ. ಇಂತಹ ವಿಧವಾದ ಸ್ವಭಾವವು ಯಾರಲ್ಲಿರುತ್ತದೆಯೋ, ತೇಷಾಂ= ಅಂತಹ ಜ್ಞಾನಿಗಳಿಗೆ, ತತ್= ಅವರು ಮಾಡುವ ಧರ್ಮಾಚರಣೆಯು, ಜ್ಞಾನಸಾಧನಮ್= ಅಪರೋಕ್ಷ ಜ್ಞಾನ

ಸಾಧನವಾಗುತ್ತದೆ, ತೇ ಬ್ರಾಹ್ಮಣಾಃ= ಇಂತಹ ಆಚರಣ ಶೀಲರಾದ, ಬ್ರಹ್ಮ ಜಿಜ್ಞಾಸಾ ಶೀಲರಾದ ಜ್ಞಾನಿಗಳು, ಇತಃ= ಈ ಲೋಕದಿಂದ ಅಥವಾ ಲಿಂಗದೇಹದಿಂದ, ಮುಕ್ತಾಃ= ಬಿಡುಗಡೆಯನ್ನು ಹೊಂದಿದವರಾಗಿ, ತ್ರಿವಿಷ್ಟಪಂ= ಶ್ವೇತದ್ವೀಪಾನಂತಾಸನವೈಕುಂಠ ಎಂಬ ಮೂರು ಸ್ಥಾನಗಳುಳ್ಳ, ಸ್ವರ್ಗಂ= ಮೋಕ್ಷವನ್ನು, ಅಥವಾ 'ಪರಃ ಸ್ವೋ ಹರಿರುದ್ದಾಮಃ' ಎಂಬ ಕೋಶವಿರುವುದರಿಂದ ಸ್ವತಂತ್ರನಾದ ಮತ್ತು ಜ್ಞಾನರೂಪನಾದ ವಿಷ್ಣುವನ್ನು, ಯಾಂತಿ= ಹೊಂದುತ್ತಾರೆ, ವೈಕುಂಠಾದಿ ಲೋಕಗತನಾದ ವಿಷ್ಣುವನ್ನೇ ಹೊಂದುತ್ತಾರೆ ಎಂದು ತಾತ್ಪರ್ಯ.

**ತಸ್ಯ ಸಮ್ಯಕ್ ಸಮಾಚಾರಮಾಹುರ್ವೇದವಿದೋ ಜನಾಃ ।**
**ನೈನಂ ಮನ್ಯೇತ ಭೂಯಿಷ್ಠಂ ಬಾಹ್ಯಮಾಭ್ಯಂತರಂ ಜನಃ ।**
**ಯತ್ರ ಮನ್ಯೇತ ಭೂಯಿಷ್ಠಂ ಪ್ರಾವೃಷೀವ ತೃಣೋದಕಮ್ ॥೯॥**

ಜ್ಞಾನಪೂರ್ವಕವಾಗಿ ಅನುಷ್ಠಾನ ಮಾಡುವ ಸ್ವಭಾವವುಳ್ಳ ಜ್ಞಾನಿಯ ಆಚರಣೆಯೇ ಶ್ರೇಷ್ಠವಾದುದೆಂಬ ವಿಷಯದಲ್ಲಿ ಶಿಷ್ಟಸಮ್ಮತಿಯು ಇದೆ ಎಂದು ಈ ಶ್ಲೋಕದಲ್ಲಿ ಹೇಳುತ್ತಾರೆ. ವೇದವಿದಃ= 'ವೇದೋ ನಾರಾಯಣಸ್ಸಾಕ್ಷಾತ್' ಎಂಬ ವಚನದಂತೆ ವೇದ ಎಂದರೆ ವಿಷ್ಣು, ಅವನನ್ನು ತಿಳಿದವರು ವೇದವಿದರು ಅಥವಾ ಎಲ್ಲ ವೇದಗಳೂ ಭಗವಂತನನ್ನೇ ಪ್ರತಿಪಾದಿಸುತ್ತವೆ ಎಂದು ತಿಳಿದವರು ವೇದವಿದರು. ಜನಾಃ= ಜ್ಞಾನಿ ಜನರು, ತಸ್ಯ= ನಿಷ್ಕಾಮನೆಯಿಂದ ವಿಷ್ಣುಪ್ರೀತ್ಯರ್ಥವಾಗಿಯೇ ಸರ್ವಧರ್ಮಗಳನ್ನೂ ಆಚರಣೆಯನ್ನು ಮಾಡುವ ಸ್ವಭಾವವುಳ್ಳ ಜ್ಞಾನಿಯ, ಆಚಾರಂ= ವಿಷ್ಣ್ವರ್ಪಣ ರೂಪವಾದ ಆಚಾರವನ್ನು, ಸಂ= ಸಮೀಚೀನವಾದುದೆಂಬ, ಸಮ್ಯಕ್ ಆಹುಃ= ಚೆನ್ನಾಗಿ ಹೇಳುತ್ತಾರೆ. ಜ್ಞಾನಿಗಳು ಜ್ಞಾನಪೂರ್ವಕವಾಗಿ ಕರ್ಮಾನುಷ್ಠಾನ ಮಾಡುವುದೇ ಬಹಳ ಶ್ರೇಷ್ಠವೆಂದು ಹೇಳುತ್ತಾರೆ ಎಂದು ಅಭಿಪ್ರಾಯ. ಇಂತಹ ಜ್ಞಾನಿಗಳ ಸ್ವರೂಪವು ಅಜ್ಞಾನಿಗಳಿಗೆ ತಿಳಿಯುವುದಿಲ್ಲ ಎಂದು ಮುಂದಿನ ಸಾಲಿನಲ್ಲಿ ಹೇಳುತ್ತಾರೆ. ಜನಃ= ವಿಷಯ ಅಭಿಲಾಷೆಯುಳ್ಳ ಜನರು, ಏನಂ= ಜ್ಞಾನಪೂರ್ವಕವಾಗಿ ಕರ್ಮಾನುಷ್ಠಾನ ಮಾಡುವ ಸ್ವಭಾವವುಳ್ಳ, ಬಾಹ್ಯಂ= ಅಪರೋಕ್ಷಜ್ಞಾನವಿಲ್ಲದ ಜ್ಞಾನಿಯನ್ನು, ಆಂತರಂ= ಅಪರೋಕ್ಷಜ್ಞಾನವುಳ್ಳ ಜ್ಞಾನಿಯನ್ನು, ಭೂಯಿಷ್ಠಂ= 'ಭೂಃ ಪೂರ್ಣತಾಯಾಮ್' ಎಂಬ ಧಾತು ಇರುವುದರಿಂದ, ಯ ಕಾರವು ಜ್ಞಾನವನ್ನು ಹೇಳುವುದರಿಂದ, ಭೂಯಃ

ಎಂದರೆ ಪೂರ್ಣಜ್ಞಾನವುಳ್ಳ ವಿಷ್ಣು, ಅವನಲ್ಲಿ ಸ್ಥಾ ಎಂದರೆ ಚಾಂಚಲ್ಯವಿಲ್ಲದೇ ಮನಸ್ಸಿನಿಂದ ನಿಂತಿರುವವರು, ಭಗವದೇಕನಿಷ್ಠೆಯುಳ್ಳವರು ಎಂದು ಅರ್ಥ. ನ ಮನ್ಯೇತ= ತಿಳಿಯುವುದಿಲ್ಲ. ಇದರಿಂದ ಅಪರೋಕ್ಷಜ್ಞಾನವುಳ್ಳ ಮತ್ತು ಅಪರೋಕ್ಷ ಜ್ಞಾನವಿಲ್ಲದಿರುವ ಉಭಯ ವಿಧವಾದ ಜ್ಞಾನಿಗಳ ಸ್ವರೂಪವೂ ಅವರ ಪ್ರವೃತ್ತಿಯೂ ಅಜ್ಞಜನರಿಗೆ ತಿಳಿಯುವುದಿಲ್ಲ ಎಂದು ಹೇಳಿದ್ದಾಯಿತು. ಅಥವಾ ಬಾಹ್ಯಂ= ಕಾಮ್ಯ ರೂಪವಾದ ಧರ್ಮವನ್ನು, ಆಂತರಂ= ನಿಷ್ಕಾಮ ರೂಪವಾದ ಧರ್ಮವನ್ನು, ಏನಂ= ವಿಷ್ಣುಪ್ರೀತಿ ಸಾಧನವಾದ ಈ ಎರಡು ಧರ್ಮವನ್ನು, ಜನಃ= ಬಹಿರ್ಮುಖರಾದ ಜನರು, ನ ಮನ್ಯೇತ= ಇದೇ ಮೋಕ್ಷಸಾಧನವಾದ ಮಹಾಧರ್ಮವೆಂದು ತಿಳಿಯುವುದಿಲ್ಲ, ವಿಷಯಾಭಿಲಾಷೆಯುಳ್ಳ ಬಹಿರ್ಮುಖರಾದ ಜನರಿಗೆ ಭಾಗವತ ಧರ್ಮದಲ್ಲಿ ಶ್ರೇಷ್ಠತ್ವಜ್ಞಾನವು ಇರುವುದಿಲ್ಲ ಎಂದು ಅಭಿಪ್ರಾಯ.

ಪ್ರಾಕೃತರಿಗೆ ಜ್ಞಾನಿಗಳ ಸ್ವರೂಪವು ತಿಳಿಯದಿದ್ದರೂ ಯಾರಿಗೂ ತಿಳಿಯುವುದಿಲ್ಲ ಎಂಬ ಪ್ರಸಂಗವಿಲ್ಲ. ಜ್ಞಾನಿಗಳಿಗೇ ಜ್ಞಾನಿಗಳ ಸ್ವರೂಪವು ತಿಳಿಯುತ್ತದೆ ಎಂದು ಮುಂದಿನ ಪಾದದಿಂದ ಹೇಳುತ್ತಾರೆ. ಯತ್ರ= ಯಾವ ಜ್ಞಾನಿಯು ದೃಷ್ಟನಾದರೆ, ಜ್ಞಾನಿಯಾದ ಪುರುಷನೇ, ಭೂಯಿಷ್ಠಂ ಮನ್ಯೇತ= ನಾನು ನೋಡಿದ ಈ ಜ್ಞಾನಿಯು ಮಹಾತ್ಮನಾದವನು ಎಂದು ತಿಳಿಯುತ್ತಾನೆಯೋ. ಈ ವಿಷಯದಲ್ಲಿ ಒಂದು ದೃಷ್ಟಾಂತವನ್ನು ಹೇಳುತ್ತಾರೆ. ಪ್ರಾವೃಷಿ= ಮಳೆಗಾಲದಲ್ಲಿ, ತೃಣೋದಕಮಿವ= ಇರುವ ತೃಣೋದಕದಂತೆ ಎಂದರೆ ಮಳೆಗಾಲದಲ್ಲಿ ತೃಣವು ಮತ್ತು ಉದಕವು ಹೇರಳವಾಗಿರುವುದರಿಂದ ಜ್ಞಾನಿಯು ಪ್ರತ್ಯಕ್ಷವಾಗಿ ಅದನ್ನು ನೋಡುತ್ತಾನೆ, ಅಜ್ಞಾನಿಯು ಮಾತ್ರ ತೃಣದಿಂದ ಆಚ್ಛಾದಿತವಾದ ಉದಕವು ಹೇಗೆ ಕಾಣುವುದಿಲ್ಲವೋ ಅದರಂತೆ ಜ್ಞಾನಿಗಳ ಮಾಹಾತ್ಮ್ಯವನ್ನು ಕಾಣುವುದಿಲ್ಲ ಎಂದು ಅಭಿಪ್ರಾಯ. ಈ ದೃಷ್ಟಾಂತವು ಮಹತ್ತತ್ಜ್ಞಾನ ವಿಷಯದಲ್ಲಿ ಹೇಳಲ್ಪಟ್ಟಿದೆ ಎಂದು ತಿಳಿಯಬೇಕು.

**ಅನ್ನಂ ಪಾನಂ ಬ್ರಾಹ್ಮಣಸ್ಯ ತಜ್ಜೀವನ್ ನಾನುಸಂಜ್ವರೇತ್ ।**
**ಯತ್ರಾಕಥಯಮಾನಸ್ಯ ಪ್ರಯಚ್ಛತ್ಯಶಿವಂ ಭಯಮ್ ॥೧೦॥**

ಅನ್ನಂ ಪಾನಂ= ಅನ್ನ ಮತ್ತು ಪಾನಗಳು, ಬ್ರಾಹ್ಮಣಸ್ಯ= ಬ್ರಾಹ್ಮಣನ ಭಾಗವಾಗಿವೆ, ತತ್= ಆದ್ದರಿಂದ ಜೀವನಾರ್ಥಿಯಾದ ಜ್ಞಾನಿಯು, ಅನು= ಅನ್ನಾದಿಗಳಿಗಾಗಿ, ನ

ಸಂಜ್ವರೇತ್= ಕ್ಲೇಶವನ್ನು ಪಡಬಾರದು, ಯತ್ರ= ಯಾವ ಜ್ಞಾನಿಯ ವಿಷಯದಲ್ಲಿ, ಅಕಥಯಮಾನಸ್ಯ= ಆಹ್ವಾನವನ್ನು ಮಾಡದಿರುವ ಪುರುಷನಿಗೆ ಉಂಟಾದ, ಅಶಿವಂ= ಪಾಪವು, ನರಕ ಭಯವನ್ನು, ಪ್ರಯಚ್ಛತಿ= ಕೊಡುತ್ತದೆ.

ಅಥವಾ ಜ್ಞಾನಿಗೇ ಮಹತ್ವವಿದೆ ಎಂಬ ಕಾರಣದಿಂದ ಗೃಹಸ್ಥನಾಗಿ ಜೀವಿಸುವ ಪುರುಷನು ಬ್ರಹ್ಮಜ್ಞಾನ ಸಂಪನ್ನನಾದ ಜ್ಞಾನಿಗೆ ಸದನ್ನವನ್ನು ಮತ್ತು ಶುಚಿಯಾದ ಉದಕವನ್ನು ಕೊಟ್ಟು, ನಾನುಸಂಜ್ವರೇತ್= ಅಭಿತಪ್ತನಾಗುವುದಿಲ್ಲ, ಸಾಂಸಾರಿಕ ತಾಪತ್ರಯಗಳಿಂದ ಪೀಡಿತನಾಗುವುದಿಲ್ಲ. 'ಮಹತ್ಸೇವಾಂ ದ್ವಾರಮಾಹುರ್ವಿಮುಕ್ತೇಃ', (ಮಹಾತ್ಮರ ಸೇವೆಯನ್ನು ಮುಕ್ತಿಯ ದ್ವಾರವೆಂದು ಹೇಳುತ್ತಾರೆ). 'ಸತ್ಸಂಗಮೋ ತದ್ಯೈವ ಸದ್ಗತೌ' (ಸಜ್ಜನರ ಸಹವಾಸವೇ ಸದ್ಗತಿಗೆ ಕಾರಣ) ಇತ್ಯಾದಿ ವಚನಗಳಿಂದ ಮಹಾತ್ಮರ ಸೇವೆಯು ಮಹಾಫಲಪ್ರದವೆಂದು ತಿಳಿದು ಬರುತ್ತದೆ. ಆದ್ದರಿಂದ ಮಹಾತ್ಮರ ಸೇವೆಯೇ ಸಂಸಾರಿಗಳಿಗೆ ಸರ್ವಾನಿಷ್ಟನಿವರ್ತಕವಾದುದೆಂದು ಇಲ್ಲಿ ಸೂಚಿಸಲ್ಪಡುತ್ತದೆ.

ಮಹಾಫಲ ಪ್ರಾಪ್ತಿಯನ್ನು ಕುರಿತು ಎಲ್ಲ ಸಾಧನಗಳಲ್ಲಿ ಮಹತ್ಸೇವೆಯೇ ಮುಖ್ಯವಾದ ಸಾಧನವಾದ್ದರಿಂದ ಸನ್ಮಾರ್ಗದಲ್ಲಿ ನಡೆಯುವ ಪುರುಷನು –

**'ಊರ್ಧ್ವಂ ಪ್ರಾಣಾ ಉತ್ಕ್ರಮಂತಿ ಯೂನಃ ಸ್ಥವಿರ ಆಗತೇ ।**
**ಅಭ್ಯುತ್ಥಾನಾಭಿವಾದಾಭ್ಯಾಂ ಪುನಸ್ತಾನ್ ಪ್ರತಿಪದ್ಯತೇ ॥',**

(ಹಿರಿಯರು ಬಂದಾಗ ಯುವಕರ ಪ್ರಾಣಗಳು ಮೇಲಕ್ಕೆ ಎದ್ದು ಹೊರಡಲು ಉದ್ಯುಕ್ತವಾಗುತ್ತವೆ. ಚಿಕ್ಕವರು ಎದ್ದು ನಮಸ್ಕಾರವನ್ನು ಮಾಡಿದ ಮೇಲೆ ಆ ಪ್ರಾಣಗಳು ತಮ್ಮ ಸ್ಥಾನದಲ್ಲಿಯೇ ನೆಲೆಸುತ್ತವೆ).

**'ದೃಷ್ಟಿಂ ದದ್ಯಾನ್ಮನೋ ದದ್ಯಾತ್ ವಾಚಂ ದದ್ಯಾಚ್ಚ ಸೂನೃತಾಮ್ ।**
**ಉತ್ಥಾಯ ಚಾಸನಂ ದದ್ಯಾದೇಷ ಧರ್ಮಃ ಸನಾತನಃ ॥'**

(ದೊಡ್ಡವರು ಬಂದಾಗ ಮೊದಲು ದೃಷ್ಟಿಯನ್ನು ಕೊಡಬೇಕು, ಅನಂತರ ಮನಸ್ಸನ್ನು ಕೊಡಬೇಕು, ಅನಂತರ ಮಧುರವಾದ ಮಾತನ್ನು ಕೊಡಬೇಕು, ಎದ್ದು ಆಸನವನ್ನು ಕೊಡಬೇಕು ಇದು ಸನಾತನವಾದ ಧರ್ಮ).

ಇವೇ ಮುಂತಾದ ಪ್ರಮಾಣಗಳಿಗೆ ಅನುಸಾರವಾಗಿ ಮಹತ್ಸೇವೆಯನ್ನೇ ಮಾಡಬೇಕು. ಇಲ್ಲದಿದ್ದರೆ ತನಗೆ ಅನರ್ಥ ಉಂಟಾಗುತ್ತದೆ ಎಂದು ಶ್ಲೋಕದ ಉತ್ತರಾರ್ಧದಿಂದ ಪ್ರತಿಪಾದನೆ ಮಾಡುತ್ತಾರೆ.

ಯತ್ರ= ಯಾವ ಜ್ಞಾನಿಯು ನೋಡಲ್ಪಟ್ಟಾಗ, ಅಕಥಯಮಾನಸ್ಯ= ಅವನ ಜೊತೆಯಲ್ಲಿ ಭಕ್ತಿಯಿಂದ ಕುಶಲ ಪ್ರಶ್ನಾದಿ ಸಂಭಾಷಣೆಯನ್ನು ಮಾಡದಿರುವ ಮನುಷ್ಯನ, ಅಶಿವಂ= ಅಲ್ಪಾಯುಸ್ಸನ್ನು ಹೊಂದಿ ಉಂಟಾಗುವ ಮರಣಾದಿ ರೂಪವಾದ ಅಮಂಗಳವು, ಭಯಂ= ಪಾರತ್ರಿಕ ನರಕಾದಿ ಭಯವನ್ನು, ಪ್ರಯಚ್ಛತಿ= ಕೊಡುತ್ತದೆ. ಪ್ರಯಚ್ಛಂತಿ ಎಂದು ಪಾಠವಿದ್ದರೆ ಅಲ್ಪಾಯುಷ್ಯಾದಿ ಮರಣಾದಿ ರೂಪವಾದ ಅಮಂಗಳವನ್ನು ಮತ್ತು ಪಾರತ್ರಿಕವಾದ ನರಕ ಭಯವನ್ನು ದೇವತೆಗಳು ಕೊಡುತ್ತಾರೆ ಎಂದು ಅರ್ಥ ಮಾಡಬೇಕು.

**ಅತಿರಿಕ್ತಮಿವಾಕುರ್ವನ್ ಸ ಶ್ರೇಯಾನ್ ನೇತರೋ ಜನಃ ।**
**ಯೋ ವಾऽಕಥಯಮಾನಸ್ಯ ಹ್ಯಾತ್ಮಾನಂ ನಾನುಸಂಜ್ವರೇತ್ ॥೧೧॥**

ಯಾವ ಜ್ಞಾನಿಯನ್ನು ನೋಡಿದಾಗ ಸತ್ಕಾರವನ್ನು ಮಾಡದಿದ್ದರೆ ದೊಡ್ಡ ಅನರ್ಥದ ಪ್ರಾಪ್ತಿಯಾಗುವುದೋ ಅಂತಹ ಜ್ಞಾನಿಯ ಲಕ್ಷಣವನ್ನು ಈ ಶ್ಲೋಕದಲ್ಲಿ ಹೇಳುತ್ತಾರೆ.

ಯಾವ ಜ್ಞಾನಿಯು ತನ್ನನ್ನು, ಅತಿರಿಕ್ತಂ ಇವ= ಇನ್ನೊಬ್ಬರು ಅವಮಾನವನ್ನು ಮಾಡಿದಾಗ ಕೋಪಾದಿಗಳ ಅತಿರೇಕವನ್ನು ಹೊಂದಿದವನಂತೆ, ನ ಕುರ್ವನ್= ತನ್ನನ್ನು ಮಾಡಿಕೊಳ್ಳದೆ ಇರುತ್ತಾನೆಯೋ, ಸಃ= ಅಂತಹ ಜ್ಞಾನಿಯೇ, ಶ್ರೇಯಾನ್= ಶ್ರೇಷ್ಠನಾದವನು. ಅವನೇ ಅಧಿಕ ಪುಣ್ಯವನ್ನು ಹೊಂದಿದವನು ಮತ್ತು ಶ್ರೇಷ್ಠನಾದವನು ಎಂದು ಅರ್ಥ. ಇತರಃ ಜನಃ= ಮಾನಾಪಮಾನಗಳಿಂದ ಉಂಟಾದ, ಸುಖ-ದುಃಖಾದಿಗಳಿಂದ ಉಂಟಾದ, ರಾಗ-ದ್ವೇಷಗಳನ್ನು ಹೊಂದುವ ಮನುಷ್ಯನು, ನ ಶ್ರೇಯಾನ್= ಶ್ರೇಷ್ಠನಲ್ಲ. ಹೀಗೆ ಹೇಳಿರುವುದರಿಂದ

**'ವಾಸ್ಯೈಕಂ ತಕ್ಷತೋ ಬಾಹುಂ ಚಂದನೇನೈಕಮುಕ್ಷತಃ ।**
**ನಾಕಲ್ಯಾಣಂ ನ ಕಲ್ಯಾಣಂ ಚಿಂತಯೀತೋಭಯೋಸ್ತಯೋಃ ॥'**

(ಒಂದು ಬಾಹುವನ್ನು ಒಬ್ಬನು ಬಾಚಿಯಿಂದ ಕೆತ್ತಿದರೂ, ಇನ್ನೊಂದು ಬಾಹುವಿಗೆ ಇನ್ನೊಬ್ಬನು ಚಂದನದಿಂದ ಲೇಪವನ್ನು ಮಾಡಿದರೂ ಆ ಇಬ್ಬರ ಪುರುಷರ ವಿಷಯದಲ್ಲಿ ಒಳ್ಳೆಯದನ್ನಾಗಲೀ ಅಥವಾ ಕೆಟ್ಟದನ್ನಾಗಲೀ ಚಿಂತಿಸದೆ ಇರುವವನು ಶ್ರೇಷ್ಠನಾದ ಜ್ಞಾನಿಯಾದವನು) ಎಂಬ ಪ್ರಮಾಣಕ್ಕೆ ಅನುಸಾರಿಯಾದ ಪ್ರವೃತ್ತಿಯುಳ್ಳವನೇ ಅಪರೋಕ್ಷಜ್ಞಾನಿಯಾದವನು. ಉತ್ಸೇಕಾದಿಗಳಿಗೆ ಒಳಗಾದವನು ಜ್ಞಾನಿಯಲ್ಲ ಎಂದು ಜ್ಞಾನಿಯ ಲಕ್ಷಣವು ಹೇಳಲ್ಪಡುತ್ತದೆ. ಅದರಂತೆ 'ಜನೇನಾವಮತೋ ಯೋಗೀ ಯೋಗಸಿದ್ಧಿಂ ಸ ವಿಂದತಿ' (ಜನರಿಂದ ಅವಮಾನಕ್ಕೆ ಒಳಗಾದ ಯೋಗಿಯು ಯೋಗಸಿದ್ಧಿಯನ್ನು ಪಡೆಯುತ್ತಾನೆ).

**'ಸಮ್ಮಾನಾದ್ ಬ್ರಾಹ್ಮಣೋ ನಿತ್ಯಮುದ್ವಿಜೇನ ವಿಷಾದಿವ ।**
**ಅಸನ್ಮಾನಾತ್ ತಪೋವೃದ್ಧಿಃ ಸನ್ಮಾನಾತ್ ತಪಸಃ ಕ್ಷಯಃ ॥'**

(ಬ್ರಾಹ್ಮಣನಾದವನು ವಿಷಕ್ಕೆ ಹೆದರುವಂತೆ ತನ್ನ ಸನ್ಮಾನಕ್ಕೆ ಯಾವಾಗಲೂ ಹೆದರಬೇಕು. ಯಾರಿಂದಲೂ ಸನ್ಮಾನವನ್ನು ಸ್ವೀಕರಿಸದಿದ್ದರೆ ಅವನ ತಪಸ್ಸು ವೃದ್ಧಿಯನ್ನು ಹೊಂದುತ್ತದೆ. ಸನ್ಮಾನದಿಂದ ತಪಸ್ಸಿನ ಕ್ಷಯವಾಗುತ್ತದೆ). ಇವೇ ಮೊದಲಾದ ಪ್ರಮಾಣಗಳು ಹೇಳಿದ ಅನುಸಂಧಾನವನ್ನು ಹೊಂದಿ ಅಭಿಮಾನಶೂನ್ಯನಾದವನೇ ಜ್ಞಾನಿ ಎಂದು ಅವನ ಲಕ್ಷಣವನ್ನು ಉತ್ತರಾರ್ಧದಲ್ಲಿಯೂ ಹೇಳುತ್ತಾರೆ. ಯಃ= ವಿಷಯ ಸ್ನೇಹವಿಲ್ಲದಿರುವ ಯಾವ ಜ್ಞಾನಿಯು, ಅಕಥಯಮಾನಸ್ಯ= ಇನ್ನೊಬ್ಬರು ತನ್ನನ್ನು ಹೊಗಳಿ ತನಗೆ ಖ್ಯಾತಿಯನ್ನು ಉಂಟುಮಾಡದಿದ್ದಾಗ, ನಾನುಸಂಜ್ವರೇತ್= ಖೇದಾದಿಗಳಿಂದ ತನ್ನ ಮನಸ್ಸಿಗೆ ತಾಪವನ್ನು ಉಂಟುಮಾಡಿಕೊಳ್ಳುವುದಿಲ್ಲವೋ (ಅವನೇ ಶ್ರೇಷ್ಠನಾದ ಜ್ಞಾನಿ). ಇದು ಜ್ಞಾನಿಯ ಇನ್ನೊಂದು ಲಕ್ಷಣ.

**ಬ್ರಹ್ಮಸ್ವಂ ನೋಪಹನ್ಯಾದ್ವಾ ತದನ್ನಂ (ತದ್ದತ್ತಂ) ಸಮ್ಮತಂ ಸತಾಮ್ ।**
**ಕುಶವಲ್ಕಲಚೇಲಾಢ್ಯಂ ಬ್ರಹ್ಮ ಸ್ವಂ ಯೋಗಿನೋ ವಿದುಃ ॥೧೨॥**

ಬ್ರಹ್ಮಸ್ವಂ= ಪರಬ್ರಹ್ಮನ ಸ್ವತ್ತಾದ ಸರ್ವಸ್ವಾತಂತ್ರ್ಯಾದಿ ಧರ್ಮವನ್ನು, ನೋಪಹನ್ಯಾತ್= ಹಿಂಸಿಸಬಾರದು. ಇಲ್ಲಿ ಬ್ರಹ್ಮಸ್ವಹನನ ಎಂದರೆ 'ಅಹಂ ಬ್ರಹ್ಮಾಸ್ಮಿ' ಎಂದು ತನ್ನಲ್ಲಿ ಪರಬ್ರಹ್ಮನ ಅಭೇದವನ್ನು ಚಿಂತಿಸಿ ದುಷ್ಟವಾದ ಉಪಾಸನೆಯನ್ನು

ಮಾಡುವುದು ಎಂದು ಅರ್ಥ. ತತ್ ದತ್ತಂ= ವಿಷಯಾಲಂಬುದ್ಧಿಯುಳ್ಳ ಬ್ರಹ್ಮಜ್ಞಾನಿಗೆ ಕೊಟ್ಟ ಅನ್ನವು, ಸತಾಂ= ಸಜ್ಜನರಿಗೆ, ಸಮ್ಮತಂ= ಶ್ರೇಷ್ಠವಾದುದು, 'ದಾನಂ ಧ್ರುವಂ ಫಲತಿ ಪಾತ್ರಗುಣಾನುಕೂಲ್ಯಾತ್' (ಸತ್ಪಾತ್ರರಲ್ಲಿ ಮಾಡಿದ ದಾನವು ಖಂಡಿತವಾಗಿ ಶುಭಫಲವನ್ನು ಕೊಡುತ್ತದೆ ಎಂಬ ಅನುಸಂಧಾನದಿಂದ) ಜ್ಞಾನಿಗಳಿಗೆ ಸಮರ್ಪಿತವಾದ ದ್ರವ್ಯವು, ಸತಾಂ= ಜ್ಞಾನಿಗಳಿಗೆ, ಸಮ್ಮತಂ= ಮಹಾಫಲಪ್ರದವೆಂದು ಸಮ್ಮತವಾಗಿರುತ್ತದೆ. ಅಥವಾ ತತ್ ದತ್ತಂ= ಅಂತಹ ಬ್ರಹ್ಮಜ್ಞಾನಿಯು ಕೊಟ್ಟ ಅನ್ನಾದಿಗಳು, ಸತಾಂ= ಸಜ್ಜನರಿಗೆ, ಸಮ್ಮತಂ= ಬಹಳ ಶ್ರೇಯಸ್ಕರವಾದುದು.

**'ಪಾತಕೇ ಮಹತಿ ಪ್ರಾಪ್ತೇ ಪ್ರಾಯಶ್ಚಿತ್ತವಿವರ್ಜಿತೇ ।**
**ಯಾಚಯೇದ್ ವೈಷ್ಣವಸ್ಯಾನ್ನಂ ತದಭಾವೇ ಜಲಂ ಪಿಬೇತ್ ॥'**

(ಪ್ರಾಯಶ್ಚಿತ್ತವಿಲ್ಲದಂತಹ ಮಹಾಪಾತಕವನ್ನು ಮಾಡಿದಾಗ ವೈಷ್ಣವರ ಅನ್ನವನ್ನು ಯಾಚಿಸಬೇಕು. ಅದು ದೊರೆಯದಿದ್ದರೆ ನೀರನ್ನು ಮಾತ್ರ ಕುಡಿಯಬೇಕು) ಎಂದು ಪ್ರಮಾಣವಿರುವುದರಿಂದ ಜ್ಞಾನಿಗಳು ಕೊಟ್ಟ ಅನ್ನಾದಿಗಳನ್ನು ಸ್ವೀಕಾರ ಮಾಡುವುದರಿಂದ ಪಾತಕಿಗಳಿಗೆ ಮಹಾಪಾಪಗಳು ನಿವೃತ್ತವಾಗುತ್ತವೆಂಬುದು ಜ್ಞಾನಿಗಳಿಗೆ ಸಮ್ಮತವಾದುದು ಎಂದೂ ಅರ್ಥ.

**ಯಥಾ ಸ್ವಂ ವಾಂತಮಶ್ನಾತಿ ಶ್ವಾ ವೈ ನಿತ್ಯಮಭೂತಯೇ ।**
**ಏವಂ ತೇ ವಾಂತಮಶ್ನಾತಿ ಸ್ವವೀರ್ಯಸ್ಯೋಪಭೋಜನಾತ್ ॥೧೩॥**

ಪರಮಹಂಸಾಚಾರ್ಯರೂ, ಸರ್ವಜ್ಞರೂ ಆದ ಸನತ್ಸುಜಾತ ಮುನಿಗಳು ಇದುವರೆಗೆ ಗೃಹಸ್ಥಾಶ್ರಮಿಗಳು ಅನುಷ್ಠಾನ ಮಾಡಬೇಕಾದ ಕಾಮ್ಯಕರ್ಮನ್ಯಾಸವನ್ನು 'ಕಾಮ್ಯಾನಾಂ ಕರ್ಮಣಾಂ ನ್ಯಾಸಂ ಸನ್ನ್ಯಾಸಂ ಕವಯೋ ವಿದುಃ', 'ಸ ಸನ್ನ್ಯಾಸೀ ಚ ಯೋಗೀ ಚ ನ ನಿರಗ್ನಿರ್ನ ಚಾಕ್ರಿಯಃ' (ಕಾಮ್ಯಕರ್ಮವನ್ನು ತ್ಯಾಗ ಮಾಡುವುದೇ ಸಂನ್ಯಾಸವೆಂದು ಜ್ಞಾನಿಗಳು ತಿಳಿಯುತ್ತಾರೆ, ಅವನೇ ಸಂನ್ಯಾಸಿ ಮತ್ತು ಯೋಗಿ. ಅಗ್ನಿಕಾರ್ಯವನ್ನು ಮಾಡದವನು ಮತ್ತು ಬೇರೆ ಕ್ರಿಯೆಗಳನ್ನು ಮಾಡದವನು ಸಂನ್ಯಾಸಿಯಲ್ಲ) ಇತ್ಯಾದಿ ಪ್ರಮಾಣಗಳಿಗೆ ಅನುಸಾರವಾಗಿ ನಿರೂಪಣೆ ಮಾಡಿ ಈಗ ಪರಮಹಂಸಾಶ್ರಮಧರ್ಮಗಳನ್ನು ಹೇಳಲು ಬಯಸಿ ಚತುರ್ಥಾಶ್ರಮವನ್ನು ಸ್ವೀಕರಿಸಿದವರು ತಮ್ಮ ಆಶ್ರಮ ಧರ್ಮವನ್ನು ತಿಳಿಯದೇ ತಾವು ಪೂರ್ವಾಶ್ರಮದಲ್ಲಿ

ಸಂಪಾದಿಸಿದ ಧನ-ಕನಕಾದಿಗಳಿಂದ ತಮ್ಮ ದೇಹ ಯಾತ್ರೆಯನ್ನು ಮಾಡಿದರೆ ಮಹಾ ಅನರ್ಥಪ್ರಾಪ್ತಿಯಾಗುತ್ತದೆ ಎಂದು ದೃಷ್ಟಾಂತಪೂರ್ವಕವಾಗಿ ಉಪಪಾದನೆ ಮಾಡುತ್ತಾರೆ. ಮೂಢರಾದ ಮನುಷ್ಯರು ಶ್ವಾವ್ಯೆ= ನಾಯಿಗಳಂತೆ, ಅಭೂತಯೇ= ತಮ್ಮ ಪಾಪಕರ್ಮದ ಫಲದ ಭೋಗಕ್ಕಾಗಿ, ನಿತ್ಯಂ= ಯಾವಾಗಲೂ, ವಾಂತಂ= ತಾವು ವಮನ ಮಾಡಿದುದನ್ನೇ, ಅಶ್ನಂತಿ= ತಿನ್ನುತ್ತಾರೆ. ಹೇಗೆ ನಾಯಿಗಳು ತಾವು ವಾಂತಿ ಮಾಡಿದುದನ್ನೇ ಪುನಃ ತಿನ್ನುತ್ತವೆಯೋ ಅದರಂತೆ ಮೂಢರಾದ ಪುರುಷರು ಸಂನ್ಯಾಸವನ್ನು ಸ್ವೀಕರಿಸಿ, ಸಂನ್ಯಾಸಧರ್ಮವನ್ನು ತಿಳಿಯದೆ ಮೂರ್ಖ ಸಂನ್ಯಾಸಿಗಳಾಗಿ, ಸ್ವವೀರ್ಯಸ್ಯ= ತಾವು ಸಂನ್ಯಾಸವನ್ನು ಸ್ವೀಕರಿಸುವ ಮೊದಲೇ ತಮ್ಮ ಸಾಮರ್ಥ್ಯದಿಂದ ಸಂಪಾದಿಸಿದ ವಸ್ತುಗಳ, ಉಪಭೋಜನಾತ್= ಉಪಭೋಗದಿಂದ ತಮ್ಮ ದೇಹಯಾತ್ರೆಯನ್ನು ನಡೆಸುವುದರಿಂದ, ವಾಂತಂ= ತಮ್ಮ ವಮನವನ್ನೇ, ಅಶ್ನಂತಿ= ತಿನ್ನುತ್ತಾರೆ ಎಂದು ಹೇಳಲ್ಪಡುತ್ತಾರೆ. ಸಂನ್ಯಾಸವನ್ನು ತೆಗೆದುಕೊಳ್ಳುವಾಗ, 'ಸರ್ವಂ ಸಂನ್ಯಸ್ಥಂ' ಎಂದು ಹೇಳಿ ತಾವು ಅಲ್ಲಿಯವರೆಗೆ ಸಂಪಾದಿಸಿದ್ದೆಲ್ಲವನ್ನೂ ಪರಿತ್ಯಾಗವನ್ನು ಮಾಡಿ ಅನಂತರ ಸಂನ್ಯಾಸವನ್ನು ತೆಗೆದುಕೊಳ್ಳುವುದರಿಂದ ಸಂನ್ಯಾಸಾಶ್ರಮಸ್ವೀಕಾರದ ನಂತರದಲ್ಲಿಯೂ ಮೊದಲಿನ ವಿತ್ತಾದಿಗಳನ್ನು ಸ್ವೀಕಾರ ಮಾಡಿದರೆ ಅವರು ತಮ್ಮ ವಮನ ಭಕ್ಷಕರಾಗುತ್ತಾರೆ ಎಂಬುದು ಶಾಸ್ತ್ರನಿರ್ಣಯ. ಸಂನ್ಯಾಸಿಗಳಾದವರು ತಾವು ಪೂರ್ವಾಶ್ರಮದಲ್ಲಿ ಸಂಪಾದಿಸಿದ ಯಾವುದನ್ನೂ ಉಪಯೋಗಿಸಬಾರದು ಎಂದು ಅಭಿಪ್ರಾಯ.

**ನಿತ್ಯಮಜ್ಞಾತಚರ್ಯಾ ಮ ಇತಿ ಮನ್ಯೇತ ಬ್ರಾಹ್ಮಣಃ ।**
**ಜ್ಞಾತೀನಾಂ ತು ವಸನ್ ಮಧ್ಯೇ ನೈವಂ ವಿಂದೇತ ಕಿಂಚನ ॥೧೪॥**

ಶ್ರುತಿ-ಸ್ಮೃತಿಗಳು ಹೇಳಿದ ವರ್ಣಾಶ್ರಮ ಧರ್ಮಗಳು ಜ್ಞಾನ ಸಹಕೃತವಾದರೆ ಮಾತ್ರ ಮೋಕ್ಷಸಾಧನವಾಗುತ್ತವೆ, ಇಲ್ಲದಿದ್ದರೆ ಇಲ್ಲ ಎಂದು ಸೂಚಿಸಲು 'ಗೃಹಸ್ಥೋऽಪಿ ವಿಮುಚ್ಯತೇ' (ಗೃಹಸ್ಥನೂ ಮುಕ್ತನಾಗುತ್ತಾನೆ) ಇದೇ ಮೊದಲಾದ ಪ್ರಮಾಣಗಳಿಗೆ ಅನುಸಾರವಾಗಿ ಜ್ಞಾನ ಹೀನವಾದ ಸಂನ್ಯಾಸಾಶ್ರಮಕ್ಕಿಂತಲೂ ಜ್ಞಾನ ಸಂಪನ್ನನಾದ ನಿವೃತ್ತಧರ್ಮಾನುಷ್ಠಾನಪರನಾದ ಗೃಹಸ್ಥನೇ ಶ್ರೇಷ್ಠನಾದವನು ಎಂದು ಅವನ ಪ್ರವೃತ್ತಿ ಪ್ರಕಾರವನ್ನು ತಿಳಿಸುತ್ತಾರೆ.

ಬ್ರಾಹ್ಮಣಃ= ಬ್ರಹ್ಮಜ್ಞಾನಿಯಾದ ಗೃಹಸ್ಥನು, ನಿತ್ಯಂ= ಯಾವಾಗಲೂ, ಮೇ= ಜ್ಞಾನಿಯಾದ ನನಗೆ, ಅಜ್ಞಾತಚರ್ಯಾ= ನನ್ನ ಮಹಿಮೆಯನ್ನು ಗೂಹನೆ ಮಾಡಿಕೊಂಡಿರುವ ನಡವಳಿಕೆಯು, ಅಸ್ತು= ಉಂಟಾಗಲಿ, ಎಂದು ಮನ್ಯೇತ= ತಿಳಿಯಬೇಕು. ಅಥವಾ ಅಜ್ಞಾತಚರ್ಯೆ ಎಂದರೆ ಎಲ್ಲರಿಂದಲೂ ಸಾಕಲ್ಯೇನ ಅಜ್ಞಾತನಾದ ವಿಷ್ಣುವಿನ ವಿಷಯದಲ್ಲಿ ನನ್ನ ಎಲ್ಲಾ ಚರ್ಯೆಗಳೂ ಎಂದರೆ ಎಲ್ಲ ಇಂದ್ರಿಯಗಳ ಪ್ರವೃತ್ತಿಗಳೂ ನಿತ್ಯದಲ್ಲಿಯೂ ಇರಬೇಕು ಎಂದು ತಿಳಿಯಬೇಕು ಎಂದೂ ಅರ್ಥ. ಏವಂ= ಇಂತಹ ಜ್ಞಾನಿಯು, ಜ್ಞಾತೀನಾಂ= ಪತ್ನೀ-ಪುತ್ರಾದಿಗಳ ಮಧ್ಯೆ, ವಸನ್= ವಾಸವನ್ನು ಮಾಡಿದರೂ ಕೂಡ, ಗಾರ್ಹಸ್ಥ್ಯ ಧರ್ಮದಿಂದ ವಾಸವನ್ನು ಮಾಡಿದರೂ ಕೂಡ, ಕಿಂಚನ= ಸ್ವಲ್ಪ ಪಾಪವನ್ನೂ ಸಹ, ನೈವ ವಿಂದೇತ= ಹೊಂದುವುದಿಲ್ಲ. ಇದರಿಂದ ಜ್ಞಾನಪೂರ್ವಕ ಕರ್ಮಾನುಷ್ಠಾನವೇ ಮೋಕ್ಷಸಾಧನವೇ ಹೊರತು ಕೇವಲ ಸಂನ್ಯಾಸಾಶ್ರಮವಲ್ಲ ಎಂಬ ನಿರ್ಣಯವು ಸೂಚಿಸಲ್ಪಡುತ್ತದೆ.

**ಕೋ ಹ್ಯೇನಮಂತರಾತ್ಮಾನಂ ಬ್ರಾಹ್ಮಣೋ ಮಂತುಮರ್ಹತಿ ।**
**ನಿರ್ಲಿಂಗಮಚಲಂ ಶುದ್ಧಂ ಸರ್ವದ್ವಂದ್ವವಿವರ್ಜಿತಮ್ ॥೧೫॥**

ಅಲ್ಲಲ್ಲಿ ಬ್ರಹ್ಮನ ಜ್ಞಾನವು ದುರ್ಲಭ ಎಂದು ಹೇಳುವುದರಿಂದ ಬ್ರಹ್ಮನ ಜ್ಞಾನವೇ ಇಲ್ಲದಿದ್ದರೆ ಅವನು ಶಶವಿಷಾಣದಂತೆ ಶಬ್ದದಿಂದ ನಿರೂಪಿಸಲು ಸಾಧ್ಯವಿಲ್ಲದವನಾಗುತ್ತಾನೆ ಎಂಬ ಕಾರಣದಿಂದ 'ಯತೋ ವಾಚೋ ನಿವರ್ತಂತೇ', 'ನ ತೇ ವಿಷ್ಣೋ ಜಾಯಮಾನೋ ನ ಜಾತೋ ದೇವ ಮಹಿಮ್ನಃ ಪರಮಂತಮಾಪ' ಇತ್ಯಾದಿ ಶ್ರುತಿ-ಸ್ಮೃತಿಗಳು ಸರ್ವಾಂತರ್ಯಾಮಿತ್ವಾದಿ ಗುಣವಿಶಿಷ್ಟನಾದ ಪರಮಾತ್ಮನು ಪೂರ್ಣನಾಗಿ ಜ್ಞೇಯನಲ್ಲ ಎಂಬ ಕಾರಣದಿಂದ ಮಾತ್ರ ಅವನನ್ನು ಅಜ್ಞಾತವೆಂದು ಹೇಳುತ್ತವೆಯೇ ಹೊರತಾಗಿ ಅವನ ಜ್ಞಾನವು ಸ್ವಲ್ಪವೂ ಉಂಟಾಗುವುದಿಲ್ಲ ಎಂಬ ಕಾರಣದಿಂದಲ್ಲ. ಆದ್ದರಿಂದ ಯಾವ ಶಂಕೆಗೂ ಅವಕಾಶವಿಲ್ಲ ಎಂದು ತಿಳಿಸುತ್ತಾ ಬ್ರಹ್ಮನ ಸರ್ವ ಅಪರಿಜ್ಞೇಯತ್ವಾದಿ ಮಹಿಮೆಯನ್ನು ಇಲ್ಲಿ ಹೇಳುತ್ತಾರೆ. ಕಃ ಬ್ರಾಹ್ಮಣಃ= ಯಾವ ಜ್ಞಾನಿಯಾದ ಪುರುಷನು ತಾನೇ, ಏನಂ= ಶ್ರುತ್ಯಾದಿಗಳಲ್ಲಿ ಅಪರಿಜ್ಞೇಯ ಮಹಿಮೆಯುಳ್ಳವನೆಂದು ಪ್ರಸಿದ್ಧನಾದಂತಹ ಈ, ಅಂತರಾತ್ಮಾನಂ= ಸರ್ವಾಂತರ್ಯಾಮಿಯಾದ, ನಿರ್ಲಿಂಗಂ= ಅನಾದಿ

ಕಾಲದಿಂದಲೂ ಲಿಂಗ ಸಂಬಂಧದಿಂದ ದೂರನಾದ, ಸರ್ವದಾ ಏಕಪ್ರಕಾರನಾಗಿರುವ, ಶುದ್ಧಂ= ನಿರ್ದುಷ್ಟನಾದ, ಸರ್ವದ್ವಂದ್ವವಿವರ್ಜಿತಂ= ಶೀತೋಷ್ಣಾದಿ ಸಂಬಂಧ ಜನಿತನಾದ, ಸುಖ-ದುಃಖಾದಿ ಲೇಪದಿಂದ ರಹಿತನಾದ ಇಂತಹ ಭಗವಂತನನ್ನು, ಮಂತುಂ= ಪೂರ್ಣವಾಗಿ ತಿಳಿಯಲು, ಅರ್ಹತಿ= ಸಮರ್ಥನಾದಾನು? ಪೂರ್ಣವಾಗಿ ತಿಳಿಯಲು ಯಾವನೂ ಸಮರ್ಥನಾಗುವುದಿಲ್ಲ ಎಂದು ಅಭಿಪ್ರಾಯ.

ಇದೇ ಶ್ಲೋಕವನ್ನು ವಾದಿರಾಜರು ತಮ್ಮ ಸನತ್ಸುಜಾತೀಯ ಸ್ವತಂತ್ರ ವ್ಯಾಖ್ಯಾನದಲ್ಲಿ ಬೇರೆ ರೀತಿಯಾಗಿ ಪಠಿಸಿ ಅರ್ಥವನ್ನು ಹೇಳಿದ್ದಾರೆ.

**'ಯೋಽನ್ಯಥಾ ಸಂತಮಾತ್ಮಾನಮನ್ಯಥಾ ಪ್ರತಿಭಾಷತೇ ।**
**ಕಿಂ ತೇನ ನ ಕೃತಂ ಪಾಪಂ ಚೋರೇಣಾತ್ಮಾಪಹಾರಿಣಾ ॥**

ನಾರಾಯಣನು ಸ್ವತಂತ್ರ, ಜಗಜ್ಜನ್ಮಾದಿ ಕರ್ತಾ, ಅನಂತಕಲ್ಯಾಣ ಗುಣ ಪರಿಪೂರ್ಣ, ಶ್ರೀಬ್ರಹ್ಮಾದಿಗಳು ಅವನಿಂದ ಭಿನ್ನರು. ಅವನಿಗೆ ಅಧೀನರಾಗಿ ತರತಮ ಭಾವವನ್ನು ಹೊಂದಿದವರು ಎಂದು ಯಾವನು ತಿಳಿಯುತ್ತಾನೆಯೋ ಅವನೇ ಜ್ಞಾನಿ. ಬೇರೆ ರೀತಿಯಲ್ಲಿ ತಿಳಿಯುವವನು ಚೋರನೆಂದು ಈ ಶ್ಲೋಕದಲ್ಲಿ ಹೇಳುತ್ತಾರೆ.

ಯಃ= ಯಾವ ಮನುಷ್ಯನು, ಅನ್ಯಥಾ ಸಂತಂ= ಜೀವ ವಿಲಕ್ಷಣನಾಗಿರುವ ಪರಮಾತ್ಮನನ್ನು, ಅನ್ಯಥಾ= ಬೇರೆ ರೀತಿಯಲ್ಲಿ ಎಂದರೆ ಜೀವಾಭಿನ್ನನೆಂದು, ಪ್ರತಿಪದ್ಯತೇ= ತಿಳಿಯುತ್ತಾನೆಯೋ, ಯಾವನು= ಬ್ರಹ್ಮನಿಗೆ ಜೀವೈಕ್ಯವನ್ನು ತಿಳಿಯುತ್ತಾನೆಯೋ ಅವನು ಬ್ರಹ್ಮನನ್ನು ಅಪಹರಿಸುವ ಚೋರ ಎಂದು ಅಭಿಪ್ರಾಯ. ಜೀವ ವ್ಯತಿರಿಕ್ತನಾದ ಆತ್ಮನೇ ಇಲ್ಲ ಎಂದು ಹೇಳುವ ವಾದಿಯು ಆತ್ಮಾಪಹಾರಕನಾದ ಚೋರ. ಆತ್ಮಾಪಹಾರಿಣಾ ಚೋರಿಣಾ= ಅಂತಹ ಆತ್ಮಾಪಹಾರವನ್ನು ಮಾಡುವ ಚೋರನಿಂದ, ಕಿಂ ಪಾಪಂ= ಯಾವ ಪಾಪವು, ನ ಕೃತಂ= ಮಾಡಲ್ಪಡುವುದಿಲ್ಲ? ಅವನು ಸರ್ವಪಾಪಗಳನ್ನೂ ಮಾಡಿದವನು ಎಂದು ಅಭಿಪ್ರಾಯ. ಹಾಗೆ ತಿಳಿಯುವವನು ಬ್ರಹ್ಮಜ್ಞಾನಿಯಲ್ಲ, ಬ್ರಹ್ಮಚೋರನೆಂದೆನಿಸುತ್ತಾನೆ ಎಂದು ತಾತ್ಪರ್ಯ.

**ಅಶ್ರಾಂತಃ ಸ್ಯಾದನಾದಾತಾ ಸಮ್ಮತೋ ನಿರುಪದ್ರವಃ ।**
**ಶಿಷ್ಟೋ ನಾಶಿಷ್ಟವತ್ ಸ ಸ್ಯಾದ್ ಬ್ರಾಹ್ಮಣೋ ಬ್ರಹ್ಮವಿತ್ ಕವಿಃ ॥೧೬॥**

ಹೀಗೆ ಜೀವೇಶಾಭೇದಜ್ಞಾನರೂಪವಾದ ಮಿಥ್ಯಾಜ್ಞಾನವು ಅಂಧಂತಮಸ್ಸನ್ನು ಹೊಂದಿಸುವ ಮಹಾಪಾಪ ಸಾಧನವಾದುದರಿಂದ ವಿಷಯ ವಿರಕ್ತಿಯನ್ನು ಹೊಂದಿದ ಮುಮುಕ್ಷುವು ಎಂದೂ ಮಿಥ್ಯಾಜ್ಞಾನವನ್ನು ಹೊಂದಬಾರದು ಎಂದು ಈ ಶ್ಲೋಕದಲ್ಲಿ ಹೇಳುತ್ತಾರೆ.

ಅನಾದಾತಾ= ಬ್ರಹ್ಮನ ಸ್ವಾತಂತ್ರ್ಯಾದಿ ಸದ್ಗುಣಗಳನ್ನು ತನ್ನಲ್ಲಿ ಅನುಸಂಧಾನವನ್ನು ಮಾಡಿಕೊಳ್ಳದೆ, ಅಶ್ರಾಂತಃ= ಮಿಥ್ಯಾಜ್ಞಾನ, ನಿಮಿತ್ತವಾದ, ದುಃಖಾತ್ಮಕವಾದ ತಮಃಪ್ರಾಪ್ತಿರೂಪವಾದ ಶ್ರಮವನ್ನು ಹೊಂದದೆ, ಸ್ಯಾತ್= ಇರುವವನಾಗಬೇಕು (ಸ್ಯಾತ್ ಎಂಬುದನ್ನು ಪ್ರತಿಯೊಂದು ವಿಶೇಷಣಕ್ಕೂ ಅನ್ವಯಿಸಬೇಕು) ಅಥವಾ ಅನಾದಾನಾತ್= 'ಮಾತ್ರಾ ಸ್ಪರ್ಶಾಸ್ತು ಕೌಂತೇಯಃ' ಇತ್ಯಾದಿಗಳಲ್ಲಿ ಹೇಳಿದಂತೆ ವಿಷಯಭೋಗವು ದುಃಖಕ್ಕೆ ಕಾರಣವಾದುದರಿಂದ ಅಂತಹ ವಿಷಯ ಭೋಗಗಳನ್ನು ಸ್ವೀಕಾರ ಮಾಡದೆ, ಅಶ್ರಾಂತಃ ಸ್ಯಾತ್= ಅವುಗಳ ಅನುಭವದಿಂದ ಉಂಟಾದ ಶ್ರಮದಿಂದ ರಹಿತನಾಗಿರಬೇಕು, ಸಮ್ಮತಃ ಸ್ಯಾತ್= ಶಿಷ್ಟರಿಗೆ ಸಮ್ಮತವಾದ ಸದಾಚಾರವನ್ನು ಅನುಷ್ಠಾನ ಮಾಡಿ ವೇದ, ಶಾಸ್ತ್ರಗಳಿಗೆ ಸಮ್ಮತನಾಗಿರಬೇಕು, ನಿರುಪದ್ರವಃ ಸ್ಯಾತ್= ದೇಹ-ಗೇಹಾದಿಗಳಲ್ಲಿ ಬಹಳ ಆಸಕ್ತಿಯನ್ನು ಹೊಂದಿ ಅದರಿಂದ ಉಂಟಾಗುವ ಸಾಂಸಾರಿಕ ಕ್ಲೇಶಗಳಿಂದ ರಹಿತನಾಗಿರಬೇಕು ಅಥವಾ ಕಾಮಕ್ರೋಧಾದಿ ಅರಿಷಡ್ವರ್ಗಗಳಿಂದ ಉಂಟಾಗುವ ಉಪದ್ರವಗಳಿಂದ ರಹಿತನಾಗಿರಬೇಕು, ಶಿಷ್ಟಃ= ಗುರುಗಳಿಂದ ಸರ್ವದಾ ಶಾಸ್ತ್ರಶ್ರವಣ ಮಾಡಿ ಅನುಶಿಷ್ಟನಾಗಿದ್ದರೂ ನಾನು ಎಲ್ಲವನ್ನೂ ಕಲಿತಿದ್ದೇನೆ, ಗುರುಗಳಿಂದ ಅನುಶಿಷ್ಟನಾಗಿದ್ದೇನೆ. ಇನ್ನು ನನಗೆ ಗುರುಗಳು ಹೇಳಬೇಕಾದ ಅಂಶವು ಯಾವುದೂ ಇಲ್ಲ ಎಂಬ ದುರಹಂಕಾರವನ್ನು ಬಿಟ್ಟು, ಶಿಷ್ಟ ಸಜ್ಜನರನ್ನು ಅನುಸರಿಸಿ ಪುನಃ ಪುನಃ ಸಚ್ಛಾಸ್ತ್ರ ಶ್ರವಣ ಮಾಡುವ ವಿಷಯದಲ್ಲಿ, ಅಶಿಷ್ಟವತ್ ಸ್ಯಾತ್= ಹಿಂದೆ ಶಾಸ್ತ್ರ ಶ್ರವಣವನ್ನು ಮಾಡದವನಂತೆ ಆದರದಿಂದ ಕೂಡಿದವನಾಗಿರಬೇಕು. ಎಂದರೆ ಗುರುಗಳಿಂದ ಶಿಕ್ಷಿತನಾಗಿದ್ದರೂ ಪುನಃ ಜ್ಞಾನವನ್ನು ಸಂಪಾದಿಸುವ ವಿಷಯದಲ್ಲಿ ತಾನು ಉತ್ತಮರಿಂದ ಶಿಕ್ಷಿತನಾದವನಂತೆ ತೋರಿಸಿಕೊಳ್ಳಬಾರದು ಎಂದು ಅಭಿಪ್ರಾಯ. ಬ್ರಾಹ್ಮಣಃ= ಇಂತಹ ವಿಧವಾದ ಬ್ರಾಹ್ಮಣನೇ, ಬ್ರಹ್ಮವಿತ್= ಬ್ರಹ್ಮಜ್ಞಾನಿ, ಇನ್ನೊಬ್ಬನಲ್ಲ. ಅಂತಹ ಬ್ರಹ್ಮಜ್ಞಾನಿಯೇ, ಕವಿಃ= ತನ್ನನ್ನು ಉದ್ಧಾರ ಮಾಡಿಕೊಳ್ಳಲು ಚತುರನಾಗಿರುತ್ತಾನೆ.

**ಅನಾಢ್ಯಾ ಮಾನುಷೇ ವಿತ್ತೇ ಆಢ್ಯಾ ವೇದೇಷು ಯೇ ದ್ವಿಜಾಃ ।**
**ತೇ ದುರ್ಧರ್ಷಾ ದುಷ್ಪ್ರಕಂಪಾಃ ತಾನ್ ವಿದ್ಯಾದ್ ಬ್ರಹ್ಮಣಸ್ತನೂನ್ ॥**

ಸಂನ್ಯಾಸಿಗಳಿಗೆ ಧನಾದಿ ಸ್ವೀಕಾರವೇ ಇಲ್ಲದಿದ್ದರೆ ಅವರಿಗೆ ಜೀವನ ಯಾತ್ರೆಯೇ ನಡೆಯುವುದಿಲ್ಲವಾದ್ದರಿಂದ ಸಂನ್ಯಾಸ ಧರ್ಮಾಚರಣೆಗೆ ಚ್ಯುತಿ ಉಂಟಾಗುತ್ತದೆ ಎಂಬ ಶಂಕೆಯು ಉಂಟಾದರೆ 'ಚೀರಾಣಿ ಕಿಂ ಪಥಿ ನ ಸಂತಿ ದಿಶಂತಿ ಭಿಕ್ಷಾಮ್' (ದಾರಿಯಲ್ಲಿ ಹರಿದ ಬಟ್ಟೆಗಳು ಸಿಗುವುದಿಲ್ಲವೇ? ವೃಕ್ಷಗಳು ಹಣ್ಣುಗಳನ್ನು ಕೊಡುವುದಿಲ್ಲವೇ?) ಇತ್ಯಾದಿ ಭಾಗವತ ವಾಕ್ಯಗಳಂತೆ ವಿರಕ್ತಿಯೇ ಭೂಷಣರಾದ ಸಂನ್ಯಾಸಿಗಳಿಗೆ ಬೇರೆ ರೀತಿಯಿಂದಲೂ ಜೀವನಲ್ಲಿರುವ ಅಹವು ಉಂಟಾಗ ಬಹುದಾದ್ದರಿಂದ 'ಕಸ್ಮಾದ್ ಭಜಂತಿ ಕವಯೋ ಧನದುರ್ಮದಾಂಧಾನ್' (ಧನ ಮದದಿಂದ ಮತ್ತರಾದವರನ್ನು ಜ್ಞಾನಿಗಳು ಏಕೆ ಭಜಿಸುತ್ತಾರೆ) ಎಂದು ಧನಾರ್ಜನೆಯನ್ನು ನಿಂದಿಸಿರುವುದರಿಂದಲೂ ಕೂಡ ಆ ಧನಾರ್ಜನೆಯನ್ನು ಬಿಟ್ಟು ವೈದಿಕ ಧನದ ಸಂಪಾದನೆಯನ್ನೇ ಮಾಡಬೇಕು. ಏಕೆಂದರೆ ಅದೇ ಮಹಾಪುರುಷಾರ್ಥ ಸಾಧನವಾದುದು ಎಂದು ಇಲ್ಲಿ ಉಪಪಾದನೆ ಮಾಡುತ್ತಾರೆ. ಮಾನುಷೇ ವಿತ್ತೇ= ಪ್ರವೃತ್ತಿ ಮಾರ್ಗ ನಿರತರಾದ ಮನುಷ್ಯರ ಸಂಬಂಧಿಯಾದ ಹಿರಣ್ಯಾದಿ ಸಂಸಾರ ರೂಪಿಯಾದ ಧನದಲ್ಲಿ, ಅನಾಢ್ಯಾಃ= ದರಿದ್ರರಾಗಿ, ವೇದೇಷು= ಪರಮಾತ್ಮನ ಜ್ಞಾನವನ್ನುಂಟು ಮಾಡುವ ವೇದಾದಿ ಸಚ್ಛಾಸ್ತ್ರರೂಪವಾದ ಧನಗಳಲ್ಲಿ, ಆಢ್ಯಾಃ= ಅವುಗಳ ಅಧ್ಯಯನದಿಂದ ಸಂಪನ್ನರಾದ ಇಂತಹ, ಯೇ ದ್ವಿಜಾ= ಯಾವ ಸಂನ್ಯಾಸಿಗಳಿದ್ದಾರೆಯೋ, ಒಂದೇ ಜನ್ಮದಲ್ಲಿ ಮೊದಲು ಬ್ರಹ್ಮಚರ್ಯಾದಿ ಆಶ್ರಮ ತ್ರಯಗಳನ್ನು ಅನುಭವಿಸಿ, ಸಂನ್ಯಾಸ ಸ್ವೀಕಾರ ಕಾಲದಲ್ಲಿ ತಮಗಿಂತ ಉತ್ತಮರಾದ ಪರಮಹಂಸರ ಕರಕಮಲ ಸಂಜಾತರಾಗುವ ಕಾರಣ ಪುನಃ ಜನ್ಮಾಂತರ ಉಂಟಾಗುವುದರಿಂದ ಯತಿಗಳೂ ದ್ವಿಜರೆನಿಸುತ್ತಾರೆ. ಅಥವಾ ದ್ವಿಜಾಃ ಎಂಬ ಶಬ್ದಕ್ಕೆ ಬ್ರಹ್ಮಚರ್ಯಾದಿ ಆಶ್ರಯವಿಶಿಷ್ಟರಾದ ಬ್ರಾಹ್ಮಣರು ಎಂದೂ ಅರ್ಥವನ್ನು ಮಾಡಬಹುದು. ತೇ= ಅಂತಹ ಬ್ರಾಹ್ಮಣರು, ದುರ್ಧರ್ಷಾಃ= ದುಷ್ಟರಿಂದಾಗಲಿ ಅಥವಾ ಮಿಥ್ಯಾಜ್ಞಾನಿಗಳಿಂದಾಗಲಿ ನಿಗ್ರಹಿಸಲ್ಪಡದವರು, ದುಷ್ಪ್ರಕಂಪ್ಯಾಃ= ನಿವೃತ್ತಿ ಮಾರ್ಗಾನುಷ್ಠಾನದಿಂದ ಅಲ್ಲಾಡಿಸಲು ಸಾಧ್ಯವಿಲ್ಲದವರು, ದುರ್ಜನರಿಂದಲೂ ಅಲ್ಲಾಡಿಸಲು ಸಾಧ್ಯವಿಲ್ಲದವರು, ತಾನ್= ಅಂತಹ ಬ್ರಾಹ್ಮಣರನ್ನು, ಬ್ರಹ್ಮಣಸ್ತನೂ=

'ಜ್ಞಾನೀ ತ್ವಾತ್ಮೈವ ಮೇ ಮತಮ್' ಇತ್ಯಾದಿ ಪ್ರಮಾಣಕ್ಕೆ ಅನುಸಾರವಾಗಿ ವಿಶೇಷ ಪರಮಾತ್ಮನ ಸನ್ನಿಧಾನಕ್ಕೆ ಪಾತ್ರರಾದ ಪರಮಾತ್ಮನ ವಿಶಿಷ್ಟಪ್ರತಿಮೆಗಳೆಂದು, ವಿದ್ಯಾತ್= ತಿಳಿಯಬೇಕು.

**ಸರ್ವಾನ್ ಸ್ವಿಷ್ಟಕೃತೋ ದೇವಾನ್ ವಿದ್ಯಾದ್ ಯ ಇಹ ಕಶ್ಚನ ।**
**ನ ಸಮಾನೋ ಬ್ರಾಹ್ಮಣಃ ಸ್ಯಾದ್ ಯಸ್ಮಿನ್ ಪ್ರಯತತೇ ಸ್ವಯಮ್ ॥೧೮॥**

ನಿತ್ಯವೂ ಸರ್ವೋತ್ತಮತ್ವ, ಸರ್ವೋಪಕಾರಿತ್ವ, ಸರ್ವಸ್ವತಂತ್ರತ್ವಾದಿ ಅನಂತ ಗುಣಪರಿಪೂರ್ಣ ಎಂದು ನಾರಾಯಣನನ್ನು ಭಜಿಸುವ ಜ್ಞಾನಿಯು ತನ್ನ ಸರ್ವೇಂದ್ರಿಯಗಳನ್ನು ಸನ್ಮಾರ್ಗದಲ್ಲಿ ಪ್ರೇರಣೆ ಮಾಡುವುದರಿಂದ ನಾರಾಯಣನಿಗೆ ಅಧೀನವಾದ ಸತ್ತಾದಿಗಳನ್ನುಳ್ಳರಮಾದಿ ತತ್ತ್ವದೇವತೆಗಳಲ್ಲಿಯೂ ಮಹೋಪಕಾರಿತ್ವ ಜ್ಞಾನವನ್ನು ಹೊಂದಿ ವಿಶೇಷವಾಗಿ ಭಗವದನುಗ್ರಹ ಪ್ರಾಪ್ತಿಗಾಗಿ ಅವರನ್ನೂ ಭಜಿಸಬೇಕು ಎಂದು ಹೇಳುತ್ತಾರೆ.

ಕಶ್ಚನ ಎಂಬುದನ್ನು ಕಃ ಚ ನ ಎಂದು ಪದಚ್ಛೇದ ಮಾಡಬೇಕು. ಯಃ ಕಃ= ಯಾವ ಜ್ಞಾನಿಯು, ಇಹ= ಈ ತನ್ನ ಸ್ವದೇಹದಲ್ಲಿ, ಸರ್ವಾನ್ ದೇವಾನ್= ತತ್ತಾಭಿಮಾನಿಗಳಾದ ಎಲ್ಲ ದೇವತೆಗಳನ್ನೂ, ಸ್ವಿಷ್ಟಕೃತಃ= ತನ್ನ ಅಭೀಷ್ಟವನ್ನು ಪೂರಣ ಮಾಡುವವರೆಂದು, ವಿದ್ಯಾತ್= ತಿಳಿಯುತ್ತಾನೆಯೋ, ಸಃ= ಅವನೇ, ಬ್ರಾಹ್ಮಣಃ= ಬ್ರಾಹ್ಮಣನಾದವನು. ಅಂತಹವನೇ ಸಮಾನಃ= ಮಾನವೆಂದರೆ ಯಥಾರ್ಥ ಜ್ಞಾನ, ಅದರಿಂದ ಕೂಡಿದವನು, ಜ್ಞಾನದಿಂದ ಸಂಪನ್ನನಲ್ಲ ಎಂದು ಹೇಳಲು ಸಾಧ್ಯವಿಲ್ಲ, ಏಕೆಂದರೆ ಅವನೇ ಜ್ಞಾನಸಂಪನ್ನನಾದವನು. ಇದರಿಂದ ರಮಾದಿ ಸರ್ವ ತತ್ತದೇವತೆಗಳನ್ನು ತನಗೆ ಮಹೋಪಕಾರವನ್ನು ಮಾಡಿದವರೆಂದು ತಿಳಿದು ಅವರಲ್ಲಿ ತಾರತಮ್ಯಜ್ಞಾನವನ್ನು ಹೊಂದಿದವನೇ ಜ್ಞಾನಿಯೇ ಹೊರತು ಆ ಜ್ಞಾನವಿಲ್ಲದೆ ಶಾಸ್ತ್ರಾಧ್ಯಯನವನ್ನು ಮಾಡುವವನು ಜ್ಞಾನಿಯಲ್ಲ ಎಂಬ ಅಭಿಪ್ರಾಯವು ಸೂಚಿಸಲ್ಪಡುತ್ತದೆ. 'ಕಶ್ಚನ' ಎಂದೂ ಒಟ್ಟಿಗೆ ಇಟ್ಟುಕೊಳ್ಳಬೇಕು. 'ಯಃ ಕಶ್ಚನ ಬ್ರಾಹ್ಮಣಃ' =ಯಾವನಾದರೂ ಒಬ್ಬ ಬ್ರಾಹ್ಮಣನು ತನ್ನ ಇಷ್ಟವನ್ನು ಸಲ್ಲಿಸುವ ದೇವತೆಗಳನ್ನು ತಾರತಮ್ಯ ಜ್ಞಾನವಿಲ್ಲದೆ, ವಿದ್ಯಾತ್= ತಿಳಿಯುವವನಾದರೆ, ಸಃ= ಆ ಬ್ರಾಹ್ಮಣನು, ಸಮಾನಃ ನ ಸ್ಯಾತ್= ಆ ತತ್ತಾಭಿಮಾನಿ ದೇವತೆಗಳಿಗೆ ತಾರತಮ್ಯವನ್ನು ತಿಳಿದ ಜ್ಞಾನಿಗೆ

ಸಮನಾಗುವುದಿಲ್ಲ. ಆದರೆ ನೀಚನಾದವನು ಎಂದು ಅಭಿಪ್ರಾಯ. ಏಕೆಂದರೆ ಸ್ವಯಂ= ತಾನೇ, ಸ್ವತಃ ಆ ಬ್ರಾಹ್ಮಣನು, ಯಸ್ಮಿನ್= ತನ್ನ ಅಭಿಮಾನವುಳ್ಳ ಸಂಸಾರದಲ್ಲಿ, ಯತತೇ= ಪ್ರಯತ್ನಪಡುತ್ತಾನೆ, ದೇಹ-ಗೇಹಾದಿಗಳಲ್ಲಿಯೇ ಅಭಿಮಾನವನ್ನು ಹೊಂದಿ ಅಲ್ಲಿಯೇ ಪ್ರಯತ್ನಶೀಲನಾಗುತ್ತಾನೆ ಎಂದು ಅಭಿಪ್ರಾಯ. ಆದ್ದರಿಂದ ವಿರುದ್ಧ ಧರ್ಮವನ್ನುಳ್ಳ ಅಥವಾ ತಾರತಮ್ಯ ಜ್ಞಾನ ಮತ್ತು ತದಭಾವರೂಪವಾದ ವಿರುದ್ಧ ಧರ್ಮವನ್ನುಳ್ಳ ಜ್ಞಾನಿಗಳು ಎಂದೂ ಸಮಾನರಾಗುವುದಿಲ್ಲ ಎಂದು ಅಭಿಪ್ರಾಯ. ಅಥವಾ ಸ ಬ್ರಾಹ್ಮಣಃ= ಅಂತಹ ತಾರತಮ್ಯಜ್ಞಾನವುಳ್ಳ ಜ್ಞಾನಿಯು, ಸಮಾನಃ ನ ಸ್ಯಾತ್= ಅಹಂಕಾರದಿಂದ ಕೂಡಿದವನಾಗಿರಬಾರದು, ಕೂಡಿದವನಾಗಿರುವುದಿಲ್ಲ ಎಂದು ಅರ್ಥವನ್ನು ಮಾಡಬಹುದು. ಇದರಿಂದ ಸಂಸಾರದಲ್ಲಿ ಅಭಿಮಾನವುಳ್ಳ ಶಾಸ್ತ್ರಜ್ಞಾನ ಸಂಪನ್ನನಾದವನು ಸಂಸಾರ ವಿಮುಕ್ತನಾದ ನಿರಭಿಮಾನಿಯಾದ ಅಪರೋಕ್ಷ ಜ್ಞಾನಿಗೆ ಎಂದೂ ಸಮಾನನಾಗುವುದಿಲ್ಲ ಎಂದು ಹೇಳಲ್ಪಡುತ್ತದೆ.

**ಯಮಪ್ರಯತಮಾನಂ ತು ಮಾನಯಂತಿ ಸ ಮಾನಿತಾಃ ।**
**ಸ ಮಾನ್ಯಮಾನೋ ಮನ್ಯೇತ ನಾವಮಾನೇऽನುಸಂಜ್ವರೇತ್ ॥೧೯॥**

ಹಿಂದಿನ ಶ್ಲೋಕಗಳಲ್ಲಿ ಮಾನಾಪಮಾನಜ್ಞಾನಶೂನ್ಯನಾದ, ದೇಹಾಭಿಮಾನ ಜ್ಞಾನಶೂನ್ಯನಾದ ಅಸಂಪ್ರಜ್ಞಾತ ಸಮಾಧಿಯಲ್ಲಿ ಪರಮಾತ್ಮನನ್ನು ನೋಡಿ ಆ ಸುಖದಲ್ಲಿ ಮಗ್ನನಾದ ಜ್ಞಾನಿಯ ಸಾಮಾನ್ಯ ಲಕ್ಷಣವನ್ನು ಹೇಳಿ ಈಗ ಅಂತಹ ಜ್ಞಾನಿಯ ವಿಶೇಷ ಲಕ್ಷಣವನ್ನು ಹೇಳುತ್ತಾರೆ.

ಅಪ್ರಯತಮಾನಂ= ಇನ್ನೊಬ್ಬರಿಂದ ಮರ್ಯಾದೆಯನ್ನು ಮಾಡಿಸಿಕೊಳ್ಳಲು ಪ್ರಯತ್ನ ಪಡದಿರುವ, ಯಾವ ಜ್ಞಾನಿಯನ್ನು ನೋಡಿ ಎಂದು ಅಧ್ಯಾಹಾರ ಮಾಡಬೇಕು, ಮಾನಿತಾಃ= ಜ್ಞಾನಿಗಳು, 'ಮಾಙ್ ಮಾನೇ' ಎಂಬ ಧಾತುವಿನಿಂದಲೂ, 'ಇಣ್ ಗತೌ' ಎಂಬ ಧಾತುವಿನಿಂದಲೂ ನಿಷ್ಪನ್ನವಾಗಿರುವುದರಿಂದ ಮಾನೇನ ಎಂದರೆ ಜ್ಞಾನದಿಂದ, ಇತಾಃ= ಕೂಡಿದವರು ಎಂಬ ಅರ್ಥದಲ್ಲಿ, ಮಾನಿತಾಃ ಎಂದರೆ ಜ್ಞಾನಿಗಳು ಎಂದು ಅರ್ಥವಾಗುತ್ತದೆ. ಅಥವಾ ಮಾನಿತಾಃ= ಮಾನ ಎಂದರೆ ಅಹಂಕಾರ, ಅದರಿಂದ ಕೂಡಿದವರು, ಐಶ್ವರ್ಯಾದಿ ಅಹಂಕಾರದಿಂದ ಕೂಡಿದ ರಾಜರು ಎಂದಾದರೂ ಅರ್ಥವನ್ನು ಮಾಡಬಹುದು, ಮಾನಯಂತಿ= ನಮಸ್ಕಾರಾದಿ

ಸತ್ಕಾರವನ್ನು ಮಾಡುತ್ತಾರೆಯೋ, ಮಾನ್ಯ ಮಾನಃ= ಮಾನ್ಯ= ಜ್ಞಾನಿ ಜನರಿಂದ ಮಾನ್ಯವಾದ, ಮಾನಃ= ಜ್ಞಾನವುಳ್ಳ, ಸಃ= ಅಂತಹ ಜ್ಞಾನವುಳ್ಳ ಇನ್ನೊಬ್ಬ ಜ್ಞಾನಿಯು, ಮನ್ಯೇತ= ಹೀಗೆ ಸರ್ವಜ್ಞಾನಿಗಳಿಂದಲೂ ಮಾನ್ಯನಾದವನನ್ನೇ ಜ್ಞಾನಿ ಎಂದು ತಿಳಿಯಬೇಕು. ಅಥವಾ ನಾನೂ ಸಹ ಇದೇ ರೀತಿಯಲ್ಲಿ ದೇಹಾಭಿಮಾನಶೂನ್ಯನಾದ ಜ್ಞಾನಿಯಾಗಬೇಕು ಎಂದು ಅವನನ್ನು ನೋಡಿ ಚಿಂತಿಸಬೇಕು ಎಂದೂ ಅರ್ಥ. ಅನಂತರದಲ್ಲಿ ಅವಮಾನೇ= ತನಗೆ ಇನ್ನೊಬ್ಬನಿಂದ ಅವಮಾನ ಉಂಟಾದರೂ, ನ ಸಂಜ್ವರೇತ್= ಅದರಿಂದ ಕ್ಲೇಶವನ್ನು ಪಡಬಾರದು, ಇದರಿಂದ ಜ್ಞಾನಿಯು ದೇಹಾಭಿಮಾನ ಶೂನ್ಯನಾದ ಇನ್ನೊಬ್ಬ ಜ್ಞಾನಿಯನ್ನು ನೋಡಿ ತಾನೂ ಸಹ ಅವನಂತೆಯೇ ಆಚಾರಶೀಲನಾಗಬೇಕೆಂದು ಬಯಸಬೇಕು ಎಂಬ ಅಭಿಪ್ರಾಯವು ಸೂಚಿತವಾಗುತ್ತದೆ.

**ಲೋಕಸ್ವಭಾವ ಏಷೋ ಹಿ ನಿಮೇಷೋನ್ಮೇಷವತ್ ಸದಾ ।**
**ವಿದ್ವಾಂಸೋ ಮಾನಯಂತೀಹ ಇತಿ ಮನ್ಯೇತ ಮಾನಿತಃ ॥೨೦॥**

ಈಗ ದ್ವಂದ್ವಸಹಿಷ್ಣುತ್ವವೇ ಜ್ಞಾನಿಯ ಮುಖ್ಯ ಧರ್ಮವೆಂದು ತಿಳಿಸಲು ಜ್ಞಾನಿಯೂ ಸಹ ಒಬ್ಬ ಮನುಷ್ಯನಾದುದರಿಂದ ಇನ್ನೊಬ್ಬರು ಮಾನಾವಮಾನವನ್ನು ಮಾಡಿದಾಗ ಸುಖ-ದುಃಖಗಳ ಅನುಭವವಿದ್ದರೂ ತಾನು ಜ್ಞಾನಿಯಾದುದರಿಂದ ಪಾಮರ ಜನರು ಮಾಡಿದ ಮಾನಾಪಮಾನಗಳು ತಾತ್ಕಾಲಿಕವಾದವುಗಳೆಂದು ತಿಳಿದು ತನ್ನ ಜ್ಞಾನದಾರ್ಢ್ಯದಿಂದ ಉಂಟಾಗುವ, ಸುಖದಿಂದ ಉಂಟಾದ ಮುಖದ ವಿಕಾಸಾದಿಗಳನ್ನು ಇನ್ನೊಬ್ಬರಿಗೆ ತೋರಿಸಬಾರದು ಎಂದು ಹೇಳುತ್ತಾರೆ.

ಏಷಃ= ಮಾನಾಪಮಾನಗಳನ್ನು ಮಾಡುವುದು, ಲೋಕಸ್ವಭಾವಃ= ಪಾಮರ ಜನರ ಸ್ವಭಾವ, ಸ್ವಾಭಾವಿಕವಾದ ಧರ್ಮ. ನಿಮೇಷೋನ್ಮೇಷವತ್= ಕಣ್ಣುಗಳನ್ನು ಮುಚ್ಚಿ ತೆಗೆಯುವಂತೆ, ಸದಾ= ಸರ್ವಕಾಲದಲ್ಲಿಯೂ ಇರುವಂತಹದು, ಹಿ= ಇದು ಪ್ರಸಿದ್ಧವಾದುದು. ಸುಖದ ಅನಂತರ ದುಃಖ, ದುಃಖದ ಅನಂತರ ಸುಖವು ಬರುವುದು ಸಂಸಾರದ ಸ್ವಾಭಾವಿಕವಾದ ಧರ್ಮ ಎಂದು ತಿಳಿದು, ವಿದ್ವಾಂಸಃ= ಅಪರೋಕ್ಷ ಜ್ಞಾನಿಗಳು, ಮಾನಯಂತಿ= ಮಾನಂ= ಜ್ಞಾನವನ್ನು, ಯಂತಿ=

ಹೊಂದುತ್ತಾರೆ. ಸುಖ-ದುಃಖಗಳನ್ನು ಒಂದರ ನಂತರ ಒಂದರಂತೆ ಅನುಭವಿಸಬೇಕಾದ್ದರಿಂದ ಅವು ಅನಿತ್ಯವೆಂದು ತಿಳಿಯುತ್ತಾರೆ ಎಂದು ಅರ್ಥ. ಆ ಕಾರಣದಿಂದ ಮಾನಿತಃ= ಜನರಿಂದ ಮಾನವನ್ನು ಹೊಂದಿದವನು, ಅವಮಾನ ಹೊಂದಿದವನೂ ಸಹ ಎಂದೂ ಇಟ್ಟುಕೊಳ್ಳಬೇಕು. ಇಹ= ಈ ಸಂಸಾರದಲ್ಲಿ, ಮನ್ಯೇತ= ಇನ್ನೊಬ್ಬರಿಂದ ಉಂಟಾದ ಸುಖ-ದುಃಖಗಳು ಅನಿತ್ಯವಾದವು ಎಂದು ತಿಳಿಯಬೇಕು. ಅಥವಾ ಅಲ್ಪವಾದ ಪರಗುಣಗಳನ್ನೂ ದೊಡ್ಡದೆಂದು ತಿಳಿದು ಅವರನ್ನು ಸನ್ಮಾನ ಮಾಡುವುದು ಲೋಕದಲ್ಲಿ ಸಜ್ಜನರ ಸ್ವಭಾವ. ಆ ಕಾರಣದಿಂದ ನನಗೆ ಸತ್ಕಾರವನ್ನು ಮಾಡುತ್ತಿದ್ದಾರೆ. ನನ್ನಲ್ಲಿ ಅಂತಹ ಗುಣವೇನೂ ಇಲ್ಲ ಎಂದು ತಿಳಿದು ನಿರಹಂಕಾರಿಯಾಗಿರಬೇಕು.

**ಅಧರ್ಮವಿದುಷೋ ಮೂಢಾ ಲೋಕಶಾಸ್ತ್ರವಿವರ್ಜಿತಾಃ ।**
**ನ ಮಾನ್ಯಂ ಮಾನಯಿಷ್ಯಂತೀತ್ಯೇವಂ ಮನ್ಯೇದಮಾನಿತಃ ॥೨೧॥**

ಸನ್ಮಾನಯೋಗ್ಯರಾದ ಜ್ಞಾನಿಗಳಿಗೆ ದುಷ್ಟರು ಅಸನ್ಮಾನವನ್ನು ಮಾಡುವುದಕ್ಕೆ ಸಚ್ಛಾಸ್ತ್ರಾಭ್ಯಾಸವನ್ನು ಮಾಡದಿರುವ ಅವರ ಧರ್ಮಜ್ಞಾನ ಶೂನ್ಯತ್ವವೇ ಕಾರಣವೆಂದು ತಿಳಿದು ಜ್ಞಾನಿಯು ಅವರಿಂದ ಅವಮಾನಿತನಾದರೂ ಕ್ಲೇಶ ಪಡಬಾರದೆಂದು ಈ ಶ್ಲೋಕದಲ್ಲಿ ಹೇಳುತ್ತಾರೆ.

ಲೋಕೇ= ಮನುಷ್ಯಲೋಕದಲ್ಲಿ, ಯೇ ಶಾಸ್ತ್ರವಿವರ್ಜಿತಾಃ= ಯಾರು ಸಚ್ಛಾಸ್ತ್ರಾಧ್ಯಯನದಿಂದ ಉಂಟಾಗುವ ಜ್ಞಾನಹೀನರಾಗಿರುತ್ತಾರೆಯೋ ಮತ್ತು ಆ ಕಾರಣದಿಂದಲೇ, ಅಧರ್ಮವಿದುಷಃ= ಧರ್ಮಜ್ಞಾನಶೂನ್ಯರಾಗಿ ಅಧರ್ಮ ಜ್ಞಾನದಿಂದ ಕೂಡಿರುತ್ತಾರೆಯೋ, ಅಂತಹ ಅಜ್ಞಾನಿಗಳೇ, ಮಾನ್ಯಂ= ಸನ್ಮಾನಕ್ಕೆ ಯೋಗ್ಯನಾದ ಜ್ಞಾನಿಯನ್ನು, ನ ಮಾನಯಿಷ್ಯಂತಿ= ಸನ್ಮಾನಿಸುವುದಿಲ್ಲ, ಇತಿ= ಈ ರೀತಿಯಾಗಿ, ಅಮಾನಿತಃ= ಅವರಿಂದ ಅವಮಾನಿತನಾದ ಜ್ಞಾನಿಯು, ಮನ್ಯೇತ್= ತಿಳಿಯಬೇಕು.

**ನ ವೈ ಮಾನಂ ಚ ಮೌನಂ ಚ ಸಹಿತೌ ವಸತಃ ಸದಾ ।**
**ಅಯಂ ಹಿ ಲೋಕೋ ಮಾನಸ್ಯ ಹ್ಯಸೌ ಮೌನಸ್ಯ ತದ್ವಿದುಃ ॥೨೨॥**

ಹೀಗೆ ಅಜ್ಞಾನಜನಿತವಾದ ದೇಹ-ಗೇಹಾದಿ ಅಭಿಮಾನಶೂನ್ಯರಾದ ಜ್ಞಾನಿ ಲಕ್ಷಣವನ್ನು ಹೇಳಿ ಈಗ ವಿರುದ್ಧ ಧರ್ಮಗಳಾದ ದುರಭಿಮಾನ ಮತ್ತು ಅನಭಿಮಾನಗಳಿಗೆ ಆಶ್ರಯಗಳನ್ನು ಹೇಳುತ್ತಾರೆ.

ಮಾನಂ= ದೇಹಾದಿಗಳು ನನ್ನದು ಎಂಬ ದುರಭಿಮಾನವೂ, ಮೌನಂ= ಸನ್ಮಾನದಿಂದ ಉಂಟಾದ ಸುಖದಿಂದ ಮುಖದ ವಿಕಾಸವನ್ನು ಪ್ರದರ್ಶಿಸದೇ ಸುಮ್ಮನಿರುವುದೂ, ಚ ಚ= ಇವೆರಡೂ, ಸಹಿತೌ= ಒಟ್ಟಿಗೆ ಒಂದೇ ಆಶ್ರಯದಲ್ಲಿ ಸಹಿತವಾಗಿ, ನ ವಸತಃ= ಇರುವುದಿಲ್ಲ, ಹಾಗಾದರೆ ಮಾನವು ಎಲ್ಲಿರುತ್ತದೆ ಮೌನವು ಎಲ್ಲಿರುತ್ತದೆ ಎಂಬ ಪ್ರಶ್ನೆಗೆ ಉತ್ತರಾರ್ಧದಲ್ಲಿ ಉತ್ತರವನ್ನು ಹೇಳುತ್ತಾರೆ. ಅಯಂ= ಪ್ರತ್ಯಕ್ಷಗೋಚರನಾದ, ಲೋಕಃ= ಸಂಸಾರಿಯಾದ ಜನರು, ಮಾನಸ್ಯ= ಅಭಿಮಾನಕ್ಕೆ, ಆಶ್ರಯವಾಗಿರುತ್ತಾರೆ ಎಂದು ಇಟ್ಟುಕೊಳ್ಳಬೇಕು, ಅಸೌ= ನಿವೃತ್ತಿ ಮಾರ್ಗವರ್ತಿಯಾದವನ ಅಪರೋಕ್ಷ ಜ್ಞಾನಕ್ಕೆ ಸಂಬಂಧಿಸಿದ, ಲೋಕಃ= ಜ್ಞಾನಿಜನರು, ಮೌನಸ್ಯ= ದ್ವಂದ್ವ ಸಹಿಷ್ಣುತಾ ರೂಪವಾದ ಮೌನಕ್ಕೆ ಆಶ್ರಯರಾಗಿರುತ್ತಾರೆ. ತತ್= ಅಂತಹ ಈ ವಿಷಯವನ್ನು, ವಿದುಃ= ಜ್ಞಾನಿಗಳು ತಿಳಿದಿರುತ್ತಾರೆ.

ಅಥವಾ ಅಯಂ ಲೋಕಃ= ಈ ಪ್ರತ್ಯಕ್ಷವಾದ ಭೂಲೋಕವು, ಮಾನಸ್ಯ= ಅಭಿಮಾನವುಳ್ಳವರಿಗೆ (ಅಹಂಕಾರವುಳ್ಳವರಿಗೆ ಆಶ್ರಯವಾದುದು ಎಂದು) ಹಿ= ಪ್ರಸಿದ್ಧವಾದುದು, ಅಸೌ= ಮೋಕ್ಷಲೋಕವು, ಮೌನಸ್ಯ= ಅಭಿಮಾನ ರಹಿತರಾದವರಿಗೆ ಆಶ್ರಯವಾದುದು, ಮೋಕ್ಷಾರ್ಥಗಳಿಗೆ ಮೌನವೇ ಪ್ರಿಯವಾದುದು. ಸಂಸಾರಿಗಳು ಮಾತ್ರ ಅಭಿಮಾನವನ್ನು ಬಿಡುವುದಿಲ್ಲ ಎಂದೂ ಅರ್ಥವನ್ನು ಮಾಡಬಹುದು.

**ಶ್ರೀರ್ಹಿ ಮಾನಾರ್ಥಸಂಜಾತಾ ಸಾ ಚಾಪಿ ಪರಿಪಂಥಿನೀ ।**
**ಬ್ರಾಹ್ಮೀ ಸುದುರ್ಲಭಾ ಶ್ರೀರ್ಹಿ ಪ್ರಜ್ಞಾಹೀನೇನ ಕ್ಷತ್ರಿಯ** ॥೨೩॥

ಅತಿ ಪ್ರಯತ್ನ ಸಾಧ್ಯವಾದ ವಿಷಯ ವಿರಕ್ತಿ, ನಿರಭಿಮಾನ, ಭಗವದರ್ಪಣ ಮತ್ತು ಸರಿಯಾದ ಅನುಸಂಧಾನ ಇವುಗಳಿಂದ ಸಹಿತವಾದ ಸಂನ್ಯಾಸ ಧರ್ಮಾಚರಣೆಯೇ ಸ್ವರೂಪ ಸುಖಾಭಿವ್ಯಕ್ತಿಗೆ ಕಾರಣವೆಂದು ಹೇಳಿದರೆ ಅಂತಹ

ಸುಖವು ದುರಭಿಮಾನಸಹಿತವಾದ, ಅಲ್ಪಾಯಾಸಸಾಧ್ಯವಾದ ಕಾಮ್ಯಕರ್ಮಾನುಷ್ಠಾನದಿಂದಲೂ ದೊರೆಯುವುದರಿಂದ ಸಂನ್ಯಾಸ ಧರ್ಮವನ್ನೇ ಏಕೆ ಆಚರಿಸಬೇಕು ಎಂಬ ಪ್ರಶ್ನೆಗೆ ಉತ್ತರವಾಗಿ,

**ಹಿತ್ವಾ ಸ್ವಧರ್ಮಂ ಚರಣಾಂಬುಜಂ ಹರೇ–**
**ರ್ಭಜನ್ನಪಕ್ವೋಥ ಪತೇತ್ ತತೋ ಯದಿ ।**
**ಯತ್ರ ಕ್ವ ವಾ ಭದ್ರಮಭೂದಮುಷ್ಯ**
**ಕೋ ವಾರ್ಥ ಆಪ್ತೋ ಭಜತಾಂ ಸ್ವಧರ್ಮಮ್ ॥'**

(ತನ್ನ ಕುಲಾಗತವಾದ ಧರ್ಮವನ್ನು ಬಿಟ್ಟು ಪರಮಾತ್ಮನ ಪಾದವನ್ನು ಭಜಿಸುತ್ತಾ ಅಪಕ್ವನಾಧಿಕಾರಿಯು ಎಲ್ಲಾದರೂ ಜಾರಿದರೂ ಸಹ ಅವನಿಗೆ ಎಲ್ಲಿಯಾದರೂ ಒಳ್ಳೆಯದೇ ಆಗುತ್ತದೆ. ಹರಿಪಾದ ಭಜನೆಯನ್ನು ಬಿಟ್ಟು ಕುಲಧರ್ಮವನ್ನು ಆಚರಿಸುವವನು ಯಾವುದನ್ನು ಸಂಪಾದಿಸುತ್ತಾನೆ?) ಎಂಬ ಭಾಗವತ ವಚನಕ್ಕೆ ಅನುಸಾರವಾಗಿ ಅಭಿಮಾನ ಸಹಿತವಾಗಿ ಆಚರಿಸಿದ ಕರ್ಮಗಳು ಮೋಕ್ಷಕ್ಕೆ ವಿರೋಧಿಯಾದುದರಿಂದ ಮತ್ತು ಪತನಾನಂತರದಲ್ಲಿ ದುಃಖಕ್ಕೆ ಕಾರಣವಾದುದರಿಂದ ಕಾಮ್ಯಕರ್ಮಜನ್ಯವಾದ ಸ್ವರ್ಗಾದಿಗಳು ಪಾಮರರಿಗೆ ಸುಖದಂತೆ ತೋರಿದರೂ ಮುಮುಕ್ಷು ಅದು ಹೇಯವಾದುದು ಎಂದು ಉಪದೇಶ ಮಾಡುತ್ತಾ ಅಭಿಮಾನ ರಹಿತವಾಗಿ ಮತ್ತು ಸಹಿತವಾಗಿ ಮಾಡಿದ ಕರ್ಮಗಳ ಪಾರತ್ರಿಕ ಫಲದ ವೈಲಕ್ಷಣ್ಯವನ್ನು ಇಲ್ಲಿ ಹೇಳುತ್ತಾರೆ.

ಮಾನಾರ್ಥಸಂಜಾತಾ=ಮಾನ ಎಂದರೆ ದುರಭಿಮಾನ, ಅರ್ಥ ಎಂದರೆ ವಿಷಯವರ್ಗಗಳು, ಇವುಗಳಿಂದ ಉಂಟಾದ ಅಥವಾ ಮಾನಾರ್ಥಸಂಜಾತಾ= ಮಾನಾರ್ಥಂ ದುರಭಿಮಾನವನ್ನು ಹುಟ್ಟಿಸುವ ಸಲುವಾಗಿಯೇ, ಸಂಜಾತಾ= ಉಂಟಾದಂತಹ, ಅಥವಾ ಕಾಮಾರ್ಥ ಸಂಜಾತಾ ಎಂಬ ಪಾಠವಿದ್ದರೆ ಕಾಮ ಎಂದರೆ ವಿಷಯಗಳು, ಅವುಗಳನ್ನು ಸಂಪಾದಿಸುವ ಸಲುವಾಗಿ ಉಂಟಾದ ಎಂದರೆ ಅಭಿಮಾನ ಪೂರ್ವಕವಾಗಿ ಮಾಡಿದ ಕಾಮ್ಯಕರ್ಮದಿಂದ ಉಂಟಾದ ಸ್ವರ್ಗಾದಿ ರೂಪವಾದ ಎಂದು ಅರ್ಥ. ಶ್ರೀಃ= ಸಂಪತ್ತು, ಪರಿಪಂಥಿನೀ= ಅನಿತ್ಯವೂ ದುಷ್ಟವೂ ಆದುದರಿಂದ ಮೋಕ್ಷಮಾರ್ಗದ ವಿರೋಧಿಯಾದುದು. 'ಹಿ' ಎಂಬ ನಿಪಾತವು ಅದು

ದುಷ್ಪವಾದುದರಿಂದ ಹೇಯವೆಂದು ಸೂಚಿಸುತ್ತದೆ. ಬ್ರಾಹ್ಮೀ= ಬ್ರಹ್ಮ ಜ್ಞಾನದಿಂದ ಉಂಟಾದ, ಶ್ರೀಃ= ಮೋಕ್ಷರೂಪವಾದ ಸಂಪತ್ತು, ಪ್ರಜ್ಞಾಹೀನೇನ = ನಿರಹಂಕಾರಪೂರ್ವಕವಾಗಿ ವಿಷ್ಣುಸರ್ವೋತ್ತಮತ್ವಜ್ಞಾನವನ್ನು ಹೊಂದದಿರುವ ಪುರುಷನಿಂದ, ದುರ್ಲಭಾ= ಅಪ್ರಾಪ್ಯವಾದುದು, ಇಲ್ಲಿಯೂ ಕೂಡ 'ಹಿ' ಎಂಬ ನಿಪಾತದಿಂದ ಬ್ರಾಹ್ಮೀ ಸಂಪತ್ತು ನಿತ್ಯವೂ ಸುಖಾತ್ಮಕವಾಗಿರುವುದರಿಂದ ಅದನ್ನೇ ಸಂಪಾದಿಸಬೇಕು ಎಂದು ಸೂಚಿಸಲ್ಪಡುತ್ತದೆ.

ದ್ವಾರಾಣಿ ತಸ್ಯಾಃ ಪ್ರವದಂತಿ ಸಂತೋ
ಬಹುಪ್ರಕಾರಾಣಿ ದುರಾಚರಾಣಿ ।
ಸತ್ಯಾರ್ಜವೇ ಹ್ರೀರ್ದಮಶೌಚವಿದ್ಯಾಃ
ಷಣ್ಮಾನಮೋಹಪ್ರತಿಬಂಧನಾನಿ ॥೨೪॥

ಸರ್ವಜ್ಞರಾದ ಸನತ್ಸುಜಾತರು 'ಪ್ರಮಾದಂ ವೈ ಮೃತ್ಯುಮಹಂ ಬ್ರವೀಮಿ' ಎಂದು ಆರಂಭಿಸಿ ಅಧ್ಯಾಯದ ಕೊನೆಯವರೆಗೆ ಅಜ್ಞಾನ ಮತ್ತು ಮಿಥ್ಯಾಜ್ಞಾನಿಗಳಿಗೇ ಅನರ್ಥಪ್ರದತ್ವವನ್ನೂ, ಅದರ ಪರಿಹಾರಸಾಧನವಾದ ವಿಷ್ಣುಸರ್ವೋತ್ತಮತ್ವಜ್ಞಾನವೇ ಮೋಕ್ಷಪ್ರದವೆಂಬುದನ್ನೂ, ಪರಿಹಾರ ಸಾಧನವಾದ ವಿಷ್ಣುಸರ್ವೋತ್ತಮತ್ವ ಜ್ಞಾನವಾದರೂ ಅನೇಕ ಆಗಮಗಳ ಪ್ರಮಾಣದಿಂದ ಉಂಟಾಗುತ್ತದೆ ಎಂಬುದನ್ನೂ ಸಮರ್ಥಿಸಿ, ಉಪಸಂಹಾರವನ್ನು ಮಾಡಿ ಪುನಃ ಧೃತರಾಷ್ಟ್ರನ ಮುಂದಿನ ಪ್ರಶ್ನೆಗೆ ಅವಕಾಶವನ್ನು ಮಾಡಿಕೊಡಲು ಮಿಥ್ಯಾಜ್ಞಾನ ಮತ್ತು ಅಜ್ಞಾನಶಬ್ದಗಳ ಪರ್ಯಾಯ ಶಬ್ದಗಳಾದ ಮಾನ ಮತ್ತು ಮೋಹಗಳ ವಿನಾಶಕ್ಕೋಸ್ಕರ ಸ್ತ್ರೀ-ಶೂದ್ರಾದಿ ಸರ್ವಾಧಿಕಾರಿಗಳು ಅನುಷ್ಠಾನ ಮಾಡಬೇಕಾದ ಆರು ಸಾಧನಗಳನ್ನು ಹೇಳುತ್ತಾರೆ.

ಸಂತಃ= ಶಾಸ್ತ್ರಾರ್ಥವನ್ನು ತಿಳಿದ ಜ್ಞಾನಿಗಳು, ಮಾನಮೋಹ ಪ್ರತಿಬಂಧನಾನಿ= ದೇಹದಲ್ಲಿನನ್ನದು ಎಂಬ ಬುದ್ಧಿಯು ಮಾನ, ಅದು ಮಿಥ್ಯಾಹಂಕಾರ ರೂಪವಾದುದು, ದೇಹ-ಗೇಹಾದಿಗಳಲ್ಲಿ ಪ್ರತ್ಯಕ್ಷವಾಗಿ ಅನಿತ್ಯತ್ವವನ್ನು ನೋಡಿದರೂ ನೋಡದವನಂತೆ ಪ್ರವೃತ್ತನಾಗುವುದು ಮೋಹ. ಇಂತಹ ಮಾನಮೋಹಗಳಿಗೆ ಪ್ರತಿಬಂಧನಾನಿ= ಸ್ತಂಭಕವಾದ, ಷಟ್= ಆರು ಸಾಧನಗಳನ್ನು ಪ್ರವದಂತಿ= ಹೇಳುತ್ತಾರೆ. ಆ ಸಾಧನಗಳಾದರೂ ಬಹುಪ್ರಕಾರಾಣಿ= ಅನೇಕ ಪ್ರಕಾರಗಳಿಂದ ಕೂಡಿದವು ಮತ್ತು

ದುರಾಚರಾಣಿ= ಕಷ್ಟಪಟ್ಟು ಆಚರಣೆ ಮಾಡಲು ಸಾಧ್ಯವಾದವುಗಳು, ಅವು ಯಾವುವೆಂದರೆ ಸತ್ಯಾರ್ಜವೇ= ಸತ್ಯ ಎಂದರೆ ಯಥಾರ್ಥ ಭಾಷಣ ಅಥವಾ ಸಜ್ಜನರಿಗೆ ಹಿತವಾದ ಭಾಷಣ, ಆರ್ಜವ ಎಂದರೆ ಋಜು ಮಾರ್ಗದಲ್ಲಿ ನಡೆಯುವಿಕೆ ಇವು ಎರಡು. ಹ್ರೀಃ= ನಿಷಿದ್ಧವನ್ನು ಮಾಡುವುದರಲ್ಲಿ ಲಜ್ಜೆ ಇದು ಮೂರನೆಯದು. ದಮ= ಇಂದ್ರಿಯ ನಿಗ್ರಹ- ಇದು ನಾಲ್ಕನೆಯದು, ಶೌಚಂ= ಮೃಜ್ಜಲಗಳಿಂದ ಬಾಹ್ಯ ಶೌಚ, ಮನಸ್ಸಿನ ಶುದ್ಧಿಯಿಂದ ಆಂತರ್ಯದ ಶೌಚ - ಈ ಎರಡು ಶುದ್ಧಿಗಳು - ಇವು ಐದನೆಯವು. ವಿದ್ಯಾ= ಪರಾಪರವಿಷಯವಾದ ಬ್ರಹ್ಮವಿದ್ಯೆ- ಇದು ಆರನೆಯದು. ಈ ಆರು ಗುಣಗಳು ಮಾನ-ಮೋಹಗಳನ್ನು ನಾಶ ಮಾಡುತ್ತವೆ ಎಂದು ಅಭಿಪ್ರಾಯ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ತ್ರಿಚತ್ವಾರಿಂಶೋಽಧ್ಯಾಯಃ ॥

॥ ಸನತ್ಸುಜಾತಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನಲವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

## ನಲವತ್ನಾಲ್ಕನೆಯ ಅಧ್ಯಾಯ

ಧೃತರಾಷ್ಟ್ರನಿಂದ ಸನತ್ಕುಮಾರರನ್ನು ಕುರಿತು ಸಂನ್ಯಾಸ ಸ್ವರೂಪ. ತಪಸ್ಸಿನ ಋದ್ಧಿ, ಅತಿವೃದ್ಧಿಬೇಧಗಳು, ತಪಸ್ಸಿನ ಕಲ್ಮಷಗಳು. ಆ ಕಲ್ಮಷಗಳ ಪರಿಹಾರ. ಬ್ರಹ್ಮಜ್ಞಾನ ಮತ್ತು ಬ್ರಹ್ಮಜ್ಞಾನಿಯ ಲಕ್ಷಣ ವಿಷಯದಲ್ಲಿ ಪ್ರಶ್ನೆ. ಸನತ್ಕುಮಾರರಿಂದ ಅವುಗಳ ಪರಿಹಾರ.

### ಧೃತರಾಷ್ಟ್ರಃ

ಕಸ್ಯೈಷ ಮೌನಃ ಕತರನ್ನು ಮೌನಂ
ಪ್ರಬ್ರೂಹಿ ವಿದ್ವನ್ನಿಹ ಮೌನಭಾವಮ್ ।
ಮಾನೇನ ವಿದ್ವಾನುಪಯಾತಿ ಮೌನಂ
ಕಥಂ ಮುನೇ ಮೌನಮಿಹಾಚರಂತಿ ॥೧॥

ಅಸೌ ಮೌನಸ್ಯ ಇತ್ಯಾದಿಗಳಿಂದ ಮೌನ ವಿಷಯಕವಾದ ಜ್ಞಾನಿ ಲಕ್ಷಣವನ್ನು ತಿಳಿದ ಧೃತರಾಷ್ಟ್ರನು ಪುನಃ ಅಧನ್ನೇ ವಿಶೇಷವಾಗಿ ತಿಳಿಯಲು ಮೌನಾದಿ ಸ್ವರೂಪವನ್ನು ಕುರಿತು ಪ್ರತ್ಯೇಕವಾಗಿ ಪ್ರಶ್ನೆಯನ್ನು ಮಾಡುತ್ತಾನೆ.

ಹೇ ವಿದ್ವನ್= ಸರ್ವಜ್ಞರಾದ ಸನತ್ಸುಜಾತರೇ, ಏಷ ಮೌನಃ= 'ಅಸೌ ಮೌನಸ್ಯ' ಮೊದಲಾದ ಶ್ಲೋಕಗಳಲ್ಲಿ ನೀವು ಹೇಳಿದ ಮೌನವು, ಕಸ್ಯ= ಎಂತಹ ಬ್ರಾಹ್ಮಣನ ವಿಷಯದಲ್ಲಿ ಸಲ್ಲುತ್ತದೆ? ಮೌನಂ ಕತರತ್= ಮೌನವು ಯಾರ ಪಕ್ಷದಲ್ಲಿ ಸಲ್ಲುತ್ತದೆ? ಅಥವಾ ಮೌನದ ಲಕ್ಷಣವೇನು? ಮೌನಭಾವಂ ಎಂದರೆ ಮೌನಸ್ವಭಾವ ಅಥವಾ ಮೌನದ ಇರುವಿಕೆಯನ್ನೂ, ಮೌನೇನ= ಯಾವ ಮೌನದ ಅಧಿಷ್ಠಾನದಿಂದ, ವಿದ್ವಾನ್= ಜ್ಞಾನಿಯು, ಮೌನಂ= ಮುನಿಪ್ರಾಪ್ಯನಾದ ಭಗವಂತನನ್ನು ಅಥವಾ ಪುಣ್ಯಸಾಧನವಾದ ಪ್ರಸಿದ್ಧವಾದ ಮೌನವನ್ನು, ಉಪಯಾತಿ= ಹೊಂದುತ್ತಾನೆ? ಹೇ ಮುನೇ= ಎಲೈ ಮೌನರೂಪವಾದ ಧರ್ಮನಿಷ್ಠ ಸನತ್ಸುಜಾತರೇ, ಮೌನಂ= ಮಹಾಪುರುಷಾರ್ಥ ಸಾಧನವಾದ ನಿಮಗೆ ಅಭಿಮತವಾದ ಮೌನವನ್ನು, ಕಥಂ= ಯಾವ ರೀತಿಯಿಂದ, ಇಹ= ಸಾಧನಾನುಷ್ಠಾನ ಸಮಯದಲ್ಲಿ, ಆಚರಂತಿ= ಜ್ಞಾನಿಗಳು ಆಚರಿಸುತ್ತಾರೆ? ಇವುಗಳನ್ನು ಪ್ರಬ್ರೂಹಿ= ವಿಶೇಷವಾಗಿ ತಿಳಿಸಿ. ಮೌನಾದಿಗಳು ಅವಶ್ಯವಾಗಿ ತಿಳಿಯಲೇಬೇಕಾದ ವಿಷಯಗಳು ಎಂದು ಸೂಚಿಸಲು 'ಪ್ರಬ್ರೂಹಿ' ಎಂದು 'ಪ್ರ' ಎಂಬ ಉಪಸರ್ಗವನ್ನು ಪ್ರಯೋಗಿಸಿದ್ದಾರೆ. ಇಲ್ಲದಿದ್ದರೆ ಬ್ರೂಹಿ ಎಂದು ಇಷ್ಟೇ ಸಾಕಾಗುತ್ತಿದ್ದಿತು.

**ಸನತ್ಸುಜಾತಃ**

ಯತೋ ನ ವೇದಾ ಮನಸೈವ ಹೀನಮ್
ಅನುಪ್ರವಿಶಂತಿ ತತೋ ನ ಮೌನಮ್ ।
ಯತ್ರೋತ್ಥಿತೋ ವೇದಶಬ್ದಸ್ತಥಾऽಯಂ
ನ ತನ್ಮಯತ್ವೇನ ವಿಭಾತಿ ರಾಜನ್ ॥೨॥

ಹೀಗೆ ಹಿಂದೆ 'ಅಸೌ ಮೌನಸ್ಯ' ಮುಂತಾದ ವಾಕ್ಯಗಳಿಂದ ಬ್ರಹ್ಮಜ್ಞಾನಿ ಮತ್ತು ಮೌನಗಳಿಗೆ ಸಾಮಾನ್ಯವಾಗಿ ವಿಷಯ-ವಿಷಯೀಭಾವ ಸಂಬಂಧವನ್ನು ತಿಳಿದ ಧೃತರಾಷ್ಟ್ರನು ಪುನಃ ಬ್ರಹ್ಮಜ್ಞಾನಿಗೆ ಸಂಬಂಧಿಸಿದ ಮೌನಸ್ವರೂಪವನ್ನು ವಿಶೇಷವಾಗಿ

ತಿಳಿಯಲು 'ಕಸ್ಯೈಷ ಮೌನಂ' ಇತ್ಯಾದಿ ವಾಕ್ಯದಿಂದ ಐದು ರೀತಿಯಲ್ಲಿ ಪ್ರಶ್ನಿಸಲ್ಪಟ್ಟ ಸನತ್ಸುಜಾತರು ಎಲ್ಲ ಪ್ರಶ್ನೆಗಳಿಗೂ 'ಯತಃ' ಎಂಬ ಒಂದೇ ಶ್ಲೋಕದಿಂದ ಉತ್ತರವನ್ನು ಕೊಡುತ್ತಾರೆ.

ಯತಃ= ಅನಾದಿ ಕಾಲದಿಂದ ಬಂದ ಸಂಸಾರಪ್ರಯುಕ್ತವಾದ ಅಜ್ಞಾನ ಮತ್ತು ಅನ್ಯಥಾ ಜ್ಞಾನದ ನಿಮಿತ್ತದಿಂದ, ಹೀನಂ= ಭಗವದ್ವಿಷಯಕವಾದ ಜ್ಞಾನ, ಧ್ಯಾನಾದಿ ಹೀನನಾದ ಈ ಪುರುಷನನ್ನು, ವೇದಾಃ= ವೇದಯಂತೀತಿ ವೇದಾಃ= ಭಗವದ್ಗುಣಗಳನ್ನು ತಿಳಿಸಿಕೊಡುವುದರಿಂದ ವೇದಗಳು ಎಂದು ಕರೆಸಿಕೊಳ್ಳುವ ಶಬ್ದರಾಶಿಗಳು, ಮನಸಾ= ಮನು ಅವಬೋಧನೆ ಎಂದು ಧಾತುವಿರುವುದರಿಂದ, **'ಸರ್ವೇ ವೇದಾ ಯತ್ಪದಮಾಮನಂತಿ'** ಇತ್ಯಾದಿ ಪ್ರಮಾಣಗಳಿಂದ ಭಗವಂತನೇ ಮುಖ್ಯವಾಗಿ ಅನಂತವೇದ ಪ್ರತಿಪಾದ್ಯ ಎಂಬ ಅನುಸಂಧಾನದ ಜೊತೆಯಲ್ಲಿ, ನ ಅನುಪ್ರವಿಶಂತಿ= ಅನುಕೂಲವಾಗಿ ಪ್ರವೇಶಿಸುವುದಿಲ್ಲ, ತತಃ= ವೇದಾನುಗ್ರಹೀತವಾದ ಬ್ರಹ್ಮಜ್ಞಾನವು ಇಲ್ಲದಿರುವ ಕಾರಣದಿಂದ, ಮೌನಂ= ಬ್ರಹ್ಮಜ್ಞಾನವೂ ಸಹ, ನ= ಉಂಟಾಗುವುದಿಲ್ಲ. ಇದರಿಂದ ಅಜ್ಞಾನ ಮತ್ತು ಅನ್ಯಥಾ ಜ್ಞಾನವಿಶಿಷ್ಟನಾದ ಬ್ರಾಹ್ಮಣನಲ್ಲಿ ಯದ್ಯಪಿ ವೇದವಿದ್ಯಾಧಿಕಾರವಿದೆ. ಆದರೂ ಅವನಿಗೆ ವೇದಾಧ್ಯಯನದಿಂದ ಬ್ರಹ್ಮಜ್ಞಾನವು ಉಂಟಾಗುವುದಿಲ್ಲ ಎಂದು ಹೇಳಲ್ಪಡುತ್ತದೆ. ಇದರಿಂದ ಮೌನಶಬ್ದವು ಜ್ಞಾನಶಬ್ದ ಪರ್ಯಾಯವೆಂದೂ, ಜ್ಞಾನಿಗೆ ಸಂಬಂಧಿಸಿದ್ದೆಂದೂ ತಿಳಿಸಲ್ಪಡುತ್ತದೆ. ಇದರಿಂದ **'ಕಸ್ಯೈಷ ಮೌನಃ, ಕತರನ್ನು ಮೌನಮ್'** ಎಂದು ಎರಡು ಪ್ರಶ್ನೆಗಳಿಗೆ ಉತ್ತರವನ್ನು ಹೇಳಿದಂತಾಯಿತು. ಯತ್ರ= ಯಾವ ಅಧಿಕಾರಿ ಪುರುಷನಲ್ಲಿ, ಅಯಂ= ಅನಂತ ಪ್ರಮಾಣ ಪ್ರಸಿದ್ಧನಾದ, ವೇದಶಬ್ದಃ= **'ಶಬ್ದಸ್ಯ ಹಿ ಬ್ರಹ್ಮಣ ಏಷ ಪಂಥಾ'** ಇತ್ಯಾದಿ ಪ್ರಮಾಣಗಳಿಂದ ವೇದಶಬ್ದಿತನಾದ ಎಂದರೆ ವೇದಗಳಿಂದ ಪ್ರತಿಪಾದಿತನಾದ ನಾರಾಯಣನು, ಉತ್ಥಿತಃ= ಜ್ಞಾನ-ಧ್ಯಾನಾದಿವಿಷಯನಾಗಿ ಉತ್ಕರ್ಷದಿಂದ ಸ್ಥಿತನಾಗಿರುತ್ತಾನೆಯೋ, ಇದರಿಂದ ಅಧಿಕಾರಿಯಾದವನೂ ಸಹ ವೇದಪ್ರತಿಪಾದಿತವಾದ ಯಥಾರ್ಥ ಬ್ರಹ್ಮಜ್ಞಾನಪೂರ್ವಕವಾಗಿ ವೇದಾಧ್ಯಯನವನ್ನು ಮಾಡಬೇಕೆಂದು ಸೂಚಿತವಾಗುತ್ತದೆ. ಸಃ= ಇಂತಹ ಬ್ರಹ್ಮಜ್ಞಾನಿಯು, ತನ್ಮಯತ್ವೇನ= ತನ್ನಲ್ಲಿ ಸಚ್ಛಬ್ದವಾಚ್ಯವಾದ ಭಗವಂತನ ಪ್ರಾಧಾನ್ಯ ಜ್ಞಾನವಿರುವ ನಿಮಿತ್ತದಿಂದ, ವಿಭಾತಿ= ತನಗೆ ಯೋಗ್ಯವಾದ ಬ್ರಹ್ಮಜ್ಞಾನಾದಿ ಸಂಪತ್ತಿನಿಂದ ವಿಶಿಷ್ಟವಾಗಿ

ಪ್ರಕಾಶಿಸುತ್ತಾನೆ. ಹೇ ರಾಜನೇ! ಎಂಬ ಸಂಬೋಧನೆಯಿಂದ ನೀನೂ ಸಹ ಇಂತಹ ಮೌನವನ್ನು ಸಂಪಾದನೆ ಮಾಡಬೇಕೆಂದು ಸೂಚಿತವಾಗುತ್ತದೆ. '**ಯತ್ರೋತ್ಥಿತೋ ವೇದಶಬ್ದಃ**' ಎಂಬುದರಿಂದ '**ಮೌನೇನ ವಿದ್ವಾನುಪಯಾತಿ ಮೌನಮ್**' ಎಂಬುದು ವಿವರಿಸಲ್ಪಡುತ್ತದೆ. '**ಅನುಪ್ರವಿಶಂತಿ ತತೋ ನ ಮೌನಮ್**' ಎಂಬುದರಿಂದ '**ಮೌನಭಾವಮ್**' ಎಂಬುದು ವಿವರಿಸಲ್ಪಡುತ್ತದೆ. '**ಸ ತನ್ಮಯತ್ವೇನ ವಿಭಾತಿ**' ಎಂಬುದರಿಂದ '**ಕಥಂ ಮುನೇ ಮೌನಮಿಹಾಚರಂತಿ**' ಎಂಬ ಪ್ರಶ್ನೆಗೆ ಉತ್ತರವು ಹೇಳಲ್ಪಡುತ್ತದೆ. ಹೀಗೆ ಐದು ಪ್ರಶ್ನೆಗಳಿಗೂ ಒಂದೇ ಶ್ಲೋಕದಿಂದ ಪರಿಹಾರವು ದೊರೆಯುತ್ತದೆ.

**ಧೃತರಾಷ್ಟ್ರಃ**

**ಋಚೋ ಯಜೂಂಷ್ಯಥೋಽಧೀತೇ ಸಾಮವೇದಂ ಚ ಯೋ ದ್ವಿಜಃ ।**
**ಪಾಪಾನಿ ಕುರ್ವನ್ ಪಾಪೇನ ಲಿಪ್ಯತೇ ಕಿಂ ನ ಲಿಪ್ಯತೇ ॥೩॥**

ಮೌನ-ಮೌನಿಸ್ವರೂಪಗಳ ವಿಚಾರಪ್ರಸಂಗದಲ್ಲಿ ವೇದಗಳು ಮಹಾಫಲ ಪ್ರಾಪಕಗಳೆಂದು ಕೇಳಿದ ಧೃತರಾಷ್ಟ್ರನು ಮೋಕ್ಷಸಾಧನವಾದ ಅಪರೋಕ್ಷ ಜ್ಞಾನ ಸಂಬಂಧದಿಂದ ಅಪರೋಕ್ಷ ಜ್ಞಾನಿಗೆ ಪೂರ್ವೋತ್ತರ ಪಾಪಗಳು ವಿನಾಶ, ಅಶ್ಲೇಷಗಳನ್ನು ಹೊಂದುವಂತೆ ಋಗಾದಿ ವೇದಗಳನ್ನು ಮಾತ್ರ ಅಧ್ಯಯನ ಮಾಡಿ ಅಪರೋಕ್ಷಜ್ಞಾನವಿಲ್ಲದೆ ಋಗಾದಿ ವೇದಾಧ್ಯಯನದಿಂದ ಬಂದ ಪುಣ್ಯದಿಂದ ಮಾತ್ರ ಸಂಬದ್ಧನಾದ ಬ್ರಾಹ್ಮಣನಿಗೆ ಹತ್ಯಾದಿಗಳಿಂದ ಉಂಟಾದ ಪಾಪದ ಲೇಪವು ಇದೆಯೇ, ಇಲ್ಲವೇ ಎಂದು ಪ್ರಶ್ನೆ ಮಾಡುತ್ತಾನೆ. ಋಚಃ= ಋಕ್‌ಶಾಖೆಗಳನ್ನು, ಯಜೂಂಷಿ= ಯಜುಶ್ಶಾಖೆಗಳನ್ನು, ಸಾಮವೇದಂ ಚ= ಮತ್ತು ಸಾಮವೇದಗಳನ್ನು, ಯಃ ದ್ವಿಜಃ= ಯಾವ ಬ್ರಾಹ್ಮಣನು, ಅಧೀತೇ= ಅಧ್ಯಯನವನ್ನು ಮಾಡುತ್ತಾನೆಯೋ, ಆ ಬ್ರಾಹ್ಮಣನು, ಪಾಪಾನಿ= ಅನಿಷ್ಟಾಪಾದಕ ಪಾಪಕೃತ್ಯಗಳನ್ನು, ಕುರ್ವನ್= ಮಾಡುವವನಾದರೆ ಆ ಪಾಪಗಳಿಂದ ಲಿಪ್ಯತೇ ವಾ= ಲೇಪಿಸಲ್ಪಡುತ್ತಾನೆಯೇ? ನ ಲಿಪ್ಯತೇ ವಾ= ಅಥವಾ ಲೇಪಿಸಲ್ಪಡುವುದಿಲ್ಲವೇ? (ಎಂದು ಪ್ರಶ್ನೆ).

**ಸನತ್ಸುಜಾತಃ**

**ನೈನಂ ಸಾಮಾನ್ಯೃಚೋ ವಾಽಪಿ ಯಜೂಂಷಿ ಚ ವಿಚಕ್ಷಣ ।**
**ತ್ರಾಯಂತೇ ಕರ್ಮಣಃ ಪಾಪಾನ್ನ ತೇ ಮಿಥ್ಯಾ ಬ್ರವೀಮ್ಯಹಮ್ ॥೪॥**

ಹೀಗೆ ಪ್ರಶ್ನೆ ಮಾಡಲ್ಪಟ್ಟ ಸನತ್ಸುಜಾತರು ಉತ್ತರವನ್ನು ಹೇಳುತ್ತಾರೆ. ಹೇ ವಿಚಕ್ಷಣ= ಎಲೈ ಚತುರನಾದ ಧೃತರಾಷ್ಟ್ರನೇ, ಏನಂ= ಅಧ್ಯಯನವನ್ನು ಮಾತ್ರ ಮಾಡಿ ಪಾಪ ಕೃತ್ಯವನ್ನು ಮಾಡುವ ಬ್ರಾಹ್ಮಣನನ್ನು, ಸಾಮಾನಿ ವಾ= ಸಾಮವೇದಗಳಾಗಲೀ, ಋಚಃ= ಋಗ್ವೇದಗಳಾಗಲೀ, ಯಜೂಂಷಿ ವಾ= ಯಜುರ್ವೇದಗಳಾಗಲೀ, ಪಾಪಾತ್ ಕರ್ಮಣಃ= ಅವನು ಮಾಡಿದ ಪಾಪಕರ್ಮಗಳ ದೆಶೆಯಿಂದ, ನ ತ್ರಾಯಂತೇ ಹಿ= ಅವನನ್ನು ರಕ್ಷಿಸುವುದಿಲ್ಲವಷ್ಟೆ! ವೇದಪಾಠಗಳಿಂದ ಉಂಟಾದ ಕರ್ಮವು ಮಹಾಪಾಪ ನಾಶನವಾದುದರಿಂದ ಅವನನ್ನು ಪಾಪದಿಂದ ರಕ್ಷಿಸುವುದಿಲ್ಲ ಎಂಬ ಮಾತು ಹೇಗೆ ಸಂಗತವಾಗುತ್ತದೆ ಎಂದು ನೀನು ಶಂಕಿಸಬೇಡ ಎಂದು ಉಪದೇಶಿಸುತ್ತಾರೆ. ತೇ= ನಿನಗೆ, ಈ ವಿಷಯದಲ್ಲಿ, ಮಿಥ್ಯಾ= ಸುಳ್ಳನ್ನು, ನ ಬ್ರವೀಮಿ= ಹೇಳುತ್ತಿಲ್ಲ. ಋಗಾದಿ ವೇದಗಳು ಅನೇಕ ಶಾಖೆಗಳಿಂದ ಕೂಡಿರುವುದರಿಂದ ಋಗ್ವೇದಗಳು, ಯಜುರ್ವೇದಗಳು ಎಂದು ಮೊದಲಾಗಿ ಬಹುವಚನವು ಪ್ರಯೋಗಿಸಲ್ಪಟ್ಟಿದೆ.

ನ ಛಂದಾಂಸಿ ವೃಜಿನಾತ್ ತಾರಯಂತಿ
ಮಾಯಾವಿನಂ ಮಾಯಯಾ ವರ್ತಮಾನಮ್ ।
ಛಂದಾಂಸ್ಯೇನಂ ಪ್ರಜಹತ್ಯಂತಕಾಲೇ
ನೀಡಂ ಶಕುಂತಾ ಇವ ಜಾತಪಕ್ಷಾಃ ॥೫॥

ಅಧ್ಯಯನ ಮಾಡಿದ ವೇದಗಳು ಅಧ್ಯೇತೃ ಬ್ರಾಹ್ಮಣನನ್ನು ಪಾಪದಿಂದ ರಕ್ಷಣೆ ಮಾಡದಿದ್ದರೆ ಬೇರೆ ಏನನ್ನು ಮಾಡುತ್ತವೆ ಎಂಬ ಪ್ರಶ್ನೆಗೆ ಉತ್ತರವಾಗಿ 'ಯಸ್ತಂ ನ ವೇದ ಕಿಮೃಚಾ ಕರಿಷ್ಯತಿ' (ಯಾವನು ವೇದಪ್ರತಿಪಾದ್ಯನಾದ ನಾರಾಯಣನನ್ನು ತಿಳಿಯುವುದಿಲ್ಲವೋ ಅವನು ಕೇವಲ ವೇದಗಳಿಂದ ಏನು ಮಾಡುತ್ತಾನೆ) ಎಂಬ ಶ್ರುತಿಗೆ ಅನುಸಾರವಾಗಿ ವೇದಪ್ರತಿಪಾದ್ಯವಾದ ವಸ್ತುಗಳಲ್ಲಿ ಅತಿಮುಖ್ಯನಾದ ಪರಮಾತ್ಮನ ಜ್ಞಾನಶೂನ್ಯನಾಗಿ ಕೇವಲ ವೇದಪಾಠವನ್ನು ಮಾಡಿ ಮೋಹಾಚಾರವನ್ನು ಮಾಡುವ ಮಿಥ್ಯಾಜ್ಞಾನಿಯಾದ ದುಷ್ಟಬ್ರಾಹ್ಮಣನಿಗೆ ಪಾಪ ಪರಿಹಾರವನ್ನು ಮಾಡದೆ ವೇದಗಳು ಅವನ ಅಂತ್ಯಕಾಲದಲ್ಲಿ ಅವನನ್ನು ಬಿಟ್ಟು ಹೋಗುತ್ತವೆ ಎಂದು ಹೇಳುತ್ತಾರೆ.

ಇಲ್ಲಿ ಛಂದಾಂಸಿ ಮೊದಲಾದ ಶಬ್ದಗಳಿಂದ ವರ್ಣಾತ್ಮಕಗಳಾದ ಛಂದಸ್ಸುಗಳು ಜಡವಾದ್ದರಿಂದ ಆ ಶಬ್ದಗಳಿಂದ ವಾಚ್ಯರಾದ ಛಂದೋಭಿಮಾನಿ ದೇವತೆಗಳನ್ನೇ

ತೆಗೆದುಕೊಳ್ಳಬೇಕು. ಛಂದಾಂಸಿ= ಋಗಾದಿ ನಾಮಕರಾದ ದೇವತೆಗಳು, ಮಾಯಾವಿನಂ= ಮಿಥ್ಯಾಜ್ಞಾನವುಳ್ಳ ಅಥವಾ ಕಪಟಧರ್ಮವನ್ನು ಆಚರಿಸುವ, ಮಾಯಯಾ =ವೇದಾರ್ಥ ಜ್ಞಾನವಿಲ್ಲದೆ ತನ್ನ ಪ್ರಜ್ಞೆಯಿಂದಲೇ, ವರ್ತಮಾನಂ= ಕರ್ಮಗಳಲ್ಲಿ ಪ್ರವೃತ್ತನಾಗುವ, ಏನಂ ಹಿ= ಈ ಬ್ರಾಹ್ಮಣನನ್ನು, ವೃಜಿನಾತ್= ಅವನ ಪಾಪಕರ್ಮಗಳಿಂದ ಉಂಟಾಗುವ ನರಕಾದಿಗಳಿಂದ, ನ ತಾರಯಂತಿ= ದಾಟಿಸುವುದಿಲ್ಲ. ಆದರೆ ಅಂತಕಾಲೇ= ಅವನ ಮರಣಕಾಲದಲ್ಲಿ, ಏನಂ (ತಂ)= ಆ ಪಾಪಿಯಾದ ಬ್ರಾಹ್ಮಣನನ್ನು ಅವನು ತಮಗೆ ಅಭಿಪ್ರೇತವಾದ ವೇದಾರ್ಥ ಪರಿಜ್ಞಾನ ಶೂನ್ಯನಾಗಿದ್ದಾನೆ ಎಂಬ ಕೋಪದಿಂದ, ಪ್ರಜಹತಿ= ಅವನನ್ನು ಬಿಟ್ಟು ಬೇರೆ ಕಡೆಗೆ ಹೋಗುತ್ತಾರೆ. ಈ ವಿಷಯದಲ್ಲಿ ಒಂದು ದೃಷ್ಟಾಂತವನ್ನು ಹೇಳುತ್ತಾರೆ. ಜಾತಪಕ್ಷಾಃ= ರೆಕ್ಕೆಗಳು ಮೂಡಿದ, ಶಕುಂತಾಃ= ಪಕ್ಷಿಗಳು, ನೀಡಮಿವ= ತಮ್ಮ ಉತ್ಪತ್ತಿ ಸ್ಥಾನವಾದ ಗೂಡನ್ನು ಬಿಡುವಂತೆ ಎಂದು ದೃಷ್ಟಾಂತ. ಇದರಿಂದ ವೇದಾರ್ಥದ ಅನುಸಂಧಾನವಿಲ್ಲದೆ ಕೇವಲ ವೇದಪಾಠವನ್ನು ಮಾಡಿದ ಬ್ರಾಹ್ಮಣನನ್ನು ಅವನು ಪಠಿಸುವ ವೇದಗಳು ಅವನು ಆಚರಿಸುವ ದುಷ್ಕರ್ಮಗಳಿಂದ ಉಂಟಾಗುವ ನರಕಾದಿ ಅನರ್ಥಗಳನ್ನು ಪರಿಹರಿಸುವುದಿಲ್ಲ ಎಂದು ನಿರ್ಣಯಿಸಲ್ಪಡುತ್ತದೆ.

**ಧೃತರಾಷ್ಟ್ರಃ**

**ನ ಚೇದ್ ವೇದಾ ವೇದವಿದಂ ತ್ರಾತುಂ ಶಕ್ತಾ ವಿಚಕ್ಷಣ ।**
**ಅಥ ಕಸ್ಮಾತ್ ಪ್ರಲಾಪೋಽಯಂ ಬ್ರಾಹ್ಮಣಾನಾಂ ಸನಾತನಃ ॥೬॥**

ಅಧ್ಯಯನಾದಿಗಳಿಂದ ಬ್ರಾಹ್ಮಣ್ಯವನ್ನು ಸಂಪಾದಿಸಿಕೊಡುವ ವೇದಗಳು ಅಧ್ಯಯನವನ್ನು ಮಾಡುವ ಬ್ರಾಹ್ಮಣನು ಮಾಡಿದ ಪಾಪಪರಿಹಾರವನ್ನು ಮಾಡುವ ಸಾಮರ್ಥ್ಯವಿಲ್ಲದೆ ಪುರುಷಾರ್ಥಹೇತುವಲ್ಲವಾದರೆ ವೇದಪಾಠಗಳು ಅರಣ್ಯ ರೋದನದಂತೆ ವ್ಯರ್ಥವಾಗುವುದಾದರೆ ಬ್ರಾಹ್ಮಣರು ಏತಕ್ಕೆ ವ್ಯರ್ಥವಾಗಿ ವೇದಪಾಠದ ಶ್ರಮವನ್ನು ವಹಿಸುತ್ತಾರೆ ಎಂದು ಧೃತರಾಷ್ಟ್ರನು ಪ್ರಶ್ನೆ ಮಾಡುತ್ತಾನೆ.

ಹೇ ವಿಚಕ್ಷಣಾ= ಎಲೈ ವಿಶೇಷವಾಗಿ ಭಗವಂತನ ಜ್ಞಾನವನ್ನು ಹೊಂದಿದ ಸನತ್ಸುಜಾತರೇ, ವೇದಾಃ= ಋಗಾದಿ ವೇದಗಳು, ವೇದವಿದಂ= ವೇದಪಾಠವನ್ನು ಮಾತ್ರ ಮಾಡುವಷ್ಟು ಜ್ಞಾನ ಸಂಪನ್ನನಾದ ಬ್ರಾಹ್ಮಣನನ್ನು, ತ್ರಾತುಂ= ನರಕಾದಿಗಳಿಂದ

ರಕ್ಷಿಸಲು, ನ ಶಕ್ತಾಶ್ಚೇತ್= ಸಾಮರ್ಥ್ಯವನ್ನು ಹೊಂದದಿದ್ದರೆ, ಅತಃ= ಹಾಗಾದರೆ, ಸನಾತನಃ= ಅನಾದಿಕಾಲದಿಂದಲೂ ಪ್ರಾಪ್ತವಾಗಿ ಬಂದ, ಬ್ರಾಹ್ಮಣಾನಾಂ= ಬ್ರಾಹ್ಮಣರ, ಅಯಂ ಪ್ರಲಾಪಃ= ಅರಣ್ಯರೋದನದಂತಿರುವ ವೇದವಿಷಯಕವಾದ ವ್ಯರ್ಥಪಾಠರೂಪವಾದ ವಾಗ್ವ್ಯವಹಾರವು, ಕಸ್ಮಾತ್= ಯಾವ ಕಾರಣದಿಂದ ಮಾಡಲ್ಪಡುತ್ತದೆ?

**ಸನತ್ಸುಜಾತಃ**

**ತಸ್ಯೈವ ನಾಮಾದಿವಿಶೇಷರೂಪೈಃ**
**ಇದಂ ಜಗದ್ ಭಾತಿ ಮಹಾನುಭಾವ ।**
**ನಿರ್ದಿಶ್ಯ ಸಮ್ಯಕ್ ಪ್ರವದಂತಿ ವೇದಾಃ**
**ತದ್ ವಿಶ್ವವೈರೂಪ್ಯಮುದಾಹರಂತಿ** ॥೭॥

ವೇದಗಳು ಸರ್ವಥಾ ನಿರರ್ಥಕವಾದರೆ ವೇದಪಾಠವು ಅರಣ್ಯರೋದನವಾಗುತ್ತಿದ್ದಿತು. ಆದರೆ ಹಾಗಲ್ಲ. ಮತ್ತೇನೆಂದರೆ, **'ಆತ್ಮನ ಆಕಾಶಃ ಸಂಭೂತಃ'**, **'ಯತೋ ವಾ ಇಮಾನಿ ಭೂತಾನಿ ಜಾಯಂತೇ'**, **'ಜನ್ಮಾದ್ಯಸ್ಯ ಯತಃ'** ಇತ್ಯಾದಿ ಪ್ರಮಾಣಗಳಿಂದ ಭಗವಂತನಿಗೆ ಜಗಜ್ಜನ್ಮಾದಿ ಕಾರಣತ್ವವು ಸಿದ್ಧವಾಗುವುದರಿಂದ ಋಗಾದಿ ಸರ್ವವೇದಗಳಿಗೂ ಭಗವಂತನಲ್ಲಿ ಮಹಾತಾತ್ಪರ್ಯವನ್ನು ಅನುಸಂಧಾನವನ್ನು ಮಾಡಿ ತತ್ಪೂರ್ವಕವಾದ ಪಾಠಕ್ರಮವು ಅನಾದಿಕಾಲದಿಂದ ಶಿಷ್ಟಪರಿಗೃಹೀತವಾಗಿರುವುದರಿಂದ ಖಂಡಿತವಾಗಿ ವೇದಪಾಠಕ್ಕೆ ಸಾರ್ಥಕ್ಯವಿದೆ. ಅಜ್ಞಾನಪೂರ್ವಕವಾದ ವೇದಪಾಠವನ್ನು ಮಾತ್ರ ವ್ಯರ್ಥವೆಂದು ಹೇಳಲಾಗಿದೆ ಎಂದು ಉಪದೇಶವನ್ನು ಮಾಡುತ್ತಾ ಸನತ್ಸುಜಾತರು ಸರ್ವವೇದಗಳಿಗೂ ಅಭಿಪ್ರೇತವಾದ ಭಗವತ್ಪರವಾದ ಅರ್ಥವನ್ನು ಅನುವಾದ ಮಾಡುತ್ತಾರೆ.

ವೇದಾಃ= ಎಲ್ಲ ವೇದಗಳು, ತಸ್ಯೈವ= ಮೂಲರೂಪನಾದ ವಿಷ್ಣುವಿನದೇ ಆದ, ನಾಮಾದಿ ವಿಶೇಷರೂಪೈಃ= ನಾಮಾದಿಗಳು ಎಂದರೆ ವಾಸುದೇವಾದಿ ರೂಪಗಳು, ಅವುಗಳನ್ನೇ ವಿಶೇಷಬಲದಿಂದ ಭೇದವುಳ್ಳವುಗಳಂತೆ ನಿರೂಪಣೆ ಮಾಡುವ ವೇದಗಳಿಂದ, ಅಥವಾ ನಾಮಾದಿಗಳು ಎಂದರೆ ಆನಂದಾದಿ ಗುಣಗಳು ಎಂದರ್ಥ. ಅವುಗಳನ್ನು ವಾಸುದೇವಾದಿ ರೂಪಗಳಲ್ಲಿ ವಿಶೇಷವಾಗಿ ನಿರೂಪಿಸುವ ವೇದಗಳಿಂದ

ನಿರ್ದಿಶ್ಯ= ವಾಸುದೇವಾದಿ ಅನಂತರೂಪಗಳನ್ನು ಚೆನ್ನಾಗಿ ನಿರ್ದೇಶ ಮಾಡಿ, ಇದಂ ಜಗತ್= ಈ ಪ್ರತ್ಯಕ್ಷಸಿದ್ಧವಾದ ಜಗತ್ತೂ ಕೂಡ, ಭಾತಿ= ಪ್ರಕಾಶಿಸುತ್ತದೆ ಎಂಬುದನ್ನು, ಪ್ರವದಂತಿ= ನಿಸ್ಸಂಶಯವಾಗಿ ವೇದಗಳೇ ಪ್ರತಿಪಾದನೆ ಮಾಡುತ್ತವೆ. ತತ್= ನಾನಾ ರೂಪಗಳಿಂದ ಸ್ವತಂತ್ರವಾಗಿ ಜಗತ್ತಿನ ಸೃಷ್ಟ್ಯಾದಿಗಳನ್ನು ಮಾಡುವ ಕಾರಣದಿಂದ, ತತ್= ಆ ಪರಬ್ರಹ್ಮನನ್ನು, ವಿಶ್ವವೈರೂಪ್ಯಂ= ಸರ್ವ ಜಗದ್ವೈಲಕ್ಷಣ್ಯವುಳ್ಳವನೆಂದು, ಉದಾಹರಂತಿ= ಪ್ರತಿಪಾದನೆ ಮಾಡುತ್ತವೆ. ಮಹಾನುಭಾವ= ಎಲೈ ಮಹಾನುಭಾವನೇ ಎಂದು ಧೃತರಾಷ್ಟ್ರನ ಸಂಬೋಧನೆ. ಮಹತಿ= ದೊಡ್ಡ ವಸ್ತುವಾದ ಭಗವಂತನಲ್ಲಿ, ಅನು= ತಾರತಮ್ಯರತಸರ್ವೋತ್ತಮತ್ವಕ್ಕೆ ಅನುಕೂಲವಾಗಿ, ಭಾವಃ= ಭಕ್ತಿಯುಳ್ಳವನೇ ಎಂದು ಅಭಿಪ್ರಾಯ. ಇದು ಧೃತರಾಷ್ಟ್ರನ ಸಂಬೋಧನೆ). ಅಥವಾ ತಸ್ಯೈವ= ಅದೇ ಪರಮಾತ್ಮನ, ನಾಮಾದಿ ವಿಶೇಷ ರೂಪೈಃ= ನಾಮ, ವಾಕ್ಯಗಳು ಎಂಬ ವಿಶೇಷ ರೂಪವನ್ನು ಹೊಂದಿದ ವೇದವಾಕ್ಯಗಳಿಂದ, ಇದಂ ಜಗತ್= ಈ ಜಗತ್ತನ್ನೂ ಕೂಡ ಸಮಾಕರ್ಷ ಮಾಡಿ, ಸಂತಃ= ಸಜ್ಜನರು, ಉದಾಹರಂತಿ= ವ್ಯವಹಾರವನ್ನು ಮಾಡುತ್ತಾರೆ. ನಿರ್ದಿಶ್ಯ= ಭಗವಂತನನ್ನು ಪರಮಮುಖ್ಯವೃತ್ತಿಯಿಂದ ನಿರ್ದೇಶಮಾಡಿ ಅವನಿಗೆ, ವಿಶ್ವವೈರೂಪ್ಯಂ= ಸರ್ವಜಗದ್ವೈಲಕ್ಷಣ್ಯವನ್ನು, ಉದಾಹರಂತಿ= ವೇದಗಳು ಪ್ರತಿಪಾದನೆ ಮಾಡುತ್ತವೆ. ಎಂದರೆ ವೇದಗಳು ಪದಸಮನ್ವಯ ಮತ್ತು ವಾಕ್ಯಸಮನ್ವಯ ಎಂಬ ಎರಡು ಪ್ರಕಾರಗಳಿಂದ ವಿಷ್ಣುವನ್ನು ಪ್ರತಿಪಾದನೆ ಮಾಡುತ್ತವೆ. ಪದಸಮನ್ವಯದಲ್ಲಿ ಪ್ರತಿಯೊಂದು ಪದವೂ ದೇವರ ಮಹಿಮೆಯನ್ನು ಹೇಳಿ ಸ್ವತಂತ್ರವಾಗಿ ದೇವರ ಸಂಬೋಧನೆಯ ರೂಪವಾಗಿದೆ. ಆಗ ವೇದದಲ್ಲಿರುವ ಎಲ್ಲ ಪದಗಳೂ ನಾಮಪದವೇ ಆಗುತ್ತವೆ. ವಾಕ್ಯಸಮನ್ವಯದಲ್ಲಿ ವೇದದಲ್ಲಿರುವ ಪ್ರತಿಯೊಂದು ವಾಕ್ಯವೂ ಭಗವಂತನ ವಿಶಿಷ್ಟವಾದ ಒಂದೊಂದು ಮಹಿಮೆಯನ್ನು ಹೇಳುತ್ತದೆ. ವಾಕ್ಯಸಮಯದಲ್ಲಿ ಕರ್ತೃಪದ, ಕ್ರಿಯಾಪದ ಮೊದಲಾದ ವಿಭಾಗಗಳು ಇರುತ್ತವೆ. ವಾಕ್ಯಸಮನ್ವಯದಲ್ಲಿ ಆಗುವಾಗ ವಾಕ್ಯದಲ್ಲಿರುವ ಇಂದ್ರಾದಿ ಪದಗಳು ಪರಮಮುಖ್ಯವೃತ್ತಿಯಿಂದ ವಿಷ್ಣುವನ್ನು ಹೇಳಿ ಅಮುಖ್ಯವೃತ್ತಿಯಿಂದ ಈ ಜಗತ್ತನ್ನು ಹೇಳುತ್ತವೆ. ಜ್ಞಾನಿಗಳಾದವರು ಪರಮಮುಖ್ಯವೃತ್ತಿಯಿಂದ ಪರಮಾತ್ಮನನ್ನು ಹೇಳುವ ಶಬ್ದಗಳನ್ನು ಅವನಿಂದ ಚೆನ್ನಾಗಿ ಎಳೆದು ಅಮುಖ್ಯವೃತ್ತಿಯಿಂದ ಅದೇ ಪದಗಳಿಂದ ಜಗತ್ತನ್ನೂ ವ್ಯವಹರಿಸುತ್ತಾರೆ.ಇಲ್ಲದಿದ್ದರೆ ಜಗತ್ತಿನ ವಿಷಯದಲ್ಲಿ ವಾಗ್ವ್ಯವಹಾರವೇ ಕೂಡುವುದಿಲ್ಲ ಎಂದು ಅಭಿಪ್ರಾಯ.

ತದರ್ಥಮುಕ್ತಂ ತಪ ಏತದಿಜ್ಯಾ
ತಾಭ್ಯಾಮಸೌ ಪುಣ್ಯಮುಪೈತಿ ವಿದ್ವಾನ್ ।
ಪುಣ್ಯೇನ ಪಾಪಂ ವಿನಿಹತ್ಯ ಪಶ್ಚಾತ್
ಸ ಜಾಯತೇ ಜ್ಞಾನವಿದೀಪಿತಾತ್ಮಾ ॥೮॥

ಸರ್ವಜ್ಞರಾದ ಸನತ್ಸುಜಾತ ಮುನಿಗಳು ಭಗವದನುಸಂಧಾನ ವಿಶಿಷ್ಟವಾದ ಭಕ್ತಿಪೂರ್ವಕವಾಗಿ ಅಧ್ಯಯನ ಮಾಡಿದ ವೇದಗಳಿಗೇ ಸಾರ್ಥಕ್ಯವಿದೆ ಎಂದು ಉಪಪಾದನೆಯನ್ನು ಮಾಡಿ ಈಗ 'ಅಹರಹಃಸಂಧ್ಯಾಂ ಉಪಾಸೀತ' ಮೊದಲಾದ ವೇದಗಳಿಂದ ವಿಹಿತವಾದ, ಬ್ರಾಹ್ಮಣಾದಿಗಳು ಅನುಷ್ಠಾನ ಮಾಡಬೇಕಾದ ನಿತ್ಯನೈಮಿತ್ತಿಕಾದಿ ಭೇದಭಿನ್ನವಾದ ಎಲ್ಲ ಕರ್ಮಗಳೂ ಅಂತಃಕರಣ ಶುದ್ಧಿದ್ವಾರಾ ಭಗವದಪರೋಕ್ಷಜ್ಞಾನಕ್ಕೆ ಕಾರಣವಾಗುವುದರಿಂದ ಪರಂಪರೆಯಿಂದ ಮೋಕ್ಷಸಾಧನವಾಗುತ್ತವೆ ಎಂದು ಉಪಪಾದನೆ ಮಾಡುತ್ತಾರೆ.

ಏತತ್= ಜ್ಞಾನಿಗಳು ಆಚರಿಸುವ ಉಪವಾಸಾದಿ ರೂಪವಾದ, ತಪಃ= ತಪಸ್ಸು, ಇಜ್ಯಾ ಚ= ಮತ್ತು ಅಗ್ನಿಹೋತ್ರಾದಿ ರೂಪವಾದ ಯಜನಕ್ರಿಯೆಯೂ ಸಹ, ತದರ್ಥಂ= ಭಗವತ್ಪ್ರೀತ್ಯರ್ಥವಾಗಿ, ಉಕ್ತಂ= ವೇದಗಳಲ್ಲಿ ಪ್ರತಿಪಾದಿತವಾಗಿದೆ. ತಾಭ್ಯಾಂ= ಭಗವತ್ಪ್ರೀತಿಸಾಧನವಾದ, ವೇದವಿಹಿತವಾದ, ತಪೋಯಜ್ಞಗಳಿಂದ ಯುಕ್ತನಾದ, ಅಸೌ ವಿದ್ವಾನ್= ಈ ಸಾಧಕನಾದ ಜ್ಞಾನಿಯು, ಪುಣ್ಯಂ= ಕರ್ಮಣಾ ಜ್ಞಾನಮಾತನೋತಿ ಎಂಬ ಪ್ರಮಾಣಬಲದಿಂದ, ಪುನಂ ಪಾವಿತ್ರ್ಯಾಪಾದಕವಾದ, ಯಂ ಜ್ಞಾನವನ್ನು, ಉಪೈತಿ= ಪಡೆಯುತ್ತಾನೆ, ಸ್ವಸಿದ್ಧವಾದ ಪುಣ್ಯವನ್ನೂ ಹೊಂದುತ್ತಾನೆ. ಪುಣ್ಯೇನ= ಭಗವತ್ಪ್ರೀತಿಜನಕವಾದ ವೇದವಿಹಿತವಾದ ಕರ್ಮಾನುಷ್ಠಾನದಿಂದ ಉಂಟಾದ ಶುದ್ಧಾಂತಃಕರಣದಿಂದ ಸಂಪಾದಿಸಿದ ಪರೋಕ್ಷ ಜ್ಞಾನ ಮತ್ತು ಅಪರೋಕ್ಷಜ್ಞಾನರೂಪವಾದ ಪುಣ್ಯಶಬ್ದವಾಚ್ಯವಾದ ಪವಿತ್ರಜ್ಞಾನದಿಂದ, ಪಾಪಂ= ಪರೋಕ್ಷ ಮತ್ತು ಅಪರೋಕ್ಷದೆಶೆಯಲ್ಲಿ ಮಾಡಿದ ತನ್ನ ಪಾಪಗಳನ್ನು, ವಿನಿಹತ್ಯ= ಅಶ್ಲೇಷ ವಿನಾಶ ಭಾವದಿಂದ ನಾಶವನ್ನು ಮಾಡಿ, ಪಶ್ಚಾತ್= ಸರ್ವಪಾಪಕ್ಷಯದ ಅನಂತರದಲ್ಲಿ, ಸಃ= ಆ ಅಧಿಕಾರಿಯು, ಜ್ಞಾನವಿದೀಪಿತಾತ್ಮಾ= ನಿರ್ದುಷ್ಟವಾದ ಅಪರೋಕ್ಷ ಜ್ಞಾನದಿಂದ ಪ್ರಕಾಶಿತವಾದ ಸ್ವರೂಪವುಳ್ಳವನಾಗಿ,

ಜಾಯತೇ= ಆಗುತ್ತಾನೆ. 'ಆತ್ಮಾ ದೇಹೇ (ಪ್ರಾಣೇ) ಧೃತೌ ಜೀವೇ ಸ್ವಭಾವೇ ಪರಮಾತ್ಮನಿ' ಎಂದು ಕೋಶವಿರುವುದರಿಂದ ಇಲ್ಲಿ ಆತ್ಮ ಶಬ್ದಕ್ಕೆ ಸ್ವರೂಪವೆಂದು ಅರ್ಥವನ್ನು ಮಾಡಲಾಗಿದೆ. ಇದರಿಂದ ವೇದವಿಹಿತವಾದ ನಿಷ್ಕಾಮಕರ್ಮವನ್ನು ಅನುಷ್ಠಾನ ಮಾಡಿ ತನ್ಮೂಲಕವಾಗಿ ಅಂತಃಕರಣಶುದ್ಧಿಯನ್ನು ಸಂಪಾದಿಸಿದ ಅಧಿಕಾರಿಗೇ ಅಪರೋಕ್ಷಜ್ಞಾನ ಪ್ರಾಪ್ತಿಯಾಗುತ್ತದೆ ಎಂದು ಸಿದ್ಧವಾಗುತ್ತದೆ. ಕೇವಲ ವೇದಪಾಠದಿಂದ ಪಾಪವು ಪರಿಹಾರವಾಗುವುದಿಲ್ಲ. ವೇದೋಕ್ತ ಕರ್ಮಾನುಷ್ಠಾನದಿಂದ ಉಂಟಾದ ಪುಣ್ಯದಿಂದ ಮಾತ್ರ ಪಾಪವು ಪರಿಹಾರವಾಗುತ್ತದೆ ಎಂದು ಒಟ್ಟು ಅಭಿಪ್ರಾಯ.

**ಜ್ಞಾನೇನ ಚಾತ್ಮಾನಮುಪೈತಿ ವಿದ್ವಾನ್**
**ಅಥಾನ್ಯಥಾ ವರ್ಗಫಲಾನುಕಾಂಕ್ಷೀ ।**
**ಅಸ್ಮಿನ್ ಕೃತಂ ತತ್ ಪರಿಗೃಹ್ಯ ಸರ್ವಮ್**
**ಅಮುತ್ರ ಭುಂಕ್ತೇ ಪುನರೇತಿ ಮಾರ್ಗಮ್** ॥೯॥

ಇಂತಹ ಸಾಧನದಿಂದ ಉಂಟಾದ ಅಪರೋಕ್ಷಜ್ಞಾನದಿಂದ ಪ್ರಕಾಶಿಸುವ ಅಧಿಕಾರಿಗೆ ಅನಂತರದಲ್ಲಿ ಪ್ರಾಪ್ಯವಾದ ಅಂತರ್ಯಾಮಿ ಭಗವದ್ರೂಪದ ಅಪರೋಕ್ಷ ಜ್ಞಾನರೂಪವಾದ ಮಹಾಫಲವನ್ನು ಇಲ್ಲಿ ಹೇಳುತ್ತಾರೆ.

ವಿದ್ವಾನ್= ಆ ಜ್ಞಾನಿಯು, ಜ್ಞಾನೇನ= ಸ್ವಯೋಗ್ಯವಾದ ಬಿಂಬಾಪರೋಕ್ಷ ಜ್ಞಾನದಿಂದ, ಆತ್ಮಾನಂ= ತನ್ನ ಅಂತರ್ಯಾಮಿಯಾದ ಭಗವಂತನನ್ನು, ಉಪೈತಿ= ಹೊಂದುತ್ತಾನೆ. ಅದರಂತೆ ತನ್ನ ಯೋಗ್ಯತೆಯನ್ನು ಮೀರದಂತೆ ಅನಂತರದಲ್ಲಿ ಮುಕ್ತನೂ ಆಗುತ್ತಾನೆ ಎಂದು ಇಟ್ಟುಕೊಳ್ಳಬೇಕು. ಅಥ= ಅದನ್ನು ಬಿಟ್ಟು, ಅನ್ಯಥಾ= ಬೇರೆ ರೀತಿಯಲ್ಲಿ, ಸರ್ವವೇದಗಳಿಗೂ ವೇದೋಕ್ತ ಕರ್ಮಗಳಿಗೂ ಭಗವದರ್ಪಣಾನುಸಂಧಾನವಿಲ್ಲದೆ ವಿಪರೀತವಾದ ಅನುಷ್ಠಾನವನ್ನು ಮಾಡಿದರೆ, ವರ್ಗಫಲಾನುಕಾಂಕ್ಷೀ ಇಂದ್ರಿಯ ವರ್ಗಗಳ ಅಥವಾ ವಿಷಯವರ್ಗಗಳ ಫಲವಾದ ಸುಖವನ್ನು ಪ್ರತಿಕ್ಷಣವೂ ಬಯಸುವ ಕಾಮಿಯಾದ ಪುರುಷನು ಅಸ್ಮಿನ್= ಈ ಮನುಷ್ಯಲೋಕದಲ್ಲಿ, ಕೃತಂ= ಕಾಮಸಹಿತವಾಗಿ ಆಚರಿಸಿದ, ತತ್= ಆ ಪುಣ್ಯಪಾಪರೂಪವಾದ ಕರ್ಮವನ್ನು, ಪರಿಗೃಹ್ಯ= ತೆಗೆದುಕೊಂಡು, ಅಮುತ್ರ=

ಸ್ವರ್ಗಾದಿಪದವಾಚ್ಯವಾದ ಪರಲೋಕದಲ್ಲಿ, ಸರ್ವಂ= ಸ್ವಲ್ಪಶೇಷವನ್ನು ಇಟ್ಟುಕೊಂಡು ಎಲ್ಲವನ್ನೂ, ಭುಂಕ್ತೇ= ಅನುಭವಿಸುತ್ತಾನೆ. ಕಾಮ್ಯಪುಣ್ಯಜನ್ಯವಾದ ಸುಖವನ್ನು ಪಡೆಯುತ್ತಾನೆ ಎಂದು ಅಭಿಪ್ರಾಯ. ಪುನಃ= ಆ ಪುಣ್ಯವು ಕ್ಷಯವಾದ ನಂತರ, ಮಾರ್ಗಂ= ಮನುಷ್ಯಲೋಕದ ಮಾರ್ಗವನ್ನು ಕುರಿತು, ಏತಿ= ಬರುತ್ತಾನೆ. **'ತೇ ತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ'** (ಕಾಮ್ಯಪುಣ್ಯವನ್ನು ಸಂಪಾದಿಸಿದ ಜೀವರು ವಿಶಾಲವಾದ ಸ್ವರ್ಗಲೋಕದಲ್ಲಿ ಅದರ ಫಲವಾದ ಸುಖವನ್ನು ಭೋಗಿಸಿ ಪುಣ್ಯವು ನಾಶವಾಗುತ್ತಿರಲು ಪುನಃ ಮನುಷ್ಯಲೋಕಕ್ಕೆ ಬರುತ್ತಾರೆ) ಎಂಬುದು ಈ ವಿಷಯದಲ್ಲಿ ಪ್ರಮಾಣ.

**ಅಸ್ಮಿನ್ ಲೋಕೇ ತಪಸ್ತಪ್ತಂ ಫಲಮನ್ಯತ್ರ ಭುಜ್ಯತೇ ।**
**ಬ್ರಾಹ್ಮಣಾನಾಮಿಮೇ ಲೋಕಾ ಋದ್ಧೇ ತಪಸಿ ಸಂಯತಾಃ ॥೧೦॥**

ಪ್ರವೃತ್ತಿ-ನಿವೃತ್ತಿ ಕರ್ಮಗಳೆರಡೂ ಪರಲೋಕದಲ್ಲಿ ಫಲವನ್ನು ಕೊಡುವ ವಿಷಯದಲ್ಲಿ ಸಮಾನವಾಗಿರುವುದರಿಂದ ಆಯಾಸಸಾಧ್ಯವಾದ ನಿವೃತ್ತಧರ್ಮಾನುಷ್ಠಾನವನ್ನೇ ಏಕೆ ಮಾಡಬೇಕು ಎಂಬ ಪ್ರಶ್ನೆಯು ಸರಿಯಲ್ಲ. ಏಕೆಂದರೆ ಕರ್ಮಗಳು ಆಯಾ ಅಧಿಕಾರಿಗಳು ಮಾಡಿದ ಕಾಮ್ಯ, ಅಕಾಮ್ಯ ಭೇದದಿಂದ ಪರಲೋಕದಲ್ಲಿ ನಶ್ವರ ಮತ್ತು ಅನಶ್ವರ ಫಲಗಳನ್ನು ಕೊಡುವುದರಿಂದ ಅನಶ್ವರವಾದ ಫಲದ ಪ್ರಾಪ್ತಿಗಾಗಿ ನಿವೃತ್ತಧರ್ಮಾನುಷ್ಠಾನವನ್ನೇ ಅವಶ್ಯವಾಗಿ ಅನುಷ್ಠಾನ ಮಾಡಬೇಕು ಎಂದು ಉಪದೇಶ ಮಾಡುತ್ತಾ ಮೊದಲು ಅಂತಹ ಅಧಿಕಾರಿಗಳ ವೈವಿಧ್ಯವನ್ನೂ ಮತ್ತು ಅವರು ಮಾಡಿದ ಕರ್ಮಗಳಿಂದ ಉಂಟಾದ ಪುಣ್ಯರೂಪವಾದ ಫಲದ ವೈಲಕ್ಷಣ್ಯವನ್ನೂ ಉಪದೇಶ ಮಾಡುತ್ತಾರೆ.

ಅಸ್ಮಿನ್ ಲೋಕೇ= ಈ ಕರ್ಮಭೂಮಿಯಲ್ಲಿ, ತಪಃ= ತಪಸ್ ಎಂಬುದು ಉಪಲಕ್ಷಣ, ತಪಸ್ಸು, ಯಾಗ ಮೊದಲಾದ ಕರ್ಮಗಳನ್ನು, ತಪ್ತಂ ಚೇತ್= ಮಾಡಿದರೆ, ಫಲಂ= ಅದರಿಂದ ಉಂಟಾದ ಫಲವು, ಅನ್ಯತ್ರ= ಪರಲೋಕದಲ್ಲಿ, ಭುಜ್ಯತೇ= ಅನುಭವಿಸಲ್ಪಡುತ್ತದೆ. ಬ್ರಾಹ್ಮಣಾನಾಂ= ಬ್ರಹ್ಮಜ್ಞಾನಿಗಳಿಗೆ ಉಂಟಾಗುವ, ಇಮೇ ಲೋಕಾಃ= ಈ ಶ್ರೇಷ್ಠವಾದ ಲೋಕಗಳು, ಋದ್ಧೇ ತಪಸಿ= ಸಮೃದ್ಧವಾದ ತಪಸ್ಸಿನಲ್ಲಿ, ಸಂಯತಾಃ= ನಿಯತವಾಗಿವೆ.

**ಬ್ರಾಹ್ಮಣಾನಾಂ ತಪಸ್ಯರ್ಧಂ ತ್ವನ್ಯೇಷಾಂ ತಾವದೇವ ತತ್ ।**
**ಏತತ್ ಸಮೃದ್ಧಮತ್ಯೃದ್ಧಂ ತಪೋ ಭವತಿ ಕೇವಲಮ್ ॥೧೧॥**

ಈ ಲೋಕದಲ್ಲಿ ಮಾಡಿದ ಕರ್ಮದ ಫಲವು ಪರಲೋಕದಲ್ಲಿ ಅನುಭವಿಸಲ್ಪಡುತ್ತದೆ ಎಂಬುದು ಸಕಾಮ-ನಿಷ್ಕಾಮವಿಧವಾದ ಎರಡು ಅಧಿಕಾರಿಗಳಿಗೂ ಸಮಾನವಾಗಿರುವುದರಿಂದ ವಿಶೇಷವಾಗಿ ನಿಷ್ಕಾಮಾಧಿಕಾರಿಗಳಿಗೆ ಹೇಗೆ ಅಧಿಕ್ಯವು ಕೂಡುತ್ತದೆ ಎಂದು ಉಪಪಾದನೆ ಇಲ್ಲಿ ಮಾಡುತ್ತಾರೆ.

ಬ್ರಾಹ್ಮಣಾನಾಂ= ಬ್ರಹ್ಮನಲ್ಲಿಯೇ ದರ್ಶನ, ಸ್ಪರ್ಶಾದಿಗಳಿಂದ ಸರ್ವೇಂದ್ರಿಯ ಚೇಷ್ಟೆಯನ್ನು ಮಾಡುವ ಜ್ಞಾನಿಗಳು ಮಾಡಿದ ಯಜ್ಞಾದಿ ರೂಪವಾದ ತಪಸ್ಸು, ವೃದ್ಧಂ ತು = ಸಮೃದ್ಧವೇ ಆಗುತ್ತದೆ. ಎಂದರೆ ಅನುಷ್ಠಾನಕಾಲದಲ್ಲಿಯೇ ಅನಂತವಾಗಿ ಮುಕ್ತಿದೆಶೆಯಲ್ಲಿ ವೇದದಲ್ಲಿ ಹೇಳಿದ ಫಲಕ್ಕಿಂತಲೂ ಅಧಿಕವಾದ ಫಲವನ್ನು ಕೊಡುತ್ತವೆ ಎಂದು ಅಭಿಪ್ರಾಯ. ಅನ್ಯೇಷಾಂ= ಬ್ರಹ್ಮಜ್ಞಾನ ಹೀನರಾದ ಜನರಿಗೆ, ತತ್= ಆ ಕರ್ಮದಿಂದ ಉಂಟಾದ ಫಲವು, ತಾವದೇವ= ವೇದದಲ್ಲಿ ಎಷ್ಟು ಹೇಳಿದೆಯೋ ಅಷ್ಟು ಮಾತ್ರ. ಇದರಿಂದ '**ಯದೇವ ವಿದ್ಯಯಾ ಕರೋತಿ ಶ್ರದ್ಧಯೋಪನಿಷದಾ ತದೇವ ವೀರ್ಯವತ್ತರಂ ಭವತಿ**' (ಯಾವ ಕರ್ಮವನ್ನು ಜ್ಞಾನಪೂರ್ವಕವಾಗಿ ಶ್ರದ್ಧೆಯಿಂದ ಮಾಡುತ್ತಾನೆಯೋ ಅದೇ ಅಧಿಕಫಲಪ್ರದವಾಗುತ್ತದೆ ಎಂಬ ಶ್ರುತಿಯ ಅರ್ಥವು ವಿವರಿಸಲ್ಪಡುತ್ತದೆ). ಅದರಿಂದ ಜ್ಞಾನಿಯು ಆಚರಿಸಿದ ಕರ್ಮಕ್ಕೇ ಮಹಾಫಲಪ್ರದತ್ವವಿದೆ ಎಂದು ಸಿದ್ಧವಾಗುತ್ತದೆ.

ಬ್ರಾಹ್ಮಣಾನಾಂ= ಹಿಂದೆ ಹೇಳಿದಂತಹ ಬ್ರಹ್ಮಜ್ಞಾನಿಗಳಿಗೆ, ತಪಸಿ= ಯಾವ ತಪಸ್ಸಿದೆಯೋ ಅದರಲ್ಲಿ, ಅರ್ಧಂ= ಅರ್ಧದಷ್ಟು ಮಾತ್ರ, ಅನ್ಯೇಷಾಂ= ಕ್ಷತ್ರಿಯರಿಗೆ, ತತ್= ಆ ತಪಸ್ಸು ಮತ್ತು ಅದರಲ್ಲಿ ಜನ್ಯ ಫಲವೂ ಸಹ, ತಾವದೇವ= ಸಂಪೂರ್ಣವಾಗುತ್ತದೆ. ಕೇವಲಂ= ಶಿಲೋಂಛ ವೃತ್ತ್ಯಾದಿಗಳಲ್ಲಿ ಪರಪೀಡನೆ ಇಲ್ಲದಿರುವುದರಿಂದ ಕೇವಲ ಪುಣ್ಯಜನಕವಾದ, ಏತತ್= ಬ್ರಾಹ್ಮಣರು ಮಾಡಿದ, ತಪಃ= ಈ ತಪಸ್ಸು, ಅತ್ಯರ್ಧಂ (ಅತ್ಯೃದ್ಧಂ)= ಕ್ಷತ್ರಿಯರು ಮಾಡಿದ ತಪಸ್ಸಿಗಿಂತ ಬಹಳವಾಗಿ, ಸಮೃದ್ಧಂ ಭವತಿ= ಸಮೃದ್ಧವಾಗುತ್ತದೆ.

ಧೃತರಾಷ್ಟ್ರಃ

**ಕಥಂ ಸಮೃದ್ಧಮತ್ಯೃದ್ಧಂ ತಪೋ ಭವತಿ ಕೇವಲಮ್ ।**
**ಸನತ್ಸುಜಾತ ತದ್ ಬ್ರೂಹಿ ಕಥಂ ವಿದ್ಯಾಮಹಂ ಪ್ರಭೋ ॥೧೨॥**

ಬ್ರಾಹ್ಮಣರು ಮಾಡಿದ ತಪಸ್ಸಿಗೆ ಪರಲೋಕದಲ್ಲಿ ಫಲಾತಿಶಯವಿದೆ ಎಂದು ಕೇಳಿದ ಧೃತರಾಷ್ಟ್ರನು ಹಿಂದೆ ಹೇಳಿದ ವಿಧಾನದಿಂದ ಮಾಡಿದ ತಪಸ್ಸಾದಿಗಳೇ ಋದ್ಧವಾಗುವುದರಿಂದ ಅವು ಪುನಃ ಸಮೃದ್ಧವಾಗುವುದು ಹೇಗೆ ಎಂದು ಪ್ರಶ್ನೆ ಮಾಡುತ್ತಾನೆ.

ಹೇ ಸನತ್ಸುಜಾತ= ಎಲೈ ಸನತ್ಸುಜಾತರೇ, ಋದ್ಧಂ= ವೇದದಲ್ಲಿ ಹೇಳಿದ ವಿಧಾನದಿಂದ ಅನುಷ್ಠಾನ ಮಾಡಿದ ಕರ್ಮವು ಅತಿಶಯವನ್ನು ಹೊಂದಿದ ಮೇಲೆ, ತಪಃ= ಅದೇ ತಪಸ್ಸು, ಪುನಃ ಕೇವಲಂ ಸಮೃದ್ಧಂ= ಅತ್ಯಂತ ಸಮೃದ್ಧವಾಗಿ, ಕಥಂ= ಯಾವ ಪ್ರಕಾರದಿಂದ ಆಗುತ್ತದೆ. ಪ್ರಭೋ= ಎಲೈ ಪ್ರಶ್ನೆಯನ್ನು ಬಿಡಿಸುವ ಸಾಮರ್ಥ್ಯವುಳ್ಳ ಸನತ್ಸುಜಾತರೇ, ಅಹಂ= ನಾನು, ಒಂದೇ ತಪಸ್ಸಿಗೆ ಋದ್ಧತ್ವವನ್ನೂ ಮತ್ತು ಸಮೃದ್ಧತ್ವವನ್ನು, ಕಥಂ= ಯಾವ ರೀತಿಯಲ್ಲಿ, ವಿದ್ಯಾಂ= ತಿಳಿದೇನೋ, ತತ್= ಆ ರೀತಿಯಲ್ಲಿ, ಬ್ರೂಹಿ= ಹೇಳಿ (ಎಂದು ಧೃತರಾಷ್ಟ್ರನು ಪ್ರಶ್ನೆ ಮಾಡಿದನು).

ಸನತ್ಸುಜಾತಃ

**ನಿಷ್ಕಲ್ಮಷಂ ತಪಸ್ತ್ವೇತತ್ ಕೇವಲಂ ಪರಿಚಕ್ಷತೇ ।**
**ಏತತ್ ಸಮೃದ್ಧಮಪ್ಯೃದ್ಧಂ ತಪೋ ಭವತಿ ನಾನ್ಯಥಾ ॥೧೩॥**

ಉಕ್ತವಿಧಿಯಿಂದ ಮಾಡಿದ ತಪಸ್ಸು ಕೇವಲವಾಗುವುದು (ಸಮೃದ್ಧವಾಗುವುದು) ಹೇಗೆ ಎಂಬ ಪ್ರಶ್ನೆಗೆ ಉತ್ತರವಾಗಿ ಸನತ್ಸುಜಾತರೇ

**'ಆಮಯೋಯಂ ಹಿ ಭೂತಾನಾಂ ಜಾಯತೇ ಯೇನ ಸುವ್ರತ ।**
**ತದೇವ ಹ್ಯಾಮಯದ್ರವ್ಯಂ ತತ್ಪುನಾತಿ ಚಿಕಿತ್ಸಿತಮ್ ॥'**

(ಎಲೈ ಸುವ್ರತನೇ, ಯಾವ ದ್ರವ್ಯವು ಪ್ರಾಣಿಗಳಿಗೆ ರೋಗವನ್ನು ಉಂಟು ಮಾಡುತ್ತದೆಯೋ ಅದೇ ದ್ರವ್ಯವು ಇನ್ನೊಂದು ದ್ರವ್ಯದ ಜೊತೆಯಲ್ಲಿ ಬೆರೆಸಿ ಸಂಸ್ಕರಿಸಿದಾಗ ಅದೇ ರೋಗವನ್ನು ನಿವಾರಣೆ ಮಾಡುತ್ತದೆ ಎಂದು ಹೇಳಿದಂತೆ

ರೋಗವನ್ನು ಉಂಟುಮಾಡುವ ಕದಲಿ ಮೊದಲಾದ ದ್ರವ್ಯಗಳು ದ್ರವ್ಯಾಂತರ ಸಂಯುಕ್ತವಾಗಿ ಆ ರೋಗಗಳನ್ನು ನಾಶಮಾಡಿ ಮಹಾಫಲವನ್ನು ಕೊಡುವುದು ದೃಷ್ಟವಾದಂತೆ) ಇಲ್ಲಿಯೂ ಕೂಡ ಸಾಂಗವಾಗಿ ಅನುಷ್ಠಾನ ಮಾಡಿದ ತಪ ಆದಿ ಕರ್ಮಗಳು ನಶ್ವರವಾದ ಸ್ವರ್ಗಾದಿ ಫಲವನ್ನು ಕೊಡುವುದರಿಂದ ಅನರ್ಥಪ್ರದವಾದರೂ ಅವೇ ತಪಸ್ಸುಗಳು ಭಗವಂತನ ಅನುಗ್ರಹ ಎಂಬ ದ್ರವ್ಯಾಂತರ ಸಂಯೋಗವನ್ನು ಹೊಂದಿದವಂಥವುಗಳಾಗಿ ಅನಶ್ವರ ಫಲವನ್ನು ಕೊಡುವ ಜ್ಞಾನಕ್ಕೆ ಸಾಧನಗಳಾದುದರಿಂದ ಅವುಗಳಿಗೆ ಶ್ರೇಷ್ಠತ್ವವೂ, ಸಮೃದ್ಧತ್ವವೂ ಉಂಟಾಗುತ್ತದೆ ಎಂದು ಉಪದೇಶ ಮಾಡುತ್ತಾ ಮೊದಲು ತಮ್ಮ ಮಾತನ್ನು ದೃಢೀಕರಿಸುವುದಕ್ಕೆ ಜ್ಞಾನಿ ಜನರ ಸಮ್ಮತಿಯನ್ನು ಅನುವಾದ ಮಾಡಿ, ಧೃತರಾಷ್ಟ್ರನ ಸಂಶಯವನ್ನು ಪರಿಹರಿಸುತ್ತಾರೆ.

ಏತತ್= ನಾವು ವಿಚಾರ ಮಾಡುತ್ತಿರುವ ಇಂತಹ ತಪಸ್ಸು, ನಿಷ್ಕಲ್ಮಷಂ ತು= ಮುಂದೆ ಹೇಳಿದ ದೋಷಗಳಿಂದ ರಹಿತವಾದಾಗ ಮಾತ್ರ ಅದೇ, ಕೇವಲಂ= ಶ್ರೇಷ್ಠವಾದುದು ಮತ್ತು ಸಮೃದ್ಧವಾದುದು ಎಂದು, ಪರಿಚಕ್ಷತೇ= ಜ್ಞಾನಿಗಳು ಹೇಳುತ್ತಾರೆ. ಏತತ್= ಭಗವದನುಸಂಧಾನಸಹಿತವಾಗಿ ವಿಷಯರಾಗದಿಂದ ಮಾಡಿದ ಜ್ಞಾನಪೂರ್ವಕವಾದ, ತಪಃ= ತಪಾದಿ ಕರ್ಮವೂ ಕೂಡ ಋದ್ಧವಾದುದೆಂದು ಜ್ಞಾನಿಗಳು ಹೇಳುತ್ತಾರೆ ಎಂದು ಹಿಂದಿನಿಂದ ಅನ್ವಯ ಮಾಡಬೇಕು. ಅಪಿ ಶಬ್ದದಿಂದ ಋದ್ಧವೆಂದು ಹೇಳುತ್ತಾರೆಯೇ ಹೊರತು ಸಮೃದ್ಧವೆಂದು ಹೇಳುವುದಿಲ್ಲ ಎಂದು ತಿಳಿಯುತ್ತದೆ. ಏಕೆಂದರೆ ಅನ್ಯಥಾ= ಅಂತಹ ಕರ್ಮವು, ತನ್ನ ಅನುಷ್ಠಾನ ಪುಣ್ಯದಿಂದ ಉಂಟಾದ ಫಲವನ್ನು ಅನ್ಯಥಾಕರಣ ಮಾಡಲು ಎಂದರೆ ಅದರಲ್ಲಿ ಅತಿಶಯವನ್ನುಂಟು ಮಾಡಿ ಬದಲಾಯಿಸಲು, ನ ಭವತಿ= ಸಮರ್ಥವಾಗುವುದಿಲ್ಲ ಎಂದು ಅಭಿಪ್ರಾಯ.

**ತಪೋಮೂಲಮಿದಂ ಸರ್ವಂ ಯನ್ಮಾಂ ಪೃಚ್ಛಸಿ ಕ್ಷತ್ರಿಯ ।**
**ತಪಸಾ ವೇದವಿದ್ವಾಂಸಃ ಪರೇತ್ಯಾಮೃತಮಾಪ್ನುಯುಃ ॥೧೪॥**

ಹೀಗೆ ಒಂದೇ ತಪಸ್ಸಿಗೆ ಎರಡು ರೀತಿಯ ಫಲವನ್ನು ಕೊಡುವ ಪ್ರಕಾರವನ್ನು ಹೇಳಿ ಈಗ ಈ ಲೋಕದ ಮತ್ತು ಪರಲೋಕದ ಸಮಸ್ತ ಫಲಗಳನ್ನೂ ಕೊಡುವಂತಹದು ತಪಸ್ಸು ಮಾತ್ರ ಎಂದು ಹೇಳಿ ತಪಸ್ಸನ್ನು ಸ್ತೋತ್ರ ಮಾಡುತ್ತಾರೆ.

ಹೇ ಕ್ಷತ್ರಿಯ= ಎಲೈ ಧೃತರಾಷ್ಟ್ರನೇ, ಇದಂ ಸರ್ವಂ= ಪ್ರತ್ಯಕ್ಷಾಪ್ರತ್ಯಕ್ಷವಾದ ಈ ಲೋಕದ ಮತ್ತು ಪರಲೋಕದ ಅನೇಕ ವಿಧವಾದ ಸುಖಗಳು ಏನಿವೆಯೋ, ಯತ್= ಅವು ಹೇಗೆ ದೊರಕುತ್ತವೆ ಎಂದು ಯಾವುದನ್ನು ನೀನು, ಪೃಚ್ಛಸಿ= ಕೇಳುತ್ತಿದ್ದೀಯೋ, ತತ್ ಸರ್ವಂ= ಆ ಎಲ್ಲವೂ, ತಪೋ ಮೂಲಂ= ತಪಸ್ಸನ್ನೇ ಮೂಲಕಾರಣವನ್ನಾಗಿ ಹೊಂದಿವೆ ಎಂದು ತಿಳಿಯುವವನಾಗು. ತಪಸ್ಸಿನಿಂದಲೇ ಎಲ್ಲವೂ ದೊರೆಯುತ್ತದೆ ಎಂಬ ವಿಷಯದಲ್ಲಿ ತಸ್ಮಾತ್ ತಪಸಿ ರಮಂತೇ, ಆದ್ದರಿಂದ ಜ್ಞಾನಿಗಳು ತಪಸ್ಸಿನಲ್ಲಿಯೇ ಸಂತೋಷ ಪಡುತ್ತಾರೆ ಎಂಬ ಉಪನಿಷತ್ಸಿದ್ಧವಾದ ವಿದ್ವಾಂಸರ ಸಮ್ಮತಿಯನ್ನು ಹೇಳುತ್ತಾರೆ. ವೇದ ವಿದ್ವಾಂಸಃ= ವಿಶೇಷವಾದ ಜ್ಞಾನವನ್ನು ಪಡೆದ ಜ್ಞಾನಿಗಳು, ತಪಸಾ= ತಾವು ಅನುಷ್ಠಾನ ಮಾಡಿದ ತಪಸ್ಸಿನಿಂದ ಉಂಟಾದ ಶ್ರೇಯಸ್ಸಿನಿಂದ, ಪರೇತ್ಯ= ಲಿಂಗಭಂಗರೂಪವಾದ ಮರಣವನ್ನು ಹೊಂದಿ, ಅಮೃತಂ= 'ಅಮೃತಂ ಕ್ಷೇಮಮಭಯಂ' ಎಂದು ಭಾಗವತದಲ್ಲಿ ಹೇಳಿದಂತೆ ಅಮೃತಶಬ್ದವಾಚ್ಯನಾದ ವೈಕುಂಠಾಖ್ಯ ವಿಷ್ಣುವನ್ನೂ ಮತ್ತು ವೈಕುಂಠ ಲೋಕವನ್ನೂ, ಆಪ್ನುಯುಃ= ಪಡೆಯುತ್ತಾರೆ. ಇದರಿಂದ ಮೋಕ್ಷಪ್ರದವಾದ ಭಗವಂತನ ಪ್ರಾಪ್ತಿಯೂ ಮತ್ತು ಮೋಕ್ಷಪ್ರಾಪ್ತಿಯೂ ಸಹ ತಪಸ್ಸಿನಿಂದಲೇ ಉಂಟಾಗುತ್ತದೆ ಎಂದು ನಿರ್ಧರಿಸಲ್ಪಡುತ್ತದೆ.

**ಧೃತರಾಷ್ಟ್ರಃ**

**ಕಲ್ಮಷಂ ತಪಸೋ ಬ್ರೂಹಿ ಶ್ರುತಂ ನಿಷ್ಕಲ್ಮಷಂ ತಪಃ ।**
**ಸನತ್ಸುಜಾತ ಯೇನೇದಂ ವಿದ್ಯಾಂ ಗುಹ್ಯಂ ಸನಾತನಮ್ ॥೧೫॥**

ಹೀಗೆ ಸನತ್ಸುಜಾತರಿಂದ ನಿಷ್ಕಲ್ಮಷವಾದ, ಕೇವಲ ಸಮೃದ್ಧವಾದ ತಪಸ್ಸಿನ ವೈಭವವನ್ನು ಕೇಳಿದ ಧೃತರಾಷ್ಟ್ರನು ತಪಸ್ಸಿನ ಕಲ್ಮಷವನ್ನು ಕೇಳಲು ಪ್ರಶ್ನೆ ಮಾಡುತ್ತಾನೆ. ಸನತ್ಸುಜಾತ= ಎಲೈ ಸನತ್ಸುಜಾತ ಋಷಿಗಳೇ, ನನ್ನಿಂದ ನಿಮ್ಮ ಮುಖದಿಂದ, ನಿಷ್ಕಲ್ಮಷಂ= ನಿರ್ದುಷ್ಟವಾದ, ತಪಃ= ತಪಸ್ಸಿನ ಲಕ್ಷಣವು, ಶ್ರುತಮ್= ಕೇಳಲ್ಪಟ್ಟಿತು. ಆದರೆ ತಪಸ್ಸಿನ ಕಲ್ಮಷವು ಕೇಳಲ್ಪಡಲಿಲ್ಲ. ತಪಸಃ ಕಲ್ಮಷಂ= ತಪಸ್ಸಿನ ದೋಷವು ಯಾವುದು ಎಂದು, ಬ್ರೂಹಿ= ನನಗೆ ಹೇಳಿ. ಯೇನ= ಯಾವ ನಿಷ್ಕಲ್ಮಷವಾದ ತಪಸ್ಸನ್ನು ಆಚರಿಸಿ ಆ ತಪಸ್ಸಿನಿಂದ, ಗುಹ್ಯಂ= ಗೋಪ್ಯನಾದ, ಸನಾತನಮ್= ವೇದಪ್ರತಿಪಾದ್ಯನಾದ ಬ್ರಹ್ಮನನ್ನು, ವಿದ್ಯಾಂ= ನಾನು ತಿಳಿದೇನು?

ನಿಷ್ಕಲ್ಮಷವಾದ ತಪಸ್ಸೇ ಬ್ರಹ್ಮಪರೋಕ್ಷ ಜ್ಞಾನಕ್ಕೆ ಕಾರಣವಾಗಿರುವುದರಿಂದ ತಪಸ್ಸಿನ ಕಲ್ಮಷವನ್ನು ತಿಳಿಯದೆ ನಿಷ್ಕಲ್ಮಷವಾದ ತಪಸ್ಸನ್ನು ಆಚರಿಸಲು ಸಾಧ್ಯವಿಲ್ಲವಾದ್ದರಿಂದ ತಪಸ್ಸಿನ ಕಲ್ಮಷಜ್ಞಾನವು ಆವಶ್ಯಕ. ಆದ್ದರಿಂದ ಅದನ್ನು ನನಗೆ ಹೇಳಿ ಎಂದು ಅಭಿಪ್ರಾಯ.

**ಸನತ್ಸುಜಾತಃ(ಕುಮಾರಃ)**

**ಕ್ರೋಧಾದಯೋ ದ್ವಾದಶ ಯಸ್ಯ ದೋಷಾಃ**
**ತಥಾ ನೃಶಂಸಾನಿ ಚ ಸಪ್ತ ರಾಜನ್ ।**
**ಜ್ಞಾನಾದಯೋ ದ್ವಾದಶ ಚಾತತಾನಾಃ**
**ಶಾಸ್ತ್ರೇ ಗುಣಾ ಯೇ ವಿದಿತಾ ದ್ವಿಜಾನಾಮ್** ॥೧೬॥

ಹೀಗೆ ಧೃತರಾಷ್ಟ್ರನಿಂದ ಕೇಳಲ್ಪಟ್ಟ ಸನತ್ಸುಜಾತರು ಭಗವದನುಸಂಧಾನರಹಿತವಾದ ತಪಸ್ಸಿಗೆ ಅನೇಕ ದೋಷಗಳನ್ನು ಹೇಳುತ್ತಾರೆ.

ಯಸ್ಯ= ಯಾವ ತಪಸ್ಸಿಗೆ, ಕ್ರೋಧಾದಯಃ= ಕ್ರೋಧವೇ ಮೊದಲಾದ, ದ್ವಾದಶ= ಹನ್ನೆರಡು ಸಂಖ್ಯೆಯ ಕಲ್ಮಷಗಳಿವೆಯೋ, ತಥಾ= ತಪಸ್ಸಿಗೆ ಕ್ರೋಧಾದಿ ಅನೇಕ ದೋಷಗಳಿರುವಂತೆ, ಅನೇಕ ನೃಶಂಸ ದೋಷಗಳೂ ಇವೆ ಎಂದು ತಿಳಿಸಲು 'ತಥಾ' ಎಂದು ಪ್ರಯೋಗಿಸಿದ್ದಾರೆ. ತಥಾ= ಅದರಂತೆ, ನೃಶಂಸಾನಿ= ಕ್ರೌರ್ಯಗಳು, ಸಪ್ತ= ಏಳು ಸಂಖ್ಯೆಯನ್ನು ಹೊಂದಿವೆ. 'ಸಪ್ತ ಚ' ಎಂಬಲ್ಲಿರುವ ಚ ಶಬ್ದದಿಂದ ಮುಂದೆ ಹೇಳಲಿರುವ ಆರು ನೃಶಂಸಗಳನ್ನು ಸಂಗ್ರಹಿಸಬೇಕು. ಒಟ್ಟು ಹದಿಮೂರು ನೃಶಂಸಗಳಾಗುತ್ತವೆ. ಜ್ಞಾನಾದಯಃ= ಜ್ಞಾನವೇ ಮೊದಲಾದ, ದ್ವಾದಶ ಗುಣಾಃ= ಹನ್ನೆರಡು ಗುಣಗಳು, ಆತತಾನಾಃ= ಅದೇ ತಪಸ್ಸಿಗೆ ಒಳ್ಳೆಯ ವಿಸ್ತಾರವನ್ನು ಉಂಟುಮಾಡುವವುಗಳಾಗಿ ಇಂತಹ ಗುಣಗಳು, ದ್ವಿಜಾನಾಂ= ಬ್ರಾಹ್ಮಣರ, ಗುಣಾ ಇತಿ= ಗುಣಗಳೆಂದು, ಶಾಸ್ತ್ರೇ= ಧರ್ಮಶಾಸ್ತ್ರದಲ್ಲಿ, ವಿದಿತಾಃ= ಪ್ರತಿಪಾದಿಸಲ್ಪಟ್ಟಿವೆ. ಜ್ಞಾನಾದಿ ದ್ವಾದಶಗುಣಗಳು ತಪಸ್ಸಿಗೆ ಅತಿಶಯವನ್ನು ಉಂಟು ಮಾಡುತ್ತವೆ ಎಂದು ಆತತಾನಾಃ ಎಂಬ ಶಬ್ದವು ಸೂಚಿಸುತ್ತದೆ.

**ಕ್ರೋಧಃ ಕಾಮೋ ಲೋಭಮೋಹೌ ವಿವಿತ್ಸಾ-**
**ಕೃಪಾಽಸೂಯಾ ಮಾನಶೋಕೌ ಸ್ಪೃಹಾ ಚ ।**

ಈರ್ಷ್ಯಾ ಜುಗುಪ್ಸಾ ಚ ಮಹಾಗುಣೇನ
ಸದಾ ವರ್ಜ್ಯಾ ದ್ವಾದಶೈತೇ ನರೇಣ ॥೧೭॥

ಕ್ರೋಧಾದಿಗಳು ಎಂದು ಸಾಮಾನ್ಯಾಕಾರವಾಗಿ ಹೇಳಿದ ಅಸಜ್ಜನರಿಂದ ಸೇವ್ಯವಾದ, ಸಜ್ಜನರಿಂದ ವರ್ಜ್ಯವಾದ ದ್ವಾದಶ ಸಂಖ್ಯಾಕವಾದ ದೋಷಗಳ ಹೆಸರುಗಳನ್ನು ಇಲ್ಲಿ ಹೇಳುತ್ತಾರೆ.

ಕ್ರೋಧ= ಕಾಮಾದಿ ಹೇತುಕವಾದ ಅಂತಃಕರಣದ ಕ್ಷೋಭೆ, ದೇಹದ ಬೆವರು ಮತ್ತು ಕಂಪನದಿಂದ ಉಂಟಾದ ಹುಬ್ಬುಗಂಟಿಕ್ಕುವಿಕೆ ಮೊದಲಾದವುಗಳಿಂದ ಊಹಿಸಲ್ಪಡುವುದು ಅಥವಾ ಇನ್ನೊಬ್ಬರಿಗೆ ಹಿಂಸೆಯನ್ನು ಉಂಟು ಮಾಡುವುದಕ್ಕೆ ಕಾರಣವಾದ ಮನೋವೃತ್ತಿ ವಿಶೇಷ. ಕಾಮಃ= ವನಿತಾದಿಗಳ ಅಭಿಲಾಷೆ. ಲೋಭಃ= ಶಕ್ತಿಯಿರುವಾಗ ಸತ್ಪಾತ್ರರಲ್ಲಿ ದಾನ ಮಾಡದಿರುವುದು, ಮೋಹಃ= ಕಾರ್ಯಾಕಾರ್ಯ ಜ್ಞಾನಶೂನ್ಯತೆ ಅಥವಾ ತನ್ನ ಹಿತದ ಅಜ್ಞಾನ. ವಿವಿತ್ಸಾ= ಅನೇಕ ಉಪಾಯಗಳಿಂದ ವಿಶೇಷವಾಗಿ ವಿಷಯಗಳನ್ನು ಹುಡುಕುವ ಇಚ್ಛೆ ಅಥವಾ ಧನಲಾಭದ ಇಚ್ಛೆ, ಅಕೃಪಾ= ನಿಷ್ಠುರತೆ ಅಥವಾ ದಯಾಶೂನ್ಯತೆ, ಅಸೂಯಾ= ಸಜ್ಜನರ ಗುಣಗಳಲ್ಲಿ ದೋಷ ಚಿಂತನೆ ಅಥವಾ ಇನ್ನೊಬ್ಬರ ಗುಣಗಳನ್ನು ನೋಡಿ ಸಹಿಸದಿರುವುದು, ಮಾನಂ= ತನ್ನಲ್ಲಿ ಮಹತ್ವ ಜ್ಞಾನ, ಶೋಕಃ= ಹಿಂದಿನ ಘಟನೆಯ ಸ್ಮರಣೆಯಿಂದ ಉಂಟಾದ ದುಃಖವಿಶೇಷ, ಸ್ಪೃಹಾ= ವಿಷಯೇಚ್ಛಾನುರೂಪವಾದ ಅತಿಯಾದ ಆಸೆ, ಈರ್ಷ್ಯಾ= ಇನ್ನೊಬ್ಬರ ಐಶ್ವರ್ಯವನ್ನು ನೋಡಿ ಸಹಿಸದಿರುವುದು, ಜುಗುಪ್ಸಾ= ಭೀಭತ್ಸ ಅಥವಾ ಇನ್ನೊಬ್ಬರ ಗುಣಗಳನ್ನು ಮರೆಮಾಚುವುದು, ಈ ಕ್ರೋಧಾದಿ ಹನ್ನೆರಡು ದೋಷಗಳು ತಪಸ್ಸಿಗೆ ಕಲ್ಮಷರೂಪವಾದವು. ಇವುಗಳನ್ನು ಮಹಾಗುಣವುಳ್ಳ ಮನುಷ್ಯನು ಜೀವನದಲ್ಲಿ ಯಾವಾಗಲೂ ಪರಿತ್ಯಾಗ ಮಾಡಬೇಕು. ಬ್ರಾಹ್ಮಣನ ಮಹಾಗುಣತ್ವವೆಂದರೆ –

'ಮಹದ್‌ಬ್ರಹ್ಮೇತಿ ಯತ್ ಪ್ರೋಕ್ತಂ ಮಹತ್ತ್ವನ್ಮಹತಾಮಪಿ ।
ತತ್ಪ್ರಾಪ್ತಿಗುಣಸಂಯುಕ್ತೋ ಮಹಾಗುಣ ಇತಿ ಸ್ಮೃತಃ ॥'

(ಮಹತ್ಪದಾರ್ಥಗಳಿಂದಲೂ ಮಹತ್ತಾಗಿರುವುದರಿಂದ ಬ್ರಹ್ಮನನ್ನು 'ಮಹತ್' ಎಂದು ಕರೆಯುತ್ತಾರೆ. ಅಂತಹ ಬ್ರಹ್ಮನ ಪ್ರಾಪ್ತಿಗೆ ಅನುಕೂಲವಾದ ಗುಣಗಳನ್ನು ಹೊಂದಿದವನು ಮಹಾಗುಣನೆಂದು ಎನಿಸುತ್ತಾನೆ) ಅಥವಾ ಬ್ರಾಹ್ಮಣನು ಇಂತಹ

ನಿಷ್ಕಲ್ಮಷವಾದ ತಪಸ್ಸೇ ಬ್ರಹ್ಮಪರೋಕ್ಷ ಜ್ಞಾನಕ್ಕೆ ಕಾರಣವಾಗಿರುವುದರಿಂದ ತಪಸ್ಸಿನ ಕಲ್ಮಷವನ್ನು ತಿಳಿಯದೆ ನಿಷ್ಕಲ್ಮಷವಾದ ತಪಸ್ಸನ್ನು ಆಚರಿಸಲು ಸಾಧ್ಯವಿಲ್ಲವಾದ್ದರಿಂದ ತಪಸ್ಸಿನ ಕಲ್ಮಷಜ್ಞಾನವು ಆವಶ್ಯಕ. ಆದ್ದರಿಂದ ಅದನ್ನು ನನಗೆ ಹೇಳಿ ಎಂದು ಅಭಿಪ್ರಾಯ.

## ಸನತ್ಸುಜಾತಃ(ಕುಮಾರಃ)

**ಕ್ರೋಧಾದಯೋ ದ್ವಾದಶ ಯಸ್ಯ ದೋಷಾಃ**
**ತಥಾ ನೃಶಂಸಾನಿ ಚ ಸಪ್ತ ರಾಜನ್ ।**
**ಜ್ಞಾನಾದಯೋ ದ್ವಾದಶ ಚಾತತಾನಾಃ**
**ಶಾಸ್ತ್ರೇ ಗುಣಾ ಯೇ ವಿದಿತಾ ದ್ವಿಜಾನಾಮ್** ॥೧೬॥

ಹೀಗೆ ಧೃತರಾಷ್ಟ್ರನಿಂದ ಕೇಳಲ್ಪಟ್ಟ ಸನತ್ಸುಜಾತರು ಭಗವದನುಸಂಧಾನರಹಿತವಾದ ತಪಸ್ಸಿಗೆ ಅನೇಕ ದೋಷಗಳನ್ನು ಹೇಳುತ್ತಾರೆ.

ಯಸ್ಯ= ಯಾವ ತಪಸ್ಸಿಗೆ, ಕ್ರೋಧಾದಯಃ= ಕ್ರೋಧವೇ ಮೊದಲಾದ, ದ್ವಾದಶ= ಹನ್ನೆರಡು ಸಂಖ್ಯೆಯ ಕಲ್ಮಷಗಳಿವೆಯೋ, ತಥಾ= ತಪಸ್ಸಿಗೆ ಕ್ರೋಧಾದಿ ಅನೇಕ ದೋಷಗಳಿರುವಂತೆ, ಅನೇಕ ನೃಶಂಸ ದೋಷಗಳೂ ಇವೆ ಎಂದು ತಿಳಿಸಲು 'ತಥಾ' ಎಂದು ಪ್ರಯೋಗಿಸಿದ್ದಾರೆ. ತಥಾ= ಅದರಂತೆ, ನೃಶಂಸಾನಿ= ಕ್ರೌರ್ಯಗಳು, ಸಪ್ತ= ಏಳು ಸಂಖ್ಯೆಯನ್ನು ಹೊಂದಿವೆ. 'ಸಪ್ತ ಚ' ಎಂಬಲ್ಲಿರುವ ಚ ಶಬ್ದದಿಂದ ಮುಂದೆ ಹೇಳಲಿರುವ ಆರು ನೃಶಂಸಗಳನ್ನು ಸಂಗ್ರಹಿಸಬೇಕು. ಒಟ್ಟು ಹದಿಮೂರು ನೃಶಂಸಗಳಾಗುತ್ತವೆ. ಜ್ಞಾನಾದಯಃ= ಜ್ಞಾನವೇ ಮೊದಲಾದ, ದ್ವಾದಶ ಗುಣಾಃ= ಹನ್ನೆರಡು ಗುಣಗಳು, ಆತತಾನಾಃ= ಅದೇ ತಪಸ್ಸಿಗೆ ಒಳ್ಳೆಯ ವಿಸ್ತಾರವನ್ನು ಉಂಟುಮಾಡುವವುಗಳಾಗಿ ಇಂತಹ ಗುಣಗಳು, ದ್ವಿಜಾನಾಂ= ಬ್ರಾಹ್ಮಣರ, ಗುಣಾ ಇತಿ= ಗುಣಗಳೆಂದು, ಶಾಸ್ತ್ರೇ= ಧರ್ಮಶಾಸ್ತ್ರದಲ್ಲಿ, ವಿದಿತಾಃ= ಪ್ರತಿಪಾದಿಸಲ್ಪಟ್ಟಿವೆ. ಜ್ಞಾನಾದಿ ದ್ವಾದಶಗುಣಗಳು ತಪಸ್ಸಿಗೆ ಅತಿಶಯವನ್ನು ಉಂಟು ಮಾಡುತ್ತವೆ ಎಂದು ಆತತಾನಾಃ ಎಂಬ ಶಬ್ದವು ಸೂಚಿಸುತ್ತದೆ.

**ಕ್ರೋಧಃ ಕಾಮೋ ಲೋಭಮೋಹೌ ವಿವಿತ್ಸಾ-**
**ಕೃಪಾಽಸೂಯಾ ಮಾನಶೋಕೌ ಸ್ಪೃಹಾ ಚ ।**

ಈರ್ಷ್ಯಾ ಜುಗುಪ್ಸಾ ಚ ಮಹಾಗುಣೇನ
ಸದಾ ವರ್ಜ್ಯಾ ದ್ವಾದಶೈತೇ ನರೇಣ ॥೧೭॥

ಕ್ರೋಧಾದಿಗಳು ಎಂದು ಸಾಮಾನ್ಯಾಕಾರವಾಗಿ ಹೇಳಿದ ಅಸಜ್ಜನರಿಂದ ಸೇವ್ಯವಾದ, ಸಜ್ಜನರಿಂದ ವರ್ಜ್ಯವಾದ ದ್ವಾದಶ ಸಂಖ್ಯಾಕವಾದ ದೋಷಗಳ ಹೆಸರುಗಳನ್ನು ಇಲ್ಲಿ ಹೇಳುತ್ತಾರೆ.

ಕ್ರೋಧ= ಕಾಮಾದಿ ಹೇತುಕವಾದ ಅಂತಃಕರಣದ ಕ್ಷೋಭೆ, ದೇಹದ ಬೆವರು ಮತ್ತು ಕಂಪನದಿಂದ ಉಂಟಾದ ಹುಬ್ಬುಗಂಟಿಕ್ಕುವಿಕೆ ಮೊದಲಾದವುಗಳಿಂದ ಊಹಿಸಲ್ಪಡುವುದು ಅಥವಾ ಇನ್ನೊಬ್ಬರಿಗೆ ಹಿಂಸೆಯನ್ನು ಉಂಟು ಮಾಡುವುದಕ್ಕೆ ಕಾರಣವಾದ ಮನೋವೃತ್ತಿ ವಿಶೇಷ. ಕಾಮಃ= ವನಿತಾದಿಗಳ ಅಭಿಲಾಷೆ. ಲೋಭಃ= ಶಕ್ತಿಯಿರುವಾಗ ಸತ್ಪಾತ್ರರಲ್ಲಿ ದಾನ ಮಾಡದಿರುವುದು, ಮೋಹಃ= ಕಾರ್ಯಾಕಾರ್ಯ ಜ್ಞಾನಶೂನ್ಯತೆ ಅಥವಾ ತನ್ನ ಹಿತದ ಅಜ್ಞಾನ. ವಿವಿತ್ಸಾ= ಅನೇಕ ಉಪಾಯಗಳಿಂದ ವಿಶೇಷವಾಗಿ ವಿಷಯಗಳನ್ನು ಹುಡುಕುವ ಇಚ್ಛೆ ಅಥವಾ ಧನಲಾಭದ ಇಚ್ಛೆ, ಅಕೃಪಾ= ನಿಷ್ಠುರತೆ ಅಥವಾ ದಯಾಶೂನ್ಯತೆ, ಅಸೂಯಾ= ಸಜ್ಜನರ ಗುಣಗಳಲ್ಲಿ ದೋಷ ಚಿಂತನೆ ಅಥವಾ ಇನ್ನೊಬ್ಬರ ಗುಣಗಳನ್ನು ನೋಡಿ ಸಹಿಸದಿರುವುದು, ಮಾನಂ= ತನ್ನಲ್ಲಿ ಮಹತ್ವ ಜ್ಞಾನ, ಶೋಕಃ= ಹಿಂದಿನ ಘಟನೆಯ ಸ್ಮರಣೆಯಿಂದ ಉಂಟಾದ ದುಃಖವಿಶೇಷ, ಸ್ಪೃಹಾ= ವಿಷಯೇಚ್ಛಾನುರೂಪವಾದ ಅತಿಯಾದ ಆಸೆ, ಈರ್ಷ್ಯಾ= ಇನ್ನೊಬ್ಬರ ಐಶ್ವರ್ಯವನ್ನು ನೋಡಿ ಸಹಿಸದಿರುವುದು, ಜುಗುಪ್ಸಾ= ಭೀಭತ್ಸೆ ಅಥವಾ ಇನ್ನೊಬ್ಬರ ಗುಣಗಳನ್ನು ಮರೆಮಾಚುವುದು, ಈ ಕ್ರೋಧಾದಿ ಹನ್ನೆರಡು ದೋಷಗಳು ತಪಸ್ಸಿಗೆ ಕಲ್ಮಷರೂಪವಾದವು. ಇವುಗಳನ್ನು ಮಹಾಗುಣವುಳ್ಳ ಮನುಷ್ಯನು ಜೀವನದಲ್ಲಿ ಯಾವಾಗಲೂ ಪರಿತ್ಯಾಗ ಮಾಡಬೇಕು. ಬ್ರಾಹ್ಮಣನ ಮಹಾಗುಣತ್ವವೆಂದರೆ –

'ಮಹದ್‌ಬ್ರಹ್ಮೇತಿ ಯತ್ ಪ್ರೋಕ್ತಂ ಮಹತ್ತ್ವನ್ಮಹತಾಮಪಿ ।
ತತ್ಪ್ರಾಪ್ತಿಗುಣಸಂಯುಕ್ತೋ ಮಹಾಗುಣ ಇತಿ ಸ್ಮೃತಃ ॥'

(ಮಹತ್ಪದಾರ್ಥಗಳಿಂದಲೂ ಮಹತ್ತಾಗಿರುವುದರಿಂದ ಬ್ರಹ್ಮನನ್ನು 'ಮಹತ್' ಎಂದು ಕರೆಯುತ್ತಾರೆ. ಅಂತಹ ಬ್ರಹ್ಮನ ಪ್ರಾಪ್ತಿಗೆ ಅನುಕೂಲವಾದ ಗುಣಗಳನ್ನು ಹೊಂದಿದವನು ಮಹಾಗುಣನೆಂದು ಎನಿಸುತ್ತಾನೆ) ಅಥವಾ ಬ್ರಾಹ್ಮಣನು ಇಂತಹ

ಮಹಾಗುಣಗಳನ್ನು ಹೊಂದಬೇಕಾದರೆ ಇರಬೇಕಾದ ಗುಣಗಳು ಭಗವದ್ಗೀತೆಯಲ್ಲಿ ಹೇಳಲ್ಪಟ್ಟಿವೆ–

'ಶಮೋ ದಮಸ್ತಪಃ ಶೌಚಂ ಕ್ಷಾಂತಿರಾರ್ಜವಮೇವ ಚ ।
ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಬ್ರಾಹ್ಮಂ ಕರ್ಮ ಸ್ವಭಾವಜಮ್ ॥'

(ಶಮ, ದಮ, ತಪಸ್ಸು, ಶೌಚ, ಶಾಂತಿ, ಆರ್ಜವ, ಜ್ಞಾನ, ವಿಜ್ಞಾನ ಮತ್ತು ಆಸ್ತಿಕ್ಯಗಳು ಬ್ರಾಹ್ಮಣರಿಗೆ ಸ್ವಭಾವಜನ್ಯವಾದ ಗುಣಗಳು) ಎಂಬ ಪ್ರಮಾಣವಿರುವುದರಿಂದ ಮಹಾಗುಣ ಶಬ್ದಕ್ಕೆ ಬ್ರಹ್ಮಜ್ಞಾನಿಯಾದ ಬ್ರಾಹ್ಮಣ ಎಂದು ಅರ್ಥವನ್ನು ಮಾಡಬಹುದು. ಈ ಹನ್ನೆರಡು ದೋಷಗಳು ಇಂತಹ ಗುಣವುಳ್ಳ ಬ್ರಾಹ್ಮಣನಿಂದ ಯಾವಾಗಲೂ ತ್ಯಾಜ್ಯವಾದವು. ಯಾವಾಗಲೂ ಎಂದು ಹೇಳುವ 'ಸದಾ' ಎಂಬ ಶಬ್ದವು ತಪಸ್ಸು, ವ್ರತ ಮೊದಲಾದವುಗಳನ್ನು ಅನುಷ್ಠಾನ ಮಾಡುವಾಗ ಈ ದೋಷವನ್ನು ಬಿಡಬೇಕೆಂದು ಕೈಮುತ್ಯನ್ಯಾಯದಿಂದ ಸೂಚಿಸುತ್ತದೆ.

ಏಕೈಕಮೇಷಾಂ ರಾಜೇಂದ್ರ ಮನುಷ್ಯಂ ಪರ್ಯುಪಾಸತೇ ।
ಲಿಪ್ಸಮಾನೋಽಂತರಂ ತೇಷಾಂ ಮೃಗಾಣಾಮಿವ ಲುಬ್ಧಕಃ ॥೧೮॥

ಕ್ರೋಧಾದಿಗಳನ್ನು ಸರ್ವದಾ ತ್ಯಾಗ ಮಾಡುವುದಕ್ಕೆ ಏನು ಕಾರಣ ಎಂಬ ಶಂಕೆಗೆ ದಾರಿಹೋಕನಿಗೆ ಕಾಡಿನಲ್ಲಿ ಸಿಂಹ-ವ್ಯಾಘ್ರಾದಿ ಮೃಗಗಳು ಉಪದ್ರವವನ್ನು ಕೊಡುವಂತೆ ಕ್ರೋಧಾದಿಗಳು ಮೋಕ್ಷಮಾರ್ಗಪ್ರತಿಬಂಧಕವಾಗಿ ದೊಡ್ಡ ಅನರ್ಥಕ್ಕೆ ಕಾರಣವಾಗುವುದರಿಂದ ಅವುಗಳನ್ನು ಬಿಡಬೇಕು ಎಂದು ದೃಷ್ಟಾಂತ ಪೂರ್ವಕವಾಗಿ ಹೇಳುತ್ತಾರೆ.

ರಾಜೇಂದ್ರ= ಎಲೈ ರಾಜೇಂದ್ರನೇ, ಏತೇ= ಈ ಕ್ರೋಧಾದಿಗಳು, ಏಕೈಕಂ= ಒಂದೊಂದೂ ಪ್ರತ್ಯೇಕವಾಗಿ, ಮನುಷ್ಯಂ= ದೇಹಿಯನ್ನು, ಪರ್ಯುಪಾಸತೇ= ಸರ್ವದೇಹವನ್ನೂ ವ್ಯಾಪಿಸಿ ಇರುತ್ತವೆ. ಅವನ ಒಂದು ದೌರ್ಬಲ್ಯವನ್ನು ಅನ್ವೇಷಣೆ ಮಾಡುತ್ತಾ ಎಂದು ಇಟ್ಟುಕೊಳ್ಳಬೇಕು. ಈ ವಿಷಯದಲ್ಲಿ ಒಂದು ದೃಷ್ಟಾಂತವನ್ನು ಹೇಳುತ್ತಾರೆ. ತೇಷಾಂ= ತಮ್ಮ ದೃಷ್ಟಿಗೆ ಗೋಚರವಾದ, ಮೃಗಾಣಾಂ= ಹರಿಣ ಮೊದಲಾದ ಪ್ರಾಣಿಗಳಲ್ಲಿ, ಅಂತರಂ= ಮೇಲೆರಗುವ ಅವಕಾಶವನ್ನು, ಲಿಪ್ಸಮಾನಃ= ಪಡೆಯಲು ಬಯಸಿದ, ಲುಬ್ಧಕಃ= ಮೃಗಮಾರಕನಾದ ವ್ಯಾಘ್ರವು ಅಥವಾ ವ್ಯಾಧನು

ವೃಕ್ಷಾದಿಗಳನ್ನು ಅವಲಂಬಿಸಿ ನಿಂತಿರುವಂತೆ ಈ ದೋಷಗಳು ದೇಹಿಯನ್ನು ಆಶ್ರಯಿಸಿ ನಿಂತಿರುತ್ತವೆ ಎಂದು ಅಭಿಪ್ರಾಯ.

ವಿಕತ್ಥನಃ ಸ್ಪೃಹಯಾಲುರ್ಮನಸ್ವೀ
ಬಿಭ್ರತ್ ಕ್ರೋಧಂ ಚಪಲೋऽರಕ್ಷಣಶ್ಚ।
ಏತೇ ಪ್ರೋಕ್ತಾಃ ಷಣ್ನರಾಃ ಪಾಪಶೀಲಾಃ
ಪ್ರಕುರ್ವತೇ ನೈವ ಧರ್ಮಂ ಸುಧರ್ಮಮ್
(ಏತೇ ಪ್ರಾಪ್ತಾಃ ಷಟ್ ಪರಾನ್ ಪಾಪಧರ್ಮಾನ್
ಪ್ರಕುರ್ವತೇ ನೋತ ಸಂತಃ ಸುದುರ್ಗೇ) ॥೧೯॥

ಹಿಂದಿನ ಶ್ಲೋಕದಲ್ಲಿ ಹೇಳಿದ ತಪಸ್ಸಿನ ಕಲ್ಮಷಗಳಾದ ಕ್ರೋಧಾದಿ ಹದಿಮೂರು ನೃಶಂಸ ಪದಾರ್ಥಗಳನ್ನು ಪರಿತ್ಯಾಗ ಮಾಡಬೇಕೆಂದು ಸೂಚಿಸಲು ಎರಡು ಶ್ಲೋಕಗಳಿಂದ ಅವುಗಳನ್ನು ಹೇಳುತ್ತಾರೆ.

ವಿಕತ್ಥನಃ= ಅಸಂಬದ್ಧ ಪ್ರಲಾಪವನ್ನು ಮಾಡುವವನು, ಸ್ಪೃಹಯಾಲುಃ= ವಿಷಯ ಲೋಲುಪ, ಮನಸ್ವೀ= ತನ್ನ ಇಚ್ಛೆಯಂತೆ ನಡೆಯುವವನು, ಕ್ರೋಧಂ ಬಿಭ್ರತ್= ಸರ್ವದಾ ಕೋಪಶೀಲನಾದವನು, ಚಪಲಃ= ಚಂಚಲನಾದವನು, ಮಾನವಾನ್= ಅಹಂಕಾರಿಯಾದವನು, ಮಾನವಾನ್ ಎಂಬ ಪಾಠದ ಬದಲು ಕೆಲವು ಪಾಠಗಳಲ್ಲಿ ಅರಕ್ಷಣಃ ಎಂಬ ಪಾಠವಿದೆ. ಅರಕ್ಷಣ ಎಂದರೆ ತನ್ನ ಧರ್ಮವನ್ನು ರಕ್ಷಣೆ ಮಾಡಿಕೊಳ್ಳದವನು ಎಂದು ಅರ್ಥ. ಏತೇ ಪ್ರೋಕ್ತಾಃ= ಹೀಗೆ ಹೇಳಲ್ಪಟ್ಟ, ಈ ಪಾಪಶೀಲಾಃ= ಪಾಪಸ್ವಭಾವದ, ಷಣ್ಣರಾಃ= ಆರು ಪುರುಷರು, ಧರ್ಮಂ= ಪ್ರವೃತ್ತಿಧರ್ಮವನ್ನು, ಸುಧರ್ಮಂ= ನಿವೃತ್ತಿ ಧರ್ಮವನ್ನಾಗಿ, ನೈವ ಪ್ರಕುರ್ವತೇ= ಮಾಡುವುದಿಲ್ಲ. ವಾದಿರಾಜರು 'ಏತೇ ಪ್ರಾಪ್ತಾಃ ಷಟ್ ಪರಾನ್ ಪಾಪಧರ್ಮಾನ್ ಪ್ರೋಕುರ್ವತೇ ನೋತ ಸಂತಃ ಸುದುರ್ಗೇ' ಎಂಬ ಪಾಠವನ್ನೂ ಇಟ್ಟುಕೊಂಡು ಬೇರೆ ವ್ಯಾಖ್ಯಾನವನ್ನು ಮಾಡಿದ್ದಾರೆ, ಏತೇ ಷಟ್= ಈ ಆರು ನೃಶಂಸ ಪುರುಷರು (ಕ್ರೂರಿಗಳಾದ ಪುರುಷರು), ಪಾಪಧರ್ಮಾನ್= ಪಾಪನಿಷ್ಠರಾದ ತಾಮಸ ಜೀವರನ್ನು, ಪ್ರಾಪ್ತಾಃ= ಬಂದು ಸೇರಿವೆ. ಎಂದರೆ ಇವು ತಾಮಸ ಜೀವರಿಗೆ ಮಾತ್ರ ಸಂಬಂಧಪಟ್ಟವುಗಳು ಎಂದು ಅಭಿಪ್ರಾಯ. ಇಲ್ಲಿ ನೃಶಂಸಾದಿ ಧರ್ಮಗಳನ್ನು ಹೇಳುವ

ಬದಲು ನೃಶಂಸಾದಿ ಧರ್ಮಗಳನ್ನುಳ್ಳ ಧರ್ಮಿಗಳಾದ ಪುರುಷರನ್ನು ಹೇಳಿರುವುದು ತಾಮಸ ಜೀವರಿಗೂ ಮತ್ತು ಅವರ ಈ ದೋಷರೂಪವಾದ ಧರ್ಮಗಳಿಗೂ ಅಭೇದವಿದೆ ಎಂದು ಜ್ಞಾಪಿಸುವುದಕ್ಕಾಗಿ. ಇಲ್ಲದಿದ್ದರೆ ನೋತ ಸಂತಃ ಸುದುರ್ಗೇ' ಎಂದು ಸಜ್ಜನ ಸ್ವರೂಪಿಗಳಾದ ಧರ್ಮಿಗಳನ್ನು ಹೇಳುವುದು ಉಪಪನ್ನವಾಗುವುದಿಲ್ಲ. ಯೇ ಸಂತಃ= ಯಾವ ಸಜ್ಜನ ಜೀವರಿದ್ದಾರೋ ಅವರು, ಸುದುರ್ಗೇ= ಎಂತಹ ದೊಡ್ಡ ಆಪತ್ತಿನಲ್ಲಿಯೂ, ನ ಪ್ರಕುರ್ವತೇ= ವಿಕತ್ಥನಾದಿಗಳನ್ನು ಮಾಡುವುದಿಲ್ಲ.

**ಸಂಭೋಗಸಂವಿದ್ ವಿಷಮೋऽಥ ಮಾನೀ**
**ದತ್ತಾನುತಾಪೀ ಕೃಪಣೋऽಬಲೀಯಾನ್ ।**
**ವರ್ಗಪ್ರಶಂಸೀ ವನಿತಾಂ ಚ ದ್ವೇಷ್ಟಾ (ವನಿತಾವಿರೋಧೀ)**
**ಏತೇ ಪರೇ ಸಪ್ತ ನೃಶಂಸರೂಪಾಃ** ॥೨೦॥

ಇನ್ನು ಉಳಿದ ಏಳು ನೃಶಂಸಗಳ ಸ್ವರೂಪವನ್ನು ಹೇಳುತ್ತಾರೆ.

ಸಂಭೋಗ ಸಂವಿತ್= ಸಂಭೋಗ ಮೊದಲಾದ ವಿಷಯ ಭೋಗದ ಚಿಂತೆಯನ್ನು ಯಾವಾಗಲೂ ಹೊಂದಿದವನು, ವಿಷಮೇಧಮಾನಃ= ವಿಷಮೇಧ ಎಂದರೆ ಪತನಹೇತುವಾದ್ದರಿಂದ ತನ್ನ ನಾಶಕ್ಕೆ ಕಾರಣವಾದ ಮಿಥ್ಯಾಜ್ಞಾನ, ಅದರಲ್ಲಿ ಮಾನಃ ಎಂದರೆ ಪ್ರಾಮಾಣ್ಯ ಬುದ್ಧಿಯುಳ್ಳವನು ಅಥವಾ ಅವುಗಳಿಗೆ ಪ್ರಾಮಾಣ್ಯವನ್ನು ಸಾಧಿಸಲು ದುಷ್ಟ ಪ್ರಮಾಣಗಳನ್ನು ಹೊಂದಿದವನು. ಅಥವಾ ವಿಷ ಎಂದರೆ ಸ್ವೋತ್ತಮರ ದ್ವೇಷ, ಅದನ್ನು ಏಧಮಾನಃ= ವರ್ಧಿಸುವವನು ಎಂದು ಅರ್ಥ. ದತ್ತಾನುತಾಪೀ= ಸಜ್ಜನರಿಗೆ ದಾನವನ್ನು ಮಾಡಿ ಪಶ್ಚಾತ್ತಾಪ ಪಡುವವನು, ಅಬಲೀಯಾನ್= ಸಚ್ಛಾಸ್ತ್ರಜನ್ಯವಾದ ಜ್ಞಾನ ಬಲಹೀನನಾದವನು, ವರ್ಗಪ್ರಶಂಸೀ= ಸ್ತ್ರೀ ಮೊದಲಾದ ವಿಷಯವರ್ಗವನ್ನು ಯಾವಾಗಲೂ ಹೊಗಳುವವನು, ವನಿತಾವಿರೋಧೀ= ಪತಿವ್ರತೆಯಾದ ತನ್ನ ಪತ್ನಿಯನ್ನಾಗಲೀ ಅಥವಾ ಬೇರೆ ಸ್ತ್ರೀಯನ್ನಾಗಲೀ ದ್ವೇಷಿಸುವವನು. ಏತೇ ಪರೇ ಸಪ್ತ= ಹಿಂದೆ ಹೇಳಿದ ಆರು ಜನರಿಂದ ಭಿನ್ನರಾದ ಈ ಏಳು ಜನರು, ನೃಶಂಸರೂಪಾಃ= ನೃಶಂಸಾತ್ಮಕರಾದವರು. ಹಿಂದಿನ ಶ್ಲೋಕದಲ್ಲಿ ಹೇಳಿದಂತೆ ಇಲ್ಲಿಯೂ ಧರ್ಮವನ್ನು ಹೇಳುವ ಬದಲಾಗಿ ಧರ್ಮಿಯನ್ನು ಹೇಳಿರುವುದು ಈ ಧರ್ಮ-ಧರ್ಮಿಗಳಿಗೆ ಅಭೇದವನ್ನು ಸೂಚಿಸುವುದಕ್ಕಾಗಿ ಎಂದು ತಿಳಿಯಬೇಕು. ಹೀಗೆ ಒಟ್ಟು ಹದಿಮೂರು ನೃಶಂಸಗಳು.

ಜ್ಞಾನಂ ಚ ಸತ್ಯಂ ಚ ದಮಃ ಶ್ರುತಂ ಚ
ಅಮಾತ್ಸರ್ಯಂ ಹ್ರೀಸ್ತಿತಿಕ್ಷಾಽನಸೂಯಾ ।
ಯಜ್ಞಶ್ಚ ದಾನಂ ಚ ಧೃತಿಃ ಶಮಶ್ಚ
ಮಹಾವ್ರತಾ ದ್ವಾದಶ ಬ್ರಾಹ್ಮಣಸ್ಯ ॥೨೧॥

ಹೀಗೆ ಚೆನ್ನಾಗಿ ಅನುಷ್ಠಾನ ಮಾಡಿದ ತಪಸ್ಸನ್ನು ಹ್ರಾಸಗೊಳಿಸುವಂತಹ ಕ್ರೋಧಾದಿ ಸ್ವರೂಪವನ್ನು ಹೇಳಿ, ಈಗ 'ಜ್ಞಾನಾದಯೋ ದ್ವಾದಶ ಚಾತತಾನಾಃ' ಎಂದು ಹಿಂದೆ ಹೇಳಿದ, ಚೆನ್ನಾಗಿ ಅನುಷ್ಠಾನ ಮಾಡಿದ, ತಪಸ್ಸಿನ ಫಲವನ್ನು ವೃದ್ಧಿಗೊಳಿಸುವ ಜ್ಞಾನಾದಿ ಧರ್ಮಗಳನ್ನು ಹೇಳುತ್ತಾರೆ.

ಜ್ಞಾನಂ= ಪರಾಪರ ತತ್ವವಿಷಯಕವಾದ ಜ್ಞಾನ, ಸತ್ಯಂ= ಯಥಾರ್ಥ ಭಾಷಣ ಅಥವಾ ಸಜ್ಜನಹಿತವಾದ ಭಾಷಣ, ದಮಃ= ಇಂದ್ರಿಯ ನಿಗ್ರಹ, ಶ್ರುತಂ= ಮಹಾಭಾರತಾದಿ ಮಹಾಶಾಸ್ತ್ರಗಳ ಶ್ರವಣ, ಅಮಾತ್ಸರ್ಯಂ= ಗುಣಿಗಳಾದ ಸ್ವೋತ್ತಮರಲ್ಲಿ ಸ್ನೇಹ, ಹ್ರೀಃ= ನಿಷಿದ್ಧವನ್ನು ಆಚರಿಸುವುದರಲ್ಲಿ ಲಜ್ಜೆ, ತಿತಿಕ್ಷಾ= ದ್ವಂದ್ವಸಹಿಷ್ಣುತೆ, ಅನಸೂಯಾ= ಮಹಾತ್ಮರಲ್ಲಿ ದೋಷವನ್ನು ಹುಡುಕದಿರುವುದು, ಯಜ್ಞಃ= ನಿತ್ಯವೂ ಮಾಡಬೇಕಾದ ಬ್ರಹ್ಮಯಜ್ಞಾದಿಗಳು ಅಥವಾ ಜ್ಯೋತಿಷ್ಟೋಮಾದಿ ಯಾಗಗಳು, ದಾನಂ= ಸತ್ಪಾತ್ರರಲ್ಲಿ ದ್ರವ್ಯತ್ಯಾಗ, ಧೃತಿಃ= ವಿಷಯಸನ್ನಿಧಿಯಲ್ಲಿ ಇಂದ್ರಿಯವನ್ನು ನಿಗ್ರಹಿಸುವ ಶಕ್ತಿ, ಶಮಃ= ಭಗವನ್ನಿಷ್ಠವಾದ ಬುದ್ಧಿ, ಏತೇ ದ್ವಾದಶ= ಈ ಹನ್ನೆರಡು, ಬ್ರಾಹ್ಮಣಸ್ಯ= ಅಧಿಕಾರಿಯಾದ ಬ್ರಾಹ್ಮಣನಿಗೆ, ಮಹಾವ್ರತಾಃ= ಮೋಕ್ಷಸಂಪಾದಕ ಜ್ಞಾನಸಾಧನಗಳಾದ ವ್ರತಗಳು.

ಯಸ್ತೈತೇಭ್ಯಃ ಪ್ರವಸೇದ್ ದ್ವಾದಶಭ್ಯಃ
ಸರ್ವಾಮಪೀಮಾಂ ಪೃಥಿವೀಂ ಸ (ಪ್ರ) ಶಿಷ್ಯಾತ್ ।
ತ್ರಿಭಿರ್ದ್ವಾಭ್ಯಾಮೇಕತೋ ವಾಽವಿಶಿಷ್ಟೋ
ನ ಸಂತರಸ್ವೀತಿ ಸ ವೇದಿತವ್ಯಃ ॥೨೨॥

ಹೀಗೆ ಅಪರೋಕ್ಷಜ್ಞಾನಿ ಸಾಧಾರಣವಾದ ಜ್ಞಾನಾದಿ ಹನ್ನೆರಡು ಮಹಾಗುಣಗಳನ್ನು ಹೇಳಿ ಈಗ ಅವುಗಳ ಮಹಿಮಾ ಕಥನಪೂರ್ವಕವಾಗಿ ಅವುಗಳ ಸಾಮರ್ಥ್ಯದಿಂದ

ಉಂಟಾಗುವ ಮುಕ್ತಿರೂಪವಾದ ಫಲವನ್ನು ಉಪದೇಶಿಸುತ್ತಾರೆ. ಯಃ= ಯಾವ ಅಧಿಕಾರಿಯು, ಏತೇಭ್ಯಃ ದ್ವಾದಶಭ್ಯಃ= ಈ ಹನ್ನೆರಡು ಗುಣಗಳನ್ನು ಸಂಪಾದಿಸಲು, ಪ್ರವಸೇತ್= ಮನೆಯನ್ನು ಬಿಟ್ಟು ಹೊರಟು ಉತ್ತಮವಾದ ಗುರುಕುಲವಾಸವನ್ನು ಮಾಡುತ್ತಾನೆಯೋ, ಸಃ= ಅಂತಹ ಅಧಿಕಾರಿಯು, ಇಮಾಂ ಪೃಥಿವೀಂ ಸರ್ವಾಮಪಿ= ಈ ಎಲ್ಲ ಪೃಥಿವಿಯನ್ನೂ, ಪ್ರಶಿಷ್ಯಾತ್= ಆಳಿಯಾನು. ಇಲ್ಲಿ ಯಸ್ತ್ವೇತೇಭ್ಯಃ ಎಂಬಲ್ಲಿರುವ ತು ಶಬ್ದವು ವಿಶೇಷವನ್ನು ಸೂಚಿಸುತ್ತದೆ. ಅದೇನೆಂದರೆ ಇಲ್ಲಿ ಹೇಳಿದ ಪ್ರಶಾಸ ಪ್ರಸಿದ್ಧವಾದ ರಾಜ್ಯಪಾಲನೆಯಲ್ಲ. ಏಕೆಂದರೆ ಅದು ಅನ್ಯದೇವತೋದ್ದೇಶಕವಾದ ಕಾಮ್ಯಕರ್ಮದಿಂದಲೂ ಲಭಿಸುತ್ತದೆ. ಆದ್ದರಿಂದ **'ಬ್ರಹ್ಮವಿದಾಪ್ನೋತಿ ಪರಂ, ಜ್ಞಾನೇನ ಆನಂದೀ ಭವತಿ'** (ಬ್ರಹ್ಮಜ್ಞಾನಿಯು ಪರಬ್ರಹ್ಮನನ್ನು ಹೊಂದುತ್ತಾನೆ, ಜ್ಞಾನದಿಂದ ಆನಂದಪೂರ್ಣನಾಗುತ್ತಾನೆ) ಮೊದಲಾದ ಪ್ರಮಾಣಗಳಿಗೆ ಅನುಸಾರವಾಗಿ ಜ್ಞಾನಾದಿಗಳಿಗೆ ಅವರವರ ಯೋಗ್ಯತಾನುಸಾರಿಯಾದ ಮೋಕ್ಷಫಲವೇ ನಿಯಮೇನ ಉಂಟಾಗುತ್ತದೆ ಎಂದು ಹೇಳಿರುವುದರಿಂದ ಇಲ್ಲಿಯೂ ಪೃಥಿವೀ ಪ್ರಶಾಸನವೆಂದರೆ ತೈತ್ತಿರೀಯ ಉಪನಿಷತ್ತಿನಲ್ಲಿ ಆನಂದಮೀಮಾಂಸಾ ಪ್ರಕರಣದಲ್ಲಿ ಹೇಳಿರುವ **'ತಸ್ಯೈಯಂ ಪೃಥಿವೀ ಸರ್ವಾ ವಿತ್ತಸ್ಯ ಪೂರ್ಣಾ ಸ್ಯಾತ್'** (ಆ ಮುಕ್ತನಾದವನಿಗೆ ಸರ್ವವಿತ್ತಪೂರ್ಣನಾದ ಪೃಥಿವೀಪಾಲಕನಾದ ರಾಜನಿಗೆ ಇರುವಷ್ಟು ಆನಂದವಿರುತ್ತದೆ) ಎಂದು ಹೇಳಿದಂತೆ ಸ್ವಯೋಗ್ಯವಾದ ಆನಂದಾನುಭವ ರೂಪವಾದ ಮೋಕ್ಷಪ್ರಾಪ್ತಿಯೇ ಪ್ರಶಾಸನವೆಂದು ತಿಳಿಯಬೇಕು. ಇಲ್ಲದಿದ್ದರೆ **'ಜ್ಞಾನವಾನ್ ಮಾಂ ಪ್ರಪದ್ಯತೇ'** (ಅಪರೋಕ್ಷಜ್ಞಾನಿಯು ನನ್ನನ್ನು ಹೊಂದುತ್ತಾನೆ) ಇತ್ಯಾದಿಗಳು ಹೇಳುವ ಅಪರೋಕ್ಷಜ್ಞಾನಕ್ಕೆ ಮೋಕ್ಷಫಲ ಜನಕತ್ವ ರೂಪವಾದ ಪ್ರಮೇಯಕ್ಕೆ ವಿರೋಧ ಉಂಟಾಗುತ್ತದೆ. ತು ಎಂಬ ನಿಪಾತವು ಈ ಅರ್ಥವನ್ನೇ ಸೂಚಿಸುತ್ತದೆ.

ಹಾಗಾದರೆ ಜ್ಞಾನಾದಿ ಹನ್ನೆರಡು ಗುಣಗಳೂ ಇದ್ದವರಿಗೆ ಮಾತ್ರ ಮೋಕ್ಷ ಪ್ರಾಪ್ತಿಯಾಗುತ್ತದೆ, ಒಂದೆರಡು ಗುಣಗಳು ಕಡಿಮೆಯಾದರೆ ಮೋಕ್ಷ ಪ್ರಾಪ್ತಿಯಾಗುವುದಿಲ್ಲ ಎಂಬ ಪ್ರಸಂಗವಿಲ್ಲ. ಆಯಾ ಅಧಿಕಾರಿಗಳ ಯೋಗ್ಯತೆಯನ್ನು ಅನುಸರಿಸಿ ಒಂದೆರಡು ಗುಣಗಳಿಂದ ಸಹಕೃತವಾಗದಿದ್ದರೂ ಜ್ಞಾನಾದಿಗಳು ಉಳಿದ ಗುಣಗಳ ಸಹಕಾರದಿಂದ ಯಥಾಯೋಗ್ಯವಾದ ಮುಕ್ತಿಫಲವನ್ನು ಕೊಡುತ್ತವೆ ಎಂದು

ಉಪದೇಶ ಮಾಡುತ್ತಾರೆ. 'ತ್ರಿಭಿಃ ದ್ವಾಭ್ಯಾಂ ಏಕತೋ ವಾ'= ಮೂರು, ಎರಡು ಅಥವಾ ಒಂದು ಗುಣದಿಂದ, ಅವಿಶಿಷ್ಟಃ= ಊನನಾದ ಅಧಿಕಾರಿಯು, ನ ಸಂತರಸ್ವೀತಿ= ಸಂಸಾರವನ್ನು ಚೆನ್ನಾಗಿ ದಾಟುವುದಿಲ್ಲ ಎಂದು, ವೇದಿತವ್ಯಃ= ತಿಳಿಯಬೇಕು (ಚೆನ್ನಾಗಿ ದಾಟುವುದಿಲ್ಲ ಎಂದರೆ ಮುಕ್ತಿಯನ್ನೇ ಪಡೆಯುವುದಿಲ್ಲ ಎಂದು ಅರ್ಥವಲ್ಲ. ಹನ್ನೆರಡು ಗುಣಗಳೂ ಇದ್ದವರಿಗಿಂತ ಸ್ವಲ್ಪ ಕಡಿಮೆಯ ಆನಂದ ದೆಶೆಯನ್ನು ಪಡೆಯುತ್ತಾನೆ ಎಂದು ಅರ್ಥ). ನಾಲ್ಕನೆಯ ಪಾದದಲ್ಲಿ 'ನ ಸಂತರಸ್ವೀತಿ ಸ ವೇದಿತವ್ಯಃ' ಎಂಬ ಪಾಠಕ್ಕೆ ಬದಲಾಗಿ ವಾದಿರಾಜರು ಮತ್ತು ಭಾರತ ಶ್ರೀನಿವಾಸಾಚಾರ್ಯರು 'ಕ್ರಮಾದ್ವಿಮುಕ್ತಾಃ ಮೌನಭೂತಾ ಭವಂತಿ' ಎಂಬ ಪಾಠವನ್ನೂ ಇಟ್ಟುಕೊಂಡು ವ್ಯಾಖ್ಯಾನ ಮಾಡಿದ್ದಾರೆ. ಮೂರು, ಎರಡು ಅಥವಾ ಒಂದುಗುಣಗಳಿಂದ ಹೀನರಾದವರು ವಿಮುಕ್ತಾಃ= ಇಲ್ಲಿ ಜೀವನ್ಮುಕ್ತರಾಗಿ, ಕ್ರಮಾತ್= ಅಪರೋಕ್ಷಜ್ಞಾನಾನಂತರದಲ್ಲಿ ಅನುಷ್ಠಾನ ಮಾಡುವ ಸಾಧನೆಯ ಕ್ರಮದಿಂದ ಅಥವಾ ತಮಗಿಂತ ಉತ್ತಮರಾದ ದೇವತೆಗಳನ್ನು ಪ್ರವೇಶ ಮಾಡುವ ಕ್ರಮದಿಂದ, ವಿಮುಕ್ತಾಃ= 'ವಿ ನಿಷೇಧೇ ವಿಶೇಷೇ ಚ ಪತತ್ರಿಣಿ ಹರಾವಪಿ' ಎಂದು ಕೋಶವಿರುವುದರಿಂದ 'ವಿ' ಎಂಬ ನಿಪಾತಕ್ಕೆ ನಿಷಿದ್ಧ ಎಂದು ಅರ್ಥ. ಆದ್ದರಿಂದ ಅತಿನಿಷಿದ್ಧವಾದ ಲಿಂಗ ಸಂಬಂಧದಿಂದ ಮುಕ್ತರಾಗಿ ಎಂದು ಅರ್ಥ. ಅನಂತರದಲ್ಲಿ ಮೌನಭೂತಾಃ= ಮುನಿಪ್ರಾಪ್ಯನಾದ ನಾರಾಯಣನೇ ಮೌನ, ಅಂತಹವನಲ್ಲಿ ಸಾಯುಜ್ಯಭಾವದಿಂದಾಗಲೀ, ಸಾಮೀಪ್ಯಭಾವದಿಂದಾಗಲೀ, ಸಾರೂಪ್ಯಭಾವದಿಂದಾಗಲೀ, ಭವಂತಿ= ಇರುವವರಾಗುತ್ತಾರೆ ಎಂದೂ ವ್ಯಾಖ್ಯಾನ ಮಾಡಿದ್ದಾರೆ.

**ದಮಸ್ಯಾಗೋಽಥಾಪ್ರಮಾದ ಏತೇಷ್ವಮೃತಮಾಹಿತಮ್ ।**
**ತಾನಿ ಸತ್ಯಮುಖಾನ್ಯಾಹುರ್ಬ್ರಾಹ್ಮಣಾನಾಂ ಮನೀಷಿಣಾಮ್ ॥೨೩॥**

ಹೀಗೆ ಹಿಂದೆ ಹೇಳಿದ ಮಹಾಧಿಕಾರಿಯಲ್ಲಿರುವ ನಿರ್ದುಷ್ಟವಾದ ಹನ್ನೆರಡು ಗುಣಗಳಲ್ಲಿ ನಿರ್ದುಷ್ಟವಾದ ದಮಾದಿ ಮೂರು ಗುಣಗಳು ಅತ್ಯಾವಶ್ಯಕವಾದವು. ಉಳಿದ ಜ್ಞಾನಾದಿ ಒಂಬತ್ತು ಗುಣಗಳು ದಮಾದಿ ಮೂರುಗುಣಗಳ ಮೂಲಕವಾಗಿಯೇ ಬಲಿಷ್ಠವಾಗುತ್ತವೆ ಎಂದು ಹೇಳುತ್ತಾ, ವಿವೇಕಿಯಾದವನು

ದಮಾದಿ ಮೂರುಗುಣಗಳನ್ನೇ ಮೊದಲು ಸಂಪಾದನೆ ಮಾಡಬೇಕೆಂದು ಹೇಳುತ್ತಾ ಅವುಗಳ ಅಸಾಧಾರಣ ಲಕ್ಷಣವನ್ನು ಹೇಳುತ್ತಾರೆ.

ದಮಃ= ಇಂದ್ರಿಯನಿಗ್ರಹ, ತ್ಯಾಗಃ= ವಿಷಯಾಭಿಲಾಷೆಯ ತ್ಯಾಗ, ಅಪ್ರಮಾದಃ= ಅನವಧಾನತೆ ಇಲ್ಲದಿರುವುದು, ಯಾವಾಗಲೂ ಎಚ್ಚರಿಕೆಯಿಂದಿರುವುದು, ಯಾವಾಗಲೂ ದೇವರ ಸ್ಮರಣೆಯಲ್ಲಿರುವುದು, ಇದೇ ಶಮವೆಂದು ಹೇಳಲ್ಪಡುತ್ತದೆ. ಏತೇಷು= ನಿರ್ದಿಷ್ಟವಾದ ಈ ಮೂರು ಗುಣಗಳಲ್ಲಿ, ಅಮೃತಂ= ನಿತ್ಯಮುಕ್ತನಾದ ಬ್ರಹ್ಮನು, ಆಹಿತಂ= ಸ್ಥಿತನಾಗಿದ್ದಾನೆ. ಹೀಗೆ ಹೇಳುವುದರಿಂದ ನಿರ್ದಿಷ್ಟವಾದ ಜಿತೇಂದ್ರಿಯತ್ವ, ವಿಷಯ ವೈರಾಗ್ಯ ಮತ್ತು ಭಗವನ್ನಿಷ್ಠೆ ರೂಪವಾದ ಗುಣಗಳನ್ನು ಹೊಂದಿದ ಬ್ರಾಹ್ಮಣನಲ್ಲಿ, ಜ್ಞಾನಾದಿ ಮಹಾಗುಣಗಳನ್ನು ಕೊಡುವುದಕ್ಕಾಗಿಯೇ ಪರಮಾತ್ಮನು ಸ್ಥಿತನಾಗಿರುತ್ತಾನೆ ಎಂಬ ಅಭಿಪ್ರಾಯ ಸೂಚಿತವಾಗುವುದರಿಂದ ಮೊದಲು ದಮಾದಿ ಗುಣತ್ರಯಗಳನ್ನೇ ಸಂಪಾದಿಸಬೇಕು ಎಂದು ಸೂಚಿತವಾಗುತ್ತದೆ. ಜ್ಞಾನಾದಿ ಮಹಾಗುಣಪ್ರಾಪ್ತಿಗಾಗಿ ದಮಾದಿಗಳನ್ನು ಸಂಪಾದಿಸಬೇಕಾದರೆ ದಮಾದಿ ಗುಣಪ್ರಾಪ್ತಿಗಾಗಿ ಮೊದಲು ಏನು ಸಾಧನವನ್ನು ಮಾಡಬೇಕು ಎಂಬ ಪ್ರಶ್ನೆಗೆ ಉತ್ತರವನ್ನು ಹೇಳುತ್ತಾರೆ.

ತಾನಿ= ಜ್ಞಾನಾದಿ ಗುಣಗಳಿಗೆ ಸಾಧನವಾದ ದಮಾದಿಗಳು, ಸತ್ಯಮುಖಾನಿ= **'ಯತ್ಸತಾಂ ಹಿತಮತ್ಯಂತಂ ತತ್ಸತ್ಯಮಿತಿ ಚೋಚ್ಯತೇ'** (ಯಾವುದು ಸಜ್ಜನರಿಗೆ ಹಿತವಾಗಿರುತ್ತದೆಯೋ ಅದೇ ಸತ್ಯವೆಂದು ಹೇಳಲ್ಪಡುತ್ತದೆ) ಎಂಬ ವಚನವಿರುವುದರಿಂದ ತನಗಿಂತ ಉತ್ತಮರಾದ ಸಜ್ಜನರಿಗೆ ಹಿತವನ್ನು ಉಂಟುಮಾಡಿ ಅದರಿಂದ ಅವರು ಮಾಡುವ ಅನುಗ್ರಹವೇ ಸತ್ಯವೆನಿಸುತ್ತದೆ. ದಮಾದಿಗಳು ಅಂತಹ ಸತ್ಯವನ್ನು, ಮುಖಂ= ಮುಖ್ಯವಾದ ಸಾಧನೆಯಾಗಿ ಹೊಂದಿದವುಗಳಾಗಿ ಇರುತ್ತವೆ. ಇದರಿಂದ ದಮಾದಿ ಪ್ರಾಪ್ತಿಗಾಗಿ ಸಜ್ಜನರ ಸೇವೆಯೇ ಸಾಧನವೆಂದು ಸೂಚಿತವಾಗುತ್ತದೆ. ಈ ವಿಷಯದಲ್ಲಿ ನಿಯಾಮಕ ಏನು ಎಂಬುದಕ್ಕೆ **'ಬ್ರಾಹ್ಮಣಾ ವೈ ಮನೀಷಿಣಃ'** (ಬ್ರಾಹ್ಮಣಾಹುರ್ಮನೀಷಿಣಃ) ಎಂದು ಹೇಳುತ್ತಾರೆ. ಬ್ರಾಹ್ಮಣಾಃ= ವೇದಶಾಸ್ತ್ರಸಂಪನ್ನರಾದ, ಯೇ ಮನೀಷಿಣಃ= ಯಾವ ಜ್ಞಾನಿಗಳಿದ್ದಾರೋ ಅಂತಹವರು, ಆಹುಃ= ಹೇಳುತ್ತಾರೆ ಎಂದು ಇಟ್ಟುಕೊಳ್ಳಬೇಕು. 'ಬ್ರಾಹ್ಮಣಾನಾಂ

ಮನೀಷಿಣಾಮ್' ಎಂಬ ಪಾಠದಲ್ಲಿ ಮನೀಷಿಣಾಂ= ವಿವೇಕಿಗಳಾದ, ಬ್ರಾಹ್ಮಣಾನಾಂ= ವೇದಜ್ಞಾನ ಸಂಪನ್ನರಾದವರ, ವಚನವೇ ಪ್ರಮಾಣವೆಂದು ಇಟ್ಟುಕೊಳ್ಳಬೇಕು. ಹೀಗೆ ಹೇಳಿ ಸನತ್ಸುಜಾತರು ತಾವು ಹೇಳಿದ ವಿಷಯವನ್ನು ದೃಢೀಕರಿಸಲು ಶಿಷ್ಟಸಮ್ಮತಿಯನ್ನೂ ತೋರಿಸಿದಂತೆ ಆಯಿತು.

ಭಾರತ ಶ್ರೀನಿವಾಸಾಚಾರ್ಯರು ಹೀಗೆಯೇ ವ್ಯಾಖ್ಯಾನ ಮಾಡುತ್ತಾ, ದಮಾದಿಗಳು ಸತ್ಯದಿಂದ ಉಂಟಾಗುವವು, ನೀನು ಮಾತ್ರ ದಮಾದಿಗಳಿಂದಲೇ ಮೋಕ್ಷವನ್ನು ಸಾಧನ ಮಾಡುತ್ತೇನೆ. ಆದ್ದರಿಂದ ಪಾಂಡವರಿಗೆ ರಾಜ್ಯವನ್ನು ಕೊಡುವುದಿಲ್ಲ ಎಂದು ತಿಳಿದಿದ್ದೀಯೆ. ಇದು ಅಸತ್ಯವಾದುದು. ಯಾವ ಪುರುಷನಲ್ಲಿ ಸತ್ಯವು ಇರುವುದಿಲ್ಲವೋ ಅವನಲ್ಲಿ ದಮಾದಿಗಳೂ ಇರುವುದಿಲ್ಲ. ನೀನು ರಾಜ್ಯಲೋಭದಿಂದ ಪಾಂಡವರಿಗೆ ಅಸತ್ಯವನ್ನು ನುಡಿಯುತ್ತಿದ್ದೀಯೆ. ಆದ್ದರಿಂದ ನಿನ್ನನ್ನು ಯಾವ ಪುಣ್ಯವೂ ಕಷ್ಟದಿಂದಾಗಲೀ ಅಥವಾ ಸಂಸಾರದಿಂದಾಗಲೀ ದಾಟಿಸುವುದಿಲ್ಲ ಎಂದು ಮನೀಷಿಣಃ= ಜ್ಞಾನಿಗಳಾದ, ಬ್ರಾಹ್ಮಣಾಃ= ಬ್ರಾಹ್ಮಣರು, ಆಹುಃ= ಹೇಳುತ್ತಾರೆ ಎಂದು ವ್ಯಾಖ್ಯಾನ ಮಾಡುತ್ತಾರೆ.

'ಬ್ರಾಹ್ಮಣಾಹುರ್ಮನೀಷಿಣಃ' ಎಂಬ ಪಾಠವನ್ನಿಟ್ಟುಕೊಂಡು ವ್ಯಾಖ್ಯಾನ ಮಾಡಿದ್ದಾರೆ. 'ಬ್ರಾಹ್ಮಣಾಃ ಆಹುಃ' ಎಂಬ ಸ್ಥಳದಲ್ಲಿ 'ಬ್ರಾಹ್ಮಣಾಹುಃ' ಎಂಬ ಸಂಧಿಯು ಸಂಧಿಗರ್ಭಸಂಧಿ ಎಂದು ಹೇಳಲ್ಪಡುತ್ತದೆ. ಇಂತಹ ಸಂಧಿಗಳು ಪುರಾಣಗಳಲ್ಲಿ ಬಹಳವಾಗಿ ಕಂಡುಬರುತ್ತವೆ. ಇದಕ್ಕೆ ಸಾರಸ್ವತವ್ಯಾಕರಣದ ಸಮ್ಮತಿಯೂ ಇದೆ.

**ದಮೋऽಷ್ಟಾದಶದೋಷಃ ಸ್ಯಾತ್ ತ್ಯಾಗೋ ಭವತಿ ಷಡ್ಗುಣಃ ।**
**ದೋಷತ್ಯಾಗೋऽಪ್ರಮಾದಃ ಸ್ಯಾತ್ ಸ ಚಾಪ್ಯಷ್ಟಗುಣೋ ಮತಃ॥೨೪॥**

ದಮಾದಿಗಳು ಮೋಕ್ಷವನ್ನು ಕುರಿತು ಪ್ರದಾನ ಸಾಧನವಾದುದರಿಂದ ಅವುಗಳಾದರೂ ನಿರ್ದುಷ್ಟವಾದವುಗಳೇ ಫಲಕ್ಕೆ ಕಾರಣವಾಗುವುದರಿಂದ ಅವುಗಳನ್ನು ನಿರ್ದುಷ್ಟವಾಗಿ ಅನುಷ್ಠಾನ ಮಾಡಲು ದೋಷಗಳ ಜ್ಞಾನವು ಅವಶ್ಯಕವಾದುದರಿಂದ ದಮಾದಿಗಳ ದೋಷಗಳನ್ನು ಹೇಳುತ್ತಾರೆ.

ದಮಃ= ಇಂದ್ರಿಯನಿಗ್ರಹವು, ಅಷ್ಟಾದಶ ದೋಷಃ ಸ್ಯಾತ್= ಹದಿನೆಂಟು ದೋಷಗಳಿಂದ ಕೂಡಿರುತ್ತದೆ. ತ್ಯಾಗಃ= ಸತ್ಪಾತ್ರರಲ್ಲಿ ತ್ಯಾಗವು, ಷಡ್ಗುಣಃ ಭವತಿ= ಆರು ಗುಣಗಳಿಂದ ಕೂಡಿರುತ್ತದೆ. ಅಪ್ರಮಾದಃ= ಅಪ್ರಮಾದವೆಂದರೆ, ದೋಷತ್ಯಾಗಃ ಸ್ಯಾತ್= ದೋಷತ್ಯಾಗರೂಪವಾಗುತ್ತದೆ. ಸ ಚಾಪಿ= ಅದಾದರೂ ಕೂಡ, ಅಷ್ಟಗುಣಃ= ಎಂಟು ಗುಣಗಳುಳ್ಳದ್ದೆಂದು, ಮತಃ= ಸಮ್ಮತವಾಗಿರುತ್ತದೆ.

**ಅನೃತಂ ಪೈಶುನಂ ತೃಷ್ಣಾ ಪ್ರಾತಿಕೂಲ್ಯಂ ತಮೋಽರತಿಃ ।**
**ಲೋಕದ್ವೇಷೋಽತಿಮಾನಶ್ಚ ವಿವಾದಃ ಪ್ರಾಣಿಪೀಡಿತಮ್ ॥೨೫॥**

ಮುಕ್ತಿಸಾಧನವಾದ, ಅಪರೋಕ್ಷಜ್ಞಾನರೂಪವಾದ, ಮಹಾಗುಣಕ್ಕೆ ಸಾಧನವಾದ ದಮಾದಿ ಮೂರುಗುಣಗಳೂ ಸಹ ದೋಷದೂರವಾಗಿದ್ದರೆ ಮಾತ್ರ ಅಂತಹ ಸಾಮರ್ಥ್ಯವನ್ನು ಹೊಂದಿರುತ್ತದೆ, ಇಲ್ಲದಿದ್ದರೆ ಇಲ್ಲ ಎಂದು ತಿಳಿಸುತ್ತಾ ಮೂರರ ಪಂಕ್ತಿಯಲ್ಲಿ ಮೊದಲು ಹೇಳಿದ ದಮದ ದೋಷಗಳನ್ನು ಮೂರುಶ್ಲೋಕಗಳಿಂದ ಹೇಳುತ್ತಾರೆ. ವಾದಿರಾಜರು–

ದಮೋಽಷ್ಟಾದಶದೋಷಃ ಸ್ಯಾತ್ ಪ್ರತಿಕೂಲಂ ಕೃತೇರ್ಭವೇತ್ ।
ಪೈಶುನ್ಯಮನೃತಂ ತೃಷ್ಣಾ ಪ್ರಾತಿಕೂಲ್ಯಂ ತಮೋಽರತಿಃ ॥

ಎಂಬ ಮೂಲವನ್ನು ತೆಗೆದುಕೊಂಡೂ ವ್ಯಾಖ್ಯಾನವನ್ನು ಮಾಡುತ್ತಾರೆ. ದಮಃ= ಇಂದ್ರಿಯನಿಗ್ರಹರೂಪವಾದ ದಮವು, ಅಷ್ಟಾದಶ ದೋಷಃ= ಹದಿನೆಂಟು ದೋಷಗಳಿಂದ ಕೂಡಿರುತ್ತದೆ ಅಥವಾ ಹದಿನೆಂಟು ದೋಷಗಳನ್ನು ಉಂಟು ಮಾಡುತ್ತದೆ. ಆ ದೋಷವರ್ಗದಿಂದ, ಕೃತೇಃ= ಜ್ಞಾನಾದಿಗುಣಸಾಧನವಾದ ದಮರೂಪವಾದ ಕರ್ಮಕ್ಕೆ (ಪ್ರಯತ್ನಕ್ಕೆ), ಪ್ರತಿಕೂಲಂ= ಪ್ರತಿಕೂಲತೆಯು ಎಂದರೆ ತಮ್ಮ ಅನುಷ್ಠಾನದಿಂದ ಉಂಟಾದ ಪುಣ್ಯದಿಂದ ಜ್ಞಾನಾದಿಗುಣವನ್ನು ಉತ್ಪತ್ತಿ ಮಾಡುವ ಸಾಮರ್ಥ್ಯವಿಲ್ಲದಿರುವಿಕೆಯು ಅಥವಾ ಭಾವರೂಪವಾದ ಪ್ರತಿಬಂಧಕತ್ವವು, ಭವೇತ್= ಉಂಟಾದೀತು. ಅಥವಾ 'ಪ್ರತಿಕೂಲಂ ಕೃತೇ ಭವೇತ್' ಎಂಬ ಪಾಠವನ್ನು ಇಟ್ಟುಕೊಂಡರೆ ಕೃತೇ= ಯಾವ ದೋಷಗಳಲ್ಲಿ ಒಂದನ್ನಾದರೂ ಮಾಡಿದರೆ ದಮಕ್ಕೆ ಪ್ರತಿಕೂಲತಾ= ಪ್ರತಿಕೂಲತೆಯು, ಭವೇತ್= ಉಂಟಾದೀತು ಎಂದೂ ಅರ್ಥವನ್ನು ಮಾಡಿದ್ದಾರೆ. ದಮದ ದೋಷಗಳು ಯಾವುವು ಎಂಬುದಕ್ಕೆ

ಉತ್ತರವನ್ನು ಹೇಳುತ್ತಾರೆ: (೧) ಪೈಶುನ್ಯಂ = ಚಾಡಿಯನ್ನು ಹೇಳುವುದು, (೨) ಅನೃತಮ್ = ಸುಳ್ಳನ್ನು ಹೇಳುವುದು, (೩) ತೃಷ್ಣಾ = ವಿಷಯದ ಅಭಿಲಾಷೆ, (೪) ಪ್ರಾತಿಕೂಲ್ಯಂ= ತಮಗಿಂತ ಉತ್ತಮರಿಗೆ ಹಿತವನ್ನು ಮಾಡುವುದಕ್ಕೆ ವಿರೋಧವನ್ನು ಮಾಡುವುದು ಅಥವಾ ಎಲ್ಲರಿಗೂ ಪ್ರತಿಕೂಲವನ್ನು ಮಾಡುವುದು, (೫) ತಮಃ= ಶಾಸ್ತ್ರಜನ್ಯಜ್ಞಾನಹೀನತೆ, (೬)ಅರತಿಃ= ಯದೃಚ್ಛಾಲಾಭದಿಂದ ತೃಪ್ತಿ ಇಲ್ಲದಿರುವುದು, ಅಥವಾ ಯಾವುದರಿಂದಲೂ ತೃಪ್ತಿಯನ್ನು ಹೊಂದದಿರುವುದು, (೭) ಲೋಕದ್ವೇಷಃ= ತನಗಿಂತ ಉತ್ತಮರಾದ ಜ್ಞಾನಿಜನರನ್ನು ದ್ವೇಷ ಮಾಡುವುದು, (೮) ಅಭಿಮಾನಃ= ತನ್ನಲ್ಲಿಮಹತ್ತ ಜ್ಞಾನವನ್ನು ಹೊಂದಿರುವುದು, (೯) ವಿವಾದಃ= ನಿಷಿದ್ಧವಾದ ಮಾತನ್ನು ಆಡುವುದು ಅಥವಾ ಉತ್ತಮರ ಜೊತೆಯಲ್ಲಿ ವಿತಂಡವನ್ನು ಮಾಡುವುದು, (೧೦) ಪ್ರಾಣಿಪೀಡನಮ್= ತನ್ನ ಬಂಧುಗಳ ಪೋಷಣೆಗಾಗಿ ಇನ್ನೊಬ್ಬರ ಪೀಡೆಯನ್ನು ಮಾಡುವುದು ಅಥವಾ ಕಲಿಯುಗದಲ್ಲಿ ವಿಹಿತವಲ್ಲದ ವಾಜಪೇಯಾದಿಗಳನ್ನು ಆಚರಿಸಿ ಅಜಾದಿಪಶುಗಳನ್ನು ಕೊಲ್ಲುವುದು.

**ಪರಿವಾದೋಽತಿವಾದಶ್ಚ ಪರಿತಾಪೋಽಕ್ಷಮಾಽಧೃತಿಃ ।**
**ಅಸಂಧಿಃ ಪಾಪಕೃತ್ಯಂ ಚ ಹಿಂಸಾ ಚೇತಿ ಪ್ರಕೀರ್ತಿತಾಃ ॥೨೬॥**

**ಏತೈರ್ದೋಷೈರ್ವಿಮುಕ್ತೋ ಯಃ ಸ ದಮಃ ಸದ್ಭಿರುಚ್ಯತೇ ॥೨೭॥**

(೧೧)ಪರಿವಾದಃ= ತನಗಿಂತ ಉತ್ತಮರ ನಿಂದೆ ಅಥವಾ ಸರ್ವಲೋಕ ನಿಂದೆ, (೧೨) ಅತಿವಾದಃ= ನಿರರ್ಥಕವಾದ ಮಾತುಗಳು ಅಥವಾ ಶಾಸ್ತ್ರವಿರುದ್ಧವಾದ ಮಾತುಗಳು, (೧೩) ಪರಿತಾಪಃ= ವ್ಯರ್ಥವಾಗಿ ದುಃಖವನ್ನೇ ಯೋಚಿಸುತ್ತಿರುವುದು, (೧೪) ಅಕ್ಷಮಾ= ದ್ವಂದ್ವಸಹಿಷ್ಣುತೆ ಇಲ್ಲದಿರುವುದು ಅಥವಾ ತನಗಿಂತ ಉತ್ತಮರನ್ನು ನೋಡಿ ಸಹಿಸದಿರುವುದು, (೧೫) ಅಧೃತಿಃ= ವಿಷಯಗಳಲ್ಲಿ ಚಪಲತೆ, (೧೬) ಅಸಿದ್ಧಿಃ (ಅಸಂಧಿಃ)= ಪ್ರಾರಂಭಿಸಿದ ಕರ್ಮವನ್ನು ಪೂರೈಸದಿರುವುದು, (೧೭) ಪಾಪಕೃತ್ಯಂ= ನಿಷಿದ್ಧ ಕರ್ಮಾಚರಣೆ, (೧೮) ಹಿಂಸಾ= ಪ್ರಾಣಿಹಿಂಸೆ ಅಥವಾ ವಿಹಿತವಲ್ಲದ ಹಿಂಸೆ. ಏತೈಃ ದೋಷೈಃ= ಈ ಹದಿನೆಂಟು ದೋಷಗಳಿಂದ, ವಿಮುಕ್ತಃ= ಜೊತೆಗೂಡದ, ಯಃ ದಮಃ= ಯಾವ ದಮವಿದೆಯೋ, ಸಃ= ಅದೇ, ದಮಃ= ದಮವೆಂದು, ಸದ್ಭಿಃ= ಸಜ್ಜನರಿಂದ, ಉಚ್ಯತೇ= ಹೇಳಲ್ಪಡುತ್ತದೆ. ಇದರಿಂದ ಸಜ್ಜನರ ಸಮ್ಮತಿ ವಿಶಿಷ್ಟವಾದ ದಮವೇ ಶ್ರೇಷ್ಠವಾದುದೆಂದು ಸೂಚಿಸಲ್ಪಡುತ್ತದೆ.

**ವಿಪರ್ಯಯಾತ್ ಸ್ಮೃತಾ ಏತೇ ಶಮದೋಷಾ ಉದಾಹೃತಾಃ ।**
**ದೋಷಾ ದಮಸ್ಯ ಯೇ ಪ್ರೋಕ್ತಾಃ ತಾನ್ ದೋಷಾನ್ ಪರಿವರ್ಜಯೇತ್॥**

ಉದಾಹೃತಾಃ ಏತೇ= ದಮಕ್ಕೆ ಹೇಳಲ್ಪಟ್ಟ ಈ ದೋಷಗಳೇ, ವಿಪರ್ಯಯಾತ್= ಶಮಕ್ಕೂ ವಿರೋಧವನ್ನು ಮಾಡುವುದರಿಂದ, ಶಮದೋಷಾಃ= ಶಮ ದೋಷಗಳೆಂದು, ಸ್ಮೃತಾಃ= ಹೇಳಲ್ಪಡುತ್ತವೆ. ದಮಸ್ಯ= ದಮಕ್ಕೆ, ಯೇ ದೋಷಾಃ= ಯಾವ ದೋಷಗಳು, ಪ್ರೋಕ್ತಾಃ= ಹೇಳಲ್ಪಟ್ಟಿವೆಯೋ, ತಾನ್ ದೋಷಾನ್= ಆ ದೋಷಗಳನ್ನು, ಪರಿವರ್ಜಯೇತ್= ಬಿಡಬೇಕು.

ವಾದಿರಾಜರು ಈ ಶ್ಲೋಕಕ್ಕೆ ಬೇರೆ ಪಾಠವನ್ನು ಇಟ್ಟುಕೊಂಡು ವ್ಯಾಖ್ಯಾನ ಮಾಡುತ್ತಾರೆ. ಆ ಪಾಠವು ಹೀಗಿದೆ –

**ಶಮೋऽಷ್ಟಾದಶದೋಷಃ ಸ್ಯಾತ್ ತ್ಯಾಗೋ ಭವತಿ ಷಡ್ವಿಧಃ ।**
**ವಿಪರ್ಯಯಾತ್ ಸ್ಮೃತಾ ಏತೇ ದಮದೋಷಾ ಉದಾಹೃತಾಃ ॥ – (ಮೂಲಮ್)**

ಹೀಗೆ ದಮದೋಷಗಳನ್ನು ಹೇಳಿ, ಈಗ ಅಪ್ರಮಾದರೂಪವಾದ ಶಮದ ಅಷ್ಟಾದಶ ದೋಷಗಳನ್ನೂ ಹೇಳುತ್ತಾರೆ.

ಶಮಃ= ಶಮ ಎಂಬ ಹೆಸರಿನ ಅಪ್ರಮಾದವು, ಅಷ್ಟಾದಶ ದೋಷಃ ಸ್ಯಾತ್= ಹದಿನೆಂಟು ದೋಷಗಳಿಂದ ಕೂಡಿರುತ್ತದೆ. ತ್ಯಾಗಃ= ಹಿಂದೆ ಹೇಳಿದ ತ್ಯಾಗವು, ಷಡ್ವಿಧಃ= ಆರು ಪ್ರಕಾರವಾಗಿ, ಭವತಿ= ಇರುತ್ತದೆ. 'ವಿಪರ್ಯಯಾತ್' ಎಂಬ ಶಬ್ದದಿಂದ ಶ್ರುತ್ಯಾದಿಗಳಿಗೆ, ಶಮ-ದಮಗಳಿಗೆ ದೋಷವನ್ನು ಉಂಟು ಮಾಡುವ ಪ್ರಸಿದ್ಧವಾದ ಪೈಶುನ್ಯಾದಿ ಯಾವ ದೋಷಗಳು ಹೇಳಲ್ಪಟ್ಟಿವೆಯೋ ಅವುಗಳ ವಿರುದ್ಧಾಚರಣೆಯಿಂದ ಶಮ-ದಮಾದಿಗಳಿಗೆ ನಿರ್ದೋಷತ್ವವೂ ಹೇಳಲ್ಪಡುತ್ತದೆ ಎಂದು ಹೇಳುತ್ತಾರೆ. ಯಾವ ಪೈಶುನ್ಯಾದಿ ದೋಷಗಳು ದಮ-ಶಮಾದಿ ದೋಷಗಳೆಂದು ಶಾಸ್ತ್ರದಲ್ಲಿ ಹೇಳಲ್ಪಟ್ಟಿವೆಯೋ ಅವುಗಳೇ ವಿಪರ್ಯಯಾತ್= ಅಪೈಶುನ್ಯ-ಸತ್ಯಭಾಷಣ-ಅತೃಷ್ಣಾ-ಅಪ್ರಾತಿಕೂಲ್ಯ-ಅತಮಃ= ರತಿ- ಲೋಕಾದ್ವೇಷ-ಅನಭಿಮಾನ-ಅವಿವಾದ-ಅಪ್ರಾಣಿಪೀಡಾ-ಅಪರಿವಾದ- ಅನತಿವಾದ-ಅಪರಿತಾಪ-ಕ್ಷಮಾ-ಧೃತಿ-ಸಿದ್ಧಿ-ಅಪಾಪಕೃತ್ಯ-ಅಹಿಂಸಾ ಎಂಬ ವ್ಯತಿರೇಕಗಳಿಂದ ಎಂದರೆ ವಿರುದ್ಧಾಚರಣೆಗಳಿಂದ, ದಮದೋಷಾಃ= ದಮದ ದೋಷಗಳನ್ನು

ಖಂಡಿಸುವವುಗಳಾಗಿ (ದಮದೋಷದೋಷಾಃ ಎಂದು ಮಧ್ಯಮಪದ ಸಮಾಸವನ್ನು ಮಾಡಬೇಕು, ಕೊನೆಯ ದೋಷ ಎಂಬ ಶಬ್ದವು 'ದೋ ಅವಖಂಡನೇ' ಎಂಬ ಧಾತುವಿನಿಂದ ನಿಷ್ಪನ್ನವಾದುದು) ಎಂದು, ಉದಾಹೃತಾಃ= ಶಾಸ್ತ್ರಗಳಲ್ಲಿ ಹೇಳಲ್ಪಡುತ್ತವೆ. ಇದರಿಂದ ಪೈಶುನ್ಯಾದಿಗಳಿಗೆ ದೋಷವನ್ನು ಉಂಟು ಮಾಡುವ ಸಾಮರ್ಥ್ಯವೂ ಪೈಶುನ್ಯಾದಿಗಳ ವಿಪರ್ಯಯಕ್ಕೆ ಗುಣವನ್ನು ಉಂಟುಮಾಡುವ ಸಾಮರ್ಥ್ಯವೂ ಇದೆ ಎಂದು ತಿಳಿಯುತ್ತದೆ.

**ಶ್ರೇಯಾಂಸ್ತು ಷಡ್ವಿಧಸ್ಯಾಗಃ ತೃತೀಯಸ್ತತ್ರ ದುಷ್ಕರಃ ।**
**ತೇನ ದುಃಖಂ ತರತ್ಯೇವ ತಸ್ಮಿಂಸ್ಯಕ್ತೇ ಜಿತಂ ಭವೇತ್** ॥೨೯॥

ಹೀಗೆ ಶಮ-ದಮಾದಿ ದೋಷಗಳೇ ತ್ಯಾಗಕ್ಕೂ ದೋಷಗಳಾಗುತ್ತವೆ ಎಂದು ತ್ಯಾಗಕ್ಕೂ ಹದಿನೆಂಟು ದೋಷಗಳನ್ನು ಹೇಳಿ, ಅವುಗಳನ್ನು ವಿಪರೀತವಾಗಿ ಆಚರಿಸುವುದರಿಂದ ಶ್ರೇಯಸ್ಸುಂಟಾಗುತ್ತದೆ ಎಂದು ಹೇಳಿ, ಈಗ ಸತ್ಪಾತ್ರರಲ್ಲಿ ದಾನರೂಪವಾದ ನಿರ್ದೋಷತ್ಯಾಗಗುಣವೂ ಅಮುಖ್ಯವಾದುದು. ಕಾಮಾದಿ ಆರು ಶತ್ರುಗಳ ತ್ಯಾಗವೇ ಮಹಾಶ್ರೇಯಸ್ಸಾಧನವಾದುದರಿಂದ ಮುಖ್ಯವಾದುದು ಎಂಬ ದೃಷ್ಟಿಯಿಂದ '**ಶ್ರೇಯಾಂಸ್ತು ಷಡ್ವಿಧಸ್ಯಾಗಃ**' ಎಂಬ ಶ್ಲೋಕದಲ್ಲಿ ಆರೂ ತ್ಯಾಗಗಳ ಸಾಮಾನ್ಯ ಸಾಮರ್ಥ್ಯವನ್ನು ಹೇಳಿ '**ಅರ್ಹತೇ ಯಾಚಮಾನಾಯ**' ಎಂಬ ಉತ್ತರ ಶ್ಲೋಕದಲ್ಲಿ ಒಂದೊಂದು ತ್ಯಾಗದಲ್ಲಿಯೂ ದ್ವೈವಿಧ್ಯವನ್ನು ಹೇಳುವವರಾಗಿ ಆ ತ್ಯಾಗಗಳಲ್ಲಿ ಮೂರನೆಯ ತ್ಯಾಗವಾದ ಕಾಮತ್ಯಾಗವು ಅತ್ಯಂತ ದುಷ್ಕರವಾದುದು ಎಂದು ಹೇಳುತ್ತಾರೆ.

ತ್ಯಾಗಃ= ತ್ಯಾಗರೂಪವಾದ ಗುಣವು, ಷಡ್ವಿಧಃ= ಕಾಮಾದಿ ಆರು ಶತ್ರುಗಳ ಸಂಬಂಧಿಯಾಗಿ ಆರುವಿಧವಾಗಿರುತ್ತದೆ. ಶ್ರೇಯಾನ್= 'ಶ್ರಿ ಶ್ರಯೇ' ಎಂಬ ಧಾತುವಿನಿಂದ ನಿಷ್ಪನ್ನವಾದ ಈ ಶಬ್ದವು ಪರಿತ್ಯಾಗ ಮಾಡುವುದಕ್ಕಾಗಿ ಆಶ್ರಯಿಸಲು ಯೋಗ್ಯ ಎಂಬ ಅರ್ಥವನ್ನು ಕೊಡುತ್ತದೆ. ಆದ್ದರಿಂದ ಶ್ರೇಯಾನ್ ಎಂದರೆ ಪರಿತ್ಯಾಗಕ್ಕೆ ಯೋಗ್ಯವಾದವು ಎಂದು ಅರ್ಥ. ಶ್ರೇಷ್ಠವಾದುದು ಎಂದು ಅರ್ಥವಲ್ಲ. ಇದರಿಂದ ಸಜ್ಜನರು ಮಹಾಪ್ರಯತ್ನದಿಂದ ಕಾಮಾದಿ ಆರು ಶತ್ರುಗಳನ್ನು ಜಯಿಸಲು ಸಾಧ್ಯ ಎಂದು ಸೂಚಿತವಾಗುತ್ತದೆ. ಆರು ತ್ಯಾಗಗಳಿಗೂ ಸಂಬಂಧಪಟ್ಟ ವಿಷಯವನ್ನು ಹೇಳಿ

ಮೂರನೆಯ ತ್ಯಾಗಕ್ಕೆ ಸಂಬಂಧಪಟ್ಟ ಅಸಾಧಾರಣ ವಿಷಯವನ್ನು ಹೇಳುತ್ತಾರೆ. ಷಟ್ಸು= ಆರು ರೀತಿಯಾದ ತ್ಯಾಗಗಳಲ್ಲಿ, ತೃತೀಯಃ= ಉತ್ತರ ಶ್ಲೋಕದಲ್ಲಿ ಎರಡು ವಿಧದಿಂದ ಕೂಡಿದುದು ಎಂದು ಹೇಳಲಿರುವ ಮೂರನೆಯ ತ್ಯಾಗವು, ದುಷ್ಕರಃ= ಮಾಡಲು ಅಶಕ್ಯವಾದುದು. ತೇನ= ಅಂತಹ ತೃತೀಯ ತ್ಯಾಗದಿಂದ, ಅಧ್ಯಾತ್ಮಾದಿ ಭೇದದಿಂದ ಭಿನ್ನವಾದ, ದುಃಖಂ= ಸಂಸಾರ ದುಃಖವನ್ನು, ತರಂತಿ= ದಾಟುತ್ತಾರೆ. ತಸ್ಮಿನ್ ತ್ಯಕ್ತೇ= ಆ ತೃತೀಯ ತ್ಯಾಗವು ಆಚರಿಸಲ್ಪಡುತ್ತಿರಲು, ಸರ್ವಂ= ಎಲ್ಲವೂ, ಜಿತಂ ಭವೇತ್= ಜಿತವಾಗುತ್ತದೆ.

**ಅರ್ಹತೇ ಯಾಚಮಾನಾಯ ಪುತ್ರಾನ್ ವಿತ್ತಂ ದದಾತಿ ಯತ್ ।**
**ಇಷ್ಟಾಪೂರ್ತಂ ದ್ವಿತೀಯಂ ಸ್ಯಾನ್ನಿತ್ಯಂ ವೈರಾಗ್ಯಯೋಗತಃ ॥೩೦॥**

ಹಿಂದಿನ ಶ್ಲೋಕದಲ್ಲಿ ಹೇಳಿದ ಷಡ್ವಿಧ ತ್ಯಾಗವನ್ನೇ ಇಲ್ಲಿ ಬಿಡಿಸಿ ತೋರಿಸುತ್ತಾರೆ. ಅರ್ಹತೇ= 'ವಿಪ್ರಾಯ ವೇದವಿದುಷೇ ದರಿದ್ರಾಯ ಕುಟುಂಬಿನೇ' ಎಂಬಂತೆ ವೇದವಿದ್ವಾಂಸನಾಗಿ ಗುಣಸಂಪನ್ನನಾದ ದಾನಯೋಗ್ಯನಾದ ಯಾಚಮಾನಾಯ= ತನ್ನ ಕುಟುಂಬ ನಿರ್ವಹಣೆಗಾಗಿ ದೇಹಿ ಎಂದು ಯಾಚನೆಯನ್ನು ಮಾಡುವ ಗುಣಸಂಪನ್ನನಾದ ಬ್ರಾಹ್ಮಣನಿಗೆ, ಪುತ್ರಾನ್= ದುಃಖವನ್ನು ಪರಿಹರಿಸುವ ಅಪತ್ಯರನ್ನು, ವಿತ್ತಂ= ಹಿರಣ್ಯಾದಿ ಧನವನ್ನೂ, ಯಃ= ಯಾವ ಜ್ಞಾನಿಯು, ದದಾತಿ= ಕೊಡುತ್ತಾನೆಯೋ, ಇದು ಮೊದಲನೆಯ ದ್ವಿವಿಧವಾದ ತ್ಯಾಗ. ಇದರಿಂದ ಕಾಮಾದಿ ಆರು ತ್ಯಾಗಗಳಲ್ಲಿ ಕ್ರೋಧ, ಲೋಭಗಳ ತ್ಯಾಗವು ಹೇಳಲ್ಪಡುತ್ತದೆ. ಅದರಲ್ಲಿ ಪುತ್ರಾದಿ ತ್ಯಾಗದಿಂದ ಕ್ರೋಧತ್ಯಾಗವೂ, ವಿತ್ತತ್ಯಾಗದಿಂದ ಲೋಭತ್ಯಾಗವೂ ಉಂಟಾಗುತ್ತದೆ. ಪುತ್ರತ್ಯಾಗವು ದಶರಥಾದಿಗಳಲ್ಲಿ ದೃಷ್ಟವಾಗಿದೆ. ವಿತ್ತತ್ಯಾಗವು ಇಷ್ಟಾಪೂರ್ತಾದಿಗಳಲ್ಲಿ ಪ್ರಸಿದ್ಧವಾಗಿದೆ. ನಿತ್ಯಂ= ಬದುಕಿರುವವರೆಗೆ, ವೈರಾಗ್ಯಯೋಗತಃ= ಧನಾದಿ ಸಂಗ್ರಹವು ಅನಿತ್ಯವಾದುದು. ಆದ್ದರಿಂದ ಗಳಿಸಿದ ಧನದಿಂದ ಯಜ್ಞಾದಿಗಳನ್ನು ಮಾಡಿ ಅದನ್ನು ವ್ಯಯ ಮಾಡುವುದೇ ಶ್ರೇಷ್ಠವಾದುದು ಎಂಬ ವೈರಾಗ್ಯಸಂಬಂಧದಿಂದ, ಇಷ್ಟಾಪೂರ್ತಮ್= ಯಜ್ಞಾದಿಗಳನ್ನು ಮಾಡುವುದು ಮತ್ತು ತಟಾಕಾದಿ ನಿರ್ಮಾಣ ಮಾಡುವುದು, ದ್ವಿತೀಯಂ= ಎರಡನೆಯ ವಿಧವಾದ ತ್ಯಾಗ. ಇದರಿಂದ ಮದ-ಮತ್ಸರಗಳ ತ್ಯಾಗವು ಪ್ರದರ್ಶಿಸಲ್ಪಡುತ್ತದೆ. ಪಾರತ್ರಿಕ ನರಕಭೀತಿಯಿಂದ

ಯಜ್ಞವನ್ನು ಮಾಡಿ ವಿತ್ತತ್ಯಾಗವನ್ನು ಮಾಡುವುದರಿಂದ ಮದತ್ಯಾಗವು ತಿಳಿಯುತ್ತದೆ. ಏಕೆಂದರೆ ಮದವಿದ್ದರೆ ಯಜ್ಞಾದಿಗಳನ್ನು ಆಚರಿಸುವುದೇ ಇಲ್ಲ. ಪೂರ್ತಾಚರಣದಿಂದ ಮತ್ಸರ ತ್ಯಾಗವು ಸೂಚಿತವಾಗುತ್ತದೆ. ಏಕೆಂದರೆ ಆ ಧನಿಕನು ಮಾಡಿದ ದೊಡ್ಡ ತಟಾಕ ನಿರ್ಮಾಣವನ್ನು ಮಾಡಿ, ದೊಡ್ಡವನಾಗುತ್ತೇನೆ ಎಂಬ ಮಾತ್ಸರ್ಯವನ್ನು ಬಿಟ್ಟು ಪುಣ್ಯಾರ್ಥವಾಗಿ ತಟಾಕಾದಿ ನಿರ್ಮಾಣಗಳನ್ನು ಮಾಡುತ್ತಾನೆ. ಆ ಕಾರಣದಿಂದ ಮಾತ್ಸರ್ಯ ತ್ಯಾಗವು ಸೂಚಿತವಾಗುತ್ತದೆ.

**ಕಾಮತ್ಯಾಗಶ್ಚ ರಾಜೇಂದ್ರ ಸ ತೃತೀಯ ಇತಿ ಸ್ಮೃತಃ ।**
**ತ್ಯಕ್ತೈವ ವಿಪ್ರಿಯಂ ಭೂಯೋ ನೋಪಯುಂಕ್ತೇ ಚ ಕಾಮತಃ ।**
**ಅಪ್ರಿಯೇ ತು ಸಮುತ್ಪನ್ನೇ ತ್ಯಕ್ತಂ ಜಾತು ನ ವಾಂಛತಿ ॥೩೧॥**

ಈ ಶ್ಲೋಕದಲ್ಲಿ ದುಷ್ಕರವಾದ ಕಾಮತ್ಯಾಗವನ್ನು ಹೇಳುತ್ತಾರೆ. ರಾಜೇಂದ್ರ= ಎಲೈ ರಾಜೇಂದ್ರನೇ, ಕಾಮತ್ಯಾಗಃ= ಕಾಮತ್ಯಾಗವೆಂಬುದು ಏನಿದೆಯೋ, ಸಃ= ಅದು, ತೃತೀಯ ಇತಿ= ಮೂರನೆಯದೆಂದು, ಸ್ಮೃತಃ= ಹೇಳಲ್ಪಡುತ್ತದೆ. ವಿಪ್ರಿಯಂ= ಅಪ್ರಿಯವಾದ ಕಾಮವನ್ನು, ತ್ಯಕ್ತೈವ= ಬಾಲ್ಯದಲ್ಲಿಯೇ ತ್ಯಜಿಸಿ, ಭೂಯಃ= ಪುನಃ, ಕಾಮತಃ= ಕಾಮದಿಂದ, ನೋಪಯುಂಕ್ತೇ= ಇನ್ನೊಮ್ಮೆ ಭೋಗಿಸುವುದಿಲ್ಲ, ಅಪ್ರಿಯೇ= ಅಪ್ರಿಯವಾದ, ಕಾಮೇ= ಕಾಮ್ಯಪದಾರ್ಥದಲ್ಲಿ, ಸಮುತ್ಪನ್ನೇ= ಒಂದು ಸಲ ಬಿದ್ದು ಅದನ್ನು ಬಿಟ್ಟು, ತ್ಯಕ್ತಂ= ಬಿಡಲ್ಪಟ್ಟ ಅದನ್ನು, ಜಾತು= ಎಂದೂ, ನ ವಾಂಛತಿ= ಬಯಸುವುದಿಲ್ಲ. ಇದರಿಂದ ಕಾಮತ್ಯಾಗವೂ ಸಹ ಅಪ್ರಿಯವಾದ ವಸ್ತುವನ್ನು ಬಿಡುವುದು ಮತ್ತು ಪರಿತ್ಯಾಗ ಮಾಡಿದ ವಸ್ತುವನ್ನು ಬಯಸದಿರುವುದು ಎಂದು ಎರಡು ವಿಧವಾದುದು ಎಂದು ಹೇಳಲ್ಪಡುತ್ತದೆ.

**ಅಪ್ರಮಾದೀ ಭವೇದೇತೈಃ ಸ ಚಾಪ್ಯಷ್ಟಗುಣೋ ಮಹಾನ್ ।**
**ಸತ್ಯಂ ನ್ಯೂನಂ(ಧ್ಯಾನಂ) ಸಮಾಧಾನಂ ಚೋದ್ಯಂ ವೈರಾಗ್ಯಮೇವ ಚ ।**
**ಅಸ್ತೇಯೋ ಬ್ರಹ್ಮಚರ್ಯಂ ಚ ತಥಾಽಸಂಗ್ರಹ ಏವ ಚ ॥೩೨॥**

ಏತೈಃ= ಲೋಭಮೋಹಕಾಮ ತ್ಯಾಗಗಳಿಂದ, ಅದರಂತೆ ಕ್ರೋಧ ಮದ ಮತ್ಸರಗಳ ತ್ಯಾಗದಿಂದಲೂ ಎಂದು ಇಟ್ಟುಕೊಳ್ಳಬೇಕು. ಈ ಆರು ತ್ಯಾಗಗಳಿಂದ

ವಿವೇಕಿಯಾದವನು, ಅಪ್ರಮಾದೀ= ಪ್ರಮಾದ ರಹಿತನಾಗುತ್ತಾನೆ. ಸ ಚಾಪಿ= ಆ ಅಪ್ರಮಾದವಾದರೂ, ಅಷ್ಟಗುಣಃ= ಅಷ್ಟಗುಣಗಳಿಂದ ಕೂಡಿ, ಮಹಾನ್= ಶ್ರೇಷ್ಠವಾದುದು, ಅದು ಸತ್ಯ, ನ್ಯೂನ ಮೊದಲಾದ ಎಂಟು ಗುಣಗಳಿಂದ ಕೂಡಿರುತ್ತದೆ. ವಾದಿರಾಜರು–

**ಕಾಮತ್ಯಾಗಶ್ಚ ರಾಜೇಂದ್ರ ಸ ತೃತೀಯ ಉದಾಹೃತಃ ।**
**ಅಪ್ರಮಾದೀ ಭವೇದೇತೈಃ ಸಚಾಪ್ಯಷ್ಟ ಗುಣೋ ಮಹಾನ್ ॥**

ಇತ್ಯಾದಿಯಾಗಿಯೇ ಮೂಲಪಾಠವನ್ನು ಇಟ್ಟುಕೊಂಡು ಇನ್ನೊಂದು ವ್ಯಾಖ್ಯಾನವನ್ನು ಮಾಡಿದ್ದಾರೆ. ರಾಜೇಂದ್ರ= ಎಲೈ ರಾಜೇಂದ್ರನೇ, ಸಃ= ದುಷ್ಕರವೆಂದು ಹೇಳಲ್ಪಟ್ಟ, ಕಾಮತ್ಯಾಗಃ= ವಿವಿಧವಾದ ಕಾಮತ್ಯಾಗವು, ತೃತೀಯಃ= ಮೂರನೆಯದೆಂದು, ಉದಾಹೃತಃ= ಹೇಳಲ್ಪಡುತ್ತದೆ. ವೈರಾಗ್ಯಯೋಗತಃ ಎಂದು ವೈರಾಗ್ಯವನ್ನು ಹೊಂದುವುದು ಒಂದು ವಿಧದ ಕಾಮತ್ಯಾಗ. ವಿಷಯದ ಅಭಿಲಾಷೆಯನ್ನು ತ್ಯಜಿಸುವುದು ಇನ್ನೊಂದು ವಿಧವಾದ ಕಾಮತ್ಯಾಗ ಎಂದು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ ಎಂದು ಅಭಿಪ್ರಾಯ. ಇದರಿಂದ ಡಂಭ ಮತ್ತು ಕಾಮಗಳ ತ್ಯಾಗವು ಸೂಚಿಸಲ್ಪಡುತ್ತದೆ. ಏಕೆಂದರೆ ಡಾಂಭಿಕವಾದ ಕರ್ಮದಲ್ಲಿ ವೈರಾಗ್ಯ ಸಂಬಂಧ ಇರುವುದಿಲ್ಲ. ಆದ್ದರಿಂದ 'ವೈರಾಗ್ಯಯೋಗತಃ' ಎಂಬುದರಿಂದ ಡಂಭವನ್ನು ನಿರಾಕರಣೆ ಮಾಡಿದಂತಾಯಿತು. ಕಾಮ್ಯವಾದ ವಿಷಯಗಳ ತ್ಯಾಗವನ್ನು ಹೇಳಿರುವುದರಿಂದ ಕಾಮತ್ಯಾಗವನ್ನು ಹೇಳಿದಂತಾಯಿತು. ಇಲ್ಲಿ ಹೇಳಿದ ಎರಡು ವಿಧವಾದ ಮೂರನೆಯ ತ್ಯಾಗವು ವೈರಾಗ್ಯದಿಂದ ವಿಷಯ ಪರಿತ್ಯಾಗರೂಪವಾದುದರಿಂದ ವನಿತಾದಿ ವಿಷಯಗಳನ್ನು ಪರಿತ್ಯಾಗ ಮಾಡಲು ಬಹಳ ಕಷ್ಟವಾದುದರಿಂದ ಆರು ತ್ಯಾಗಗಳಲ್ಲಿ ಮೂರನೆಯದಾದ ಈ ತ್ಯಾಗವು ಅತ್ಯಂತ ದುಷ್ಕರವಾದುದು ಎಂದು ಸನತ್ಸುಜಾತರ ಅಭಿಪ್ರಾಯ. ಏತೈಃ= ತಾನು ಸಂಪಾದಿಸಿದ ಈ ಆರು ತ್ಯಾಗಗಳಿಂದ, ಅಪ್ರಮಾದೀ= ಭಗವತ್ಸೇವಾರೂಪವಾದ ವಿಹಿತಾಚರಣೆಯಲ್ಲಿ ಅವಧಾನವುಳ್ಳವನಾಗಿ, ಭವೇತ್= ಆಗುತ್ತಾನೆ. ಇದರಿಂದ ಷಡ್ವಿಧ ತ್ಯಾಗಗುಣಸಂಬಂಧದಿಂದ ಅಪ್ರಮಾದವು ಉಂಟಾಗುತ್ತದೆ ಎಂದು ಸೂಚಿತವಾಗುತ್ತದೆ. ಹೇಳಿದ ಎಲ್ಲ ಗುಣಗಳು ಅಪ್ರಮಾಣದಿಂದಲೇ ಉತ್ಕರ್ಷವನ್ನು ಹೊಂದುವುದರಿಂದ ಅಪ್ರಮಾದ ಗುಣವು ಮಹಾನ್ ಎಂದು ಹೇಳಲ್ಪಡುತ್ತದೆ. ಆ

ಎಂಟುಗುಣಗಳು ಯಾವುವೆಂದರೆ (೧) ಸತ್ಯಂ = ಯಥಾರ್ಥ ಭಾಷಣ ಅಥವಾ ಸಜ್ಜನರಿಗೆ ಹಿತವಾದ ಆಚರಣೆ, (೨) ನ್ಯೂನಂ= 'ನ್ಯೂನಂ ಸ್ಯಾದೂನಗರ್ಹ್ಯಯೋಃ' ಎಂದು ಕೋಶವಿರುವುದರಿಂದ ನಿ ಊನಂ= ಊನಶಬ್ದವಾಚ್ಯವಾದ ಗರ್ಹ್ಯ ಕರ್ಮವು ಇಲ್ಲದಿರುವಿಕೆ ಎಂದರೆ ಅನಿಂದಿತವಾದ ಕರ್ಮಾಚರಣೆ ಎಂದು ಅರ್ಥ (ನಿಂದಿತವಾದ ಕರ್ಮಾಚರಣೆಯ ತ್ಯಾಗವೂ ಒಂದು ಅರ್ಥ). (೩) ಸಮಾಧಾನಂ= ಭಗವಂತನಲ್ಲಿ ಮನಸ್ಸನ್ನು ಚೆನ್ನಾಗಿ ಇಡುವುದು, (೪) ಚೋದ್ಯಂ= ಸಂಶಯವನ್ನು ನಿರಾಸೆ ಮಾಡಿಕೊಳ್ಳಲು ಗುರುಕುಲಕ್ಕೆ ಹೋಗಿ ತತ್ತ್ವವಿಷಯದಲ್ಲಿ ಪ್ರಶ್ನೆಯನ್ನು ಮಾಡುವುದು. ಏಕೆಂದರೆ 'ಪರಿಪ್ರಶ್ನೇನ ಸೇವಯಾ' ಎಂದು ಹೇಳಲ್ಪಟ್ಟಿದೆ. (೫) ವೈರಾಗ್ಯಂ = ವಿಷಯವೈರಾಗ್ಯ. (೬) ಅಸ್ತೇಯಂ= ತನ್ನಲ್ಲಿ ಪರಬ್ರಹ್ಮತತ್ತ್ವವನ್ನು ಅನುಸಂಧಾನ ಮಾಡದಿರುವುದು. ಏಕೆಂದರೆ ಹಿಂದೆಯೇ ತಿಳಿಸಿದಂತೆ ತನಗಿಂತ ಭಿನ್ನನಾದ ಪರಮಾತ್ಮನನ್ನು ತನ್ನಿಂದ ಅಭಿನ್ನನೆಂದು ತಿಳಿದರೆ ಅವನು ಪರಮಾತ್ಮನನ್ನೇ ಅಪಹಾರ ಮಾಡಿದ ಚೋರನೆಂದು ಹೇಳಲ್ಪಟ್ಟಿದೆಯಷ್ಟೆ! (೭) ಬ್ರಹ್ಮಚರ್ಯಂ= ಅಷ್ಟಾಂಗಮೈಥುನ ತ್ಯಾಗ. ಅಷ್ಟಾಂಗ ಮೈಥುನವು ಹೇಳಲ್ಪಟ್ಟಿದೆ.

'ದರ್ಶನಂ ಸ್ಪರ್ಶನಂ ಕೇಲಿಃ ಕೀರ್ತನಂ ಗುಹ್ಯಭಾಷಣಮ್ ।
ಸಂಕಲ್ಪೋಽಧ್ಯವಸಾಯಶ್ಚ ಕ್ರಿಯಾನಿರ್ವೃತ್ತಿರೇವ ಚ ॥

ಪಶು-ಪಕ್ಷಿಗಳ ಮೈಥುನವನ್ನು ನೋಡುವುದು, ಅಪ್ರಿಯರನ್ನು ಸ್ಪರ್ಶ ಮಾಡುವುದು, ಕಾಮವ್ಯಾಪಾರವನ್ನು ಮಾಡುವುದು, ಮೈಥುನದ ಬಗ್ಗೆ ಮಾತನಾಡುವುದು, ಸಂಕೇತ ಭಾಷೆಯಿಂದ ಮಾತನಾಡುವುದು, ಮೈಥುನವನ್ನು ಮಾಡುವೆನೆಂದು ಸಂಕಲ್ಪಿಸುವುದು, ಅನಂತರ ನಿಶ್ಚಯಿಸುವುದು, ಅನಂತರ ಮೈಥುನ ಕ್ರಿಯೆಯನ್ನೇ ನೆರವೇರಿಸುವುದು ಇವು ಅಷ್ಟಾಂಗಗಳಿಂದ ಕೂಡಿದ ಮೈಥುನ. ಈ ಎಲ್ಲದರಿಂದಲೂ ರಹಿತವಾದುದು ಶುದ್ಧವಾದ ಬ್ರಹ್ಮಚರ್ಯ ಎಂದು ಹೇಳಲ್ಪಟ್ಟಿದೆ. (೮) ಅಸಂಗ್ರಹಃ= ತನ್ನ ಜೀವನಕ್ಕೆ ಬೇಕಾದ ಧನಕ್ಕಿಂತ ಹೆಚ್ಚು ಧನವನ್ನು ಸಂಗ್ರಹಿಸದಿರುವುದು. ಹೀಗೆ ಅಪ್ರಮಾದವು ಎಂಟು ಗುಣಗಳಿಂದ ಕೂಡಿರುತ್ತದೆ.

ಏವಂ ದೋಷಾ ದಮಸ್ಯೋಕ್ತಾಃ
ತಾನ್ ದೋಷಾನ್ ಪರಿವರ್ಜಯೇತ್ ।

**ದೋಷತ್ಯಾಗೋऽಪ್ರಮಾದಃ ಸ್ಯಾತ್**
**ಸ ಚಾಪ್ಯಷ್ಟಗುಣೋ ಮತಃ** ॥೩೩॥

'ದಮೋ ಅಷ್ಟಾದಶ ದೋಷಃ ಸ್ಯಾತ್' ಎಂಬುದರಿಂದ ಆರಂಭಿಸಿ 'ಸತ್ಯಂ ನ್ಯೂನಂ' ಎಂಬ ಶ್ಲೋಕದವರೆಗೆ ದಮ-ಶಮಾದಿಗಳ ದೋಷಗಳನ್ನು ನಿರೂಪಣೆ ಮಾಡುವುದರ ಪ್ರಯೋಜನವೆಂದರೆ ಗುಣ-ದೋಷಗಳನ್ನು ತಿಳಿದು ದೋಷವನ್ನು ತ್ಯಾಗ ಮಾಡಿ ಗುಣಗಳನ್ನು ಸಂಪಾದಿಸುವುದೇ ಆಗಿದೆ. ಗುಣದೋಷಗಳ ಜ್ಞಾನವಿಲ್ಲದವರಿಗೆ ಅದರ ಉಪದೇಶವು ಸಾರ್ಥಕವಾಗುತ್ತದೆ ಎಂಬ ದೃಷ್ಟಿಯಿಂದ ಹೇಳುತ್ತಾರೆ.

ಏವಂ= ಈ ರೀತಿಯಾಗಿ, ದಮಸ್ಯ= ದಮಕ್ಕೆ, ಯೇ ದೋಷಾ ಉಕ್ತಾಃ= ಯಾವ ದೋಷಗಳು ಪೂರ್ವದಲ್ಲಿ ಹೇಳಲ್ಪಟ್ಟಿವೆಯೋ, ತಾನ್ ದೋಷಾನ್= ಆ ದೋಷಗಳನ್ನು, ಪರಿವರ್ಜಯೇತ್= ಸರ್ವತ್ರ ಸರ್ವದಾ ಅಧಿಕಾರಿಯಾದ ಪುರುಷನು ತ್ಯಜಿಸಬೇಕು. ಯಃ ಅಪ್ರಮಾದಃ= ಯಾವ ಅಪ್ರಮಾದರೂಪವಾದ ಗುಣವು, ಅಷ್ಟಗುಣಃ= ಎಂಟು ಗುಣಗಳಿಂದ ಕೂಡಿದುದು ಎಂದು, ಮತಃ= ಹೇಳಲ್ಪಡುತ್ತದೆಯೋ, ಸಃ ಅಪಿ= ಆ ಅಪ್ರಮಾದವಾದರೂ, ದೋಷತ್ಯಾಗಃ ಸ್ಯಾತ್= ದೋಷತ್ಯಾಗ ರೂಪವೇ ಆಗಿದೆ. ದಮಾದಿ ಗುಣಗಳ ಸಂಬಂಧಿಯಾದ ದೋಷಗಳಲ್ಲಿ ಹೇಯತ್ವಜ್ಞಾನವನ್ನು ಹೊಂದಿ ಅವುಗಳನ್ನು ಪರಿತ್ಯಾಗ ಮಾಡುವುದೇ ಅಪ್ರಮಾದ. ಆ ದೋಷಪರಿತ್ಯಾಗವನ್ನು ಬಿಟ್ಟು ಅಪ್ರಮಾದ ರೂಪವಾದ ಇನ್ನೊಂದು ಗುಣವಿಲ್ಲ ಎಂದು ಅಭಿಪ್ರಾಯ.

**ತಾಂಸ್ತು ಸತ್ಯಮುಖಾನ್ಯಾಹುಃ ಸತ್ಯೇ ಹ್ಯಮೃತಮಾಹಿತಮ್ ।**
**ಸತ್ಯಾತ್ಮಾ ಭವ ರಾಜೇಂದ್ರ ಸತ್ಯೇ ಲೋಕಾಃ ಪ್ರತಿಷ್ಠಿತಾಃ** ॥೩೪॥

ಈಗ ಸಜ್ಜನನ ಹಿತಾಚರಣದಲ್ಲಿ ರತರಾದ ಸನತ್ಸುಜಾತರು ಧೃತರಾಷ್ಟ್ರರಾಜನು ಮಹಾಧಿಕಾರಿಯಾದ ಧೃತರಾಷ್ಟ್ರನಾಮಕನಾದ ಗಂಧರ್ವನ ಅವತಾರನಾಗಿದ್ದರೂ ಪ್ರಾರಬ್ಧವಶದಿಂದ ದುಷ್ಪುತ್ರನಲ್ಲಿಮಾಡಿದ ಸ್ನೇಹದಿಂದ ಉಂಟಾದ ಕಲ್ಯಾವೇಶದಿಂದ ಅಜ್ಞಾನಾವೃತನಾಗಿ ತನ್ನನ್ನು ಉದ್ಧರಿಸುವ ಸಾಮರ್ಥ್ಯವುಳ್ಳ ಶ್ರೀಕೃಷ್ಣ ಪಕ್ಷದಲ್ಲಿರುವ ದೇವೋತ್ತಮರ ಅವತಾರವಾದ ಪಾಂಡವರಿಗೆ ವಿರೋಧ ಮಾಡಿದ ಅಪರಾಧದ

ಕಾರಣದಿಂದ ಮನಸ್ಸಮಾಧಾನವನ್ನು ಹೊಂದದಿರುವುದರಿಂದ ಕೃಷ್ಣನ ಅನುಗ್ರಹದಿಂದಲೇ ಮನಸ್ಸಮಾಧಾನವುಂಟಾಗುವುದೆಂದು ತಿಳಿದು, ಅವನ ಅನುಗ್ರಹವನ್ನು ಹೊಂದಲು ಅವನಿಗೆ ಹಿತವಾದುದನ್ನು ಆಚರಿಸುವಂತಹ ಸೇವೆಯನ್ನೇ ನೀನು ಮಾಡಬೇಕು ಎಂಬ ಉಪದೇಶಗರ್ಭಿತವಾದ ಸತ್ಯಪ್ರಶಂಸೆಯನ್ನು ಮಾಡುತ್ತಾರೆ.

ತಾನ್= ಹಿಂದೆ ಹೇಳಿದ ತ್ಯಾಗ ಗುಣಗಳನ್ನು, ಸತ್ಯಮುಖಾನಿ= **'ಯತ್ ಸತಾಂ ಹಿತಮತ್ಯಂತಂ ತತ್ಸತ್ಯಮಿತಿ ಚೋಚ್ಯತೇ'**, **'ಯತ್ಸತಾಂ ಧಾರಕೋ ಧರ್ಮಃ'** ಇತ್ಯಾದಿ ಪ್ರಮಾಣಗಳಿಂದ ಸಿದ್ಧವಾದ ಸಜ್ಜನರ ಹಿತಾಚರಣ ರೂಪವಾದ ಸತ್ಯಶಬ್ದವಾಚ್ಯವಾದ ಧರ್ಮವೇ, ಮುಖ ಎಂದರೆ ಪ್ರಧಾನವಾದುದನ್ನಾಗಿ ಅಥವಾ ಉಳಿದ ಗುಣಗಳಿಗೆ ಮುಖ್ಯತ್ವಾಪಾದಕವಾಗಿ ಇರುವುದೆಂದು ಆ ಗುಣಗಳನ್ನು, ಆಹುಃ= ಜ್ಞಾನಿಗಳು ಹೇಳುತ್ತಾರೆ.

**ಸತಾಮನಿಷ್ಟಕರಣಾದ್ ಧರ್ಮಹಾನಿಃ ಪದೇ ಪದೇ ।**
**ತೇಷಾಮೇವೇಷ್ಟಕರಣಾದ್ ಧರ್ಮವೃದ್ಧಿಃ ಪದೇ ಪದೇ ॥**

(ಸಜ್ಜನರಿಗೆ ಅನಿಷ್ಟವನ್ನು ಮಾಡುವುದರಿಂದ ಹೆಜ್ಜೆ ಹೆಜ್ಜೆಗೂ ಧರ್ಮಹಾನಿಯಾಗುತ್ತದೆ. ಅವರಿಗೇ ಇಷ್ಟವನ್ನು ಮಾಡುವುದರಿಂದ ಹೆಜ್ಜೆ ಹೆಜ್ಜೆಗೂ ಧರ್ಮದ ಅಭಿವೃದ್ಧಿಯಾಗುತ್ತದೆ) ಎಂಬ ವಾಕ್ಯವನ್ನು ಪ್ರಮಾಣವಾಗಿ ಉದಾಹರಿಸಿದಂತೆ ಆಗುತ್ತದೆ. ಎಲ್ಲಾ ಧರ್ಮಗಳೂ ಸತ್ಯಮುಖವಾಗುವುದಕ್ಕೆ ಕಾರಣವನ್ನು ಹೇಳುತ್ತಾರೆ. ಅದೇನೆಂದರೆ– ಸತ್ಯೇ= ಸದ್ಧಿತಾಚರಣರೂಪವಾದ ಧರ್ಮದಲ್ಲಿ, ಅಮೃತಂ= ಮೋಕ್ಷವು, ಆಹಿತಂ= ಸ್ಥಾಪಿತವಾಗಿದೆ, ಸತ್ಯದ ಅಧೀನವಾಗಿದೆ ಎಂದು ಅರ್ಥ. **'ಸತ್ಯೇನ ನ ಸುವರ್ಗಾಲ್ಲೋಕಾಚ್ಚ್ಯವಂತೇ ತಸ್ಮಾತ್ ಸತ್ಯಂ ಪರಮಂ ವದಂತಿ'** (ಒಳ್ಳೆಯ ಭೋಗವಿರುವ ಮೋಕ್ಷದಿಂದ ಸತ್ಯವನ್ನು ಆಚರಿಸುವ ಜೀವನು ಚ್ಯುತನಾಗುವುದಿಲ್ಲ) **'ಮಹತ್ಸೇವಾಂ ದ್ವಾರಮಾಹುರ್ವಿಮುಕ್ತೇಃ'** (ದೊಡ್ಡವರ ಸೇವೆಯೇ ಮೋಕ್ಷಕ್ಕೆ ದ್ವಾರವೆಂದು ಹೇಳುತ್ತಾರೆ) ಇತ್ಯಾದಿ ಶ್ರುತಿ-ಸ್ಮೃತಿಗಳು ಈ ವಿಷಯದಲ್ಲಿ ಪ್ರಮಾಣವಾಗಿವೆ. ಆದ್ದರಿಂದ ಮಹಾಫಲವನ್ನು ಪಡೆಯಲು ಆಶಿಸುವ ಪುರುಷನು ಮಹತ್ಸೇವೆಯನ್ನೇ ಮಾಡಬೇಕೆಂದು ಅಭಿಪ್ರಾಯ. ಅಥವಾ ಸತ್ಯೇ= ಯಥಾರ್ಥಭಾಷಣರೂಪ ಸತ್ಯನಾಮಕವಾದ ಧರ್ಮದಲ್ಲಿ, ಅಮೃತಂ=

ಸ್ವರ್ಗಾದಿಗಳು, ಆಹಿತಂ= ಸ್ಥಾಪಿತವಾಗಿವೆ ಎಂದು ಹೇಳುತ್ತಾರೆ. ಹೀಗೆ ಸತ್ಯರೂಪವಾದ ಧರ್ಮವೇ ಎಲ್ಲ ಧರ್ಮಗಳಲ್ಲಿಯೂ ಶ್ರೇಷ್ಠವಾದುದರಿಂದ ಈಗ ಅಂತಹ ಸತ್ಯದ ಅನುಷ್ಠಾನದಿಂದ ನಿನಗೂ ಸಹ ಸಜ್ಜನೋತ್ತಮರಾದ ಪಾಂಡವರ ದ್ವೇಷದಿಂದ ಉಂಟಾದ ದೊಡ್ಡ ಅನಿಷ್ಟದ ನಿವೃತ್ತಿಯು ಆದೀತು ಎಂಬ ತಮ್ಮ ಗೂಢವಾದ ಅಭಿಪ್ರಾಯವನ್ನು ಅಭಿವ್ಯಕ್ತಪಡಿಸುವವರಂತೆ ಧೃತರಾಷ್ಟ್ರನನ್ನೇ ಕುರಿತು ನೇರವಾಗಿ ಉಪದೇಶ ಮಾಡುತ್ತಾರೆ. ರಾಜೇಂದ್ರ= ಎಲೈ ರಾಜಶ್ರೇಷ್ಠನಾದ ಧೃತರಾಷ್ಟ್ರನೇ, ನೀನೂ ಸಹ, ಸತ್ಯಾತ್ಮಾ ಭವ= ಸದ್ಧಿತಾಚರಣಶೀಲವಾದ ಮನಸ್ಸುಳ್ಳವನಾಗು. ನಾನು ಹೇಳಿದ ಈ ಧರ್ಮವು ಶಿಷ್ಟರಿಂದ ಪರಿಗೃಹೀತವಾದ ಕಾರಣವಾದ್ದರಿಂದಲೂ ಸಹ ಅನುಷ್ಠೇಯವಾದುದು ಎಂದೂ ಸಹ ತಮ್ಮ ಮಾತನ್ನು ದೃಢೀಕರಿಸಲು ಶಿಷ್ಟಾಚಾರವನ್ನು ತೋರಿಸುತ್ತಾರೆ. ಸತ್ಯೇ= ನಾನು ಹೇಳಿದ ಸತ್ಯದಲ್ಲಿ, ಲೋಕಃ= 'ಲುಕ್ ಪ್ರಕಾಶೇ' ಎಂಬ ಧಾತುವಿರುವುದರಿಂದ ಜ್ಞಾನಪ್ರಕಾಶವುಳ್ಳ ಜ್ಞಾನಿಜನರು, ಪ್ರತಿಷ್ಠಿತಾಃ= ಶ್ರೇಷ್ಠವಾಗಿ ಚಾಂಚಲ್ಯವಿಲ್ಲದೆ ನಿಂತಿದ್ದಾರೆ, ಅಂತಹ ಸತ್ಯದ ಆಚರಣೆಯಲ್ಲಿಯೇ ರತರಾಗಿದ್ದಾರೆ ಎಂದು ಅಭಿಪ್ರಾಯ. ಅದರಿಂದ ಇಂತಹ ಧರ್ಮವನ್ನು ಎಲ್ಲರೂ ಅನುಷ್ಠಾನ ಮಾಡಬೇಕೆಂದು ತಾತ್ಪರ್ಯ.

**ನಿವರ್ತನ್ನೇವ ದೋಷೇಣ ತಪೋವ್ರತಮಿಹಾಚರೇತ್ ।**
**ಏತದ್ ಧಾತೃಕೃತಂ ವೃತ್ತಂ ಸತ್ಯಮೇವ ಸತಾಂ ವ್ರತಮ್ ॥೩೫॥**

ಹೀಗೆ ತಪಸ್ಸಿನಲ್ಲಿ ರತರಾದವರಿಗೆ ತಪಸ್ಸಿನ ಗುಣ-ದೋಷಗಳ ಜ್ಞಾನವು ಅವಶ್ಯಕವಾದುದರಿಂದ ಅವುಗಳನ್ನು ಹೇಳಿ, ಈಗ ನಿರ್ದುಷ್ಟವಾದ ಮತ್ತು ಗುಣ ಸಂಪನ್ನವಾದ ತಪಸ್ಸನ್ನೇ ಸಜ್ಜನರು ಆಚರಿಸಬೇಕು ಎಂದು ವಿಧಾನ ಮಾಡುತ್ತಾರೆ. ನಿವೃತ್ತೇನೇಹ ಎಂಬ ಪಾಠವಿದ್ದಲ್ಲಿ ಇಹ= ಬ್ರಾಹ್ಮಣಜನ್ಮದಲ್ಲಿ, ತಪೋವ್ರತಂ= ತಪೋ ರೂಪವಾದ ವ್ರತವನ್ನು ಎಂದರೆ ಆಚರಣನಿಯಮವನ್ನು, ನಿವೃತ್ತೇನ= ದೋಷ ಪರಿಹಾರ ಪೂರ್ವಕವಾಗಿ, ಆಚರೇತ್= ಆಚರಿಸಬೇಕು. ತಾವು ಹೇಳಿದ ವಿಷಯದಲ್ಲಿ ಶಿಷ್ಟಸಮ್ಮತಿಯನ್ನು ತೋರಿಸುತ್ತಾರೆ. ಏತತ್= ನಾನು ಹೇಳಿದ ಈ ತಪಸ್ಸಿನ ಆಚರಣೆಯು ಧಾತೃಕೃತಂ= ಬ್ರಹ್ಮದೇವರಿಂದಲೂ ಮಾಡಲ್ಪಟ್ಟಿದೆ. 'ಮಯಾ ಕೃತಮ್' ಎಂಬ ಪಾಠವಿದ್ದರೆ ತಾವೂ ಸಹ ಒಬ್ಬ ಋಷಿಯಾದ್ದರಿಂದ ತಮ್ಮ ಆಚರಣೆಯೂ ಎಲ್ಲ

ಋಷಿಗಳ ಆಚರಣೆಗೆ ಅನುಸಾರವಾಗಿರುವುದರಿಂದ ಅದೂ ಪ್ರಮಾಣವಾಗುತ್ತದೆ ಎಂದು ಅಭಿಪ್ರಾಯ. ಅಥವಾ ತಾನೂ ಒಬ್ಬ ಋಷಿಶ್ರೇಷ್ಠನಾದ್ದರಿಂದ ಉಳಿದ ಋಷಿಗಳು ತನ್ನ ಆಚರಣೆಯನ್ನೇ ಅನುಸರಿಸುವುದರಿಂದ ತನ್ನ ಸಮ್ಮತಿಯು ಪ್ರಮಾಣವಾಗುತ್ತದೆ ಎಂದು ಅಭಿಪ್ರಾಯ. ಆದ್ದರಿಂದ ಎಲ್ಲರೂ ಅನುಷ್ಠಾನ ಮಾಡಬೇಕೆಂದು ತಾತ್ಪರ್ಯ. ಈ ವಿಷಯದಲ್ಲಿ ಎಲ್ಲಾ ಶಿಷ್ಟರ ಸಮ್ಮತಿಯನ್ನೂ ಹೇಳುತ್ತಾರೆ. ಸತ್ಯಂ= ನಾನು ಹೇಳಿದ ಈ ಸತ್ಯವೇ, ಸತಾಂ= ಎಲ್ಲ ಸಜ್ಜನರಿಗೂ, ವ್ರತಂ= ಆಚರಣೆಯಾಗಿದೆ. ಮತಂ ಎಂಬ ಪಾಠವಿದ್ದರೆ ಎಲ್ಲ ಸಜ್ಜನರಿಗೂ ಸಮ್ಮತವಾಗಿದೆ ಎಂದು ಅಭಿಪ್ರಾಯ.

**ದೋಷೈರೇತೈರ್ವಿಯುಕ್ತಂ ತು ಗುಣೈರೇತೈಃ ಸಮನ್ವಿತಮ್ ।**
**ಏತತ್ ಸಮೃದ್ಧಮತ್ಯೃದ್ಧಂ ತಪೋ ಭವತಿ ಕೇವಲಮ್ ॥೩೬॥**

ಹೀಗೆ ಸಕಲಶಾಸ್ತ್ರಾರ್ಥ ಸಮ್ಮತಿಯಿಂದ ನಿರ್ದುಷ್ಟವಾದ ಮತ್ತು ಗುಣವಿಶಿಷ್ಟವಾದ ತಪಸ್ಸೇ ಶ್ರೇಷ್ಠವೆಂದು ಸಾಧಿಸಿ ಈಗ ಉಪಸಂಹಾರ ಮಾಡುತ್ತಾ ಕೇವಲ ಋದ್ಧವಾದ ತಪಸ್ಸನ್ನು ಆಚರಿಸಬೇಕೆಂದು ಹೇಳುತ್ತಾರೆ. ಏತೈಃ= ಪೂರ್ವೋಕ್ತ ಕ್ರೋಧಾದಿಗಳಿಂದ, ವಿಯುಕ್ತಂ= ರಹಿತವಾದ, ಏತೈಃ= ಹಿಂದೆ ಹೇಳಿದ, ಗುಣೈಃ= ಜ್ಞಾನಾದಿ ಗುಣಗಳಿಂದ, ಸಮನ್ವಿತಂ= ಕೂಡಿದ, ಏತತ್ತು= ಇಂತಹ ತಪಸ್ಸೇ, ಜ್ಞಾನಿನಾಂ= ಜ್ಞಾನಿಗಳಿಗೆ, ಕೇವಲಂ= ನಿರ್ದುಷ್ಟವೂ ಮತ್ತು ಋದ್ಧ= ಸಮೃದ್ಧವೂ, ಎಂದರೆ ಮೋಕ್ಷದಲ್ಲಿ ಕ್ಲೃಪ್ತವಾದ ಆನಂದ ಜನಕವೂ, ಭವತಿ= ಆಗುತ್ತದೆ. ಆಯಾ ತಪಸ್ಸನ್ನು ಆಚರಿಸುವುದರಿಂದ ಆಯಾ ಕರ್ಮಗಳಿಗೆ ಅಭಿಮಾನಿಗಳಾದ ಆಯಾ ದೇವತೆಗಳನ್ನು ಭಗವದಧೀನರೆಂದು ಅನುಸಂಧಾನ ಮಾಡಿ ಅನುಷ್ಠಾನ ಮಾಡಿದ ಜ್ಞಾನಿಗಳ ತಪಸ್ಸು ಮೋಕ್ಷದಲ್ಲಿ ಕ್ಲೃಪ್ತವಾದ ಆನಂದಾತಿಶಯವನ್ನು ಉಂಟುಮಾಡುತ್ತದೆ ಎಂದು ಅಭಿಪ್ರಾಯ.

**ಯನ್ಮಾಂ ಪೃಚ್ಛಸಿ ರಾಜೇಂದ್ರ ಸಂಕ್ಷೇಪಾದ್ ತದ್ ಬ್ರವೀಮಿ ತೇ ।**
**ಏತತ್ ಪಾಪಹರಂ ಶುದ್ಧಂ ಜನ್ಮಮೃತ್ಯುಜರಾಪಹಮ್ ॥೩೭॥**

ತನ್ನ ಪ್ರಶ್ನೆಗೆ ಉತ್ತರವನ್ನು ಹೇಳುವುದು ಸಮಾಪ್ತವಾದುದರಿಂದ ಇನ್ನು ಸನತ್ಸುಜಾತರು ಸುಮ್ಮನೆ ಕೂಡುತ್ತಾರೆಯೇ ಎಂಬ ಧೃತರಾಷ್ಟ್ರನ ಮನಸ್ಸಿನ ಶಂಕೆಯನ್ನು ಪರಿಹರಿಸುತ್ತಾರೆ.

ರಾಜೇಂದ್ರ= ಎಲೈ ಧೃತರಾಷ್ಟ್ರನೇ, ಇಲ್ಲಿಂದ ಮುಂದೆ ಮಾಂ= ನನ್ನನ್ನು ಕುರಿತು, ಯತ್= ಎಂತಹ ಪ್ರಮೇಯವನ್ನು, ಪೃಚ್ಛಸಿ= ಕೇಳುತ್ತೀಯೋ, ತತ್= ಆ ಪ್ರಮೇಯವನ್ನೂ ಕೂಡ, ಸಂಕ್ಷೇಪಾತ್= ಸಂಕ್ಷೇಪವಾಗಿ, ತೇ= ನಿನಗೆ, ಬ್ರವೀಮಿ= ಹೇಳುವೆನು. ಸನತ್ಸುಜಾತರು ಮುಂದೆ ಹೇಳುವ ವಿಷಯದಲ್ಲಿ ಹೀಗೆ ಪ್ರತಿಜ್ಞೆಯನ್ನು ಮಾಡಿ **'ಪ್ರಮಾದಂ ವೈ ಮೃತ್ಯುಮಹಂ'** ಎಂದು ಆರಂಭಿಸಿ **'ದೋಷೈರೇತೈಃ'** ಎಂಬ ಶ್ಲೋಕದವರೆಗೆ ತಾವು ಹೇಳಿದ ಪ್ರಮೇಯಗಳಿಗೆ ಫಲಶ್ರುತಿಯನ್ನು ಹೇಳುತ್ತಾರೆ. ಏತತ್= ನಾನು ಹೇಳಿದ ಈ ಪ್ರಮೇಯಗಳು, ಶುದ್ಧಂ= ನಿರ್ದುಷ್ಟವಾದುದು, ಪಾಪಹರಂ= ಪಾಪಪರಿಹಾರಕವಾದುದು, ಜನ್ಮಮೃತ್ಯುಜರಾಪಹಂ= ಜನನ-ಮರಣ ಮತ್ತು ಜರಾರೂಪವಾದ ಸಂಸಾರವನ್ನು ನಾಶಮಾಡುವಂತಹದು. ಇದನ್ನು ಯಾರು ಶ್ರವಣ-ಮನನವನ್ನು ಮಾಡುತ್ತಾರೆಯೋ ಅಂತಹವರಿಗೆ ಇಂತಹ ಫಲವು ದೊರೆಯುವುದು ಎಂದು ಅಭಿಪ್ರಾಯ.

**ಧೃತರಾಷ್ಟ್ರಃ**

**ಋದ್ಧಾತ್ಯೃದ್ಧವಿಭೇದಂ ಮೇ ಕಥಯಸ್ವ ಮಹಾಮುನೇ ॥೩೮॥**

**ಧೃತರಾಷ್ಟ್ರ**– ಎಲೈ ಮಹಾಮುನಿಗಳಾದ ಸನತ್ಸುಜಾತರೇ, ನನಗೆ ಋದ್ಧ ಮತ್ತು ಅತ್ಯೃದ್ಧವಾದ ತಪಸ್ಸಿನ ಭೇದಗಳನ್ನು ತಿಳಿಸಿ.

**ಸನತ್ಸುಮಾರಃ**

**ಋದ್ಧಂ ತದ್ ಬ್ರಾಹ್ಮಣಾನಾಂ ಯದ್ ಅತ್ಯೃದ್ಧಮಿಹ ಕಾಮಿನಾಮ್ ॥**

**ಸನತ್ಸುಮಾರ**– ಬ್ರಾಹ್ಮಣಾನಾಂ= ಬ್ರಹ್ಮಜ್ಞಾನಿಗಳಿಗೆ, ಯದ್= ಯಾವ ತಪಸ್ಸು, ಋದ್ಧಂ= ಋದ್ಧವೆನಿಸುತ್ತದೆಯೋ, ತದ್= ಅದೇ, ಕಾಮಿನಾಮ್= ಕಾಮ್ಯ ಕರ್ಮವನ್ನು ಮಾಡುವವರಿಗೆ, ಇಹ= ಈ ಲೋಕದಲ್ಲಿ, ಅತ್ಯೃದ್ಧ್ಯಂ= ಅತಿಯಾಗಿ ಋದ್ಧವೆನಿಸುತ್ತದೆ.

**ಇಂದ್ರಿಯೇಭ್ಯಶ್ಚ ಪಂಚಭ್ಯೋ ಮನಸಶ್ಚೈವ ಭಾರತ ।**
**ಅತೀತಾನಾಗತೇಭ್ಯಶ್ಚ ಮುಕ್ತಶ್ಚೇತ್ ಸ ಸುಖೀ ಭವೇತ್ ॥೪೦॥**

ಸನತ್ಸುಜಾತರಾದ ನೀವು ಹೇಳಿದ ಪ್ರಮೇಯ ಶ್ರವಣದಿಂದ ಜನನ-ಮರಣ ರೂಪವಾದ ಸಂಸಾರವು ನಿರ್ಮೂಲಗೊಂಡು, ಪಾಪಾದ್ಯನಿಷ್ಟಗಳು ನಿವೃತ್ತವಾಗುತ್ತವೆ

ಎಂಬುದು ಹೇಗೆ ಎಂಬ ಶಂಕೆಗೆ ಉತ್ತರವಾಗಿ, 'ನ ತಪೋಽನಶನಾತ್ ತುಲ್ಯಮ್' ಎಂದು ಹಿಂದೆ ಹೇಳಿದ ರೀತಿಯಲ್ಲಿ ಉಪವಾಸಾದಿಗಳನ್ನು ಮಾಡಿ, ವಿಷಯದಲ್ಲೇ ತೊಡಗಿರುವ ಇಂದ್ರಿಯಗಳನ್ನು ತ್ಯಜಿಸಿ, ವಿಷಯವಿರಕ್ತಿಯನ್ನು ಹೊಂದಿ ಅನುಷ್ಠಾನ ಮಾಡಿದ ಶ್ರವಣಾದಿ ಸಾಧನಗಳಿಂದ ಭಗವಂತನು ಸುಪ್ರೀತನಾಗಿ ಅಪರೋಕ್ಷ ಜ್ಞಾನವನ್ನು ಕೊಟ್ಟು, ಸಂಚಿತ ಮತ್ತು ಆಗಾಮಿ ಪಾಪಗಳನ್ನು ನಾಶಮಾಡಿ, ಜೀವನುಕ್ತಿಯನ್ನು ಕೊಡುವುದರಿಂದ ಸರ್ವಾನಿಷ್ಟ ನಿವೃತ್ತಿಯಾಗುತ್ತದೆ ಎಂಬ ಅಭಿಪ್ರಾಯದಿಂದ ಉತ್ತರವನ್ನು ಹೇಳುತ್ತಾರೆ.

ಭಾರತ= ಎಲೈ ಧೃತರಾಷ್ಟ್ರನೇ, ನಾನು ಹೇಳಿದ ನಿರ್ದಿಷ್ಟವಾದ ತಪಸ್ಸು ಮುಂತಾದವುಗಳನ್ನು ಅನುಷ್ಠಾನ ಮಾಡುವ, ಸಃ= ಆ ತಪಸ್ವಿಯಾದ ಪುರುಷನು, ಪಂಚಭ್ಯಃ ಇಂದ್ರಿಯೇಭ್ಯಃ= ಐದು ಜ್ಞಾನೇಂದ್ರಿಯಗಳಿಂದ, ಚಶಬ್ದದಿಂದ ಐದು ಕರ್ಮೇಂದ್ರಿಯಗಳಿಂದಲೂ ಎಂದು ಇಟ್ಟುಕೊಳ್ಳಬೇಕು, ಕರ್ಮೇಂದ್ರಿಯಗಳು ಅಪ್ರಧಾನವಾದುದರಿಂದ ಅದನ್ನು ಚಶಬ್ದದಿಂದ ಸಂಗ್ರಹಿಸಿದ್ದಾರೆ. ಮನಸಶ್ಚ= ನಾನಾ ವಾಸನೆಗಳಿಂದ ತುಂಬಿದ ಮನಸ್ಸಿನಿಂದಲೂ, ಅತೀತಾನಾಗತೇಭ್ಯಃ= ಸಂಚಿತಾಗಾಮಿ ಕರ್ಮಗಳಿಂದಲೂ, ಚಶಬ್ದದಿಂದ ಅನಿಷ್ಟಪುಣ್ಯದಿಂದಲೂ ಎಂದು ಇಟ್ಟುಕೊಳ್ಳಬೇಕು, ಮುಕ್ತಃ= ವಿಮುಕ್ತನಾಗಿ, ಸುಖೀ ಭವೇತ್= ಸ್ವರೂಪಸುಖವುಳ್ಳವನಾಗುತ್ತಾನೆ. ಮೋಕ್ಷದೆಶೆಯಲ್ಲಿ ಪ್ರಾಕೃತ ಇಂದ್ರಿಯಗಳು ನಾಶವನ್ನು ಹೊಂದುವುದರಿಂದ ಅವುಗಳನ್ನು ತ್ಯಜಿಸಿ ಸ್ವರೂಪೇಂದ್ರಿಯದಿಂದಲೇ ಎಲ್ಲ ಸುಖವನ್ನೂ ಅನುಭವಿಸುತ್ತಾನೆ ಎಂದು ಅಭಿಪ್ರಾಯ.

ಸಂಸಾರದಲ್ಲಿಯೂ ಕೂಡ ಐದು ಜ್ಞಾನೇಂದ್ರಿಯಗಳ ಮತ್ತು ಕರ್ಮೇಂದ್ರಿಯಗಳ ಮತ್ತು ಮನಸ್ಸಿನ ಜಯವನ್ನು ಯಥಾಯೋಗ್ಯವಾಗಿ ಪಡೆದು ನಷ್ಟದ್ರವ್ಯದಿಂದ ಉಂಟಾದ ದುಃಖದಿಂದಲೂ, ಅನಾಗತವಾದ ದ್ರವ್ಯದ ಲಾಭಕ್ಕಾಗಿ ಮಾಡುವ ದುಃಖದಿಂದಲೂ ಮುಕ್ತನಾಗಿ ಸುಖದಿಂದಿರುತ್ತಾನೆ ಎಂದು ಅಭಿಪ್ರಾಯ.

**ಧೃತರಾಷ್ಟ್ರಃ**

ಆಖ್ಯಾನಪಂಚಮೈರ್ವೇದೈರ್ಭೂಯಿಷ್ಠಂ ಕಥ್ಯತೇ ಜನಃ ।
ತಥಾ ಚಾನ್ಯೇ ಚತುರ್ವೇದಾಃ ತ್ರಿವೇದಾಶ್ಚ ತಥಾ ಪರೇ ॥೪೧॥

ಸನತ್ಸುಜಾತರ ಮುಖದಿಂದ ಮೋಕ್ಷಸಾಧನವಾದ ತಪಸ್ಸಿನ ಮಹಿಮೆಯನ್ನು ಕೇಳಿದ ಧೃತರಾಷ್ಟ್ರನು ಈಗ ವೇದಾಧ್ಯಯನಸಂಪನ್ನರಾದ ಬ್ರಾಹ್ಮಣರೇ ಸತ್ಪಾತ್ರರೆಂದು ಸಾಮಾನ್ಯವಾಗಿ ತಿಳಿದಿದ್ದರೂ ವಿಶೇಷವಾಗಿ ತಿಳಿಯಲು ಬಯಸಿ, ಲೋಕದಲ್ಲಿ ಭಾರತ ಸಹಿತವಾದ ನಾಲ್ಕುವೇದಗಳನ್ನು ಅಧ್ಯಯನವನ್ನು ಮಾಡಿದ ಪುರುಷರೂ ಇರುತ್ತಾರೆ. ಅವರು ಉತ್ತಮಪಾತ್ರರೆಂದು ಮಹಾಜನರಲ್ಲಿ ಪ್ರಸಿದ್ಧಿಯೂ ಇದೆ. ಆದರೆ ಎಲ್ಲ ಬ್ರಾಹ್ಮಣರೂ ಐದುವೇದಗಳನ್ನು ತಿಳಿದಿರುವುದಿಲ್ಲ. ತಮ್ಮ ಶಕ್ತಿಗೆ ಅನುಗುಣವಾಗಿ ಕೆಲವರು ನಾಲ್ಕು, ಮೂರು, ಎರಡು ಅಥವಾ ಒಂದೇ ವೇದವನ್ನು ತಿಳಿದಿರುತ್ತಾರೆ. ಪಂಚವೇದವನ್ನು ತಿಳಿದವರೇ ಪಾತ್ರರು, ಉಳಿದವರಲ್ಲ ಎಂಬ ನಿಯಮವಿದೆಯೇ? ಅಥವಾ ಯೋಗ್ಯತಾನುಸಾರೇಣ ಉಳಿದವರೂ ಪಾತ್ರರಾಗುತ್ತಾರೆಯೇ ಎಂಬ ನಿರ್ಣಯವಿಲ್ಲದೆ ಪ್ರಶ್ನೆಯನ್ನು ಮಾಡುವ ನನಗೆ ಯಾರು ಉತ್ತಮಪಾತ್ರರು ಎಂಬ ಸಂಶಯವನ್ನು ನಿರಾಕರಿಸಿ ಎಂದು ಎರಡು ಶ್ಲೋಕಗಳಿಂದ ಕೇಳುತ್ತಾನೆ.

ಆಖ್ಯಾನ ಪಂಚಮೈಃ= ಆಖ್ಯಾನ ಎಂದರೆ ಮಹಾಭಾರತರೂಪವಾದ ಇತಿಹಾಸ, ಅದನ್ನೇ ಐದನೆಯ ಸಂಖ್ಯೆಯಾಗಿ ಉಳ್ಳ, ವೇದೈಃ= ನಾಲ್ಕು ವೇದಗಳಿಂದ, ಜನಃ= ಬ್ರಾಹ್ಮಣವರ್ಗವು ಅಥವಾ ಬ್ರಾಹ್ಮಣದೇಹವು, ಭೂಯಿಷ್ಠಮ್= ಅತ್ಯಂತ ಶ್ರೇಷ್ಠವಾದುದು ಎಂದು, ಕಥ್ಯತೇ= ಮಹತ್ವಬುದ್ಧಿಯಿಂದ ತನ್ನನ್ನು ತಾನು ಹೊಗಳಿಕೊಳ್ಳುತ್ತದೆ. ಇಲ್ಲಿ ಕಥ್ಯತೇ ಮತ್ತು ಕತ್ಥತೇ ಎಂದು ಎರಡು ಪಾಠವಿದೆ. ಕಥ್ಯತೇ ಎಂಬ ಪಾಠದಲ್ಲಿ ಎಲ್ಲರಿಂದಲೂ ಹೇಳಲ್ಪಡುತ್ತದೆ ಎಂದು ಇಷ್ಟೇ ಅರ್ಥ. ತಥಾ= ಅದರಂತೆ, ಅನ್ಯೇ= ಕೆಲವರು, ಚತುರ್ವೇದಾಃ= ನಾಲ್ಕುವೇದಗಳನ್ನು ಅಧ್ಯಯನ ಮಾಡಿದವರಾಗಿರುತ್ತಾರೆ. ತಥಾ= ಅದರಂತೆ, ಪರೇ= ಇನ್ನು ಕೆಲವರು, ತ್ರಿವೇದಾಶ್ಚ= ಮೂರುವೇದಗಳನ್ನು ಅಧ್ಯಯನವನ್ನು ಮಾಡಿದವರಾಗಿರುತ್ತಾರೆ. ಪಂಚವೇದಗಳನ್ನು ಅಧ್ಯಯನ ಮಾಡಿದವರಂತೆ ನಾಲ್ಕುವೇದಗಳನ್ನು ಅಥವಾ ಮೂರುವೇದಗಳನ್ನು ಅಧ್ಯಯನ ಮಾಡಿದವರು ತಮ್ಮಲ್ಲಿ ಮಹಾತ್ಮಬುದ್ಧಿಯಿಂದ ತಾವೇ ಶ್ರೇಷ್ಠರೆಂದು ಹೊಗಳಿಕೊಳ್ಳುತ್ತಾರೆ.

ದ್ವಿವೇದಾಶ್ಚೈಕವೇದಾಶ್ಚಾಪ್ಯನೃಚಶ್ಚ ತಥಾ ಪರೇ ।
ಏತೇಷು ಮೇಽಧಿಕಂ ಬ್ರೂಹಿ ಯಮಹಂ ವೇದ ಬ್ರಾಹ್ಮಣಮ್ ॥೪೨॥

ತಥಾ= ಅದರಂತೆ, ಪರೇ= ಇನ್ನು ಕೆಲವರು, ದ್ವಿವೇದಾಃ= ಎರಡೇ ವೇದಗಳನ್ನು ಅಧ್ಯಯನ ಮಾಡಿದವರು, ಏಕವೇದಾಶ್ಚ= ಮತ್ತು ಒಂದೇ ವೇದವನ್ನು ಅಧ್ಯಯನ ಮಾಡಿದವರು ಮತ್ತು, ಅನ್ಯಚಶ್ಚ= ಒಂದು ವೇದವನ್ನೂ ಅಧ್ಯಯನ ಮಾಡದೆ ಧ್ಯಾನದಲ್ಲಿ ನಿರತರಾದವರು. ಏತೇಷು= ಇಷ್ಟು ಜನರಲ್ಲಿ, ಯಂ ಬ್ರಾಹ್ಮಣಮ್= ಯಾವ ಬ್ರಾಹ್ಮಣನು ನಾನು, ಅಧಿಕಂ= ಶ್ರೇಷ್ಠಪಾತ್ರನೆಂದು, ವೇದ= ತಿಳಿಯುವೆನೋ, ಅಂತಹ ಬ್ರಾಹ್ಮಣನನ್ನು, ಬ್ರೂಹಿ= ನನಗೆ ಹೇಳಿ. ಇಲ್ಲೆಲ್ಲಾ ವೇದಗಳನ್ನು ತಿಳಿದವರು ಎಂದರೆ ವೇದಾರ್ಥಜ್ಞಾನವುಳ್ಳವರು ಎಂದೇ ಅರ್ಥ. ಕೇವಲ ವೇದಪಾಠವನ್ನು ಮಾಡಿದವರು ಎಂದು ಅರ್ಥವಲ್ಲ.

**ಸನತ್ಕುಮಾರಃ**

**ಏಕವೇದಸ್ಯ ಚಾಜ್ಞಾನಾದ್ ವೇದಾಸ್ತೇ ಬಹವೋಽಭವನ್ ।**
**ಸತ್ಯಸ್ಯೈಕಸ್ಯ ರಾಜೇಂದ್ರ ಸತ್ಯೇ ಕಶ್ಚಿದವಸ್ಥಿತಃ** ॥೪೩॥

ಹೀಗೆ ಧೃತರಾಷ್ಟ್ರನಿಂದ ಸತ್ಪಾತ್ರರ ವಿಷಯದಲ್ಲಿ ಪ್ರಶ್ನೆ ಮಾಡಲ್ಪಟ್ಟ ಸನತ್ಸುಜಾತರು ಐದು, ನಾಲ್ಕು ಮೊದಲಾದ ಸಂಖ್ಯೆಯ ವೇದಾಧ್ಯಯನವೇ ಬ್ರಾಹ್ಮಣನಿಗೆ ಸತ್ಪಾತ್ರತ್ವವನ್ನು ತಂದುಕೊಡುವುದಿಲ್ಲ. ಆದರೆ ವೇದಮುಖ್ಯಾರ್ಥನಾದ ವಿಷ್ಣುವಿನ ಅನುಸಂಧಾನಪೂರ್ವಕವಾಗಿ ಅಧ್ಯಯನ ಮಾಡುವ ಸ್ವಭಾವವುಳ್ಳವನೇ ಉತ್ತಮಪಾತ್ರನಾಗುತ್ತಾನೆ ಎಂದು ಮುಂದಿನ ಶ್ಲೋಕಗಳಲ್ಲಿ ಹೇಳುವವರಾಗಿ, ವೇದಗಳಿಗೆ ಪರಮಮುಖ್ಯ ಮತ್ತು ಅಮುಖ್ಯ ಎಂಬ ವೃತ್ತಿಗಳಿಂದ ಇರುವ ಅರ್ಥಭೇದಗಳನ್ನು ವೇದಗಳು ಅನಂತವಾದ್ದರಿಂದ, ತಿಳಿಯಲು ಸಾಧ್ಯವಾಗದ ಅಲ್ಪಮತಿಯುಳ್ಳ ಅಧಿಕಾರಿಗಳನ್ನು ಉದ್ಧಾರ ಮಾಡಲು, ಪರಮದಯಾಳುವಾದ ಬ್ರಹ್ಮಾದಿ ದೇವತೆಗಳಿಂದ ಪ್ರಾರ್ಥಿತನಾದ ನಾರಾಯಣನು ವ್ಯಾಸರೂಪದಿಂದ ಅವತಾರ ಮಾಡಿ ಆಯಾ ಅಧಿಕಾರಿಗಳಿಗೆ ಯೋಗ್ಯವಾದ ಭಗವದಪರೋಕ್ಷಜ್ಞಾನದ ಪ್ರಾಪ್ತಿಯ ಸಲುವಾಗಿ ಒಂದೇ ರಾಶಿಯಾಗಿದ್ದ ವೇದವನ್ನು ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ ಎಂಬ ಭಾಗಗಳನ್ನಾಗಿ ಮಾಡಿದರು ಎಂದು ಉಪೋದ್ಘಾತರೂಪವಾಗಿ ಹೇಳುತ್ತಿದ್ದಾರೆ.

ಏಕವೇದಸ್ಯ= ಋಗಾದಿ ವೇದಗಳೆಂಬ ವಿಭಾಗವಿಲ್ಲದಿರುವ, ಅವಿಭಕ್ತವಾದ ವೇದರಾಶಿಯನ್ನು, ಅಜ್ಞಾನಾತ್= ತಿಳಿಯಲು ಅಲ್ಪಾಧಿಕಾರಿಗಳಿಗೆ ಸಾಮರ್ಥ್ಯವಿಲ್ಲದಿದ್ದರಿಂದ, ತೇ ವೇದಾಃ= ಒಂದೇ ಆಗಿದ್ದ ಆ ವೇದಗಳು, ಬಹವಃ ಅಭವನ್= ಋಗಾದಿ ಶಬ್ದವೇದದಿಂದ ಅನೇಕಗಳಾದವು. ಅದನ್ನು–

'ಋಚಃ ಸ ಋಚ ಉದ್ಧೃತ್ಯ ಋಗ್ವೇದಂ ಕೃತವಾನ್ ವಿಭುಃ ।
ಯಜೂಂಷಿ ನಿಗದಾಚ್ಚೈವ ತಥಾ ಸಾಮಾನಿ ಸಾಮತಃ ॥'

(ಅವಿಭಕ್ತವಾದ ವೇದರಾಶಿಯಿಂದ ಋಕ್ಕುಗಳನ್ನೂ, ಯಜುಸ್ಸುಗಳನ್ನೂ, ಸಾಮಗಳನ್ನೂ ತೆಗೆದುಕೊಂಡು ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ ಎಂಬ ನಾಲ್ಕುವೇದಗಳನ್ನು ಮಾಡಿದರು. ಇವುಗಳಿಗೆ ಮೂಲ ಋಗ್ವೇದ, ಮೂಲ ಯಜುರ್ವೇದ ಎಂದು ಹೆಸರು. ಅನಂತರ ಅಧಿಕಾರಿಗಳಿಗೆ ಶಕ್ತಿಹ್ರಾಸವಾದ್ದರಿಂದ ಮೂಲಋಗ್ವೇದದಿಂದ ಕೆಲವೇ ಋಕ್ಕುಗಳನ್ನು ತೆಗೆದುಕೊಂಡು ಅದರಂತೆ ಮೂಲಯಜುರ್ವೇದದಿಂದ ಕೆಲವು ಯಜುಸ್ಸುಗಳನ್ನು ತೆಗೆದುಕೊಂಡು ಈ ಕ್ರಮದಲ್ಲಿ ಇನ್ನೂ ಸಣ್ಣ ಪರಿಮಾಣದ ವೇದಗಳನ್ನು ಮಾಡಿದರು. ಇವುಗಳನ್ನು ಉಪವೇದಗಳು ಎಂದು ಕರೆಯುತ್ತಾರೆ. ಅನಂತರ ಈ ಉಪವೇದಗಳಿಂದ ಅವಾಂತರ ವೇದಗಳು ಮತ್ತು ಶಾಖೆಗಳು ಉಂಟಾದವು ಎಂದು ಋಗ್ಭಾಷ್ಯ ಟೀಕಾ ಟಿಪ್ಪಣಿಯಲ್ಲಿ ಹೇಳಿದ್ದಾರೆ. ಹೀಗೆ ಬಹುಧಾವಿಭಕ್ತವಾದ ವೇದಗಳ ಅಧ್ಯಯನದಿಂದ ಭಗವದಪರೋಕ್ಷ ಜ್ಞಾನರೂಪವಾದ ಮಹಾಫಲವಿರುವುದರಿಂದ ಆ ವೇದಗಳನ್ನು ಅವಶ್ಯವಾಗಿ ಅಧ್ಯಯನ ಮಾಡಬೇಕೆಂದು ಹೇಳುತ್ತಾರೆ.

ರಾಜೇಂದ್ರ= ಎಲೈ ಧೃತರಾಷ್ಟ್ರನೇ, ಏಕಸ್ಯ= ಸಮಾಧಿಕ ಶೂನ್ಯನಾದ ಅಥವಾ ಸ್ವಗತಭೇದವರ್ಜಿತನಾದ, ಸತ್ಯಸ್ಯ= ಪರಬ್ರಹ್ಮನ ಅಥವಾ ಆನಂದಾದಿಪೂರ್ಣನಾದ ನಾರಾಯಣನ, ಜ್ಞಾನವನ್ನು ಪಡೆಯುವ ಸಲುವಾಗಿ ಎಂದು ಇಟ್ಟುಕೊಳ್ಳಬೇಕು, ವೇದಗಳು ಅನೇಕವಾದವು.

'ತಸ್ಯ ಹ ವಾ ಏತಸ್ಯ ಬ್ರಹ್ಮಣೋ ನಾಮ ಸತ್ಯಮ್' (ಈ ಪರಬ್ರಹ್ಮನಿಗೆ ಸತ್ಯವೆಂದು ಹೆಸರು) ಎಂದು ಪ್ರಮಾಣವಿರುವುದರಿಂದ–

'ಉತ್ತಮಾನಂದಸಂವಿದ್ಭ್ಯಾಂ ಪೂರ್ಣತ್ವಾದನಿಶಂ ಹರಿಃ ।
ಸತ್ಯ ಇತ್ಯುಚ್ಯತೇ ವೇದೈಃ ಸತ್ಯಸಂಕಲ್ಪತಃ ಸದಾ ॥'

(ಶ್ರೇಷ್ಠವಾದ ಜ್ಞಾನಾನಂದಗಳಿಂದ ಯಾವಾಗಲೂ ಪೂರ್ಣನಾಗಿರುವುದರಿಂದ ಮತ್ತು ಸತ್ಯಸಂಕಲ್ಪನಾಗಿರುವುದರಿಂದ ಹರಿಯು ವೇದಗಳಲ್ಲಿ ಸತ್ಯನೆಂದು ಹೇಳಲ್ಪಡುತ್ತಾನೆ ಎಂಬ ಪ್ರಮಾಣಗಳು ಇರುವುದರಿಂದ ಸತ್ಯಶಬ್ದಕ್ಕೆ ಹರಿ ಎಂದು ಅರ್ಥ). ಅಂತಹ ವೇದಧ್ಯಯನದಿಂದ ಭಗವದಪರೋಕ್ಷವನ್ನು ಪಡೆಯುವದಾರು ಯಾರು ಎಂಬುದಕ್ಕೆ ಉತ್ತರವನ್ನು ಹೇಳುತ್ತಾರೆ.

ರಾಜೇಂದ್ರ= ಎಲೈ ಧೃತರಾಷ್ಟ್ರನೇ, ಸತ್ಯೇ= ಅಂತಹ ಹಿಂದೆ ಹೇಳಿದ ಹರಿಯಲ್ಲಿ, ಕಶ್ಚಿತ್ಕೈಃ= ಕಃ ಎಂದರೆ ಸುಖ, ಚಿತ್ ಎಂದರೆ ಜ್ಞಾನ, ಎಂದರೆ ಸ್ವರೂಪದಲ್ಲಿ ಜ್ಞಾನಾನಂದರೂಪಿಯಾದ ಅಧಿಕಾರಿಯು ಮಾತ್ರ, ಅವಸ್ಥಿತಃ= ನಿಷ್ಠೆಯನ್ನು ಹೊಂದಿರುತ್ತಾನೆ. ವೇದಾಧ್ಯಯನವನ್ನು ಮಾಡಿದವರಿಗೆಲ್ಲಾ ಭಗವದಪರೋಕ್ಷಜ್ಞಾನವು ಉಂಟಾಗುವುದಿಲ್ಲ. ಸಾತ್ವಿಕನಾದ ಅಧಿಕಾರಿಗೆ ಮಾತ್ರ ಉಂಟಾಗುತ್ತದೆ ಎಂದು ಅಭಿಪ್ರಾಯ. ಈ ವಿಷಯವು '**ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ**' (ಎಲ್ಲರೂ ಪ್ರಯತ್ನಪಟ್ಟರೂ ಸಾಧನಪೂರ್ತಿಯನ್ನು ಮಾಡಿದ ಸಾತ್ವಿಕಾಧಿಕಾರಿಯೊಬ್ಬನೇ ನನ್ನನ್ನು ತಿಳಿಯುತ್ತಾನೆ ಮತ್ತು ಹೊಂದುತ್ತಾನೆ) ಎಂಬ ಗೀತಾವಚನವು ಪ್ರಮಾಣವಾಗುತ್ತದೆ. ಅಥವಾ ಕಃ ಎಂದರೆ ವಾಯು, ಚಿತ್ ಎಂದರೆ ತನಗಿಂತ ಅವರವಾದ ಎಲ್ಲವನ್ನೂ ತಿಳಿದಿರುವುದರಿಂದ ಅವರಿಗೇ ಚಿತ್ ಎಂದು ಹೆಸರು. ಕಶ್ಚಿತ್ ಎಂದರೆ ಮುಖ್ಯಪ್ರಾಣ, ಅವನು ಸತ್ಯೇ= ನಿರ್ದುಷ್ಟನಾದ, ಜ್ಞಾನಾನಂದ ಪೂರ್ಣನಾದ ಭಗವಂತನಲ್ಲಿ, ಅವಸ್ಥಿತಃ= ಎಲ್ಲ ವೇದಗಳೂ ಭಗವತ್ಪರವೆಂದು ತಿಳಿದು ಅಖಂಡ ಭಕ್ತಿಯುಳ್ಳವನಾಗಿ ಆ ಪರಮಾತ್ಮನಲ್ಲಿಯೇ ಸ್ಥಿತನಾಗಿದ್ದಾನೆಂದು ಅಭಿಪ್ರಾಯ.

**ಯ ಏನಂ ವೇದ ತತ್ಸತ್ಯಂ ಪ್ರಾಜ್ಞೋ ಭವತಿ ನಿತ್ಯದಾ ।**
**ದಾನಮಧ್ಯಯನಂ ಯಜ್ಞೋ ಲೋಭಾದೇತತ್ ಪ್ರವರ್ತತೇ ॥೪೪॥**

ತತ್= ಆ ಕಾರಣದಿಂದ, ಯಃ= ಯಾವ ವಾಯುದೇವರು, ಏನಂ= ಈ ಪ್ರಪಂಚವನ್ನು, ಸತ್ಯಂ= ಸತ್ಯವೆಂದು ತಿಳಿಯುತ್ತಾರೆಯೋ ಆ ವಾಯುದೇವರು, ಪ್ರಾಜ್ಞಃ= ಪ್ರಜ್ಞಾಸಂಬಂಧಿಯಾದ ಪೂರ್ಣಪ್ರಜ್ಞನಾಮವುಳ್ಳವರಾಗಿ, ಭವತಿ= ಆಗುತ್ತಾರೆ (ಅಥವಾ ಹಿಂದಿನ ಶ್ಲೋಕದ ಉತ್ತರಾರ್ಧದ ಜೊತೆಯಲ್ಲಿ ಸೇರಿಸಿ ಹೀಗೂ ವ್ಯಾಖ್ಯಾನ ಮಾಡಬಹುದು). ಏಕಸ್ಯ= ಜಗತ್ತಿನಲ್ಲೂ ಬ್ರಹ್ಮನಲ್ಲಿಯೂ, ಒಂದೇ ರೂಪವಾಗಿರುವ,

ಸತ್ಯಸ್ಯ= ಭಾವಪ್ರಧಾನ ನಿರ್ದೇಶವಾದುದರಿಂದ, ಪಾರಮಾರ್ಥಿಕ ಸತ್ಯತ್ವದ ಎಂದು ಅರ್ಥ. ಅಜ್ಞಾನಾತ್= ಜ್ಞಾನವಿಲ್ಲದಿರುವುದರಿಂದ ಒಬ್ಬವಾದಿಯು ಅನೇಕ ವಿಧವಾದ ಸತ್ಯತ್ವವನ್ನು ಅಂಗೀಕರಿಸುತ್ತಾನೆ. ತತ್= ಆ ಕಾರಣದಿಂದ, ಏನಂ= ಈ ಪ್ರಪಂಚವನ್ನು, ಸತ್ಯಂ= ಪಾರಮಾರ್ಥಿಕ ಸತ್ಯವೆಂದು, ಯಃ ವೇದ= ಯಾವನು ತಿಳಿಯುತ್ತಾನೆಯೋ, ಸಃ= ಅವನು, ನಿತ್ಯದಾ= ಯಾವಾಗಲೂ, ಪ್ರಾಜ್ಞೋ ಭವತಿ= ಪ್ರಾಜ್ಞನಾಗುತ್ತಾನೆ. ದಾನಂ= ದಾನವು, ಅಧ್ಯಯನಂ= ಅಧ್ಯಯನವು, ಯಜ್ಞಾ= ಯಜ್ಞವು, ಏತತ್= ಈ ಮೂರು ವಸ್ತುಗಳು, ಲೋಭಾತ್= ಸ್ವರ್ಗರೂಪವಾದ ಫಲದ ಲೋಭದಿಂದ, ಪ್ರವರ್ತತೇ= ಉಂಟಾಗುತ್ತದೆ.

**ಸತ್ಯಾತ್ ಪ್ರಚ್ಯವಮಾನಾನಾಂ ಸಂಕಲ್ಪಶ್ಚ ವೃಥಾ ಭವೇತ್ ।**
**ತತಃ ಕರ್ಮ ಪ್ರಭಾಸೇತ ಸತ್ಯಸ್ಯಾನವಧಾರಣಾತ್** ॥೪೫॥

'ಸ್ವರ್ಗಕಾಮೋ ಯಜೇತ' ಇತ್ಯಾದಿ ವೇದವಾಕ್ಯವಿಹಿತವಾದ ಯಾಗಗಳನ್ನು ಅನುಷ್ಠಾನ ಮಾಡಿ, ಅದರಿಂದ ಪ್ರಸನ್ನರಾದ ದೇವತೆಗಳ ಅನುಗ್ರಹದಿಂದಲೇ ಸ್ವರ್ಗಾದಿ ಪುರುಷಾರ್ಥವು ಈ ಪ್ರಕಾರದಿಂದಲೂ ದೊರಕುವುದರಿಂದ ಅತ್ಯಾಯಾಸ ಸಾಧ್ಯವಾದ ಸತ್ಯಶಬ್ದವಾಚ್ಯ ಭಗವದುಪಾಸನಾದಿಗಳನ್ನು ಏಕೆ ಮಾಡಬೇಕೆಂದು ಪ್ರಶ್ನೆಯನ್ನು ಮಾಡಿದರೆ ಅದಕ್ಕೆ ಉತ್ತರವಾಗಿ, ವಿಷ್ಣುಸರ್ವೋತ್ತಮತ್ವ ಜ್ಞಾನವಿಲ್ಲದೆ ಮಿಥ್ಯಾಜ್ಞಾನದಿಂದ ಅನ್ಯದೇವತೆಗಳ ಉಪಾಸನೆಯನ್ನು ಮಾಡಿ, ಅದರಿಂದ ಉಂಟಾದ ಪುಣ್ಯದಿಂದ ನಮಗೆ ಇಷ್ಟವಾದ ಸರ್ವದುಃಖನಿವೃತ್ತಿ ಮತ್ತು ಶಾಶ್ವತ ಸುಖಪ್ರಾಪ್ತಿರೂಪವಾದ ಫಲವು ದೊರೆಯದಿರುವುದರಿಂದ ಅಂತಹ ಅನುಷ್ಠಾನವು ವ್ಯರ್ಥವಾದುದು, ಸತ್ಯನಾಮಕನಾದ ಬ್ರಹ್ಮನ ಉಪಾಸನೆಯನ್ನೇ ಮಾಡಬೇಕು ಎಂದು ಇಲ್ಲಿ ಹೇಳುತ್ತಾರೆ.

ಸತ್ಯಾತ್= ಉತ್ತಮ ಜ್ಞಾನಾನಂದ ರೂಪನಾದ ವಿಷ್ಣುವಿನಿಂದ ಎಂದರೆ ವಿಷ್ಣ್ವೈಕ ನಿಷ್ಠೆಯಿರುವ ಜ್ಞಾನದಿಂದ, ಚ್ಯವಮಾನಾನಾಂ= ಚ್ಯುತಿಯನ್ನು ಹೊಂದುವಂತಹ ಪುರುಷರಿಗೆ, ಸಂಕಲ್ಪಾಃ= 'ಯದಿ ಪಿತೃಲೋಕಕಾಮಃ' ಇತ್ಯಾದಿ ಉಪನಿಷದ್ವಾಕ್ಯಗಳಲ್ಲಿ ಹೇಳಿದ ಸಂಕಲ್ಪಗಳು, ವಿತಥಾ ಭವನ್= ವ್ಯರ್ಥವಾಗುತ್ತವೆ. ವೃಥಾ ಭವೇತ್ ಎಂಬ ಪಾಠಕ್ಕೆ ಬದಲಾಗಿ ವೃಥಾ ಭವನ್ ಎಂಬ ಪಾಠವನ್ನು ಇಟ್ಟುಕೊಂಡಿದ್ದಾರೆ. ತತಃ=

ಹಿಂದೆ ಹೇಳಿದಂತೆ ಸಂಕಲ್ಪವು ವ್ಯರ್ಥವಾದ ಮೇಲೆ, ಸತ್ಯಸ್ಯ= ಸತ್ಯಶಬ್ದಾಭಿಧೇಯನಾದ ಬ್ರಹ್ಮನ, ಅನವಧಾರಣಾತ್= ದುಷ್ಟವಾದ ಮತ್ತು ವ್ಯರ್ಥವಾದ ಜ್ಞಾನವನ್ನು ಹೊಂದಿ ಸರಿಯಾದ ಜ್ಞಾನವು ಇಲ್ಲದಿರುವ ಕಾರಣದಿಂದ, ಕರ್ಮ= ಕಾಮ್ಯಫಲವನ್ನು ಕೊಡುವ ಕಾಮ್ಯಕರ್ಮವು, ಪ್ರಭಾಸೇತ= ಜ್ಞಾನರೂಪವಾಗಿ ತೋರುತ್ತದೆ. ಅಥವಾ ಕರ್ಮ= ಪ್ರವೃತ್ತಿ ಕರ್ಮವೇ, ಪ್ರ= ಶ್ರೇಷ್ಠವಾಗಿ, ಭಾಸೇತ= ತೋರುತ್ತದೆ. '**ಪ್ರಕಾಶೋ ಜ್ಞಾನಮಾಲೋಕೋ ಲೋಕೋ ಭಾಸಶ್ಚ ಕಥ್ಯತೇ**' ಎಂದು ಕೋಶವಿರುವುದರಿಂದ ಭಾಸೇತ ಎಂಬ ಕ್ರಿಯಾಪದಕ್ಕೇ ಪ್ರಕಾಶಿಸುತ್ತದೆ ಎಂದು ಅರ್ಥವನ್ನು ಮಾಡಿದೆ. '**ಅನೇವಂವಿತ್ ಮಹತ್ ಪುಣ್ಯಂ ಕರ್ಮ ಕರೋತಿ ತದ್ಧಾಸ್ಯಾಂತತಃ ಕ್ಷೀಯತ ಏವ**' (ಬ್ರಹ್ಮಜ್ಞಾನವಿಲ್ಲದವನು ದೊಡ್ಡಪುಣ್ಯಕರ್ಮವನ್ನು ಮಾಡಿದರೂ ಅದರ ಫಲವು ಕೊನೆಗೆ ನಾಶವನ್ನೇ ಹೊಂದುತ್ತದೆ), '**ಯಕ್ಷ್ಯೇ ದಾಸ್ಯಾಮಿ ಮೋದಿಷ್ಯ ಇತ್ಯಜ್ಞಾನವಿಮೋಹಿತಾಃ**' (ನಾನು ಯಜ್ಞವನ್ನು ಮಾಡುವೆನು, ದಾನವನ್ನು ಮಾಡುವೆನು, ಅದರಿಂದ ಸುಖವನ್ನು ಹೊಂದುವೆನು ಎಂಬ ಭ್ರಾಂತಿಯಿಂದ ಮೋಹಿತರಾಗಿರುತ್ತಾರೆ). ಮೊದಲಾದ ಪ್ರಮಾಣಗಳಿಗೆ ಅನುಸಾರವಾಗಿ ಜ್ಞಾನಶೂನ್ಯವಾದ ಕರ್ಮಗಳು ಅಜ್ಞಾನವೇ ಮೊದಲಾದ ಅನರ್ಥವನ್ನು ಕೊಡುತ್ತವೆ ಎಂದು ತಾತ್ಪರ್ಯ.

ಭಾರತ ಶ್ರೀನಿವಾಸಾಚಾರ್ಯರು ಭಾಗವತ ತೃತೀಯಸ್ಕಂದದ ತಾತ್ಪರ್ಯದಲ್ಲಿ ಉದಾಹರಿಸಿದ ವಾಮನ ಪುರಾಣವನ್ನು ಉದಾಹರಿಸಿ –

**ಈಶದ್ಭಕ್ತೋ ಭಗವತಿ ಸುಕರ್ಮಾ ಸ್ವರ್ಗಮೇಷ್ಯತಿ ।**
**ಅಭಕ್ತೋ ನರಕಂ ಯಾತಿ ಸುಕರ್ಮಾಪಿ ನ ಸಂಶಯಃ ॥**

ಹರಿಯಲ್ಲಿ ಸ್ವಲ್ಪ ಭಕ್ತಿಯುಳ್ಳವನು ಒಳ್ಳೆಯ ಕರ್ಮವನ್ನು ಮಾಡಿ ಸ್ವರ್ಗಕ್ಕೆ ಹೋಗುತ್ತಾನೆ. ಹರಿಭಕ್ತಿ ಇಲ್ಲದವನು ಒಳ್ಳೆಯ ಕರ್ಮವನ್ನು ಮಾಡಿದರೂ ನರಕಕ್ಕೆ ಹೋಗುತ್ತಾನೆ. ಈ ವಿಷಯದಲ್ಲಿ ಸಂಶಯವಿಲ್ಲ ಎಂದು ಹೇಳಿ ಬ್ರಹ್ಮಜ್ಞಾನವಿಲ್ಲದೆ ವೇದಪಾಠವನ್ನು ಮಾಡುವ ಪುರುಷನು ಪುನಃ ಪುನಃ ಸಂಸಾರದಲ್ಲಿಯೇ ಬೀಳುತ್ತಾನೆ. ಅವನಿಗೆ ಯಾವಾಗಲೂ ಮುಕ್ತಿಯುಂಟಾಗುವುದಿಲ್ಲ. ಆದ್ದರಿಂದ ಅವನಿಗಿಂತ ಬ್ರಹ್ಮನ ಪರೋಕ್ಷ, ಅಪರೋಕ್ಷಜ್ಞಾನವನ್ನು ಪಡೆದ ಪುರುಷನು ಉತ್ತಮನು ಎಂದು ವ್ಯಾಖ್ಯಾನ ಮಾಡಿರುತ್ತಾರೆ.

ಮನಸಾऽನ್ಯಸ್ಯ ಭವತಿ ವಾಚಾऽನ್ಯಸ್ಯಾಥ ಕರ್ಮಣಾ ।
ಸಂಕಲ್ಪಸಿದ್ಧಃ ಪುರುಷಃ ಸಂಕಲ್ಪಾನಧಿತಿಷ್ಠತಿ ॥೪೬॥

ಮನಸಾ= ಮನಸ್ಸಿನಿಂದ, ಅನ್ಯಸ್ಯ= ಬೇರೆ ವಿಷಯದ ಚಿಂತನೆಯೇ, ಭವತಿ= ಆಗುತ್ತದೆ. ವಾಚಾ= ಮಾತಿನಿಂದ, ಅನ್ಯಸ್ಯ= ಬೇರೆ ವಿಷಯದ ಚಿಂತನೆಯೇ, ಭವತಿ= ಆಗುತ್ತದೆ. ಅಥ= ಮತ್ತು, ಕರ್ಮಣಾ= ಕರ್ಮದಿಂದ, ಅನ್ಯಸ್ಯ= ಬೇರೆ ವಿಷಯಕ್ಕೆ ಸಂಬಂಧಿಸಿದ ಕಾರ್ಯವೇ, ಭವತಿ= ಆಗುತ್ತದೆ. ಇದು ಅಸತ್ಪುರುಷರ ಲಕ್ಷಣ. ಪುರುಷಃ= ಸತ್ಪುರುಷನು ಮಾತ್ರ, ಸಂಕಲ್ಪಸಿದ್ಧಃ= ತನ್ನ ಸಂಕಲ್ಪವನ್ನು ಸಾಧಿಸಿ, ಸಂಕಲ್ಪಾನ್= ಸಂಕಲ್ಪಿತ ಫಲಗಳನ್ನು, ಅಧಿತಿಷ್ಠತಿ= ಪಡೆಯುತ್ತಾನೆ.

ಅನೈಭೃತ್ಯೇನ ವೈತಸ್ಯ ದೀಕ್ಷಿತೋ ವ್ರತಮಾಚರೇತ್ ।
ನಾಮೈತದ್ ಧಾತುನಿರ್ವೃತ್ತಂ ಸತ್ಯಮೇವ ಸತಾಂ ಪರಮ್ ॥೪೭॥

ಏತಸ್ಯ= ಸಂಕಲ್ಪಿತವಾದ ಕಾಮ್ಯಫಲಗಳು, ಅನೈಭೃತ್ಯೇನ= ಅನಿತ್ಯವಾದ ಕಾರಣದಿಂದ, ದೀಕ್ಷಿತಃ= ವೈಷ್ಣವ ದೀಕ್ಷೆಯನ್ನು ಹೊಂದಿದವನಾಗಿ, ವ್ರತಂ= ವೈಷ್ಣವ ವ್ರತವನ್ನು ಅಥವಾ ವಿಷ್ಣುಪ್ರೀತಿಕರವಾದ ವ್ರತವನ್ನು, ಆಚರೇತ್= ಆಚರಿಸಬೇಕು. ಏತತ್ ನಾಮ= ಸತ್ಯವೆಂಬ ಈ ನಾಮವು, ಧಾತುನಿರ್ವೃತ್ತಂ= ಷದ್‌ಲೃ ಎಂಬ ಧಾತುವಿನಿಂದ ಉಂಟಾಗಿದೆ (ಸತ್ಯ ಎಂದರೆ ಜಗತ್ತಿನ ಸೃಷ್ಟಿಕರ್ತ, ಕಾರಣಕರ್ತ ಮತ್ತು ಸಂಹಾರಕರ್ತ ಎಂದು ಅರ್ಥ. ಆ ಕಾರಣದಿಂದ), ಸತಾಂ= ಸಜ್ಜನರಿಗೆ, ಸತ್ಯಮೇವ= ಜಗತ್ತಿನ ಸೃಷ್ಟ್ಯಾದಿಕರ್ತನಾದ ಹರಿಯೇ, ಪರಂ= ಸರ್ವೋತ್ತಮನಾದವನು.

ಜ್ಞಾನಂ ವೈ ನಾಮ ಪ್ರತ್ಯಕ್ಷಂ ಪರೋಕ್ಷಂ ಜಾಯತೇ ತಪಃ ।
ತಸ್ಮಾತ್ ಕ್ಷತ್ರಿಯ ಮಾ ಮಂಸ್ಥಾ ಜಪಿತೇನೈವ ವೈ ದ್ವಿಜಮ್ ॥೪೮॥

ಕ್ಷತ್ರಿಯ= ಎಲೈ ಧೃತರಾಷ್ಟ್ರನೇ, ಜ್ಞಾನಂ ನಾಮ= ಜ್ಞಾನವೆಂಬುದು, ಪ್ರತ್ಯಕ್ಷಂ= ಉಪದೇಶಾದಿಗಳಿಂದ ತಿಳಿಯುವುದಷ್ಟೆ! ತಪಃ= ತಪಸ್ಸಿನ ಅನುಷ್ಠಾನವು, ಪರೋಕ್ಷಂ= ಪ್ರತ್ಯಕ್ಷಕ್ಕೆ ಅವಿಷಯವಾಗಿ, ಜಾಯತೇ= ಉಂಟಾಗುತ್ತದೆ. ತಸ್ಮಾತ್= ಆ ಕಾರಣದಿಂದ, ಜಪಿತೇನೈವ= ಕೇವಲ ವೇದಪಾಠದಿಂದಲೇ, ದ್ವಿಜಂ= ಬ್ರಾಹ್ಮಣನು ಉತ್ತಮ ಪಾತ್ರನೆಂದು, ಮಾ ಮಂಸ್ಥಾಃ= ತಿಳಿಯಬೇಡ.

ವಿದ್ಯಾತ್ ಬಹು ಪಠಂತಂ ತು ದ್ವಿಜಂ ವೈ ಬಹುಪಾಠಿನಮ್ ।
ಯ ಏವ ಸತ್ಯಾನ್ನಾಪೈತಿ ಸ ಜ್ಞೇಯೋ ಬ್ರಾಹ್ಮಣಸ್ತ್ವಯಾ ॥೪೯॥

ಹೀಗೆ ಅನಂತವೇದ ಪ್ರತಿಪಾದ್ಯನೂ, ಆನಂದಚಿದ್ಘನನೂ ಆದ ವಿಷ್ಣುವನ್ನು ಸರ್ವೋತ್ತಮನೆಂದು ತಿಳಿಯುವ ಜ್ಞಾನಿಗೆ ಮಹಾಪುರುಷಾರ್ಥ ಉಂಟಾಗುವುದೆಂದು ಸಂಕ್ಷೇಪವಾಗಿ ಬ್ರಾಹ್ಮಣೋತ್ತಮರ ಸ್ವರೂಪವನ್ನು ತಿಳಿಸಿದ ಸನತ್ಸುಜಾತರು ಈಗ ಉತ್ತಮ ಪಾತ್ರರ ಲಕ್ಷಣವನ್ನು ಸ್ಪಷ್ಟಪಡಿಸುತ್ತಾ ಅಂತಹ ಬ್ರಾಹ್ಮಣರು ಅನೇಕ ವಿಧರಾಗಿರುತ್ತಾರೆ ಎಂದು ಹೇಳುತ್ತಾರೆ.

ಬಹುಪಠಂತಮ್= ಅನೇಕ ಬಾರಿ ವೇದಪಾಠವನ್ನು ಮಾಡುವ, ತುಶಬ್ದವು ಅರ್ಥಜ್ಞಾನವಿಲ್ಲದೆ ಮಾಡುವವನು ಎಂಬುದನ್ನು ಸೂಚಿಸುತ್ತದೆ. ಇಂತಹ ಬ್ರಾಹ್ಮಣನನ್ನು, ಬಹುವಾಗಿತಿ= ಅನೇಕಬಾರಿ ಪಾರಾಯಣ ಮಾಡುವವನು ಎಂದು, ವಿದ್ಯಾತ್= ತಿಳಿಯಬೇಕು. ಪಾತ್ರಸ್ವರೂಪವನ್ನು ವಿಚಾರ ಮಾಡುವ ಪುರುಷನು ಹೀಗೆ ತಿಳಿಯಬೇಕು ಎಂದು ಅಭಿಪ್ರಾಯ.

'ಬಹುಪಾಠಿನಂ' ಎಂಬ ಪಾಠಕ್ಕೆ ಬದಲಾಗಿ ಕೋಶಗಳಲ್ಲಿ 'ಬಹುಪಠಂತಂ' ಎಂಬ ಪಾಠವೂ, ಇನ್ನು ಕೆಲವು ಕೋಶಗಳಲ್ಲಿ 'ಪಠಂತಂ ತಂ ಬಹುವಾಗಿತಿ ಬ್ರಾಹ್ಮಣಂ' ಎಂದೂ ಪಾಠವಿದೆ. ಬಹುವಾಕ್ ಎಂದು ಹೇಳಿದ್ದರಿಂದ ಅಂತಹವನು ಉತ್ತಮಪಾತ್ರನಲ್ಲವೆಂದು ಸೂಚಿತವಾಗುತ್ತದೆ. ಹಾಗಾದರೆ ಬ್ರಾಹ್ಮಣ ಶಬ್ದವಾಚ್ಯನಾದವನು ಯಾರು ಎಂಬ ಪ್ರಶ್ನೆಗೆ ಉತ್ತರವನ್ನು ಹೇಳುತ್ತಾರೆ. ಯಃ= ಯಾವ ಪುರುಷನು, ಸತ್ಯಾತ್= ಜ್ಞಾನಾನಂದಪೂರ್ಣನಾದ ವಿಷ್ಣುವಿನ ಸರ್ವೋತ್ತಮತ್ವ ಜ್ಞಾನದಿಂದ ಅಥವಾ ವೈಷ್ಣವದೀಕ್ಷೆಯಿಂದ, ನಾಪೈತಿ= ದೂರಸರಿಯುವುದಿಲ್ಲವೋ, ಇಲ್ಲಿ ಅಪಯಾನ ಎಂದರೆ ವಿಷ್ಣುಸರ್ವೋತ್ತಮತ್ವ ಜ್ಞಾನಪೂರ್ವಕವಾಗಿ ತಾನು ವೈಷ್ಣವನೆಂದು ತೋರಿಸಿಕೊಳ್ಳಲು ತಪ್ತಮುದ್ರಾದಿ ಧಾರಣೆಯನ್ನು ಮಾಡಿಕೊಳ್ಳದಿರುವುದೇ ಆಗಿದೆ. ಏಷಃ= ಇಂತಹ ಲಕ್ಷಣವುಳ್ಳ ಬ್ರಾಹ್ಮಣನು ಯಾವನಿದ್ದಾನೆಯೋ, ಸಃ= ಅಂತಹ ವೈಷ್ಣವನೇ, ತ್ವಯಾ= ಧೃತರಾಷ್ಟ್ರನಾಮಕನಾದ ನಿನ್ನಿಂದ, ಬ್ರಾಹ್ಮಣಃ= ಬ್ರಾಹ್ಮಣ ಶಬ್ದವಾಚ್ಯನಾದ ಉತ್ತಮಪಾತ್ರನೆಂದು, ಜ್ಞೇಯಃ= ತಿಳಿಯಲ್ಪಡಬೇಕು. ಅವನು ಬಹಳ ವೇದಪಾಠಗಳನ್ನು ಮಾಡದಿದ್ದರೂ ವಿಷ್ಣುವಿನ

ಪ್ರೀತಿಯ ಉದ್ದೇಶದಿಂದಲೇ ವೇದವಿಹಿತವಾದ ನಿತ್ಯನೈಮಿತ್ತಿಕ ಕರ್ಮಗಳನ್ನು ಅನುಷ್ಠಾನ ಮಾಡುವುದರಿಂದ ಅವನೇ ಬ್ರಾಹ್ಮಣಶಬ್ದದಿಂದ ನಿಜವಾಗಿ ಹೇಳಲ್ಪಡುವವನು.

ಪದ್ಮಪುರಾಣದಲ್ಲಿ ಹೀಗೆ ಹೇಳಲ್ಪಟ್ಟಿದೆ–

'ಅಗ್ನಿಹೋತ್ರಂ ಯಥಾ ನಿತ್ಯಂ ವೇದಸ್ಯಾಧ್ಯಯನಂ ಯಥಾ ।
ಬ್ರಾಹ್ಮಣಸ್ಯ ತಥಾ ವೇದಾತ್ ತಪ್ತಮುದ್ರಾಧಿಕಾರಿತಾ ॥

(ಬ್ರಾಹ್ಮಣನಿಗೆ ಅಗ್ನಿಹೋತ್ರವು, ವೇದಾಧ್ಯಯನವು ಹೇಗೆ ನಿತ್ಯವಾಗಿದೆಯೋ ಅದರಂತೆ ವೇದದಿಂದಲೇ ತಪ್ತಮುದ್ರಾಂಕನವೂ ನಿತ್ಯವಾಗಿ ಸಿದ್ಧವಾಗಿದೆ).

ಬ್ರಹ್ಮವೈವರ್ತ ಪುರಾಣದಲ್ಲಿ ಹೀಗೆ ಹೇಳಲ್ಪಟ್ಟಿದೆ–

'ತಪ್ತಚಕ್ರಧರಂ ದೃಷ್ಟ್ವಾ ಯೋ ವೈ ನಿಂದತಿ ಮೂಢಧೀಃ ।
ಸ ಯಾತಿ ನರಕಂ ಘೋರಂ ಯಾವದಾಭೂತಸಂಪ್ಲವಮ್ ॥'

ತಪ್ತಚಕ್ರಾಂಕನವನ್ನು ಹೊಂದಿದ ಮನುಷ್ಯನನ್ನು ನೋಡಿ ಯಾವ ಮೂರ್ಖನು ನಿಂದಿಸುತ್ತಾನೆಯೋ ಅವನು ಪ್ರಳಯಕಾಲದವರೆಗೆ ಘೋರವಾದ ನರಕವನ್ನು ಅನುಭವಿಸುತ್ತಾನೆ. ಬ್ರಹ್ಮವೈವರ್ತ ಪುರಾಣದಲ್ಲಿಯೇ ಹೀಗೆ ಪುನಃ ಹೇಳಲ್ಪಟ್ಟಿದೆ–

'ಉಚ್ಚವರ್ಣೋಪಿ ಯೋ ವಿಪ್ರೋ ವೇದವೇದಾಂಗಪಾರಗಃ ।
ಸದಾಚಾರರತೋಽಪಿ ಸ್ಯಾದ್ ವಿಷ್ಣುದೀಕ್ಷಾವಿವರ್ಜಿತಃ ।
ಸ ಚೋರವದ್ ಬಹಿಷ್ಕಾರ್ಯಸ್ತಸ್ಯೈ ದತ್ತಂ ಚ ನಿಷ್ಫಲಮ್ ॥'

(ಶ್ರೇಷ್ಠವರ್ಣಕ್ಕೆ ಸೇರಿ, ವೇದವೇದಾಂಗಪಾರಗನಾದ ಬ್ರಾಹ್ಮಣನು ಸದಾಚಾರ ಸಂಪನ್ನನಾಗಿದ್ದರೂ ವಿಷ್ಣುದೀಕ್ಷೆ ಇಲ್ಲದಿದ್ದರೆ ಅವನನ್ನು ಕಳ್ಳನಂತೆ ಹೊರಗೆ ಹಾಕಬೇಕು. ಅವನಿಗೆ ಕೊಟ್ಟ ದಾನವು ನಿಷ್ಫಲವಾಗುತ್ತದೆ).

ಮತ್ತು ಶತಪಥಬ್ರಾಹ್ಮಣದಲ್ಲಿ ಹೀಗೆ ಹೇಳಲ್ಪಟ್ಟಿದೆ–

ಸ ಹೋವಾಚ ಯಾಜ್ಞವಲ್ಕ್ಯಃ । ತಸ್ಮಾದಾತ್ಮಹಿತಾಯ ಹರಿಂ ಭಜೇತ್ ।
ಸುಶ್ಲೋಕಮೌಲೇರ್ವರ್ಮಾಣ್ಯಗ್ನಿನಾ ಸಂದಧಾತಿ'

(ಯಾಜ್ಞವಲ್ಕ್ಯರು ಹೀಗೆ ಮಾತನಾಡಿದರು. ಆದ್ದರಿಂದ ತನ್ನ ಹಿತಕ್ಕಾಗಿ ಹರಿಯನ್ನು ಭಜಿಸಬೇಕು. ಕೀರ್ತಿವಂತರಲ್ಲಿ ಅಗ್ರಗಣ್ಯನಾದ ಅವನ ಆಯುಧಗಳನ್ನು ಅಗ್ನಿಯ

ಜೊತೆಯಲ್ಲಿ ದೇಹದಲ್ಲಿ ಧರಿಸಬೇಕು) ಇತ್ಯಾದಿಯಾಗಿ ಹೇಳಲ್ಪಟ್ಟಿವೆ. ಆದ್ದರಿಂದ ವೈಷ್ಣವ ದೀಕ್ಷೆಯುಳ್ಳ ಬ್ರಾಹ್ಮಣನೇ ಉತ್ತಮಪಾತ್ರನಾದವನು. ಕೇವಲ ವೇದಪಾಠಕನಲ್ಲ ಎಂದು ನಾವು ಹೇಳಿದುದು ಯಥಾರ್ಥವಾಗಿದೆ.

ಛಂದಾಂಸಿ ನಾಮ ಕ್ಷತ್ರಿಯ ತಾನ್ಯಥರ್ವಣಃ
ಪುರಾ ಜಗೌ ಮಹರ್ಷಿಸಂಘ ಏಷಃ ।
ಛಂದೋವಿದಸ್ತೇ ಯ ಉತಾನಧೀತವೇದಾ
ನ ವೇದವೇದ್ಯಸ್ಯ ವಿದುರ್ಹಿ ತತ್ವಮ್ ॥೫೦॥

ಛಂದಾಂಸಿ ನಾಮ ದ್ವಿಪದಾಂ ವರಿಷ್ಠ
ಸ್ವಚ್ಛಂದಯೋಗೇನ ಭವಂತಿ ತತ್ರ ।
ಛಂದೋವಿದಸ್ತೇನ ಚ ತಾನಧೀತ್ಯ
ಗತಾ ಹಿ ವೇದಸ್ಯ ನ ವೇದ್ಯಮಾರ್ಯಾಃ ॥೫೧॥

ಹೀಗೆ ಬಹುವೇದ ಪಾಠವನ್ನು ಮಾಡಿದರೂ ಪಠನ ಮಾಡಿದ ವೇದಗಳಿಂದ ಮುಖ್ಯಪ್ರತಿಪಾದ್ಯವಸ್ತುವಾದ ಭಗವಂತನ ಸ್ವರೂಪ ಜ್ಞಾನವಿಲ್ಲದ ಕಾರಣ ಬ್ರಾಹ್ಮಣ ಶಬ್ದವಾಚ್ಯರಾಗುವುದಿಲ್ಲ ಎಂದು ಹೇಳಿ, ಈಗ ಉತ್ತಮ ಬ್ರಾಹ್ಮಣರ ಸ್ವರೂಪವನ್ನು ಹೇಳಲು ಹಿಂದೆ ಹೇಳಿದಂತೆ ವಿಷ್ಣುಜ್ಞಾನಾರ್ಥವಾಗಿಯೇ ಸರ್ವವೇದಗಳ ಪ್ರವೃತ್ತಿ ಎಂದು ಹೇಳುತ್ತಾರೆ. ಅಥವಾ ಎಲ್ಲ ವೇದಗಳೂ ಸತ್ಯಪರವಾದುದರಿಂದ ಸತ್ಯಪರಿತ್ಯಾಗವನ್ನು ಮಾಡಿ, ಅನುಷ್ಠಾನ ಮಾಡಿದ ಸತ್ಕರ್ಮಗಳಿಂದ ಫಲವು ದೊರೆಯದಿರುವುದರಿಂದ ಸತ್ಯಜ್ಞಾನವನ್ನು ಅವಶ್ಯವಾಗಿ ಸಂಪಾದನೆ ಮಾಡಬೇಕೆಂದು ಇಲ್ಲಿ ಹೇಳುತ್ತಾರೆ.

ದ್ವಿಪದಾಂ ವರಿಷ್ಠ= ಎಲೈ ಮನುಷ್ಯಶ್ರೇಷ್ಠನಾದ ಧೃತರಾಷ್ಟ್ರನೇ, ಛಂದಾಂಸಿ= ಸರ್ವವೇದಗಳು, ಸ್ವಚ್ಛಂದಯೋಗೇ= ಗುರೂಪದೇಶವಿಲ್ಲದೆ ತನ್ನ ಇಚ್ಛೆಯಿಂದಲೇ ಪಾಠಾದಿ ಉಪಾಯಗಳ ಪ್ರಯತ್ನವನ್ನು ಮಾಡಿದರೆ, ತತ್ರ= ಹರಿಯಲ್ಲಿ, ನ ಭವಂತಿ ನಾಮ= ಹರಿಯನ್ನು ಸೇರುವುದಿಲ್ಲವಷ್ಟೆ! ಇದರಿಂದ ತನ್ನ ಮನಸ್ಸಿಗೆ ಬಂದಂತೆ ವೇದ ಪಾಠವನ್ನು ಮಾಡುವುದರಿಂದ ಭಗವದ್ಜ್ಞಾನವು ಉಂಟಾಗುವುದಿಲ್ಲವೆಂದು

ತಿಳಿಸಲ್ಪಡುತ್ತದೆ. ಛಂದೋವಿದಃ= ವೇದಗಳಿಗೆ ಗುರುಮುಖದಿಂದ ಅಧ್ಯಯನ ಮಾಡಿದರೆ ಮಾತ್ರ ಜ್ಞಾನಾದಿ ಪ್ರದತ್ವ ಎಂಬ ಜ್ಞಾನವನ್ನು ಹೊಂದಿದ, ಆರ್ಯಾಃ= ಆರ್ಯವೃದ್ಧರು, ತೇನ= ಗುರುಮುಖದಿಂದ ಜ್ಞಾನವಿಲ್ಲದಿದ್ದರೆ ಭಗವದ್‌ಪ್ರಸಾದವು ಉಂಟಾಗುವುದಿಲ್ಲವಾದ ಕಾರಣದಿಂದ, ತಾನ್= ಆ ವೇದಗಳನ್ನು, ಅಧೀತ್ಯ= ಸದ್ಗುರುಗಳ ಮುಖದಿಂದಲೇ, ವಿಷ್ಣುಸರ್ವೋತ್ತಮತ್ವ ಜ್ಞಾನಪರ್ಯಂತವಾದ ಅರ್ಥಾನುಸಂಧಾನಪೂರ್ವಕವಾಗಿ ಅಧ್ಯಯನವನ್ನು ಮಾಡಿ, ವೇದಸ್ಯ= ಸಮಸ್ತವೇದ ಸಮೂಹದ (ಸಮೂಹದಿಂದ), ವೇದ್ಯಂ= ಜ್ಞೇಯನಾದ ಭಗವಂತನನ್ನೇ , ಗತಾಃ= ತಿಳಿದರು ಮತ್ತು ಅವನ ಪ್ರಾಪ್ತಿಯನ್ನು ಹೊಂದಿದರು. ಈ ವಿಷಯದಲ್ಲಿ **'ಆಚಾರ್ಯಾದೇವ ವಿದ್ಯಾ ವಿದಿತಾ ಸಾಧಿಷ್ಟಂ ಪ್ರಾಪಯತಿ'** (ಗುರುಮುಖದಿಂದ ಸಂಪಾದಿಸಿದ ವಿದ್ಯೆಯೇ ಅತ್ಯಂತ ಸಾಧುವಾದ ಫಲವನ್ನು ಕೊಡುತ್ತದೆ) ಎಂಬ ಶ್ರುತಿಯು ಪ್ರಮಾಣವಾಗಿ ಸೂಚಿಸಲ್ಪಡುತ್ತದೆ.

ಅಥವಾ ದ್ವಿಪದಾಂ ವರಿಷ್ಠ= ಎಲೈ ಧೃತರಾಷ್ಟ್ರನೇ, ಛಂದಾಂಸಿ= ವೇದಗಳು, ಸ್ವಚ್ಛಂದಯೋಗೇನ= ಸ್ವಚ್ಛಂದ ಎಂದರೆ ಮುಖ್ಯವೃತ್ತಿ , ಅದರ ಯೋಗ ಎಂದರೆ ಸಂಬಂಧಗಳು, ಆದ್ದರಿಂದ ಮುಖ್ಯವೃತ್ತಿಯಿಂದ, ತತ್ರ= ಭಗವಂತನಲ್ಲಿ, ನಾಮ ಭವಂತಿ= ಮಹಾಯೋಗ ಮತ್ತು ವಿದ್ವದ್ಧೂಢಿಗಳಿಂದ ಭಗವತ್‌ಪ್ರತಿಪಾದಕವಾದ ನಾಮಗಳೇ ಆಗುತ್ತವೆ. ಏನ= ಹೀಗೆ ಸರ್ವವೇದಗಳು ಭಗವತ್ಪರವಾಗಿರುವ ಕಾರಣ, ಛಂದೋವಿದಃ= ವೇದಗಳಿಗೆ ಭಗವತ್ಪರತ್ವವನ್ನು ತಿಳಿದ, ಆರ್ಯಾಃ= ಪೂಜ್ಯರಾದ ಜ್ಞಾನವೃದ್ಧರು, ತಾಂ= ವೇದಗಳನ್ನು, ಅಧೀತ್ಯ= ಪಾಠದ ದೃಷ್ಟಿಯಿಂದಲೂ ಮತ್ತು ಅರ್ಥದ ದೃಷ್ಟಿಯಿಂದಲೂ ಅಧ್ಯಯನವನ್ನು ಮಾಡಿ, ವೇದಸ್ಯ= ಜ್ಞಾನರೂಪನಾದ ವಿಷ್ಣುವಿನ, ವೇದ್ಯಂ= ಜ್ಞಾನೈಕಗಮ್ಯವಾದ ಸ್ವರೂಪವನ್ನು, ಗತಾ= ಹೊಂದಿದರು. ಹಿ ಎಂಬುದು ಪ್ರಸಿದ್ಧಿಯನ್ನು ಸೂಚಿಸುತ್ತದೆ.

ಅಥವಾ ಎಲ್ಲ ವೇದಗಳೂ ಅನೇಕಾರ್ಥಗರ್ಭಿತವಾಗಿರುವುದರಿಂದ ಬಹಿರ್ಮುಖರಾದ ಜನರಿಗೆ ಅಭಿರುಚಿಯನ್ನು ಉಂಟುಮಾಡಲು ಅವರಿಗೆ ಇಷ್ಟವಾದ ಅರ್ಥಗಳನ್ನು ಪ್ರತಿಪಾದನೆ ಮಾಡುತ್ತವೆ ಎಂದು ಸೂಚಿಸುತ್ತಾರೆ. ದ್ವಿಪದಾಂ ವರಿಷ್ಠ= ಎಲೈ ಧೃತರಾಷ್ಟ್ರನೇ, ಸ್ವಚ್ಛಂದಯೋಗೇನ= ತನ್ನ ಇಚ್ಛೆಯಂತೆ ಮಾಡುವ ಪಾಠಾದಿಗಳ

ಸಂಬಂಧದಿಂದ, ಛಂದಾಂಸಿ= ಇಂದ್ರಶ್ರೇಷ್ಠಾನಿ ಇತ್ಯಾದಿ ವೇದಗಳು, ತತ್ರ= ಆಯಾ ಕರ್ಮಗಳಲ್ಲಿ ಅಧಿಕೃತವಾದ ದೇವತೆಗಳಲ್ಲಿ ಅಮುಖ್ಯವೃತ್ತಿಯಿಂದ, ನಾಮ= ನಾಮಗಳಾಗಿ, ಭವಂತಿ= ಆಗುತ್ತವೆ. ನಾಮ ಎಂಬುದು ಜಾತ್ಯೇಕವಚನ. ಛಂದೋವಿದಃ= ವೇದಪಾಠಗಳನ್ನು ಮಾಡಿದ ಬಹಿರ್ಮುಖರಾದ, ಆರ್ಯಾಃ= ವಯೋವೃದ್ಧರು, ತಾನ್ ಅಧೀತ್ಯ= ಅಮುಖ್ಯವೃತ್ತಿಯಿಂದ ಇಂದ್ರಾದಿಗಳನ್ನು ಹೇಳುವ ವೇದಗಳನ್ನು ಸರಿಯಾದ ಗುರುಗಳಿಲ್ಲದೆ ಅಧ್ಯಯನವನ್ನು ಮಾಡಿ, ವೇದಸ್ಯ= ಸರ್ವವೇದ ಸಮೂಹದ, ವೇದ್ಯಂ= ಮುಖ್ಯಜ್ಞೇಯನಾದ ಭಗವಂತನನ್ನು, ನ ಗತಾಃ= ತಿಳಿಯುವುದಿಲ್ಲವಷ್ಟೆ! ಹಿ ಎಂಬುದು ಇಲ್ಲಿಯೂ ಪ್ರಸಿದ್ಧಿಯನ್ನು ತೋರಿಸುತ್ತದೆ.

ನ ವೇದಾನಾಂ ವೇದಿತಾ ಕಶ್ಚಿದಸ್ತಿ
ಕಶ್ಚಿತ್ತೈ್ವತಾನ್ ಬುದ್ಧ್ಯತೇ ವಾऽಪಿ ರಾಜನ್ ।
ಯೋ ವೇದ ವೇದಾನ್ ಸ ಚ ವೇದ ವೇದ್ಯಂ
ಸತ್ಯೇ ಸ್ಥಿತೋ ಯಸ್ತು ಸ ವೇದ ವೇದ್ಯಮ್ ॥೫೨॥

ನ ವೇದಾನಾಂ ವೇದಿತಾ ಕಶ್ಚಿದಸ್ತಿ
ವೇದೇವ ವೇದ್ಯಂ ನ ವಿದುರ್ನ ವೇದಮ್ ।
ಯೋ ವೇದ ವೇದಂ ಸ ಚ ವೇದ ವೇದ್ಯಂ
ಯೋ ವೇದ ವೇದ್ಯಂ ನ ಸ ವೇದ ಸತ್ಯಮ್ ॥೫೩॥

ವೇದಪಾಠ ಮತ್ತು ವೇದಾರ್ಥಗಳ ಪರಿಜ್ಞಾನಗಳು ಭಗವತ್ಪ್ರಾಪ್ತಿ ಸಾಧನವಾಗುವುದಾದರೆ, ವೇದಗಳು ಮತ್ತು ವೇದಾರ್ಥಗಳು ಸರ್ವದಾ ಸರ್ವತ್ರ ಇರುವುದರಿಂದ ಎಲ್ಲರಿಗೂ ಭಗವತ್‌ಪ್ರಾಪ್ತಿಯಾಗಲಿ ಎಂಬ ಪ್ರಸಂಗಕ್ಕೆ ಅವಕಾಶವಿಲ್ಲ. ವೇದಗಳು ಅನೇಕ ಅಧಿಕಾರಿಗಳ ವಿವಕ್ಷೆಯಿಂದ ವಿಶ್ವತೋಮುಖವಾಗಿರುವುದರಿಂದ ವಿವಕ್ಷಿತಾರ್ಥಪರಿಜ್ಞಾನದಿಂದಲೇ ಫಲಪ್ರಾಪ್ತಿಯಾಗುತ್ತದೆ. ವಿವಕ್ಷಿತಾರ್ಥ ಪರಿಜ್ಞಾನವಾದರೂ ದುಸ್ಸಾಧ್ಯವಾದುದು. ಆದ್ದರಿಂದ ವೇದಪಾಠವು ಎಲ್ಲ ಕಡೆಯಲ್ಲಿಯೂ ಇದ್ದರೂ ತತ್ತ್ವಾಪ್ಯ ಫಲವು ಮಾತ್ರ ದೊರೆಯುವುದಿಲ್ಲ ಎಂದು ಹೇಳುತ್ತಾರೆ.

ವೇದಾನಾಂ 'ವೇದಯಂತೀತಿ ವೇದಾಃ' ಇತಿ ಪ್ರಮಾಣವು ಇರುವುದರಿಂದ ಸರ್ವಾರ್ಥಜ್ಞಾಪಕವಾದ ವೇದಗಳ ಅಭಿಪ್ರೇತವಾದ ಅರ್ಥವನ್ನು ಎಂದು ಇಟ್ಟುಕೊಳ್ಳಬೇಕು. ವೇದಿತಾ= ತಿಳಿಯುವವನು, ಕಶ್ಚಿದ್ಯಃ= ಯಾವ ಪುರುಷನೂ ಸಹ, ನಾಸ್ತಿ= ಪ್ರಾಯಶಃ ಇಲ್ಲ. ಪ್ರಾತಿಶಾಖ್ಯಾದಿಗಳಲ್ಲಿ ಹೇಳಿದ ಲಕ್ಷಣಜ್ಞಾನಪೂರ್ವಕವಾಗಿ ವೇದಾಧ್ಯಯನವನ್ನು ಮಾಡುವವರು ಪ್ರತ್ಯಕ್ಷಸಿದ್ಧರಾಗಿರುವಾಗ ಒಬ್ಬನೂ ಇಲ್ಲ ಎಂದು ಹೇಗೆ ಹೇಳುವುದು ಎಂಬ ಪ್ರಶ್ನೆಗೆ ವೇದಗಳಿಂದ ವೇದಪಾಠಕರಿಗೆ ವೇದಗಳಿಗೆ ಅಭಿಪ್ರೇತವಾದ ವಸ್ತುವಿನ ಜ್ಞಾನವು ಉಂಟಾಗದಿರುವುದರಿಂದ ವೇದಗಳನ್ನು ಯಾವನೂ ತಿಳಿದಿಲ್ಲ ಎಂದು ಹೇಳುವುದೇ ಹೊರತು, ಸರ್ವಥಾ ವೇದಗಳ ಪರಿಜ್ಞಾನವೇ ಇಲ್ಲ ಎಂಬ ಅಭಿಪ್ರಾಯದಿಂದಲ್ಲ ಎಂದು ಉತ್ತರವನ್ನು ಹೇಳುತ್ತಾರೆ. ವೇದೇನ= ಲಕ್ಷಣಜ್ಞಾನವಿಶಿಷ್ಟವಾಗಿ ಪಠ್ಯಮಾನವೇದಗಳಿಂದ ವೇದ್ಯೈಕವೇದ್ಯನಾದ, ವೇದಂ= **'ವೇದೋ ನಾರಾಯಣಸ್ಸಾಕ್ಷಾತ್'** ಎಂದು ಹೇಳಿರುವುದರಿಂದ ಜ್ಞಾನರೂಪಿಯಾದ ನಾರಾಯಣನನ್ನು, ನ ವಿದುಃ= ತಿಳಿದಿರುವುದಿಲ್ಲ. ಹಾಗಾದರೆ ಯಾರಿಗೂ ಬ್ರಹ್ಮಜ್ಞಾನವಾಗಲಾರದು ಎಂದು ಶಂಕಿಸಿದರೆ **'ಆತ್ಮನೋ ವಾ ಅರೇ ದರ್ಶನೇನ ಶ್ರವಣೇನ ಮತ್ಯಾ ವಿಜ್ಞಾನೇನ ಇದಂ ಸರ್ವಂ ವಿದಿತಮ್'** (ಎಲೌ ಗಾರ್ಗಿಯೇ, ಪರಮಾತ್ಮನ ಜ್ಞಾನದಿಂದ, ಶ್ರವಣದಿಂದ, ಮನನದಿಂದ ಮತ್ತು ವಿಜ್ಞಾನದಿಂದ ಈ ಜಗತ್ತೆಲ್ಲವೂ ತಿಳಿಯಲ್ಪಡುತ್ತದೆ) ಎಂಬ ಶ್ರುತಿಯಿಂದಲೂ, **'ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನಂತರಮ್'** (ಅನಂತರ ನನ್ನನ್ನು ಯಥಾರ್ಥವಾಗಿ ತಿಳಿದು ನನ್ನನ್ನು ಪ್ರವೇಶಿಸುತ್ತಾರೆ) ಎಂಬ ಶ್ರುತಿ ಇರುವುದರಿಂದಲೂ ಅನೇಕ ಮನುಷ್ಯರ ಮಧ್ಯದಲ್ಲಿ ಯಾವನೋ ಒಬ್ಬ ಅಧಿಕಾರಿಯು ಭಗವದನುಗ್ರಹದಿಂದ ಉಂಟಾದ ಶ್ರವಣಾದಿ ಸಾಧನ ಪರಿಪಾಕದಿಂದ ಭಗವಂತನನ್ನು ಅಪರೋಕ್ಷವಾಗಿ ತಿಳಿಯುತ್ತಾನೆ ಎಂದು ಹೇಳುತ್ತಾರೆ. ಯಃ= **'ಯೇತಿ ಜ್ಞಾನಂ ಸಮುದ್ದಿಷ್ಟವ್'** ಎಂದು ಹೇಳಿರುವುದರಿಂದ ಜ್ಞಾನಿರೂಪನಾದ ಯಾವನೋ ಒಬ್ಬ ಸಾತ್ವಿಕ ಅಧಿಕಾರಿಯು, ಸಃ= ಅವನು ಮಾತ್ರ, ವೇದ್ಯಂ= ವೇದ್ಯೈಕಗಮ್ಯನಾದ ನಾರಾಯಣನನ್ನು, ವೇದ= ತನ್ನ ಯೋಗ್ಯತೆಗೆ ಅನುಗುಣವಾಗಿ ತಿಳಿಯುತ್ತಾನೆ. ಅಥವಾ ಯಃ= ಯಾವ ಅಧಿಕಾರಿಯು, ವೇದಂ= ಋಗಾದಿ ಐದುವೇದಗಳ ಮಧ್ಯದಲ್ಲಿ ಒಂದು ವೇದವನ್ನಾದರೂ, ವೇದ= ತಿಳಿದಿದ್ದಾನೆಯೋ, ಸಃ= ಅವನು, ವೇದ್ಯಂ= ವೇದ್ಯನಾದ ನಾರಾಯಣನನ್ನು, ವೇದ=

ತಿಳಿದಿದ್ದಾನೆ. ಹಾಗಾದರೆ **'ನಾಹಂ ವೇದೈರ್ನ ತಪಸಾ ನ ದಾನೇನ'** ಇತ್ಯಾದಿ ಪ್ರಮಾಣಗಳಿಗೆ ಏನು ಗತಿ ಎಂದು ಕೇಳಿದರೆ **'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ'** ಮುಂತಾದ ಶ್ರುತಿಗಳ ಬಲದಿಂದ ಸಾಕಲ್ಯೇನ ಭಗವದ್ಜ್ಞಾನವುಂಟಾಗುವುದಿಲ್ಲವೆಂದು ಅರ್ಥವೇ ಹೊರತು ಸರ್ವಥಾ ಭಗವದ್ಜ್ಞಾನವು ಉಂಟಾಗುವುದಿಲ್ಲ ಎಂಬ ಅಭಿಪ್ರಾಯವಲ್ಲ. ಆದರೆ **'ನಭಃ ಪತಂತ್ಯಾತ್ಮಸಮಂ ಪತತ್ರಿಣಃ'** (ಪಕ್ಷಿಗಳು ತಮ್ಮ ಶಕ್ತಿ ಇದ್ದಷ್ಟು ಆಕಾಶದಲ್ಲಿ ಮೇಲಕ್ಕೆ ಹಾರುತ್ತವೆ) ಎಂದು ಹೇಳಿದಂತೆ ತಮ್ಮ ತಮ್ಮ ಯೋಗ್ಯತೆಗೆ ಅನುಗುಣವಾಗಿ ವೇದ್ಯನನ್ನು ತಿಳಿದಿದ್ದಾರೆ ಎಂದು ಹೇಳುತ್ತಾರೆ. ಯಃ= ಯಾವ ಅಧಿಕಾರಿಯು, ವೇದ್ಯಂ= ಭಗವಂತನನ್ನು, ವೇದ= ತಿಳಿದಿದ್ದಾನೆಯೋ, ಸಃ= ಅವನು, ಸತ್ಯಮ್= ನಿರ್ದುಷ್ಟವಾದ, ಜ್ಞಾನಾನಂದಾದಿ ಅನಂತಗುಣಪೂರ್ಣನಾದ ನಾರಾಯಣನನ್ನು, ನ ವೇದ= ಪೂರ್ಣವಾಗಿ ತಿಳಿದಿಲ್ಲ. 'ಸ ವೇದ ವೇದ್ಯಮ್' ಎಂಬ ಪಾಠವಿದ್ದರೂ ನಾರಾಯಣನನ್ನು ಅಲ್ಪವಾಗಿ ತಿಳಿದಿದ್ದಾನೆ ಎಂದೇ ಅರ್ಥ.

**ಯೋ ವೇದ ವೇದಾನ್ ಸ ಚ ವೇದ ವೇದ್ಯಂ**
**ನ ತಂ ವಿದುರ್ವೇದವಿದೋ ನ ವೇದಾಃ ।**
**ತಥಾऽಪಿ ವೇದೇನ ವಿದಂತಿ ವೇದ್ಯಂ**
**ಯೇ ಬ್ರಾಹ್ಮಣಾ ವೇದವಿದೋ ಭವಂತಿ** ॥೫೪॥

ಹಿಂದಿನ ಶ್ಲೋಕದಲ್ಲಿ ವೇದೇನ ವೇದ ಎಂದು ವೇದವನ್ನು ಏಕವಚನದಿಂದ ನಿರ್ದೇಶಮಾಡಿ, ಅನೇಕ ಶಾಖೆಗಳಿಂದ ಕೂಡಿದ ವೇದಪ್ರತಿಪಾದ್ಯನಾದ ಶ್ರೀನಾರಾಯಣನು ಅದರ ಒಂದು ಶಾಖೆಯ ಅಧ್ಯಯನದಿಂದಲೇ ಮೋಕ್ಷಸಾಧನೆ ರೂಪ ಪರೋಕ್ಷಾಪರೋಕ್ಷಜ್ಞಾನವನ್ನು ಕೊಡುವವನೆಂದು ತೋರುತ್ತದೆ. ಆದರೆ ಅದು ಸರಿಯಲ್ಲ. ಏಕೆಂದರೆ, **'ಸರ್ವವೇದಾಂತಪ್ರತ್ಯಯಂ ಚೋದನಾದ್ಯವಿಶೇಷಾ'** ಎಂಬ ಬ್ರಹ್ಮಸೂತ್ರದಲ್ಲಿ ಸರ್ವಶಾಖೆಗಳ ಅಧ್ಯಯನಜನ್ಯಜ್ಞಾನದಿಂದಲೇ ಭಗವಂತನ ಪ್ರಾಪ್ತಿಯನ್ನು ಹೇಳಿದ್ದಾರೆ. ಆದ್ದರಿಂದ ಹಿಂದಿನ ಶ್ಲೋಕದಲ್ಲಿ 'ವೇದೇನ' ಎಂದು ಹೇಳಿದುದು ಜಾತ್ಯೇಕವಚನಾಭಿಪ್ರಾಯದಿಂದ ಎಂದು ಈ ಶ್ಲೋಕದಲ್ಲಿ ಸ್ಪಷ್ಟವಾಗಿ ತಿಳಿಸುತ್ತಾರೆ.

ಯಃ= ಯಾವ ಅಧಿಕಾರಿಯು, ವೇದಾನ್= ಋಗಾದಿ ಸರ್ವವೇದಗಳನ್ನೂ, ವೇದ= ಪಾಠದಿಂದಲೂ, ಅರ್ಥದಿಂದಲೂ ತಿಳಿಯುತ್ತಾನೆಯೋ, ಸ ಚ= ಅವನೇ, ವೇದ್ಯಂ= ವೇದೈಕಗಮ್ಯನಾದ ಭಗವಂತನನ್ನು, ವೇದ= ತಿಳಿಯುತ್ತಾನೆ. ಹಾಗಾದರೆ ವೇದದ ಏಕದೇಶಜ್ಞಾನದಿಂದ ಭಗವತ್‌ಪ್ರಾಪ್ತಿಯಾಗದಿದ್ದರೂ ಸರ್ವವೇದಾಧ್ಯಯನದಿಂದ ತತ್ಪ್ರಾಪ್ತಿಯು ಉಂಟಾಗುತ್ತದೆ ಎಂಬುದೂ ಸರಿಯಲ್ಲ. ಸರ್ವವೇದಗಳೂ ಪರಿಪೂರ್ಣವಾಗಿ ಹರಿಯ ಮಹಿಮೆಯನ್ನು ಪ್ರತಿಪಾದನೆ ಮಾಡುವುದಿಲ್ಲವಾದ್ದರಿಂದ ಹರಿಯ ಪರಿಪೂರ್ಣವಾದ ಜ್ಞಾನವು ಯಾರಿಗೂ ಬರುವುದಿಲ್ಲ ಎಂದು ಹೇಳುತ್ತಾರೆ. ವೇದವಿದಃ= ಋಗಾದಿ ಐದು ವೇದಗಳನ್ನು ತಿಳಿದವರೂ ಸಹ, ತಂ= ಅಪರಿಚ್ಛಿನ್ನನಾದ ಪರಮಾತ್ಮನನ್ನು, ನ ವಿದುಃ= ಪೂರ್ಣವಾಗಿ ತಿಳಿಯುವುದಿಲ್ಲ. ಹಾಗಾದರೆ ಶಾಖೆಗಳಿಗಿಂತ ಶಾಖೆಗಳನ್ನು ಹೊಂದಿದ ವೇದಗಳು ಪ್ರಧಾನವಾದ್ದರಿಂದ ಅನೇಕಾನೇಕ ಶಾಖೆಗಳನ್ನುಳ್ಳ ವೇದವ್ಯಕ್ಷದಿಂದ ಸಾಕಲ್ಯೇನ ಜ್ಞಾನವುಂಟಾದೀತು ಎಂಬ ಶಂಕೆಗೆ ಉತ್ತರವನ್ನು ಹೇಳುತ್ತಾರೆ. ವೇದಾಃ= ಅನಂತ ವೇದಾಭಿಮಾನಿಗಳೂ ಸಹ, ತಂ= ಆ ಪರಮಾತ್ಮನನ್ನು, ನ ವಿದುಃ= ತಿಳಿಯುವುದಿಲ್ಲ. **'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ'** (ವಾಕ್ ಮತ್ತು ಮನಸ್ಸುಗಳು ಭಗವಂತನನ್ನು ಮುಟ್ಟದೇ ಹಿಂದಿರುಗುತ್ತವೆ), **'ಶಬ್ದೋ ನ ಯತ್ರ ಪುರು ಕಾರಕವಾನ್ ಕ್ರಿಯಾರ್ಥೋ ಮಾಯಾ ಪರೈತ್ಯಭಿಮುಖೇ ಚ ವಿಲಜ್ಜಮಾನಾ'** (ಶಬ್ದವು ಯಾವನ ಜ್ಞಾನವನ್ನು ಉಂಟುಮಾಡುವುದರಲ್ಲಿ ಬಹಳ ಸಮರ್ಥವಾಗುವುದಿಲ್ಲವೋ) ಎಂದು ಬಹುಶ್ರುತಿ-ಸ್ಮೃತಿಗಳಿರುವುದರಿಂದ ಪೂರ್ಣವಾಗಿ ತಿಳಿಯುವುದಿಲ್ಲ ಎಂದು ಅರ್ಥ. ಸರ್ವವೇದಗಳಿಂದಲೂ ಭಗವಂತನ ಜ್ಞಾನ ಬರುವುದಿಲ್ಲವಾದರೆ ಭಗವಂತನ ವೇದೈಕ್ಯಗಮ್ಯತ್ವವು ಭಗ್ನವಾಗುತ್ತದೆ ಎಂದು ಶಂಕಿಸಿದರೆ, ವೇದಾಭಿಮಾನಿ ದೇವತೆಗಳಿಗೂ ಸಹ ಸಾಕಲ್ಯೇನ ಭಗವಂತನ ಜ್ಞಾನವಿಲ್ಲ, ತಮ್ಮ ಯೋಗ್ಯತೆಗೆ ಅನುಗುಣವಾಗಿ ಭಗವಂತನ ಮಹಿಮೆಯ ಏಕದೇಶದ ಜ್ಞಾನವಿದೆ ಎಂದು ಹೇಳುತ್ತಾರೆ. ತಥಾಪಿ= ವೇದಾಭಿಮಾನಿದೇವತೆಗೆ ಭಗವಂತನ ಜ್ಞಾನಸಾಕಲ್ಯವು ಇಲ್ಲದಿದ್ದರೂ, ಯೇ ಬ್ರಾಹ್ಮಣಾಃ= ಪರಬ್ರಹ್ಮವಿಚಾರಶೀಲರಾದ, ವೇದವಿದಃ = ವೇದಾರ್ಥಜ್ಞಾನವನ್ನು ಹೊಂದಿದ ಯಾವ ಬ್ರಾಹ್ಮಣರಿದ್ದಾರೆಯೋ ಅವರೇ, ವೇದೇನ= ವೇದದಿಂದ ಉಂಟಾದ ಜ್ಞಾನದಿಂದ, ವೇದಂ= ನಾರಾಯಣನನ್ನು, ವಿದಂತಿ= ಹೊಂದುತ್ತಾರೆ. ಅಥವಾ ಯಥಾಯೋಗ್ಯವಾಗಿ ತಿಳಿಯುತ್ತಾರೆ.

ಧರ್ಮಾಂಶಭಾಜೋಽಸ್ಯ ತಥಾ ಹಿ ವೇದಾ
ಯಥಾ ಹಿ ಶಾಖಾ ಚ ಮಹೀರುಹಸ್ಯ ।
ಸಂವೇದನೇ ಚೈವ ಸಮಾಮನಂತಿ
ತಸ್ಮಿನ್ ಹಿ ನಿತ್ಯೇ ಪರಮಾತ್ಮನೋಽರ್ಥೇ ॥೫೫॥

ವೇದಗಳು ಅನಂತವಾದರೂ 'ವಿಷ್ಣೋರ್ನುಕಂ ವೀರ್ಯಾಣಿ' ಇತ್ಯಾದಿ ವೇದವಾಕ್ಯವು ವೇದಗಳು ಹೇಳದಿರುವ ಅನಂತಗುಣಗಳು ಪರಮಾತ್ಮನಲ್ಲಿ ಇವೆ ಎಂದು ಹೇಳುವುದರಿಂದ ವಿಷ್ಣುವಿನ ಅನಂತಗುಣಗಳು ಪೂರ್ಣವಾಗಿ ಯಾರಿಂದಲೂ ತಿಳಿಯಲ್ಪಡದಿದ್ದರೂ ವೇದಗಳು ಅವನ ಮಹಿಮೆಯ ಒಂದಂಶವನ್ನು ಮಾತ್ರ ಅನುವಾದ ಮಾಡುತ್ತವೆ. ಪೂರ್ಣವಾದ ಮಹಿಮೆಯನ್ನು ಅನುವಾದ ಮಾಡುವುದಿಲ್ಲ ಎಂಬ ವಿಷಯವನ್ನು ಇಲ್ಲಿ ದೃಷ್ಟಾಂತ ಮುಖೇನ ಉಪಪಾದನೆ ಮಾಡುತ್ತಾರೆ.

ವೇದಾಃ= ಅನಂತವಾದರೂ ವೇದಗಳು, ಅಸ್ಯ= ಅನಂತಗುಣಪೂರ್ಣನಾದ ವಿಷ್ಣುವಿನ, ಧರ್ಮಾಂಶಭಾಜಃ= ಭಗವಂತನಿಂದ ಅಭಿನ್ನವಾದ ಐಶ್ವರ್ಯಾದಿ ಧರ್ಮಗಳು ಏನು ಇವೆಯೋ ಅವುಗಳ ಒಂದು ಅಂಶವನ್ನು ಎಂದರೆ ಮಾಹಾತ್ಮ್ಯಲೇಶವನ್ನು ಅನುವಾದದಿಂದ ಭಜಿಸುತ್ತವೆ. ಇದರಿಂದ ಎಲ್ಲ ವೇದಗಳು ಅಪರಿಮಿತಗುಣಪೂರ್ಣನಾದ ವಿಷ್ಣುವಿನ ಗುಣಗಳ ಏಕದೇಶಾನುವಾದವೇ ಹೊರತು ಸಮಗ್ರಾನುವಾದಕಗಳಲ್ಲ ಎಂಬ ಪ್ರಮೇಯವು ಹೇಳಲ್ಪಡುತ್ತದೆ. ಈ ವಿಷಯದಲ್ಲಿ ಒಂದು ದೃಷ್ಟಾಂತವನ್ನು ಹೇಳುತ್ತಾರೆ. ಶಾಖಾಃ= ಕೊಂಬೆಗಳು, ಮಹೀರುಹಸ್ಯ= ವೃಕ್ಷದ, ಧರ್ಮಾಂಶಭಾಜಃ= ಅಂಕುರೋತ್ಪತ್ತಿಮತ್ತ್ವ - ಪಾದಪತ್ತ- ಜೀವವಿಶಿಷ್ಟತ್ವಾದಿ ಅಂಶಿಯ ಸ್ವಾಭಾವಿಕವಾದ ಧರ್ಮಗಳಲ್ಲಿ ಒಂದು ಅಂಶವಾದ ಜಡತ್ವಾದಿ ಗುಣಗಳನ್ನು, ಯಥಾ= ಹೇಗೆ ಹೊಂದುತ್ತವೆಯೋ ಅದರಂತೆ ಎಂದು ದೃಷ್ಟಾಂತ. ಹೀಗೆ ವೇದಗಳು ಭಗವಂತನ ಧರ್ಮಾಂಶದ ಅನುವಾದಕಗಳಾದ್ದರಿಂದ ವೇದಗಳಿಂದಲೇ ಪರಮಾತ್ಮನ ಸ್ವರೂಪ ಜ್ಞಾನವುಂಟಾಗುತ್ತದೆ, ಬೇರೆ ಯಾವುದರಿಂದಲೂ ಅಲ್ಲ ಎಂದು ಹೇಳುತ್ತಾರೆ. ಎಲ್ಲ ಅಧಿಕಾರಿಗಳಿಗೂ ಅವರವರ ಯೋಗ್ಯತೆಯನ್ನು ಮೀರದಂತೆ, ಪರಮಾತ್ಮನಃ= ಸರ್ವಸ್ವಾಮಿಯಾದ ವಿಷ್ಣುವಿನ, ಸಂವೇದನೇನ= ಭಗವತ್ಸ್ವರೂಪಜ್ಞಾಪಕತ್ವರೂಪವಾದ ತನ್ನಲ್ಲಿರುವ ಹೇತುವಿನಿಂದ, (ಸಂವೇದನೇನೈವ ಸಮಾಮನಂತಿ ಎಂಬ ಪಾಠವನ್ನು

ಇಟ್ಟುಕೊಂಡಿದ್ದಾರೆ). ನಿತ್ಯೇ ಅರ್ಥೇ= ಅವಿನಾಶಿಯಾದ ಎಲ್ಲರಿಂದಲೂ ಪ್ರಾರ್ಥಿಸಲ್ಪಡುವ ವಿಷ್ಣುವಿನಲ್ಲಿಯೇ, ಸಮಾಮನಂತಿ= ಪದವಾಕ್ಯ ಸಮನ್ವಯ ಬಲದಿಂದ ಪ್ರತಿಪಾದನೆ ಮಾಡುತ್ತವೆ.

ವೇದಗಳು ಪದಸಮನ್ವಯ ಮತ್ತು ವಾಕ್ಯಸಮನ್ವಯ ಪ್ರಕಾರದಿಂದ ವಿಷ್ಣುವಿನ ಮಹಿಮೆಯ ಏಕದೇಶವನ್ನೇ ಪ್ರತಿಪಾದನೆ ಮಾಡುತ್ತವೆ ಎಂಬುದನ್ನು ಸಮಾಮನಂತಿ ಎಂಬಲ್ಲಿರುವ 'ಸಂ' ಮತ್ತು 'ಅ' ಎಂಬ ಉಪಸರ್ಗಗಳು ಸೂಚಿಸುತ್ತವೆ. ಇಲ್ಲದಿದ್ದರೆ ಪ್ರಳಯದಲ್ಲಿ ಕರ್ಮವಿಲ್ಲದಿರುವುದರಿಂದ ಕರ್ಮಗಳನ್ನು ಹೇಳುವ ವೇದಭಾಗವು ನಿರರ್ಥಕವಾಗುತ್ತದೆ ಎಂದು ಸೂಚಿಸಲು 'ನಿತ್ಯೇ' ಎಂದು ಹೇಳಿದ್ದಾರೆ. ಆದ್ದರಿಂದಲೇ ಶ್ರುತಿಗೀತೆಯು **'ಕ್ವಚಿತ್ ಅಜಯಾ ಆತ್ಮನಾ ಅನುಚರತೋ ಅನುಚರೇತ್ ನಿಗಮಃ'** ಎಂದು ಹೇಳಿದೆ. ಅಜಯಾ= ಮಹಾಲಕ್ಷ್ಮಿಯಿಂದ, ಆತ್ಮನಾ= ಮತ್ತು ತನ್ನಿಂದಲೂ ಕೂಡ, ಕ್ವಚಿತ್= ಸೃಷ್ಟಿಕಾಲದಲ್ಲಿ ಕೃಷ್ಣ-ರಾಮಾದಿ ರೂಪದಿಂದ ಅವತಾರವನ್ನು ಮಾಡಿ, ಅನುಚರತಃ= ವೇದಕ್ಕೆ ಅನುಕೂಲವಾಗುವಂತೆ ಎಂದರೆ ವೇದಪ್ರಾಮಾಣ್ಯವನ್ನು ರಕ್ಷಿಸುವಂತೆ ಯಜ್ಞಾದಿಗಳನ್ನು ಆಚರಿಸುವ ನಿನ್ನ ಪ್ರೀತ್ಯರ್ಥವಾಗಿ, ನಿಗಮಃ= ವೇದಗಳೂ ಕೂಡ, ಅನುಚರೇತ್= ನಿನ್ನ ಕ್ರಿಯೆಗಳಿಗೆ ಅನುಸಾರವಾಗಿ ವಿಧಿ-ನಿಷೇಧ ರೂಪದಿಂದ ಸಂಚರಿಸುತ್ತವೆ. ಪ್ರಳಯಕಾಲದಲ್ಲಿ ಕರ್ಮಗಳು ಇಲ್ಲದಿರುವುದರಿಂದ ವೇದದ ಎಲ್ಲ ಪದಗಳೂ ನಿನ್ನನ್ನೇ ಹೇಳುತ್ತವೆ ಎಂದು ಆ ಶ್ರುತಿಯ ಅರ್ಥ. ವೇದಗಳು ವಿಧಿ-ನಿಷೇಧರೂಪದಿಂದ ಪ್ರವೃತ್ತವಾಗಿ ಪರಮಾತ್ಮನ ಪ್ರೀತಿಯಲ್ಲಿ ಪರ್ಯವಸಾನವನ್ನು ಹೊಂದಿದರೆ ಅದಕ್ಕೆ ವಾಕ್ಯಸಮನ್ವಯ ಎಂದು ಹೆಸರು. ಇಲ್ಲದಿದ್ದರೆ ವೇದಗಳಲ್ಲಿರುವ ಪದಗಳೆಲ್ಲವೂ ಪರಮಾತ್ಮನ ಸಂಬೋಧರೂಪವಾದ ನಾಮಗಳೇ ಆಗುತ್ತವೆ. ಇದು ಕರ್ಮಗಳಿಲ್ಲದಿರುವ ಪ್ರಳಯಕಾಲದಲ್ಲಿ. ನಾಮಗಳು ಪರಮಾತ್ಮನ ಮಹಿಮೆಯನ್ನು ಹೇಳುವ ಈ ಅವಸ್ಥೆಗೆ ಪದಸಮನ್ವಯ ಎಂದು ಹೆಸರು. ಹೀಗೆ ವೇದಗಳು ವಾಕ್ಯಸಮನ್ವಯದಿಂದಲೂ ಮತ್ತು ಪದಸಮನ್ವಯದಿಂದಲೂ ಪರಮಾತ್ಮನ ಮಹಿಮೆಗಳ ಏಕದೇಶವನ್ನೇ ಹೇಳುತ್ತವೆ ಎಂದು 'ಸಂ' 'ಅ' ಎಂಬ ಎರಡು ಉಪಸರ್ಗಗಳಿಂದ 'ಸಮಾಮನಂತಿ' ಎಂಬ ಕ್ರಿಯಾಪದವು ಹೇಳುತ್ತದೆ.

ಅಭಿಜಾನಾಮಿ ಬ್ರಾಹ್ಮಣಂ ವ್ಯಾಖ್ಯಾತಾರಂ ವಿಚಕ್ಷಣಮ್ ।
ಏವಂ ಯೋ ಹಿ ವಿಜಾನಾತಿ ಸ ಜಾನಾತಿ ಪರಂ ಹಿ ತತ್ ॥೫೬॥

ಇದು ತಾಳೆಗರಿಗಳಲ್ಲಿ ಕಂಡುಬರುವ ಶ್ಲೋಕ. ವಾದಿರಾಜರು ಈ ಶ್ಲೋಕದ ಉತ್ತರಾರ್ಧವನ್ನು–

**ಅಭಿಜಾನಾಮಿ ಬ್ರಾಹ್ಮಣಂ ವ್ಯಾಖ್ಯಾತಾರಂ ವಿಚಕ್ಷಣಮ್ ।**
**ಪರಂ ಹಿ ತತ್ಪರಂ ಬ್ರಹ್ಮ ಜಾನಾತ್ಯೇವ ಹಿ ಬ್ರಾಹ್ಮಣಃ ॥ (ಮೂಲಮ್)**

ಎಂದು ಪಠಿಸಿ ವ್ಯಾಖ್ಯಾನ ಮಾಡಿದ್ದಾರೆ.

ಹೀಗೆ ಅಪರಿಮಿತ ಅನಂತಗುಣಪರಿಪೂರ್ಣನಾದ ವಿಷ್ಣುವನ್ನೇ ವೇದಗಳು ಸರ್ವಾತ್ಮನಾ ಪ್ರತಿಪಾದಿಸುತ್ತವೆ ಎಂದು ಹೇಳಿ, ವೇದಗಳಿಗೆ ಭಗವತ್ಪರತ್ವವನ್ನು ಸಮರ್ಥನೆ ಮಾಡಿ, ಈಗ ಅದೇ ವೇದಗಳಿಗೆ ಮೂರು ಅರ್ಥಗಳಿರುವುದರಿಂದ ಉತ್ತಮಾಧಿಕಾರಿಗಳ ವಿಷಯದಲ್ಲಿ ಮೊದಲು ಹೇಳಿದ ಅರ್ಥವು ಉಪಪನ್ನವಾದರೂ ಬಹಿರ್ಮುಖರಾದ ಅನಧಿಕಾರಿಗಳಿಗೆ ಮುಖ್ಯವೃತ್ತಿಯಿಂದ ಬ್ರಹ್ಮ, ಇಂದ್ರ, ರುದ್ರ ಮೊದಲಾದ ಅನ್ಯದೇವತೆಗಳನ್ನೇ ಪ್ರತಿಪಾದನೆ ಮಾಡುವಂತೆ ತೋರುವ ಎಲ್ಲ ವೇದವಾಕ್ಯಗಳಿಗೂ ಪರಮಮುಖ್ಯವೃತ್ತಿಯಿಂದ ಭಗವದ್ಗುಣಪ್ರತಿಪಾದಕತ್ವವೇ ಇದೆ ಎಂದು ಪ್ರವಚನವನ್ನು ಮಾಡುವ ಬ್ರಾಹ್ಮಣನೇ ನನಗೆ ಬ್ರಾಹ್ಮಣೋತ್ತಮನೆಂದು ಸಮ್ಮತನಾದವನು ಎಂದು ಹೇಳಿ ಉತ್ತಮಪಾತ್ರನ ಸ್ವರೂಪವನ್ನು ನಿರೂಪಿಸುತ್ತಾರೆ.

ಅಹಂ= ಸನತ್ಸುಜಾತನಾದ ನಾನು, ವ್ಯಾಖ್ಯಾತಾರಂ= ಭಗವತ್ಪರವಾಗಿ ವೇದಗಳನ್ನು ವ್ಯಾಖ್ಯಾನ ಮಾಡುವ ಶಕ್ತಿ ಉಳ್ಳ, ವಿಚಕ್ಷಣಂ= ವಿ ವಿಶೇಷವಾಗಿ, ಚಕ್ಷಣಂ= ಜ್ಞಾನಚಕ್ಷುವಿನಿಂದ ಎಲ್ಲಾ ವೇದಾರ್ಥಗಳನ್ನು ಭಗತ್ಪರತಯಾ ನೋಡುತ್ತಾನೆ ಎಂಬ ಕಾರಣದಿಂದ ವಿಚಕ್ಷಣನಾದ, ಬ್ರಾಹ್ಮಣಂ= ಬ್ರಾಹ್ಮಣನನ್ನೇ, ಅಭಿಜಾನಾಮಿ= ಅಭಿ ಎಂಬ ಅವ್ಯಯದ ಬಲದಿಂದ ಬ್ರಾಹ್ಮಣೋತ್ತಮನೆಂದು ತಿಳಿಯುತ್ತೇನೆ ಎಂದು ಅರ್ಥ. ಬೇರೆ ಬ್ರಾಹ್ಮಣರಿದ್ದರೂ ವೇದವ್ಯಾಖ್ಯಾನವನ್ನು ಮಾಡುವವನೇ ಏಕೆ ಬ್ರಾಹ್ಮಣೋತ್ತಮನಾಗುತ್ತಾನೆ ಎಂಬ ಪ್ರಶ್ನೆಗೆ ಉತ್ತರವನ್ನು ಹೇಳುತ್ತಾರೆ. ಬ್ರಾಹ್ಮಣಃ= ಭಗವತ್ಪರತಯಾ ವೇದವ್ಯಾಖ್ಯಾನವನ್ನು ಮಾಡುವ ಸ್ವಭಾವವುಳ್ಳ ಬ್ರಾಹ್ಮಣನು, ತತ್= ವ್ಯಾಪ್ತನಾದ, ಬ್ರಹ್ಮ= ಪರಬ್ರಹ್ಮನನ್ನು, ಪರಂ ಇತಿ= ಸರ್ವೋತ್ತಮನೆಂದು, ಜಾನಾತಿ= ತಿಳಿದಿದ್ದಾನೆ. ಏವ ಎಂಬ ಅವಧಾರಣವು ಬ್ರಹ್ಮಜ್ಞಾನಸಂಪನ್ನನಾದುದರಿಂದ ಅವನೇ ಉತ್ತಮನಾದ ಬ್ರಾಹ್ಮಣ, ಬೇರೆಯವರಲ್ಲ ಎಂದು ಸೂಚಿಸುತ್ತದೆ.

**ಯಶ್ಛಿನ್ನವಿಚಿಕಿತ್ಸಃ ಸ ವ್ಯಾಚಷ್ಟೇ ಸರ್ವಸಂಶಯಾನ್ ।**
**ತಸ್ಯ ಪರ್ಯೇಷಣಂ ಗಚ್ಛೇತ್ ಪ್ರತ್ಯರ್ಥಿಷು ಕಥಂಚನ ॥೫೭॥**

ಯಃ= ಯಾವನು, ಛಿನ್ನವಿಚಿಕಿತ್ಸಃ= ತಾನು ಸ್ವತಃ ಸಂಶಯಗಳನ್ನು ಕಳೆದುಕೊಂಡಿದ್ದಾನೆಯೋ, ಸಃ= ಅವನು, ಸರ್ವಸಂಶಯಾನ್= ಇನ್ನೊಬ್ಬರು ಕೇಳಿದ ಎಲ್ಲಸಂಶಯಗಳಿಗೂ, ವ್ಯಾಚಷ್ಟೇ= ಪರಿಹಾರರೂಪವಾದ ಉತ್ತರವನ್ನು ಕೊಡುತ್ತಾನೆ. ಎಲೈ ಧೃತರಾಷ್ಟ್ರನೇ, ನೀನು ತಸ್ಯ= ಅಂತಹ ಭಗವದನುಸಂಧಾನಪೂರ್ವಕವಾಗಿ ವೇದವ್ಯಾಖ್ಯಾನ ಮಾಡುವ ಸ್ವಭಾವವುಳ್ಳ ಬ್ರಾಹ್ಮಣನ, ಪರ್ಯೇಷಣಂ= ಅನ್ವೇಷಣವನ್ನು ಅಥವಾ ಅನ್ವೇಷಣಲಕ್ಷಣವಾದ ಸೇವೆಯನ್ನು, ಗಚ್ಛ= ಹೊಂದುವವನಾಗು. ಪ್ರತ್ಯರ್ಥಿಷು= ಅಂತಹ ಬ್ರಾಹ್ಮಣರಿಗೆ ವಿರೋಧವನ್ನು ಮಾಡುವ ಅವೈಷ್ಣವರಲ್ಲಿ, ಕಥಂಚನ= ಯಾವ ಕಾರಣದಿಂದಲೂ ಎಂದರೆ ದಾಕ್ಷಿಣ್ಯದಿಂದಾಗಲೀ ಅಥವಾ ಅರ್ಥಲೋಭದಿಂದಾಗಲೀ, ಪರ್ಯೇಷಣಂ= ಅನ್ವೇಷಣೆಯನ್ನು, ಭಜನೆಯನ್ನು, ನ ಗಚ್ಛ= ಮಾಡಬೇಡ. ಅವೈಷ್ಣವ ಭಜನೆಯನ್ನು ಮಾಡಬೇಡ ಎಂದು ಅಭಿಪ್ರಾಯ ಅಥವಾ ಪ್ರತ್ಯರ್ಥಿಷು= ಪ್ರತಿವಾಕ್ಯಗಳಲ್ಲಿಯೂ ಇದು ಅರ್ಥ ಎಂದು ಹೇಳುವ ಜ್ಞಾನಿಗಳಲ್ಲಿಯೂ, ಕಥಂಚನ= ಗುರುಶುಶ್ರೂಷೆಯಿಂದಾಗಲೀ ಅಥವಾ ವಿದ್ಯೆಯಿಂದಾಗಲೀ ಅಥವಾ ಧನದಿಂದಾಗಲೀ, ತಸ್ಯ= ಆ ಪರಮಾತ್ಮನ, ಪರ್ಯೇಷಣಂ= ಶ[illegible], ಮನನ, ಧ್ಯಾನರೂಪವಾದ ವಿಷಯವನ್ನು, ಗಚ್ಛೇತ್= ಮಾಡುವವನಾಗು.

**ಅವಿಚಿನ್ವನ್ನಿಮಂ ವೇದೇ ನ ಚ ಪಶ್ಯತಿ ತಂ ಪ್ರಭುಮ್ ।**
**ನಾಸ್ಯ ಪರ್ಯೇಷಣಂ ಗಚ್ಛೇತ್ ಪ್ರತಿಪದ್ಯೇತ ಸಾಕ್ಷಿಣಮ್ ॥೫೮॥**

ವೇದೇ= ವೇದಜ್ಞಾನಸಂಪನ್ನನಾದ ಬ್ರಾಹ್ಮಣನಲ್ಲಿ, ಇಮಂ= ಶ್ರೀನಾರಾಯಣನನ್ನು, ಅವಿಚಿನ್ವನ್= ಅನ್ವೇಷಣವನ್ನು ಮಾಡದೆ ಇದರಿಂದ ಭಗವತ್ಸ್ವರೂಪದ ಅನ್ವೇಷಣೆಯನ್ನು ಸತ್ಸಂಗತಿ ಮೂಲಕವಾಗಿಯೇ ಮಾಡಬೇಕು ಎಂದು ಗುಹ್ಯಾರ್ಥವು ಸೂಚಿತವಾಗುತ್ತದೆ. ಅಥವಾ ವೇದೇ= ವೇದಗಳಲ್ಲಿ, ಇಮಂ= ಈ ನಾರಾಯಣನನ್ನು, ಅವಿಚಿನ್ವನ್= ಉಪಕ್ರಮಾದಿ ತಾತ್ಪರ್ಯ ಲಿಂಗಗಳಿಂದ ವಿಚಾರ ಮಾಡದೆ, ಅಥವಾ, 'ಅತ್ರೈವ ಮೃಗ್ಯಃ ಪುರುಷೋ ನೇತಿ ನೇತೀತ್ಯತತ್ ತ್ಯಜನ್' (ಇವನು ಜಡನಲ್ಲ,

ಜೀವನಲ್ಲ ಎಂದು ಹೇಳುತ್ತಾ ವೇದ, ಭಾರತ, ಪಂಚರಾತ್ರಗಳಲ್ಲಿಯೇ ನಾರಾಯಣನನ್ನು ಹುಡುಕಬೇಕು. ಪಾಶುಪತಾದ್ಯಾಗಮಗಳಲ್ಲಿ ಹುಡುಕಬಾರದು. ಅಂತಹ ಪಾಶುಪತಾದಿ ಆಗಮಗಳನ್ನು, ಅವಿಚಿನ್ವನ್ ಅಂದರೆ ತ್ಯಾಗವನ್ನು ಮಾಡುವವನಾಗಿ), ಪ್ರತ್ಯರ್ಥಿಷು= ಸಚ್ಛಾಸ್ತ್ರವಿರೋಧಿಗಳಾದ ಪಾಶುಪತಾದಿ ಕುಶಾಸ್ತ್ರಗಳಲ್ಲಿ, ಪರ್ಯೇಷಣಮ್= ಶ್ರವಣಾದಿ-ಮನನಾದಿರೂಪವಾದ ವಿಚಾರವನ್ನು, ನ ಗಚ್ಛೇತ್= ಮಾಡಬಾರದು. ಹಾಗೆ ಕುಶಾಸ್ತ್ರವನ್ನು ಅಧ್ಯಯನವನ್ನು ಮಾಡದೆ ಸಚ್ಛಾಸ್ತ್ರವನ್ನು ಅಧ್ಯಯನ ಮಾಡುವುದರಿಂದ, ತಂ= ಆ ವೇದಗಮ್ಯನಾದ, ಪ್ರಭುಂ= ಸರ್ವಸಮರ್ಥನಾದ ನಾರಾಯಣನನ್ನು ಅಥವಾ ಸಾಕ್ಷಿಣಂ= ಸರ್ವಸಾಕ್ಷಿಯಾದ ನಾರಾಯಣನನ್ನು, ಪಶ್ಯತಿ= ಅಪರೋಕ್ಷವಾಗಿ ನೋಡುತ್ತಾನೆ. **'ನಾಸ್ಯ ಪರ್ಯೇಷಣಮ್ ಗಚ್ಛೇತ್ ತಥಾ ಪಶ್ಯತಿ ತಂ ಪ್ರಭುಮ್'** ಎಂಬ ಪಾಠವನ್ನು ಇಟ್ಟುಕೊಂಡು ವಾದಿರಾಜರು ವ್ಯಾಖ್ಯಾನವನ್ನು ಮಾಡಿದ್ದಾರೆ.

**ತೂಷ್ಣೀಂಭೂತ ಉಪಾಸೀತ ಶ್ರುತಮಸ್ಯಾಂತರಾತ್ಮನಿ ।**
**ಅಭ್ಯಾವರ್ತೇತ ಬ್ರಹ್ಮಾಸ್ಮೈ ಬಹ್ವನಂತರಮಾಪ್ನುಯಾತ್** ॥೫೯॥

ಅಂತರಾತ್ಮನಿ= ಒಳಗೆ ಪರಮಾತ್ಮನನ್ನು ಹೊಂದಿದ ಅಪರೋಕ್ಷ ಜ್ಞಾನಿಯು ಅಂತರಾತ್ಮ. ಅಂತಹ ಅಪರೋಕ್ಷಜ್ಞಾನಿಯು ಅಥವಾ ಯೋಗಿವರ್ಯನು, ಆಗತೇ ಸತಿ= ಬಂದಾಗ, ಅಸ್ಯ= ಹರಿಯ, ಶ್ರುತಂ= ವೇದಪ್ರತಿಪಾದ್ಯ ಮಹಿಮೆಯನ್ನು, ಬುದ್ಧ್ವಾ= ಅವನ ಮುಖದಿಂದ ಶ್ರವಣದಿಂದ ತಿಳಿದು ಬೇರೆಯ ಸಮಯದಲ್ಲಿ, ತೂಷ್ಣೀಂಭೂತಃ= ಮೌನದಿಂದ ಕುಳಿತು, ಉಪಾಸೀತ= ಪರಮಾತ್ಮನ ಚಿಂತನೆಯನ್ನು ಮಾಡಬೇಕು. ಅಸ್ಮೈ= ಅಪರೋಕ್ಷಜ್ಞಾನಕ್ಕಾಗಿ, ಬ್ರಹ್ಮ= ವೇದವನ್ನು (ವೇದಶಾಸ್ತ್ರವನ್ನು), ಬಹು= ಬಹಳವಾಗಿ, ಅಭ್ಯಾವರ್ತೇತ= ಆವೃತ್ತಿಯನ್ನು ಮಾಡಬೇಕು. **'ಆವೃತ್ತಿರಸಕೃದುಪದೇಶಾತ್'** ಎಂದು ಸೂತ್ರವಿದೆಯಷ್ಟೆ! ಅನಂತರಂ= ಅನಂತರದಲ್ಲಿ, ಅನಂತರಂ= ಕೇವಲ ಅಂತರನೇ ಅಲ್ಲದೆ, ಸರ್ವಬಾಹ್ಯನೂ ಆಗಿ ವ್ಯಾಪ್ತನಾದ ಪರಮಾತ್ಮನನ್ನು, ಆಪ್ನುಯಾತ್= ಅಪರೋಕ್ಷವಾಗಿ ತಿಳಿಯಬೇಕು ಅಥವಾ ವೈಕುಂಠಾದಿ ಲೋಕಗಳಲ್ಲಿ ಅವನನ್ನೇ ಹೊಂದಬೇಕು.

ಹೀಗೆ ಸರ್ವಪುರುಷಾರ್ಥಸಾಧನವಾದ ಭಗವದಪರೋಕ್ಷಜ್ಞಾನವನ್ನು ಸಂಪಾದಿಸಲು ವೇದಾಂತಶಾಸ್ತ್ರಾಭ್ಯಾಸದಿಂದ ಉಂಟಾದ ವಿಷ್ಣುಸರ್ವೋತ್ತಮತ್ವವನ್ನು ಹೊಂದಿದ ಬ್ರಾಹ್ಮಣೋತ್ತಮರ ಸೇವೆಯೇ ಮುಖ್ಯವಾದ ಸಾಧನ, ಬೇರೆ ಯಾವುದೂ ಅಲ್ಲ ಎಂದು ಯಾವ ಸೇವೆಯನ್ನು ಹಿಂದೆ ಹೇಳಿದೆಯೋ ಆ ಸೇವೆಯಾದರೂ ವೈರಾಗ್ಯ ಸಹಕೃತವಾದರೆ ಮಾತ್ರ ಮಹಾಫಲಪ್ರದವಾದುದು ಎಂದು ಇಲ್ಲಿ ಹೇಳುತ್ತಾರೆ. ಸಾಧಕಪುರುಷನು ತೂಷ್ಣೀಂಭೂತಃ= ಫಲಾಪೇಕ್ಷೆರಹಿತನಾಗಿ, ಉಪಾಸೀತ= ಶ್ರೀನಾರಾಯಣನನ್ನು ಅಥವಾ ವಿದ್ಯೋಪದೇಶ ಮಾಡಿದ ಗುರುವನ್ನು ಸೇವಿಸಬೇಕು. 'ನ ಚೇಚ್ಛೇತ್ ಮನಸಾऽಪಿ ಚ' ಎಂಬ ಪಾಠವನ್ನು ಇಟ್ಟುಕೊಂಡು ವ್ಯಾಖ್ಯಾನ ಮಾಡುತ್ತಾರೆ. ಮನಸಾऽಪಿ= ಮನಸ್ಸಿನಿಂದಲೂ ಕೂಡ, ನ ಚೇಚ್ಛೇತ್= ಫಲವನ್ನು ಬಯಸಬಾರದು. ಮನಸ್ಸಿನಿಂದಲೂ ಬಯಸಬಾರದು ಎಂದು ಹೇಳಿದುದರಿಂದ ಮಾತಿನಿಂದ ಬಯಸಬಾರದು ಎಂದು ಕೈಮುತ್ಯನ್ಯಾಯದಿಂದ ಸಿದ್ಧವಾಗುತ್ತದೆ. ಚಶಬ್ದವು ದುರ್ವಿಷಯಗಳನ್ನು ಯೋಚನೆ ಮಾಡಬಾರದು ಎಂಬುದನ್ನು ಸಮುಚ್ಚಯ ಮಾಡುತ್ತದೆ. ಅಸ್ಮೈ= ಇಂತಹ ವಿಧವಾದ ಉಪಾಸಕನಿಗೆ, ಬ್ರಹ್ಮ= ಪರಬ್ರಹ್ಮನು, ಅಭ್ಯಾವರ್ತೇತ= ಅನುಗ್ರಹವನ್ನು ಮಾಡಲು ಅಭಿಮುಖವಾಗಿ ಇರುತ್ತಾನೆ. ಅನಂತರಂ= ಭಗವಂತನನ್ನು ಅನುಗ್ರಹೋನ್ಮುಖನನ್ನಾಗಿ ಮಾಡಿಕೊಂಡಮೇಲೆ, ಬಹು= ಪೂರ್ಣನಾದ, ಬ್ರಹ್ಮ= ಪರಮಾತ್ಮನನ್ನು ಅಥವಾ ಯಥೇಷ್ಟಾನಂದವನ್ನು ಅಥವಾ ವೈಕುಂಠಾದಿ ಲೋಕವನ್ನು, ಆಪ್ನುಯಾತ್= ಹೊಂದುತ್ತಾನೆ. **'ಕಿಮಲಭ್ಯಂ ಭಗವತಿ ಪ್ರಸನ್ನೇ ಶ್ರೀನಿಕೇತನೇ'** ಎಂಬ ಪ್ರಮಾಣಕ್ಕೆ ಅನುಸಾರವಾಗಿ ಬ್ರಹ್ಮಪ್ರಾಪ್ತಿಯನ್ನು ಪಡೆದ ಮೇಲೆ ಕರತಲಾಮಲಕದಂತೆ ಅನಾಯಾಸವಾಗಿ ಸರ್ವಪುರುಷಾರ್ಥಗಳನ್ನೂ ಹೊಂದುತ್ತಾನೆ.

ಅಥವಾ ಜ್ಞಾನವನ್ನು ಸಂಪಾದಿಸಲು ಬಯಸುವ ಸಾಧಕನು ಗುರೂಪಸತ್ತಿಯ ಮೂಲಕವೇ ಜ್ಞಾನವನ್ನು ಸಂಪಾದಿಸಬೇಕು, ಬೇರೆ ರೀತಿಯಿಂದಲ್ಲ ಎಂದು ನಿಯಮವಿರುವುದರಿಂದ ಮೊದಲು ಅಂತಹ ಗುರೂಪಸತ್ತಿಯನ್ನು ಮಾಡುವ ಪ್ರಕಾರವನ್ನು ತಿಳಿಸುತ್ತಾರೆ. ತೂಷ್ಣೀಂಭೂತಃ= ವಿದ್ಯಾರ್ಥಿಯಾಗಿ ಗುರುಕುಲ ವಾಸವನ್ನು ಮಾಡುವವನು ತನ್ನ ಸುಖ-ದುಃಖಗಳನ್ನು ಹೇಳಿಕೊಳ್ಳದೆ ಮೌನದಿಂದ, ಉಪಾಸೀತ= ಗುರುಗಳ ಸೇವೆಯನ್ನು ಮಾಡಬೇಕು. ಮನಸಾऽಪಿ= ಮನಸ್ಸಿನಿಂದಲೂ ಕೂಡ ಗುರುವಿಗೆ

ಅಪ್ರಿಯವಾದುದನ್ನು, ನ ಚ ಇಚ್ಛೇತ್= ಬಯಸಬಾರದು. 'ಮನಸಾऽಪಿ' ಎಂದು ಹೇಳಿದುದರಿಂದಲೇ ಮಾತಿನಿಂದಲೂ ಅಪ್ರಿಯವನ್ನು ಮಾತನಾಡಬಾರದು ಎಂಬುದು ಕೈಮುತ್ಯನ್ಯಾಯದಿಂದ ಸಿದ್ಧವಾಗುತ್ತದೆ. ಅಸ್ಮೈ= ಹೀಗೆ ಗುರೂಪಸತ್ತಿಯನ್ನು ಮಾಡುವ ಬ್ರಾಹ್ಮಣನಿಗೆ, ಬ್ರಹ್ಮ= ವೇದವಿದ್ಯೆಯು, ಅಭ್ಯಾವರ್ತೇತ= ಅನಾಯಾಸವಾಗಿ ತನ್ನನ್ನೇ ಕೊಟ್ಟುಕೊಳ್ಳಲು ಅಭಿಮುಖವಾಗಿ ಬರುತ್ತದೆ. ಅನಂತರಂ= ವೇದಾಭಿಮಾನಿ ದೇವತೆಗಳ ಅನುಗ್ರಹದಿಂದ ವೇದವಿದ್ಯೆಯನ್ನು ಪಡೆದ ಬಳಿಕ, ಬಹು= ಆದ್ಯಂತಶೂನ್ಯನಾದ, ಬ್ರಹ್ಮ= ಪರಮಾತ್ಮನನ್ನು ಅಥವಾ ಪರಮಾತ್ಮವಿಷಯಕ ಅಪರೋಕ್ಷಜ್ಞಾನವನ್ನು, ಆಪ್ನುಯಾತ್= ಹೊಂದುತ್ತಾನೆ.

**ಮೌನಾದ್ಧಿ ಮುನಿರ್ಭವತಿ ನಾರಣ್ಯವಸನಾನ್ಮುನಿಃ ।**
**ಅಕ್ಷರಂ ತಂ ತು ಯೋ ವೇದ ಸ ಮುನಿಃ ಶ್ರೇಷ್ಠ ಉಚ್ಯತೇ ॥೬೦॥**

'ಯೇ ವಾ ಗೃಹಂ ಪರಿತ್ಯಜ್ಯ ವನಮೇವ ಸಮಾಶ್ರಿತಾಃ ।
ವಿಷಯೇಷು ವಿರಾಗಾದ್ಯಾಃ ಮುನಯಸ್ತೇ ಸಮೀರಿತಾಃ ॥',
'ಪೂಜ್ಯಾಸ್ತೇ ಮುನಯೋ ಲೋಕೇ ಬ್ರಾಹ್ಮಣಾ ನ್ಯಾಸಿನಶ್ಚ ಯೇ'

(ಯಾರು ಗೃಹವನ್ನು ತ್ಯಜಿಸಿ, ಅರಣ್ಯದಲ್ಲಿ ವಾಸಿಸಿ, ವಿಷಯವೈರಾಗ್ಯವನ್ನು ಹೊಂದಿರುತ್ತಾರೆಯೋ ಅಂತಹವರು ಮುನಿಗಳು. ಅಂತಹ ಮುನಿಗಳೂ ಮತ್ತು ಸಂನ್ಯಾಸಿಗಳೂ ಆದ ಬ್ರಾಹ್ಮಣರು ಪೂಜ್ಯರಾದವರು) ಇತ್ಯಾದಿ ಪ್ರಮಾಣಗಳು ಅರಣ್ಯವಾಸಿಗಳಿಗೇ ಉತ್ತಮತ್ವವನ್ನು ಹೇಳುವುದರಿಂದ ವಿಷಯವಿರಕ್ತಿಯುಳ್ಳ ವೇದವಿದ್ಯಾಸಂಪನ್ನನಿಗೇ ಬ್ರಾಹ್ಮಣತ್ವವನ್ನು ಮತ್ತು ಪೂಜ್ಯತ್ವವನ್ನು ಹೇಗೆ ಹೇಳುತ್ತೀರಿ ಎಂಬ ಪ್ರಶ್ನೆಗೆ ಉತ್ತರವಾಗಿ–

'ವಿಷ್ಣುಭಕ್ತಿಪರೋ ಯಸ್ತು ಸದಾಚಾರರತಃ ಸದಾ ।
ವೇದಾಂತಪರಿನಿಷ್ಣಾತೋ ಗಾರ್ಹಸ್ಥ್ಯಪರಿಪೋಷಕಃ ॥
ವಿವಿಕ್ತಸೇವೀ ಲಘ್ವಾಶೀ ಪೂಜ್ಯೋ ಬ್ರಾಹ್ಮಣಸತ್ತಮಃ ।
ನಾರಣ್ಯವಾಸೀ ದುಷ್ಟಾತ್ಮಾ ವಿಪ್ರಃ ಸ್ವಾಧ್ಯಾಯಶೀಲ್ಯಪಿ ॥'

(ಯಾವನು ವಿಷ್ಣುಭಕ್ತಿಪರಾಯಣನಾಗಿ, ಸದಾಚಾರರತನಾಗಿ, ವೇದಾಂತದಲ್ಲಿ ಚೆನ್ನಾಗಿ ನಿಷ್ಠೆಯನ್ನು ಹೊಂದಿದವನಾಗಿ, ಗೃಹಸ್ಥಧರ್ಮಗಳನ್ನು ಪೋಷಿಸುತ್ತಾ, ಏಕಾಂತವಾಸಿಯೂ, ಅಲ್ಪಾಹಾರವುಳ್ಳವನೂ ಆಗಿರುತ್ತಾನೆಯೋ ಅಂತಹ ಬ್ರಾಹ್ಮಣ

ಶ್ರೇಷ್ಠನು, ಪೂಜ್ಯನಾದವನು. ಅರಣ್ಯವಾಸವನ್ನು ಮಾಡಿ ಸ್ವಾಧ್ಯಾಯ ಸಂಪನ್ನನಾದರೂ ಮನಶ್ಶುದ್ಧಿಯಿಲ್ಲದ ಬ್ರಾಹ್ಮಣನು ಪೂಜ್ಯನಲ್ಲ) ಮುಂತಾದ ಪ್ರಮಾಣಗಳಿಂದ ಮನೋನೈರ್ಮಲ್ಯವಿಲ್ಲದ ವನವಾಸಕ್ಕಿಂತಲೂ ಮನಶ್ಶುದ್ಧಿಯುಳ್ಳ ಗೃಹಸ್ಥಾಶ್ರಮಿಯೇ ಶ್ರೇಷ್ಠನಾದವನು ಎಂದು ಹೇಳುತ್ತಾರೆ.

ಅರಣ್ಯವಸನಾತ್= ಅರಣ್ಯದಲ್ಲಿ ವಾಸ ಮಾಡುವುದರಿಂದ, ಸಃ= ಮನೋದೋಷಯುಕ್ತನಾದ, ಅರಣ್ಯವಾಸಿಯಾದ ಬ್ರಾಹ್ಮಣನು, ಮುನಿಃ ನ ಭವತಿ= ಮುನಿಶಬ್ದದಿಂದ ಹೇಳಲ್ಪಡುವುದಿಲ್ಲ. ಹಾಗಾದರೆ ಗೃಹಸ್ಥನಾದವನಿಗೆ ಮುನಿಶಬ್ದವಾಚ್ಯತ್ವವು ಹೇಗೆ ಉಂಟಾಗುತ್ತದೆ ಎಂಬುದನ್ನು ಹೇಳುತ್ತಾರೆ. ಸಃ= ಗೃಹವಾಸಿಯಾದ ಬ್ರಾಹ್ಮಣನು, ಮೌನಾತ್= ಮುನಿಪ್ರಾಪ್ಯನಾದ ವಿಷ್ಣುವಿನ ಸಂಬಂಧದಿಂದಲೇ, ಮುನಿಃ ಭವತಿ= ಮುನಿಶಬ್ದವಾಚ್ಯನಾಗುತ್ತಾನೆ. ಅಥವಾ ಮೌನಾತ್= ಕೇವಲ ವಾಙ್ನಿಯಮನವನ್ನು ಮಾಡಿ ಸುಮ್ಮನೆ ಇರುವುದರಿಂದ, ಅರಣ್ಯವಸನಾಚ್ಚ= ಮನೆಯಲ್ಲಿ ವಾಸ ಮಾಡದೆ ಅರಣ್ಯದಲ್ಲಿ ವಾಸಮಾಡುವುದರಿಂದ, ಸಃ= ಮೌನದಿಂದ ಅರಣ್ಯವಾಸ ಮಾಡುವ ಬ್ರಾಹ್ಮಣನು, ಮುನಿಃ ನ ಭವತಿ= ಮುನಿಶಬ್ದವಾಚ್ಯನಾಗುವುದಿಲ್ಲ. ಆದರೆ ಯಃ= ಯಾವ ಬ್ರಾಹ್ಮಣನು, ಅಕ್ಷರಂ= ನಾಶರಹಿತನಾದ ವಿಷ್ಣುವನ್ನು, 'ಅಕ್ಷರಂ ಯೋ ತಪೋವೇದ' ಎಂಬ ಪಾಠವನ್ನು ಇಟ್ಟುಕೊಂಡರೆ–

'ವಿಷ್ಣುಮುದ್ದಿಶ್ಯ ಯತ್ಕರ್ಮ ವಿಷ್ಣುಪ್ರೀತ್ಯರ್ಥಮೇವ ಚ ।
ಕ್ರಿಯತೇ ಕಾರ್ಯಮಿತ್ಯೇವ ತದಾನಂತ್ಯಾಯ ಕಲ್ಪತೇ ॥'

(ವಿಷ್ಣುವನ್ನು ಉದ್ದೇಶಿಸಿ ಕೇವಲ ವಿಷ್ಣುಪ್ರೀತ್ಯರ್ಥವಾಗಿ ಮಾಡುವ ಕರ್ಮವು ಅನಂತ ಫಲವನ್ನು ಕೊಡುತ್ತದೆ) ಎಂಬ ಪ್ರಮಾಣಕ್ಕೆ ಅನುಸಾರವಾಗಿ ಅಂತಹ ಕರ್ಮವೇ ಅಕ್ಷರತಪಃಶಬ್ದವಾಚ್ಯವೆಂದು ಯಾವನು ತಿಳಿದಿರುತ್ತಾನೆಯೋ ಅಥವಾ ಅಂತಹ ಅಕ್ಷರವಾದ ತಪಸ್ಸನ್ನು ಮಾಡಲು ಯಾವನು ತಿಳಿದಿರುತ್ತಾನೆಯೋ, ಸಃ= ಅಂತಹ ಬ್ರಾಹ್ಮಣನೇ, ಮುನಿಶ್ರೇಷ್ಠಃ= ಮುನಿಶಬ್ದವಾಚ್ಯರಾದವರಲ್ಲಿ ಶ್ರೇಷ್ಠನಾದವನು. ಅಥವಾ ಶ್ರೇಷ್ಠನಾದ ಮುನಿ ಎಂದು ಉಚ್ಯತೇ= ಶಾಸ್ತ್ರಗಳಲ್ಲಿ ಹೇಳಲ್ಪಡುತ್ತದೆ. 'ಮುನಿಃಶ್ರೇಷ್ಠ' ಎಂಬ ಪಾಠವನ್ನು, 'ಮುನಿಶ್ರೇಷ್ಠಃ' ಎಂಬ ಪಾಠವನ್ನು ಇಟ್ಟುಕೊಂಡು ಈ ಎರಡು ಅರ್ಥಗಳನ್ನು ಹೇಳಿದ್ದಾರೆ.

ಸರ್ವಾರ್ಥಾನಾಂ ವ್ಯಾಕರಣಾದ್ ವೈಯಾಕರಣ ಉಚ್ಯತೇ ।
ತನ್ಮೂಲತೋ ವ್ಯಾಕರಣಂ ವ್ಯಾಕರೋತೀತಿ ತತ್ ತಥಾ ॥೬೧॥

ಲೋಕದಲ್ಲಿ ಶಬ್ದಶಾಸ್ತ್ರಪಟುಗಳಾದ ವೈಯಾಕರಣರನ್ನು ಬ್ರಾಹ್ಮಣೋತ್ತಮರೆಂದು ಹೇಳುವುದರಿಂದ ಅಕ್ಷರತಪೋವೇದಿಗಳಾದ ಬ್ರಾಹ್ಮಣರೇ ಬ್ರಾಹ್ಮಣೋತ್ತಮರು ಎಂಬುದು ಹೇಗೆ ಎಂಬ ಪ್ರಶ್ನೆಗೆ ಉತ್ತರವನ್ನು ಇಲ್ಲಿ ಹೇಳುತ್ತಾರೆ. ಕೇವಲ ಶಬ್ದಶಾಸ್ತ್ರವನ್ನು ಅಭ್ಯಾಸ ಮಾಡಿದವರೇ ಬ್ರಾಹ್ಮಣೋತ್ತಮರಲ್ಲ. ಮತ್ತೇನೆಂದರೆ 'ಶಬ್ದಸ್ಯ ಬ್ರಹ್ಮಣ ಏಷ ಪಂಥಾಃ' (ಎಲ್ಲ ಶಬ್ದಗಳೂ ಬ್ರಹ್ಮನ ದಾರಿಯಲ್ಲಿಯೇ ಹೋಗಿ ಬ್ರಹ್ಮನನ್ನೇ ಹೇಳುತ್ತವೆ) ಮುಂತಾದ ಪ್ರಮಾಣಗಳಿಗೆ ಅನುಸಾರವಾಗಿ ಸರ್ವಶಬ್ದಬ್ರಹ್ಮನನ್ನು ಎಂದರೆ ಶಬ್ದರಾಶಿಯನ್ನು ಪರಬ್ರಹ್ಮನಿಗೆ ಸಂಬಂಧಿಸಿದಂತೆ ವ್ಯಾಖ್ಯಾನ ಮಾಡುವ ಬ್ರಾಹ್ಮಣರೇ ವೈಯಾಕರಣರು ಮತ್ತು ಬ್ರಾಹ್ಮಣೋತ್ತಮರು ಎಂದು ಹೇಳಿ, ಅಂತಹ ವೈಯಾಕರಣರು ಅಕ್ಷರತಪೋವೇದಿಗಳಲ್ಲೇ ಸೇರುತ್ತಾರೆ ಎಂದು ಉತ್ತರವನ್ನು ನೀಡುತ್ತಾರೆ.

ಸರ್ವಾರ್ಥಾನಾಂ= ಸರ್ವಶಬ್ದಗಳ ಅರ್ಥಗಳನ್ನು, ವ್ಯಾಕರಣಾತ್= 'ವಿಃ ಪಕ್ಷಿಪರಮಾತ್ಮನೋಃ' ಎಂದು ಕೋಶವಿರುವುದರಿಂದ, ವೌ= ಹರಿಯಲ್ಲಿ, ಆ= ಚೆನ್ನಾಗಿ, ಕರಣಾತ್= ವಿಷಯೀಕರಣವನ್ನು ಮಾಡುವುದರಿಂದ, ವೈಯಾಕರಣಃ= ವೈಯಾಕರಣನೆಂದು, ಉಚ್ಯತೇ= ಹೇಳಲ್ಪಡುತ್ತದೆ. ಹೊರತು ಕೇವಲ ಶಬ್ದಶಾಸ್ತ್ರ ಜ್ಞಾನದಿಂದ ಅಲ್ಲ. ಇಂತಹ ನಿಯಮವು ಏಕೆ ಎಂಬ ಪ್ರಶ್ನೆಗೆ ತನ್ಮೂಲತಃ ಎಂದು ಉತ್ತರವನ್ನು ಹೇಳುತ್ತಾರೆ. ವ್ಯಾಕರಣಂ= ಸರ್ವಶಬ್ದಗಳಿಗೂ ಯಥಾಸ್ಥಿತವಾದ ಅರ್ಥವನ್ನು ಸ್ಪಷ್ಟೀಕರಿಸುವ ಶಬ್ದಶಾಸ್ತ್ರವೇನಿದೆಯೋ ಅದು, ತನ್ಮೂಲತಃ= ಶಬ್ದಬ್ರಹ್ಮನಾಮಕವಾದ ವೇದಮೂಲವಾಗಿರುವುದರಿಂದಲೇ ಈ ನಿಯಮ ಎಂದು ತಿಳಿಯಬೇಕು. ತಸ್ಮಾತ್= ಆ ಕಾರಣದಿಂದ, ತತ್= ವೇದರೂಪವಾದ ಶಬ್ದಬ್ರಹ್ಮವೇ, ತಥಾ= ಮುಖ್ಯವಾಗಿ ವ್ಯಾಕರಣಶಬ್ದವಾಚ್ಯವಾದುದು ಬೇರೆ ಶಾಸ್ತ್ರವಲ್ಲ. ಹೀಗೆ ಹೇಳುವುದರಿಂದ ಅನಂತವಾಗಿರುವುದರಿಂದ ಮುಖ್ಯವಾಗಿ ಎಲ್ಲ ಶಬ್ದಾರ್ಥವನ್ನೂ ಸ್ಪಷ್ಟಪಡಿಸುವ ಸಾಮರ್ಥ್ಯವನ್ನು ಹೊಂದಿರುವುದರಿಂದ, ಜಗತ್ತಿನಲ್ಲಿ ಪ್ರಸಿದ್ಧವಾದ ವ್ಯಾಕರಣಶಾಸ್ತ್ರವು ತನ್ಮೂಲಕವಾಗಿರುವುದರಿಂದ, ಸರ್ವತ್ರ ವಿಷ್ಣ್ವೇಕವಿಷಯಕವಾದುದರಿಂದ ವೇದಗಳೇ ಮುಖ್ಯವಾಗಿ

ವ್ಯಾಕರಣಶಬ್ದವಾಚ್ಯವಾದವು. ಅವುಗಳ ಜ್ಞಾನವನ್ನು ಹೊಂದಿದ ಬ್ರಾಹ್ಮಣೋತ್ತಮನೇ ಮುಖ್ಯವಾಗಿ ವೈಯಾಕರಣಶಬ್ದವಾಚ್ಯನಾದವನು ಎಂದು ನಿರ್ಣಯಿಸಲ್ಪಡುತ್ತದೆ.

ಭಾರತಶ್ರೀನಿವಾಸಾಚಾರ್ಯರು ಈ ಶ್ಲೋಕಕ್ಕೆ ಇನ್ನೊಂದು ರೀತಿಯಲ್ಲಿ ವ್ಯಾಖ್ಯಾನವನ್ನು ಮಾಡುತ್ತಾರೆ. ಸರ್ವಾರ್ಥಾನಾಂ= ಸಮಸ್ತವಾದ ಬ್ರಹ್ಮಾದಿ ಪದಾರ್ಥಗಳನ್ನು, ವ್ಯಾಕರಣಾತ್= ವಿಶೇಷವಾಗಿ ಸೃಷ್ಟಿಮಾಡುವುದರಿಂದ, ಅಸೌ= ಈ ಪರಮಾತ್ಮನು, ವೈಯಾಕರಣ ಉಚ್ಯತೇ= ವೈಯಾಕರಣನೆಂದು ಹೇಳಲ್ಪಡುತ್ತಾನೆ. **'ಅನೇನ ಜೀವೇನಾತ್ಮನಾ ಅನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ'** (ಈ ಜೀವ ಎಂಬ ಅನಿರುದ್ಧರೂಪದಿಂದ ಪ್ರವೇಶಿಸಿ ವಸ್ತುಗಳ ನಾಮರೂಪಗಳನ್ನು ಉಂಟು ಮಾಡುತ್ತೇನೆ) ಎಂಬ ಶ್ರುತಿಯು ಈ ವಿಷಯದಲ್ಲಿ ಪ್ರಮಾಣ. ಜಗತ್ತು ಬ್ರಹ್ಮಾದಿಗಳಿಂದ ಸೃಷ್ಟವಾದುದರಿಂದ ಪರಮಾತ್ಮನು ಹೇಗೆ ವೈಯಾಕರಣಶಬ್ದವಾಚ್ಯನಾಗುತ್ತಾನೆ ಎಂಬ ಪ್ರಶ್ನೆಗೆ 'ತನ್ಮೂಲತಃ' ಎಂದು ಉತ್ತರವನ್ನು ಹೇಳುತ್ತಾರೆ. ತತ್= ಆ ಪರಬ್ರಹ್ಮನು, ಮೂಲತಃ ವ್ಯಾಕರಣಂ= ಮೂಲಕಾರಣನಾದವನು. ಬ್ರಹ್ಮಾದಿಗಳು ಅವಾಂತರ ಕಾರಣರಾದವರು ಅಥವಾ ಬ್ರಹ್ಮಾದಿಗಳು ಮಾಡುವ, ವ್ಯಾಕರಣಂ= ಸೃಷ್ಟಿಯು, ತನ್ಮೂಲತಃ= ಅವನ ಅನುಗ್ರಹದಿಂದಲೇ ಆಗುತ್ತದೆ. ಆದ್ದರಿಂದ ಅವನೇ ವೈಯಾಕರಣ. ತತ್= ಬ್ರಹ್ಮನು, ಯಥಾಸ್ಥಿತಂ= ಹೇಗಿದ್ದಾನೆಯೋ, ತಥಾ= ಹಾಗೆಯೇ ವಿವರಿಸುತ್ತದೆ ಎಂಬ ನಿಮಿತ್ತದಿಂದ ವ್ಯಾಕರಣವು ವ್ಯಾಕರಣವೆನಿಸುತ್ತದೆ. ಇದರಿಂದ ವ್ಯಾಕರಣವು ಹೇಗೆ ವೇದಾಂಗವಾಗುತ್ತದೆ ಮತ್ತು ಯಾವ ನಿಮಿತ್ತದಿಂದ ವ್ಯಾಕರಣ ಶಬ್ದವಾಚ್ಯವಾಗುತ್ತದೆ ಎಂಬುದನ್ನು ಹೇಳಿದಂತಾಯಿತು.

**ಪ್ರತ್ಯಕ್ಷದರ್ಶೀ ಲೋಕಾನಾಂ ಸರ್ವದರ್ಶೀ ಭವೇನ್ನರಃ ।**
**ಸತ್ಯೇ ವೈ ಬ್ರಾಹ್ಮಣಸ್ತಿಷ್ಠನ್ ತದ್ವಿದ್ವಾನ್ ಸರ್ವವಿದ್ ಭವೇತ್ ॥೬೨॥**

ಬ್ರಾಹ್ಮಣನು ವ್ಯಾಕರಣಶಬ್ದವಾಚ್ಯವಾದ ವೇದಗಳನ್ನು ಭಗವತ್ಪರವಾಗಿ ವ್ಯಾಖ್ಯಾನ ಮಾಡುವುದರಿಂದ ಅವನಿಗೆ ಎಂತಹ ಫಲವು ಉಂಟಾಗುತ್ತದೆ ಎಂದರೆ ಸ್ವಬಿಂಬಾಪರೋಕ್ಷಜ್ಞಾನಪೂರ್ವಕವಾಗಿ ಸ್ವಸ್ವರೂಪಾಭಿವ್ಯಕ್ತಿಯುಂಟಾಗಿ ಅದರಿಂದ ಯಥಾಯೋಗ್ಯವಾಗಿ ಸರ್ವವಸ್ತುಗಳ ಅಪರೋಕ್ಷಜ್ಞಾನವು ಉಂಟಾಗುತ್ತದೆ ಎಂದು ಹೇಳುತ್ತಾರೆ.

ಪ್ರತ್ಯಕ್ಷದರ್ಶೀ= ಪರಮಾತ್ಮನನ್ನು ಪ್ರತ್ಯಕ್ಷವಾಗಿ ನೋಡಿದವನು ಎಂದರೆ ಅಪರೋಕ್ಷಜ್ಞಾನಿಯಾದ, ನರಃ= 'ರೀಙ್ ಕ್ಷಯೇ' ಎಂದು ಧಾತುವಿರುವುದರಿಂದ ಕ್ಷಯವನ್ನು ಹೊಂದದ ಪುರುಷನು, ಲೋಕಾನಾಂ= ಅಜ್ಞಜನರ, ಸರ್ವದರ್ಶೀ= ವಿಷಯಾಭಿಲಾಷೆಯುಳ್ಳ ಮನಸ್ಸಿನಿಂದ ಮಾಡಿದ ಎಲ್ಲ ಅಶುಭಕರ್ಮಗಳನ್ನೂ ತನ್ನ ಜ್ಞಾನಚಕ್ಷುಸ್ಸಿನಿಂದ ನೋಡುವವನಾಗಿ, ಭವೇತ್= ಆಗುತ್ತಾನೆ. ಅಥವಾ ಪ್ರತ್ಯಕ್ಷದರ್ಶೀ= ಪ್ರತ್ಯಕ್ಷ ಎಂದರೆ ಇಂದ್ರಿಯವೂ ತನ್ನ ಪ್ರತಿಯೊಂದು ಇಂದ್ರಿಯಗಳು ಭಗವಂತನ ಆರಾಧನೆಯ ಸಲುವಾಗಿಯೇ ಇವೆಯೇ ಹೊರತು ಭೋಗಸಾಧನವಾಗಿಲ್ಲ ಎಂದು ತಿಳಿಯುವ ಜ್ಞಾನಿಯು, ಲೋಕಾನಾಂ= ಜನರ, ಅಂತರ್ಯಾಮಿಯಾದ ಎಂದು ಇಟ್ಟುಕೊಳ್ಳಬೇಕು, ಸರ್ವದರ್ಶೀ= ಸರ್ವವ್ಯಾಪ್ತನಾದ, ಸರ್ವಶಬ್ದವಾಚ್ಯನಾದ ಪರಮಾತ್ಮನನ್ನು ನೋಡುವವನಾಗುತ್ತಾನೆ. **'ಸರ್ವಂ ಸಮಾಪ್ನೋಷಿ ತತೋऽಸಿ ಸರ್ವಃ'** (ನೀನು ಸರ್ವವನ್ನೂ ವ್ಯಾಪಿಸಿರುವುದರಿಂದ ಸರ್ವನಾಮಕನಾದವನು), **'ಸರ್ವಃ ಶರ್ವಃ'** (ವಿಷ್ಣುಸಹಸ್ರನಾಮದ ನಾಮಗಳು) ಅಪರೋಕ್ಷ ಜ್ಞಾನಿಯು **'ಸರ್ವತ್ರ ವಿದಿತಾತ್ಮನಾಮ್'** ಎಂಬ ಪ್ರಮಾಣದಂತೆ ಸರ್ವಾಧಿಷ್ಠಾನದಲ್ಲಿ ಭಗವಂತನ ಆರಾಧನೆಯನ್ನು ಮಾಡುವ ಯೋಗ್ಯತೆಯನ್ನು ಹೊಂದಿರುವುದರಿಂದ ಸರ್ವಶಬ್ದವಾಚ್ಯನಾದ ಸರ್ವಾಂತರ್ಯಾಮಿಯಾದ ನಾರಾಯಣನನ್ನು ನೋಡುವುದರಿಂದ, ಸರ್ವದರ್ಶೀ ಭವೇತ್= ಸರ್ವದರ್ಶಿಯಾಗುತ್ತಾನೆ, ಸರ್ವದರ್ಶೀ ಎನಿಸುತ್ತಾನೆ. ಇದರಿಂದ ಸರ್ವವೇದಗಳನ್ನೂ ಭಗವತ್ಪರವಾಗಿ ಪ್ರತಿಪಾದನೆ ಮಾಡುವುದರಿಂದ ಇಂತಹ ಅಪರೋಕ್ಷಜ್ಞಾನವು ಉಂಟಾಗುತ್ತದೆ ಎಂದು ಫಲವನ್ನು ಹೇಳಿದಂತಾಯಿತು. ತತ್= ಆ ಕಾರಣದಿಂದ, ಸತ್ಯೇ= **'ಸತ್ಯಂ ಪರಂ ಧೀಮಹಿ'** ಎಂದು ಹೇಳಿದ ಸತ್ಯಶಬ್ದವಾಚ್ಯನಾದ ಭಗವಂತನಲ್ಲಿಯೇ, ವಾ ಶಬ್ದವು ಅವಧಾರಣೆಯನ್ನು ಹೇಳುತ್ತದೆ. ತಿಷ್ಠನ್= ನಿಷ್ಠೆಯುಳ್ಳವನಾಗಿ ಎಂದರೆ ಭಗವಂತನಲ್ಲಿ ಅವನ ಅನುಗ್ರಹವನ್ನು ಬಿಟ್ಟು ಬೇರೆ ಯಾವುದನ್ನೂ ಬೇಡದೆ ಇರುವ, ತಿಷ್ಠನ್= ನಿಷ್ಠಾವಂತನಾದ, ವಿದ್ವಾನ್ ಬ್ರಾಹ್ಮಣಃ= ವಿದ್ವಾಂಸನಾದ ಬ್ರಾಹ್ಮಣನು, ಸರ್ವವಿತ್ ಭವೇತ್= ಭೂತ- ಭವಿಷ್ಯದ್-ವರ್ತಮಾನರೂಪವಾದ ಮೂರುಕಾಲಕ್ಕೆ ಸಂಬಂಧಿಸಿದ, ತನಗೆ ಯೋಗ್ಯವಾದ ಸರ್ವವಿಷಯಕ ಜ್ಞಾನವನ್ನು ಹೊಂದುವವನಾಗುತ್ತಾನೆ.

**ಜ್ಞಾನಾದಿಷು ಸ್ಥಿತೋಽಪ್ಯೇವಂ ಕ್ಷತ್ರಿಯೋ ಬ್ರಹ್ಮ ಪಶ್ಯತಿ ।**
**ವೇದಾನಾಂ ಚಾನುಪೂರ್ವ್ಯೇಣ ಚೈತದ್ ವಿದ್ವಾನ್ ಬ್ರವೀಮಿ ತೇ ॥**

ಇಂತಹ ಭಗವದ್ವಿಷಯಕವಾದ ಸಾಧನಾನುಷ್ಠಾನವನ್ನು ಮಾಡುವುದರಿಂದ ಬ್ರಾಹ್ಮಣರಿಗೆ ಮಾತ್ರ ಮಹಾನಿಷ್ಪವು ನಿವೃತ್ತವಾಗುತ್ತದೆ ಎಂಬುದಲ್ಲ, ಕ್ಷತ್ರಿಯರಿಗೂ ಅಂತಹ ಫಲವು ದೊರೆಯುತ್ತದೆ. ನೀನೂ ಸಹ ಶ್ರೇಷ್ಠನಾದ ಗಂಧರ್ವನ ಅಂಶನಾದುದರಿಂದ, ಮಹಾಧಿಕಾರಿಯಾಗಿರುವುದರಿಂದ, ನಿನಗಿಂತ ಉತ್ತಮರಾದ ಯುಧಿಷ್ಠಿರಾದಿಗಳಲ್ಲಿ ದ್ವೇಷವನ್ನು ಮಾಡಿದುದರಿಂದ ಉಂಟಾಗುವ ಮಹಾ ಅನರ್ಥವನ್ನು ಪರಿಹರಿಸಿಕೊಳ್ಳಲು ನಾನು ಹೇಳಿದ ಸಾಧನೆಯನ್ನು ಬಿಟ್ಟು ಬೇರೆ ಮಾರ್ಗವಿಲ್ಲ. ಆದ್ದರಿಂದ ಅಂತಹ ಸಾಧನೆಯನ್ನೇ ಸಂಪಾದಿಸುವವನಾಗು ಎಂದು ಸನತ್ಸುಜಾತರು ಧೃತರಾಷ್ಟ್ರನಿಗೆ ಉಪದೇಶವನ್ನು ಮಾಡುತ್ತಾರೆ.

ಜ್ಞಾನಾದಿಷು= ಪರೋಕ್ಷ-ಅಪರೋಕ್ಷವಿಷಯಕವಾದ ಜ್ಞಾನ ಮತ್ತು ಭಕ್ತಿ-ವೈರಾಗ್ಯಗಳು ಇವುಗಳಲ್ಲಿ, ಸ್ಥಿತಃ= ನಿಷ್ಣಾತನಾಗಿ ಎಂದರೆ ನಿಷ್ಠೆಯುಳ್ಳವನಾಗಿ, ಏವಂ= ಜ್ಞಾನಾದಿ ಗುಣಸಂಪನ್ನನಾದ ಬ್ರಾಹ್ಮಣನಂತೆ, ವಿದ್ವಾನ್= ತನಗೆ ಯೋಗ್ಯವಾದ ಜ್ಞಾನವನ್ನು ಹೊಂದಿದ, ಕ್ಷತ್ರಿಯ ಅಪಿ= ಕ್ಷತ್ರಿಯ ಕುಲೋತ್ಪನ್ನನೂ ಕೂಡ, ಅಪಿ ಶಬ್ದವು ಬ್ರಾಹ್ಮಣನಿಗಿಂತ ಕ್ಷತ್ರಿಯನು ಅಧಮನೆಂದು ಸೂಚಿಸುತ್ತದೆ. ವೇದಾನಾಂ= ಸರ್ವವೇದಗಳಿಗೆ, ಚಾರಪೂರ್ವೇಣ= ವಿಚಾರಪೂರ್ವಕವಾಗಿ ಎಂದರೆ ವಿಚಾರವನ್ನೇ ಮುಂದೆ ಮಾಡಿಕೊಂಡು, ಎಂದರೆ ವೇದವಿಚಾರವನ್ನೇ ಪ್ರಧಾನವನ್ನಾಗಿ ಮಾಡಿಕೊಂಡು ಅನುಷ್ಠಾನ ಮಾಡುವ ಸಾಧನಗಳಿಂದ, ಬ್ರಹ್ಮ= ಪರಬ್ರಹ್ಮನನ್ನು, ಪಶ್ಯತಿ= ಅಪರೋಕ್ಷವಾಗಿ ನೋಡುತ್ತಾನೆ. ಏತತ್= ಇದೇ, ಸಾಧನಂ= ಸಾಧನವನ್ನು, ತೇ= ಧೃತರಾಷ್ಟ್ರನಾದ ನಿನಗೆ, ಬ್ರವೀಮಿ= ದೊಡ್ಡ ಅನರ್ಥವನ್ನು ನಿವಾರಣೆ ಮಾಡುವುದೆಂದು ನಾನು ಉಪದೇಶ ಮಾಡುತ್ತಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಚತುಶ್ಚತ್ವಾರಿಂಶೋಽಧ್ಯಾಯಃ ॥
॥ ಇತಿ ಶ್ರೀಮನ್ಮಹಾಭಾರತೇ ಉದ್ಯೋಗಪರ್ವಣಿ ಸನತ್ಸುಜಾತೀಯೇ
ವಿಷಮವಾಕ್ಯಾರ್ಥಪ್ರಕಾಶೇ ತೃತೀಯೋಽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನಲವತ್ನಾಲ್ಕನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

# ನಲವತ್ತೈದನೆಯ ಅಧ್ಯಾಯ

ಸನತ್ಸುಜಾತರಿಂದ ಧೃತರಾಷ್ಟ್ರನನ್ನು ಕುರಿತು ತತ್ತ್ವೋಪದೇಶ.

## ಧೃತರಾಷ್ಟ್ರಃ

**ಸನತ್ಸುಜಾತ ಯದಿಮಾಂ ಪರಾರ್ಥಾಂ**
**ಬ್ರಾಹ್ಮೀಂ ವಾಚಂ ವದಸಿ ಹಿ ವಿಶ್ವರೂಪಮ್ ।**
**ಪರಾಂ ಹಿ ಕಾರ್ಯೇಷು ಸುದುರ್ಲಭಾಂ ಕಥಾಂ**
**ತದ್ ಬ್ರೂಹಿ ಮೇ ವಾಕ್ಯಮೇವಂ ಕುಮಾರ** ॥೧॥

ಎಲ್ಲಾ ಆಶ್ರಮಗಳು ಮತ್ತು ಆಶ್ರಮ ಧರ್ಮಗಳೂ ಬ್ರಹ್ಮಚರ್ಯ ಮೂಲವಾದುದರಿಂದ ಬ್ರಹ್ಮಚರ್ಯಾಶ್ರಮದಲ್ಲಿಯೂ ಮೊದಲನೆಯದು ಗುರುಕುಲ ವಾಸವಾದ್ದರಿಂದ ಬ್ರಾಹ್ಮಣರು ಬ್ರಹ್ಮಜ್ಞಾನವನ್ನು ಸಂಪಾದನೆ ಮಾಡಲು ಮೊದಲು ಬ್ರಹ್ಮಚರ್ಯಾಶ್ರಮ ಧರ್ಮವನ್ನು ಅನುಷ್ಠಾನ ಮಾಡಿ, ವೇದವಿದ್ಯೆಯನ್ನು ಸಂಪಾದಿಸಬೇಕು ಎಂದು ಈ ಅಧ್ಯಾಯದಲ್ಲಿ ನಿರೂಪಿಸಲ್ಪಡುತ್ತದೆ.

ಧೃತರಾಷ್ಟ್ರನು ಹಿಂದಿನ ಅಧ್ಯಾಯದಲ್ಲಿ ಸನತ್ಸುಜಾತರು ಮಾಡಿದ ಉಪದೇಶವನ್ನು ಪ್ರಶಂಸೆ ಮಾಡಿ ಅವರನ್ನು ಕುರಿತು ತನಗೆ ಅಭಿಪ್ರೇತವಾದ ಅರ್ಥವನ್ನು ಪುನಃ ಪ್ರಶ್ನೆ ಮಾಡುತ್ತಾನೆ.

ಸನತ್ಸುಜಾತ= ಎಲೈ ಸನತ್ಸುಜಾತರೇ, ಕುಮಾರ= ಐದು ವರ್ಷದ ಮಗುವಿನಂತೆ ಕಾಣುವವರೇ ಅಥವಾ ಬ್ರಹ್ಮಪುತ್ರರೇ ಅಥವಾ ಸುಸ್ಥಿರವಾದ ಸಂಸಾರವನ್ನು ನಿಮ್ಮ ಉಪದೇಶದಿಂದ ನಾಶಮಾಡುವವರೆ, ಇಮಾಂ= ಈ ಪರಾಪರತತ್ವ ವಿಷಯವಾದ, ಪರಾರ್ಥಾಂ= ಅದರಲ್ಲಿಯೂ ವಿಶೇಷವಾಗಿ ಸರ್ವೋತ್ತಮನಾದ ವಿಷ್ಣುವನ್ನೇ ಪ್ರತಿಪಾದನೆ ಮಾಡುವ, ವಿಶ್ವರೂಪಾಂ= ಅನೇಕ ಅರ್ಥಗಳನ್ನು ಪ್ರತ್ಯೇಕವಾಗಿ ಪ್ರತಿಪಾದನ ಮಾಡುವ ಸಾಮರ್ಥ್ಯವನ್ನು ಹೊಂದಿದ ಎಂದರೆ ವಿಶ್ವತೋಮುಖವಾದ, ಕಾರ್ಯೇಷು= ಅನುಷ್ಠಾನ ಮಾಡಲು ಯೋಗ್ಯವಾದ ನಿತ್ಯನೈಮಿತ್ತಿಕಾದಿ ಶ್ರೌತ ಕರ್ಮಗಳಲ್ಲಿಯೂ ಸಹ, ಪರಾಂ= ಅನ್ಯಾರ್ಥವಿಷಯಕವಾಗಿ ಅಮುಖ್ಯವಾದ ತಾತ್ಪರ್ಯವನ್ನು ಹೊಂದಿದ, ಸುದುರ್ಲಭಾಮ್= ನಮ್ಮಂತಹ ಅಲ್ಪಜ್ಞರು ಸುಲಭವಾಗಿ

ಪಡೆಯಲು ಅಸಾಧ್ಯವಾದ, ಬ್ರಾಹ್ಮೀಂ= ಬ್ರಹ್ಮಶಬ್ದವಾಚ್ಯವಾದ ವೇದ ಸಂಬಂಧಿಯಾದ, ವಾಚಂ= ಉಪದೇಶ ರೂಪವಾದ ವಾಕ್ಯವನ್ನು, ವದಸಿ= ನನ್ನನ್ನು ಕುರಿತು ಹೇಳುತ್ತಿದ್ದೀರಿ. ಆದ್ದರಿಂದ ಹೀಗೆ ನನಗೆ ಸುಲಭವಾದ ವಾಕ್ಯಂ= ವಾಕ್ಯವನ್ನು, ಪ್ರಬ್ರೂಹಿ= ಹೇಳುವವರಾಗಿ. 'ವಾಚ್ಯಮೇಕಮ್' ಎಂಬ ಪಾಠವಿದ್ದಲ್ಲಿ ನನ್ನಂತಹ ಅಜ್ಞರಿಗೆ ಹೇಳಲು ಯೋಗ್ಯವಾದ ನಿರ್ಣೀತಾರ್ಥವಿಷಯಕವಾದ, ಮುಖ್ಯವಾದ ಅರ್ಥವನ್ನು ಹೇಳಿ ಎಂದು ಅಭಿಪ್ರಾಯ.

**ಸನತ್ಸುಜಾತಃ**

**ನೈತದ್ ಬ್ರಹ್ಮ ತ್ವರಮಾಣೇನ ಲಭ್ಯಂ**
**ಯನ್ಮಾಂ ಪೃಚ್ಛಸ್ಯಭಿಷಂಗೇಣ ರಾಜನ್ ।**
**ಬುದ್ಧ್ಯೌ ಪ್ರಲೀನೇ ಮನಸಿ ಪ್ರಚಿಂತ್ಯಾ**
**ವಿದ್ಯಾಽಹಿಂಸಾಬ್ರಹ್ಮಚರ್ಯೇಣ ಲಭ್ಯಾ** ॥೨॥

ಬಹಳ ಕಾಲದಲ್ಲಿ ಬಹಳ ಆಯಾಸದಿಂದ ಸಂಪಾದಿಸಬೇಕಾದ ಬ್ರಹ್ಮಜ್ಞಾನದ ವಿಷಯದಲ್ಲಿ ಸುಲಭೋಪಾಯವನ್ನು ಕೇಳಿದ ಧೃತರಾಷ್ಟ್ರನನ್ನು ಕುರಿತು ಸನತ್ಸುಜಾತರು ಬ್ರಹ್ಮಜ್ಞಾನವು ತ್ವರೆಯಿಂದ ಲಭ್ಯವಲ್ಲ, ಆದರೆ ಮನೋಜಯವನ್ನು ಸಂಪಾದಿಸಿ, ಭಗವನ್ನಿಷ್ಠೆಯನ್ನು ಹೊಂದಿ, ಅಹಿಂಸಾ ಸಹಕೃತವಾದ ಬ್ರಹ್ಮಚರ್ಯ ರೂಪವಾದ ಕಷ್ಟಕರ ಪ್ರಯತ್ನದಿಂದ ಪ್ರಾಪ್ಯವಾದುದು ಎಂದು ಹೇಳುತ್ತಾರೆ.

ರಾಜನ್= ಎಲೈ ಧೃತರಾಷ್ಟ್ರನೇ, ಅಭಿಷಂಗೇಣ= ಸ್ನೇಹದಿಂದ ಅಥವಾ ಭಕ್ತಿಯಿಂದ, ಬ್ರಹ್ಮ ಪೃಚ್ಛಸಿ= ತ್ವರೆಯಿಂದ ಹೊಂದಲು ಯೋಗ್ಯನಾದ ಬ್ರಹ್ಮನನ್ನು ಕೇಳುತ್ತಿದ್ದೀಯೆ. ಏತತ್= ನೀನು ಕೇಳಿದ ಈ ಪರಬ್ರಹ್ಮನು, ತ್ವರಮಾಣೇನ= ತ್ವರೆಯಿಂದ ಯುಕ್ತನಾದ ಪುರುಷನಿಂದ, ನ ಲಭ್ಯಂ= ಪ್ರಾಪ್ಯನಲ್ಲ, ಆದರೆ ನಿಧಾನವಾದ ಪ್ರಯತ್ನದಿಂದಲೇ ಲಭ್ಯನಾದವನು. ಬ್ರಹ್ಮಪ್ರಾಪ್ತಿಯಲ್ಲಿ ಮಹಾಪ್ರಯತ್ನವು ಅಪೇಕ್ಷಿತವಾದಂತೆ ಬ್ರಹ್ಮವಿದ್ಯೆಯ ಪ್ರಾಪ್ತಿಯಲ್ಲಿಯೂ ಮಹಾಪ್ರಯತ್ನವು ಅಪೇಕ್ಷಿತವಾಗುತ್ತದೆ. ಬುದ್ಧ್ಯೌ= ಜ್ಞಾನರೂಪನಾದ ವಿಷ್ಣುವು, ಮನಸಿ= ತನ್ನ ಮನಸ್ಸಿನಲ್ಲಿ ಎಂದರೆ ಅಧಿಕಾರಿಯ ಮನಸ್ಸಿನಲ್ಲಿ, ಪ್ರಲೀನೇ= ಪ್ರತ್ಯಕ್ಷವಿಷಯನಾಗದೆ ಇರುತ್ತಿರಲು, ಪ್ರಚಿಂತ್ಯಾ= ಅನವರತವಾದ ವಿಚಾರದಿಂದ ವಿಚಾರ ಮಾಡಬೇಕಾದ, ವಿದ್ಯಾ= ಬ್ರಹ್ಮವಿದ್ಯೆಯು,

ಅಹಿಂಸಾ ಬ್ರಹ್ಮಚರ್ಯೇಣ= ಅಹಿಂಸಾ ಸಹಕೃತವಾದ ಬ್ರಹ್ಮಚರ್ಯರೂಪವಾದ ಪ್ರಯತ್ನದಿಂದ, ಲಭ್ಯಾ= ಹೊಂದಲು ಯೋಗ್ಯವಾದುದು. ಬೇರೆ ಸುಲಭ ಪ್ರಯತ್ನದಿಂದ ಹೊಂದಲು ಯೋಗ್ಯವಾದುದಲ್ಲ.

ಭಾರತ ಶ್ರೀನಿವಾಸಾಚಾರ್ಯರು, ಮನಸಿ= ವಿಷಯಗಳಿಂದ ಹಿಂದಿರುಗಿದ ಮನಸ್ಸು, ಬುದ್ಧೌ= ವೈರಾಗ್ಯವನ್ನು ಪಡೆಯಲು ನಿಶ್ಚಿತವಾದ ಬುದ್ಧಿಯಲ್ಲಿ, ಪ್ರಲೀನೇ= ವಿಲೀನಗೊಳ್ಳುತ್ತಿರಲು ಎಂದರೆ ಬುದ್ಧಿಯ ಮಾರ್ಗದಲ್ಲೇ ಮನಸ್ಸು ಬರುತ್ತಿರಲು ಆ ಬ್ರಹ್ಮವಿದ್ಯೆಯು ವಿಚಾರದಿಂದ ಸಂಪಾದಿಸಲ್ಪಡಬೇಕಾದುದು ಎಂದು ವ್ಯಾಖ್ಯಾನ ಮಾಡುತ್ತಾರೆ.

**ಆದ್ಯಾಂ ವಿದ್ಯಾಂ ವದಸಿ ಹಿ ಸತ್ಯರೂಪಾಂ**
**ಯಾ ಪ್ರಾಪ್ಯತೇ ಬ್ರಹ್ಮಚರ್ಯೇಣ ಸದ್ಭಿಃ ।**
**ಯಾಂ ಪ್ರಾಪ್ಯೈನಂ ಮರ್ತ್ಯಭಾವಂ ತ್ಯಜಂತಿ**
**ಯಾ ವೈ ವಿದ್ಯಾ ಗುರುವದ್ದೇಷು ನಿತ್ಯಾ** ॥೩॥

ಪರಬ್ರಹ್ಮಪ್ರಾಪ್ತಿಯನ್ನು ಕುರಿತು ವಿದ್ಯೆಯೇ ಮುಖ್ಯಕಾರಣ. ಅದಕ್ಕೆ ಬ್ರಹ್ಮಚರ್ಯವು ಸಹಕಾರಿ ಎಂದು ಇಲ್ಲಿ ನಿರೂಪಿಸುತ್ತಾರೆ.

ಎಲೈ ಧೃತರಾಷ್ಟ್ರನೇ, ಸತ್ಯರೂಪಾಂ= ಸತ್ಯ ಎಂದರೆ ವಿಷ್ಣು, ಅವನನ್ನು ನಿರೂಪಿಸುವ ಅಥವಾ ಅವಿನಾಶಿಸ್ವರೂಪವುಳ್ಳ, ಆದ್ಯಾಮ್= ಆ ಎಲ್ಲ ಕಡೆಗಳಲ್ಲಿಯೂ, ದ್ಯಾಂ= ಪ್ರಕಾಶಿಸುವ ಅಥವಾ ಅನಾದಿಯಾದ, ವಿದ್ಯಾಮ್= ವಿದ್ಯೆಯನ್ನು, ವದಸಿ= ಉಪದೇಶ ಮಾಡು ಎಂದು ಕೇಳುತ್ತಿದ್ದೀಯೆ. ಯಾ= ಅಂತಹ ವಿದ್ಯೆಯು, ಸದ್ಭಿಃ= ಸಜ್ಜನರಿಂದ, ಬ್ರಹ್ಮಚರ್ಯೇಣ= ಬ್ರಹ್ಮಚರ್ಯಾಶ್ರಮಧರ್ಮದಿಂದ, ಪ್ರಾಪ್ಯತೇ= ಹೊಂದಲ್ಪಡುತ್ತದೆ. ಯಾಂ ಏನಾಂ (ಯಾಮೇನಂ)= ನಾನು ಉಪದೇಶ ಮಾಡುವ ಈ ವಿದ್ಯೆಯನ್ನು, ಪ್ರಾಪ್ಯ= ಪಡೆದು ಅಧಿಕಾರಿಗಳು, ಮರ್ತ್ಯಭಾವಂ= ಮನುಷ್ಯಲೋಕವನ್ನು ಅಥವಾ ಮನುಷ್ಯದೇಹವನ್ನು, ತ್ಯಜಂತಿ= ಪರಿತ್ಯಾಗ ಮಾಡುತ್ತಾರೆ. ಇಂತಹ ವಿದ್ಯೆಯು ಎಲ್ಲಿರುತ್ತದೆ ಎಂಬುದಕ್ಕೆ ಉತ್ತರವನ್ನು ಹೇಳುತ್ತಾರೆ: ಯಾ ವಿದ್ಯಾ= ನಾನು ಉಪದೇಶ ಮಾಡುವ ವಿದ್ಯೆಯು, ಗುರುವದ್ದೇಷು = ಗುರುಗಳ

ಅನುಗ್ರಹದಿಂದ ಶ್ರೇಷ್ಠತೆಯನ್ನು ಪಡೆದವರಲ್ಲಿ ಎಂದರೆ ಗುರುಗಳ ಅನುಗ್ರಹದಿಂದ ಅಭಿವೃದ್ಧಿಯನ್ನು ಹೊಂದಿದವರಲ್ಲಿ, ನಿತ್ಯಾ= ಸನಾತನವಾಗಿ ಇರುತ್ತದೆ, ಎಂದರೆ ಯಾವಾಗಲೂ ಇರುತ್ತದೆ.

**ಧೃತರಾಷ್ಟ್ರಃ**

**ಬ್ರಹ್ಮಚರ್ಯೇಣ ಯಾ ವಿದ್ಯಾ ಶಕ್ಯಾ ವೇದಿತುಮಂಜಸಾ ।**
**ತತ್ ಕಥಂ ಬ್ರಹ್ಮಚರ್ಯಂ ಸ್ಯಾದೇತತ್ ವಿದ್ವನ್ ಬ್ರವೀಹಿ ಮೇ ॥೪॥**

ಪರಬ್ರಹ್ಮ ಪ್ರಾಪ್ತಿಗೆ ಸಾಧನವಾದ ಬ್ರಹ್ಮವಿದ್ಯೆಯನ್ನು ಪಡೆಯಲು ಸಹಕಾರಿಯಾದ ಬ್ರಹ್ಮಚರ್ಯ ಲಕ್ಷಣವನ್ನು ಧೃತರಾಷ್ಟ್ರನು ಕೇಳುತ್ತಾನೆ.

ವಿದ್ವನ್= ಎಲೈ ಮಹಾಮುನಿಗಳಾದ ಸನತ್ಸುಜಾತರೇ, ವಿದ್ಯಾ= ನೀವು ಹೇಳಿದ ಬ್ರಹ್ಮವಿದ್ಯೆಯು, ಬ್ರಹ್ಮಚರ್ಯೇಣ= ಬ್ರಹ್ಮಚರ್ಯರೂಪವಾದ ಉಪಾಯದಿಂದ, ಅಂಜಸಾ= ಚೆನ್ನಾಗಿ, ವೇದಿತುಂ ಶಕ್ಯಾ= ತಿಳಿಯಲು ಸಾಧ್ಯವಾಗುತ್ತದೆ (ತಿಳಿಯಲು ಸಾಧ್ಯವಾಗುವುದಾದರೆ), ತತ್= ನೀವು ಹೇಳಿದ ಬ್ರಹ್ಮವಿದ್ಯಾಸಾಧನವಾದ, ಬ್ರಹ್ಮಚರ್ಯಂ= ಬ್ರಹ್ಮಚರ್ಯವು, ಕಥಂ= ಯಾವ ರೀತಿಯಿಂದ, ಸ್ಯಾತ್= ತದ್ವಿದ್ಯಾ ಪ್ರಾಪಕವಾಗುತ್ತದೆ. ಅದನ್ನು ನೀವು ಮೇ= ನನಗೆ, ಬ್ರೂಹಿ= ಹೇಳಿ.

**ಸನತ್ಸುಜಾತಃ**

**ಆಚಾರ್ಯಯೋನಿಮಿಹ ಯೇ ಪ್ರವಿಶ್ಯ**
**ಭೂತ್ವಾ ಗರ್ಭಂ ಬ್ರಹ್ಮಚರ್ಯಂ ಚರಂತಿ ।**
**ಇಹೈವ ತೇ ಶಾಸ್ತ್ರಕಾರಾ ಭವಂತಿ**
**ವಿಹಾಯ ದೇಹಂ ಪರಮಂ ಯಾಂತಿ ಸತ್ಯಮ್ ॥೫॥**

ಹೀಗೆ ಧೃತರಾಷ್ಟ್ರನಿಂದ ಕೇಳಲ್ಪಟ್ಟ ಸನತ್ಸುಜಾತರು, ಬ್ರಾಹ್ಮಣಕುಲೋತ್ಪನ್ನನಾದ ಪುರುಷನಿಗೆ ಕೇವಲ ಗಾಯತ್ರಿ ಉಪದೇಶ ರೂಪವಾದ ಧರ್ಮದಿಂದ ಪರವಿದ್ಯಾ ಪ್ರಾಪಕವಾದ ಬ್ರಹ್ಮಚರ್ಯ ಉಂಟಾಗುವುದಿಲ್ಲ. ಆದರೆ ಗಾಯತ್ರೀ ಉಪದೇಶವನ್ನು ಪಡೆದು, ಗುರುಕುಲ ವಾಸವನ್ನು ಮಾಡಿ ಗುರುಸೇವೆಯಿಂದ ಗುರುವಿನ ಅನುಗ್ರಹವನ್ನು ಸಂಪಾದಿಸಿ, ಜಿತೇಂದ್ರಿಯನಾಗಿ, ಅಧ್ಯಯನಕ್ಕೆ ಬೇಕಾಗುವಷ್ಟು ವರ್ಷಗಳ ಕಾಲ ವೇದಾದಿ ಸಕಲ ಶಾಸ್ತ್ರವನ್ನು ಅಧ್ಯಯನ ಮಾಡಿದರೆ ಮಾತ್ರ ಬ್ರಹ್ಮಚರ್ಯವ್ರತವು

ಪೂರ್ಣವಾಗುತ್ತದೆ ಎಂದು ತಿಳಿಸುವವರಾಗಿ ಬ್ರಹ್ಮಚರ್ಯ ಪ್ರಾಪ್ತಿ ಸಾಧನವನ್ನೂ, ಅದರ ಫಲವನ್ನೂ ಹೇಳುತ್ತಾರೆ.

ಇಹ= ಅಧಿಕಾರವರ್ಗದಲ್ಲಿ, ಯೇ= ಯಾರು, ಆಚಾರ್ಯಯೋನಿಂ ಪ್ರವಿಶ್ಯ = ಆಚಾರ್ಯ ಕುಲವನ್ನು ಪ್ರವೇಶಿಸಿ, ಗರ್ಭಂ ಭೂತ್ವಾ = ಗರ್ಭದಂತೆ ಅವರಿಗೆ ಪ್ರಿಯರಾಗಿ, ಬ್ರಹ್ಮಚರ್ಯಂ= ಗುಹ್ಯೇಂದ್ರಿಯ ನಿಯಮನಾದಿ ರೂಪವಾದ ವ್ರತವನ್ನು, ಚರಂತಿ= ಮಾಡುತ್ತಾರೆಯೋ, ತೇ= ಅವರು, ಇಹೈವ= ಈ ಜನ್ಮದಲ್ಲಿಯೇ, ಶಾಸ್ತ್ರಕಾರಾಃ= ಸರ್ವವೇದಾರ್ಥ ಪ್ರತಿಪಾದಕ ಗ್ರಂಥಕರ್ತೃಗಳಾಗಿ, ಭವಂತಿ= ಆಗುತ್ತಾರೆ. ತೇ= ಅವರು, ದೇಹಂ= ಚರಮ ದೇಹವನ್ನು, ವಿಹಾಯ= ಪರಿತ್ಯಾಗವನ್ನು ಮಾಡಿ, ಪರಮಂ= ಶ್ರೇಷ್ಠವಾದ, ನಿರ್ದೋಷಜ್ಞಾನಾನಂದಾನುಭವ ರೂಪವಾದ, ಸತ್ಯಂ= ಪರಬ್ರಹ್ಮನನ್ನು, ಯಾಂತಿ= ಹೊಂದುತ್ತಾರೆ.

**ಯೇಽಸ್ಮಿಂಲ್ಲೋಕೇ ವಿಜಯಂತೀಹ ಕಾಮಾನ್**
**ಬ್ರಾಹ್ಮೀಂ ಸ್ಥಿತಿಮನುತಿತಿಕ್ಷಮಾಣಾಃ ।**
**ತ ಆತ್ಮಾನಂ ನಿರ್ವಹಂತೀಹ ದೇಹಾತ್**
**ಮುಂಜಾದಿಷೀಕಾಮಿವ ಧೀರಭಾವಾತ್** ॥೬॥

ಮತ್ತು ಯೇ= ಯಾರು, ಅಸ್ಮಿನ್ ಲೋಕೇ= ಈ ಲೋಕದಲ್ಲಿ, ಕಾಮಾನ್= ವಿಷಯಗಳನ್ನು, ವಿಜಯಂತಿ= ಜಯಿಸುತ್ತಾರೆಯೋ, ಜಯಿಸಿ ಗುರುಕುಲ ವಾಸವನ್ನು ಮಾಡುತ್ತಾರೆಯೋ ಅವರು, ಬ್ರಾಹ್ಮೀಂ ಸ್ಥಿತಿಂ= ಪರಬ್ರಹ್ಮವಿಷಯಕವಾದ ಸ್ಥಿತಿಯನ್ನು, ಎಂದರೆ ಬ್ರಹ್ಮಚರ್ಯವನ್ನು, ಅನುತಿತಿಕ್ಷಮಾಣಾಃ= ಪ್ರತಿದಿನವೂ ಸಹಿಸಿಕೊಳ್ಳುವವರಾಗಿ, ಆತ್ಮಾನಂ= ಜೀವನನ್ನು ಅಥವಾ ಪರಮಾತ್ಮನನ್ನು, ದೇಹಾತ್= ದೇಹಾದಿ ಸಂಘಾತದಿಂದ, ನಿರ್ವಹಂತಿ= ಭಿನ್ನನಾಗಿ ನಿಷ್ಕೃಷ್ಟವಾಗಿ ತಿಳಿಯುತ್ತಾರೆಯೋ, ದೇಹಾತ್ ಎಂಬುದಕ್ಕೆ ಬದಲು ಕಾಮಾತ್ ಎಂಬ ಪಾಠವಿದ್ದಲ್ಲಿ ಕಾಮಾತ್= ಸ್ವೇಚ್ಛೆಯಿಂದ ಎಂದು ಅರ್ಥ. ಧೀರಭಾವಾತ್= ಧೈರ್ಯದಿಂದಲೂ ಕೂಡ ತಿಳಿಯುತ್ತಾರೆಯೋ ಎಂದು ಇಟ್ಟುಕೊಳ್ಳಬೇಕು. ಈ ವಿಷಯದಲ್ಲಿ ದೃಷ್ಟಾಂತವನ್ನು ಹೇಳುತ್ತಾರೆ. ಮುಂಜಾತ್= ತೃಣವಿಶೇಷದಿಂದ, ಇಷೀಕಾಮಿವ= ಒಳಗಿರುವ ಹೆಂಚಿಕಡ್ಡಿಯನ್ನು ತೆಗೆದಂತೆ, ನಿರ್ವಹಂತಿ= ಅವರು ಪೃಥಕ್ಕರಿಸಿ ತಿಳಿಯುತ್ತಾರೆ.

**ಶರೀರಮೇತೌ ಕುರುತಃ ಪಿತಾ ಮಾತಾ ಚ ಭಾರತ ।**
**ಆಚಾರ್ಯತಸ್ತು ಯಜ್ಜನ್ಮ ತತ್ ಸತ್ಯಂ ವೈ ಯಥಾऽಮೃತಮ್ ॥೭॥**

ಹಿಂದೆ ಆಚಾರ್ಯಯೋನಿಂ ಎಂಬ ಶ್ಲೋಕದಲ್ಲಿ ತಿಳಿಸಿದ ಆಚಾರ್ಯರಿಗೆ ಇರುವ ಜನಕತ್ವವು ಮಾತಾ-ಪಿತೃಸಾಧಾರಣವಲ್ಲ ಎಂದು ಇಲ್ಲಿ ಹೇಳುತ್ತಾರೆ.

ಭಾರತ= ಎಲೈ ಧೃತರಾಷ್ಟ್ರನೇ, ಏತೌ ಪಿತಾ ಮಾತಾ ಚ= ಈ ತಂದೆ ತಾಯಿಗಳು, ಶರೀರಂ= ಪುತ್ರಶರೀರವನ್ನು, ಕುರಾತಃ= ಸೃಷ್ಟಿ ಮಾಡುತ್ತಾರೆ. ತು= ಆದರೆ, ಆಚಾರ್ಯತಃ= ಆಚಾರ್ಯರಿಂದ, ಯಜ್ಜನ್ಮ= ಉಂಟಾಗುವ ಯಾವ ಜನನವಿದೆಯೋ, ತತ್= ಅದು, ಅಮೃತಂ ಯಥಾ= ಅಮೃತದಂತೆ, ಸತ್ಯಂ= ವಿನಾಶಾಭಾವ ಸಂಪಾದಕವಾದುದು.

ಭಾರತ ಶ್ರೀನಿವಾಸಾಚಾರ್ಯರು ತಂದೆ, ತಾಯಿಗಳು ಶರೀರವನ್ನು ಸೃಷ್ಟಿ ಮಾಡಿದರೂ ಆಚಾರ್ಯರೇ ತಂದೆ-ತಾಯಿಗಳೂ ಸಹ. ಷಡ್ವಿಂಶೋಪನಿಷತ್ತಿನಲ್ಲಿ ಉಪದೇಶ ಮಾಡುವ ಗುರುಗಳನ್ನು ಕುರಿತು 'ತ್ವಹಿನಃ ಪಿತಾ ಇಹಾಸ್ಮಾಕಂ ಅವಿದ್ಯಾಃ ಪರಮಂ ಪಾರಂ ಪಾರಯತಿ' (ಅವಿದ್ಯೆಯನ್ನು ದಾಟಿಸುವ ನೀವೇ ನಮ್ಮ ತಂದೆ ಎಂದು ಹೇಳಿದ್ದಾರಷ್ಟೆ). ಅದರಂತೆ ಅಪಸ್ತಂಭ ಸೂತ್ರವೂ ಇದೆ. 'ಸಹಿ ವಿದ್ಯಾತಸ್ತಂ ಜನಯತಿ ತತ್ಶ್ರೇಷ್ಠಂ ಜನ್ಮ ಶರೀರಮೇವ ಮಾತಾಪಿತರೋ ಜನಯತಃ' (ತಂದೆ ತಾಯಿಗಳು ಶರೀರವನ್ನು ಮಾತ್ರ ಸೃಷ್ಟಿಮಾಡುತ್ತಾರೆ. ಆಚಾರ್ಯರು ವಿದ್ಯೆಯಿಂದ ಅವನಿಗೆ ಪುನರ್ಜನ್ಮವನ್ನು ಕೊಡುತ್ತಾರೆ. ಅದು ಶ್ರೇಷ್ಠವಾದ ಜನ್ಮ) ಎಂದು ವ್ಯಾಖ್ಯಾನ ಮಾಡಿದ್ದಾರೆ.

**ಯ ಆಸ್ಯಣೋತ್ಯವಿತಥೇನ ಕರ್ಣಾ-**
**ವದುಃಖಿಂ ಕುರ್ವನ್ನಮೃತಂ ಸಂಪ್ರಯಚ್ಛನ್ ।**
**ತಂ ಮನ್ಯೇತ ಪಿತರಂ ಮಾತರಂ ಚ**
**ತಸ್ಮೈ ನ ದ್ರುಹ್ಯೇತ್ ಕೃತಮಸ್ಯ ಜಾನನ್ ॥೮॥**

ಯಃ= ಯಾರು, ಅಮೃತಂ= ಮರಣವನ್ನು ಹೊಂದಿಸದಿರುವ ಪರಬ್ರಹ್ಮ ವಿಷಯಕ ಜ್ಞಾನವನ್ನು ಅಥವಾ ವೇದವನ್ನು, ಸಂಪ್ರಯಚ್ಛನ್= ಕೊಡುತ್ತಾ, ಅವಿತಥೇನ=

ಸತ್ಯವಾದ ಉಪದೇಶಗಳಿಂದ, ಕರ್ಣೌ= ಕಿವಿಗಳಿಗೆ, ಅದುಃಖಂ ಕುರ್ವನ್= ಹಿಂಸೆಯಾಗದಂತೆ ಮಾಡಿ, ಆಸ್ಯಣೋತಿ= ಶಿಷ್ಯನ ಜ್ಞಾನವನ್ನು ವಿಸ್ತಾರ ಮಾಡುತ್ತಾನೆಯೋ, ತಂ= ಅಂತಹ ಗುರುವನ್ನು, ಪಿತರಂ ಮಾತರಂ ಚ= ತಂದೆ ಮತ್ತು ತಾಯಿ ಎಂದು, ಮನ್ಯೇ= ತಿಳಿಯಬೇಕು.ಅಸ್ಯ= ಅವರು ಮಾಡಿದ, ಕೃತಂ= ಉಪಕಾರವನ್ನು, ಜಾನನ್= ತಿಳಿದವನಾಗಿ, ತಸ್ಮೈ= ಅಂತಹ ಗುರುಗಳಿಗೆ, ನ ದ್ರುಹ್ಯೇತ್= ದ್ರೋಹವನ್ನು ಮಾಡಬಾರದು.

**ಗುರುಂ ಶಿಷ್ಯೋ ನಿತ್ಯಮಭಿವಾದಯೀತ**
**ಸ್ವಾಧ್ಯಾಯಮಿಚ್ಛೇಚ್ಛುಚಿರಪ್ರಮತ್ತಃ ।**
**ಯನ್ಮಾದತೇ ನಾದಧೀತಾಥ ರೋಷಂ**
**ಏಷ ಪ್ರಥಮೋ ಬ್ರಹ್ಮಚರ್ಯಸ್ಯ ಪಾದಃ ॥೯॥**

ಸ್ವಾಧ್ಯಾಯಗಳನ್ನು ಮಾಡಲು ಬಯಸುವ ಶಿಷ್ಯನು, ಶುಚಿಯೂ, ಪ್ರಮಾದ ರಹಿತನೂ ಆಗಿ ನಿತ್ಯವೂ ಗುರುವಿಗೆ ನಮಸ್ಕಾರವನ್ನು ಮಾಡಬೇಕು. ಗುರುವಿನ ವಿಷಯದಲ್ಲಿ ಯಾವಾಗಲೂ ಸಂತೋಷವನ್ನು ಹೊಂದಬೇಕು. ಗುರುವು ತಾನು ಮಾಡಿದ ಅಪರಾಧಕ್ಕೆ ಶಿಕ್ಷೆಯನ್ನು ಕೊಟ್ಟರೂ ಅವರ ಮೇಲೆ ಕೋಪವನ್ನು ಹೊಂದಬಾರದು. ಇದು ಬ್ರಹ್ಮಚರ್ಯದ ಮೊದಲನೆಯ ಪಾದ.

**ಶಿಷ್ಯವೃತ್ತಿಕ್ರಮೇಣೈವ ವಿದ್ಯಾಮಾಪ್ನೋತಿ ಯಃ ಶುಚಿಃ ।**
**ಬ್ರಹ್ಮಚರ್ಯವ್ರತಸ್ಯಾಸ್ಯ ಪ್ರಥಮಃ ಪಾದ ಉಚ್ಯತೇ ॥೧೦॥**

ಶಿಷ್ಯನು ನಡೆದುಕೊಳ್ಳಬೇಕಾದ ರೀತಿಯಲ್ಲಿಯೇ ಶುದ್ಧನಾಗಿದ್ದು ಗುರುಗಳಲ್ಲಿ ನಡೆದುಕೊಂಡು ಯಾವನು ವಿದ್ಯೆಯನ್ನು ಪಡೆಯುತ್ತಾನೆಯೋ ಅದೂ ಪ್ರಥಮ ಪಾದವೆನಿಸಿಕೊಳ್ಳುತ್ತದೆ.

**ಯಥಾ ನಿತ್ಯಂ ಗುರೌ ವೃತ್ತಿಃ ಗುರುಪತ್ನ್ಯಾಂ ತಥಾऽऽಚರೇತ್ ।**
**ತತ್ಪುತ್ರೇ ಚ ತಥಾ ಕುರ್ವನ್ ದ್ವಿತೀಯಃ ಪಾದ ಉಚ್ಯತೇ ॥೧೧॥**

ಗುರುವಿನ ವಿಷಯದಲ್ಲಿ ಹೇಗೆ ನಡೆದುಕೊಳ್ಳುತ್ತಾನೆಯೋ, ಗುರುಪತ್ನಿಯ ವಿಷಯದಲ್ಲಿಯೂ ಮತ್ತು ಗುರುಪುತ್ರನ ವಿಷಯದಲ್ಲಿಯೂ ಹಾಗೆಯೇ

ನಡೆದುಕೊಳ್ಳಬೇಕು. ಇದು ಬ್ರಹ್ಮಚರ್ಯದ ಎರಡನೆಯ ಪಾದವೆನಿಸುತ್ತದೆ. ಇದನ್ನು ಆಪಸ್ತಂಬ ಸೂತ್ರದಲ್ಲಿ 'ಆಚಾರ್ಯವತ್ ಆಚಾರ್ಯದಾರೇಷು ವೃತ್ತಿಃ । ಆಚಾರ್ಯವತ್ ಆಚಾರ್ಯಪುತ್ರೇಷು ವೃತ್ತಿಃ ।।' ಎಂದು ಹೇಳಿದ್ದಾರೆ.

ಆಚಾರ್ಯೇಣಾಥ ಕೃತಂ ವಿಜಾನನ್
ಜ್ಞಾತ್ವಾ ಚಾರ್ಥಂ ಭಾವಿತೋಽಸ್ಮೀತ್ಯನೇನ ।
ಯನ್ಮನ್ಯತೇ ತಂ ಪ್ರತಿ ಹೃಷ್ಟಬುದ್ಧಿಃ
ಸ ವೈ ತೃತೀಯೋ ಬ್ರಹ್ಮಚರ್ಯಸ್ಯ ಪಾದಃ ॥೧೨॥

ಆಚಾರ್ಯರು ತನಗೆ ಮಾಡಿದ ಉಪಕಾರವನ್ನು ಸ್ಮರಿಸಿಕೊಂಡು, ಅವರ ಉಪದೇಶವನ್ನು ತಿಳಿದುಕೊಂಡು, ಜ್ಞಾನದಾನವನ್ನು ಮಾಡಿ ಅವರು ನನ್ನನ್ನು ಬದುಕಿಸಿದ್ದಾರೆ ಎಂದು ತಿಳಿದು, ಅವರ ವಿಷಯದಲ್ಲಿ ಸಂತೋಷದಿಂದ ಇರುವುದು ಬ್ರಹ್ಮಚರ್ಯದ ಮೂರನೆಯ ಪಾದವೆನಿಸುತ್ತದೆ.

ಏವಂ ಚ ಸಂಗತಂ ಯದುಪಪ್ಲವೇದ್ಧಿ (ಯದ್ಧನಮುಪಪ್ಲವೇತ್)
ಆಚರ್ಯಯಾ ಕೃತಮಿತಿ ಚಾಭಿಮನ್ಯೇತ್ ।
ಪ್ರಾಜ್ಞೋ ಮನ್ಯೇನ್ನೈತದಹಂ ಕರೋಮಿ
ಸ ವೈ ಚತುರ್ಥೋ ಬ್ರಹ್ಮಚರ್ಯಸ್ಯ ಪಾದಃ ॥೧೩॥

ಹೀಗೆ ಯಾವುದಾದರೂ ಧನವು ಸಮೀಚೀನವಾಗಿ ಪ್ರಾಪ್ತವಾದರೆ ಅದನ್ನು ಆಚಾರ್ಯ ಸೇವೆಯಿಂದ ಪ್ರಾಪ್ತವಾದ ಫಲವೆಂದು ತಿಳಿಯಬೇಕು. ಪ್ರಾಜ್ಞನಾದವನು ಇದನ್ನು ನಾನು ಮಾಡುತ್ತಿದ್ದೇನೆ. ಅದರ ಫಲವಾಗಿ ಈ ಧನವು ದೊರಕಿದೆ ಎಂದು ತಿಳಿಯಬಾರದು. ಇದು ಬ್ರಹ್ಮಚರ್ಯದ ನಾಲ್ಕನೆಯ ಪಾದ.

ಆಚಾರ್ಯಾಯ ಪ್ರಿಯಂ ಕುರ್ಯಾತ್ ಪ್ರಾಣೈರಪಿ ಧನೈರಪಿ ।
ಕರ್ಮಣಾ ಮನಸಾ ವಾಚಾ ಚತುರ್ಥಃ ಪಾದ ಉಚ್ಯತೇ ॥೧೪॥

ತನ್ನ ಪ್ರಾಣಗಳಿಂದಲೂ, ಧನದಿಂದಲೂ, ಕರ್ಮ-ಮನಸ್ಸು ಮತ್ತು ಮಾತುಗಳಿಂದಲೂ, ಆಚಾರ್ಯರಿಗೆ ಪ್ರಿಯವನ್ನು ಮಾಡಬೇಕು. ಇದು ಬ್ರಹ್ಮಚರ್ಯದ ನಾಲ್ಕನೆಯ ಪಾದವೆನಿಸುತ್ತದೆ.

ಜ್ಞಾನೇನ(ಕಾಲೇನ) ಪಾದಂ ಲಭತೇ ತಥಾऽರ್ಥಂ
ತಥೈವ ಪಾದಂ ಗುರುಯೋಗತಶ್ಚ ।
ಉತ್ಸಾಹಯೋಗೇನ ಚ ಪಾದಮೃಚ್ಛೇತ್
ಶಾಸ್ತ್ರೇಣ ಪಾದಂ ಚ ತತೋऽಭಿಯಾತಿ ॥೧೫॥

ವಿದ್ಯೆಯ ನಾಲ್ಕು ಪಾದಗಳನ್ನು ಈ ಶ್ಲೋಕದಲ್ಲಿ ಹೇಳುತ್ತಾರೆ. ಇಲ್ಲಿ ಹೇಳುವ ಕ್ರಮವು ವಿವಕ್ಷಿತವಲ್ಲ. ಗುರುಯೋಗತಃ= ಗುರುಗಳ ಅನುಗ್ರಹರೂಪವಾದ ಉಪಾಯದಿಂದ ಪ್ರಥಮ ಪಾದಂ= ಮೊದಲನೆಯ ಪಾದವನ್ನು, ಲಭತೇ= ಹೊಂದುತ್ತಾನೆ. ಅನಂತರ ಉತ್ಸಾಹ ಯೋಗೇನ= ಉತ್ಸಾಹ ಎಂದರೆ ಪ್ರಯತ್ನ ಅದರಿಂದ ಸಾಧ್ಯವಾದ ಬುದ್ಧಿ ವಿಶೇಷವನ್ನು ತೆಗೆದುಕೊಳ್ಳಬೇಕು. ಅಂತಹ ಬುದ್ಧಿ ವಿಶೇಷದಿಂದ ಪಾದಂ= ದ್ವಿತೀಯ ಪಾದವನ್ನು, ಋಚ್ಛೇತ್= ಹೊಂದುತ್ತಾನೆ. ಅದರಂತೆ, ಕಾಲೇನ= ಸಹಪಾಠಿಗಳ ಸಮಾಗಮದ ಕಾಲದಲ್ಲಿ ಶಾಸ್ತ್ರವನ್ನು ಚರ್ಚೆ ಮಾಡಿ, ಪಾದಂ= ತೃತೀಯ ಪಾದವನ್ನು ಪಡೆಯುತ್ತಾನೆ. ಜ್ಞಾನೇನ ಪಾದಂ ಎಂಬ ಪಾಠದ ಬದಲು ಇಲ್ಲಿ ಕಾಲೇನ ಪಾದಂ ಎಂಬ ಪಾಠವನ್ನು ಸ್ವೀಕರಿಸಿದ್ದಾರೆ. ತತ= ಅನಂತರದಲ್ಲಿ, ಶಾಸ್ತ್ರೇಣ= ತನ್ನ ಶಿಷ್ಯರಿಗೆ ಉಪದೇಶ ಮಾಡುವುದರಿಂದ, ಪಾದಂ= ನಾಲ್ಕನೆಯ ಪಾದವನ್ನು, ಅಭಿಯಾತಿ= ಪಡೆಯುತ್ತಾನೆ. ಈ ವಿಷಯವು–

'ಆಚಾರ್ಯಾತ್ ಪಾದಮಾದತ್ತೇ ಪಾದಂ ಶಿಷ್ಯಃ ಸ್ವಬುದ್ಧಿತಃ (ಸ್ವಮೇಧಯಾ) ।
ಪಾದಂ ಸಬ್ರಹ್ಮಚಾರಿಭ್ಯಃ ಪಾದಂ ವ್ಯಾಖ್ಯಾನಕೌಶಲಾತ್ ॥'

(ಶಿಷ್ಯನು ಗುರುಗಳ ಉಪದೇಶದಿಂದ ಒಂದು ಪಾದವನ್ನು ಸ್ವೀಕರಿಸುತ್ತಾನೆ. ತನ್ನ ಬುದ್ಧಿಯಿಂದ ಇನ್ನೊಂದು ಪಾದವನ್ನೂ, ಸಹಪಾಠಿಗಳ ಜೊತೆಯಲ್ಲಿ ಇನ್ನೊಂದು ಪಾದವನ್ನೂ ಮತ್ತು ತನ್ನ ವ್ಯಾಖ್ಯಾನಕೌಶಲದಿಂದ ಇನ್ನೊಂದು ಪಾದವನ್ನು ಪಡೆಯುತ್ತಾನೆ) ಎಂದು ಪ್ರಮಿತವಾಗಿದೆ.

ಜ್ಞಾನಾದಯೋ ದ್ವಾದಶ ಯಸ್ಯ ರೂಪಮ್
ಅನ್ಯಾನಿ ಚಾಂಗಾನಿ ತಥಾ ಬಲಂ ಚ ।
ಆಚಾರ್ಯಯೋಗೇ ಫಲತೀತಿ ಚಾಹುಃ
ಬ್ರಹ್ಮಾರ್ಥಯೋಗೇನ ಚ ಬ್ರಹ್ಮಚರ್ಯಮ್ ॥೧೬॥

ಯಸ್ಯ= ಯಾವ ಅಧಿಕಾರಿಗೆ, ಜ್ಞಾನಾದಯೋ ದ್ವಾದಶ= ಜ್ಞಾನಾದಿ ಹನ್ನೆರಡು ಗುಣಗಳು, ರೂಪಂ= ಸ್ವರೂಪವಾಗಿವೆಯೋ, ಅನ್ಯಾನಿ ಚಾಂಗಾನಿ= ಉಳಿದ ಜ್ಞಾನದ ಅಂಗಗಳು, ಎಂದರೆ 'ಸತ್ಯಂ ನ್ಯೂನಂ' ಎಂಬಲ್ಲಿ ಹೇಳಿದಂತೆ ಉಳಿದ ಅಂಗಗಳು, ತಥಾ ಬಲಂ ಚ= ಮೀಮಾಂಸಾ, ಯುಕ್ತಿಬಲಗಳೆಲ್ಲವೂ, ಆಚಾರ್ಯಯೋಗೇ= ಗುರು ಪ್ರಾಪ್ತಿ ಉಂಟಾದಾಗ, ಫಲತೀತಿ= ಅಭಿವೃದ್ಧಿಯನ್ನು ಹೊಂದುತ್ತವೆ ಅಥವಾ ಉಂಟಾಗುತ್ತವೆ ಎಂದು, ಆಹುಃ= ಪ್ರಾಜ್ಞರು ಹೇಳುತ್ತಾರೆ. ಸದ್ಗುರುಗಳ ಪ್ರಾಪ್ತಿಯಾದಾಗ ಮಾತ್ರ ಜ್ಞಾನಾದಿ ದ್ವಾದಶ ಗುಣಗಳು, ಅವುಗಳ ಅಂಗಗಳಿಂದ ಮತ್ತು ಬಲಗಳಿಂದ ಕೂಡಿಕೊಂಡು ಉಂಟಾಗುತ್ತವೆ ಎಂದು ಅಭಿಪ್ರಾಯ. ಬ್ರಹ್ಮಾರ್ಥಯೋಗೇನ= ಪರಬ್ರಹ್ಮನಲ್ಲಿ ಭಕ್ತಿರೂಪವಾದ ಉಪಾಯವನ್ನು ಹೊಂದುವುದರಿಂದ, ಬ್ರಹ್ಮಚರ್ಯಂ ಚ= ಬ್ರಹ್ಮಚರ್ಯ ವ್ರತವೂ ಸಹ, ಫಲತಿ= ಸಿದ್ಧಿಸುತ್ತದೆ.

ಏವಂ ವಸನ್ ತದ್ ಯದುಪಪ್ಲವೇದ್ ಧನಮ್
ಹ್ಯಾಚಾರ್ಯಾಯ ತದನುಪ್ರಯಚ್ಛೇತ್ ।
ಸತಾಂ ವೃತ್ತಿಂ ಬಹುಗುಣಾಮೇವಮೇತಿ
ಗುರೋಃ ಪುತ್ರೇ ಭವತಿ ಚ ವೃತ್ತಿರೇಷಾ ॥೧೭॥

ಹೀಗೆ ಗುರುಕುಲವಾಸವನ್ನು ಮಾಡುವವನಿಗೆ ಯಾವುದಾದರೂ ಧನವು ಒದಗಿದರೆ ಅದನ್ನು ಗುರುಗಳಿಗೇ ಸಮರ್ಪಿಸಬೇಕು. ಆಚರ್ಯಾ ಎಂಬ ಪಾಠವಿದ್ದರೆ ತನ್ನ ಗುರುಸೇವೆಯಿಂದ ಬಂದಿದೆ ಎಂದು ತಿಳಿದು ಎಂದರೆ ಗುರುಸೇವೆಯಿಂದ ಪ್ರಸನ್ನರಾದ ಗುರುಗಳ ಅನುಗ್ರಹದಿಂದ ಬಂದಿದೆ ಎಂದು ತಿಳಿದು ಅದನ್ನು ಗುರುಗಳಿಗೇ ಸಮರ್ಪಿಸಬೇಕು. ಹೀಗೆ ಮಾಡಿದರೆ ಸಜ್ಜನರ ಬಹಳ ಶ್ರೇಷ್ಠವಾದ ನಡತೆಯನ್ನು ಅವನು ಅನುಸರಿಸುತ್ತಾನೆ. ಗುರುವಿನ ಪುತ್ರನ ವಿಷಯದಲ್ಲಿಯೂ ಹೀಗೆಯೇ ನಡೆದುಕೊಳ್ಳಬೇಕು.

ಏವಂ ವಸನ್ ಸರ್ವತೋ ವರ್ಧತೇ ಚ
ಬಹೂನ್ ಪುತ್ರಾನ್ ಲಭತೇ ಚ ಪ್ರತಿಷ್ಠಾಮ್ ।
ವರ್ಷಂತಿ ಚಾಸ್ಮೈ ಪ್ರದಿಶೋ ದಿಶಶ್ಚ
ವಸತ್ಯಸ್ಮಿನ್ ಬ್ರಹ್ಮಚರ್ಯೇ ಜನಾಶ್ಚ ॥೧೮॥

ಹೀಗೆ ಗುರುಕುಲ ವಾಸವನ್ನು ಮಾಡುವವನು ಎಲ್ಲ ರೀತಿಯಿಂದಲೂ ಅಭಿವೃದ್ಧಿಯನ್ನು ಹೊಂದುತ್ತಾನೆ. ಅನೇಕ ಪುತ್ರರನ್ನು ಪಡೆಯುತ್ತಾನೆ. ದಿಕ್ಕು -ವಿದಿಕ್ಕುಗಳಲ್ಲಿ ಪ್ರತಿಷ್ಠೆಯನ್ನು ಎಂದರೆ ಕೀರ್ತಿಯನ್ನು ಪಡೆಯುತ್ತಾನೆ. ದಿಕ್ಕು ಮತ್ತು ವಿದಿಕ್ಕುಗಳಿಗೆ ಅಭಿಮಾನಿಗಳಾದ ದೇವತೆಗಳು ಅವನಿಗೆ ಬೇಕಾದ ಎಲ್ಲವನ್ನೂ ಕೊಡುತ್ತಾರೆ. ಅಂತಹವನ ಬ್ರಹ್ಮಚರ್ಯದಲ್ಲಿ ಎಲ್ಲರೂ ನಂಬಿಕೆಯನ್ನು ಇಡುತ್ತಾರೆ. 'ಧೀರಸ್ತತೋ ಬ್ರಹ್ಮಚರ್ಯಂ ಚರೇತ' ಎಂದು ನಾಲ್ಕನೆಯ ಪಾದಕ್ಕೆ ಪಾಠಾಂತರವಿದೆ. ಆಗ ಈ ಮೇಲೆ ಹೇಳಿದ ಕಾರಣಗಳಿಂದ ಧೀರನಾದವನು ಬ್ರಹ್ಮಚರ್ಯವ್ರತವನ್ನು ಮಾಡಬೇಕು ಎಂದು ಅರ್ಥ.

ಏತೇನ ಬ್ರಹ್ಮಚರ್ಯೇಣ ದೇವಾ ದೇವತ್ವಮಾಪ್ನುವನ್ ।
ಋಷಯಶ್ಚ ಮಹಾಭಾಗ ಬ್ರಹ್ಮಚರ್ಯೇಣ ಚಾಭವನ್ ॥೧೯॥

ಈ ಬ್ರಹ್ಮಚರ್ಯಕ್ಕೆ ಹಿಂದೆ ಹೇಳಿದುದಷ್ಟೇ ಫಲವಲ್ಲ. ದೇವತೆಗಳೂ ಸಹ ಬ್ರಹ್ಮಚರ್ಯದಿಂದ ದೇವಪದವಿಯನ್ನು ಹೊಂದಿದ್ದಾರೆ. ಋಷಿಗಳೂ ಸಹ ಬ್ರಹ್ಮಚರ್ಯದಿಂದ ಮಹಾನುಭಾವರಾಗಿದ್ದಾರೆ.

ಏತೇನೈವ ಸಗಂಧರ್ವಾ ರೂಪಮಪ್ಸರಸೋಽಜಯನ್ ।
ಏತೇನ ಬ್ರಹ್ಮಚರ್ಯೇಣ ಸೂರ್ಯ ಅಹ್ನಾಯ ಜಾಯತೇ ॥೨೦॥

ಈ ಬ್ರಹ್ಮಚರ್ಯದಿಂದಲೇ ಗಂಧರ್ವಸಹಿತರಾದ ಅಪ್ಸರೆಯರು ಶ್ರೇಷ್ಠವಾದ ಸೌಂದರ್ಯವನ್ನು ಪಡೆದರು. ಈ ಬ್ರಹ್ಮಚರ್ಯದಿಂದಲೇ ಸೂರ್ಯನು ಜಗತ್ತನ್ನು ಬೆಳಗಲು ನಿತ್ಯವೂ ಉದಯಿಸುತ್ತಾನೆ.

ಯ ಆಶ್ರಯೇತ್ ಪಾವಯೇಚ್ಚಾಪಿ ರಾಜನ್
ಸರ್ವಂ ಶರೀರಂ ತಪಸಾ ತಪ್ಯಮಾನಃ ।
ಏತೇನ ವೈ ಬಾಲ್ಯಮತ್ಯೇತಿ ವಿದ್ವಾನ್
ಮೃತ್ಯುಂ ತಥಾ ಸ ಜಯತ್ಯಂತಕಾಲೇ ॥೨೧॥

ಯಾವ ಪುರುಷನು ಬ್ರಹ್ಮಚರ್ಯವ್ರತವನ್ನು ಆಶ್ರಯಿಸಿ, ತಪಸ್ಸನ್ನು ಮಾಡುತ್ತಾ ತನ್ನ ಶರೀರವನ್ನು ಪವಿತ್ರೀಕರಿಸುತ್ತಾನೆಯೋ ಅಂತಹ ಜ್ಞಾನಿಯು, ಬಾಲ್ಯಂ= ಎಂದರೆ

ಬಾಲ್ಯ ಸಹಜವಾದ ಅಜ್ಞತ್ವವನ್ನು ಅಥವಾ ಮೂರ್ಖತನವನ್ನು, ಅತ್ಯೇತಿ= ದಾಟುತ್ತಾನೆ. ತಥಾ= ಅದರಂತೆ, ಅಂತಕಾಲೇ= ಶರೀರಪಾತಕಾಲದಲ್ಲಿ ಬಂದ, ಮೃತ್ಯುಂ= ಮರಣವನ್ನೂ ಸಹ, ಜಯತಿ= ಜಯಿಸುತ್ತಾನೆ.

ಆಕಾಂಕ್ಷಾರ್ಥಸ್ಯ ಸಂಯೋಗಾದ್ ರಸಭೇದಾರ್ಥಿನಾಮಿವ ।
ಏವಂ ಹ್ಯೇತತ್ ಸಮಾಜ್ಞಾಯ ತಾದೃಗ್ ಭಾವಂ ಗತಾ ಇಮೇ ॥ (ಮೂಲಮ್)

ರಸಭೇದಾಃ= ರಸ ಎಂದರೆ ಶ್ರೇಷ್ಠ, ಭೇದ ಎಂದರೆ ವಿಶೇಷ, ಶ್ರೇಷ್ಠ ವಸ್ತು ವಿಶೇಷಗಳಾದ ಕಲ್ಪವೃಕ್ಷ, ಚಿಂತಾಮಣಿ ಮೊದಲಾದವುಗಳು, ಅರ್ಥಿನಾಂ= ಪ್ರಾರ್ಥಿಸುವವರಿಗೆ, ಆಕಾಂಕ್ಷಾರ್ಥಸ್ಯ ಸಂಯೋಗಾತ್ ಇವ= ಅವರಿಗೆ ಆಕಾಂಕ್ಷಿತವಾದ ಫಲವನ್ನು ಕೊಡುವ ಸಂಬಂಧವನ್ನು ಉಂಟುಮಾಡುವಂತೆ, ಏವಂ= ಅದೇ ರೀತಿಯಲ್ಲಿ, ಏತತ್= ಈ ಬ್ರಹ್ಮಚರ್ಯವನ್ನು, ಸಮಾಜ್ಞಾಯ= ಚೆನ್ನಾಗಿ ತಿಳಿದು ಆಚರಿಸಿ, ಇಮೇ= ಈ ದೇವತಾದಿಗಳು, ಪ್ರಾದುರ್ಭಾವಂ= ದೇವತ್ವಾದಿಗಳನ್ನು, ಗತಾಃ= ಹೊಂದಿದ್ದಾರೆ. ಆದ್ದರಿಂದ ಬ್ರಹ್ಮಚರ್ಯವ್ರತವು ಪರಮಪುರುಷಾರ್ಥ ಸಾಧನವಾದುದರಿಂದ ಆಚಾರ್ಯರ ಕುಲಕ್ಕೆ ಹೋಗಿ, ಅವರಿಗೆ ಶಿಷ್ಯನಾಗಿ ಬ್ರಹ್ಮಚರ್ಯವನ್ನು ಆಚರಿಸಬೇಕು ಎಂದು ತಾತ್ಪರ್ಯ.

ಅಂತವಂತಃ ಕ್ಷತ್ರಿಯಾಸ್ತೇ ಜಯಂತಿ
ಲೋಕಾನ್ ಜನಾಃ ಕರ್ಮಣಾ ನಿರ್ಮಲೇನ ।
ಜ್ಞಾನೇನ ವಿದ್ವಾಂಸ್ತೇಜ ಅಭ್ಯೇತಿ ನಿತ್ಯಂ
ನ ವಿದ್ಯತೇ ಹ್ಯನ್ಯಥಾ ತಸ್ಯ ಪಂಥಾಃ ॥೨೨॥

ಅಂತವಂತಃ= ಕರ್ಮಸ್ವರೂಪದ ನಿರ್ಣಯವುಳ್ಳ, ಕ್ಷತ್ರಿಯಾ ಜನಾಃ= ಕ್ಷತ್ರಿಯ ಜನರೂ ಸಹ, ನಿರ್ಮಲೇನ ಕರ್ಮಣಾ= ಶುದ್ಧವಾದ ಕರ್ಮಾಚರಣೆಯಿಂದ, ಲೋಕಾನ್= ಸ್ವರ್ಗಾದಿ ಲೋಕಗಳನ್ನು, ಜಯಂತಿ= ಪಡೆಯುತ್ತಾರೆ. ವಿದ್ವಾನ್= ವಿದ್ವಾಂಸನಾದವನು, ಜ್ಞಾನೇನ= ಜ್ಞಾನಬಲದಿಂದ, ನಿತ್ಯಂ= ಸರ್ವದಾ, ತೇಜಃ= ಜ್ಞಾನಾತ್ಮಕವಾದ ಹರಿಯನ್ನು, ಅಭ್ಯೇತಿ= ಹೊಂದುತ್ತಾನೆ. ತಸ್ಯ= ಆ ಹರಿಪ್ರಾಪ್ತಿಯನ್ನು ಕುರಿತು, ಅನ್ಯಥಾ= ಬೇರೆ ರೀತಿಯಲ್ಲಿ, ಪಂಥಾಃ= ಮಾರ್ಗವು, ನ ವಿದ್ಯತೇ= ಇರುವುದಿಲ್ಲ.

ಅಂತವತಃ ಎಂದು ಪಾಠವಿದ್ದರೆ ಅದನ್ನು ಲೋಕಾನ್ ಎಂಬುದಕ್ಕೆ ವಿಶೇಷವನ್ನಾಗಿ ಮಾಡಿ ಅನಿತ್ಯವಾದ ಸ್ವರ್ಗಾದಿ ಲೋಕಗಳನ್ನು ಎಂದು ಅರ್ಥವನ್ನು ಮಾಡಬೇಕು. ಕರ್ಮಣಾ ನಿರ್ಮಿತೇನ ಎಂಬ ಪಾಠವಿದ್ದರೆ ತಾವು ಆಚರಣೆ ಮಾಡಿದ ಕರ್ಮದಿಂದ ಎಂದು ಅರ್ಥವನ್ನು ಮಾಡಬೇಕು. ಕ್ಷತ್ರಿಯ ತೇ ಜಯಂತಿ ಎಂಬ ಪಾಠವಿದ್ದರೆ ಎಲೈ ಕ್ಷತ್ರಿಯನಾದ ಧೃತರಾಷ್ಟ್ರನೇ, ತೇ ಜನಾಃ= ಬ್ರಹ್ಮಚರ್ಯವ್ರತವನ್ನು ಆಚರಿಸುವ ಪುರುಷರು ಎಂದು ಅರ್ಥವನ್ನು ಮಾಡಬೇಕು.

**ಧೃತರಾಷ್ಟ್ರಃ**

**ಆಭಾತಿ ಶುಕ್ಲಮಿವ ಲೋಹಿತಮಿವಾಥೋ**
**ಕೃಷ್ಣಮಥಾರ್ಜುನಂ ಕಾದ್ರವಂ ವಾ ।**
**ಯದ್ ಬ್ರಾಹ್ಮಣಃ ಪಶ್ಯತಿ ತದ್ಧಿ ವಿದ್ವಾನ್**
**ಕಥಂ ರೂಪಂ ತದಮೃತಮಕ್ಷರಂ ಪರಮ್** ॥೨೩॥

ಹೀಗೆ ಧೃತರಾಷ್ಟ್ರನು ಬ್ರಹ್ಮಚರ್ಯಸ್ವರೂಪವನ್ನು ತಿಳಿದು ಅದರಿಂದ ಪ್ರಾಪ್ಯನಾದ ಬ್ರಹ್ಮನು ಹೇಗಿದ್ದಾನೆಂದು ಪ್ರಶ್ನೆ ಮಾಡುತ್ತಾನೆ.

ವಿದ್ವಾನ್ ಬ್ರಾಹ್ಮಣಃ= ಜ್ಞಾನಿಯಾದ ಬ್ರಾಹ್ಮಣನು, ಯತ್ಪಶ್ಯತಿ= ಯಾವ ಬ್ರಹ್ಮನನ್ನು ನೋಡುತ್ತಾನೆಯೋ, ತತ್= ಆ, ಅಮೃತಂ= ಮರಣರಹಿತವಾದ, ಅಕ್ಷರಂ= ನಾಶರಹಿತವಾದ, ಪರಂ= ಸರ್ವೋತ್ತಮವಾದ, ತತ್= ಬ್ರಹ್ಮನಾ, ಶುಕ್ಲಮಿವ= ಬಿಳಿಯ ಬಣ್ಣವನ್ನು ಹೊಂದುವಂತೆ, ಆಭಾತಿ= ತೋರುತ್ತಾನೆಯೇ. ಲೋಹಿತಮಿವ= ಕೆಂಪು ಬಣ್ಣವನ್ನು ಹೊಂದುವಂತೆ ತೋರುತ್ತಾನೆಯೇ? ಅಥೋ= ಅಥವಾ, ಕೃಷ್ಣಂ= ಕಪ್ಪು ಬಣ್ಣದಿಂದ ಕೂಡಿರುವಂತೆ ತೋರುತ್ತಾನೆಯೇ? ಅರ್ಜುನಂ ಕಾದ್ರವಂ ವಾ= ಅಥವಾ ಬಿಳಿಯ ಬಣ್ಣದಿಂದ ಅಥವಾ ಕಂದುಬಣ್ಣದಿಂದ ಕೂಡಿರುವಂತೆ ತೋರುತ್ತಾನೆಯೇ? 'ತದ್ ಬ್ರಾಹ್ಮಣಃ ಪಶ್ಯತಿ ಯತ್ರ ವಿದ್ವಾನ್' ಎಂದು ಮೂರನೆಯ ಪಾದದ ಪಾಠವಿದ್ದರೆ 'ಯತ್ರ' ಎಂಬುದಕ್ಕೆ ಎಲ್ಲಿ ಎಂದು ಅರ್ಥ. 'ಅಸ್ತಂ ಯತ್ರ ಚ ಗಚ್ಛತಿ' (ಎಲ್ಲಿ ಅಸ್ತನಾಗುತ್ತಾನೆ?), 'ಧಾರಣಾ ಯತ್ರ ಸಮ್ಮತಾ' (ಎಲ್ಲಿ ಧಾರಣೆಯನ್ನು ಮಾಡಬೇಕು) ಮುಂತಾದ ಪ್ರಯೋಗಗಳಲ್ಲಿ ಯತ್ರ ಎಂದರೆ ಎಲ್ಲಿ ಎಂಬ ಅರ್ಥವು ಪ್ರಸಿದ್ಧವಾಗಿದೆ. ವಿದ್ವಾಂಸನಾದ ಬ್ರಾಹ್ಮಣನು ಅಂತಹ ಹರಿಯನ್ನು ಎಲ್ಲಿ ನೋಡುತ್ತಾನೆ ಮತ್ತು ಅವನ ರೂಪವು ಹೇಗಿರುತ್ತದೆ ಎಂದು ಪ್ರಶ್ನೆಯ ಅಭಿಪ್ರಾಯ.

ಸನತ್ಸುಜಾತಃ

ನಾ(ಆ)ಭಾತಿ ಶುಕ್ಲಮಿವ ಲೋಹಿತಮಿವಾಥೋ
ಕೃಷ್ಣಮಥಾರ್ಜುನಂ ಕಾದ್ರವಂ ವಾ ।
ನ ಪೃಥಿವ್ಯಾಂ ತಿಷ್ಠತಿ ನಾಂತರಿಕ್ಷೇ
ನೈತತ್ ಸಮುದ್ರೇ ಸಲಿಲಂ ಬಿಭರ್ತಿ ॥೨೪॥

ಆ ಪರಮಾತ್ಮನ ರೂಪವು ಬಿಳಿಯ ಬಣ್ಣದಿಂದ ಕೂಡಿರುವಂತೆ ಕೆಂಪು ಬಣ್ಣದಿಂದ, ಕಪ್ಪು ಬಣ್ಣದಿಂದ, ಪರಿಶುದ್ಧವಾದ ಬಿಳಿಯ ಬಣ್ಣದಿಂದ ಮತ್ತು ಕಂದು ಬಣ್ಣದಿಂದ ಕೂಡಿರುವಂತೆ ತೋರುತ್ತದೆ. ಪರಮಾತ್ಮನ ಆ ಬಣ್ಣಗಳು ಅಪ್ರಾಕೃತವಾದುದರಿಂದ ಬಿಳಿಯ ಬಣ್ಣದಂತೆ ಇತ್ಯಾದಿ ಎಲ್ಲ ಕಡೆಯಲ್ಲಿಯೂ 'ಇವ' ಶಬ್ದವನ್ನು ಪ್ರಯೋಗಿಸಿದ್ದಾರೆ. ಪರಮಾತ್ಮನು ಸ್ವತಂತ್ರನಾಗಿರುವುದರಿಂದ ಆಧಾರದ ಅಪೇಕ್ಷೆ ಇಲ್ಲದಿರುವುದರಿಂದ ಅವನ ರೂಪವು ಭೂಮಿಯಲ್ಲಾಗಲೀ, ಅಂತರಿಕ್ಷದಲ್ಲಾಗಲೀ, ಅನ್ಯಾಧಾರವಾಗಿ ಇರುವುದಿಲ್ಲ. ಅವನು ಬಹಳ ದೊಡ್ಡ ಜ್ಞಾನಾನಂದಮಯವಾದ ಶರೀರ ಹೊಂದಿರುವುದರಿಂದ ಅಗಾಧವಾದ ಸಮುದ್ರಜಲವೂ ಸಹ ಅವನಿಗೆ ಆಶ್ರಯವಾಗಲಾರದು. ಅವನು ಅದನ್ನೂ ಮೀರಿದ ಬಹಳ ದೊಡ್ಡ ಪರಿಮಾಣ ಉಳ್ಳವನು. 'ನಾಭಾತಿ' ಎಂಬ ಪಾಠದಲ್ಲಿ ಪ್ರಾಕೃತವಾದ ಶುಕ್ಲಾದಿರೂಪವುಳ್ಳವನಂತೆ ತೋರುವುದಿಲ್ಲ ಎಂದು ಅರ್ಥ.

ನ ತಾರಕಾಸು ನ ಚ ವಿದ್ಯುದಾಶ್ರಿತಂ
ನ ಚಾಭ್ರೇಷು ದೃಶ್ಯತೇ ರೂಪಮಸ್ಯ ।
ನ ಚಾಪಿ ವಾಯೌ ನ ಚ ದೇವತಾಸು
ನ ವೈ ಚಂದ್ರೇ ದೃಶ್ಯತೇ ನೋತ ಸೂರ್ಯೇ ॥೨೫॥

ಅವನ ರೂಪವು ನಕ್ಷತ್ರಗಳಲ್ಲಾಗಲೀ, ಮಿಂಚಿನಲ್ಲಾಗಲೀ ಆಶ್ರಯಿಸಿಕೊಂಡಿರುವುದಿಲ್ಲ ಅಥವಾ ಮೋಡಗಳನ್ನು ಆಶ್ರಯಿಸಿಕೊಂಡಿರುವುದಿಲ್ಲ. ವಾಯುವಿನಲ್ಲಾಗಲೀ, ದೇವತೆಗಳಲ್ಲಾಗಲೀ, ಚಂದ್ರನಲ್ಲಾಗಲೀ ಅಥವಾ ಸೂರ್ಯನಲ್ಲಾಗಲಿ ಆಶ್ರಿತವಾಗಿರುವುದಿಲ್ಲ.

ಪ್ರಕಾಶಮಾನವಾದರೂ ಅವನು ಪ್ರಕಾಶಿಸುವ ವಸ್ತುಗಳಾದ ನಕ್ಷತ್ರಗಳು, ವಿದ್ಯುತ್, ಸೂರ್ಯ-ಚಂದ್ರನಲ್ಲಿ ಆಶ್ರಿತನಲ್ಲ. ಮೇಘಶ್ಯಾಮನಾದರೂ ಮೇಘಗಳಲ್ಲಿ ಆಶ್ರಯವನ್ನು ಹೊಂದಿಲ್ಲ. ಅದೃಶ್ಯನಾದರೂ ಅದೃಶ್ಯರಾದ ವಾಯುವಿನಲ್ಲಿ, ದೇವತೆಗಳಲ್ಲಿ ಆಶ್ರಿತನಲ್ಲ ಎಂದು ಅಭಿಪ್ರಾಯ.

ನೈವರ್ಕ್ಷು ತನ್ನ ಯಜುಷ್ಸು ನಾಪ್ಯಥರ್ವಸು
ನ ದೃಶ್ಯತೇ ವೈ ವಿಮಲೇಷು ಸಾಮಸು ।
ರಥಂತರೇ ಬಾರ್ಹತೇ ವಾऽಪಿ ರಾಜನ್
ಮಹಾವ್ರತಸ್ಯಾತ್ಮನಿ ದೃಶ್ಯತೇऽಪಿ ತತ್ ॥೨೬॥

ಎಲೈ ರಾಜನೇ, ಅವನ ರೂಪಗಳು ಅನೇಕ ಶಾಖೆಗಳಿಂದ ಕೂಡಿದ ಋಗ್ವೇದಗಳಲ್ಲಿ ಕಾಣುವುದಿಲ್ಲ. ಯಜುರ್ವೇದಗಳಲ್ಲಿ ಕಾಣುವುದಿಲ್ಲ. ಅಥರ್ವವೇದಗಳಲ್ಲಿ ಕಾಣುವುದಿಲ್ಲ. ಪರಿಶುದ್ಧವಾದ ರಥಂತರ, ಬೃಹತೀ ಮೊದಲಾದ ಸಾಮಗಳಲ್ಲಿಯೂ ಕಾಣುವುದಿಲ್ಲ. ಆದರೆ ಮಹಾವ್ರತವನ್ನು ಧರಿಸಿದ ಜ್ಞಾನಿಯ ಮನಸ್ಸಿನಲ್ಲಿ ಮಾತ್ರ ಕಾಣುತ್ತದೆ.

ಅಪಾರಣೇಯಂ ತಮಸಃ ಪರಸ್ತಾತ್
ತದಂತಕೋऽನ್ವೇತಿ ವಿನಾಶಕಾಲೇ ।
ಅಣೇಯರೂಪಂ ಚ ತಥಾऽಪ್ಯಣೇಯಸಾಂ
ಮಹತ್ ಸ್ವರೂಪಂ ತ್ವಪಿ ಪರ್ವತೇಭ್ಯಃ ॥೨೭॥

ಅದರ ಅಂತವನ್ನು ಯಾರೂ ಮುಟ್ಟಲಾರರು. ಏಕೆಂದರೆ ಅದು ಅನಂತ. 'ಅಪಾರಣೇಯಂ' ಎಂಬ ಪಾಠವಿದ್ದರೆ ಯಾರಿಂದಲೂ ನಿರಾಕರಿಸಲು ಅಸಾಧ್ಯವಾದುದು ಎಂದು ಅರ್ಥ. 'ಅವಾರಣೇಯಂ' ಎಂಬ ಪಾಠವಿದ್ದರೆ ಯಾವುದರಿಂದಲೂ ಆವರಿಸಲು ಪಡಲು ಸಾಧ್ಯವಿಲ್ಲದುದು, ವ್ಯಾಪ್ತವಾದುದು ಎಂದು ಅರ್ಥ. ಅದು ಅಜ್ಞಾನದಿಂದ ದೂರವಾದುದು ಎಂದರೆ ಅಜ್ಞಾನ ಸ್ಪರ್ಶವಿಲ್ಲದುದು ಎಂದು ಅರ್ಥ. ಜಗತ್ತಿನ ಪ್ರಳಯದ ಸಮಯದಲ್ಲಿ ಕೊನೆಯಲ್ಲಿ ಉಳಿಯುವ ಮಹತತ್ತಾ ಭಿಮಾನಿಗಳಾದ ಬ್ರಹ್ಮದೇವರು ಅವನನ್ನು ಪ್ರವೇಶಿಸುತ್ತಾರೆ. ಅದು

ಅಣುಗಳಿಗಿಂತಲೂ ಪರಮ ಅಣುವಾದುದು. ಪರ್ವತಗಳಿಗಿಂತಲೂ ದೊಡ್ಡ ಪರಿಮಾಣವನ್ನು ಹೊಂದಿರುವಂತಹದು.

ಸಾ ಪ್ರತಿಷ್ಠಾ ತದಮೃತಂ ಲೋಕಸ್ತದ್ ಬ್ರಹ್ಮ ತದ್ ಯಶಃ ।
ಭೂತಾನಿ ಜಜ್ಞಿರೇ ತಸ್ಮಾತ್ ಪ್ರಲಯಂ ಯಾಂತಿ ತತ್ರ ಚ ॥೨೮॥

ಆ ಪರಮಾತ್ಮನೇ ಜಗತ್ತಿಗೆ ಆಶ್ರಯನಾದವನು. ಅಮೃತಂ= ನಾಶರಹಿತನಾದವನು, ಲೋಕಃ= ಪ್ರಕಾಶರೂಪನಾದವನು, ಬ್ರಹ್ಮ= ಪೂರ್ಣನಾದವನು, ಯಶಃ= ಯಶೋ ರೂಪನಾದವನು, ತಸ್ಮಾತ್= ಅವನಿಂದಲೇ, ಭೂತಾನಿ= ಎಲ್ಲ ಜೀವ-ಜಡರೂ, ಜಜ್ಞಿರೇ= ಉತ್ಪತ್ತಿಯನ್ನು ಹೊಂದಿದರು, ಪ್ರಲಯ ಕಾಲದಲ್ಲಿ, ತತ್ರ ಚ= ಅವನಲ್ಲಿಯೇ, ಪ್ರಲಯಂ ಯಾಂತಿ= ಲಯವನ್ನು ಹೊಂದುತ್ತಾರೆ.

ಅನಾಮಯಂ ತನ್ಮಹದುದ್ಯತಂ ಯಶೋ
ವಾಚೋ ವಿಕಾರಾತ್ ಕವಯೋ ವದಂತಿ ।
ಅಸ್ಮಿನ್ ಜಗತ್ ಸರ್ವಮಿದಂ ಪ್ರತಿಷ್ಠಿತಂ
ಯೇ ತದ್ವಿದುರಮೃತಾಸ್ತೇ ಭವಂತಿ ॥೨೯॥

ತತ್= ಆ ಪರಮಾತ್ಮನು-ಅನಾಮಯಂ= ನಿರ್ದುಷ್ಟನಾದವನು, ಮಹತ್= ದೇಶ, ಕಾಲಗುಣಗಳಿಂದ ಅನಂತನಾದವನು, ಉದ್ಯತಂ= ಸೃಷ್ಟ್ಯಾದಿಗಳಲ್ಲಿ ಸ್ವತಂತ್ರವಾಗಿ ಪ್ರಯತ್ನವನ್ನು ಮಾಡುವವನು, ಯಶಃ= ಯಶೋರೂಪನಾದವನು, ಕವಯಃ= ಜ್ಞಾನಿಗಳು, ವಾಚೋ ವಿಕಾರಾತ್= ಶಬ್ದಗಳ ವಿವಿಧ ಆಕಾರಗಳುಳ್ಳ ಋಗಾದಿ ಅಪೌರುಷೇಯಗ್ರಂಥಗಳಿಂದಲೂ ಮತ್ತು ಪೌರುಷೇಯ ಗ್ರಂಥಗಳಿಂದಲೂ, ವದಂತಿ= ಹೇಳುತ್ತಾರೆ. ಅವನಲ್ಲಿ ಈ ಜಗತ್ತೆಲ್ಲವೂ ಆಶ್ರಯಿಸಿಕೊಂಡಿದೆ. ಯಾರು ಇದನ್ನು ತಿಳಿಯುವರೋ ಅವರು ಮುಕ್ತರಾಗುವರು.

ತದೇತದಹ್ನಾ ಸಂಸ್ಥಿತಂ ಭಾತಿ ಸರ್ವಂ
ತದಾತ್ಮವಿತ್ ಪಶ್ಯತಿ ಜ್ಞಾನಯೋಗಾತ್ ।
ತಸ್ಮಿನ್ ಜಗತ್ ಸರ್ವಮಿದಂ ಪ್ರತಿಷ್ಠಿತಂ
ಯ ಏತದ್ ವಿದುರಮೃತಾಸ್ತೇ ಭವಂತಿ ॥೩೦॥

ಅಂತಹ ಪರಮಾತ್ಮನ ರೂಪವು ಪ್ರಕಾಶಮಾನವಾದ ಸೂರ್ಯನಲ್ಲಿ ಇದ್ದು ಎಲ್ಲವನ್ನೂ ಪ್ರಕಾಶಿಸುತ್ತದೆ. ಪರಮಾತ್ಮನನ್ನು ಜ್ಞಾನಿಯಾದವನು ತನ್ನ ಜ್ಞಾನ ರೂಪವಾದ ಉಪಾಯದಿಂದ ಅವನನ್ನು ನೋಡುತ್ತಾನೆ. ಆ ಪರಮಾತ್ಮನಲ್ಲಿ ಈ ಜಗತ್ತೆಲ್ಲವೂ ಪ್ರತಿಷ್ಠಿತವಾಗಿದೆ. ಯಾರು ಪರಮಾತ್ಮನ ಈ ಮಹಿಮೆಯನ್ನು ತಿಳಿಯುತ್ತಾರೆಯೋ ಅವರು ಮುಕ್ತರಾಗುವರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಪಂಚಚತ್ವಾರಿಂಶೋಽಧ್ಯಾಯಃ ॥

॥ ಸನತ್ಸುಜಾತಪರ್ವಣಿ ಚತುರ್ಥೋಽಧ್ಯಾಯಃ ॥

॥ ಇತಿ ಶ್ರೀಮನ್ಮಹಾಭಾರತೇ ಉದ್ಯೋಗಪರ್ವಣಿ ಸನತ್ಸುಜಾತೀಯೇ
ವಿಷಮವಾಕ್ಯಾರ್ಥಪ್ರಕಾಶೇ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನಲವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

## ನಲವತ್ತಾರನೆಯ ಅಧ್ಯಾಯ

ಸನತ್ಸುಜಾತರಿಂದ ಧೃತರಾಷ್ಟ್ರನನ್ನು ಕುರಿತು ತತ್ತ್ವೋಪದೇಶ.

### ಸನತ್ಸುಜಾತಃ

**ಶೋಕಃ ಕ್ರೋಧಶ್ಚ ಕಾಮಶ್ಚ ಲೋಭೋ ಮಾನಃ ಪರಾಸುತಾ ।**
**ಈರ್ಷ್ಯಾ ಮೋಹೋಽವಿವಿತ್ಸಾ ಚಾಕೃಪಾಽಸೂಯಾ ಜುಗುಪ್ಸತಾ ॥೧॥**

**ದ್ವಾದಶೈತೇ ಮಹಾದೋಷಾ ಮನುಷ್ಯಪ್ರಾಣನಾಶನಾಃ ॥೨॥**

ಹಿಂದೆ ಹೇಳಿದ ಕ್ರೋಧಾದಿ ದೋಷಗಳು ಕೇವಲ ತಪಸ್ಸಿಗೆ ವಿರೋಧಿಗಳಲ್ಲ, ಐಹಿಕವಾದ ಅನಿಷ್ಟವನ್ನೂ ಉಂಟುಮಾಡುತ್ತವೆ ಎಂದು ಹೇಳಿ, ತಪಸ್ಸಿನ ಸಮೃದ್ಧಿ ಮತ್ತು ತದಭಾವಗಳನ್ನು ಈ ಅಧ್ಯಾಯದಲ್ಲಿ ಪ್ರತಿಪಾದನೆ ಮಾಡುತ್ತಾರೆ. ಮೊದಲು ಕ್ರೋಧಾದಿಗಳಿಗೆ ಈ ಲೋಕದ ಅನಿಷ್ಟಕರಗಳನ್ನು ಹೇಳುತ್ತಾರೆ.

ಶೋಕ, ಕ್ರೋಧ, ಕಾಮ ಮೊದಲಾದ ಹನ್ನೆರಡು ಮಹಾದೋಷಗಳು ಮನುಷ್ಯನ ಪ್ರಾಣವನ್ನು ನಾಶಮಾಡುತ್ತವೆ. ಪರಾಸುತಾ= ಪರೇ= ಪ್ರಾಜ್ಞನಾಮಕನಾದ

ಅಣುಗಳಿಗಿಂತಲೂ ಪರಮ ಅಣುವಾದುದು. ಪರ್ವತಗಳಿಗಿಂತಲೂ ದೊಡ್ಡ ಪರಿಮಾಣವನ್ನು ಹೊಂದಿರುವಂತಹದು.

**ಸಾ ಪ್ರತಿಷ್ಠಾ ತದಮೃತಂ ಲೋಕಸ್ತದ್ ಬ್ರಹ್ಮ ತದ್ ಯಶಃ ।**
**ಭೂತಾನಿ ಜಜ್ಞಿರೇ ತಸ್ಮಾತ್ ಪ್ರಲಯಂ ಯಾಂತಿ ತತ್ರ ಚ ॥೨೮॥**

ಆ ಪರಮಾತ್ಮನೇ ಜಗತ್ತಿಗೆ ಆಶ್ರಯನಾದವನು. ಅಮೃತಂ= ನಾಶರಹಿತನಾದವನು, ಲೋಕಃ= ಪ್ರಕಾಶರೂಪನಾದವನು, ಬ್ರಹ್ಮ= ಪೂರ್ಣನಾದವನು, ಯಶಃ= ಯಶೋ ರೂಪನಾದವನು, ತಸ್ಮಾತ್= ಅವನಿಂದಲೇ, ಭೂತಾನಿ= ಎಲ್ಲ ಜೀವ-ಜಡರೂ, ಜಜ್ಞಿರೇ= ಉತ್ಪತ್ತಿಯನ್ನು ಹೊಂದಿದರು, ಪ್ರಲಯ ಕಾಲದಲ್ಲಿ, ತತ್ರ ಚ= ಅವನಲ್ಲಿಯೇ, ಪ್ರಲಯಂ ಯಾಂತಿ= ಲಯವನ್ನು ಹೊಂದುತ್ತಾರೆ.

**ಅನಾಮಯಂ ತನ್ಮಹದುದ್ಯತಂ ಯಶೋ**
**ವಾಚೋ ವಿಕಾರಾತ್ ಕವಯೋ ವದಂತಿ ।**
**ಅಸ್ಮಿನ್ ಜಗತ್ ಸರ್ವಮಿದಂ ಪ್ರತಿಷ್ಠಿತಂ**
**ಯೇ ತದ್ವಿದುರಮೃತಾಸ್ತೇ ಭವಂತಿ ॥೨೯॥**

ತತ್= ಆ ಪರಮಾತ್ಮನು-ಅನಾಮಯಂ= ನಿರ್ದುಷ್ಟನಾದವನು, ಮಹತ್= ದೇಶ, ಕಾಲಗುಣಗಳಿಂದ ಅನಂತನಾದವನು, ಉದ್ಯತಂ= ಸೃಷ್ಟ್ಯಾದಿಗಳಲ್ಲಿ ಸ್ವತಂತ್ರವಾಗಿ ಪ್ರಯತ್ನವನ್ನು ಮಾಡುವವನು, ಯಶಃ= ಯಶೋರೂಪನಾದವನು, ಕವಯಃ= ಜ್ಞಾನಿಗಳು, ವಾಚೋ ವಿಕಾರಾತ್= ಶಬ್ದಗಳ ವಿವಿಧ ಆಕಾರಗಳುಳ್ಳ ಋಗಾದಿ ಅಪೌರುಷೇಯಗ್ರಂಥಗಳಿಂದಲೂ ಮತ್ತು ಪೌರುಷೇಯ ಗ್ರಂಥಗಳಿಂದಲೂ, ವದಂತಿ= ಹೇಳುತ್ತಾರೆ. ಅವನಲ್ಲಿ ಈ ಜಗತ್ತೆಲ್ಲವೂ ಆಶ್ರಯಿಸಿಕೊಂಡಿದೆ. ಯಾರು ಇದನ್ನು ತಿಳಿಯುವರೋ ಅವರು ಮುಕ್ತರಾಗುವರು.

**ತದೇತದಹ್ನಾ ಸಂಸ್ಥಿತಂ ಭಾತಿ ಸರ್ವಂ**
**ತದಾತ್ಮವಿತ್ ಪಶ್ಯತಿ ಜ್ಞಾನಯೋಗಾತ್ ।**
**ತಸ್ಮಿನ್ ಜಗತ್ ಸರ್ವಮಿದಂ ಪ್ರತಿಷ್ಠಿತಂ**
**ಯ ಏತದ್ ವಿದುರಮೃತಾಸ್ತೇ ಭವಂತಿ ॥೩೦॥**

ಅಂತಹ ಪರಮಾತ್ಮನ ರೂಪವು ಪ್ರಕಾಶಮಾನವಾದ ಸೂರ್ಯನಲ್ಲಿ ಇದ್ದು ಎಲ್ಲವನ್ನೂ ಪ್ರಕಾಶಿಸುತ್ತದೆ. ಪರಮಾತ್ಮನನ್ನು ಜ್ಞಾನಿಯಾದವನು ತನ್ನ ಜ್ಞಾನ ರೂಪವಾದ ಉಪಾಯದಿಂದ ಅವನನ್ನು ನೋಡುತ್ತಾನೆ. ಆ ಪರಮಾತ್ಮನಲ್ಲಿ ಈ ಜಗತ್ತೆಲ್ಲವೂ ಪ್ರತಿಷ್ಠಿತವಾಗಿದೆ. ಯಾರು ಪರಮಾತ್ಮನ ಈ ಮಹಿಮೆಯನ್ನು ತಿಳಿಯುತ್ತಾರೆಯೋ ಅವರು ಮುಕ್ತರಾಗುವರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಪಂಚಚತ್ವಾರಿಂಶೋಽಧ್ಯಾಯಃ ॥

॥ ಸನತ್ಸುಜಾತಪರ್ವಣಿ ಚತುರ್ಥೋಽಧ್ಯಾಯಃ ॥

॥ ಇತಿ ಶ್ರೀಮನ್ಮಹಾಭಾರತೇ ಉದ್ಯೋಗಪರ್ವಣಿ ಸನತ್ಸುಜಾತೀಯೇ
ವಿಷಮವಾಕ್ಯಾರ್ಥಪ್ರಕಾಶೇ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನಲವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

## ನಲವತ್ತಾರನೆಯ ಅಧ್ಯಾಯ

ಸನತ್ಸುಜಾತರಿಂದ ಧೃತರಾಷ್ಟ್ರನನ್ನು ಕುರಿತು ತತ್ತ್ವೋಪದೇಶ.

### ಸನತ್ಸುಜಾತಃ

**ಶೋಕಃ ಕ್ರೋಧಶ್ಚ ಕಾಮಶ್ಚ ಲೋಭೋ ಮಾನಃ ಪರಾಸುತಾ ।**
**ಈರ್ಷ್ಯಾ ಮೋಹೋಽವಿವಿತ್ಸಾ ಚಾಕೃಪಾಽಸೂಯಾ ಜುಗುಪ್ಸತಾ ॥೧॥**

**ದ್ವಾದಶೈತೇ ಮಹಾದೋಷಾ ಮನುಷ್ಯಪ್ರಾಣನಾಶನಾಃ ॥೨॥**

ಹಿಂದೆ ಹೇಳಿದ ಕ್ರೋಧಾದಿ ದೋಷಗಳು ಕೇವಲ ತಪಸ್ಸಿಗೆ ವಿರೋಧಿಗಳಲ್ಲ, ಐಹಿಕವಾದ ಅನಿಷ್ಟವನ್ನೂ ಉಂಟುಮಾಡುತ್ತವೆ ಎಂದು ಹೇಳಿ, ತಪಸ್ಸಿನ ಸಮೃದ್ಧಿ ಮತ್ತು ತದಭಾವಗಳನ್ನು ಈ ಅಧ್ಯಾಯದಲ್ಲಿ ಪ್ರತಿಪಾದನೆ ಮಾಡುತ್ತಾರೆ. ಮೊದಲು ಕ್ರೋಧಾದಿಗಳಿಗೆ ಈ ಲೋಕದ ಅನಿಷ್ಟಕರಗಳನ್ನು ಹೇಳುತ್ತಾರೆ.

ಶೋಕ, ಕ್ರೋಧ, ಕಾಮ ಮೊದಲಾದ ಹನ್ನೆರಡು ಮಹಾದೋಷಗಳು ಮನುಷ್ಯನ ಪ್ರಾಣವನ್ನು ನಾಶಮಾಡುತ್ತವೆ. ಪರಾಸುತಾ= ಪರೇ= ಪ್ರಾಜ್ಞನಾಮಕನಾದ

ಪರಮಾತ್ಮನಲ್ಲಿ ಅಸುಃ= ಪ್ರಾಣವು ಹೋಗಿ ಸೇರುವ ಅವಸ್ಥೆ= ನಿದ್ರೆ ಎಂದು ಅರ್ಥ, ಅಥವಾ ಪರಾಸುತಾ ಎಂದರೆ ಇನ್ನೊಬ್ಬರ ದ್ರವ್ಯವನ್ನು ಅಪಹಾರ ಮಾಡುವ ಇಚ್ಛೆ ಎಂದು ಅರ್ಥ. ಮೋಹ ಶಬ್ದವು ಮಿಥ್ಯಾಜ್ಞಾನವನ್ನು ಹೇಳುವಂತೆ, ಕೃತ್ಯಾಕೃತ್ಯವಿವೇಕ ರಾಹಿತ್ಯವನ್ನೂ ಹೇಳುತ್ತದೆ. ಹಿಂದಿನ ಅಧ್ಯಾಯದಲ್ಲಿ ಹೇಳಿದ ಹನ್ನೆರಡು ದೋಷಗಳಲ್ಲಿ ಒಂದಾದ ಸ್ಪೃಹಾ ಎಂಬುದು ಇಲ್ಲಿ ಕಾಮ ಪದದಿಂದ ಹೇಳಲ್ಪಟ್ಟಿದೆ. ಉಳಿದ ಪದಗಳಿಗೆ ಹಿಂದಿನ ಅಧ್ಯಾಯದಲ್ಲಿಯೇ ವ್ಯಾಖ್ಯಾನವನ್ನು ಮಾಡಲಾಗಿದೆ.

**ಏಕೈಕಮೇತೇ ರಾಜೇಂದ್ರ ಮನುಷ್ಯಾನ್ ಪರ್ಯುಪಾಸತೇ ।**
**ಯೈರಾವಿಷ್ಟೋ ನರಃ ಪಾಪಂ ಮೂಢಸಂಜ್ಞೋ ವ್ಯವಸ್ಯತಿ ॥೩॥**

ಕ್ರೋಧಾದಿಗಳು ಎಲ್ಲವೂ ಸೇರಿ ಪ್ರಾಣಾಪಹಾರವನ್ನು ಮಾಡುತ್ತವೆ ಎಂದಲ್ಲ. ಅವುಗಳಲ್ಲಿ ಒಂದೊಂದೂ ಸಹ ಅಂತಹ ಶಕ್ತಿಯನ್ನು ಪಡೆದಿವೆ ಎಂದು ಹೇಳುತ್ತಾರೆ. ಎಲೈ ರಾಜೇಂದ್ರನೇ, ಇವುಗಳಲ್ಲಿ ಒಂದೊಂದೂ ಸಹ ಮನುಷ್ಯನನ್ನು ಬಂದು ಸೇರಿಕೊಳ್ಳುತ್ತವೆ. ಅವುಗಳಲ್ಲಿ ಯಾವ ಒಂದರಿಂದ ಕೂಡಿದರೂ ಸಹ ಮನುಷ್ಯನು ಕರ್ತವ್ಯಪ್ರಜ್ಞೆಯನ್ನು ಕಳೆದುಕೊಂಡು ಪರಸ್ತ್ರೀಗಮನಾದಿ ಪಾಪಕಾರ್ಯಗಳನ್ನು ಮಾಡಲು ನಿರ್ಧರಿಸುತ್ತಾನೆ.

**ಸ್ಪೃಹಯಾಲುರುಗ್ರಃ ಪರುಷೋ ವಾಽವದಾನ್ಯಃ**
**ಕ್ರೋಧಂ ಬಿಭ್ರನ್ ಮನಸಾ ವೈ ವಿಕತ್ಥೀ ।**
**ನೃಶಂಸಧರ್ಮಾಃ ಷಡಿಮೇ ಜನಾ ವೈ**
**ಪ್ರಾಪ್ಯಾಪ್ಯರ್ಥಂ ನೋತ ಸಭಾಜಯಂತೇ ॥೪॥**

ಹಿಂದಿನ ಅಧ್ಯಾಯದಲ್ಲಿ ಹೇಳಿದ ನೃಶಂಸ ಪದಾರ್ಥಗಳಿಗೆ ಈ ಶ್ಲೋಕದಲ್ಲಿ ಐಹಿಕವಾದ ಅನಿಷ್ಟಾಪಾದಕತ್ವವನ್ನು ಹೇಳುತ್ತಾರೆ. ಹಿಂದೆ ಹೇಳಿದ ಚಪಲ ಶಬ್ದದ ಅರ್ಥದಲ್ಲಿ ಇಲ್ಲಿ ಉಗ್ರ ಎಂಬ ಪದವಿದೆ. ಅಮನಸ್ವೀ ಎಂಬ ಪದದ ಅರ್ಥದಲ್ಲಿ ಅವದಾನ್ಯಃ-ಉದಾರತೆ ಇಲ್ಲದವನು ಎಂಬ ಪದವಿದೆ. 'ಮನಸಾ ಕ್ರೋಧಂ ಬಿಭ್ರತ್' ಎಂದು ಅನ್ವಯವನ್ನು ಮಾಡಿ ಮನಸ್ಸಿನಲ್ಲಿ ಯಾವಾಗಲೂ ಕೋಪದಿಂದ ಕೂಡಿದವನು ಎಂದು ಅರ್ಥವನ್ನು ಮಾಡಬೇಕು. ನೃಶಂಸ ಧರ್ಮವುಳ್ಳ ಈ ಆರು ಜನರು ತಾವು ಅಭೀಷ್ಟವಾದ ವಸ್ತುಗಳನ್ನು ಪಡೆದರೂ ಸಂತೋಷದಿಂದಿರುವುದಿಲ್ಲ.

ಸಂಭೋಗಸಂವಿದ್ ವಿಷಮೋಽತಿಮಾನೀ
ದತ್ತ್ವಾ ವಿಕತ್ಥೀ ಕೃಪಣೋ ದುರ್ಬಲಶ್ಚ ।
ಬಹುಪ್ರಶಂಸೀ ವನಿತಾದ್ವಿಟ್ ಸದೈವ
ಸಪ್ತೈವೋಕ್ತಾ ಪಾಪಶೀಲಾ ನೃಶಂಸಾಃ ॥೫॥

ಹಿಂದಿನ ಅಧ್ಯಾಯದಲ್ಲಿ ಹೇಳಿದ ಹದಿಮೂರು ನೃಶಂಸಗಳಲ್ಲಿ ಹಿಂದಿನ ಶ್ಲೋಕದಲ್ಲಿ ಆರು ನೃಶಂಸಗಳನ್ನು ಹೇಳಿ, ಇಲ್ಲಿ ಉಳಿದ ಏಳನ್ನು ಹೇಳುತ್ತಾರೆ. ಹಿಂದಿನ ಅಧ್ಯಾಯದಲ್ಲಿ ಹೇಳಿದ 'ವಿಷಮೇಧಮಾನಃ' ಎಂಬುದನ್ನು ಇಲ್ಲಿ 'ವಿಷಮ' ಎಂದು ಹೇಳಿದ್ದಾರೆ. ವೈಷಮ್ಯವುಳ್ಳವನು ಎಂದು ಅರ್ಥ ಅಥವಾ ಬಹಳ ಅಭಿಮಾನವುಳ್ಳವನು ಎಂದು ಅರ್ಥ. ಹಿಂದೆ 'ದತ್ತಾನುತಾಪೀ' ಎಂದು ಹೇಳಿದುದನ್ನು ಇಲ್ಲಿ ದತ್ತ್ವಾ ವಿತತ್ಥೀ' ದಾನವನ್ನು ಮಾಡಿ ತನ್ನನ್ನೇ ಹೊಗಳಿಕೊಳ್ಳುವವನು ಎಂದು ಹೇಳಿದ್ದಾರೆ. ಉಳಿದ ಪದಗಳಿಗೆ ಹಿಂದೆಯೇ ವ್ಯಾಖ್ಯಾನ ಮಾಡಲಾಗಿದೆ.

ಧರ್ಮಶ್ಚ ಸತ್ಯಂ ಚ ತಪೋ ದಮಶ್ಚ
ಅಮಾತ್ಸರ್ಯಂ ಹ್ರೀಸ್ತಿತಿಕ್ಷಾನಸೂಯಾ ।
ದಾನಂ ಶ್ರುತಂ ಚೈವ ಧೃತಿಃ ಕ್ಷಮಾ ಚ
ಮಹಾವ್ರತಾ ದ್ವಾದಶ ಬ್ರಾಹ್ಮಣಸ್ಯ ॥೬॥

ಹಿಂದೆ ತಪೋವೃದ್ಧಿಕರವಾಗಿ ಹೇಳಲ್ಪಟ್ಟ ಧರ್ಮಗಳು ಮೋಕ್ಷಾದಿ ಪುರುಷಾರ್ಥಕ್ಕೂ ಕಾರಣವಾಗುತ್ತವೆ ಎಂದು ಹೇಳುತ್ತಾರೆ. ಹಿಂದಿನ ಅಧ್ಯಾಯದಲ್ಲಿ ಶ್ರಮಃ ಎಂದು ಹೇಳಿದ್ದನ್ನು ಇಲ್ಲಿ ಕ್ಷಮಾ ಎಂಬ ಶಬ್ದದಿಂದ ಸಂಗ್ರಹಿಸಿದ್ದಾರೆ.

ಯ ಏತೇಭ್ಯಃ ಪ್ರಚ್ಯವೇದ್ ದ್ವಾದಶಭ್ಯಃ
ಸರ್ವಾಮಪೀಮಾಂ ಪೃಥಿವೀಂ ಸ ಶಿಷ್ಯಾತ್ ।
ತ್ರಿಭಿರ್ದ್ವಾಭ್ಯಾಮೇಕತೋ ವಾಽರ್ಥಿತೋ ಯೋ
ನಾಸ್ಯ ಸ್ವಮಸ್ತೀತಿ ಚ ವೇದಿತವ್ಯಮ್ ॥೭॥

ಯಾವನು ಇಂತಹ ಹನ್ನೆರಡು ಗುಣಗಳನ್ನು ಸಂಪಾದಿಸುವುದಕ್ಕಾಗಿ ಮನೆಯಿಂದ ಹೊರಟು ಗುರುಕುಲವಾಸವನ್ನು ಮಾಡುತ್ತಾನೆಯೋ ಅವನು ಈ ಎಲ್ಲಾ ಪೃಥಿವಿಯನ್ನೂ

ಆಳುತ್ತಾನೆ (ಈ ವಾಕ್ಯದ ಅಭಿಪ್ರಾಯವನ್ನು ಹಿಂದೆಯೇ ಹೇಳಲಾಗಿದೆ). ಈ ಹನ್ನೆರಡು ಗುಣಗಳಲ್ಲಿ ಮೂರು ಅಥವಾ ಎರಡು ಅಥವಾ ಒಂದು ಗುಣಗಳಿಂದ ಕೂಡಿದವನೂ ಸಹ ಈ ಪ್ರಪಂಚದಲ್ಲಿ ತನ್ನದು ಏನೂ ಇಲ್ಲ, ಎಲ್ಲವೂ ಭಗವದಧೀನ ಎಂದು ತಿಳಿಯುತ್ತಾನೆ. 'ಯ ಏತೇಭ್ಯಃ' ಎಂಬ ಪಾಠದ ಬದಲು 'ಯೋ ನೈತೇಭ್ಯಃ' ಎಂದು ಪಾಠವಿದ್ದರೆ ಯಾವನು ಈ ಹನ್ನೆರಡು ಗುಣಗಳಿಂದ ರಹಿತನಾಗುವುದಿಲ್ಲವೋ ಅವನು ಎಲ್ಲ ಭೂಮಿಯನ್ನು ಆಳುತ್ತಾನೆ ಎಂದು ಅರ್ಥವನ್ನು ಮಾಡಬೇಕು.

**ದಮಸ್ಯಾಗೋಽಪ್ಯಪ್ರಮಾದ ಇತ್ಯೇತೇ ಹ್ಯಮೃತಂ ಸ್ಮೃತಮ್ ।**
**ಏತಾನಿ ಬ್ರಹ್ಮಮುಖ್ಯಾನಾಂ ಬ್ರಾಹ್ಮಣಾನಾಂ ಮನೀಷಿಣಾಮ್ ॥೮॥**

ದಮ ಮೊದಲಾದವುಗಳ ಸ್ವರೂಪವನ್ನು ಹೇಳಲು ಇಲ್ಲಿ ಅವುಗಳನ್ನು ಸ್ತೋತ್ರ ಮಾಡುತ್ತಾರೆ. ಈ ಶ್ಲೋಕವನ್ನು ಹಿಂದೆ ವ್ಯಾಖ್ಯಾನ ಮಾಡಲಾಗಿದೆ.

**ಸದ್ವಾಽಸದ್ವಾ ಪರೀವಾದೋ ಬ್ರಾಹ್ಮಣಸ್ಯ ನ ಶಸ್ಯತೇ ।**
**ನರಕಪ್ರತಿಷ್ಠಾಸ್ತೇ ವೈ ಸ್ಯುಃ ಯ ಏವಂ ಕುರ್ವತೇ ನರಾಃ ॥೯॥**

ಬ್ರಾಹ್ಮಣನಲ್ಲಿ ದೋಷವಿರಲಿ ಅಥವಾ ಇಲ್ಲದಿರಲಿ, ಅವನನ್ನು ನಿಂದಿಸುವುದು ಒಳ್ಳೆಯದಲ್ಲ. ಹಾಗೆ ಮಾಡುವ ಮನುಷ್ಯರು ನರಕದಲ್ಲಿ ನೆಲೆಸುತ್ತಾರೆ ಎಂದು ಪ್ರಸಂಗ ಸಂಗತಿಯಿಂದ ಬ್ರಾಹ್ಮಣನಿಂದೆಗೆ ಅನಿಷ್ಟ ಹೇತುತ್ವವನ್ನು ಹೇಳುತ್ತಾರೆ.

**ದಮೋಽಷ್ಟಾದಶದೋಷಃ ಸ್ಯಾಲ್ಲೋಮಶೇನ ಪ್ರಕೀರ್ತಿತಃ ।**
**ಲೋಕದ್ವೇಷಃ ಪ್ರಾತಿಕೂಲ್ಯಮಭ್ಯಸೂಯಾ ಮೃಷಾ ವಚಃ ॥೧೦॥**

ದಮದ ಹದಿನೆಂಟು ದೋಷಗಳನ್ನು ಹೇಳುತ್ತಾರೆ. ಅಭ್ಯಸೂಯಾ ಎಂದರೆ ಇನ್ನೊಬ್ಬರ ಸಂಪತ್ತನ್ನು ನೋಡಿ ಸಹಿಸದಿರುವಿಕೆ ಎಂದು ಅರ್ಥ.

**ಕಾಮಕ್ರೋಧೌ ಪರಾದೈನ್ಯಂ ಪರಿವಾದೋಽಥ ಪೈಶುನಮ್ ।**
**ಅರ್ಥಹಾನಿರ್ವಿವಾದಶ್ಚ ಮಾತ್ಸರ್ಯಂ ಪ್ರಾಣಪೀಡನಮ್ ॥೧೧॥**

ಕೆಲವು ಪಾಠದಲ್ಲಿ 'ಪಾರತಂತ್ರ್ಯಂ' ಎಂಬ ಶಬ್ದಕ್ಕೆ ಬದಲಾಗಿ 'ಪರಾದೈನ್ಯಂ' ಎಂಬ ಪಾಠವಿದೆ. ಪರಾದೈನ್ಯಂ ಎಂದರೆ ಪರಾ= ಶ್ರೇಷ್ಠರಾದವರ ಮುಂದೆ, ಅದೈನ್ಯಂ=

ದಾಸನಂತೆ ನಡೆದುಕೊಳ್ಳದೇ ಇರುವುದು ಎಂದು ಅರ್ಥ. ಅರ್ಥಹಾನಿ ಎಂದರೆ ಪ್ರಯೋಜನದ ಅನುಸಂಧಾನವಿಲ್ಲದೆ ಪ್ರವೃತ್ತಿ ಮಾಡುವುದು ಎಂದು ಅರ್ಥ. ಮಾತ್ಸರ್ಯ ಎಂದರೆ ಸ್ವೋತ್ತಮರ ಗುಣಗಳಲ್ಲಿ ದ್ವೇಷ ಮಾಡುವುದು ಎಂದು ಅರ್ಥ.

**ಈರ್ಷ್ಯಾ ಮೋಹೋಽತಿಮಾನಶ್ಚ ಸಂಜ್ಞಾನಾಶೋಽಭ್ಯಸೂಯತಾ ।**
**ತಸ್ಮಾತ್ ಪ್ರಾಜ್ಞೋ ನ ಮಾದ್ಯೇತ ಸತಾಂ ಹ್ಯೇತದ್ ವಿಗರ್ಹಿತಮ್ ॥೧೨॥**

ಈರ್ಷ್ಯಾ= ಇನ್ನೊಬ್ಬರ ಗುಣವನ್ನು ಅಪಲಾಪ ಮಾಡುವುದು, ಅಭ್ಯಸೂಯತಾ= ಗುಣಗಳನ್ನು ದೋಷವೆಂದು ಆರೋಪಿಸುವುದು, ಸಂಜ್ಞಾನಾಶಃ= ಅಧ್ಯಯನ ಮಾಡಿದ ಶಾಸ್ತ್ರದ ವಿಸ್ಮರಣೆ. ಉಳಿದ ಪದಗಳಿಗೆ ಹಿಂದೆಯೇ ಅರ್ಥವನ್ನು ಹೇಳಲಾಗಿದೆ. ಇಂತಹ ನಿಂದಿತವಾದ ದೋಷಗಳಿರುವುದರಿಂದ ಪ್ರಾಜ್ಞನಾದವನು ಎಂದೂ ಮದವನ್ನು, ಅಹಂಕಾರವನ್ನು ಹೊಂದಬಾರದು. ಹತ್ತನೆಯ ಶ್ಲೋಕದಲ್ಲಿ 'ಮದೋ ಅಷ್ಟಾದಶ ದೋಷಃಸ್ಯಾತ್' ಎಂಬ ಪಾಠವಿರುವುದರಿಂದ ಅದನ್ನು ಅನುಸರಿಸಿ ಹೀಗೆ ವ್ಯಾಖ್ಯಾನ ಮಾಡಿದ್ದಾರೆ.

**ಸೌಹೃದೇ ವೈ ಷಡ್ಗುಣಾ ವೇದಿತವ್ಯಾಃ**
**ಪ್ರಿಯೇ ಹೃಷ್ಯಂತ್ಯಪ್ರಿಯೇ ಚ ವ್ಯಥಂತೇ ।**
**ಸ್ಯಾದಾತ್ಮನಃ ಸುಹಿತಂ ಯಾಚಿತೋ ಯೋ**
**ದದಾತ್ಯಯಾಚ್ಯಮಪಿ ದೇಯಂ ಖಲು ಸ್ಯಾತ್ ॥೧೩॥**

ಪ್ರಸಂಗಸಂಗತಿಯಿಂದ ಮಿತ್ರಭಾವದ ಆರುಗುಣಗಳನ್ನು ಹೇಳುತ್ತಾರೆ. ಸ್ನೇಹವಿರುವಲ್ಲಿ ಆರು ಗುಣಗಳನ್ನು ತಿಳಿಯಬೇಕು. ಮಿತ್ರನಿಗೆ ಪ್ರಿಯನಾದರೆ ತಾನು ಸಂತೋಷ ಪಡುತ್ತಾನೆ ಮತ್ತು ಅಪ್ರಿಯನಾದರೆ ದುಃಖವನ್ನು ಪಡುತ್ತಾನೆ. ತನಗೆ ಬಹಳ ಪ್ರಿಯವಾದುದು ಯಾವುದು ಇರುತ್ತದೋ ಅಂತಹ ಬೇಡಬಾರದ್ದನ್ನು ಬೇಡಿದರೂ ಸಹ ಅದನ್ನು ಕೊಡಲು ಸಾಧ್ಯವಾಗುವುದಾದರೆ (ಧರ್ಮಶಾಸ್ತ್ರ ವಿರೋಧವಿಲ್ಲದಿದ್ದರೆ) ಅದನ್ನೂ ಕೊಡುತ್ತಾನೆ.

**ಇಷ್ಟಾನ್ ಪುತ್ರಾನ್ ವಿಭವಾನ್ ಸ್ವಾಂಶ್ಚ ದಾರಾನ್**
**ಅಭ್ಯರ್ಥಿತಶ್ಚಾರ್ಹತೇ ಶುದ್ಧಭಾವಃ ।**

ತ್ಯಕ್ತದ್ರವ್ಯಃ ಸಂವಸತೇ ನ ಕಾಮಾದ್
ಭುಂಕ್ತೇ ಕರ್ಮ ಸ್ವಾಶಿಷಂ ಬಾಧತೇ ಚ ॥೧೪॥

ಪುನಃ ಮಿತ್ರಭಾವವನ್ನೇ ವಿವರಿಸುತ್ತಾರೆ. ಯಃ= ಯಾವನು, ಅಭ್ಯರ್ಥಿತಃ= ಯೋಗ್ಯನಾದ ಮಿತ್ರನಿಂದ ಪ್ರಾರ್ಥಿತನಾಗಿ, ಶುದ್ಧಭಾವಃ= ಮನಸ್ಸಂತೋಷ ಪೂರ್ವಕವಾಗಿ, ಇಷ್ಟಾನ್ ವಿಭವಾನ್= ಇಷ್ಟವಾದ ಧನಾದಿ ವೈಭವವನ್ನೂ, ದಾರಾನ್= ಪತ್ನಿಯನ್ನೂ, ಪುತ್ರಾದೀನ್= ಮತ್ತು ಮಕ್ಕಳನ್ನೂ, ದದಾತಿ= ಕೊಡುತ್ತಾನೆಯೋ ಇದು ಮೂರನೆಯ ಗುಣ. ಯಾವನು ತ್ಯಕ್ತದ್ರವ್ಯಃ= ಯಾಚನೆ ಮಾಡದಿದ್ದರೂ ಮಿತ್ರನ ಅಭಿಪ್ರಾಯವನ್ನು ತಿಳಿದು ದ್ರವ್ಯವನ್ನು ಕೊಟ್ಟು, ಕಾಮಾದ್ ನ ಸಂವಸತೇ= ತನ್ನ ಆಸೆಯಿಂದ ಆ ದ್ರವ್ಯವನ್ನು ಪುನಃ ಭೋಗಿಸುವುದಿಲ್ಲವೋ, ಅವನ ಅಂತಹ ಗುಣವು ನಾಲ್ಕನೆಯ ಗುಣವು. ಮತ್ತು ಯಾವನು ಕರ್ಮ= ಸ್ನೇಹಿತನು ಮಾಡಬೇಕಾದ ಕಾರ್ಯವನ್ನು, ಭುಂಕ್ತೇ= ತಾನೇ ಮಾಡುತ್ತಾನೆಯೋ (ಆ ಕಾರ್ಯದಿಂದ ಉಂಟಾಗುವ ಶ್ರಮವನ್ನು ತಾನೇ ಅನುಭವಿಸುತ್ತಾನೆಯೋ) ಮತ್ತು ಸ್ವಾಶಿಷಂ= ತನಗೆ ಇಷ್ಟವಾದುದನ್ನು, ಬಾಧತೇ= ಪರಿತ್ಯಾಗ ಮಾಡುತ್ತಾನೆಯೋ, ಮಿತ್ರನ ಕರ್ಮವನ್ನು ಮಾಡಿ ಶ್ರಮ ಪಡುವುದು ಐದನೆಯ ಗುಣ, ತನ್ನ ಇಷ್ಟವನ್ನು ಪರಿತ್ಯಾಗ ಮಾಡುವುದು ಆರನೆಯ ಗುಣ.

ದ್ರವ್ಯವಾನ್ ಗುಣವಾನ್ ಯಶ್ಚ ತ್ಯಾಗೀ ಭವತಿ ಸಾತ್ವಿಕಃ ।
ಪಂಚಭೂತಾನಿ ಪಂಚಭ್ಯೋ ನಿವರ್ತಯತಿ ತಾದೃಶಃ ॥೧೫॥

ಯಶ್ಚ= ಯಾವನು, ದ್ರವ್ಯವಾನ್= ಸಂಪದ್ಯುಕ್ತನಾಗಿ, ಗುಣವಾನ್= ಗುಣವಂತನಾಗಿ, ಸಾತ್ವಿಕಃ= ಸಾತ್ವಿಕನಾಗಿರುತ್ತಾನೆಯೋ, ಸ ಏವ= ಅವನೇ, ತ್ಯಾಗೀ ಭವತಿ= ತ್ಯಾಗವನ್ನು ಮಾಡುವವನಾಗುತ್ತಾನೆ. ಅಂತಹ ತ್ಯಾಗದ ಫಲವನ್ನು ಹೇಳುತ್ತಾರೆ. ತಾದೃಶಃ= ಅಂತಹ ತ್ಯಾಗಿಯು, ಪಂಚಭ್ಯಃ= ಐದು ವಿಷಯಗಳಿಗೆ, ಪಂಚಭೂತಾನಿ= ಪಂಚ ಮಹಾಭೂತಗಳು, ನಿವರ್ತಯತಿ= ಹಿಂದಿರುಗಿಸುತ್ತಾನೆ. (ಪಾರ್ಥಿವ ದ್ರವ್ಯವನ್ನು ಕೊಡುವುದರಿಂದ ಪೃಥಿವಿಯನ್ನೂ, ಜಲವನ್ನು ಕೊಡುವುದರಿಂದ ಜಲವನ್ನೂ ಈ ರೀತಿಯಾಗಿ ಪಂಚಭೂತಗಳನ್ನು ಹಿಂದಕ್ಕೆ ಕೊಡುತ್ತಾನೆ ಎಂದು ಅಭಿಪ್ರಾಯ).

ಏತತ್ಸಮೃದ್ಧಮಪ್ಯೃದ್ಧಂ ತಪೋ ಭವತಿ ಕೇವಲಮ್ ।
ಸತ್ಯಾತ್ ಪ್ರಚ್ಯವಮಾನಾನಾಂ ಸಂಕಲ್ಪೇನ ಸಮಾಹಿತಮ್ ।
ತತೋ ಯಜ್ಞಾಃ ಪ್ರವರ್ಧಂತೇ ಸತ್ಯಸ್ಯೈವಾವಧಾರಣಾತ್ ॥೧೬॥

ಹೀಗೆ ಋದ್ಧ ಮತ್ತು ಸಮೃದ್ಧವಾದ ತಪಸ್ಸಿಗೆ ಸಾಧಾರಣವಾದ ಕೇವಲತ್ವವನ್ನು ವಿಸ್ತಾರವಾಗಿ ಹೇಳಿ ಈಗ ತಪಸ್ಸಿನ ಸಮೃದ್ಧಿಗೆ ಅಸಾಧಾರಣ ಕಾರಣವನ್ನು ಹೇಳುತ್ತಾರೆ. ಕೇವಲವಾದ ಈ ತಪಸ್ಸು ಸತ್ಯಸ್ಯ= ಮುಕ್ತಾಮುಕ್ತನಿಯಾಮಕನಾದ ಭಗವಂತನ, ಅವಧಾರಣಾತ್ ಏವ (ಅವಬೋಧನಾತ್ ಎಂಬ ಪಾಠವೂ ಇದೆ)= ಜ್ಞಾನದಿಂದಲೇ, ಸಮೃದ್ಧಂ= ಅನಂತ ಫಲವನ್ನು ಕೊಡುವುದಾಗಿ, ಭವತಿ= ಆಗುತ್ತದೆ. ಕೇವಲ ತಪಸ್ಸಷ್ಟೇ ಅಲ್ಲ, ಯಜ್ಞಾಃ= ಯಜ್ಞಗಳೂ ಸಹ, ತತಃ= ಆ ಪರಮಾತ್ಮನ ಜ್ಞಾನದಿಂದಲೇ, ಪ್ರವರ್ಧಂತೇ= ಶ್ರೇಷ್ಠವಾದ ಫಲವನ್ನು ಕೊಡುತ್ತವೆ. 'ಯದೇವ ವಿದ್ಯಯಾ ಕರೋತಿ' ಎಂಬ ಶ್ರುತಿಯು ಈ ವಿಷಯದಲ್ಲಿ ಪ್ರಮಾಣ. ಜ್ಞಾನವೇ ಫಲವನ್ನು ಕೊಡುತ್ತದೆ ಎಂಬ ಅವಧಾರಣೆಯಿಂದ ವ್ಯಾವರ್ತ್ಯವಾದ ವಿಷಯವನ್ನು ಹೇಳುತ್ತಾರೆ. ಸತ್ಯಾತ್= ಅಂತಹ ಭಗವಂತನಿಂದ, ಪ್ರಚ್ಯವಮಾನಾಃ= ದೂರ ಸರಿಯುವ ಎಂದರೆ ಅಂತಹ ಭಗವಂತನ ಜ್ಞಾನವಿಲ್ಲದಿರುವ ಜನರಿಗೆ, ಸಂಕಲ್ಪೇನ= ಅವರ ಸಂಕಲ್ಪದಿಂದ, ಸಮಾಹಿತಂ= ಚೆನ್ನಾಗಿ ಮನಸ್ಸಿನಲ್ಲಿ ಇಡಲ್ಪಟ್ಟ ಫಲವು ಸಮೃದ್ಧವಾಗುವುದಿಲ್ಲ ಎಂದು ಇಟ್ಟುಕೊಳ್ಳಬೇಕು. 'ಅನೇವಂ ವಿತ್ ಮಹತ್‌ಪುಣ್ಯಂ ಕರ್ಮ ಕರೋತಿ ತದ್ಧಾಸ್ಯಾಂತತಃ ಕ್ಷೀಯತೇ' ಪರಮಾತ್ಮನ ಜ್ಞಾನವಿಲ್ಲದೆ ಮಾಡಿದ ಪುಣ್ಯಕಾರ್ಯವೂ ಕೂಡ ಕೊನೆಯಲ್ಲಿ ನಾಶವನ್ನೇ ಹೊಂದುತ್ತದೆ ಎಂಬ ಶ್ರುತಿಯು ಈ ವಿಷಯದಲ್ಲಿ ಪ್ರಮಾಣ.

ಮನಸಾऽನ್ಯಸ್ಯ ಭವತಿ ವಾಚಾऽನ್ಯಸ್ಯ ಚ ಕರ್ಮಣಾ ॥೧೭॥

ಮನೋ-ವಾಕ್-ಕರ್ಮಗಳಿಗೆ ಒಂದೇ ವಿಷಯವಾದರೆ ಅದು ತಪಸ್ಸಿನ ಸಿದ್ಧಿಗೆ ಕಾರಣವಾಗುತ್ತದೆ ಎಂಬ ಅಭಿಪ್ರಾಯದಿಂದ ಅದನ್ನು ಹೊಂದದಿರುವ ದುಷ್ಟರ ಸ್ವಭಾವವನ್ನು ಹೇಳುತ್ತಾರೆ. ದುರಾತ್ಮನಾದವನು ಮನಸ್ಸಿನಿಂದಲೇ ಬೇರೆ ವ್ಯಾಪಾರವನ್ನು, ಮಾತಿನಿಂದಲೇ ಬೇರೆ ವ್ಯಾಪಾರವನ್ನು ಮತ್ತು ಕೃತಿಯಿಂದಲೇ ಬೇರೆ ಕಾರ್ಯವನ್ನು ಮಾಡುತ್ತಾನೆ.

ಸಂಕಲ್ಪಸಿದ್ಧಂ ಪುರುಷಮಸಂಕಲ್ಪೋಽಧಿತಿಷ್ಠತಿ ।
ಬ್ರಾಹ್ಮಣಸ್ಯ ವಿಶೇಷೇಣ ಕಿಂಚಾನ್ಯದಪಿ ಮೇ ಶೃಣು ॥೧೮॥

ಸಂಕಲ್ಪಸಿದ್ಧಂ ಪುರುಷಂ= ಮನೋವಾಕ್ಕರ್ಮಗಳಲ್ಲಿ ಏಕವಿಷಯಕವಾಗಿರುವ ಪುರುಷನನ್ನು, ಅಸಂಕಲ್ಪಃ= ಸಮೀಚೀನವಾದ ಪಕ್ಷವಿಲ್ಲದ, ಎಂದರೆ ಮನೋವಾಕ್ಕರ್ಮಗಳಲ್ಲಿ ಭಿನ್ನಭಿನ್ನ ವಿಷಯಕನಾದ ಪುರುಷನು, ಅಧಿತಿಷ್ಠತಿ= ಮೀರಿರುವೆನೆಂದು ತಿಳಿಯುತ್ತಾನೆ. ಆದ್ದರಿಂದ ಅದು ದುಷ್ಪಸ್ವಭಾವ. ಸಂಕಲ್ಪಸಿದ್ಧಃ ಪುರುಷಃ ಸಂಕಲ್ಪಾದಧಿತಿಷ್ಠತಿ ಎಂಬ ಪಾಠವಿದ್ದರೆ ಮನೋವಾಕ್ಕರ್ಮಗಳಲ್ಲಿ ಏಕವಿಷಯಕನಾಗಿರುವ ಪುರುಷನು ಅಂತಹ ಮನೋವಾಕ್ಕರ್ಮಗಳ ಏಕವಿಷಯಕತ್ವ ರೂಪವಾದ ಗುಣದಿಂದ ಉಳಿದವರನ್ನು ಮೀರಿರುತ್ತಾನೆ ಎಂದು ಅರ್ಥ. ಇದು ಬ್ರಾಹ್ಮಣನು ವಿಶೇಷವಾಗಿ ಅನುಸರಿಸಬೇಕಾದ ಧರ್ಮ. ಬ್ರಾಹ್ಮಣನು ಅನುಷ್ಠಾನ ಮಾಡಬೇಕಾದ ಇನ್ನೊಂದು ಧರ್ಮವನ್ನು ಹೇಳುತ್ತೇನೆ, ಕೇಳುವವನಾಗು.

ಅಧ್ಯಾಪಯೇತ್ ಮಹದೇತದ್ ಯಶಸ್ಯಂ
ವಾಚೋ ವಿಕಾರಂ ಕವಯೋ ವದಂತಿ ।
ಅಸ್ಮಿನ್ ಯೋಗೇ ಸರ್ವಮಿದಂ ಪ್ರತಿಷ್ಠಿತಂ
ಯೇ ತದ್ವಿದುರಮೃತಾಸ್ತೇ ಭವಂತಿ ॥೧೯॥

ಕವಯಃ= ಜ್ಞಾನಿಗಳು, ಏತತ್= ಯಾವ ಈ ವಸ್ತುವನ್ನು, ಮಹತ್= ಪೂರ್ಣವಾದುದು, ಯಶಸ್ಯಂ= ಯಶಃಪ್ರದವಾದುದು, ವಾಚೋ ವಿಕಾರಂ= 'ಏಕಮೇಕಂ ಸುಶಸ್ತಿಭಿಃ', 'ತಯೋರ್ಜುಷ್ಟಿಂ ಮಾತರಿಶ್ವಾ ಜಗಾಮ', 'ತ್ರಿಪಾದೂರ್ಧ್ವ ಉದೈತ್ಪುರುಷಃ', 'ಚತುರ್ಭಿಸ್ಸಾಕಂ ನವತಿಂ ಚ', ಇತ್ಯಾದಿ ವಿವಿಧ ವಾಕ್ಯಗಳಲ್ಲಿ ವಿವಿಧವಾದ ಆಕಾರವನ್ನು ಉಳ್ಳದ್ದೆಂದು ವರ್ಣಿಸುತ್ತಾರೆಯೋ, ಏತತ್= ಅಂತಹ ಈ ಬ್ರಹ್ಮನನ್ನು, ಅಧ್ಯಾಪಯೇತ್= ಶಿಷ್ಯರನ್ನು ಕುರಿತು ಉಪದೇಶ ಮಾಡಬೇಕು. ಅಸ್ಮಿನ್ ಯೋಗೇ= ಈ ಸಕಲ ಗುಣಗಳಿಗೆ ಆಶ್ರಯನಾದ ಬ್ರಹ್ಮನಲ್ಲಿ, ಇದಂ ಸರ್ವಂ= ಈ ಜಗತ್ತೆಲ್ಲವೂ, ಪ್ರತಿಷ್ಠಿತಂ= ಪ್ರತಿಷ್ಠಿತವಾಗಿದೆ, ಯ ಏತತ್ ವಿದುಃ= ಯಾರು ಇದನ್ನು ತಿಳಿಯುತ್ತಾರೆಯೋ, ತೇ= ಅವರು, ಅಮೃತಾ ಭವಂತಿ= ಮುಕ್ತರಾಗುತ್ತಾರೆ.

ನ ಕರ್ಮಣಾ ಸುಕೃತೇನೇಹ ರಾಜನ್
ಸತ್ಯಂ ವದೇಜ್ಜುಹುಯಾದ್ ವಾ ಯಜೇದ್ ವಾ ।
ನೈತೇನ ಬಾಲೋ ಮೃತ್ಯುಮತ್ಯೇತಿ ರಾಜನ್
ಮತಿಂ ಚಾಸೌ ನ ಲಭತ್ಯಂತಕಾಲೇ ॥೨೦॥

ಎಲೈ ರಾಜನೇ, ಬಾಲನು ಎಂದರೆ ಅಪರೋಕ್ಷಜ್ಞಾನವಿಲ್ಲದವನು ಸರಿಯಾದ ರೀತಿಯಲ್ಲಿ ಒಳ್ಳೆಯ ಕರ್ಮವನ್ನು ಅನುಷ್ಠಾನ ಮಾಡಿದರೂ ಅದರಿಂದ ಮೃತ್ಯುರೂಪವಾದ ಮಿಥ್ಯಾಜ್ಞಾನವನ್ನು ದಾಟುವುದಿಲ್ಲ. ಮಿಥ್ಯಾಜ್ಞಾನವು ಯಥಾರ್ಥಜ್ಞಾನದಿಂದಲೇ ನಾಶವನ್ನು ಹೊಂದಬೇಕಾಗಿರುವುದರಿಂದ ಕರ್ಮದಿಂದ ನಾಶವನ್ನು ಹೊಂದುವುದಿಲ್ಲ. ಆದ್ದರಿಂದ ಮಿಥ್ಯಾಜ್ಞಾನ ಮೂಲಕವಾದ ಸಂಸಾರದ ನಿವೃತ್ತಿಯೂ ಸಹ ಕರ್ಮದಿಂದ ಉಂಟಾಗುವುದಿಲ್ಲ ಎಂದು ಅಭಿಪ್ರಾಯ. ಅಪರೋಕ್ಷಜ್ಞಾನಿಯಲ್ಲದ ಬಾಲಕನಂತಿರುವ ಅವನು ಯಾವ ಸತ್ಯವನ್ನು ಮಾತನಾಡುತ್ತಾನೆಯೋ ಅಥವಾ ಹೋಮವನ್ನು ಮಾಡುತ್ತಾನೆಯೋ ಅಥವಾ ಯಾಗವನ್ನು ಮಾಡುತ್ತಾನೆಯೋ ಅದರಿಂದ ದೇಹೋತ್ಕ್ರಮಣ ಕಾಲದಲ್ಲಿ ಒಳ್ಳೆಯ ಬುದ್ಧಿಯನ್ನೂ ಹೊಂದುವುದಿಲ್ಲ. 'ಮತಿಂ ಚಾತೋ ನ ಲಭತಿ' ಎಂಬ ಪಾಠವಿದ್ದರೆ ಜ್ಞಾನಗಳು ಉತ್ಕ್ರಮಣವನ್ನು ಹೊಂದುವಾಗ ಹೊಂದುವ ಸುಖವನ್ನೂ ಅವನು ಪಡೆಯುವುದಿಲ್ಲ ಎಂದು ಅರ್ಥ.

ತೂಷ್ಣೀಮೇಕ ಉಪಾಸೀತ ನ ಚೇಚ್ಛೇತ್ ಮನಸಾऽಪಿ ನ ।
ಅತಿಸಂಸ್ತುತಿನಿಂದಾಭ್ಯಾಂ ಪ್ರೀತಿರೋಷೌ ವಿಸರ್ಜಯೇತ್ ॥೨೧॥

ವಾಙ್ನಿಯಮನ ಪೂರ್ವಕವಾಗಿ ಸಮಾಧಿಕ ವಸ್ತುರಹಿತನಾದ ಆ ಪರಮಾತ್ಮನನ್ನೇ ಉಪಾಸನೆ ಮಾಡಬೇಕು. ಮನಸ್ಸಿನಲ್ಲಿಯೂ ಸಹ ವಿಷಯಗಳನ್ನು ಬಯಸಬಾರದು. ಯಾರಾದರೂ ಬಹಳವಾಗಿ ಸ್ತೋತ್ರವನ್ನು ಮಾಡಿದರೆ ಅದರಿಂದ ಸಂತೋಷವನ್ನೂ, ನಿಂದೆಯನ್ನು ಮಾಡಿದರೆ ಅವರ ಮೇಲೆ ರೋಷವನ್ನೂ ಹೊಂದಬಾರದು.

ಅತ್ರೈವ ತಿಷ್ಠನ್ ಕ್ಷತ್ರಿಯ ಬ್ರಹ್ಮಾವಿಶತಿ ಪಶ್ಯತಿ ।
ವೇದೇಷು ಚಾನುಪೂರ್ವ್ಯೇಣ ಏತದ್ವಿದ್ವಾನ್ ಬ್ರವೀಮಿ ತೇ ॥೨೨॥

ಎಲೈ ಕ್ಷತ್ರಿಯನಾದ ಧೃತರಾಷ್ಟ್ರನೇ, ಇಂತಹ ಉಪಾಸನೆಯಲ್ಲಿಯೇ ನಿರತನಾದ ಮನುಷ್ಯನು ಪರಮಾತ್ಮನನ್ನು ನೋಡುತ್ತಾನೆ ಮತ್ತು ಅವನನ್ನು ಪ್ರವೇಶಿಸುತ್ತಾನೆ. ನೀನು ಕೇಳಿದ ಪ್ರಶ್ನೆಗೆ ಉತ್ತರವಾಗಿ ನಾನು ವೇದಗಳಲ್ಲಿ ಹೇಳಲ್ಪಟ್ಟ ಈ ವಿಷಯವನ್ನು ಕ್ರಮವಾಗಿ ತಿಳಿದು ನಿನಗೆ ಹೇಳುತ್ತಿದ್ದೇನೆ. ಅಥವಾ ಅತ್ಯೈವ ತಿಷ್ಠನ್ ಎಂಬ ಶಬ್ದಕ್ಕೆ ಗೃಹಸ್ಥಾಶ್ರಮಿಯಾಗಿಯೇ ಇದ್ದು ಎಂದೂ ಅರ್ಥವನ್ನು ಮಾಡಬಹುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಷಟ್‌ಚತ್ವಾರಿಂಶೋಽಧ್ಯಾಯಃ ॥
॥ ಸನತ್ಸುಜಾತಪರ್ವಣಿ ಪಂಚಮೋಽಧ್ಯಾಯಃ ॥
॥ ಇತಿ ಶ್ರೀಮನ್ಮಹಾಭಾರತೇ ಉದ್ಯೋಗಪರ್ವಣಿ ಸನತ್ಸುಜಾತೀಯೇ
ವಿಷಮವಾಕ್ಯಾರ್ಥಪ್ರಕಾಶೇ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನಲವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

## ನಲವತ್ತೇಳನೆಯ ಅಧ್ಯಾಯ

ಸನತ್ಸುಜಾತರಿಂದ ಧೃತರಾಷ್ಟ್ರನನ್ನು ಕುರಿತು ತತ್ತ್ವೋಪದೇಶ

**ಸನತ್ಸುಜಾತಃ**

**ಯತ್ತಚ್ಚುಕ್ಲಂ ಮಹಜ್ಜ್ಯೋತಿರ್ದೀಪ್ಯಮಾನಂ ಮಹದ್ಯಶಃ ।**
**ಯದ್ದೇವಾ ಉಪಾಸಂತೇ ಯಸ್ಮಾತ್ ಸೂರ್ಯೋ ವಿರಾಜತೇ ।**
**ಯೋಗಿನಸ್ತಂ ಪ್ರಪಶ್ಯಂತಿ ಭಗವಂತಂ ಸನಾತನಮ್ ॥೧॥**

ಪೂರ್ವಾಧ್ಯಾಯದಲ್ಲಿ 'ಯ ಏತದ್ವಿದುರಮೃತಾಸ್ತೇ ಭವಂತಿ' ಎಂದು ಬ್ರಹ್ಮಜ್ಞಾನದಿಂದ ಮೋಕ್ಷಪ್ರಾಪ್ತಿಯು ಹೇಳಲ್ಪಟ್ಟಿದೆ. ಈಗ ಆ ಬ್ರಹ್ಮಸ್ವರೂಪವು ಎಂತಹದು ಮತ್ತು ಆ ಬ್ರಹ್ಮಜ್ಞಾನವು ಯಾರಿಗೆ ಉಂಟಾಗುತ್ತದೆ ಎಂಬ ಎರಡು ವಿಷಯಗಳನ್ನೂ ಈ ಅಧ್ಯಾಯದಲ್ಲಿ ನಿರೂಪಿಸುತ್ತಾರೆ. ಅದರಲ್ಲಿ ಮೊದಲು ಪರಮಾತ್ಮನ ಸರ್ವಪ್ರಕಾಶಕತ್ವ ಮತ್ತು ದೇವೋಪಾಸ್ಯತ್ವಸ್ವರೂಪವಾದ ಮಹಿಮೆಯನ್ನು ಹೇಳಿ, ಅಂತಹ ಜ್ಞಾನದಲ್ಲಿ ಅಧಿಕಾರಿಗಳು ಯಾರು ಎಂಬುದನ್ನು ತಿಳಿಸುತ್ತಾರೆ.

ಯತ್= ಯಾವ, ತತ್= ವ್ಯಾಪ್ತವಾದ, ಶುಕ್ಲಂ= ಶುದ್ಧವಾದ (ಶುಕ್ಲ ಎಂಬುದಕ್ಕೆ ಬದಲಾಗಿ ಕೆಲವು ಪಾಠಗಳಲ್ಲಿ ಎಲ್ಲ ಕಡೆಯಲ್ಲಿಯೂ ಶುಕ್ರ ಎಂಬ ಪದವೇ ಇದೆ. ಅದಕ್ಕೂ ಶುದ್ಧ ಎಂದೇ ಅರ್ಥ). ಮಹಜ್ಜ್ಯೋತಿಃ= ಸರ್ವಪ್ರಕಾಶಕವಾದ, ದೀಪ್ಯಮಾನಂ= ಪ್ರಕಾಶಮಾನವಾದ, ಮಹದ್ಯಶಃ= ಯಶಃಪೂರ್ಣವಾದ ವಸ್ತುವಿದೆಯೋ, ಯಸ್ಮಾಚ್ಚ= ಮತ್ತು ಯಾವನಿಂದ, ಸೂರ್ಯಃ= ಸೂರ್ಯನು, ವಿರಾಜತೇ= ಪ್ರಕಾಶಿಸುತ್ತಾನೆಯೋ, ತದ್ವೈ= ಅಂತಹ ಬ್ರಹ್ಮನನ್ನೇ, ದೇವಾಃ= ಬ್ರಹ್ಮಾದಿ ದೇವತೆಗಳು, ಉಪಾಸಂತೇ= ಉಪಾಸನೆ ಮಾಡುತ್ತಾರೆ. 'ವೈ' ಎಂಬ ನಿಪಾತದಿಂದ 'ವಿಶ್ವೇದೇವಾ ಉಪಾಸತೇ' ಮೊದಲಾದ ಶ್ರುತಿಪ್ರಸಿದ್ಧಿಯನ್ನು ಉಪದೇಶಿಸುತ್ತಾರೆ. ಅಂತಹ ಗುಣವಿಶಿಷ್ಟನಾದ ಬ್ರಹ್ಮನನ್ನು ಜ್ಞಾನಾದಿಯೋಗಸಂಪನ್ನರಾದ ಯೋಗಿಗಳು ಚೆನ್ನಾಗಿ ತಿಳಿಯುತ್ತಾರೆ.

**ಶುಕ್ಲಾದ್ ಬ್ರಹ್ಮ ಪ್ರಭವತಿ ಬ್ರಹ್ಮ ಶುಕ್ಲೇನ ವರ್ಧತೇ ।**
**ತಚ್ಛುಕ್ಲಂ ಜ್ಯೋತಿಷಾಂ ಮಧ್ಯೇऽತಪ್ತಂ ತಪತಿ ತಾಪನಮ್ ।**
**ಯೋಗಿನಸ್ತಂ ಪ್ರಪಶ್ಯಂತಿ ಭಗವಂತಂ ಸನಾತನಮ್ ॥೨॥**

ಈ ಶ್ಲೋಕದಲ್ಲಿ ಭಗವಂತನ ಚತುರ್ಮುಖೋತ್ಪಾದಕತ್ವಾದಿ ಮಹಿಮೆಯನ್ನು ಹೇಳುತ್ತಾರೆ. ಪರಿಶುದ್ಧನಾದ ಪರಮಾತ್ಮನಿಂದ ಚತುರ್ಮುಖ ಬ್ರಹ್ಮನು ಉತ್ಪತ್ತಿಯನ್ನು ಹೊಂದುತ್ತಾನೆ. ಆ ಚತುರ್ಮುಖ ಬ್ರಹ್ಮನು ಶುದ್ಧನಾದ ಪರಮಾತ್ಮನಿಂದಲೇ ಅಭಿವೃದ್ಧಿಯನ್ನು ಹೊಂದುತ್ತಾನೆ. 'ಯೋ ಬ್ರಹ್ಮಾಣಮ್ ವಿಧದಾತಿ ಪೂರ್ವಂ' ಎಂಬ ಶ್ರುತಿಯು, ಪರಮಾತ್ಮನು ಮೊದಲು ಬ್ರಹ್ಮನನ್ನು ಸೃಷ್ಟಿಸಿ ಅವನಿಗೆ ವೇದವನ್ನು ಉಪದೇಶ ಮಾಡಿ ಅಭಿವೃದ್ಧಿಯನ್ನು ಹೊಂದಿಸುತ್ತಾನೆ ಎಂದು ಹೇಳುತ್ತದೆ. ಆ ಶುದ್ಧನಾದ ಬ್ರಹ್ಮನು ಜ್ಯೋತಿಸ್ಸುಗಳ ಮಧ್ಯದಲ್ಲಿ ಇದ್ದು, ಅವುಗಳಿಂದ ಪ್ರಕಾಶಿತನಾಗದೆ ತಾನೇ ಸ್ವಯಂ ಪ್ರಕಾಶರೂಪನಾಗಿ ಸೂರ್ಯಾದಿ ಜ್ಯೋತಿಸ್ಸುಗಳನ್ನೂ ಪ್ರಕಾಶಿಸುತ್ತಾನೆ. **'ತಸ್ಮಾದೇತದ್ಬ್ರಹ್ಮ ನಾಮರೂಪಮನ್ನಂ ಚ ಜಾಯತೇ'** ಎಂಬ ಶ್ರುತಿಯು **'ಯದಾದಿತ್ಯಗತಂ ತೇಜಃ'** ಎಂಬ ಸ್ಮೃತಿಯೂ ಸಹ ಈ ವಿಷಯದಲ್ಲಿ ಪ್ರಮಾಣವಾಗಿವೆ.

**ಪೂರ್ಣಾತ್ ಪೂರ್ಣಮುದ್ಧರಂತಿ ಪೂರ್ಣಾತ್ ಪೂರ್ಣಂ ಪ್ರಚಕ್ಷತೇ ।**
**ಹರಂತಿ ಪೂರ್ಣಾತ್ ಪೂರ್ಣಂ ಚ ಪೂರ್ಣಮೇವಾವಶಿಷ್ಯತೇ ।**
**ಯೋಗಿನಸ್ತಂ ಪ್ರಪಶ್ಯಂತಿ ಭಗವಂತಂ ಸನಾತನಮ್ ॥೩॥**

ಈ ಶ್ಲೋಕದಲ್ಲಿ ಯೋಗಿಗಳ ಇನ್ನೊಂದು ಮಹಿಮೆಯನ್ನು ಹೇಳುತ್ತಾರೆ. ಯೋಗಿಗಳು, ಪೂರ್ಣಾತ್= ಗುಣಪೂರ್ಣವಾದ ಮೂಲರೂಪದಿಂದ, ಪೂರ್ಣಂ= ಗುಣಪೂರ್ಣವಾದ ಅವತಾರ ರೂಪವನ್ನು, ಉದ್ಧರಂತಿ= ತಮ್ಮ ಪ್ರಯೋಜನಕ್ಕಾಗಿ ಪ್ರತ್ಯೇಕಿಸಿಕೊಳ್ಳುತ್ತಾರೆ. ಪೂರ್ಣಾತ್= ಪೂರ್ಣವಾದ ಮೂಲರೂಪದಿಂದ, ಪೂರ್ಣಂ= ಅವತಾರರೂಪವನ್ನು, ಹರಂತಿ= ಭೂಮ್ಯಾದಿ ಲೋಕಗಳಿಗೆ ಕರೆದುಕೊಂಡು ಬರುತ್ತಾರೆ. ಶ್ವೇತದ್ವೀಪಾದಿಗಳಿಗೆ ಹೋಗಿ, ಅನೇಕ ವಿಧವಾದ ಸ್ತೋತ್ರಗಳಿಂದ ಅವನನ್ನು ಪ್ರಸನ್ನೀಕರಿಸಿಕೊಂಡು, ತಮಗೆ ಅಭಿಮತವಾದ ಪ್ರಯೋಜನವನ್ನು ಪಡೆಯಲು ಯಾವಾಗಲೂ ಇರುವ ರಾಮಾದಿ ರೂಪವನ್ನು ಮೂಲ ರೂಪದಿಂದ ಪೃಥಕ್ಕರಿಸಿ ಭೂಲೋಕಾದಿಗಳಿಗೆ ಕರೆದುಕೊಂಡು ಬರುತ್ತಾರೆ ಎಂದು ತಾತ್ಪರ್ಯ. ಪೂರ್ಣಾತ್= ಪೂರ್ಣವಾದ ಮೂಲರೂಪದಿಂದ ಹೊರಗೆ ಬಂದ ಅವತಾರರೂಪವನ್ನೂ, ಪೂರ್ಣಂ= ಪೂರ್ಣವಾದುದು ಎಂದು, ಪ್ರಚಕ್ಷತೇ= ಹೇಳುತ್ತಾರೆ. ಪೂರ್ಣಂ ಚ= ಮೊದಲೇ ಪೂರ್ಣವಾದ ಮೂಲರೂಪವೂ ಸಹ, ಪೂರ್ಣಮೇವ= ಅವತಾರರೂಪಗಳು ಅದರಲ್ಲಿ ಪ್ರವೇಶಿಸಿದರೂ ಪೂರ್ಣವಾಗಿಯೇ, ಅವಶಿಷ್ಯತೇ= ಉಳಿಯುತ್ತದೆ. ಯೋಗಿಗಳು ವೇದ ಪ್ರತಿಪಾದ್ಯನಾದ ಅಂತಹ ಭಗವಂತನನ್ನು ನೋಡುತ್ತಾರೆ.

ಆಪೋऽಥಾದ್ಭ್ಯಃ ಸಲಿಲಸ್ಯ ಮಧ್ಯೇ
ಉಭೇ ದೇವ್ಯೌ ಶಿಶ್ರಿಯಾತೇऽಂತರಿಕ್ಷೇ ।
ಸ ಸಧ್ರೀಚೀಃ ಸ ವಿಷೂಚೀರ್ವಸಾನ
ಉಭೇ ಬಿಭರ್ತಿ ಪೃಥಿವೀಂ ದಿವಂ ಚ ॥
ಯೋಗಿನಸ್ತಂ ಪ್ರಪಶ್ಯಂತಿ ಭಗವಂತಂ ಸನಾತನಮ್ ॥೪॥

ಈ ಶ್ಲೋಕದಲ್ಲಿ ಪರಮಾತ್ಮನ ಶ್ರೀಭೂಧಾರಕತ್ವ ರೂಪವಾದ ಮಹಿಮೆಯನ್ನು ಹೇಳುತ್ತಾರೆ. ಅಥ= ಸೂಕ್ಷ್ಮಸೃಷ್ಟಿಯ ಅನಂತರದಲ್ಲಿ, ಅದ್ಭ್ಯಃ= ಬಾಹ್ಯಾವರಣದಲ್ಲಿರುವ ಜಲದಿಂದ, ಆಪಃ= ಬ್ರಹ್ಮಾಂಡದ ಒಳಗಿರುವ ಗರ್ಭೋದಕ ರೂಪವಾದ ಜಲಗಳು, ಉತ್ಪನ್ನವಾದವು ಎಂದು ಇಟ್ಟುಕೊಳ್ಳಬೇಕು. ತಸ್ಯ ಸಲಿಲಸ್ಯ ಮಧ್ಯೇ= ಬ್ರಹ್ಮಾಂಡದ ಒಳಗಿರುವ ನೀರಿನ ಮಧ್ಯದಲ್ಲಿ, ಅಂತರಿಕ್ಷೇ= ಆಕಾಶದಲ್ಲಿ,

ಉಭೇ ದೇವ್ಯೌ= ಶ್ರೀ-ಭೂದೇವಿಯರು, ಶಿಶ್ರಿಯಾತೇ= ನೆಲೆಸಿದ್ದಾರೆ. ಸಧ್ರೀಚೀಃ= ಸಮೀಚೀನವಾಗಿರುವ, ವಿಷೂಚೀಃ= ಎಲ್ಲಕಡೆಯಲ್ಲಿಯೂ ವ್ಯಾಪಿಸಿರುವ, ಆಪಃ= ನೀರನ್ನು ಎಂದು ಇಟ್ಟುಕೊಳ್ಳಬೇಕು, ವಸಾನಃ= ವಸ್ತ್ರದಂತೆ ಸುತ್ತಲೂ ಧರಿಸಿದವನಾಗಿ ಅಥವಾ 'ಸಧ್ರೀಚೀ' ಎಂದರೆ ಪೂರ್ವಾದಿ ದಿಕ್ಕುಗಳು, 'ವಿಷೂಚೀ' ಎಂದರೆ ಆಗ್ನೇಯಾದಿ ವಿದಿಕ್ಕುಗಳು. ದ್ವಿತೀಯಾ ವಿಭಕ್ತಿಯು ಸಪ್ತಮೀ ವಿಭಕ್ತಿಯ ಅರ್ಥದಲ್ಲಿದೆ. ಆ ದಿಕ್ಕಿನಲ್ಲಿ ವಾಸ ಮಾಡುವ ಎಂದು ಅರ್ಥ. ಐತರೇಯ ಭಾಷ್ಯದಲ್ಲಿ ಹೀಗೆ ಹೇಳಲ್ಪಟ್ಟಿದೆ. **'ಸ ಚಾಸು ಪೂರ್ವಾದಿದಿಕ್ಷ್ವೀತೌ ಚ ಚತುರ್ಷ್ವಪಿ । ನಿತ್ಯದಾ ವಸತಃ ಕೋಣದಿಕ್ಷ್ವಪ್ಯಾಸು ವಿಷೂಚಿಷು'** (ಪರಮಾತ್ಮನು ಮತ್ತು ಶ್ರೀ-ಭೂದೇವಿಯರು ನಿತ್ಯವೂ ಪೂರ್ವಾದಿ ದಿಕ್ಕುಗಳಲ್ಲಿಯೂ, ಕೋಣಾದಿ ವಿದಿಕ್ಕುಗಳಲ್ಲಿಯೂ ನೆಲೆಸಿದ್ದಾರೆ) ಎಂದು ಹೇಳಲ್ಪಟ್ಟಿದೆ. ಅಂತಹ ಜಲಮಯವಾದ ವಸ್ತ್ರವನ್ನು ಧರಿಸಿದ, ಸಃ= ವೇದಾದಿಗಳಲ್ಲಿ ಪ್ರಸಿದ್ಧನಾದ ಪರಮಾತ್ಮನು, ಪೃಥಿವೀಂ= ಪೃಥಿವಿಯ ಅಭಿಮಾನಿಯಾದ ಭೂದೇವಿಯನ್ನೂ, ದಿವಂ= ಅಂತರಿಕ್ಷಕ್ಕೆ ಅಭಿಮಾನಿಯಾದ ಪ್ರಕಾಶಮಾನಳಾದ ಶ್ರೀದೇವಿಯನ್ನೂ, ಉಭೇ= ಈ ಇಬ್ಬರನ್ನೂ, ಬಿಭರ್ತಿ= ಧರಿಸಿ ಪೋಷಿಸುತ್ತಾನೆ.

'ಆಪೋऽಥಾದ್ಭ್ಯಃ ಸಲಿಲಂ ತಸ್ಯ ಮಧ್ಯೇ
ಉಭೌ ದೇವೌ ಶಿಶ್ರಿಯಾತೇऽಂತರಿಕ್ಷೇ ।
ಆದಧ್ರೀಚೀಃ ಸವಿಷೂಚೀರ್ವಸಾನೌ
ಉಭೌ ಬಿಭರ್ತಿ ಪೃಥಿವೀಂ ದಿವಂ ಚ ॥'

ಎಂಬ ಪಾಠವನ್ನು ತೆಗೆದುಕೊಂಡರೆ ಹೀಗೆ ಅರ್ಥವನ್ನು ಮಾಡಬೇಕು. ಅಥ= ಮಹದಾದಿ ತತ್ವಗಳ ಸೃಷ್ಟಿಯ ಅನಂತರದಲ್ಲಿ, ಆಪಃ= ಜಲದಿಂದ ಉಪಲಕ್ಷಿತವಾದ ಪಂಚಮಹಾಭೂತಗಳು ಸೃಷ್ಟವಾದವು ಎಂದು ಇಟ್ಟುಕೊಳ್ಳಬೇಕು. ಅದ್ಭ್ಯಃ= ಆ ಪಂಚಭೂತಗಳಿಂದ, ಸಲಿಲಂ= ಜಲಾದಿ ಪಂಚಭೂತಾತ್ಮಕವಾದ ಸ್ಥೂಲದೇಹವನ್ನು ಸೃಷ್ಟಿಯನ್ನು ಮಾಡಿ, ತಸ್ಯ= ಆ ಸ್ಥೂಲದೇಹದ, ಮಧ್ಯೇ= ಮಧ್ಯದಲ್ಲಿ, ಅಂತರಿಕ್ಷೇ= ಹೃದಯಾಕಾಶದಲ್ಲಿ, ಉಭೌ ದೇವೌ= ನಾರಾಯಣ-ಮುಖ್ಯಪ್ರಾಣರು, ಶಿಶ್ರಿಯಾತೇ= ನೆಲೆಸಿದ್ದಾರೆ. ಇವರಿಬ್ಬರೂ ಶರೀರಾಕಾಶದಲ್ಲಿಮಾತ್ರ ನೆಲೆಸಿರುವುದಲ್ಲ, ಎಲ್ಲಕಡೆಯಲ್ಲಿಯೂ ನೆಲೆಸಿದ್ದಾರೆ ಎಂಬ ವಿಶೇಷವನ್ನು ಹೇಳುತ್ತಾರೆ. ಸ ವಿಷೂಚೀಃ=

ಆಗ್ನೇಯಾದಿ ವಿದಿಕ್ಕುಗಳಿಂದ ಸಹಿತವಾದ, ಆದಧ್ರೀಚೀಃ= ಅಭಿಮುಖವಾಗಿರುವ ಪೂರ್ವಾದಿ ದಿಕ್ಕುಗಳನ್ನು, ವಸಾನೌ= ಆಚ್ಛಾದಿಸುವವರಾಗಿ, ಸರ್ವತ್ರ ವ್ಯಾಪಿಸುವವರಾಗಿ ಎಂದು ಅಭಿಪ್ರಾಯ. ಉಭೌ= ನಾರಾಯಣ-ಮುಖ್ಯಪ್ರಾಣರಿಬ್ಬರೂ, ಪೃಥಿವೀಂ= ಭೂಲೋಕವನ್ನು, ದಿವಂ ಚ= ಮತ್ತು ಅಂತರಿಕ್ಷ ಲೋಕವನ್ನು, ಬಿಭರ್ತಿ= ಧರಿಸಿರುತ್ತಾರೆ. ಬಿಭರ್ತಿ ಎಂಬ ಏಕವಚನ ಪ್ರಯೋಗವನ್ನು ದ್ವಿವಚನಾರ್ಥದಲ್ಲಿರುವ ಛಾಂಧಸ ಪ್ರಯೋಗವೆಂದು ತಿಳಿಯಬೇಕು.

ಉಭೌ ಚ ದೇವೌ ಪೃಥಿವೀಂ ದಿವಂ ಚ
ದಿಶಶ್ಚ ಶುಕ್ರಂ ಭುವನಂ ಬಿಭರ್ತಿ ।
ತಸ್ಮಾದ್ ದಿಶಃ ಸರಿತಶ್ಚ ಸ್ರವಂತಿ
ತಸ್ಮಾತ್ ಸಮುದ್ರಾ ವಿಹಿತಾ ಮಹಾಂತಾಃ ॥
ಯೋಗಿನಸ್ತಂ ಪ್ರಪಶ್ಯಂತಿ ಭಗವಂತಂ ಸನಾತನಮ್ ॥೫॥

ಶುಕ್ರಂ= ಶುದ್ಧನಾದ ಪರಮಾತ್ಮನು, ಉಭೌ ದೇವೌ= ಸೂರ್ಯ-ಚಂದ್ರ ಇಬ್ಬರು ದೇವತೆಗಳನ್ನೂ, ಪೃಥಿವೀಂ ದಿವಂ ಚ= ಭೂಮಿ ಮತ್ತು ಅಂತರಿಕ್ಷಗಳನ್ನೂ ಮತ್ತು ಅವುಗಳ ಅಭಿಮಾನಿ ದೇವತೆಗಳನ್ನೂ, ದಿಶಶ್ಚ= ಮತ್ತು ದಿಕ್ಕುಗಳ ಅಭಿಮಾನಿ ದೇವತೆಗಳನ್ನೂ, ಭುವನಂ= ಎಲ್ಲ ಲೋಕಗಳನ್ನೂ ಮತ್ತು ಅವುಗಳ ಅಭಿಮಾನಿ ದೇವತೆಗಳನ್ನೂ, ಬಿಭರ್ತಿ= ಧರಿಸಿದ್ದಾನೆ. ತಸ್ಮಾತ್= ಆ ಪರಮಾತ್ಮನಿಂದ, ದಿಶಃ= ಸೂರ್ಯಾದಿಗಳಿಂದ ಕೂಡಿದ ದಿಕ್ಕುಗಳು, ತಮ್ಮ ಕಾರ್ಯವನ್ನು ಮಾಡುತ್ತವೆ ಎಂದು ಇಟ್ಟುಕೊಳ್ಳಬೇಕು. ಸರಿತಶ್ಚ= ನದಿಗಳೂ ಸಹ, ಸ್ರವಂತಿ= ಅವನಿಂದಲೇ ಹರಿಯುತ್ತವೆ. ತಸ್ಮಾತ್= ಆ ಬ್ರಹ್ಮನಿಂದಲೇ, ಮಹಾಂತಃ= ಲಕ್ಷಾದಿ ಯೋಜನ ವಿಸ್ತಾರವಾದ, ಸಮುದ್ರಾಃ= ಸಮುದ್ರಗಳೂ ಸಹ, ವಿಹಿತಾಃ= ಸೃಷ್ಟಿ ಮಾಡಲ್ಪಟ್ಟಿವೆ. ಅಂತಹ ಗುಣವಿಶಿಷ್ಟನಾದ ಪರಮಾತ್ಮನನ್ನು ಯೋಗಿಗಳು ಮಾತ್ರ ನೋಡುತ್ತಾರೆ.

ಚಕ್ರೇಣಾವರ್ತ್ಯ ತಿಷ್ಠಂತಿ ಧ್ರುವಸ್ಯಾವ್ಯಯಕರ್ಮಣಃ ।
ಕೇತುಮಂತಂ ವಹಂತ್ಯಶ್ವಾಃ ತಂ ದಿವ್ಯಮಜರಂ ದಿವಿ ।
ಯೋಗಿನಸ್ತಂ ಪ್ರಪಶ್ಯಂತಿ ಭಗವಂತಂ ಸನಾತನಮ್ ॥೬॥

ಅವ್ಯಯ ಕರ್ಮಣಃ= ಯಾವಾಗಲೂ ಕಾರ್ಯನಿರತವಾದ, ಧ್ರುವಸ್ಯ= ಧ್ರುವ ಮಂಡಲ ಸಂಬಂಧಿಯಾದ, ಚಕ್ರೇಣ= ಜ್ಯೋತಿಶ್ಚಕ್ರದಿಂದ, ಆವರ್ತ್ಯ= ಗ್ರಹ ನಕ್ಷತ್ರಾದಿಗಳನ್ನು ಸುತ್ತಲೂ ತಿರುಗಿಸುತ್ತಾ, ತಿಷ್ಠಂತಂ= ನೆಲೆಸಿರುವ, ಕೇತುಮಂತಂ= ಧ್ವಜಸಹಿತನಾದ, ದಿವ್ಯಂ= ಲೋಕವಿಲಕ್ಷಣನಾದ, ತಂ= ಸೂರ್ಯರಥ ನಿಯಾಮಕನಾಗಿ ಸೂರ್ಯರಥದಲ್ಲಿರುವ ಆ ಪರಮಾತ್ಮನನ್ನು, ಅಶ್ವಾಃ= ಸೂರ್ಯರಥಕ್ಕೆ ಹೂಡಿದ ಏಳು ಕುದುರೆಗಳು ದಿವಿ= ಅಂತರಿಕ್ಷಮಾರ್ಗದಲ್ಲಿ, ವಹಂತಿ= ಎಳೆದುಕೊಂಡು ಹೋಗುತ್ತವೆ.

**ನ ಸಂದೃಶೇ ತಿಷ್ಠತಿ ರೂಪಮಸ್ಯ**
**ನ ಚಕ್ಷುಷಾ ಪಶ್ಯತಿ ಕಶ್ಚನೈನಮ್ ।**
**ಮನೀಷಯಾऽಥೋ ಮನಸಾ ಹೃದಾ ಚ**
**ಯ ಏನಂ ವಿದುರಮೃತಾಸ್ತೇ ಭವಂತಿ ॥**
**ಯೋಗಿನಸ್ತಂ ಪ್ರಪಶ್ಯಂತಿ ಭಗವಂತಂ ಸನಾತನಮ್ ॥೭॥**

ಅಸ್ಯ= ಈ ಪರಮಾತ್ಮನ, ರೂಪಂ= ಜ್ಯೋತಿಶ್ಚಕ್ರ, ಸೂರ್ಯಮಂಡಲ, ಸೂರ್ಯರಥ ಇವುಗಳಿಗೆ ನಿಯಾಮಕವಾದ ರೂಪವು, ತಿಷ್ಠತಿ= ಯಾವುದು ಇದೆಯೋ ಅದು, ನ ಸಂದೃಶೇ= ನ ಸಂದದೃಶೇ, ಚೆನ್ನಾಗಿ ನೋಡಲ್ಪಡುವುದಿಲ್ಲ. ಅಥವಾ ಅಂತಹ ಪರಮಾತ್ಮ ರೂಪವು ಸಂದೃಶೇ= ಸಮೀಚೀನ ಜ್ಞಾನಕ್ಕಾಗಿ, ನ ತಿಷ್ಠತಿ= ಇರುವುದಿಲ್ಲ, ಪೂರ್ಣವಾಗಿ ಜ್ಞಾನವಿಷಯವಾಗುವುದಿಲ್ಲ ಎಂದು ಅರ್ಥ. ಅದಕ್ಕೆ ನ ಚಕ್ಷುಷಾ ಎಂದು ಕಾರಣವನ್ನು ಹೇಳುತ್ತಾರೆ. ನ ಚಕ್ಷುಷಾ ಎಂದು ಹೇಳುವುದು ಉಪಲಕ್ಷಣ. ಕಶ್ಚನ= ಯಾವ ಅಧಿಕಾರಿಯೂ ಸಹ, ಚಕ್ಷುಷಾ= ಚಕ್ಷುರಾದಿ ಪ್ರಮಾಣದಿಂದ, ಏನಂ= ಈ ಭಗವಂತನನ್ನು, ನ ಪಶ್ಯತಿ= ಪೂರ್ಣವಾಗಿ ತಿಳಿಯುವುದಿಲ್ಲ. ಯೇ ಚ= ಮತ್ತು ಯಾರು, ಮನೀಷಯಾ= ಶಾಸ್ತ್ರಜನ್ಯವಾದ ಜ್ಞಾನದಿಂದ, ಅದರಂತೆ ಹೃದಾ= ತದೇಕನಿಷ್ಠವಾದ ಮನಸ್ಸಿನಿಂದ ಅಥವಾ ಸ್ನೇಹರೂಪವಾದ ಭಕ್ತಿಯಿಂದ ಅಥವಾ ಹೃದಯಸ್ಥಿತನಾಗಿ ಹೃದಯಪ್ರೇರಕನಾದ್ದರಿಂದ ಹೃದಯ ಶಬ್ದವಾಚ್ಯನಾದ ಭಗವಂತನ ಪ್ರಸಾದದಿಂದ, ಏನಂ= ಈ ಪರಮಾತ್ಮನನ್ನು, ವಿದುಃ= ತಮ್ಮ ಯೋಗ್ಯತೆಗೆ ಅನುಗುಣವಾಗಿ ತಿಳಿಯುತ್ತಾರೆಯೋ, ತೇ= ಅವರು, ಅಮೃತಾ ಭವಂತಿ=

ಮುಕ್ತರಾಗುತ್ತಾರೆ. ಅಂತಹ ಪರಮಾತ್ಮನ ರೂಪವನ್ನು ಯೋಗಿಗಳು ಮಾತ್ರ ನೋಡುತ್ತಾರೆ ಎಂದು ಎಲ್ಲ ಕಡೆಯಲ್ಲೂ ಇಟ್ಟುಕೊಳ್ಳಬೇಕು. 'ನ ಸಾದೃಶ್ಯೇ ತಿಷ್ಠತಿ ರೂಪಮಸ್ಯ' ಎಂದು ಕೆಲವು ಕಡೆಗಳಲ್ಲಿ ಪಾಠವಿದೆ. ಆಗ ಪರಮಾತ್ಮನ ರೂಪವು ಯಾವ ಸಾದೃಶ್ಯಕ್ಕೂ ನಿಲುಕುವುದಿಲ್ಲ, ಅಸದೃಶವಾದುದು. ಅವನ ರೂಪಕ್ಕೆ ಉಚಿತವಾದ ಒಂದು ಉಪಮಾನವು ಇಲ್ಲ ಎಂದು ಅಭಿಪ್ರಾಯ.

**ದ್ವಾದಶಧಾ ದಶಧಾ ಸರಿತೋ ದೇವರಕ್ಷಿತಾಃ ।**
**ಮದಿಷ್ಠಾ ಈಶತೇ ತಸ್ಯ ಸಂಚರಂತೀಹ ಯಾ ಅರಮ್ ।**
**ಯೋಗಿನಸ್ತಂ ಪ್ರಪಶ್ಯಂತಿ ಭಗವಂತಂ ಸನಾತನಮ್ ॥೮॥**

ತಸ್ಯ= ಆ ಪರಮಾತ್ಮನ, ಮದಿಷ್ಠಾಃ= ಅತಿಶಯವಾಗಿ ಸಂತೋಷವನ್ನು ಕೊಡುವ, ಸರಿತಃ= ಗಂಗಾ-ಯಮುನಾದಿ ನದಿಗಳು, ಈಶತೇ= ಮನುಷ್ಯ ಪಾಪವನ್ನು ವಿನಾಶ ಮಾಡಲು ಸಮರ್ಥವಾಗುತ್ತವೆ. ಯಾಃ= ಯಾವ, ದೇವರಕ್ಷಿತಾಃ= ಕ್ರೀಡಾದಿ ಗುಣವಿಶಿಷ್ಟನಾದ ಪರಮಾತ್ಮನಿಂದ ರಕ್ಷಿತವಾದ, ದ್ವಾದಶಧಾ ದಶಧಾ= ಹತ್ತು ಹನ್ನೆರಡು ಕವಲುಗಳಾಗಿ, ಇಹ= ಈ ಭೂಲೋಕದಲ್ಲಿ, ಅರಂ= ಚೆನ್ನಾಗಿ, ಸಂಚರಂತಿ= ಪ್ರವಹಿಸುತ್ತವೆಯೋ ಅಂತಹ ನದಿಗಳು ಪಾಪಪರಿಹಾರವನ್ನು ಮಾಡಲು ಸಮರ್ಥವಾಗಿವೆ ಎಂದು ಅನ್ವಯ.

ದ್ವಾದಶಪೂಗಾಃ ಸರಿತೋ ದೇವರಕ್ಷಿತಾ ಮಧ್ವೀಶತೇ ।
ತದನುವಿಧಾಯಿನ್ಯಸ್ತದಾ ಸದಾಚರಂತಿ ಘೋರಮ್ ॥

ಎಂಬ ಪಾಠವನ್ನು ತೆಗೆದುಕೊಂಡರೆ ಹೀಗೆ ಅರ್ಥವನ್ನು ಮಾಡಬೇಕು. ದ್ವಾದಶಪೂಗಾಃ= ಐದುಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಮನಸ್ಸು ಮತ್ತು ಬುದ್ಧಿ ಸೇರಿ ಹನ್ನೆರಡು ವಸ್ತುಗಳಾಗುತ್ತವೆ. ಇವುಗಳ ಸಮೂಹಗಳು, ಒಬ್ಬೊಬ್ಬ ಪುರುಷನಲ್ಲಿ ಒಂದೊಂದು ಸಮೂಹವಿರುವುದರಿಂದ ಪುರುಷ ಬಹುತ್ವದಿಂದ ಸಮೂಹಗಳು ಎಂಬ ಬಹುವಚನಗಳು ಉಪಪನ್ನವಾಗುತ್ತವೆ. ಸರಿತಃ= ವಿಷಯಗಳ ಕಡೆಗೆ ಹರಿಯುತ್ತವೆ, ಸ್ವಾಭಾವಿಕವಾಗಿ ವಿಷಯಗಳ ಕಡೆಗೆ ಹೋಗುವ ಸ್ವಭಾವ ಉಳ್ಳವುಗಳು ಎಂದು ತಾತ್ಪರ್ಯ. ದೇವರಕ್ಷಿತಾಃ= ಕ್ರೀಡಾದಿ ಗುಣವಿಶಿಷ್ಟನಾದ ಭಗವಂತನಿಂದ ನಿಯಮಿತವಾದ ಇವು, ಮಧು= ಮೇಲ್ನೋಟಕ್ಕೆ ಮನೋಹರವಾದ

ವಿಷಯ ಸಮೂಹವನ್ನು, ಕುರಿತು ಹೋಗಲು ಎಂದು ಇಟ್ಟುಕೊಳ್ಳಬೇಕು, ಈಶತೇ= ಸಮರ್ಥವಾಗುತ್ತವೆ. ಯಾವಾಗ ಇವು ವಿಷಯಗಳ ಕಡೆ ಹೋಗುತ್ತವೆಯೋ ಆಗ, ತದನುವಿಧಾಯಿನ್ಯಃ= ಪರಮಾತ್ಮನಿಗೆ ಅಧೀನವಾಗಿ, ಘೋರಂ= ಅನಿಷ್ಟವಾದ ಫಲಗಳನ್ನು, ಸದಾ ಚರಂತಿ= ಯಾವಾಗಲೂ ಕೊಡುತ್ತವೆ.

ಅಥವಾ **'ದ್ವಾದಶಪೂಗಾಃ ಸರಿತೋ ದೇವರಕ್ಷಿತಾ ಮಧ್ವೀಶತೇ । ತದನುವಿಧಾಯಿನ್ಯಸ್ತದಾ ಸದಾಚರಂತಿ ಘೋರಮ್ ॥'**

ಎಂಬ ಪಾಠವನ್ನು ತೆಗೆದುಕೊಂಡರೆ, ಹತ್ತು ಹನ್ನೆರಡು ಕವಲುಗಳಾಗಿ ಹರಿಯುವ ಸಂತೋಷಕರವಾದ ಗಂಗಾ-ಯಮುನಾದಿ ನದಿಗಳು ಸಜ್ಜನರ ಪಾಪವನ್ನು ಪರಿಹರಿಸಲು ಸಮರ್ಥವಾಗಿವೆ. ಆ ಗಂಗಾ-ಯಮುನಾದಿ ನದಿಗಳು, ಇಹ= ಈ ಲೋಕದಲ್ಲಿ, ತದನುವಿಧಾಯಿನ್ಯಃ= ಸಮುದ್ರದಲ್ಲಿರುವ ವಡವಾಗ್ನಿಯ ಅಂತರ್ಯಾಮಿಯಾದ ನರಸಿಂಹದೇವರಿಗೆ ಅಧೀನರಾಗಿ, ಘೋರಂ= ಉಗ್ರವಾದ ಆ ನರಸಿಂಹ ರೂಪದ ಪೂಜೆಯನ್ನು ಉದ್ದೇಶಿಸಿ, ಸದಾ ಚರಂತಿ= ಯಾವಾಗಲೂ ಪ್ರವಹಿಸುತ್ತವೆ. ಆಚಾರ್ಯರು ಕರ್ಮನಿರ್ಣಯದಲ್ಲಿ ಉದಾಹರಿಸಿರುವ –

**'ಭೂತಾನಿ ಭೂತೋಽಂಬುನಿಧಾನಮಧ್ಯೇ ಭೂತ್ವಾ ಹರಿಃ ಸರ್ವಹರೋಽತಿಧಾಮ್ನಾ ।**
**ಅಗಾಧಮಂಭೋ ವಿದಧಾತಿ ಭಸ್ಮ ಯೋ ಬಾಡವಾಗ್ನಿರ್ಯಹರಿರ್ವಿಚಿಂತ್ಯಃ ॥'**

ಎಂಬ ವೈಹಾಯಸ ಸಂಹಿತೆಯ ವಚನದಿಂದ ಈ ಅರ್ಥವು ಸಿದ್ಧವಾಗುತ್ತದೆ.

ಭಾರತ ಶ್ರೀನಿವಾಸಾಚಾರ್ಯರು **'ದ್ವಾದಶಭೋಗಾಃ ಸರಿತೋ ನದೌ ದೇವರಕ್ಷಿತಾಃ॥ ಮಧ್ವೀಶತೇ ತಾನ್ ಸ್ವವಶೇ ನಯಿತ್ವಾ॥''** ಎಂಬ ಪಾಠವನ್ನು ಇಟ್ಟುಕೊಂಡು ಯೋಗಿಗಳು ತಾನ್= ಆ ಇಂದ್ರಿಯಸಮೂಹಗಳನ್ನು, ಸ್ವವಶೇ ನಯಿತ್ವಾ= ತಮ್ಮ ಅಧೀನವನ್ನಾಗಿ ಮಾಡಿಕೊಂಡು ಪರಮಾತ್ಮನನ್ನು ನೋಡುತ್ತಾರೆ ಎಂದು ಅರ್ಥವನ್ನು ಮಾಡಿದ್ದಾರೆ.

**ತದಪ್ಯಮಾಣಮಪಿಬನ್ ಸಂಚಿತಂ ಭ್ರಮರಾ ಮಧು ।**
**ಈಶಾನಃ ಸರ್ವಭೂತೇಷು ಹವಿರ್ಭೂತಮಕಲ್ಪಯತ್ ।**
**ಯೋಗಿನಸ್ತಂ ಪ್ರಪಶ್ಯಂತಿ ಭಗವಂತಂ ಸನಾತನಮ್ ॥೯॥**

ಭ್ರಮರಾಃ= ಮಧುಪಾನಾಸಕ್ತರಾದ ಭ್ರಮರಗಳಂತೆ ಇರುವ ಪೂರ್ವಾದಿ ದಿಕ್ಕುಗಳಲ್ಲಿರುವ ಆದಿತ್ಯರು,, ರುದ್ರರು, ವಸುಗಳು, ಮರುತ್ತುಗಳು ಮತ್ತು ಸಾಧ್ಯರು, ತದರ್ಪ್ಯಮಾಣಂ= ಆ ಭಗವಂತನಿಂದ ಅರ್ಪಿಸಲ್ಪಟ್ಟ, ಸಂಚಿತಂ= ತಮ್ಮ ಕರ್ಮದಿಂದ ಸಂಪಾದಿಸಲ್ಪಟ್ಟ, ಮಧು= 'ಮದಿ ಹರ್ಷೇ' ಎಂಬ ಧಾತುವಿರುವುದರಿಂದಲೂ, 'ತೃತೀಯೋಽತಿಶಯೇ' ಎಂಬ ವ್ಯಾಕರಣಸೂತ್ರಗಳಿಂದಲೂ ಅತಿಶಯವಾಗಿ ಆನಂದಕರವಾದ ಮಧುಸ್ಥಾನೀಯನಾದ ಸೂರ್ಯಮಂಡಲಸ್ಥ ಪರಮಾತ್ಮನನ್ನು, ಅಪಿಬನ್= ಉಪಜೀವಿಸುತ್ತಾರೆ. ಈ ವಿಷಯವು ಛಾಂದೋಗ್ಯ ಉಪನಿಷತ್ತಿನಲ್ಲಿ ಸ್ಪಷ್ಟವಾಗಿದೆ. ಭಗವಂತನು ಆದಿತ್ಯಾದಿ ದೇವತೆಗಳಿಗೆ ಮಾತ್ರ ಮಧುಪರ್ಕವಾಗಿ ಉಪಜೀವ್ಯನಲ್ಲ. ಆದರೆ ಎಲ್ಲಾ ಭೂತಗಳಿಗೂ ಉಪಜೀವ್ಯನಾದವನು ಎಂದು ಹೇಳುತ್ತಾರೆ. ಈಶಾನಃ= ಸರ್ವಸ್ವಾಮಿಯಾದ ಪರಮಾತ್ಮನು, ಸರ್ವಭೂತೇಷು= ಸರ್ವಭೂತಗಳಿಗಾಗಿ (ನಿಮಿತ್ತ ಸಪ್ತಮಿಯಾದ್ದರಿಂದ ಸರ್ವಭೂತಗಳ ನಿಮಿತ್ತವಾಗಿ ಎಂದು ಅರ್ಥ), ಹವಿರ್ಭೂತಂ= ಪ್ರಾಣಾಗ್ನಿಹೋತ್ರದಲ್ಲಿ ಹವಿರ್ದ್ರವ್ಯರೂಪವಾದ, ಅನ್ನಂ= ಆಹಾರವನ್ನು, ಅಕಲ್ಪಯತ್= ಸೃಷ್ಟಿಮಾಡಿದನು.

ಭಾರತ ಶ್ರೀನಿವಾಸಾಚಾರ್ಯರು

'ತ್ರಯಮೇಕಂ ತ್ರಯಸ್ತ್ರಿಂಶತ್ ಪಂಚ ಚಾಸ್ಮಾತ್ ಪ್ರಜಾಯತೇ ।
ಯೋಗಿನಃ ತಂ ಪ್ರಪಶ್ಯಂತಿ ..... ॥'

ಎಂದು ಒಂದು ಅಧಿಕ ಶ್ಲೋಕವನ್ನು ತೆಗೆದುಕೊಂಡು ವ್ಯಾಖ್ಯಾನ ಮಾಡಿದ್ದಾರೆ. ತ್ರಯಂ= ಗುಣತ್ರಯಗಳು, ಏಕಂ= ಒಂದು ಮಹತ್ತತ್ವ, ತ್ರಯಸ್ತ್ರಿಂಶತ್= ಮೂವತ್ತ ಮೂರು, ಅಹಂಕಾರ-ಬುದ್ಧಿ-ಮನಸ್ಸುಗಳು ಮೂರು, ಜ್ಞಾನೇಂದ್ರಿಯ ಕರ್ಮೇಂದ್ರಿಯಗಳು ಸೇರಿ ಹತ್ತು, ಪಂಚತನ್ಮಾತ್ರ ಮತ್ತು ಪಂಚಮಹಾಭೂತಗಳು ಸೇರಿ ಹತ್ತು, ಪ್ರಾಣಾದಿ-ನಾಗಾದಿ ಪಂಚಗಳು ಸೇರಿ ಹತ್ತು, ಹೀಗೆ ಒಟ್ಟು ಮೂವತ್ತು ಮೂರು ಪದಾರ್ಥಗಳು, ಪಂಚ= ಶಬ್ದಾದಿ ಪಂಚಕವನ್ನೂ ಸೃಷ್ಟಿ ಮಾಡಿದನು. ಯೋಗಿಗಳು ಅಂತಹ ಪರಮಾತ್ಮನನ್ನು ನೋಡುತ್ತಾರೆ ಎಂದು ವ್ಯಾಖ್ಯಾನ ಮಾಡಿದ್ದಾರೆ. ಅದರಂತೆಯೇ –

'ಯಸ್ಯಾದಿಗಮತಃ ಪೂರ್ವಂ ಉತ್ತರಂಚ ಪ್ರಗೃಹ್ಣತೇ ।
ಸುಹೃದೋಽಹೃದಶ್ಚೈವ ಮತಂಯನ್ನ ಭವಿದ್ಧಿತತ್ ॥'

ಎಂದು ಇನ್ನೊಂದು ಶ್ಲೋಕವನ್ನು ಅಧಿಕವಾಗಿ ಪಠಿಸಿ ವ್ಯಾಖ್ಯಾನ ಮಾಡಿದ್ದಾರೆ. ಯಸ್ಯ= ಯಾವ ಪರಮಾತ್ಮನ, ಅಧಿಕಮತಃ= ಅಪರೋಕ್ಷ ಜ್ಞಾನಾನಂತರದಲ್ಲಿ, ಪೂರ್ವಂ= ಅಪರೋಕ್ಷಜ್ಞಾನಕ್ಕಿಂತ ಪೂರ್ವದಲ್ಲಿಮಾಡಿದ, ಉತ್ತರಂ ಚ= ಅಪರೋಕ್ಷ ಜ್ಞಾನದ ಅನಂತರದಲ್ಲಿ ಮಾಡಿದ ಪುಣ್ಯ-ಪಾಪಕರ್ಮಗಳನ್ನು, ಸುಹೃದಃ= ಸ್ನೇಹಪಾತ್ರರು, ಅಸುಹೃದಶ್ಚೈವ= ಮತ್ತು ಶತ್ರುಗಳು, ಸುಹೃಹ್ಣತೆ= ಸ್ವೀಕರಿಸುತ್ತಾರೆಯೋ, ಯತ್- ಯಾವ ಪರಮಾತ್ಮನ ರೂಪವು, ಮತಂ ನ ಭವೇತ್= ಪೂರ್ಣವಾಗಿ ತಿಳಿಯುವುದಿಲ್ಲವೋ ಅಂತಹ ಪರಮಾತ್ಮನನ್ನು ಯೋಗಿಗಳು ನೋಡುತ್ತಾರೆ ಎಂದು ವ್ಯಾಖ್ಯಾನ ಮಾಡಿದ್ದಾರೆ.

**ಹಿರಣ್ಯವರ್ಣ(ಪರ್ಣ)ಮಶ್ವತ್ಥಮಭಿಪತ್ಯ ಸಪಕ್ಷಕಾಃ ।**
**ತೇ ತತ್ರ ಪಕ್ಷಿಣೋ ಭೂತ್ವಾ ಪ್ರಪತಂತಿ (ಪ್ರಭವಂತಿ) ಯಥಾಸುಖಮ್ ॥**
**ಯೋಗಿನಸ್ತಂ ಪ್ರಪಶ್ಯಂತಿ ಭಗವಂತಂ ಸನಾತನಮ್ ॥೧೦೦॥**

ಸಪಕ್ಷಕಾಃ= ರೆಕ್ಕೆಗಳಿಂದ ಕೂಡಿದ, ತೇ= ಆ ಮುಕ್ತರು, ಪಕ್ಷಿಣೋ ಭೂತ್ವಾ= ಪಕ್ಷಿಗಳಾಗಿ, ಹಿರಣ್ಯವರ್ಣಂ= ಚಿನ್ನದ ಬಣ್ಣವಿರುವ ಎಲೆಗಳಿಂದ ಕೂಡಿದ, ಚಿನ್ಮಯವಾದ ಲಕ್ಷ್ಮೀಸ್ವರೂಪವಾದ, ಅಶ್ವತ್ಥಂ= ಶ್ವೇತದ್ವೀಪದಲ್ಲಿರುವ ಅಮೃತವನ್ನು ಸುರಿಸುವ ಅಶ್ವತ್ಥವೃಕ್ಷವನ್ನು, ಅಭಿಪತ್ಯ= ಸಮೀಪಿಸಿ, ಯಥಾಸುಖಂ= ತಮಗೆ ಸುಖವಾಗುವ ರೀತಿಯಲ್ಲಿ, ಪ್ರಭವಂತಿ= ಪ್ರಕೃಷ್ಟರಾಗುತ್ತಾರೆ ಅಥವಾ ಹಾರಿ ಬಂದು ಅದರ ಮೇಲೆ ಇಳಿಯುತ್ತಾರೆ. ಆ ಅಶ್ವತ್ಥವೃಕ್ಷವು ಛಾಂದೋಗ್ಯಭಾಷ್ಯದಲ್ಲಿ 'ತತ್ರಾಶ್ವತ್ಥಃ ಸುಧಾಸ್ರವಃ । ಚಿತ್ಸುವರ್ಣಮಯಂ ದಿವ್ಯಂ ಲಕ್ಷ್ಮೀಸ್ತತ್ರಸ್ವರೂಪಿಣೀ' ಎಂದು ಶ್ವೇತದ್ವೀಪದಲ್ಲಿ ಅಮೃತವನ್ನು ಸುರಿಸುವ ಚಿದಾತ್ಮಕವಾದ ಸುವರ್ಣವರ್ಣದಿಂದ ಕೂಡಿದ ಲಕ್ಷ್ಮೀಸ್ವರೂಪವಾದ ಅಶ್ವತ್ಥವೃಕ್ಷವಿದೆ ಎಂದು ಹೇಳಿದ್ದಾರೆ. ಅಲ್ಲಿರುವ ಭಗವಂತನನ್ನು ಹೊಂದಿ ಪ್ರಕೃಷ್ಟರಾಗುತ್ತಾರೆ ಎಂದು ಅಭಿಪ್ರಾಯ. ಕೆಲವು ಪುಸ್ತಕಗಳಲ್ಲಿ 'ಸಪಕ್ಷಕಾಃ' ಎಂಬುದಕ್ಕೆ 'ಸಪಕ್ಷ' ಎಂದರೆ 'ಸ್ವಪಕ್ಷ' ತಮ್ಮ ಜೊತೆಯಲ್ಲಿಯೇ ಮುಕ್ತರಾದವರು, 'ಸಪಕ್ಷಕಾಃ' ಎಂದರೆ ಅಂತಹ ಮುಕ್ತರಿಂದ ಸಹಿತರಾಗಿ ಪಕ್ಷಿಗಳ ರೂಪವನ್ನು ಧರಿಸಿ ಇತ್ಯಾದಿಯಾಗಿ ಅರ್ಥವನ್ನು ಮಾಡಬೇಕು. ಇಂತಹ ಪರಮಾತ್ಮನನ್ನು ಯೋಗಿಗಳು ನೋಡುತ್ತಾರೆ ಎಂದು ಎಲ್ಲ ಶ್ಲೋಕದಲ್ಲಿಯೂ ಕೊನೆಯ ಸಾಲಿನ ಅರ್ಥವು ಇದ್ದೇ ಇದೆ.

**ಯಸ್ಮಾಚ್ಚ ವಾಯುರಾಯಾತೋ ಯಸ್ಮಾಚ್ಚ ಪ್ರಲಯಸ್ತಥಾ ।**
**ತಸ್ಮಾದಗ್ನಿಶ್ಚ ಸೋಮಶ್ಚ ತಸ್ಮಾಚ್ಚ ಪ್ರಾಣ ಆಗತಃ ।**
**ಸರ್ವಮೇವ ಸ ವೈ ವಿದ್ವಾಂಸ್ತಂ ತು ವಕ್ತುಂ ನ ಶಕ್ನುಮಃ ।**
**ಯೋಗಿನಸ್ತಂ ಪ್ರಪಶ್ಯಂತಿ ಭಗವಂತಂ ಸನಾತಮ್** ॥೧೧॥

ಯಸ್ಮಾತ್= ಯಾವ ಪರಮಾತ್ಮನ ದೆಶೆಯಿಂದ, ವಾಯುಃ= ಭೂತವಾಯುವು, ಆಯಾತಃ= ಜನ್ಮವನ್ನು ತಳೆದಿದ್ದಾನೆಯೋ, ಯಸ್ಮಾಚ್ಚ= ಯಾವ ಪರಮಾತ್ಮನ ದೆಸೆಯಿಂದ, ತಥಾ= ಅದರಂತೆ, ಪ್ರಳಯ= ಪ್ರಳಯವು ಉಂಟಾಗುತ್ತದೆಯೋ, ತಸ್ಮಾತ್= ಅಂತಹ ಪರಮಾತ್ಮನ ದೆಶೆಯಿಂದಲೇ, ಅಗ್ನಿಶ್ಚ= ಅಗ್ನಿಯೂ, ಸೋಮಶ್ಚ= ಚಂದ್ರನೂ, ಪ್ರಾಣಃ= ಅಹಂಕಾರಿಕ ಪ್ರಾಣನೂ, ಆಗತಃ= ಜನ್ಮವನ್ನು ಹೊಂದಿದ್ದಾರೆ. ಪ್ರಲಯಸ್ತಥಾ ಎಂಬುದಕ್ಕೆ ಬದಲಾಗಿ 'ಪ್ರವಹಸ್ತಥಾ' ಎಂದೂ ಪಾಠವಿದೆ. ಆಗ ವಾಯುವು ಎಂದರೆ ಭೂತವಾಯು, ಪ್ರವಹ ಎಂದರೆ ಪ್ರವಹನಾಮಕ ವಾಯು ಎಂದು ಅರ್ಥವನ್ನು ಮಾಡಬೇಕು.

**ಅಪಾನಂ ಗಿರತಿ ಪ್ರಾಣಃ ಪ್ರಾಣಂ ಗಿರತಿ ಚಂದ್ರಮಾಃ ।**
**ಆದಿತ್ಯೋ ಗಿರತೇ ಚಂದ್ರಮಾದಿತ್ಯಂ ಗಿರತೇ ಪರಃ ।**
**ಯೋಗಿನಸ್ತಂ ಪ್ರಪಶ್ಯಂತಿ ಭಗವಂತಂ ಸನಾತನಮ್** ॥೧೨॥

'ಪ್ರಭವಂತಿ ಯಥಾಸುಖಮ್' ಎಂಬ ಹಿಂದಿನ ಒಂದು ಶ್ಲೋಕದಲ್ಲಿ ಅಧಿಕಾರಿಗಳಿಗೆ ಮೋಕ್ಷಪ್ರಾಪ್ತಿ ಹೇಳಲ್ಪಟ್ಟಿದೆ. ಅದರಲ್ಲಿ ಮೋಕ್ಷಕಾಲದಲ್ಲಿ ದೇವತೆಗಳಿಗೆ ಉಂಟಾಗುವ ಸ್ವೋತ್ತಮ ಪ್ರವೇಶದ ಸ್ವಲ್ಪ ಅಂಶವನ್ನು ಮಾತ್ರ ಇಲ್ಲಿ ತಿಳಿಸುತ್ತಾರೆ. ಪ್ರಾಣಃ= ಅವಾಂತರ ವಾಯುವು, ಅಪಾನಂ ಗಿರತಿ= ಅಪಾನವನ್ನು ಸಂಹರಿಸುತ್ತಾನೆ. ಆದಿತ್ಯಃ= ಅದಿತಿಯ ಪುತ್ರನಾದ ಅದಿತ್ಯನು, ಚಂದ್ರಂ= ಚಂದ್ರನನ್ನು ಸಂಹರಿಸುತ್ತಾನೆ. ಅನಿರುದ್ಧನನ್ನು ಪರಃ= ಅವನಿಗಿಂತ ಶ್ರೇಷ್ಠನಾದ, ಕಾಮಃ= ಮನ್ಮಥನು ಸಂಹರಿಸುತ್ತಾನೆ. ಈ ಕ್ರಮದಿಂದ, ಪರಃ= ಸರ್ವೋತ್ತಮನಾದ ಪರಮಾತ್ಮನು ಬ್ರಹ್ಮದೇವನನ್ನು ಸಂಹರಿಸುತ್ತಾನೆ. ಇದನ್ನು ಅನುವ್ಯಾಖ್ಯಾನದಲ್ಲಿ ಆಚಾರ್ಯರು–

'ಸೋಮಸ್ತು ವಾರೀಶಯುತೋऽನಿರುದ್ಧಂ ವಿಶತ್ಯಸೌ ಕಾಮಮಸೌ ಚ ವಾರುಣೀಮ್।
ಸಾ ಶೇಷದೇವಂ ಸ ಗಿರಂ ಚ ಸೈವ ವಾಯುಂ ವಿಶಂತ್ಯಂಜ ಇತೀಹ ನಿರ್ಣಯಃ ॥'

(ಚಂದ್ರನು ವರುಣಸಹಿತನಾಗಿ ಅನಿರುದ್ಧನನ್ನು ಪ್ರವೇಶಿಸುತ್ತಾನೆ, ಅನಿರುದ್ಧನು ಮನ್ಮಥನನ್ನು, ಮನ್ಮಥನು ಶೇಷಪತ್ನಿಯಾದ ವಾರುಣಿಯನ್ನು, ವಾರುಣಿಯು ಶೇಷನನ್ನು, ಶೇಷನು ಭಾರತಿಯನ್ನು, ಭಾರತಿಯು ವಾಯುದೇವರನ್ನು ಪ್ರವೇಶಿಸುತ್ತಾಳೆ ಎಂಬುದು ಈ ವಿಷಯದಲ್ಲಿ ಸರಿಯಾಗಿ ನಿರ್ಣಯವಾಗಿದೆ) ಎಂದು ಹೇಳಿದ್ದಾರೆ.

**ಏಕಂ ಪಾದಂ ಸಮುತ್ಕ್ಷಿಪತಿ ಸಲಿಲಾರ್ಧಂ ಸಮುಚ್ಚರನ್ ।**
**ತಂ ಚೇತ್ ಸತತಮೃತ್ವಾಂಗಂ ನ ಮೃತ್ಯುರ್ನಾಮೃತಂ ಭವೇತ್ ॥**
**ಯೋಗಿನಸ್ತಂ ಪ್ರಪಶ್ಯಂತಿ ಭಗವಂತಂ ಸನಾತನಮ್ ॥೧೩॥**

ಸಲಿಲಾರ್ಧಂ= ಸಲಿಲ ಎಂದರೆ ಗರ್ಭೋದಕವು, ಅರ್ಧವಾಗುವಂತೆ, ಉಚ್ಚರನ್= ಬ್ರಹ್ಮಾಂಡದ ಒಳಗೆ ಮೇಲ್ಭಾಗದಲ್ಲಿ ಸಂಚರಿಸುತ್ತಾ, ಸಃ= ಆ ನಾರಾಯಣನು, ಏಕಂ ಪಾದಂ= ಜೀವರೂಪನಾದ ಭಿನ್ನಾಂಶನನ್ನು, ಕ್ಷಿಪತಿ= ಈ ಲೋಕದಲ್ಲಿ ಸ್ಥಾಪಿಸುತ್ತಾನೆ. ಏಕಂ ಪಾದಂ= ಇನ್ನೊಂದು ಪಾದವನ್ನು, ಇಲ್ಲಿ ಏಕವಚನವು ಜಾತ್ಯೇಕವಚನವಾಗಿದೆ. ಆದ್ದರಿಂದ ಉಳಿದ ಸ್ವರೂಪಾಂಶವನ್ನು ಎಂದು ಅರ್ಥ. ಸಮುತ್ಕ್ಷಿಪತಿ= ಮೇಲಿನ ವೈಕುಂಠಾದಿ ಲೋಕತ್ರಯದಲ್ಲಿ ಚೆನ್ನಾಗಿ ಸ್ಥಾಪಿಸುತ್ತಾನೆ. 'ತ್ರಿಪಾದಸ್ಯಾಮೃತಂ ದಿವಿ' ಎಂಬ ಶ್ರುತಿಯು ಈ ವಿಷಯದಲ್ಲಿ ಪ್ರಮಾಣವಾಗುತ್ತದೆ. ಅಂಗಂ= ಪ್ರಿಯನಾದ ಅವನನ್ನು, ಸತತಂ= ಯಾವಾಗಲೂ, ಋತ್ವಾಚೇತ್= ವೇದಾಂತ ಶ್ರವಣಾದಿಗಳಿಂದ ವಿಚಾರ ಮಾಡಿ ಅಪರೋಕ್ಷಜ್ಞಾನದಿಂದ ಅವನನ್ನು ಹೊಂದಿದರೆ ಅಂತಹ ಅಧಿಕಾರಿಗೆ, ಮೃತ್ಯುಃ ನ= ಮರಣವು ಉಂಟಾಗುವುದಿಲ್ಲ. ಅಮೃತಂ ನ= ಸರ್ವದಿಕ್ಕುಗಳಲ್ಲಿಯೂ ಮರಣರೂಪವಾಗಿರುವ ಸಂಸಾರವೂ ಉಂಟಾಗುವುದಿಲ್ಲ.

'**ಏಕಂ ಪಾದಂ ನೋತ್ಕ್ಷಿಪತಿ ಸಲಿಲಾದ್ಧಂಸ ಉಚ್ಚರನ್**' ಎಂಬ ಪಾಠದಲ್ಲಿ ಹಂಸಃ= ಪರಮಶುದ್ಧನಾದ ಭಗವಂತನು, ಸಲಿಲಾತ್= ಭೂತಭೌತಿಕರೂಪವಾದ ಸಂಸಾರದಿಂದ, ಏಕಂ ಪಾದಂ= 'ಪಾದೋಸ್ಯ ವಿಶ್ವಾಭೂತಾನಿ' ಎಂಬ ಶ್ರುತಿ ಇರುವುದರಿಂದ ಭಿನ್ನಾಂಶರೂಪನಾದ ಜೀವನನ್ನು, ನೋತ್ಕ್ಷಿಪತಿ= ವೈಕುಂಠಾದಿ ಊರ್ಧ್ವಲೋಕಗಳಲ್ಲಿ ತನ್ನ ಸ್ವರೂಪಾಂಶತ್ರಯವನ್ನು ಇಟ್ಟಂತೆ ಇಡುವುದಿಲ್ಲ ಎಂದು ಅಭಿಪ್ರಾಯ.

**ಏವಂರೂಪೋ ಮಹಾತ್ಮಾ ಸ ಪಾವಕಂ ಪುರುಷೋಽಂಗಿರಾಃ ।**
**ಯೋ ವೈ ತಂ ಪುರುಷಂ ವೇದ ತಸ್ಯೇಹಾತ್ಮಾ ನ ರಿಷ್ಯತೇ ।**
**ಯೋಗಿನಸ್ತಂ ಪ್ರಪಶ್ಯಂತಿ ಭಗವಂತಂ ಸನಾತನಮ್ ॥೧೪॥**

ಏವಂ ನೃಪಃ= ಇಂತಹ ಗುಣವಿಶಿಷ್ಟನಾದ, ಸಃ= ಆ ಪರಮಾತ್ಮನು, ಮಹಾತ್ಮಾ= ಮಹಾನುಭಾವನಾದವನು, ಅಂಗಿರಾಃ= ಅಂಗದೇವತಾಯುಕ್ತವಾದ ಹರಿಯು ಅಂಗಿ, ಅವನಲ್ಲಿ ರಮಿಸುವವನು ಎಂದರೆ ಜ್ಞಾನಿಯಾದವನು ಅಂಗಿರಾ ಅಂತಹ ಜ್ಞಾನಿಯಾದ, ಯಃ ಪುರುಷಃ= ಯಾವ ಪುರುಷನು, ತಂ= ಅಂತಹ, ಪಾವಕಂ= ನಾಮಮಾತ್ರದ ಸ್ಮರಣೆಯಿಂದ ಪವಿತ್ರೀಕರಿಸುವ, ಪುರುಷಂ= ಪೂರ್ಣಷಡ್ಗುಣೈಶ್ವರ್ಯ ಸಂಪನ್ನನಾದ ಹರಿಯನ್ನು, ವೇದ= ಅಪರೋಕ್ಷವಾಗಿ ತಿಳಿಯುತ್ತಾನೆಯೋ, ತಸ್ಯ= ಅಂತಹ ಜ್ಞಾನಿಗೆ, ಇಹ= ಈ ಲೋಕದಲ್ಲಿ, ಆತ್ಮಾ= ಅವನ ಸ್ವರೂಪವು, ನ ರಿಷ್ಯತೇ= ದುಃಖಾದಿ ಅನರ್ಥಕ್ಕೆ ಒಳಗಾಗುವುದಿಲ್ಲ.

ಅಥವಾ ಆತ್ಮಾ= ಪರಮಾತ್ಮನು, ತಸ್ಯ= ಆ ಜ್ಞಾನಿಗೆ, ನ ರಿಷ್ಯತೇ= ನಷ್ಟನಾಗುವುದಿಲ್ಲ, ಫಲಪ್ರದನಾಗದೇ ಇರುವುದಿಲ್ಲ ಎಂದು ಅರ್ಥ. ಪ್ರಯೋಜನವನ್ನು ಕೊಡದಿರುವ ವಸ್ತುವನ್ನು ನಷ್ಟವೆಂದು ಹೇಳುತ್ತಾರೆ ಎಂಬ ವಿಷಯವನ್ನು 'ತಸ್ಯ ಅಹಂ ನ ಪ್ರಣಶ್ಯಾಮಿ' (ಜ್ಞಾನಿಗೆ ನಾನು ನಷ್ಟವಾಗುವುದಿಲ್ಲ) ಎಂಬ ಗೀತಾವಾಕ್ಯ ವ್ಯಾಖ್ಯಾನ ಸಂದರ್ಭದಲ್ಲಿ ಆಚಾರ್ಯರು ಹೇಳಿದ್ದಾರೆ. '**ಪೂಜ್ಯಂ ಚ ಪಾವಕಂ ಪುರುಷೋ ಗಿರನ್**' ಎಂಬ ಪಾಠದಲ್ಲಿ ಪೂಜ್ಯನಾದ ಅಗ್ನಿಯನ್ನೂ ಪಾವಕನಾದ ವಾಯುದೇವರನ್ನೂ ಸಂಹರಿಸುವ ಯಾವ ಪರಮಾತ್ಮನನ್ನು ಜ್ಞಾನಿಯು ತಿಳಿಯುತ್ತಾನೆಯೋ ಎಂದು ಅರ್ಥ. '**ಏವಂ ರೂಪೋ ಮಹಾತ್ಮಾ ಸಃ ಸಾವೃತಿಂ ಪುರುಷೋ ಅವಿರತ್**' ಎಂಬ ಪಾಠದಲ್ಲಿ ಪೂರ್ಣ ಷಡ್ಗುಣೈಶ್ವರ್ಯ ಸಂಪನ್ನನಾದ ಅವನು ಆವರಣ ಸಹಿತವಾದ ಬ್ರಹ್ಮಾಂಡವನ್ನು ಅವಿರತ್= ಉದ್ಗಿರತ್= ಉತ್ಪಾದನೆ ಮಾಡಿದನು ಎಂದು ಅರ್ಥವನ್ನು ಮಾಡಬೇಕು.

**ಅಂಗುಷ್ಠಮಾತ್ರಃ ಪುರುಷೋಽಂತರಾತ್ಮಾ**
**ಲಿಂಗಸ್ಯ ಯೋಗೇನ ಸ ಯಾತಿ ನಿತ್ಯಮ್ ।**
**ತಮೀಶಮೀಡ್ಯಮನುಕಲ್ಪಮಾದ್ಯಂ**

ಪಶ್ಯಂತಿ ಮೂಢಾ ನ ವಿರಾಜಮಾನಮ್ ।
ಯೋಗಿನಸ್ತಂ ಪ್ರಪಶ್ಯಂತಿ ಭಗವಂತಂ ಸನಾತನಮ್ ॥೧೫॥

ಯಃ= ಯಾವ ಪರಮಾತ್ಮನು, ಅಂಗುಷ್ಠಮಾತ್ರಃ= ಅಂಗುಷ್ಠ ಪರಿಮಾಣ ಉಳ್ಳವನೋ, ಪುರುಷಃ= ಪೂರ್ಣಷಡ್ಗುಣಸಂಪನ್ನನಾದ, ಅಂತರಾತ್ಮಾ= ಅಂತರ್ಯಾಮಿಯಾದ, ಸಃ= ಆ ಪರಮಾತ್ಮನು, ಅನುಕಲ್ಪಂ= ಪ್ರತಿಕಲ್ಪದಲ್ಲಿಯೂ, ಯಾತಿ= ರಾಮಾದಿ ಅವತಾರ ರೂಪದಿಂದ ಭೂಲೋಕಕ್ಕೆ ಬರುತ್ತಾನೆ. ನಿತ್ಯಂ= ನಾಶವಿಲ್ಲದಿರುವ, ಈಶಂ= ಸ್ವಾಮಿಯಾದ, ಈಡ್ಯಂ= ಸ್ತುತ್ಯನಾದ, ಆದ್ಯಂ= ಅನಾದಿ ಕಾಲದಿಂದಲೂ ಇರುವ, ವಿರಾಜಮಾನಂ= ಪ್ರಕಾಶಮಾನನಾದ, ತಂ= ಅವನನ್ನು, ಲಿಂಗಸ್ಯ ಯೋಗೇನ= ಲಿಂಗದೇಹದ ಸಂಬಂಧದಿಂದ, ಮೂಢಾಃ= ಅಜ್ಞಾನಕ್ಕೆ ಒಳಗಾದ ಜೀವರು, ನ ಪಶ್ಯಂತಿ= ಕಾಣುವುದಿಲ್ಲ. ಅಥವಾ ಲಿಂಗಸ್ಯ= ದೇಹದ ಮಧ್ಯದಲ್ಲಿ, ಯೋಗೇನ= ತನ್ನ ಸಾಮರ್ಥ್ಯದಿಂದಲೇ, ವಿರಾಜಮಾನಂ= ವಿಶೇಷವಾಗಿ ಪ್ರಕಾಶಮಾನನಾಗಿರುವ ಅವನನ್ನು ನೋಡುವುದಿಲ್ಲ ಎಂದು ಅನ್ವಯ.

ನಾತ್ಮಾನಮಾತ್ಮಸ್ಥಮವೈತಿ ಮೂಢಃ
ಸಂಸಾರಕೂಪೇ ಪರಿವರ್ತತೇ ಯಃ ।
ತ್ಯಕ್ತ್ವಾ ತ್ವಽತ್ಮರೂಪಂ ವಿಷಯಾಂಶ್ಚ ಭುಂಕ್ತೇ
ಸ ವೈ ಜನೋ ಗರ್ದಭ ಏವ ಸಾಕ್ಷಾತ್ ॥
ಯೋಗಿನಸ್ತಂ ಪ್ರಪಶ್ಯಂತಿ ಭಗವಂತಂ ಸನಾತನಮ್ ॥

ಯಃ ಮೂಢಃ= ಯಾವ ಮೂಢನು, ಆತ್ಮಸ್ಥಂ= ತನ್ನೊಳಗಿರುವ, ಆತ್ಮಾನಂ= ಪರಮಾತ್ಮನನ್ನು, ನಾವೈತಿ= ತಿಳಿಯುವುದಿಲ್ಲವೋ, ಸಃ= ಅಂತಹ ಮೂಢನು, ಸಂಸಾರಕೂಪೇ= ಸಂಸಾರವೆಂಬ ಕೂಪದಲ್ಲಿ, ಪರಿವರ್ತತೇ= ತೊಳಲಾಡುತ್ತಾನೆ. ಆತ್ಮರೂಪಂ= ಪರಮಾತ್ಮನ ಸ್ವರೂಪವನ್ನು, ತ್ಯಕ್ತ್ವಾ= ಪರಿತ್ಯಜಿಸಿ, ಪರಮಾತ್ಮನ ಸ್ಮರಣಾದಿಗಳನ್ನು ಮಾಡದೆ, ವಿಷಯಂ= ಶಬ್ದಾದಿ ವಿಷಯಗಳನ್ನು, ಭುಂಕ್ತೇ= ಅನುಭವಿಸುತ್ತಾನೆ. ಸ ಜನಃ= ಅಂತಹ ಮನುಷ್ಯನು, ಸಾಕ್ಷಾತ್= ಮುಖ್ಯವಾಗಿಯೇ, ಗರ್ದಭಃ ವೈ= ಕತ್ತೆಯೇ ಆಗಿರುತ್ತಾನೆ. ಯಾವನು ತನ್ನ ಹೃದಯದಲ್ಲಿರುವ ಪರಮಾತ್ಮನನ್ನು ತಿಳಿಯದೆ ವಿಷಯಭೋಗದಲ್ಲಿ ಮಗ್ನನಾಗಿರುತ್ತಾನೆಯೋ ಅವನನ್ನು

ಯಾವ ಸಂಕೋಚವೂ ಇಲ್ಲದೆ ಕತ್ತೆ ಎಂದು ಹೇಳಬಹುದು. ಅಂತಹ ಪರಮಾತ್ಮನನ್ನು ಯೋಗಿಗಳು ನೋಡುತ್ತಾರೆ.

ಭಾರತ ಶ್ರೀನಿವಾಸಾಚಾರ್ಯರು, ಸಃ= ಆ ಪರಮಾತ್ಮನು, ಲಿಂಗಸ್ಯ ಯೋಗೇನ= ಲಿಂಗದೇಹದ ಸಂಬಂಧದಿಂದ ಕೂಡಿರುವ ಜೀವನನ್ನು, ನಿತ್ಯಂ= ಪ್ರತಿದಿವಸವೂ, ಯಾತಿ= ಸುಷುಪ್ತಿಯ ಕಾಲದಲ್ಲಿ ಹೃದಯದಲ್ಲಿರುವ ಪರಮಾತ್ಮನ ಜೊತೆಯಲ್ಲಿ ಸೇರಿಸುತ್ತಾನೆ ಎಂದು ಅರ್ಥವನ್ನು ಮಾಡುತ್ತಾರೆ.

**ಗೂಹಂತಿ ಸರ್ಪಾ ಇವ ಗಹ್ವರೇಷು**
**ಕ್ಷಯಂ ನೀತ್ವಾ ಸ್ವೇನ ವೃತ್ತೇನ ಮರ್ತ್ಯಾಃ ।**
**ತೇ ವಿಪ್ರಮುಹ್ಯಂತಿ ಜನಾ ವಿಮೂಢಾಃ**
**ತೈರ್ದತ್ತಂ ವೈ ಗೂಹಯಂತೇ ಭವಾಯ ॥**
**ಯೋಗಿನಸ್ತಂ ಪ್ರಪಶ್ಯಂತಿ ಭಗವಂತಂ ಸನಾತನಮ್** ॥೧೬॥

ಮರ್ತ್ಯಾಃ= ಜ್ಞಾನಿಪುರುಷರು, ವೃತ್ತೇನ= ಶ್ರವಣಾದಿಗಳ ಆವರ್ತನದಿಂದ, ಆ ಪರಮಾತ್ಮನನ್ನು, ಕ್ಷಯಂ= ತಮ್ಮ ಹೃದಯಗುಹಾ ಮಂದಿರಕ್ಕೆ, ನೀತ್ವಾ= ಕರೆದುಕೊಂಡು ಹೋಗಿ, ಗೂಹಯಂತಿ= ಮುಚ್ಚಿಡುತ್ತಾರೆ. ಗಹ್ವರೇಷು= ಗುಹೆಗಳಲ್ಲಿ, ಸರ್ಪಾ ಇವ= ಕುಂಡಲಾಕಾರವಾಗಿ ಮಲಗಿರುವ ಸರ್ಪಗಳು ತಮ್ಮ ಶಿರೋರತ್ನವನ್ನು ಮುಚ್ಚಿಕೊಳ್ಳುವಂತೆ, ತೇ= ಆ ಜ್ಞಾನಿಗಳು, ತೈಃ= ತಮಗಿಂತ ಉತ್ತಮರಾದ ಜ್ಞಾನಿಗಳಿಂದ, ದತ್ತಮ್= ಉಪದಿಷ್ಟನಾದ ಹರಿಯನ್ನು, ಭವಾಯ= ತಮ್ಮ ಆಧ್ಯಾತ್ಮಿಕ ಸಂಪತ್ತಿಗಾಗಿ, ಗೂಹಯಂತಿ= ಮುಚ್ಚಿಟ್ಟುಕೊಳ್ಳುತ್ತಾರೆ.

ಅಥವಾ (ಹೇಗೆ) ಸರ್ಪಾಃ= ಸರ್ಪಗಳು, ಗಹ್ವರೇಷು= ತಮ್ಮ ಗುಹೆಗಳಿಂದ ಹೊರಗೆ ಬಂದು, ಸ್ವೇನವೃತ್ತೇನ= ತಮ್ಮ ದಂಶನಾದಿ ವ್ಯಾಪಾರದಿಂದ, ಮರ್ತ್ಯಾನ್= ಮನುಷ್ಯರನ್ನು, ಕ್ಷಯಂ ನೀತ್ವಾ= ನಾಶಮಾಡಿ, ಗಹ್ವರೇಷು= ಗುಹೆಗಳಲ್ಲಿ ಪುನಃ, ಸ್ವಾತ್ಮಾನಂ= ತಮ್ಮನ್ನು, ಗೂಹಂತಿ= ಮುಚ್ಚಿಕೊಳ್ಳುತ್ತವೆಯೋ ಅದರಂತೆ ಶ್ರೋತ್ರಾದಿ ಇಂದ್ರಿಯಗಳು ತಮ್ಮ ಗೋಳಕಗಳಿಂದ ಹೊರಬಂದು ವಿಷಯಾನುಭವರೂಪವಾದ ತಮ್ಮ ಸ್ವಭಾವದಿಂದ ಜೀವರಿಗೆ ನಾಶವನ್ನು ಉಂಟುಮಾಡಿ ಪುನಃ ಗೋಳಕವನ್ನು ಪ್ರವೇಶಿಸಿ ತಮ್ಮನ್ನು ಮುಚ್ಚಿಕೊಳ್ಳುತ್ತವೆ. ಇಂದ್ರಿಯವು ಉಂಟುಮಾಡುವ ನಾಶವು

ಎಂತಹದು ಎಂಬುದನ್ನು 'ತೇ ವಿಪ್ರಮುಹ್ಯಂತಿ' ಎಂಬುದರಿಂದ ಹೇಳುತ್ತಾರೆ. ತೇ= ವಿಮೂಢರಾದ ವಿಷಯಾನುಭವದಲ್ಲಿ ಆಸಕ್ತರಾದ ಜನರು, ವಿಪ್ರಮುಹ್ಯಂತಿ= ಪರಾಪರ ತತ್ತ್ವಜ್ಞಾನಶೂನ್ಯರಾಗುತ್ತಾರೆ. ತಾವು ಸ್ವತಃ ತತ್ತ್ವಜ್ಞಾನದಿಂದ ಶೂನ್ಯರಾಗುವುದು ಇಷ್ಟೇ ಅಲ್ಲ, ತೈಃ= ಆ ಇಂದ್ರಿಯಗಳಿಂದ, ದತ್ತಮ್= ಕೊಡಲ್ಪಟ್ಟ ವಿಷಯಭೋಗವುಳ್ಳವರಾಗಿ ಇನ್ನೊಬ್ಬರಿಗೂ ಸಹ, ಗೂಹಯಂತಿ= ಮೋಹವನ್ನು ಉಂಟುಮಾಡುತ್ತಾರೆ. ಅಂತಹ ಈ ಮೋಹವು ಪರಮಾತ್ಮನ ಅಜ್ಞಾನದಿಂದ, ಭವಾಯ= ಸಂಸಾರವನ್ನು ಉಂಟುಮಾಡುವುದು, ಭವತಿ= ಆಗುತ್ತದೆ. ಪರಮಾತ್ಮನ ಅಜ್ಞಾನದಿಂದಲೇ ಸಂಸಾರ ಎಂದು ತಾತ್ಪರ್ಯ.

'ಸ್ವೇನ ವೃತ್ತೇನ ಮರ್ತ್ಯಾಃ।' ..... ತೈರ್ದತ್ತಮಾದ್ಯಂ ಗೃಹ್ಯಂತೇ ಭವಾರ್ಥೇ' ಎಂಬ ಪಾಠದಲ್ಲಿ ಸ್ವೇನ ವೃತ್ತೇನ= ತಾವು ಅನುಷ್ಠಾನ ಮಾಡಿದ ಶ್ರವಣಾದಿಗಳಿಂದ ಪರಮಾತ್ಮನನ್ನು, ಕ್ಷಯಂ ನೀತ್ವಾ= ತಮ್ಮ ಹೃದಯಮಂದಿರದಲ್ಲಿ ಸ್ಥಾಪಿಸಿ, ಗೂಹಂತಿ= ಆಚ್ಛಾದನೆ ಮಾಡುತ್ತಾರೆ. ಎಂದರೆ ಅನಧಿಕಾರಿಗಳಿಗೆ ಉಪದೇಶಿಸುವುದಿಲ್ಲ. ಈ ವಿಷಯದಲ್ಲಿ ಗುಹೆಗಳಲ್ಲಿ ಮಂಡಲಾಕಾರವಾಗಿ ಮಲಗಿರುವ ಸರ್ಪಗಳು ತಮ್ಮ ಶಿರೋರತ್ನವನ್ನು ಮುಚ್ಚಿಡುವಂತೆ ಎಂದು ದೃಷ್ಟಾಂತವನ್ನು ಹೇಳುತ್ತಾರೆ. ಅಂತಹ ಪುರುಷರು ವಿಪ್ರಮುಹ್ಯಂತಿ= ಭಗವಂತನು ಜೀವನಿಂದ ಅಭಿನ್ನನಾದವನು, ನಿರ್ಗುಣನಾದವನು, ನಿರಾಕಾರನಾದವನು ಇತ್ಯಾದಿಯಾದ ಮಿಥ್ಯಾಜ್ಞಾನವನ್ನು ಹೊಂದುತ್ತಾರೆ. ಏಕೆಂದರೆ ವಿಮೂಢಾಃ= ತತ್ತ್ವಮಸ್ಯಾದಿ ಶ್ರುತಿವಾಕ್ಯಗಳ ತಾತ್ಪರ್ಯಜ್ಞಾನರಹಿತರಾಗಿದ್ದಾರೆ. ಅಧಿಕಾರಿಗಳಾದವರು ಮಾತ್ರ, ತೇ ದತ್ತಮ್= ಜ್ಞಾನಿಗಳಿಂದ ಉಪದಿಷ್ಟನಾದ ಪರಮಾತ್ಮನನ್ನು ತಮ್ಮ ಹೃದಯದಲ್ಲಿ ಸ್ಥಾಪಿಸಿಕೊಂಡು ಅನಧಿಕಾರಿಗಳಿಗೆ ತಿಳಿಯದಂತೆ ಮುಚ್ಚಿಟ್ಟುಕೊಳ್ಳುತ್ತಾರೆ. ಇಂತಹ ತತ್ತ್ವಜ್ಞಾನ ಗೂಹನವು ಅವರಿಗೆ ಸರ್ವಮಂಗಳವನ್ನು ಉಂಟು ಮಾಡುತ್ತದೆ. 'ವಿದ್ಯಾ ಹ ವೈ ಬ್ರಾಹ್ಮಣಮಾಜಗಾಮ ಗೋಪಾಯಮಾಂ ಶೇವಧಿಸ್ತೇಹಮಸ್ಮಿ' (ವಿದ್ಯಾಭಿಮಾನಿದೇವತೆಗಳು ಬ್ರಹ್ಮನ ಬಳಿಗೆ ಬಂದು, ನಾವು ನಿನಗೆ ಸುಖನಿಧಿಗಳಾಗಿರುತ್ತೇವೆ. ನಮ್ಮನ್ನು ಮುಚ್ಚಿಟ್ಟುಕೊಳ್ಳುವವನಾಗು ಎಂದು ಪ್ರಾರ್ಥಿಸಿದರು) ಎಂಬ ಶ್ರುತಿಯು ಈ ವಿಷಯದಲ್ಲಿ ಪ್ರಮಾಣವಾಗುತ್ತದೆ.

ಸದಾऽಧ್ವಸಾತ್ ಕೃತೋऽಸ್ಯಾನ್ನಮ್(ಕೃತೋऽಸ್ಯ ನ ಮೃತ್ಯುಃ)
ಅಪ್ಯವ್ಯಯಸ್ಯೇಹಾಮೃತಂ ಕೃತಃ ಸ್ಯಾತ್ ।
ಸತ್ಯಾನೃತೇ ಸತ್ಯಸಮಾನಬಂಧಿನೀ
ಸತಶ್ಚ ಯೋನಿಮಸತಶ್ಚೈಕಮನ್ನಮ್ ॥
ಯೋಗಿನಸ್ತಂ ಪ್ರಪಶ್ಯಂತಿ ಭಗವಂತಂ ಸನಾತನಮ್ ॥೧೭॥

ಸತಃ= ಸಜ್ಜನರಿಗೆ, ಅಸತಶ್ಚ= ಮತ್ತು ದುರ್ಜನರಿಗೆ, ಯೋನಿಂ= ಪೋಷಕವಾಗಿ ಕಾರಣವಾದ, ಏಕಂ= ಮುಖ್ಯವಾದ, ಅನ್ನಂ= ಅನ್ನಸ್ಥನಾದ, ಅನ್ನನಾಮಕನಾದ ಪರಮಾತ್ಮನನ್ನು, ಸದಾ= ಯಾವಾಗಲೂ, ಅಧ್ವಸಾತ್ ಕೃತಃ= ಮೋಕ್ಷಮಾರ್ಗವಾಗಿ ಮಾಡಿಕೊಳ್ಳುವ, ಅಲ್ಪಾಹಾರವನ್ನು ಸ್ವೀಕರಿಸುವ ಎಂದು ಅರ್ಥ. ಮತ್ತು ಅಮೃತಂ= ಅದನ್ನೇ ಅಮೃತಪ್ರಾಯವನ್ನಾಗಿ, ಕೃತಃ= ಮಾಡಿಕೊಳ್ಳುವ, ಅಲ್ಪಾಹಾರವನ್ನು ಸ್ವೀಕರಿಸಿದರೂ ಚಿಂತೆಯನ್ನು ಮಾಡದಿರುವ, ಸತ್ಯಸಮಾನುಬಂಧಿನೀ= ಸತ್ಯಕ್ಕೆ ಸಮಾನವಾಗಿ ಫಲವನ್ನು ಕೊಡುವ, ಸತ್ಯಾನೃತೇ= ಸತ್ಯ ಮತ್ತು ಅನೃತಗಳನ್ನು, ಕೃತಃ= ಅನುಷ್ಠಾನ ಮಾಡುವ, 'ಸತ್ಯಮೋಮಿತಿ ಸಂಪ್ರೋಕ್ತಂ ಯನ್ನೇತ್ಯಾಹಾನೃತಂ ಹಿ ತತ್' ಎಂಬ ವಚನದಂತೆ ಧನವಿರುವಾಗ ದ್ರವ್ಯದಾನ ಮಾಡಲು ಸಮ್ಮತಿಸುವ ವಚನವು ಸತ್ಯವೆನಿಸುತ್ತದೆ. ಧನವಿಲ್ಲದಿರುವಾಗ ಇಲ್ಲ ಎಂಬ ವಚನವೂ ಅನೃತವೆನಿಸುತ್ತದೆ. ಧನವಿರುವಾಗ ಕೊಡುತ್ತೇನೆ ಎಂಬ ಅನೃತವಚನವೂ ಧನವಿಲ್ಲದಿದ್ದಾಗ ದಾನ ಮಾಡುವುದಿಲ್ಲ ಎಂಬ ವಚನವು ಸತ್ಯವಚನಕ್ಕೇ ಸಮಾನವಾದುದು. ಅಸ್ಯ= ಅಂತಹ ಜ್ಞಾನಿಗೆ, ನ ಮೃತ್ಯುಃ= ಮೃತ್ಯುವು ಉಂಟಾಗುವುದಿಲ್ಲ, ಅಂತಹ ಜ್ಞಾನಿಯು ಮುಕ್ತನಾಗುತ್ತಾನೆ ಎಂದು ಅಭಿಪ್ರಾಯ.

ಅಂಗುಷ್ಠಮಾತ್ರಃ ಪುರುಷೋऽಂತರಾತ್ಮಾ
ನ ದೃಶ್ಯತೇऽಸೌ ಹೃದಯೇ ನಿವಿಷ್ಟಃ ।
ಅಂತಶ್ಚರೋ ದಿವಾರಾತ್ರಮತಂದ್ರಿತಸ್ತಂ
ಮತ್ವಾ ಕವಿರಾಸ್ತೇ ಪ್ರಸನ್ನಃ ॥
ಯೋಗಿನಸ್ತಂ ..... ॥

ಎಂದು ಇನ್ನೊಂದು ಶ್ಲೋಕವನ್ನು ಉದಾಹರಿಸಿ ವಾದಿರಾಜರು ವ್ಯಾಖ್ಯಾನ ಮಾಡಿದ್ದಾರೆ. ಮೊದಲನೆಯ ಅರ್ಧದ ಅರ್ಥವನ್ನು ಹಿಂದೆಯೇ ಹೇಳಲಾಗಿದೆ.

ದಿವಾರಾತ್ರಂ= ನಿತ್ಯವೂ, ಅತಂದ್ರಿತಃ= ಆಲಸ್ಯವಿಲ್ಲದೆ, ಅಂತಶ್ಚರಃ= ದೇಹದ ಒಳಗೇ ಇರುವ ಪರಮಾತ್ಮನನ್ನು, ಮತ್ವಾ= ಮನನ ಮಾಡಿ, ಕವಿಃ= ಜ್ಞಾನಿಯು, ಪ್ರಸನ್ನ ಆಸ್ತೇ= ಸ್ವರೂಪಸುಖವನ್ನು ಪಡೆಯುತ್ತಾನೆ ಎಂದು ಅರ್ಥ.

ಭಾರತ ಶ್ರೀನಿವಾಸಾಚಾರ್ಯರು 'ದಿವಾ ಚ ರಾತ್ರಂ ಚ ಪ್ರಸನ್ನ ಆಸ್ತೇ' ಎಂಬ ಪಾಠವನ್ನು ಹಿಡಿದು ಅಂತಹ ಜ್ಞಾನಿಯು ಸರ್ವಕಾಲದಲ್ಲಿಯೂ ಪ್ರಸನ್ನನಾಗಿರುತ್ತಾನೆ ಎಂದು ಅರ್ಥವನ್ನು ಮಾಡುತ್ತಾರೆ.

ಭಾರತ ಶ್ರೀನಿವಾಸಾಚಾರ್ಯರು ಇನ್ನೊಂದು ಶ್ಲೋಕವನ್ನು ಉದಾಹರಿಸಿ ವ್ಯಾಖ್ಯಾನ ಮಾಡಿದ್ದಾರೆ–

**ತಥಾ ಸತಾ ಸತ್ಕೃತಃ ಸ್ಯಾನ್ ಮೃತ್ಯುರಮೃತಂ ತಯೋಃ ।**
**ಸತ್ಯಾನೃತೇ ತಸ್ಯ ಚ ಮಾನಬಂಧನೇ**
**ಸತಶ್ಚ ಯೋನಿಃ ಅಸತಶ್ಚೈಕ ಏವ ॥**

ಸಃ= ಆ ಪರಮಾತ್ಮನು, ಸಜ್ಜನರಿಂದ ಸತ್ಕೃತನಾಗಿ, ಅಸಜ್ಜನರಿಂದ ಅಸತ್ಕೃತನಾಗಿ ಎಂದರೆ ಪೂಜಿತನಾಗದೆ, ತಯೋಃ= ಅವರಿಬ್ಬರಲ್ಲಿ, ಪೂಜಕನಿಗೆ ಅಮೃತವನ್ನೂ, ಅಪೂಜಕನಿಗೆ ಮೃತ್ಯುವನ್ನೂ ಕೊಡುತ್ತಾನೆ. ಸತ್ಯಾನೃತಗಳು ಅವನ ಮಾನ ಮತ್ತು ಬಂಧನಗಳು. ಎಂದರೆ ಸತ್ಯವು ಅವನ ಪ್ರೀತಿಗೆ ಸಾಧನ, ಅನೃತವು ಅವನಿಗೆ ಉಂಟಾಗುವ ಬಂಧನಕ್ಕೆ, ಅವನ ಅಪ್ರೀತಿಗೆ ಸಾಧನ. ಆದ್ದರಿಂದ ಸತ್ಯವನ್ನು ಹೇಳಬೇಕು, ಅನೃತವನ್ನು ಹೇಳಬಾರದು. ಅವನು ಸಜ್ಜನರಿಗೂ ಮತ್ತು ಅಸಜ್ಜನರಿಗೂ ಮುಖ್ಯವಾದ ಕಾರಣನಾಗಿದ್ದಾನೆ ಎಂದು ವ್ಯಾಖ್ಯಾನ ಮಾಡಿದ್ದಾರೆ. ಇಲ್ಲಿ ಎಲ್ಲಾ ಕಡೆಯಲ್ಲಿಯೂ 'ಯೋಗಿನಸ್ತಂ ಪ್ರಪಶ್ಯಂತಿ' ಎಂಬ ಕೊನೆಯ ಎರಡು ಪಾದಗಳನ್ನು ಇಟ್ಟುಕೊಳ್ಳಬೇಕು.

**ಅಸಾಧನಾ ವಾऽಪಿ ಸಸಾಧನಾ ವಾ**
**ಸಮಾನಮೇತದ್ ದೃಶ್ಯತೇ ಮಾನುಷೇಷು ।**
**ಸಮಾನಮೇತದಮೃತಸ್ಯೋತ್ತರಸ್ಯ(ಮೃತಸ್ಯೇತರಸ್ಯ)**
**ಯುಕ್ತಾಸ್ತತ್ರ ಮಧ್ವನುತ್ತಂ ಸಮಾಪುಃ ॥**
**ಯೋಗಿನಸ್ತಂ ಪ್ರಪಶ್ಯಂತಿ ಭಗವಂತಂ ಸನಾತನಮ್** ॥೧೮॥

ಭಗವಂತನ ಇನ್ನೊಂದು ಮಹಿಮೆಯನ್ನು ಈ ಶ್ಲೋಕದಲ್ಲಿ ಹೇಳುತ್ತಾರೆ. ಅಸಾಧನಾಃ= ಮೋಕ್ಷಸಾಧನರಹಿತರಾಗಿ, ಸಸಾಧನಾ ವಾ= ಅಥವಾ ಮೋಕ್ಷ ಸಾಧನ ಸಹಿತರಾಗಿ, ಯಾವ ಮನುಷ್ಯರು ಇರುತ್ತಾರೆಯೋ, ಮಾನುಷೇಷು= ಅಂತಹ ಮನುಷ್ಯರಲ್ಲಿ, ಏತತ್= ಈ ಪರಮಾತ್ಮನು, ಸಮಾನಂ= ನ್ಯೂನಾದಿ ಭಾವ ರಹಿತನಾಗಿ ಒಂದೇ ರೀತಿಯಲ್ಲಿ, ದೃಶ್ಯತೇ= ಯೋಗಿಗಳಿಂದ ನೋಡಲ್ಪಡುತ್ತಾನೆ. ಉತ್ತರಸ್ಯ= ಪುರುಷಾರ್ಥಗಳಲ್ಲಿ ಉತ್ಕೃಷ್ಟವಾದ, ಮೋಕ್ಷಸ್ಯ= ಮೋಕ್ಷದ ವಿಷಯದಲ್ಲಿಯೂ ಸಹ, ಏತತ್= ಈ ಬ್ರಹ್ಮನು, ಸಮಾನಂ= ಸಮಾನನಾಗಿರುತ್ತಾನೆ. ಅವರವರ ಯೋಗ್ಯತೆಯನ್ನು ಅನುಸರಿಸಿ ಯೋಗ್ಯರಿಗೆ ತಾರತಮ್ಯೋಪೇತವಾದ ಮೋಕ್ಷವನ್ನು ಕೊಡುತ್ತಾನೆ. ಅಯೋಗ್ಯರಿಗೆ ಕೊಡುವುದಿಲ್ಲ ಎಂದು ಅಭಿಪ್ರಾಯ. ಇದನ್ನೇ ಇನ್ನೂ ಸ್ಪಷ್ಟಪಡಿಸುತ್ತಾರೆ. ತತ್ರ= ಯೋಗ್ಯಾಯೋಗ್ಯ ಜೀವರಲ್ಲಿ, ಯುಕ್ತಾಃ= ಯಾರು ಯೋಗ್ಯತೆಯಿಂದ ಕೂಡಿರುತ್ತಾರೆಯೋ ಅಂತಹವರು, ಮಧ್ವನುತ್ತಂ= ಮಧ್ವನಾಮಕರಾದ ವಾಯುದೇವರ ಅವತಾರದಿಂದ ಪ್ರೇರಿತನಾದ, ಬ್ರಹ್ಮ= ಪರಮಾತ್ಮನನ್ನು, ಸಮಾಪುಃ= ಚೆನ್ನಾಗಿ ಹೊಂದುತ್ತಾರೆ.

'ಮಧ್ವ ಉತ್ಸಂ ಸಮಾಪುಃ' ಎಂಬ ಪಾಠವಿದ್ದಲ್ಲಿ ಮಧ್ವಃ= ಮಧುವಿನ ಎಂದರೆ ಆನಂದದ, ಉತ್ಸಂ= ಉತ್ ಎಂದರೆ ಉತ್ಕರ್ಷದಿಂದ, ಸಂಶೇತೇ ಅಸ್ಮಿನ್ ಎಂಬ ವ್ಯುತ್ಪತ್ತಿಯಿಂದ ಆಧಾರನಾದ ಎಂದರೆ ಆನಂದಕ್ಕೆ ಮುಖ್ಯಾಧಾರನಾದ ಪರಬ್ರಹ್ಮನನ್ನು ಹೊಂದುತ್ತಾರೆ ಎಂದು ಅರ್ಥ. 'ಅಮೃತಸ್ಯೇತರಸ್ಯ' ಎಂದು ಪಾಠವಿದ್ದರೆ ಅಮೃತಸ್ಯ= ಮೋಕ್ಷದ ವಿಷಯದಲ್ಲಿಯೂ, ಇತರಸ್ಯ= ಸಂಸಾರದ ವಿಷಯದಲ್ಲಿಯೂ ಪರಮಾತ್ಮನು ಸಮಾನನಾಗಿರುತ್ತಾನೆ ಎಂದು ಅರ್ಥ. ಸಾಧನೆಯನ್ನು ಪೂರ್ತಿ ಮಾಡಿದವರಿಗೆ ಮೋಕ್ಷವನ್ನೂ, ಸಾಧನೆಯನ್ನು ಪೂರ್ತಿ ಮಾಡದಿದ್ದವರಿಗೆ ಸಂಸಾರವನ್ನೂ ಕೊಡುತ್ತಾನೆ. ಆದ್ದರಿಂದ ಆಗಲೂ ಸಮಾನನಾಗಿಯೇ ಇರುತ್ತಾನೆ.

ಉಭೌ ಲೋಕೌ ವಿದ್ಯಯಾ ವ್ಯಾಪ್ಯ ಯಾಂತಿ
ತದಾ ಹುತ್ವಾ ಚಾನುಹುತಮಗ್ನಿಹೋತ್ರಮ್ ।
ಮಾತ್ರೇ ಬ್ರಾಹ್ಮೀಂ ಲಘುತಾಮಾದಧಾನಾಃ
ಪ್ರಜ್ಞಾಂ ನಾಮ ಚಾಸ್ಯ ಧೀರಾ ಲಭಂತೇ ॥
ಯೋಗಿನಸ್ತಂ ಪ್ರಪಶ್ಯಂತಿ ಭಗವಂತಂ ಸನಾತನಮ್ ॥೧೯॥

ಮಾತ್ರೇ= ಪಂಚತನ್ಮಾತ್ರಮಯವಾದ ದೇಹದಲ್ಲಿ, ಬ್ರಾಹ್ಮೀಂ= ವೇದ ಸಂಬಂಧಿನಿಯಾದ ಎಂದರೆ ವೇದಪ್ರತಿಪಾದ್ಯವಾದ, ಲಘುತಾಂ= ಅಸಾರತ್ವಜ್ಞಾನವನ್ನು ಆದಧಾನಾಃ= ಹೊಂದುವವರಾಗಿ, ಅನುಹುತಮ್= ಜ್ಞಾನಕ್ಕೆ ಅನುಕೂಲವಾಗುವ ರೀತಿಯಲ್ಲಿ ಪೂರ್ವಜನರು ಹೋಮ ಮಾಡಿದ, ಅಗ್ನಿಹೋತ್ರಂ= ಅಗ್ನಿಹೋತ್ರವನ್ನು, ಹುತ್ವಾ= ಮಾಡಿ, ಧೀರಾಃ= ಧೈರ್ಯಶಾಲಿಗಳಾದವರು, ಅಸ್ಯ= ಈ ಪರಮಾತ್ಮನ, ಪ್ರಜ್ಞಾಂ= ಶ್ರೇಷ್ಠವಾದ ಜ್ಞಾನವನ್ನು, ಲಭಂತೇ ನಾಮ= ಹೊಂದುತ್ತಾರಷ್ಟೆ? ಅನಂತರದಲ್ಲಿ ವಿದ್ಯಯಾ= ಆ ಜ್ಞಾನದ ಸಾಮರ್ಥ್ಯದಿಂದ, ಉಭೌ ಲೋಕೌ= ಈ ಲೋಕ ಮತ್ತು ಪರಲೋಕ ಎರಡನ್ನೂ, ವ್ಯಾಪ್ಯ= ವ್ಯಾಪಿಸಿ ಎಂದರೆ ಎರಡು ಲೋಕಗಳಲ್ಲಿಯೂ ಅನೇಕ ಭೋಗಗಳನ್ನು ಅನುಭವಿಸಿ, ಇಮಂ= ಈ ಪರಮಾತ್ಮನನ್ನು, ಯಾಂತಿ= ಹೊಂದುತ್ತಾರೆ.

'ಮಾತ್ರೇ ಬ್ರಾಹ್ಮೀಂ ಲಘುತಾಂ ಮಾದಧೀತ' ಎಂದು ಪಾಠವಿದ್ದರೆ ಎಲೈ ರಾಜನೇ, ಈ ವೇದಪ್ರತಿಪಾದ್ಯವಾದ ವಿದ್ಯೆಯಲ್ಲಿ, ಲಘುತಾಂ= ಅಲ್ಪತ್ವ ಜ್ಞಾನವನ್ನು, ಮಾ ಆದಧೀತ= ಹೊಂದಬೇಡ ಎಂದು ಅರ್ಥ.

**ಯಃ ಸಹಸ್ರಂ ಸಹಸ್ರಾಣಾಂ ಪಕ್ಷಾನಾಹೃತ್ಯ ಸಂಪತೇತ್ ।**
**ನಾಂತಂ ಗಚ್ಛೇತ್ ಕಾರಣಸ್ಯ ಅಪಿ ವಾ ಸ್ಯಾನ್ಮನೋಜವಃ ॥**
**ಯೋಗಿನಸ್ತಂ ಪ್ರಪಶ್ಯಂತಿ ಭಗವಂತಂ ಸನಾತನಮ್ ॥೨೦॥**

ಈ ಶ್ಲೋಕದಲ್ಲಿ ಭಗವಂತನ ಸಾಕಲ್ಯೇನ ಅವೇದ್ಯತ್ವ ಮಹಿಮೆಯನ್ನು ಹೇಳುತ್ತಾರೆ. ಯಃ= ಯಾವ ಅಧಿಕಾರಿಯು, ಸಹಸ್ರಾಣಾಂ ಸಹಸ್ರಮ್ ಪಕ್ಷಾನ್= ಸಹಸ್ರ ಸಹಸ್ರ ಪಕ್ಷಗಳಷ್ಟು ಕಾಲದಲ್ಲಿ, ಪಕ್ಷಾನ್= ಗತಿಸಾಧನಸದೃಶವಾದುದರಿಂದ ಪಕ್ಷ ಶಬ್ದವಾಚ್ಯವಾದ ಭಾರತಾದಿ ಗ್ರಂಥಗಳನ್ನು, ಆಹೃತ್ಯ= ಚೆನ್ನಾಗಿ ಅಧ್ಯಯನ ಮಾಡಿ, ಸಂಪತೇತ್= ಚೆನ್ನಾಗಿ ವಿಚಾರವನ್ನು ಮಾಡಿದರೂ, ಅಪಿ ವಾ ಮನೋಜವಸ್ಯ= ಮತ್ತು ಅವನು ಮನೋಜವವನ್ನೇ ಹೊಂದಿದ್ದರೂ, ಕಾರಣಸ್ಯ= ಜಗತ್ಕಾರಣನಾದ ಪರಮಾತ್ಮನ, ಅಂತಂ= ಕೊನೆಯನ್ನು, ನ ಗಚ್ಛೇತ್= ಮುಟ್ಟುವುದಿಲ್ಲ.

ಅಥವಾ ಮನೋಜವವುಳ್ಳ ಯಾವನು ಸಹಸ್ರ ಸಹಸ್ರ ರೆಕ್ಕೆಗಳನ್ನು ಉಳ್ಳವನಾಗಿ ಸಹಸ್ರ ಸಹಸ್ರ ಪಕ್ಷಗಳವರೆಗೆ ಹಾರಿದರೂ ಕೂಡ ಆ ಜಗತ್ಕಾರಣವಾದ ವಸ್ತುವಿನ

ಅಂತವನ್ನು ತಲುಪುವುದಿಲ್ಲ. ಆದ್ದರಿಂದ ಜಗತ್ಕಾರಣವಾದ ವಸ್ತುವು ದೇಶದಿಂದ ಅನಂತವಾದುದು. ಅದರಂತೆ ಕಾಲದಿಂದಲೂ ಮತ್ತು ಗುಣಗಳಿಂದಲೂ ಅನಂತವಾದುದು ಎಂದು ತಿಳಿಯಬೇಕು.

'ಯೋಗಿನಸ್ತಂ ಪ್ರಪಶ್ಯಂತಿ' ಎಂದರೆ ಯೋಗಿಗಳು ಅಂತಹ ಕಾಲನಿಯಾಮಕ ಭಗವದ್ರೂಪವನ್ನು ನೋಡುತ್ತಾರೆ ಎಂದು ಅರ್ಥ.

**ನದರ್ಶನೇ ತಿಷ್ಠತಿ ರೂಪಮಸ್ಯ**
**ಪಶ್ಯಂತಿ ಚೈನಂ ಸುಸಮಿದ್ಧಸತ್ತ್ವಾಃ ।**
**ಹೀನೋ ಮನೀಷೀ ಮನಸಾऽಭಿಪಶ್ಯೇದ್**
**ಯೇ ಪ್ರವ್ರಜೇಯುರಮೃತಾಸ್ತೇ ಭವಂತಿ ॥**
**ಯೋಗಿನಸ್ತಂ ಪ್ರಪಶ್ಯಂತಿ ಭಗವಂತಂ ಸನಾತನಮ್** ॥೨೧॥

ಅಸ್ಯ ರೂಪಂ= ಆ ಪರಮಾತ್ಮನ ರೂಪವು, ದರ್ಶನೇ ನ ತಿಷ್ಠತಿ= ದರ್ಶನ ವಿಷಯವಾಗುವುದಿಲ್ಲ, ಹಾಗಾದರೆ ಅವನು ಶೂನ್ಯನೇ ಎಂಬ ಶಂಕೆಗೆ ಸಮಾಧಾನವನ್ನು ಹೇಳುತ್ತಾರೆ. ಸುಸಮಿದ್ಧಸತ್ತ್ವಾಃ= ಚೆನ್ನಾಗಿ ಅಭಿವೃದ್ಧವಾದ ಸತ್ವಗುಣವುಳ್ಳ ಯೋಗಿಗಳು, ಏನಂ ಹಿ= ಪರಮಾತ್ಮನನ್ನು, ಪಶ್ಯಂತಿ= ನೋಡುತ್ತಾರೆ. ಪರಮಾತ್ಮನ ದರ್ಶನಕ್ಕೆ ಅವಶ್ಯಕವಾದ ಬೇರೆ ಸಾಧನಗಳನ್ನೂ ಹೇಳುತ್ತಾರೆ. ಹೀನಃ= ರಾಗ-ದ್ವೇಷಾದಿ ಹೀನರಾಗಿ, ಮನೀಷೀ= ಶಾಸ್ತ್ರಾರ್ಥಜ್ಞಾನವನ್ನು ಹೊಂದಿ, ಯೇ ಪ್ರವ್ರಜೇಯುಃ= ಯಾರು ಗುರುಕುಲ ವಾಸಾದಿಗಳನ್ನು ಮಾಡಿರುತ್ತಾರೆಯೋ, ಅಥವಾ ಸಂನ್ಯಾಸವನ್ನು ಸ್ವೀಕರಿಸಿರುತ್ತಾರೆಯೋ ಅವರು, ಮನಸಾ= ತಮ್ಮ ಮನಸ್ಸಿನಿಂದಲೇ, ಅವಿಪಶ್ಯೇತ್= ಅವನನ್ನು ನೋಡುತ್ತಾರೆ. ತೇ= ಅಂತಹ ಯೋಗಿಗಳು, ಅಮೃತಾ ಭವಂತಿ= ಮುಕ್ತರಾಗುತ್ತಾರೆ.

**ಇಮಂ ಯಃ ಸರ್ವಭೂತೇಷು ಆತ್ಮಾನಮನುಪಶ್ಯತಿ ।**
**ಅನ್ಯತ್ರಾನ್ಯತ್ರ ಯುಕ್ತೇಷು ಕಿಂ ಸ ಶೋಚೇತ್ ತತಃ ಪರಮ್** ॥೨೨॥

ಇಂದ್ರಿಯಾದಿಗಳಿಂದ ಯುಕ್ತವಾದ ಸರ್ವಜೀವರ ಬೇರೆ ಬೇರೆ ದೇಹಗಳಲ್ಲಿ ಯಾವನು ಈ ಪರಮಾತ್ಮನನ್ನು ನೋಡುತ್ತಾನೆಯೋ ಅವನು ಅನಂತರ ಪುನಃ ಸಂಸಾರ ದುಃಖವನ್ನು ಅನುಭವಿಸುತ್ತಾನೆಯೇ? ಎಂದಿಗೂ ಇಲ್ಲ ಎಂದು ಅಭಿಪ್ರಾಯ.

ಯಥೋದಪಾನೇ ಮಹತಿ ಸರ್ವತಃ ಸಂಪ್ಲುತೋದಕೇ ।
ಏವಂ ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ ॥೨೩॥

ಹೇಗೆ ಬಾಯಾರಿದವನಿಗೆ ಉದಪಾನೇ ಎಂದರೆ ಕೂಪದಲ್ಲಿ ತೃಷಾನಿವೃತ್ತಿ ರೂಪ ಫಲವು ಉಂಟಾಗುತ್ತದೆಯೋ, ಸರ್ವತಃ ಸಂಪ್ಲುತೋದಕೇ= ಎಲ್ಲ ಕಡೆಯಲ್ಲಿಯೂ ನೀರು ತುಂಬಿರುವ, ಮಹತಿ= ಅದಕ್ಕಿಂತ ದೊಡ್ಡ ಪರಿಮಾಣವುಳ್ಳ ಸಮುದ್ರದಲ್ಲಿ, ಅದಕ್ಕಿಂತ ಹೆಚ್ಚಿನ ಪ್ರಯೋಜನವು ದೊರೆಯುತ್ತದೆ. ಅದರಂತೆ ಎಲ್ಲ ಜೀವರಲ್ಲಿಯೂ ಪರಮಾತ್ಮನನ್ನು ನೋಡುವ ಜ್ಞಾನಿಗೆ ಕಾಮ್ಯಕರ್ಮದಿಂದ ಉಂಟಾಗುವ ಸ್ವರ್ಗಾದಿ ಫಲವೂ ಮತ್ತು ಅದಕ್ಕಿಂತ ಅಧಿಕವಾದ ಮೋಕ್ಷಾದಿ ಫಲವೂ ಉಂಟಾಗುತ್ತದೆ ಎಂದು ಅರ್ಥ. ಇದರಿಂದ ಸ್ವರ್ಗಾದಿ ಸರ್ವಫಲ ಸಾಧನಜ್ಞಾನವಿಷಯತ್ವರೂಪವಾದ ಪರಮಾತ್ಮನ ಮಹಿಮೆಯು ಹೇಳಲ್ಪಡುತ್ತದೆ.

ಅಹಮೇವಾಸ್ಮಿ ತೇ ಮಾತಾ ಪಿತಾ ಪುತ್ರೋಽಸ್ಮ್ಯಹಂ ಪುನಃ ।
ಆತ್ಮಾಽಹಮಪಿ ಸರ್ವಸ್ಯ ಯಚ್ಚ ನಾಸ್ತಿ ಯದಸ್ತಿ ಚ ॥೨೪॥

ಈಗ ಭಗವಂತನ ಗುಣಾಂತರ ಪ್ರತಿಪಾದಕವಾದ ಭಗವಂತನೇ ಜೀವರನ್ನು ಕುರಿತು ಆಡಿದ ಮಾತುಗಳನ್ನು ಸನತ್ಸುಜಾತರು ಅನುವಾದ ಮಾಡುತ್ತಾರೆ. ಅಥವಾ ಈ ಮಾತುಗಳನ್ನು 'ಶಾಸ್ತ್ರದೃಷ್ಟ್ಯಾ ತೂಪದೇಶೋ ವಾಮದೇವವತ್' ಎಂಬ ಬ್ರಹ್ಮಸೂತ್ರದಲ್ಲಿ ಹೇಳಿದಂತೆ ಸನತ್ಸುಜಾತರ ಅಂತರ್ಯಾಮಿಯ ಅಭಿಪ್ರಾಯದಿಂದಲೂ ಕೂಡಿಸಬಹುದು. ಎಲೈ ಜೀವರೇ, ನಾನು ನಿಮ್ಮ ತಂದೆ, ತಾಯಿ ಮತ್ತು ಪುನ್ನಾಮ ನರಕದಿಂದ ರಕ್ಷಿಸುವ ಪುತ್ರನೂ ಆಗಿದ್ದೇನೆ. ಯಾವುದು ಈಗ ಇಲ್ಲವೋ ಅಂತಹ ಅತೀತ-ಭವಿಷ್ಯತ್ಪದಾರ್ಥಗಳಿಗೂ, ಯಾವುದು ಈಗ ಇದೆಯೋ ಅಂತಹ ವರ್ತಮಾನ ಪದಾರ್ಥಗಳಿಗೂ, ಸರ್ವಸ್ಯ ಎಲ್ಲದಕ್ಕೂ ನಾನು ಸ್ವಾಮಿಯಾಗಿದ್ದೇನೆ.

ಪಿತಾಮಹೋಽಸ್ಮಿ ಸ್ಥವಿರಃ ಪಿತಾ ಪುತ್ರಶ್ಚ ಭಾರತ ।
ಮಮೈವ ಯೂಯಮಾತ್ಮಸ್ಥಾ ನ ಮೇ ಯೂಯಂ ನ ಚಾಪ್ಯಹಮ್ ॥

ಭಾರತ ಎಂದು ಧೃತರಾಷ್ಟ್ರನನ್ನು ಕುರಿತು ಸನತ್ಸುಜಾತರ ಸಂಬೋಧನೆ. ಅಥವಾ ಭಾ= ಜ್ಞಾನದಲ್ಲಿ, ರತ= ಆಸಕ್ತನಾದ ಜೀವನೇ ಎಂದು ಜೀವರನ್ನು ಕುರಿತು ಪರಮಾತ್ಮನ

ಸಂಬೋಧನೆ. ಈ ಶ್ಲೋಕದಲ್ಲಿ ಮತ್ತು ಹಿಂದಿನ ಶ್ಲೋಕದಲ್ಲಿ ಭಾರತ ಎಂದು ತೇ ಎಂದು ಏಕವಚನವಿದ್ದರೂ ಅದು ಸಮುದಾಯಏಕವಚನವಾದ್ದರಿಂದ ಎಲ್ಲ ಜೀವರನ್ನೂ ಉದ್ದೇಶಿಸಿ ಆಡಿದ ಮಾತುಗಳು ಎಂದು ತಿಳಿಯಬೇಕು. ಇದೂ ಸಹ ಪರಮಾತ್ಮನದೇ ಮಾತು. ನಾನು ಈ ಜಗತ್ತಿಗೆ ಪ್ರಪಿತಾಮಹನಾಗಿದ್ದೇನೆ. ಪಿತೃವೂ ಆಗಿದ್ದೇನೆ. 'ಯೋನಃ ಪಿತಾ ಜನಿತಾ' ಎಂದು ಶ್ರುತಿ ಇದೆಯಷ್ಟೆ! ಮತ್ತು ಪುತ್ರನೂ ಆಗಿದ್ದೇನೆ. ನೀವೆಲ್ಲರೂ ನನ್ನ ದೇಹದಲ್ಲಿಯೇ ಇರುವವರು (ನನ್ನ ಸ್ವರೂಪವಾದ ನನಗಿಂತ ಅಭಿನ್ನವಾದ ನನ್ನ ದೇಹವನ್ನೇ ಆಶ್ರಯಿಸಿ ಇರುವವರು). ನೀವು ನನಗೆ ಸಂಬಂಧಿಸಿದವರಲ್ಲ (ನಾನು ನಿಮ್ಮನ್ನು ಉಪಜೀವಿಸಿ ಇರುವುದಿಲ್ಲ ಮತ್ತು ನಿಮ್ಮ ದುಃಖದಿಂದ ದುಃಖವನ್ನೂ ಪಡುವುದಿಲ್ಲ). ನಾನೂ ಕೂಡ ನಿಮಗೆ ಸಂಬಂಧಿಸಿದವನಲ್ಲ (ಸಂಬಂಧವಿದ್ದರೂ ನಿಮಗೆ ಸಂಬಂಧದ ಜ್ಞಾನವಿಲ್ಲದಿರುವುದರಿಂದ ಸಂಬಂಧಿಸಿದವನಲ್ಲ ಎಂದು ಅಭಿಪ್ರಾಯ).

ಅಂತರ್ಯಾಮಿ ವಿವಕ್ಷೆಯಿಂದ ಸನತ್ಸುಜಾತರ ಮಾತುಗಳನ್ನು ಕೂಡಿಸಬೇಕು ಎಂದು ವಾದಿರಾಜರು ಹೇಳಿರುವುದರಿಂದ ಎಲೈ ಧೃತರಾಷ್ಟ್ರನೇ, ನಾನೇ ನಿನ್ನ ತಂದೆಯೂ ಆಗಿದ್ದೇನೆ, ತಾಯಿಯೂ ಆಗಿದ್ದೇನೆ, ದುರ್ಯೋಧನಾದಿ ಪುತ್ರನೂ ಆಗಿದ್ದೇನೆ ಎಂಬ ಪರಕೀಯ ವ್ಯಾಖ್ಯಾನವು ಪೂರ್ವೋತ್ತರ ವಿರುದ್ಧವಾದುದರಿಂದ ಸ್ವೀಕಾರಾರ್ಹವಲ್ಲ ಎಂದು ಸಿದ್ಧವಾಗುತ್ತದೆ.

ಆತ್ಮೈವ ಸ್ಥಾನಂ ಮಮ ಜನ್ಮ ಚಾತ್ಮಾ
ಓತಪ್ರೋತೋऽಹಮಜರಪ್ರತಿಷ್ಠಃ ।
ಅಜಶ್ಚರೋ ದಿವಾರಾತ್ರಮತಂದ್ರಿತೋऽಹಂ
ಮಾಂ ವಿಜ್ಞಾಯ ಕವಿರಾಸ್ತೇ ಪ್ರಸನ್ನಃ ॥೨೬॥

ಈಗ ಪರಮಾತ್ಮನು ತಾನು ಅನ್ಯಾಪೇಕ್ಷೆ ಇಲ್ಲದವನು ಎಂದು ಹೇಳುತ್ತಾನೆ. ಮಮ= ನನಗೆ, ಆತ್ಮೈವ= ನಾನೇ, ಸ್ಥಾನಮ್= ಆಶ್ರಯನಾದವನು, ಆತ್ಮಾ= ನಾನೇ, ಜನ್ಮ= ನನ್ನ ಪ್ರಾದುರ್ಭಾವಕ್ಕೆ ನಿಯಾಮಕನಾದವನು. ಅಜರಪ್ರತಿಷ್ಠಃ= ಜರಾರಹಿತವಾದ ವೈಕುಂಠಾದಿ ಲೋಕಗಳಲ್ಲಿ ಪ್ರತಿಷ್ಠಿತನಾಗಿರುವ ನಾನು, ಓತಪ್ರೋತಃ= ನನ್ನಲ್ಲೇ ವ್ಯಾಪಿಸಿಕೊಂಡಿದ್ದೇನೆ. ಅಜಃ= ನಾನು ಜನ್ಮವಿಲ್ಲದವನು, ಅತಂದ್ರಿತಃ= ಆಲಸ್ಯವಿಲ್ಲದೆ,

ದಿವಾರಾತ್ರಂ= ಹಗಲೂ ಮತ್ತು ರಾತ್ರಿಯೂ, ಚರಃ= ಎಲ್ಲ ಕ್ರಿಯೆಗಳನ್ನೂ ಮಾಡುವವನು, ನ ಋತೇ ತ್ವತ್ಕ್ರಿಯತೇ= ನೀನಿಲ್ಲದೇ ಯಾವ ಕಾರ್ಯವೂ ಮಾಡಲ್ಪಡುವುದಿಲ್ಲ ಎಂಬ ಶ್ರುತಿಯ ವಿವಕ್ಷೆಯಿಂದ ನನ್ನನ್ನು ತಿಳಿದು ಜ್ಞಾನಿಯಾದವನು ಸ್ವರೂಪ ಸುಖವನ್ನು ಅನುಭವಿಸುತ್ತಾನೆ.

**ಅಣೋರಣೀಯಾನ್ ಸುಮನಾಃ ಸರ್ವಭೂತೇಷ್ವವಸ್ಥಿತಃ ।**
**ಪಿತರಂ ಸರ್ವಭೂತಾನಾಂ ಪುಷ್ಕರೇ ನಿಹಿತಂ ವಿದುಃ ॥೨೭॥**

ಸನತ್ಸುಜಾತರು ಪುನಃ ಭಗವಂತನ ಮಹಿಮೆಯನ್ನು ಹೇಳುತ್ತಾರೆ. ಭಗವಂತನು ಅಣುವಿಗಿಂತಲೂ ಬಹಳ ಸೂಕ್ಷ್ಮವಾದ ಅಣುವಾದವನು. ಸುಮನಾಃ= ಒಳ್ಳೆಯ ಮನಸ್ಸುಳ್ಳವನು, ಸರ್ವಭೂತೇಷು ಅವಸ್ಥಿತಃ= ಎಲ್ಲ ಭೂತಗಳಲ್ಲಿಯೂ ನೆಲೆಸಿದ್ದಾನೆ. ಸರ್ವಭೂತಾನಾಂ= ಎಲ್ಲ ಪ್ರಾಣಿಗಳ, ಪಿತರಂ= ತಂದೆಯಾದ ಅವನನ್ನು, ಪುಷ್ಕರೇ= ಹೃದಯಕಮಲದಲ್ಲಿ, ನಿಹಿತಂ= ಇರುವವನೆಂದು, ವಿದುಃ= ಜ್ಞಾನಿಗಳು ತಿಳಿದಿದ್ದಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಸಪ್ತಚತ್ವಾರಿಂಶೋಽಧ್ಯಾಯಃ ॥

॥ ಸನತ್ಸುಜಾತಪರ್ವಣಿ ಷಷ್ಠೋಽಧ್ಯಾಯಃ ॥

॥ ಇತಿ ಶ್ರೀಮನ್ಮಹಾಭಾರತೇ ಉದ್ಯೋಗಪರ್ವಣಿ ಸನತ್ಸುಜಾತೀಯೇ
ವಿಷಮವಾಕ್ಯಾರ್ಥಪ್ರಕಾಶೇ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನಲವತ್ತೇಳನೆಯ
ಅಧ್ಯಾಯ ಮುಗಿಯಿತು.

## ॥ ಸಮಾಪ್ತಂ ಸನತ್ಸುಜಾತೀಯ ಪರ್ವ ॥

★ ★ ★ ★ ★

ಅರೋಷಣೋ ಯಃ ಸಮಲೋಷ್ಟಕಾಂಚನಃ
ಪ್ರಹೀಣಶೋಕೋ ಗತಸಂಧಿವಿಗ್ರಹಃ ।
ನಿಂದಾಪ್ರಶಂಸೋಪರತಃ ಪ್ರಿಯಾಪ್ರಿಯೇ
ಚರನ್ನುದಾಸೀನವದೇವ ಭಿಕ್ಷುಕಃ ॥

ಯಾವನು ರೋಷವನ್ನು ತೊರೆದಿರುತ್ತಾನೆಯೋ, ಮಣ್ಣು ಮತ್ತು ಸುವರ್ಣಗಳನ್ನು ಸಮವಾಗಿ ನೋಡುತ್ತಾನೆಯೋ, ಶೋಕವನ್ನೂ ತೊರೆದಿರುತ್ತಾನೆಯೋ, ಯಾರ ಜೊತೆಯಲ್ಲಿಯೂ ಸಂಧಿಯನ್ನಾಗಲೀ ವಿರೋಧವನ್ನಾಗಲೀ ಮಾಡುವುದಿಲ್ಲವೋ, ನಿಂದಾ-ಪ್ರಶಂಸೆಗಳನ್ನು, ಪ್ರಿಯಾಪ್ರಿಯಗಳನ್ನು ಬಿಟ್ಟು ಉದಾಸೀನನಂತೆಯೇ ಸಂಚರಿಸುತ್ತಾನೆಯೋ ಅವನು ಸಂನ್ಯಾಸಿ.

ISBN : 978-93-81807-67-5